
ದೇಸಿ ಪುಸ್ತಕ ಮಾಲೆ - ೪೩

ಕೇಶವಶರ್ಮ ಕೆ.



ಸಾಂಸ್ಕೃತಿಕ ಪ್ರತಿಕಲ್ಪನೆಗಳು



ಕೇಶವಶರ್ಮ.ಕೆ

ಹುಟ್ಟೂರು: ದಕ್ಷಿಣ ಕನ್ನಡ ಜಿಲ್ಲೆ
ಬಂಟ್ವಾಳ ತಾಲೂಕಿನ ಅಡ್ಯನಡ್ಕ
ಬಳಿಯ ಕೋಡಂದೂರು.
ತಂದೆ: ಕೆ.ಕೆ. ನರಸಿಂಹಭಟ್ಟ
ತಾಯಿ: ಕೆ.ಎನ್. ಸೀತಾ.
ಸಂಗಾತಿ: ಸಬಿತ
ಮಗ: ನಹುಷ
ಮಗಳು: ನಿಯತಿ
ಯಕ್ಷಗಾನದ ಹುಚ್ಚು ಬಹಳ.
ಯಕ್ಷಗಾನದ ಹವ್ಯಾಸಿ ಕಲಾವಿದ
ವಾಸ: ಶಿವಮೊಗ್ಗ ಜಿಲ್ಲೆ ಭದ್ರಾವತಿ
ತಾಲೂಕಿನ ಸಿಂಗನ ಮನೆ ಗ್ರಾಮ
ಶಾಂತಿನಗರ
ಉದ್ಯೋಗ: ಕನ್ನಡ
ಪ್ರಾಧ್ಯಾಪಕ, ಕನ್ನಡಭಾರತಿ,
ಕುವೆಂಪು ವಿಶ್ವ ವಿದ್ಯಾನಿಲಯ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ.
ಮಂಗಳೂರು
ವಿಶ್ವ ವಿದ್ಯಾನಿಲಯದಿಂದ
ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ
ಹೆಣ್ಣಿನ ಪರಿಕಲ್ಪನೆ ಕುರಿತು
ನಡೆಸಿದ ಸಂಶೋಧನೆಗಾಗಿ
ಪಿಎಚ್.ಡಿ. ಪದವಿ.

ಸಾಂಸ್ಕೃತಿಕ ಪರಿಕಲ್ಪನೆಗಳು

ಕೇಶವ ಶರ್ಮ ಕೆ.

ಪುಸ್ತಕ
ವಿಜಯನಗರ, ಬೆಂಗಳೂರು – 560 040

ಸಾಂಸ್ಕೃತಿಕ ಪರಿಕಲ್ಪನೆಗಳು

SAMSKRUTIKA PARIKALPANEGALU

KEY CONCEPTS - CULTURAL TERMS

Written By :

Keshava Sharma K.

Kannada Bharathi,

Kuvempu University, Gnana Sahyadri,

Shankaragatta, Shimoga - 577451

Mob : 9448730611

e-mail: dr.keshavasharma.k@gmail.com

Published by:

DESI PUSTAKA

NO. 121, 13th Main Road,

M.C. Layout,

Vijaya Nagara, Bengaluru - 560 040

Ph : 080 - 23153558

E-mail: desipustaka@gmail.com

First Impression: 2013

Page: xxvi+556=582

₹ : 400/-

Paper used: 70gsm Ns Book Print

Book Size 1/8 Demmy

ISBN: 978-93-81577-25-6

dtp: **Arpuda Mery**

Page Layout: **Nagaraj**

Cover Page: **Ramesh D.K.**

Printed at: **Satyashree Printers Pvt. Ltd.**

Kasturibanagar, Bangalore. Ph.: 26748811

ಗೊತ್ತು
ಇಷ್ಟೆ ಸಾಲದು
ಬದುಕಿ ಉಳಿದಿರುವುದೆ ಭಾಗ್ಯ
ಕಟ್ಟಬಹುದ್ದಾಗಿದ್ದ ಸೌಧದ ವಿಸ್ತಾರ ಸೂಚಿಸಲು
ಒಂದು ಇಟ್ಟಿಗೆ ಹಿಡಿದು ತೋರುವುದು
ನಾನು

– ಸೂಕ್ತಿ

ಅರ್ಪಣೆ

ಪ್ರತಿ ಹಂತದಲ್ಲಿಯೂ
ಸಲಹೆ ಸೂಚನೆ ನೀಡಿದ ಆಪ್ತರಾದ

ಡಾ.ಪಿ.ವಿ. ಭಂಡಾರಿಯವರಿಗೆ

ಅರಿಕೆ ಮತ್ತು ಕೃತಜ್ಞತೆ

ನನ್ನ ಜೀವನದ ಸಾರ್ಥಕ ಕ್ಷಣಗಳಲ್ಲಿ ಇದೂ ಒಂದು. ಒಟ್ಟಿಗೆ ಆರು ಪರಿಕಲ್ಪನೆಗಳ ಕೋಶಗಳು ಈಗ ಪ್ರಕಟವಾಗುತ್ತಿದೆ. ಇದಕ್ಕೆ ನಾನು ಅನೇಕ ವರ್ಷ ದುಡಿದಿದ್ದೇನೆ. ಅನೇಕ ದಿನಗಳನ್ನು; ಅನೇಕ ಗಳಿಗೆಗಳನ್ನು ಇದಕ್ಕಾಗಿ ಕಳೆದಿದ್ದೇನೆ. ನನ್ನ ನಿರಂತರ ಕೆಲಸದಿಂದ ಈವತ್ತು ಈ ಸಂಪುಟಗಳನ್ನು ಓದುಗರ ಕೈಯಲ್ಲಿ ಇಡಲು ಸಾಧ್ಯವಾಯಿತು. ಇದು ಈವತ್ತು ನಿನ್ನೆಯ ಕೆಲಸವಲ್ಲ. ಪದಗಳು; ಅವುಗಳ ಹಿನ್ನೆಲೆ; ಅರ್ಥ; ಅವುಗಳನ್ನು ಬಳಸಿಕೊಂಡ ಕ್ರಮಗಳು, ಸಂದರ್ಭಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮತ್ತೆ ಮತ್ತೆ ಬರೆಯಬೇಕಾಯಿತು. ವಿದ್ವಾಂಸರು ಈ ಮೊದಲೇ ಕೆಲವು ಪರಿಕಲ್ಪನೆಗಳ ಕುರಿತು ಹೇಳಿರುವುದನ್ನು ಟಿಪ್ಪಣಿ ಬರೆದುಕೊಂಡು ಮತ್ತೆ ವಿಸ್ತೃತಗೊಳಿಸಿದೆ. ಈ ಮೊದಲು ವಿದ್ವಾಂಸರು ಹೇಳಿದ್ದನ್ನು ಇಲ್ಲಿ ಬಳಸಿಕೊಂಡಿರುವೆ ಮತ್ತು ಅಂಥ ಸಂದರ್ಭದಲ್ಲಿ ಆಯಾ ವಿದ್ವಾಂಸರ ಹೆಸರನ್ನು ಪರಿಕಲ್ಪನೆಗಳ ಕೆಳಗೆ ಉಲ್ಲೇಖಿಸಿದ್ದೇನೆ. ಇದು ಅನೇಕ ವರ್ಷಗಳಿಂದ ಮಾಡಿಕೊಂಡು ಬಂದಿರುವ ಕೆಲಸವಾದ್ದರಿಂದ ಕೆಲವು ಸಂದರ್ಭದಲ್ಲಿ ಆಯಾ ಪರಿಕಲ್ಪನೆಗಳನ್ನು ವಿವರಿಸಿರುವ ವಿದ್ವಾಂಸರ ಉಲ್ಲೇಖ ಮಾಡದೇ ಇದ್ದರೆ ಅದು ಆಕಸ್ಮಿಕ ತಪ್ಪು ಎಂದು ಭಾವಿಸಬೇಕಾಗಿ ಕೋರುತ್ತೇನೆ. ಋಣವನ್ನು ಸೂಚಿಸದೇ ಹೋಗಿದ್ದರೆ ಅದು ಉದ್ದೇಶಿತವಂತೂ ಖಂಡಿತಾ ಅಲ್ಲ.

ಈ ಕ್ಷೇತ್ರಗಳಲ್ಲಿ ಇನ್ನೂ ಅನೇಕ ವರ್ಷಗಳ ತನಕ ಕೆಲಸ ಮಾಡಬಹುದು ಎಂಬುದರ ಅರಿವು ನನಗಿದೆ ಮತ್ತು ಸಾಂಸ್ಥಿಕ ಕೆಲಸ ಮಾಡಿದರೆ ಈ ರೀತಿಯ ಕೋಶಗಳು ಕನ್ನಡಕ್ಕೆ ಮಹತ್ವದ ಕೊಡುಗೆಗಳಾಗಬಹುದು. ನಾನೂ ಇನ್ನು ಕೆಲವು ವರ್ಷ ಈ ಪರಿಕಲ್ಪನೆಗಳ ಕುರಿತಂತೆ ಕೆಲಸ ಮಾಡಬಹುದಿತ್ತು. ಇನ್ನೂ ಹೆಚ್ಚಿನ ದಿನ ಇದರ ಬಗ್ಗೆ ಕೆಲಸ ಮಾಡುವುದು ಕಷ್ಟವೆಂದು ಅನಿಸಿತ್ತು.

ಈ ಪರಿಕಲ್ಪನೆಯ ಕೋಶಗಳ ಕುರಿತು ಒಂದೆರಡೂ ಮಾತುಗಳನ್ನು ಹೇಳಲು ಬಯಸುತ್ತೇನೆ. ಕೆಲವು ಪರಿಕಲ್ಪನೆಗಳನ್ನು ಬೇರೆ ಬೇರೆ ಆಲೋಚನಾ ಪಂಥಗಳು

ಬೇರೆ ಬೇರೆ ರೀತಿಯಲ್ಲಿ ಅನ್ವಯಿಸಿಕೊಂಡಿವೆ. ಆದುದರಿಂದ ಒಂದು ಪರಿಕಲ್ಪನೆಯ ಕೋಶದಲ್ಲಿ ಬಂದಿರುವುದು ಮತ್ತೊಂದರಲ್ಲಿಯೂ ಬಳಸಿಕೊಳ್ಳುವುದು ಅನಿವಾರ್ಯವಾಯಿತು. ಇದನ್ನು ಓದುಗರು ಮನಗಾಣುತ್ತಾರೆ ಎಂದು ಭಾವಿಸಿಕೊಳ್ಳುತ್ತೇನೆ.

ಪರಿಕಲ್ಪನೆಗಳ ಕೋಶಗಳ ಕುರಿತಂತೆ ಕೆಲವರು ನನ್ನೊಂದಿಗೆ ಅಪಸ್ವರವನ್ನು ಎತ್ತಿಕೊಂಡದ್ದೂ ಇದೆ ಮತ್ತೆ ಕೆಲವರು ಈಗಾಗಲೇ ಕನ್ನಡದಲ್ಲಿ ನಿಘಂಟುಗಳಿವೆ, ಪದಕೋಶಗಳಿವೆ ಆದುದರಿಂದ ಇದರ ಅಗತ್ಯವಿದೆಯೇ ಎಂದು ಕೇಳಿದರು. ಅವರ ಪ್ರಶ್ನೆಗೆ ಈ ಸಂಪುಟಗಳೇ ಉತ್ತರ ಕೊಡುತ್ತವೆ. ಆದುದರಿಂದ ಪ್ರತ್ಯೇಕವಾಗಿ ಉತ್ತರಿಸಲಾರೆ. ಕನ್ನಡದ ಮಟ್ಟಿಗೆ ಇದು ವಿಶಿಷ್ಟ ಪ್ರಯತ್ನ ಎನ್ನುವುದನ್ನಂತೂ ಹೇಳಬಲ್ಲೆ. ಇದು ಕೀ ಕಾನ್ಸೆಪ್ಟ್ ಮಾದರಿಯದೂ ಹೌದು. ಇದನ್ನು ಗುರುತಿಸುವಿರಾಗಿ ನಂಬುತ್ತೇನೆ. ನನಗಂತೂ ಇದು ಆತ್ಮ ತೃಪ್ತಿಯನ್ನು ಕೊಟ್ಟಿದೆ.

1. ಸಾಂಸ್ಕೃತಿಕ ಪರಿಕಲ್ಪನೆಗಳು – ಇದರಲ್ಲಿ ಸಂಸ್ಕೃತಿಗೆ ಸಂಬಂಧಿಸಿದ ಅನೇಕ ಪರಿಕಲ್ಪನೆಗಳಿವೆ. ಇದರಲ್ಲಿನ ಕೆಲವು ಪರಿಕಲ್ಪನೆಗಳನ್ನು ಉಳಿದ ಸಂಪುಟದಲ್ಲಿ ಬಳಸಿಕೊಳ್ಳಲಾಗಿದೆ. ಸಾಂಸ್ಕೃತಿಕ ಪರಿಕಲ್ಪನೆಗಳಲ್ಲಿ ವಿಮರ್ಶೆ; ಸ್ತ್ರೀವಾದ; ಮಾರ್ಕ್ಸ್‌ವಾದ; ವಸಾಹತುಶಾಹಿ ಹಾಗೂ ತತ್ವಜ್ಞಾನದ ಪರಿಕಲ್ಪನೆಗಳನ್ನು ಸೇರಿಸಿದ್ದೇನೆ.
2. ವಿಮರ್ಶೆಯ ಪರಿಕಲ್ಪನೆಗಳು – ಇದರಲ್ಲಿ ವಿಮರ್ಶೆಗಳಿಗೆ ಸಂಬಂಧಿಸಿದ ಪರಿಕಲ್ಪನೆಗಳಿವೆ.
3. ತತ್ವಜ್ಞಾನದ ಪರಿಕಲ್ಪನೆಗಳು – ಇದರಲ್ಲಿ ಭಾರತೀಯ ತತ್ವಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಪರಿಕಲ್ಪನೆಗಳಿವೆ. ಮೂಲತಃ ತತ್ವಜ್ಞಾನಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ದೊರೆಯುವ ಆಕರಗ್ರಂಥಗಳು ಕಡಿಮೆ. ದೊರೆತ ಆಕರಗಳನ್ನು ಬರೆದಿದ್ದೇನೆ.
4. ವಸಾಹತುಶಾಹಿ ಪರಿಕಲ್ಪನೆಗಳು – ವಸಾಹತು ಕಾಲವು ಅನೇಕ ಪರಿಕಲ್ಪನೆಗಳನ್ನು ಹುಟ್ಟು ಹಾಕಿದೆ. ಇದರಲ್ಲಿ ಕೆಲವು ಪರಿಕಲ್ಪನೆಗಳನ್ನು ಮಾತ್ರವೇ ಚರ್ಚಿಸಲು ಸಾಧ್ಯವಾಯಿತು.
5. ಸ್ತ್ರೀವಾದಿ ಪರಿಕಲ್ಪನೆಗಳು – ಇದರ ಸ್ತ್ರೀವಾದಕ್ಕೆ ಸಂಬಂಧಿಸಿದ ಕೆಲವು ಪರಿಕಲ್ಪನೆಗಳನ್ನು ಮಾತ್ರವೇ ವಿವರಿಸಲಾಗಿದೆ.
6. ಮಾರ್ಕ್ಸ್‌ವಾದಿ ಪರಿಕಲ್ಪನೆಗಳು – ಮಾರ್ಕ್ಸ್‌ವಾದಕ್ಕೆ ಸಂಬಂಧಿಸಿದ ಕೆಲವೇ ಕೆಲವು ಪರಿಕಲ್ಪನೆಗಳನ್ನು ಇಲ್ಲಿ ವಿವೇಚಿಸಲಾಗಿದೆ. ಓದುಗರು ಗಮನಿಸಬೇಕಾದ ಅಂಶವೆಂದರೆ ಈ ಸಂಪುಟಗಳಲ್ಲಿ ಬಂದಿರುವ

ಪರಿಕಲ್ಪನೆಗಳಿಗೆ ಒಂದಕ್ಕೊಂದು ಸಂಬಂಧವಿದೆ. ಮೇಲೆ ಹೇಳಿರುವ ಎಲ್ಲಾ ಪರಿಕಲ್ಪನೆಗಳ ಕೋಶಗಳು ಮುಂದಿನ ಅಧ್ಯಯನಗಳಿಗೆ ಮೆಟ್ಟಿಲುಗಳು ಮಾತ್ರ ಸಾಗಬೇಕಾದ ದಾರಿಯೂ ಉದ್ದವಿದೆ. ಈ ಕ್ಷೇತ್ರಗಳಿಗೆ ಬೇಕಾದ ಮುಂದಡಿಯನ್ನು ಮಾತ್ರವೇ ಇರಿಸಿದ್ದೇನೆ.

ಕೆಲವರಿಗೆ ಕೆಲವೇ ವಿಷಯಗಳು ಮಾತ್ರವೇ ಬೇಕಾಗಿರುವ ಸಾಧ್ಯತೆ ಇರುವುದರಿಂದ ಒಂದು ಕೋಶದ ಪದಗಳನ್ನು ಮತ್ತೆ ಮತ್ತೊಂದು ಕೋಶಕ್ಕೂ ಬಳಸಿಕೊಳ್ಳಬೇಕಾಯಿತು.

ಇದರ ರಚನೆಯ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿದ ಹಿರಿಯರಿಗೆ ಮತ್ತು ಕಿರಿಯರಿಗೆ–

ಮಾನ್ಯ ಕುಲಪತಿಗಳಾದ ಪ್ರೊ. ಎಸ್.ಎ. ಬಾರಿಯವರಿಗೆ, ಕುಲಸಚಿವರಾದ ಪ್ರೊ. ಮಲ್ಲಿಕಾ ಘಂಟಿಯವರಿಗೆ, ಸಹೋದ್ಯೋಗಿಗಳಿಗೆ–

ಇದರ ಪ್ರತಿಯೊಂದು ಹಂತದಲ್ಲಿಯೂ ನನ್ನ ಜೊತೆಗೆ ಕೆಲಸ ಮಾಡಿದ ಪ್ರೀತಿಯ ರಮೇಶ್ ಆಚಾರ್, ಕಾವ್ಯಶ್ರೀ, ಸುಮ, ಅರ್ಪುದಮೇರಿ, ದಿನೇಶ್, ಸುಧಾ, ಲೋಕೇಶ್, ರಾಮು, ನಾಗಾರ್ಜುನ, ವಿಠಲ, ರಂಗನಾಥರವರಿಗೆ–

ಪ್ರೀತಿಯ ಮಕ್ಕಳಾದ ನಿಯತಿ, ನಹುಷರಿಗೆ ಮತ್ತು ಹೆಂಡತಿ ಸಬಿತರಿಗೆ, ಅಮ್ಮ, ಅಕ್ಕ, ತಂಗಿ, ತಮ್ಮ –

ಈ ಪ್ರಕಟಣೆಗಳನ್ನು ಉತ್ಸಾಹದಿಂದ ಮತ್ತು ಧೈರ್ಯದಿಂದ ಕೈಗೆತ್ತಿಕೊಂಡ ದೇಸಿ ಪ್ರಕಾಶನದ ನಾಗೇಶ್ ಅವರಿಗೆ ಮುಖಪುಟದ ಚಿತ್ರ ಬರೆದ ಡಿ.ಕೆ. ರಮೇಶ್, ಪುಸ್ತಕವನ್ನು ಮರುವಿನ್ಯಾಸ ಮಾಡಿದ ನಾಗರಾಜ್, ಸುಂದರವಾಗಿ ಮುದ್ರಿಸಿದ ಸತ್ಯಶ್ರೀ ಪ್ರೆಸ್‌ನ ಸಮಸ್ತರು ಮತ್ತು ನಿಮಗೆ.

ಧನ್ಯವಾದಗಳು

ಕೇಶವ ಶರ್ಮ ಕೆ.
ಶಂಕರಘಟ್ಟ, ಶಿವಮೊಗ್ಗ

ಅಕ್ಷರ ಸೂಚಿ

ಅತ್ಯುಕ್ತಿ
ಅಧಿಕಾರ
ಅಧಿಕಾರ ಮುದ್ರೆ
ಅಧಿಷ್ಠಾನ
ಅಧ್ವಗ
ಅಧ್ವರ
ಅಧ್ವರ್ಯು
ಅನುಗ್ರಹಾರ್ಥ
ಅನುಚಿತ
ಅನುದಿಶ
ಅನುಲೋಮ ಪ್ರತಿಲೋಮ
ಅನೈತಿಕ ಸಂಬಂಧಗಳು
ಅನ್ವಯ
ಅಪರಾಧ
ಅಪಸಿದ್ಧಾಂತ
ಅಪಹರಣ ವಿವಾಹ
ಅಪಹಾರತೂರ್ಯ
ಅಪುತ್ರಸ್ಯಗತಿರ್ನಾಸ್ತಿ
ಅಪೂರ್ವ
ಅಪ್ರಧಾನ
ಅಪ್ರಾಸುಕ
ಅಪ್ಸರೆಯರು
ಅಬ್ರಹ್ಮಣ್ಯಂ
ಅಭಕ್ಷ್ಯ
ಅಭಯ
ಅಭವ
ಅಭಾವ
ಅಭಿಚಾರ
ಅಭಿಜ್ಞಾನ
ಅಭಿದಾನ ವಸ್ತು ಕೋಶ
ಅಭಿಧರ್ಮ ಪ್ರಸ್ಥಾನ
ಅಭಿನಯ
ಅಭಿಮಾನ
ಅಭಿವಾದ
ಅಭಿಷೇಕ
ಅಭಿಸಾರಿಕೆ
ಅಭ್ಯುದಯ
ಅಮಂಗಲ ಶಕುನಗಳು
ಅಮಾತ್ಯರು
ಅಮೃತ
ಅಮ್ಮ
ಅಯ್ದೆ ಮಿನುಗು
ಅರಗಿನ ಅರಮನೆ
ಅರಣಿ
ಅಯೋಗಕೇವಲಿ
ಅರಣ್ಯಕ
ಅರಬೊಜಂಗ
ಅರಳೆಲೆ
ಅರಿವು
ಅರೋಹ–ಅವರೋಹ
ಅರ್ಘ್ಯ
ಅರ್ಥ
ಅರ್ಥಿ
ಅರ್ಧ ಗಪ್ಪಡ ಸಂಘ
ಅರ್ಧಚಕ್ರಿ
ಅರ್ಧರಥಿ
ಅರ್ವಾಚೀನ
ಅಱಗುಲಿ
ಅಱೆಯಮಿಕೆ
ಅಲೌಕಿಕ
ಅಲ್ಪ
ಅಲ್ಲದಲ್ಲಣಿಗೆ

ಗಾಣರು
ಗಾಣಿಗರು
ಗಾಮುಂಡ
ಗಾವಿಲ
ಗಾವುಂಡ
ಗಾಳದೊಟ್ಟು
ಗಾಳುಗೊರವ
ಗಿರಾಕಿ
ಗುಣವ್ರತಗಳು
ಗುಪ್ತಚರ
ಗುಪ್ತಿ
ಗುರಿಕಾರ ಮತ್ತು ಕೂಡುಕಟ್ಟು
ಗುರು
ಗೃಹ
ಗೋಘ್ನ
ಗೋತ್ರ
ಗೋತ್ರಸ್ಖಲನೆ
ಗೋಸಾಸ
ಗ್ರಂಥಾಲಯ
ಗ್ರಹಣ
ಗ್ರಾಮ
ಗ್ರಾಮ ದೇವತೆ
ಗ್ರಾಮಾಧಿಪ
ಗ್ರಾಮ್ಯ
ಗ್ರೈವೇಯಕ
ಘರವಟ್ಟೆ
ಘಾತಕರ್ಮ
ಚಂಡಾಲ
ಚಂಡಿಕಾದೇವಿ
ಚಂದ್ರ
ಚಂದ್ರವಂಶ

ಚತುರೋಪಾಯಗಳು
ಚತುರ್ಗತಿ
ಚತುರ್ಗತಿ ನಿರೂಪಣೆ
ಚತುರ್ವರ್ಣ
ಚತುರ್ವಿಧ ಅಭಿನಯ
ಚತುರ್ವಿಧ ಆಹಾರ
ಚಮತ್ಕಾರ
ಚರಕ–ಅಶ್ವಿನೀಮತ–ಸುಶ್ರುತ–ವಾಗ್ಭಟ ಸಂಹಿತೆಗಳು
ಚರಣ ಗ್ರಂಥ
ಚರಮತನು
ಚರಿಗೆವರ್
ಚರಿತ
ಚಾಂಡಾಲ
ಚಾಂದ್ರಮಾನ
ಚಾತುರ್ದಂತ
ಚಾತುರ್ವರ್ಣ
ಚಾಪ
ಚಿತಾನಳ
ಚಿತ್ರಪಟ
ಚೌಕಿ
ಚೌಡೇಶ್ವರಿ
ಚೌಪಳಿಗೆ
ಛಾಯಾಲಕ್ಷ್ಯ
ಜಟ್ಟಿಗೆ
ಜತುಗೃಹ
ಜನಪದ
ಜನಿವಾರ
ಜನ್ಮಭೂಮಿ
ಜಪಮಾಲೆ
ಜಲದಾನ ಕ್ರಿಯೆ

ದಾದಿ
ದಾನ
ದಾನಶಾಸನ
ದಾಯಾದಿ
ದಾರಿಕಳ್ಳರು ಮತ್ತು ವೀರರ ಸ್ಮಾರಕಗಳು
ದಾರುಣ ಕರ್ಮ, ಪ್ರೇರಣೆ
ದಾಸ
ದಾಹೋತ್ತರಕ್ರಿಯೆ
ದಿಕ್ಪತಿ
ದಿಗ್ವಿಜಯದ ಯಾತ್ರೆಗಳು
ದಿಬ್ಯ
ದೀವಗಾರ
ದೀವದ ಬೇಂಟೆ
ದುಂದುಮೆ
ದುರ್ಜನ
ದುಷ್ಟ ನೃಪಾಲರ್
ದೃಷ್ಟಿಯುದ್ಧ
ದೇವತೆಗಳು
ದೇವತೆಗಳ್
ದೇವದಾಸಿಯರು
ದೇವಮಾತೃಕ
ದೇಶ ಮಾಧ್ಯಮ – ಶಿಕ್ಷಣ
ದೇಸಿಗ
ದೇಸಿಗರು
ದೇಸಿರಾಗ
ದ್ಯೂತ
ದ್ರವಿಳ
ದ್ವಿಜ
ಧೋತ್ರ
ಧ್ರುವ ಪ್ರಯೋಗ
ನಗರ
ನಟ್ಟುವ
ನಡತೆ
ನವದುರ್ಗಗಳು
ನವನೋಕಷಾಯ
ನವವಿಧ ಪುಣ್ಯ
ನಾಗಬಂಧ
ನಾಗರು
ನಾಗಾರಾಧನೆ
ನಾಟುನುಡಿ
ನಾಡವರ್ಗಳ್
ನಾಡಾಡಿ
ನಾಣ್ಯ
ನಾಮಕರಣ
ನಾಯಿಕೆಯರು
ನಾರಾಚ
ನಾರಾಯಣ
ನಾಳ್ವಗರಣ
ನಿಕಷ
ನಿಚ್ಚಟ
ನಿಜವಾದ ರಾಜ
ನಿಯತಿ
ನಿಯಮಾಚಾರ
ನಿಯೋಗ
ನಿರ್ನಾಮಿಕೆಯರು
ನಿರ್ಯಾಪಕಾಚಾರ್ಯ
ನಿರ್ವಾಯ
ನಿಶ್ಯಲ್ಯ
ನಿಷಾದ
ನಿಷಿಧಿ ಗಲ್ಲುಗಳು
ನೀಚರ ಸ್ವಭಾವ
ನೀರಕ್ಷೀರನ್ಯಾಯ

ಪಾಣ್ಬ
ಪಾತ್ರರಿಗೆ ದಾನ
ಪಾಪ
ಪಾಪಪರಿಪಾಕ
ಪಾರಮಾರ್ಥಿಕ ದೃಷ್ಟಿ
ಪಾರ್ವೊಕ್ಕಲ್
ಪಾಲೆ
ಪಾವಿತ್ರ್ಯ
ಪಿಂಛಾಚಾರ್ಯರ್
ಪಿತೃಋಣ
ಪುಂಸವನ
ಪುಣ್ಯಪಾತಕ
ಪುತ್ರಕಾಮೇಷ್ಠಿಯಾಗ
ಪುದುವಾಳ್ಕೆ
ಪುನರ್‌ಜನ್ಮ
ಪುನರ್ ವಿವಾಹ
ಪುರಂಧ್ರಿ
ಪುರಿ
ಪುರುಷಾರ್ಥ
ಪುರೋಹಿತ
ಪುಲಿಗೆರೆ
ಪುಷ್ಪದರ್ಶನ.......
ಪೂರ್ವ ಪಕ್ಷ
ಪೂರ್ವಾಂಗಗಳು
ಪೃಥ್ವಿ
ಪೆಂಡವಾಸ
ಪೆಣ್ಬುಯ್ಯಲ್
ಪೆರ್ಗಡೆಗಳು
ಪೊಲತಿ
ಪೊಸದೇಸೆ
ಪೊಟ್ತು
ಪ್ರಜಾಪ್ರತಿನಿಧಿ ಸಭೆ
ಪ್ರಜಾ ಸರ್ಕಾರ
ಪ್ರಜಾಸ್ವಾತಂತ್ರ್ಯವಾದ
ಪ್ರತಿಕಮಣ
ಪ್ರತಿಕೂಲ ದೈವ
ಪ್ರತಿಕೃತಿ
ಪ್ರತಿಪತ್ತಿ
ಪ್ರತಿಬೋಧೆ
ಪ್ರತಿಹತ
ಪ್ರತಿಹಾರ
ಪ್ರದೇಶ
ಪ್ರಭುತ್ವ
ಪ್ರಭುಶಕ್ತಿ
ಪ್ರಮಿತಿ
ಪ್ರಶಸ್ತಿ ಶಾಸನಗಳು
ಪ್ರಸನ್ನ ಗುಣ
ಪ್ರಸವಧರ್ಮಿಣಿ
ಪ್ರಸೂತಿ
ಪ್ರಸೂತಿಗೃಹ
ಪ್ರಾಂತ್ಯದ ದಾನ
ಪ್ರಾಚೀನ
ಪ್ರಾಚೀನ ರಾಜಕೀಯ ವ್ಯವಸ್ಥೆ
ಪ್ರಾಣಿವಧೆ
ಪ್ರಾತಿಹಾರ್ಯ
ಪ್ರಾಯೋಪಗಮನ
ಪ್ರೇತ
ಪ್ರೋಪದೋಪ ವಾಸಿ
ಪಱೆಗುಟ್ಟು
ಪಟಿಗಾಳೆಗ
ಫಲ
ಬಂದಿಕಾರ

ಬಡಿಗರು
ಬದ್ದವಣ
ಬದ್ಧ ವೈರ
ಬನದಬ್ಬೆ
ಬಲಿಸ್ಥಪನ
ಬಹುಅರ್ಥ
ಬಹುಪತ್ನಿತ್ವ
ಬಹುಸಂಸ್ಕೃತಿ
ಬಳುವಳಿ
ಬಳ್ಳ
ಬಾಂಧವರು
ಬಾಕು
ಬಾಣ
ಬಾಣಸಿಗರು
ಬಾದುಬ್ಬೆ
ಬಾರಿ
ಬಾಲವದ್ದೆ
ಬಾಲ್ಯ ವಿವಾಹ
ಬಾಸಿಗ
ಬಿಟ್ಟಿಬೆಸ
ಬಿಲ್ಲು
ಬೀಡು
ಬುಡಕಟ್ಟು
ಬೆಚ್ಚುನೀರ್
ಬೆಲೆವೆಣ್
ಬೆಳ್ಳ
ಬೆಳ್ಳಕ್ಕರಿಗರು
ಬೆಳ್ಳವಾಸ
ಬೇಕನಾಟ
ಬೇಟೆ
ಬೇಟೆಯಲ್ಲಿ ಮಡಿದ ವೀರರ ಸ್ಮಾರಕಗಳು
ಬೇಡರು
ಬ್ರಹ್ಮ
ಬ್ರಹ್ಮಚರ್ಯ ವ್ರತ
ಬ್ರಹ್ಮಹತ್ಯೆ
ಬ್ರಾಹ್ಮಣ
ಭಂಡ
ಭಗವತಿ
ಭರತವಂಶ
ಭರ್ಜಿ
ಭವಪ್ರತ್ಯಯಜ್ಞಾನ
ಭವವೈರತ್ವ
ಭಸ್ಮ ಶಯ್ಯೆ
ಭಾರತತಾಯಿ
ಭಾರತೀಯ ಸಂಸ್ಕೃತಿ
ಭಾರ್ಗವ ಪರ್ಣಶಾಲೆ
ಭೂತ ಭೋಜನ
ಭೂದಾನ
ಭೂಷಣಾಂಗ
ಭೈಕ್ಷ್ಯ
ಭೋಜನ
ಭೋಜನಾಂಗ
ಮಂಗಳಗೀತಿ
ಮಂಗಳ ಜಲ
ಮಂಡಲ
ಮಂಡಲಿಕ
ಮಂತ್ರ
ಮಂತ್ರಾಲೋಚನೆ
ಮಂತ್ರಾವಾಸ
ಮಂತ್ರಿ
ಮಂದಗಾಮಿಗಳು
ಮಟ್ಟು

ಮಡಂಬ
ಮತಾಂತರ
ಮತ್ತರ್
ಮತ್ಸ್ಯನ್ಯಾಯ
ಮದಗಳು
ಮಧುದೇವತಾರಾಧನೆ
ಮಧುಪರ್ಕ
ಮಧುರ ಗುಣ
ಮನುಷ್ಯ
ಮನೆಗಳ ವಿನ್ಯಾಸ
ಮನೆ ಪೆರ್ಗಡೆ
ಮನೆವಾಟ್ತಿ
ಮನೋಮಯ ಸನಾತನ
ಮರುವಾಳು
ಮಲ್ಲ ಯುದ್ಧದ ರೀತಿಗಳು
ಮಲ್ಲಯುದ್ಧದಲ್ಲಿ ಹೊಡೆತದ ಪ್ರಕಾರಗಳು
ಮಹಾಜನಪದಗಳು
ಮಹಾದೇವಿ
ಮಹಾಪಾತಕ
ಮಹಾಮಂಡಳಿಕ
ಮಹಾಮಹ
ಮಹಾರಥಿ
ಮಹಾವ್ರತ
ಮಹಾಸತಿ
ಮಾಂಡಲಿಕ
ಮಾತೃದೇವತೆ
ಮಾದೆಗಿ
ಮಾರಿ
ಮಾರ್ಗ ಪರಂಪರೆ ಮತ್ತು ಸಂಗೀತ
ಮಾಲೆಗಾರರು
ಮಾಸಕ
ಮಿತ್ರಗುಣ
ಮಿತ್ರಸಂಹಿತ
ಮಿಥ್ಯಾಕರ್ಮಗಳು
ಮಿಸಿಸು
ಮೀಂಗುಲಿಗ
ಮುಂಜಿ
ಮುಂಡಕೇವಲಿ
ಮುಟ್ಟುಗೋಲು
ಮುಡಿ
ಮುದ್ರಿತ
ಮುನಿ
ಮೂಗುವಟ್ಟು
ಮೂಗುವಡು
ಮೂರ್ಧಾಭಿಷೇಕ
ಮೂಲಗುಣ
ಮೂಲಾನಕ್ಷತ್ರ
ಮೂವಿಟ್ಟಿ
ಮೃತ್ಯು
ಮೌನ
ಯಂತ್ರದ ಕಲ್ಲುಗಳು
ಯಕ್ಷಿ
ಯಕ್ಷಿಣಿಯರ ಆರಾಧನೆ
ಯಜಮಾನ
ಯಜ್ಞ
ಯಜ್ಞೋಪವೀತ
ಯತಿ
ಯವನಿಕಾ
ಯಶೋವಧ
ಯುದ್ಧ ಪರಿಕರಗಳು
ಯುದ್ಧಕ್ಕಾಗಿ ವ್ಯೂಹ ರಚನೆ
ಯುದ್ಧ ಧರ್ಮ

ಅಂಕ

ನಾಟಕದಲ್ಲಿ ಅಂಕವೆನ್ನುವುದು ಒಂದು ಭಾಗ. ಅಂಕವನ್ನು ದೃಶ್ಯವೆಂಬ ಅರ್ಥದಲ್ಲಿಯೂ ಬಳಸುತ್ತಾರೆ. ಒಂದು ಅಂಕದಿಂದ ಮತ್ತೊಂದು ಅಂಕಕ್ಕೆ ಹೋಗಲು ತೆರೆಯನ್ನು ಬಳಸುವ ಕ್ರಮವಿದೆ. ಹಾಗೆಯೇ ಅಂಕವು ಬದಲಾಗುವುದಕ್ಕೆ ಈಗ ರಂಗಸ್ಥಳವನ್ನು ಕತ್ತಲೆಯಾಗಿಸುವ ಕ್ರಮವೂ ಇದೆ.

ಅಂಕಪದವು ಮತ್ತೊಂದು ರೀತಿಯಲ್ಲಿಯೂ ಬಳಕೆಯಾಗುತ್ತದೆ. ಉದಾ: ಕೋಳಿಅಂಕ. ಕೋಳಿಯ ಕಾಲಿಗೆ ಹರಿತವಾದ ಬಾಳನ್ನು ಕಟ್ಟುವುದರಿಂದ ಕೋಳಿಅಂಕವೆಂದೂ ಕರೆಯುತ್ತಾರೆ. ಸ್ಪರ್ಧೆ, ಆಟ ಎಂಬರ್ಥ ಇಲ್ಲಿದೆ.

ವಿವರಗಳಿಗೆ ನೋಡಿ: ಈಹಾಮೃಗ

ಅಂಗದ

ಅಂಗದವೆಂದರೆ ತೋಳಬಂದಿ, ಬಾಹುಪೂರ. ಇವೆಲ್ಲವೂ ಸ್ತ್ರೀಯರ ವೇಷಭೂಷಣಗಳು ಎಂಬುದು ಗಮನಾರ್ಹ. ಅಂಗವೆಂದರೆ ದೇಹದ ಅಂಗ. ಮತ್ತು ದವೆಂದರೆ ಧರಿಸುವಿಕೆ.

ಅಂಗರಾಗ

ಅಂಗರಾಗವೆಂದರೆ ಅನುಲೇಪನ.ಇದನ್ನು ಮೈಗೆ ಹಚ್ಚಿಕೊಳ್ಳುವ ಸುಗಂಧ ದ್ರವ್ಯವೆಂದೂ ಕರೆಯುತ್ತಾರೆ.ಮೈಯ ಕಾಂತಿ, ಮೈಯ ಸೌಂದರ್ಯ ವರ್ಧಿಸಲು ಅಂಗರಾಗದ ಬಳಕೆಯಾಗುತ್ತಿತ್ತು. ಅಂಗಾಂಗಗಳಿಗೆ ಬಳಸುವ ದ್ರವ್ಯಗಳು ದೇಹದ ಆಕರ್ಷಣೆಯನ್ನು ಹೆಚ್ಚಿಸುತ್ತದೆ.

ಅಂಗಹಾರ

ಅಂಗಹಾರವೆಂದರೆ ಆಂಗಿಕ ಅಭಿನಯವೆಂದು ಅರ್ಥ. ಅಂಗಗಳ ಮೂಲಕ ಭಾವ ಪ್ರಕಟಣೆಯೇ ಅಂಗಹಾರ.

"ಹಸ್ತಾಭಿನಯವು ಪತಾಕ, ತ್ರಿ–ಪತಾಕ, ಕರ್ತರೀಮುಖ, ಅರ್ಧಚಂದ್ರ, ಅರಾಲ, ಶುಕತುಂಡ, ಮುಷ್ಠಿ, ಶಿಖರ, ಕಪಿತ್ಥ, ಕಟಕಾಮುಖ, ಸೂಚ್ಯಾಸ್ಯ, ಪದ್ಮಕೋಶ, ಸರ್ಪಶೀರ್ಷಕ, ಮೃಗಶೀರ್ಷ, ಕಾಂಗೂಲ, ಅಲಪದ್ಮ, ಚತುರ, ಭ್ರಮರ, ಹಂಸಾಸ್ಯ, ಹಂಸಪಕ್ಷ, ಸಂದಂಶ, ಮುಕುಲ, ಊರ್ಣನಾಭ ಮತ್ತು ತಾಮ್ರಚೂಡ ಎಂದು ೨೪ ವಿಧಗಳದಾಗಿದೆ. ಇವು ಒಂದು ಕೈಯ ಅಭಿನಯ. ಎರಡೂ ಕೈಗಳನ್ನು ಜೋಡಿಸಿ ಅಂಜಲಿ, ಕಪೋತ, ಕರ್ಕಟ, ಸ್ವಸ್ತಿಕ, ಕಟಕಾವರ್ಧಮಾನ, ಉತ್ಸಂಗ, ನಿಷೇಧ, ದೋಲ, ಪುಷ್ಪಪುಟ, ಮಕರ, ಗಜದಂತ, ಅವಹಿಥ, ಮತ್ತು ವರ್ಧಮಾನ ಎಂದು ೧೩ ತರದ ಅಭಿನಯ. ಪ್ರತಿಯೊಂದು ತರವನ್ನು ಒಂದೊಂದು ಭಾವಕ್ಕಾಗಿ ಬಳಸಬೇಕು. (ಉದಾ: ಶುಕತುಂಡ ಇದನ್ನು ತಿರಸ್ಕಾರ ಸೂಚನೆಗೆ, ಧಿಕ್ಕಾರ ಎನ್ನಲಿಕ್ಕೆ ಬಳಸಬಹುದು. ಅಂಜಲಿ–ಎರಡೂ ಕೈಗಳದು, ದೇವತೆಗಳನ್ನು ವಂದಿಸಲು ತಲೆಯ ಮೇಲೆ, ಗುರುಗಳನ್ನು ವಂದಿಸಲು ಮುಖದ ಎದುರು, ಮಿತ್ರರಿಗಾಗಿ ಎದೆಯ ಎತ್ತರಕ್ಕೆ, ಮಿಕ್ಕವರಿಗಾಗಿ ಮನಸ್ಸಿಗೆ ಬಂದಂತೆ ಕೈ ಮುಗಿಯಬಹುದು) ಮೊದಲು ಪ್ರತಿಯೊಂದು ಹಸ್ತಾಭಿನಯಕ್ಕಾಗಿ ಕೈ ಮತ್ತು ಬೆರಳುಗಳನ್ನು ಯಾವ ರೀತಿ ಇಟ್ಟುಕೊಳ್ಳಬೇಕೆಂದು ಹೇಳಿ ಆಮೇಲೆ ಅದನ್ನು ಯಾವ ಸಂದರ್ಭದಲ್ಲಿ ಬಳಸಬೇಕು ಎಂಬುದನ್ನು ಹೇಳಲಾಗಿದೆ. ಇಲ್ಲಿನ ವೃತ್ತದ ೬೪ ಹಸ್ತಾಭಿನಯಗಳ ಉಲ್ಲೇಖವೂ ಇದೆ.

ಸ್ಥಿರಹಸ್ತ, ಪರ್ಯಾಸ್ತಕ, ಸೂಚೀವಿದ್ದೆ, ಅಪವಿದ್ಧ, ಆಕ್ಷಿಪ್ತಕ, ವಿದ್ಧಟ್ಟಿತ, ವಿಷ್ಕಂಭ, ಅಪರಾಜಿತ, ವಿಷ್ಕಂಭಾಪಸೃತ, ಮತ್ತಾಕ್ರೀಡ, ಸ್ವಸ್ತಿಕ, ರೇಚಿತ, ಪಾರ್ಶ್ವಸ್ವಸ್ತಿಕ, ವೃಶ್ಚಿಕಭ್ರಮರ ಮತ್ತಸ್ಖಲಿತಕ, ಮದವಿಲಸಿತ, ಗತಿಮಂಡಲ, ಪರಿಚ್ಛಿನ್ನ, ಪರಿವೃತ್ತ, ರೇಚಿತ, ವೈಶಾಖರೇಚಿತ, ಪರಾವೃತ್ತ, ಅಲಾತಕ, ಪಾರ್ಶ್ವಚ್ಛೇದ, ವಿದ್ಯುದ್ಭಾಂತ, ಉದ್ವೃತಕ ಅಲೀಢ, ರೇಚಿತ, ಆಚ್ಛುರಿತ, ಆಕ್ಷಿಪ್ತರೇಚಿತ, ಸಂಭಾಂತ, ಉಪಸಪೀತ, ಅರ್ಧನಿಕ್ಕುಟಕ ಇವು ಎಂಬ ಮೂವತ್ತೆರಡು ರೀತಿಯ ಅಂಗಹಾರಗಳನ್ನು ಭರತನು ನಾಟ್ಯ ಶಾಸ್ತ್ರದಲ್ಲಿ ಹೇಳಿದ್ದಾನೆ. ಇವು ನಾಟ್ಯಶಾಸ್ತ್ರದ ಪರಿಭಾಷೆಗಳಾಗಿವೆ. ಇವು ಸಂಸ್ಕೃತದಲ್ಲಿವೆಯೆಂಬುದನ್ನು ಗಮನಿಸಬೇಕು. ಈ ಪದ್ಧತಿಯನ್ನು ನಾವು ವಿಶ್ವಾತ್ಮಕವೆಂದು ಪರಿಭಾವಿಸಬೇಕಾಗಿಲ್ಲ. ಅಭಿನಯವು ಒಂದೊಂದು ಕಲೆಯಲ್ಲಿ ಒಂದೊಂದು ರೀತಿಯಲ್ಲಿ ಇರುತ್ತದೆ. ಯಕ್ಷಗಾನದ ಅಂಗಾಂಗ ಚಲನೆಯು ಅದರ ವೇಷಭೂಷಣಕ್ಕೆ ಅನುಸಾರವಾಗಿ ಇದೆ. ಕಥಕ್ಕಳಿಯಲ್ಲಿ ಅಭಿನಯವು ಭಿನ್ನ. ಯಾವ ಕಲೆಯಲ್ಲಿ ಮಾತು ಬಳಕೆಯಿಲ್ಲವೋ ಅಲ್ಲಿ ಅಭಿನಯವೇ ಸಂವಹನ ಮಾಧ್ಯಮವಾಗಿರುತ್ತದೆ."

ವಿವರಗಳಿಗೆ ನೋಡಿ: ಆಮೂರ ಜಿ. ಎಸ್. ೨೦೦೬ ಶ್ರೀರಂಗ ಸಾರಸ್ವತ (ಸಂಪುಟ. ೮)

ಆದ್ಯರಂಗಾಚಾರ್ಯ ೧೯೮೩ ಶ್ರೀರಂಗ ನಾಟ್ಯಶಾಸ್ತ್ರ ಸಂಗ್ರಹ ಪುಟ. ೪, ೧೯, ೨೭

ಅಂಗಾಧಿಪತಿ

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಚಕ್ರಾಧಿಪತಿ, ದೇಶಾಧಿಪತಿ, ಸೇನಾಧಿಪತಿ ಮುಂತಾದ ವಿಶೇಷಣಗಳು ಹೇರಳವಾಗಿ ಬಳಕೆಯಾಗಿದೆ. ಯಾರು ದೇಶವನ್ನು ಆಳುತ್ತಾರೋ ಅವರನ್ನು ದೇಶಾಧಿಪತಿಯೆಂದು ಕರೆಯುತ್ತಾರೆ. ಯಾರು ಸೇನೆಯನ್ನು ಆಳುತ್ತಾರೋ ಅವರು ಸೇನಾಧಿಪತಿಯಾಗಿರುತ್ತಾರೆ. ದೇಶದ ಉಪವಿಭಾಗವು ಮಂಡಲ ಅದರ ಉಸ್ತುವಾರಿಯನ್ನು ನೋಡುವವನು ಮಂಡಲಾಧಿಪತಿ. ದೇಶದ ಅಂಗದ ಜವಾಬ್ದಾರಿಯು ಅಂಗಾಧಿಪತಿಗಿರುತ್ತದೆ. ಇದು ಒಂದು ರೀತಿಯಿಂದ ಆಡಳಿತಕ್ಕೆ ಮಾಡಿಕೊಂಡಿರುವ ಅನುಕೂಲ ವ್ಯವಸ್ಥೆ. ಆಡಳಿತದ ವಿಕೇಂದ್ರಿಕರಣದ ಸೂಚನೆಯು ಇದರಲ್ಲಿದೆ. ಮಂಡಲ, ಸೀಮೆ. ಮುಂತಾದ ಪರಿಕಲ್ಪನೆಗಳು ಬ್ರಿಟೀಷರು ಬಂದಮೇಲೆ ಬದಲಾಯಿತು.

ಅಂಗಾರ

ಅಂಗಾರಕವೆನ್ನುವುದು ಮಂಗಳನ ಮತ್ತೊಂದು ಹೆಸರು. ಮಂಗಳವಾರ ಹುಟ್ಟಿದವರಿಗೆ ಅಂಗಾರ ಎಂದು ಹೆಸರಿಸುತ್ತಾರೆ.

ತುಳುವಿನಲ್ಲಿ "ಅಂಗಾರೆ" ಎಂದರೆ ಮಂಗಳವಾರ.

ಇದರಲ್ಲಿ ಕೆಲವು ಹೆಸರುಗಳಿಗೆ ಮತ್ತು ದಿನದ ಹೆಸರುಗಳಿಗೆ ಹೊಂದಾಣಿಕೆಯಾಗುತ್ತದೆ. ಮತ್ತೆ ಕೆಲವು ಅನ್ವರ್ಥನಾಮಗಳೂ ಇರಬಹುದು. ಯಾವ ಹೆಸರುಗಳು ಕೂಡಾ ಸಂಸ್ಕೃತೀಕರಣದ ಪ್ರಕ್ರಿಯೆಗೆ ಗುರಿಯಾಗಿಲ್ಲ.

ಗಂಡು ಮಗುವಾದರೆ ದೇವಸ್ಥಾನಕ್ಕೆ ಬಂದು ಚವಲ (ಮೊದಲನೆಯ ಬಾರಿ ದೇವರಿಗೆ ಮುಡಿಯೊಪ್ಪಿಸುವುದು ಅಥವಾ ಕ್ಷೌರಮಾಡಿಸುವುದು) ಮಾಡಿಸುವುದು ಒಂದು ಸಾಂಸ್ಕೃತಿಕ ನಂಬಿಕೆಯಾಗಿದೆ.

ವಿವರಗಳಿಗೆ ನೋಡಿ: ನಾಮಕರಣ, ಜಾತಕರ್ಮ

ಅಂಚೆ

ಸಂಸ್ಕೃತದ 'ಹಂಸ'ದ ತದ್ಭವ ರೂಪ ಅಂಚೆ. ಇಲ್ಲಿ ವಸ್ತ್ರ ಎಂಬರ್ಥದಲ್ಲಿ ಬಳಕೆಯಾಗುತ್ತದೆ. ಇದು ವಿಶೇಷ. ಅಂಚು ಎಂದರೆ ತುದಿ. ಏಕ ವಸ್ತ್ರಧಾರಣೆಯು ದುರವಸ್ಥೆಯನ್ನು ಸೂಚಿಸುತ್ತಿತ್ತು. ಶ್ರೀಮಂತರು ಬಹು ವಸ್ತುಗಳನ್ನು ಧರಿಸುತ್ತಿದ್ದರು.

ಪಂಚೆ ಮತ್ತು ಧೋತ್ರವನ್ನು ಅಂಚೆಯೆಂದು ಕರೆಯಲಾಗಿದೆ. ಅಂಚೆಗೂ ಅಂಚುವಿಗೂ ಇರುವ ಸಂಬಂಧ ಗಮನಾರ್ಹವಾಗಿದೆ. ಹಿಂದೆ ಹಂಸಗಳ ಮೂಲಕ ಅಂಚೆಯನ್ನು ಕಳಿಸುತ್ತಿದ್ದುದನ್ನು ನೆನಪಿಸಿಕೊಳ್ಳಬಹುದು. "ಪೋಸ್ಟ್" ಎಂಬುದನ್ನು ಆಧುನಿಕ ಯುಗದಲ್ಲಿ 'ಅಂಚೆ'ಯೆಂದು ಕರೆಯುತ್ತಾರೆ.

ವಿವರಗಳಿಗೆ ನೋಡಿ: ಮರಿಯಪ್ಪ ಭಟ್ಟ ಎಂ. ೧೯೭೦ ಕಿಟ್ಟೆಲ್‌ರ ಕನ್ನಡ-ಇಂಗ್ಲಿಷ್ ನಿಘಂಟು

ವಿಡಂಬಾರಿ – ಅಂಚೆಯಣ್ಣನ ಆತ್ಮಕತೆ

ಅಂಜನ

ಅಂಜನವು ವಾಮಾಚಾರದಲ್ಲಿ ಮುಖ್ಯವಾಗಿದೆ. ಅಂಜನ ಹಾಕುವುದರಿಂದ ಸಕಲದೃಷ್ಟಿ ಒದಗುತ್ತದೆ. ಶತ್ರು ದಮನಕ್ಕೆ ಅಂಜನ ಹಾಕುವುದು ಕೂಡಾ ಅಭಿಚಾರ ಕ್ರಿಯೆಯ ಒಂದು ಭಾಗವಾಗಿದೆ. ಸಾಧಕರಿಗೆ ಅಮಾನುಷ ಶಕ್ತಿಯನ್ನು ಕೊಡುವ ಅಂಜನಕ್ಕೆ ಸಿದ್ಧಾಂಜನವೆಂದು ಹೆಸರು.

ಅಂಜನವೆಂದರೆ ಕಾಡಿಗೆ. ಮೂರು ವಿಧದ ಅಂಜನಗಳು-ಕಾಲಾಂಜನ, ರಸ, ಪುಷ್ಪ. ಕಾಲಾಂಜನವೆಂದರೆ ಪ್ರತ್ಯೇಕ- ಶ್ರೋತ್ರ, ರಸ, ಸೌವೀರ, ನೇತ್ರ ಅಂಜನವು ಕಾಡಿಗೆಯನ್ನು ಸೂಚಿಸುತ್ತದೆ. ದೈನಂದಿನ ಕಾಡಿಗೆ ತಯಾರಿಕೆಯು ಸರಳ. ಅಭಿಚಾರ ಕರ್ಮದ ಕಾಡಿಗೆಯು ಬೇರೆ. ತುಳುವಿನಲ್ಲಿ ಈಗಲೂ ಅಂಜನವು ಸಕಲದೃಷ್ಟಿಯನ್ನು ಸೂಚಿಸಲು ಬಳಕೆಯಾಗುತ್ತದೆ. ಅಂಜನ ಹಾಕುವುದಕ್ಕೆ ಕಣ್ಕಟ್ಟು ವಿದ್ಯೆಯೆಂದೂ ಕರೆಯುತ್ತಾರೆ. ಈಗಲೂ ತುಳುವಿನಲ್ಲಿ ಅಂಜನ ಹಾಕುವುದು ಎಂಬುದು ಚಾಲ್ತಿಯಲ್ಲಿದೆ. ಕಣ್ಣಿಗೆ ಕಾಡಿಗೆಯನ್ನು ಹಾಕಿ ಮಂತ್ರವಾದದ ಬಲದಿಂದ ಕಳೆದುಕೊಂಡುದನ್ನು ಹುಡುಕಲು ಸಾಧ್ಯವಾಗುತ್ತದೆಯೆಂಬ ನಂಬಿಕೆಯಿದೆ.

ವಿವರಗಳಿಗೆ ನೋಡಿ: ಜಿ.ಎನ್. ಚಕ್ರವರ್ತಿ ೨೦೦೯ ಸಂಸ್ಕೃತ –ಕನ್ನಡ ನಿಘಂಟು

ಡಾ. ಟಿ.ವಿ.ವೆಂಕಟಾಚಲಶಾಸ್ತ್ರೀ ೧೯೯೯ ಶ್ರೀವತ್ಸ ನಿಘಂಟು

ಅಂತಕ

ಯಮನನ್ನು ಅಂತಕನೆಂದು ಕರೆಯುತ್ತಾರೆ. ಯಮನು ಪಾಪ ಪುಣ್ಯಗಳನ್ನು ನೋಡಿ ಜೀವಗಳನ್ನು ಸ್ವರ್ಗಕ್ಕೋ ನರಕಕ್ಕೊ ಕಳಿಸುತ್ತಾನೆಂಬ ನಂಬಿಕೆಯಿದೆ. ಆದುದರಿಂದಲೇ ಅವನಿಗೆ ಯಮಧರ್ಮರಾಯನೆಂದು ಕರೆಯುತ್ತಾರೆ. ನೈತಿಕತೆಗೆ ಸಂಬಂಧಿಸಿದಂತೆ ಅವನು ನ್ಯಾಯಾಧೀಶನ ಕೆಲಸ ಮಾಡುತ್ತಾನೆ.

ಯಮನನ್ನು ದಕ್ಷಿಣ (ತೆಂಕು)ದಿಕ್ಕಿನ ಒಡೆಯನೆಂದು ಪುರಾಣದಲ್ಲಿ ಕರೆಯಲಾಗಿದೆ. ಶೈಮಿನಿ ಇವನ ರಾಜಧಾನಿ. ಯಮನಿಂದ ಕುಂತಿಯಲ್ಲಿ ಧರ್ಮರಾಜ ಹುಟ್ಟಿದ. ಯಮನು ಧರ್ಮಶಾಸ್ತ್ರ ಸರಿಯಾಗಿ ತಿಳಿದವನು ಎಂದು ಹೇಳಲಾಗುತ್ತದೆ. ಇವನ ತಂದೆ ಸೂರ್ಯ. ತಾಯಿ ಸಂಜ್ಞಾದೇವಿ. ಸತ್ತವರನ್ನು ಯಮ ನರಕಕ್ಕೆ ಕರೆದೊಯ್ಯುತ್ತಾನೆಂದು ಹೇಳುತ್ತಾರೆ. ಯಮ-ಯಮಿ ಸಂವಾದ ಋಗ್ವೇದದಲ್ಲಿ ಬರುತ್ತದೆ. ಅವರ ನಡುವೆ ನಡೆದ ಚರ್ಚೆಯು ನೈತಿಕತೆಗೆ ಸಂಬಂಧಿಸಿದ್ದು ಎಂಬುದು ಗಮನಾರ್ಹ. ಸಾವಿಗೂ ಯಮನಿಗೂ ಸಂಬಂಧ ಕಲ್ಪಿಸಿರುವುದು ಕುತೂಹಲಕಾರಿ

ಯಾಗಿದೆ. ಯಮ ದಕ್ಷಿಣ ದಿಕ್ಕಿನ ಒಡೆಯನಾಗಿರುವುದರಿಂದ ತೆಂಕು ದಿಕ್ಕಿಗೆ ತಲೆಯಿಟ್ಟು ಮಲಗಬಾರದು ಎಂದು ಹೇಳುತ್ತಾರೆ.

ವಿವರಗಳಿಗೆ ನೋಡಿ: ಯಜ್ಞ ನಾರಾಯಣ ಉಡುಪ ೧೯೭೪ ಪುರಾಣ ಭಾರತಕೋಶ

ಎಚ್. ಪಿ. ವೆಂಕಟರಾವ್ ೨೦೦೯ ಋಗ್ವೇದ ಸಂಹಿತಾ.

ಅಂತರ

'ಅಂತರ' ಎನ್ನುವುದು 'ದೂರ' ಎಂಬುದನ್ನು ಸಂಕೇತಿಸುತ್ತದೆ. ಡೆರಿಡಾ 'ಅಂತರ'ವೆನ್ನುವುದಕ್ಕೆ ವಿಶೇಷ ರೀತಿಯ ಮಂಡನೆಯನ್ನು ಮಾಡುತ್ತಾನೆ. ಒಂದು ವಸ್ತುವನ್ನು ನೋಡುವುದಕ್ಕೂ ಅದರ ಕುರಿತು ಆಲೋಚಿಸುವುದಕ್ಕೂ 'ಅಂತರ'ವಿದೆ. ಆಲೋಚಿಸಿದ್ದನ್ನು ಮಾತಾಡುವಾಗ 'ಅಂತರ' ಉಂಟಾಗುತ್ತದೆ. ಆಲೋಚನೆಯು ಬರಹಕ್ಕೆ ಬರುವಾಗ 'ಅಂತರ' ಇರುತ್ತದೆ. ಈ ಎಲ್ಲಾ ಸಂಗತಿಗಳಿಗೆ ಸಂಬಂಧಿಸಿದಂತೆ ಮತ್ತೊಂದು ಅಂಶವು ಗಮನಾರ್ಹವಾಗಿದೆ. ಆಲೋಚನೆ-ಮಾತು, ಮಾತು ಬರಹ ಹೀಗೆ ಅಂತರವುಂಟಾಗುವಾಗ ಅದರ ಮಧ್ಯೆ "ಅವಕಾಶ" (ಖಾಲಿಯಾದ ಜಾಗ) ಉಂಟಾಗುತ್ತದೆ. ಹಾಗೂ ಇದು ಒಂದಕ್ಕೊಂದು ವ್ಯತ್ಯಾಸ ಮಾಡುವುದಕ್ಕೆ ಇರುವ ಪ್ರಮುಖ ಅಂಶವಾಗಿದೆ. ಅಂತರವನ್ನು ಮುಖ್ಯ ಪರಿಭಾಷೆಯನ್ನಾಗಿ ಚಾಲ್ತಿಗೆ ತಂದ ನಿರಚನ ಸಿದ್ಧಾಂತವು ಗ್ರಹಿಕೆ, ಮಾತು, ಪದಗಳು ಮತ್ತು ಬರವಣಿಗೆ ನಡುವೆ ಇರುವ ಅಂತರವನ್ನು ಮುಖ್ಯವೆಂದು ಪರಿಭಾವಿಸಿತು. ಮಾತಿಗೆ, ರಚನೆಗೆ, ಪದಗಳಿಗೆ ಒಂದು ಕೇಂದ್ರವಿದೆಯೆನ್ನುವುದನ್ನು ನಿರಚನೆಯು ಅಲ್ಲಗಳೆಯುತ್ತದೆ. ಆದುದರಿಂದಲೇ ಅಂತರವೆನ್ನುವುದಕ್ಕೆ ನಿರಚನ ಸಿದ್ಧಾಂತದಲ್ಲಿ ಪ್ರಾಮುಖ್ಯತೆಯು ಬಂದಿತು. ನಿರಚನ ಸಿದ್ಧಾಂತದಲ್ಲಿ "Difference" ಪರಿಕಲ್ಪನೆಯು ಮುಖ್ಯ.

ವಿವರಗಳಿಗೆ ನೋಡಿ: Julian wolfreys 2002. Key concepts in Literary theory P.27.

ಎನ್.ರಂಗನಾಥ ಶರ್ಮ(ಅನು) ಡಿ.ಆರ್.ನಾಗರಾಜ್(ಸಂ) ೧೯೯೩ ಭರ್ತೃಹರಿಯ ವಾಕ್ಯಪದೀಯ

ಸಿ.ಎನ್. ರಾಮಚಂದ್ರನ್ ೨೦೦೨ ವಸಾಹತೋತ್ತರ ಚಿಂತನೆ

Patricia Waugh 1998 Modern literary theory A Reader

ಅಂತರ್ದಾಸ್ಯ

ಯಜಮಾನಿಕೆ, ಅಧಿಕಾರಗಳು ರೂಪುಗೊಳ್ಳುವುದು ಇನ್ನೊಬ್ಬರ ಮೇಲೆ ನಿಯಂತ್ರಣ ಸಾಧಿಸುವುದರಿಂದ. ನಿಯಂತ್ರಣಗಳು ಬೇರೆ ಬೇರೆ ರೀತಿಯಲ್ಲಿರುತ್ತವೆ.

ಅದರಲ್ಲಿ ದೈಹಿಕ ನಿಯಂತ್ರಣ ಒಂದು ರೀತಿ. ಇದು ಕಣ್ಣಿಗೆ ಕಾಣಿಸುತ್ತದೆ. ಮತ್ತೊಂದು ಬೌದ್ಧಿಕ ನಿಯಂತ್ರಣ. ಇದು ಇನ್ನೊಬ್ಬನ ಬುದ್ಧಿಯ ಮೇಲೆ ನಿಯಂತ್ರಣ ಸಾಧಿಸುವುದನ್ನು ಸಂಕೇತಿಸುತ್ತದೆ. ಬ್ರಿಟೀಶರು ಈ ಎರಡೂ ವಿಧಾನಗಳನ್ನು ಬಳಸಿಕೊಂಡಿದ್ದರು. ಬ್ರಿಟೀಶ್ ಅಧಿಕಾರವು ನಮ್ಮ ಮೇಲೆ ಮಾನಸಿಕ ನಿಯಂತ್ರಣ ಸಾಧಿಸಿತ್ತು. ಬ್ರಿಟೀಶರು ಈ ಅರ್ಥದಲ್ಲಿಯೇ ಆತ್ಮೀಯ ಶತ್ರುವಾಗಿದ್ದರು. ಆಶೀಶ್ ನಂದಿಯವರ 'Intemate Enemy' ಪರಿಕಲ್ಪನೆಯನ್ನು ಗಮನಿಸಬಹುದು.

ವಿವರಗಳಿಗೆ ನೋಡಿ: Michel Foucault 1966 The order of things.

Ranajit Guha 1998 Dominance without hegemony

ಕೆ.ವಿ.ಸುಬ್ಬಣ್ಣ(ಅನು) ಗಾಂಧಿ ಬರಹಗಳ ಸಂಕಲನ ೧೯೯೮ ಸ್ವರಾಜ್ಯದ ಹಾದಿ ಹೆಜ್ಜೆಗಳು

ಅಂತೇವಾಸಿ

ಗುರುವಿನ ಮನೆಯಲ್ಲಿದ್ದುಕೊಂಡು ವಿದ್ಯಾಭ್ಯಾಸ ಮಾಡುವವನ್ನು ಅಂತೇವಾಸಿ ಎಂದು ಕರೆಯುತ್ತಾರೆ. ವೈದಿಕಯುಗದಲ್ಲಿ 'ವಿದ್ಯಾಸಂಸ್ಥೆ'ಗಳೆಂದು ಕರೆಯಿಸಿಕೊಳ್ಳುವ ಕೇಂದ್ರಗಳಿದ್ದಿಲ್ಲ. ಗುರುವಿನ ಮನೆಯೇ ಪಾಠಶಾಲೆ. ವಿದ್ಯಾರ್ಥಿಯು ಗುರುವಿನ ಮನೆಯಲ್ಲಿ ಗುರುಸೇವೆ ಮಾಡುತ್ತಾ ಗುರುವಿನಿಂದ ವಿದ್ಯೆಯನ್ನು ಕಲಿಯುತ್ತಿದ್ದನು. ಇಂತಹ ವಿದ್ಯಾರ್ಥಿಯನ್ನು 'ಅಂತೇವಾಸಿ' ಎಂದು ಕರೆಯುತ್ತಿದ್ದರು. ಗುರುವಿನೊಡನೆ ಒಂದೇ ಮನೆಯಲ್ಲಿ ವಾಸಿಸುತ್ತಿದ್ದುದರಿಂದ ಆ ಹೆಸರು ಬಂದಿದೆ. ಗುರುವಾದವನು ಸಂಭಾವನೆಯನ್ನು ನಿರೀಕ್ಷಿಸದೆ ಜ್ಞಾನದಾನ ಮಾಡುತ್ತಿದ್ದನು. 'ವಿದ್ಯೆ ಮುಗಿಯುವ ತನಕ ವಿದ್ಯಾರ್ಥಿಯು ಗುರುವಿಗೆ ಯಾವ ರೀತಿಯ ಸಂಭಾವನೆಯನ್ನು ಕೊಡಕೂಡದು ಎನ್ನುತ್ತಾನೆ ಯಮ (II. ೨೪೫)

ಅರ್ಥೋಪಜೀವಿಯಾದ ಉಪಾಧ್ಯಾಯನು ಉಪಪಾತಕಿಯಾಗುತ್ತಾನೆ ಎನ್ನುತ್ತಾನೆ ಯಾಜ್ಞವಲ್ಕ್ಯ (III – ೨೩೬) ಕಾಳಿದಾಸನು ಧನ ಸಂಪಾದನೆ ಬಯಸುವ ವಿದ್ವಾಂಸನನ್ನು 'ಜ್ಞಾನವನ್ನು ಮಾರುವ ವ್ಯಾಪಾರಿ' ಎಂದು 'ಮಾಲವಿಕಾಗ್ನಿಮಿತ್ರದಲ್ಲಿ (೧. ೧೭) ಹಾಸ್ಯ ಮಾಡಿದ್ದಾನೆ. ಅ ಂ ದ ' ರ ' ಉಪಾಧ್ಯಾಯನು ಕೇವಲ ಧನ ಸಂಪಾದನೆಯನ್ನು ಗುರಿಯಾಗಿರಿಸಿಕೊಳ್ಳಬೇಕಾಗಿಲ್ಲ. ಅಂತೇವಾಸಿ ಮತ್ತು ಗುರುವಿನ ಸಂಬಂಧ ನೇರವಾದುದು. ಇಲ್ಲಿ ಯಾವ ಸಂಸ್ಥೆಯ ಮಧ್ಯಸ್ಥಿಕೆಯೂ ಇಲ್ಲ. ವಿದ್ಯಾರ್ಥಿಯೂ ಯಾವ ಸಂಸ್ಥೆಗೂ ಸೇರಿದವನಲ್ಲ. ತನ್ನ ಉಪಾಧ್ಯಾಯನಿಗೆ ಸೇರಿದವನು. ಇದರಿಂದ ಒಬ್ಬೊಬ್ಬ ವ್ಯಕ್ತಿಯ ಶೀಲಾದಿಗಳಿಗೂ ಗಮನವೀಯಲು ಸಾಧ್ಯವಾಯಿತು. ವಿನಯ ಪಿಟಕದಲ್ಲಿ 'ಅಂತೇವಾಸಿ' ಎಂಬ

ಪದವು ಸೇವಕ ಅಥವಾ ದಾಸ ಎಂಬರ್ಥದಲ್ಲಿ ಬಂದಿದೆ. ಅಂತೇವಾಸಿಯು ಗುರುವಿನ ಸಮೀಪದಲ್ಲಿ ಇದ್ದುಕೊಂಡು ಕಲಿಯುವುದು ಇಲ್ಲಿ ಗಮನಾರ್ಹ.

ವಿವರಗಳಿಗೆ ನೋಡಿ: Devaras charana ? Slavery in Ancient India. P. 136

ಡಾ. ಎಂ. ಚಿದಾನಂದ ಮೂರ್ತಿ ೨೦೦೬ ಬೃಹತ್ ಕರ್ನಾಟಕ: ಭಾಷಿಕ ಸಾಂಸ್ಕೃತಿಕ ಪುಟ. ೨೨೭

ಅಂಬಿಗ

ಅಂಬಿಗರಿಗೆ ಉಚ್ಚಸ್ಥಾನವಿಲ್ಲ. ಅವರು ಕೆಳಜಾತಿಯವರು. ಅವರಿಗೆ ಸಾಮಾಜಿಕ ಮನ್ನಣೆಯೂ ಇಲ್ಲ.ದೋಣಿ ನಡೆಸುವವರನ್ನು ಅಂಬಿಗರೆಂದು ಕರೆಯುತ್ತಾರೆ. ದೋಣಿಯು ಬಹಳ ಮುಖ್ಯವಾದ ಸಂಪರ್ಕ ಸಾಧ್ಯತೆಯಾಗಿತ್ತು. ಆದರೆ ಅಂಬಿಗರಿಗೆ ಸಾಮಾಜಿಕ ಮಾನ್ಯತೆಯು ಇರಲಿಲ್ಲ ಎನ್ನುವುದು ಇಲ್ಲಿ ಗಮನಾರ್ಹ.

ವಿವರಗಳಿಗೆ ನೋಡಿ: ವರ್ಣ: ಜಾತಿ: ಬೆಸ್ತ: ದಾಶ

ಅಂಬಿಗರ ಹಾಡು

ಜನಪದ ಗೀತೆಗಳೆಂದು ನಾವು ಯಾವುದನ್ನು ಕರೆಯುತ್ತೇವೆಯೋ ಅದರಲ್ಲಿ ಅಂಬಿಗರ ಹಾಡು; ನಾಟಿ ಮಾಡುವವರ ಹಾಡು, ಸೈನಿಕ ಗೀತೆಗಳು ಬರುತ್ತವೆ. ಹದಿನೆಂಟನೆಯ ಶತಮಾನದ ಅನಂತರ ಇಂಗ್ಲಿಷಿನಲ್ಲಿ ಈ ರೀತಿಯ ಹಾಡುಗಳ ಸಂಗ್ರಹ ವ್ಯಾಪಕವಾಗಿ ನಡೆಯಿತು. ಈ ರೀತಿಯ ಗೀತೆಗಳು ಸಮೂಹ ಗೀತೆಗಳಾಗಿರುತ್ತವೆ. ಮಾಡುವ ಕೆಲಸಕ್ಕೆ ಹೆಚ್ಚಿನ ಉತ್ಸಾಹವನ್ನು ತುಂಬಿಸುತ್ತವೆ. ಅಂಬಿಗರ ಹಾಡು, ಕೂಲಿಯವರ ಹಾಡು ಮುಂತಾದವುಗಳನ್ನು ನಾವೀಗ ಜನಸಮೂಹದ ಜನಪ್ರಿಯ ಸಂಸ್ಕೃತಿಯ ಭಾಗಗಳು ಎಂಬುದನ್ನು ಬದಿಗೊತ್ತಿ ಜನಪದ ಸಂಸ್ಕೃತಿಯ ಹಾಡುಗಳು ಎಂದು ಕರೆಯುತ್ತೇವೆ. ಭಕ್ತಿನ್ ಹೇಳುವಂತೆ ಈ ರೀತಿಯ ಹಾಡುಗಳು ಒಂದು ಪರಂಪರೆಯ ಅಭಿವ್ಯಕ್ತಿ ಕ್ರಮಗಳು ಹಾಗೂ ಇವು ಕಲೆಗಳೂ ಹೌದು; ಸಂಸ್ಕೃತಿಯ ಭಾಗಗಳೂ ಹೌದು.ಮೀನುಗಾರರು ತಮ್ಮ ಪರಿಶ್ರಮವನ್ನು ಬಗೆ ಹರಿಸಲು ಹಾಡು ಹೇಳುತ್ತಾರೆ.ಭಾರವಾದ ಯಾವುದೇ ವಸ್ತುವನ್ನು ಎತ್ತಲು ಜನರು ಹೇಳುವ ಹಾಡು ಅರ್ಥಪೂರ್ಣವಾಗಿರಬೇಕೆಂದು ಇಲ್ಲ. ಉದಾ: "ಜೋರಾಗಿ ಎತ್ತಿ, ಐಸಾ" ಗುಂಪು ಹಾಡು, ಗುಂಪು ನೃತ್ಯ,ಗುಂಪು ನಾಟಕವೆನ್ನುವುದನ್ನು ಈ ಹಿನ್ನೆಲೆಯಿಂದ ಪರಿಶೀಲಿಸಬಹುದು.

ವಿವರಗಳಿಗೆ ನೋಡಿ: Jeremy Howthorn 2000 A Glossary of contemporary Literary theory P.26.

M.M. Bakhtin The Dialogic Imagination.

ಅಂಶತ್ರಯ

ಮೂರು ಅಂಶಗಳು ಎಂದು ಅರ್ಥ. ಕ್ರಮ, ಅರ್ಥ, ಮುಕ್ತಾಯ ಇವು ಮೂರು ಅಂಶತ್ರಯಗಳು. ಇದು ನಾವು ಬಳಸುವ ಮಾತು, ಹಾಡುಗಳಿಗೆ ಅನ್ವಯವಾಗುತ್ತದೆ. ಇದನ್ನು ನಾವು ಈಗ ಪೀಠಿಕೆ, ಮುಖ್ಯಾಂಶ, ಮತ್ತು ಸಮಾರೋಪವೆಂದು ಕರೆಯುತ್ತೇವೆ.

ಅಂಶದೃಷ್ಟಿ

ದೃಷ್ಟಿಯಲ್ಲಿ ಎರಡು ಬಗೆಯಿದೆ.ಒಂದು ಪೂರ್ಣದೃಷ್ಟಿ–ಇದು ಸಮಗ್ರ ದೃಷ್ಟಿಯಾಗಿದೆ. ಎರಡನೆಯದು ಅಂಶದೃಷ್ಟಿ. ಇದರಲ್ಲಿ ಆಂಶಿಕ ಸತ್ಯದ ಅರಿವು ಮಾತ್ರ ಉಂಟಾಗಿರುತ್ತದೆ. ಸಮಗ್ರದೃಷ್ಟಿಯಿಂದ ಸರಿಯಾದ ಅರಿವು ಮೂಡುತ್ತದೆ. ಪೂರ್ಣ ದೃಷ್ಟಿಯನ್ನು ಮಹಾವಾಸ್ತವತೆಯು ಪ್ರತಿಪಾದಿಸುತ್ತದೆ. ಅರೆವಾಸ್ತವತಾ ದೃಷ್ಟಿಕೋನವು ಈ ಬಗೆಯಿಂದ ಆಂಶಿಕ ದೃಷ್ಟಿ ಮಾತ್ರವೇ ಆಗಿರುತ್ತದೆ. ವ್ಯಕ್ತಿ ಕೇಂದ್ರಿತ ಕ್ರಮದಲ್ಲಿಯಂತೂ ಖಾಸಗಿ ಅನುಭವವೇ ಮುಖ್ಯವಾಗಿರುವುದರಿಂದ ಅದರ ದೃಷ್ಟಿಕೋನ ಪೂರ್ತಿಯಾಗಿ ಆಂಶಿಕವಾಗಿಯೇ ಇರುತ್ತದೆ. ಅಂಶದೃಷ್ಟಿಯನ್ನು ಅರೆ ಖಾಸಗಿಯೆಂದೂ ಕರೆಯುವುದಿದೆ.

ಅಕಾಂಡ

ಅಕಾಂಡವೆಂದರೆ ತುಂಡಾಗದ–ಕಾಲ. ಅಕಾಲವೆಂಬ ಅರ್ಥ ಬರುತ್ತದೆ. ಕಾಲವನ್ನು ಕತ್ತರಿಸಲು ಬರುವುದಿಲ್ಲವೆಂಬುದು ಒಂದು ಅರ್ಥ. ಎರಡನೆಯದು ಕಾಲವೆಂದರೆ – ಸಕಾಲ ಮತ್ತು ಅಕಾಲವೆಂದು ಎರಡು ಬಗೆ. ಸಕಾಲದಲ್ಲಿ ಹೇಳಿದನೆಂದರೆ ಸಂದರ್ಭೋಚಿತವಾಗಿ ಹೇಳಿದ. ಅಕಾಲ ವೃಷ್ಟಿಯೆಂದರೆ ಸಂದರ್ಭವಲ್ಲದ ಸಂದರ್ಭದಲ್ಲಿ ಬಂದ ಮಳೆಯೆಂದರ್ಥ.

ಅಕೃಷ್ಟಪಚ್ಯ

ಅಕೃಷ್ಟಪಚ್ಯವೆಂದರೆ ಕೃಷಿ ಮಾಡದೆ ಬೆಳೆಯುವ ಸಹಜ ಗಿಡ–ಮರಗಳ ಉತ್ಪತ್ತಿಗಳು, ಕೃಷಿಯೆಂದರೆ ಅದು ಸಹಜವಾದುದಲ್ಲ. ಕೃತಕವಾದುದು. ಕೃಷಿಯು ಮೂಲಭೂತವಾಗಿ ಉಳುಮೆಗೆ ಸಂಬಂಧಿಸಿದ್ದು. ಮನುಷ್ಯನ ಅಗತ್ಯಕ್ಕಾಗಿ ಕೃಷಿ ಪದ್ಧತಿಯು ರೂಪುಗೊಂಡಿದೆ. ಕೃಷಿ: ನಿಸರ್ಗ, ಮನುಷ್ಯರ ನಡುವಣ ಸಂಬಂಧ ದ್ವಂದ್ವಾತ್ಮಕವಾದುದು.

ಕೃಷ್ಟಪದವು ಕೃಷಿಯನ್ನು ಸೂಚಿಸುತ್ತದೆ. ಕೃಷ್ಟಪಚ್ಯವೆಂದರೆ ಉತ್ತಭೂಮಿಯಲ್ಲಿ ಬೆಳೆದು ತಾನಾಗಿಯೇ ಹಣ್ಣಾಗುವ ಧಾನ್ಯ ಇತ್ಯಾದಿ. ಇದನ್ನೇ ಈಗ ನಿಸರ್ಗ ಕೃಷಿಯೆಂದು ಕರೆಯುತ್ತಾರೆ. ಕೃಷಿಯು ಸಂಸ್ಕೃತಿಯಭಾಗ. ಭಾರತೀಯ ಜೀವನ ಕ್ರಮದಲ್ಲಿ ನಿಸರ್ಗ>ಕೃಷಿ>ಸಂಸ್ಕೃತಿಯ ನಡುವೆ ಅಂತರ್ಗತ ಸಂಬಂಧವಿದೆ. ಕೃಷಿಯು ನಿಸರ್ಗವನ್ನು ಮಣಿಸಿ ತನಗೆ ಬೇಕಾದಂತೆ ಸಂಪತ್ತನ್ನು ರೂಪಿಸಿಕೊಳ್ಳುತ್ತದೆ. ಕೃಷಿಯಲ್ಲಿ

ಎರಡು ವಿಧ: ಒಂದು ಕೃಷಿಯ ಮೂಲಕ ವಾಣಿಜ್ಯೋದ್ಯಮ ರೂಪಿಸುವುದು. ಎರಡು: ಆಹಾರೋತ್ಪಾದನೆಯನ್ನು ಪಡೆಯುವುದು. ಹಿಂದಿನಿಂದಲೂ ಬಂದ ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಇದು ಸೂಚಿಸುತ್ತದೆ.

ಅಕ್ಕರಗೊಟ್ಟಿ

ಅಕ್ಷರ ಗೋಷ್ಠಿಯೆಂದರೆ ಅಕ್ಷರಸ್ಥರ ನಡುವೆ ನಡೆಯುವ ಚರ್ಚೆ. ಪಂಪನು ಅಕ್ಷರಗೋಷ್ಠಿ ಎಂಬುದನ್ನು ಕನ್ನಡೀಕರಿಸಿ ಅಕ್ಕರ ಗೊಟ್ಟಿಯೆಂದು ಕರೆದಿರುವುದು ಗಮನಾರ್ಹ. ಅಕ್ಕರಗೊಟ್ಟಿ ನಡೆಯುತ್ತಿತ್ತು ಎಂಬುದು ಸಾಂಸ್ಕೃತಿಕವಾಗಿ ಮಹತ್ವದ್ದು. ಗೇಯದ ಗೊಟ್ಟಿಯೆಂದರೆ ಗಾಯನ ಗೋಷ್ಠಿ. ಗಾಯನ ಗೋಷ್ಠಿಗಳ ಬಗೆಗೆ ಹಳೆಗನ್ನಡ ಕಾವ್ಯಗಳಲ್ಲಿ ಅನೇಕ ರೀತಿಯ ವಿವರಗಳು ದೊರೆಯುತ್ತವೆ. ಯಜುರ್ವೇದದಲ್ಲಿ "ನೃತ್ತಾಯ ಸೂತಮ್ ಗೀತಾಯ ಶೈಲೂಷಮ್ ಧರ್ಮಾಯ ಸಭಾಚರಂ (ಯಜುರ್ವೇದ ೩೦–೬) ಎನ್ನುವ ಮಂತ್ರದಲ್ಲಿ ರಾಜನಾದವನು ನೃತ್ಯಕ್ಕಾಗಿ ಸೂತನನ್ನು ನಿಯುಕ್ತಿಗೊಳಿಸಬೇಕು. ಸಂಗೀತಕ್ಕಾಗಿ ಶೈಲೂಷನನ್ನು (ಶೈಲೂಷ ಎಂಬ ಗಾಯಕ ವಿಶೇಷ ವ್ಯಕ್ತಿಯನ್ನು) ನಿಯತಗೊಳಿಸಬೇಕೆಂದು ಹೇಳಿದೆ. ಸೂತಮ್ ಅನ್ನುವುದು ಪ್ರಾಯಶಃ ಸೂತ್ರಧಾರ ಎಂಬ ಅರ್ಥದಲ್ಲಿ ಬಳಕೆಯಾಗಿರಬೇಕು. "ವೀಣಾವಾದಂ ಪಾಣಿಘ್ನಂ ತೂಣವಧ್ಮಂ ತಾನ್ನೃತ್ತಾಯಾ ನಂದಾಯ ತಲವಮ್" (ಯಜುರ್ವೇದ ೩೦–೨೦) ಎಂದು ಹೇಳಲಾಗಿದೆ. ವೀಣಾವಾದಕನನ್ನು ತೂಣವವೆಂಬ ವಾದ್ಯಕಾರನನ್ನು; ತಲವಮ್ ಎಂಬ ವಾದ್ಯ ವಿಶೇಷ (ತವಲಮ್ – ತಬಲಂ ಎಂದು ಪರ್ಯಾಯಗೊಳ್ಳುತ್ತದೆ). ಹಾಗೆಯೇ ಡಮರುಗ ವಾದಕನನ್ನು, ಶಂಖದ ಮೂಲಕ ಧ್ವನಿ ಮೊಳಗಿಸುವವನು (ಯಜುರ್ವೇದ ೩೦–೧೯೦) ರಾಜನು ನಿಯುಕ್ತಗೊಳಿಸಲಿ ಎಂದು ಯಜುರ್ವೇದದಲ್ಲಿ ಬರುತ್ತದೆ. ಅಕ್ಷರಭೇದ ಎರಡು ರೀತಿಯದು. ಅದರಲ್ಲಿ ಶ್ರವಣ ಮತ್ತು ಚಾಕ್ಷುಷ, ಚಾಕ್ಷುಷವೆಂದರೆ ಕಣ್ಣಿಗೆ ಕಾಣಿಸುವ ಅಕ್ಷರಗಳು. ಮತ್ತೊಂದು ಕೇಳಬಹುದಾದ ಅಕ್ಷರಗಳು, ಅಕ್ಷರಗಳನ್ನು ತ್ರ್ಯಕ್ಷರವೆಂದು ಗುರುತಿಸುತ್ತಾರೆ. (ಅಕ್ಷರತ್ರಯ, ಬೀಜಾಕ್ಷರತ್ರಯ, ಓಂಕಾರತ್ರಯ) ಅಕಾರ, ಊಕಾರ, ಮಕಾರಗಳು.

ವಿವರಗಳಿಗೆ ನೋಡಿ: ವೇದವ್ರತ ವೈಶಂಪಾಯನ ೧೯೮೪ ಋಗ್ವೇದ: ಒಂದು ಅಧ್ಯಯನ ಪುಟ. ೨೦೫.

ಅಕ್ಕಿ

ಅಕ್ಕಿ ಮೊದಲಿನಿಂದಲೂ ಮುಖ್ಯ ಆಹಾರ ಧಾನ್ಯವಾಗಿತ್ತು. ಪಾಲಿ ಗ್ರಂಥಗಳಲ್ಲಿ ಹಲವು ಬಗೆಯ ಬತ್ತಗಳು ಹಾಗೂ ಬತ್ತದ ನಾಟಿಗೆ ಸೂಕ್ತ ಶಬ್ದ ಬಳಕೆಯಾಗಿದೆ.

ಬುದ್ಧನ ಕಾಲದಲ್ಲಿ ನಾಟಿ ಆರಂಭವಾಗಿರಬೇಕೆಂದು ತೋರುತ್ತದೆ. ಇದರಿಂದ ಬತ್ತದ ಉತ್ಪಾದನೆ ಅಪಾರವಾಗಿ ಹೆಚ್ಚಿತು. ಜೊತೆಗೆ ರೈತರು ಬಾರ್ಲಿ, ದ್ವಿದಳ ಧಾನ್ಯಗಳು, ಸಾವೆ, ನವಣೆ ಮುಂತಾದವು ಹತ್ತಿ ಹಾಗೂ ಕಬ್ಬುಗಳನ್ನು ಬೆಳೆಸುತ್ತಿದ್ದರು. ಅಲಹಾಬಾದ್ ಮತ್ತು ರಾಜಮಹಲ್‌ಗಳ ನಡುವಣ ಮೆಕ್ಕಲು ಮಣ್ಣಿನ ವಿಪುಲ ಫಲವತ್ತತೆ ಹಾಗೂ ನೇಗಿಲಿಗೆ ಕಬ್ಬಿಣದ ಗುಳ ಹೂಡಿದುದು ಇವೆರಡೂ ಕೂಡಿ ಕೃಷಿಯಲ್ಲಿ ಅಪಾರ ಅಭಿವೃದ್ಧಿ ಸಾಧ್ಯವಾಯಿತು. (ಆರ್. ಎಸ್. ಶರ್ಮ. ೧೯೮೭. ಪು.೧೨೧) ಅಕ್ಕಿ ಮತ್ತು ರಾಗಿಯ ನಡುವಣ ಜಗಳವು ಸುಪ್ರಸಿದ್ಧ. ಅಕ್ಕಿ ತಿಂದವನು ಹಕ್ಕಿಯಂತಾಗುವನು ರಾಗಿ ತಿಂದವನು ನಿರೋಗಿಯಾಗುವನು.

ವಿವರಗಳಿಗೆ ನೋಡಿ: ಕನಕದಾಸರ ರಾಮಧ್ಯಾನ ಚರಿತ್ರೆ

ಅಕ್ಷಕ್ರೀಡೆ

ನಾಟಿವಾಸಗೆಯೆಂದರೆ ಮೋಸದ ದಾಳ. ಮಹಾಭಾರತದಲ್ಲಿ ಕೌರವನು ಶಕುನಿಯ ಮೂಲಕ ಮೋಸದ ನೆತ್ತವನ್ನು ಆಡುತ್ತಾನೆ.

ಜೂಜಿಗೂ, ರಣಕ್ಕೂ, ಬೇಟೆಗೂ ಕರೆದರೆ ರಾಜನಾದವನು ಮೈಮರೆಸಿಕೊಂಡಿರುವುದು ಯೋಗ್ಯವಲ್ಲ ಎಂಬ ಪುರಾತನವಾದ ಹಿರಿಯರ ಮಾತು ವ್ರತವಾಗಿ ಬಿಟ್ಟಿತ್ತು. ಇದು ರಾಜನೀತಿಯನ್ನು ಕೂಡಾ ಸೂಚಿಸುತ್ತದೆ. ದ್ಯೂತವನ್ನು ಮನುವು ವರ್ಜಿಸಿದ್ದಾನೆ.

ದ್ಯೂತ, ಜನವಾದ, ಪರಿವಾದ, ಸುಳ್ಳು, ಸ್ತ್ರೀಪ್ರೇಕ್ಷಣೆ ಇತ್ಯಾದಿಗಳು ವಿದ್ಯಾರ್ಥಿಗೆ ಅಧಿಕಪ್ರಸಂಗಗಳು. ಅವುಗಳಲ್ಲಿ ತನ್ಮಯನಾದಂತೆ ಆತನ ವಿದ್ಯಾಭಂಗವಾಗುತ್ತದೆ ಎಂದು ಮನು ಹೇಳುತ್ತಾನೆ. ಅಂದರೆ ದ್ಯೂತವನ್ನು ವಿದ್ಯಾರ್ಥಿಗಳು ಆಡಬಾರದು.

ಅನರ್ಥ ದಂಡಗಳಲ್ಲಿ ಮಹಾ ಅನರ್ಥ ಮಾಡುವಂಥದು ಜೂಜು ಆಗಿದೆ. ಜೂಜು ಸಮಸ್ತ ವ್ಯಸನಗಳಲ್ಲಿ ಮುಖ್ಯವಾದುದು, ಸಮಸ್ತ ಪಾಪಗಳ ಸಂಕೇತ ಸ್ಥಾನವಾಗಿದೆ, ಮಹಾನ್ ವಿಪತ್ತದ ಕಾರಣವಾಗಿದೆ, ಸಮಸ್ತ ಅನೀತಿಗಳಲ್ಲಿ ಮಹಾ ಅನೀತಿ ಇದಾಗಿದೆ. ಜೂಜುಗಾರನ ಪರಿಣಾಮವೇ ಮಹಾ ದುಷ್ಟವಿರುತ್ತದೆ. ಅವನು ತನ್ನ ಸಮಸ್ತ ಮನೆ, ಸಂಪತ್ತುಗಳನ್ನು ಜೂಜಿನಲ್ಲಿ ಸೋತು ಕೂಡ ಇತರರ ಧನ ಪಡೆಯಲಪೇಕ್ಷಿಸುತ್ತಾನೆ. ಜೂಜುಗಾರನಿಗೆ ಎಷ್ಟು ಅಧಿಕ ಲೋಭವಿರುತ್ತದೆಯೆಂದರೆ ಅವನು "ಇತರರ ಧನವು ನನ್ನ ಹತ್ತಿರ ಬರಲೇಬೇಕು !" ಅದರ ಸಲುವಾಗಿ ಏನು ಬೇಕಾದರೂ ಆಗಲಿ, ನನ್ನ ಧನವು ಹೋಗುತ್ತಿದ್ದರೆ ಹೋಗಲಿ, ಅಪಯಶವು ಬರುತ್ತಿದ್ದರೆ ಬರಲಿ, ದರಿದ್ರತೆ ಬರುತ್ತಿದ್ದರೆ ಬರಲಿ, ಯಾವುದೇ ಪ್ರಕಾರದಿಂದ ನಾನು ಇತರರ ಧನವನ್ನು ಗೆದ್ದುಕೊಂಡಾಗಲೇ ನಾನು ಜೀವಂತವಾಗಿರುವಿಕೆಗೆ ಸಾರ್ಥಕತೆಯಿದೆಯೆಂಬ ವಿಚಾರವನ್ನು ಯಾವಾಗಲೂ ಮಾಡುತ್ತಿರುತ್ತಾನೆ.

“ಅಕ್ಷ ಮೊದಲು ದಿವ್ಯ ದೈವತ. ಬಳಿಕ ಇದೇ ದ್ಯೂತ (ದಿವ್ಯ), ವಸನಧಾರಣಾದಿ ನಡೆವಳಿ ರೂಢಿಗೆ ಬರುವ ಮುಂಚಿನ ಯುಗದ ‘ಸಮಯ’. ಆಧುನಿಕರಲ್ಲೂ ಹಲವರು ದೇವತಾರಾಧನೆಗೆ ಕೌಪೀನ ಧರಿಸಿ ಮಡಿಯಿಂದ ಪೂಜಾ ಪುನಸ್ಕಾರಾದಿ ನಡೆಸುವ ವಾಡಿಕೆಯಿದೆ.

ಈ ‘ಅಕ್ಷ’ ದಿವ್ಯ : ದ್ಯೂತ ನಾಗಸಂಪ್ರದಾಯದ ವೈಶಿಷ್ಟ್ಯವಾಗಿ ಆವರೆಗೂ ನಡೆದು ಬಂದಿರಲಿಕ್ಕೇ ಬೇಕು. ಅಂದು ಈ ಆಟದಲ್ಲಿ ಇದ್ದ ಲೆತ್ತವು ಮೋಡಿ – ಮಾಟದ್ದೇ ಆಗಿತ್ತೆಂದು, ಕೌರವರೇ ಮಾಡಿಸಿ ಅದನ್ನು ತಂದಿದ್ದರೆಂದು ಸಂಪ್ರದಾಯ ಹೇಳುತ್ತದೆ. ಈ ಮಾಟ : ಯಾತು : ಸರ್ಪ–ಸಂಪ್ರದಾಯದ ವಿರೋಧಿಗಳ ಸದ್ದು ಆಗಲೆ ಅಡಗಿಹೋಗಿತ್ತು. ಋಗ್ವೇದ ಕಾಲದಲ್ಲಿಯೇ : ತ್ರಿತ, ಆಪ್ತ್ಯ ಮಾನವನು, ಇಂದ್ರನ ತೇಜೋವಧೆಯೊಡನೆ ತೃತೀಯ (ನಪುಂಸಕ) ಪುರುಷ : ನರನಾಗಿ ಪರಿವರ್ತಿತನಾದನು. ಜೀವನದೊಳಗಿನ ಸಾಮಾಜಿಕ ಹಾಗೂ ಕೌಟುಂಬಿಕ ನೈತಿಕಮೂಲ್ಯಗಳ ಸಲುವಾಗಿ. ಈ ಬಗೆಯ ಭ್ರಷ್ಟಾಚಾರದ ಸರ್ಪವು ಸರ್ವತ್ರ ವ್ಯಾಪಿಸದಂತೆ, ಕಣ್ಣೆದುರು ನಡೆದ ಅನ್ಯಾಯಗಳನ್ನು ವಿರೋಧಿಸಲು ಪ್ರಾಣಪಣದಿಂದ ಹೋರಾಟಕ್ಕೆ ಮುನ್ನುಗ್ಗುವ ‘ಧೀರ’ ವೀರರ ಸಂಪ್ರದಾಯವು, ಸಾರ್ಪರಾಜ್ಞಿ ಅದಿತಿಯ ವಿಜಯದೊಡನೆಯೆ ಮಣ್ಣು ಮುಕ್ಕಿದ್ದನ್ನು ಇಂದಿನ ಋಗ್ವೇದ ಸಂಹಿತೆಯೆ ಸಾರುತ್ತಿದೆ. ಅಕ್ಷ–ದ್ಯೂತದ ಬಗೆಗಿನ ‘ಸಮಯ’ದ (ಆಚಾರದ) ಆಕೃತಿಯು, ಮಹಾಭಾರತ ಕಾಲದಲ್ಲಿ ಸಹ ಋಗ್ವೇದ ಸೂಕ್ತದಲ್ಲಿ ವ್ಯಕ್ತವಾಗಿ ಕಾಣುತ್ತಿರುವ ಸಮಯಾಚಾರಕ್ಕಿಂತ ಭಿನ್ನವಾಗಿರಲಿಲ್ಲ ಎಂದೇ ಭೀಷ್ಮ ದ್ರೋಣಾದಿ ಧೀಮಂತರೂ, ಸಂಪ್ರದಾಯ ತಿಳಿದವರೂ ಎಂಬುವರ ತಟಸ್ಥ ವೃತ್ತಿಯ ನಡೆವಳಿಕೆಯಿಂದಲೂ ಸಿದ್ಧವಾಗುತ್ತಿದೆ.

ಋಗ್ವೇದ ಸಂಹಿತೆಯ ಇಂದಿನ ಆಕೃತಿಗೆ (Form) ಕಾರಣನಾಗಿರುವ ಅದರ ಸಂಯೋಜಕನೂ, ಅಕ್ಷ: ಸರ್ಪ ಪಕ್ಷಪಾತಿಯಾಗಿದ್ದನು. ಇದಕ್ಕೆ ‘ಅಕ್ಷ–ದ್ಯೂತ’ದ ಬಗೆಗೆ ಬಹಿರಂಗದಲ್ಲಿ ತಿರಸ್ಕಾರವನ್ನು ಪ್ರದರ್ಶಿಸುತ್ತಿರುವ ಈ ಸೂಕ್ತದ ವ್ಯಾಮಿಶ್ರ ಶಿಲ್ಪ ಕೌಶಲ್ಯವೇ ಸಾಕ್ಷಿ. ‘ಅಕ್ಷ’–ದ್ಯೂತ, ಈ ‘ದಿ(ೕ)ವ್ಯ’ ಇದು ನಿಶಾ–ಕ್ರೀಡೆ. ಈ ಕಾರಣದಿಂದಾಗಿ ‘ಜಾಗೃವಿಃ’ (ಜಾಗರ–ಮಾಡುವವನು) ಎಂಬುದು ಜೂಜುಗಾರನ ಪರ್ಯಾಯನಾಮವು, ಅತ್ಯಂತ ಸಾರ್ಥವಿದೆ. ಜೀವನ ಸೌಖ್ಯವನ್ನೇ ಭೇದಿಸಿ–ಭೇದಿಸಿ ಬಿಡುವ ಅಥವಾ ವಿಭೀತಕವಾದ ‘ಅಕ್ಷ’ : ಲೆತ್ತಕ್ಕೆ ‘ವಿಭೇದಕಃ’ ಎಂದಿರುವುದು ಔಚಿತ್ಯಪೂರ್ಣವಿದೆ. ಇಂತಹ ಇನ್ನೂ ಹಲವು ಸುಂದರ ಶಿಲ್ಪದ ಮಾದರಿಗಳು ಈ ಸೂಕ್ತದಲ್ಲಿವೆ.

ನೆತ್ತದ (ಚದುರಂಗದ) ಆಟ ಬಹಳ ಹಿಂದಿನಿಂದಲೂ ಇತ್ತು.

ಋಗ್ವೇದದಲ್ಲಿ ಅಕ್ಷಸೂಕ್ತದ ಉಲ್ಲೇಖವಿದೆ. ಅದರಲ್ಲಿ ಜೂಜಿನ ಪ್ರಸ್ತಾವವಿದೆ.

'ಜೂಜು' ಎನ್ನುವುದು ಜನಪ್ರಿಯ ಕ್ರೀಡೆಯೆನ್ನುವುದು ಅನೇಕ ಕಾವ್ಯಗಳಲ್ಲಿ ವ್ಯಕ್ತವಾಗಿದೆ. ಅಂದಿನ ಜನಪ್ರಿಯ ಕ್ರೀಡೆಯಾದ ಇದನ್ನು ಮಹಾಭಾರತದಲ್ಲಿ ಉಲ್ಲೇಖಿಸಲಾಗಿದೆ 'ದ್ಯೂತ'ದಿಂದ ಧರ್ಮರಾಜ ರಾಜ್ಯ ಕಳೆದುಕೊಳ್ಳುತ್ತಾನೆ. ನಳ ಚರಿತ್ರೆಯಲ್ಲಿಯೂ ದ್ಯೂತ ಉಲ್ಲೇಖವಿದೆ.

"ಅಕ್ಷ-ಸೂಕ್ತ'ದ (10-34) ಮೂಲಕ 'ಜೂಜು' ಆ ಕಾಲದ ಜನಪ್ರಿಯ ಕ್ರೀಡೆಯಾಗಿತ್ತು ಎಂದು ತಿಳಿದುಬರುತ್ತದೆ. ಈ ಕ್ರೀಡೆಯನ್ನು ನಿಂದ್ಯವೆಂದು ಪರಿಗಣಿಸಲಾಗಿದ್ದರೂ ಈ ಕ್ರೀಡೆಯ ಜನಪ್ರಿಯತೆ ಕುಂಠಿತವಾಗಿರಲಿಲ್ಲವೆಂದು ಹೇಳಬಹುದು. ದೇವಾಲಯಗಳ ನಿರ್ಮಾಣ ಹಾಗು ವಿಗ್ರಹ ಪ್ರತಿಷ್ಠಾಪನದ, ಮೂರ್ತಿ-ಪ್ರಜೆಯ ನಿಖರ ಉಲ್ಲೇಖಗಳು ಋಗ್ವೇದದಲ್ಲಿ ದೊರೆತಿಲ್ಲ. ಋಗ್ವೇದೀಯ ಸಮಾಜದಲ್ಲಿ ಮೂರ್ತಿಪೂಜೆಗೆ ಪ್ರಾಶಸ್ತ್ಯವಿರಲಿಲ್ಲವೆಂದು ಹೇಳಬಹುದು. ಆದರೆ ಸಾಮೂಹಿಕ ಪ್ರಾರ್ಥನಾದಿಗಳು ನಡೆಯುತ್ತಿದ್ದುದರ ಉಲ್ಲೇಖವಿದೆ. (ಋಗ್ವೇದ10-34) ಕನಕದಾಸರ 'ನಳಚರಿತೆ'ಯಲ್ಲಿಯೂ ನಳನು ದ್ಯೂತದಿಂದ ತನ್ನ ರಾಜ್ಯವನ್ನು ಕಳೆದುಕೊಳ್ಳುವ ವಿಷಯ ಪ್ರಸ್ತಾವಗೊಂಡಿದೆ.

ಋಗ್ವೇದದಲ್ಲಿ 'ಅಕ್ಷ'ದ ಆಟವನ್ನು ದ್ಯೂತ (>ಜೂಜು) ಎಂದು ಬಗೆಯಲಾಗಿದೆ. ಋಗ್ವೇದಕಾಲೀನ ಶಿಷ್ಯರು ಪ್ರತಿಷ್ಠಿತರು, ಜೂದು ಮತ್ತು ಜಾದು>ಯಾತು ಇವನ್ನು ನಿಂದ್ಯ, ತಾಜ್ಯ-ತಿರಸ್ಕಾರಾರ್ಹ ಎಂದು ಬಗೆದಿದರೆಂಬುದು ತೀರ ಸುಳ್ಳಲ್ಲ. ಆದರೆ, ಈ ಬಗೆಯ ಗ್ರಹಿಕೆಯಾಗುವುದಕ್ಕಾಗಿ ಬರೆದ 'ಅಕ್ಷದ್ಯೂತ'ದ ಸೂಕ್ತದಲ್ಲಿಯೆ ಕವಡು ಇರುವುದನ್ನು ಕಾಣಬಹುದಾಗಿದೆ. 'ಅಕ್ಷ'ವು 'ಜ್ಞಾನ'ದೃಷ್ಟಿ ಎಂಬ ಅರ್ಥಪಡೆದ ಸಮಯದಲ್ಲಿ 'ಅಕ್ಷಣ್ವಾನ್,' 'ಅಕ್ಷಣ್ವಂತಃ' ಸ್ತೋತ್ರಾರ್ಹರಾದಾಗ 'ಅಕ್ಷ'ದ ಆಟ ತಿರಸ್ಕಾರಕ್ಕೆ ಪಾತ್ರವಾದ ಪರಿಸರವು, 'ಅಕ್ಷ' ಪಂಥದ ವಿರೋಧಿಗಳದಿರಬೇಕು. ವರುಣನ ಅಕ್ಷ: ವನಸ್ತೋಪ; ವಿಷ್ಣುವಿನ ಪದ್ಮ-ಅಕ್ಕ : ಪರಮಪದ ಪೂಜಾರ್ಹವಿದ್ದಾಗಲೆ 'ಶಿಶ್ನ-ದೇವಾಃ' ಎಂಬ ವರ್ಗವೂ ಇದ್ದೀತೆಂಬುದು ಅತ್ಯಂತ ಸುಸಂಗತವೂ ಸುಸಂಬದ್ಧವೂ ಆದ ಘಟನೆಯಾಗಿದೆ. ಆದರೆ, ಈ ಕಾರಣದಿಂದಾಗಿಯೆ ಶಿಶ್ನ ದೇವರನ್ನು ಕೊಲ್ಲಲು ಇಂದ್ರನಿಗೆ ಬೇಡಿಕೊಂಡದ್ದು ಮೇಲ್ತೋರಿಕೆಯ ಮಾತು ಇರಲಾರದೇ ಎಂಬ ಸಂಶಯ ಹುಟ್ಟುವಂತಿದೆ. ಋಗ್ವೇದ ಕಾಲದ 'ಅಕ್ಷ' ಪೂಜಕರಲ್ಲಿ ಸನ್ಮಾನ್ಯರು, ಗೌರವಸ್ಥರು ಎಂಬವರು ಯಾರೂ ಇರಲಾರರು ಎಂಬ ಹಾಗಿನ ಗ್ರಹಿಕೆಯಾಗುವುದಲ್ಲಿ ಈ ಶಿಶ್ನದೇವರ ವಿಚಾರ ಹಾಕಿರುವ ಈ ಶಕ್ಯತೆಯಿದೆ. ಈ ಬಗೆಯಲ್ಲಿ ಸಂಹಿತಾ ಸಂಕಲನದ ಅದ್ಭುತ ಮೋಡಿಕಾರಿಗೆ ಇನ್ನೂ ಒಂದು ನಿದರ್ಶನ: ಮಹರ್ಷಿ ವಸಿಷ್ಠನ 'ಶಿಪಿವಿಷ್ಟ' ರೂಪದಲ್ಲಿ ವಿಷ್ಣು-ದರ್ಶನದ ಬಗೆಗಿನ ಆರ್ತ ಪ್ರಾರ್ಥನೆ." ಈ ದೃಷ್ಟಿಯಿಂದ ಅಕ್ಷಕ್ರೀಡೆಯು ತುಂಬಾ ಪ್ರಾಚೀನವಾದುದು ಮತ್ತು ಅದಕ್ಕೆ ದುರ್ವ್ಯಸನ ಪಟ್ಟವಿದೆ ಎಂಬುದು ಗಮನಾರ್ಹ. ಜೂಜಿನಲ್ಲಿ ಪಣವಿಡುವುದೇ ಮುಖ್ಯ. ಈ ರೀತಿಯ

ಕ್ರೀಡೆಗಳಲ್ಲಿ ಇಡುವ ಪಣವು ವ್ಯಕ್ತಿಯನ್ನು ನಾಶಪಡಿಸುತ್ತದೆ. ಮಾನಸೋಲ್ಲಾಸದಲ್ಲಿ ಪಗಡೆಯಾಟದ ನಾಲ್ಕು ವಿಧಗಳನ್ನು ಹೇಳಿದ್ದಾರೆ: ಗಮ, ಚರ, ನಿಬಂಧ ಮತ್ತು ಪ್ರತಿಬಂಧ.

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 4 ಪುಟ. 388, 389, 393, 402–403

ಯುಗಯಾತ್ರೀ ಭಾರತೀಯ ಸಂಸ್ಕೃತಿ 1971 ಸಂಪುಟ. 2 ಪುಟ. 225

ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 2–179

ಎಂ.ಎಂ.ಕಲಬುರ್ಗಿ. 1998 ಮಾನಸೋಲ್ಲಾಸ. ಶ್ಲೋ.666

ಅಕ್ಷಸೂತ್ರ

ಅಕ್ಷಸೂತ್ರವೆಂದರೆ ಜಪಮಾಲೆ ಎಂದರ್ಥ. ಧ್ಯಾನ ಸಮಯದಲ್ಲಿ ಜಪಸರವನ್ನು ಹಿಡಿದುಕೊಂಡು ಜಪಿಸುವುದು ಬಹುತೇಕ ಎಲ್ಲಾ ಮತಗಳಲ್ಲಿಯೂ ಕಾಣಿಸಿಕೊಂಡಿದೆ. ಜಪಮಾಲೆಯಿಂದ ಎರಡು ಉಪಯೋಗ

1) ಧ್ಯಾನವನ್ನು ಏಕಾಗ್ರಗೊಳಿಸುವುದಕ್ಕೆ ಜಪಮಾಲೆಯು ಅವಶ್ಯಕ ಇದರಿಂದ ಚಿತ್ತ ಸ್ಥಿತಿಯೂ ಚಂಚಲವಾಗುವುದಿಲ್ಲ.

2) ಜಪಮಾಲೆಯಲ್ಲಿ ಇರುವ ಜಪಮುನಿಗಳು ಸಂಖ್ಯಾ ಸೂಚಕಗಳು ಕೂಡ ಹೌದು ರುದ್ರನು 108 ಬಾರಿ ಸ್ತುತಿಸಬೇಕೆಂದಿದ್ದರೆ 108 ಮುನಿಗಳಿರುವ ಜಪಮಾಲೆಯ ಮೂಲಕ ಮಣಿಗಳನ್ನು ಮುಟ್ಟುತ್ತಾ ಹೋಗಬಹುದು. ವಿಶೇಷವಾಗಿ ಕೆಲವು ಮಂತ್ರಗಳಿಗೆ ಮತ್ತು ಸೋತ್ರಗಳಿಗೆ ಸಂಖ್ಯಾ ಮಿತಿ ಇವೆ. ಗಾಯತ್ರಿ ಜಪ: 11, 108 ಇತ್ಯಾದಿ.

ಅಕ್ಷವೆಂಬ ಶಬ್ದಕ್ಕೆ ಅಚ್ಚು, ನೆಲ್ಲಿಯ ಮರ, ರುದ್ರಾಕ್ಷ, ಶಕಟ ಬಂಡಿ ಮೊದಲಾದ ಅರ್ಥಗಳಿವೆ.

ಅಕ್ಷೋಹಿಣಿ

ಕೌರವರದು ಹನ್ನೊಂದು ಅಕ್ಷೌಹಿಣೀ ಬಲ, ಪಾಂಡವರದು ಏಳು ಅಕ್ಷೌಹಿಣೀ ಬಲ ಆದರೂ ಪಾಂಡವರಿಗೇ ಗೆಲುವು. ಒಂದು ಅಕ್ಷೌಹಿಣೀ ಬಲವೆಂದರೆ ೨೧.೮೭೦ ಗಜ – ಅಷ್ಟೇ ಸಂಖ್ಯೆಯಲ್ಲಿ ರಥಗಳು ಇದಕ್ಕೆ ಮೂರರಷ್ಟು ಕುದುರೆಗಳು, ಐದರಷ್ಟು ಕಾಲಾಳುಗಳಿರುವ ಪಡೆ ಅಂದರೆ ೨೧,೮೭೧ ಆನೆಗಳು; ೨೧,೮೭೦ ರಥ, ೬೫,೬೧೦ ಕುದುರೆಗಳು ೧,೦೯,೩೫೦ ಕಾಲಾಳುಗಳು ಆಗುತ್ತವೆ.

ಅಕ್ಷೋಹಿಣಿ ಬಲ ಸೈನಿಕರ ಸಂಖ್ಯೆ; ರಥಸಂಖ್ಯೆ, ಆನೆ, ಕುದುರೆಗಳ ಸಂಖ್ಯೆಯನ್ನು ಸೂಚಿಸುತ್ತವೆ ಮತ್ತು ಇದರ ಆಧಾರದ ಮೇಲೆ ರಾಜನ ಶಕ್ತಿ ನಿರ್ಣೀತವಾಗುತ್ತದೆ.

ವಿವರಗಳಿಗೆ ನೋಡಿ: ಮರಿಯಪ್ಪ ಭಟ್ಟ ಎಂ. ೧೯೬೯ ಕಿಟ್ಟೆಲ್‌ರ ಕನ್ನಡ-ಇಂಗ್ಲಿಷ್ ನಿಘಂಟು ಪುಟ. ೯

ಅಗುಂದಲೆ

ಅಗುಂದಲೆಯೆಂದರೆ ಅತಿಶಯ. ಅಗುರ್ವು ಎಂದರೂ ಅತಿಶಯವೇ. ಆದರೆ ಒಟ್ಟಿನಲ್ಲಿ ಅತಿಶಯ, ತೀವ್ರತೆ, ಭಯಂಕರತೆಯನ್ನು ಹೇಳುವಲ್ಲಿ ವಿಶೇಷಣವಾಗಿ ಈ ಶಬ್ದ ಬಳಕೆಯಾಗುತ್ತದೆ. ಅಗುಂದಲೆಯೆಂಬ ಪ್ರಯೋಗವು ತುಂಬಾ ವಿಶಿಷ್ಟವಾಗಿದೆ.

ವಿವರಗಳಿಗೆ ನೋಡಿ: ಅತಿಶಯ

ಡಾ. ಟಿ.ವಿ.ವೆಂಕಟಾಚಲಶಾಸ್ತ್ರೀ ೧೯೯೯ ಶ್ರೀವತ್ಸ ನಿಘಂಟು ಪುಟ. ೧೫, ೧೬.

ಅಗುಳ್

"ಅನ್ನದ ಅಗುಳು" ಎಂಬುದಕ್ಕೆ ವಿಶೇಷ ಮಹತ್ವವಿದೆ. ಊಟ ಮಾಡುವಾಗ ಒಂದು ಅಗುಳು (ಅಕ್ಕಿಯು ಬೆಂದಾಗ ಅಗುಳಾಗುತ್ತದೆ) ಕೂಡಾ ಬಿಡಬಾರದು ಎಂಬ ನಂಬಿಕೆಯಿದೆ. ಎರಡನೆಯದಾಗಿ ಒಂದು ಅಗುಳು ಅನ್ನವನ್ನು ಕಾಗೆ ಕಂಡರೆ ತನ್ನ ಬಳಗವನ್ನೇ ಕರೆಯುತ್ತದೆ. ಎಂದು ವಚನವೊಂದರಲ್ಲಿ ಬರುತ್ತದೆ. ಅಗಿಯಲು ಯೋಗ್ಯವಾದುದು ಅಗುಳು.

ಅಗ್ಗಳ

ಅಗ್ಗಲವೆಂದರೆ ಅಗ್ಗಳ. ಅಗ್ಗಳವೆಂದರೆ ಅತಿಶಯ; ಅಧಿಕವೆಂಬ ಅರ್ಥವೂ ಇದೆಯೆಂಬುದು ಗಮನಾರ್ಹ. "ಅಗ್ಗಳದ ನುಡಿಯನಾಲಿಸಿ" ಎಂದು ಈಗಲೂ ಯಕ್ಷಗಾನದಲ್ಲಿ ಪ್ರಯೋಗವಿದೆ. ಅದು ಅಗ್ಗಳದ ನುಡಿಯೆಂದರೆ ಹಿರಿಮೆಯ ಮಾತು ಎಂದು ಅರ್ಥ. ಅಗ್ಗಳವನ್ನು ಸಾಮಾನ್ಯವಾಗಿ ಕೊಚ್ಚಿಕೊಳ್ಳುವುದು ಎಂದು ಈಗ ಬಳಸುತ್ತಾರೆ. ಉತ್ತರನ ಪೌರುಷವೆಂದೂ ಹೇಳುವ ಕ್ರಮವಿದೆ. ಅಗ್ಗಳಿಕೆಯೆಂಬ ಪ್ರಯೋಗವಿದೆ.

ಅಗ್ನಿ

ಜಾತವೇದಸ್ – ವೇದದಲ್ಲಿ ಅಗ್ನಿಯ ಪ್ರಸಿದ್ಧವಾದ ಒಂದು ಪರ್ಯಾಯ ಎಲ್ಲವನ್ನೂ ತಿಳಿದವನು ಎಂದು ಅದರ ಅರ್ಥ. "ಜಾತವೇದೋ ವಿಚರ್ಷಣೇ" (ಋಕ್ ೧.೭೮.೧) ಎಂಬಂತೆ ಸಾಕಷ್ಟು ಉದಾಹರಣೆಯನ್ನು ವೇದಗಳಲ್ಲಿ ಕಾಣಬಹುದು. ಜಾತವೇದಸ್ ಎಂಬ ಪದಕ್ಕೆ ಕೆಲವೆಡೆಗಳಲ್ಲಿ ಧನವಂತ ಎಂಬ

ಅರ್ಥ ಕಂಡುಬರುತ್ತದೆ. “ಜಾತವೇದೋ ಮಹಿಶ್ರವಃ” (ಋಕ್ ೧.೭೯.೪). ಕಠದಲ್ಲಿನ ‘ಸರ್ವವೇದಸ್ ಎಂಬ ಶಬ್ದಕ್ಕೂ ಇದೇ ಅರ್ಥ (೧.೧) “ಜಾತಂ ಸರ್ವಂ ವೇತ್ತಿ ಇತಿ” ಎಂಬುದು ವಿಗ್ರಹವಾಕ್ಯ ಎಲ್ಲವನ್ನೂ ತಿಳಿದವನು ಎಂಬ ಅರ್ಥ. ಅದ್ವೈತಿಗೆ ಬ್ರಹ್ಮವು ಮಾತ್ರವೇ ಸರ್ವಜ್ಞನಾಗಿ ಇರುವುದರಿಂದ ಕೇವಲ ದೇವತೆಯಾದ ಜಾತವೇದಸ್ ಶಂಕರರಿಗೆ ಸರ್ವಜ್ಞನಲ್ಲ. ‘ಸರ್ವಜ್ಞಕಲ್ಪ’ನು ಮಾತ್ರ ಹೆಚ್ಚು ಕಡಿಮೆ ಎಲ್ಲವನ್ನೂ ತಿಳಿದವನು. ಈ ವ್ಯಾಖ್ಯಾನ ಸರಿಯಾಗಿದೆ. ಇಲ್ಲಿ ಅಗ್ನಿ ಯಕ್ಷನನ್ನು ತಿಳಿದಿರಲಿಲ್ಲ. ಕಾಳಿದಾಸನಿಗೆ ಪ್ರಿಯವಾದ ಪದ್ಯದಲ್ಲಿ ಒಂದು ‘ಜಾತವೇದಸ್ ಈ ಆರ್ಷ ಪರಿಮಳ ಕುಮಾರನಾಶಾನನಲ್ಲಿಯೂ ಕಾಣಬಹುದು – “ಜಾತವೇದಸ ಕಣ್ಣಿನ ಪಾಪೆಯನ್ನು ಅಡಗಿಸಿಕೊಂಡ” (ದುರವಸ್ಥ). (ಸುಕುಮಾರ್ ಅಟಿಕ್ಕೋಡ್ ೨೦೦೫ ತತ್ವಮಸಿ ಪುಟ ೨೦೯)ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವಿದೆ-ಬೆಂಕಿಯು ನಮ್ಮ ಸಂಸ್ಕೃತಿಯಲ್ಲಿ ವಹಿಸಿರುವ ಪ್ರಧಾನ ಪಾತ್ರ, ಬೆಂಕಿಯನ್ನು ಸಾಕ್ಷಿಗೆ, ಬೆಳಕಿಗೆ, ಯಾಗಕ್ಕೆ, ಅಡಿಗೆಗೆ ಬಳಕೆಯಾಗುತ್ತದೆ. ಹೊಟ್ಟೆಗೆ ಬೆಂಕಿ ಬಿದ್ದಂತೆ ಎಂದರೆ ನೋವಾಗಿದೆಯೆಂದೂ ಅರ್ಥವಾಗುತ್ತದೆ.

ಕನ್ನಡದಲ್ಲಿ ಅಗ್ನಿಗೆ ಕಿಚ್ಚು ಎಂದು ಕರೆಯುತ್ತಾರೆ. ದಹಿಸುವ ಗುಣವಿರುವುದರಿಂದ ಅಗ್ನಿ. ಮರವನ್ನು ಅದು ಸುಡುವುದರಿಂದ ಮರಗೂಳ್. ಹೊಟ್ಟೆಯಲ್ಲಿ ಇರುವ ಕಿಚ್ಚಿನಿಂದಾಗಿ ಹೊಟ್ಟೆ ಕಿಚ್ಚು. ಹೊಟ್ಟೆಯಲ್ಲಿ ಅದು ಬೆಂಕಿಯಾಗಿರುವುದರಿಂದ ಅದಕ್ಕೆ ಅಗ್ನಿಮಾಂದ್ಯವೆಂದು ಕರೆಯುತ್ತಾರೆ. ಬೆಂಕಿಯನ್ನು ನಾವು ಎಲ್ಲಿ ಇರಿಸುತ್ತೇವೆ ಎಂಬುದರಿಂದ ಅದರ ಹೆಸರುಗಳು ಬದಲಾಗುತ್ತವೆ. ಒಲೆಯಲ್ಲಿ ಅದು ಬೆಂಕಿ, ಹೋಮದಲ್ಲಿ ಅಗ್ನಿಕುಂಡ. ಅದು ಪವಿತ್ರ.

ಅಗ್ನಿಗೆ ಮೂರು ರೂಪಗಳಿವೆ ಗೃಹದಲ್ಲಿ ದೀಪ್ತವಾಗಬಹುದಾದುದು ಗಾರ್ಹಪತ್ಯಾಗ್ನಿ, ಯಜ್ಞಾದಿ ಉಪಾಸನೆಯಲ್ಲಿ ಪ್ರತಿಷ್ಠಾಪಿತವಾಗುವುದು-ಆಹವನೀಯಾಗ್ನಿ. ಅಂತ್ಯೇಷ್ಟಿ ಕ್ರಿಯೇತ್ಯಾದಿಗಳಲ್ಲಿ ಪ್ರಯುಕ್ತವಾಗುವ ಅಗ್ನಿ-ದಾಕ್ಷಿಣಾತ್ಯ ಅಗ್ನಿ. ಆದಿಭೌತಿಕಕ್ಕೆ ಉಪಯೋಗಕ್ಕೆ ಬರುವ ಅಗ್ನಿಯು ದೇವತೆಗಳನ್ನು ಸಂಕೇತಿಸುತ್ತದೆ. ಅಗ್ನಿಜ್ಞಾನ ರೂಪವಾದ್ದರಿಂದ ಪರಮಾತ್ಮಾರ್ಥವನ್ನು ನೀಡುತ್ತದೆ. ಸಾಮಾಜಿಕ ರೂಪದಲ್ಲಿ ಅಗ್ನಿಯೆಂದರೆ ಅಗ್ರಣಿ, ನೇತಾರ, ಶಾರೀರಿಕರೂಪದಲ್ಲಿ ಅಗ್ನಿಯು ವೀರ್ಯ; ಜಠರಾಗ್ನಿಯನ್ನು ಪ್ರತಿನಿಧಿಸುತ್ತದೆ. ಮಾನಸಿಕ ರೂಪದಲ್ಲಿ ಅಗ್ನಿವಿವೇಕ, ಬುದ್ಧಿ ಪ್ರಜ್ಞೆಯನ್ನು ಸಾಂಕೇತಿಸುತ್ತದೆ. ೨) ಜೀವಶಾಸ್ತ್ರದಲ್ಲಿ ‘ಅಗ್ನಿ’ಯು ಪ್ರಾಣವನ್ನು ಪ್ರತಿನಿಧಿಸುತ್ತದೆ. (ವೇದವ್ರತ ವೈಶಂಪಾಯನ ೧೯೮೪ ಯಜುರ್ವೇದ ಪು.೮೪-೮೫) ಅಗ್ನಿಯು ಸುಡುವುದರಿಂದ ಅದು ಪವಿತ್ರವಾಗಿದೆ. ನೀರು ಹರಿಯುವುದರಿಂದ ಪವಿತ್ರವಾಗಿದೆ. ವಾಯುವು ಪ್ರಾಣ ಸ್ವರೂಪಿ. ಇದು ಭಾರತೀಯ ಸಂಸ್ಕೃತಿಯಲ್ಲಿ ಬೆಳೆದು ಬಂದ ನಂಬಿಕೆಯಾಗಿದೆ. ಕೃಷ್ಣ ಯಜುರ್ವೇದದಲ್ಲಿ ಅಗ್ನಿಯನ್ನು ಮತ್ತು

ವಿಷ್ಣುವನ್ನು ಜೀವಾತ್ಮ ಮತ್ತು ಪರಮಾತ್ಮ ಎಂಬ ಅರ್ಥದಲ್ಲಿ ಪರಿಭಾವಿಸಲಾಗಿದೆ. ಅಗ್ನಿತತ್ವವಿಲ್ಲದೆಯೇ ಜೀವಜಂತುಗಳ ವಿಕಾಸವಿಲ್ಲ. ಅದುವೇ ಅನ್ನ, ಅದೇ ಅಗ್ನಿಯು ಜೀವ ಜೀವಾತ್ಮವೆಂದು ಹೇಳಲಾಗಿದೆ. ದೇವತೆಗಳಿಗೆ ಹವಿಸ್ಸನ್ನು ತೆಗೆದುಕೊಂಡು ಹೋಗುವವನೂ ಇದೇ ಅಗ್ನಿಯೇ. ಅಗ್ನಿಯ ಉಲ್ಲೇಖವು ಅನೇಕ ಕಡೆ ಬಳಕೆಯಾಗಿದೆ.

ಅಗ್ನಿ ಸಂಸ್ಕಾರ

ಎರಡು ವರ್ಷವಾಗದ ಮಗುವಿಗೆ ಅಗ್ನಿ ಸಂಸ್ಕಾರವು ಬೇಡ. ಜಲ ತರ್ಪಣ ಬೇಡ. ಕಾಡಿನ ಕಟ್ಟಿಗೆಯಂತೆ ಪರಿಗಣಿಸಬಹುದು. (ಮನುಸ್ಮೃತಿ 5–69)

ಅಗ್ನಿ ಸಂಸ್ಕಾರವು ಹೆಣವನ್ನು ಸುಡುವುದನ್ನು ಸೂಚಿಸುತ್ತದೆ. ಶವದಹನವೂ ನಮ್ಮಲ್ಲಿ ಒಂದು ಸಂಸ್ಕಾರ ಮತ್ತೊಂದು ಬಗೆಯೆಂದರೆ ಶವವನ್ನು ಭೂಮಿಯಲ್ಲಿ ಹೂಳುವುದು ಮೊದಲನೆಯದನ್ನು ನಾವು ಪಂಚಭೂತಗಳಲ್ಲಿ ಲೀನವೆಂದು ಕರೆಯುತ್ತೇವೆ. ಎರಡನೆಯದನ್ನು ನಾವು "ಮಣ್ಣು ಮಾಡುವುದು" ಎಂದೇ ಕರೆಯುತ್ತೇವೆ.

ವಿವರಗಳಿಗೆ ನೋಡಿ : ದಾಹೋತ್ತರ

ಅಗ್ನಿ ಸಾಕ್ಷಿ

ಅಗ್ನಿಸಾಕ್ಷಿಯು ಆಚರಣೆಯನ್ನು ಸೂಚಿಸುತ್ತದೆ ಹೋಮಾಗ್ನಿಗೆ ಕೈಹಿಡಿದು ಗಂಡ ಹೆಂಡಿರು ಸುತ್ತು ಬಂದು ಗಂಡ ಪರಸ್ಪರ 'ಧರ್ಮೇಚ ಅರ್ಥೇಚ. ಕಾಮೇಚ ನಾತಿ ಚರಾಮಿ' ಎಂದು ಹೇಳುತ್ತಾರೆ. ಧರ್ಮ ಅರ್ಥ ಕಾಮದಲ್ಲಿ ಪರಸ್ಪರ ಜೊತೆಯಾಗಿ ಅನುಸರಿಸುತ್ತೇವೆ ಎಂದು ದಂಪತಿಗಳು ಹೇಳುತ್ತಾರೆ.

ಗೃಹ್ಯಸೂತ್ರವು ಸಂಸ್ಕಾರಗಳನ್ನು ವಿವರಿಸುವಾಗ ವಿವಾಹವು ಎಲ್ಲ ಸಂಸ್ಕಾರಗಳಿಗೆ ಮೂಲವೆಂದು ಹೇಳುತ್ತದೆ. ಯಾಕೆಂದರೆ ಎಲ್ಲ ಆಚಾರ ನಿಯಮಗಳು ಯಜ್ಞ-ಯಾಗಗಳು ಗೃಹಸ್ಥನ ಸುತ್ತ ಹೆಣೆದುಕೊಂಡಿವೆ.

1. ವಾಗ್ದಾನ 2. ವರನ ಸಮ್ಮತಿ 3. ಕನ್ಯಾದಾನ 4. ವಿವಾಹ ಹೋಮ 5. ಪಾಣಿಗ್ರಹಣ 6. ಹೃದಯ ಸ್ಪರ್ಶ 7. ಸಪ್ತಪದಿ 8. ಸ್ಥಿರತೆಯ ಸೂಚಕವಾಗಿ ಬಂಡೆಯೇರುವುದು 9. ಸೂರ್ಯದರ್ಶನ 10. ಧ್ರುವದರ್ಶನ 11. ಸಂಯಮದ ಮೂರು ರಾತ್ರಿಗಳು 12. ಚತುರ್ಥಿಕರ್ಮ

ನಿಶ್ಚಿತಾರ್ಥ-ಸಾಂಕೇತಿಕ ವಿಧಿ, ವಾಗ್ದಾನ ಒಂದು ಒಪ್ಪಂದ. ವರವರಣವು ವರನನ್ನು ಆರಿಸಲಾಗಿದೆಯೆಂದು ಸೂಚಿಸುತ್ತದೆ. ಕನ್ಯಾದಾನದಲ್ಲಿ ವಧು ಅಗ್ನಿಸಾಕ್ಷಿಯಾಗಿ ವರನಿಗೆ ಒಪ್ಪಿಸಲಾಗುತ್ತದೆ. ಹೋಮಕ್ಕೆ ಸುತ್ತು ಬರುವುದು (ಅಗ್ನಿಸಾಕ್ಷಿ). ವಧೂವರರನ್ನು ಒಂದು ಕೂಡಿಸುವ ಸಂಕೇತ. ಕೈ ಹಿಡಿಯುವುದು ಪರಿಗ್ರಹವನ್ನು ಸೂಚಿಸುತ್ತದೆ. ಸಪ್ತಪದಿಯಲ್ಲಿ ಮೊದಲ ಹೆಜ್ಜೆ ರಸದ ಸೂಚಕ ಎರಡನೆಯದು ಸವಿ. ಮೂರನೆಯದು

ಧನವೃದ್ಧಿ ನಾಲ್ಕನೆಯದು ಸೌಲಭ್ಯ, ಐದನೆಯದು ಗೋಸಂಪತ್ತು, ಆರನೆಯದು ಋತುಮಾನ, ಏಳನೆಯದು ಪರಸ್ಪರ ಅನುರಕ್ತರಾಗುವುದನ್ನು ಸೂಚಿಸುತ್ತದೆ.

ವಿವಾಹದ ಅನಂತರ ಸ್ಮಾರ್ತ ಅಗ್ನಿ ಸ್ಥಾಪನೆಯ ವಿಷಯವನ್ನು ದೇವಲನು ಹೇಳುತ್ತಾನೆ. ಇದು ವೈದಿಕ ವಿಧಿ ಅಥವಾ ಸಂಪ್ರದಾಯ. ಅಗ್ನಿಸಾಕ್ಷಿಯ ಸಂಪ್ರದಾಯವು ಎಲ್ಲಾ ಜನಾಂಗಗಳಲ್ಲಿ ಇಲ್ಲ.

ಅಗ್ನಿಹೋತ್ರ

ಹೋತಾರದಿಂದ ಹೋತೃಬಂದಿದೆ. ಹೋತೃ ಎಂದರೆ ಸಮರ್ಪಿಸುವವನು ಎಂದರ್ಥ. ಅಗ್ನಿಹೋತ್ರವೆಂದರೆ ಅಗ್ನಿಯನ್ನು ಉದ್ದೇಶಿಸಿ ಮಾಡುವ ಹೋಮ. ಅಗ್ನಿಗೆ ಚರು, ತುಪ್ಪ ಮುಂತಾದವುಗಳನ್ನು ಹೋಮದ ಸಂದರ್ಭದಲ್ಲಿ ಅರ್ಪಿಸುವ ಅಧಿಕಾರವಿರುವುದು ಅಗ್ನಿಹೋತೃವಿಗೆ ಮಾತ್ರ. ಆದುದರಿಂದ ಅವನು ಯಾಗದ ಎದುರು ಭಾಗದಲ್ಲಿ ಕುಳಿತಿರುತ್ತಾನೆ. ಹೋಮದ ಸಂದರ್ಭದಲ್ಲಿ ಋಕ್ಕುಗಳನ್ನು ಹಾಡುವ ಋಗ್ವೇದಿಗಳು (ಋತ್ವಿಜರು) ಹೋಮದ ಬಲಭಾಗದಲ್ಲಿಯೂ, ಯಜುರ್ವೇದಿಗಳು ಹೋಮದ ಎಡಭಾಗದಲ್ಲಿಯೂ ಕುಳಿತಿರುತ್ತಾರೆ. ಅಗ್ನಿಹೋತೃವೇ ಯಜ್ಞಕ್ಕೆ ಸಂಪೂರ್ಣ ಅಧಿಕಾರಿಯಾಗಿರುತ್ತಾನೆ. ಯಜುರ್ವೇದದಲ್ಲಿ ದರ್ಶಪೌರ್ಣಮಾಸ, ಚಾತುರ್ಮಾಸ, ಅಗ್ನಿಷ್ಟೋಮ, ಅಗ್ನಿಚಯನ, ಕಾಮೇಷ್ಠಿ ವಾಜಪೇಯಿ, ಸೌತ್ರಮ್ಮಣಿ, ರಾಜಸೂಯ, ಅಶ್ವಮೇಧ ಇವೇ ಮೊದಲಾದ ಯಜ್ಞ ವಿಧಿಗಳಿವೆ. ಹಾಗೆಯೇ ಗಾಯನ ಮಾಡದೇ ಪಠಿಸುವ ಸ್ತುತಿಗೆ ಶಾಸ್ತ್ರವೆನ್ನುತ್ತಾರೆ. ಗಾಯನದಿಂದ ಪಠಿಸುವ ಸ್ತುತಿಗೆ ಸೋತ್ರವೆನ್ನುತ್ತಾರೆ. ಆದರೆ ಮನುವು ಬೇರೆ ರೀತಿ ಹೇಳುತ್ತಾನೆ.

ಸ್ತ್ರೀ ಮತ್ತು ಅಗ್ನಿಕಾರ್ಯ

ಸ್ತ್ರೀಯರಿಗೆ ವಿವಾಹವು ಮಂತ್ರಸಹಿತವು. ಅದು ವೈದಿಕ ಸಂಸ್ಕಾರವು. ಪುರುಷನಿಗೆ ಉಪನಯನದ ಬಳಿಕ ಗುರುಕುಲವಾಸದಂತೆ ಸ್ತ್ರೀಗೆ ಪತಿಕುಲವಾಸವು. ಗೃಹಕೃತ್ಯವೇ ಅಗ್ನಿಕಾರ್ಯವು. ಬೇರೆಯಿಲ್ಲ.

ಅಂದರೆ ಸ್ತ್ರೀಯು ಪ್ರತ್ಯೇಕ ಅಗ್ನಿಕಾರ್ಯ ಮಾಡಬೇಕಾಗಿಲ್ಲವೆಂದಾಯಿತು. ಮತ್ತು ಸ್ತ್ರೀಯರ ಅಧಿಕಾರವನ್ನು ಮನುಸ್ಮೃತಿಯು ಮೊಟಕುಗೊಳಿಸುತ್ತದೆ. ಮನು ಮತ್ತೊಂದು ಅಭಿಪ್ರಾಯ ನೀಡಿದ್ದಾನೆ:

ದೇವ ಯಜ್ಞವೆಂದರೆ ದೇವತೆಗಳಿಗೆ ಅಗ್ನಿಯ ಮೂಲಕ ಆಹುತಿಯನ್ನು ಅರ್ಪಿಸುವುದು. ಪಶು–ಪಕ್ಷಿ–ಮಾನವರಿಗೆ ಆಹಾರ ನೀಡುವುದು ಭೂತಯಜ್ಞ, ಅತಿಥಿಗಳನ್ನು ಬರಮಾಡಿಕೊಂಡು ಸತ್ಕರಿಸುವುದು ನೃಯಜ್ಞ, ಇಲ್ಲಿ ಯಜ್ಞಗಳಿರುವ ಭಿನ್ನತೆಗಳು ಗಮನಾರ್ಹ.

ಅಶೋಕನು ಧರ್ಮಸಾಮ್ರಾಟನೆನಿಸಿ, ಅಜರಾಮರ ಕೀರ್ತಿಭಾಗಿಯಾಗಿದ್ದಾನೆ. ಆತನ ಧರ್ಮರಾಜ್ಯವು ಕೊನೆಗೊಂಡಿತು. ಪರಕೀಯರ ಧಾಳಿಗಳು ಹೆಚ್ಚಾದವು. ಬೌದ್ಧಧರ್ಮದ ಅಹಿಂಸಾತತ್ವ ಮತ್ತು ವಿರಕ್ತಿಮಾರ್ಗ ಇವೆರಡೂ ಭಾರತೀಯ ಸಮಾಜದೊಳಗಿನ ಪೌರುಷ ವೃತ್ತಿಯನ್ನು ದುರ್ಬಲಗೊಳಿಸಿದ್ದಾಗಿ ಬಗೆಯಲಾಯಿತು. ಆ ಬಳಿಕ ಮತ್ತೆ ಯಜ್ಞ-ಸಂಪ್ರದಾಯವು ತಲೆಯೆತ್ತಿ ವಿಜಿಗೀಷುವೃತ್ತಿಯ ರಾಜರ ಬೆಂಬಲವನ್ನು ಪಡೆದಿತು. ಸಾತಕರ್ಣಿಗಳು, ಗುಪ್ತರು, ವಾಕಾಟಕರು, ಕದಂಬರು, ವಾತಾಪಿ ಚಾಲುಕ್ಯರು ಯಜ್ಞಗಳನ್ನು ಜರುಗಿಸಿದ್ದು ಸುಪ್ರಸಿದ್ಧವಿದೆ. ಬೌದ್ಧ-ಜೈನಧರ್ಮಗಳು ಎಂದಿನಿಂದಲೂ ಯಜ್ಞಸಂಪ್ರದಾಯಕ್ಕೆ ವಿರೋಧಿಸುತ್ತಲೇ ಇದ್ದುವು.

ಪೂರ್ವಮೀಮಾಂಸೆಯು ಷಡ್ದರ್ಶನಗಳಲ್ಲಿ ಒಂದು. ಇದು 'ಯಜ್ಞಪ್ರಾಧ್ಯಾನ್ಯತೆ'ಯನ್ನು ಸ್ಥಾಪಿಸುತ್ತದೆ. ಉತ್ತರ ಮೀಮಾಂಸೆಯು ಉಪನಿಷತ್ ತತ್ತ್ವದ ಮೂಲಕ 'ಜ್ಞಾನ ಮೀಮಾಂಸೆ'ಯನ್ನು ಪ್ರಸ್ತಾಪಿಸುತ್ತದೆ.

ಋಗ್ವೇದದಲ್ಲಿ 'ಅನ್ಯವ್ರತಿ'ಗಳ ಉಲ್ಲೇಖವಿದೆ. ಯಾಜಕ ಸಂಪ್ರದಾಯ ಮತ್ತು ಅನ್ಯವ್ರತ ನೋಂಪಿಗಳ ಸಂಪ್ರದಾಯ, ಇವೆರಡರಲ್ಲಿ ಸಂಘರ್ಷವು ಇದ್ದಿತೆಂದು ಊಹಿಸಲು ಅವಕಾಶವಿದೆಯೆಂದು ಶಂಬಾ ಊಹಿಸುತ್ತಾರೆ. ಯಜ್ಞದ ದಿವ್ಯತೆಯ ಕುರಿತು ಅವರೇ ಹೇಳುತ್ತಾರೆ.

ಚಂದ್ರ ಮತ್ತು ಸೋಮಗಳು ಸಮಾನಾರ್ಥಕ ಪದಗಳಲ್ಲ. ಸೋಮವು ಒಂದು ಬಳ್ಳಿಯ ರಸ. ಚಂದ್ರನು ಓಷಧೀಶ. ಋಗ್ವೇದದಲ್ಲಿ ಇವೆರಡರ ಸಾಹಸಚರ್ಯವು ಕಾಣತೊಡಗುತ್ತದೆ. ಬರುಬರುತ್ತ ಸೋಮ ಅದೃಶ್ಯವಾಗಿ ಅದು ಚಂದ್ರನಲ್ಲಿ ಆಶ್ರಯ ಹೊಂದುತ್ತದೆ. ಚಂದ್ರನ ಪರ್ಯಾಯ ನಾಮ ಸೋಮ ಆಗುತ್ತದೆ. ಚಂದ್ರವಾರ, ಸೋಮವಾರ ಆಗುತ್ತದೆ. ಚಂದ್ರನು ಸುಧಾಂಶು; ಅಮೃತ-ಕಲಾನಿಧಿ; ಒಂದೊಂದು ಕಲೆಯನ್ನು ದೇವತೆಗಳು ಪಾನಮಾಡುತ್ತಾರೆ. ಬ್ರಾಹ್ಮಣಗಳ ರಚನಾಕಾಲದ ಸುಮಾರಿಗೆ ಸೋಮವಲ್ಲಿ ದುರ್ಮಿಳವಾಗುತ್ತದೆ. ಉದಾತ್ತೀಕರಣದಲ್ಲಿ ಯಜ್ಞವು ಒಂದು ದಿವ್ಯ ವಿಚಾರವಾಗುತ್ತದೆ. ಸೋಮವು ದಿವಂಗತವಾಗಿ ಚಂದ್ರಲೋಕಕ್ಕೆ ಹೋಗುತ್ತದೆ.

ಅಗ್ನಿಹೋತ್ರಿಯೆಂದರೆ ಯಾರು ಎಂಬುದನ್ನು ಶಂಬಾ ಹೀಗೆ ವಿವರಿಸಿದ್ದಾರೆ: ಶುದ್ಧವೈದಿಕ ಮಾರ್ಗ ಯತಿಪಂಥಕ್ಕೆ ವಿರೋಧಿಯಾಗಿದೆ. ಕಾರಣವೆಂದರೆ ಯಜ್ಞಸಂಸ್ಥೆ ವೈದಿಕ ಮಾರ್ಗದ ತಳಹದಿಯಾಗಿದೆ. ಮತ್ತು ಅಗ್ನಿ ಹೋತ್ರಿಯಾದವನು ಗೃಹಸ್ಥಾಶ್ರಮಿಯಾಗಿರಲೇಬೇಕಾಗುತ್ತದೆ. ಪೂರ್ವಮೀಮಾಂಸೆ ನಿಷ್ಠುರ ವೈದಿಕ ಮತಾನುಯಾಯಿಯಾಗಿದ್ದು ಸನ್ಯಾಸಪಂಥಕ್ಕೆ ವಿರುದ್ಧವಾಗಿದೆ. ಋಗ್ವೇದ, ಯಜುರ್ವೇದ, ಸಾಮವೇದ ಇವುಗಳ ನಂತರದ ಕಾಲದಲ್ಲಿ ಉಪನಿಷತ್ತು ಮುಂದೆ ಬಂದವು. ಉಪನಿಷತ್ತುಗಳಲ್ಲಿಯ ತತ್ವಜ್ಞಾನ ಬೇರೆ ದಿಕ್ಕಿಗೆ ಕವಲೊಡೆಯಿತು. ಉಪನಿಷತ್ತುಗಳು ಯತಿಪಂಥಕ್ಕೆ ಪೋಷಕವಾಗಿದೆ. ಈ ತತ್ವಜ್ಞಾನ ವೇದಗಳ ವೈಚಾರಿಕತೆಗಿಂತ ಭಿನ್ನವಾದದ್ದು.

ವಿವರಗಳಿಗೆ ನೋಡಿ: ಚಿದಂಬರಾನಂದ ೧೯೭೭ ಋಗ್ವೇದ ರಹಸ್ಯ

ಶಂಬಾ ಜೋಶಿ ೧೯೯೯ ಸಂಪುಟ. ೧ ಪುಟ. ೧೯೯, ಸಂಪುಟ. ೩ ಹಾಲುಮತ ದರ್ಶನ ಪುಟ. ೪೬, ೪೭, ೭೭, ೯೯

ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೨-೬೭, ೩: ೬-೮-೮೧: ೩: ೧೨೨ - ೨೮೫

ಅಗ್ನಿಹೋತ್ರ ಶಾಲೆ

ಅಗ್ನಿ ಹೋತ್ರವೆಂದರೆ ಯಜ್ಞ ಶಾಲೆ. ಅಗ್ನಿ ಕಾರ್ಯವನ್ನು ಮಾಡುವವನು ಅಗ್ನಿಹೋತ್ರಿ. ಇಲ್ಲಿ ಅಗ್ನಿ ಹೋತ್ರಕ್ಕೆ ಅಗ್ನಿ ಶಾಲೆಯೆಂಬ ಪ್ರತ್ಯೇಕ ಶಾಲೆಯಿರುವುದು ಗಮನಾರ್ಹ. ಯಾಗ ಶಾಲೆಯ ಪ್ರತ್ಯೇಕ ನಿರ್ಮಾಣವು ಅದರ ಪಾವಿತ್ರ್ಯತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಬಂದಿರಬೇಕು. ಎರಡನೆಯದಾಗಿ ವ್ರತಧಾರಿಗಳು ದರ್ಭೆಯ ಮೇಲೆ ಮಲಗುವುದು ಕೂಡಾ ಅಷ್ಟೇ ಗಮನಾರ್ಹ. ಅಗ್ನಿಹೋತ್ರ ಕಾರ್ಯವು ವೈದಿಕ ಸಂಸ್ಕೃತಿಯಿಂದ ಬಂದಿದೆ. ಅಗ್ನಿಶಾಲೆಯು ವಾಸ್ತುಶಿಲ್ಪಕ್ಕೂ ಸಂಬಂಧವಿರಿಸಿಕೊಂಡಿರುತ್ತದೆ. ಅಗ್ನಿಕಾರ್ಯ ಪವಿತ್ರವಾಗಿರುವುದರಿಂದ ಅದಕ್ಕೆ ಮೈಲಿಗೆಯಾಗಬಾರದು. ಅಗ್ನಿಕಾರ್ಯದಲ್ಲಿ ವಿಶಾಲ ಹೋಮಕುಂಡವು ಇರುತ್ತದೆ. ಅಗ್ನಿಹೋತ್ರದಲ್ಲಿ ಬೇರೆ ಬೇರೆ ವಿಧಗಳಿರುತ್ತವೆ. ಅಗ್ನಿಕಾರ್ಯದಲ್ಲಿ ತೆಂಗಿನಕಾಯಿ ಅರ್ಪಣೆಯಾಗಿರುತ್ತದೆ. ಅದಕ್ಕೆ ನೂರೆಂಟು ಕಾಯಿ ಗಣಹೋಮ ಇತ್ಯಾದಿ ಕರೆಯುವ ಕ್ರಮವಿದೆ. ಈಗ ಹೆಚ್ಚು ಪ್ರಚಲಿತವಿರುವುದು ಗಣಹೋಮ. ಹೋಮಗಳಲ್ಲಿ ಪ್ರಾಣಿಬಲಿ ಇರುತ್ತಿತ್ತು. ಗೋಘ್ನವೆಂಬ ಪದವಿದೆ. ಗೋಘ್ನ ಎಂದರೆ ಗೋವಿನ ಊಟ.

ಯಜ್ಞಗಳಲ್ಲಿ ಅಧಿಕ ಪ್ರಮಾಣದಲ್ಲಿ ಪ್ರಾಣಿ ಬಲಿ, ಮುಖ್ಯವಾಗಿ ಗೋ ಸಂಪತ್ತಿನ ನಾಶ ಜರುಗುತ್ತಿತ್ತು. ಆಗ ಅತಿಥಿಯನ್ನು ಗೋಘ್ನಾ ಎಂದರೆ ಗೋವಿನ ಊಟ ನೀಡಲ್ಪಡುವವನು ಎಂದೇ ಕರೆಯುತ್ತಿದ್ದರು.

ವಿವರಗಳಿಗೆ ನೋಡಿ: ಆರ್. ಎಸ್. ಶರ್ಮ ೧೯೯೭ ಪ್ರಾಚೀನ ಭಾರತ ಪುಟ. ೭, ೮೭.

ಅಗ್ನೀಧ್ರ

ಯಾಗಕ್ಕೂ ವೇದಗಳಿಗೂ ಸಂಬಂಧವಿದೆ. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದಗಳು ಸಂಹಿತೆಗಳಾಗಿವೆ. ಸಂಹಿತ ಎಂದರೆ ಕಟ್ಟು, ನಾಲ್ಕು ವೇದಗಳು ಮಂತ್ರಗಳ ಕಟ್ಟು. ಋಗ್ವೇದ ಋಕ್ ನಿಂದ ತುಂಬಿದೆ. ಇದು ಋಕ್ ಧಾತುವಿನಿಂದ ಹುಟ್ಟಿದೆ. ಋಚ್ ಎಂದರೆ ದೇವರನ್ನು ಸ್ತುತಿಸು. ಋಗ್ವೇದದ ಮಂತ್ರಗಳನ್ನು ಹೋತ್ರವು ಯಜ್ಞದಲ್ಲಿ ವಿನಿಯೋಗ ಮಾಡುತ್ತಾನೆ. ಯಜ್ಞಗಳನ್ನು ಅದೃಢವಾದ ನೌಕೆಗಳಿದ್ದಂತೆ ಎಂದು ಹೇಳುತ್ತಾರೆ. ಛಾಂದೋಗ್ಯದಲ್ಲಿ ಶಾವಲುದ್ಗೀತವೆಂದು ಬರುತ್ತದೆ. ಅದರಲ್ಲಿ ಋತ್ವಿಜರನ್ನು ನಾಯಿಗೆ ಹೋಲಿಸಲಾಗಿದೆ.

ಈ ವಿಚಾರ ಪಾರಸಿ ಭಾಷೆಯಲ್ಲಿಯೂ ಬಂದಿದೆ:

ಪಾರಸಿಯಲ್ಲಿ ಅಗ್ನಿಯನ್ನು ನೋಡುವ ಋತ್ವಿಜ ಅಗ್ನೀಧ್ರನಿಗೆ ಪ್ರತಿಯಾಗಿ ಅಂತರವೇಕ್ತ, ಯಜ್ಞಾಗ್ನಿಯ ಮೇಲೆ ಸದಾ ಕಣ್ಣಿಟ್ಟಿರುವವನು ಇದ್ದಾನೆ. ಪಾರ್ಸಿ ಭಾಷೆಯಲ್ಲಿ ಅಗ್ನಿ ಎಂಬ ಅರ್ಥವಿರುವ ಅತಷ್ ಎಂಬ ಶಬ್ದವಿದೆ. ಇದು ಸಂಸ್ಕೃತದಲ್ಲಿ ಅಥರ್ವಸ್ ಮತ್ತು ಅಥರ್ವಾಂಗೀರಸ್.

ಮಹಾಯಜ್ಞಗಳು ಐದು –

೧. ದೇವಯಜ್ಞ, ಪಿತೃಯಜ್ಞ, ಭೂತಯಜ್ಞ, ಮನುಷ್ಯಯಜ್ಞ, ಬ್ರಹ್ಮಯಜ್ಞ(ಆರಣ್ಯಕ. ೨ ನೆಯ ಪ್ರಶ್ನೆ–೧೦ನೆಯ)

ವಿವರಗಳಿಗೆ ನೋಡಿ: ಟಿ.ವಿ. ವೆಂಕಟಾಚಲಶಾಸ್ತ್ರೀ –ಶ್ರೀವತ್ಸ ನಿಘಂಟು ಯುಗಯಾತ್ರೀ ಭಾರತೀಯ ಸಂಸ್ಕೃತಿ ೧೯೭೧ ಸಂಪುಟ. ೨ ಪುಟ. ೨೩೮ ಚಿದಂಬರಾನಂದ ೧೯೭೭ ಋಗ್ವೇದ ರಹಸ್ಯ ಪುಟ. ೫ ಪಿ.ವಿ. ಕಾಣೆ ೧೯೮೦ ಧರ್ಮಶಾಸ್ತ್ರದ ಇತಿಹಾಸ

ಅಗ್ರಸ್ಥಿತ

ಅಗ್ರಸ್ಥಿತವೆಂದರೆ "ಮುಂದೆ ಕುಳಿತಿರುವ" ಎಂದು ಅರ್ಥ. ಇದು ಸಂಸ್ಕೃತ ಶಬ್ದ ಅಗ್ರ+ಸ್ಥಿತ. ನಿಘಂಟನ್ನು ಪರಿಷ್ಕರಿಸುವ ಕಾಲದಲ್ಲಿ ಇದನ್ನು ಗಮನಿಸಬೇಕು. ಅಗ್ರಪೂಜೆ=ಮೊದಲ ಸನ್ಮಾನ ಅಗ್ರೇಸರ=ಮುಂದಾಳು.

ಅಗ್ರ ಪಂಕ್ತಿಯೆಂದರೆ ಮೊದಲ ಪಂಕ್ತಿ. ಅಗ್ರಾಸನವೆಂದರೆ ಸಿಂಹಾಸನವೆಂದರ್ಥ. ಹಾಗೆಯೇ ಅಗ್ರಾಸನವೆಂದರೆ ಎತ್ತರದ ಆಸನ (ಮೊದಲನೆಯ ಆಸನ)ವೆಂದೂ ಕರೆಯುತ್ತಾರೆ. ಶಿಶುಪಾಲ ವಧೆಯಲ್ಲಿ ಕೃಷ್ಣನಿಗೆ ಅಗ್ರಪೂಜೆಯನ್ನು ಕೊಟ್ಟುದಕ್ಕೆ ಶಿಶುಪಾಲನು ಖಂಡಿಸುತ್ತಾನೆ. ಮತ್ತು ಅವನು ಬೈಯುತ್ತಾನೆ. ಅವನ ಶತ ಅಪರಾಧವಾಗುವ ತನಕ ಸುಮ್ಮನಿರುವ ಕೃಷ್ಣನು ಅನಂತರ ತನ್ನ ಚಕ್ರಾಯುಧದ ಮೂಲಕವೇ ಶಿಶುಪಾಲನನ್ನು ಸಂಹರಿಸುತ್ತಾನೆ.

ಅಗ್ರಹಾರ

ಅಗ್ರಹಾರವೆಂದರೆ ಬ್ರಾಹ್ಮಣರ ವಾಸಸ್ಥಳ. ಅಗ್ರಹಾರ ಬೀದಿ ಎಂದರೆ ಬ್ರಾಹ್ಮಣರ ಬೀದಿಯೆಂದರ್ಥ. ಅಗ್ರ ಜನ್ಮನೆಂದರೆ ಬ್ರಾಹ್ಮಣ. ಅಗ್ರವೆಂದರೆ ಮುಖ್ಯವಾದ, ಅಧಿಕವಾದ, ತುದಿ, ಪ್ರಾರಂಭವೆಂದು ಅರ್ಥಬರುತ್ತದೆ. ರಾಜ ಕೇಂದ್ರಿತ ಸರಕಾರದಲ್ಲಿ ಪುರೋಹಿತರಿಗೆ (ಪುರದ ಹಿತವನ್ನು ಕಾಪಾಡುವವರು), ಅಗ್ರಸ್ಥಾನವಿತ್ತು ಎಂಬುದು ಗಮನಾರ್ಹ. ಅಗ್ರವೆನ್ನುವುದು ಸಂಸ್ಕೃತದ ಪದ. ಅಗ್ರಾಸನವೆಂದರೆ ಅಗ್ರಹಾರ, ಬ್ರಾಹ್ಮಣರಿಗೆ ದಾನ ಕೊಟ್ಟ ಭೂಮಿ. ಎರಡನೆಯದು ತರ್ಕ, ವ್ಯಾಕರಣ, ವಾತ್ಸಾಯನ, ಶೇಷ ವಿದ್ಯಾ ಪ್ರಕರಣನುಂ ಎಂದು ಬರುತ್ತದೆ. ವ್ಯಾಕರಣ, ಕಾಮಸೂತ್ರ, (ಕಾಮಸೂತ್ರ ಕಲಿಸುವುದು ಆಗ ಅನಗತ್ಯವೆಂದು ಅನಿಸಿರಲಿಲ್ಲ). ಮೂರನೆಯದು, ಗೌತಮ ಕುಲದ ಪ್ರಶ್ನೆ,

ಬ್ರಾಹ್ಮಣರಲ್ಲಿ ಕುಲವನ್ನು ಗೋತ್ರವೆಂದು ಕರೆಯುತ್ತಾರೆ. ಕುಲಕ್ಕೂ ಗೋತ್ರಕ್ಕೂ ವ್ಯತ್ಯಾಸವಿದೆ. ವಾಸ್ತವವಾಗಿ ಗೋತ್ರ ಬ್ರಾಹ್ಮಣರು ಬಳಸುವುದು ಜಾಸ್ತಿ.

ಇದರಲ್ಲಿಯೇ ಶ್ರುತಿವಿಹಿತವೆಂದು ಬರುತ್ತದೆ. ವೇದ, ಆಗಮಗಳನ್ನು ಶ್ರುತಿಯೆಂದು ಕರೆಯುತ್ತಾರೆ. ಶ್ರುತಿ ಜ್ಞಾನವೆಂದರೆ ಶಾಸ್ತ್ರಜ್ಞಾನ, ಯಾರು ಶಾಸ್ತ್ರಕ್ಕೆ ಅನುಸಾರವಾಗಿ ಜೀವನ ನಡೆಸುತ್ತಾರೋ ಅವರನ್ನು ಶ್ರುತಿಜ್ಞಾನಿಗಳೆಂದು ಕರೆಯುತ್ತಾರೆ.

ಮನುವು ಮತ್ತು ಪಂಚತಂತ್ರಗಾರ–ಇವರೂ ವೈದಿಕ ಮತಾವಲಂಬಿಗಳು ಮತ್ತು ಅವರಿಬ್ಬರೂ ಅಗ್ರಹಾರಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದಾರೆ ಎಂಬುದಕ್ಕೆ ಮೇಲಿನ ಮಾತುಗಳು ಸಾಕ್ಷಿಯಾಗಿವೆ. ಶಂಬಾ ಜೋಶಿ ಹೀಗೆ ಹೇಳುತ್ತಾರೆ:

'ಅಗ್ರ+ಹಾರ ಎಂಬುದಕ್ಕೆ ಈಗ ಕೋಶಗಳಲ್ಲಿ ಹೇಳಿದ ಅರ್ಥವು ಅಸಮರ್ಪಕವಾಗಿದೆಯೆಂಬ ನನ್ನ ಅಭಿಪ್ರಾಯಕ್ಕೆ ಅವರ ಬೆಂಬಲವೂ ದೊರೆತಿದೆ. ಅಗ್ರ ಎಂಥರೆ ಬ್ರಾಹ್ಮಣ. ಹಾರವೆಂದರೆ ಸ್ಥಳ, ಊರು; ಏಂಬ ನನ್ನ ವಿಚಾರವೇ ಅವರ ಸಂಶೋಧನೆಯಲ್ಲಿಯೂ ದೃಢವಾಗಿ ಸ್ಥಾಪಿತವಾದುದು ಸಂತೋಷದ ಸಂಗತಿ. 'ಹಾರ' ಶಬ್ದದ ನಿರುಕ್ತದ ಬಗೆಗೆ ಮಾತ್ರ ಭಿನ್ನಾಭಿಪ್ರಾಯವು ಉಳಿದಿದೆ. 'ಆಹಾರ' ಎಂಬುದು ಪ್ರಾಚೀನತಮ ರೂಪವೆಂದು ಶಾಸನಗಳಿಂದ ಗೊತ್ತಾಗುತ್ತದೆ. ಹಾರವು ಆಹಾರದ ಸವೆದರೂಪ; ಎಂದು ಅಭಿಪ್ರಾಯವಿದೆ. ಈ ಕಾರಣದಿಂದ ಪಾಡು–ಪಾಡ–ಪಾರ ಇದರಿಂದ ಬಳಿಕ ಹಾರವಾಯ್ತೆಂಬುದು ಅವರಿಗೆ ಸಮ್ಮತವಿಲ್ಲ.

ಅಗ್ರಹಾರವೆಂಬುದು ಕಂನಾಡಿನಲ್ಲಿಯೆ ಮೊದಲು ಅಸ್ತಿತ್ವದಲ್ಲಿ ಬಂದಿರಬೇಕೆಂದು ನನ್ನ ಎಣಿಕೆ. ಏಕೆಂದರೆ ಕೇವಲ ಸಂಸ್ಕೃತದಿಂದ ಇದರ ಅರ್ಥವು ಪೂರ್ಣವಾಗಿ ಹೊರಡುವುದಿಲ್ಲ. ಅಗ್ರ+ಹಾರ ಎಂಬ ಎರಡು ಪದಗಳು ಇದರಲ್ಲಿ ಇದ್ದುದರ ಬಗೆಗೆ ಭಿನ್ನಾಭಿಪ್ರಾಯವಿಲ್ಲ.

'ಅಗ್ರಂ' ಎಂದರೆ 'ಬ್ರಾಹ್ಮಣ ಭೋಜನಂ' ಎಂಬುದು ಇಲ್ಲಿ ಸರಿಹೋಗುವುದು. ಆದರೆ, ಮೇಲೆ 'ಹಾರ' ಎಂದರೆ 'ಹರತಿ' ಅಥವಾ 'ಹ್ರಿಯತೇ' ಎಂದು ಹೇಳಿದಂತೆ ಖಟಕ್ಕೆ ಹೇಗೆ ಅರ್ಥ ಮಾಡುವುದು ಸಾದ್ಯ?

'ಹಾರ' ಇದಕ್ಕೆ 'ಹ್ರಿಯತೆ' ಅಥವಾ 'ಹರತಿ' ಎಂದು ಸ್ಪಷ್ಟೀಕರಿಸುವುದಾದರೆ, 'ಪ್ರೇಹಾರ' 'ಶೀಲಾಹಾರ' ಎಂಬುವು ಪ್ರದೇಶದ ಹೆಸರೆಂದು ತಿಳಿದುಬರುತ್ತದೆ. (ಮೈಸೂರು ಶಾಸನ ಇಲಾಖೆಯ ವರದಿ 1929.)

ಗ್ರಾಮವೆಂದರೆ ಈಗಿನಂತೆ ಆಡಳಿತ ಸೌಕರ್ಯಕ್ಕೆ ಕಲ್ಪಿಸಿದ ಭೂ ಪ್ರದೇಶವಲ್ಲ. ಅಗ್ರಹಾರವೆನ್ನಲಾಗಿದೆ. ಅಲ್ಲಿ ಶವವು ಸಂಸ್ಕಾರವಿಲ್ಲದೆ ಇರುವಾಗ, ಅಳುತ್ತಿರುವಾಗ, ಜನಸಂದಣಿಯಲ್ಲಿ, ಅನಧ್ಯಾಯವು. ಧರ್ಮಾಭಿಮಾನಿಯಲ್ಲದ ಜನರೆದುರು ಓದುವುದು ಬೇಡ. ಅವನಿಗದು ಪ್ರಿಯವಲ್ಲ. (ಮನುಸ್ಮೃತಿ 4–108)

ವಿವರಗಳಿಗೆ ನೋಡಿ: ಜಾತಿ, ಜನಾಂಗ

ಚಕ್ರಕೋಡಿ ಈಶ್ವರ ಶಾಸ್ತ್ರಿ–1967 ಮನುಸ್ಮೃತಿ 4–10
ಶಂಬಾ ಜೋಶಿ_1999–(ಸಂ) 2–ಪುಟ 116,182,183

ಅಗಟ್

'ಅಗಳು' ಎಂಬುದು ಈಗಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಪದ. ಅಗಳು ಎಂದರೆ ಕಂದಕವೆಂದು ಅರ್ಥ. ಹಿಂದೆ ಕೋಟೆಯ ಸುತ್ತ ಅಗಳು ಅಥವಾ ಕಂದಕವನ್ನು ತೆಗೆಯುತ್ತಿದ್ದರು .

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೂ ಕಂದಕ ತೆಗೆಯುವುದರ ಕುರಿತು ಬರುತ್ತದೆ:

ಅದರ ಸುತ್ತಲೂ ಮೂರು ಬಾರಿ ಸುತ್ತಿರುವಂತೆ ಮೂರು ಅಗಳು(ಕಂದಕ)ಗಳನ್ನು ಪರಸ್ಪರವಾಗಿ ಒಂದೊಂದು ದಂಡ(ಒಂದುನೂರ ಅರವತ್ತೆಂಟು ಅಂಗುಲ) ಅಂತರವಿರುವಂತೆಯೂ, ಹದಿನಾಲ್ಕು ಹನ್ನೆರಡು ಇಲ್ಲವೇ ಹತ್ತು ದಂಡಗಳಷ್ಟು ಅಗಲವಿರುವಂತೆಯೂ ಮಾಡಿಸಬೇಕು. ಆ ಅಗಳಿನ ಅಗಲದ ಪರಿಮಾಣಕ್ಕಿಂತ ಕಾಲು ಅಥವಾ ಅರ್ಧದಷ್ಟು ಕಡಿಮೆಯಿರುವಂತೆ ಅದರ ಆಳವಿರಬೇಕು. ಮೂರನೇ ಒಂದು ಭಾಗದಷ್ಟಾದರೂ ಆಳವಿರಬಹುದು. ಬುಡದಿಂದ ಮೇಲಕ್ಕೆ ಒಂದೇ ಚಚ್ಚೌಕವಿರಬೇಕು. ಅದರ ಬುಡ ಮತ್ತು ಪಾರ್ಶ್ವಪ್ರದೇಶವು ಕಲ್ಲುಗಳಿಂದಲೂ ಅಥವಾ ಕಲ್ಲು ಇಟ್ಟಿಗೆಗಳಿಂದಲೂ ಕಟ್ಟಿದುದಾಗಿರಬೇಕು. ನೀರು ಬರುವವರೆಗೆ ತೋಡಿದ್ದರಿಂದ ಅದೇ ಸ್ವತಃ ಚಿಲುಮೆಯುಳ್ಳದಾಗಿಯೂ ಇಲ್ಲದಿದ್ದರೆ ಮತ್ತೊಂದೆಡೆಯಿಂದ ಹರಿದು ಬರುವ ನೀರುಳ್ಳದ್ದಾಗಿಯೂ, ಹಾಗೆ ಬಂದ ನೀರು ಹೊರಟು ಹೋಗಲಿಕ್ಕನುಕೂಲಿಸುವಂತೆ ಅವಕಾಶವುಳ್ಳದಾಗೆಯೂ, ತಾವರೆ, ಮೊಸಳೆ, ಮುಂತಾದವುಗಳಿಗೆ ನೆಲೆವೀಡಾಗಿಯೂ ಇರಬೇಕು. ನಾಡಿನ ರಕ್ಷಣೆಯೇ ಇದರ ಹಿಂದಿರುವ ದೃಷ್ಟಿಕೋನವಾಗಿದೆ.

ವಿವರಗಳಿಗೆ ನೋಡಿ: ಎಂ. ವಿ. ಕೃಷ್ಣರಾವ್ 1953 ಕೌಟಿಲ್ಯ ಪುಟ. 25

ಅಘಮರ್ಷಣ

ಪ್ರಾಣಾಯಾಮ, ಸ್ನಾನ, ಪೂಜೆ, ಹೋಮ, ಮಂತ್ರಪಠಣ, ಮೂರು ಕಾಲಗಳಲ್ಲಿ (ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲದಲ್ಲಿ ಜಪ) ಮಾಡುವುದು ನಿತ್ಯ ಕರ್ಮ ಅನುಷ್ಠಾನವೆನಿಸಿಕೊಳ್ಳುತ್ತದೆ. ಅಘಮರ್ಷಣವೆಂದರೆ ಪಾಪ ವಿಮೋಚನೆಗೆ ಕೈಗೊಳ್ಳುವ ಪಾಪನಾಶಕ್ಕಾಗಿ ಸೂರ್ಯನಿಗೆ ಅರ್ಘ್ಯಜಲವನ್ನು ನೀಡುವುದು ಇಲ್ಲಿ ಗಮನಾರ್ಹ.

ಅಘವೆಂಧರೆ ಪಾಪ; ದುಃಖ; ನೋವು ಎಂಬ ಅರ್ಥಗಳಿವೆ. ಪಾಪ ನಿವಾರಣೆಗೆ ಜಲದಲ್ಲಿ ನಿಂತು ಅರ್ಘ್ಯವನ್ನು ಸೂರ್ಯನಿಗೆ ಜಲವನ್ನು ನೀಡುವುದರಿಂದ ಪಾಪ ನಿವಾರಣೆಯಾಗುತ್ತದೆ.

ಅಘಮರ್ಷಣ ಮಂತ್ರವು ಯಜುರ್ವೇದದಲ್ಲಿ ಬರುತ್ತದೆ. ವೈಭವಯುತನಾಗಿ ವ್ಯಾಪ್ತನಾಗಿರುವ ತಮಸ್ಸಿನ ಆಚೆಗಿರುವ, ಸರ್ವಶ್ರೇಷ್ಠನೂ, ಆನಂದಮಯನೂ ಆಗಿರುವ ಜ್ಞಾನಜ್ಯೋತಿಯೂ ನಮಗೆ ಪ್ರಾಣದಾತನಾದ ಸೂರ್ಯಸ್ವರೂಪನೂ ಆಗಿರುವ ಆ ದೇವದೇವನನ್ನು ನಾವು ಹೊಂದುವಂತಾಗಲಿ. (ಯಜುರ್ವೇದ 35–14)

ಪ್ರಪಂಚದ ಪ್ರತಿಯೊಂದು ಪದಾರ್ಥವೂ ಆ ಸೂರ್ಯನಾಮಕ ಭಗವಂತನ ಮಹಿಮಾತಿಶಯವನ್ನು ತೋರುವ ಕೀರ್ತಿಧ್ವಜದಂತಿದೆ. 'ದೃಶೇ ವಿಶ್ವಾಯ' ಸಮಸ್ತ ವಿಶ್ವಕ್ಕೂ ಆ ಮಹಿಮಾವಂತನ ವೈಭವ ಪ್ರದರ್ಶನ ಮಾಡುತ್ತವೆ. ಅವನಿಂದ (ಯಜುರ್ವೇದ 33–31)

ಸೂರ್ಯನೇ ಜಗತ್ತಿನ ಆತ್ಮ (ಯಜುರ್ವೇದ 7–42) ಸುಜನಲೋಕ ಹಿತಾರ್ಥವಾಗಿ ನಿರಂತರ ಕರುಣ ನೇತ್ರೋನ್ಮೇಹಿತನಾದ ಭಗವಾನ್. ನೂರು ಶರದಗಳವರೆಗೆ ಮಾತಾಡುತ್ತಿರುವಂತಾಗಲಿ, ನೂರು ಶರದಗಳವರೆಗೆ ಕೇಳುವಂತಾಗಲಿ. ಅಧೀನರಾಗಿ ನಾವು ನೂರು ಶರದಗಳವರೆಗೆ ಜೀವಿಸುವಂತಾಗಲಿ. (ಯಜುರ್ವೇದ 36–24) (ವೇದವ್ರತ ವೈಶಂಪಾಯನ 1984 ಪು.77)ಅಘಮರ್ಷಣ ಸೂಕ್ತವನ್ನು ಭಾವವೃತ್ತವೆಂದು ಕರೆಯುತ್ತಾರೆ. ವರುಣನು ನೀರಿನ ಅಧಿದೇವತೆಯಾದುದರಿಂದ ಅವನ ಸ್ತುತಿಯು ಇದರಲ್ಲಿದೆ. ಸ್ವಾರ್ಥಕ್ಕಾಗಿ ಅನುಚಿತವಾಗಿ ನಡೆದುಕೊಂಡರೆ ಅದನ್ನು ಅಘವೆಂದು ಕರೆಯುತ್ತಾರೆ. ಮನುಷ್ಯನ ದುಸ್ಥಿತಿಗೆ ಅದೇ ಕಾರಣ.ಜೀವವನ್ನು ಆವರಿಸಿಕೊಂಡು ಹೋಗುವವನು ವರುಣನೆಂಬ ನಂಬಿಕೆಯಿದೆ. ಋತವನ್ನು ಮೀರಿ ನಿಂತಿರುವವನು ವರುಣನೆಂದು ಹೇಳುತ್ತಾರೆ. ಸೂರ್ಯ ಮತ್ತು ವರುಣರು ಪರಸ್ಪರ ಸ್ನೇಹಿತರೆಂದು ಈ ಸೂಕ್ತದಲ್ಲಿ ಬಿಂಬಿತವಾಗಿದೆ. ಪಾಪವನ್ನು ತೊಳೆಯುವವನು ವರುಣನೆಂದು ಈ ಸೂಕ್ತದಲ್ಲಿ ಸ್ತುತಿಸಲಾಗಿದೆ. ಪಾಪ ವಿಮೋಚನೆಯ ಸಂದರ್ಭದಲ್ಲಿ ನೀರು ಬಳಕೆಯಾಗಿರುವುದು ಗಮನಾರ್ಹ.

ವಿವರಗಳಿಗೆ ನೋಡಿ: ವೇದವ್ರತ ವೈಶಂಪಾಯನ 1984 ಋಗ್ವೇದ ಪುಟ. 77.

ಅಘ ವಿಘಾತ

ಭರತನ ನಾಟ್ಯಶಾಸ್ತ್ರದಲ್ಲಿ ಬರುವ ನೃತ್ಯಪದ್ಧತಿಯಲ್ಲಿ ಈ ವಿಷಯ ಬರುತ್ತದೆ. ಅಂಗಗಳ ಚಲನೆಯ ಮೂಲಕ ಅಭಿವ್ಯಕ್ತಿಸುವ ಕ್ರಮವನ್ನು ಆಂಗಿಕಾಭಿನಯವೆಂದು ಕರೆಯುತ್ತಾರೆ. ಆಂಗಿಕ, ವಾಚಿಕ, ಸಾತ್ವಿಕ, ಆಹಾರ್ಯ ಎಂಬುದು ನಾಲ್ಕು ಬಗೆಯ ಅಭಿನಯದ ಅಂಗಗಳು. "ಅಘ ವಿಘಾತಾರ್ಥಂ ಉದ್ಧತಾಭಿನಯ" ವೆಂದರೆ ಪಾಪನಾಶದ ಉದ್ಧತ ಅಭಿನಯ. (ಅನುಕರಣೆ) ಆರಭಟೀ ವೃತ್ತಿಯೆಂದರೆ ವಿವಿಧ ಭಾವಗಳ ಅಭಿನಯ. ತಾಂಡವವೆಂದರೆ ಇಲ್ಲಿ ತಾಂಡವ ನೃತ್ಯವೆಂದು ಅರ್ಥ.

ದಾಕ್ಷಾಯಣಿಯು ದಕ್ಷನ ಯಜ್ಞಕ್ಕೆ ಆಹುತಿಯಾದಾಗ ಶಿವನು ಸಿಟ್ಟು ಡಮರುಗವನ್ನು ಬಾರಿಸುತ್ತಾ ರುದ್ರನರ್ತನವಾಡುತ್ತಾನೆ. 'ಜಗತ್ತನ್ನೇ ತಾಂಡವವಾಡುತ್ತೇನೆ" ಎಂದು ಹೇಳುತ್ತಾನೆ. ಇಲ್ಲಿಂದ ತಾಂಡವ ನೃತ್ಯ ಪ್ರಾರಂಭವಾಯಿತು ಎಂದು ಪುರಾಣಗಳು ಹೇಳುತ್ತವೆ.

ಭರತ ನಾಟ್ಯವನ್ನು ಮೂರು ವಿಭಾಗ ಮಾಡಿದ್ದಾನೆ. ೧) ನೃತ್ತ ೨) ನೃತ್ಯ ೩) ನಾಟ್ಯ.

ಸಂಗೀತದ ಹಿನ್ನೆಲೆಯಲ್ಲಿ ಸಮ್ಮಿಳಿತವಾಗಿ ತಾಳ ಬದ್ಧವಾದ ಸರಳ ಸ್ಪಷ್ಟ ನರ್ತನವೇ ನೃತ್ತವು. ನೃತ್ಯವು ಸ್ಪಷ್ಟ ಆಂಗಿಕ ಅಭಿನಯ ಹೊಂದಿರುತ್ತದೆ. ಅಭಿನಯಕ್ಕೆ ಪ್ರಾಶಸ್ತ್ಯವಿದೆ. ನೃತ್ಯದಲ್ಲಿ ಭಾವ, ರಸ ವ್ಯಂಜನಕ್ಕೆ ಪ್ರಾಶಸ್ತ್ಯವಿದೆ. ವಾಕ್ಯಾಭಿನಯ, ಭಾವಾಭಿನಯ ಪದಾರ್ಥಾಭಿನಯ ಮುಖ್ಯ. ನಾಟ್ಯವು ಮಾತು, ಸಂಗೀತ; ಅಭಿನಯದಿಂದ ಕೂಡಿದ್ದು ಕಥಾ ಪ್ರಧಾನವಾಗಿರುತ್ತದೆ.

ಲಾಸ್ಯ

ಭರತನಾಟ್ಯದಲ್ಲಿ ಎರಡು ವಿಧವಿದೆ. ತಾಂಡವ ಮತ್ತು ಲಾಸ್ಯ. ಶಿವನಿಂದ ಬಂದಿರುವ ಪೌರುಷದ ನೃತ್ಯ ತಾಂಡವ. ಪಾರ್ವತಿಯಿಂದ ಲಲಿತವಾದ ಸೊಗಸಾದ ನೃತ್ಯ ಬಂದಿರುವುದನ್ನು ಲಾಸ್ಯವೆಂದು ಕರೆಯುತ್ತಾರೆ. ನೃತ್ಯ ಕಲೆಗಿರುವ ಮುಖ್ಯ ಅಂಶಗಳಲ್ಲಿ ಪಾಪನಾಶವೂ ಒಂದು ಎಂಬುದಿಲ್ಲಿ ಗಮನಾರ್ಹ.

ವಿವರಗಳಿಗೆ ನೋಡಿ: ಯು. ಎಸ್. ಕೃಷ್ಣರಾವ್ 1971 ಆಧುನಿಕ ಭಾರತದಲ್ಲಿ ನೃತ್ಯಕಲೆ ಪುಟ. 32.

ಅಘಾಟ ಶುದ್ಧಿ

ಅಘಾಟಶುದ್ಧಿಯೆಂದರೆ ಸೀಮೆಯ ಶುದ್ಧಿ ಎಂದರ್ಥ. ಸೀಮೆಯ ಪರಿಷ್ಕಾರವೆನ್ನುವುದು ಭಾವಾರ್ಥ. ಸೀಮೆಯ ಶುದ್ಧಿಯು ಹಿಂದೆ ಬಹಳ ಮುಖ್ಯವಾಗಿತ್ತು. ಈಗಲೂ ಇದನ್ನು ಬೇರೆ ಬೇರೆ ರೀತಿಯಲ್ಲಿ ಬಳಸುತ್ತಿದ್ದಾರೆ. ಗಡಿಮಾರಿಯನ್ನು ಊರಿನಿಂದ ದಾಟಿಸುವುದು ಇದರಲ್ಲಿ ಮುಖ್ಯವಾಗಿದೆ.ಸೀಮೆಯ ಶುದ್ಧಿ, ಮನೆಯ ಶುದ್ಧಿ, ಗ್ರಾಮ ಶುದ್ಧಿ ಎಂಬ ಪರಿಕಲ್ಪನೆಗಳು ಇಲ್ಲಿ ಮುಖ್ಯವಾಗಿದೆ. ಕ್ಷುದ್ರದೇವತೆಗಳ ಕಣ್ಣು ಬೀಳದಿರಲಿಯೆಂದು ಈ ರೀತಿಯ ಶುದ್ಧಿಯನ್ನು ಮಾಡುತ್ತಾರೆ.

ಅಜ್ಞಾತವಾಸ

ಅಜ್ಞಾತವಾಸವೆಂದರೆ ಯಾರಿಗೂ ತಿಳಿಯದಂತೆ ವಾಸ ಮಾಡುವುದು. ಜ್ಞಾತವೆಂದರೆ ತಿಳಿಯುವುದು. ಅಜ್ಞಾತವಾಸವೆಂದರೆ ತಿಳಿಯದಂತೆ ವಾಸಿಸುವುದು. ಮಹಾಭಾರತದಲ್ಲಿ ಬರುವ ಅಜ್ಞಾತವಾಸದ ಪರಿಕಲ್ಪನೆಯು ವಿಶಿಷ್ಟವಾಗಿದೆ. ಕೌರವರಿಗೆ

ತಿಳಿಯದಂತೆ ಪಾಂಡವರು ಅಜ್ಞಾತವಾಸಕ್ಕೆ ತೆರಳುತ್ತಾರೆ. ಅದು ದ್ಯೂತದ ಪಣವೂ ಹೌದು ಎಂಬುದಿಲ್ಲಿ ಗಮನಾರ್ಹವಾಗಿದೆ. ಅಲ್ಲದೆ ಅಜ್ಞಾತಕ್ಕಾಗಿ ವೇಷ ಮರೆಯಿಸಿಕೊಂಡು, ಕಂಕಭಟ್ಟ, ವಲಲ, ಬೃಹನ್ನಳೆ ಮುಂತಾಗಿ ಕಾಣಿಸಿಕೊಂಡಿದ್ದು ವಿಶೇಷ. 'ಅಂತೂ ಇಂತೂ ಕುಂತೀ ಮಕ್ಕಳಿಗೆ ವನವಾಸ'ವೆಂಬ ಮಾತು ಈಗಲೂ ಚಾಲ್ತಿಯಲ್ಲಿದೆ.

ಇನ್ನೊಬ್ಬರಿಗೆ ತಿಳಿಯದಂತೆ ವಾಸಿಸುವುದು ತುಂಬಾ ಕಷ್ಟಕರ. ಇದನ್ನು ಈಗ ಭೂಗತರು ಎಂದೂ ಕರೆಯುತ್ತಾರೆ. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಹೋರಾಟಗಾರರು ಅಜ್ಞಾತವಾಸಿಗಳಾಗಿದ್ದರು ಎಂಬುದು ಗಮನಾರ್ಹ.

ವಿವರಗಳಿಗೆ ನೋಡಿ: ಬಸವರಾಜ ಕಟ್ಟೀಮನಿಯವರ ಅಜ್ಞಾತವಾಸಿ ಕತೆ.

ಅಟ್ಟವಣೆ ಕೋಲು

'ಅಟ್ಟವಣೆ ಕೋಲ್' ಎನ್ನುವುದು ಪುಸ್ತಕವನ್ನಿಡುವ ಪೀಠ-ವ್ಯಾಸಪೀಠ. ದಕ್ಷಿಣ ಕನ್ನಡದಲ್ಲಿ 'ಅಟ್ಟಳಿಗೆ' ಎಂಬ ಪದ ಪ್ರಯೋಗವಿದೆ. ಅಡಿಕೆ ಗರಿಯನ್ನು; ತೆಂಗಿನ ಗರಿಯನ್ನು ಹೇರಿಡಲು ಅಟ್ಟಳಿಗೆಯನ್ನು ಮಾಡುತ್ತಾರೆ. ನಾಲ್ಕು ಕಲ್ಲಿಟ್ಟು ಅದರ ಮೇಲೆ ಉದ್ದಕ್ಕೂ; ಅಗಲಕ್ಕೂ ರೆಂಬೆಗಳನ್ನೋ; ಒಣಗಿದ ಅಡಿಕೆಯ ಸಲಾಕೆಗಳನ್ನೋ ಜೋಡಿಸುತ್ತಾರೆ. ಅದರ ಮೇಲೆ ಅಡಿಕೆಗರಿ ಮತ್ತು ತೆಂಗಿನ ಗರಿಯನ್ನು ಜೋಡಿಸುತ್ತಾರೆ. ಇಲ್ಲಿ ಭೀಷ್ಮನು ಶರ ಶಯ್ಯೆಯಲ್ಲಿ ಮಲಗಿದ ಸಂಗತಿಯನ್ನು ಗಮನಿಸಬೇಕು. ಮಹಾಭಾರತದಲ್ಲಿ ಭೀಷ್ಮನ ಶರಶಯ್ಯೆ ಸುಪ್ರಸಿದ್ಧವಾದುದು. ಅಟ್ಟವಣೆ ಕೋಲು ಎಂಬುದು ವಿಶಿಷ್ಟ ಪದವಾಗಿದೆ.

ಅಟ್ಟಾಲ

ಅಟ್ಟಾಲವೆಂದರೆ ಕೋಟೆಯ ಬುರುಜು. ಕೋಟೆಯಿರುವುದು ಒಂದು ರಾಜ್ಯದ ರಕ್ಷಣೆಗಾಗಿ. ಅದನ್ನು ಆಯಾ ರಾಜ್ಯದ ನಿರ್ದಿಷ್ಟ ಗಡಿ ರೇಖೆಯೆಂದು ಹೇಳಬಹುದು. ಚಿತ್ರದುರ್ಗದ ಕಲ್ಲಿನ ಕೋಟೆಯನ್ನು ಇಲ್ಲಿ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಆ ಕೋಟೆಯ ಒಳಗೆ ಪ್ರಜೆಗಳು ಮತ್ತು ರಾಜರು ಇರುತ್ತಾರೆ. ಪ್ರತಿಯೊಂದು ಕೋಟೆಗೂ ಪಹರೆ ಕಾಯುವುದಕ್ಕೆ ಸೈನಿಕರಿಗಾಗಿ ಒಂದು ಬುರುಜು ಕಟ್ಟಿಸಲಾಗುತ್ತದೆ. ಅದು ಅತ್ಯಂತ ಎತ್ತರದಲ್ಲಿ ಇರುತ್ತದೆ. ದೂರದಿಂದ ಶತ್ರುಸೈನ್ಯವೇನಾದರೂ ಬರುವುದಿದ್ದರೆ ಅದು ಬುರುಜುವಿನ ಮೇಲಿದ್ದ ಸೈನಿಕರಿಗೆ ತಿಳಿಯುತ್ತದೆ. ಬುರುಜನ್ನು "ಅಟ್ಟಾಲ"ವೆಂದು ಕರೆದಿದ್ದಾರೆ.

ಬುರುಜಿನ ಮೇಲೆ ನಿಂತು ಕಾಳಗ ನಡೆಸಿದರೆ ಅದನ್ನು ಬುರುಜು ಕಾಳಗವೆಂದು ಕರೆಯಲಾಗುತ್ತದೆ. ಯುದ್ಧದ ಒಂದು ವಿಧಾನವಿದು. ಅಟ್ಟಾಲ 'ಅರಮನೆ', ಕೋಟೆ-ಕೊತ್ತಲ, ಬುರುಜು, ಎದೆಯುದ್ದ ಗೋಡೆ ಎಂಬರ್ಥವೂ ಇದೆ.

ಅಡಪ

ಅಡಪ ಎಂದರೆ ಎಲೆ ಅಡಿಕೆಯ ಚೀಲ. ಎಲೆಯಡಿಕೆಯ ಚೀಲದವರು. ಪೀಕದಾನಿ ಹಿಡಿದವರು ಮಂಗಲ ಕಾರ್ಯದಲ್ಲಿ ಭಾಗವಹಿಸುತ್ತಿದ್ದರು ಎಂದು ಇದರಿಂದ ತಿಳಿಯುತ್ತದೆ.

ಹಡಪ ಎಂದೂ ಬಳಸುತ್ತಾರೆ. ಹಡಪದ ಊಳಿಗದವರು ಮಾಡುವ ವೃತ್ತಿ ಇದಾಗಿದೆ. 'ಸಂಚಿ' ಎಂದೂ ಬಳಕೆಯಿದೆ. ಹೊನ್ನಮ್ಮ-ಸಂಚಿಯ ಊಳಿಗದವಳು ಎಂಬುದನ್ನು ನೆನಪಿಸಿಕೊಳ್ಳಬಹುದು.

ಕ್ಷೌರಿಕರು ತಮ್ಮ ಕತ್ತರಿ, ಹಣಿಗೆ; ಬಾಳು ಇಟ್ಟುಕೊಂಡು ಯಾರಿಗೆ ಕ್ಷೌರ ಮಾಡಬೇಕೋ ಅಲ್ಲಿಗೆ ಹೋಗುತ್ತಿದ್ದರು. ಅವರಿಟ್ಟುಕೊಳ್ಳುತ್ತಿದ್ದ ಸಾಮಗ್ರಿಯ ಪೆಟ್ಟಿಗೆಗೆ ಕ್ಷೌರಿಕರ ಹಡಪವೆಂದು ಬಳಸುತ್ತಿದ್ದರು. ಅಡಪವೆನ್ನುವುದು ಬೇರೆ ಅರ್ಥದಲ್ಲಿಯೂ ಬಳಕೆಯಾಗಿರುವುದು ಗಮನಾರ್ಹ.

ಅಡಿಕೆಯ ಚೀಲ ಹಿಡಿದು ಕೊಳ್ಳುವವರು. ಪೀಕದಾನಿ ಹಿಡಿದು ಕೊಳ್ಳುವವರು (ಪರಿವಾರದವರು) ಅಲ್ಲದೆ ಕುಂಚದಂತಹ ಚಾಮರವನ್ನು ಹಿಡಿದುಕೊಳ್ಳುವುವವರು. ಸದಾ ರಾಜರ ರಾಣಿಯರ ಹಿಂದೆ ಇರುತ್ತಿದ್ದರು. ಕುಂಚದ ಅಡಪವನ್ನು ಹಿಡಿದಿರುವ ವಾರ ವಿಳಾಸಿನಿಯರು (ವಾರಾಂಗನೆಯರು) ಗಮನಾರ್ಹವಾಗಿದೆ. ಊಟದ ಅನಂತರ ಎಲೆಯಡಿಕೆಯನ್ನು ತಿನ್ನುವುದು ಆರೋಗ್ಯದ ದೃಷ್ಟಿಯಿಂದ ಹಿತಕಾರಿಯೆಂದು ಹೇಳುತ್ತಾರೆ. ಎಲೆಯಡಿಕೆಗೆ ಜೀರ್ಣ ಮಾಡುವ ಶಕ್ತಿಯಿದೆಯೆಂದು ಅಭಿಪ್ರಾಯವಾಗಿದೆ. ಎಲೆಯಡಿಕೆ ತಿನ್ನುವುದರಿಂದ ಬಾಯಿಯ ವಾಸನೆಯೂ ಹೋಗುತ್ತದೆ. ಎಂದು ಜನ ತಿಳಿದುಕೊಂಡಿದ್ದಾರೆ. ಊಟವಾದ ಬಳಿಕ ಎಲೆಯಡಿಕೆ ತಿನ್ನುವುದು ಸಂಪ್ರದಾಯವೂ ಹೌದು.

ವಿವರಗಳಿಗೆ ನೋಡಿ: ಕದಂಬದಂಬುಲ.

ಅಡಿವಜ್ಜೆ

ನಮ್ಮ ಬೆರಳುಗಳಲ್ಲಿ ಶಂಖ ಚಕ್ರ ಗುರುತುಗಳು ಇರುತ್ತವೆ. ಚಕ್ರದ ಗುರುತು ಇರುವವರು ಹೆಚ್ಚು ತಿರುಗಾಡುತ್ತಾರೆ. ಬೆರಳುಗಳಲ್ಲಿ ಶಂಖದ ಗುರುತು ಇರುವವರು ಬುದ್ಧಿವಂತರಾಗುತ್ತಾರೆ. ಇದರಲ್ಲಿಯೂ ಪ್ರಭೇದಗಳಿವೆ. ಕೈಯಲ್ಲಿ ಒಂದು ಚಕ್ರದ ಸುಳಿಯಿರುವವರು ಎರಡು ಚಕ್ರದ ಸುಳಿಯಿರುವವರು ಮೂರು ನಾಲ್ಕು ಐದು ಹೀಗೆ. ಇವಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಲಕ್ಷಣಗಳನ್ನು ಹೇಳಲಾಗಿದೆ. ಪಾದದ ಬೆರಳುಗಳಿಗೂ ಇದು ಅನ್ವಯವಾಗುತ್ತದೆ. ಇವು ಹಸ್ತ ಸಾಮುದ್ರಿಕ ಶಾಸ್ತ್ರದಲ್ಲಿಯೂ ಬರುತ್ತದೆ.

ಕೈ ಬೆರಳುಗಳಲ್ಲಿ ಒಂದು ಶಂಖವಾದರೆ (ಶಂಖದ ಗುರುತು) ಅಧ್ಯಯನ ಶೀಲ, ಎರಡು ಶಂಖವಾದರೆ ದರಿದ್ರ ಮೂರು ಶಂಖವಾದರೆ ರೋದನ ಸ್ವಭಾವದವನು ನಾಲ್ಕು ಶಂಖವಾದರೆ ರಾಜ. ಕೈಬೆರಳುಗಳ ತುದಿಯಲ್ಲಿ ಸುಳಿ ಅಥವಾ ಚಕ್ರಾಕಾರದ ಚಿಹ್ನೆಗಳಿದ್ದರೆ ಚಕ್ರವೆಂದೂ, ಮೊಟ್ಟೆಯ ಆಕಾರದಲ್ಲಿ ಗೆರೆಗಳಿರುವುದಕ್ಕೆ ಶಂಖವೆಂದೂ ಕರೆಯುತ್ತಾರೆ.

ಆರು ಶಂಖಗಳಿದ್ದರೆ ಅತಿವಿಚಕ್ಷಣ: ಏಳು ಶಂಖವಿದ್ದರೆ ದರಿದ್ರ, ಎಂಟು ಶಂಖವಿದ್ದರೆ ಸೌಖ್ಯಜೀವಿ, ಒಂಬತ್ತು ಶಂಖವಿದ್ದರೆ ಸ್ತ್ರೀ ಸ್ವಭಾವ ಪ್ರಕೃತಿ, ಹತ್ತು ಶಂಖವಿದ್ದರೆ ರಾಜ ಅಥವಾ ಯೋಗಿ, ಒಂದು ಚಕ್ರ ಪಟುತ್ವ, ಎರಡು ಚಕ್ರವಿದ್ದರೆ ಸುಂದರ, ಮೂರು ಚಕ್ರವಿದ್ದರೆ ವಿಲಾಸಿ, ನಾಲ್ಕು ಚಕ್ರವಿದ್ದರೆ ದರಿದ್ರ, ಐದು ಚಕ್ರವಿದ್ದರೆ ಮಹಾಜ್ಞಾನಿ, ಆರು ಚಕ್ರವಿದ್ದರೆ ಪಂಡಿತರಲ್ಲಿ ಶ್ರೇಷ್ಠ

ಏಳು ಚಕ್ರವಿದ್ದರೆ ಪರ್ವತದಲ್ಲಿ ತಿರುಗುವವನು, ಎಂಟು ಚಕ್ರವಿದ್ದರೆ ವರಾಟಕ (ದರಿದ್ರ), ಒಂಬತ್ತು ಚಕ್ರವಿದ್ದರೆ ನೃಪತಿ, ಹತ್ತು ಚಕ್ರವಿದ್ದರೆ ರಾಜಸೇವಕ. ಶಂಖ; ಚಕ್ರ; ಗದಾ; ಪದ್ಮ – ನಾಲ್ಕು ಪ್ರಮುಖ ಚಿಹ್ನೆಗಳು.

ಅಡಿವಜ್ಜೆಯೆಂದರೆ ಕೆಸರಿನಲ್ಲಿ ಕಂಡುಬರುವ ಹೆಜ್ಜೆಯೆಂದು ಅರ್ಥವಿದೆ.(ನೋಡಿ–ಕರ್ನಾಟಕಶಬ್ದಸಾರಂ ಪುಟ.೫೨)

ಅಣಿ

ಅಣಿಯೆಂದರೆ ಪದಾತಿ ಸೈನ್ಯ. ಪದಾತಿ ಸೈನ್ಯ ನೆಲದ ಮೇಲೆ ನಿಂತು ಯುದ್ಧ ಹೂಡುವವರು. ಇವರನ್ನು ಕಾಲಾಳುಗಳು ಎಂದು ಕರೆಯುತ್ತಾರೆ. ಯುದ್ಧದ ಸಂದರ್ಭದಲ್ಲಿ ಮೊದಲು ಎದುರು ಇರುವುದು ಪದಾತಿ ಸೈನ್ಯ. ಅದರ ಅನಂತರ ಅಶ್ವಾರೋಹಿ; ಮತ್ತು ಆನೆಯ ಮೇಲೆ ನಿಂತು ಯುದ್ಧ ಮಾಡುವವರು. ತರುವಾಯ ರಥಾರೋಹಿಗಳು.

ಅತರ್ಕ್ಯ

ತರ್ಕ ಎಂದರೆ ಚರ್ಚೆ. ಅತರ್ಕ್ಯವೆಂದರೆ ಚರ್ಚೆಮಾಡಲು ಅಸಾಧ್ಯವಾದುದು. ತರ್ಕವು ಆಧಾರದ; ಸಾಕ್ಷ್ಯದ ಮೂಲಕ ಸಿದ್ಧವಾಗುತ್ತದೆ. ಅತರ್ಕ್ಯವು ಊಹೆ; ಆಧಾರ; ಸಾಕ್ಷ್ಯ ಮುಂತಾದವುಗಳಿಂದ ಸಿದ್ಧಪಡಿಸಲಾಗುವುದಿಲ್ಲ.

ಅತಿಥಿ

ಬ್ರಾಹ್ಮಣನು ಒಂದು ದಿನ ಹೆರವರ ಮನೆಯಲ್ಲಿದ್ದರೆ ಅತಿಥಿಯು. ಅತಿಥಿ ಪದವು ಅಂತಹ ಅರ್ಥವನ್ನು ಕೊಡುವುದು. ಅದೇ ಊರಿನವರು ಹೊಟ್ಟೆ ತುಂಬಲು ಏನಾದರೂ ನೆವದ ವೇಷದವನಾಗಿ ಮನೆಗೆ ಬಂದರೆ ಅವನು ಅತಿಥಿಯಾಗುವುದಿಲ್ಲ. ಅವನು ಪತ್ನೀ–ಅಗ್ನಿ ಸಂಯುಕ್ತನಾದರೂ ಬೆಲೆಯಿಲ್ಲ. (ಮನುಸ್ಮೃತಿ 3–103)

ಅತಿಥಿಗೆ ಕೊಡದ ಆಹಾರ ಸಾಮಗ್ರಿಯನ್ನು ತಾನು ಸೇವಿಸಬಾರದು. ಧನ, ಯಶಸ್, ಆಯುಸ್, ಸುಖ ಎಲ್ಲವೂ ಅತಿಥಿ ಸತ್ಕಾರದಿಂದ ಲಭ್ಯಗಳು ಆದುದರಿಂದ ಕೊಡದೆ ತಿನ್ನುವುದು ಹೇಗೆ? (ಮನುಸ್ಮೃತಿ 3–106)

ಅತಿಥಿಗಳಿಗೆ ಸಂಸ್ಕೃತಿಯಲ್ಲಿ ಬಹಳ ಮಹತ್ವವಿದೆ. ಅತಿಥಿಗಳನ್ನು ದೇವರ ರೀತಿಯಲ್ಲಿ ನೋಡಬೇಕು ಎಂಬ ಮಾತುಗಳು ಚಾಲ್ತಿಯಲ್ಲಿದೆ.

ಅತಿರಥರು

ಅಪರಿಮಿತ ಸಂಖ್ಯೆಯ ಶತ್ರುಗಳೊಡನೆ ಏಕಾಕಿಯಾಗಿ ಯುದ್ಧಮಾಡಬಲ್ಲ ರಥಿಕನಿಗೆ ಅತಿರಥನೆಂಬ ಹೆಸರು. ಹತ್ತು ಸಾವಿರ ಬಿಲ್ಲಾಳುಗಳೊಡನೆ ಒಬ್ಬಂಟಿಗನಾಗಿ ಯುದ್ಧ ಮಾಡಬಲ್ಲ ಶಸ್ತ್ರಶಾಸ್ತ್ರ ಪ್ರವೀಣನು ಮಹಾರಥ, ಪರಿಣತನಲ್ಲದ ಇನ್ನೊಬ್ಬನನ್ನು ಬದಿಯಲ್ಲಿರಿಸಿಕೊಂಡು ಯುದ್ಧಮಾಡಬಲ್ಲ ರಥಿಕನು 'ಅರ್ಧರಥ'; ಬಹುಶಃ ತನಗೆ ಸಮನಾದ ಒಬ್ಬ ರಥಿಕನೊಡನೆ ಮಾತ್ರ ಯುದ್ಧಮಾಡಬಲ್ಲವನು' ಸಮರಥನು.

ದಶದಿಕ್ಕುಗಳಿಗೆ ರಥವನ್ನು ಓಡಿಸಬಲ್ಲವನನ್ನು ದಶರಥನೆಂದು ಕರೆಯುತ್ತಾರೆ. ಯುದ್ಧದ ರಥಿಕರಲ್ಲಿ ಇರುವ ಪ್ರಭೇದಗಳನ್ನು

ಇದು ಸೂಚಿಸುತ್ತದೆ. ಮೇಲಿನ ಪದ್ಯದಲ್ಲಿ ಆರು ಜನ ಅತಿರಥರ ಪ್ರಸ್ತಾಪವಿದೆ.

ವಿವರಗಳಿಗೆ ನೋಡಿ: ಸಮರಥಿ; ಅರ್ಧರಥಿ.

ಅತ್ಯಾಸಕ್ತ

ಆಸಕ್ತಿಯೆಂದರೆ ಚೆನ್ನಾಗಿ ಅಂಟಿಕೊಂಡಿರುವ, ಸುತ್ತಲೂ ಸಂಬಂಧ ಹೊಂದಿರುವ ಎಂದರ್ಥ. ಅತ್ಯಾಸಕ್ತಿಯೆಂದರೆ ಅಧಿಕವಾಗಿ ಅಂಟಿಕೊಂಡಿರುವುದು. ಇಲ್ಲಿ ಆಸಕ್ತಿ ಇಂದ್ರಿಯಾಸಕ್ತಿಯನ್ನು ಸೂಚಿಸುತ್ತದೆ. ಇಂದ್ರಿಯದ ಆಸಕ್ತಿಯನ್ನು ಜೈನಧರ್ಮ ವಿರೋಧಿಸುತ್ತದೆ. ಅತಿಯಾದ ಇಂದ್ರಿಯಾಸಕ್ತಿಯಿಂದ ಮನುಷ್ಯ ಮೋಕ್ಷವನ್ನು ಪಡೆಯಲಾರ. ಇತರ ಮತಧರ್ಮಗಳು ಕೂಡಾ ಇಂದ್ರಿಯಾಸಕ್ತಿಯನ್ನು ವಿರೋಧಿಸುತ್ತವೆ.

ಅತ್ಯುಕ್ತಿ

ಅತ್ಯುಕ್ತಿ ಎಂದರೆ ವೈಭವೀಕರಿಸಿದ ಮಾತು ಎಂಬ ಅರ್ಥವಿದೆ. ಹಾಗೆಯೆ ವಿಪರೀತವಾದ, ಹೆಚ್ಚಿನ ಮಾತು ಎನ್ನುವ ಭಾವವೂ ಇದೆ. ಅತ್ಯುಕ್ತಿಯೆಂದರೆ ಅತಿಯಾದ ವಾಚಾಳಿತನವೆಂಬ ಗ್ರಹಿಕೆ ಇದೆ. ಯಾವ ಕವಿತೆಯಲ್ಲಿ ಅತಿಶಯವಾದ ಉಕ್ತಿಯನ್ನು ಬಳಸಲಾಗಿದೆಯೋ ಅದನ್ನು ಗಮನಿಸಿಕೊಂಡು ಕವಿಯು ಅತ್ಯುಕ್ತಿಯನ್ನು ಬಳಸಿದ್ದಾನೆ ಎಂದು ಹೇಳುತ್ತೇವೆ.ಆದರೆ ಇದನ್ನು ಮತ್ತೊಂದು ರೀತಿಯಲ್ಲಿ ಹೇಳುತ್ತೇವೆ_ "ಅದೇನು ಅಷ್ಟು ದೊಡ್ಡದು ಮಾಡಿ ಹೇಳುವುದು?" ದೊಡ್ಡದು ಮಾಡಿ ಹೇಳುವುದು

ಎಂದರೆ ವೈಭವೀಕರಿಸುವುದು. ಸಣ್ಣದಾದ ಸಂಗತಿಯು ನಡೆದರೆ ಅದನ್ನು ದೊಡ್ಡದು ಮಾಡಿ ಹೇಳಿದಾಗ ಕೇಳುವವರ ಗಮನವು ಆಕಡೆಗೆ ಹೋಗುತ್ತದೆ.

ವಿವರಗಳಿಗೆ ನೋಡಿ: ಅತಿಶಯೋಕ್ತಿ

ಅಧಿಕಾರ

ಯಜಮಾನಿಕೆ, ಅಧಿಕಾರಗಳು ರೂಪುಗೊಳ್ಳುವುದು ಇನ್ನೊಬ್ಬರ ಮೇಲೆ ನಿಯಂತ್ರಣ ಸಾಧಿಸುವುದರಿಂದ. ನಿಯಂತ್ರಣಗಳು ಬೇರೆ ಬೇರೆ ರೀತಿಯಲ್ಲಿರುತ್ತವೆ. ಅದರಲ್ಲಿ ದೈಹಿಕ ನಿಯಂತ್ರಣ ಒಂದು ರೀತಿ. ಇದು ಕಣ್ಣಿಗೆ ಕಾಣಿಸುತ್ತದೆ. ಮತ್ತೊಂದು ಬೌದ್ಧಿಕ ನಿಯಂತ್ರಣ. ಇದು ಇನ್ನೊಬ್ಬನ ಬುದ್ಧಿಯ ಮೇಲೆ ನಿಯಂತ್ರಣ ಸಾಧಿಸುವುದನ್ನು ಸಂಕೇತಿಸುತ್ತದೆ. ಅಧಿಕಾರಕ್ಕೆ ಕೆಲವು ಪರಿಕರಗಳು ಬೇಕಾಗುತ್ತವೆ ಎಂಬುದು ನಿಜ. ಅಧಿಕಾರ ನಡೆಯುವುದೇ ನಿಯಂತ್ರಣದ ಮೂಲಕವೆಂಬುದನ್ನು ಮರೆಯಬಾರದು. ಅಧಿಕಾರದ ಕುರಿತಂತೆ ನಡೆದಿರುವ ವಾಗ್ವಾದಗಳನ್ನು ಅಧಿಕಾರ ಸಿದ್ಧಾಂತವೆಂದು ಕರೆಯಲಾಗಿದೆ.

ವಿವರಗಳಿಗೆ ನೋಡಿ: Michel Foucault 1966 The order of things. Ranajit Guha 1998 Dominance without hegemony

ಕೆ.ವಿ.ಸುಬ್ಬಣ್ಣ(ಅನು) ಗಾಂಧಿ ಬರಹಗಳ ಸಂಕಲನ ೧೯೯೮ ಸ್ವರಾಜ್ಯದ ಹಾದಿ ಹೆಜ್ಜೆಗಳು

ಅಧಿಕಾರ ಮುದ್ರೆ

ನೈತಿಕತೆ, ಸತ್ಯ ಮತ್ತು ಅಧಿಕಾರ ಮೂರರ ಕುರಿತು ವಿವರಿಸುತ್ತಾ ಫುಕೋ ಜ್ಞಾನವನ್ನು ಒಂದು ಬಗೆಯ ಅಧಿಕಾರವೆಂದು ಹೇಳುತ್ತಾನೆ. ಅಧಿಕಾರವೆನ್ನುವುದು ರೂಪುಗೊಳ್ಳುವುದು ಜ್ಞಾನದಿಂದ. ಹಾಗೆಯೇ ಅಧಿಕಾರವೇ ಜ್ಞಾನವನ್ನು ರೂಪಿಸುತ್ತದೆ. ಅಧಿಕಾರವು ಜ್ಞಾನವನ್ನು ಅರ್ಥಮಾಡಿಕೊಳ್ಳಲು ಮತ್ತು ನಿಯಂತ್ರಣಗೊಳಿಸಲು ಪ್ರಯತ್ನಿಸುತ್ತದೆ ಎಂದು ಫುಕೋ ವಿವರಿಸುತ್ತಾನೆ.

ಭಾರತದಲ್ಲಿ 'ಅಧಿಕಾರ ಮುದ್ರೆ'ಯೆನ್ನುವುದನ್ನು ಸಾಂಕೇತಿಕವಾಗಿ ನೀಡಲಾಗುತ್ತದೆ. ಪದಕೋಶದಲ್ಲಿ 'ಯಜಮಾನಿಕೆ' ಎಂದರೆ ಒಡೆತನ, ಸ್ವಾಮ್ಯ ಎಂಬ ಅರ್ಥ ನೀಡಲಾಗಿದೆ. ಇದಕ್ಕೆ ಸಂವಾದಿಯಾಗಿ ಅಧಿಕಾರ, ಪ್ರಭುತ್ವ (State) ನಿಯಂತ್ರಣ, ಪ್ರಾಬಲ್ಯ ಇತ್ಯಾದಿ ಪದಗಳನ್ನು ಕೂಡ ಬಳಸಲಾಗುತ್ತಿದೆ. ಯಜಮಾನಿಕೆ ಎಂಬುದಕ್ಕೆ ನಿರ್ದಿಷ್ಟ ಅರ್ಥ ಮಾತ್ರವಲ್ಲದೆ ಸಂದರ್ಭೋಚಿತವಾಗಿ ಅದು ವಿಭಿನ್ನ ಅರ್ಥ ಪಡೆದುಕೊಳ್ಳುತ್ತದೆ. ಆಳುವ–ಆಳಿಸಿಕೊಳ್ಳುವ, ನಿರ್ದೇಶಿಸುವ–ನಿಯಂತ್ರಿಸುವ, ಕಾಯುವ ಮತ್ತು ಕರುಣಿಸುವ ಪ್ರಕ್ರಿಯೆಯಲ್ಲಿ ಯಜಮಾನಿಕೆ ಅಭಿವ್ಯಕ್ತವಾಗುತ್ತಿರುತ್ತದೆ. ಈ ಪ್ರಾಬಲ್ಯ ಅಥವಾ ಶಕ್ತಿ ಎಂಬುದು ಕೇವಲ ದೈಹಿಕ ಬಲ ಅಥವಾ ರಾಜ್ಯಾಧಿಕಾರ ಅಷ್ಟೇ ಅಲ್ಲ, ಆ ಮೂಲಕವಷ್ಟೇ

'ಯಜಮಾನಿಕೆ' ಮಾಡಲಾಗುವುದಿಲ್ಲ. ಹಾಗೆ ಅಲ್ಲದೆ ಬೌದ್ಧಿಕತೆ, ಜ್ಞಾನಸಂಪತ್ತು, ಜೀವನಮೌಲ್ಯ ಇತ್ಯಾದಿಗಳ ಮೂಲಕವೂ ಯಜಮಾನಿಕೆ ಸಾಧ್ಯ. ಇಂತಹ ಯಜಮಾನಿಕೆ ಜನಸಮುದಾಯವನ್ನು ಅಥವಾ ದೇಶವನ್ನು ನಿಯಂತ್ರಿಸುವುದು ಸಾಧ್ಯವಿದೆ. ವಿಕಾಸವಾದದ ಪ್ರಕಾರ ಪ್ರತಿಯೊಂದು ಜೀವಿಯೂ ಉಳಿವಿಗಾಗಿ ಹೋರಾಟ ಮಾಡುತ್ತದೆ. ಅದರಲ್ಲಿ ಸಬಲವಾದವುಗಳು ಉಳಿಯುತ್ತವೆ. ದುರ್ಬಲವಾದವುಗಳು ಸಾಯುತ್ತವೆ. ಹಾಗೆಯೇ ಮಾನವ ಸಮುದಾಯದಲ್ಲೂ ಸಬಲರಾದವರು ದುರ್ಬಲರನ್ನು ತಮ್ಮ ಅಧೀನದಲ್ಲಿ ಇರಿಸಿಕೊಳ್ಳುವಲ್ಲಿ ನಿರಂತರ ಪ್ರಯತ್ನಿಸುತ್ತಾರೆ. ದುರ್ಬಲರ ದೌರ್ಬಲ್ಯ ಅಥವಾ ಅಸಹಾಯಕತೆಯನ್ನು ಉಪಯೋಗಿಸಿಕೊಂಡು ಅವರ ಮೇಲೆ ತಮ್ಮ ಪ್ರಾಬಲ್ಯವನ್ನು ಹೇರುವ, ತನ್ನ ಆಜ್ಞೆ ಅಥವಾ ತಾತ್ವಿಕತೆಯನ್ನು ಪಾಲಿಸುವಂತೆ ಮಾಡುವ ಪ್ರಕ್ರಿಯೆಯೇ ಯಜಮಾನಿಕೆ. ಮನೆಗಳಲ್ಲಿ ಬೀಗದ ಕೈಯನ್ನು ಕೊಟ್ಟರೆ ಅಧಿಕಾರ ಬದಲಾಯಿತು ಎಂದು ಅರ್ಥ.

ಸಂಪತ್ತು ಮತ್ತು ಅಧಿಕಾರದ ಕೇಂದ್ರೀಕರಣವು ಯಜಮಾನಿಕೆಯ ಒಂದು ಮುಖ. ತಾವು ಶ್ರೇಷ್ಠ ಮತ್ತು ತಾವು ಮಾತ್ರ ಸಮರ್ಥರು ಎನ್ನುವ ಹೆಚ್ಚುಗಾರಿಕೆಯ ಮಂತ್ರವು ಉಳಿದವರನ್ನು ಕನಿಷ್ಠವೆಂದು ಪರಿಗಣಿಸುತ್ತದೆ. ತಮ್ಮನ್ನು ತಾವೆ ನಿರ್ವಹಿಸಿಕೊಳ್ಳಲಾಗದ ಅಸಹಾಯಕತೆಯನ್ನು ಎದುರಿಗಿಟ್ಟು ತನ್ನ ಯಾಜಮಾನ್ಯವನ್ನು ಪ್ರತಿಷ್ಠಾಪಿಸುವ ಪ್ರಯತ್ನ ಮಾಡಲಾಗುತ್ತದೆ. ಅನಾದಿ ಕಾಲದಿಂದಲೂ ಒಂದು ಇನ್ನೊಂದನ್ನು ತನ್ನ ಅಧೀನದಲ್ಲಿರಿಸಿಕೊಳ್ಳುವ, ನಿಯಂತ್ರಿಸುವ, ಆಳುವ, ಯಜಮಾನಿಕೆ ಮಾಡುವ ಸಂದರ್ಭಗಳನ್ನು ಕಾಣುತ್ತೇವೆ. ಆದರೆ ಆ ಎಲ್ಲದಕ್ಕೂ ಒಂದು ಮಿತಿಯಿರುತ್ತಿತ್ತು, ನಿರ್ದಿಷ್ಟ ರೂಪವಿರುತ್ತಿತ್ತು. ಆದರೆ ವಸಾಹತುಶಾಹಿ ಸಂದರ್ಭದಲ್ಲಿ ಯಜಮಾನಿಕೆಯ ಅರ್ಥವೇ ಬದಲಾಯಿತು. ಕೇವಲ ಅಧಿಕಾರದ ಮೂಲಕ ಆಳುವ-ನಿಯಂತ್ರಿಸುವ ನೆಲೆಗಳು ಬದಲಾದವು. ಪೊಲೀಸ್ ವ್ಯವಸ್ಥೆ, ಕಾನೂನು ಇತ್ಯಾದಿಗಳ ಮೂಲಕ ಪ್ರಭುತ್ವವನ್ನು ಕಾಪಾಡಿಕೊಳ್ಳುವುದು ಸಾಧ್ಯವಿಲ್ಲದೇ ಹೋದಾಗ ಭಾಷೆ, ಸಂಸ್ಕೃತಿ, ಜ್ಞಾನಪರಂಪರೆ, ಧರ್ಮ, ನಂಬಿಕೆ ಇತ್ಯಾದಿಗಳನ್ನು ನಿಯಂತ್ರಣದಲ್ಲಿಡಲು ವಸಾಹತುಶಾಹಿ ಆಡಳಿತ ಮುಂದಾಯಿತು. ಅಧಿಕಾರ ಪಡೆಯುವುದಷ್ಟೇ ಮುಖ್ಯವಾಗದೆ ಪಡೆದ ಅಧಿಕಾರವನ್ನು ಕಾಪಾಡಿಕೊಳ್ಳುವುದು ಮುಖ್ಯವೆಂದು ತಿಳಿದ ವಸಾಹತುಶಾಹಿ ವ್ಯವಸ್ಥೆ ಅಧಿಕಾರಕ್ಕಾಗಿ ಸಾಂಸ್ಕೃತಿಕ ಜಗತ್ತನ್ನು ಅಸ್ತ್ರವಾಗಿ ಬಳಸಿತು. ಆ ಮೂಲಕ ತನ್ನ ಪ್ರಭುತ್ವವನ್ನು ವಿಸ್ತಾರವೂ ಶಾಶ್ವತವೂ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಯಜಮಾನಿಕೆಯಲ್ಲಿ ಅನೇಕ ರೂಪಗಳನ್ನು ಸಾಮಾನ್ಯವಾಗಿ ಗುರುತಿಸಬಹುದು. ಆ ಎಲ್ಲವುಗಳ ಹಿಂದಿನ ಉದ್ದೇಶ ಆಳುವುದು ಮತ್ತು ಅಧೀನವಾಗಿರಿಸಿಕೊಂಡಿರುವುದೇ ಆಗಿದೆ. 1.ಕೌಟುಂಬಿಕ ಯಜಮಾನಿಕೆ 2.ಗ್ರಾಮೀಣ ಯಜಮಾನಿಕೆಯ ಸ್ವರೂಪ 3.ರಾಜ್ಯಾಧಿಕಾರ/ಪ್ರಭುತ್ವ (State) 4.ಸಾಂಸ್ಕೃತಿಕ ಯಜಮಾನಿಕೆ

ಫುಕೋ ತನ್ನ ವಾದವನ್ನು ಮಂಡಿಸುವಾಗ ಅಧಿಕಾರ ಮತ್ತು ಜ್ಞಾನದ ನಡುವಿನ ಸಂಬಂಧವನ್ನು ಕುರಿತು ಚರ್ಚಿಸುತ್ತಾನೆ. ಆಡಳಿತಶಾಹಿಯ ಎಲ್ಲಾ ಸಂಸ್ಥೆಗಳ ಮೂಲ ಕಲ್ಪನೆಯೇ ಈ ಅಧಿಕಾರ ಮತ್ತು ಜ್ಞಾನದ ನಿಯಂತ್ರಕ ಶಕ್ತಿಗಳ ಚಿತ್ರಣವಾಗಿದೆ. ಸದಾ ಅಡಿಯಾಳಾಗಿಸಿಕೊಳ್ಳುವ ಅಥವಾ ವಶೀಕರಿಸಿಕೊಳ್ಳುವ ಹುನ್ನಾರದಲ್ಲಿರುವ ಈ ಅಧಿಕಾರಶಾಹಿ ಮತ್ತು ಜ್ಞಾನಶಾಹಿಗಳ ಬಗ್ಗೆ ಫುಕೋ ಚರ್ಚಿಸುತ್ತಾನೆ.

ವಿವರಗಳಿಗೆ ನೋಡಿ: Julian wolfreys 2002 Key Concepts in Literary theory

ಕೆ.ಫಣಿರಾಜ್ ೨೦೦೩ ಅಂಟನಿಯೋ ಗ್ರಾಮ್ಷಿ

Michel Foucault 1966 The order of things.

ಕೆ.ವಿ.ಸುಬ್ಬಣ್ಣ(ಅನು) ೧೯೯೮ ಸ್ವರಾಜ್ಯದ ಹಾದಿ ಹೆಜ್ಜೆಗಳು

Partho chattarjee 1986 Nationalist thought and the colonial world

ಅಧಿಷ್ಠಾನ

ಬುನಾದಿ, ತಳಹದಿ, ನೆಲ ಎಂಬ ಅರ್ಥಗಳಿವೆ. ಅದ್ವೈತವೇದಾಂತದಲ್ಲಿ ಅಧಿಷ್ಠಾನಕ್ಕೆ ಬೇರೆ ಅರ್ಥವಿದೆ, ಅದರ ಪ್ರಕಾರ ಬ್ರಹ್ಮಮಾತ್ರ ಅಧಿಷ್ಠಾನದ ಸಂಕೇತ. ಪ್ರಾಸಾದಕ್ಕಧಿಷ್ಠಾನಂಗಟ್ಟುವಂತೆ ಅಂದರೆ ಅರಮನೆಗೆ ಭದ್ರವಾದ ತಳಹದಿಯನ್ನು ಹಾಕುವಂತೆ ಎಂದರ್ಥ. ಬುನಾದಿಗೆ ಅಡಿಕಟ್ಟು ಎಂದೂ ಕರೆಯುತ್ತಾರೆ. ಅಡಿಗಟ್ಟು ಸರಿಯಿಲ್ಲವಾದ ಕಟ್ಟಡ ಸರಿಯಾಗಿ ನಿಲ್ಲುವುದಿಲ್ಲ. ಅಡಿಕಟ್ಟು ಎನ್ನುವುದು ಮಾತಿಗೂ ಸಂಬಂಧಪಡುತ್ತದೆ. ಮಾತಿನ ತಳಪಾಯ ಸರಿಯಿದ್ದರೆ ಮಾತಿಗೆ ಅರ್ಥವಿರುತ್ತದೆ. ಆಗಮದಲ್ಲಿ ದೇವರನ್ನು ಅಧಿಷ್ಠಾಪಿಸು ಎಂದರೆ ಪ್ರತಿಷ್ಠಾಪಿಸು ಎಂದು ಅರ್ಥ ಬರುತ್ತದೆ.

ಅಧ್ವಗ

ಅಧ್ವಗನೆಂದರೆ ದಾರಿಗ. ಪ್ರಯಾಣಿಕ ಎಂಬರ್ಥ. ಪ್ರಯಾಣಗಳಿಗೆ ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ವಿಶೇಷ ಅರ್ಥಗಳಿವೆ. ಪ್ರಯಾಣವು ಬೇರೆ ಬೇರೆ ಉದ್ದೇಶಗಳಿಗೆ ನಡೆಯುತ್ತವೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಬಹುದು. 1.ವ್ಯಾಪಾರದ ಉದ್ದೇಶ, 2.ಬಂಧು ಬಾಂಧವರನ್ನು ಕಾಣಲು, 3.ತೀರ್ಥ ಕ್ಷೇತ್ರಗಳಿಗೆ ಭೇಟಿ, 4.ಅನ್ಯಪ್ರದೇಶವನ್ನು ಕಾಣಲು.

ಪ್ರಯಾಣದಲ್ಲಿಯೂ ಕೆಲವು ನಿಯಮಾಚಾರಗಳಿವೆ. ಪ್ರಯಾಣವನ್ನು ಶುಭ ಮುಹೂರ್ತದಲ್ಲಿ ಕೈಗೊಳ್ಳಬೇಕು. ಪ್ರಯಾಣದ ಸಂದರ್ಭದಲ್ಲಿ ಅಪಶಕುನವಾಗಬಾರದು

ತೀರ್ಥಕ್ಷೇತ್ರಗಳ ಪ್ರಯಾಣ ಸಂದರ್ಭದಲ್ಲಿ ಶುಚಿರ್ಭೂತರಾಗಬೇಕು. ಪ್ರಯಾಣದ ಸಂದರ್ಭದಲ್ಲಿ ಅವಘಡಗಳಾದರೆ ಬಂಡಿಯ ಮಾಲಿಕನಿಗೆ ದಂಡ ವಿಧಿಸಬೇಕು.

ವಿವರಗಳಿಗೆ ನೋಡಿ: ಶ್ರೀ ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು 2010 ಕೌಟಲೀಯ ಅರ್ಥಶಾಸ್ತ್ರ.

ಅಧ್ವರ

ಅಧ್ವರವೆಂದರೆ ಯಜ್ಞವೆಂಬ ಅರ್ಥವಿದೆ. ರಾಜಸೂಯಾಧ್ವರ; ದಕ್ಷಾಧ್ವರ; ಮಾರಣಾಧ್ವರ ಮುಂತಾದ ಪದಗಳು ಚಾಲ್ತಿಯಲ್ಲಿವೆ.

ಅಧ್ವರ್ಯು

ಯಾಗದ ಮುಖ್ಯಸ್ಥನಿಗೆ ಅಧ್ವರ್ಯು ಎಂದು ಕರೆಯುತ್ತಾರೆ. ಯಜುರ್ವೇದದಲ್ಲಿ ಇದರ ಕುರಿತು ವಿವರಗಳಿವೆ. ಹೋತೃ; ಉದ್ಗಾತೃ; ಬ್ರಹ್ಮ ಹಾಗೂ ಅಧ್ವರ್ಯು ಎಂದು ನಾಲ್ಕು ವಿಭಾಗಗಳು. ಹವಿಸ್ಸನ್ನು ಅರ್ಪಿಸುವವನು ಹೋತೃವಾದರೆ ಯಾಗದ ಮುಖಂಡತ್ವವನ್ನು ವಹಿಸುವವನು ಅಧ್ವರ್ಯು. ಯಾಗದಲ್ಲಿ ಅಧ್ವರ್ಯುಗೆ ಪ್ರಮುಖ ಸ್ಥಾನವಿದೆ. ಯಜ್ಞದಲ್ಲಿ ಅಧ್ವರ್ಯುಯಾದವನು ಉಪಯೋಗಿಸುವ ಗದ್ಯಾತ್ಮಕ ಮಂತ್ರಗಳನ್ನು 'ಯಜುಸ್' ಎಂದು ಕರೆಯುತ್ತಾರೆ.

ಯಜ್ಞದಲ್ಲಿ ಬೇರೆ ಬೇರೆ ರೀತಿಯ ನಿರ್ವಹಣೆ ಮಾಡುವವರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಋತ್ವಿಜರು–ಋಕ್ ಮಂತ್ರ ಹೇಳುವವರು. ಹೋತೃಗಳು–ಯಜ್ಞಕ್ಕೆ ಹವಿಸ್ಸು ಅರ್ಪಿಸುವವರು.

ಅನುಗ್ರಹಾರ್ಥ

ಅನುಗ್ರಹಾರ್ಥವೆಂದರೆ ಅನುಗ್ರಹದ ಕಾರಣವಾಗಿ; ತನ್ನೊಡವೆಯೆಂದರೆ ತನ್ನ ಸಂಪತ್ತು. ಇದನ್ನು ಬೇರೆಯವರಿಗೆ ಹಂಚುವುದರಿಂದ ಅನುಗ್ರಹವು ದೊರೆಯುವುದೆಂದು ಇಲ್ಲಿಯ ಅಭಿಪ್ರಾಯವಾಗಿದೆ. ಅನುಗ್ರಹವೆಂದರೆ ಅನುಕೂಲವನ್ನು ಉಂಟುಮಾಡುವುದು; ಉಪಕರಿಸು; ಅಂಗೀಕಾರ; ಒಪ್ಪಿಗೆಯೆಂದಾಗುತ್ತದೆ.ದೇವರು ಭಕ್ತರಿಗೆ ನೀಡುವುದು ಅನುಗ್ರಹ. ಇಲ್ಲಿ ನೀಡುವುದು ಎನ್ನುವುದೇ ಮುಖ್ಯ.ಈ ಸಂದರ್ಭದಲ್ಲಿ ಯಾಚಕ, ಯಾಚನೆ. ಯಾಚಿತವೇ ಮುಖ್ಯ.

ಅನುಚಿತ

ಕೊಡದೆ ಕೊಂಡೊಯ್ಯುವುದು ಅನುಚಿತ. ಉಚಿತ ಮತ್ತು ಅನುಚಿತವೆನ್ನುವುದು ಇಲ್ಲಿ ಸಾಮಾಜಿಕ ಸಂಹಿತೆಯ ಹಿನ್ನೆಲೆಯಲ್ಲಿ ಬಳಕೆಯಾಗಿದೆ. ಅನುಚಿತವೆಂದರೆ ಅಯೋಗ್ಯವೆಂಬ ಅರ್ಥವಿದೆ. ಯಾರೂ ಕೊಡದೆ ಯಾವುದನ್ನಾದರೂ ಕೊಂಡೊಯ್ಯುವುದು ಅಯೋಗ್ಯ ಕೆಲಸವೆಂದು ಹೇಳುತ್ತಾರೆ. ಔಚಿತ್ಯ ಪ್ರಜ್ಞೆಯೆಂದರೆ

ಉಚಿತಾನುಚಿತ ವಿವೇಕ. ಅಂದರೆ ಸಂದರ್ಭಕ್ಕೆ ಸರಿಯಾಗಿ ವಿವೇಕಯುತವಾಗಿ ವ್ಯವಹರಿಸುವುದು. ಕೊಡದೆ ಕೊಂಡೊಯ್ಯುವುದು ಎರಡು ಅಂಶಗಳಿಗೆ ಕಾರಣವಾಗುತ್ತದೆ: ಬಲತ್ಕಾರ ಮತ್ತು ಅಪಹರಣ. ಇನ್ನೊಂದು ಅಂಶವೆಂದರೆ – ಆಮಂತ್ರಣ ನೀಡಿದವರ ಮನೆಗೆ ಹೋಗುವುದು ಉಚಿತ. ಆಮಂತ್ರಿಸದೇ ಹೋದರೆ ಅನುಚಿತ. ಗುರುವಿನ ಗೃಹಕ್ಕೆ; ತಾಯಿಯ ಗೃಹಕ್ಕೆ; ಗಂಡನ ಗೃಹಕ್ಕೆ ಕರೆಯಬೇಕೆಂಬುದಿಲ್ಲ. ಕರೆಯದಿದ್ದರೂ ಹೋಗಬಹುದು. ಇಲ್ಲಿ ಉಚಿತ–ಅನುಚಿತವೆಂಬ ಪ್ರಶ್ನೆಯು ಬರುವುದಿಲ್ಲ. ಉಚಿತ ಮತ್ತು ಅನುಚಿತವೆನ್ನುವುದು ಸಾಮಾಜಿಕ ನಡವಳಿಕೆಯ ಸಂಹಿತೆಯಾಗಿರುವುದು ಗಮನಾರ್ಹ.

ಅನುದಿಶ

ಅನುದಿಶವೆಂದರೆ ಒಂಬತ್ತು ಗ್ರೈವೇಯಕಗಳ ಮೇಲೆ ಎಷ್ಟೋ ಯೋಜನೆಗಳ ಮೇಲ್ಭಾಗದಲ್ಲಿ ಅನುದಿಶ ವಿಮಾನಗಳ ಒಂದು ವಿಸ್ತಾರವಾದ ಗುಂಪಿದೆ (ವಿಮಾನ: ದೇವತೆಗಳ ವಾಸಸ್ಥಾನ). ಇದು ಜೈನ ಸಾಂಸ್ಕೃತಿಕ ಪರಿಕಲ್ಪನೆಯಾಗಿದೆ.

ಅನುಲೋಮ ಪ್ರತಿಲೋಮ

ಧರ್ಮಸೂತ್ರಗಳು ಅನುಲೋಮ ಒಪ್ಪಿದರೂ ಪ್ರತಿಲೋಮ (ಕೆಳಜಾತಿ ಗಂಡು ಮೇಲು ಜಾತಿ ಹೆಣ್ಣನ್ನು ಮದುವೆಯಾಗುವುದು)ವನ್ನು ತುಂಬ ಹೇಯವಾಗಿ ಕಂಡವು. ಗೌತಮನ ಪ್ರಕಾರ (IV. 27) ಶೂದ್ರ ಮತ್ತು ಮೇಲುಜಾತಿ ಹೆಣ್ಣಿನಲ್ಲಿ ಹುಟ್ಟಿದವನು 'ಪತಿತ'. ಇಂತಹ ಸಂಬಂಧದಲ್ಲೇ ಹತ್ತು ಹನ್ನೆರಡು 'ವರ್ಣ ಸಂಕರ'ದ ಜಾತಿಗಳ ಮೂಲವನ್ನು ಗುರುತಿಸಲಾಗಿದೆ. ಶೂದ್ರನಿಗೆ ಕ್ಷತ್ರಿಯಳಲ್ಲಿ ಕ್ಷತ್ಯ, ವೈಶ್ಯಳಲ್ಲಿ ಮಾಗಧ, ಬ್ರಾಹ್ಮಣಿಯಲ್ಲಿ ಚಂಡಾಲ ಹುಟ್ಟಿದರೆ (ಬೌ. ಧ. ಸೂ. I. 9.17.7 ಇತ್ಯಾದಿ), ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಗಂಡಿಗೆ ಶೂದ್ರಳಲ್ಲಿ ಹುಟ್ಟಿದ ಗಂಡಸಿಗೆ ಕ್ರಮವಾಗಿ ಪಾರಶವ, ಯವನ, ಕರಣ, ಶೂದ್ರ ಎಂಬ ಹೆಸರಿದೆ (ವಸಿಷ್ಠ IV. 21). ಬ್ರಾಹ್ಮಣನಿಗೆ ಶೂದ್ರಳಲ್ಲಿ ಹುಟ್ಟಿದವನು ನಿಷಾದ, ನಿಷಾದನಿಗೆ ಶೂದ್ರಳಲ್ಲಿ ಹುಟ್ಟಿದವನು ಪುಲ್ಕಸ, ಶೂದ್ರನಿಗೆ ನಿಷಾದಳಲ್ಲಿ ಹುಟ್ಟಿದ್ದು ಕುತ್ಕುಟಕ, ಇತ್ಯಾದಿ (ಬೌ.ಧ.ಸೂ. I. 9.7.13–14). ಹೀಗೆ ಅನುಲೋಮ ಪ್ರತಿಲೋಮಗಳಿಂದ ವರ್ಣ ಸಂಕರವಾಗಿ ಅನೇಕ ಅಸ್ಪೃಶ್ಯ ಕುಲಗಳಾದವೆಂದು ಸೂತ್ರಕಾರರ ಅಭಿಪ್ರಾಯ. ನಿಜಕ್ಕೂ ಹಿಂದುಳಿದ ಬಣ–ಬುಡಕಟ್ಟುಗಳಿಗೆ ಪಂಚಮತ್ವ ನೀಡುವ ಕಟ್ಟು ಕತೆ ಇದಾದರೂ ವರ್ಣ ಸಂಕರದಲ್ಲಿ ಹೊಸ ಜಾತಿ ಕಲ್ಪಿಸುವ ಈ ಮಾದರಿ ಇತ್ತೀಚಿನವರೆಗೂ ಬಳಕೆಯಲ್ಲಿತ್ತು.

ವಿವರಗಳಿಗೆ ನೋಡಿ: ನಿಯೋಗ; ಪಾಣಿಗ್ರಹಣ

ಪಿ.ವಿ. ಕಾಣೆ 1980 ಧರ್ಮಶಾಸ್ತ್ರದ ಇತಿಹಾಸ

ಆರ್. ಎಸ್. ಶರ್ಮ 2004 ಪ್ರಾಚೀನ ಭಾರತದಲ್ಲಿ ಶೂದ್ರರು

ಅನೈತಿಕ ಸಂಬಂಧಗಳು

ಮದುವೆಯಾಗುವ ಮೊದಲೇ ಪ್ರಿಯಕರನನ್ನು ಸೇರುವುದು ಅಪರಾಧ ಎನ್ನುವ ಮನೋಭಾವವು ವೈದಿಕ ಮತದ ಪ್ರಾಬಲ್ಯದಿಂದ ಉಂಟಾದುದು ಎಂದು ತಿಳಿದು ಬರುತ್ತದೆ. ಇದಕ್ಕೆ ಅನುಗುಣವಾಗಿದೆ. ಅನೈತಿಕತೆಯು ಸಾಮಾಜಿಕ ನಂಬಿಕೆಯಾಗಿದೆ. ನೀತಿ ಅನೀತಿಯ ಕುರಿತ ನಂಬಿಕೆಗಳು ಬೇರೆ ಬೇರೆ ಸಮಾಜದಲ್ಲಿ ಬೇರೆ ಬೇರೆ ರೀತಿಯಲ್ಲಿ ಇರುತ್ತದೆ. ಯಾವುದನ್ನು ಒಂದು ಸಮಾಜವು ಒಪ್ಪಿಕೊಂಡಿರುತ್ತದೆಯೋ ಅದನ್ನು ನೀತಿಯೆಂದು, ಅದನ್ನು ಹೊರತು ಪಡಿಸಿದ್ದು ಅನೀತಿಯೆಂದು ಕರೆಯಲಾಗುತ್ತದೆ. ನೀತಿ ಮತ್ತು ಅನೀತಿಗಳ ನಡುವಣ ಗೆರೆಯು ಮಾತ್ರ ತೆಳುವಾಗಿದೆ.

ಅನ್ವಯ

ಅನ್ವಯವೆಂದರೆ ವಂಶ ಅಥವಾ ಕುಲ. ನಾವು ವಂಶ ಮತ್ತು ಕುಲವನ್ನು ಒಂದೇ ಅರ್ಥದಲ್ಲಿ ಬಳಸುತ್ತೇವೆ. ಆದರೆ ವಂಶವೆಂಬುದಕ್ಕೆ ಸಾಮಾಜಿಕ ಮಾನ್ಯತೆಯು ಒಂದು ರೀತಿಯಲ್ಲಿದ್ದರೆ ಕುಲದ ಸಾಮಾಜಿಕ ಮಾನ್ಯತೆಯು ಮತ್ತೊಂದು ರೀತಿಯಲ್ಲಿರುತ್ತದೆ. ಮಾದಿಗಕುಲ, ಚಾಂಡಾಲಕುಲವೆಂದು ಕರೆಯುತ್ತೇವೆ. ಇಲ್ಲಿ ವಂಶವೆಂಬ ಪದವು ಬಳಕೆಯಲ್ಲಿಲ್ಲ. ಆದರೆ ಬ್ರಾಹ್ಮಣರಲ್ಲಿ ಕುಲ ಪದ್ಧತಿಯಲ್ಲಿ ಗೋತ್ರ ಪದ್ಧತಿಯಿದೆ. ಅದೇ ರೀತಿ ರಾಜರ ಕುರಿತು ಹೇಳುವಾಗ ಅದರ ವಂಶಾವಳಿಗಳನ್ನು ಹೇಳುತ್ತವೆ. ಸಾಮಾನ್ಯವಾಗಿ ಇದು ಶಾಸನಗಳಲ್ಲಿ ಕಂಡು ಬರುತ್ತದೆ. ವಂಶದ ಕುರಿತು ಹೇಳುವಾಗ ಅಗ್ಗಳಿಕೆಯ ಮಾತುಗಳು ಕೂಡಾ ಬರುತ್ತವೆ..

ವಾಕ್ಯದಲ್ಲಿ ಕರ್ತೃ ಕರ್ಮ ಕ್ರಿಯಾಪದಗಳಿಗೆ ಮತ್ತು ಅವುಗಳ ವಿಶೇಷಣಗಳಿಗಿರುವ ಕ್ರಮವಾದ ಸಂಬಂಧವನ್ನು ಅನ್ವಯವೆಂದು ಕರೆಯುತ್ತಾರೆ.

ಅನ್ವಯವೆಂದರೆ ಹೊಂದಿಕೆ, ಹೊಂದಾವಣೆ, ಸಂಬಂಧ ಅನುಸರಿಸಿ ನಡೆಯುವುದು. ಆಧುನಿಕ ವಿಮರ್ಶೆಯಲ್ಲಿ ಅನ್ವಯವನ್ನು ಅನುಸಂಧಾನವೆಂಬ ಅರ್ಥದಲ್ಲಿ ಬಳಸಲಾಗಿದೆ. ಒಂದು ಜ್ಞಾನ ಶಿಸ್ತನ್ನು ಮತ್ತೊಂದು ಜ್ಞಾನ ಶಿಸ್ತಿಗೆ ಅನ್ವಯಿಸುವುದು ಆನ್ವಯಿಕವಾಗಿರುತ್ತದೆ.

ವಿವರಗಳಿಗೆ ನೋಡಿ: ಬಿ.ಎ. ವಿವೇಕ ರೈ – ಆನ್ವಯಿಕ ಜಾನಪದ

ಅಪರಾಧ

ರಾಜನು ಜನರ ಅಪರಾಧದ ಪ್ರಮಾಣ ಸ್ವರೂಪಗಳನ್ನು, ಅದರ ದಂಡನೆಯ ತೂಕವನ್ನು ಶಾಸ್ತ್ರದಿಂದ ವಿಮರ್ಶಿಸಿ ನ್ಯಾಯವಾಗಿ ವಿನಿಯೋಗಿಸಬೇಕು ಎಂದು ಮನು ಹೇಳುತ್ತಾನೆ.

ಆ ದಂಡವು ರಾಜನು, ಗಂಡಸು, ನಾಯಕ, ಶಾಸಕ, ಸಕಲ ಧರ್ಮಗಳಿಗೂ ಹೊಣೆ ಆಗಿದೆ. ದಂಡವಿಲ್ಲದೆ ಹೋದರೆ ರಾಜನು ರಾಜನಲ್ಲ. ಇತರ ಅವನ ಪರಿಕರವೂ ವೃಥಾ.

ವಿಚಾರಪೂರ್ವಕ ಕೆಲಸ ಮಾಡುವ ಪ್ರಜ್ಞೆಯಿರುವ ಧರ್ಮ, ಅರ್ಥ, ಕಾಮಗಳ ಸಾಧನೆಗೆ ನಿಪುಣನಾದ ರಾಜನು ಅಂತಹ ದಂಡವನ್ನು ಪ್ರಯೋಗಿಸಬೇಕು, ಎಂದು ಮನು ಮುಂತಾದ ಧರ್ಮಜ್ಞರು ಹೇಳುತ್ತಾರೆ.

ಹಿಂದೆ ವರ್ಗ ಭೇದಗಳನ್ನು ಪರಿಗಣಿಸದೆ ಇರುವ ಬಣೀಯ ನ್ಯಾಯ ಪದ್ಧತಿಯು ಅನುಷ್ಠಾನದಲ್ಲಿತ್ತು. ಆದರೆ ಈಗ ಸಮುದಾಯವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳಾಗಿ ವಿಂಗಡಗೊಂಡಿತ್ತು. ಆದ್ದರಿಂದ ಧರ್ಮಶಾಸ್ತ್ರಗಳು ಪ್ರತಿಯೊಂದು ವರ್ಣದ ಕರ್ತವ್ಯಗಳನ್ನೂ ಮತ್ತು ವರ್ಣ ವಿಭಜನೆಯ ಆಧಾರದ ಮೇಲಿನ ಪೌರ ಅಪರಾಧ ಕಾಯಿದೆಗಳನ್ನೂ ರೂಪಿಸಿದವು. ವರ್ಣವು ಉನ್ನತವಾದಷ್ಟೂ ಉನ್ನತ ಮಟ್ಟದ ನೈತಿಕ ನಡವಳಿಕೆಯು ಅವರಿಂದ ನಿರೀಕ್ಷಿಸಲ್ಪಟ್ಟಿತು. ಶೂದ್ರರ ಮೇಲೆ ಹಲವು ಹತ್ತು ಅನರ್ಹತೆಗಳು ವಿಧಿಸಲ್ಪಟ್ಟುವು. ಮತಧಾರ್ಮಿಕ ಹಾಗೂ ನ್ಯಾಯಶಾಸ್ತ್ರೀಯವಾಗಿ ಅವರ ಹಕ್ಕುಗಳು ಕಸಿಯಲ್ಪಟ್ಟು ಅವರು ಸಮಾಜದ ಅತ್ಯಂತ ಕೆಳ ಹಂತಕ್ಕೆ ತಳ್ಳಲ್ಪಟ್ಟರು. ಅವರು ಉಪನಯನ ವಿಧಿಯನ್ನು ಪಡೆಯುವಂತಿರಲಿಲ್ಲ. ಬ್ರಾಹ್ಮಣರು ಹಾಗೂ ಇತರ ಮೇಲುವರ್ಣಗಳ ವಿರುದ್ಧವಾಗಿ ಅವರು ಮಾಡುವ ಅಪರಾಧಗಳಿಗಾಗಿ ತೀವ್ರತರ ಶಿಕ್ಷೆಗಳನ್ನು ನೀಡುತ್ತಿದ್ದರು. ಪ್ರತಿಯಾಗಿ ಶೂದ್ರರ ವಿರುದ್ಧವಾದ ಅಪರಾಧಕ್ಕೆ ಹಗುರವಾದ ಶಿಕ್ಷೆಗಳನ್ನು ದೊರೆಯುತ್ತಿದ್ದುವು. ಧರ್ಮಶಾಸ್ತ್ರಕಾರರು, ಶೂದ್ರರು ಸೃಷ್ಟಿಕರ್ತನ ಪಾದಗಳಿಂದ ಹುಟ್ಟಿದವರು ಎಂಬ ಕಟ್ಟುಕಥೆಯನ್ನು ಹರಡಿದರು. ಇದರಿಂದಾಗಿ ಮೇಲುವರ್ಣದವರು, ಅವರಲ್ಲಿಯೂ ಮುಖ್ಯವಾಗಿ ಬ್ರಾಹ್ಮಣರು ಶೂದ್ರರ ಸಹವಾಸವನ್ನು ತುಚ್ಛವಾಗಿ ಪರಿಗಣಿಸಿ, ಅವರು ಮುಟ್ಟಿದ ಆಹಾರವನ್ನೂ ಹಾಗೂ ಅವರೊಂದಿಗೆ ವಿವಾಹ ಬಾಂಧವ್ಯವನ್ನೂ ನಿರಾಕರಿಸತೊಡಗಿದರು. ಶೂದ್ರನನ್ನು ಉನ್ನತ ಸ್ಥಾನಗಳಿಗೆ ನೇಮಿಸುವಂತಿರಲಿಲ್ಲ. ಅದಕ್ಕಿಂತ ಮಿಗಿಲಾಗಿ ಶೂದ್ರನು ಜೀತಗಾರನಾಗಿ, ಕಸುಬುಗಾರನಾಗಿ ಹಾಗೂ ಕೃಷಿ ಕಾರ್ಮಿಕನಾಗಿ ದ್ವಿಜರ ಅಂದರೆ ಮೇಲು ವರ್ಣಗಳವರ ಸೇವೆ ಮಾಡಬೇಕೆಂದು ಹೇಳಲಾಯಿತು. ಈ ಸಂಬಂಧವಾಗಿ ಜೈನ ಮತ್ತು ಬೌದ್ಧಮತಗಳು ಸಹ ಅವರ ಪರಿಸ್ಥಿತಿಯನ್ನು ಸುಧಾರಿಸಲಿಲ್ಲ. ಆ ಹೊಸ ಮತಧರ್ಮಗಳ ಮಠಗಳಿಗೆ ಅವರುಗಳು ಸೇರಿಕೊಳ್ಳಬಹುದಾಗಿತ್ತಾದರೂ ಸಾಮಾನ್ಯರ ಸ್ಥಿತಿ ಹೀನವಾಗಿಯೇ ಉಳಿಯಿತು. ಗೌತಮ ಬುದ್ಧನು ಬ್ರಾಹ್ಮಣರ, ಕ್ಷತ್ರಿಯರ ಹಾಗೂ ಗೃಹಪತಿಗಳ ಅಥವಾ ವೈಶ್ಯರ ಸಮಾವೇಶಗಳಲ್ಲಿ ಪಾಲುಗೊಂಡನೆಂಬುದು ಹೇಳಲ್ಪಟ್ಟಿದ್ದರೂ, ಶೂದ್ರರ ಸಮಾವೇಶದ ಪ್ರಸ್ತಾಪವೇ ಬರುವುದಿಲ್ಲ. ಅಪರಾಧಗಳಿಗೂ ಶಿಕ್ಷೆಗಳಿದ್ದವು:

ಪೌರ ಹಾಗೂ ಅಪರಾಧ ಕಾಯಿದೆಗಳನ್ನು ರಾಜನ ನಿಯೋಗಿಗಳು ಜಾರಿ ಮಾಡುತ್ತಿದ್ದರು. ಅವರು ವಿಧಿಸುತ್ತಿದ್ದ ಶಿಕ್ಷೆಗಳು ಚಾವಟಿಯೇಟು, ಶಿರಚ್ಛೇದನ, ನಾಲಗೆ ಹರಿಯುವುದು ಮುಂತಾದ ಒರಟು ಹಾಗೂ ಕ್ರೂರವಾದಂತಹವು. ಹಲವು ಸಂದರ್ಭಗಳಲ್ಲಿ ಪಾತಕ ಕೃತ್ಯಗಳಿಗೆ ನೀಡುತ್ತಿದ್ದ ಶಿಕ್ಷೆ ಸೇಡಿನ ಮನೋಭಾವದ್ದಾಗಿತ್ತು.

ಇದು ಪ್ರಾಚೀನ ರಾಜಕೀಯ ವ್ಯವಸ್ಥೆಯನ್ನು ಸಂಕೇತಿಸುತ್ತದೆ.

ವಿವರಗಳಿಗೆ ನೋಡಿ: ಆರ್. ಎಸ್. ಶರ್ಮ 1997 ಪ್ರಾಚೀನ ಭಾರತ ಪುಟ. 126–127

ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ 1999 ಶ್ರೀವತ್ಸ ನಿಘಂಟು ಪುಟ. 24–25

ಎಚ್. ತಿಪ್ಪೇರುದ್ರಸ್ವಾಮಿ 2007 ಕರ್ಣಾಟಕ ಸಂಸ್ಕೃತಿ ಸಮೀಕ್ಷೆ ಪುಟ. 187

ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 7–16

ಅಪಸಿದ್ಧಾಂತ

ಪರಲೋಕ ಎಲ್ಲಿಂಯಾದರೂ ಸಿಕ್ಕಿತೋ ಇಲ್ಲವೋ ಎಂಬ ಸಂದೇಹವಿರುವುದಾದರೆ ಬುದ್ಧಿವಂತರಾದವರು ಪಾಪಕರ್ಮಗಳಲ್ಲಿ ನಿರತರಾಗಿರಬಾರದು. ಪರಲೋಕವು ಇಲ್ಲದಿದ್ದರೂ ಅಧರ್ಮವನ್ನು ತ್ಯಜಿಸುವುದರಿಂದ ಆಗುವ ಹಾನಿ ಏನು? ಏನು ಮಾಡಿದರೂ ಪರಲೋಕವಿಲ್ಲ ಎನ್ನುವ ನಾಸ್ತಿಕನು ಕೆಡುವನು. ಪರವುಂಟಾದಲ್ಲಿ ನಿಷ್ಫಲವಾಗಿ ಕೆಡುವುದು. ಧರ್ಮಪರನಾದವನು ಪರವಿದ್ದರೂ ಇಲ್ಲದಿದ್ದರೂ ಕೆಡನು ಎಂದು ಪಂಚತಂತ್ರದಲ್ಲಿ ಬರುತ್ತದೆ. ಸಂದೇಹವಾದಿಗಳನ್ನು ಮತ್ತು ಪರಲೋಕವಿಲ್ಲವೆನ್ನುವವರನ್ನು (ನಾಸ್ತಿಕರನ್ನು) ಅಪಸಿದ್ಧಾಂತಿಗಳು ಎಂದು ಕರೆಯುತ್ತಾರೆ. ಒಂದು ಸಿದ್ಧಾಂತಕ್ಕೆ ವಿರುದ್ಧವಾದುದನ್ನು ಅಪಸಿದ್ಧಾಂತವೆಂದು ಕರೆಯಲಾಗಿರುವುದು ಗಮನಾರ್ಹ.ಇದನ್ನು ಸಾಮಾಜಿಕವಾಗಿ ಅಡ್ಡದಾರಿಯೆಂದೂ ಕರೆಯುತ್ತಾರೆ.

ಅಪಹಾರತೂರ್ಯ

ಯುದ್ಧವನ್ನು ನಿಲ್ಲಿಸಲು ಸೂಚಿಸುವ ಕೊಂಬಿನ ಶಬ್ದವನ್ನು ಅಪಹಾರ ತೂರ್ಯವೆಂದು ಹೇಳುತ್ತಾರೆ.

ಯುದ್ಧವನ್ನು ನಿಲ್ಲಿಸಲು ಕೂಡಾ ಕೆಲವು ಸಂಕೇತಗಳಿದ್ದವು. ಕೊಂಬಿನ ಶಬ್ದ ಯುದ್ಧ ನಿಲ್ಲಿಸಲು ಕೊಡುವ ಒಂದು ಸೂಚನೆ. ಯುದ್ಧದ ಪ್ರಾರಂಭ ಮತ್ತು ಯುದ್ಧದ ಅಂತ್ಯಕ್ಕೆ ಕಹಳೆಯನ್ನೋ ಶಂಖವನ್ನೋ ಊದುವುದು ಸೂಚನೆಗಳಾಗಿವೆ. ಕೃಷ್ಣ ಯುದ್ಧ ಪ್ರಾರಂಭದಲ್ಲಿ ಪಾಂಚಜನ್ಯವನ್ನು ಊದಿರುವುದು ಸುಪ್ರಸಿದ್ಧವಾಗಿದೆ.

ಭಗವದ್ಗೀತೆಯಲ್ಲಿಯೂ ಇದರ ಉಲ್ಲೇಖ ಬರುತ್ತದೆ. ಶಂಖ: ಕಹಳೆ: ಭೇರಿ: ಪಣವ: ಝುಲ್ಲರೀ ಮೃದಂಗಗಳು ಯುದ್ಧ ಸಮಯದಲ್ಲಿ ಬಳಕೆಯಲ್ಲಿದ್ದವು ಎಂಬುದು ಗಮನಾರ್ಹ.

ವಿವರಗಳಿಗೆ ನೋಡಿ: ಡಾ. ಆರ್. ಶೇಷಶಾಸ್ತ್ರಿ 2004 ಕರ್ನಾಟಕದ ವೀರಗಲ್ಲುಗಳು ಪುಟ. 219

ಅಪುತ್ರಸ್ಯಗತಿರ್ನಾಸ್ತಿ

ಸತ್ತ ಮೇಲೆ ಮಗನು ತಂದೆ-ತಾಯಿಯರಿಗೆ ತಿಥಿ ಕರ್ಮಾದಿಗಳನ್ನು ಮಾಡುತ್ತಾನೆ. ಆಗ ಅವನು ಪಿಂಡ ಪ್ರಧಾನ ಮಾಡುತ್ತಾನೆ. ಪಿಂಡ ಪ್ರಧಾನ, ಮತ್ತು ತಿಲಾಂಜಲಿಗಳಿಂದ ಪಿತೃ-ಪಿತಾಮಹರು ಸ್ವರ್ಗ ಸೇರುತ್ತಾರೆ ಎಂಬ ನಂಬಿಕೆಯಿದೆ. ಪುತ್ರನು ಪಿಂಡ ಪ್ರಧಾನ ಮತ್ತು ತಿಲಾಂಜಲಿಯಿಂದ ಪಿತೃಗಳಿಗೆ ಗತಿಯನ್ನು ಕಾಣಿಸುವುದರಿಂದ ಅವನನ್ನು ಪಿತೃಗಳಿಗೆ ಗತಿಯನ್ನು ಕಾಣಿಸುವವನು ಎಂಬರ್ಥದಲ್ಲಿಯೇ ಕರೆಯಲಾಗಿದೆ. ಇನ್ನೊಂದರ ಪ್ರಕಾರ (ಗರುಡ ಪುರಾಣ) 'ಪುಂ' ಎಂಬ ನರಕದಿಂದ ಪಾರುಮಾಡುವವನೇ ಪುತ್ರ.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ

ಅಪೂರ್ವ

ಹೊಸದು. ಈ ತನಕ ನೋಡದಿರುವಂಥದ್ದು ನಮ್ಮ ಎಲ್ಲಾ ಸಂವೇದನೆಗಳಿಗೂ ಮೀರಿದ್ದು.

ಅಪ್ರಧಾನ

ದ್ವಿತೀಯ. ಪ್ರಧಾನ (ಮುಖ್ಯ) ಅಲ್ಲದಿರುವುದು. ಪ್ರಧಾನವೆಂದರೆ ಪ್ರಮುಖನಾದವನು. ಅದರಲ್ಲಿಯೂ ಅರಸೊತ್ತಿಗೆಯಲ್ಲಿ ಯಾರು ಪ್ರಮುಖರೆನಿಸಿದ್ದಾರೋ ಅವರನ್ನು ಪ್ರಧಾನರೆಂದು ಕರೆಯುತ್ತಿದ್ದರು. ಅಪ್ರಧಾನರೆಂದರೆ ರಾಜಕೀಯದಲ್ಲಿ ಅಷ್ಟೇನೂ ಪ್ರಮುಖರಲ್ಲವೆಂದರ್ಥ. ದೇವಸ್ಥಾನಗಳಲ್ಲಿ ಈಗಲೂ ಪ್ರಧಾನರು ಅಂತಲೇ ಇದ್ದಾರೆ. ದೇವಸ್ಥಾನದ ಆಗು ಹೋಗುಗಳನ್ನು ನೋಡುವುದು ಪ್ರಧಾನರ ಕೆಲಸ.

ಅಪ್ರಾಸುಕ

ಪ್ರಾಸುಕ=ಶುದ್ಧ ಅಪ್ರಾಸುಕ=ಅಶುದ್ಧ

ಜೀವಿಗಳು ಉತ್ಪನ್ನವಾಗಿರುವ ಹೂ, ಹಣ್ಣು, ನೀರು ಮುಂತಾದ ಪದಾರ್ಥಗಳುಳ್ಳದ್ದು; ಅಶುದ್ಧವಾದ ಇಂತಹ ಪ್ರದೇಶಗಳಲ್ಲಿ ಮುನಿಗಳು ನಡೆದಾಡುವುದಿಲ್ಲ ಎನ್ನುವುದು ಜೈನ ಧರ್ಮದ ನಂಬಿಕೆ.

ಸಾಮಾಜಿಕವಾಗಿ ಪವಿತ್ರ–ಅಪವಿತ್ರವೆಂಬ ಸಂಗತಿಯನ್ನು ಇದು ನಿರೂಪಿಸುತ್ತದೆ.

ಅಬ್ರಹ್ಮಣ್ಯಂ

ಅಬ್ರಹ್ಮಣ್ಯಂ ಎಂಬ ಶಬ್ದವನ್ನು ಬ್ರಾಹ್ಮಣರು ಆಪತ್ಕಾಲದಲ್ಲಿ ಬಳಸುತ್ತಾರೆ. ಇವನು ಕೊಲ್ಲಲ್ಪಡತಕ್ಕವನಲ್ಲ ಎಂದು ಅರ್ಥ. "ಅಬ್ರಹ್ಮಣ್ಯಮವಧ್ಯೋಕ್ತೌ" (ಅಮರ ಕೋಶ)

"ವರ್ಣದ ಮೊದಲಲ್ಲಿ ಉಚ್ಚನಾಗಿ ಬ್ರಾಹ್ಮಣನಿದ್ದರೂ ಅವನ ವೀರತ್ವದ, ಪೌರುಷದ ಬಗ್ಗೆ ಒಂದು ರೀತಿಯ ತಿರಸ್ಕಾರ ಭಾವ ಅಂದಿನ ಜನತೆಗೆ ಇದ್ದಂತೆ ತೋರುತ್ತದೆ. ಅಂದ ಮಾತ್ರಕ್ಕೆ ಬ್ರಾಹ್ಮಣರು ಯಾರೂ ಯುದ್ಧ ಮಾಡುತ್ತಿರಲಿಲ್ಲ ಎಂಬ ಅರ್ಥವಲ್ಲ. "ಬ್ರಾಹ್ಮಣರು ಕೈಯಲ್ಲಿ ಕತ್ತಿಗಳನ್ನು ಹಿಡಿಯುತ್ತಿದ್ದರು. ದಾನಕ್ಕೆ ಯುದ್ಧಕ್ಕೆ ಕ್ಷತ್ರಿಯರೇ ಸಮರ್ಥರು,

ನಿಘಂಟುವಿನ ಪ್ರಕಾರ ಅವಧ್ಯ, ಕೊಲ್ಲಲಾಗದ ವ್ಯಕ್ತಿ ಬ್ರಾಹ್ಮಣ. ಬ್ರಾಹ್ಮಣರ ಶ್ರೇಷ್ಠತೆಯನ್ನು ಸಾರಲು ಈ ವಾಕ್ಯ ಹುಟ್ಟಿರಬೇಕು.

ವಿವರಗಳಿಗೆ ನೋಡಿ: ಡಾ. ಆರ್. ಶೇಷಶಾಸ್ತ್ರಿ 2004 ಕರ್ನಾಟಕದ ವೀರಗಲ್ಲುಗಳು
ಪುಟ. 30.

ಅಭಕ್ಷ್ಯ

ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯ, ಪಾನೀಯ, ಅತಿರಥ, ಹೋಳಿಗೆ, ಲಡ್ಡು, ಜಿಲೇಬಿ, ಅಪ್ಪಂ ಭಕ್ಷ್ಯಗಳು.

ಅಭಕ್ಷ್ಯವೆಂದರೆ ತಿನ್ನಬಾರದ ಪದಾರ್ಥಗಳು – ಜೇನು: ಅತ್ತಿಹಣ್ಣು, ಅರಳಿಹಣ್ಣು, ಆಲದಹಣ್ಣು, ಹಲಸಿನ ಹಣ್ಣು, ಬಸರಿಮರದ ಹಣ್ಣು. ಇವುಗಳನ್ನು ಉಪಯೋಗಿಸುವುದು.

ಜೈನಧರ್ಮದ ಪ್ರಕಾರ ಇವು ಪಾಪ ಮತ್ತು ಹೊಲಸು. ಮುಂದೆ ಮುನಿ ಅಥವಾ ಸಾಧುವಾಗಲಿರುವ ಜೈನ ನೈಷ್ಠಿಕ ಶ್ರಾವಕರು ಇಂತಹ ಪಾಲ್ಮರದ ಹಣ್ಣುಗಳನ್ನು ಸೇವಿಸಬಾರದೆಂದು ವಿಧಿಸಲಾಗಿದೆ: ಸೇವಿಸಬಹುದಾದುದು ಸೇವಿಸಲಾಗದ್ದು ಎಂಬ ವರ್ಗೀಕರಣವು ಇಲ್ಲಿ ಗಮನಾರ್ಹ.

ವಿವರಗಳಿಗೆ ನೋಡಿ: ಪಾಪ–ಪುಣ್ಯ

ಅಭಯ

ಭಯ ಎಂದರೆ ಹೆದರಿಕೆ. ಅಭಯವೆಂದರೆ ಹೆದರಿಕೆಯಿಲ್ಲದಿರುವುದು. "ಅಭಯವನೀಡೆ" ಎಂಬಂಥ ವಾಕ್ಯಗಳು ಹಳೆಗನ್ನಡ ಕಾವ್ಯಗಳಲ್ಲಿ ಹೇರಳವಾಗಿ ಬಂದಿವೆ. ಆಧ್ಯಾತ್ಮಿಕ ಸಾಧನೆಯಿಂದ ಆಂತರಿಕ – ಬಾಹ್ಯ ಹೆದರಿಕೆಯು ಇಲ್ಲವಾಗುತ್ತದೆ. ಅಭಯ ಮುದ್ರೆಯು ಸಂಕೇತವಾಗಿದೆ. ಆಶೀರ್ವದಿಸುವಂತೆ ಕೈಮುದ್ರೆ ಸೂಚಿಸುವುದು

ಅಭಯದ ಸಂಕೇತ. ಅದ್ವೈತ ವೇದಾಂತದ ಪ್ರಕಾರ ಅಭಯವೆಂದರೆ ಮೋಕ್ಷ, ಅಂಗೈಯನ್ನು ಆಶೀರ್ವದಿಸುವಂತೆ ಬಳಸುವ ಮುದ್ರೆಯು ಅಭಯವನ್ನು ಸೂಚಿಸುತ್ತದೆ. ದೈವ, ದೇವರು, ಋಷಿಗಳು ಈ ಮುದ್ರೆಯನ್ನು ಬಳಸುತ್ತಾರೆ. ಯಾವುದೇ ರೀತಿಯ ಭಯವು ಅಗತ್ಯವಿಲ್ಲ. ಭಯಕ್ಕೆ ತಳಹದಿಯಿಲ್ಲ ಎಂದು ಅಭಯವು ಹೇಳುತ್ತದೆ.

ದಾನಗಳಲ್ಲಿ ಅಭಯ ದಾನವೂ ಒಂದೆಂಬುದನ್ನು ಗಮನಿಸಬೇಕು. ಅಭಯದ ಮುದ್ರೆಯು ಸಾಮಾನ್ಯವಾಗಿ ಮೂರ್ತಿ ಶಿಲ್ಪದಲ್ಲಿ ಕಾಣಬಹುದು. ಅಭಯವು ಶಂಕೆಯನ್ನು ದೂರ ಮಾಡುತ್ತದೆ. ಎರಡನೆಯದಾಗಿ ಅಭಯ ನಮ್ಮಲ್ಲಿ ಸುರಕ್ಷತೆಯ ಭಾವನೆಯನ್ನು ನೀಡುತ್ತದೆ. ವಿಧಿವಾದಿಗಳು ದೈವ/ದೇವತೆಯರ ಅಭಯವನ್ನು ನಿರೀಕ್ಷಿಸುತ್ತಾರೆ. ಇದಕ್ಕೆ ಬೇಕಾದ ಆಚರಣೆಯ ವಿಧಿಗಳಾದ ಪೂಜೆ, ಉಪವಾಸವ್ರತ, ಇತ್ಯಾದಿಗಳನ್ನು ಅವಲಂಬಿಸುತ್ತಾರೆ. ಒಂದರ್ಥದಲ್ಲಿ ನಿರಾಹಾರ ಸೇವನೆಯೂ ಸಮಾಧಿ ಮರಣವು ವಿಧಿವಾದವೇ. ಯಾರು ವಿಧಿವಾದವನ್ನು ನಿರಾಕರಿಸುತ್ತಾರೋ ಅವರನ್ನು ನಾಸ್ತಿಕರು ಎಂದು ಕರೆಯುತ್ತಾರೆ. ನಾಸ್ತಿಕರು ಮೂಲತಃ ನಂಬುವುದು ಆತ್ಮಸ್ಥೈರ್ಯವನ್ನು ಎಂಬುದನ್ನು ಗಮನಿಸಬೇಕು. ಮಗುವಿಗೆ ತಾಯಿಯ ತೊಡೆಯ ಮೇಲೆ ಮಲಗಿಕೊಂಡಿರುವುದು ಸುರಕ್ಷಿತಭಾವನೆಯನ್ನು ಕೊಡುತ್ತದೆ. ಆದುದರಿಂದ ಎಲ್ಲಾ ಸ್ತ್ರೀದೇವತೆಯರನ್ನು ಅಮ್ಮ ಎಂದು ಕರೆಯುತ್ತಾರೆ. ತಾಯಿಯ ಮಡಿಲು ಕೂಡಾ ಮಗುವಿಗೆ ಅಭಯವಾಗಿರುತ್ತದೆ.

ವಿವರಗಳಿಗೆ ನೋಡಿ: ಬಾದುಬ್ಬೆ; ಮಾತೃದೇವತೆಯರು.

ಅಭವ

ಅಭವವೆಂದರೆ ಹುಟ್ಟಿಲ್ಲದವನು. ಅವನನ್ನು ಈಶ್ವರನೆಂದು ಕರೆಯುತ್ತಾರೆ. ಭವವೆಂದರೆ ಹುಟ್ಟು, ಅಭವವೆಂದರೆ ಹುಟ್ಟಿಲ್ಲದವನು ಎಂದರ್ಥ.

ಅಭಾವ

ಅಸ್ತಿತ್ವದಲ್ಲಿರುವುದು: ಗೈರುಹಾಜರಿ, ನಿರಾಕರಣೆ, ಏನೂ ಆಗದಿರುವುದು, ಏನು ಅಲ್ಲದಿರುವುದು.

೧. ನ್ಯಾಯ, ವೈಶೇಷಿಕ, ಭಟ್ಟಾಮೀಮಾಂಸಾ, ದ್ವೈತ ವೇದಾಂತದಲ್ಲಿ ಅಸ್ತಿತ್ವಗಳಿಗೆ ಬೇರೆ ಬೇರೆ ರೂಪಗಳಿರುತ್ತವೆ. ಅವುಗಳು ವರ್ಗೀಕರಣಗಳಿಗೆ ಗುರಿಯಾಗುತ್ತದೆ. ಬೌದ್ಧ ಪಂಥದಲ್ಲಿ, ಪ್ರಭಾಕರ ಮೀಮಾಂಸೆಯಲ್ಲಿ ವೇದಾಂತದಲ್ಲಿ ಅಭಾವದ ಕುರಿತ ಚರ್ಚೆಗಳು ಬರುತ್ತದೆ.

೨. ಅಸ್ತಿತ್ವದಲ್ಲಿ ಇಲ್ಲದಿರುವಿಕೆಯು ಮೂರು ರೀತಿಯಲ್ಲಿರುತ್ತದೆ.

ಅ) ಸಂಸರ್ಗ ಅಭಾವ – ಮೊದಲು ಅಸ್ತಿತ್ವದಲ್ಲಿ ಇಲ್ಲದಿರುವುದರ ಅಭಾವ.

ಆ)　ಪ್ರಾದ್ವಂಶ ಅಭಾವ – ಅಸ್ತಿತ್ವ ಚಾಂಚಲ್ಯತೆ.

ಇ)　ಅತ್ಯಂತ ಅಭಾವ – ಯಾವುದೂ ಇಲ್ಲದಿರುವುದು.

ಇವು ಮೂರು ಸಂಸರ್ಗ ಅಭಾವಕ್ಕೆ ಸೇರಿರುತ್ತದೆ. ಮತ್ತೊಂದು ರೀತಿಯ ಅಭಾವವಿದೆ. ಅನೋನ್ಯಭಾವ ಅಂದರೆ ಪರಸ್ಪರ ಸಂಬಂಧ ಸಹಯೋಗ ಇಲ್ಲದಿರುವುದರಿಂದ ಅನ್ಯೋನ್ಯ ಅಭಾವ ಹುಟ್ಟಿಕೊಳ್ಳುತ್ತದೆ. ಅಭಾವ ಎನ್ನುವ ಪದವು ಈಗಲೂ ಇದೇ ಅರ್ಥದಲ್ಲಿ ಬಳಕೆಯಾಗುತ್ತದೆ.

ಎಲ್ಲ ನಿಷೇಧಾತ್ಮಕ ಸಂಗತಿಗಳನ್ನೂ ಒಳಗೊಳ್ಳುವ ಪದಾರ್ಥ "ಅಭಾವ". 'ಭಾವ'ಕ್ಕಿಂತ ಭಿನ್ನವಾಗಿ 'ಅಭಾವ'ವುಂಟೆಂಬುದನ್ನು ಅಲ್ಲಗಳೆಯುವಂತಿಲ್ಲ. ಒಂದು ವಸ್ತು ಯಾವುದೋ ಒಂದು ಸಮಯದಲ್ಲಿ ಎಲ್ಲಿಯೋ ಒಂದು ಕಡೆ ಇರುವುದಿಲ್ಲವೆನ್ನುವುದೂ ಮತ್ತೊಂದು ವಸ್ತು ಅಲ್ಲಿರುವುದು ಎಷ್ಟು ನಿಜವೋ ಅಷ್ಟೇ ನಿಜ. ನಾಲ್ಕು ಬಗೆಯಾದ ಅಭಾವಗಳಿಗೆ – 'ಪ್ರಾಗಭಾವ', 'ಪ್ರಧ್ವಂಸಾಭಾವ', 'ಅತ್ಯಂತಾಭಾವ' ಮತ್ತು 'ಅನ್ಯೋನ್ಯಾಭಾವ', ಒಂದು ವಸ್ತುವಿನ ಉತ್ಪತ್ತಿಗೂ ಮುಂಚೆ ಕಾರಣದಲ್ಲಿ ಕಾರ್ಯದ ಪ್ರಾಗಭಾವ. ಉದಾಹರಣೆಗೆ – ಕಾರ್ಯ ಹುಟ್ಟುವುದಕ್ಕೂ ಮುಂಚೆ ಕಾರಣದಲ್ಲಿ ಕಾರ್ಯದ ಪ್ರಾಗಭಾವವಿರುತ್ತದೆ. ಉತ್ಪತ್ತಿಯ ನಂತರ ವಸ್ತು ನಾಶವಾಗಿಬಿಟ್ಟಾಗ ಉಂಟಾಗುವ ಅಭಾವ 'ಪ್ರಧ್ವಂಸಾಭಾವ', ಉದಾಹರಣೆಗೆ – ಗಡಿಗೆಯನ್ನೊಡೆದಮೇಲೆ ಉಂಟಾಗುವ ಗಡಿಗೆಯ ಅಭಾವ, ಎರಡು ವಸ್ತುಗಳ ನಡುವೆ ಯಾವ ಕಾಲದ್ದೂ ಸಂಸರ್ಗವೇ ಇಲ್ಲವಾದರೆ 'ಅತ್ಯಂತಾಭಾವ', ಉದಾಹರಣೆಗೆ – ಗಾಳಿಯ ಒಳಗೆ ರೂಪದ ಅಭಾವ, ಪರಸ್ಪರವಾದ ಅಭಾವ 'ಅನ್ಯೋನ್ಯಾಭಾವ'. ಒಂದು ವಸ್ತು ಮತ್ತೊಂದು ವಸ್ತುವಿಗಿಂತ ಬೇರೆಯಾಗಿರುವಾಗ, ಅವು ಪರಸ್ಪರವಾಗಿ ಒಂದನ್ನೊಂದು ವ್ಯವಚ್ಛೇದ ಮಾಡುತ್ತವೆ. ಒಂದು ಇನ್ನೊಂದಾಗಿ ಇರುವುದಿಲ್ಲವೆಂಬುದು ಎರಡಕ್ಕೂ ಅನ್ವಯಿಸುತ್ತದೆ. ಆಕಳು ಕುದುರೆಗಿಂತ ಭಿನ್ನ. ಇದರರ್ಥ – ಆಕಳು ಕುದುರೆಯಾಗಿ ಇರುವುದಿಲ್ಲ: ಕುದುರೆ ಆಕಳಾಗಿ ಇರುವುದಿಲ್ಲ. ನ್ಯಾಯ–ವೈಶೇಷಿಕ ಪಂಥದಲ್ಲಿ ಈ ರೀತಿಯ ಅಭಿಪ್ರಾಯ ವ್ಯಕ್ತವಾಗಿದೆ.

ಅಭಾವ–ಅನುಪಲಬ್ಧಿ–ಕಾಣದಿರುವುದು. ಇದು ಇತರ ಐದು ಪ್ರಮಾಣಗಳ ಅಭಾವ. ಅಭಾವ ಜ್ಞಾನಕ್ಕೆ ವಸ್ತುವಿನ ಅಭಾವವೇ ವಿಷಯ. ಅದರಲ್ಲಿ ಇಂದ್ರಿಯ ಸಂನಿಕರ್ಷವೂ ಇಲ್ಲ. ಅಭಾವವನ್ನು ಪ್ರಭಾಕರನು ಸ್ವತಂತ್ರಪದಾರ್ಥವನ್ನಾಗಿ ಅಂಗೀಕರಿಸುವುದಿಲ್ಲ. ಅಭಾವ ಕೇವಲ ಅಧಿಕರಣ (ಆಶ್ರಯ) ರೂಪವಾದ್ದರಿಂದ ಅದು ಅನುಪಲಬ್ದಿ ಜ್ಞಾನಕ್ಕೆ ಕಾರಣವೆಂದು ಒಪ್ಪುವುದಿಲ್ಲ. ಕುಮಾರಿಲನು ಅಭಾವವನ್ನು ಬೇರೆ ಪದಾರ್ಥವೆಂದು ಭಾವಿಸಿ ಅದನ್ನು 'ಅನುಪಲಬ್ಧಿ ತಿಳಿಸುತ್ತದೆಯೆನ್ನುತ್ತಾನೆ. ಅಭಾವವನ್ನು (ಇಂದ್ರಿಯಗಳ ಮೂಲಕ) ಕಾಣಬಹುದೆಂಬ ನೈಯಾಯಿಕ ಮತವು ಅವನಿಗೆ ಒಪ್ಪಿಗೆಯಿಲ್ಲ ಅಂದ ಮೇಲೆ ಭಾವವಸ್ತುಗಳ ಜ್ಞಾನವನ್ನು ಉಂಟುಮಾಡುವ

ಮೊದಲು ಐದು ಪ್ರಮಾಣಗಳು ಭಾವಪ್ರಮಾಣಗಳು ಅಭಾವ ವಸ್ತುವನ್ನು ತೋರಿಸುವುದರಿಂದ ಅನುಪಲಬ್ಧಿ ಅಭಾವ ಪ್ರಮಾಣವಾಗುತ್ತದೆ. ಸಾಂಖ್ಯ ತತ್ವಶಾಸ್ತ್ರದಲ್ಲಿ ತುಂಬಾ ಸುಪ್ರಸಿದ್ಧನಾದ ಪ್ರಭಾಕರನ ನಿಲುವಿದು. ಇದಕ್ಕೆ ಶಂಕರರು ಉತ್ತರವನ್ನು ಕೊಟ್ಟಿರುವುದು ಗಮನಾರ್ಹ.

ವಿವರಗಳಿಗೆ ನೋಡಿ: ಡಾ. ಸರ್ವಪಲ್ಲಿ ರಾಧಾಕೃಷ್ಣನ್ 1970 ತತ್ವಶಾಸ್ತ್ರ: ಪ್ರಾಚ್ಯ ಮತ್ತು ಪಾಶ್ಚಾತ್ಯ ಪುಟ. 238, 278

ಮಹೇಶ ಅಡಕೋಳಿ 1992 ಅನ್ನಂಭಟ್ಟ ವಿರಚಿತ ತರ್ಕಸಂಗ್ರಹ .

ಅಭಿಚಾರ

ಮಾಟವೆಂಬುದು ವಾಮಾಚಾರ ಕ್ರಿಯೆಗಳಲ್ಲಿ ಒಂದು. ಮಾಟವನ್ನು ಅಭಿಚಾರ ಕರ್ಮವೆಂದು ಹೇಳುತ್ತಾರೆ.

ಅಥರ್ವವೇದಿಯ ಕೌಶಿಕ ಸೂತ್ರಗಳಿಗೆ ಅನುಸಾರಿಯಾದ ಅಥರ್ವವೇದ ಭಾಷ್ಯವನ್ನು ಬರೆಯುತ್ತಾ ಆಚಾರ್ಯ ಸಾಯಣರು ಅಥರ್ವವೇದದಲ್ಲಿ ಅಮಾಂಗಳಿಕವಾದ ಅಭಿಚಾರ ಕರ್ಮಗಳ ನಿರೂಪಣೆಯಿದೆಯೆಂದು ಒಪ್ಪಿದ್ದಾರೆ.

"ಆದರೆ, ಮೋಡಿಗಾರಿಕೆಯ ಮಾಟದ ಈ ಮಂತ್ರಗಳಲ್ಲಿ ಈ ರೇತ ಸ್ವರೂಪ ಅಗ್ನಿಯನ್ನೇ, ಮೂಲ ಋಗ್ವೇದದ ಚೌಕಟ್ಟಿನೊಳಗಿನ ಹವ್ಯವಾಹನ ಜಾತವೇದ ಅಗ್ನಿ, ಮತ್ತು ಅಪ್ಸು, 'ಓಷಧಿಷು ಬಹುಧಾ ಪ್ರವಿಷ್ಟಂ ತಂ ಐಚ್ಛಾಮ' ಎಂಬ ಪ್ರಾರ್ಥನೆಯಲ್ಲಿ ಕಾಣಿಸಿಕೊಳ್ಳುತ್ತಿರುವ ಅಗ್ನಿಯು, ಒಂದೇ ಅಲ್ಲ. ಈ ಭೇದ ಕಾಣದಿರಲು ಕವಿಯ ಮಂಕು ಕಾರಣವೊ? ಅಥವಾ ಕೊಂಕು ಮನೀಷೆಯು ಕಾರಣವೋ? ಅಗ್ನಿಯು ಹವ್ಯವಾಹನನ ಕಾರ್ಯಮಾಡಲು ಹೆದರಿದ್ದೇಕೆ? ಅಗ್ನ್ಯಾರಾಧನೆಯಲ್ಲಿ, ಅಹಿ: ವೃತ್ರಸಂಹಾರ ಕಾರ್ಯನಿರತ ಇಂದ್ರನನ್ನು, ಬೃಹಸ್ಪತಿಯನ್ನು ಆಮಂತ್ರಿಸಿ ಆರಾಧಿಸುವ ತನ್ನ 'ಪೂರ್ವೇಭ್ರಾತರಃ' ಹತರಾದುದನ್ನು ಕಂಡು ಇನ್ನು ತನ್ನ ಪಾಡು ಏನು ಎಂದು ಅಗ್ನಿ ಹೆದರಿದನು, ಎಂದು ಈ ಸಂಹಿತಾಪಾಠದಲ್ಲಿಯೆ ಉಕ್ತವಾಗಿದೆ! ಹವ್ಯವಾಹನನು ನೀರಲ್ಲಿ ಇಳಿದರೆ ಆ ಅಗ್ನಿ ಇದ್ದಿಲು ಆದೀತೇ ಹೊರತು 'ಅಗ್ನಿ' ಎನಿಸದು. ಆದಕಾರಣ, ಇಲ್ಲಿ ವರ್ಣಿತನಾದ 'ನಚಿಕೇತ' ಅಗ್ನಿಯು ದಿಕ್ಕಾಲದ ಸಂದರ್ಭದಲ್ಲಿ ಪ್ರತೀತಿಗೆ ಬರುವ ಅಗ್ನಿಯೇ ಅಲ್ಲ. ಇವನು 'ಜಾದೂ' ಅಗ್ನಿ. ಈ ಸೂಕ್ತದಲ್ಲಿ ನಚಿಕೇತ ಅಗ್ನಿ ಎಂದು ಮೆಲ್ಲನೆ ನಮೂದಿಸಿದ್ದೂ ಉಂಟು! ಸೂಚಕ>ಸೌಚಿಕ, ಸೂಚಿ>ಸೂಜಿ! ಸೂಜಿಯಿಂದ ಹೊರಬಂದು ಉಲ್ಬ (ಗರ್ಭ)ದಲ್ಲಿ ಸೇರುವ ಅಗ್ನಿ ಇವನು ಎಂದರೆ ವಿಶೇಷ ತಪ್ಪಲ್ಲ! ಏಕೆಂದರೆ ಈ ಸೂಕ್ತದ ಆರಂಭವೆ ಹೀಗಿದೆ: ಎಲೈ ಅಗ್ನಿಯೇ 'ಸ್ಥವಿರಂ ಮಹತ್ ಉಲ್ಬಂ' ಹೊಕ್ಕು (ಬಸುರಿಯ) ಆಪ: ರಸದಲ್ಲಿ (ಪೋಷಿಸಲ್ಪಡುತ್ತ) ಕುಳಿತಿದ್ದೀಯೆ!" (ಶಂ.ಬಾ)

ಅಭಿಚಾರ ಕ್ರಿಯೆಯೆನ್ನುವುದು ಈಗಲೂ ಜಾಲ್ತಿಯಲ್ಲಿದೆ. ಮಂತ್ರವಾದದ ಮೂಲಕ ಇನ್ನೊಬ್ಬರನ್ನು ಪೀಡಿಸುವ ವಿದ್ಯೆಯನ್ನು ಅಭಿಚಾರ ವಿದ್ಯೆಯೆಂದು ಕರೆಯುತ್ತಾರೆ.

ವಿವರಗಳಿಗೆ ನೋಡಿ: ಮಾಟ ; ಅಂಜನ

ಶಂಬಾ ಜೋಶಿ 1999 ನಾಗಪ್ರತಿಮಾ ವಿಚಾರ ಸಂಪುಟ. 4 ಪುಟ. 453

ಶೇಷನವರತ್ನ 1989 – ನಾಲ್ಕು ವೇದಗಳು ಪುಟ. 136

ಡೇವಿಡ್. ಎನ್. ಲಾರೆಂಜೆನ್ 2005 ಕಾಪಾಲಿಕರು ಮತ್ತು ಕಾಳಾಮುಖರು ಪುಟ. 25

ಅಭಿಜ್ಞಾನ

ಅಭಿಜ್ಞಾನವೆಂದರೆ ತಿಳಿವು ನೆನಪು, ಜ್ಞಾಪಕಕ್ಕೆ ತರುವ ಗುರುತು, ಕುರುಹು, ರುಜುವಾತು ಎಂಬ ಅರ್ಥಗಳಿವೆ. ಅಜ್ಞಾನ ಎಂದರೆ ಜ್ಞಾನದ ಅಭಾವವಲ್ಲ. ಅದು ಜ್ಞಾನದ ಸಂಕೋಚ. ಆತ್ಮದ ಮತ್ತು ವಿಶ್ವದ ಬಗೆಗಿನ ಈ ಸಂಕುಚಿತಜ್ಞಾನ ಅವೆರಡನ್ನೂ ಕುರಿತ ತಪ್ಪು ಕಲ್ಪನೆ ಉಂಟುಮಾಡುತ್ತದೆ. ಶೈವದರ್ಶನದ ಪ್ರಕಾರ ಆತ್ಮಜ್ಞಾನವು ತನ್ನೊಡನೆ ವಿಶ್ವದ ಒಂದು ಹೊಸ ಅರ್ಥ ಮತ್ತು ಸ್ವಾರಸ್ಯದ ಗ್ರಹಣವನ್ನೂ ತರುತ್ತದೆ. ಆದ್ದರಿಂದ ಈ ಸಿದ್ಧಾಂತದ ಪ್ರಕಾರ ಆತ್ಮಸಾಕ್ಷಾತ್ಕಾರ ಎಂದರೆ ಆತ್ಮದ ಸ್ಮೃತಿ (ಪ್ರತ್ಯಭಿಜ್ಞೆ).

ಪ್ರತ್ಯಭಿಜ್ಞೆ ಎಂದರೆ ಸ್ಮರಣೆ. ಈ ಸ್ಮರಣೆಯ ಸ್ವರೂಪ ಏನು? ಉದಾಹರಣೆಯೊಂದರ ಮೂಲಕ ಅದನ್ನು ಅರ್ಥಮಾಡಿಕೊಳ್ಳಲು ನಾವು ಪ್ರಯತ್ನಿಸುತ್ತೇವೆ. ತತ್ತ್ವಶಾಸ್ತ್ರಗ್ರಂಥಗಳಲ್ಲಿ ಇದರ ವಿಷಯಕ್ಕೆ ತೆಗೆದುಕೊಳ್ಳುವ ರೂಢಿಯ ದೃಷ್ಟಾಂತ "ಅಂದು ನಾನು ನೋಡಿದ ದೇವದತ್ತನೇ ಇವನು" (ಸಃಅಯಂ ದೇವದತ್ತಃ). ಇದೊಂದು ಅನುಭವವಾಕ್ಯ. ಈ ಅನುಭವದ ಸ್ವರೂಪವೇನು? ದೇವದತ್ತನ ವಿಷಯದಲ್ಲಿ ಪ್ರತ್ಯಕ್ಷ ಅನುಭವವೊಂದಿದೆ. ಆದರೆ ಅದು ಪ್ರತ್ಯಕ್ಷ ಅನುಭವವಷ್ಟೇ ಆಗಿಲ್ಲ. ಹಿಂದಿನ ಸಂದರ್ಭದಲ್ಲಿ ನೋಡಿದ ಅವನ ಮಾನಸಿಕ ಪ್ರತಿಮೆಯ ರೂಪದಲ್ಲಿ ಅದು ಹಿಂದೆ ಅವನನ್ನು ಪ್ರತ್ಯಕ್ಷವಾಗಿ ಕಂಡದ್ದರ ಸ್ಮೃತಿಗೆ ಕಾರ್ಯಕಾರಿಯಾದ ಕಾರಣವಾಗುತ್ತದೆ. ಆದರೆ ಇದು ಕೇವಲ ಸ್ಮೃತಿ ಮಾತ್ರವೇ ಅಲ್ಲ. ಈ ಎರಡು ವಸ್ತುಗಳೂ ಒಂದೇ ಎಂಬ ಅನುಭವವೂ ಅಲ್ಲಿರುತ್ತದೆ. ಪ್ರತ್ಯಭಿಜ್ಞೆಯ ದೃಷ್ಟಿಯನ್ನು ಪರಿಹರಿಸುತ್ತದೆ. ಮತ್ತು ಆತ್ಮದ ವಿಶ್ವಾತ್ಮಕ ರೂಪವನ್ನು ನಮ್ಮೆದುರು ಪ್ರಕಟಿಸುತ್ತದೆ. ಇದರ ಪ್ರತ್ಯಭಿಜ್ಞೆನಮ್ಮನ್ನು ಸುಖ ಮತ್ತು ತೃಪ್ತಿಗಳಿಗೆ ಒಯ್ಯುತ್ತದೆ.

ವಿವರಗಳಿಗೆ ನೋಡಿ: ಪಾದೆಕಲ್ಲು ನರಸಿಂಹಭಟ್ಟರು ೧೯೯೮ ಅಭಿನವಗುಪ್ತ ಪುಟ.೨೪, ೨೫,

ಜಿ.ಟಿ. ದೇಶಪಾಂಡೆ(ಮೂಲ), ಎನ್. ಬಾಲಸುಬ್ರಹ್ಮಣ್ಯ(ಅನು) ೨೦೦೦ ಅಭಿನವಗುಪ್ತ ಪುಟ.೩೪.

ಬಿಮಲ್ ಕೃಷ್ಣಮತಿಲಾಲ್(ಮೂ) ಎಂ.ಎ.ಹೆಗಡೆ (ಅನು)೨೦೧೦ ಶಬ್ದ ಮತ್ತು ಜಗತ್ತು

ಅಭಿದಾನ ವಸ್ತು ಕೋಶ

ಈ ನಾಗವರ್ಮನ ಕೃತಿಗಳೆಂದು ಪರಿಗಣಿತವಾಗಿರುವುವೆಂದರೆ ಛಂದೋವಿಚಿತಿ, ಅಭಿದಾನ ವಸ್ತುಕೋಶ. ಕರ್ಣಾಟಕ ಭಾಷಾ ಭೂಷಣ 'ಕಾವ್ಯಾಲೋಕನ' ಮತ್ತು 'ವರ್ಧಮಾನ ಪುರಾಣ'.

ನಾಗವರ್ಮ ತಾನು ಬರೆದಿರುವ ಕೃತಿಗಳನ್ನು ಹೆಸರಿಸುವ ಪದ್ಯವೊಂದರಲ್ಲಿ "ಛಂದೋವಿಚಿತಿಯಲಂಕೃತಿ ಸಂದಭಿದಾ ವಸ್ತುಕೋಶಮೆಂಬಿವು" ಎಂದು ಹೇಳಿರುವುದರಿಂದ ಛಂದೋವಿಚಿತಿಯನ್ನು ಅವನು ರಚಿಸಿರುವುದು ತಿಳಿದುಬರುತ್ತದೆ.

ಭಾಷಾಭೂಷಣ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆದದ್ದಾಗಿದ್ದರೆ, ಅಭಿದಾನವಸ್ತುಕೋಶ, ಸಂಸ್ಕೃತ ಶಬ್ದಗಳಿಗೆ ಕನ್ನಡದಲ್ಲಿ ಅರ್ಥವನ್ನು ವಿವರಿಸಲು ಕನ್ನಡ ಕಂದ ವೃತ್ತಗಳಲ್ಲಿ ಬರೆದ ಶಬ್ದಕೋಶವಾಗಿದೆ. ವಸ್ತುಕೋಶದ ಪರಿಕಲ್ಪನೆಯು ಕನ್ನಡದಲ್ಲಿ ವಿಶಿಷ್ಟವಾಗಿದೆ. ಅರ್ಥಕೋಶಕ್ಕಿಂತ ಇದು ಭಿನ್ನ. ಅರ್ಥಕೋಶವು ಶಬ್ದಾರ್ಥಗಳ ವಿಶೇಷವನ್ನು ತಿಳಿಸುತ್ತದೆ. ನಾಗವರ್ಮನು ವಸ್ತುಕೋಶವೆಂದು ಕರೆದಿರುವುದು ವಸ್ತುವಿನ ವಿಶೇಷತೆಯನ್ನು ಸೂಚಿಸಲು ಎಂಬುದಿಲ್ಲಿ ಗಮನಾರ್ಹವಾಗಿದೆ.

ವಿವರಗಳಿಗೆ ನೋಡಿ: ಸಿ.ವೀರಣ್ಣ 1986 ಪ್ರಾಚೀನ ಸಾಹಿತ್ಯ: ರಾಜಸತ್ತೆಯ ವೈಭವದ ಕಾಲ ಪುಟ. 344–346

ಅಭಿಧರ್ಮ ಪ್ರಸ್ಥಾನ

ದರ್ಶನ, ಶ್ರವಣ, ಘ್ರಾಣ, ರಸನ, ಸ್ಪರ್ಶ, ಮನನ ಇವು ಆರು ಇಂದ್ರಿಯ ಸಂವೇದನೆಗಳು. ದೃಶ್ಯ ಇತ್ಯಾದಿ. ಅವು ಗ್ರಹಿಸಿದ ಗ್ರಾಹ್ಯ. ಅಭಿಧರ್ಮ ಪ್ರಸ್ಥಾನದ ಕ್ರಮವನ್ನೇ ಅನುಸರಿಸಿ, ನಾಗಾರ್ಜುನ ಇಂದ್ರಿಯಗಳ ಕಾರ್ಯಕ್ಷೇತ್ರವನ್ನು ಒಂದೊಂದಾಗಿ ವಿಶ್ಲೇಷಿಸುತ್ತಾನೆ. ಅಭಿಧರ್ಮದ ಚಿಂತನೆಯಲ್ಲಿ ನಂತರ ಸೇರಿಕೊಂಡ ಮಿಥ್ಯಾದೃಷ್ಟಿಯ ನಿವಾರಣೆಯೂ ನಾಗಾರ್ಜುನನ ಕಾಳಜಿಗಳಲ್ಲಿ ಒಂದಾಗಿತ್ತು. ಈ ಹಿನ್ನೆಲೆಯಲ್ಲಿ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ಮೂರು ಅಂಶಗಳನ್ನು ಪರಿಶೀಲಿಸುತ್ತಾನೆ.

1) ಇಂದ್ರಿಯಗಳ ಕಾರ್ಯವಲಯ

2) ವ್ಯಕ್ತಿಯ ನಿರ್ಮಾಣಕ್ಕೆ ಕಾರಣವಾಗುವ ಸ್ಕಂಧಗಳು ಮತ್ತು

3) ಭೌತಿಕ ಪದಾರ್ಥಗಳು(ಧರ್ಮ)

ಮೊದಲಿಗೆ ಸಂವೇದನಾಂಗಗಳಲ್ಲಿ ಒಂದಾದ ಕಣ್ಣು ಮತ್ತದರ ಉದ್ಯೋಗವನ್ನು ಪರೀಕ್ಷೆಗೆ ಒಳಪಡಿಸುತ್ತಾನೆ. ಅದನ್ನು ಉಳಿದ ಇಂದ್ರಿಯಗಳ ವೃತ್ತಿಪರೀಕ್ಷೆಗೆ ಮಾಪನವನ್ನಾಗಿಸಿಕೊಳ್ಳುತ್ತಾನೆ. ಇಂದ್ರಿಯಗಳು ಮತ್ತು ಅವು ಗ್ರಹಿಸುವ ಗ್ರಾಹ್ಯದ ನಡುವೆ ಸಂಪರ್ಕವೇರ್ಪಟ್ಟಾಗ ಸಂವೇದನೆ ಉಂಟಾಗುತ್ತದೆ. ಇಲ್ಲಿ ಮನಸ್ಸು ಆರನೆಯ ಇಂದ್ರಿಯವಾಗಿ ಸೂಚಿಸಲ್ಪಟ್ಟಿದೆ. ಇದು ಇಂದ್ರಿಯಗಳಿಂದ ಬಂದ ಸಂವೇದನೆಗಳನ್ನು ವಿಶ್ಲೇಷಿಸುವ ಅಂಗವೆಂದೂ, ಇಡೀ ಮಾನವ ವ್ಯಕ್ತಿತ್ವವನ್ನು ನಿಯಂತ್ರಿಸುವ 'ಚಿತ್ತ'ವಲ್ಲವೆಂದೂ ಸ್ಪಷ್ಟಗೊಳಿಸಿಕೊಳ್ಳಲಾಗಿದೆ. ಇದನ್ನು 'ವಿಜ್ಞಾನ'ವೆಂದು ಸೂಚಿಸುತ್ತಾರೆ. (ನಟರಾಜ ಬೂದಾಳು ೨೦೦೬ ಪುಟ.೨೦)

ವೇದಾಂತದಲ್ಲಿ ವಿಜ್ಞಾನಮಯಕೋಶದ ಪರಿಕಲ್ಪನೆಯಿದೆ.

ಅಭಿನಯ

ಅಭಿನಯ ಎಂದರೆ ನಟನೆಯೆಂದರ್ಥ. ಅಭಿನಯ ಮತ್ತು ನಟನೆಯೆರಡನ್ನು ಪರಸ್ಪರ ಸಂವಾದಿಯಾಗಿ ಬಳಸಲಾಗುತ್ತದೆ. ಭರತನ ನಾಟ್ಯಶಾಸ್ತ್ರದಲ್ಲಿ ಅಭಿನಯದ ಚರ್ಚೆಯು ಬರುತ್ತದೆ. ಆಂಗಿಕ; ವಾಚಿಕವೆಂದು ಎರಡು ಬಗೆ. ವಾಚಿಕವೆಂದರೆ 'ಮಾತಾಡು' ಎಂದರ್ಥ. ಅಭಿನಯವೆಂದರೆ ಸಂವಹನದ ಮಾಧ್ಯಮವೂ ಹೌದು. 'ಅಭಿನಯದ ವ್ಯುತ್ಪತ್ತಿ ಹೀಗೆ:' ನೀ ಎಂದರೆ ಒಯ್ಯು ಎಂಬ ಧಾತುವಿಗೆ 'ಅಭಿ' ಎಂದರೆ ಹತ್ತಿರ ಎಂಬ ಉಪಸರ್ಗ ವಾಕ್ಯ ಹಚ್ಚಿದರೆ 'ಅಭಿನೀತ' ಎಂಬ (ನಾಮ) ರೂಪ ಸಿದ್ಧವಾಗುವುದು. (ಪಾದೇಕಲ್ಲು ನರಸಿಂಹ ಭಟ್ಟ) ಭರತನ ಪ್ರಕಾರ ಅಭಿನಯಗಳು ನಾಲ್ಕು ವಿಧ– ಆಂಗಿಕ, ವಾಚಿಕ, ಆಹಾರ್ಯ ಮತ್ತು ಸಾತ್ವಿಕ, ಆಂಗಿಕವು ಸಮಗ್ರ 'ಅಭಿನಯ'ವನ್ನು ಸಂಕೇತಿಸುತ್ತದೆ. ಶಾರೀರಿಕ ಅಭಿನಯವು ಶರೀರವನ್ನು ಅವಲಂಬಿಸಿದೆ. ಮುಖದ ಅಭಿನಯವು 'ಮುಖಜ' ಎಂದೆನ್ನಿಸಿಕೊಳ್ಳುತ್ತದೆ. ಚಲನ ವಲನದಿಂದ ಕೂಡಿದ್ದು 'ಚೇಷ್ಟಾತ್ಮಕ'ವಾಗಿದೆ.

ಪಾದೇಕಲ್ಲು ನರಸಿಂಹಭಟ್ ಅವರು 'ಅಭಿನವಗುಪ್ತ' ಕೃತಿಯಲ್ಲಿಯೂ ಈ ಕುರಿತು ವಿವರಿಸಿದ್ದಾರೆ. "ಅಭಿನಯ ಎಂಬ ಪದದ ಅರ್ಥವೂ ಸ್ವಾರಸ್ಯಕರವಾಗಿದೆ. 'ಅಭಿ' ಎಂಬ ಉಪಸರ್ಗಕ್ಕೆ 'ಎದುರಾಗಿ' ಎಂಬ ಅರ್ಥವಿದ್ದು 'ನಯ' ಎಂದರೆ 'ಕೊಂಡುಹೋಗುವಂತಹದು' ಎಂಬ ಅರ್ಥವಿದೆ. ಇದರಿಂದ ರಸಕ್ಕೆ ಪ್ರೇಕ್ಷಕನನ್ನು ಒಯ್ಯುವಂಥಾದ್ದು ಎಂಬ ಅರ್ಥದಲ್ಲಿ 'ಅಭಿನಯ' ಶಬ್ದ ಪ್ರಯುಕ್ತವಾಗಿದೆ. ಇಂದಿಗೆ ರೂಢವಾಗಿರುವಂತೆ ಆಂಗಿಕ ಚೇಷ್ಟೆಗಳಷ್ಟೇ ಅಭಿನಯವಲ್ಲ ಎಂಬುವನ್ನೇ ನಾಟ್ಯಶಾಸ್ತ್ರವನ್ನು ಓದುವ ಎಲ್ಲಾ ಸಂದರ್ಭಗಳಲ್ಲೂ ನೆನಪಿಡಬೇಕಾಗುತ್ತದೆ. ಈ ಅರ್ಥವೈಶಾಲ್ಯ 'ಅಭಿನಯ' ಪದದ ನಿರುಕ್ತಿಯಲ್ಲಷ್ಟೇ ಇರುವುದಲ್ಲ. ಅಭಿನಯವನ್ನು ವರ್ಗೀಕರಿಸಿ ವಿವರಿಸುವಲ್ಲಿಯೂ ಭರತನು ಅನುಸ್ಯೂತವಾಗಿ ಇಟ್ಟಿರುವುದು

ಕಂಡುಬರುತ್ತದೆ. ನಾಲ್ಕು ಅಭಿನಯಗಳನ್ನು ನಾಟ್ಯಶಾಸ್ತ್ರ ಪ್ರಸ್ತಾಪಿಸುತ್ತದೆ: ಸಾತ್ತ್ವಿಕ, ಆಂಗಿಕ, ವಾಚಿಕ, ಆಹಾರ್ಯಗಳೇ ಈ ಪ್ರಕಾರಗಳು. ಸಾತ್ತ್ವಿಕ ಅಭಿನಯವೆಂದರೆ ಮುಖಭಾವಗಳಿಗೆ ಸಂಬಂಧಪಟ್ಟದ್ದು. ಸತ್ತ್ವ ಎಂದರೆ ಆಂತರಂಗಿಕ ಅಸ್ತಿತ್ವ ಎಂದರ್ಥ. ಇದಕ್ಕೆ ಸಂಬಂಧಪಟ್ಟ ಭಾವನೆಗಳನ್ನು ಮುಖಭಾವಗಳಿಂದಲಷ್ಟೇ ತೋರಿಸಲು ಸಾಧ್ಯ. ಆದುದರಿಂದ ಈ ಅಭಿನಯಕ್ಕೆ ಸಾತ್ತ್ವಿಕ ಅಭಿನಯವೆಂದು ಹೆಸರು. 'ಆಂಗಿಕ' ಎಂದರೆ ಅಂಗೋಪಾಂಗಗಳ ವಿನ್ಯಾಸಕ್ರಮಗಳಲ್ಲಿ ಉಂಟಾಗುವ ಆಕಾರಗಳಿಂದ ವಸ್ತುಗಳನ್ನು ಪ್ರೇಕ್ಷಕನಲ್ಲಿ ಸ್ಫುರಿಸುವಂತೆ ನಿರ್ಮಿಸುವುದು. ಉದಾಹರಣೆಗೆ, ಹೂವಿನ ಆಕಾರ, ಮೊಗ್ಗೆಯ ಆಕಾರ ಇಂಥವನ್ನು ಕೈಗಳಲ್ಲಿ ಮಾಡಿತೋರಿಸಬಹುದು. 'ವಾಚಿಕ ಅಭಿನಯ'ವೆಂದರೆ ಮಾತಿನ ಮೂಲಕ ಮಾಡುವ ಅಭಿನಯ', ಅಂದರೆ ಸಂಭಾಷಣೆಯ ಭಾಗವೆಲ್ಲವೂ 'ವಾಚಿಕ ಅಭಿನಯ'. ಇದು ರೂಢಿಗಿಂತ ಸಂಪೂರ್ಣ ಭಿನ್ನ. ಇಂದಿನ ರೂಢಿಯಲ್ಲಿ ಒಂದು ನಾಟ್ಯದೃಶ್ಯದ ಬಗೆಗೆ ಮಾತನಾಡುವಾಗ ಮಾತನ್ನು ಅಭಿನಯದೊಳಗೆ ಸೇರಿಸುವ ಸಂಪ್ರದಾಯವಿಲ್ಲ. ದಿನಬಳಕೆಯ ಮಾತಿನಲ್ಲಿಯೂ 'ಮಾತು' ಎಂದಾಗ ಉಚ್ಚಾರಣೆಗೆ ಒಳಪಟ್ಟದ್ದನ್ನಷ್ಟೇ ಹೇಳುತ್ತೇವೆ ವಿನಾ ಅದನ್ನೇ ಪುಷ್ಟೀಕರಿಸಲು ಉಪಯೋಗಿಸುವ ಅಂಗವಿನ್ಯಾಸಗಳನ್ನು ಮಾತಿಗೆ ಸೇರಿಸುವುದಿಲ್ಲ. ಹೀಗೆ ಅಂಗವಿನ್ಯಾಸರೂಪದ ಅಭಿನಯಕ್ಕಿಂತ ಸಂಪೂರ್ಣ ಭಿನ್ನವಾದ ಘಟಕ ಇಂದಿಗೆ ಮಾತಾಗಿದ್ದರೂ ನಾಟ್ಯಶಾಸ್ತ್ರದ ನಿರುಕ್ತಿಯ ಪ್ರಕಾರ ರಸಪೂರಕವಾದ್ದೆಲ್ಲವೂ ಅಭಿನಯವಾದುದರಿಂದ ಮಾತೂ ಅಭಿನಯಪ್ರಕಾರಗಳಲ್ಲೊಂದು ಎಂದು ವರ್ಗೀಕರಿಸುವುದು ಅವೈಜ್ಞಾನಿಕವಲ್ಲ. ಅಲ್ಲದೆ, ಇಂದಿನ ಕೆಲವು ರಂಗಕ್ರಿಯೆಗಳಲ್ಲಿರುವಂತೆ 'ಬರೇ ಚಲನೆಯ ರಂಗಕಲೆ' ಮತ್ತು 'ಮಾತು ಇರುವ ರಂಗಕಲೆ' ಎಂಬ ವರ್ಗೀಕರಣ ಅಂದಿಗೆ ಇದ್ದಂತಿಲ್ಲ. ನಾಲ್ಕನೆಯದಾದ 'ಆಹಾರ್ಯ ಅಭಿನಯ'ವೆಂದರೆ ವೇಷಭೂಷಣಾದಿಗಳು. ಇಂದಿನ ರೂಢಿಯಲ್ಲಿ ಇವುಗಳನ್ನೂ ಅಭಿನಯದೊಳಗೆ ಸೇರಿಸುವುದಿಲ್ಲ. ಭರತನ ನಿರುಕ್ತಿಯಂತೆ ಇವುಗಳೂ ರಸಪ್ರವರ್ತಕಗಳಾಗಿರುವುದರಿಂದ ಅಭಿನಯದ ಪ್ರಕಾರವಾಗಿಯೇ ನಿರೂಪಿತವಾಗಿವೆ."

ಈ ನಾಲ್ಕು ವಿಧದ ಅಭಿನಯಗಳಲ್ಲಿ ವಾಚಿಕ ಅಭಿನಯಗಳನ್ನು ಅಭಿನವಗುಪ್ತನು ದೀರ್ಘವಾದ ಪೀಠಿಕೆಯೊಂದಿಗೆ ವ್ಯಾಖ್ಯಾನಿಸುತ್ತಾನೆ. ಈ ಭಾಗಕ್ಕೆ ಅವನು ಅಷ್ಟೊಂದು ಪ್ರಾಧಾನ್ಯ ಕೊಡಲು ಕಾರಣವೇನೆಂದರೆ ಭಾರತೀಯ ಕಾವ್ಯಮೀಮಾಂಸೆಯ ಒಂದು ಮುಖ್ಯವಾದ ಅಂಶ ಇಲ್ಲಿ ಬೆಳಕಿಗೆ ಬರುತ್ತದೆ. ಇಂದಿನ ರೂಢಿಯಲ್ಲಿ ದೃಶ್ಯ-ಶ್ರವ್ಯ ಪ್ರಕಾರಗಳೆರಡನ್ನೂ ಕಾವ್ಯವೆಂದು ಕರೆಯುವುದಿಲ್ಲ. ಕಾವ್ಯಶಬ್ದ ಇಂದಿಗೆ ಶ್ರವ್ಯಕ್ಕೇ ಸೀಮಿತ. ಭಾರತೀಯತೆಗೆ ಇದು ಸಮ್ಮತವಲ್ಲ. ನಾಟ್ಯಶಾಸ್ತ್ರದಲ್ಲಿ ನಾಟಕಕಾರನಿಗೆ ಪ್ರತ್ಯೇಕ ಪದವಿಲ್ಲ. ಅವನೂ ಶ್ರವ್ಯಕಾವ್ಯದ ಕರ್ತೃವಿನಂತೆ 'ಕವಿ'ಯೇ. ರಸದಂತಹ ತತ್ತ್ವ ಎರಡಕ್ಕೂ ಸಮಾನವಾಗಿ ಅನ್ವಿತವಾಗುವಂಥಾದ್ದು, ಅಭಿನಯಪ್ರಕಾರಗಳಲ್ಲಿ

ವಾಚಿಕ ಮಾತ್ರವೇ ಶ್ರವ್ಯಕಾವ್ಯಕ್ಕೆ ಸಂಬಂಧಿಸಿದ್ದು ಉಳಿದವಕ್ಕೆ ಅಲ್ಲಿ ಪ್ರವೇಶವಿಲ್ಲವೆಂಬುದು ಈ ಎರಡು ಪ್ರಕಾರಗಳೊಳಗಿನ ಭೇದಸೂಚಕ.

ವಿವರಗಳಿಗೆ ನೋಡಿ: ಮಲ್ಲೇಪುರಂ ಜಿ ವೆಂಕಟೇಶ್ ೨೦೦೦
ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ ಪು. ೩೬
ಪಾದೇಕಲ್ಲು ನರಸಿಂಹಭಟ್ಟರು ೧೯೬೮ ಅಭಿನವ ಗುಪ್ತ
ಪು. ೭೨-೭೪.
ಪ್ರಸನ್ನ ೨೦೦೭ ನಟನೆಯ ಪಾಠಗಳು
ಶ್ರೀರಂಗ ೧೯೮೩ ನಾಟ್ಯಶಾಸ್ತ್ರದ ಅಧ್ಯಾಯ ಸಂಗ್ರಹ

ಅಭಿಮಾನ

"ಅಭಿಮಾನಿಗಳತ್ಯುಗ್ರರು" ಎಂಬ ಪ್ರಯೋಗವಿದೆ (ಕವಿರಾಜಮಾರ್ಗ). ಅಭಿಮಾನವೆಂದರೆ ಬೇರೆ ರೀತಿಯಲ್ಲಿಯೂ ಇರುತ್ತದೆ. ನಾನು ಗಂಡು ಎಂಬುದು ಅಭಿಮಾನ. ಇದು ನನ್ನ ಅನುಭವ ಎಂದರೆ ಅಭಿಮಾನದ ರೂಪಕ.

ಮಾನವೆಂದರೆ ಗೌರವ, ಅಭಿಮಾನ ಎನ್ನುವ ಪದವು ಸಂಸ್ಕೃತದಿಂದ ಬಂದಿದೆ. ಮಾನ ಎಂದರೆ ಚಿಂತಿಸು ಎಂದು ಅರ್ಥ. ಯಾರು ತನ್ನ ಸ್ವಂತವನ್ನು ಅತಿಹೆಚ್ಚು ಯೋಚಿಸುತ್ತಾರೋ ಅವರು ಅಭಿಮಾನಿಗಳು. ಅವರಲ್ಲಿ 'ಅಹಂ' ಹೆಚ್ಚಿರುತ್ತದೆ. ನಾನು ಎಂಬ ಭಾವನೆಗಳು ಹೆಚ್ಚಿರುತ್ತದೆ.

ಸ್ವಂತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು ಅಭಿಮಾನವೆನಿಸಿಕೊಳ್ಳುತ್ತವೆ. ಸ್ವಂತಿಕೆಯ ಬಗ್ಗೆ ಹೆಮ್ಮೆ ಪಡುವುದು. ಪ್ರೇಮ; ಬಯಕೆ; ಶ್ರೇಷ್ಠ ಹಂಬಲ; ಸ್ವಂತ ಭಾವನೆಗಳ ಬಗ್ಗೆ ತಾವೇ ಗರ್ವಿಸಿಕೊಳ್ಳುವುದು. ನೋವಾಗುವುದು ಮುಂತಾದ ಅರ್ಥಗಳನ್ನು ಕಿಟ್ಟೆಲ್ ಕೊಟ್ಟಿದ್ದಾರೆ. ಅಭಿಮಾನಗೇಡಿಯನ್ನು 'ನಾಣಿಲಿ'ಯೆಂದು ಕರೆಯಲಾಗಿದೆ. ಅಭಿಮಾನವು ಒಂದರ್ಥದಲ್ಲಿ ಅಹಂನಿಂದ ಜನ್ಯವಾಗಿರುತ್ತದೆ. ಇದನ್ನು ಫ್ರಾಯ್ಡ್ ಇಗೋ ಎಂದು ಕರೆದಿರುವುದು ಗಮನಾರ್ಹ.

ವಿವರಗಳಿಗೆ ನೋಡಿ: M.H. Abrahams 1985 A Glossary of Literary terms.

ಅಭಿವಾದ

ಅಭಿವಾದವಾಕ್ಯದಲ್ಲಿ ಕೊನೆಗೆ ಭೋಃ ಶಬ್ದವು ನಿಲ್ಲಬೇಕು. ಭೋಃ ಶಬ್ದವು ಮುಖ್ಯಾರ್ಥವುಳ್ಳದ್ದು. 'ಅಭಿವಾದಯೇ ಶುಭಶರ್ಮಾಹಮಸ್ಮಿ ಭೋಃ' ಒಂದು ವಾಕ್ಯವು. (ಮನುಸ್ಮೃತಿ 2-124)

ಯಾರು ಜೀವನೋಪಾಯಕ್ಕಾಗಿ ಧನ ಸ್ವೀಕಾರ ಮಾಡಿ ವೇದದ ಸ್ವಲ್ಪ ಭಾಗವನ್ನು ಅಥವಾ ವೇದಾಂಗವನ್ನು (ಶಾಸ್ತ್ರವನ್ನು) ಕಲಿಸುವರೋ ಅವರು ಉಪಾಧ್ಯಾಯರು. (ಮನುಸ್ಮೃತಿ)

ಜನಕ ತಂದೆಯು ಹೀಗೆ ಮಾಡಬಲ್ಲವನಾದರೆ ಅವನೂ ಗುರುವು. ಆತ ಗರ್ಭಾಧಾನಾದಿ ಸಂಸ್ಕಾರಗಳನ್ನು ಮಾಡಿ ಅನ್ನದಿಂದಲೂ ಪೋಷಿಸುವವನು. ಮೃತಪಿತೃಕನಿಗೆ ಬೇರೊಬ್ಬನು ಹೀಗೆ ಮಾಡಿದರೆ ಅವನೂ ಗುರುವಾಗಲು ವಿರೋಧವಿಲ್ಲ. (ಮನುಸ್ಮೃತಿ 2–141–142)

ಅಭಿಷೇಕ

ಅನೇಕ ಜೈನ ಕಾವ್ಯಗಳಲ್ಲಿ ಅಭಿಷೇಕದ ವರ್ಣನೆಗಳು ಬರುತ್ತವೆ. ಅಭಿಷೇಕವು ಆಚರಣೆಗೆ ಸಂಬಂಧಿಸಿದ್ದು, ತೀರ್ಥಜಲದ ಸ್ನಾನ ಅಥವಾ ಸಿಂಪರಣೆಯು ಅಭಿಷೇಕವೆಂದೆನ್ನಿಸಿಕೊಳ್ಳುತ್ತದೆ. ಜನ್ಮಾಭಿಷೇಕ. ವ್ರತಾಭಿಷೇಕ: ಮೂರ್ತಿಗೆ ಅಭಿಷೇಕ: ತೀರ್ಥಂಕರರಿಗೆ ಅಭಿಷೇಕ ಹೀಗೆ ಬೇರೆ ಬೇರೆ ರೀತಿಯ ಅಭಿಷೇಕಗಳು ಇರುತ್ತವೆ. ಅಭಿಷೇಕವು ಶುದ್ಧ ನೀರಿನಿಂದ ನಡೆಯುತ್ತದೆ. ಮೂರ್ತಿಗಳಿಗೆ ಅಭಿಷೇಕ ಮಾಡುವಾಗ ಜೇನುತುಪ್ಪ, ತುಪ್ಪ, ಹಾಲು, ಮೊಸರು, ಮುಂತಾದವುಗಳನ್ನು ಬಳಸುತ್ತಾರೆ. ಅಭಿಷೇಕವು ಶುದ್ಧತೆಯ ಸಂಕೇತ. ಆದುದರಿಂದ ದೇವರ ಮೂರ್ತಿಗೆ ಮಾಡಿದ ಅಭಿಷೇಕವು ಪವಿತ್ರವೆಂದು ಜನರು ಅದನ್ನು ಭಕ್ತಿಪೂರ್ವಕ ಸ್ವೀಕರಿಸುತ್ತಾರೆ.

ಅರಸರಿಗೆ ಪಟ್ಟಾಭಿಷೇಕವಾಗುವಾಗ ಅವರ ತಲೆಯ ಮೇಲೆ ಪವಿತ್ರಜಲ ಸಿಂಪಡಿಸುವುದು ಅಥವಾ ಬೇರೆ ರಸಗಳನ್ನು ಸಿಂಪಡಿಸುವುದನ್ನು ಅಭಿಷೇಕವೆಂದು ಕರೆಯಲಾಗುತ್ತದೆ. ಅಭಿಷೇಕವೆಂದರೆ ಸ್ನಾನ, ಪವಿತ್ರಗೊಳಿಸು ಎಂಬ ಅರ್ಥಗಳಿವೆ.

ವಿವರಗಳಿಗೆ ನೋಡಿ: Swami Shivananda 1999 All About Hinduism.

ಅಭಿಸಾರಿಕೆ

ಸಾರಿಕೆಯೆಂದರೆ ಗಿಳಿ. ಅಭಿಸಾರಿಕಾ ಎನ್ನುವುದು ಸಂಸ್ಕೃತ ಪದ. ಇದು ಕನ್ನಡದಲ್ಲಿ ಅಭಿಸಾರಿಕೆಯೆಂದಾಗಿ ಬಳಕೆಯಾಗುತ್ತದೆ. ನಾಯಕನ ಬಳಿಗೆ ಹೋಗುವ ಅಥವಾ ನಾಯಕನ ಬರವಿಗಾಗಿ ಕಾಯುವ ಹೆಣ್ಣನ್ನು ಅಭಿಸಾರಿಕೆ ಎಂದು ಕರೆಯುತ್ತಾರೆ.

ಯಾರಿಗಾದರೂ ಕಾಯುತ್ತಿರುವ ಹೆಣ್ಣು ಅಭಿಸಾರಿಕೆಯೆಂದು ಕಿಟ್ಟೆಲ್ ನಿಘಂಟುವಿನಲ್ಲಿ ಕೊಡಲಾಗಿದೆ. ಅಭಿಸಾರಿಕೆಯರ ಪರಿಕಲ್ಪನೆಯು ಸಂಸ್ಕೃತ ನಾಟಕಗಳಲ್ಲಿ ಹೆಚ್ಚು ಬಂದಿರುವುದು ಗಮನಾರ್ಹವಾಗಿದೆ. ಅಭಿಸಾರಿಕೆಯರ ಪರಿಕಲ್ಪನೆಗೂ ರಸಸಿದ್ಧಾಂತಕ್ಕೂ ಸಂಬಂಧವಿದೆ. ಶೃಂಗಾರ ರಸದ ಸಂದರ್ಭದಲ್ಲಿ ಈ ರೀತಿಯ ಪ್ರಯೋಗಗಳು ಬಂದಿವೆ. ಇದರಲ್ಲಿ ವಿರಹ ಮತ್ತು ಕಾಯುವಿಕೆಯು ಪ್ರಧಾನವಾಗಿದೆ.

ವಿವರಗಳಿಗೆ ನೋಡಿ: ಮರಿಯಪ್ಪ ಭಟ್ಟ ಎಂ. 1969 ಕಿಟ್ಟೆಲ್‌ರ ಕನ್ನಡ–ಇಂಗ್ಲಿಷ್ ನಿಘಂಟು ಪುಟ. 84

ತೀ.ನಂ.ಶ್ರೀ 2006 ಭಾರತೀಯ ಕಾವ್ಯ ಮೀಮಾಂಸೆ.

Devi G.N. 2007 Indian Literary Criticism.

ಅಭ್ಯುದಯ

ಹಳೆಗನ್ನಡ ಕಾವ್ಯಗಳಲ್ಲಿ ಅಭ್ಯುದಯ ಎನ್ನುವುದನ್ನು ಅಭಿವೃದ್ಧಿ: ಉನ್ನತಿ: ಉನ್ನತೋನ್ನತಿ ಎಂಬ ಅರ್ಥದಲ್ಲಿ ಬಳಸಲಾಗಿದೆ ಅಭ್ಯುದಯ ಎರಡು ರೀತಿಯದು. ಒಂದು ಸಾಮಾಜಿಕ ಅಭ್ಯುದಯ. ಇದರಲ್ಲಿ ಭೌತಿಕ ಅಭ್ಯುದಯ ಅಥವಾ ಅಭಿವೃದ್ಧಿಯೂ ಸೇರಿಕೊಂಡಿತು. ಎರಡನೆಯದು ವೈಯಕ್ತಿಕ ಅಭ್ಯುದಯ. ವ್ಯಕ್ತಿ ಗುಣನಡತೆಗಳಲ್ಲಿ ಉಂಟಾಗುವ ಅಭಿವೃದ್ಧಿ.

ಅಭ್ಯುದಯವೆಂದರೆ ಮೇಲೇಳು; ಉದಯಿಸು; ಹೆಚ್ಚುಗೊಳಿಸು; ಸಂಪತ್ತು ಎಂಬ ಅರ್ಥಗಳಿವೆ. ಆದರೆ ಈ ಎಲ್ಲಾ ಅರ್ಥಗಳು ಪರೋಕ್ಷವಾಗಿ ಆರ್ಥಿಕ ಮಾನದಂಡಗಳನ್ನು ಇಟ್ಟುಕೊಂಡಿವೆ. ಅಭ್ಯುದಯವೆಂದರೆ ವ್ರತವೆಂಬ ಅರ್ಥವೂ ಇದೆ. ಇದಕ್ಕೆ ಧಾರ್ಮಿಕ ಅರ್ಥವಂತಿಕೆಯಿದೆ.

ಯುರೋಪಿನಲ್ಲಿ ಪುನರುಜ್ಜೀವನ ಕಾಲಘಟ್ಟದ ಅನಂತರ ಅಭ್ಯುದಯ ಎಂಬುದಕ್ಕೆ ವಿಶೇಷ ಒತ್ತು ಬಿತ್ತು. ವ್ಯಕ್ತಿಯ ಸಂಪನ್ಮೂಲದ ಹೆಚ್ಚುವಿಕೆ: ಸಾಮಾಜಿಕ ಸಂಪನ್ಮೂಲದ ಹೆಚ್ಚುವಿಕೆಯನ್ನು ಅಭ್ಯುದಯವೆಂದು ಕರೆಯಲಾಯಿತು. ಸಾಮಾಜಿಕ ಅಭ್ಯುದಯವನ್ನು ಅಭಿವೃದ್ಧಿ ಎಂದು ಕರೆಯಲಾಗಿರುವುದು ವಿಶೇಷ.

ವಿವರಗಳಿಗೆ ನೋಡಿ: Fredric Jameson 1974 Marxism and Form
Terry eagleton 1989 Literary theory – An introduction.

ಅಮಂಗಲ ಶಕುನಗಳು

ಕೂದಲು ಬಿಚ್ಚಿಕೊಂಡವರು, ಬಹಳ ಕಪ್ಪು ಬಣ್ಣದವರು, ಎಣ್ಣೆ ಒತ್ತಿಕೊಂಡವರು, ಮುಟ್ಟಾಗಿರುವವರು, ಗರ್ಭಿಣಿಯರು, ವಿಧವೆಯರು, ಹುಚ್ಚರು, ನಪುಂಸಕರು, ಕುರುಡರು ಕಿವುಡರು ಎದುರು ಬಂದರೆ ವಿಜಯ ಯಾತ್ರೆಗೆ ಹೋಗಬಾರದು. ಚಿಂತೆಯು ಆವರಿಸಿಕೊಂಡಿದ್ದಾಗ ಕೂಡಾ ವಿಜಯ ಯಾತ್ರೆಗೆ ಹೋಗಬಾರದು. ಇವುಗಳನ್ನು ಅಪಶಕುನವೆಂದು ಕರೆಯುತ್ತಾರೆ. (ಮಾನಸೋಲ್ಲಾಸ–2–817) ಇದರಲ್ಲಿ ಕೆಲವು ನಂಬಿಕೆಗಳು ಈಗಲೂ ಚಾಲ್ತಿಯಲ್ಲಿದೆ.

ಅಮಾತ್ಯರು

ಅಮಾತ್ಯರು ಎಂದರೆ ಮಂತ್ರಿಗಳು ಎಂದು ಅರ್ಥ. ಹಿಂದಿನ ರಾಜಕೀಯ ವ್ಯವಸ್ಥೆಯ ಚಿತ್ರಣವನ್ನು ಈ ರೀತಿಯಲ್ಲಿ ಕೊಡಬಹುದು. ರಾಜ, ಮಂತ್ರಿ, ಸೇನಾಧಿಪತಿ ಮತ್ತು ಪುರೋಹಿತ. ಈ ನಾಲ್ಕು ಮಂದಿಗಳ ಜವಾಬ್ದಾರಿಗಳು ಬೇರೆ ಬೇರೆ. ರಾಜನದು ರಾಜ್ಯಭಾರ ಮಾಡುವ ಕೆಲಸ. ಮಂತ್ರಿಯು ಅವನಿಗೆ ಸಲಹೆಯನ್ನು ನೀಡುತ್ತಾನೆ. ಸೇನಾಧಿಪತಿಯು ಸೇನೆಯ ಜವಾಬ್ದಾರಿ ಹೊರುತ್ತಾನೆ. ಪೌರೋಹಿತ್ಯದ

ಕೆಲಸ ಪುರೋಹಿತನಿಗೆ, ಪುರದ ಹಿತವನ್ನು ಯಾರು ನೋಡಿಕೊಳ್ಳುತ್ತಾರೋ ಅವರು ಪುರೋಹಿತರು.

ಅಮೃತ

ಕಿವಿಗೆ ಕಿವಿಯಾಗಿ, ಮನಸ್ಸಿಗೆ ಮನಸ್ಸಾಗಿ, ಕಣ್ಣಿಗೆ ಕಣ್ಣಾಗಿ, ಶಬ್ದಕ್ಕೆ ಶಬ್ದವಾಗಿ, ಪ್ರಾಣಕ್ಕೆ ಪ್ರಾಣವಾಗಿ ಒಂದು ಶಕ್ತಿಯಿದೆ. ಅದನ್ನು ತಿಳಿದವನು ಅಮೃತತ್ವವನ್ನು ಪಡೆಯುತ್ತಾನೆ. ಅಲ್ಲಿ ಕಣ್ಣು, ಮನಸ್ಸು, ಶಬ್ದ ಯಾವುದೂ ತಲುಪುವುದಿಲ್ಲ. ತಿಳಿದಿರುವುದು ಅಥವಾ ತಿಳಿಯದಿರುವುದು ಇದಕ್ಕಿಂತ ಬೇರೆಯೇ ಆಗಿದೆ ಅದು. ಶಬ್ದದಿಂದ ಆವಿಷ್ಕರಿಸಲು ಸಾಧ್ಯವಿಲ್ಲದುದು; ಆದರೆ ಶಬ್ದವನ್ನು ಆವಿಷ್ಕರಿಸುತ್ತದೆ. ಮನಸ್ಸಿನಿಂದ ಮನನ ಮಾಡಲು ಸಾಧ್ಯವಿಲ್ಲ. ಆದರೆ ಮನಸ್ಸನ್ನು ಮನನ ಮಾಡಿಸುತ್ತದೆ; ಕಣ್ಣಿನಿಂದ ನೋಡಲು ಸಾಧ್ಯವಿಲ್ಲ, ಆದರೆ ಕಣ್ಣನ್ನು ನೋಡುವಂತೆ ಮಾಡುತ್ತದೆ. ಕಿವಿಯಿಂದ ಕೇಳಲು ಸಾಧ್ಯವಿಲ್ಲವಾದರೂ ಕಿವಿಯನ್ನು ಕೇಳುವಂತೆ ಮಾಡುತ್ತದೆ. ಜೀವನವನ್ನು ಚೇಷ್ಟಿಸಲು ಸಾಧ್ಯವಿಲ್ಲದುದು, ಆದರೆ ಅದನ್ನು ಚೇಷ್ಟಿಸುವಂತೆ ಮಾಡುತ್ತದೆ. ಅಂತಹ ಚೈತನ್ಯವೇ ಬ್ರಹ್ಮ. ಅದನ್ನು ಬಿಟ್ಟರೆ ಉಪಾಸನೆ ಮಾಡಬೇಕಾಗಿರುವುದು ಬೇರೆ ಯಾವುದೂ ಇಲ್ಲ. (ಸುಕುಮಾರ್ ಅಟಿಕ್ಕೋಡ್ ೨೦೦೫ ತತ್ವಮಸಿ ಪುಟ ೨೦೧)ಅಮೃತದ ಬಗ್ಗೆ ವೇದಾಂತದ ನಿಲುವು ಇದು.ಅಮೃತಸಂಜೀವಿನಿಯ ಸೇವನೆಯಿಂದ ಮೃತರು ಮತ್ತೆ ಜೀವಂತವಾದ ಕತೆಯು ರಾಮಾಯಣದಲ್ಲಿ ಬರುತ್ತದೆ.

ಯಾವುದು ಶಾಶ್ವತವೆಂದು ಅನಿಸುತ್ತದೆಯೋ ಅದರಲ್ಲಿ ವಾಸಿಸುವುದು ಅಮೃತಾವಾಸ ಎಂದನ್ನಿಸಿಕೊಳ್ಳುತ್ತದೆ ಎನ್ನುವುದು ಜೈನಧರ್ಮದ ನಿಲುವು.

ವಿವರಗಳಿಗೆ ನೋಡಿ: ಅನಶನ; ಸಲ್ಲೇಖನ.

ಅಮ್ಮ

ಹಳೆಗನ್ನಡದಲ್ಲಿ 'ಅಮ್ಮ' ಎಂದರೆ ತಂದೆ ಎಂದರ್ಥ. 'ಅಮ್ಮನ್' ಎಂದು ಬಳಕೆಯಾಗುವುದೇ ಹೆಚ್ಚು. 'ಅಮ್ಮನ ಗಂಧವಾರಣ' ಎಂಬಲ್ಲಿಯೂ ತಂದೆಯ ಪಾಲಿಗೆ ಮದಗಜದಂತೆ ಎಂಬರ್ಥವೇ ಬರುತ್ತದೆ. ಹೊಸಗನ್ನಡದಲ್ಲಿ ಅಮ್ಮ ಎಂದರೆ ತಾಯಿ. ತುಳುವಿನಲ್ಲಿಯೂ ತಂದೆಗೆ 'ಅಮ್ಮ' ಎಂದೇ ಕರೆಯುತ್ತಾರೆ. ತಾಯಿಗೆ "ಅಪ್ಪೆ" ಎನ್ನುತ್ತಾರೆ. ಮಾರಿದೇವತೆಯನ್ನು ಅಮ್ಮನೆಂದು ಕರೆಯುತ್ತಾರೆ. ಸಿಡುಬು; ಮುಂತಾದವು ಮಾರಿಯಮ್ಮನಿಂದ ಬರುತ್ತದೆ. ಪ್ಲೇಗಮ್ಮನ ದೇವಸ್ಥಾನವೆಂದು ಗುಡಿಯನ್ನು ಕಟ್ಟುತ್ತಾರೆ. ಧಾರವಾಡ ಕಡೆ ಅಮ್ಮನೆಂದರೆ ವಿಧವೆಯೆಂಬ ಅರ್ಥವೂ ಇದೆ. ಅಬ್ಬೆ, ಅಮ, ಅಪ, ಅವೆ; ಅವ್ವ ಎಂದರೆ ತಾಯಿ.

ವಿವರಗಳಿಗೆ ನೋಡಿ: ಮಾತೃದೇವತೆ: ಬಾದುಬ್ಬೆ: ಕ್ರೂರದೇವತೆಗಳು.

ಅಯ್ದೆ ಮಿನುಗು

ಮಾಂಗಲ್ಯವೆಂದರ್ಥ. ಅಯ್ದೆ ಮಿನುಗು ಎಂದರೆ ಮಾಂಗಲ್ಯ, ತಾಳಿ, ಮುತ್ತೈದೆಯ ಲಕ್ಷಣವೆಂದು ಅರ್ಥ. ಮಿನುಗು ಅಂದರೆ ಕಾಂತಿ: ಬೆಳಕು ಎಂಬ ಅರ್ಥವಿದ್ದರೂ ಐದು ಮಿನುಗು. ಐದು ರೀತಿಯ ಕಾಂತಿ ಎಂಬುದನ್ನು ಸೂಚಿಸುತ್ತದೆ.

ಅರಗಿನ ಅರಮನೆ

ತುಪ್ಪ ಈ ಪರಿಕಲ್ಪನೆಯು ಮಹಾಭಾರತದಲ್ಲಿ ಬರುತ್ತದೆ. ಅರಗು; ತುಪ್ಪ; ಬೆಲ್ಲ ಇವು ಬಿಸಿಗೆ ಕರಗುತ್ತವೆ. ಅರಗನ್ನು ಈಗಲೂ ಬಳಸುತ್ತಾರೆ. ಅದಕ್ಕೆ ಅಂಟುವ ಗುಣವಿದೆ. ಹಾಗೆಯೇ ಬೆಂಕಿಗೆ ಜ್ವಾಲೆಯೆಬ್ಬಿಸುವ ಗುಣವಿದೆ. ಬೆಲ್ಲ; ಸುಣ್ಣದ ಮಿಶ್ರಣವನ್ನು ಹಿಂದೆ ಗಾರೆಗೆ ಬಳಸುತ್ತಿದ್ದರು. ಪುರೋಚನನು ನಿರ್ಮಿಸಿದ ಈ ಅರಗಿನ ಅರಮನೆಗೆ ಜತುಗೃಹವೆಂದು ಕರೆಯುತ್ತಿದ್ದರು. ಗಮನಿಸಬೇಕಾದ ಅಂಶವೆಂದರೆ ಇಲ್ಲಿಯ ತಂತ್ರಜ್ಞಾನದ ಬಳಕೆ.

ಅರಣಿ

ಅರಣಿಯೆಂದರೆ ಹೋಮದಲ್ಲಿ ಅಗ್ನಿಯನ್ನು ಉಂಟುಮಾಡಲು ಬಳಸುವ ಸೌದೆ. ಹೋಮಾಗ್ನಿಯನ್ನು ಉರಿಯುವಂತೆ ಮಾಡಲು ಬಳಸುವ ಸೌದೆಯನ್ನು ಸಮಿತ್ತು ಎಂದೂ ಕರೆಯುತ್ತಾರೆ. ಸೌದೆಯು (ಕಟ್ಟಿಗೆಯ ತುಂಡು) ಅತ್ತಿಯ ಮರದ ಅಥವಾ ಹಲಸಿನ ಸೌದೆಯಾಗಿರಬೇಕೆಂಬ ನಿಯಮವಿದೆ. ತೆಂಗಿನ ಒಣಗಿದ ಗರಿಯನ್ನು ಕತ್ತರಿಸಿ ಅದನ್ನು ಬೆಂಕಿ ಉರಿಯುವಂತೆ ಮಾಡಲಾಗುತ್ತದೆ. ಸಮಿತ್ತು, ಪಾಲಾಶ, ದರ್ಭೆ; ತುಪ್ಪ; ಹೋಮದಲ್ಲಿ ಬಳಸುವ ಇತರ ಸಾಮಗ್ರಿಗಳು. ಸಮಿತ್ತನ್ನು ಇದ್ಮ ಎಂದು ಕರೆಯುತ್ತಾರೆ.

ಅಯೋಗಕೇವಲಿ

ಕಾಯಯೋಗದಿಂದ ಮುಕ್ತನಾಗಿ ಹದಿನಾಲ್ಕನೆಯ ಗುಣ ಸ್ಥಾನವನ್ನು ಹೊಂದಿದ ಜೀವಿಯನ್ನು ಅಯೋಗ ಕೇವಲಿ ಎಂದು ಕರೆಯುತ್ತಾರೆ.

ಅರಣ್ಯಕ

ಕಾಡಿನಲ್ಲಿ ಹುಟ್ಟಿದ್ದು; ಅರಣ್ಯಕ್ಕೆ ಸಂಬಂಧಿಸಿದ್ದು. ಅರಣ್ಯಕವೆಂದರೆ ಅದು ಉಪನಿಷತ್ತಿನ ಹೆಸರೂ ಹೌದು, ಪವಿತ್ರಕೃತಿ. "ಕ" ಅಂದರೆ ಚಲಿಸಿದ್ದು.

ಅರಣ್ಯಕವು ಬ್ರಾಹ್ಮಣದ ಒಂದು ಭಾಗ. ಇದು ತತ್ವಜ್ಞಾನಕ್ಕೆ ಸಂಬಂಧಿಸಿದೆ. ಇದರಲ್ಲಿ ಬರುವ ಅನೇಕ ಮಂತ್ರಗಳು ಧ್ಯಾನದ ಅನೇಕ ವಿಷಯಗಳನ್ನು ತಿಳಿಸುತ್ತವೆ. ಸಾಂಕೇತಿಕ ಆರಾಧನೆಯನ್ನು ಕೂಡಾ ಇದು ತಿಳಿಸುತ್ತದೆ. ಆದರೆ ಇಲ್ಲಿರುವ ಅನೇಕ ಸಂಗತಿಗಳು ಯಾರು ಅರಣ್ಯದಲ್ಲಿ ವಾಸಿಸಿದ್ದಾರೋ ಅವರಿಂದ ರಚಿತವಾಗಿದೆ. ಅರಣ್ಯಕಗಳು ಅರಣ್ಯದಲ್ಲಿ ಅಧ್ಯಯನ ಮಾಡಲು ಯೋಗ್ಯವಾದ ಗ್ರಂಥಗಳೆಂದು

ತಿಳಿಯಲ್ಪಟ್ಟಿದ್ದವು. ಗೃಹಸ್ಥರು ವಾನಪ್ರಸ್ಥಾಶ್ರಮದಲ್ಲಿ ಅರಣ್ಯಗಳಲ್ಲಿ ಇದನ್ನು ಅಧ್ಯಯನ ಮಾಡುತ್ತಿದ್ದರು. ಅರಣ್ಯದಲ್ಲಿ ಅಧ್ಯಯನ ಮಾಡುವುದರಿಂದ ಇದಕ್ಕೆ ಅರಣ್ಯಕಗಳೆಂದು ಹೆಸರು ಬಂತು. ಅರಣ ಈ ಶಬ್ದವು 'ಯ' ಗತ್ಯರ್ಥಕ ಧಾತುವುನಿಂದ ಉಂಟಾಗಿದೆ. ಅರಣವೆಂದರೆ ಜ್ಞಾನವೆಂದೂ ಅರ್ಥವಿದೆ.

ಸಾಮಗಾನ ಶ್ರವಣ ಮಾಡಿದರೆ, ಅರಣ್ಯಕ ಓದಿದರೆ ಋಗ್ಯಜುರ್ವೇದಗಳನ್ನು ಓದಬಾರದು ಎಂದು ಮನು ಹೇಳುತ್ತಾನೆ. ಇದು ಗಮನಾರ್ಹ ಸಂಗತಿಯಾಗಿದೆ.

ಅರಣ್ಯಕಗಳು ಯಜ್ಞ ವಿಧಾನವನ್ನು ಪೂರ್ಣ ವಿರೋಧಿಸುವುದೂ ಇಲ್ಲ. ಅದಕ್ಕೆ ಸಂಪೂರ್ಣ ಬೆಂಬಲವನ್ನೂ ನೀಡುವುದಿಲ್ಲ. ಅವು ಮುಖ್ಯವಾಗಿ ಯಜ್ಞದ ಲಾಕ್ಷಣಿಕ ಹಾಗೂ ರಹಸ್ಯಮಯ ರೂಪವನ್ನು ವಿವೇಚಿಸುತ್ತವೆ. ಅವು ಯಜ್ಞವನ್ನು ಆಧ್ಯಾತ್ಮಿಕ ದೃಷ್ಟಿಕೋನದಿಂದ ನಿರೀಕ್ಷಿಸಿವೆ. ಅದರಿಂದ ಕ್ರಿಯಾ ಕಾಂಡಕ್ಕಿಂತ ಚಿಂತನ ಪರಿಸ್ಥಿತಿಗೆ ಹೆಚ್ಚು ಮಹತ್ವವು ಅರಣ್ಯಕಗಳಿಂದ ಪ್ರಾಪ್ತವಾಗಿದೆ. ಬ್ರಾಹ್ಮಣ ಗ್ರಂಥಗಳ ಅತ್ಯುಚ್ಚ ಗುರಿಯು ಸ್ವರ್ಗ ಪ್ರಾಪ್ತಿ. ಅದಕ್ಕೆ ಯಜ್ಞವೊಂದು ಸಾಧನವೆನಿಸಿತ್ತು. ಆದರೆ ಅರಣ್ಯಕಗಳಲ್ಲಿ ಬ್ರಹ್ಮವನ್ನು ಅರಿಯುವದಕ್ಕಾಗಿ ಆತ್ಮಸಂಯಮದ ಆಧಾರದ ಮೇಲೆ ಕೈಕೊಳ್ಳಬೇಕಾದ ಅನೇಕ ಉಪಾಸನೆಗಳನ್ನು ವಿವರಿಸಲಾಗಿದೆ. ತೈತ್ತಿರೀಯ ಅರಣ್ಯಕದಲ್ಲಿ (2–7–1) 'ಶ್ರಮಣ' ಶಬ್ಧವು ಮೊತ್ತಮೊದಲ ಸಲ ಬರುತ್ತದೆ. ಈ ಶ್ರಮಣ ತಪಸ್ವೀ ಎಂಬ ಅರ್ಥದಲ್ಲಿ ಶ್ರಮಣ ಪದದ ಪ್ರಯೋಗವಿದೆ. ಈ ಅರಣ್ಯಕದಲ್ಲಿ ಕಾಶಿ, ಪಂಚಾಲ, ಮತ್ಸ್ಯ, ಕುರುಕ್ಷೇತ್ರ ಖಾಂಡವಗಳ ಉಲ್ಲೇಖವಿದೆ. ಈ ಭಾಗಗಳ ಶ್ರಮಣ ಧರ್ಮದ ಪ್ರಭಾವವು, ಬ್ರಾಹ್ಮಣ ಧರ್ಮದ ಮೇಲೆ ಅದು ಕಂಡುಬರುತ್ತದೆ. ಯಜ್ಞೋಪವೀತದ ಉಲ್ಲೇಖವು ಕೂಡ ಇದೆ. ಅರಣ್ಯಕದಲ್ಲಿ (2–1–5) ಮೊತ್ತಮೊದಲ ಸಲ ಬಂದಿದೆ. ಯಜ್ಞೋಪವೀತವನ್ನು ಧರಿಸಿದ ಬ್ರಾಹ್ಮಣನು ಮಾಡುವ ಅಧ್ಯಯನವು ಯಜ್ಞವೆನಿಸಿದೆ. ಅರಣ್ಯಕಗಳಲ್ಲಿ ವರ್ಣಾಶ್ರಮ ಧರ್ಮದ ಪೂರ್ಣ ವಿಕಾಸವು ಕಂಡು ಬರುತ್ತದೆ. ಯಜ್ಞ ಹಾಗೂ ಬ್ರಾಹ್ಮಣರ ವಿರುದ್ಧವಿದ್ದ ಸಿದ್ಧಾಂತಗಳನ್ನು ಅರಗಿಸಿಕೊಳ್ಳುವುದಕ್ಕಾಗಿ ಬ್ರಾಹ್ಮಣ ಧರ್ಮವು ವರ್ಣಾಶ್ರಮ ಧರ್ಮವನ್ನು ತನ್ನದನ್ನಾಗಿ ಮಾಡಿಕೊಂಡಿತು.

ವಿವರಗಳಿಗೆ ನೋಡಿ: ಚಿದಂಬರಾನಂದ 1977 ಋಗ್ವೇದ ರಹಸ್ಯ ಪುಟ. 6
ಮಿರ್ಜಿ ಅಣ್ಣಾರಾಯ 2006 ಮಿರ್ಜಿ ಅಣ್ಣಾರಾಯರ ಆಯ್ದ ಲೇಖನಗಳು
ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 4–123
ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು 1973 ಶ್ರೀ ಶಾಂಕರ ಭಾಷ್ಯಸಮೇತ
ಸ್ವಾಮಿ ಆದಿದೇವಾನಂದ 1946 ತೈತ್ತರೀಯಾ ಉಪನಿಷತ್ತು

ಅರಬೊಜಂಗ

ಅರಬೊಜಂಗನೆಂದರೆ ರಾಜವಿಟನೆಂದು ಅರ್ಥ. ವಿಟನೆಂದರೆ ಕಾಮುಕ: ಜಾರ. ರಾಜನೇ ವಿಟನಾಗುವುದು ರಾಜವಿಟ. ಇದರಲ್ಲಿ ರಾಜನು ವೇಶ್ಯಾಬೀದಿಯಲ್ಲಿ ಸಂಚರಿಸಿದರೂ ಅವಮರ್ಯಾದೆಯಲ್ಲ. ಅದು ರಸಿಕತೆಯ ಸಂಕೇತ. ಸಾಮಾನ್ಯ ವಿಟನು ಬರಿಯ ಜಾರನಾಗಿರುತ್ತಾನೆಂದು ಹಳೆಗನ್ನಡ ಕಾವ್ಯಗಳು ಹೇಳುತ್ತವೆ.

ಅರಳೆಲೆ

ಮಕ್ಕಳಿಗೆ ಉಪಯೋಗಿಸುವ ಒಂದು ತೆರನಾದ ಒಡವೆ, ಅರಳೆಲೆ ಆಕಾರದ ಒಂದು ರೀತಿಯ ಆಭರಣ.

ಅರಿವು

ಅಜೀವು ಮತ್ತು ನೆಗಟ್ಟೆ (ಕೆಲಸ: ಕೀರ್ತಿ, ನಡತೆ: ಆಚಾರ:) ಮುಕ್ತಿಯನ್ನು ಪಡೆಯುವುದನ್ನು ಮೊದಲು ಅರಿಯಬೇಕು. ಅಂದರೆ ಮುಕ್ತಿಪಥದ ಜ್ಞಾನ(ತಿಳುವಳಿಕೆ) ಬೇಕು. ಅನಂತರ ಅದಕ್ಕೆ ಬೇಕಾದ ಆಚಾರಗಳು ಬೇಕು. ಇದರಿಂದ ಮೋಕ್ಷವು ಸಾಧ್ಯ. ಮಿಕ್ಕ ರೀತಿಯ ನಂಬಿಕೆಯು ಅರ್ಥಹೀನ. ಮಿಕ್ಕ ಧಾರ್ಮಿಕ ಮಾರ್ಗಗಳು ಅಪಮಾರ್ಗವನ್ನು ಹೊಂದಿದೆ. ಅರಿವಿನರಿಮೆಯೆಂದರೆ ತತ್ವಜ್ಞಾನದ ತಿಳುವಳಿಕೆಯೂ ಹೌದು.

ಅರೋಹ–ಅವರೋಹ

ಋಗ್ವೇದದ ಅಕ್ಷ ಸೂಕ್ತದಲ್ಲಿ 'ಅರೋಹ–ಅವರೋಹ' ಸಂವಾದಗಳು ನಾಟಕೀಯತೆಯನ್ನು ಒಳಗೊಂಡಿವೆ. ಋಗ್ವೇದದಲ್ಲಿ ಬರುವ ಸಂವಾದಗಳು ನಾಟಕೀಯತೆಯನ್ನು ಒಳಗೊಂಡಿರುವುದರ ಜೊತೆಗೆ ಅವುಗಳಲ್ಲಿ ನರ್ತನದ ವಿಷಯಗಳು ಪ್ರಸ್ತಾವಿಕಗೊಂಡಿವೆ. (ನೋಡಿ: ಶೇಷ ನವರತ್ನ. ೨೦೦೮ ಪು.೩೧.) ನರ್ತನ–ಗಾಯನಗಳ ಕಲಾಪ್ರಧಾನವಾದ ಜೀವನವೂ ಪ್ರಚಲಿತವಾಗಿತ್ತು. ಪ್ರಶಾಂತಜೀವನದ ದೈವೀ ವರದಾನವನ್ನು ಪಡೆದು ಭಾಗ್ಯವಂತರಾದ ಋಗ್ವೇದಕಾಲದ ನಮ್ಮ ಹಿರಿಯರು ಆಮೋದ–ಪ್ರಮೋದಗಳ ರಸಾನುಭವ ಪೂರ್ಣವಾದ ನೃತ್ಯ–ಗಾಯನಕಲೆಗಳಿಗೆ ಸಾಕಷ್ಟು ಪ್ರೋತ್ಸಾಹ ನೀಡಿದರು. ಸಂಗೀತವಂತೂ ಋಗ್ವೇದೀಯ ಜೀವನದ ಸಮಸ್ತ ಸೂರ್ತಿಯ ಮೂಲಕೇಂದ್ರವಾಗಿದೆ. ಋಗ್ವೇದದ ಪ್ರತಿಯೊಂದು ಶಬ್ದವೂ ಸಂಗೀತದ 'ಆರೋಹ–ಅವರೋಹ' ಗಳಿಂದ ಪ್ರತಿಬದ್ಧವಾಗಿದೆ. ಋಗ್ವೇದದಲ್ಲಿ ಬರುವ 'ಸಂವಾದ ಸೂಕ್ತ'ಗಳು ಸಂಸ್ಕೃತದಲ್ಲಿ ನಂತರದ ಕಾಲದಲ್ಲಿ ರಚಿತವಾದ ನಿರೂಪಿತವಾಗಿದ್ದು, ಪ್ರಜಾಪತಿಯನ್ನು 'ಅಜ' (ಆಡು) ಎಂಬ ಹೆಸರಿಂದ ಕರೆದದ್ದನ್ನು ಗಮನಿಸಬಹುದು. 'ಅಶ್ವ'ವೂ ಪ್ರಧಾನ ಪ್ರಾಣಿಯಾಗಿದೆ. ಆರೋಹವೆಂದರೆ ಧ್ವನಿಯ ಏರು – ಅವರೋಹ ಎಂದರೆ ಧ್ವನಿಯ ಇಳಿತ.

ಅರ್ಘ್ಯ

ಕೈ ತೊಳೆದುಕೊಳ್ಳುವುದಕ್ಕಾಗಿ ಕೊಡುವ ನೀರು, ಪೂಜಾದ್ರವ್ಯವನ್ನು ಅರ್ಘ್ಯವೆಂದು ಕರೆಯುತ್ತಾರೆ. ಇದು ಪೂಜೆಯ ಕ್ರಿಯೆಯಲ್ಲಿಯೂ ಬರುತ್ತದೆ.

ದೇವರಿಗೆ ಅರ್ಘ್ಯವನ್ನು ನೀಡುವುದು ಎಂದರೆ ಮಂತ್ರಪೂರ್ವಕವಾಗಿ ಜಲವನ್ನು ಅರ್ಪಿಸುವುದು. ಇದು ಪವಿತ್ರ ಆಚರಣೆಯ ಒಂದು ಭಾಗ. ಅರ್ಘ್ಯವು ವೈದಿಕ ಸಂಪ್ರದಾಯದಲ್ಲಿ ಇಂದಿಗೂ ಇದೆ. ಆದರೆ ಅವೈದಿಕ ಪರಂಪರೆಯಲ್ಲಿ ಇಲ್ಲ ಗಮನಾರ್ಹ. ನೀರು ತಳಿಯುವುದು ಅಥವಾ ನೀರನ್ನು ಪ್ರೋಕ್ಷಿಸುವ ವಿಧಾನವಿದೆ. ಇದನ್ನು ಸ್ಥಳ ಶುದ್ಧಿಯೆಂದು ಕರೆಯುತ್ತಾರೆ.

ಅರ್ಥ

ಭಾರತೀಯ ಕಾವ್ಯಮೀಮಾಂಸೆಯ ಅನೇಕ ಅಲಂಕಾರಿಕರು ಶಬ್ದ ಮತ್ತು ಅರ್ಥದ ಬಗೆಗೆ ವಿಶೇಷ ಚರ್ಚೆ ನಡೆಸಿರುವುದು ಗಮನಾರ್ಹವಾಗಿದೆ. "ಎಲ್ಲಿ 'ಅರ್ಥ'ವಾಗಲಿ ಅಥವಾ 'ಶಬ್ದ'ವಾಗಲಿ, (ಅನುಕ್ರಮವಾಗಿ) ತನ್ನನ್ನು ಅಥವಾ ತನ್ನ ಅರ್ಥವನ್ನು ಅಪ್ರಧಾನವಾಗಿಸಿಕೊಂಡು, ಆ ವ್ಯಂಗ್ಯಾರ್ಥವನ್ನು ಸೂಚಿಸುವುವೋ– ಆ ಕಾವ್ಯ ವಿಶೇಷವನ್ನು ಪಂಡಿತರು 'ಧ್ವನಿ'ಯೆಂದು ಕರೆದಿದ್ದಾರೆ." ಎಲ್ಲಿ 'ಅರ್ಥ' ಎಂದರೆ ವಿಶಿಷ್ಟವಾದ ವಾಚ್ಯವೂ 'ಶಬ್ದ' ಎಂದರೆ ವಿಶಿಷ್ಟವಾದ ವಾಚಕವೂ ಆ ವ್ಯಂಗ್ಯಾರ್ಥವನ್ನು ಸೂಚಿಸುತ್ತಿರುವುವೋ ಆ ಕಾವ್ಯವಿಶೇಷವೇ ಧ್ವನಿಯೆಂದರ್ಥ. ಇದರಿಂದ ವಾಚ್ಯಾಂಶದ ಸೌಂದರ್ಯಕ್ಕೆ ಕಾರಣಗಳಾದ 'ಉಪಮಾ'ದಿಗಳಿಗೂ, ವಾಚಕಾಂಶದ ಸೌಂದರ್ಯಕ್ಕೆ ಕಾರಣಗಳಾದ 'ಅನು ಪ್ರಾಸಾದಿ'ಗಳಿಗೂ, 'ಧ್ವನಿ'ಗೂ, ಸ್ಪಷ್ಟವಾದ ವಿಷಯಭೇದವಿದೆಯೆಂದು ತೋರಿಸಿದಂತಾಯಿತು. ಸಾಹಿತ್ಯಕೃತಿಗಳು ಸಾಮಾನ್ಯವಾಗಿ ಕೇವಲ ಅರ್ಥಪ್ರಧಾನತೆಯನ್ನು ಹೊಂದಿರುವುದಿಲ್ಲ. ಅರ್ಥ ಒಂದು ಕೃತಿಯಲ್ಲಿ ಇದೆಯೇ ಅಥವಾ ಅರ್ಥಿಸಿಕೊಳ್ಳುವುದರಲ್ಲಿದೆಯೆ? ಇದು ಸಾಹಿತ್ಯ ವಿಮರ್ಶೆಯಲ್ಲಿ ಚರ್ಚಿತವಾಗುತ್ತಿದೆ. (ನೋಡಿ: ಅರ್ಥವಿಸಿಕೊಳ್ಳುವಿಕೆ)

ಅರ್ಥಿ

ಅರ್ಥಿಯೆಂದರೆ ಯಾಚಕ, ಬಯಸಿದಾತ, 'ಅರ್ಥೀ ದೋಷಂ ನಪಶ್ಯತಿ' (ಕೀರ್ತಿ ಬಯಸಿದಾತನಿಗೆ ದೋಷವು ಕಾಣಿಸದು) ಇಲ್ಲಿ ಅರ್ಥಿಗೆ – ಅರ್ಥವನ್ನು ನೀಡುವುದು ಅಷ್ಟೇ. ಇದೇ ರೀತಿ ಕನ್ಯಾರ್ಥಿ, ದ್ರವ್ಯಾರ್ಥಿ, ವಿದ್ಯಾರ್ಥಿ, ದಾನಾರ್ಥಿ ಮುಂತಾದ ಪದಗಳಿವೆ.

ಯಾಚಕನೆಂದರೆ ಅಪೇಕ್ಷಿಸುವವನು; ದಾನ ಬೇಡುವವನು ಎಂದರ್ಥ. ಬೇಡುವವನ ಕೈಕೆಳಗೆ ಮತ್ತು ಕೊಡುವವನ ಕೈ ಮೇಲೆ ಇರುತ್ತದೆಯೆಂಬ ನಂಬಿಕೆಯು ಇದೆ. ಇದರ ಭಾವಾರ್ಥವಿಷ್ಟೇ: ದಾನ ಕೊಡುವವನು ಶ್ರೇಷ್ಠನೆಂದು ದಾನ ಬೇಡುವವನು ಕನಿಷ್ಠ. ಆದುದರಿಂದಲೇ ಯಾಚಕ ಎಂಬ ಪದವು ಬಳಕೆಯಾಗುತ್ತದೆ.

ಅರ್ಧ ಗಪ್ಪಡ ಸಂಘ

ಅರ್ಧಗಪ್ಪಡವೆಂದರೆ ಅರೆ ವಸ್ತ್ರಧಾರಣೆಯೆಂದು ಅರ್ಥ. ಅರ್ಧಗಪ್ಪಡ ಸಂಘವೆಂದರೆ ಅರ್ಧಗಪ್ಪಡ ಸಂಪ್ರದಾಯದ ಮುನಿಗಳ ಸಂಘವೆಂದು ಅರ್ಥ. ಇದು ಜೈನ ಧರ್ಮದ ಪರಿಕಲ್ಪನೆಯಾಗಿದೆ.ಕಪ್ಪಡವೆಂದರೆ ಬಟ್ಟೆ.ಅರ್ಧ ಬಟ್ಟೆಯನ್ನು ಧರಿಸುವವರನ್ನು ಅರ್ಧಗಪ್ಪಡಸಂಘವೆಂದು ಕರೆಯುತ್ತಾರೆ. ಈಪರಿಭಾಷೆಯು ಜೈನ ಧರ್ಮದ ಮತಾವಲಂಬಿಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ.

ಅರ್ಧಚಕ್ರಿ

ಭರತಕ್ಷೇತ್ರದ ಆರು ಖಂಡಗಳಲ್ಲಿ ಮೂರು ಖಂಡಗಳ ಅಧಿಪತಿಯನ್ನು ಅರ್ಧಚಕ್ರಿಯೆಂದು ಕರೆಯುತ್ತಾರೆ. ಆರು ಖಂಡಗಳು ಸೇರಿದರೆ ಒಂದು ಚಕ್ರವಾಗುತ್ತದೆ. ಆರು ಖಂಡಗಳನ್ನು ಯಾರು ಆಳುತ್ತಾರೋ ಅವರಿಗೆ ಚಕ್ರಾಧಿಪತಿಗಳೆಂದು ಕರೆಯುತ್ತಾರೆ ಎಂಬುದು ಗಮನಾರ್ಹ.

ಅರ್ಧರಥಿ

ಮಹಾಭಾರತದಲ್ಲಿನ ಕರ್ಣ, ದುಶ್ಯಾಸನ, ವೃಷಸೇನ, ಘಟೋತ್ಕಚ, ನಕುಲ ಮತ್ತು ಸಹದೇವ ಇವರು ಅರ್ಧರಥರು ಇವರು ಪರಿಣಿತರಲ್ಲದವರನ್ನು ತಮ್ಮ ಜೊತೆಗೆ ರಥದಲ್ಲಿರಿಸಿ ಯುದ್ಧ ಮಾಡುವಂಥವರು. ಅರ್ಧರಥನು ಐದು ಸಾವಿರ ಸೈನಿಕರನ್ನು ಪ್ರತಿಭಟಿಸಬಲ್ಲ ಸಾಮರ್ಥ್ಯವುಳ್ಳವನಾಗಿರುತ್ತಾನೆ.

ವಿವರಗಳಿಗೆ ನೋಡಿ: ಅತಿರಥ.

ಅರ್ವಾಚೀನ

ಹಿಂದೆ ಅರ್ವಾಚೀನ ಮತ್ತು ಅಭಿವೃದ್ಧಿ – ಈ ಎರಡೂ ಒಂದಕ್ಕೊಂದು ವಿರುದ್ಧ ಎಂಬ ಅರ್ಥದಲ್ಲಿ ಬಳಕೆಯಾಗುತ್ತಿತ್ತು. ಅಭಿವೃದ್ಧಿಯೆಂದರೆ ಕೃತಕವಾಗಿ ಕಟ್ಟಲಾಗಿರುವಂಥದ್ದು. ಅರ್ವಾಚೀನವೆಂದರೆ ಸರಳವಾಗಿ ಬೆಳೆದು ಬಂದಿರುವುದು ಎಂಬ ಅರ್ಥದಲ್ಲಿ ಬಳಕೆಯಾಗಿರುತ್ತದೆ.

ಸಾಂಸ್ಕೃತಿಕ ಅರ್ವಾಚೀನ ಎಂದರೆ ಸಹಜ ನಿಸರ್ಗವಾದ ಎಂದು ಅರ್ಥ ಬರುತ್ತದೆ. ಆ ನಂತರ ಇದುವೆ ಕಲೆಯಲ್ಲಿ ಸಹಜ ಕಲೆ ಎನ್ನುವ ಅರ್ಥವನ್ನು ಪಡೆಯುತ್ತದೆ. ಸಾಂಸ್ಕೃತಿಕ ಅರ್ವಾಚೀನಕ್ಕೆ ಆದರ್ಶ ಅನ್ನುವುದು ಬಹಳ ಮುಖ್ಯವಾದುದು. ಆದರೆ ಅಭಿವೃದ್ಧಿಪರ ಚಿಂತನೆಯು ಇದನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತದೆ. ಸಾಹಿತ್ಯ ಮತ್ತು ಇತರೆ ಕಲೆಗಳಲ್ಲಿ ಸಹಜ ಅಭಿವ್ಯಕ್ತಿ ಕ್ರಮವನ್ನು ಸಹಜ ಪ್ರತಿಭೆ ಎಂದೂ ಗುರುತಿಸಲಾಗಿದೆ. ಅದರಲ್ಲಿ ಕೃತಕತೆಯಿಲ್ಲ. ಆದರೆ ಅನಂತರ ಬಂದ ಅಭಿವೃದ್ಧಿ ಪರಿಕಲ್ಪನೆಯು ಈ ಸಂಗತಿಯನ್ನು ನಿರಾಕರಿಸಿತು. ಅಭಿವೃದ್ಧಿಪರ

ಚಿಂತನೆಗೆ ಕಲೆಯ ಅಭಿವ್ಯಕ್ತಿಯು ಕೂಡಾ ಕೃತಕವಾದುದಾಗಿರುತ್ತದೆ. ಅದಕ್ಕೆ ಆಧುನಿಕ ಜಗತ್ತಿನ ಕಾನೂನು ನಾಗರಿಕತೆಯ ಸಂಹಿತೆಗಳು, ಕೃತಕವಾದ ಕಾನೂನುಗಳು ಅನ್ವಯವಾಗುತ್ತವೆ.

ವಿವರಗಳಿಗೆ ನೋಡಿ: M.H. Abram 2000 A Glossary of literary terms P. 244-245.

ಅಜಿಗುಲಿ

ಆದ್ದರಿಂಧ ಅಜಿಗುಲಿ ಎಂದರೆ ಧರ್ಮವನ್ನು ನಾಶ ಮಾಡುವವನು. ಧರ್ಮಘಾತುಕ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಇದನ್ನು ಬೈಗುಳ ವಾಚಕವಾಗಿಯೂ ಬಳಸಲಾಗಿದೆ. ಉದಾ–ಅಜಿಗುಲಿ ವೆಂಡಿರ್.

ನೈತಿಕತೆಯನ್ನು ಧ್ವಂಸ ಮಾಡುವವನು. ಪಾವಿತ್ರ್ಯವನ್ನು ನಾಶಮಾಡುವವನು ಎಂಬ ಅರ್ಥಗಳಿವೆ.

ವಿವರಗಳಿಗೆ ನೋಡಿ: ಪಾಪ–ಪುಣ್ಯ: ಧರ್ಮ

ಅಜೆಯಮಿಕೆ

ಅಜೆ ಎಂದರೆ ತಿಳಿ; ಜ್ಞಾನವೆಂಬ ಅರ್ಥಗಳಿವೆ. ಅಜ್ಞಾನದಿಂದ (ಅಜೆಯದಿದಂ) ಇದನ್ನು ಮಾಡಿದೆ ಎಂದು ಕಾಲಿಗೆ ಬೀಳು. ಕಾಲಿಗೆ ಬಿದ್ದರೆ ಕೊಲ್ಲುವುದಿಲ್ಲ ಎನ್ನುವುದು ವೀರಯುಗದ ನಂಬಿಕೆ. ಕಾಲಿಗೆ ಬೀಳುವುದು ಎಂದರೆ ಶರಣಾಗುವುದು. ಶರಣಾದರೆ ಅವರನ್ನು ಕೊಲ್ಲಬಾರದು ಎನ್ನುವುದು ರಾಜಧರ್ಮ.

ವೀರಯುಗದ ಮೌಲ್ಯಗಳಲ್ಲಿ ಶರಣಾಗತ ರಕ್ಷಣೆಯೂ ಒಂದು. ಶರಣಾಗತರಾದವರನ್ನು ರಕ್ಷಿಸಬೇಕು. ಎರಡನೆಯದಾಗಿ ಯುದ್ಧದಲ್ಲಿ ಶರಣಾಗುವುದೆಂದರೆ ತಮ್ಮ ಶಸ್ತ್ರಾಸ್ತ್ರಗಳನ್ನು ಕೆಳಗೆ ಬಿಸಾಡುವುದು. ಶರಣಾಗುವುದೆಂದರೆ ತನ್ನನ್ನು ಅರ್ಪಿಸಿಕೊಳ್ಳುವುದು.

ವಿವರಗಳಿಗೆ ನೋಡಿ: ರಾಜರು.

ಅಲೌಕಿಕ

ಭೌತಿಕಕ್ಕೆ ನೇರವಾಗಿ ಸಂಬಂಧ ಪಡದೆ ಇರುವುದನ್ನು ಅಲೌಕಿಕವೆಂದು ಕರೆಯುತ್ತೇವೆ.

ಇದು ತತ್ವಜ್ಞಾನಕ್ಕೆ ಸಂಬಂಧಿಸಿದ್ದು. ಇದಕ್ಕೆ ಲೌಕಿಕ ಉಪಯೋಗದ ಮಿತಿಯಿಲ್ಲ. ಇದು 'ಇರುವಿಕೆಗೆ' ಸಂಬಂಧಿಸಿದ್ದಲ್ಲ. 'ಆಗುವಿಕೆ'ಗೆ ಸಂಬಂಧಿಸಿದ್ದು. ಅಲೌಕಿಕ–ನೀತಿಶಾಸ್ತ್ರ: ಧಾರ್ಮಿಕನಿಲುವು: ಜಗತ್ತಿನೊಂದಿಗೆ ನೇರ ಸಂಬಂಧ ಹೊಂದಿರುವುದಿಲ್ಲ.ಲೌಕಿಕ ಮತ್ತು ಆಗಮಿಕವೆನ್ನುವುದು ಬೇರೇ ಬೇರೆ ಎಂಬ

ಅರ್ಥಗಳಲ್ಲಿಯೇ ನಮ್ಮ ಕಾವ್ಯ ಮಾರ್ಗಗಳು ಸಿದ್ಧವಾಗಿವೆಯೆನ್ನುವುದು ಮನನೀಯ.ಇಹ ಲೋಕಬೇರೆ, ಪಾರಮಾರ್ಥಿಕ ಬೇರೆ ಎಂಬ ಅರ್ಥಗಳು ಚಾಲ್ತಿಯಲ್ಲಿವೆ.ಗ್ರೀಕ್ ರುದ್ರ ನಾಟಕಗಳಲ್ಲಿ ವಿಧಿ ಮತ್ತು ಮನುಷ್ಯರ ಸಂಬಂಧವು ಹೆಚ್ಚು ಸಂಕೀರ್ಣವಾಗಿದೆ.ಕ್ರಿಶ್ಚಿಯನ್ ನೈತಿಕ ನಿಲುವಿನ ಪ್ರಕಾರ ಸ್ವರ್ಗದಲ್ಲಿ ಇರುವ "ತಂದೆ"ಯು ನಮ್ಮನ್ನು ಕಾಪಾಡುತ್ತಾನೆ.

ವಿವರಗಳಿಗೆ ನೋಡಿ: ವಿ.ಎಂ.ಇನಾಂದಾರ್ ೧೯೮೨ ಪಾಶ್ಚಾತ್ಯ ಕಾವ್ಯಮಿಮಾಂಸೆ
ಸ್ವಾಮಿ ಆದಿದೇವಾನಂದ ೧೯೭೦ ಪಾತಂಜಲಿ-ಯೋಗ ದರ್ಶನ
ಮಹಾತ್ಮಾಗಾಂಧಿ ೧೯೫೮ ಧರ್ಮ ಮತ್ತು ನೀತಿ
ಹರಿದಾಸ ಭಟ್ಟಚಾರ್ಯ ೧೯೭೫ ಯುಗಯಾತ್ರಿ ಭಾರತೀಯ ಸಂಸ್ಕೃತಿ(ಸಂ.೩)

ಅಲ್ಪ

ಅಲ್ಪನೊಡನೆ ಯುದ್ಧ ಮಾಡಿ ಗೆಲ್ಲುವುದಕ್ಕಿಂತ ಹಿರಿಯನಾದವನೊಡನೆ ಸೋಲುವುದು ಮೇಲು. ಅಲ್ಪನ ಸಂಗ ಅಭಿಮಾನ ಭಂಗ ಎಂಬ ಗಾದೆಯ ಮಾತಿದೆ.

ಅಲ್ಲದಲ್ಲಣಿಗೆ

ಕಾರದ ಕಡಲೆಯ ಪುಡಿಯಿಂದ ಕೂಡಿದ ಹಸಿಯ ಶುಂಠಿಯ ಮಿಶ್ರಣವನ್ನುಳ್ಳ(ಅಲ್ಲದಣಿಗೆ) ಚಕ್ಕಣಗಳೆಂಬ ನಂಬಿಕೊಳ್ಳುವ ಪದಾರ್ಥಗಳನ್ನು ಸವಿ ಸವಿದು ಕಳ್ಳು ಕುಡಿದರು. ಇದು ಮದ್ಯಪಾನದ ವಿವರವನ್ನು ನೀಡುತ್ತದೆ. ಅಲ್ಲವೆಂದರೆ ಹಸಿಶುಂಠಿ; ಕಾರದ ಗೆಣಸು. ವಿವಿಧ ರೀತಿಯ ಮದ್ಯಗಳ ಕುರಿತು ಮಾನಸೋಲ್ಲಾಸದಲ್ಲಿ ಉಲ್ಲೇಖವಿದೆ.

ವಿವರಗಳಿಗೆ ನೋಡಿ : ಎಂ.ಎಂ. ಕಲಬುರ್ಗಿ. ಸಂ 1998 ಮಾನಸೋಲ್ಲಾಸ. 426-514

ಅಲ್ಲಳಿಗಾಳಗ

ವಿನೋದದ ಯುದ್ಧ ಅಥವಾ ಸುಲಭವಾದ ಯುದ್ಧ ಲಘುಪ್ರಹಾರವೆಂದು ಇಲ್ಲಿಯ ಭಾವಾರ್ಥವಾಗಿದೆ. ಇದು ನಿಜವಾದ ಯುದ್ಧವಲ್ಲ ಅದ್ದರಿಂದ ಶತ್ರು ಸಂಹಾರ ಮುಖ್ಯವಲ್ಲ. ವಾಸ್ತವವಾಗಿ ಕಾಳಗದಲ್ಲಿ ಶತ್ರು ಸಂಹಾರವೇ ಮುಖ್ಯ. ನಾಟಕೀಯ ಕಾಳಗವೆಂಬ ಅರ್ಥವು ಅಲ್ಲಳಿಕಾಳಗಕ್ಕೆ ಇದೆ.

ಅವತಾರ

ದೇವರು ಅವತಾರ ಎತ್ತುವುದಕ್ಕೂ ಸಾಮಾನ್ಯ ಮನುಷ್ಯರು ಹುಟ್ಟುವುದಕ್ಕೂ ವ್ಯತ್ಯಾಸವಿದೆ. ಅವತಾರವೆತ್ತುವುದೆಂದರೆ ದೇವರು ಸಾಮಾನ್ಯರ ಕಷ್ಟಗಳನ್ನು ಪರಿಹರಿಸಲು ಜನಿಸುವುದು ಎಂದರ್ಥ. ಇದು ಪ್ರಜ್ಞಾಪೂರ್ವಕವಾದುದು. ಅವತಾರವು ಲೋಕಕಲ್ಯಾಣಕ್ಕಾಗಿ ಇರುವಂಥದ್ದು.

ವಿವರಗಳಿಗೆ ನೋಡಿ: ಸ್ವಾಮಿ ಚಿನ್ಮಯಾನಂದ ೧೯೮೮ ಶ್ರೀಮದ್ ಭಗವದ್ಗೀತೆ
ಅಧ್ಯಾಯ-೪ ಪುಟ.೧೩೦-೧೩೨.
ಹರಿದಾಸ ಭಟ್ಟಚಾರ್ಯ ೧೯೭೫ ಯುಗಯಾತ್ರಿ ಭಾರತೀಯ ಸಂಸ್ಕೃತಿ(ಸಂ.೩)

ಅವಮೆ

ಅವಮೆಯೆಂದರೆ ಅಮವಾಸ್ಯೆ. ಹುಣ್ಣಿಮೆ ಮತ್ತು ಅಮವಾಸ್ಯೆಗಳು ಕಾಲಸೂಚಕಗಳು.

ಅಮಾಂತದಮಾಂತಂ ಚಾಂದ್ರೋಹಿ ಮಾಸಃ ಅಂದರೆ ಅಮವಾಸ್ಯೆಯಿಂದ ಅವಮಾಸ್ಯೆಗೆ ಲೆಕ್ಕವಿಡುವ ಪದ್ಧತಿಯನ್ನು ಚಾಂದ್ರಮಾನವೆಂದು ಕರೆಯುತ್ತಾರೆ. ಅವಮೆಗೆ ಕರ್ದಿಂಗಳು(ಕದ್ದಿಂಗಳು) ಎಂತಲೂ ಕರೆಯುತ್ತಾರೆ.

ತಿಂಗಳು ಮತ್ತು ಕರ್ದಿಂಗಳು ಅರ್ಥ ಸ್ಪಷ್ಟವಾಗಿದೆ. ಚಂದ್ರನಿಗೆ ತಿಂಗಳು ಮಾವನೆಂದು ಕರೆಯುತ್ತಾರೆ. ಚಾಂದ್ರಯಾನ ಪಂಥದಲ್ಲಿ ಅವಮಾಸ್ಯೆಯಿಂದ ಅವಮಾಸ್ಯೆಯವರೆಗೆ ಒಂದು ತಿಂಗಳು ಎಂದು ಪರಿಗಣಿಸುವುದರಿಂದ ಚಂದ್ರನಿಗೆ ತಿಂಗಳು ಮಾವ ಎಂದು ಬಂದಿರಬಹುದು. ಯಾವಾಗ ತಿಂಗಳ ಬೆಳಕು ಇರುವುದಿಲ್ಲವೋ ಆಗ ಕತ್ತಲೆಯಿರುತ್ತದೆ. ಅದು ಅವಮಾಸ್ಯೆ. ಆದುದರಿಂದ ಅವಮೆ ಎಂದು ಕರೆದರು. ಅದು ಕರಿದಾದ ತಿಂಗಳು(ಕದ್ದಿಂಗಳು) ಎಂದಾಗಿದೆ. 'ಅಮಾಸೆ'ಯೆಂಬ ಪ್ರಯೋಗವೂ ಇದೆ. "ಅಮಾ" ಎಂದರೆ ಭವ್ಯ ಮನೆಯೆಂದು ಅರ್ಥ.ವಾಸ್ಯನೆಂದರೆ ವಾಸಿಸುವವನು.ಚಂದ್ರನನ್ನು ನಕ್ಷತ್ರಗಳ ರಾಜನೆಂದು ಕರೆಯುತ್ತಾರೆ. ಜೀವಾತ್ಮಗಳ ಮೂಲವೇ ಸೂರ್ಯ. ಆದರೆ ಸೋಮನನ್ನು ವೇದಗಳಲ್ಲಿ ಚಂದ್ರನೆಂದು ಕರೆದಿರುವುದೂ ಇದೆ. ಚಂದ್ರನನ್ನು ಸಕಲ ಆನಂದಕರನೆಂದು ಕರೆಯುತ್ತಾರೆ. ಸೂರ್ಯ ಮತ್ತು ಚಂದ್ರರ ಸಮ್ಮಿಲನದಲ್ಲಿ (ಚಂದ್ರನು ಸೂರ್ಯನ ಹತ್ತಿರವಾದಾಗ-ಚಂದ್ರನಿಲ್ಲದೇ)ಅಮವಾಸ್ಯೆಯು ಹುಟ್ಟಿಕೊಳ್ಳುತ್ತದೆಯೆಂಬ ಪರಿಕಲ್ಪನೆಯು ವಿಶಿಷ್ಟವಾಗಿದೆ.

ಅವಷ್ಟಂಭ

ಕ್ಷತ್ರಿಯರು ತಲೆಬಾಗದವರು. ಎರಡನೆಯದಾಗಿ ಅವರ ನಡುನೆತ್ತಿಯನ್ನು ತುಳಿಯುವುದು ಅವರಿಗೆ ಮಾಡುವ ದೊಡ್ಡ ಅವಮಾನ. ಅವಷ್ಟಂಭ ಎಂದರೆ ವಿಶ್ರಾಂತಿ ತೆಗೆದುಕೊಳ್ಳು; ನಿಲ್ಲು; ಸ್ವಯಂ ಅಭಿಮಾನ. ಕಂಭ; ಸೌಷ್ಟವ, ಲೇಸು ಎಂಬ ಅರ್ಥಗಳಿವೆ.

ವಿವರಗಳಿಗೆ ನೋಡಿ: ಕ್ಷಾತ್ರಗುಣ; ರಾಜರು; ರಾಜಧರ್ಮ.

ಅವಸ್ಥಾಂತರ

ಅವಸ್ಥಾಂತರವೆಂದರೆ ಮತ್ತೊಂದು ಅವಸ್ಥೆಗೆ ಬರುವುದು; ಕಷ್ಟಕಾಲ ಎಂಬ ಅರ್ಥಗಳಿವೆ. ಇಲ್ಲಿ **ಕಷ್ಟ ಕಾಲ** ಎಂದು ಸೂಚಿಸಬಹುದು. ಅವಸ್ಥೆಯೆನ್ನುವುದನ್ನು ಈಗಲೂ ಹೇಳುತ್ತೇವೆ. ಅವಸ್ಥೆ – ದುರವಸ್ಥೆ ಪ್ರಯೋಗಗಳು.

ಅವಿನ್ನಾಣ

ಅವಿನ್ನಾಣವೆಂದರೆ ಅಭಿಜ್ಞಾನ; ಗುರುತು ಎಂದರ್ಥ. ಹಾಗೆಯೇ ಇದು ಸಂಜ್ಞೆ ಅಥವಾ ಸಂಕೇತವೆಂಬುದನ್ನು ಸೂಚಿಸುತ್ತದೆ.

ಅವಿವೇಕಿಗಳು

ಅನೇಕ ದೋಷಗಳಿಂದ ಕೂಡಿದರೂ ದೇಹವು ಯಾರಿಗೆ ಪ್ರಿಯವಾಗುವುದಿಲ್ಲ. ಅಂತೆಯೇ ಅವಿವೇಕಿಗಳು ಶತ್ರುಗಳ ಮಾಡುವ ಹಿತವನ್ನು ತಮಗೆ ಪ್ರಿಯವೆಂದೇ ಬಗೆಯುತ್ತಾರೆ. ಅದನ್ನು ಮರೆಯಬಾರದು ಎಂದು ಕರ್ಣಾಟಕ ಪಂಚತಂತ್ರವು ಹೇಳುತ್ತದೆ ಅವಿವೇಕಿಗಳು ಎಂದರೆ ವಿವೇಕವನ್ನು ಕಳೆದುಕೊಂಡವರು. ವಿವೇಕವು ಮನುಷ್ಯನಲ್ಲಿ ತಾರತಮ್ಯ ಜ್ಞಾನವನ್ನು ಕೊಡುತ್ತದೆ: ವಿವೇಕವು ಮನುಷ್ಯನಲ್ಲಿ ಒಳಿತು–ಕೆಡುಕುಗಳ ಅರಿವನ್ನು ಉಂಟುಮಾಡುತ್ತದೆ. ಆದರೆ ಅವಿವೇಕವು ಹಾಗಲ್ಲ. ಅದು ಶತ್ರುಗಳ ಹಿತವನ್ನು ತಮಗೆ ಪ್ರಿಯವೆಂದೇ ತಿಳಿದುಕೊಳ್ಳುತ್ತದೆ. ಸಾಂಸ್ಕೃತಿಕವಾಗಿ ಅವಿವೇಕಿಗಳಿಗೆ ಗೌರವವಿಲ್ಲ. ವಿವೇಕವೆನ್ನುವುದು ಮನಸ್ಸಿಗೆ ಸಂಬಂಧಿಸಿದ್ದು.

ಅಶುದ್ಧರು

ಬ್ರಾಹ್ಮಣರು ಭಗವದ್ಗೀತೆಯನ್ನು ಹಾಡಿದ್ದು ಮೇಲ್ವರ್ಗದವರಿಗಾಗಿ. ಮತ್ತು ಅವರ ಮೂಲಕವೇ ಇದು ಬೇರೆಯವರಿಗೆ ತಲುಪಬೇಕಿತ್ತು ಎಂಬುದು ತೀರಾ ಸ್ಪಷ್ಟ. ಸ್ವತಃ ಕೃಷ್ಣನೇ ಗೀತೆಯಲ್ಲಿ, "ಪಾಪಯೋನಿಜರಾದ ಮಹಿಳೆಯರು, ವೈಶ್ಯರು ಹಾಗೂ ಶೂದ್ರರು ಕೂಡ ನನ್ನನ್ನು ಆಶ್ರಯಿಸಿ ಮುಕ್ತಿಯನ್ನು ಪಡೆಯಬಹುದು" ಎನ್ನುತ್ತಾನೆ (ಗೀ.9–32). ಅದರ ಅರ್ಥ ಹೆಂಗಸರು ಮತ್ತು ದುಡಿಯುವ ಹಾಗೂ ಉತ್ಪಾದಕ ವರ್ಗದ ಎಲ್ಲಾ ಪುರುಷರೂ ಹುಟ್ಟಿನಿಂದಲೇ ಅಶುದ್ಧರು. ಆದರೆ ಸಾವಿನ ನಂತರ, ಅವರೇನಾದರೂ ಮುಕ್ತಿಯನ್ನು ಪಡೆಯಬೇಕಾದರೆ, ತಮ್ಮನ್ನು ಇಷ್ಟೊಂದು ಅಸಡ್ಡೆಯಿಂದ, ಕೀಳಾಗಿ ಕಾಣುವ ಆ ದೇವರನ್ನೇ, ಭಕ್ತಿಯಿಂದ ಹಾಗೂ ಶ್ರದ್ಧೆಯಿಂದ ಆಶ್ರಯಿಸಬೇಕು. ಜೊತೆಗೆ ಈ ಎಲ್ಲಾ ತಾರತಮ್ಯಗಳನ್ನು ಸೃಷ್ಟಿಸಿದವರು ಬೇರೆ ಯಾರೂ ಅಲ್ಲ. ಸ್ವತಃ ಆ ಭಗವಂತನೇ. "ನಾಲ್ಕು ವರ್ಣಗಳು ನನ್ನಿಂದ ಸೃಷ್ಟಿಸಲ್ಪಟ್ಟಿವೆ (ಗೀ.4–13) ಎಂದು ಅವನೇ ಹೇಳಿಕೊಳ್ಳುತ್ತಾನೆ. ಆತನ ಮಹತ್ತರವಾದ ಸಾಧನೆಗಳ ಪಟ್ಟಿಯಲ್ಲಿ ವರ್ಣಗಳ ಸೃಷ್ಟಿ ಕೂಡ ಒಂದು.

ಶುದ್ಧ–ಅಶುದ್ಧ; ಪವಿತ್ರ–ಅಪವಿತ್ರ; ನ್ಯಾಯ–ಅನ್ಯಾಯ; ಸತ್ಯ–ಅಸತ್ಯ- ಹೀಗೆ ಮೌಲ್ಯಗಳನ್ನು ಪ್ರತಿಪಾದಿಸುವ ಅನೇಕ ಜೋಡಿ ಪದಗಳು ನಮಗೆ ದೊರೆಯುತ್ತವೆ.

ಮತ್ತು ಇವು ಸಮಾಜದಲ್ಲಿ ವರ್ಗೀಕರಣಗಳನ್ನು ಮಾಡುತ್ತವೆಯೆಂಬುದು ಗಮನಾರ್ಹ. ವಿವರಗಳಿಗೆ ನೋಡಿ: ಡಿ. ಡಿ. ಕೊಸಾಂಬಿ 2003 ಪುರಾಣ ಮತ್ತು ವಾಸ್ತವ ಪುಟ.22

ಅಶೋಕನ ಶಾಸನಗಳಲ್ಲಿನ ಮುಖ್ಯ ವಿಷಯಗಳು

ರಾಜ್ಯದಲ್ಲಿ ಪ್ರಾಣಿಗಳನ್ನು ಕೊಲ್ಲಬಾರದು. ಜೀವಹಿಂಸೆ ಮಾಡಕೂಡದು, ಯಜ್ಞಬಲಿಗಳೂ, ಇತರ (ಅರಣ್ಯಕ) ಬಲಿಗಳೂ ನಿಷಿದ್ಧ. ಯಜುರ್ವೇದ ಕಾಲದಿಂದಲೂ ಯಜ್ಞಬಲಿಗಳಿಗೂ, ಗೋಮಾಂಸ ಭಕ್ಷಣೆಗೂ ವಿರುದ್ಧವಾಗಿ ಸಾಗಿಬಂದ ಪ್ರತಿಭಟನೆ ಈಗ ಮೊಟ್ಟ ಮೊದಲ ಬಾರಿಗೆ ರಾಜಶಾಸನದಲ್ಲಿ ಪ್ರಾಮುಖ್ಯ ಪಡೆಯಿತು. ಅಂದರೆ ಪಶುಪೋಷಕ ಸಮಾಜದ ಮೇಲೆ ಕೃಷಿಸಮಾಜವು ತನ್ನ ಆಧಿಪತ್ಯವನ್ನು ನೆಲೆಗೊಳಿಸಿತು.

ಬಂಧುಗಳನ್ನೂ, ಬ್ರಾಹ್ಮಣರನ್ನೂ, (ಬೌದ್ಧ) ಶ್ರವಣರನ್ನೂ ಗೌರವಿಸಬೇಕು. ತಂದೆತಾಯಿಗಳನ್ನೂ ಹಿರಿಯರನ್ನೂ ಆದರಿಸಬೇಕು. ಸ್ನೇಹಿತರ ಬಗ್ಗೆ ಉದಾರವಾಗಿರಬೇಕು. ಸಂಪಾದನೆಯಲ್ಲೂ ಖರ್ಚು ಮಾಡುವುದರಲ್ಲೂ ಮಿತಿಯನ್ನು ಪಾಲಿಸಬೇಕು. ಅಧಿಕಾರಿಗಳು ಮನುಷ್ಯರಿಗೂ ಪಶುಗಳಿಗೂ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಬೇಕು. ಬಾವಿಗಳನ್ನು ತೋಡಿಸಬೇಕು. ನೆರಳಿಗಾಗಿ ಮರಗಳನ್ನು ನೆಡೆಸಬೇಕು. ನೇರವಾದ ವಿಚಾರಣೆ ನ್ಯಾಯಯುತವಾಗಿದ್ದು ಶಿಕ್ಷೆ ನಿಷ್ಪಕ್ಷಪಾತವಾಗಿರಬೇಕು. ಮರಣ ಶಿಕ್ಷೆ ವಿಧಿಸಿದವರಿಗೆ ಮೂರು ದಿನಗಳ ಗಡುವನ್ನು ಕೊಡಬೇಕು. ಈ ಮೂರು ದಿನಗಳಲ್ಲಿ ಶಿಕ್ಷೆಗೊಳಗಾದವರ ಬಂಧುಮಿತ್ರರು ಸ್ಥಳೀಯ ಅಧಿಕಾರಿಗಳಿಂದ ಕ್ಷಮಾಭಿಕ್ಷೆಯನ್ನು ಕೋರಬಹುದು. ಅಂತಹ ಯಾವ ಬಂಧುಮಿತ್ರರೂ ಇಲ್ಲವಾದರೆ ಶಿಕ್ಷೆಗೊಳಗಾದವನೇ ಕನಿಷ್ಠ ತನ್ನ ಮರಣೋತ್ತರ ಆತ್ಮ ಶಾಂತಿಗಾಗಿ ಪ್ರಾರ್ಥನೆಗಳನ್ನು ಸಲ್ಲಿಸಬಹುದು. ಕಾರಾಗೃಹಗಳಲ್ಲಿರುವ ಖೈದಿಗಳಿಗೆ ಮಕ್ಕಳಿದ್ದರೆ ಅಧಿಕಾರಗಳು ಅವರಿಗೆ ಧನ ಸಹಾಯವನ್ನು ನೀಡಬೇಕು. ಖೈದಿಗಳು ಮಾನಸಿಕವಾಗಿ ಅಸ್ವಸ್ಥರಾದವರಾದರೆ ಸಂಕೋಲೆಗಳನ್ನು ಹಾಕಬಾರದು. ಮುದುಕರಾಗಿದ್ದರೆ ಬಿಡುಗಡೆ ಮಾಡಬೇಕು. ಯಾವುದೇ ವಿಷಯಗಳಿಗೂ ಆಡಳಿತಾಧಿಕಾರಿಗಳು ಕಾಲಕಾಲಕ್ಕೆ ಸರಿಯಾಗಿ ವರದಿಗಳನ್ನು ತಯಾರಿಸಿ ರಾಜನಿಗೆ – ಅದು ರಾತ್ರಿಯಿರಲಿ, ಹಗಲಿರಲಿ – ತಪ್ಪದೆ ಕಳುಹಿಸಿ ಕೊಡಬೇಕು. ಈ ಧರ್ಮವನ್ನು ಸಕ್ರಮವಾಗಿ ನಿರ್ವಹಿಸುವ ಸಲುವಾಗಿ ಅಶೋಕನು ಧರ್ಮ ಮಹಾಮಾತ್ಯರನ್ನು ನೇಮಿಸಿದ್ದನು. ಬ್ರಾಹ್ಮಣರು, ಬೌದ್ಧರು, ಜೈನರು ಮೊದಲಾಗಿ ಎಲ್ಲ ಮತಗಳ ವ್ಯವಹಾರಗಳನ್ನು ಹಸನುಗೊಳಿಸಿ ನೋಡಿಕೊಳ್ಳಲು ಪ್ರತ್ಯೇಕವಾಗಿ ಒಬ್ಬೊಬ್ಬ ಮಹಾಮಾತ್ಯನನ್ನು ನೇಮಿಸಿದ್ದನು. (ಡಿ. ಡಿ. ಕೊಸಾಂಬಿ ೧೯೯೮ ಪು. ೧೯೪–೧೯೫) ಚರಿತ್ರೆಯಲ್ಲಿ ಅಶೋಕನನ್ನು ಬಹಳ ಕೊಂಡಾಡಲಾಗಿದೆ.

ಅಶ್ವಮೇಧ

"ಅಶ್ವ-ಮೇಧ, ಪ್ರತಿಮಾ: ಸಂಕೇತವು, ನಾಗ ಸಂಪ್ರದಾಯದ ಇನ್ನೂ ಒಂದು ವೈಶಿಷ್ಟ್ಯವನ್ನು ವಿಶದಪಡಿಸುತ್ತದೆ. 'ಯಾಯಾ' ಈ ಶಬ್ದ ಸಂಕೇತದಿಂದ ನಿಷ್ಪನ್ನವಾಗಿರುವ ಜಾ-ಜಾ (=ಝಾ-ಝಾ=ಕುದುರೆ), ಮತ್ತು ಜಾಯಿಲ ಇವು ಸಹ ತುಂಬ ವೈಶಿಷ್ಟ್ಯಪೂರ್ಣ ಸಂಕೇತಗಳಾಗಿವೆ. ಜಾಯಿಲ-ಗಮನಿಸುವ ಸ್ವಭಾವವುಳ್ಳುದು ನಾಯಿ, ಕುದುರೆ ಎರಡೂ ಸರಿ! ನಾಯಿಯೂ ಸರ್ಪಶಕ್ತಿಯ ಸಂಕೇತವೇ ಆಗಿದೆ. ಇಂಗ್ಲಿಷಿನಲ್ಲಂತೂ (Bitch ನೋಡಿ!) ಅಶ್ವ=ವಾಜಿ: 'ವಾಜೀ ರಣ': ನಾಗಶಕ್ತಿಯನ್ನು ಸ್ಥಿರಪಡಿಸಿಕೊಳ್ಳುವುದು. ಭೀಮನಿಗೆ ನಾಗಕನ್ನೆಯರಿಂದ ಸಹಸ್ರ ನಾಗಗಳ ಶಕ್ತಿ ದೊರೆತಿತಂತೆ! ಆ ನಾಗ, ಆನೆಯಲ್ಲ, ಎಂಬುದನ್ನು ಸಿದ್ಧಪಡಿಸುವ ಆವಶ್ಯಕತೆಯುಂಟೇ?"

"ಹೇ ಅಶ್ವವೆ ನಿನ್ನ ಶರೀರವು ಪತನಶೀಲವಾಗಿದೆ!" (: ಹೇ ಅಶ್ವನ್ ತವ ಶರೀರಂ ಪತಯಿಷ್ಣುಃ) 'ನಿನ್ನ ಶೃಂಗಸ್ಥಾನೀಯ ಕೇಶಗಳು ಮನೋಹರವಾಗಿ ಪುರದಲ್ಲಿ ಸುತ್ತಲೂ ಅರಣ್ಯದಂತೆ ಸೌಮ್ಯವಾಗಿ ಹರಡಿಕೊಂಡಿವೆ. "ತವ ಶೃಂಗಾಣಿ: ಶೃಂಗಸ್ಥಾನೀಯಾಃ ಕೇಶಾಃ, ಪುರುತ್ರಾಃ ವಿಶಿಷ್ಠಿತಾ ಅರಣ್ಯೇಷು ಜಾರ್ಭುರಾಣಾ ಚರಂತಿ" ಈ ಬಗೆಯಲ್ಲಿ ಸ್ತೋತ್ರ ಮಾಡಿಸಿಕೊಂಡ ಈ ಅಶ್ವವು ಬಳಿಕ ಯಜ್ಞಪಶುವಾಗಿ ಕತ್ತರಿಸಲ್ಪಟ್ಟು ದೇವರ ಬಳಿಗೆ ಹೋಗುತ್ತದೆ! ದೇವಾನ್ ಗಮ್ಯಾಃ ಈ 'ಅಶ್ವ': ಯಜ್ಞಪಶು, ಎಂದರೆ ಅಪಾಂ ನಪ್ತೃವು; ಗೃತ್ಸಮದ ಕವಿಯ ಸ್ತೋತ್ರ ವಿಚಯವಾದ ಆ ಪದಲ್ಲಿ ಜನ್ಮತಾಳಿದ ಅಶ್ವವು ಮತ್ತು ದೀರ್ಘತಮ ಕವಿಯ ವರ್ಣನಾ ವಿಷಯವಾದ ಸಮುದ್ರಯೋನಿ ಅಶ್ವವು ಬೇರೆಯಲ್ಲ. ಓಲ್ಡೆನ್ ಬರ್ಗ್ ಊಹಿಸಿದಂತೆ ಅಪಾಂನಪ್ತೃವು ಇದು Water genie ಆಗಿದೆ. ನೀರೊಳಗಿನ ಬೆಂಕೆ=ವಡವಾನಲ=ಬಾಡಬ= ನೀರಕುದುರೆ! ವಿಶ್ವೋತ್ಪತ್ತಿಗೆ ಕಾರಣವಾದ ಶಕ್ತಿ: ಪುರುಷರೂಪ: ಅಶ್ವ: ನಾಗ: ಋಕ್ಷ (ಕರಡೆ): ಕೇಶಿನ್: ಕಪರ್ದಿ: ಪುರುಷ ಇತ್ಯಾದಿ" ಎಂದು ಶಂಬಾ ಜೋಶಿಯವರು ಹೇಳುತ್ತಾರೆ.

ಅಶ್ವಮೇಧ ಹೆಸರು ಸೂಚಿಸುವಂತೆ ಅಶ್ವದ ಬಲಿ, ಯಜ್ಞಕ್ಕೆ ನೀಡುವ ಬಲಿಗಳಲ್ಲಿ ಕುದುರೆಯೂ ಒಂದು. ರಾಮಾಶ್ವಮೇಧ ಪಾಂಡವಾಶ್ವಮೇಧವೂ ಪ್ರಸಿದ್ಧ. ಅಶ್ವಮೇಧದಲ್ಲಿ ಕುದುರೆಯ ಹಣೆಪಟ್ಟಿಯಲ್ಲಿ ಸಂದೇಶ ಕಳಿಸಲಾಗುತ್ತದೆ. 'ಬಲುಹುಳ್ಳವರು ಕಟ್ಟಿ ಕಾದುವುದು. ಕಾದಲು ಅಸಾಧ್ಯವಾದವರು ಶರಣಾಗುವುದು' ಕುದುರೆಯ ಜೈತ್ರಯಾತ್ರೆಯಾದ ಮೇಲೆ ಅಶ್ವಮೇಧಯಾಗ ನಡೆಸಲಾಗುತ್ತದೆ. ಇದರಲ್ಲಿ ಅಶ್ವವನ್ನು ಯಜ್ಞಕ್ಕೆ ಬಲಿ ಕೊಡಲಾಗುತ್ತದೆ. ಅದರ ವಪೆಯನ್ನು ಕುದುರೆಯ ದೇಹದ ತಿರುಳನ್ನು ಯಾರು ತಿನ್ನಬೇಕು ಎಂಬ ಲೆಕ್ಕಾಚಾರವಿದೆ ಕುದುರೆಯ ಮೆದುಳನ್ನು ರಾಣಿಯರಿಗೆ ನೀಡಲಾಗುತ್ತಿತ್ತು ಎಂದು ಪುರಾಣಗಳಲ್ಲಿ ಬರುತ್ತವೆ.

ತಾಪೀ ಧರ್ಮಾರಾವ್ ಅವರು ಅಶ್ವಮೇಧದ ಕುರಿತು ಮಂಡಿಸಿರುವ ವಿಷಯ ಗಮನಾರ್ಹ. ಒಂದು ಜನಮೇಜಯನು ಅಶ್ವಮೇಧ ಯಾಗವನ್ನು ನಿಲ್ಲಿಸಿದ. ಅಶ್ವಮೇಧ ಯಾಗದಲ್ಲಿ ಕುದುರೆಯ ಲಿಂಗವನ್ನು ಯಜ್ಞಮಾಡುವವನ ಹೆಂಡತಿಯು ತನ್ನ ಯೋನಿಯಲ್ಲಿ ಇಟ್ಟುಕೊಳ್ಳುತ್ತಾಳೆ. (ತಾಪೀ ಧರ್ಮಾರಾವ್ 1980 ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ ಪುಟ. 81)

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 4 ಪುಟ. 435–438.

ಲಕ್ಷ್ಮೀಶನ ಜೈಮಿನಿಭಾರತ

ಅಶ್ವಿನಿ ದೇವತೆಗಳು

"ಇಂದ್ರ, ಅಗ್ನಿ, ಸೋಮ–ಇವರನ್ನು ಬಿಟ್ಟರೆ ಅಶ್ವಿನಿಗಳಷ್ಟು ಪ್ರಾಮುಖ್ಯ ಪಡೆದ ಬೇರೆ ದೇವತೆಗಳಿಲ್ಲ. ಐವತ್ತು ಸೂಕ್ತಗಳು ಇವರನ್ನು ಕುರಿತು ಸ್ತೋತ್ರ ಮಾಡುತ್ತವೆ. ಇವರು ಯಮಳದೇವತೆಗಳು, ಚಿನ್ನದಂತೆ ಪ್ರಕಾಶಮಾನರು, ರೂಪವಂತರು, ಕಮಲಗಳ ಹಾರದಿಂದ ಅಲಂಕೃತರಾದವರು, ವಿವೇಕಶಾಲಿಗಳು, ಮಹಿಮಾನ್ವಿರು ಮತ್ತು ಸತ್ಯವಂತರು.

ಇವರಿಗೆ ಜೇನುತುಪ್ಪ ಕಂಡರೆ ತುಂಬ ಪ್ರೀತಿ. ಜೇನು ತುಂಬಿದ ನೂರು ಚರ್ಮದ ಚೀಲಗಳನ್ನು ಒಂದೇ ಸಲ ಕುಡಿದು ಬರಿದಾಗಿ ಮಾಡುವಷ್ಟು ಇಷ್ಟ ಅವರಿಗೆ ಜೇನುತುಪ್ಪ. ಅವರ ರಥ ಜೇನುತುಪ್ಪದ ಬಣ್ಣ. ಜೇನು ಹುಳುಗಳಿಗೆ ಜೇನನ್ನು ಕೊಡುವವರು ಇವರೇ. ಇವರಿಗೆ ಜೇನುತುಪ್ಪ ತುಂಬ ಇಷ್ಟವಾದರೂ ಇವರು ಸೋಮವನ್ನು ಉಪೇಕ್ಷೆ ಮಾಡುವುದಿಲ್ಲ.

ಆಕಾಶದಲ್ಲಿ, ಭೂಮಿ ಸಮುದ್ರಗಳ ಮೇಲೆ ಅವರು ಸಂಚರಿಸುತ್ತಾರೆ. ಅವರು ಬೆಳಗ್ಗೆ ಸಂಚರಿಸುವ ಕಾಲ ಉಷಃಕಾಲದಿಂದು ಸೂರ್ಯೋದಯದವರೆಗೆ. ಅವರನ್ನು ಉಷೆಯರು ಎಬ್ಬಿಸಿದಾಗ ಅವರು ಉಷೆಯರೊಡನೆ ಭೂಮಿಗೆ ಇಳಿಯುತ್ತಾರೆ. ಬೆಳಗ್ಗೆ ಅಲ್ಲದೆ ಅವರು ಮಧ್ಯಾಹ್ನದಲ್ಲೂ ಸಂಜೆಯ ಸಮಯದಲ್ಲೂ ಭೂಮಿಗೆ ಇಳಿದು ಬರುವುದುಂಟು.

ಅಶ್ವಿನಿಗಳು ಮಾನವರಿಗೆ ಬಹಳ ಉಪಕಾರಿಗಳು. ತಮ್ಮಲ್ಲಿರುವ ಔಷಧಗಳಿಂದ ಅವರು ಜನರ ರೋಗರುಜಿನಗಳನ್ನು ನಿವಾರಿಸುತ್ತಾರೆ. ದಾಂಪತ್ಯ ಸುಖಕ್ಕೂ ಅವರೇ ಕಾರಣರು. ಮದುವೆಯ ಕಾಲದಲ್ಲಿ ಅವರನ್ನು ತಪ್ಪದೆ ಸ್ತೋತ್ರ ಮಾಡುವ ಸಂಪ್ರದಾಯವಿದೆ.

ಅಶ್ವಿನಿ ದೇವತೆಗಳು ಆಯುಸ್ಸನ್ನು ವೃದ್ಧಿ ಮಾಡುತ್ತಾರೆ. ಅಷ್ಟೇ ಅಲ್ಲದೆ ಯೌವ್ವನವನ್ನು ನೀಡುತ್ತಾರೆ. ಅಶ್ವಿನಿ ಮತವೆಂಬುದು ಆಯುರ್ವೇದದಲ್ಲಿಯೂ

ಬರುತ್ತದೆ. ಅಶ್ವಿನಿ ದೇವತೆಗಳು ಚ್ಯವನ ಮಹರ್ಷಿಗೆ ಯೌವನ ನೀಡಿರುವ ಕತೆಯು ಸುಪ್ರಸಿದ್ಧವಾಗಿದೆ."

ವಿವರಗಳಿಗೆ ನೋಡಿ: ಜಿ. ಹನುಮಂತರಾವ್ 2004 ಋಗ್ವೇದ ಸೂಕ್ತಗಳು
ಪುಟ. 69-70.
ಎಚ್. ತಿಪ್ಪೇರುದ್ರಸ್ವಾಮಿ 2007 ಕರ್ನಾಟಕ ಸಂಸ್ಕೃತಿ ಸಮೀಕ್ಷೆ
ಪುಟ. 172-175, 181-183.

ಅಷ್ಟಮಂಗಳ

ಅಷ್ಟಮಂಗಳ: ಛತ್ರ, ಧ್ವಜ, ಕುಶ, ಚಾಮರ, ಸುಪ್ರತಿಷ್ಟಕ (ಪೂಜಾದ್ರವ್ಯಗಳನ್ನಿಡುವ ಪಾತ್ರೆ), ಭೃಂಗಾರ (ಗಿಂಡಿ), ದರ್ಪಣ, ವ್ಯಜನ (ಬೀಸಣಿಗೆ)

ಮಂಗಳವನ್ನು ಎಂಟು ರೀತಿಯಲ್ಲಿ ಗುರುತಿಸುವ ಕ್ರಮವಿದೆ. ಅದರಲ್ಲಿ ಎಂಟು ಮಾದರಿಯ ಮಂಗಳವೆಂದರೆ ಛತ್ರ, ಧ್ವಜ, ಕುಶ, ಚಾಮರ, ಪೂಜಾದ್ರವ್ಯಗಳನ್ನು ಇಡುವ ಪಾತ್ರೆ, ಗಿಂಡಿ; ಕನ್ನಡಿ; ಬೀಸಣಿಗೆ ಇವುಗಳು ಮಂಗಳ ಸೂಚಕಗಳು. ಇದಕ್ಕೆ ತದ್ವಿರುದ್ಧವಾದುದು ಅಮಂಗಳ ಗಮನಿಸಬೇಕಾದ ಅಂಶವೆಂದರೆ ಎಂಟು ರೀತಿಯ ಮಂಗಲವನ್ನು ಗುರುತಿಸಿರುವುದು. ಅಮಂಗಳಕ್ಕೆ ಸಂಖ್ಯಾ ಮಿತಿಯಿಲ್ಲ. ಜ್ಯೋತಿಷ್ಯದಲ್ಲಿ ಅಷ್ಟಮಂಗಲ ಪ್ರಶ್ನೆಯೆಂಬುದಿದೆ.

ಅಷ್ಟಮದಗಳು

೧) ಜ್ಞಾನದ ಮದ, ೨) ಪೂಜೆಯ ಮದ, ೩) ಕುಲದ ಮದ, ೪) ಜಾತಿಯ ಮದ, ೫) ಬಲದ ಮದ, ೬) ಋದ್ಧಿಯ ಮದ, ೭) ತಪದ ಮದ, ೮) ಶರೀರದ ಮದ, ಈ ಎಂಟು ಮದಗಳು ಸಮ್ಯಗ್ದೃಷ್ಟಿಗೆ ಇರುವುದಿಲ್ಲ. ಇದನ್ನು ಫ್ರಾಯ್ಡ್ 'ಇಗೋ' ಎಂದು ಬಳಸಿದ್ದಾನೆ.

ಅಷ್ಟವಿಧ ಅರ್ಚನೆ

ಜಲ, ಗಂಧ, ಅಕ್ಷತೆ; ಹೂ: ಚರು, ದೀಪ; ಧೂಪ, ಫಲ – ಇವೆಂಟನ್ನು ಅರ್ಚನೆಗಾಗಿ ಬಳಸಿಕೊಳ್ಳುವುದನ್ನು ಅಷ್ಟವಿಧ ಅರ್ಚನೆಯೆಂದು ಕರೆಯುತ್ತಾರೆ. ಸಂಖ್ಯಾಶಾಸ್ತ್ರದಲ್ಲಿ ಒಂದು:, ಮೂರು:, ಐದು:, ಏಳು ಬೆಸಸಂಖ್ಯೆಗಳು; ಎರಡು:, ನಾಲ್ಕು:, ಆರು:, ಎಂಟು ಸರಿಸಂಖ್ಯೆಗಳು ಎಂಬುದಿಲ್ಲಿ ಗಮನಾರ್ಹ.

ಅಷ್ಟಶೋಭೆ

ಎಂಟು ವಿಧದ ಶೋಭೆಯೆಂಬುದನ್ನು ಅಷ್ಟಶೋಭೆಯೆಂದು ಕರೆಯುತ್ತಾರೆ. ಕಳಶ; ಕನ್ನಡಿ, ಬಾವುಟ ತೋರಣ, ಧೂಪ, ದೀಪ, ಭೇರಿ, ಬೀಸಣಿಕೆಗಳು ಎಂಬ ಎಂಟು ರೀತಿಯ ಅಲಂಕಾರಗಳೆನಿಸಿವೆ.

ಅಷ್ಟಸಿದ್ಧಿಗಳು

ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಕಾಮ್ಯ, ಈಶಿತ್ವ, ವಶಿತ್ವ ಎಂಬ ಎಂಟು ಸಿದ್ಧಿಗುಣಗಳನ್ನು ಹೇಳುತ್ತಾರೆ. ಸಪ್ತಸಿದ್ಧಿಯೆಂದು ಹೇಳುವ ಕ್ರಮವಿಲ್ಲ. ಅಷ್ಟಸಿದ್ಧಿ: ಅಷ್ಟಾಂಗ: ಮುಂತಾದ ಪದ ಪ್ರಯೋಗಗಳ ವಿಶಿಷ್ಟತೆಯನ್ನು ಇಲ್ಲಿ ಗಮನಿಸಬಹುದು. ಇದು ಸಂಖ್ಯಾಶಾಸ್ತ್ರಕ್ಕೂ ಸಂಬಂಧಿಸಿದೆ.

ಅಷ್ಟಾಂಗ ನಿಮಿತ್ತ

ಒಂದು ರೀತಿಯ ಶಕುನಶಾಸ್ತ್ರ. ಲಕ್ಷಣ, ಅಂಗ, ಸ್ವರ, ವ್ಯಂಜನ, ಭೌಮ, ಅಂತರಿಕ್ಷ, ಸ್ವಪ್ನ, ಭಿನ್ನ ಎಂಟು ರೀತಿಯ ಶಕುನಶಾಸ್ತ್ರಗಳು ಎಂದು ಜೈನ ಧರ್ಮವು ನಂಬುತ್ತದೆ. ನಿಮಿತ್ತವೆಂದರೆ ಕಾರಣವೂ ಹೌದು.

ಅಷ್ಟಾಂಗ ಭೋಗ

ಪ್ರೇಮ, ಅನ್ನನೀರು, ತಾಂಬೂಲ, ಪುಷ್ಪ, ಚಂದನ, ವಸ್ತ್ರ, ಶಯ್ಯ, ಅಲಂಕಾರ ಇವು ಜೈನಧರ್ಮದ ಪ್ರಕಾರ ಅಷ್ಟಾಂಗ ಭೋಗಗಳು. ಈ ಕುರಿತು ಜೈನದ ಧರ್ಮದ ಕಾವ್ಯಗಳಲ್ಲಿ ಹೇರಳವಾಗಿ ಬರುತ್ತದೆ. ಅಷ್ಟಾಂಗ ಭೋಗವೆಂದು ಕರೆದಿರುವುದು ಗಮನಾರ್ಹವಾಗಿದೆ. ಜೈನ ಧರ್ಮದ ಪ್ರಕಾರ ಯಾರು ಈ ಭೋಗವನ್ನು ತ್ಯಜಿಸುತ್ತಾರೋ ಅವರು ಸವಣರಾಗುತ್ತಾರೆ. ಭೋಗವನ್ನು ತ್ಯಜಿಸುವುದು ವಿರಕ್ತಿಯ ಒಂದು ಗುಣವಾಗಿದೆ. ಭೋಗ ಮತ್ತು ವಿರಕ್ತಿಯನ್ನು ವಿಭಿನ್ನ ಧ್ರುವಗಳಲ್ಲಿ ಇರಿಸಿದ್ದು ಗಮನಾರ್ಹ.

ಅಷ್ಟಾಂಗಮಹಾನಿಮಿತ್ತ

ಅಷ್ಟಾಂಗ ಮಹಾನಿಮಿತ್ತವೆಂದರೆ ಎಂಟು ಅಂಗಗಳಲ್ಲಿ ನಿಷ್ಣಾತನಾದವನು. (ಜ್ಯೋತಿಷಿ) ಭೂಮಿ, ಸ್ವಪ್ನ, ಶರೀರ, ಸ್ವರ, ಉತ್ಪಾತ, ಆಕಾಶ, ಲಕ್ಷಣ, ವ್ಯಂಜನ– ಇವುಗಳಿಗೆ ಸಂಬಂಧಿಸಿದ ಶಾಸ್ತ್ರಜ್ಞನೀತ.

ಒಂದು ರೀತಿಯ ಶಕುನಶಾಸ್ತ್ರ. ಲಕ್ಷಣ, ಅಂಗ, ಸ್ವರ, ವ್ಯಂಜನ, ಭೌಮ, ಅಂತರಿಕ್ಷ, ಸ್ವಪ್ನ, ಚಿಹ್ನೆ ಎಂಟು ರೀತಿಯ ಶಕುನಶಾಸ್ತ್ರಗಳು.

ವಿವರಗಳಿಗೆ ನೋಡಿ: ಟಿ. ಕೇಶವಭಟ್ಟ 2010 ವಡ್ಡಾರಾಧನೆ ಗದ್ಯಾನುವಾದ ಪು. 138

ಅಷ್ಟಾಹ್ನಿಕ ಮಹಾಪೂಜೆ

ಚೈತ್ಯಾಲಯಗಳಲ್ಲಿ ಜಿನಬಿಂಬಕ್ಕೆ ವರ್ಷಕ್ಕೆ ಮೂರು ಬಾರಿ ಎಂಟು ದಿನಗಳ ಪರ್ಯಂತ ಚತುರ್ನಿಕಾಯಾಮರರು ನಡೆಸುವ ಜಿನಪೂಜೆಯನ್ನು ಅಷ್ಟಾಹ್ನಿಕ ಮಹಾಪೂಜೆ ಎಂದು ಕರೆಯುತ್ತಾರೆ. ಈ ಎಂಟು ದಿನಗಳೆಂದರೆ ಆಷಾಢ, ಕಾರ್ತಿಕ ಮತ್ತು ಫಾಲ್ಗುಣ ಮಾಸಗಳ ಶುಕ್ಲ ಅಷ್ಟಮಿಯಿಂದ ಹುಣ್ಣಿಮೆಯವರೆಗಿನ ದಿನಗಳು. ಈ ಪರ್ವದಿನಗಳಲ್ಲಿ ಮಾಡುವ ಮಹಾಪೂಜೆಯೇ ಅಷ್ಟಾಹ್ನಿಕ ಮಹಾಪೂಜೆ.ಮಹಾ

ಪೂಜೆ, ಮಹಾಮಂಗಳಾರತಿ, ಮಹಾಪ್ರಸಾದ ಮುಂತಾದ ಪದಗಳು ಚಾಲ್ತಿಯಲ್ಲಿರುವುದು ಗಮನಾರ್ಹ.

ಅಸಂಜಾತ

ಜಾತವೆಂದರೆ ಹುಟ್ಟು. ಅಸಂಜಾತವೆಂದರೆ ಇನ್ನೂ ಹುಟ್ಟದಿರುವ ಎನ್ನುವ ಅರ್ಥವೂ ದೊರೆಯುತ್ತದೆ. ಜಾತದಿಂದ ಸಂಜಾತ ಹುಟ್ಟಿದೆ. "ಜನ್ಮನಾ ಜಾಯತೇ ಜಂತು" ಎಂಬ ಭಗವದ್ಗೀತೆಯ ವಾಕ್ಯವನ್ನು ನೆನಪಿಸಿಕೊಳ್ಳಬಹುದು.

ಅಸಿಖೇಟ

ಯುದ್ಧದ ಆಯುಧಗಳಲ್ಲಿ ಒಂದು. ಕತ್ತಿ, ಗುರಾಣಿಯನ್ನು ಅಸಿಖೇಟಕವೆಂದು ಕರೆಯುತ್ತಾರೆ.ಅಸಿ ಎಂದರೆ ಗಾಯ.

ಅಸಿಧಾರಾ ವ್ರತ

ಅಸಿ=ಖಡ್ಗ(ಸಂ) ಇದಕ್ಕೆ ಖಡ್ಗಧಾರಾವ್ರತವೆಂದೂ ಕರೆಯುತ್ತಾರೆ. ಇದು ಬಹಳ ಕಠಿಣವಾದ ವ್ರತ. (ಹೇಗೆಂದರೆ ಕತ್ತಿಯ ಅಲಗಿನ ಮೇಲೆ ಹೆಜ್ಜೆಯಿಟ್ಟು ನಡೆಯುವಂತೆ).

ಆಚರಿಸಲು ಕಷ್ಟವಾದದ್ದು ಎಂಬ ಅರ್ಥದಲ್ಲಿ. ಆದರೆ ಜೈನ ಧರ್ಮದಲ್ಲಿ ಇದರರ್ಥ ಹೇಗೋ ತಿಳಿಯದು. ಜೈನಧರ್ಮದಲ್ಲಿ ಕಠೋರವಾದ ವ್ರತಗಳಿವೆ. ಈ ಅರ್ಥದಲ್ಲಿಯೇ ಇದು ಬಳಕೆಗೆ ಬಂದಿರಬಹುದು!

ಅಸ್ತಿತ್ವ-ನಾಸ್ತಿತ್ವ

"ಸ್ವಭಾವ ಪರಭಾವಗಳೆಂದು ಅಸ್ತಿತ್ವ ನಾಸ್ತಿತ್ವಗಳೆಂದು ಗ್ರಹಿಸುವವರು ಬುದ್ಧ ಶಾಸನದ ಸತ್ಯವನ್ನು ಅರಿಯಲಾರರು.

ತಾತ್ವಿಕ ಊಹಾಪೋಹಗಳಲ್ಲಿ ಮುಳುಗಿರುವವರು. ಅಸ್ತಿತ್ವ ನಾಸ್ತಿತ್ವವನ್ನು, ಸ್ವಭಾವ-ಪರಭಾವಗಳನ್ನು ಕುರಿತ ದೃಷ್ಟಿವಾದಗಳ ಮೂಲಕ ಬಡಿದಾಡುವವರು. ಸತ್ಯದ ಬಳಿ ಸುಳಿಯಲಾರರು. ದೃಷ್ಟಿವಾದಗಳಿಂದ ಮುಕ್ತವಾಗುವ ಕ್ರಮವನ್ನು ಮತ್ತು ಸತ್ಯವನ್ನು ಕಟ್ಟಬೇಕಾದ ಅನಿವಾರ್ಯತೆಯನ್ನು ಬುದ್ಧನು ಪ್ರತೀತ್ಯ ಸಮುತ್ಪಾದದ ಮೂಲಕ ವಿವರಿಸಿದ್ದಾನೆ." (ನಟರಾಜ ಬೂದಾಳು ೨೦೦೬ ಪುಟ.೭೭)

ಅಸ್ತಿತ್ವ ಎಂದರೆ ಇರು.ನ+ಅಸ್ತಿತ್ವ ಇಲ್ಲದೇ ಇರು. "ಅಸ್ತಿತ್ವವೆಂದರೆ ಶಾಶ್ವತವಾದ. ನಾಸ್ತಿತ್ವವೆಂದರೆ ಉಚ್ಛೇದವಾದ ಆದುದರಿಂದ ವಿಚಕ್ಷಣತೆಯುಳ್ಳವರು ಅಸ್ತಿತ್ವ-ನಾಸ್ತಿತ್ವಗಳೆರಡರಲ್ಲೂ ವಿಶ್ವಾಸವಿಡುವುದಿಲ್ಲ." (ನಟರಾಜ ಬೂದಾಳು ೨೦೦೬ ಪುಟ.೭೭) ಬೌದ್ಧ ಧರ್ಮದ ತಾತ್ವಿಕ ಜಿಜ್ಞಾಸೆಯಿದು. ಆದರೆ ಆಧುನಿಕ ಸಾಹಿತ್ಯದ

ಮೇಲೆ ಅಸ್ತಿತ್ವವಾದದ ಪ್ರಭಾವವಿದೆ. ಅಸ್ತಿತ್ವವಾದದ ಪ್ರಕಾರ ಆಗು– ಆಗದಿರುವುದರ ನಡುವೆ ಸಮಸ್ಯೆಯಿದೆ. ಈ ಬದುಕಿನ ಅರ್ಥವೇನು ಎಂದು ಪ್ರಶ್ನಿಸುವವನು ಅಸ್ತಿತ್ವವಾದಿ. ಸಾರ್ತ್ರೆ ಈ ಪಂಥದ ಬಹುದೊಡ್ಡ ಚಿಂತಕ. ಅವನು ಅಥೆಂಟಿಕ್ ಮತ್ತು ಅನ್ ಅಥೆಂಟಿಕ್ ಎಂಬ ಎರಡು ಪರಿಭಾಷೆಯನ್ನು ಬಳಸಿದ್ದಾನೆ.

ಅಸ್ಪೃಶ್ಯತೆ

ಸ್ಪರ್ಶವೆಂದರೆ ಮುಟ್ಟು. ಅಸ್ಪೃಶ್ಯವೆಂದರೆ ಮುಟ್ಟಬಾರದು 'ಪವಿತ್ರ' ಮತ್ತು 'ಅಪವಿತ್ರ'ವೆನ್ನುವುದು ಕೂಡಾ ಮನಸ್ಸಿನ ಭಾವನೆಗೆ ಸಂಬಂಧಿಸಿದ ವಿಷಯ. ಹಾಗೆಯೇ ಇದು ಸಾಮಾಜಿಕ ವರ್ತನೆಯ ಮೇಲೂ ಪ್ರಭಾವ ಬೀರುತ್ತದೆ. ಅನೇಕ ಸಂದರ್ಭಗಳಲ್ಲಿ 'ಪವಿತ್ರ' ಮತ್ತು 'ಅಪವಿತ್ರ'ವೆಂದು ಕರೆಯುವ ಸಂಗತಿಗಳಿಗೆ ಯಾವ ಆಧಾರವೂ ಇಲ್ಲ. 'ಪವಿತ್ರ'ವೆಂದರೆ ಶುದ್ಧ: ಮಡಿ: ಶುಭವೆನ್ನುವ ಕಲ್ಪನೆಯು ಇರುವ ಹಾಗೆಯೇ 'ಅಪವಿತ್ರ'ವೆಂದು ಕರೆಯುವುದಕ್ಕೆ 'ಅಶುಭ', 'ಅಮಂಗಲ', 'ಮೈಲಿಗೆ'ಯೆಂಬ ಅರ್ಥವಿದೆ. ಹಾಗೆಯೇ 'ಶೌಚ'–'ಅಶೌಚ'ವೆನ್ನುವ ಪರಿಭಾಷೆಯೂ ಚಾಲ್ತಿಯಲ್ಲಿದೆ. ಮಡಿ ಮತ್ತು ಮೈಲಿಗೆಯೆನ್ನುವ ಪರಿಕಲ್ಪನೆಯನ್ನು ಹುಟ್ಟುಹಾಕಿರುವುದು ವೈದಿಕ ಧರ್ಮವೆಂದು ಹೇಳಲಾಗುತ್ತಿದೆ. ಆದರೆ ಮಡಿ ಮೈಲಿಗೆಯ ಪರಿಕಲ್ಪನೆಯು ಎಲ್ಲಾ ಜನಾಂಗಗಳಲ್ಲಿ ಇವೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಉದಾಹರಣೆಗೆ ಬ್ರಾಹ್ಮಣರಲ್ಲಿ 'ಶುಭಕರಣ', 'ಶುಭನಕ್ಷತ್ರ', 'ಶುಭಮುಹೂರ್ತ'ದ ಪರಿಕಲ್ಪನೆಯು ಇರುವ ಹಾಗೆಯೇ ಬುಡಕಟ್ಟುಗಳಲ್ಲಿ 'ಶುಭಶಕುನ', 'ಅಪಶಕುನ'ದ ಪರಿಕಲ್ಪನೆಗಳಿವೆ. ಮುಸ್ಲಿಮರಲ್ಲಿಯೂ 'ಹರಾಮ್' ಎಂದರೆ ಮಡಿಯಿಲ್ಲದ್ದು ಎನ್ನುವ ನಂಬಿಕೆಯಿದೆ. ಇದು ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿರುವ ನಂಬಿಕೆಯೂ ಹೌದು. 'ಶುಭ' ಎನ್ನುವುದು ಒಂದು ಪೂರ್ವಪದ. ಇದನ್ನು ಸೇರಿಸಿಕೊಂಡು ಅನೇಕ ಭಾಷಿಕ ರಚನೆಗಳಿವೆ, 'ಶುಭಮುಹೂರ್ತ'(ಶುಭಕಾಲ) ಶುಭದಿವಸ (ದಿನಕ್ಕೆ ಸಂಬಂಧಿಸಿದ್ದು–ಉದಾ: ಕೆಲವರಿಗೆ ಮಂಗಳವಾರ ಶುಭದಿನವಲ್ಲ) ಶುಭಕಾರ್ಯ (ಕೆಲಸಕ್ಕೆ ಸಂಬಂಧಿಸಿರುವುದು) ಶುಭಸಂಕಲ್ಪ (ಮನಸ್ಸಿಗೆ ಸಂಬಂಧಿಸಿದ್ದು) ಶುಭಾರಂಭ(ಆರಂಭಕ್ಕೆ ಸಂಬಂಧಿಸಿದ್ದು.) ಅಶುಭ ಮುಹೂರ್ತ(ಮದುವೆಗೆ ಸಂಬಂಧಿಸಿದ್ದು) ಶುಭಯಾತ್ರೆ(ಯಾತ್ರೆಗೆಸಂಬಂಧಿಸಿದ್ದು)ಶುಭಶಕುನ(ನಂಬಿಕೆಗಳಿಗೆಸಂಬಂಧಿಸಿದ್ದು)– ಹೀಗೆ ಬೇರೆ ಬೇರೆ ಸಂದರ್ಭಗಳನ್ನು ಇವು ಸೂಚಿಸುತ್ತವೆ. ಗ್ರಹಗಳಿಗೆ ಸಂಬಂಧಿಸಿದ ಹಾಗೆ ಕೂಡಾ ಶುಭ ಮತ್ತು ಅಶುಭವೆಂಬ ವರ್ಗೀಕರಣವಿದೆ(ಶನಿ=ಅಶುಭ ಗ್ರಹ).

ವಿವರಗಳಿಗೆ ನೋಡಿ: Sudipta Kaviraj(Ed)1997 Politics in India.
Ronald inden 1990 Imaging India.
ಕೆ.ವಿ.ಸುಬ್ಬಣ್ಣ(ಅನು) ಗ್ರಾಮ್ಷಿ ಸ್ವರಾಜ್ಯದ ಹಾದಿ ಹೆಜ್ಜೆಗಳು

ಅಸ್ಮಿತೆ

ಅಸ್ಮಿತೆ ಎಂದರೆ ಮಂದಹಾಸ ಇಲ್ಲದವಳು, ನಾನು, ನನ್ನದು ಎಂಬ ಅಭಿಮಾನ, ಅಹಂಕಾರ. ಅಸ್ಮಿತಾಸಕ್ತಿಯೆಂದರೆ ತಾನು ಬದುಕಬೇಕು, ತಾನಿರಬೇಕು ಎಂಬ ಆಸಕ್ತಿ. ಇದರಲ್ಲಿ ಸ್ವಾರ್ಥವು ಹೆಚ್ಚು ಮುಖ್ಯವಾಗಿರುತ್ತದೆ. ಸ್ವಯಂ ಕೇಂದ್ರಿತ ವ್ಯಕ್ತಿತ್ವವು ಇಲ್ಲಿ ಪ್ರಧಾನವಾಗಿರುತ್ತದೆ. ಅಹಂಕಾರ, ದ್ವೇಷ, ಅಸೂಯೆ, ಪ್ರತೀಕಾರಗಳು ಇಲ್ಲಿ ಪ್ರಧಾನವಾಗಿರುತ್ತದೆ. ತತ್ವಜ್ಞಾನದಲ್ಲಿ ಇದನ್ನು ನಿಮಿತ್ತ ಭಿತ್ತಿಯೆಂದು ಕರೆಯಲಾಗಿದೆ. ಇದನ್ನು ಪ್ರತಿಪಾದಿಸುವುದಕ್ಕೆ ಡಾರ್ವಿನ್ನನ ವಿಕಾಸವಾದದ ಸಿದ್ಧಾಂತವನ್ನು ಅಸ್ತಿತ್ವಕ್ಕಾಗಿ ಹೋರಾಟವೆನ್ನುವುದು ಇದರ ಮೂಲ ಸಿದ್ಧಾಂತವಾಗಿದೆ. ಯಾವಾಗ ಅದನ್ನು ಬಿಡುತ್ತೇವೆಯೋ ಆಗ ನಿಜವಾಗಿಯೂ ಜೀವನಕ್ಕೆ ಹೊಸ ಅರ್ಥವಿರುತ್ತದೆ. ಅಸ್ತಿತ್ವಕ್ಕಾಗಿ ಹೋರಾಟ ಸಕಲ ಪ್ರಾಣಿಗಳಲ್ಲಿ ಇರುವ ಸಹಜ ಗುಣವೂ ಹೌದು.

ವಿವರಗಳಿಗೆ ನೋಡಿ: ಎನ್.ಬಾಲಸುಬ್ರಹ್ಮಣ್ಯ ೧೯೭೩ ವೇದಾಂತಸಾರ

ಯಶವಂತ ಚಿತ್ತಾಲ_ನಾನು, ಸಾಹಿತ್ಯ ಮತ್ತು ಸೃಜನ ಶೀಲತೆ

ಅಹಂ ಬ್ರಹ್ಮಾಸ್ಮಿ

'ನಾನು ಬ್ರಹ್ಮವಾಗಿದ್ದೇನೆ' (ಬೃ.ಉ.1.4.10) ಎಂಬ ಅನುಭವವಾಕ್ಯದಲ್ಲಿ ಅರ್ಥವು ವರ್ಣಿಸಲ್ಪಡುತ್ತದೆ. ಅದ್ವೈತ ಸಂಪ್ರದಾಯದಲ್ಲಿ 'ತತ್ತ್ವಮಸಿ'ಯನ್ನು ಉಪದೇಶ ವಾಕ್ಯವೆಂದೂ 'ಅಹಂ ಬ್ರಹ್ಮಾಸ್ಮಿ'ಯನ್ನು ಅನುಭವ ವಾಕ್ಯವೆಂದೂ ಕರೆಯುತ್ತಾರೆ. ಇಲ್ಲಿಯೂ ಕೂಡ ಅಹಮ್ ಎಂಬುದು ಜೀವಚೈತನ್ಯವನ್ನೂ ಬ್ರಹ್ಮವೆಂಬುದು ಬ್ರಹ್ಮ ಚೈತನ್ಯವನ್ನೂ ಸೂಚಿಸುತ್ತದೆ. (ವೇದಾಂತ ಸಾರ – ಸ್ವಾಮಿ ಹರ್ಷಾನಂದ – ಪು. ಸಂ. 117)

ಬೃಹದಾರಣ್ಯಕ ಪ್ರಾರಂಭದಲ್ಲಿಯೇ ಸ್ಪಷ್ಟವಾಗಿ ಘೋಷಿಸಿದೆ: "ಮೊದಲು ಇದ್ದದ್ದು ಬ್ರಹ್ಮ ಮಾತ್ರ "ಬ್ರಹ್ಮ ವಾ ಇದಂ ಅಗ್ರ ಆಸೀತ್"(ಬೃಹ. ೧, ೪, ೧೦). ಈ ಚಿಂತನೆ ಹೀಗೆ ಬಲವಾಗಿ ಮುಂದುವರೆಯುತ್ತದೆ. "ಅಹಂ ಬ್ರಹ್ಮಾಸ್ಮಿ" ಎಂಬ ಅರಿವು ಆ ಬ್ರಹ್ಮದಲ್ಲಿ ಎಂದೆಂದಿಗೂ ಇರುವ ಅರಿವು. ಆಗ ಬ್ರಹ್ಮದಲ್ಲದೆ ಬೇರೇನೂ ಇರಲಿಲ್ಲ. ಎಲ್ಲವೂ ಬ್ರಹ್ಮವೇ ಆಗಿತ್ತು. ಈ ಸತ್ಯದತ್ತ ಎಚ್ಚೆತ್ತ ದೇವತೆಗಳು ತಾವೇ ಬ್ರಹ್ಮವಾದರು; ಹಾಗೆಯೇ ಋಷಿಗಳು ಮತ್ತು ಮನುಷ್ಯರು. ತಾನೇ ಸ್ವತಃ ಬ್ರಹ್ಮನೆಂದು ತಿಳಿದವನು ಇದೆಲ್ಲವೂ ಬ್ರಹ್ಮವೆಂದು ತಿಳಿಯುತ್ತಾನೆ. ಬ್ರಹ್ಮವನ್ನಲ್ಲದೆ ಮತ್ತಾವುದಾದರೂ ಬೇರೆ ದೇವತೆಯನ್ನು ತಿಳುವಳಿಕೆಯಿಲ್ಲದವನು ಮಾತ್ರ ಉಪಾಸನೆ ಮಾಡುತ್ತಾನೆ. 'ಅಹಂ ಬ್ರಹ್ಮಾಸ್ಮಿ' ಎಂಬ ಬೃಹದಾರಣ್ಯಕದಲ್ಲಿರುವ ಘೋಷಣೆಯಂತೆಯೇ ಪ್ರಶಸ್ತವಾಗಿದೆ ಛಾಂದೋಗ್ಯದಲ್ಲಿರುವ ಅಂತಹುದೇ ಮತ್ತೊಂದು ಘೋಷಣೆ: "ಇದೆಲ್ಲವೂ ಬ್ರಹ್ಮ" ("ಸರ್ವಂ ಖಲ್ವಿದಂ ಬ್ರಹ್ಮ" ೩, ೧೪, ೧). ಮಾಂಡೂಕ್ಯದಲ್ಲಿ ಇಂತಹ ಮತ್ತೊಂದು ವಾಕ್ಯ ದೊರೆಯುತ್ತದೆ – "ಸರ್ವಂ ಹಿ ಏತದ್ ಬ್ರಹ್ಮ"(೨).

"ಅಹಂ ಬ್ರಹ್ಮಾಸ್ಮಿ"(ನಾನು ಬ್ರಹ್ಮ) (ಬೃಹ. ೧.೪.೧೦) ಎಂಬುದನ್ನು ಯಾರು ಯಾರೊಡನೆಯೂ ಘೋಷಿಸುವುದಿಲ್ಲ. ಅದು ಬ್ರಹ್ಮದ ಸತ್ಯಪರವಾದ ಸ್ಥಿತಿಯ ಸ್ವಭಾವ. ಅದು ಅತ್ಯಂತ ಸಾಂದ್ರವಾದ ಮೌನ ಹಾಗೂ ಉನ್ನತವಾದ ಮಾತು. ಈ ಅರಿವನ್ನು ಸಾಕ್ಷಾತ್ಕರಿಸಿಕೊಂಡವರು ಇಂತಹುದೇ ಸ್ಥಿತಿಯನ್ನು ಹೊಂದುತ್ತಾರೆಂದು ಉಪನಿಷತ್ತು ಹೇಳುತ್ತದೆ. 'ನಾನು ಬ್ರಹ್ಮ' ಎಂದು ಹೇಳಹೊರಟರೆ ಆ ಹೇಳಿಕೆಯಿಂದಲೇ ಬ್ರಹ್ಮದಿಂದ ಸತ್ಯಪರವಾದ ಯಾವುದೇ ಸಣ್ಣ ವಿದೂರತೆಯಲ್ಲಿ ಇದ್ದಂತೆ ಆಗುವುದಿಲ್ಲ. ಬ್ರಹ್ಮಭೂಯ ಸ್ವಲ್ಪ ಕೂಡ ಇಂತಹ ವಿದೂರತೆಗೆ ಎಡೆ ಕೊಡುವುದಿಲ್ಲ. 'ಆಯಂ ಆತ್ಮಾ ಬ್ರಹ್ಮ' ಎಂಬ ಮಾಂಡೂಕ್ಯ ವಾಕ್ಯ (೧) ಇದೇ ಅರ್ಥದಲ್ಲಿ ಪರ್ಯಾವಸಾನವಾಗುತ್ತದೆ. 'ಆಯಂ' ಎಂಬುದೇ 'ಅಹಂ'. ಇದೇ ವಿವಕ್ಷೆ 'ಪ್ರಜ್ಞಾನಂ ಬ್ರಹ್ಮ' ಎಂಬ ಐತರೇಯ ಮಂತ್ರದಲ್ಲಿದೆ (೩.೧,೩). ಇಲ್ಲಿ ಪ್ರಜ್ಞಾನ ಶಬ್ದ 'ಆತ್ಮ' ಎಂಬ ಅರ್ಥದಲ್ಲಿ ವಿಶ್ರಮಿಸುತ್ತದೆ. ಈ ವಾಕ್ಯದ ಆಂತರಿಕ ಅರ್ಥ ವಾಮದೇವನ ಅನುಭವ. (ಸುಕುಮಾರ್ ಅಟಿಕ್ಕೋಡ್ ೨೦೦೫ ತತ್ವಮಸಿ ಪುಟ ೧೨೩) ಇದು ಅದ್ವೈತ ಸಿದ್ಧಾಂತದ ಪರಿಕಲ್ಪನೆಯಾಗಿದೆ. ಬ್ರಹ್ಮದ ಅಮೂರ್ತತೆಯು ಇದರಲ್ಲಿ ಅಭೇದವಾಗಿ ಪರಿವರ್ತಿತವಾಗಿದೆ.

ಅಹಮಸ್ಮಿ

ಅಹಮಸ್ಮಿಯೆಂಬ ಪರಿಕಲ್ಪನೆಯು ಜೀವ–ದೇವರ ನಡುವಣ ಸಂಬಂಧವನ್ನು ವಿವರಿಸುತ್ತದೆ. ಅಭಿನವಗುಪ್ತನು ಕೂಡಾ ಈ ಕುರಿತು ಚರ್ಚಿಸಿದ್ದಾರೆ. ಚಿತ್ ಎನ್ನುವುದು ಅಹಮಸ್ಮಿ(ನಾನಿದ್ದೇನೆ) ಎಂಬ ವಾಕ್ಯದಲ್ಲಿನ ಅಹಂ(ನಾನು) ಎಂಬ ಶಬ್ದ ಸೂಚಿಸುವ "ಅಹಂಕಾರ"ವನ್ನು ಸೂಚಿಸುತ್ತದೆ. ಹೀಗೆ ಪಿಂಡಾಂಡದ ಅಧ್ಯಯನವು ಪರಮಶಿವನಿಗೆ ಸೇರಿದ ಚಿತ್, ಆನಂದ, ಇಚ್ಛಾ, ಜ್ಞಾನ ಮತ್ತು ಕ್ರಿಯಾ ಎಂಬ ಐದು ಶಕ್ತಿಗಳು ವ್ಯಷ್ಟಿಜೀವನದಲ್ಲಿಯೂ ಕಂಡುಬರುತ್ತವೆ ಎಂಬುದನ್ನು ತೋರಿಸುತ್ತದೆ. ಅವು ಅನುಭವದ ಸಂಗತಿಗಳನ್ನು ಆಧರಿಸಿವೆ. ಅವನ್ನು ಕೇವಲ ಧಾರ್ಮಿಕ ಶ್ರದ್ಧೆಯ ವಿಷಯಗಳೆಂದು ಪರಿಗಣಿಸಬೇಕಾಗಿಲ್ಲ.

ಪ್ರತ್ಯೇಕ ತತ್ತ್ವಗಳ ಪರೀಕ್ಷೆಯಲ್ಲಿ ತೊಡಗುವ ಮೊದಲು, ತತ್ತ್ವದ ಸಾಮಾನ್ಯ ಸ್ವರೂಪದ ಜ್ಞಾನವನ್ನು ನಾವು ಹೊಂದಿರುವುದು ಒಳ್ಳೆಯದು. ತತ್ತ್ವ ಎಂದರೆ ಕಾರ್ಯಗಳಲ್ಲಿ, ಸಮಷ್ಟಿಗಳಲ್ಲಿ ಅಥವಾ ವ್ಯಕ್ತಿಗಳಲ್ಲಿ ಸದಾ ಇರುವ, ತನಗೇ ವಿಶಿಷ್ಟವಾದ ಒಂದು ಲಕ್ಷಣವನ್ನು ಹೊಂದಿರುವ ಅಂಶ. ಸೃಷ್ಟಿಯ ಎಲ್ಲಾ ಸಮಷ್ಟಿ ವಸ್ತುಗಳಿಗೆ ಆಧಾರವಾಗಿ ಅಥವಾ ಅವುಗಳ ಮುಖ್ಯ ಅಂಶವಾಗಿರುವ ಮಟ್ಟಿಗೆ ಅದು ಸರ್ವವ್ಯಾಪಿಯಾಗಿರುತ್ತದೆ. ಉದಾಹರಣೆಗೆ, ನಾವು ಬದುಕಿ ಬಾಳುವ ಈ ಜಗತ್ತನ್ನು ಪೃಥ್ವಿ ಎಂದು ಕರೆಯುವಾಗ, ಅದು ಕೇವಲ ಪೃಥ್ವೀ ತತ್ತ್ವದಿಂದ ರಚಿತವಾಗಿದೆ ಎಂದು ನಮ್ಮ ಅರ್ಥವಲ್ಲ. ಪೃಥ್ವೀತತ್ತ್ವ ಅದರ ಪ್ರಧಾನ ಅಂಶವಾಗಿದೆ ಎಂದು ನಮ್ಮ

ಅರ್ಥ. ಉದಾಹರಣೆಗೆ, ಸಾಂಖ್ಯವು ಪ್ರಕೃತಿಯ ಪ್ರತಿಯೊಂದು ವಿಕೃತಿಯೂ ಮೂರೂ ಗುಣಗಳಿಂದ ರಚಿತವಾಗಿದೆ ಮತ್ತು ಒಂದು ವಿಕೃತಿಯಿಂದ ಮತ್ತೊಂದರ ವ್ಯತ್ಯಾಸ ಪ್ರತಿವಿಕೃತಿಯಲ್ಲಿರುವ ಗುಣಗಳ ಪ್ರಮಾಣದ ವ್ಯತ್ಯಾಸವನ್ನು ಅವಲಂಬಿಸಿದೆ ಎಂದು ಹೇಳುತ್ತದೆ. ಶುದ್ಧ ಸೃಷ್ಟಿಯ ಪ್ರತಿಯೊಂದು ಆಭಾಸದಲ್ಲಿಯೂ ಪರಮಶಿವನ ಎಲ್ಲಾ ಐದು ಶಕ್ತಿಗಳೂ ಮೂಲತಃ ಇರುತ್ತವೆ ಮತ್ತು ಆಭಾಸಗಳ ಪರಸ್ಪರ ವ್ಯತ್ಯಾಸಕ್ಕೆ ನಿರ್ದಿಷ್ಟ ಆಭಾಸವೊಂದರಲ್ಲಿ ಆ ಶಕ್ತಿಗಳ ಒಂದರ ಪ್ರಾಧಾನ್ಯ ಕಾರಣ ಎಂದು ಪ್ರತ್ಯಭಿಜ್ಞಾಶಾಸ್ತ್ರ ಹೇಳುತ್ತದೆ.

(ಜಿ.ಟಿ.ದೇಶಪಾಂಡೆ ಪುಟ.51–52) "ಅದುವೇ ನಾನು ನಾನೇ ಅದು" ಎನ್ನುವ ಪರಿಕಲ್ಪನೆಯಿದು.

ಅಹಿಂಸೆ

ವೈದಿಕಸಾಹಿತ್ಯ ಬೆಳೆದುಬಂದಿರುವ ಹಲವು ಹಂತಗಳನ್ನು ನಿಷ್ಪಕ್ಷಪಾತತೆಯಿಂದ ಅಭ್ಯಸಿಸಿದಾಗ ಸಮಾನಾಂತರದ ಎರಡು ಆಲೋಚನೆಗಳ ಬೆಳವಣಿಗೆಯಿದೆಯೆಂದು ವಿಷಾದವಾಗುತ್ತದೆ: ಅವುಗಳಲ್ಲಿ ಒಂದು ಇನ್ನೊಂದಕ್ಕೆ ವಿರುದ್ಧವಾಗಿದೆ. ಒಂದು ಆಲೋಚನಾ ಪಂಥ ಅಹಿಂಸೆಯ ತತ್ವಗಳನ್ನು ಒತ್ತಿ ಹೇಳುತ್ತದೆ: ಇನ್ನೊಂದು ಯಜ್ಞಯಾಗಾದಿ ಕರ್ಮಗಳನ್ನು ನಿಷ್ಠುರತೆಯಿಂದ ವಿಧಿಸುತ್ತದೆ. ಕ್ಷತ್ರಿಯ ರಾಜರು ಅಹಿಂಸಾತತ್ವಕ್ಕೆ ಬೆಂಬಲ ನೀಡುತ್ತಿದ್ದುದನ್ನೂ, ಪ್ರಾಣಿಬಲಿಯನ್ನು ಒಳಗೊಂಡ ವೈದಿಕ ಕರ್ಮಗಳನ್ನು ಬ್ರಾಹ್ಮಣಪುರೋಧಸರು ಪ್ರೋತ್ಸಾಹಿಸುತ್ತಿದ್ದುದನ್ನೂ ನೋಡಿದರೆ ಆಶ್ಚರ್ಯವಾಗುತ್ತದೆ. ಕ್ಷತ್ರಿಯರ ಮತ್ತು ಪುರೋಧಸರ ನಡುವೆ ಇದ್ದ ಈ ಹೋರಾಟದ ಸೂಚನೆ ಪುರಾಣಗಳಲ್ಲಿ, ವಶಿಷ್ಠ ವಿಶ್ವಾಮಿತ್ರ ಕಲಹ ಕಥೆಗಳಲ್ಲಿ ದೊರೆಯುತ್ತದೆ.

ಅಹಿಂಸೆ ಎಂದರೆ, ಯಾರಿಗೂ ಅವನು ಹಿಂಸೆಯನ್ನು ಕೊಡಲೆತ್ನಿಸುವುದಿಲ್ಲ. ಬೇಕಾದರೆ ತಾನು ಏನು ಬೇಕಾದರೂ ಅನುಭವಿಸುತ್ತಾನೆ. ಇನ್ನೊಬ್ಬನಿಗೆ ಸ್ವಲ್ಪವೂ ತೊಂದರೆಯನ್ನುಂಟು ಮಾಡಲು ಯತ್ನಿಸುವುದಿಲ್ಲ. ಅವನು ಪೆಟ್ಟಿಗೆ ಪೆಟ್ಟು ಎಂಬ ನೀತಿಯಿಂದ ಮೇಲೆ ಇರುವನು. ಹಿಂಸೆಗಿಂತ ಅಹಿಂಸೆ ಅದ್ಭುತ ಪರಿಣಾಮಕಾರಿಯಾದುದು. ಆದರೆ ಎಲ್ಲರಿಗೂ ಈ ಅಹಿಂಸೆಯ ಬ್ರಹ್ಮಾಸ್ತ್ರವನ್ನು ಉಪಯೋಗಿಸುವ ಯೋಗ್ಯತೆ ಇಲ್ಲ ಅಷ್ಟೆ. ಇದು ಹೇಡಿತನವಲ್ಲ. ವೀರಾಧಿವೀರನ ಧೈರ್ಯ ಮತ್ತು ಸಹಿಷ್ಣುತೆ ಇದಕ್ಕೆ ಬೇಕು. ಸಮಚಿತ್ತತೆ ಎಂದರೆ ಎಲ್ಲರನ್ನೂ ಅವನು ಒಂದೇ ರೀತಿಯಲ್ಲಿ ನೋಡುತ್ತಾನೆ. ಅವನು ನಾಮರೂಪುಗಳ ಹಿಂದೆ ತೂರಿ ಎಲ್ಲಾ ಕಡೆಯಲ್ಲಿಯೂ ಒಂದೇ ಸಮನಾಗಿರುವ ಪರಮಾತ್ಮನನ್ನು ನೋಡುತ್ತಾನೆ. ಅಥವಾ ಎಲ್ಲಾ ಒಂದೇ ಭಗವಂತನ ಕುಟುಂಬಕ್ಕೆ ಸೇರಿದವರು ಎಂಬ ದೃಷ್ಟಿಯಿಂದಲಾದರೂ ನೋಡಬಹುದು. ಅಂತೂ ಸಮದೃಷ್ಟಿ ಬರಬೇಕಾದರೆ ಭಗವಂತನ ಭಾವನೆ ಬರಬೇಕು.

ಆಗ ಮಾತ್ರ ಸಾಧ್ಯ. ಎಲ್ಲರ ಹಿಂದೆಯೂ ದೇವರು ಇರುವನು ಎಂದಾದರೂ ನೋಡಬಹುದು; ಎಲ್ಲರೂ ದೇವರಿಗೆ ಸೇರಿದವರು ಎಂದಾದರೂ ನೋಡಬಹುದು. (ಗೀತಾಭಾವಧಾರೆ – ಸೋಮನಾಥಾನಂದ, ಪು. ಸಂ. 435) ಜೈನಧರ್ಮದ ಪ್ರಮುಖ ಪರಿಭಾಷೆಗಳಲ್ಲಿ ಅಹಿಂಸೆಯೂ ಒಂದು.

ವಿವರಗಳಿಗೆ ನೋಡಿ: ದರ್ಶನ; ಹಿಂಸೆ

ಡಾ. ಸರ್ವಪಲ್ಲಿ ರಾಧಾಕೃಷ್ಣನ್ 1970 ತತ್ವಶಾಸ್ತ್ರ: ಪ್ರಾಚ್ಯ ಮತ್ತು ಪಾಶ್ಚಾತ್ಯ

ಅಹಿಂಸೆ–ಯಮ

'ಅಹಿಂಸೆ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಪರಿಗ್ರಹ ಇವು ಯಮಗಳು. ಹಿಂಸೆಯೇ ಮೊದಲಾದ ನಿಷಿದ್ಧ ಕರ್ಮಗಳಿಂದ ಯೋಗಿಯನ್ನು ಯಮಿಸುವುದರಿಂದ, ನಿವರ್ತಿಸುವುದರಿಂದ ಇದನ್ನು ಯಮ ಎಂದು ಕರೆದಿದೆ. ಕರ್ಮದಿಂದಲೂ ಮನಸ್ಸಿನಿಂದಲೂ ಮಾತಿನಿಂದಲೂ ಯಾರಿಗೂ ಯಾವಾಗಲೂ ಕ್ಲೇಶವನ್ನುಂಟು ಮಾಡದಿರುವುದು ಅಹಿಂಸೆ. ಪ್ರತ್ಯಕ್ಷ ಅನುಮಾನ ಮತ್ತು ಆಗಮ ಎಂಬ ಪ್ರಮಾಣಗಳಿಂದ ಅರಿತದ್ದನ್ನು ಇತರರಿಗೆ ತಿಳಿಸುವಾಗ ಮಾತು – ಮನಸ್ಸುಗಳು ಒಂದಾಗುವಿಕೆಯೇ ಆತ್ಮ. ತನಗೆ ಸೇರದ ವಸ್ತುವನ್ನು ತೆಗೆದುಕೊಳ್ಳುವುದು, ಶಾಸ್ತ್ರವಿಹಿತವಲ್ಲದ ವಸ್ತುವನ್ನು ಶಾಸ್ತ್ರವು ವಿಧಿಸಿಲ್ಲದ ರೀತಿಯಲ್ಲಿ ಸ್ವೀಕರಿಸುವುದು – ಇವು ಸ್ತೇಯ ಅಥವಾ ಕಳ್ಳತನ. ಅದನ್ನು ಮಾಡದಿರುವುದು ಅಸ್ತೇಯ. ಕರ್ಮದಿಂದಲೂ ಮಾತಿನಿಂದಲೂ ಮನಸ್ಸಿನಿಂದಲೂ ಎಲ್ಲ ಜೀವಿಗಳ ವಿಷಯದಲ್ಲಿಯೂ ಮೈಥುನವನ್ನು ವರ್ಜಿಸುವುದು ಬ್ರಹ್ಮಚರ್ಯ. ಸಮಾಧಿಯ ಅಭ್ಯಾಸಕ್ಕೆ ಉಪಯುಕ್ತವಲ್ಲದ ವಸ್ತುಗಳನ್ನು ಸ್ವೀಕಾರ ಮಾಡದಿರುವುದು ಅಪರಿಗ್ರಹ. (ವೇದಾಂತ ಸಾರ – ಸ್ವಾಮಿ ಹರ್ಷಾನಂದ – ಪು. ಸಂ. 135)

'ಅಹಿಂಸೆ' ಮತ್ತು 'ಯಮ' ದ ಪರಿಕಲ್ಪನೆಯು ಇಲ್ಲಿ ವಿಶಿಷ್ಟವಾಗಿದೆ. ಹಿಂಸೆಯನ್ನು ನಿಷಿದ್ಧ ಕರ್ಮವೆಂದು ಕರೆದಿರುವುದು ಗಮನಾರ್ಹ.

ಅಳತೆ ಮತ್ತು ಮಾನಗಳು

"ಹಿಂದೆ ಅಳತೆ ಮತ್ತು ಮಾನಗಳ ಕುರಿತಂತೆ ಬೇರೆ ಬೇರೆ ಹೆಸರುಗಳಿದ್ದವು. ಯಾವುದಾದರೂ ಒಂದು ನಿರ್ದಿಷ್ಟಮಾಪನವನ್ನು ನಿಗದಿಗೊಳಿಸಿ ಅದರ ಸಹಾಯದಿಂದ ಚದರವನ್ನು ಅಳೆದು ಇಷ್ಟು ಚದರಗಳಿಗೆ ಇಷ್ಟು ಮಾನ ಎಂಬ ತೀರ್ಮಾನಕ್ಕೆ ಬರುತ್ತಿದ್ದರು. ಈ 'ಮಾಪನ' ಎಲ್ಲಾ ಕಾಲದಲ್ಲಿಯೂ, ಎಲ್ಲಾ ಕಡೆಗಳಲ್ಲಿಯೂ ಒಂದೇ ಆಗಿರಲಿಲ್ಲ. ಮೂಲ ಮಾಪನದ ಅಳತೆಯನ್ನು ಆಯಾಭಾಗದವರು ಅಥವಾ ಆಡಳಿತ ವ್ಯವಸ್ಥೆಯವರು ನಿಗದಿ ಮಾಡುತ್ತಿದ್ದರು. ಈ ಮಾಪನವು ಒಂದು 'ಕೋಲು'

ಆಗಿರುತ್ತಿತ್ತು. ಈ ಕೋಲುಗಳಿಗೆ ಅವರು ಹೆಸರನ್ನು ಕೊಡುತ್ತಿದ್ದ ನಿದರ್ಶನಗಳುಂಟು. ಅದು ಎಷ್ಟು ಉದ್ದವಿದೆ ಎಂಬುದರ ಆಧಾರದಮೇಲೆ 'ಹದಿನಾರು ಗೇಣುಗಳೆ', 'ಇಪ್ಪತ್ತೆಂಟು ಗೇಣುಗಳೆ', 'ಮುವತ್ತೆರಡು ಗೇಣುಗಳೆ' ಇತ್ಯಾದಿಯಾಗಿ ಅವುಗಳಿಗೆ ಹೆಸರನ್ನು ಕೊಡುತ್ತಿದ್ದರು. ಕೆಲವೊಮ್ಮೆ ಆಯಾ ಊರುಗಳ ಹೆಸರುಗಳನ್ನು ಇಡುತ್ತಿದ್ದದ್ದೂ ಉಂಟು. 'ಕೋಗಳಿಯ ಕೋಲು', 'ಮಾಣಿಕೇಶ್ವರನ ಕೋಲು' 'ವಿಷ್ಣುವರ್ಧನಗಳೆ' ಇತ್ಯಾದಿ. ಒಂದು ನಿರ್ದಿಷ್ಟವಾದ ಕೋಲು ಅಳತೆಯ ಚದರ ಭೂಮಿಯನ್ನು ಕಂಬ, ಕಮ್ಮ, ಎನ್ನುತ್ತಿದ್ದರು. ಇದಕ್ಕಿಂತಲೂ ಹಿರಿದಾದ ಚದರವನ್ನು 'ಮತ್ತರು' 'ಮತ್ತಲ್' ಎಂಬುದಾಗಿ ಕರೆಯುತ್ತಿದ್ದರು. ಕನಿಷ್ಟಮಾಪನ ಒಂದು ಚದರಕೋಲು ಅಥವಾ ಗಣೆಯಾದರೆ, ಗರಿಷ್ಟಮಾಪನ 'ಮತ್ತರು' ಆಗಿತ್ತು. ಈ ಮತ್ತರಿಗೆ ಸಹ ಹೆಸರು ಇರುವುದುಂಟು. ಉದಾ: 'ಎರೆಗಂಗನ ಮತ್ತರು' 'ಗಂಗನ ಮತ್ತರ್' 'ಮಾಣಿಕೇಶ್ವರ ಮತ್ತರ್' ಮುಂತಾದವು. ಭೂಮಿಯನ್ನು ಅಳೆಯುತ್ತಿದ್ದ ಮತ್ತೊಂದು ವಿಧಾನವೆಂದರೆ, ನಿರ್ದಿಷ್ಟವಾದ ಧಾನ್ಯವನ್ನು, ಎಷ್ಟು ಪ್ರದೇಶದಲ್ಲಿ ಬಿತ್ತಬಹುದು ಎಂಬುದನ್ನು ಪರಿಗಣಿಸಿ ಅದನ್ನೇ ಮೂಲಮಾಪನವಾಗಿಟ್ಟುಕೊಂಡು, ಅದರ ಎರಡರಷ್ಟು ಮೂರರಷ್ಟು ಹೀಗೆ ಲೆಕ್ಕಾಚಾರ ಹಾಕುತ್ತಿದ್ದರು. ಧಾನ್ಯವನ್ನು ಅಳೆಯಲು ಅವರು ಬಳಸುತ್ತಿದ್ದ ಗರಿಷ್ಟ ಮಾಪನ 'ಖಂಡುಗ' ಒಂದು ಖಂಡುಗ ಭೂಮಿ ಎಂದರೆ ಒಂದು ಖಂಡುಗ ಧಾನ್ಯವನ್ನು ಬಿತ್ತಲು ಬೇಕಾಗುವಷ್ಟು ಭೂಮಿ ಎಂದು ಅರ್ಥ.

"ಮನೆಯ ವಿಸ್ತೀರ್ಣವನ್ನು ಅಳೆಯುವಲ್ಲಿ 'ಅಂಕಣ'ಗಳೆಂದು ಪರಿಗಣಿಸಲಾಗುತ್ತಿತ್ತು. ಧಾನ್ಯ ಮತ್ತು ದ್ರವ ಪದಾರ್ಥಗಳನ್ನು ಅಳೆಯುವಾಗ 'ಸೊಲಿಗೆ' 'ಸೊಂಟಿಗೆ' ಕೊಳಗ' ಮುಂತಾದವುಗಳನ್ನು ಬಳಸುತ್ತಿದ್ದರು. 'ದೇವಕೊಳಗ' 'ಜಕ್ಕ ಕೊಳಗ' ಮುಂತಾದ ಬೇರೆ ಬೇರೆಯ ಹೆಸರುಗಳು ದೊರೆಯುತ್ತವೆ."

ವಿವರಗಳಿಗೆ ನೋಡಿ: ಶ್ರೀ ಶೇಷಶಾಸ್ತ್ರಿ 2005 ಶಾಸನ ಪರಿಚಯ ಪುಟ. 70–72.

ಅಟಿಯೂರು

ಕುಗ್ರಾಮವೆನ್ನುವುದಕ್ಕೆ ಅಟಿಯೂರು ಎಂದು ಪ್ರಯೋಗಿಸುತ್ತಾರೆ. ಅಳಿ ಎಂದರೆ ನಶಿಸು. ನಶಿಸಿದ ಊರು ಅಟಿಯೂರು.

ಅಟಿವೆಸನ

ಅಟಿವೆಸನವೆಂದರೆ ಕೆಟ್ಟ ವ್ಯಸನ. ಇದು ಊಳಿಗದವರ ಮನೋಸ್ಥಿತಿಯನ್ನು ಸೂಕ್ಷ್ಮವಾಗಿ ಅಭಿವ್ಯಕ್ತಿಸುತ್ತದೆ. ಮತ್ತು ಊಳಿಗಮಾನ್ಯ ವ್ಯವಸ್ಥೆಯನ್ನು ಸೂಚಿಸುತ್ತದೆ. ಅಳಿ ಎಂಬುದು ಇಲ್ಲಿ ಕೆಟ್ಟ ಎಂಬ ಅರ್ಥವನ್ನು ಸೂಚಿಸುತ್ತದೆ. ವ್ಯಸನವು ವೆಸನವೆಂದಾಗಿದೆ. ವಿವರಗಳಿಗೆ ನೋಡಿ: ಆರ್. ಎಸ್. ಶರ್ಮ 2004 ಪ್ರಾಚೀನ ಭಾರತದಲ್ಲಿ ಶೂದ್ರರು.

ಆಂಗ್ಲ ಸಾಹಿತ್ಯದ ಪ್ರೇರಣೆ

ಆಧುನಿಕ ಸಾಹಿತ್ಯವೆನ್ನುವುದು ಎರಡು ಸಂಸ್ಕೃತಿಗಳ ಮುಖಾಮುಖಿಯಲ್ಲಿ ಹುಟ್ಟಿಕೊಂಡಿದೆ. ಎರಡು ಸಂಸ್ಕೃತಿಯೆಂದರೆ ಆಧುನಿಕ ಶಿಕ್ಷಣ ಕ್ರಮಕ್ಕೆ ತೆರೆದುಕೊಂಡು ಭಾರತೀಯ ಮಧ್ಯಮ ವರ್ಗದ ಅನುಭವವನ್ನು ಒಳಗೊಂಡ ಆದರ್ಶಮುಖಿಯಾದ ಸಂಸ್ಕೃತಿ ಮತ್ತು ಪ್ರಭುತ್ವದ ಮುಖವಾದ ಆಳುವ ಸಂಸ್ಕೃತಿ. ಪ್ರಭುತ್ವವು ಹೇರಿದ ಸಂಸ್ಕೃತಿಯೊಂದಿಗೆ ರೂಪುಗೊಂಡ ಆಧುನಿಕ ಶಿಕ್ಷಣ ಪದ್ಧತಿಯ ಕ್ರಮವು ಕನ್ನಡದ ನೆಲೆಗಟ್ಟಿನ ಮೇಲೆ ಪ್ರಭಾವವನ್ನು ಬೀರಿದೆ. ಆಧುನಿಕ ಸಾಹಿತ್ಯದ ಮೇಲೆ ಆಂಗ್ಲ ಸಾಹಿತ್ಯದ ಪ್ರಭಾವವಿದೆ ಎಂದುಹೆಚ್ಚಿನ ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. ಪ್ರಭುತ್ವದ ಸಂಸ್ಕೃತಿಯ ಜೊತೆಗೆ ಮುಖಾಮುಖಿಯಾಗುವ ಹೊತ್ತಿನಲ್ಲಿ ಸಹಜವಾಗಿಯೇ ಅಧೀನ ಸಂಸ್ಕೃತಿಯು ತನ್ನ ಚಹರೆಗಳನ್ನು ಎಷ್ಟು ಅಧಿಕೃತವಾಗಿ ಸಾಬೀತುಪಡಿಸುತ್ತದೆ ಎಂಬುದು ಮುಖ್ಯ. ಪಶ್ಚಿಮ ಶೈಲಿಯ ಶಿಕ್ಷಣ ಕ್ರಮವು ಇಂಗ್ಲಿಷನ್ನು ಭಾರತೀಯ ಉಪಭಾಷೆಗಳ ವಿರುದ್ಧ ನಿಲ್ಲಿಸಿರುವುದು ಕೂಡಾ ಸರಿ. 'ಇಂಗ್ಲಿಷ್' ಎನ್ನುವುದು ಒಂದು ಆಡಳಿತ ಭಾಷೆಯಾಗಿ ಇಲ್ಲಿ ಹಾಜರಾದಂತೆ ಅದು ತನ್ನ ಭಾಷಿಕ ಕಾಲುವೆಯ ಮೂಲಕ ಅನೇಕ ಸಂಗತಿಗಳನ್ನು ತಂದು ಹಾಕಿತು. ನವೋದಯ ಕಾಲದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಬಿ.ಎಂ.ಶ್ರೀಯವರು ಇದರ ನಡುವಣ ದ್ವಂದ್ವಾತ್ಮಕ ಸಂಬಂಧವನ್ನು 'ಇಂಗ್ಲಿಷ್ ಗೀತೆಗಳು' ಕೃತಿಯ ಕವಿತೆಯೊಂದರಲ್ಲಿ 'ಅವಳ ತೊಡುಗೆ ಇವಳಿಗಿಟ್ಟು ಇವಳ ತೊಡುಗೆ ಅವಳಿಗಿಟ್ಟು ಹಾಡಬಯಸಿದೆ' ಎಂದು ಹೇಳಿಕೊಂಡಿದ್ದಾರೆ. ಆ ಕಾಲದಲ್ಲಿ ಇಂಗ್ಲಿಷ್ ಭಾಷೆ ಕೇವಲ ಆಡಳಿತ ಭಾಷೆಯಾಗದೆ ಅದು ಸಾಂಸ್ಕೃತಿಕ ರಂಗವನ್ನು ಪ್ರಭಾವಿಸಿದ ಭಾಷೆಯೂ ಆಯಿತು ಎಂಬುದಕ್ಕೆ ಕನ್ನಡದ ನವೋದಯ ಕಾವ್ಯದಲ್ಲಿ ಹೇರಳವಾದ ಉದಾಹರಣೆಗಳಿವೆ. ಆಳುವ ವರ್ಗ ಮತ್ತು ಆಳಿಸಿಕೊಳ್ಳುವ ವರ್ಗಗಳ ನಡುವೆ ಇರುವ ಜಗಳವು ಕೂಡಾ ಸರಳವಾದುದಲ್ಲ. ಕನ್ನಡದ ಬಿ.ಎಂ.ಶ್ರೀಯವರು "ಆಳೌಬ್ರಿಟಾನಿಕ" ಎಂದು ಕರೆದರು. ದಾಸ್ಯವನ್ನು ಒಪ್ಪಿಕೊಂಡಾಗಿನ ಒಂದು ಮಾನಸಿಕ ಸ್ಥಿತಿಯನ್ನು ಈ ರೀತಿಯ ಮಾತುಗಳು ಸೂಚಿಸುತ್ತವೆ. ಹೀಗಾಗಿ ಆಳುವ ಮತ್ತು ಆಳಿಸಿಕೊಳ್ಳುವವರ ನಡುವಣ ಸಂವಾದವು ಕನ್ನಡದ ನವೋದಯ ಸಾಹಿತ್ಯದಲ್ಲಿ ವಿಭಿನ್ನವಾದ ಮಾದರಿಗಳಿಗೆ ಅವಕಾಶವನ್ನು ಕಲ್ಪಿಸಿದೆ.

ಕನ್ನಡದ ನವೋದಯ ಸಾಹಿತ್ಯವು ಪ್ರಭುತ್ವದ ಕೆಲವು ಅಂಶಗಳಿಗೆ ತನ್ನ ತಾತ್ವಿಕ ಸಹಮತವನ್ನು ವ್ಯಕ್ತಪಡಿಸಿದೆ. ಈ ರೀತಿಯ ಸಹಮತದ ಅಭಿಪ್ರಾಯವು ಕನ್ನಡದ ನವೋದಯದಲ್ಲಿ ಎಲ್ಲಾ ರೀತಿಯಲ್ಲಿ ಬರುತ್ತದೆಯೆಂದು ಇದರ ಅರ್ಥವಲ್ಲ. ಕನ್ನಡದ ನವೋದಯ ಕವಿತೆಯ ಅಧ್ಯಯನಕ್ಕಿರುವ ಒಂದು ಸಾಧ್ಯತೆಯಿದು. ಈ ಸಹಮತದ ಅಭಿಪ್ರಾಯವು ಬಂದಿರುವುದು ಆಗಿನ ಶಿಕ್ಷಣದ ಕ್ರಮದಿಂದಲೇ. ಪ್ರಭುತ್ವವು ಕಲಿಸಿಕೊಟ್ಟ ಕೆಲವು ಪರಿಭಾಷೆಗಳಿಗೆ ಸಹಮತವನ್ನು ವ್ಯಕ್ತಪಡಿಸಿದ ನವೋದಯ ಸಾಹಿತ್ಯದಲ್ಲಿ

ಎರಡು ಪ್ರಮುಖ ಆಸಕ್ತಿಗಳಿವೆ: ಮೊದಲನೆಯದು–ಪ್ರಭುತ್ವದ ಜೊತೆಗಿನ ಒಪ್ಪಂದ. ಇದು ಸಾಮಾಜಿಕ ಪರಿವರ್ತನೆಗೆ ಕಾರಣವಾಗಬಲ್ಲುದು ಎಂಬ ಗ್ರಹಿಕೆ. ಈ ರೀತಿಯ ಗ್ರಹಿಕೆಗಳು ಆಧುನಿಕ ಕೆಲವು ಪರಿಕಲ್ಪನೆಗಳನ್ನು ಬಳಸಿಕೊಂಡಿದೆ. ಉದಾಹರಣೆಗೆ 'ವಿಧವೆಯರ ವಿವಾಹ', 'ಬಾಲ್ಯ ವಿವಾಹ' ಇತ್ಯಾದಿ ಸಮಸ್ಯೆಗಳನ್ನು ಆಧುನಿಕ ಅರ್ಥಗಳಲ್ಲಿ ನಿರ್ವಹಿಸುವ ಪ್ರಯತ್ನವನ್ನು ಕಾಣಬಹುದು. ಈ ರೀತಿಯ ಪರಿಕಲ್ಪನೆಗಳನ್ನು 'ಸಾಂಸ್ಕೃತಿಕ ಅಭಿವೃದ್ಧಿ' ಎಂದು ಹೇಳಬಹುದು.

ಸಾಂಸ್ಕೃತಿಕ ಪುನರ್ ನಿರ್ಮಾಣದಲ್ಲಿ ಸಾಹಿತ್ಯ ಸಂವಾದಕ್ಕೆ ನಿರ್ದಿಷ್ಟ ಅರ್ಥವಿರುವುದರಿಂದ ಸಾಹಿತ್ಯವನ್ನು ಒಂದು ಸಾಂಸ್ಥಿಕ ಪರಿಭಾಷೆಯನ್ನಾಗಿಯೂ ಕಲಿಯಲು ಶುರುವಾಯಿತು. ಕನ್ನಡದ ನವೋದಯ ಸಾಹಿತ್ಯವು ಈ ಸಮಸ್ಯೆಯನ್ನು ತನ್ನ ಎದುರಿಗೆ ಇಟ್ಟು ಕೊಂಡಿದೆ. ಆಗ ಪ್ರಾರಂಭವಾಗಿದ್ದ ಶಿಕ್ಷಣ ನೀತಿಯ ಕಲ್ಪನೆಯು ಕೂಡಾ ಸಾಹಿತ್ಯವನ್ನು ಒಂದು ನಿರ್ದಿಷ್ಟ ಗ್ರಹಿಕೆಯ ಕ್ರಮವಾಗಿ ಕಲಿಯಲು ಪ್ರೇರೇಪಿಸಿತು. ಇದಕ್ಕೆ ಪ್ರಭುತ್ವ ಕೊಟ್ಟ ವ್ಯಾಖ್ಯಾನವು ಏನೇ ಇರಲಿ ಸಾಂಸ್ಕೃತಿಕವಾಗಿ ಉಂಟಾದ ಸ್ಥಿತ್ಯಂತರದಿಂದ ಸಾಹಿತ್ಯದ ಕಲಿಕೆಯು ಒಂದು ಸಾಂಸ್ಥಿಕ ಪರಿಭಾಷೆಗೆ ಅನ್ವಯವಾಯಿತು ಎಂಬುವುದಂತೂ ನಿಜ. ಈ ರೀತಿಯ ಸ್ಥಿತ್ಯಂತರವನ್ನು ಒಂದು ನಿರ್ದಿಷ್ಟ ಸಾಂಸ್ಕೃತಿಕ ಪರಿಸರದೊಳಗೆ ಹುಡುಕಬೇಕು. ಎರಡು ಸಂಸ್ಕೃತಿಗಳ ಮುಖಾಮುಖಿಯ ಸಂದರ್ಭದಲ್ಲಿ ಕರ್ನಾಟಕದ (ಹಳೆಯ ಮೈಸೂರು ಪ್ರಾಂತದ) ಸಂಸ್ಕೃತಿಯು ಈ ರೀತಿಯ ಸಾಹಿತ್ಯ ಸಂಸ್ಕೃತಿಗೆ ತೆರೆದುಕೊಂಡ ಕ್ರಮವು ಗಮನಾರ್ಹವಾದುದು. ಕಲಿಕೆಯ ಈ ಕ್ರಮ ಎನ್ನುವುದು ಲಿಖಿತಸಂಸ್ಕೃತಿಯ ಕಡೆಗೆ ಪರಿವರ್ತನೆಗೊಂಡಾಗ ಅಲ್ಲಿ ಸಾಹಿತ್ಯ ಸಂಸ್ಕೃತಿಯ ಬಗೆಗಿನ ಕೆಲವು ಪ್ರತೀಕಗಳು ಸಹಜವಾಗಿಯೇ ಹುಟ್ಟಿಕೊಂಡವು.

ಆಧುನಿಕ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳ ಮೇಲೂ ಆಂಗ್ಲ ಸಾಹಿತ್ಯದ ನೆರಳನ್ನು ಕಾಣಬಹುದು.

ವಿವರಗಳಿಗೆ ನೋಡಿ: Gauri Vishwanathan 1989 Masqes of Conquest
Aijaz Ahmad 1999 In theory.
ಬರಗೂರು ರಾಮಚಂದ್ರಪ್ಪ ೧೯೯೩ ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ

ಆಂಡಯ್ಯನ ಕಬ್ಬಿಗರ ಕಾವ

"ಕಬ್ಬಿಗರ ಕಾವ" ಕೃತಿಯ ಕುರಿತು ಮುಳಿಯ ತಿಮ್ಮಪ್ಪಯ್ಯನವರು ಹೀಗೆ ಹೇಳುತ್ತಾರೆ (೧೯೮೮. ೨.ಪು.೪೯೫)

"ಕಬ್ಬಿಗರ ಕಾವ" ಎಂಬುದು ಕಾವ್ಯದ ಹೆಸರಾದರೆ, ಅದು ನಪುಂಸಕಲಿಂಗವಾಗಬೇಕು. ಮೇಲೆ ಹೇಳಿದ ಟಿಪ್ಪಣಿಕಾರರು ಊಹಿಸುವಂತೆ "ಕಬ್ಬಿಗರ

ಕಾವ" ಶಬ್ದದ "ಕಾವ" ಎಂಬ ಪದವು ಕನ್ನಡದ "ಕಾ" ಧಾತುವಿನಿಂದೊಗೆದ ಕೃನ್ನಪುಂಸಕಶಬ್ದವಾದರೆ "ಕಬ್ಬಿಗರ ಕಾಪು' ಕಬ್ಬಿಗರ ಕಾವು", ಅಥವಾ "ಕಬ್ಬಿಗರ ಕಾವುದು" ಎಂಬುವುಗಳೊಳಗೆ ಯಾವುದಾದರೂ ಒಂದು ರೂಪವನ್ನು ಪಡೆಯಬೇಕಿತ್ತು. ನಾಗವರ್ಮಾದಿಗಳ ನಿಯಮಾನುಸಾರವಾಗಿಯಾಗಲಿ, ಕಾವ್ಯಪ್ರಯೋಗದಲ್ಲಿಯಾಗಲಿ "ಕಾ" ಧಾತುವಿನಿಂದುದಿಸಿ ನಪುಂಸಕಲಿಂಗದಲ್ಲಿ "ಕಾವಂ" ಅಥವಾ "ಕಾವವು" ಎಂದು ರೂಪುಗೊಂಡುದು ಎಲ್ಲಿಯೂ ತೋರುವುದಿಲ್ಲ. ಕಾವ್ಯಮಂಜರಿಯಲ್ಲಚ್ಚಾದ ಪ್ರತಿಯಲ್ಲಿ "ಕಬ್ಬಿಗರ ಕಾವಮೊಲವಿಂದೊರೆದಂ" ಎಂದಿರುತ್ತಿದ್ದರೆ ಒಂದು ವೇಳೆ "ಕಬ್ಬಿಗರ ಕಾವು" ಎಂಬುದು ಕಾವ್ಯದ ಹೆಸರೆಂದು ತರ್ಕಿಸಬಹುದಿತ್ತು. ಹಾಗಿಲ್ಲ; "ಕಬ್ಬಿಗರ ಕಾವಮೊಲವಿಂದೊರೆದಂ" ಎಂಬಲ್ಲಿ "ಕಬ್ಬಿಗರ ಕಾವ"ನೆಂದರೆ ಒಬ್ಬ ಪುರುಷನೆಂದು ಸೂಚಿಸುವ ನಕಾರಾಗಮವು ವ್ಯಕ್ತವಾಗಿರುವಾಗ, "ಕಬ್ಬಿಗರ ಕಾವಂ" ಅಥವಾ "ಕಬ್ಬಿಗರ ಕಾವವು" ಎಂದು ಕಾವ್ಯದ ಹೆಸರನ್ನು ಸೂಚಿಸುವುದು ಕವಿಯ ಉದ್ದೇಶವಾಗಿದ್ದಿಲ್ಲವೆಂಬುದು ಸ್ಫುಟವಾಗುತ್ತದೆ.

ಕಬ್ಬಿಗರಕಾವ ಅಚ್ಚಗನ್ನಡದಲ್ಲಿ ರಚಿಸಿದ್ದೇನೆಂದು ಆಂಡಯ್ಯ ಹೇಳಿಕೊಂಡಿದ್ದಾನೆ.

ಎಂದು ತಮತಮಗೆ ಬಲ್ಲವ।
ರೆಂದೊಡೆ ನಾನವರ ಬಯಕೆಯಂ ಸಲಿಸುವೆನಿ॥
ನ್ನೆಂದಚ್ಚಗನ್ನಡಂ ಬಿಗಿ।
ವೊಂದಿರೆ ಕಬ್ಬಿಗರ ಕಾವವಿದನೊಲ್ದೊರೆದೆಂ॥
(ಆಂಡಯ್ಯ ಕಬ್ಬಿಗರ ಕಾವ. ೧ – ೧೬.)

ಬಲ್ಲಿದರು ಅಚ್ಚಗನ್ನಡದಲ್ಲಿ ಕಾವ್ಯ ಬಂದಿಲ್ಲವೆಂದು ಹೇಳುತ್ತಾರೆ. ಅದಕ್ಕಾಗಿ ಈ ಕಾವ್ಯವನ್ನು ರಚಿಸಿದ್ದೇನೆಂದು ಆಂಡಯ್ಯ ಹೇಳಿಕೊಂಡಿದ್ದಾನೆ. (ಅದೇ – ೧೫ಪದ್ಯ) ಕನ್ನಡದಲ್ಲಿ ಕಬ್ಬಮಂ ಬಗೆಗೊಳೆ ಪೇಟಲಾರರಿನಿತ್ತುಂ ಸಲೆ ಮುನ್ನಿನ ಪಂಪನಾಳ್ದ ಕಬ್ಬಿಗರದು ಎಂದು ಅವನ ವಾದವಾಗಿದೆ. ಅಚ್ಚಗನ್ನಡದಿಂದ ಕಬ್ಬಿಗರ ಕಾವವನ್ನು ಒಲವಿನಿಂ ಬರೆವೆನು (ಹೇಳುವೆನು) ಎಂದು ಆಂಡಯ್ಯ ಅಭಿಮಾನದಿಂದ ಹೇಳಿಕೊಂಡಿದ್ದಾನೆ.

ಆಕಾಶವಾಣಿ

ರೇಡಿಯೋ ಎಂಬುದಕ್ಕೆ ಸಂವಾದಿಯಾಗಿ ನಾವು ಆಕಾಶವಾಣಿ ಎಂದು ಕರೆದುಕೊಂಡೆವು. ಇದು ವಿಶೇಷವಾಗಿ ಕೇಳುವ ಮಾಧ್ಯಮ. ಇದಕ್ಕೆ ಅಕ್ಷರ ಜ್ಞಾನದ ಅಗತ್ಯವಿಲ್ಲ. ಕೇಳಿಸಿಕೊಳ್ಳುವ ಜವಾಬ್ದಾರಿ ಹೆಚ್ಚಿದ್ದು ಇದು ಪ್ರಸಾರ ಮಾಡುವ ಪ್ರತಿ ಕಾರ್ಯಕ್ರಮವೂ ಸರಿಯಾದ, ಖಚಿತವಾದ, ವೈಚಾರಿಕತೆಯಿಂದ ಕೂಡಿರಬೇಕಾಗುತ್ತದೆ. ಇಲ್ಲವಾದಲ್ಲಿ ಈ ಮಾಧ್ಯಮ ಇಡೀ ಸಾಮಾಜಿಕ ಸಮೂಹಕ್ಕೆ(ಕೇಳುವ ವರ್ಗಕ್ಕೆ)

ತಪ್ಪು ಮಾಹಿತಿಯನ್ನು ರವಾನಿಸಿ ಅದರ ಘನತೆಗೆ ಧಕ್ಕೆ ತರುತ್ತದೆ ಎಂದು ನೈತಿಕವಾದಿಗಳು ಮಾಧ್ಯಮವನ್ನು ಅನುಮಾನದಿಂದ ನೋಡಿರುವುದೂ ಇದೆ.

ಸಾಹಿತ್ಯವೆನ್ನುವುದು ಮುದ್ರಣ ರೂಪದಲ್ಲಿ ಬಂದಾಗ ಅಲ್ಲಿ ಓದುವವನು ಪ್ರತ್ಯಕ್ಷನಾಗಬೇಕಾಗುತ್ತದೆ. ಸಾಹಿತ್ಯದ ನಿರ್ವಚನವನ್ನು ಓದುವ ಸಾಮರ್ಥ್ಯ ಮತ್ತು ಓದುವವನ ಅನುಭವದ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುವ ಪ್ರಯತ್ನವನ್ನು ನಡೆಸಬೇಕಾಗುತ್ತದೆ. ಓದುವವನ ಅನುಭವವು ತೀರಾ ಸಾಮಾನ್ಯವಾದ ಮಟ್ಟದಲ್ಲಿ ಇದ್ದಾಗ ಅವನ ಸಾಹಿತ್ಯದ ಗ್ರಹಿಕೆಗಳೂ ಸಾಮಾನ್ಯವಾಗಿರುತ್ತವೆ. ಅನುಭವದ ವಿಸ್ತೀರ್ಣತೆಯುಳ್ಳವನು ಸಾಹಿತ್ಯವನ್ನು ಗ್ರಹಿಸುವಾಗಲೇ ಅವನ ಓದಿನಮಟ್ಟ ಸಂಕೀರ್ಣತೆಯನ್ನು ಒಡ್ಡುತ್ತಿರುತ್ತದೆ. ಆಕಾಶವಾಣಿಯು ಮಾತಿನ ಸಾಧ್ಯತೆಗಳನ್ನು ಒಳಗೊಂಡಿರುವ ಸಮೂಹ ಮಾಧ್ಯಮವಾಗಿದೆ. ಅನೇಕ ಮಾಧ್ಯಮಗಳಿಗೆ ಈವತ್ತೂ ಸೆನ್ಸಾರ್ ಇದೆ.ಅದನ್ನು ನಾವು ಮರೆಯಬಾರದು. ಇಂದಿರಾಗಾಂಧಿಯವರು ತುರ್ತು ಪರಿಸ್ಥಿತಿಯನ್ನು ಹೇರಿದ್ದಾಗ ಅವರು ವಾಕ್ ಸ್ವಾತಂತ್ರ್ಯವನ್ನು ಹರಣ ಮಾಡಿದರು ಎಂದು ಪ್ರತಿಭಟನೆಯನ್ನು ಮಾಡಿದರು. ಅನೇಕ ಗುಪ್ತ ಪತ್ರಿಕೆಗಳು ಆ ಕಾಲದಲ್ಲಿ ಚಲಾವಣೆಯಲ್ಲಿ ಇದ್ದವು.

ಚಲನಚಿತ್ರಗಳಿಗೆ ಸಂಬಂಧ ಪಟ್ಟಂತೆ ಸೆನ್ಸಾರ್ ಇದೆ.ಸಾಮಾಜಿಕ ಸ್ವಾಸ್ಥ್ಯವನ್ನು ಕೆಡಿಸುವ ಚಿತ್ರಗಳನ್ನು ಸೆನ್ಸಾರ್ ಮಾಡಲಾಗುತ್ತದೆ. ಚಲನಚಿತ್ರಗಳಿಗೆ ಈ ದೃಷ್ಟಿಯಿಂದಲೇ ಗ್ರೇಡ್‌ಗಳನ್ನು ನೀಡಲಾಗುತ್ತದೆ. ತುರ್ತುಪರಿಸ್ಥಿತಿಯಲ್ಲಿ ಬುದ್ಧಿಜೀವಿಗಳು ಆಕಾಶವಾಣಿಯನ್ನು ಬಹಿಸ್ಕರಿಸಿದ್ದು ಗಮನಾರ್ಹ.

ವಿವರಗಳಿಗೆ ನೋಡಿ: Censorship (Annabel Patterson) (Production and Reception) (Article)

ಆಚಾರ

ಶುದ್ಧಚಾರಿತ್ರ , ಗುಣನಡತೆ, ಸಂಪ್ರದಾಯ, ಜೀವನಕ್ರಮಗಳನ್ನು ಆಚಾರವೆಂದು ಕರೆಯುತ್ತಾರೆ. ಆಚಾರವೆಂದರೆ ಗುಣ ನಡತೆಯ ಶ್ರೇಷ್ಠತೆ. ಅನ್ಯೆತಿಕರನ್ನು ಯಾರೂ ಆಚಾರವಂತರು ಎಂದು ಕರೆಯುವುದಿಲ್ಲ. ವಾಸ್ತವವಾಗಿ ಆಚಾರವೆನ್ನುವುದು ಸದ್ವಿಚಾರ. ಸನ್ನಡತೆಗೆ ಸಂಬಂಧಿಸಿದ್ದು, ಆಚಾರವೆಂಬುದಕ್ಕೆ ಸಂಸ್ಕೃತದಲ್ಲಿ ಸ್ವಾತಂತ್ರ್ಯವೆಂಬ ಅರ್ಥವೂ ಇದೆ. ಆಚಾರದ ಇನ್ನೊಂದು ಮುಖವನ್ನು ಇಲ್ಲಿಯೇ ಪರಿಚಯಿಸಬೇಕು. ಆಚಾರದಲ್ಲಿ ವಾಮಾಚಾರ ಮತ್ತು ದಕ್ಷಿಣಾ ಚಾರಗಳಿವೆ. ವಾಮಾಚಾರವು ತಾಂತ್ರಿಕರಿಗೆ ಸಂಬಂಧಿಸಿದ್ದು. ವಾಮಾಚಾರವೆಂದರೆ ಅದು ಎಡಕ್ಕೆ ಸಂಬಂಧಿಸಿದ್ದಾದರೆ ದಕ್ಷಿಣಾಚಾರವೆಂದರೆ ಬಲಕ್ಕೆ ಸಂಬಂಧಿಸಿದ್ದು. ಆಚಾರವು ದೈನಂದಿನ ಬದುಕಿಗೆ ಸಂಬಂಧಿಸಿದರೆ ಅಲ್ಲಿ "ಸದಾಚಾರ" ಎಂದು ಕರೆಯುತ್ತೇವೆ. ಶೈವ ಪಂಥವು

ವೇದಾಚಾರಕ್ಕಿಂತ ಭಿನ್ನವಾದುದನ್ನು ಹೇಳುತ್ತದೆ. ಚರ್ಯ-ಕ್ರಿಯಾ, ಯೋಗ, ಜ್ಞಾನ, ಇದು ಶೈವ ಧರ್ಮದ ಮುಖ್ಯತತ್ವಗಳು. ವೇದವು ಆಚಾರದ ಬಗ್ಗೆ ಹೇಳುತ್ತಾ ಯಾರು ವೇದವನ್ನು ಅನುಸರಿಸುತ್ತಾರೋ ಅವರು ಆಚಾರವಂತರು ಎಂದು ಹೇಳುತ್ತದೆ. ವೈಷ್ಣವ ಪಂಥವು ವೈಷ್ಣವ ಆಚಾರವನ್ನು ಶ್ರೇಷ್ಠವೆಂದಿತು. ಅದು ಒಂದು ಹಂತದಲ್ಲಿ ಶೈವಾಚಾರವನ್ನು ವಾಮಾಚಾರವೆಂದು ಕರೆಯಿತು.

ಆಚಾರಗಳಲ್ಲಿ ಅನೇಕ ವಿಧಗಳಿವೆ. ಅ) ಶಿವಭಕ್ತ – ಶೈವಾಚಾರರು, ಆ) ಜೈನ ಭಕ್ತ – ಜೈನಾಚಾರರು, ಇ) ವೈಷ್ಣವ ಭಕ್ತ – ವೈಷ್ಣವಾಚಾರರು. ಇವುಗಳು ಮತಕ್ಕೆ ಸಂಬಂಧಿಸಿದಂತೆ ಆಯಿತು. ಆದರೆ ಇನ್ನೊಂದು ರೀತಿಯೂ ಇದೆ.

ಅ) ಕುಲಾಚಾರ, ಆ) ಮತಾಚಾರ, ಇ) ಜಾತಿಯ ಆಚಾರ, ಈ) ಸ್ತ್ರೀಯಾಚಾರ– ಇತ್ಯಾದಿ ಆಚಾರ–ಗುಣದ ಸಂಕೇತ. ಒಳ್ಳೆಯಗುಣ, ನಡತೆ, ಸಂಪ್ರದಾಯ, ಜೀವನಕ್ರಮವನ್ನು ಆಚಾರವೆಂದು ಕರೆಯುತ್ತಾರೆ. "ಆಚಾರವಿಲ್ಲದ ನಾಲಗೆ ನಿನ್ನ ನೀಚ ಬುದ್ಧಿಯ ಬಿಡೋ ನಾಲಗೆ" (ದಾಸರ ಕೀರ್ತನೆಗಳು).

ಆಚಾರವೆಂದರೆ ಸ್ವಾತಂತ್ರ್ಯವೆಂದು ಅರ್ಥ. ಶೈವ ಪಂಥದಲ್ಲಿ ಚರ್ಯ, ಕ್ರಿಯೆ, ಯೋಗ ಮತ್ತು ನಾಲ್ಕು ವಿಭಾಗಗಳಿವೆ. ಇವು ಆಚಾರಕ್ಕೆ ಸಂಬಂಧಿಸಿದವುಗಳು. ವೈಷ್ಣವಾಚಾರವೆಂದರೆ ವೈಷ್ಣವ ಪಂಥವನ್ನು ಅನುಸರಿಸುವುದು ಎಂದರ್ಥ. ಹಳೆಗನ್ನಡ ಕಾವ್ಯಗಳಲ್ಲಿ 'ಸತ್ಯ ಶೌಚಾಚಾರ' 'ಸದಾಚಾರ' ಎಂಬ ಉಲ್ಲೇಖಗಳು ಬರುತ್ತವೆ ಮತ್ತು ಅವು ನಾಯಕನನ್ನೋ, ನಾಯಕಿಯನ್ನೋ ವೈಭವೀಕರಿಸುತ್ತವೆ.

ಆಟವಿಕ

ಆಟವಿಕರವೆಂದರೆ ಕಾಡು ಜನರ ಸೈನ್ಯ. ಕಾಡು ಜನರ ಸೈನ್ಯಕ್ಕೆ ಆಟವಿಕವೆಂದು ಕರೆಯುತ್ತಿದ್ದರು ಎಂಬುದು ಗಮನಾರ್ಹ. ಕಾಡುಜನರನ್ನು ಮಾಹಿತಿಗಾಗಿ, ಯುದ್ಧಕ್ಕಾಗಿ ಹಿಂದಿನ ರಾಜಕೀಯ ವ್ಯವಸ್ಥೆಯು ಬಳಸಿಕೊಂಡಿದ್ದು ರಾಜಕೀಯ ತಂತ್ರಗಳಲ್ಲಿ ಒಂದಾಗಿತ್ತು.

ಆಢಳಿತ

ದಶಗ್ರಾಮಪತಿಯು ಹನ್ನೆರಡು ಜೋಡೆತ್ತುಗಳಿಂದ ಉತ್ತು ಸಾಗುವಳಿ ಮಾಡಬಹುದಾದ ಹೊಲವನ್ನು ತನ್ನ ಜೀವನಕ್ಕೆ ವೃತ್ತಿವೇತನವಾಗಿ ಪಡೆಯುವನು. ಅದರಿಂದ ಅವನು ಜೀವಿಸುತ್ತ ಕರ್ತವ್ಯ ನಿರ್ವಹಿಸಬೇಕು. ಇಪ್ಪತ್ತು ಗ್ರಾಮಪತಿಯು ಅದರ ಐದರಷ್ಟು ವೇತನವಾದ ಭೂಮಿಯನ್ನು, ನೂರು ಗ್ರಾಮಪತಿಯು ಒಂದು ಗ್ರಾಮವನ್ನು ವೇತನವಾಗಿ, ಸಾವಿರ ಗ್ರಾಮಪತಿಯು ಒಂದು ಪುರವನ್ನು ಉಂಬಳಿಯಾಗಿ ಹೊಂದಿ, ಕಾರ್ಯ ವ್ಯಾಪೃತನಾಗಬೇಕು. (ಮನುಸ್ಮೃತಿ 7–119)ದಶಗ್ರಾಮಾಧಿಪತಿ,ಇಪ್ಪತ್ತು ಗ್ರಾಮಾಧಿಪತಿ ಮುಂತಾದ ಪರಿಕಲ್ಪನೆಗಳು ಹಿಂದಿನ ರಾಜರ ಆಢಳಿತವನ್ನು ಸೂಚಿಸುತ್ತದೆ.

ಆಢಳಿತ ಕ್ರಮ

ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ ರಾಜ್ಯದ ಆದಾಯ ವೆಚ್ಚಗಳ ಮುಖ್ಯ ಅಧಿಕಾರಿ ಸಮಾಹರ್ತ. ದ್ರೋಣ ಮುಖಕ್ಕೆ ಪ್ರದೇಷ್ಟನೂ ಖಾರ್ವಟಿಕಕ್ಕೆ ಸ್ಥಾನಿಕನೂ, ಸಂಗ್ರಹಣಕ್ಕೆ ಗೋಪನೂ ಗ್ರಾಮಕ್ಕೆ ಗ್ರಾಮಣಿಯೂ ಅಧಿಕಾರಿಗಳಿದ್ದರು ಮನೆ ಚಾವಡಿ ತರೀಕುಷ್ಕಿ ಭೂಮಿಗಳನ್ನು ಗೋತ್ತು ಪಡಿಸುವುದು ಅವುಗಳ ಲೆಕ್ಕಪತ್ರವಿಡುವುದು ಗ್ರಾಮಣಿಯ ಕೆಲಸ. ಸೇನಾಶಾಖೆಗೆ ಸೇನಾಪತಿಮುಖ್ಯನು. ರಾಜನ ಗೃಹಕೃತ್ಯ ಅಂತಃಪುರ ನಿವಾಸಿಗಳ ನಿತ್ಯಜೀವನದ ಮೇಲ್ವಿಚಾರಣೆಯನ್ನು ದೌವಾರಿಕೆ ಮತ್ತು ಅಂತರ್ವಂಶಿಕ ಎಂಬ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು. ಕೋಶ, ಕುಪ್ಯ, ಕೋಷ್ಠ, ಆಯುಧ ಮತ್ತು ಬಂಧನ ಶಾಖೆಗಳಿಗಾಗಿ ಕಟ್ಟಡಗಳನ್ನು ಕಟ್ಟಿಸುವುದು ನೌಕರರ ಮೇಲ್ವಿಚಾರಣೆ ಸನ್ನಿಧಾತನ ಕೆಲಸ ಭೂಮಿಯ ಅಳತೆ ಕರವನ್ನು ವಸೂಲಿಮಾಡುವುದು ಸಮಾಹರ್ತನೆಕೆಲಸ ಖನಿ, ಸೇತು, ವನಗಳಿಂದ ಸುಂಕವಸೂಲಿಯು ಶುಲ್ಕಾಧ್ಯಕ್ಷನಿಗೆ ಸೇರಿದ್ದು ಲೋಹ, ನಾಣ್ಯ, ಆಭರಣ ಮತ್ತು ಹವಳಾದಿಗಳ ಮಾರಾಟದ ಮೇಲ್ವಿಚಾರಣೆಯು ಖನ್ಯಧ್ಯಕ್ಷರಿಗೆ ಸೇರಿದ್ದು ಒಕ್ಕಲು ತನ, ಪಶು ಪಕ್ಷಿಗಳರಕ್ಷಣೆ, ಪುಂಡರನ್ನು ಹತೋಟಿಯಲ್ಲಿಡುವುದು. ಯಾತ್ರಿಕರಿಗೆ ಮತ್ತು ಅನ್ಯದೇಶೀಯರಿಗೆ ಪರವಾನಿಗೆ ನೀಡುವುದು. ನೆಯ್ದೆ ಶಾಖೆಗಳ ಮೇಲ್ವಿಚಾರಣೆ ಇವುಗಳಿಗೆ ಸಂಬಂಧಪಟ್ಟ ಅಧಿಕಾರವನ್ನು ಸಿತಾಧ್ಯಕ್ಷ, ಸೂನಾಧ್ಯಕ್ಷ, ಮುದ್ರಾಧ್ಯಕ್ಷ, ಸೂತ್ರಾಧ್ಯಕ್ಷರು ನಿರ್ವಹಿಸುತ್ತಿದ್ದರು. ಕಾಲುದಳ ಗೋವು, ಅಶ್ವ, ಹಸ್ತಿ ರಥ ಮತ್ತು ನಾವೆ ಮುಂತಾದ ಶಾಖೆಗಳ ಅಧಿಕಾರವು ಪತ್ತ್ಯಧ್ಯಕ್ಷ, ವಿವೀತಾಧ್ಯಕ್ಷ, ಹಸ್ತ್ಯಧ್ಯಕ್ಷ, ನಾಗವನಾಧ್ಯಕ್ಷ, ರಥಾಧ್ಯಕ್ಷ, ಮತ್ತು ನಾವಾಧ್ಯಕ್ಷರ ಕೈಲಿದ್ದಿತು ಎಂದು ಕೌಟಿಲ್ಯನು ಹೇಳುತ್ತಾನೆ. (ಎಂ.ವಿ. ಕೃಷ್ಣರಾವ್ ೧೯೫೩ ಕೌಟಿಲ್ಯ ಪುಟ.೩೧–೩೨)

ಬ್ರಿಟೀಶರು ಬಂದ ಮೇಲೆ ಈ ರೀತಿಯ ಆಢಳಿತ ಕ್ರಮವು ಬದಲಾಯಿತು. ಭಾರತದಲ್ಲಿ ಅನೇಕ ರಾಜರು ತಮ್ಮದೇ ಆಢಳಿತಾತ್ಮಕ ನುಡಿಗಟ್ಟು ಇಟ್ಟುಕೊಂಡಿದ್ದರು. ಮೊಗಲ ಅರಸರು ಕೂಡಾ ಬೇರೆ ಬೇರೆ ಆಢಳಿತಾತ್ಮಕ ಬದಲಾವಣೆಯನ್ನು ತಂದಿದ್ದರು.

ಆತ ಪತ್ರ

ತಳೆ, ಕೊಡೆ, ಮೇಘಡಂಬರಂ ಈ ಮೂರು ಆತಪತ್ರದ ಹೆಸರು (ಕರ್ನಾಟಕ ಶಬ್ದಸಾರಂ ಪುಟ ೬) ಆತಪತ್ರವೆಂದರೆ ಕೊಡೆ, ಛತ್ರಿ ಎಂದು ಅರ್ಥ. ಸಾಮಾನ್ಯವಾದ ಕೊಡೆಯನ್ನು ಹಿಂದೆ ಛತ್ರಿಯೆಂದು ಕರೆಯುತ್ತಿದ್ದರು. ಹಿಂದಿನ ಕಾಲದಲ್ಲಿ ರಾಜರಿಗೆ ಇರುವ ಛತ್ರಿಗಳನ್ನು ಶ್ವೇತಛತ್ರ ಅಥವಾ ಬೆಳ್ಗೊಡೆಯೆಂದು ಕರೆಯುತ್ತಿದ್ದರು. ಸಾಮಾನ್ಯರ ಛತ್ರಿಯು ಓಲೆಗರಿಯಿಂದ ರಚಿತವಾಗುತ್ತಿತ್ತು ಮತ್ತು ಛತ್ರಿಯು ಬಿಸಿಲು ಮತ್ತು ಮಳೆಯ ರಕ್ಷಣೆಗಾಗಿ ಬಳಕೆಯಾಗುತ್ತಿತ್ತು. ಪತ್ರವೆಂದರೆ ಎಲೆಯೆಂಬ ಅರ್ಥವಿದೆ.

ಪತ್ರದಿಂದ ರಚಿತವಾದುದು ಆತಪತ್ರ. ಶ್ವೇತಪತ್ರಕ್ಕೇ ಅದರದೇ ಆದ ವೈಶಿಷ್ಟತೆಯಿದೆ ಎನ್ನುವುದು ಗಮನಾರ್ಹ.

"ಇದರೊಳ್ ಶ್ವೇತಾತಪತ್ರ ಸ್ಥಗಿತ ದಶದಿಶಾ ಮಂಡಲಂ ರಾಜಚಕ್ರಂ" (ಪಂಪಭಾರತ-12156)ಎನ್ನುವ ಪಂಪಭಾರತದ ವಾಕ್ಯವನ್ನು ನೆನಪಿಸಿಕೊಳ್ಳಬೇಕು.

ಆತೋದ್ಯ

ಶುಭ ಕಾರ್ಯಗಳಲ್ಲಿ; ರಾಜಸಭೆಯಲ್ಲಿ ಇವು ನಿರಂತರವೆಂಬುದು ಗಮನಾರ್ಹ. ಆತೋದ್ಯನಾದವೆಂದರೆ ಮೃದಂಗಧ್ವನಿ, ಮೃದಂಗಾದಿ ವಾದ್ಯಗಳ ಧ್ವನಿ. ದೇವವಾದ್ಯ (ಮಂಗಳಾರತಿಯಾಗುವಾಗ ನುಡಿಸುವ ವಾದ್ಯ) ವೀರವಾದ್ಯ (ಯುದ್ಧದ ಸಂದರ್ಭದಲ್ಲಿ ಮೊಳಗಿಸುವ ವಾದ್ಯ) ಮಂಗಳ ಕಾರ್ಯದ ಸಂದರ್ಭದಲ್ಲಿ ಮಂಗಳವಾದ್ಯ ಬಾಜಿಸುತ್ತಾರೆ. ಮರಣವಾದ್ಯ; ಮರಣ ಮೃದಂಗ; ಮರಣಗಂಟೆ ಮೊದಲಾದ ಪದ ಪ್ರಯೋಗಗಳನ್ನು ಗಮನಿಸಬಹುದು.

ಆತ್ಮ ಬಲಿಯ ಸ್ಮಾರಕಗಳು

ಸಾಮಾಜಿಕ ಮತ್ತು ಧಾರ್ಮಿಕ ಕಾರಣಗಳಿಗಾಗಿ ಆತ್ಮಹತ್ಯೆ ಮಾಡಿಕೊಂಡವರಿಗೆ ಸ್ಮಾರಕ ನಿರ್ಮಿಸುವುದು ಹಿಂದಿನಿಂದಲೂ ಕಂಡುಬರುತ್ತದೆ. ಈ ಕುರಿತು ಆರ್. ಶೇಷಶಾಸ್ತ್ರಿಯವರು ಹೀಗೆ ಹೇಳುತ್ತಾರೆ:

"ವ್ಯಕ್ತಿಯೊಬ್ಬನು ತನ್ನ ಶ್ರೇಯಸ್ಸಿಗಾಗಿಯೋ, ಅಥವಾ ತನ್ನ ಸಮಾಜದ ಶ್ರೇಯಸ್ಸಿಗಾಗಿಯೋ ತಾನು ನಂಬಿದ ಧರ್ಮದ ಮಾರ್ಗವನ್ನು ಅನುಸರಿಸಿ ಆ ಮಾರ್ಗದಲ್ಲಿ ದೇಹತ್ಯಾಗ ಮಾಡುತ್ತಿದ್ದ ಒಂದು ಸಂಪ್ರದಾಯ ಕರ್ನಾಟಕದಲ್ಲಿ ಪ್ರಚಲಿತವಿತ್ತು. ಈ ರೀತಿ ಆತ್ಮಹತ್ಯೆಯನ್ನು ಮಾಡಿಕೊಂಡವರಿಗೆ ಸ್ಮಾರಕಗಳನ್ನು ನಿಲ್ಲಿಸಿ ಅವುಗಳ ಮೇಲೆ ಶಾಸನ ಹಾಕಿಸಿರುವುದುಂಟು. ಶಕ್ತಿಯ ಆರಾಧಕರು ನಮ್ಮ ದೇಹದ ಭಾಗಗಳನ್ನು ತಾವೇ ಸ್ವತಃ ಛೇದಿಸಿಕೊಂಡು ದೇವಿಗೆ ಅರ್ಪಿಸಿ ದೇವಿಯನ್ನು ತೃಪ್ತಿ ಪಡಿಸುತ್ತಿದ್ದರು. ಶಕ್ತಿಯ ಉಪಾಸಕರಲ್ಲದವರೂ ತಮ್ಮ ತಮ್ಮ ಮಾರ್ಗಗಳನ್ನು ಅನುಸರಿಸಿ ಬೆಂಕಿಯಲ್ಲಿ ಹಾಯ್ದೋ, ಇರಿದುಕೊಂಡೋ ಮಡಿದ ನಿದರ್ಶನಗಳು ಹಲವಾರು ಇವೆ. ತಾವಾಗಿಯೇ ಜೀವವನ್ನು ಕಳೆದುಕೊಳ್ಳುವುದು ಆತ್ಮಹತ್ಯೆ ಎನಿಸಿಕೊಳ್ಳುತ್ತದೆ.

ಕ್ರಿಶ 1120ರ ಒಂದು ಶಾಸನದಿಂದ ದೇವರ ಬಂಟನಾದ ಬೀಚಿಗ ಎಂಬುವನು ಸೂರ್ಯಗ್ರಹಣದ ದಿನದಂದು ಬೆಂಕಿಯಲ್ಲಿ ಬಿದ್ದು ದೇಹತ್ಯಾಗ ಮಾಡಿದ ವಿಷಯ ತಿಳಿಯುತ್ತದೆ. ಆಗ ಅವನು ಗುರುಗಳಾದ ನಾಗರಾಜ ಪಂಡಿತರು ಅವನಿಗೆ ಒಂದು ಸ್ಮಾರಕ ಶಿಲೆಯನ್ನು ನಡೆಸುತ್ತಾರೆ. ಕ್ರಿಶ 991ರ ಒಂದು ಶಾಸನದಲ್ಲಿ ಒಬ್ಬ ವ್ಯಕ್ತಿ ತನ್ನ ಅರಸನಿಗೆ ಗಂಡು ಮಗು ಆದಾಗ ತನ್ನ ತಲೆಯನ್ನು ಅರ್ಪಿಸಿದ ವಿಷಯವನ್ನು

ಹೇಳಲಾಗಿದೆ. ಈ ರೀತಿ ಹರಕೆಯನ್ನು ನಿರ್ದಿಷ್ಟ ಕಾರಣಗಳಿಗಾಗಿ ಹೊತ್ತು ಅದು ನೆರವೇರಿದಾಗ ತಮ್ಮನ್ನು ಬಲಿಕೊಟ್ಟುಕೊಂಡವರ ಐದಾರು ನಿದರ್ಶನಗಳೂ ದೊರೆಯುತ್ತವೆ.

ಜೀವನದಲ್ಲಿ ಜುಗುಪ್ಸೆ ಉಂಟಾದಾಗ, ಸಾಮಾನ್ಯವಾಗಿ ಸಂನ್ಯಾಸವನ್ನು ಸ್ವೀಕರಿಸುತ್ತಿದ್ದರು. ಜೈನರಲ್ಲಿಯಾದರೋ ನಶ್ವರವಾದ ಈ ದೇಹವನ್ನು ತ್ಯಜಿಸುವ ವ್ರತವನ್ನೇ ಕೈಗೊಳ್ಳುತ್ತಿದ್ದರು. ಈ ವಿಧಿಯನ್ನು 'ಸಮಾಧಿಮರಣ' ಎನ್ನುತ್ತಾರೆ. ಲೌಕಿಕವಾದ ಆಸಕ್ತಿಗಳನ್ನೆಲ್ಲಾ ತೊರೆದು, ಹಿಂದಿನ ಕರ್ಮಗಳಿಗೆ ಪಶ್ಚಾತ್ತಾಪಪಟ್ಟು ಪಂಚ ಪರಮೇಷ್ಠಿಗಳ ಧ್ಯಾನ ಮಾಡುತ್ತಾ ತನಗೆ ಶ್ರೇಯಸ್ಕರವಾದ ಗತಿ ದೊರೆಯಲೆಂದು ನಿದ್ರಾಹಾರಾದಿಗಳನ್ನು ಕ್ರಮೇಣ ಬಿಡುತ್ತಾ ದೇಹವನ್ನು ತ್ಯಜಿಸುತ್ತಿದ್ದರು. ಈ ರೀತಿಯಲ್ಲಿ ವ್ರತಸ್ವೀಕರಿಸಿ ಮಡಿದ ಸಂನ್ಯಾಸಿಗಳ ಸ್ಮಾರಕವಾಗಿ ನೆಟ್ಟ ಶಿಲೆಗಳನ್ನು 'ನಿಷಿಧಿಗಲ್ಲುಗಳು' ಎಂಬುದಾಗಿ ಕರೆಯುತ್ತಾರೆ."

ಜೈನಧರ್ಮದಲ್ಲಿ ಆತ್ಮಹತ್ಯೆ ಸಲ್ಲೇಖನದ ಕಾರಣಕ್ಕಾಗಿ ನಡೆಯುತ್ತದೆ. ಮತ್ತು ಅದು ವ್ರತವೂ ಹೌದು. ದೇಹತ್ಯಾಗವೂ ಕೂಡಾ ಧಾರ್ಮಿಕ ಕ್ರಿಯೆ.

ವಿವರಗಳಿಗೆ ನೋಡಿ: ಆರ್. ಶೇಷಶಾಸ್ತ್ರಿ 2005 ಶಾಸನ ಪರಿಚಯ ಪುಟ. 27–28.

ಆತ್ಮ ಭರ್ತ್ಸನ

ಆತ್ಮ ಎಂದರೆ ಜೀವ, ಚೇತನ, ಸ್ವಭಾವ, ಧರ್ಮ, ಪ್ರಯತ್ನ, ಧೈರ್ಯ, ಬುದ್ಧಿ, ಮನಸ್ಸು. ಭರ್ತ್ಸನ ಎಂದರೆ ಹೆದರಿಸುವುದು, ಅಂಜಿಸುವುದು, ಹೆದರಿಕೆ, ಭಯ, ನಿಂದೆ, ತೆಗಳಿಕೆ, ಧಿಕ್ಕಾರ ವೆಂದರ್ಥ. ತನ್ನ ಆತ್ಮವನ್ನು ತಾನೇ ತೆಗಳಿಕೊಳ್ಳುವುದನ್ನು 'ಆತ್ಮ ಭರ್ತ್ಸನ' ಎಂದು ಕರೆಯುತ್ತಾರೆ. 'ಸ್ವನಿಂದೆ' 'ಸ್ವಯಂ ಹೀಗಳಿಕೆ' 'ಸ್ವಯಂ ತಿರಸ್ಕಾರ'ಗಳು ಆತ್ಮ ಭರ್ತ್ಸನೆಯ ಬೇರೆ ಬೇರೆ ರೂಪಗಳು. ಪರನಿಂದೆ–ಸ್ವನಿಂದೆಗಳಲ್ಲಿ ವ್ಯತ್ಯಾಸಗಳಿವೆ. ಸ್ವ–ನಿಂದನೆಯು ಅನೇಕ ಸಂದರ್ಭದಲ್ಲಿ ಕೀಳರಿಮೆಯಿಂದ ಹುಟ್ಟಿಕೊಳ್ಳುತ್ತದೆ. ಹಾಗೆಯೇ 'ಪರನಿಂದೆ' ಸ್ವಯಂ ಪ್ರತಿಷ್ಠೆಯ ಗುಣದಿಂದ ಹುಟ್ಟಿಕೊಳ್ಳುತ್ತದೆ. ಇವೆರಡೂ ಮಾನಸಿಕ ಸ್ಥಿತಿಗಳು ಮಾತ್ರ. ಮೊದಲನೆಯದಕ್ಕೆ ಕಾರಣವಾಗಿರುವುದು ಕೀಳರಿಮೆಯ ವ್ಯಕ್ತಿತ್ವ, ಎರಡನೆಯದಕ್ಕೆ ಕಾರಣವಾಗುವುದು ಮೇಲರಿಮೆಯ ವ್ಯಕ್ತಿತ್ವ. ಮೇಲರಿಮೆಯು ತನ್ನನ್ನು ಉಳಿದವರಿಗಿಂತ ಮೇಲು ಎಂಬ ನಿಲುವನ್ನು ತಳೆಯುತ್ತದೆ. ಕೀಳರಿಮೆಯು ತಾನು ಉಳಿದವರಿಗಿಂತ ಕೀಳು ಎಂಬ ಮನೋಭಾವವನ್ನು ಪ್ರಕಟಿಸುತ್ತದೆ. ಕೀಳರಿಮೆಯನ್ನು ನೈಚ್ಯಾನುಸಂಧಾನವೆಂದು ಕರೆಯುವ ರೂಢಿಯಿದೆ.

ಇದನ್ನು ಸಾಮಾಜಿಕ ನೈತಿಕ ದೃಷ್ಟಿಯಿಂದಲೂ ವಿವರಿಸಲು ಸಾಧ್ಯವಿದೆ. ಕೀಳರಿಮೆಯೆನ್ನುವುದು ಕೂಡಾ ಮನುಷ್ಯನ ಮನೋಸ್ಥಿತಿಯಾಗಿರುವುದರಿಂದ ಅದನ್ನು ವಿವರಿಸಲು ಮನೋವೈಜ್ಞಾನಿಕ ಪರಿಕರಗಳು

ಬೇಕಾಗುತ್ತವೆ. ಸಾಮಾಜಿಕ ಕೀಳರಿಮೆಯು ಬೇರೆ.ವೈಯಕ್ತಿಕ ಕೀಳರಿಮೆಯು ಬೇರೆ. ಬ್ರಿಟಿಶ್ ಆಳ್ವಿಕೆಯು ನಮ್ಮಲ್ಲಿ ಸಾಮಾಜಿಕ ಕೀಳರಿಮೆಗೆ ಕಾರಣವಾಯಿತು. ವೈಯಕ್ತಿಕ ಕೀಳರಿಮೆ ಅಂತರ್ಮುಖಿಗಳಲ್ಲಿ ಕಾಣಿಸಿಕೊಳ್ಳುತ್ತದೆ.

ವಿವರಗಳಿಗೆ ನೋಡಿ: ಡಾ.ಎಂ.ಪ್ರಭಾಕರ ಜೋಶಿ ೨೦೦೮ ಭಾರತೀಯ ತತ್ತ್ವಶಾಸ್ತ್ರ ಪ್ರವೇಶ

ಆಶೀಶ್ ನಂದಿಯವರ ಆಯ್ದ ಬರಹಗಳು ೨೦೦೯

ಆತ್ಮಕಥೆ

ಆತ್ಮಕಥೆಯೆಂದರೆ ತನ್ನ ಜೀವನದಲ್ಲಿ ನಡೆದುದನ್ನು ದಾಖಲಿಸುವುದು. ಆತ್ಮಕಥೆಯಲ್ಲಿ ಸ್ವಯಂ ಅನುಭವಗಳು ಮುಖ್ಯವಾಗಿರುತ್ತದೆ.ತನ್ನ ಜೀವನ ಸಂಗತಿಗಳನ್ನು ದಾಖಲಿಸುವುದು ಆತ್ಮಕಥೆಗಳ ಮುಖ್ಯ ಸಂಗತಿಯಾಗಿರುತ್ತದೆ.ಆದರೆ ಆತ್ಮಕತೆಯಲ್ಲಿ ಸ್ವಯಂ ನಿರೂಪಣೆಯೇ ಮುಖ್ಯವಾಗಿರುವುದರಿಂದ ಅದರಲ್ಲಿ ನಾವು ವ್ಯಕ್ತಿಯ ಜೀವನವನ್ನು ಮಾತ್ರ ಕಾಣಲು ಸಾಧ್ಯ.ಅನೇಕ ಸಂದರ್ಭಗಳಲ್ಲಿ ಆತ್ಮಕಥೆಗಳು ಅನಂತರ ತಲೆಮಾರಿಗೆ ಮಾರ್ಗದರ್ಶಿಗಳೂ ಆಗಿರುತ್ತವೆ. ಆತ್ಮಕಥೆಯಲ್ಲಿ ಲೇಖಕ ತನ್ನ ಜೀವನದ ವಿವರಗಳನ್ನು ಬರೆಯುತ್ತಾನೆ. ಸ್ವಯಂಚರಿತ್ರೆ ಇಲ್ಲಿ ಮುಖ್ಯ.

ವಿವರಗಳಿಗೆ ನೋಡಿ: ಕೆ.ವಿ.ಸುಬ್ಬಣ್ಣ(ಅನು) ೧೯೯೮ ಸ್ವರಾಜ್ಯದ ಹಾದಿ ಹೆಜ್ಜೆಗಳು

ಆತ್ಮಭವ

ಆತ್ಮವೇ ಪುತ್ರರೂಪವಾಗಿ ಹುಟ್ಟುತ್ತಾನೆಂದು ಸುಪ್ರಸಿದ್ಧ ವಾಕ್ಯವಿದೆ. ಆತ್ಮನು ಹೆಂಡತಿಯ ಗರ್ಭದಲ್ಲಿ ಭವಿಸುವುದು ಎಂದರೆ ಜನ್ಮವೆತ್ತುವುದು ಎಂದರ್ಥ. ಆತ್ಮಜನೆಂದೂ ಬಳಸುತ್ತಾರೆ. 'ಆತ್ಮಾವೈ ಪುತ್ರನಾಮಾಸಿ' ಮುಖ್ಯವಾದುದು.

ಆತ್ಮಸುಖ

ಕೈಕೊಳ್ಳುವುದಿದ್ದರೆ ಆತ್ಮ ಸುಖವನ್ನೆ ಕೈಗೊಳ್ಳಬೇಕು. ಇದು ಇತರ ಸುಖಕ್ಕಿಂತ ಭಿನ್ನ. ಆತ್ಮಸುಖ ಆಧ್ಯಾತ್ಮಿಕ ದೃಷ್ಟಿಯಿಂದ ಮಹತ್ವದ್ದು.

ಆತ್ಮಹಿತ

ಹಿತವೆಂದರೆ ಆತ್ಮಹಿತವೊಂದೇ. ಬೇರಾವುದೂ ಅಲ್ಲ. ಆತ್ಮಹಿತವು ಆಧ್ಯಾತ್ಮಿಕ ಮೌಲ್ಯವನ್ನು ಸೂಚಿಸುತ್ತದೆ. ಇದು ಅಲೌಕಿಕಕ್ಕೆ ಸಂಬಂಧಿಸಿರುವುದು. ದೇಹ ಹಿತಕ್ಕಿಂತ ಮಿಗಿಲಾಗಿರುವುದು ಆತ್ಮಹಿತ ಎನ್ನುವುದು ಧಾರ್ಮಿಕ ನಂಬಿಕೆಯಾಗಿದೆ.

ಆದೇಶ

ಸೂಚನೆ ನೀಡು, ನಿರ್ದೇಶಿಸು. ಆದೇಶವೆಂಬುದಕ್ಕೆ ವಿಧಿ; ನಿಯಮವೆಂಬ ಅರ್ಥಗಳಿವೆ. ಆದೇಶಕ್ಕೆ ವಿಶಿಷ್ಟ ಅರ್ಥಗಳೂ ಇವೆ. ರಾಜನು ಪ್ರಜೆಗಳಿಗೆ ಆದೇಶ

ನೀಡುತ್ತಾನೆ. ಪ್ರಜೆಗಳು ರಾಜನಿಗೆ ಆದೇಶ ನೀಡುವಂತಿಲ್ಲ. ಇದೇ ಕುಟುಂಬಕ್ಕೂ ಅನ್ವಯವಾಗಿದೆ. ಆಧುನಿಕ ಅರ್ಥದಲ್ಲಿ ಇದನ್ನೇ Order ಎಂದು ಕರೆಯುತ್ತೇವೆ. ಇದರಲ್ಲಿರುವ ಭಾಷೆಯೇ ಭಿನ್ನ 'ಮಾಡತಕ್ಕದ್ದು' ಎಂದು ಬರುತ್ತದೆಯೇ ಹೊರತು ಬೇರೆ ರೀತಿಯ ಪರಿಭಾಷೆಗಳು ಆದೇಶಗಳಿಗೆ ಇಲ್ಲ.

ವಿವರಗಳಿಗೆ ನೋಡಿ: Michel Foucault 1970 The order of Things.

ಆಧಾರ

ದೇಹರೂಪವನ್ನು ಕ್ರಿಯಾರೂಪಕ್ಕೆ ತರಬಲ್ಲ 'ಆಧಾರ' ಸಂಗತಿಗಳೆಂದರೆ ಭೂಮಿ, ಗಾಳಿ, ಬೆಂಕಿ, ನೀರು ಇತ್ಯಾದಿ ಧಾತುಗಳು. ಹಾಗೆಯೇ ಸ್ಪರ್ಶಸಂವೇದನೆ ಕ್ರಿಯಾರೂಪಕ್ಕೆ ಬರಲು ಹರ್ಷ, ಸಂಕಟ, ನೋವು, ಉದಾಸೀನ ಇತ್ಯಾದಿ ಕಾರಣಗಳು. ಹೀಗೆ ಕ್ರಿಯಾರೂಪಕ್ಕೆ ತಂದ 'ಆಧಾರ'ಗಳು ಮತ್ತು ಕ್ರಿಯಾರೂಪಗಳ ನಡುವೆ ಸ್ವತಂತ್ರ ಶಾಶ್ವತ ಭಿನ್ನತೆಯನ್ನು ಸಿದ್ಧಪಡಿಸಿದರೆ ಮಾತ್ರ ಆಧಾರಗಳು ಈ ಸಂಯೋಜನೆಯಲ್ಲಿ ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಳ್ಳಲು ಸಾಧ್ಯ.

(ನಟರಾಜ ಬೂದಾಳು ೨೦೦೬ ಪುಟ ೨೫)

ಇದು ನಾಗಾರ್ಜುನನ ನಿಲುವು.ಆಧಾರವನ್ನು ಲೋಕ ರೂಢಿಯ ಮಾತುಗಳು ಹೇಳುವ ಕ್ರಮಗಳು ಬೇರೆ.ಮಗನಿಗೆ ಅಪ್ಪ ಆಧಾರ. ಹೆಂಡತಿಗೆ ಗಂಡ ಆಧಾರ,ಮನುಷ್ಯರಿಗೆ ಭೂಮಿಯು ಆಧಾರ. ಈ ರೀತಿಯ ಮಾತುಗಳು ಚಾಲ್ತಿಯಲ್ಲಿವೆ.

ಆನತ

16 ಕಲ್ಪಗಳಲ್ಲಿ ಒಂದು. ಹದಿಮೂರನೆಯ ಸ್ವರ್ಗ. ಇದು ಜೈನ ಸಾಂಸ್ಕೃತಿಕ ನಂಬಿಕೆಯಾಗಿದೆ.

ಆಪಣ

ಆಪಣವೆಂದರೆ ಅಂಗಡಿ. ಅಂಗಡಿಯೆನ್ನುವುದು ವ್ಯಾಪಾರದ ಕೇಂದ್ರ ಮತ್ತು ಅದು ಉದ್ದಿಮೆಯನ್ನು ಸಂಕೇತಿಸುತ್ತದೆ. ಅಂಗಡಿಯೆನ್ನುವುದು ಬರೀ ವಿನಿಮಯದ ಕೇಂದ್ರವಲ್ಲ ಎಂಬುದನ್ನು ಪ್ರಧಾನವಾಗಿ ಪರಿಗಣಿಸಬೇಕು. ಅದು ವಿಕ್ರಯದ ಕೇಂದ್ರ. ಆದುದರಿಂದ ವ್ಯಾಪಾರದಲ್ಲಿ ಹಣವು ಪ್ರಧಾನವಾಗಿದೆ. ಧವಸ ಧಾನ್ಯಗಳ ಅಳತೆ ಮತ್ತು ಅದಕ್ಕೆ ನೀಡುವ ಹಣವು ಮುಖ್ಯವಾಗುತ್ತದೆ. ಯಾವಾಗ ವ್ಯಾಪಾರವೆನ್ನುವುದು ಪ್ರಧಾನವಾಗುತ್ತದೆಯೋ ಆಗ ಅಳತೆಯ ಮಾನದಂಡಗಳೂ ಮುಖ್ಯವಾಗುತ್ತವೆ. ಅಂದರೆ ಜೈನಕಾವ್ಯಗಳಲ್ಲಿ ವ್ಯಾಪಾರಕ್ಕೆ ಕೊಟ್ಟ ಪ್ರಾಶಸ್ತ್ಯವನ್ನು ಈ ದೃಷ್ಟಿಯಿಂದ ವಿಶ್ಲೇಷಣಾರ್ಹ. ವಿನಿಮಯ ಪದ್ಧತಿಯ ಅನಂತರದ ರೂಪವೇ ವ್ಯಾಪಾರ. ವ್ಯಾಪಾರಗಳಿಗೆ ಜೈನರು ಕೊಟ್ಟ ಪ್ರಾಶಸ್ತ್ಯವನ್ನು ಹಳೆಗನ್ನಡ ಕಾವ್ಯಗಳಲ್ಲಿ ಹೇರಳವಾಗಿ ಕಾಣಬಹುದು.

ಆಪ್ತ

ನಂಬಿಕೆಯಿಡಬಹುದಾದ ವ್ಯಕ್ತಿ. ಯಾರ ಮೇಲೆ ನಂಬಿಕೆಯಿರಿಸಿದ್ದೇವೆಯೋ ಅದರಂತೆ ನಡೆಯುವ ಮನುಷ್ಯನನ್ನು ಆಪ್ತನೆಂದು ಕರೆಯುತ್ತೇವೆ. ಯಾರು ಆತ್ಮಕ್ಕೆ ಸನಿಹರಾಗಿದ್ದಾರೋ ಅವರನ್ನು ಆಪ್ತರೆಂದು ಕರೆಯುತ್ತಾರೆ. ನನಗೆ ಭಾರೀ ಹತ್ತಿದವರು ಎನ್ನುವುವಕ್ಕೆ ಆಪ್ತರೆಂದು ಕರೆಯುತ್ತಾರೆ. ತುಳುವಿನಲ್ಲಿ ಮುಟ್ಟತಾಯೆ ಎಂಬ ಪ್ರಯೋಗವಿದೆ. ಮುಟ್ಟತಾಯೇ ಎಂದರೆ ಆಪ್ತನೆಂದು ಅರ್ಥ.

ಆಪ್ತವಾಕ್ಯ

ಯಾರ ವಾಕ್ಯವನ್ನು ಮಾತನ್ನು ನಂಬುತ್ತೇವೆಯೋ ಅವರು ಹೇಳಿರುವುದನ್ನು ಆಪ್ತವಾಕ್ಯವೆಂದು ಕರೆಯುತ್ತೇವೆ. ವಾಸ್ತವವಾಗಿ ಹಿತವಂತರು ಸನ್ಮಾರ್ಗಕ್ಕೆ ಕರೆದೊಯ್ಯುವ ಮಾತನ್ನು ಆಪ್ತವಾಕ್ಯವೆಂದು ಕರೆಯುತ್ತಾರೆ.ಹಿತವಚನವೆನ್ನುವುದು ಇದರ ಮತ್ತೊಂದು ರೂಪ.

ಆಭರಣ

ಗೊಂಡೆಗಳಿಂದ ಕೂಡಿರುವ ತೋಳಿನ ಅಲಂಕಾರಕ್ಕೆ ಕೇಯೂರವೆನ್ನುತ್ತಾರೆ. ಬಂಗಾರದ ಮಣಿಗಳಿಂದ ಕೂಡಿದ ಮುತ್ತುಗಳ ಜಾಲಕ್ಕೆ ಅಂಗದವೆಂದು ಹೆಸರು. ಅದು ಚಕ್ರಾಕಾರದ ರಾಶಿಯಿಂದ ಕೂಡಿದ್ದರೆ ಬಾಹುಸಂಧಿಯೆಂದು ಹೆಸರು. ವಜ್ರಗಳಿಂದಲೂ ಮಾಣಿಕ್ಯದಿಂದಲೂ ಕೂಡಿದ್ದರೆ ನಂದ್ಯಾವರ್ತವೆಂಬ ಉಂಗುರವಾಗುತ್ತದೆ. ಬೆರಳಿನಲ್ಲಿ ಧರಿಸಲು ಯೋಗ್ಯವಾದ ಮತ್ತು ವಜ್ರಖಚಿತವಾದ ಭೂಷಣಕ್ಕೆ ವಜ್ರವೇಷ್ಟಕವೆಂದು ಹೆಸರು. ಎರಡು ಹೀರಕಗಳ ಮಧ್ಯೆ ಇನ್ನೊಂದು ಹೀರಕವನ್ನು ಇಟ್ಟರೆ ಅದಕ್ಕೆ ತ್ರಿಹೀರಕವೆಂಬ ಉಂಗುರವಾಗುತ್ತದೆ. ಅಂಗುಲೀ ವಲಯಗಳಲ್ಲಿ ವಜ್ರಗಳಿಂದ ಸುತ್ತುವರಿಯಲ್ಪಟ್ಟರೆ ಶಕ್ತಿ ಮುದ್ರಿಕೆಯೆಂದು ಹೇಳುತ್ತಾರೆ. ಕರ್ಣಾಭರಣದ ಹೆಸರು ಮುಕ್ತತಾಡಕ. ಪದೇ ಪದೇ ಶುದ್ಧ ಮಾಡಲ್ಪಟ್ಟ ಚಿನ್ನದಿಂದ ಶೃಂಖಲೆ ಮಾಡಬೇಕು.

ಸ್ತ್ರೀಯರ ಆಭರಣಗಳಿಗೆ ಬೇರೆ ಬೇರೆ ಹೆಸರುಗಳಿವೆ. ಬೈತಲೆಗೆ ಧರಿಸುವ ಬಂಗಾರದ ಭೂಷಣಕ್ಕೆ ಹಂಸತಿಲಕವೆಂದು ಹೆಸರು. ಅದು ಹೊಳೆಯುವ ಬಂಗಾರದ ಪಟ್ಟಿಯಿಂದ ಕಟ್ಟಲ್ಪಟ್ಟು ಮುತ್ತುಗಳ ಜಾಲದಿಂದ ಹೆಣೆದರೆ ದಂಡಕವೆಂದು ಕರೆಯುತ್ತಾರೆ. ಅದನ್ನು ಬೆಳೆಸಿದ್ದರೆ ಚೂಡಾಮಂಡನವೆಂದು ಕರೆಯುತ್ತಾರೆ. ಬಂಗಾರದ ಹೂವುಗಳಿಂದ ಕೂಡಿ ಮುತ್ತಿನ ಮಾಲೆಯಿಂದ ಹಾಗೂ ದೊಡ್ಡ ಮಾಣಿಕ್ಯದಿಂದ ರಚಿತವಾದದಕ್ಕೆ ಚೂಡಿಯೆಂದು ಕರೆಯುತ್ತಾರೆ. ಬೇವಿನ ಹಣ್ಣು ಆಕಾರದ ಮುತ್ತುಗಳಿಂದಲೂ ನೀಲಮಣಿಗಳಿಂದಲೂ ರಚಿಸಲ್ಪಟ್ಟು, ಗರುಡಮಾಣಿಕ್ಯಗಳಿಂದ ಕೂಡಿಕೊಂಡಿದ್ದರೆ "ಮುಕುಲ "ಕಂಠಾಭರಣವೆನ್ನತ್ತಾರೆ. ಕಂಠದ ಅಳತೆಗೆ ಸರಿಯಾಗಿ ನಿರ್ಮಿತವಾದ

ಗಲಭೂಷಿತವೇ ಸರಿಕೆ. ಅದರ ಹೊರಗೆ ರಚಿತವಾದುದೇ ವಜ್ರಸಂಕುಲಿತ. ಕಂಚುಕಕ್ಕೆ ಸೇರಿಸುವ ಎರಡಿ ಭುಜ ಭೂಷಣಗಳಿಗೆ ಬಾಹುವಲಯಗಳೆಂದೂ ಅಂಗದಗಳೆಂದೂ ಕರೆಯುತ್ತಾರೆ. ಕಟಿಭೂಷಣಕ್ಕೆ ಕಾಂಚಿದಾಮವಂದು ಕರೆಯುತ್ತಾರೆ. ಸ್ತ್ರೀಯರ ಮಣಿಕಟ್ಟಿನ ಆಭರಣವನ್ನು ಚೂಡಕವೆಂದು ಕರೆಯುತ್ತಾರೆ. ಇದರ ಅರ್ಧಭಾಗವನ್ನು ಅರ್ಧಚೂಡವೆಂದು ಕರೆಯುತ್ತಾರೆ. ನಾನಾ ರತ್ನಗಳಿಂದ ಕೂಡಿದ ಪಾದ ಭೂಷಣವನ್ನು ಕಟಕವೆಂದು ಕರೆಯುತ್ತಾರೆ. ಮೂರೂ ಇಲ್ಲವೇ ಐದು ಮಾಲೆಗಳನ್ನು ನಾನಾಬಗೆಯ ರತ್ನಗಳಿಂದ ನಿರ್ಮಿಸಿ ಅವುಗಳ ಸಂಧಿಗಳನ್ನು ಕೀಲುಗಳಿಂದ ಜೋಡಿಸಿದರೆ ಅದಕ್ಕೆ ಪಾದಾಲವೆಂದು ಹೆಸರು. ಅದಕ್ಕೆ ಬಂಗಾರದ ಸಣ್ಣ ಗೆಜ್ಜೆಗಳಿಂದ ಸಣ್ಣ ಧ್ವನಿಯಿಂದ ಕಲರವವನ್ನು ಉಂಟು ಮಾಡುವಂತಿದ್ದರೆ ಅದಕ್ಕೆ ಪಾದ ಘರ್ಘರಿಕಾ ಎಂದು ಹೆಸರು. ವಿವಿಧ ರತ್ನಗಳಿಂದ ಅವುಗಳನ್ನು ಹೊಂದಿಸಿ ಅದಕ್ಕೆ ಧ್ವನಿ ಇಲ್ಲವಾದರೆ ಅದನ್ನು ರಾಥಕವೆಂದು ಕರೆಯುತ್ತಾರೆ. ಆಯತಾಕಾರದ ವಕ್ರತೆಯಿಂದ ಕೂಡಿ ಬಳೆಯ ಆಕಾರದಲ್ಲಿ ನಿರ್ಮಿತವಾದ ಸ್ತ್ರೀಯರ ಪಾದಭೂಷಣಕ್ಕೆ ಅಂದುಕವೆಂದು ಕರೆಯುತ್ತಾರೆ. ಪಾದ ತರ್ಜನಿಯ ಅಳತೆಯುಳ್ಳ, ಬಂಗಾರದಿಂದ ನಿರ್ಮಿತವಾದ ಸ್ಥೂಲವಾಗಿ ಧ್ವನಿಯನ್ನು ಉಂಟು ಮಾಡುವ ಜೋಡಿ ಮುದ್ರಿಕೆಗಳು ಶ್ರೇಷ್ಠವೆಂದು ಅನಿಸುತ್ತದೆ. ಹೇಮ ರಚಿತವೂ, ವ್ಯಾಘ್ರದ ಬಾಲದಿಂದ ಕೂಡಿದುದೂ ಮುತ್ತು ಮಾಣಿಕ್ಯದಿಂದ ರಚಿತವಾದುದೂ ಆದ ಪುರುಷರ ಆಭರಣವು ದಲಕವೆಂದು ಕರೆಯಲ್ಪಡುತ್ತದೆ. (ಮಾನಸೋಲ್ಲಾಸ–3–1077)

ಕರಾಭರಣ–ಕೈಯಲ್ಲಿ ಇಡುವ ಮುರಿಗಡಗದಲ್ಲಿಯೂ, ವಕ್ರತೆ–ಡೊಂಕಿನಲ್ಲಿಯೂ, ಬಲಿವರ್ಧ–ಬಲಿಮೆಯಿಂದ ಮುರಿವಲ್ಲಿಯೂ, ಸಮಕಟ್ಟುಗಳೊಳಂ, ಸಮವಾಗಿ ಹೊರೆಯ ಮುರಿದು ಕಟ್ಟುವಲ್ಲಿಯೂ ಮುರಿಯೆಂದು ಬಂದಿರುವುದು ಗಮನಾರ್ಹ. (ಕ.ಶ.ಟೀಕು. ಪುಟ ೨೯೭)

ಉಡೆವಣಿಯೆಂದರೆ ನಡುವಿನ ಆಭರಣ, ಉಡಿದಾರ. ಪೆಂಗಸರ ನಾಸಾಭರಣದ ಕುರಿತು ಹೇರಳ ಉಲ್ಲೇಖಗಳು ಸಿಗುತ್ತವೆ. ಆದರೆ 'ವಿಧವೆಯರಿಗೆ ಮಾತ್ರ ನಾಸಾಭರಣ ಧರಿಸುವ ನ್ನು ಸೌಭಾಗ್ಯದ ಲಕ್ಷಣವೆಂದು ನಾಟ್ಯಶಾಸ್ತ್ರದಲ್ಲಿ ಹೇಳಲಾಗಿದೆ. ಕೃಷ್ಣಮೂರ್ತಿ ಕೆ. ಅವರ ಪ್ರಕಾರ, ಕ್ರಿ.ಶ. ಏಳನೇ ಶತಮಾನದ ತರುವಾಯ ಮಲಬಾರಿನಲ್ಲಿ ನಾಸಾಭರಣವು ಪ್ರಚಲಿತವಾಯಿತು (ಅದೇ. ಪು. 69). ಆದರೆ ನಾಸಾಭರಣವು ಕ್ರಿ.ಶ. ಒಂದನೆಯ ಶತಮಾನದ ಕಾಲಕ್ಕೆ ಪ್ರಾರಂಭವಾಯಿತೆಂದೂ, ಇದರ ಮೇಲೆ ಮೊಗಲರ ಪ್ರಭಾವ ಇದೆಯೆಂದೂ ಅಲ್ತೇಕರರು ಅಭಿಪ್ರಾಯ ಪಡುತ್ತಾರೆ.

ಆಭರಣಗಳ ಪರ್ಯಾಯ ಹೆಸರುಗಳು ಇಲ್ಲಿ ಉಲ್ಲೇಖನೀಯ.

೧. ಕನ್ನವುರ-ಕರ್ಣಪೂರ

೨. ಬಣ್ಣವುರ-ವರ್ಣಪೂರ

೩. ಬಾಸಿಗ-ಪೂಮಾಲೆ

೪. ಪಸದನಂ, ಪಚ್ಚಂ, ತೊಡಂ-ಮೂರು ರೀತಿಯ ಆಭರಣಗಳು

೫. ಆರ ಹಾರಂ

೬ ಜೂಳೆಯ-ಮುತ್ತಿನ ಬೈತಲೆ

೭ ತಿಂಗಳಿಗೆ-ತಿಲಕಂ

೮. ಕಳಲೆಂದು, ನೇವುರ-ನೂಪುರ

೯. ನೂಲತೊಂಗಲು-ಕಟಿಸೂತ್ರ

೧೦. ಚೊಲ್ಲೆ-ತುರುಬಿನ ಕೊನೆ. (ಕರ್ನಾಟಕ ಶಬ್ದಸಾರ ಪುಟ ೬೩)

ವಿವರಗಳಿಗೆ ನೋಡಿ: ಚಿದಾನಂದ ಮೂರ್ತಿ .ಎಂ. 1977 ಗ್ರಾಮೀಣ ಪುಟ. 154

ಆಯುಧಗಳು

ಯಂತ್ರ ಮುಕ್ತವೆಂದರೆ ಯಂತ್ರದ ಸಹಾಯದಿಂದ ಉಥಾಯಿಸುವುದು ಅಮುಕ್ತಾಯುಧ(ಬೀಸಿ ಒಗೆಯುವ ಆಯುಧ)ವೆಂಬ ಪ್ರಕಾರಗಳಿವೆ. ಆಯುಧಗಳನ್ನು ಈ ರೀತಿಯಲ್ಲಿ ವರ್ಗೀಕರಿಸುವುದರೊಂದಿಗೆ ಬೇರೆ ರೀತಿಯಲ್ಲಿಯೂ ವಿವರಿಸುತ್ತಾರೆ. (ಮಾನಸೋಲ್ಲಾಸ-2-683)

ಆಕ್ರಮಣಕಾರಿ ಆಯುಧಗಳಲ್ಲಿ ಪ್ರಧಾನವಾದ ಪಾತ್ರವಹಿಸಿದ ಆಯುಧವೆಂದರೆ ಖಡ್ಗ. ಈ ಕಾರಣದಿಂದಲೇ ಖಡ್ಗಗಳು ವೀರನಾದವನಿಗೆ ದೈವದತ್ತವಾದದ್ದು ಎಂಬ ಹಲವಾರು ಐತಿಹ್ಯಗಳು ಸೃಷ್ಟಿಯಾಗಿರುವುದನ್ನು ಗಮನಿಸಬಹುದಾಗಿದೆ. ಆಯುಧದ ಹೆಸರು ಒಂದೇ ಆದರೂ ಇವು ವಿವಿಧ ಆಕಾರಗಳಲ್ಲಿರುವುದನ್ನು ಗಮನಿಸಬಹುದಾಗಿದೆ. ವೀರಗಲ್ಲುಗಳಲ್ಲಿ ಖಡ್ಗವನ್ನು ಕಡಿತಲೆ, ಖಡ್ಗ, ಕರವಾಳ್, ಬಾಳ್, (ವಾಳ್), ಖಂಡೆಯ ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಈ ರೀತಿಯ ಪರ್ಯಾಯ ಪದಗಳು ಹುಟ್ಟಲು ಬಹುಶಃ ಅವುಗಳಲ್ಲಿನ ಆಕಾರ ವ್ಯತ್ಯಾಸವೇ ಕಾರಣವಿರಬಹುದು. ಕತ್ತಿಯ ಆಕಾರವು ವೀರಗಲ್ಲುಗಳ ಶಿಲ್ಪದಲ್ಲಿ ಹಲವು ರೀತಿಯಲ್ಲಿ ಬಂದಿರುವುದನ್ನು ಗಮನಿಸಬಹುದು. (ಡಾ. ಆರ್. ಶೇಷಶಾಸ್ತ್ರಿ. ೨೦೦೪. ಪು. ೨೨೧)

ಆಯುರ್ವೇದ

ಆಯುರ್ವೇದ ವೈದ್ಯಪದ್ಧತಿಯ ಬಗ್ಗೆ ವಿವರಿಸುತ್ತಾ ಅದರ ಚಿಕಿತ್ಸಾವಿಧಾನಗಳ ಕುರಿತು ಹೇಳಿದ್ದಾರೆ. 'ಆಯುಃ' ಎಂದರೆ ಜೀವಿತಾವಧಿ, 'ವೇದ' ಎಂದರೆ ಜ್ಞಾನ, ಜೀವಿತಾವಧಿಯ ಸಮಗ್ರ ಜ್ಞಾನವನ್ನುಂಟು ಮಾಡಿಕೊಡುವುದೇ 'ಆಯುರ್ವೇದ'.

ಹಿತವಾವುದು, ಅಹಿತವಾವುದು, ಸುಖವಾವುದು ಮತ್ತು ದುಃಖವಾವುದು. ಆಯುಷ್ಯದ ಹಿತಾಹಿತಗಳಾವುವು ಎಂಬುದನ್ನು ಯಾವುದರಿಂದ ತಿಳಿಯಲಾಗುತ್ತದೆಯೋ ಅದಕ್ಕೆ 'ಆಯುರ್ವೇದ' ಎಂದು ಹೆಸರು. ಧನ್ಯಕುಮಾರ ಇಜಾರಿಯವರು ಈ ರೀತಿಯ ವಿವರಣೆಯನ್ನು ನೀಡಿದ್ದಾರೆ:

"ಆಯುರ್ವೇದದಲ್ಲಿ ೮ ವಿಭಾಗಗಳನ್ನು ಬ್ರಹ್ಮನು ನಿರ್ಮಿಸಿದ ಎಂದು ಉಲ್ಲೇಖವು ಬರುತ್ತದೆ.

೧. ಶಲ್ಯತಂತ್ರ [Surgery], ೨. ಶಾಲಾಕ್ಯತಂತ್ರ [E.N.T Ear, Nose and Throat], ೩. ಕಾಯ ಚಿಕಿತ್ಸಾ [Medicine], ೪. ಭೂತ ವಿದ್ಯಾ [Psychiatry], ೫. ಕೌಮಾರ ತಂತ್ರ [Pediatrics],

೬ ಅಗದ ತಂತ್ರ [Toxicology], ೭. ರಸಾಯನ ಶಾಸ್ತ್ರ [Geriatrics] ೮. ವಾಜೀಕರಣ [Science of Aprodises] ಆಯುರ್ವೇದದ ಅಷ್ಟಾಂಗಗಳಾವುವೆಂದರೆ–

೧. ದೇಹದೊಳಗೆ ಚುಚ್ಚಲ್ಪಟ್ಟಿರುವ ಕಾಷ್ಠ, ಲೋಷ್ಠಾದಿಗಳನ್ನೂ, ಶಲ್ಯರೂಪವಾಗಿ ಪೀಡಿಸುವ ದುಷ್ಟಸ್ತನ್ಯ ಪೂಯ, ಮೂಢಗರ್ಭಾದಿಗಳನ್ನೂ ನಿವಾರಣೆ ಮಾಡುವ ಉಪಾಯಗಳನ್ನು ಬೋಧಿಸತಕ್ಕದ್ದು ಶಲ್ಯತಂತ್ರ.

೨. ಶಲಾಕಾಕರ್ಮ ಪ್ರಾಧಾನ್ಯವನ್ನು ಬೋಧಿಸುವ ಶಾಲಾಕ್ಯತಂತ್ರವು.

೩. ಕಾಯ ಅಂದರೆ ಅಗ್ನಿಯೆಂದೂ ಅಥವಾ ದೇಹವೆಂದೂ ಅರ್ಥವಾಗುತ್ತದೆ. ಅಂದರೆ ಅಗ್ನಿಯು ಹೆಚ್ಚು ಕಡಿಮೆಯಾಗದಂತೆ ಮಾಡುವ ಅಥವಾ ವಮನ ವಿರೇಚನಾದಿ ದೇಹ ಶುದ್ಧಿಕರ್ಮಗಳನ್ನು ಬೋಧಿಸುವ ಕಾಯ ಚಿಕಿತ್ಸೆಯು;

೪. ದೇವಾಸುರಗಂಧರ್ವಯಕ್ಷ ರಕ್ಷಃ ಪಿತೃನಾಗ ಪಿಶಾಚಿಗಳೆಂಬ ಎಂಟು ವಿಧದ ಭೂತಗಳನ್ನು ತಿಳಿಸತಕ್ಕ ಅಥವಾ ಭೂತಾವೇಶಾದಿಗಳನ್ನು ನಿವಾರಿಸಲು ಅನುಕೂಲವಾಗುವ ಭೂತವಿದ್ಯೆಯು;

೫. ಬಾಲಕರನ್ನು ಕಾಪಾಡಿ ರೋಗ ನಿವಾರಿಸುವ ಕೌಮಾರ ತಂತ್ರವು;

೬ ವಿವಿಧ ಪ್ರತೀಕಾರ ವಿಧಾನಗಳನ್ನು ಬೋಧಿಸುವ ಅಗದ ತಂತ್ರವು; ರಸರಕ್ತಾದಿ ದೇಹಧಾತುಗಳು ವೃದ್ಧಿಯಾಗುವಂತೆ ಮಾಡುವ ಉಪಾಯಗಳನ್ನು ಬೋಧಿಸುವುದಕ್ಕಾಗಿ ರಸಾಯನತಂತ್ರವು.

೭ ಸ್ತ್ರೀಯರೊಡನೆ ಸಂಯೋಗ ಮಾಡಲು ಶಕ್ತಿವೃದ್ಧಿಯಾಗಿ

ಶುಕ್ರವೃದ್ಧಿಯಾಗಿ ಸ್ಥಿರಸಂತಾನವುಂಟಾಗುವಂತೆ ಮಾಡಲು ವಾಜೀಕರಣತಂತ್ರವು ಈ ರೀತಿ ಎಂಟು ವಿಭಾಗಗಳಾಗುತ್ತವೆ.

೮. ಶಲ್ಯವೆಂದರೆ ಕೇವಲ ತೃಣಕಾಷ್ಠಾದಿಗಳು ಮಾತ್ರವೇ ಅಲ್ಲ. ಅತಿ ಪ್ರವೃದ್ಧಗಳಾದ ಮತ್ತು ಶರೀರಬಾಧಕಗಳಾದ ಮಂದೋಷಗಳಿಗೂ ಶಲ್ಯವೆಂದರ್ಥವು. ಮಕ್ಕಳಿಗೆ ದುಷ್ಟಸ್ತನ್ಯಗಳಿಂದ ಶರೀರಕ್ಕೂ, ದುಷ್ಟಗ್ರಹಗಳಿಂದ ಅಗನ್ತುವ್ಯಾಧಿಗಳುಂಟಾಗುತ್ತವೆಂದು ತಿಳಿಯಬೇಕು; ರಸವೀರ್ಯವಿಪಾಕಾದಿ ಆಯುರಾದಿಕಾರಣಗಳಿಗೆ ಅಯನಂ ವಿಶಿಷ್ಟ ಲಾಭೋಪಾಯಗಳಿಗೆ ರಸಾಯನತಂತ್ರವೆಂದು ಹೆಸರು."

ವಿವರಗಳಿಗೆ ನೋಡಿ: ಡಾ.ಧನ್ಯಕುಮಾರ್ ಇಜಾರಿ ೧೯೭೦ ಆಯುರ್ವೇದ ವಿಜ್ಞಾನ
ಡಾ.ಎಂ.ಪ್ರಭಾಕರ ಜೋಶಿ ೨೦೦೮ ಭಾರತೀಯ ತತ್ತ್ವಶಾಸ್ತ್ರ ಪ್ರವೇಶ
ಸಾ.ಕೃ.ರಾಮಚಂದ್ರರಾವ್ ೧೯೮೪ ಆಯುರ್ವೇದದಲ್ಲಿ ನಾಡೀ ವಿಜ್ಞಾನ

ಆರವೆ

ಅರಮೆ, ಆರವೆ, ಆರಾಮೆ, ಆರುವೆ(ನಾ) ತೋಟ; ಉದ್ಯಾನವನ; ತೋಪು; ಆರವೆಯೆಂದರೆ ಉದ್ಯಾನವನ, ತೋಟ. ತೋಟ ಮತ್ತು ಉದ್ಯಾನವನ ಎರಡೂ ಮುಖ್ಯವಾಗಿ ಒಂದು ವಿಷಯವನ್ನು ಪ್ರಸ್ತಾವಿಸುತ್ತದೆ. ಉದ್ಯಾನವನವು ಇರುವುದು ಶ್ರೀಮಂತರಿಗೆ. ಅದು ಮನೋಹರವಾದ ಜಾಗ. ಉದ್ಯಾನವನವು ಕಾಲಹರಣ ಮತ್ತು ಮನೋರಂಜನೆಯ ಕಾರಣಕ್ಕೆ ಹುಟ್ಟಿಕೊಂಡಿರುತ್ತದೆ. ಮತ್ತು ಉದ್ಯಾನವನವು ನಮಗೆಲ್ಲರಿಗೂ ತಿಳಿದಿರುವಂತೆ ಹೂವಿನ ಗಿಡಗಳಿಂದ ತುಂಬಿರುತ್ತದೆ. ಇದರಲ್ಲಿ ಆರ್ಥಿಕತೆಯ ದೃಷ್ಟಿಯು ಇರುವುದಿಲ್ಲ. ಆದರೆ ತೋಟವು ಹಾಗಲ್ಲ-ತೋಟವು ಆರ್ಥಿಕ ದೃಷ್ಟಿಕೋನವನ್ನು ಹೊಂದಿರುತ್ತದೆ. ಇದರಲ್ಲಿ ಆರ್ಥಿಕ ಬೆಳೆಗಳಿಗೆ ಮಹತ್ವವಿರುತ್ತದೆ. ಇದನ್ನು ವ್ಯಾಪಾರದ ಉದ್ದಿಮೆಯ ಒಂದು ಭಾಗವೆಂದು ನಾವು ತಿಳಿಯಬಹುದು. ಸಹಜ ತೋಪು ಮತ್ತು ನೆಡುತೋಪುಗಳಿಗೆ ವ್ಯತ್ಯಾಸವಿದೆ. ನೆಡುತೋಪು ಕೃತಕ ಮತ್ತು ಉದ್ದೇಶಿತ.

ಆರ್ಯ

"ತೆಲುಗಿಗಿಂತಲೂ ಮರಾಠಿಯ ಬೇರುಗಳು ಕನ್ನಡದಲ್ಲಿ ಬಹಳ ಆಳದವರೆಗೆ ಹೋಗಿವೆ. ಕನ್ನಡಿಗರು ಮರಾಠಿಗೆ 'ಆರಿಯ' ಮಾತು ಅಥವಾ 'ಆರೇ' ಮಾತು ಎಂದು ಕರೆಯುವುದು ವಾಡಿಕೆ. ತಮಿಳು ಪ್ರಾಚೀನ ಸಾಹಿತ್ಯದಲ್ಲಿಯೂ 'ಆರಿಯರ್' ಎಂದೇ ಉಲ್ಲೇಖಗಳು ದೊರೆಯುತ್ತವೆ. ಆರಿಯ (ಆರೆ) ಎಂಬುದು 'ಆರ್ಯ'

ಶಬ್ದದ ತದ್ಭವವು. ಮರಾಠಿಯು ಆರ್ಯರ ಮಾತು. ಅರಿಯ (ಆರೇ) ಮಾತು, ಎಂದೆನ್ನುವುದರಿಂದಲೆ ಈ ಭಾಷೆಯ ವಿಷಯದಲ್ಲಿ ಕನ್ನಡಿಗರಿಗಿದ್ದ ಗೌರವವು ವ್ಯಕ್ತವಾಗುತ್ತಲಿದೆ; ಸಂಸ್ಕೃತ–ಪ್ರಾಕೃತಗಳ ಸಾಲಿನಲ್ಲಿಯೇ ಮರಾಠಿ (ಆರೆ) ಮಾತಿಗೂ ಸ್ಥಾನವು ದೊರೆತಿದ್ದಿತು. ಆದುದರಿಂದ ಆರಿಯ ಮಾತು ಬರುವುದು ಒಂದು ಭೂಷಣವೆಂಬ ಭಾವನೆಯೆ ನಮ್ಮ ಜನಗಳಲ್ಲಿ ಹಲವು ಕಾಲದಿಂದಲೂ ಮನೆಮಾಡಿಕೊಂಡಿದ್ದಿತೆಂದು ಹೇಳಬಹುದಾಗಿದೆ. ಆರಿಯ ಮಾತಾಡುವವನು ಆರಿಯ, ಎಂಬ ವಿಚಾರವು ದೃಢವಾಗಿದ್ದ ಆ ಕಾಲದಲ್ಲಿ ಆರಿಯ ಮಾತು ಬರುತ್ತಲಿದ್ದ ಅನೇಕಾನೇಕ ಕನ್ನಡಿಗರು ಆರಿಯರಾಗಿ ಎಣಿಸಲ್ಪಟ್ಟಿರುವುದು ಸಹಜ. ಕುರುಬರು, ಗೌಳಿಗಳು, ಕಮ್ಮಾರರು, ವೈಶ್ಯರು, ಬಣಜಿಗರು, ಬ್ರಾಹ್ಮಣರು ಮೊದಲಾದವರು ಒಂದೇ ಕುಲದವರಾಗಿದ್ದರೂ 'ಆರೇ', 'ತೆಲಗು' ಮತ್ತು 'ಕನ್ನಡ' ಎಂಬ ಪಂಗಡಗಳಾಗಿದ್ದುದು ಕಂಡುಬರುವುದಕ್ಕೆ ಇದೇ ಕಾರಣ.

ಆರ್ಯವೆಂಬುದು ಶ್ರೇಷ್ಠ ದ್ರಾವಿಡವೆಂದರೆ ಕನಿಷ್ಠವೆಂಬ ನಂಬಿಕೆಯು ಪ್ರಚಲಿತವಿತ್ತು. ಅದೂ ಆರ್ಯರೆಂದರೆ ಬಿಳಿಯ ವರ್ಣದವರು ದ್ರಾವಿಡರು ಕರಿಯ ಬಣ್ಣದವರು ಎಂದು ಹೇಳಲಾಗುತ್ತಿತ್ತು. ಸಂಸ್ಕೃತ ನಾಟಕಗಳಲ್ಲಿ ನಾಯಕಿಯರು ನಾಯಕರನ್ನು ಸಂಬೋಧಿಸುವುದು ಆರ್ಯಪುತ್ರನೆಂದು. ಇದು ಆರ್ಯರು ತಮ್ಮ ಶ್ರೇಷ್ಠತೆಯನ್ನು ಬಿಂಬಿಸಲು ಮಾಡಿದ ಪ್ರಯತ್ನವೂ ಹೌದು."

ವಿವರಗಳಿಗೆ ನೋಡಿ: ದ್ರವಿಳ ಶಂಬಾ ಜೋಶಿ 1999 ಸಂಪುಟ. 2 ಪುಟ. 18–29.

ಆವಗೆ

ಆವಗೆಯೆಂದರೆ ಕುಂಬಾರನ ಒಲೆ. ಕುಂಬಾರನು ಹಸಿಮಣ್ಣಿನ ಮಡಿಕೆಯನ್ನು ಮಾಡಿ ಅದನ್ನು ಸುಡುವ ಒಲೆ. ಆವಿಗೆಯೆಂಬ ಪ್ರಯೋಗವೂ ಇದೆ. ಆವಿ ಎಂದರೆ ಹಬೆ, ಬಿಸಿ, ಆವಕಲವೆಂದರೆ ಆವಗೆಯಲ್ಲಿ ಸುಟ್ಟ ಮಡಕೆ. ಮಾಮೂಲಿಯಾದ ಒಲೆಯು ಸಣ್ಣದಿರುತ್ತದೆ. ಅದು ಅಡುಗೆಗೆ ಸೀಮಿತ, ಆದರೆ ಆವಗೆಯು ಸಣ್ಣ ಒಲೆಯಲ್ಲ. ಅದುದರಿಂದ ಹಸಿಮಣ್ಣಿನ ಮಡಕೆಯನ್ನು ಜಾಗರೂಕತೆಯಿಂದ ಬಿಸಿಮಾಡಿ ಅದನ್ನು ಗಟ್ಟಿಗೊಳಿಸುವುದು ವಿಶೇಷ. ಸುಟ್ಟ ಮಡಕೆ, ಸುಟ್ಟಹೆಂಚು ನಮ್ಮ ಗ್ರಾಮೀಣ ಪ್ರದೇಶದ ಸಣ್ಣ ಉದ್ಯಮ ಮತ್ತು ಊರಿರುವಲ್ಲಿ ಕುಂಬಾರರು ಇರಬೇಕು.

ಆವುತಿ

ಆಹುತಿ ಎಂದರ್ಥ. ಆಹುತಿಯು ಆವುತಿ ಎಂದಾಗಿದೆ. ವೈದಿಕ ವಿಧಿ ವಿಧಾನಗಳಲ್ಲಿ ಆಹುತಿಗೆ ವಿಶೇಷ ಪ್ರಾಶಸ್ತ್ಯವಿದೆ. ಹೋಮದ ಕೊನೆಗೆ ಪೂರ್ಣಾಹುತಿಯನ್ನು ನೀಡಲಾಗುತ್ತದೆ.

ಅಶುದ್ಧರು

ಬ್ರಾಹ್ಮಣರು ಭಗವದ್ಗೀತೆಯನ್ನು ಹಾಡಿದ್ದು ಮೇಲ್ವರ್ಗದವರಿಗಾಗಿ. ಮತ್ತು ಅವರ ಮೂಲಕವೇ ಇದು ಬೇರೆಯವರಿಗೆ ತಲುಪಬೇಕಿತ್ತು ಎಂಬುದು ತೀರಾ ಸ್ಪಷ್ಟ, ಸ್ವತಃ ಕೃಷ್ಣನೇ ಗೀತೆಯಲ್ಲಿ, "ಪಾಪಯೋನಿಜರಾದ ಮಹಿಳೆಯರು, ವೈಶ್ಯರು ಹಾಗೂ ಶೂದ್ರರು ಕೂಡ ನನ್ನನ್ನು ಆಶ್ರಯಿಸಿ ಮುಕ್ತಿಯನ್ನು ಪಡೆಯಬಹುದು" ಎನ್ನುತ್ತಾನೆ (ಗೀ.೯-೩೨). ಅದರ ಅರ್ಥ ಹೆಂಗಸರು ಮತ್ತು ದುಡಿಯುವ ಹಾಗೂ ಉತ್ಪಾದಕ ವರ್ಗದ ಎಲ್ಲಾ ಪುರುಷರೂ ಹುಟ್ಟಿನಿಂದಲೇ ಅಶುದ್ಧರು. ಆದರೆ ಸಾವಿನ ನಂತರ, ಅವರೇನಾದರೂ ಮುಕ್ತಿಯನ್ನು ಪಡೆಯಬೇಕಾದರೆ, ತಮ್ಮನ್ನು ಇಷ್ಟೊಂದು ಅಸಡ್ಡೆಯಿಂದ, ಕೀಳಾಗಿ ಕಾಣುವ ಆ ದೇವರನ್ನೇ, ಭಕ್ತಿಯಿಂದ ಹಾಗೂ ಶ್ರದ್ಧೆಯಿಂದ ಆಶ್ರಯಿಸಬೇಕು. ಜೊತೆಗೆ ಈ ಎಲ್ಲಾ ತಾರತಮ್ಯಗಳನ್ನು ಸೃಷ್ಟಿಸಿದವರು ಬೇರೆ ಯಾರೂ ಅಲ್ಲ. ಸ್ವತಃ ಆ ಭಗವಂತನೇ. "ನಾಲ್ಕು ವರ್ಣಗಳು ನನ್ನಿಂದ ಸೃಷ್ಟಿಸಿಲ್ಪಟ್ಟಿವೆ (ಗೀ.೪-೧೩) ಎಂದು ಅವನೇ ಹೇಳಿಕೊಳ್ಳುತ್ತಾನೆ. ಆತನ ಮಹತ್ತರವಾದ ಸಾಧನೆಗಳ ಪಟ್ಟಿಯಲ್ಲಿ ವರ್ಣಗಳ ಸೃಷ್ಟಿ ಕೂಡ ಒಂದು. (ಪು. ೨೨)(ಡಿ. ಡಿ. ಕೊಸಾಂಬಿ ೨೦೦೩. ಪು. ೨೨) ಭಕ್ತಿಪರಂಪರೆಯು ಇದನ್ನು ನಿರಾಕರಿಸಿದೆಯೆನ್ನುವುದು ಇಲ್ಲಿ ಗಮನಾರ್ಹ.

ವಿವರಗಳಿಗೆ ನೋಡಿ: ಜನ್ಮಾಂತರ, ಭವಾವಳಿ

ಆಶ್ರಮಧರ್ಮ

ಸಮಾಜದ ಸುವ್ಯವಸ್ಥೆಗೆ ಅಗತ್ಯವಾದ ಇನ್ನೊಂದು ತತ್ವ ಆಶ್ರಮಧರ್ಮ. ವ್ಯಕ್ತಿಯ ಆಯುಃ ಪರಿಮಿತಿಯ ನಾಲ್ಕು ಘಟ್ಟಗಳೇ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂಬ ನಾಲ್ಕು ಆಶ್ರಮಗಳು. ವರ್ಣಧರ್ಮ ಪಾಲನೆಯಲ್ಲಾದಂತೆ ಆಶ್ರಮಧರ್ಮದ ಅನುಷ್ಠಾನದಲ್ಲೂ ಆದರ್ಶಕ್ಕೂ ವ್ಯವಹಾರಕ್ಕೂ ವ್ಯತ್ಯಾಸ ಉಂಟಾಯಿತು. ಕೊನೆಯ ಎರಡು ಆಶ್ರಮಗಳ ಹಂತವನ್ನು ಮುಟ್ಟುವವರ ಸಂಖ್ಯೆಯಂತೂ ಅತ್ಯಂತ ವಿರಳವಾಯಿತು. ಧೀಮಂತರಾಗಿ ವಿರಕ್ತರಾಗಿ ಲೋಕಹಿತಸ್ಸಾಧಕರಾಗಿ ಸಮಾಜದಲ್ಲಿ ಕೀರ್ತಿಗಳಿಸಿದ ಮಹಾತ್ಮರು ಎಲ್ಲೋ ಕೆಲವರು. ಇವು ವಾಸ್ತವವಾಗಿ ನಾಲ್ಕು ಹಂತಗಳು. ಜೀವನದಲ್ಲಿ ಮೊದಲಿಗೆ "ಬ್ರಹ್ಮಚರ್ಯ"ವನ್ನು ಪಾಲಿಸಬೇಕು. ಅನಂತರ ಗೃಹಸ್ಥಧರ್ಮಕ್ಕೆ ಬರಬೇಕು. ಗೃಹಸ್ಥಧರ್ಮವೆಂದರೆ ಮದುವೆಯಾಗಿ ಸಂಸಾರವನ್ನು ಹೊಂದುವುದು. ಸಂಸಾರ ಧರ್ಮದಲ್ಲಿ ಗಂಡ-ಹೆಂಡತಿಯರ "ಧರ್ಮ"ವೇ ಮುಖ್ಯ. ಸಂಸಾರ ಜೀವನದ ಅನಂತರ ವಾನಪ್ರಸ್ಥ. ವಾನಪ್ರಸ್ಥವು ಮೂರನೆಯ ಹಂತ. ಹೆಸರೇ ಸೂಚಿಸುವಂತೆ ವಾನಪ್ರಸ್ಥವೆಂದರೆ-ಕಾಡಿಗೆ ತೆರಳುವುದು. ಅನಂತರ ಸನ್ಯಾಸ. ಅಂದರೆ -ಎಲ್ಲವನ್ನು ತ್ಯಾಗ ಮಾಡಿ; (ನ್ಯಾಸ) ಇಂದ್ರಿಯಗಳನ್ನು ಹತೋಟಿಗೆ ತಪವಾಚರಿಸುವುದು. ತಪಸ್ಸಿನಲ್ಲಿ ವ್ಯಕ್ತಿಯೇ ಪ್ರಧಾನ. ಅವನು ಮತ್ತು ದೇವರ ನಡುವಣ ಸಂಬಂಧವೇ ಮುಖ್ಯ. ಇಲ್ಲಿ ಮಧ್ಯವರ್ತಿಯಾದ ಪೂಜಾರಿಯ ಪ್ರವೇಶವಿಲ್ಲ.

ಆಶ್ರಯ

ಇದನ್ನು ಹಳೆಗನ್ನಡದಲ್ಲಿ ಬೇರೆ ಬೇರೆ ರೀತಿಯಲ್ಲಿ ಹೆಸರಿಸಿದ್ದಾರೆ. ಇಕ್ಕೆ, ಇಂಬು, ಗೊತ್ತು, ನೆಲೆ, ತಾಣಂ, ತಾಯ್ವನೆ, ಮೇರೆ, ಪೊಳಲ್, ಚಾವಡಿ, ಬೀಡು, ಆಡಂಬೊಲಂ, ಹಕ್ಕೆ, ಗಡಿ, ಗರುಡಿ, ಆಗರಂ ಇವು ಹದಿನೈದು ಆಶ್ರಯವನ್ನು ಸೂಚಿಸುತ್ತವೆ. (ನೋಡಿ–ಕರ್ನಾಟಕ ಶಬ್ದಸಾರಂ ಪುಟ ೫೮) ಆಶ್ರಯ ನೀಡುವುದು ಪ್ರಮುಖ ಪರಿಕಲ್ಪನೆಯಾಗಿದೆ.

ಆಸನಗಳು

1– ಮಂಗಲಾಸನ–ಬಂಗಾರದ ಆಸನವಿದು.ನಾಲ್ಕು ಕೋನಗಳಿರುತ್ತವೆ.

2– ಶ್ರೀ ಪರ್ಣಿವೃಕ್ಷದಿಂದ ರಚಿಸಲಾದ ಹಸ್ತದಷ್ಟು ಅಗಲವಾದ ಪೀಠಕ್ಕೆ ಪವಿತ್ರಾಸನವೆಂದು ಕರೆಯುತ್ತಾರೆ.

3– ಶಾಕವೃಕ್ಷದಿಂದ ರಚಿತವಾದ ನಾಲ್ಕು ಕಾಲುಗಳಿಂದ ಕೂಡಿರುವ ಪೀಠಕ್ಕೆ ಮಜ್ಜನಾಸನವೆಂದು ಕರೆಯುತ್ತಾರೆ.

4– ಅರಳೆಯಿಂದ ಕೂಡಿದ ಕುರಿಯ ಉಣ್ಣೆಯಿಂದ ರಚಿತವಾದ ಆಸನವನ್ನು ಗದ್ದಿಕಾ ಎಂದು ಕರೆಯುತ್ತಾರೆ.

5– ನಾನಾ ವಸ್ತ್ರಗಳಿಂದ ರಚಿತವಾದ, ಮೇಕೆಯ ಚರ್ಮದಿಂದ ನಿರ್ಮಿಸಿರುವ ಆಸನಕ್ಕೆ ಪಟ್ಟಗದ್ದಿಕಾ ಎಂದು ಹೆಸರು.

6– ಲೋಹದಿಂದ ಕೂಡಿರುವ ಚೆನ್ನಾಗಿ ಹತ್ತಿಯಿಂದ ತುಂಬಿರುವ ಆಸನಕ್ಕೆ ಲೋಹಾಸನವೆಂದು ಕರೆಯುತ್ತಾರೆ.

7– ನಾಲ್ಕು ಕಾಲುಗಳಿಂದ ಕೂಡಿರುವ, ಒಂದೂವರೆ ಹಸ್ತದಷ್ಟು ಅಗಲವಿರುವ, ಎತ್ತರದ ಪೀಠಕ್ಕೆ ಪೃಷ್ಠಾಸನವೆಂದು ಹಡಸರು.

8– ಬಂಗಾರದಿಂದ ನಿರ್ಮಿತವಾದ, ಸ್ಫಟಿಕದ ಎಂಟು ಸಿಂಹದ ವಿಗ್ರಹದಿಂದ ಕೂಡಿರುವ, ಕೆಳಗೆ ರತ್ನವೇದಿತ್ರಯವನ್ನು ಹೊಂದಿರುವ ಅಲಂಕಾರಯುಕ್ತವಾದ ಪೀಠಕ್ಕೆ ಸಿಂಹಾಸನವೆಂದು ಹೆಸರು.

(ಮಾನಸೋಲ್ಲಾಸ–3–1132–1159) (ಸಂಪುಟ –1)

ಇವು ಆಸನಗಳ ವಿವಿಧತೆಗಳಿವು. ಒಂದೊಂದು ಆಸನಕ್ಕಿರುವ ವಿಶಿಷ್ಟತೆಯು ಗಮನಾರ್ಹ.

ಆಸನ್ನ ಭವ್ಯ

ಸಮ್ಯಕ್ತ್ವ ದೊರೆಯುವ ಸಂಭವ ಬೇಗ ಒದಗಿ ಬರುವ ಜೀವವನ್ನು ಆಸನ್ನಭವ್ಯನೆಂದು ಕರೆಯುತ್ತಾರೆ. ಅಂದರೆ ಬೇಗನೆ ಮೋಕ್ಷವನ್ನು ಪಡೆಯುವ ಜೀವನೆಂದು ಅರ್ಥ.

ಇದು ಜೈನ ಆಗಮಿಕದ ವಿಶಿಷ್ಟ ಪರಿಕಲ್ಪನೆ. ಈ ಪರಿಕಲ್ಪನೆಯು ಬೇರೆ ಯಾವ ಮತದಲ್ಲಿ ಪ್ರಾಯಶಃ ಕಾಣ ಸಿಗುವುದು ಕಷ್ಟ ಯಾಕೆಂದರೆ ಉಳಿದ ಮತಗಳು "ಸಮ್ಯಕ್ತ್ವ" ಪರಿಭಾಷೆಯನ್ನೇ ಬಳಸಿಲ್ಲ. ಮತ್ತು ಈ ಪರಿಕಲ್ಪನೆಯು ವೈದಿಕ ಪರಿಕಲ್ಪನೆಗಿಂತ ಭಿನ್ನ ಎಂಬುದನ್ನು ಅರ್ಥವಿಸಿಕೊಳ್ಳಬೇಕು.

ಆಸವ

ಆಸವವೆಂದರೆ ಮದ್ಯ. ಭಟ್ಟಿಯಿಳಿಸಿದ ಔಷಧಿಯೆಂಬ ಅರ್ಥವೂ ಇದಕ್ಕಿದೆ. ಆಯುರ್ವೇದ ವಿಜ್ಞಾನದಲ್ಲಿ ಬೇರೆ ಬೇರೆ ರೀತಿಯ ಗಿಡಮೂಲಿಕೆಗಳಿಂದ ಭಟ್ಟಿಯಿಳಿಸಿದ ಆಸವಗಳಿರುತ್ತವೆ. ಅರಿಷ್ಟಗಳಿರುತ್ತವೆ. ಉದಾ: ಕುಮಾರಿಯಾಸವ ಆಯುರ್ವೇದದಲ್ಲಿ ಅರಿಷ್ಟ ಮತ್ತು ಆಸವಗಳಿಗೆ ವ್ಯತ್ಯಾಸವಿದೆ. ಶಾರಂಗಧರ ಮಧ್ಯಕಾಂಡ 10 – 2 ಶ್ಲೋಕದಲ್ಲಿ ಆಸವದ ಕುರಿತು ಬರುತ್ತದೆ. ಅರಿಷ್ಟದ ಬಗ್ಗೆಯೂ ಅದು ಹೇಳುತ್ತದೆ.

ಅಪಕ್ವ ಔಷಧ ಆಸವ. ಇದನ್ನು ಪೂರ್ವಯೋಜನೆಯಂತೆ ಸಿದ್ಧಪಡಿಸಲಾಗುವುದಿಲ್ಲ. ಮತ್ತು ಆಸವವು ಬೇಯಿಸಿ ತೆಗೆದ ರಸ ವಿಶೇಷವೂ ಅಲ್ಲ. ಆದರೆ ಅರಿಷ್ಟವು ಬೇಯಿಸಿ ಭಟ್ಟಿಯಿಳಿಸಿದ ಔಷಧ ರೂಪ, ಆಸವದಲ್ಲಿ ಶೀತ, ವೀರ್ಯ, ದ್ರವ್ಯದ ಲಕ್ಷಣಗಳಿರುತ್ತವೆ. ಅರಿಷ್ಟದಲ್ಲಿ ಉಷ್ಣ, ವೀರ್ಯ ದ್ರವ್ಯ ಅಂಶಗಳಿರುತ್ತವೆ. ಆಸವವು ಪೈತ್ಯಕ ವ್ಯಾಧಿಗೆ ಕೊಡಲಾಗುತ್ತದೆ. ದ್ರವಪ್ರಧನ ಅರಿಷ್ಟದಲ್ಲಿ ದ್ರವ್ಯ ಪ್ರಧಾನ ಅರಿಷ್ಟವು ಅಗ್ನಿ ಸಂಸ್ಕರಣಕ್ಕೆ ಗುರಿಯಾಗಿರುತ್ತದೆ. ಅರಿಷ್ಟವನ್ನು ಆಯುರ್ವೇದ ವಿಜ್ಞಾನದಲ್ಲಿ ವಯಸ್ಕರಿಗೆ ಮತ್ತು ಇಳಿವಯಸ್ಸಿನಲ್ಲಿರುವವರಿಗೆ ಹೆಚ್ಚು ಕೊಡಲಾಗುತ್ತದೆ. ಆಸವವು ಅಗ್ನಿ ಸಂಸ್ಕರಣ ಕ್ರಿಯೆಗೆ ಗುರಿಯಾಗಿರುವುದಿಲ್ಲ. ಶಾರಂಗನು ಕುಮಾರಿಯಾಸವದ ಕುರಿತು ಹೀಗೆ ಹೇಳುತ್ತಾನೆ. ಇದು ಅಗ್ನಿ ಸಂಸ್ಕರಣಕ್ಕೆ ಗುರಿಯಾದುದಲ್ಲ. ಭಟ್ಟಿಯಿಳಿಸಿದ ಔಷಧ, ಕುಮಾರಿಯಾಸವವು ಉದರ ರೋಗ, ಕ್ಷಯ, ಡಯಾಬಿಟೀಸ್, ಉದರಕ್ಕೆ ಸಂಬಂಧಿಸಿದ ಕಾಯಿಲೆ, ಅಪಸ್ಮಾರ, ಶುಕ್ರದೋಷ (ರಜೋದೋಷ) ಕ್ರಿಮಿರೋಗ, ರಕ್ತಪಿತ್ಥಕ್ಕೆ ನೀಡಲಾಗುತ್ತದೆ. ಯೋಗರತ್ನಾಕರದಲ್ಲಿ ಇದನ್ನು ಶ್ವಾಸರೋಗ, ಧಾರುಣ ಕ್ಷಯರೋಗ, ಉದರರೋಗ, ಮೂಲವ್ಯಾಧಿ, ವಾತವ್ಯಾಧಿ ಮತ್ತು ಅಪಸ್ಮಾರಕ್ಕೆ ನೀಡಲಾಗುತ್ತದೆ. ಶಾರಂಗ ಸೂತ್ರದ ಪ್ರಕಾರ ದ್ರಾಕ್ಷಾರಿಷ್ಟವು– ಎದೆಗೆ, ಶ್ವಾಸಕ್ಕೆ ಸಂಬಂಧಿಸಿದ ಕಾಯಿಲೆಗೆ, ಕ್ಷಯಕ್ಕೆ ಮಲಶೋಧಕ, ಬಲಶೋಧಕ, ಗಲರೋಗಕ್ಕೆ ನೀಡಲಾಗುತ್ತದೆ.

1. ಸುಶ್ರುತ ಸಂಹಿತೆ

2. ಚರಕ ಸಂಹಿತೆ

ಆಹಿರರು

"ಆಹಿರ ಜೈತುಗಂ ಹಿರಿಯ ಬಳ್ಳಿಗಾವೆಯ ನೆಲವೀಡಿನೊಳ್ ಇರ್ದು (ರಾಜ್ಯಮಂ) ಪಾಲಿಸುತಿರ್ದಂ' ಎಂದು (ಕ್ರಿ. ಶ. 1215) ಸೊರಬ ತಾಲೂಕಿನ ಒಂದು ಶಾಸನದಲ್ಲಿದೆ.

ಹಳೆಯ ಶಾಸನಗಳಲ್ಲಿ ಆಹಿರರ ಹೆಸರು ಕಂನಾಡಿನಲ್ಲೂ ಕೇಳಬರುತ್ತದೆ. ಚಾಲುಕ್ಯಾದಿ ರಾಜರು ಆಭೀರರ ಹಗೆಗಳಾಗಿದ್ದುದು ಅವರ ಬಿರುದಾವಳಿಗಳಿಂಥ ತಿಳಿಯುತ್ತದೆ. 'ಅಭೀರಕುಲ ದಹನದಾವಾನಲ' ಮೊದಲಾದ ಬಿರುದಾವಳಿಗಳನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಹೀಗಿದ್ದರೂ ಈ ನಾಡಿನಲ್ಲಿ ಸಣ್ಣಪುಟ್ಟ ಮಾಂಡಲಿಕರಾಗಿ, ಮನ್ನೆಯರಾಗಿ ಆಳಿದ ಆಭೀರರೂ ಇಲ್ಲದಿಲ್ಲ"

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 2 ಪುಟ. 181.

ಆಳಂಬೆ

ಅಣಂಬಿ, ಅಣಂಬೆ, ಅಣಬೆ, ಅಳಂಬೆ, ಆಣಂಬೆ, ಆಳಂಬಿ, ಹಣಬೆ(ನಾ) ಗೊಬ್ಬರದ ಗುಂಡಿ ಅಥವಾ ತಿಪ್ಪೆಗಳಲ್ಲಿ ಮಳೆಗಾಲದಲ್ಲಿ ಇದ್ದಕ್ಕಿದ್ದಂತೆ ಬೆಳೆಯುವ ಕೊಡೆಯಾಕಾರದ ಸಸ್ಯಜಾತಿ; ಶಿಲೀಂಧ್ರ; ನಾಯಿಕೊಡೆ.

ಮೇಲುನೋಟಕ್ಕೆ ಆಳಂಬೆಯೆನ್ನುವುದು (ಅಣಬೆ) ತುಂಬಾ ಸರಳವಾದ ಪದದ ಹಾಗೆ ಕಾಣಿಸುತ್ತದೆ. ಅಳಂಬೆ>ಅಣಬೆಯೆಂದಾಗಿದೆ. ಅಣಬೆಯನ್ನು ನಾಯಿಕೊಡೆಯೆಂದೂ ಕರೆಯುತ್ತಾರೆ. ಅಣಬೆಯಲ್ಲಿ ಎರಡು ರೀತಿಯಿರುತ್ತದೆ. ಒಂದು ಮನುಷ್ಯನ ಆಹಾರ ಪದಾರ್ಥವಾಗಿ. ಎರಡನೆ ರೀತಿಯ – ಅಣಬೆಯು ವಿಷಯುಕ್ತವಾದುದು. ಅಣಬೆಯು ಛತ್ರಿಯ ಆಕಾರದಲ್ಲಿರುವುದರಿಂದ ಅದಕ್ಕೆ 'ನಾಯಿಕೊಡೆ'ಯೆಂದು ಬಂದಿರಬಹುದು ಎಂಬುದು ಗಮನಾರ್ಹ.

ಆಳ್ವಿಕೆ

ಅಧಿಕಾರವೆಂದರೆ ಅರ್ಹತೆ, ಅಧ್ಯಾಯ ಎಂದರ್ಥಗಳಿವೆ. ಈ ಅರ್ಥದಲ್ಲಿ ರಾಜ್ಯವನ್ನು ಆಳುವುದು ಅಧಿಕಾರವೇ ಆಗಿದೆ. ಅಧಿಕಾರಕ್ಕೆ ಬೇರೆ ಬೇರೆ ರೂಪಗಳಿವೆ. ಅಧಿಕಾರ ವರ್ಗಗಳು ಈ ರೀತಿ ಇವೆ: ಮಹಾಸಾಮಂತ, ಮಹಾಪ್ರತೀಹಾರ, ಮಹಾದಂಡನಾಯಕ, ಮಹಾಕಾರ್ತಾಕೃತಿಕ, ಮಹಾರಾಜ. (ಅ)ಮಹಾಪ್ರತೀಹಾರಪೀಡಾ, ಮಹಾಸಂಧಿವಿಗ್ರಹ, ಮಹಾಶ್ವಾಸಾಲಾಪಿ, ಮಹಾಭಾಂಡಾಗಾರ, ಮಹಾಸಾಧನಭಾಗ (ರಾಜತರಂಗಿಣಿ 4–140, 143).

ರಾಜಕೀಯ ಪ್ರಭುತ್ವದ ವ್ಯಾಖ್ಯೆಯು ವ್ಯಕ್ತಿಯನ್ನು ಪ್ರಜೆಯಾಗಿ ನೋಡುತ್ತದೆ. ಅದರೊಂದಿಗೆ ಪ್ರಜೆಯಾಗಿ ವ್ಯಕ್ತಿಗೆ ಕೆಲವು ನಿಯಮಗಳು ಮತ್ತು ಸಂಹಿತೆಗಳು ಇವೆಯೆಂದು ಅದು ಪ್ರತಿಪಾದಿಸುತ್ತದೆ. ಆದರೆ ಪ್ರಭುತ್ವಕ್ಕೆ ವ್ಯಕ್ತಿ ಮತ್ತು ಅವನ ವಿಶಿಷ್ಟತೆಯು ನಾಗರಿಕ ಸಂಹಿತೆಯ ದೃಷ್ಟಿಯಿಂದ ಮುಖ್ಯ. ಬೇರೊಂದು ರೀತಿಯಿಂದ ರಾಜಕಾರಣವು ವ್ಯಕ್ತಿಯನ್ನು ಅದರ ಸಾಂವಿಧಾನಿಕ ಪರಿಭಾಷೆಯೊಳಗಿನಿಂದ ವ್ಯಾಖ್ಯಾನಿಸುತ್ತದೆ. ಈ ದೃಷ್ಟಿ ರಾಜಕಾರಣವು ಮೂಲಭೂತವಾಗಿ ಹಕ್ಕುಗಳು, ಕರ್ತವ್ಯಗಳು, ನಿಯಮಗಳು ಮುಂತಾದವುಗಳೊಂದಿಗೆ ಮಾತಾಡುವ ಹಾಗೆ ಅಂತರಾಳದಲ್ಲಿ ಎಲ್ಲರೂ ಸಮಾನರಲ್ಲ ಎಂಬುದನ್ನು ಪ್ರತಿಪಾದಿಸುತ್ತದೆ. ರಾಜಕೀಯ ಪ್ರಭುತ್ವದ ದೃಷ್ಟಿಯಿಂದ ಆಸ್ತಿಯ ಯಜಮಾನಿಕೆ; ಹಕ್ಕುಗಳು; ಹಣದ ಚಲಾವಣೆ ಇವೆಲ್ಲಾ ಬೇರೆ ಬೇರೆ ರೀತಿಯವು. ಧಾರ್ಮಿಕವಾಗಿ ವ್ಯಕ್ತಿಯ ವಿಶಿಷ್ಟತೆಯ ಪ್ರಶ್ನೆಯು ಬೇರೆ ಮಾದರಿಯದು. ಧರ್ಮದ ದೃಷ್ಟಿಯಿಂದ ವ್ಯಕ್ತಿಯೆಂದರೆ–ದೇವರೆದುರು ಮಕ್ಕಳು ಅಥವಾ ದೇವರೆದುರು ಸಮಾನರು. ಕ್ರಿಶ್ಚಿಯಾನಿಟಿಯು ಮನುಷ್ಯರನ್ನು ದೇವರ ಮಕ್ಕಳೆಂದೇ ನಂಬುತ್ತಾರೆ. ದೇವರೆದುರು ಮನುಷ್ಯರೆಲ್ಲರೂ ಸಮಾನರಾದರೂ ಆಯಾಯ ಕರ್ಮಕ್ಕಾಗಿ ಅನುಸಾರವಾಗಿ ಮನುಷ್ಯರು ಭಿನ್ನರಾಗುತ್ತಾರೆ. ಜಗತ್ತಿನಲ್ಲಿ ಬೇರೆ ಬೇರೆಯವರಾಗಿ ರೂಪುಗೊಳ್ಳುತ್ತಾರೆ.

ಧಾರ್ಮಿಕ ಅಧಿಕಾರ; ರಾಜಕೀಯ ಅಧಿಕಾರ; ಕೌಟುಂಬಿಕ ಅಧಿಕಾರ; ಯಜಮಾನನು ಆಳಿನ ಮೇಲೆ ಹೊಂದುವ ಅಧಿಕಾರ; ಗಂಡನ ಅಧಿಕಾರ; ತಂದೆಯ ಅಧಿಕಾರ– ಹೀಗೆ ಅಧಿಕಾರಗಳು ಬೇರೆ ಬೇರೆ ನಮೂನೆಯಲ್ಲಿವೆ. ಅಧಿಕಾರದ ಮುಖ್ಯ ಪರಿಭಾಷೆಯೆಂದರೆ ಒಬ್ಬನು ಇನ್ನೊಬ್ಬನ ಮೇಲೆ ನಿಯಂತ್ರಣ ಸಾಧಿಸುವುದು. ಇದರಲ್ಲಿ ಸಮಾನತೆಗೆ ಅವಕಾಶವಿಲ್ಲ. ಕೆಲವು ಅಧಿಕಾರರೂಪಗಳಿಗೆ ನಿಯಮಗಳಿವೆ ಕೆಲವು ಅಧಿಕಾರಗಳಿಗೆ ನಿಯಮ; ಸಂಹಿತೆಗಳಿಲ್ಲ.

ಆಳುವುದು ಮತ್ತು ಆಳಿಸಿಕೊಳ್ಳುವುದು ಎನ್ನುವುದೇ ಅಧಿಕಾರದ ಪ್ರಶ್ನೆಯಾಗಿದೆ.

ವಿವರಗಳಿಗೆ ನೋಡಿ: ಸಪ್ತಾಂಗ; ಗಾವುಂಡ; ಮಂಡಲೇಶ್ವರ

ಎಂ. ವಿ. ಕೃಷ್ಣರಾವ್ 1953 ಕೌಟಿಲ್ಯ ಪುಟ. 31–32.

ಆಳ್ವೆಸ

ಆಳ್ವೆಸವೆಂದರೆ ಸೇವಾವೃತ್ತಿ. ಸೇವೆಯೂ ಒಂದು ವೃತ್ತಿಯಾಗಿದೆಯೆನ್ನುವುದು ಇಲ್ಲಿ ಗಮನಾರ್ಹ. ಬೆಸವೆನ್ನುವುದು ಇಲ್ಲಿ ವೆಸವಾಗಿದೆ.

ಇಂದೋಳಂ

ಹಿಂದೋಳರಾಗಕ್ಕೆ ಇಂದೋಳವೆಂದು ಕರೆಯಲಾಗಿದೆ. ಹಿ ಕಾರಕ್ಕೆ ಇ ಕಾರ ಬರುವುದು ಸಹಜ. ಇಂದೋಳರಾಗವು ಎರಡು ಮಾರ್ಗಗಳಲ್ಲಿಯೂ (ದಕ್ಷಿಣೋತ್ತರ

ಮಾರ್ಗ) ಇದು "ಜಾಡವ" ರಾಗ; ಎಂದರೆ ಐದು ಸ್ವರಗಳುಳ್ಳದ್ದು. 'ಸಗಮಧನಿ' ಸ್ವರಗಳಿಗೇ ಇದರಲ್ಲಿ ಪ್ರದೇಶ. "ರಿಪ" ಸ್ವರಗಳು ತಲೆಯಿಡಲಾಗದು ಆದರೆ ದಕ್ಷಿಣದಲ್ಲಿ "ಗಮಧನಿ" ಸ್ವರಗಳೆಲ್ಲಾ ಕೋಮಲವಾದವು. ಉತ್ತರದಲ್ಲಿ ತೀವ್ರವಾದವು, ಕೋಮಲ ಸ್ವರಗಳನ್ನೇ ಇಟ್ಟುಕೊಂಡು ಔತ್ತರಾಹರು "ಮಾಲ್‌ಕೂಸ್" ಎಂಬ ಹೆಸರಿನಿಂದ ನಮ್ಮ ಹಿಂದೋಲವನ್ನೇ ಹಾಡುವರು ಎಂದು ರಾಳಪಳ್ಳಿ ಅನಂತ ಕೃಷ್ಣಶರ್ಮ ಹೇಳುತ್ತಾರೆ. ಇದನ್ನು ಈಗ ಮಾಲಕಂಸ ರಾಗವೆಂದೂ ಕರೆಯುತ್ತಾರೆ. ಕೋಮಲ ಭಾವನೆಗಳನ್ನು ವ್ಯಕ್ತಪಡಿಸಲು ಹಿಂದೋಳ ರಾಗವು ಸಹಕಾರಿಯಾಗಿದೆ. ಹಾಗೆಯೇ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕೆಲವು ರಾಗಗಳು ಕೆಲವು ಭಾವನೆಗಳಿಗೆ ಪೂರಕವಾಗಿರುತ್ತವೆ. ಸಂಗೀತ ಶಾಸ್ತ್ರದ ಪ್ರಕಾರ ರಾಗ ಮತ್ತು ಕಾಲಗಳಿಗೆ ಸಂಬಂಧವಿದೆ. ಮುಂಜಾವದಲ್ಲಿ ಮೋಹನರಾಗ ಮಧ್ಯರಾತ್ರಿಯಲ್ಲಿ ರಂಜಿನಿ ಇತ್ಯಾದಿ.

ಭಾಷಾಜನಕ ರಾಗಗಳು– 15 : ಸೌವೀರ, ಕಕುಭ, ಟಕ್ಕ, ಪಂಚಮ, ಭಿನ್ನಪಂಚಮ, ಟಕ್ಕಕೈಶಿಕ, ಹಿಂದೋಲ, ಬೋಟ್ಟ, ಮಾಲವಕೈಶಿಕ, ಗಾಂಧಾರ ಪಂಚಮ, ಭಿನ್ನಷಡ್ಜ, ವೇಸರಷಾಡವ, ಮಾಲವ ಪಂಚಮ, ತಾನ, ಪಂಚಷಾಡವ (ಸಂಗೀರ. 10–19, 20)

ವಿವರಗಳಿಗೆ ನೋಡಿ: ರಾಳಪಳ್ಳಿ ಅನಂತಕೃಷ್ಣಶರ್ಮ 2006 ಗಾನಕಲೆ ಪುಟ. 72
ಡಾ. ಟಿ.ವಿ.ವೆಂಕಟಾಚಲಶಾಸ್ತ್ರೀ 1999 ಶ್ರೀವತ್ಸ ನಿಘಂಟು ಪುಟ. 266.

ಇಂದ್ರ

ಇಂದ್ರನ ಪರಿಕಲ್ಪನೆ ಜೈನರಲ್ಲಿ ಒಂದು ರೀತಿಯಲ್ಲಿರುತ್ತದೆ. ವೈದಿಕ ಧರ್ಮದಲ್ಲಿ ಮತ್ತೊಂದು ರೀತಿಯಲ್ಲಿ ಬರುತ್ತದೆ. ಇಂದ್ರ ಆಳುವವನು, ಮುಖ್ಯಸ್ಥ. ಬಹಳ ಶಕ್ತಿಶಾಲಿ ಎಂಬ ಪರಿಕಲ್ಪನೆಯು ಋಗ್ವೇದದಲ್ಲಿ ಬರುತ್ತದೆ. ಋಗ್ವೇದದ ಪ್ರಕಾರ ಅವನು ಪಾಲಕ. ಅವನು ಸ್ವರ್ಗದಲ್ಲಿರುವವನು. ಚಳಿ–ಮಳೆ–ಬಿಸಿಲಿಗೆ ಅವನು ಅಧಿದೈವ. ಇತಿಹಾಸತಜ್ಞರ ಪ್ರಕಾರ, ಮಾತೃಮೂಲೀಯ ಕುಟುಂಬವು ಅಳಿಸಿ ಹೋಗುವುದಕ್ಕೆ ಇಂದ್ರನೇ ಕಾರಣ. ಅವನಿಗೂ ಸ್ತ್ರೀದೇವತೆಯಾದ ಉಷೆಗೂ ಬಹಳ ಬಾರಿ ಯುದ್ಧವಾಗುತ್ತದೆ. ಕೊನೆಗೆ ಉಷೆಯು ಸೋಲುತ್ತಾಳೆ.

ವಿವರಗಳಿಗೆ ನೋಡಿ: ಡಿ.ಡಿ.ಕೊಸಾಂಬಿ 2003 ಪುರಾಣ ಮತ್ತು ವಾಸ್ತವ.

ಇಕ್ಕುಂಗೂಳ್

ಹೆರವರು ಇಕ್ಕುವ ಅನ್ನ ಎಂದು ಭಾವಾರ್ಥ ಬೇರೆಯವರು ಇಡುವ ಅನ್ನ–ವೆಂದರೆ ಅನ್ನಾಶ್ರಯ ಅದು ಘನತೆಯಿರುವವರು ಮಾಡುವ ಕೆಲಸವಲ್ಲ.ಇನ್ನೊಬ್ಬರ ಅನ್ನಕ್ಕೆ ಬೀಳುವುದು ಎಂದರೆ ಅಪಮಾನಕಾರಿಯಾದುದು.ಅನ್ನ ಮತ್ತು ಘನತೆಗೆ ಸಂಬಂಧ ಕಲ್ಪಿತವಾಗಿರುವುದು ಗಮನಾರ್ಹ.

'ಅನ್ಯರ ಅನ್ನದ ಋಣ' ಎಂಬುದನ್ನು ಇದು ಸೂಚಿಸುತ್ತದೆ. ಇದು ಎರಡು ರೀತಿಯದು: ಒಂದು ಅತಿಥಿ ಸತ್ಕಾರ. ಹೆರವರಿಗೆ ಅನ್ನ ನೀಡುವುದು. ಇದರಲ್ಲಿ ಆದರೋಪಚಾರ ಇರುತ್ತದೆ. ಇನ್ನೊಂದು ಇಕ್ಕುವ ಅನ್ನ ಅಂದರೆ ಭಿಕ್ಷಾನ್ನ, ಇದರಲ್ಲಿ ಅತಿಥಿ ಸತ್ಕಾರ ಮುಂತಾದವು ಇರುವುದಿಲ್ಲ. ಯಾರು ಭಿಕ್ಷೆ ಬೇಡುತ್ತಾರೋ ಅವರನ್ನು ಇದು ಋಣಿಗಳನ್ನಾಗಿಸುತ್ತದೆ. ಆದುದರಿಂದ ಇಲ್ಲಿ ಯಾಚಿತ ಯಾಚಕರ ನಡುವಣ ಸಂಬಂಧವು ಬೇರೆಯಾಗುತ್ತದೆ ಎಂಬುದು ಗಮನಾರ್ಹ. ಇಕ್ಕು ಎನ್ನುವುದು ಈಗಲೂ ಪ್ರಚಲಿತದಲ್ಲಿದೆ.

ವಿವರಗಳಿಗೆ ನೋಡಿ: ಋಣ: ಜೋಳದ ಪಾಳಿ.

ಇಕ್ಕೆದಾಣ

ಇಕ್ಕೆದಾಣವೆಂದರೆ ವಾಸಸ್ಥಳ, ಬಿಡದಿ, ಸಾಮಾನ್ಯರಲ್ಲಿ ವಾಸಸ್ಥಳದ ಬಗ್ಗೆ ಕೆಲವು ರೀತಿಯ ನಂಬಿಕೆಗಳಿರುತ್ತವೆ. ವಾಸಸ್ಥಳವು ಶುದ್ಧವಾಗಿರಬೇಕೆಂಬುದು ಒಂದು ವಿಶೇಷವಾಗಿದೆ. ಎರಡನೆಯದಾಗಿ ಗೃಹಾಂಗ ಶುದ್ಧಿಯೆಂಬುದು ಅತ್ಯಂತ ಪ್ರಾಚೀನವಾದ ಪರಿಕಲ್ಪನೆಯಾಗಿದೆ. ಮೂರನೆಯದಾಗಿ ವಾಸಸ್ಥಳವನ್ನು ಎತ್ತರದ ಜಾಗದಲ್ಲಿ ರಚಿಸುತ್ತಾರೆ. ನಾಲ್ಕನೆಯದಾಗಿ ಮನೆಯ ಸುತ್ತ ಅಥವಾ ಅರಮನೆಯ ಸುತ್ತ ಕೋಟೆಯನ್ನು ಕಟ್ಟುತ್ತಾರೆ. ವಾಸಸ್ಥಳ; ಬಿಡದಿಯ ಜಾಗ ಸುರಕ್ಷಿತವಾಗಿರಬೇಕೆಂಬುದು ಮುಖ್ಯ. ಗಮನಾರ್ಹ ಅಂಶವೆಂದರೆ ಬೀಡು ರಚಿಸುವ ಕಾರ್ಯ. ರಾಜರು ದೂರ ಪ್ರಯಾಣ ಕೈಗೊಂಡಾಗ ಸುರಕ್ಷಿತವಾದ ಸ್ಥಳದಲ್ಲಿ ಬಿಡದಿ ರಚಿಸುತ್ತಾರೆ. ಇದು ಶಾಶ್ವತವಲ್ಲ. ಶಾಶ್ವತವಾದ ಬಿಡದಿಯನ್ನು ರಚಿಸುವಾಗಲೂ ಅದರ ವಾಸ್ತುಶಿಲ್ಪವನ್ನು ನೋಡಲಾಗುತ್ತದೆ.

ವಿವರಗಳಿಗೆ ನೋಡಿ: ಗೃಹಾಂಗ.

ಇಜ್ಜೆ

ಶ್ರಾವಕ ಜನರಿಗೆ ಕುಲಧರ್ಮಗಳಲ್ಲಿ "ಇಜ್ಜೆ" ಯೆಂಬುದು ಅರ್ಹ ಪೂಜೆ. ಅದು ನಿತ್ಯ ಮಹ, ಇಜ್ಜೆಯೆಂದರೆ ಯಾಗ; ದಾನ. ಜೈನರ ಪ್ರಕಾರ ಅದು ನಿತ್ಯಮಹ. ಅಂದರೆ ನಿತ್ಯಪೂಜೆ.

ಇಟ್ಟಳ

ಅಧಿಕವಾಗಿ, ದಟ್ಟವಾಗಿ ಎಂದರ್ಥ. ಇಟ್ಟಳಂ ಆಯ್ತು ಎಂದರೆ ಅತಿಶಯವಾಯಿತು. ಕೃಷ್ಣಾಜಿನವೇ ಅತಿಶಯವಾಗಿ ಕಾಣಿಸಿತು. ಅವಳ ಇಟ್ಟ ಅಡಿ (ಮೆಟ್ಟು – ಕನ್ನಡಪದ) ಇಟ್ಟಳವಾಯಿತು ಎಂದರೆ ಅಧಿಕವೆಂಬಂತೆ ತೋರಿತು.

ನೃತ್ಯದಲ್ಲಿ ಇಡುವ ಹೆಜ್ಜೆಗಳೂ ಕೂಡಾ ತುಂಬಾ ಮುಖ್ಯವಾದುದು. ಪಾದವೂರುವ ರೀತಿಯಲ್ಲಿ ವ್ಯತ್ಯಾಸವಿದೆ. ಯಕ್ಷಗಾನದ ಅಬ್ಬರದ ಕುಣಿತಕ್ಕೆ

ಒಮ್ಮಡಿಯೂರಬೇಕಾಗುತ್ತದೆ. ಒಮ್ಮಡಿಯನ್ನು ಊರಿದಾಗ ದೇಹವು ತುಂಬಾ ಧೀಮಂತಿಕೆಯನ್ನು ತೋರಿಸುತ್ತವೆ. ಮುಮ್ಮಡಿಯನ್ನು ಊರುವ ಸಂದರ್ಭದಲ್ಲಿ ಲಾಲಿತ್ಯವು ಮುಖ್ಯವಾಗುತ್ತದೆ. ದೇಹದ ಚಲನೆಯು ಕೂಡಾ ಸುರಳೀತವಾಗುತ್ತದೆ. ಸಾಮಾನ್ಯವಾಗಿ ಭರತನಾಟ್ಯದಲ್ಲಿ ಮುಮ್ಮಡಿಯನ್ನು ಹೆಚ್ಚು ಬಳಸಲಾಗುತ್ತದೆ. ಇದರಿಂದ ದೇಹದ ಚಲನೆಯು ಸಲೀಸಾಗುತ್ತದೆಯೆಂಬುದು ಗಮನಾರ್ಹ. ಎರಡನೆಯದಾಗಿ ನಾಟ್ಯದಲ್ಲಿ ದೇಹವನ್ನು ಮೂರು ಭಂಗಿಯಲ್ಲಿ ಗುರುತಿಸುತ್ತಾರೆ. ಸೊಂಟದಲ್ಲಿ ಕೆಳಗಿನ ಭಾಗದ ಚಲನೆ (ಕಾಲುಗಳು) ಸೊಂಟದಿಂದ ಮೇಲೆ ಕೊರಳಿನ ತನಕ ಮತ್ತೊಂದು ಭಾಗ. ಮುಖವು ಮೂರನೆಯಭಾಗ. ಆದುದರಿಂದಲೇ ಇದನ್ನು ತ್ರಿಭಂಗಿಯೆಂದು ಕರೆಯುತ್ತಾರೆ.

ಇದ್ದುದು-ಇಲ್ಲದುದು

ಇದ್ದುದನ್ನು ಇಲ್ಲವೆನ್ನಲು ಬಾರದು. ಇದು ಲೋಕನೀತಿಗೆ ಸಂಬಂಧಿಸಿದೆ. ಇದು ಸಾಮಾಜಿಕ ನಂಬಿಕೆಯೂ ಹೌದು. ಇದ್ದುದನ್ನು ಇಲ್ಲವೆಂದು ಹೇಳಿದರೆ ಶಾಶ್ವತವಾಗಿ ಇಲ್ಲವಾಗುತ್ತದೆಯೆಂಬುದು ಒಂದು ಜನಪದ ನಂಬಿಕೆ.

ಇಷ್ಟವಿಯೋಗ

ವಿಯೋಗವೆಂದರೆ ಅಗಲುವಿಕೆ; ಬೇರೆಯಾಗುವಿಕೆ; ದೂರದಲ್ಲಿರುವುದು. ಕಳೆದುಕೊಳ್ಳುವುದು; ನಿರಂತರವಾಗಿ ಅಗಲುವುದು ಎಂದರ್ಥ. ವಿಯೋಗ ಭಾವನಾತ್ಮಕ ಸಂಬಂಧಗಳ ಪ್ರಶ್ನೆಯಾಗಿದೆ.

ಇಹಲೋಕ

ಇಹ ಎಂದರೆ ಇರುವಿಕೆ: ಈ ಭೂಮಿ, ಈ ಲೋಕ ಎಂದರ್ಥ. ಭಾರತದಲ್ಲಿ ಇಹಲೋಕವೆಂದರೆ ಲೌಕಿಕಕ್ಕೆ ಸಂಬಂಧಿಸಿರುವುದು. ಪರಲೋಕವೆಂದರೆ ಬೇರೆ ಲೋಕವೆಂದು ಅರ್ಥ. ಪುರಾಣಗಳಲ್ಲಿ ಇಹಲೋಕವೆಂದರೆ ಭೂಲೋಕ. ಪರಲೋಕವೆಂದರೆ ಸ್ವರ್ಗ. ಪಾತಾಳದ ಲೋಕಗಳು. ಸ್ವರ್ಗ ಲೋಕ ಮೇಲೆಯಿದೆ: ಭೂಮಿಯ ಕೆಳಗಿರುವುದು ಪಾತಾಳವೆಂದು ಕರೆಯುತ್ತಾರೆ. ಸ್ವರ್ಗದಲ್ಲಿ ದೇವತೆಗಳಿರುತ್ತಾರೆ. ಅದು ಪುಣ್ಯಲೋಕ. ಸತ್ತವರು ಪುಣ್ಯವಂತರಾದರೆ ಸ್ವರ್ಗಕ್ಕೆ ಹೋಗುತ್ತಾರೆ. ಪಾಪಿಗಳು ಅಧೋಲೋಕ ಸೇರುತ್ತಾರೆಂಬ ನಂಬಿಕೆಯಿದೆ.ಅಧೋಲೋಕ ಒಟ್ಟು ಏಳು ಎಂಬ ನಂಬಿಕೆಯಿದೆ.

• ವಿವರಗಳಿಗೆ ನೋಡಿ: ಎಸ್.ಬಾಲಸುಬ್ರಹ್ಮಣ್ಯ ೧೯೭೩ ವೇದಾಂತಸಾರ

ಇಟ್ಕ್ಕಟ್

ತಲೆಯ ಮೇಲೆ ಬಾಣಗಳು ನೆಟ್ಟಿರಲು ಕೆಲವರು ಇಕ್ಕುಳದಿಂದ (ಇಟ್ಕ್ಕಟ್)

ಅದನ್ನು ತೆಗೆಯುತ್ತಿದ್ದರು.ಪ್ರಾಚೀನ ಕಾಲದ ತಂತ್ರಜ್ಞಾನದ ಸೂಚನೆಯನ್ನು ಇದು ನೀಡುತ್ತದೆ.

ಇಟ್ಕಿಟ್ = ಎಂಬುದು ವಿಜಾತೀಯ ಸಂಯುಕ್ತಾಕ್ಷರದಿಂದ ಕೂಡಿದ ಪದ. ವಿಜಾತೀಯ ಸಂಯುಕ್ತಾಕ್ಷರವು ಹೊಸಗನ್ನಡದಲ್ಲಿ ಸಜಾತೀಯವಾಗಿ ಪ್ರಯೋಗವಾಗುತ್ತವೆ.

ಉದಾ:- ಅಟ್ಕಿರ್> ಅಕ್ಕರು

ಬಿಟ್ದ್ > ಬಿದ್ದೆ

ಇಲ್ಲಿ ಇಟ್ಕಿಟ್ > ಇಕ್ಕಳು ಎಂದಾಗಿದೆ. ಇಕ್ಕಳ (ಇಕ್ಕುಳ)ವು ಕಮ್ಮಾರರು ಹೆಚ್ಚಾಗಿ ಬಳಸುವ ಒಂದು ಸಾಧನ ವಸ್ತುಗಳನ್ನು ಹಿಡಿಯಲು ಇಕ್ಕುಳವನ್ನು ಬಳಸುತ್ತಾರೆ. ಇದರಲ್ಲಿ 'ಇರ್ = ಎಂದರೆ ಎರಡು ಅಂದರೆ ವಸ್ತುವಿನ ಎರಡು ತುದಿಗಳನ್ನು ಹಿಡಿದುಕೊಳ್ಳಲು ಅನುಕೂಲವಾಗುವ ಸಾಧನವಿದು. ಇದರ ಹಾಗೆ ಕೆಲಸ ಮಾಡುವ ಚಿಮ್ಮಟಿಗೆ ಎಂಬ ಸಾಧನವೂ ಇದೆ. ಸುತ್ತಿಗೆ, ಚಾಣ,

ಕಬ್ಬಿಣದ ಕೆಲಸವನ್ನು ಮಾಡುವ ಕಮ್ಮಾರರ ಉಲ್ಲೇಖ ಹಲವು ಶಾಸನಗಳಲ್ಲಿದೆ. ಕಾವ್ಯಗಳೂ ಅವರ ಕಾರ್ಯವೈಖರಿಯನ್ನು ಬಣ್ಣಿಸಿವೆ. ಕಮ್ಮಾರರು ಕೆಲಸ ಮಾಡುವ ಸ್ಥಳಕ್ಕೆ 'ಕಮ್ಮಾರ ಶಾಲೆ' ಎಂದು ಕರೆಯುತ್ತಾರೆ. ಈಗಲೂ ಹಳ್ಳಿಗಳಲ್ಲಿ ಈ ಪದವೇ ಬಳಕೆಯಲ್ಲಿರುವುದು ಗಮನಾರ್ಹ. ಅವರು ಈ ಸಾಲೆಯಲ್ಲಿ ಬಳಸುವ ಕೆಲವು ಸಾಧನಗಳು- ತಿದಿ, ಉಳಿ, ಸುತ್ತಿಗೆ, ಚಾಣ, ಬಾಚಿ ಇತ್ಯಾದಿ. ರಾಜ್ಯದ ಯುದ್ಧ ಸಂದರ್ಭದಲ್ಲಿ ಶಸ್ತ್ರಗಳನ್ನು ತಯಾರಿಸಲು ಕಮ್ಮಾರರು ನೆರವಾಗುತ್ತಿದ್ದರು. ಒಕ್ಕಲಿಗರಿಗೆ ಹಾಗೂ ಮನೆವಾರ್ತೆಗೆ ಬೇಕಾದ ಸಾಧನಗಳನ್ನು ಕಮ್ಮಾರರು ತಯಾರಿಸಿಕೊಡುತ್ತಿದ್ದರು. ರಾಜರು ಇವರಿಗೆ ವೇತನವನ್ನು ಕೊಡುತ್ತಿದ್ದರು. ಒಕ್ಕಲಿಗರು ಆಯವನ್ನು ನಿಗದಿಪಡಿಸಿ ನೀಡುತ್ತಿದ್ದರೆಂದು ಇತಿಹಾಸವು ತಿಳಿಸುತ್ತದೆ.

ಈಹಾಮೃಗ

ದೇವತೆ ಮಾನವ ಪಾತ್ರಗಳ ಸಮ್ಮಿಶ್ರ ವಸ್ತು. ಮಾನವನು ನಾಯಕ ಶೃಂಗಾರ-ಹಾಸ್ಯಗಳ ಹೊರತು ಬೇರೆ ರಸ ನಾಲ್ಕು ಅಂಕಗಳು. ಉದ್ಧತವಾದ ಪುರುಷ ಪಾತ್ರಗಳು. ಸ್ತ್ರೀಯ ರೋಷದಿಂದ ಉದ್ಭವಿಸುವ ವಸ್ತು ಗಲಭೆ, ಹೊಡೆದಾಟ, ಸ್ತ್ರೀ-ಅಪಹರಣವನ್ನೊಳಗೊಂಡ ಶೃಂಗಾರ. ಸ್ತ್ರೀಯರು ಮಾತ್ರ ಸ್ವರ್ಗಲೋಕದ ಸ್ತ್ರೀಯರಾಗಿರಬೇಕು. ನಾಟ್ಯಶಾಸ್ತ್ರದಲ್ಲಿ ಇದು ಉಲ್ಲೇಖಿತವಾಗಿದೆ. ಇದು ರೂಪಕಗಳಲ್ಲಿ ಒಂದು: ಇದರ ವಸ್ತು ಮಿಶ್ರ, ದಿವ್ಯಸ್ತ್ರೀಯನ್ನು ಅವಳ ಇಷ್ಟಕ್ಕೆ ವಿರುದ್ಧವಾಗಿ ಹೊತ್ತುಕೊಂಡು ಹೋಗುವುದು ಕ್ರಿಯೆ. ನಾಯಕನಲ್ಲಿ ಧೀರೋದ್ಧತ ಲಕ್ಷಣಗಳಿರುತ್ತವೆ. ಇವನಲ್ಲಿ ಶೃಂಗಾರಾಭಾವವಿರುತ್ತದೆ. ನಾಲ್ಕು ಅಂಕಗಳಿರುತ್ತವೆ. ಮೂರು ಸಂಧಿಗಳಿರಬೇಕು

(ಮುಖ, ಪ್ರತಿಮುಖ, ನಿರ್ವಹಣ). ಧೀರೋದ್ಧತನೇ ಆದ ಪ್ರತಿನಾಯಕ ಅಯುಕ್ತವಾಗಿ ಆಚರಿಸುತ್ತಾನೆ. ಯುದ್ಧವನ್ನು ತೋರಿಸುವಂತಿಲ್ಲ. ಒಳ್ಳೆಯವನ ಸಾವು ಬರುವಂತೆ ಆಗಬಹುದು. ಆದರೆ ಅದನ್ನು ತೋರಿಸಬಾರದು. ರೂಪಕಗಳಲ್ಲಿ ಒಂದು : ಇದರ ವಸ್ತು ಮಿಶ್ರ ದಿವ್ಯಸ್ತ್ರೀಯನ್ನು ಅವಳ ಇಷ್ಟಕ್ಕೆ ವಿರುದ್ಧವಾಗಿ ಹೊತ್ತುಕೊಂಡು ಹೋಗುವುದು. ನಾಯಕನಲ್ಲಿ ಧೀರೋದ್ಧತ ಲಕ್ಷಣಗಳಿರುತ್ತವೆ. ಇವನಲ್ಲಿ ಶೃಂಗಾರಾಭಾಸವಿರುತ್ತದೆ. ನಾಲ್ಕು ಅಂಕಗಳಿರುತ್ತವೆ. ಮೂರು ಸಂಧಿಗಳಿರಬೇಕು (ಮುಖ, ಪ್ರತಿಮುಖ, ನಿರ್ವಹಣ). ಧೀರೋದ್ಧತನೇ ಆದ ಪ್ರತಿನಾಯಕ ಅಯುಕ್ತವಾಗಿ ಆಚರಿಸುತ್ತಾನೆ. ಯುದ್ಧವನ್ನು ತೋರಿಸುವಂತಿಲ್ಲ. ಒಳ್ಳೆಯವನ ಸಾವು ಬರುವಂತೆ ಆಗಬಹುದು ಆದರೆ ಅದನ್ನು ತೋರಿಸಬಾರದು.

ವಿವರಗಳಿಗೆ ನೋಡಿ: ನಾಟಕ, ಪಗರಣ, ಅಂಕ.

ಉಂಗುರ

'ಅಂಗುಲೀಯಕಂ', ಮತ್ತು 'ಊರ್ಮಿಕಾ' ಎಂದು ಎರಡು ರೀತಿಯ ಉಂಗುರವಿದೆಯೆಂದು ನಾಗವರ್ಮನು 'ಅಭಿಧಾನ ರತ್ನಮಾಲಾ ಕರ್ಣಾಟಕ ಟೀಕೆ'ಯಲ್ಲಿ ಹೇಳುತ್ತಾನೆ (405). ಈ ಕುರಿತಂತೆಯೂ ಅನೇಕ ಕಡೆ ಉಲ್ಲೇಖಗಳಿವೆ.

ಕಾಲುಂಗುರವು ಸೌಭಾಗ್ಯ ಸೂಚಕವೆಂದು ಪರಂಪರಾಗತವಾಗಿ ಅಂಗೀಕೃತವಾಗಿದೆ ಕಾಲ್ಬೆರಳಿನ ಉಂಗುರಕ್ಕೆ ಕಾಲುಂಗುರ, ಸುತ್ತುಂಗುರ, ಪಿಲ್ಲಿ, ಕಿವಿಪಿಲ್ಲಿ, ಹಿರಿಪಿಲ್ಲಿ, ಮಿಂಚು ಇತ್ಯಾದಿ ಹೆಸರುಗಳಿವೆ.

ವಿವರಗಳಿಗೆ ನೋಡಿ: ಚಿದಾನಂದಮೂರ್ತಿ ಎಂ. 1977 ಗ್ರಾಮೀಣ ಪುಟ. 154

ಉಂಡಿಗೆಸಾಧ್ಯಂ ಮಾಡು

ಉಂಡಿಗೆಯೆಂದರೆ ಉಂಡೆ; ಗಂಟಲು; ಅಧೀನ; ವಶಮಾಡು. ಉಂಡಿಗೆ ಎಂದರೆ ಮುದ್ರೆ ಎಂದರ್ಥ. ರಾಜರು ತಾವು ಯುದ್ಧಗಳಲ್ಲಿ ಗೆದ್ದ ರಾಜ್ಯಗಳಿಗೆ ತಮ್ಮ ಮುದ್ರೆ ಒತ್ತಿ, ರಾಜ್ಯ ತಮ್ಮದೆಂದು ಘೋಷಿಸುವುದನ್ನು 'ಅಂತು ಪಟ್ಟಂಡ ಮಂಡಲಮನ್ ಉಂಡಿಗೆ ಸಾಧ್ಯಂ ಮಾಡಿ'ದನೆಂದು ಹೇಳಲಾಗುತ್ತಿತ್ತು.

ಪ್ರಾಚೀನ ಕರ್ನಾಟಕದಲ್ಲಿ ಈಗಿನ ರಹದಾರಿಗಳನ್ನು (Pass Ports) 'ಉಂಡಿಗೆ'ಗಳೆಂದು ಕರೆಯುತ್ತಿದ್ದರು. ಉಂಡಿಗೆಗಳ ಮೇಲೆ ರಾಜ್ಯದ ರಾಜನ ಲಾಂಛನವನ್ನು ಒತ್ತುತ್ತಿದ್ದರು. ಗಂಗವಂಶದ ಉಂಡಿಗೆಯ ಮೇಲೆ ಆನೆಯ ಚಿತ್ರದ ಮುದ್ರೆಯಿದೆ. ಆದ್ದರಿಂದ ಒಂದು ಪರರಾಜ್ಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದನ್ನು 'ಉಂಡಿಗೆಗೇಜಿಸು' ಎಂದೂ ಕರೆಯುತ್ತಿದ್ದರು. ಏಕೆಂದರೆ ಆ ವಶವಾದ ರಾಜ್ಯದಲ್ಲಿ ಗೆದ್ದ ರಾಜನ ಉಂಡಿಗೆಯ ಬೆಲೆಯು ಪ್ರಾಪ್ತವಾಗುತ್ತಿದ್ದಿತು. ಇದು ವಿಶಿಷ್ಟ ಸಾಂಸ್ಕೃತಿಕ ಪರಿಭಾಷೆಯಾಗಿದೆ.

ವಿವರಗಳಿಗೆ ನೋಡಿ: ಸಿ.ವೀರಣ್ಣ 1986 ಪ್ರಾಚೀನ ಸಾಹಿತ್ಯ: ರಾಜಸತ್ತೆಯ ವೈಭವದ ಕಾಲ ಪುಟ. 132–158
ಡಾ. ಎಂ. ಚಿದಾನಂದ ಮೂರ್ತಿ 2008 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ. 375, 76

ಉಗ್ರದೇವತೆ

ಗ್ರಾಮದೇವತೆಗಳು ಎಷ್ಟೋ ಸಂದರ್ಭದಲ್ಲಿ ಕ್ಷುದ್ರದೇವತೆಗಳು ಅನ್ನಿಸಿಕೊಳ್ಳುತ್ತವೆ. ಈ ರೀತಿಯ ಗ್ರಾಮದೇವತೆಗಳು ಅದೂ ಜನಪದ ದೇವತೆಗಳು ತಮ್ಮ ಸೃಷ್ಟಿಗೆ ಸಂಬಂಧಿಸಿದಂತೆ 'ಬಹು ಉಗಮ ಸಿದ್ಧಾಂತ'ವನ್ನು ಸೂಚಿಸುತ್ತವೆ. ಯಾಕೆಂದರೆ, ಈ ದೇವತೆಗಳಿಗೆ ನಿರ್ದಿಷ್ಟತೆಯಿರುವುದಿಲ್ಲ. ಊರಿಗೊಂದು ರೋಗಕ್ಕೊಂದು, ಆಹಾರಕ್ಕೊಂದು, ಪರಿಸರಕ್ಕೊಂದು ದೇವತೆಗಳನ್ನು ಜನಪದರು ಸೃಷ್ಟಿಸಿಕೊಳ್ಳುತ್ತಾರೆ. ಇವನ್ನೇ ಶಿಷ್ಟಗೊಳಿಸುತ್ತಾ ಬಂದಂತೆ ಇವುಗಳು ವೈದಿಕ ಅಥವಾ ಶಿಷ್ಟ ದೇವತೆಗಳಾಗಿ ಕಾಣಿಸಿಕೊಂಡವು. ಭಾಷೆ ಮತ್ತು ಸಂಸ್ಕೃತಿಗೆ ಅನುಗುಣವಾಗಿ ಭಿನ್ನದೇವತೆಗಳು ಭಿನ್ನ ಹೆಸರುಗಳು ಜನಪದ ಪರಿಸರದಲ್ಲಿ ದೊರೆಯುತ್ತವೆ.

ಸಾಮಾನ್ಯವಾಗಿ ರೋಗ ನಿವಾರಣೆಗಾಗಿ, ಆಹಾರ ಸಂರಕ್ಷಣೆಗಾಗಿ ಈ ರೀತಿಯ ದೇವತೆಯರ ಸೃಷ್ಟಿಯಾಗುತ್ತದೆ. ಉದಾಹರಣೆಗೆ ಸಿಡುಬು ರೋಗ ನಿವಾರಣೆಗಾಗಿ ಮಾರಿದೇವತೆಗೆ ಹರಕೆಯನ್ನು ಕೊಡುವುದು. ಮಧುವಿಗೆ ಮಧುದೇವತೆಯಿರುವುದು. ಈ ದೇವತೆಯರಿಗೆ ನೈವೇದ್ಯವೂ ಅದೇ ರೀತಿಯಲ್ಲಿರುತ್ತದೆ. ಪ್ರಾಣಿಬಲಿ, ನರಬಲಿಯು ಈ ದೇವತೆಯರ ಆಹಾರವನ್ನು ಸಂಕೇತಿಸುತ್ತಿದ್ದರೆ, ಕಳ್ಳಿನ ಸಮರ್ಪಣೆಯು ಪಾನೀಯವನ್ನು ಸಂಕೇತಿಸುತ್ತದೆ.

ದೇವತೆಯರ ಹೆಸರುಗಳು ಈ ಅಂಶಗಳಿಗೆ ಅನುಗುಣವಾಗಿಯೇ ಇರುತ್ತದೆ. ರೋಗಗಳ ಹೆಸರನ್ನು ದೇವತೆಗೆ ಇಡುವ ಕ್ರಮವಿರುತ್ತದೆ. ಉದಾಹರಣೆಗೆ: ಮಾರಿಯಮ್ಮ. ಮಾರಿರೋಗವನ್ನು ಹೋಗಲಾಡಿಸುವುದರಿಂದ ಈ ದೇವತೆಗೆ ಮಾರಿದೇವತೆ ಎಂದು ಹೆಸರಾಯಿತು. ಹಾಗೆಯೇ ಕಳ್ಳಿನ ದೇವತೆಗೆ ಮಧುದೇವತೆಯೆಂಬ ಹೆಸರು ಸಿಗುತ್ತದೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಈ ರೀತಿಯ ದೇವತೆಗಳ ಹೆಸರುಗಳು ಸಾಂಸ್ಕೃತಿಕ ದಾಖಲೆಯಾಗಿ ಬರುತ್ತವೆ. ಇವು ಇದೇ ಜನಪದಕ್ಕೆ ಸಂಬಂಧಿಸಿರುವುದರಿಂದ ಇವುಗಳಿಗೆ ಮತ ಪ್ರಭೇದ ಇರುವುದಿಲ್ಲ. ವೈದಿಕ ಧರ್ಮವು ಈ ದೇವತೆಗಳನ್ನು ನಿರಾಕರಿಸಿವೆ.

ವಿವರಗಳಿಗೆ ನೋಡಿ: ಹೆಂಡದ ಪೂಜೆ.

ಉಡಲಿಕ್ಕು

ಉಡಲು+ಇಕ್ಕು–ಉಡಲಿಕ್ಕು. ಇಲ್ಲಿ ಉಡು ಅಂದರೆ ಉಟ್ಟುಕೊಳ್ಳು, ಧರಿಸು ಎಂದರ್ಥ. ಧರಿಸಲು ಯೋಗ್ಯವಾದುದನ್ನು ಕೊಡುವುದು, ವಸ್ತ್ರದಾನ ಮಾಡುವುದು.

ವಸ್ತ್ರದಾನವು ಚತುರ್ವಿಧ ದಾನಗಳಲ್ಲಿ ಒಂದಾಗಿದೆ. ವಸ್ತ್ರದಾನಕ್ಕೆ ಪ್ರಾಚೀನರಲ್ಲಿ ಬಹಳ ಮಹತ್ವವಿತ್ತು. ಈಗಲೂ ವಸ್ತ್ರದಾನ ಕೆಲವೆಡೆ ನಡೆಯುತ್ತಿರುವುದು ಕಂಡುಬರುತ್ತದೆ. ವಸ್ತ್ರವು ಮೈಮುಚ್ಚಿಕೊಳ್ಳುವ ಸಾಧನ. ಅನ್ನ: ವಸತಿ: ವಸ್ತ್ರವು ಭಾರತೀಯರಿಗೆ ಪ್ರಮುಖವಾಗಿದೆ.

ವಿವರಗಳಿಗೆ ನೋಡಿ: ದಾನ.

ಉಡಿದಾರ/ಮೇಖಲಾ

ಉಡಿದಾರ ಅಥವಾ ಮೇಖಲಾವನ್ನು ಈ ಮಂತ್ರದೊಂದಿಗೆ ಕಟ್ಟುತ್ತಾರೆ. ಶ್ರದ್ಧೆಯ ಕುಮಾರಿ, ಋಷಿಗಳ ಸೋದರಿ, ಸಂಯಮದ ಆಗರ, ಭೂತ ದಯಾಪರ, ನೀತಿಯ ರಕ್ಷಕ, ತಪೋನಿರತ, ಪಾಪನಾಶಕ ಎಂದು ಹೇಳುತ್ತಾರೆ.

(ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.2 1971 ಪುಟ. 299)

ಉಡಿದಾರವನ್ನು ಬೇರೆ ರೀತಿಯಲ್ಲಿ ಕಟ್ಟುತ್ತಾರೆ. ಮಗುವಿಗೆ ಭೂತ ಪ್ರೇತಾದಿಗಳ ಕಣ್ಣು ಬೀಳದಿರಲಿ ಎಂದು ಇದನ್ನು ಕಟ್ಟುತ್ತಾರೆ.

ಉಡುಗೆ – ತೊಡುಗೆ

ಅತ್ಯಂತ ಪ್ರಾಚೀನ ಕಾಲದಿಂದಲೂ ಭರತಖಂಡದಲ್ಲಿ ಉಡುಗೆಗಳ ಕ್ಷೇತ್ರದಲ್ಲಿ ಕೇವಲ ಎರಡು ಬಗೆಯ ಉಡುಗೆಗಳು ಮಾತ್ರ–ಪಂಚೆ ಮತ್ತುವಲ್ಲಿ ಬಳಕೆಯಲ್ಲಿದ್ದವೆ ಆರ್ಯ ಆಗಮನದಿಂದ ಪೇಟ (ಉಷ್ಣೀಷ) ಒಂದು ಬಗೆಯ ಒಳಂಗಿ (ದ್ರಾಪೀ) ಹಾಗೂ ಸ್ತ್ರೀಯರಿಗೆ ಒಂದು ಬಗೆಯ ಕಂಚುಕಗಳು ಬಂತೆಂದು ಭಗವತ್‌ಶರಣ ಉಪಾಧ್ಯಾಯ ಹೇಳುತ್ತಾರೆ.(೨೦೦೪.ಪು. ೪೪)

ಭಾರತದಲ್ಲಿ ಇಂದೂ ರಾಷ್ಟ್ರೀಯ ಉಡುಗೆ ತೊಡುಗೆಗಳೆಂದು ಭಾವಿಸಲಾಗಿರುವ ಕುರ್ತಾ (ಜುಬ್ಬಾ) ನಿಲುವಂಗಿ (ಶೇರ್‌ವಾನಿ) ಮತ್ತು ಪೈಜಾಮಗಳು ಕುಶಾಣರ ಕೊಡುಗೆಗಳೆಂದು ಭಗವತ್ ಶರಣ ಉಪಾಧ್ಯಾಯ (೨೦೦೪. ಪು. ೮೭) ಹೇಳುತ್ತಾರೆ.

ಉತ್ತರಾಧಿಕಾರ

ಉತ್ತರಾಧಿಕಾರ ಈ ಕೆಳಗಿನವರಿಗೆ ಇರುತ್ತದೆ. ೧. ಮಗ. ೨. ಮಗಳು. ೩. ವಿಧವೆ. ೪. ತಾಯಿ. ೫. ಪೂರ್ವಮೃತನ ಮಗನ ಮಗ. ೬. ಪೂರ್ವ ಮೃತನ ಮಗನ ಮಗಳು. ೭. ಪೂರ್ವಮೃತ ಮಗಳ ಮಗಳು. ೮. ಪೂರ್ವಮೃತ ಮಗನ ವಿಧವೆ. ೯. ಪೂರ್ವಮೃತ ಮಗನ ಪೂರ್ವಮೃತ ಮಗನ ವಿಧವೆ. ೧೦. ಪೂರ್ವಮೃತ ಮಗನ ಪೂರ್ವಮೃತ ಮಗನ ಪೂರ್ವಮೃತ ಮಗನ ವಿಧವೆ. ಇದು ವೈದಿಕ ಸಂಸ್ಕೃತಿಗೆ ಅನ್ವಯವಾಗುತ್ತದೆ.

ಉತ್ತರೀಯ

ಉತ್ತರೀಯವೆಂದರೆ ಹೆಗಲಿಗೆ ಹಾಕಿಕೊಳ್ಳುವ ಬಟ್ಟೆ, ದೇಹವನ್ನು ಸಾಮಾನ್ಯವಾಗಿ ಮೂರು ಭಾಗವಾಗಿ ಮಾಡುತ್ತಾರೆ. ಒಂದು ಶಿರೋಭಾಗ, ಇನ್ನೊಂದು ಉರ (ಎದೆ) ಭಾಗ, ಮತ್ತೊಂದು ಅಧೋಭಾಗ, ಅಂದರೆ ಸೊಂಟದಿಂದ ಕೆಳಗೆ. ಉರೋ ಭಾಗವನ್ನು ಮುಚ್ಚಿಕೊಳ್ಳಲು ಬಳಸುವ ಬಟ್ಟೆಯನ್ನು ಉತ್ತರೀಯವೆಂದು ಕರೆಯುತ್ತಾರೆ. ಇದಕ್ಕೆ ಶಲ್ಯ ಎಂಬ ಹೆಸರೂ ಇದೆ. ಇದಕ್ಕೆ ಕನ್ನಡದಲ್ಲಿ ಹೆಗಲುವಸ್ತ್ರವೆಂದೂ, ಸೊಂಟಕ್ಕೆ ಉಡುವ ವಸ್ತ್ರಕ್ಕೆ ಸೊಂಟವಸ್ತ್ರವೆಂದೂ, ತಲೆಗೆ ಸುತ್ತುವ ವಸ್ತ್ರಕ್ಕೆ ಮುಂಡಾಸು ಎಂದೂ ಕರೆಯುತ್ತಾರೆ.ಉತ್ತರೀಯದ ಬಳಕೆಯು ಈಗಲೂ ಇದೆ. ಇವುಗಳು ಗಂಡಸರು ಧರಿಸುವ ವಸನಗಳಾಗಿವೆ.

ಉತ್ಪಾತ

ಉತ್ಪಾತವೆಂದರೆ ಅಪಶಕುನ. ಶುಭಶಕುನಗಳು ಮತ್ತು ಅಪಶಕುನಗಳಿಗೆ ಬೇರೆ ಬೇರೆ ಲಕ್ಷಣಗಳಿವೆ. ಶಕುನ ಮುಂದೆ ಸಂಭವಿಸಲಿರುವ ಸಂಗತಿಗಳ ಸೂಚನೆಗಳು. ಶಕುನಗಳು ಬೇರೆ ಬೇರೆ ಪ್ರದೇಶ ಮತ್ತು ಜನಾಂಗಗಳಲ್ಲಿ ಬೇರೆ ಬೇರೆಯಾಗುತ್ತವೆ.

ಉತ್ಪಾತವೆಂದರೆ ಅಪಶಕುನ. ಶುಭಶಕುನಗಳು ಮತ್ತು ಅಪಶಕುನಗಳಿಗೆ ಬೇರೆ ಬೇರೆ ಲಕ್ಷಣಗಳಿವೆ. ಶಕುನಗಳು ಮುಂದೆ ಸಂಭವಿಸಲಿರುವ ಸಂಗತಿಗಳ ಸೂಚನೆಗಳು. ಶಕುನಗಳು ಬೇರೆ ಬೇರೆ ಪ್ರದೇಶ ಮತ್ತು ಜನಾಂಗಗಳಲ್ಲಿ ಬೇರೆ ಬೇರೆಯಾಗುತ್ತವೆ.

ಉತ್+ಪಾತ ಅಂದರೆ ಮೇಲಕ್ಕೆ ಹಾರುವ ದುರ್ಘಟನೆ: ಶುಭಾಶುಭಚಿಹ್ನೆ. ಅಲ್ಲೋಲ ಕಲ್ಲೋಲ ಅಥವಾ ಕೆಳಗು ಮೇಲಾಗುವುದು. (ಬುಡ ಮೇಲಾಗುವುದು) ಎಂಬರ್ಥ ಸರಿಹೊಂದುತ್ತದೆ.

ಉತ್ಪಾದನೆ/ಸೀತಾಭೂಮಿ

ಜಾನಪದರಿಂದ, ಸೀತಾ ಭೂಮಿಗಳಿಂದ ಆದಾಯವನ್ನು ಸಂಗ್ರಹಿಸಬೇಕು. ಈ ಆದಾಯವನ್ನು ಅಧಿಕಾರ ವರ್ಗದ ಅಗತ್ಯಗಳಾದ ವಿಲಾಸ ವಸ್ತುಗಳನ್ನಾಗಿ ಪರಿವರ್ತಿಸಬೇಕು. ಆದಾಯವನ್ನು ವಸೂಲು ಮಾಡುವ ಉದ್ಯೋಗಿಗಳಿಗೆ ಕೆಲವು ಗ್ರಾಮಗಳನ್ನು ಮಾನ್ಯವಾಗಿಯೋ, ಜಾಗೀರಾಗಿಯೋ ಕೊಟ್ಟು, ಆ ಗ್ರಾಮದ ಆದಾಯವನ್ನು ಅವರು ವಸೂಲು ಮಾಡಿಕೊಳ್ಳಬೇಕಾದ ಏರ್ಪಾಡು (ನಮ್ಮ ದೇಶದಲ್ಲಿ ಭೂಮಾಲೀಕ ವ್ಯವಸ್ಥೆಗೆ ಕೀಲಿಗೈಯಾದ ಏರ್ಪಾಡು) ಆಗಿನ್ನೂ ಸಾಧ್ಯಗೊಂಡಿರಲಿಲ್ಲ. ಉತ್ಪಾದಕತೆ ಇನ್ನೂ ಗಮನ ಸೆಳೆಯುವಷ್ಟೇನೂ ಬೆಳೆದಿರಲಿಲ್ಲ. ಅಲ್ಲದೆ, ಜಾನಪದರನ್ನೂ, ಸೀತಾ ಭೂಮಿಯನ್ನೂ ಎದುರು ಹಾಕಿಕೊಂಡರೆ, ಕೃಷಿಯೋಗ್ಯವಾಗಿ ಮಾಡಬೇಕಾಗಿದ್ದ ಎಷ್ಟೋ ಅರಣ್ಯ ಭಾಗಗಳು ಹಾಗೆಯೇ ಉಳಿದು ಬಿಡುತ್ತದೆ. ಅಂದರೆ ಹೆಚ್ಚುವರಿ ಉತ್ಪನ್ನವು ಸಾಕಷ್ಟು ಏರುವವರೆಗೂ, ಹೀಗೆ ಆ ಉದ್ಯೋಗಿಗಳನ್ನು ಸಾಕುವುದು

ಸಾಧ್ಯವಾಗುವಂತಿರಲಿಲ್ಲ. ಇಂತಹ ಸ್ಥಿತಿಯಲ್ಲಿ ಶಿಸ್ತಿನ ಹತೋಟಿಯೆಲ್ಲವೂ ಸಂಪೂರ್ಣವಾಗಿ ಪ್ರಭುತ್ವದ ಹಿಡಿತದಲ್ಲಿ ಕೇಂದ್ರಿಕೃತವಾಗಿರಬೇಕು. ವಸೂಲಿ ಮಾಡುವ ಉದ್ಯೋಗಿಗಳಿಗೆ ನೌಕರಿ ಮಾತ್ರವೇ ಸಿಗುವುದು ಸಾಧ್ಯ. (ಡಿ. ಡಿ. ಕೊಸಾಂಬಿ ೧೯೯೮ ಪು. ೧೮೮)

ಉದ್ಗಾತೃ

ಸಾಮವೇದವನ್ನು ಗಾನ ಮಾಡುವ ಋತ್ವಿಕ್‌ಗಳಿಗೆ ಉದ್ಗಾತೃ ಎಂದು ಕರೆಯುತ್ತಾರೆ.ಸಾಮವೇದವು ಗಾಯನಕ್ಕೆ ಹತ್ತಿರವಿದೆ.

ಉದಾರ

ಒಂದು ವಸ್ತುವಿನಲ್ಲಿ ಅಡಗಿರುವ ಅದರ ನೈಜ ಸ್ವಭಾವವನ್ನು ಅತಿಶಯವಾಗುವಂತೆ ನಿರೂಪಿಸಿದರೆ ಅದು

ಉದಾರ ಗುಣ. ಈ ವಿಷಯವು ಕನ್ನಡದ ದೃಷ್ಟಿಯಿಂದ ಮುಖ್ಯವಾದುದು.ಕಾವ್ಯಕ್ಕೆ ಉದಾರತೆಯು ಅತ್ಯಂತ ಅವಶ್ಯಕವಾದುದು ಎಂಬ ಈ ತಿಳುವಳಿಕೆಯು ಇಲ್ಲಿ ಮುಖ್ಯ. ಸಾಮಾಜಿಕ ಉದಾರತೆಯನ್ನು 'ಲಿಬರಿಲಿಸಂ' ಎನ್ನುವ ಅರ್ಥದಲ್ಲಿ ಬಳಸುತ್ತಾರೆ.

ಉದ್ಯೋಗ

ಉದ್ಯೋಗಿಗೆ ಅರ್ಥಲಾಭವಾಗುವುದು, ಅವನು ಕೀರ್ತಿಯನ್ನಾಗಲಿ ಮರಣವನ್ನಾಗಲಿ ಹೊಂದುವನು. ಆದರೆ ನಿರುದ್ಯೋಗಿಗೆ ಕೀರ್ತಿಲಾಭವಾಗಲೀ, ಅರ್ಥಲಾಭವಾಗಲೀ ಎರಡೂ ಇಲ್ಲ. ಮರಣವೇ ಆತನಿಗೆ ಮಹಾನವಮಿ. ಉದ್ಯೋಗದ ಮೂಲಕವೇ ಸಮಾಜದಲ್ಲಿ ವ್ಯಕ್ತಿಯ ಸ್ಥಾನಮಾನವನ್ನು ನಿರ್ದೇಶಿಸಲಾಗುತ್ತದೆ ಮತ್ತು ಅವನಿಗೂ ಊರಿಗೂ ಇರುವ ಸಂಬಂಧವು ಸೂಚಿತವಾಗುತ್ತದೆ. ಉದಾ: ಕ್ಷೌರಿಕ; ಬಡಗಿ; ಚರ್ಮಕಾರ; ಪುರೋಹಿತ, ಇತ್ಯಾದಿ ಉದ್ಯೋಗಗಳು ಊರಿನ ಅಗತ್ಯಕ್ಕೆ ಬೇಕಾದಂತೆ ರೂಪುಗೊಳ್ಳುತ್ತವೆ. ಆದರೆ ಆಧುನಿಕ ಬಂಡವಾಳಶಾಹಿ ಜಗತ್ತು ಉದ್ಯೋಗವನ್ನು ತನ್ನ ಅಗತ್ಯಕ್ಕೆ ತಕ್ಕಂತೆ ಪರಿವರ್ತಿಸಿದೆ.

ವಿವರಗಳಿಗೆ ನೋಡಿ: Sudipta Kaviraj ೧೯೯೫ The Unhappy Consiousness
Madan. T.N 2001 Non – Renumeialio
Ronald Inden 1990 Imagining India

ಉಪಕಾರ

ಉಪಕಾರವೆಂದರೆ ಸಹಾಯ ಮಾಡುವುದು, ಅಪಕಾರ ಅದರ ತದ್ವಿರುದ್ಧವಾದ ಕೆಲಸ. ಯಾರು ಉಪಕಾರ ಮಾಡುತ್ತಾರೋ ಅವರನ್ನು ಉಪಕಾರಿಗಳೆಂದು ಕರೆಯುತ್ತೇವೆ. ಅಂಥವರಿಗೆ ಅಪಕಾರವೆಸಗುವುದು ದ್ರೋಹವೆಂದು ನಂಬಿಕೆಯಿದೆ.

ಉಪನಯನ

ಗರ್ಭಸಂಸ್ಕಾರ–ಜಾತಕರ್ಮ–ಚೂಡಾಕರ್ಮ–ಮೌಂಜೀಬಂಧನಗಳಿಂದ ಬೀಜಾದೋಷ, ಗರ್ಭದೋಷಜನ್ಯ ಪಾಪದ ವಿಮೋಚನೆಯಾಗುವುದು.(ಮನುಸ್ಮೃತಿ 2–27)ಉಪನಯನವು ಮುಖ್ಯವಾದ ಆಚರಣೆಯೆನ್ನುವುದು ಇಲ್ಲಿ ಗಮನಾರ್ಹ. ಜನಿಸಿ ನಾಭಿನಾಲಚ್ಛೇದಕ್ಕೆ ಮೊದಲೇ ಜಾತಕರ್ಮ ಸಂಸ್ಕಾರವಾಗಬೇಕು. ಆಗ ಜೇನುತುಪ್ಪಗಳಲ್ಲಿ ಚಿನ್ನ ತೇಯ್ದು ಕುಡಿಸಬೇಕು.(ಮನುಸ್ಮೃತಿ2–29)

"ಉಪನಯನ ಅಥವಾ ದೀಕ್ಷೆ ಎಂದರೆ ಮಗುವನ್ನು ಗುರುವಿನ ಬಳಿಗೆ ವಿದ್ಯಾಭ್ಯಾಸಕ್ಕಾಗಿ ಕರರೆದೊಯ್ಯುವುದು ಎಂದರ್ಥ. ಸಂಸ್ಕೃತಿಯ ದೃಷ್ಟಿಯಿಂದ ಇದು ಬಹು ಮುಖ್ಯವಾದ ಸಂಸ್ಕಾರ. ವಿದ್ಯಾರಂಭವನ್ನು ಪ್ರಾಥಮಿಕ ವಿದ್ಯಾಭ್ಯಾಸದ ಆರಂಭವೆಂದೂ ಉಪನಯನವನ್ನು ಉನ್ನತ ವಿದ್ಯಾಭ್ಯಾಸದ ಪ್ರಾರಂಭವೆಂದೂ ಹೇಳಬಹುದು. ಬೇರೆ ಸಂಸ್ಕೃತಿಗಳಲ್ಲಿ ಯುವಕರಿಗೆ ಸಮಾಜದ ಹಕ್ಕು ಬಾಧ್ಯತೆಗಳನ್ನು ಮೂಡಿಸಲೋಸುಗ ನಡೆಸುವ ದೀಕ್ಷಾ ಸಂಸ್ಕಾರಕ್ಕೆ ಇದನ್ನು ಹೋಲಿಸಬಹುದು ಮತ್ತು ಇದು ಅಷ್ಟೇ ಪ್ರಮುಖವಾದದ್ದು. ಉಪನಯವನ್ನು ಪಡೆಯಬೇಕಾದ ವಟುವಿಗೆ ತನ್ನ ಕುಲದ ಸಂಸ್ಕೃತಿ, ಸಮಾಜದ ಕಟ್ಟುಪಾಡುಗಳು, ಮತ್ತು ಸಂಪ್ರದಾಯಗಳು ಹಾಗೂ ಪ್ರಚಲಿತ ಸಮಸ್ಯೆಗಳ ಅರಿವನ್ನೆಲ್ಲಾ ಈಗ ಮಾಡಿಕೊಡಲಾಗುತ್ತದೆ. ಹಿಂದೂಗಳಿಗೆ ಆದರ್ಶವಾದ ಈ ಉಪನಯನವು ಸಾರ್ವತ್ರಿಕ ವಿದ್ಯಾಭ್ಯಾಸವನ್ನು ಅವಶ್ಯಕವಾಗಿ ಕಲಿಯಲೇಬೇಕೆಂಬುದರ ವಂಶಪಾರಂಪರ್ಯವಾದ ಒಂದು ಚಿಹ್ನೆ ಎಂದು ಪರಿಗಣಿತವಾಗಿದೆ. ಪ್ರಾಚೀನ ರೀತಿಯ ಹಾಗೂ ಕೆಲವು ಮತಗಳಲ್ಲಿ ಈಗಲೂ ಪ್ರಚಲಿತವಿರುವ ದೀಕ್ಷಾ ಕ್ರಮದಲ್ಲಿ ವಟುವಿನ ಸಂಯಮವನ್ನು ಪರೀಕ್ಷೆಗೊಡುವುದು ಇಲ್ಲವೆ ಅಂಗಹೀನಗೊಳಿಸುವುದು ಮುಂತಾದ ಕ್ರಮಕ್ಕಿಂತಲೂ ಹಿಂದೂಗಳ ದೀಕ್ಷಾಪದ್ಧತಿಯು ಬಹು ಪ್ರಗತಿಪರವಾಗಿದೆ. ಉಪನಯನದ ಪ್ರಮುಖ ಅಂಶವೇನೆಂದರೆ ಇದನ್ನು ಪಡೆದವನಿಗೆ ಸಾಂಸ್ಕೃತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಪುನರ್ಜನ್ಮ ಲಭಿಸುತ್ತದೆಂಬ ನಂಬಿಕೆ. ಶರೀರದ ಜನನವು ಮೃಗಗಳಿಗೂ ಸಹಜವಾದದ್ದು. ಆದರೆ ಸಂಯಮ ಮತ್ತು ಜ್ಞಾನಲಾಭದಿಂದಾಗುವ ಪುನರ್ಜನ್ಮವು ಬಹು ಶ್ರೇಷ್ಠವೂ ಮತ್ತು ಪಾವನವೂ ಆದದ್ದು. ಕಾಲಕ್ರಮದಲ್ಲಿ ಉಪನಯನದ ಅರ್ಥ ಮತ್ತು ಗುರಿಯೂ ಬದಲಾಗಿರುವುದು ಕಾಣುತ್ತದೆ. ಅಥರ್ವವೇದದಲ್ಲಿ ಉಪನಯನವೆಂಬುದನ್ನು "ವಿದ್ಯಾರ್ಥಿಯಾಗಿ ಸ್ವೀಕರಿಸುವುದು" ಎಂಬರ್ಥದಲ್ಲಿ ಬಳಸಲಾಗಿದೆ. ಬ್ರಾಹ್ಮಣ ಮತ್ತು ಸೂತ್ರಗಳ ಕಾಲದಲ್ಲಿಯೂ ವೇದದಲ್ಲಿ ಕಂಡುಬರುವ ಅರ್ಥದಲ್ಲಿಯೇ ಬಳಸಲಾಗಿದೆ. ಆದರೆ ಅದಕ್ಕೆ ಅನುಭಾವಯುತವಾದ ಗೂಢಾರ್ಥವು ಬಂದಮೇಲೆ ಧಾರ್ಮಿಕ ವಿಧಿಗಳಿಂದ ಲಭಿಸುವ ಪುನರ್ಜನ್ಮ ಎಂಬ ಭಾವನೆಯಲ್ಲಿ ಜ್ಞಾನದೀಕ್ಷೆಯ ಕಲ್ಪನೆ ಮುಚ್ಚಿಹೋಯಿತು. ಮೂಲತಃ ಈ ಸಂಸ್ಕಾರದ ಧ್ಯೇಯವು ವಿದ್ಯಾಭ್ಯಾಸವೇ

ಆಗಿದ್ದು ಕರ್ಮವಿಧಿಗಳು ಅಧೀನ ಸ್ಥಾನದಲ್ಲಿದ್ದವು. ಕಾಲಾನುಕ್ರಮದಲ್ಲಿ ಕರ್ಮಾಚರಣೆ ಹಾಗೂ ವ್ರತಾದೇಶ ಅಥವಾ ಧಾರ್ಮಿಕ ಪ್ರತಿಜ್ಞೆಯು ಪ್ರಮುಖವಾಗಿ ವಿದ್ಯಾಭ್ಯಾಸವು ಅಪ್ರಧಾನವೆನಿಸಿತು.' (ಯುಗಯಾತ್ರಿ ಭಾರತೀಯ ಸಂಸ್ಕೃತಿ. ೧೯೭೧. ಪು. ೨೯೮)

"ಉಪನಯನದ ನಿಷೇಧಕ್ಕೆ ಗುರಿಯಾದ ಶೂದ್ರನಿಗೆ ವಿದ್ಯಾಭ್ಯಾಸ ದೊರಕದಿದ್ದರೂ ಅದರಿಂದ ಮಹತ್ವರ ನಷ್ಟವೇನೂ ಆಗಿರಲಾರದು. ಏಕೆಂದರೆ, ಉತ್ತರ ವೈದಿಕ ಕಾಲದ ವಿದ್ಯಾಭ್ಯಾಸ ಕ್ರಮವೇನಿತ್ತೋ ತಿಳಿಯದು. ಶಾಂಖಾಯನ ಗೃಹ್ಯಸೂತ್ರದಂತೆ (II. ೭.೨೧-೨೫). ಉಪಚಾರರಕ್ಕಷ್ಟೇ ಕ್ಷತ್ರಿಯ, ವೈಶ್ಯರು ವೇದಾಧ್ಯಯನ ಮಾಡುತ್ತಿದ್ದರು. ಬ್ರಾಹ್ಮಣರು ಮಾತ್ರವೇ ವೇದಾಧ್ಯಯನಕ್ಕೆ ಪ್ರಾಶಸ್ತ್ಯ ಕೊಟ್ಟಿದು. ಆದ್ದರಿಂದ ಆ ಕಾಲಕ್ಕೆ ಉಪನಯನವು ವಿದ್ಯೆ, ಅಧ್ಯಯನದ ಅವಕಾಶವೆನ್ನುವುದಕ್ಕಿಂತ ಸಾಮಾಜಿಕ ಮೇಲ್ಮೈ-ಪ್ರತಿಷ್ಠೆಗಳ ಸಂಕೇತವೆನ್ನಬೇಕು. ಆಗ ಎಲ್ಲರೂ ತಮ್ಮ ವೃತ್ತಿಯನ್ನೇನೋ ಕಲಿಯುತ್ತಿದ್ದರು ಮತ್ತು ಕಲಿಕೆ ಸರಳವಾಗಿತ್ತು; ಆಗಿನ್ನೂ ಬರವಣಿಗೆ ಇದ್ದದ್ದಕ್ಕೂ ಸ್ಪಷ್ಟ ಪುರಾವೆ ಇಲ್ಲ.

ಶೂದ್ರರು ಇನ್ನೆರಡು ಚಿಕ್ಕಪುಟ್ಟ ವಿಧಿಗಳಲ್ಲಿ ಭಾಗವಹಿಸಬಹುದಿತ್ತು; ಒಂದು ಓದನಾಸವ, ಇನ್ನೊಂದು ಮಹಾವ್ರತ. ಬೇರೆ ವರ್ಣದವರಂತೆ ಅವನೂ ಬೇಯಿಸಿದ ಅನ್ನವನ್ನು ಅರ್ಪಿಸಬಹುದಿತ್ತು; ಆದರೆ ಒಂದೊಂದು ವರ್ಣದವರಿಗೆ ಒಂದೊಂದು ಅನ್ನವೆಂದು ವಿಂಗಡಣೆ ಮಾಡಲಾಗಿದೆ." (ಸತ್ಯಾಷಾಢ ಶ್ರೌತಸೂತ್ರ XXIII. ೪-೧೭). ಉಪನಯನ ವೈದಿಕ ಸಮಸ್ಕಾರ ಮಾತ್ರ ಎಂಬುದನ್ನು ಗಮನಿಸಬೇಕು.

ಉಪನಿಷತ್ತಿನ ನಾಲ್ಕು ಅರ್ಥ ಘಟಕಗಳು

ಉಪನಿಷತ್ತಿನ ಅಧ್ಯಯನಕ್ಕೆ ಮೊದಲು ತಿಳಿದುಕೊಳ್ಳಬೇಕಾದ ನಾಲ್ಕು ಅರ್ಥಘಟಕಗಳು – ಅಧಿಕಾರಿ, ಅಭಿದೇಯ, ಸಂಬಂಧ ಮತ್ತು ಪ್ರಯೋಜನ. ಇವುಗಳಿಗೆ ಅನುಬಂಧ ಚತುಷ್ಟಯ ಎಂದು ಹೆಸರು. ಉಪನಿಷತ್ತಿನ ಅಧ್ಯಯನಕ್ಕೆ ಯೋಗ್ಯನು ಯಾರು; ಅಧ್ಯಯನದ ವಿಷಯ ಯಾವುದು, ಪ್ರತಿಪಾದ್ಯ ಮತ್ತು ಪ್ರತಿಪಾದಕಗಳಿಗಿರುವ ಸಂಬಂಧ ಯಾವುದು ಹಾಗೂ ಅಧ್ಯಯನದಿಂದುಂಟಾಗುವ ಪ್ರಯೋಜನಗಳಾವುವು ಎಂಬ ಪ್ರಶ್ನೆಗಳಿಗೆ ಉತ್ತರವನ್ನು ವಿವರಿಸಿ ಹೇಳುವ ಭಾಷ್ಯೋಪಕ್ರಮ ಭಾಗವನ್ನು ಸಂಬಂಧಭಾಷ್ಯ ಎಂದು ಹೇಳುತ್ತಾರೆ. ಆಭಾಷಭಾಷ್ಯ ಎಂದೂ ಪ್ರಸ್ತಾವನಾಭಾಷ್ಯ ಎಂದೂ ಅದನ್ನು ಕರೆಯುತ್ತಾರೆ. ಎಂದು ನಾವು ಈಗ ಕರೆಯುತ್ತೇವೆ. (ಸುಕುಮಾರ್ ಅಟಿಕ್ಕೋಡ್ ೨೦೦೫ ತತ್ವಮಸಿ ಪುಟ ೧೬)ಇದು ವಾಸ್ತವವಾಗಿ ಒಂದು ವರ್ಗಕ್ಕೆ ಮಾತ್ರ ಮೀಸಲಾಗಿತ್ತು. ಯಾಕೆಂದರೆ ಉಪನಿಷತ್ತು ಅನ್ವಯಿಸಿಕೊಂಡ ವಿಷಯವು ವೇದಾಂತಕ್ಕೆ ಸಂಬಂಧ ಪಟ್ಟದ್ದರಿಂದ ಎಲ್ಲರಿಗೂ ಅರ್ಥವಾಗುವುದು ಸುಲಭವಾಗಿರಲಿಲ್ಲ.

ಉಪನಿಷತ್ತು

'ಯಾವ ಋಷಿಗಳ ಹೆಸರಿನಿಂದ ಆಯಾ ಮಂತ್ರಗಳಿರುವವೋ ಅವರು ಈ ಸ್ಫೂರ್ತಿಯ ಕೈಯಲ್ಲಿ ನಿಮಿತ್ತಮಾತ್ರರಾಗಿದ್ದರು. ಪರಮಾತ್ಮನ ಸೃಷ್ಟಿಲೀಲೆಯಲ್ಲಿ ಋಷಿಗಳು ಕೇವಲ ನಿಮಿತ್ತವಾದದಂಥ ಹೊಸ ಹೊಸ ಬಗೆಯ ನಿಮಿತ್ತವಾದವನ್ನೆ ಪ್ರತಿಪಾದಿಸುವವು. ತನ್ನ ತಪಃಪ್ರಭಾವದಿಂದಲೂ ದೇವ ಪ್ರಸಾದದಿಂದಲೂ ಶ್ವೇತಾಶ್ವತರೋಪನಿಷತ್ತು ತನಗೆ ಪ್ರಾಪ್ತವಾಯಿತೆಂದು ಅದೇ ಹೆಸರಿನ ಮುನಿಯು ಹೇಳುವನು ತ್ರಿಶಂಕುವು (ತೈ, ಏಲ್ಲಿ 1 ಅನುವಾದ 10) 'ವೇದಾನು ವಚನ'ವೆಂದು ಹೇಳುವದರ ಅರ್ಥವಾದರೂ ಸಾಕ್ಷಾತ್ಕಾರವಾದ ಮೇಲೆ ಹೇಳಿದ ವಚನವು ಅಥವಾ ಸಾಕ್ಷಾತ್ಕಾರಕ್ಕನಸರಿಸಿ ನುಡಿದ ವಚನವೆಂದೇ ಇರುವುದು ನಾವು 'ಶೃತಿಗೆ' ಹೇಳಿದ ಅರ್ಥವನ್ನೇ ಈ ಮೇಲಿನ ಉದಾಹರಣೆಗಳು ಬೆಂಬಲಿಸುತ್ತಿವೆ. ಶೃತಿಗಳನ್ನು ಮಾನವರು ಪುರಸ್ಕರಿಸದಿದ್ದರೂ ಅವುಗಳನ್ನು ಪರಂಪರೆಯಿಂದ ಪ್ರಚಾರಗೊಳಿಸಿದರೆಂಬ ಬಗ್ಗೆ ಇನ್ನೊಂದು ಬಗೆಯ ಉಲ್ಲೇಖವು ಈತ ಮತ್ತು ಕೇಣ ಉಪನಿಷತ್ತುಗಳಲ್ಲಿ (ಈನ, ಮಂತ್ರ 10 ಕೇನ ಖಂ1, ಮಂ 2) ಇದನ್ನು ನಾವು ಪ್ರಾಚೀನ ದೀರರಿಂದ ಕೇಳಿದೆವು, ಎಂಬ ಮುಂತಾದ ವಾಕ್ಯಗಳಲ್ಲಿ ಬಂದಿರುವುದು. (ಛಾಂದ್ಯೋಗ್ಯದಲ್ಲಿ ಛಾಂ, ಅ6, ಖಂ 4, ಮಂ 5) ಬೇರೆ ಬಗೆಯಿಂದ ಅರಿಯಲಶಕ್ಯವಾದ ಅತ್ಮ ಜ್ಞಾನವು ಈ ಗುರುಗಳ ದೇಹಪಾತದ ತರುವಾಯ ತಮಗೆ ದೊರೆಯದು, ಎಂಬ ಭಯದಿಂದ ಋಷಿಗಳು ಅವರಡಿಯಲ್ಲಿ ಕಲಿಯುತ್ತಿದ್ದರು' ಎಂದು ಉಲ್ಲೇಖವಿರುವದು. ಬೃಹದಾರಣ್ಯಕದಲ್ಲಿ ಒಂದು ವಿಲಕ್ಷಣ ರೀತಿಯಿಂದ 'ಶೃತಿ'ಗಳ ಉತ್ಪತ್ತಿಯನ್ನು ಹೇಳುರುವರು. (ಬೃ, ಅ 1, ಬ್ರ 2, ಮಂ 4–5) ಮೃತ್ಯುವು ತಾನೇ ವಾಣಿಯೆಂಬ ಸ್ತ್ರೀಯನ್ನು ಹುಟ್ಟಿಸಿ ಆಕೆಯನ್ನೊಡಗೂಡಿ ಋಕ್ ಸಾಮ ಯಜುರ್ವೇದಗಳನ್ನು ಅವುಗಳ ಜೊತೆಗೆ ದನಕರು ಮನುಷ್ಯ ಮುಂತಾದವರನ್ನು ಹುಟ್ಟಿಸಿದನೆಂದು ಈ ಉಪನಿಷತ್ತಿನಲ್ಲಿ ಹೇಳಿದೆ. ತಾತ್ವಿಕ ದೃಷ್ಟಿಯಿಂದ ನೋಡಿದರೆ ಇದೇನೋ ತೀರ ಒಂದು ಒಗಡಿನಂತೆ ವಿಲಕ್ಷಣವಾಗಿ ಕಾಣುವದು. ಆದರೆ ಇದೊಂದು ಕೆಲವು ಉಪನಿಷತ್ತುಗಳಲ್ಲಿ ವಿಶೇಷತೆ; ಬ್ರಾಹ್ಮಣ ಗ್ರಂಥಗಳಲ್ಲಿ ರೂಢವಾಗಿದ್ದ ದಂತಕಥೆಯ ಅವಶೇಷರೂಪವಾದ ಮಾದರಿಯ ಕಥೆಯಿರುವದೆಂದು ಹೇಳಬಹುದು. ಒಟ್ಟಾರೆ ನೋಡಲಾಗಿ ಶೃತಿಗಳೆಂದರೆ ಮನುಷ್ಯನ ಮನೋಭೂಮಿಕೆಯಲ್ಲಿ ಅವತರಿಸಿದ ದೈವೀ ಸ್ಫೂರ್ತಿಯ ಶಬ್ದಮಯವಾದ ವ್ಯಕ್ತಸ್ವರೂಪವೆಂದೇ ಉಪನಿಷತ್ತುಗಳು ಭಾವಿಸುವವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ." (ರಂ.ದಿವಾಕರ್)

"ಉಪ+ನಿ+ಸದ್ = ಉಪನಿಷದ್ – ಇಲ್ಲಿ ಸದ್ ಧಾತುವಿನೊಡನೆ ಶೂನ್ಯ ಪ್ರತ್ಯಯವಾದ ಕ್ವಿಪ್ ಸೇರಿದಾಗ ಅದರ ರೂಪ ಸದ್ ಆಗಿಯೇ ನಿಲ್ಲುತ್ತದೆ. ಸದ್ ಮುಂತಾದ ಕೆಲವು ಧಾತುಗಳೊಡನೆ ಉಪಪದ ಇಲ್ಲವೆ ಉಪಸರ್ಗ ಸೇರಿರುವಾಗ

ಕ್ವಿಪ್ ಎಂಬ ಪ್ರತ್ಯಯ ಸೇರುತ್ತದೆ. ಎಂದು ಪಾಣಿನಿಯ ನಿಯಮ. ("ಸದ್ ಸೂದ್ ವಿಷ – ರಾಜಾಮುಪಸರ್ಗೇಪಿ ಕ್ವಿಪ್"– ೩, ೨, ೬೧) ಸ ಕಾರವು ಷ ಕಾರವಾಗುವುದು. ಸಂಧಿನಿಯಮಕ್ಕನುಸಾರವಾಗಿ. ಸದ್ ಧಾತುವಿನ ಮುಂದೆ ಇ ಕಾರಾದಿ ಸ್ವರಗಳಲ್ಲಿ ಅಂತ್ಯವಾಗುವ ನಿ, ಪರಿ ಮೊದಲಾದ ಉಪಸರ್ಗಗಳು ಸೇರುವಾಗ ('ಪ್ರತಿ' ಎಂಬ ಉಪಸರ್ಗ ಇದಕ್ಕೆ ಅಪವಾದ) ಸ ಕಾರಕ್ಕೆ ಷ ಕಾರ ಆದೇಶವಾಗಿ ಬರುತ್ತದೆ. ("ಸದಿರ ಪ್ರತೇಃ" ಎಂದು ಅಷ್ಟಾಧ್ಯಾಯೀ – ೮.೩.೬೬)." (ಸುಕುಮಾರ್ ಅಟಿಕ್ಕೋಡ್ ೨೦೦೫ ತತ್ವಮಸಿ ಪುಟ ೧೬)

ಉಪನಿಷತ್ತುಗಳ ವರ್ಗೀಕರಣ

ಡ್ರಾಯ್‌ಸ್ಸನ್ ಒಂದು ವಿಭಜನೆಯನ್ನು ಈ ರೀತಿ ಮಾಡಿದ್ದಾರೆ:

೧. ಪ್ರಾಚೀನ ಗದ್ಯೋಪನಿಷತ್ತುಗಳು: ಬೃಹದಾರಣ್ಯಕ, ಛಾಂದೋಗ್ಯ, ತೈತ್ತಿರೀಯ, ಐತರೇಯ, ಕೌಷೀತಕೀ, ಕೇನ

   (ಇವುಗಳಿಗೆ ಬ್ರಾಹ್ಮಣಗಳಲ್ಲಿ ಇರುವ ಗದ್ಯದೊಡನೆ ಇರುವ ಸಾಮ್ಯ ಸ್ಪಷ್ಟವಾಗಿದೆ. ಬುದ್ಧ ಹಾಗೂ ಪಾಣಿನಿಗೂ ಮೊದಲು)

೨. ಪದ್ಯೋಪನಿಷತ್ತುಗಳು: ಕಠ, ಈಶ, ಶ್ವೇತಾಶ್ವತರ, ಮುಂಡಕ (ಮೇಲಿನ ಉಪನಿಷತ್ತುಗಳಿಗಿರುವಷ್ಟು

   ಪ್ರಾಚೀನತೆಯಿಲ್ಲದಿದ್ದರೂ ಬುದ್ಧನಿಗಿಂತಲೂ ಮೊದಲಿನವು)

೩. ಅರ್ವಾಚೀನ ಗದ್ಯೋಪನಿಷತ್ತುಗಳು: ಪ್ರಶ್ನ, ಮೈತ್ರಿ (ಮೈತ್ರಾಯಣಿ), ಮಾಂಡೂಕ್ಯ(ಅನಂತರ ಕಾಲದ ಗದ್ಯಛಾಯೆಯಲ್ಲಿ ಬರೆದವುಗಳು.)

೪. ಉಳಿದ ಉಪನಿಷತ್ತುಗಳು (ವೇದ ಸಂಬಂಧವಿಲ್ಲದೆ ಪೂರ್ವೋಪನಿಷತ್ತುಗಳ ಛಾಯೆಯಲ್ಲಿ ಅನಂತರದ ಕಾಲದಲ್ಲಿ ರಚಿತವಾದವುಗಳು.) (ಸುಕುಮಾರ್ ಅಟಿಕ್ಕೋಡ್ ೨೦೦೫ ತತ್ವಮಸಿ ಪುಟ ೪೪)'

ಉಪನಿಷತ್ತುಗಳು ಬೇರೆ ಬೇರೆ ಕಾಲಘಟ್ಟಕ್ಕೆ ಸಂಬಂಧ ಪಟ್ಟದ್ದರಿಂದ ಇವುಗಳು ಸೂಚಿಸುವ ಅರ್ಥವ್ಯಾಪ್ತಿಯೂ ಭಿನ್ನವಾಯಿತು.

ಉಪನಿಷತ್ತುಗಳೂ ಬ್ರಾಹ್ಮಣ ಗ್ರಂಥಗಳು

"ಇನ್ನು ಬ್ರಾಹ್ಮಣಗಳು ರಚಿಸಲ್ಪಡುವ ಕಾಲಕ್ಕೆ ನಾವು ಬಂದರೆ ಯಜ್ಞವಿಧಿ ವಿಧಾನಗಳ ಕಾಲಕ್ಕೆ ಬಂದಂತಾಗುವದು. ಅರ್ಥವಣವೇದದಲ್ಲಿಯ ಮುಖ್ಯ ವಿಷಯವು ಮಂತ್ರತಂತ್ರಗಳೇ ಇರುವಂತೆ ಯಜ್ಞವೇ ಬ್ರಾಹ್ಮಣ ಗ್ರಂಥಗಳ ಪಲ್ಲವಿಯಾಗಿದೆ, ಋಗ್ವೇದ ಸೂತ್ರಗಳಲ್ಲಿ ಕಂಡು ಬರುವ ಆ ನಿರ್ಮಲ ಭಾವವು ಬ್ರಾಹ್ಮಣ ಕಾಲದಲ್ಲಿ ಅದೆಯ ಮಲಿನವಾಯಿತೆಂಬುದು ತಿಳಿಯದ ಮಾತು. ಬ್ರಾಹ್ಮಣಗ್ರಂಥಗಳು,

ಅರ್ಥವಿಹೀನ ವಿಧಿವಿಧಾನಗಳ ಮೊಟ್ಟೆಯನ್ನು ಶುದ್ಧ ವೇದಸೂಕ್ತಗಳ ಮೇಲೆ ಹೇರಿ, ಯಜಮಾನವನ ಗೌರವವಹೀನ ಜೀವನಕ್ರಮವನ್ನು ಎತ್ತಿ ಹಿಡಿಯಲಿಕ್ಕೆ ವೇದ ಮಂತ್ರಗಳು ಪ್ರತ್ಯಕ್ಷ ಉಪಯುಕ್ತವಿರುವೆಂದು ತೋರಿಸುವ ಭಾರದಲ್ಲಿ ಬ್ರಾಹ್ಮಣಗ್ರಂಥಗಳು ದಂತಕಥೆ ವೇದ ವ್ಯಾಖ್ಯಾನ, ವ್ಯಾತ್ಪತ್ತಿಶಾಸ್ತ್ರ, ತತ್ವಶಾಸ್ತ್ರಗಳಲ್ಲಿಯ ಕಲ್ಪನೆ ಮುಂತಾದವುಗಳನ್ನು ಕಲೆಸಿ ಬಿಡುವುದನ್ನು ನೋಡಿದರೆ ಚಮ್ಕೂರವನಿಸುವುದು, ನಾನಾಬಗೆಯ ಯಜ್ಞ ವಿಧಿಗಳನ್ನು ಕಲ್ಪಿಸಲಿಕ್ಕೆ ಇಷ್ಟೊಂದು ಬುದ್ದಸಾಮರ್ಥ್ಯವನ್ನು ವೆಚ್ಚ ಮಾಡಿರುವದನ್ನು ನೋಡಿದರೆ ಬ್ರಾಹ್ಮಣಕಾಲದ ಜನರ ಬಗ್ಗೆ ಕನಿಕರ ಉಂಟಾಗುವುದು ಇದನ್ನು ನೆನೆಸಿಕೊಂಡರೆ ಮಧ್ಯಯುಗದಲ್ಲಿ ಕ್ರಿಸ್ತೀ ಸಿದ್ಧಾಂತದ ಅರ್ಥಮಾಡುವ ಅನೇಕ ಶುಷ್ಕ ಪದ್ಧತಿಗಳ ತೊಡಕು ಗೊಂದಲವೂ ಕಣ್ಣು ಮುಂದೆ ಕಟ್ಟುತ್ತದೆ. ಇನ್ನು ಇತ್ತ ಉಪನಿಷತ್ತುಗಳನ್ನು ನೋಡಿದರೆ ಅತ್ತಿತ್ತ ಕಾಣುವ ಕೆಲ ಅಪವಾದಗಳನ್ನು ಬಿಟ್ಟುಕೊಟ್ಟರೆ ಎಲ್ಲ ಉಪನಿಷತ್ತುಗಳು ಯಜ್ಞವಿಧಿಯ ಪೂರ್ಣ ನಿಷಧೇವನ್ನೇ ಮಾಡುತ್ತಿರುವವು. ನಿರಸವೂ ರುಕ್ಷವೂ ಆದ ವಿಧಿ ಶಾಸ್ತ್ರವನ್ನು ಪ್ರತಿಪಾದಿಸುವ ಬ್ರಾಹ್ಮಣವಾಙ್ಞಯದ ಪ್ರತಿ ಕ್ರಿಯಾರೂಪವಾಗಿರುವ ತತ್ವ ವಿಚಾರವೇ ಪ್ರಧಾನವಾದ ಉಪನಿಷತ್ತುಗಳಲ್ಲಿ ಯಜ್ಞವಿಧಿಯ ಮಹತ್ವವನ್ನೂ ಸಂದಿಗ್ಧವಾಗಿ ಹೇಳುವ ಕೆಲ ಮಂತ್ರಗಳು ಮಾತ್ರ ಮುಂಡಕೋಪನಿಷತ್ತಿನಲ್ಲಿ ಬಂದಿವೆ. ಮುಂಡಕದಲ್ಲಿ ಒಂದೆಡೆಗೆ (ಮುಂ1, ಖಂ.2,ಮು1) 'ನಮ್ಮ ಪ್ರಾಚೀನರು ಹೇಳಿಕೊಟ್ಟಿರುವ ಯಜ್ಞಯಾಗಾದಿ ವಿಧಿಗಳನ್ನು ಆಷರಿಸುವುದೊಂದೇ ಮುಕ್ತಿಮಾರ್ಗವು' ಎಂದು ಹೇಳಿದ್ದರೂ ಇನ್ನೊಂದೆಡೆಯಲ್ಲಿ (ಮುಂ1, ಖು2, ಮು2–11) 'ಯಜ್ಞಯಾಗಾದಿಗಳು ಪರಿಸರ ಸಾಗರದಲ್ಲಿ ತೇಲಾಡುತ್ತಿರುವ ಅಸ್ಥಿರ ಡೋಣಿಗಳಂತಿರುವದರಿಂದ ಅವು ಮನುಷ್ಯನನ್ನು ಬೇಕಾದಾಗ ಸಮುದ್ರದ ತಳಕ್ಕೆ ಒಯ್ಯಬಹುದು. ಯಜ್ಞಯಾಗಗಳೇ ಮನುಷ್ಯನ ಹೆಚ್ಚಿನ ಪುರುಷಾರ್ಥವೆಂದು ತಿಳಿಯುವವರು ಮುಪ್ಪು ಸಾವುಗಳ ಚಕ್ರದಲ್ಲಿ ಸಿಕ್ಕು ಒದ್ದಾಡುವರು. ಸ್ವಯಂವನ್ನು ವಂಚಿತರಾದ ಇಂಥ ಜನರು ಅಜ್ಞಾನಾಂಧಕಾರದಲ್ಲಿ ಬಳಲುತ್ತಾ ಕುರುಡರನ್ನು ಕುರುಡರು ಹಿಂಬಾಲಿಸುವಂತೆ ಹುಟ್ಟು ಸಾವುಗಳು ಚಕ್ರದಲ್ಲಿ ಸುತ್ತಾಡುವರು. ಅಜ್ಞಾನದಲ್ಲಿ ಮುಳುಗಿದ್ದರೂ ನಾವು ಕೃತಕೃತ್ಯರೆಂದು ಅವರು ತಿಳಿಯುವರು. ಆಶಾಬದ್ಧರಾದ ಅವರು ಕೆಲದಿನ ಸ್ವರ್ಗಭೋಗಗಳನ್ನು ಪಡೆದು ಪುಣ್ಯಕ್ಷಯವಾದ ಕೂಡಲೇ ಮತ್ತೆ ಮೃತ್ಯುಲೋಕಕ್ಕೆ ಬರುವರು. ಯಜ್ಞವೊಂದೇ ಜನ್ಮಸಾರ್ಥಕ್ಯದ ಸಾಧನವೆಂದು ಬಗೆಯುವ ಇವರಿಗೆ ಇನ್ನೊಂದು ಸಾಧ್ಯನಾವಿರಬಹುದೆಂದು ಕಲ್ಪನೆಯೂ ಸಹ ಬರುವುದಿಲ್ಲ. ತಮ್ಮ ಪುಣ್ಯಫಲವನ್ನುಂಡು ಸ್ವರ್ಗದಿಂದ ಈ ಲೋಕಕ್ಕೆ ಅಥವಾ ಹೀನತರವಾದ ಲೋಕಕ್ಕೆ ಅವರು ಇಳಿಯುವರು. ಕಾಡಿನಲ್ಲಿ ಭಿಕ್ಷಾವೃತ್ತಿಯಿಂದಿದ್ದು ಶ್ರದ್ಧೆ, ತಪಸ್ಸುಗಳನ್ನು ಬೆಳೆಸಿ ಮನೋಮಯ ಯಜ್ಞದ ಹೊಸ ಸ್ವರೂಪವು ಅದಕ್ಕೆ ಪ್ರಾಪ್ತವಾಯಿತು. ಒಟ್ಟಿನ

ಮೇಲೆ ಬ್ರಾಹ್ಮಣಕಾಲದ ಕರ್ಮಕಾಂಡದ ಬದಲು ಜ್ಞಾನಕಂಡವನ್ನು ಪ್ರಸ್ಥಾಪಿಸಲು ಉಜ್ಜುಗಿಸಿದ ಉಪನಿಷತ್ತು ಕಾಲದಲ್ಲಿ ಕರ್ಮಕಾಂಡದ ಪೊಳ್ಳುತನವನ್ನು ಎಲ್ಲರೂ ಮನಗಂಡಿದ್ದರೆಂದರೆ ಅದು ತಪ್ಪಾಗಲಿಕ್ಕಿಲ್ಲ." (ರಂ ದಿವಾಕರ್ 1850)

ಉಪನಿಷತ್ತು ಮತ್ತು ವೇದ

ಯಾವ ಉಪನಿಷತ್ತನ್ನು ಯಾವ ವೇದದೊಡನೆ ಸೇರಿಸಲಾಗಿದೆ ಎಂಬುದನ್ನು ಬಹುಮಟ್ಟಿಗೆ ಇಲ್ಲಿ

ತೋರಿಸಲಾಗಿದೆ.

೧. ಋಗ್ವೇದ – ಐತರೇಯ, ಕೌಷೀತಕಿ(ಪ್ರಾಚೀನ); ನಾದಬಿಂದು, ನಿರ್ವಾಣ, ಬೃಹ್ವಚ ಮೊದಲಾದವು (ನವ್ಯ)

೨. ಕೃಷ್ಣ ಯಜುರ್ವೇದ – ಕಠ, ತೈತ್ತಿರೀಯ, ಶ್ವೇತಾಶ್ವತರ (ಪ್ರಾಚೀನ); ಕೈವಲ್ಯ ನಾರಾಯಣ, ಅಮೃತಬಿಂದು, ಯೋಗಶಿಖ, ಕಠರುದ್ರ, ವರಾಹ(ನವ್ಯ)

೩. ಶುಕ್ಲ ಯಜುರ್ವೇದ – ಈಶ, ಬೃಹದಾರಣ್ಯಕ (ಪ್ರಾಚೀನ); ಜಾಬಾಲ, ನಿರಾಲಂಬ, ಪೈಂಗಳ, ಮುಕ್ತಿಕ ಮುಂತಾದವು (ನವ್ಯ).

೪. ಸಾಮವೇದ – ಕೇನ, ಛಾಂದೋಗ್ಯ (ಪ್ರಾಚೀನ); ಮೈತ್ರೇಯಿ, ಮೈತ್ರಾಯಣಿ, ವಜ್ರಸೂಚಿ ಮುಂತಾದವು (ನವ್ಯ)

೫. ಅಥರ್ವವೇದ – ಪ್ರಶ್ನ, ಮುಂಡಕ, ಮಾಂಡೂಕ್ಯ (ಪ್ರಾಚೀನ); ಮಹಾನಾರಾಯಣ, ಅಥರ್ವಶಿರಸ್ಸು, ನೃಸಿಂಹಾತಾಪನಿ ಮುಂತಾದವು (ನವ್ಯ) ನವ್ಯೋಪನಿಷತ್ತುಗಳನ್ನು ಅವುಗಳ ಸಿದ್ಧಾಂತ ಸ್ವಭಾವಗಳನ್ನು ಅನುಸರಿಸಿ ಆರು ವಿಭಾಗಗಳನ್ನಾಗಿ ಮಾಡಿ ತೋರಿಸಬಹುದು: ವೇದಾಂತೋಪನಿಷತ್ತು, ಯೋಗೋಪನಿಷತ್ತು, ಸಂನ್ಯಾಸೋಪನಿಷತ್ತು, ವೈಷ್ಣವೋಪನಿಷತ್ತು, ಶೈವೋಪನಿಷತ್ತು, ಶಾಕ್ತೋಪನಿಷತ್ತು, ಈ ವಿಭಜನೆಗಳಿಗೆ ಇಲ್ಲಿ ಉದಾಹರಣೆ ನೀಡಲಾಗಿದೆ.

೧. ವೇದೋಪನಿಷತ್ತು: ವಜ್ರಸೂಚಿ, ಮುಕ್ತಿಕ, ಪೈಂಗಳಂ, ಸುಬಾಲ, ನಿರಾಲಂಬ, ಸರ್ವಸಾರ ಮೊದಲಾದವು.

೨. ಯೋಗೋಪನಿಷತ್ತು: ವರಾಹ, ಯೋಗಶಿಖಾ, ಯೋಗತತ್ವ, ತೇಜೋಬಿಂದು, ಅಮೃತಬಿಂದು, ಕ್ಷುರಿಕ, ಶಾಂಡಿಲ್ಯ, ಹಂಸ ಮೊದಲಾದವು.

೩. ಸಂನ್ಯಾಸೋಪನಿಷತ್ತು: ಜಾಬಾಲ, ಆರುಣೇಯ, ಕಠರುದ್ರ, ಮೈತ್ರೇಯಿ, ಪರಬ್ರಹ್ಮ, ಪರಮಹಂಸ, ಸಂನ್ಯಾಸ ಮುಂತಾದವು.

೪. ವೈಷ್ಣವೋಪನಿಷತ್ತು: ನಾರಾಯಣ, ನೃಸಿಂಹತಾಪನಿ, ರಾಮತಾಪನಿ, ಅವ್ಯಕ್ತ ಮುಂತಾದವು.

೫. ಶೈವೋಪನಿಷತ್ತು: ಅಥರ್ವಶಿರಸ್ಸು, ಅಥರ್ವಶಿಖ, ರುದ್ರಹೃದಯ, ಕೈವಲ್ಯ ಮುಂತಾದವು

೬ ಶಾಕ್ತೋಪನಿಷತ್ತು: ತ್ರಿಪುರ, ಬಹ್ವೃಚ, ಸೌಭಾಗ್ಯಲಕ್ಷ್ಮಿ ಮುಂತಾದವು. (ಸುಕುಮಾರ್ ಅಟಿಕ್ಕೋಡ್ ೨೦೦೫ ತತ್ವಮಸಿ ಪುಟ ೪೪)

ಇವುಗಳು ಬೇರೆ ಬೇರೆ ಪರಂಪರೆಗಳನ್ನು ಸೂಚಿಸುತ್ತವೆ.

ಉಪಶಮ

ಉಪಶಮವೆಂದರೆ ವಾಸ್ತವವಾಗಿ ಭಾವನೆಗಳನ್ನು ಶಮಗೊಳಿಸುವುದು. ಕರ್ಮದ ಉದಯವನ್ನು ಕೆಲ ಸಮಯಕ್ಕಾಗಿ ತಡೆಯುವುದು; ಅದರಿಂದ ಉತ್ಪನ್ನವಾದ ಜೀವದ ಶುದ್ಧಪರಿಣಾಮವೇ ಔಪಶಮಿಕಭಾವವೇ ಉಪಶಮ. ಒಂದು ರೀತಿಯಿಂದ ಇದು ಶಾಂತರಸವನ್ನೂ ಸೂಚಿಸುತ್ತದೆ. ಭಾವದ ನಿರುದ್ವೇಗದ ಸ್ಥಿತಿಯನ್ನು ಶಾಂತವೆಂದು ಕರೆಯುತ್ತಾರೆ.

ಉಪಾಂಶುವಧೆ

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಶತ್ರು ವಿನಾಶಕ್ಕೆ ಔಷಧ ಪ್ರಯೋಗ. ಔಷಧ ಮಂತ್ರಗಳ ಪ್ರಯೋಗ. ಶತ್ರುವು ತನ್ನ ಸೈನ್ಯಾಘಾತಕ್ಕೆ ಮಾಡಿದ ಪ್ರಯೋಗಗಳ ನಿವಾರಣೆ ಕುರಿತು ಬರುತ್ತದೆ. 'ವ್ಯಾಪಾರಿಗಳ ವೇಷಧಾರಿಯು ಸೌಭಾಗ್ಯವತಿಯಾದವಳ ಅಥವಾ ರಾಜ ಮಹಿಷಿಯ ಹತ್ತಿರದ ದಾಸಿಯನ್ನು ಕಾಮನಿಮಿತ್ತವಾಗಿ ದುಡ್ಡು ಸುರಿದು ಕಳಿಸಿಕೊಡಬೇಕು. ಆ ವ್ಯಾಪಾರಿ ವೇಷದವನ ಪರಿಚಾರಕ ವೇಷದಲ್ಲಿರುವವನಿಂದ ಪ್ರೇರಿತನಾಗಿ ಸಿದ್ಧವೇಷಧಾರಿಯು ವಶೀಕರಣದ ಔಷಧಿಯನ್ನು "ವ್ಯಾಪಾರಿಯ ಶರೀರದಲ್ಲಿ ಇಡಬೇಕು ಎಂದು ಹೇಳಿಕೊಡಬೇಕು. ಅದು ಸಿದ್ಧವಾದ ಮೇಲೆ "ರಾಜಶರೀರದಲ್ಲಿ ಇಡಬೇಕು" ಎಂದು ಹೇಳಿ ಸೌಭಾಗ್ಯ ಶಾಲಿನಿಗೆ ಕೊಡಬೇಕು. ಅನಂತರ ವಿಷದಿಂದ ಮೋಸಗೊಳಿಸಬೇಕು. (ವಿವರಗಳಿಗೆ ನೋಡಿ: ಕೌಟಲೀಯ ಅರ್ಥಶಾಸ್ತ್ರ 2010 ಪುಟ.528)

"ರಹಸ್ಯವಾದ ಮೋಸದ ಕೊಲೆಯಿಂದ ಅಧೀನಪಡಿಸಿಕೊಳ್ಳುವುದು ಉತ್ತಮವಾದ ಮಾರ್ಗ. ಅಲ್ಲದೆ ಭಾಗಕ್ಕೆ ಆಶೆ ಪಡುತ್ತಿರುವವನೂ, ಸ್ವಾಮ್ಯವನ್ನು ಪಡೆಯಲು ಶಕ್ತಿಯುಳ್ಳವನೂ, ರಹಸ್ಯವನ್ನೂ ತಿಳಿದವನೂ ಕಾರ್ಯಶೀಲನಾದನೂ ಅರ್ಧ ರಾಜ್ಯವನ್ನು ಅಪಹರಿಸುವವನೂ ಆದ ಆಳನ್ನು ಯಾವನು ಕೊಲ್ಲುವುದಿಲ್ಲವೋ ಅವನು ತಾನೇ ಹತನಾಗುತ್ತಾನೆ ಎನ್ನುವುದು ಅರ್ಥಶಾಸ್ತ್ರದ ಸಾರವತ್ತಾದ ಭಾಗ ಉಪಾಂಶುವಧೆಯು ನೇರವಾದ ಯುದ್ಧವಲ್ಲ."

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಶತ್ರು ವಿನಾಶಕ್ಕೆ ಔಷಧ ಪ್ರಯೋಗ. ಔಷಧ ಮಂತ್ರಗಳ ಪ್ರಯೋಗ. ಶತ್ರುವು ತನ್ನ ಸೈನ್ಯಾಘಾತಕ್ಕೆ ಮಾಡಿದ ಪ್ರಯೋಗಗಳ ನಿವಾರಣೆ ಕುರಿತು ಬರುತ್ತದೆ.

ವಿವರಗಳಿಗೆ ನೋಡಿ: ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು ೨೦೧೦ ಕೌಟಲೀಯ ಅರ್ಥಶಾಸ್ತ್ರ ಪುಟ. ೫೨೮.

ಉಪಾಖ್ಯಾನ

ಉಪಾಖ್ಯಾನವೆಂದರೆ ಕಾವ್ಯದ ಒಂದು ಬಗೆ. ಮಹಾಕಾವ್ಯ ಒಂದರ ನಡುವೆ ಮಾತಿನ ಸಂದರ್ಭದ ಪೋಷಣೆಗಾಗಿ ಬರುವ ಮತ್ತೊಂದು ಕತೆ. ಈ ಉಪಾಖ್ಯಾನವೇ ಕಾವ್ಯದಲ್ಲಿ ಒಂದು ಪ್ರತಿಮೆಯಾಗಿ ಪರಿವರ್ತನೆ ಹೊಂದಬಹುದು ಅಥವಾ ಅದು ಉಪಕತೆಯೂ ಆಗಬಹುದು. ಉಪ+ಆಖ್ಯಾನದಿಂದ ಉಪಾಖ್ಯಾನ ಬಂದಿದೆ. ಮುಖ್ಯವಾದುದಕ್ಕೆ ಬರುವ ಉಪಸಂಗತಿಗಳು ಉಪಖ್ಯಾನಗಳಾಗಿವೆ. ಇದು ಕಥನದ ಕ್ರಮವಾಗಿದೆ.ಇಲ್ಲಿ ವಡ್ಡರಾಧನೆ ಮತ್ತು ಆದಿಪುರಾಣದ ಕಥನಕ್ರಮವನ್ನು ನಾವು ನೆನಪಿಸಿಕೊಳ್ಳಬಹುದು.

ವಿವರಗಳಿಗೆ ನೋಡಿ: ಮಲ್ಲೇಪುರಂ.ಜಿ.ವೆಂಕಟೇಶ್ ೨೦೦೦ ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ

ಉಪಾಧ್ಯಾಯ

ಜೈನ ಸಾಹಿತ್ಯದ ಪ್ರಕಾರ ದೀಕ್ಷಾಗುರು ಬೇರೆ. ಅವಧಿಜ್ಞಾನ ಶ್ರುತಬೋಧ ಆಗಮ ತತ್ವಗಳನ್ನು ದೀಕ್ಷಾಗುರು ಬೋಧಿಸಿ ಶಿಷ್ಯನಿಗೆ ದೀಕ್ಷೆಯನ್ನು ನೀಡುತ್ತಾನೆ. ಯಾರು ಜೀವನೋಪಾಯಕ್ಕಾಗಿ ಧನಸ್ವೀಕಾರ ಮಾಡಿ ವೇದದ ಸ್ವಲ್ಪ ಭಾಗವನ್ನು ಅಥವಾ ವೇದಾಂಗವನ್ನು (ಶಾಸ್ತ್ರವನ್ನು) ಕಲಿಸುವರೋ ಅವರು ಉಪಾಧ್ಯಾಯರು.

ಜನಕ (ತಂದೆಯು) ಹೀಗೆ ಮಾಡಬಲ್ಲವನಾದರೆ ಅವನೂ ಗುರುವು. ಆತ ಗರ್ಭಾಧಾನಾದಿ ಸಂಸ್ಕಾರಗಳನ್ನು ಮಾಡಿ ಅನ್ನದಿಂದಲೂ ಪೋಷಿಸುವವನು. ಮೃತಪಿತೃಕನಿಗೆ ಬೇರೊಬ್ಬನು ಹೀಗೆ ಮಾಡಿದರೆ ಅವನೂ ಗುರುವಾಗಲು ವಿರೋಧವಿಲ್ಲ.

ಗುರು, ಆಧ್ಯಾತ್ಮಿಕ ಮಾರ್ಗದರ್ಶಿ, ಪಂಡಿತ, ಯಜಮಾನ, ಎಂಬಂಥ ಅರ್ಥಗಳು ಆಚಾರ್ಯವೆಂಬುದಕ್ಕೆ ಇವೆ. ಆ =Toward, ಚಾರ್=ಹೋಗು. ಆಚಾರ್ಯನಾದವನು ವ್ಯಕ್ತಿಗೆ ಆಧ್ಯಾತ್ಮಿಕತೆಯನ್ನು ಬೋಧಿಸುತ್ತಾನೆ. ಶಾಸ್ತ್ರ – ಆಗಮಗಳನ್ನು ಹೇಳಿಕೊಡುತ್ತಾನೆ. ಸಕಲ ವೇದಾದಿಗಳನ್ನು ಕಲಿಸುತ್ತಾನೆ. ವಾಸ್ತವವಾಗಿ ಆಚಾರಾದಿಗಳನ್ನು ಬೋಧಿಸುವವನ್ನು ಆಚಾರ್ಯನೆಂದು ಕರೆಯುತ್ತಾರೆ. ಅವನು ಗುಣ–ನಡತೆಗಳನ್ನು ತಿದ್ದುತ್ತಾನೆ. ಉಪನಯನಾದಿ ಕರ್ಮಗಳು ಮುಗಿದ ಮೇಲೆ ಶಿಷ್ಯನಿಗೆ ತನ್ನ ವಿದ್ಯೆಯನ್ನು

ಗುರುವು ಧಾರೆಯೆರೆಯುತ್ತಾನೆ. ಇಲ್ಲಿ ಧಾರೆಯೆರೆಯುವುದು ಅಂದರೆ ಎಲ್ಲವನ್ನು ವಿದ್ಯಾರ್ಥಿಗೆ ಬೋಧಿಸುವುದು ಎಂದರ್ಥ.

ಎರಡನೆಯದಾಗಿ ಜೈನಧರ್ಮದಲ್ಲಿ ಆಚಾರ್ಯರು ಜನಸಾಮಾನ್ಯರನ್ನು ಕೂಡಾ ಆಧ್ಯಾತ್ಮಿಕ ದಾರಿಗೆ ಕರೆದೊಯ್ಯುವ ಕೆಲಸವನ್ನು ಮಾಡುತ್ತಿದ್ದರು. ಜಿನತತ್ವಗಳನ್ನು ಬೋಧಿಸಿಕೊಂಡು ಸಮಾಜಕ್ಕೆ ಸನ್ನಡತೆಯನ್ನು ಹೇಳಿಕೊಡುತ್ತಿದ್ದರು. ಉದಾಹರಣೆಗೆ: ಜಿನಸೇನಾಚಾರ್ಯರು.

ರತ್ನತ್ರಯ ಧರ್ಮಯುಕ್ತರಾಗಿ ನಿಜಶುದ್ಧಾತ್ಮಾನುಭವಾನಂದದಲ್ಲಿರುವ ಕಾಲವನ್ನು ಬಿಟ್ಟು ಉಳಿದ ಕಾಲದಲ್ಲಿ ಭವ್ಯಪ್ರಾಣಿಗಳಿಗೆ ಧರ್ಮವನ್ನುಪದೇಶಿಸುತ್ತ ಮತಿ-ಶ್ರುತ-ಅವಧಿ- ಮನಃಪರ್ಯಾಯಗಳೆಂಬ ಜ್ಞಾನ ಚತುಷ್ಕಸಮನ್ವಿತರಾಗಿ ನಿರತೀಚಾರ ವ್ರತಶೀಲ ಸಂಪನ್ನರೂ, ಮೃದುಮಧುರ ವಚನವುಳ್ಳವರೂ, ಪರಾನುಗ್ರಹನಿರತರೂ, ಪ್ರಮಾದರಹಿತರೂ, ಏಕಾದಶಾಂಗ, ಚತುರ್ದಶಪೂರ್ವಗಳೆಂಬ (25) ಶಾಸ್ತ್ರಗಳ ಜ್ಞಾನದಿಂದ ಸಂಪನ್ನರೂ ಆದ ಮುನಿಶ್ರೇಷ್ಠರು ಉಪಾಧ್ಯಾಯರೆನಿಸುವರು. ಆಚಾರ್ಯ; ಗುರು; ಓಜ; ಇವೆಲ್ಲವೂಗಳಿಗೆ ಸೂಕ್ಷ್ಮ ವ್ಯತ್ಯಾಸಗಳಿವೆ. ವಸಿಷ್ಠನು ರಾಜಗುರು. ವಿಶ್ವಾಮಿತ್ರಾ ರಾಜಗುರು ಆಗಿರಲಿಲ್ಲ. ಅನಂತರವಾದ ಯಾರು ಸತತ ಅಧ್ಯಯನ ಶೀಲರಾಗಿರುತ್ತಾರೋ ಅವರು ಉಪಾಧ್ಯಾಯರು. ಯಾರು ಚರಿಸುತ್ತಿರೋ ಅವರು ಆಚಾರ್ಯರು; ಯಾರು ಪಾಂಡಿತ್ಯವನ್ನು ಪಡೆದಿರುತ್ತಾರೋ ಅವರು ಗುರುಗಳು.

ವೇದ ವಿಹಿತ ಕರ್ಮಗಳನ್ನು ಮಾಡುವವನು ಗುರುವು. ವೇದವನ್ನು ಕಲಿಸುವವನು ಆಚಾರ್ಯನೆನಿಸಿಕೊಳ್ಳುವನು. ಎಂದು ಯಾಜ್ಞವಲ್ಕ್ಯಸ್ಮೃತಿಯಲ್ಲಿ ಬರುತ್ತದೆ. ಇಲ್ಲಿ ಗುರು ಆಚಾರ್ಯರಿಗೆ ಬೇಧವಿದೆ.

ಆಚಾರ್ಯರಿಗೆ ಧರ್ಮದಲ್ಲಿ ಶಾಸನಾಧಿಕಾರವಿರುವುದು. ಅವರು ಬೇರೆ ಮುನಿಗಳನ್ನು ತಮ್ಮ ಸಂಘಕ್ಕೆ ಸೇರಿಸಿಕೊಳ್ಳುವರು; ಅವರಿಗೆ ದೀಕ್ಷೆಯನ್ನು ಕೊಡುವರು. ಅಪರಾಧವು ಘಟಿಸಿದರೆ ದಂಡವನ್ನು ಕಟ್ಟುವರು; ಇಲ್ಲವೆ ಸಂಘದಿಂದ ಹೊರಪಡಿಸುವರು. ಆಚಾರ್ಯರಿಗೆ 36 ಗುಣಗಳು ಹೇಳಲ್ಪಟ್ಟವೆ. ಅವು:- ದ್ವಾದಶವಿಧ ತಪಸ್ಸುಗಳು (12) ಗುಪ್ತಿತ್ರಯ (3) ದಶವಿಧ ಧರ್ಮಗಳು (10) ಪಂಚಾಚಾರಗಳು (5) ಷಡಾವಶ್ಯಕಗಳು (6) ದ್ವಾದಶವಿಧ ತಪಸ್ಸುಗಳು:

1) ಅನಶನ ಇಲ್ಲವೆ ಉಪವಾಸ. 2 ಉನೋದರತೆ- ಹಸಿವೆಗಿಂತ ಕಡಿಮೆ ಊಟಮಾಡುವುದು. 3. ವೃತ್ತಿ ಪರಿಸಂಖ್ಯಾನ ಊಟಕ್ಕೋಸ್ಕರ ಹೋಗುವ ಮನೆಗಳ ನಿಯಮ ಮೊದಲಾದುವನ್ನು ಮಾಡಿಕೊಳ್ಳುವುದು. 4. ರಸ ಪರಿತ್ಯಾಗ-ಆರೂ ರಸಗಳನ್ನು ಇಲ್ಲವೆ ಒಂದೆರಡನ್ನು ಬಿಡುವುದು. 5. ವಿವಿಕ್ತ ಶಯ್ಯಾಸನ- ಏಕಾಂತಸ್ಥಾನದಲ್ಲಿ ಇರುವುದು, ಮತ್ತು ಮಲಗುವುದು. 6. ಕಾಯಕ್ಲೇಶ- ಶರೀರಕ್ಕೆ ಕಷ್ಟಕೊಡುವುದು.

7. ಪ್ರಾಯಶ್ಚಿತ್ತ–ದೋಷಕ್ಕಾಗಿ ದಂಡ ಕೊಡುವುದು. 8. ವಿನಯ– ರತ್ನತ್ರಯಕ್ಕೂ, ಅದನ್ನು ಧರಿಸುವವರಿಗೂ ವಿನಯ ತೋರಿಸುವುದು. 9.ವೈಯಾವೃತ್ತ್ಯ– ಪಾದಸಂವಾಹನ ಮೊದಲಾದುವುಗಳಿಂದ ಗುರುಗಳನ್ನೂ, ಮುನಿಗಳನ್ನೂ ಸೇವಿಸುವದು. 10.ಸ್ವಾಧ್ಯಾಯ–ಶಾಸ್ತ್ರಗಳನ್ನು ಓದುವುದು. 11. ವ್ಯುತ್ಸರ್ಗ– ಶರೀರದ ಮೇಲಿನ ಮಮತೆಯನ್ನು ಕಡಿಮೆ ಮಾಡಿಕೊಳ್ಳುವುದು. 12. ಧ್ಯಾನ ಮಾಡುತ್ತಿರುವುದು.

ಷಡಾವಶ್ಯಕಗಳು:– ಪಂಚಾಚಾರಗಳು:

1.ಸಮತ್ವ– ಎಲ್ಲ ಜೀವಗಳಲ್ಲಿ ಸಮತ್ವಭಾವನೆ; 1.ವಂದನೆ– ಪೂಜ್ಯರನ್ನು ನಮಸ್ಕರಿಸುವುದು; 2.ಸ್ತವ– ಪರಮೇಷ್ಠಿಗಳ ಸ್ತುತಿ 3.ಪ್ರತಿಕ್ರಮಣ–ಹತ್ತಿದ ದೋಷಗಳಿಗಾಗಿ ಪಶ್ಚಾತ್ತಾಪ; 4.ಪ್ರತ್ಯಾಖ್ಯಾನ – ಮುಂದೆ ಇಂಥ ಪಾಪ ಕರ್ಮಗಳನ್ನು ಮಾಡುವುದಿಲ್ಲೆಂದು ಪ್ರತಿಜ್ಞೆ ಮಾಡುವುದು. 5.ಕಾಯೋತ್ಸರ್ಗ– ಶರೀರದ ಮೇಲಿನ ಮಮತ್ವವನ್ನು ಬಿಟ್ಟು ಧ್ಯಾನ ಮಾಡುವುದು.

ಪಂಚಾಚಾರಗಳು ಈ ಕೆಳಗಿನಂತಿವೆ : 1. ದರ್ಶನಾಚಾರ, 2. ಜ್ಞಾನಾಚಾರ, 3. ಚಾರಿತ್ರಾಚಾರ, 4. ತಪ ಆಚಾರ, 5. ವೀರ್ಯಾಚಾರ ಇವುಗಳ ಪೈಕಿ,

1. ಸರ್ವಜ್ಞರಾದ ತೀರ್ಥಂಕರರು ಹೇಳಿದ ಜೀವಾದಿ ತತ್ವಗಳಲ್ಲಿ ಶ್ರದ್ಧೆಯಿಡುವದು ದರ್ಶನಾಚಾರವು.
2. ನಿರ್ಬಾಧವಾದ ಆಗಮವನ್ನೂ ಸ್ವಪರತತ್ವಗಳನ್ನೂ ಆತ್ಮಾನುಭವದಿಂದ ತಿಳಿಯುವುದು ಜ್ಞಾನಾಚಾರವು.
3. ಸಾಮಾಯಿಕ, ಛೇದೋಪಸ್ಥಾನ, ಪರಿಹಾರವಿಶುದ್ಧಿ, ಸೂಕ್ಷ್ಮಸಾಂಪರಾಯ, ಯಥಾಖ್ಯಾತ ಚರಿತ್ರಗಳನ್ನು ಆಚರಿಸುವುದು ಚಾರಿತ್ರಾಚಾರವು.
4. ದ್ವಾದಶತಪಗಳನ್ನು ಪಾಲಿಸುವುದು ತಪ ಆಚಾರವು.
5. ಪರೀಷಹಾದಿಗಳು ಪ್ರಾಪ್ತವಾದಾಗ ತಮ್ಮ ಶಕ್ತಿಯನ್ನು ಕುಂದಿಸದೆ ಧೈರ್ಯದಿಂದ ಪ್ರವರ್ತಿಸುವುದು ವೀರ್ಯಾಚಾರವು.

ವಿವರಗಳಿಗೆ ನೋಡಿ: ಮಹದೇವ ಪ್ರಭಾಕರ ಪೂಜಾರ ೧೯೭೬ ಜೈನಧರ್ಮದ ಪರಿಭಾಷೆ ಪುಟ. ೧೧೧–೧೧೧೨

ದಿ. ನಾಗೇಶ ರಂಗೋ ಕುಲಕರ್ಣಿ ೨೦೦೭ ಯಾಜ್ಞವಲ್ಕ್ಯ ಸ್ಮೃತಿಃ ಬ್ರಹ್ಮಚಾರಿ ಪ್ರಕರಣ – ೩೪

ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೨–೧೪೧; ೧೪೨.

ಉಪಾಸಕವ್ರತ

ಜೈನ ಗೃಹಸ್ಥನ ಹನ್ನೆರಡು ವ್ರತಗಳು. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಈ ಐದು ಅಣು ವ್ರತಗಳು: ದಿಗ್ವ್ರತ(ತಾನು ಇಂಥ ದಿಕ್ಕಿಗೆ ಮಾತ್ರ ಹೋಗುವುದೆಂದು ಗೊತ್ತುಪಡಿಸಿಕೊಳ್ಳುವುದು). ದೇಶವ್ರತ(ಇಂಥ ಸ್ಥಳಕ್ಕೆ ಮಾತ್ರ ಹೋಗುವುದೆಂದು ಮೇರೆ ಗೊತ್ತುಪಡಿಸಿಕೊಳ್ಳುವುದು), ದಂಡವಿರತಿ ವ್ರತ (ಕಠಿಣದಂಡನೆ ಮಾಡದಿರುವುದು)– ಈ ಮೂರು ಗುಣವ್ರತಗಳು; ಸಾಮಾಯಿಕ (ಪ್ರತಿದಿನ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಈ ಮೂರು ಹೊತ್ತು ಆತ್ಮಧ್ಯಾನ ಮಾಡುವುದು), ಪ್ರೋಷಧವ್ರತ (ಪಕ್ಷಕ್ಕೊಂದು ಸಲ ಉಪವಾಸ ಮಾಡುವುದು), ಅತಿಥಿ ಸಂಗ್ರಹ (ಅತಿಥಿಗಳಿಗೆ ಆಹಾರ ಕೊಡುವುದು), ಸಲ್ಲೇಖನಾ (ಮರಣಕಾಲದಲ್ಲಿ ಸಂನ್ಯಾಸ ಸ್ವೀಕರಿಸುವುದು; ಉಪವಾಸ ಮಾಡುವುದು–ಈ ನಾಲ್ಕು ಶಿಕ್ಷಾವ್ರತಗಳು. ಉಪಾಸಕ ಎಂದರೆ ಸೇವಕ; ಆಳು, ಪೂಜಿಸುವವ; ಆಧರಿಸುವವ ಧ್ಯಾನಿಸುವ ಎಂಬರ್ಥಗಳಿವೆ.

ಉಪಾಸಕ ಎಂದರೆ ಆರಾಧಕ, ಭಕ್ತ, ಅನುಯಾಯಿ. ಇಲ್ಲಿ ವ್ರತವನ್ನು ಆರಾಧಿಸುವವನು, ಆಧರಿಸುವವನು, ಧ್ಯಾನಿಸುವವನು ಎಂದಿಟ್ಟುಕೊಳ್ಳಬೇಕಾಗುತ್ತದೆ. ಉಪಾಸನೆ ಮತ್ತು ಭಕ್ತಿಯ ಬಗ್ಗೆ ರಣಜಿತ್ ಗುಹಾ ಅವರು ವಿಶೇಷ ಚರ್ಚೆಯನ್ನು ಮಾಡಿದ್ದಾರೆ. ಭಕ್ತ ಒಂದು ಅರ್ಥದಲ್ಲಿ ದಾಸ. ಅವನು ದೇವರನ್ನು ದಾಟುವುದಿಲ್ಲ ಯಜಮಾನನನ್ನು ದಾಸನು ಆರಾಧಿಸುತ್ತಾನೆ. ಅವರ ನಡುವೆ ಕೊಡು–ಕೊಳ್ಳುವಿಕೆಯ ಸಂಬಂಧವಿದೆ.

ವಿವರಗಳಿಗೆ ನೋಡಿ: Ranajit Guha 1998 Dominance without hegemony.

ಉಪಾಸನೆ

ಉಪಾಸನೆ (ಉಪ+ಅಸ್) ಹಾಗೂ ಉಪನಿಷತ್ತು (ಉಪನಿ+ಸದ್) ಕುಳಿತುಕೊಳ್ಳುವುದು ಎಂಬ ಅರ್ಥವಿರುವ ಪದಗಳು, ಬೃಹದಾರಣ್ಯಕ ಭಾಷ್ಯದಲ್ಲಿ (೨, ೪, ೧೦) ಶಂಕರರು ಇದರ ಇಂಗಿತವನ್ನು ಹೇಳುತ್ತಾರೆ. ಉಪಾಸನೆ, ಧ್ಯಾನ, ನಿದಿಧ್ಯಾಸನ, ಇವುಗಳ ಮಧ್ಯೆ ಅಲ್ಪಸ್ವಲ್ಪ ವ್ಯತ್ಯಾಸಗಳಿರುವುದು ನಿಜ. ಶಾಂಡಿಲ್ಯವಿದ್ಯೆ (ಛಾಂದೋ ೩, ೧೪), ದಹರವಿದ್ಯೆ (ಛಾಂದೋ ೮,೧), ಗಾಯತ್ರಿ ವಿದ್ಯೆ (ಛಾಂದೋ ೩, ೧೨; ಬೃಹ ೫, ೧೪). ಮಧುವಿದ್ಯೆ (ಛಾಂದೋ ೩, ೧–೧೧), ಪಂಚಾಗ್ನಿ ವಿದ್ಯೆ (ಛಾಂದೋ ೫, ೩–೧೦; ಬೃಹ ೬.೨) ಮುಂತಾದವು ಮುಖ್ಯವಾದ ಉಪಾಸನೆಗಳು. ಬಾದರಾಯಣ ಸೂತ್ರಗಳಲ್ಲಿ ಅಧ್ಯಾನಕಾಧಿಕರಣದಲ್ಲಿ (೩,೧೪–೧೫), ಶಂಕರರ ಭಾಷ್ಯಗಳಿಗೆ ಸಂಬಂಧಪಟ್ಟ ಭಾಗಗಳಲ್ಲಿ, ಸದಾನಂದನ 'ವೇದಾಂತಸಾರ'ದ (೭, ೧೨–೧೩) ಹಾಗೂ ವಿದ್ಯಾರಣ್ಯರ 'ಪಂಚದಶಿ'ಯ 'ಧ್ಯಾನದೀಪ'ವೆಂಬ ಒಂಭತ್ತನೆಯ

ಅಧ್ಯಾಯದಲ್ಲಿ ಉಪಾಸನೆಯನ್ನು ಕುರಿತು ವಿವರಣೆ ಕಂಡುಬರುತ್ತದೆ. ವಿದ್ಯಾರಣ್ಯರು ಉಪಾಸನೆಯನ್ನು ಕುರಿತಂತೆ ಬಹಳ ಸ್ಪಷ್ಟವಾಗಿ ಹೇಳುತ್ತಾರೆ. ನಿತ್ಯವಾದ ಬ್ರಹ್ಮಜ್ಞಾನ ಬ್ರಹ್ಮವಿಚಾರದಿಂದ ಸಿದ್ಧಿಸುತ್ತದೆ. ಉಪಾಸನೆಯು ಬ್ರಹ್ಮಭಾವನೆ. ಅಖಂಡವಾದ ಬ್ರಹ್ಮಭಾವನೆಯನ್ನು ನಿದ್ರೆಯಲ್ಲಿಯೂ ಪ್ರವಹಿಸುವಂತೆ ಇಟ್ಟುಕೊಳ್ಳಬೇಕು. ಒಬ್ಬ ಸ್ತ್ರೀ ಮನೆಗೆಲಸಗಳ ಮಧ್ಯೆಯೂ ತನ್ನ ಪ್ರಿಯತಮನ ಚಿಂತೆಯಲ್ಲಿ ಹೇಗೆ ಮುಳುಗಿರುತ್ತಾಳೆಯೋ ಹಾಗೆ. (೯, ೭೩-೮೬). (ಸುಕುಮಾರ್ ಅಟಿಕ್ಕೋಡ್ ೨೦೦೫ ತತ್ವಮಸಿ ಪುಟ ೧೬೫)ಎಲ್ಲವೂ ಉಪಾಸನೆಯಲ್ಲ.ಅದು ಅತ್ಯಂತ ವಿಶಿಷ್ಟವಾದ ಕರ್ಮ.

ಊರಳಿವು

"ಊರಳಿವು' ಎಂಬುದನ್ನು ಡಾ. ಎಂ. ಚಿದಾನಂದಮೂರ್ತಿಗಳು ಯುದ್ಧ ಪ್ರಭೇದವೆಂದು ರನ್ನನ 'ಗದಾಯುದ್ಧ'ದ ಪದ್ಯವೊಂದರ ಆಧಾರದ ಮೇಲೆ ಭಾವಿಸುತ್ತಾರೆ. ಈ ಬಗ್ಗೆ ಅವರು ಮುಂದುವರಿದು ಬರೆಯುತ್ತಾ "ಯುದ್ಧ ಪ್ರಭೇದಗಳಲ್ಲಿ ಒಂದೊಂದು ಇನ್ನೊಂದರಿಂದ ಸಂಪೂರ್ಣ ಭಿನ್ನವೆಂದೂ ಎಲ್ಲವನ್ನೂ ಗೆರೆ ಎಳೆದು ಬೇರ್ಪಡಿಸಬಹುದೆಂದೂ ಭಾವಿಸಬಾರದು. ಒಂದರ ಜೊತೆಯಲ್ಲಿ ಇನ್ನೊಂದು ಬೆರೆತಿರಬಹುದು" ಈ ಊರಳಿವು ಎಂಬ ಪದವನ್ನು ರನ್ನನು ಪ್ರಯೋಗಿಸಿರುವ ಒಂದು ಧೋರಣೆಯನ್ನೂ ಸಂದರ್ಭವನ್ನೂ ಗಮನಿಸಿದಾಗ ಊರಳಿವು ಎಂಬುದು ಯುದ್ಧ ಪ್ರಭೇದವೆಂಬ ಅರ್ಥದಲ್ಲಿ ಪ್ರಯೋಗವಾಗಿದೆಯೆಂದು ತೋರುತ್ತದೆ.

ತಮಿಳುನಾಡು ಮತ್ತು ಮೈಸೂರು ಪ್ರಾಂತ್ಯದಲ್ಲಿ ಊರು ಮತ್ತು ಸಭಾ ಆಡಳಿತದ ವಿಕೇಂದ್ರಿಕರಣ ಮಾದರಿಗಳಾಗಿದ್ದವು. ಇವು ಹೆಚ್ಚಿನ ಅಧಿಕಾರವನ್ನು ಪಡೆದುಕೊಂಡಿರುವುದು ಚೋಳ ಮತ್ತು ವಿಜಯನಗರದ ಕಾಲಘಟ್ಟದಲ್ಲಿ ಅಗ್ರಹಾರಗಳು ಕೂಡಾ ಕ್ರಿಯಾಶೀಲವಾದವು. ಕೃಷಿ ಚಟುವಟಿಕೆಯು ಈ ಕಾಲದಲ್ಲಿ ಹೆಚ್ಚು ತೀವ್ರಗೊಂಡವು.

ದಕ್ಷಿಣ ಭಾರತದಲ್ಲಿ ನಾವು ಮೂರು ಬಗೆಯ ಹಳ್ಳಿಗಳನ್ನು ಗುರುತಿಸಬಹುದು; ಅವು ಊರ್ ಅಥವಾ ಊರು, ಸಭಾ ಮತ್ತು ನಗರಂ ಅಥವಾ ನಗರ. ಊರ್ ಎಂಬುದು ಕೃಷಿಕರ ಜಾತಿಗಳ ಜನ ವಾಸ ಮಾಡುತ್ತಿದ್ದ ಸಾಮಾನ್ಯ ಮಾದರಿಯ ಗ್ರಾಮ. ಇಲ್ಲಿ ಬಹುಶಃ ಗ್ರಾಮಸ್ಥರೆಲ್ಲಾ ಸಂಯುಕ್ತವಾಗಿ ಭೂಮಿ ಪಡೆದಿದ್ದು, ಅಲ್ಲಿಯ ಯಜಮಾನನು ಕಂದಾಯವನ್ನು ಸಂಗ್ರಹಿಸಿ, ಜನರ ಪರವಾಗಿ ಸಂದಾಯ ಮಾಡುತ್ತಿದ್ದಿರಬೇಕು. ಮುಖ್ಯವಾಗಿ ತಮಿಳುನಾಡಿನ ದಕ್ಷಿಣ ಭಾಗದಲ್ಲಿ ಈ ಬಗೆಯ ಹಳ್ಳಿಗಳಿದ್ದುವು. ಸಭಾ ಮಾದರಿಯ ಹಳ್ಳಿಗಳು ಬ್ರಾಹ್ಮಣರಿಗೆ ನೀಡಿದ್ದ ಹಳ್ಳಿಗಳು ಅಥವಾ ಬ್ರಹ್ಮದೇಯ ಮತ್ತು ಅಗ್ರಹಾರಗಳು. ಇಲ್ಲಿನ ಬ್ರಾಹ್ಮಣರು ವ್ಯಕ್ತಿಶಃ ಭೂಮಿಯಲ್ಲಿ ಹಕ್ಕು ಪಡೆದಿದ್ದರಾದರೂ ಕೃಷಿ ಕಾರ್ಯಗಳನ್ನು ಒಂದೊಟ್ಟಾಗಿ ನಿರ್ವಹಿಸುತ್ತಿದ್ದರು.

ನಗರಂ ಬಗೆಯ ಗ್ರಾಮಗಳು ಉದ್ಯಮಿಗಳೂ ಹಾಗೂ ವರ್ತಕರ ಒಕ್ಕೂಟಗಳ ಪ್ರಾಬಲ್ಯವಿದ್ದಂತಹವು. ಬಹುಶಃ ವ್ಯಾಪಾರ ಉದ್ಯಮಗಳು ಇಳಿಮುಖವಾಗಿ ವರ್ತಕರು ಹಳ್ಳಿಗಳಿಗೆ ಹೋಗಿ ನೆಲೆಸಿದುದರಿಂದ ಹೀಗಾಗಿರಬಹುದು. ಚಾಲುಕ್ಯರ ರಾಜ್ಯದಲ್ಲಿ ಗ್ರಾಮದ ವ್ಯವಹಾರಗಳನ್ನು ಮಹಾಜನರು ಎಂದು ಕರೆಯಲ್ಪಡುತ್ತಿದ್ದ ಗ್ರಾಮದ ಹಿರಿಯರು ನಿರ್ವಹಿಸುತ್ತಿದ್ದರು. ಒಟ್ಟಿನಲ್ಲಿ ಕ್ರಿ.ಶ. 300 ರಿಂದ 750ರ ಅವಧಿಯು ಗ್ರಾಮಾಂತರದ ವಿಸ್ತರಣೆ, ಗ್ರಾಮಾಂತರ ಜೀವನದ ಸುವ್ಯವಸ್ಥೆ ಮತ್ತು ಕೃಷಿ ಭೂಮಿಯ ಸದುಪಯೋಗ ಮುಂತಾದುವುಗಳಿಗೆ ಉತ್ತಮ ನಿದರ್ಶನವಾಗಿದ್ದು, ಅದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ಒದಗಿವೆ." (ಆರ್.ಎಸ್. ಶರ್ಮ 1997 ಪುಟ. 245)

ಊರ್ ಎಂದರೆ ತೊಡೆ. ಯಾರು ಊರ್‌ನ ಮೂಲಕ ಕೆಲಸ ಮಾಡುತ್ತಾರೋ ಅವರು ಊರವರು ಅಂದರೆ ನೆಲೆ ನಿಂತವರು. ಶಂಬಾ ಜೋಶಿ ಹೀಗೆ ಊಹಿಸುತ್ತಾರೆ: "ಗ್ರಾಮ, ಊರು, ಪುರ ಎಂಬಿವು ನನ್ನ ತಿಳುವಳಿಕೆಯಂತೆ ಅಷ್ಟು ಪುರಾತನವಲ್ಲ. ಗ್ರಾಮ ಮತ್ತು ಪುರ ಎಂಬವು ನಮ್ಮ ನಾಡಿನಲ್ಲಿ ಅಷ್ಟು ವಿಶೇಷವಾಗಿಲ್ಲ. ಅಲ್ಲದೆ ಹಳ್ಳಿಗರ ಬಾಯಿಗೆ ಸರಿಹೋಗುವ ಮಾತುಗಳೂ ಇವಲ್ಲ. ಆದುದರಿಂದ ಇವು ನಮ್ಮ ಮೂಲ ನಾಡವರೇ ಕಟ್ಟಿಕೊಂಡ ಊರುಗಳೆಂದು ಗ್ರಹಿಸಲಿಕ್ಕಾಗುವುದಿಲ್ಲ. 'ಊರು' ಎಂಬುದು ಈಗ ಜನಸಾಮಾನ್ಯರ ಬಾಯಲ್ಲಿರುವುದು ನಿಜ. ಆದರೆ 'ಊರು' ಎಂಬ ಮಾತು ಮಾನವನ ಪ್ರಾಥಮಿಕ ಬಿಡಾರದ ಸೂಚಕವಾಗಿಲ್ಲ. ಊರು, ನಾಡು, ನೆಲೆ ಇವೆಲ್ಲವೂ ಊರಿಕೊಂಡು, ನಟ್ಟುಕೊಂಡು ಸ್ಥಿರವಾಗಿ ನಿಂತಕಾಲದ ನೆಲೆವೀಡುಗಳಿಂದಲೆ ಹೊರಡುತ್ತದೆ.

ಬಾಡ ಮತ್ತು ಊರಿನ ಸಂಬಂಧಾಂತರಗಳು ಹೀಗಿವೆ:

ಇತ್ತೀಚೆಗೆ ಊರು ಎಂಬುದು ಹೆಚ್ಚು ಬಳಕೆಯಲ್ಲಿದ್ದರೂ ಹಿಂದಕ್ಕೆ ಅದು ಅಷ್ಟು ಪ್ರಚಾರದಲ್ಲಿ ಇದ್ದಿಲ್ಲ. 10 ನೆಯ ಶತಮಾನದಲ್ಲಿ ಊರು ಎಂಬರ್ಥದಲ್ಲಿ 'ಬಾಡ' ಶಬ್ದವು ಬಳಕೆಯಲ್ಲಿರಬೇಕು. 'ಬಾಡ' ವೆಂಬುದು ಪಟ್ಟಿಯ ಬಳಗಕ್ಕೆ ಸೇರಿದ ಪದವಾಗಿದೆ. ಪಟ್ಟಿಯು ಎಷ್ಟು ವಿವಿಧ ರೂಪತಾಳಿ ನಮ್ಮ ನಾಡಿನಲ್ಲಿ ನೆಲೆಸಿದೆಯೆಂಬುದನ್ನು ನಿರೀಕ್ಷಿಸಿದರೆ 'ಪಟ್ಟಿ'ಯ ವಿಸ್ತಾರದ ಬಗೆಗೆ ಸಂದೇಹವೆ ಉಳಿಯುವುದಿಲ್ಲ.

ಹಳ್ಳಿ ಮತ್ತು ಊರುಗಳಿಗೂ ಸಂಬಂಧವಿದೆ:

ಏಳನೆಯ ಶತಮಾನದ ಚಾಲುಕ್ಯರ ಒಂದು ಶಾಸನದಿಂದ ಲಾಟದೇಶದಲ್ಲಿ ಅಲ್ಲೂರಕ ಗ್ರಾಮವಿದ್ದುದು ತಿಳಿಯುತ್ತದೆ. 'ಊರು' ಉತ್ತರ ಪದದ ಸ್ಥಲನಾಮ! ಅಲ್ಲ ಹೆಸರಿನದು! ಬಳ್ಳಿಗಾಮೆಯ ಶಾಸನದಲ್ಲಿ ಅಲಂವಳ್ಳಿ, ಅಲವಳ್ಳಿ ಈ ಎರಡೂ ಹೆಸರಿನ ಊರುಗಳು ಬರುತ್ತವೆ. (ಶಂಬಾ 1999)"

ವಿವರಗಳಿಗೆ ನೋಡಿ: Romila Thapar 1975 The Past and Prejudice P. 61

ಆರ್. ಎಸ್. ಶರ್ಮ 2007 ಪ್ರಾಚೀನ ಭಾರತ ಪುಟ. 245
ಶಂಬಾ ಜೋಶಿ 1999 ಸಂಪುಟ. 2, 3, ಸಂಪುಟ. 2 ಪುಟ. 141, ಸಂಪುಟ. 3 ಹಾಲುಮತ ದರ್ಶನ ಪುಟ. 105, ಸಂಪುಟ. 2 ಪುಟ. 139
ಡಾ. ಆರ್. ಶೇಷಶಾಸ್ತ್ರಿ 2004 ಕರ್ನಾಟಕದ ವೀರಗಲ್ಲುಗಳು ಪುಟ. 165

ಊರು

ತಮಿಳುನಾಡು ಮತ್ತು ಮೈಸೂರು ಪ್ರಾಂತ್ಯದಲ್ಲಿ ಊರು ಮತ್ತು ಸಭಾ ಆಡಳಿತದ ವಿಕೇಂದ್ರಿಕರಣ ಮಾದರಿಗಳಾಗಿದ್ದವು. ಇವು ಹೆಚ್ಚಿನ ಅಧಿಕಾರವನ್ನು ಪಡೆದುಕೊಂಡಿರುವುದು ಚೋಳ ಮತ್ತು ವಿಜಯನಗರದ ಕಾಲಘಟ್ಟದಲ್ಲಿ ಅಗ್ರಹಾರಗಳು ಕೂಡಾ ಕ್ರಿಯಾಶೀಲವಾದವು. ಕೃಷಿ ಚಟುವಟಿಕೆಯು ಈ ಕಾಲದಲ್ಲಿ ಹೆಚ್ಚು ತೀವ್ರಗೊಂಡವು. (Romila Thapar 1975 P.61)

ಹಿಂದೆ ವಿಳಾಸವನ್ನು 'ಊರು' ಮತ್ತು ಪುರದಿಂದ ಗುರುತಿಸುತ್ತಿದ್ದರು. ಮನುಷ್ಯ ಅವನು ಯಾರ ಮಗ? ಅವನ ಮನೆಯು ಎಲ್ಲಿದೆ ಎಂಬುದನ್ನು ಹೇಳಲು ಇದನ್ನು ಬಳಸುತ್ತಿದ್ದರು.

ಉಷ್ಣಪ

ಹೋಮದ ಧೂಮವನ್ನು ಸದಾ ಹೀರಿರುವ ಮುನಿಜನರನ್ನು ಉಷ್ಣಪರೆಂದು ಕರೆಯುತ್ತಾರೆ. ಸದಾ ಅಗ್ನಿಯ ಎದುರು ಕುಳಿತುಕೊಳ್ಳುವುದರಿಂದ ಅವರನ್ನು ಉಷ್ಣಪರೆಂದು ಕರೆಯಲಾಗಿದೆಯಾದರೂ ಎಲ್ಲಾ ಜನರು ಉಷ್ಣಪರಲ್ಲವೆಂಬುದನ್ನು ನಾವಿಲ್ಲಿ ಮನಗಾಣಬೇಕು. ಅಗ್ನಿಯನ್ನು ಉಷ್ಣವೆಂದು ಕರೆದಿರುವುದು ಗಮನಾರ್ಹ. ಅಗ್ನಿಯು ಉಷ್ಣಕಾರಕ ಗುಣವನ್ನು ಹೊಂದಿದೆ. ದಹನದ ಗುಣವೂ ಅದಕ್ಕಿದೆ ದಹಿಸುವುದು ಉಷ್ಣದ ಕೆಲಸವಾದುದರಿಂದ ಅದು ಶುಭ್ರಗೊಳಿಸುತ್ತದೆ ಎಂದೂ ಅರ್ಥವಿಸಿಕೊಳ್ಳಲು ಸಾಧ್ಯ.

ಋಗ್ವೇದ – ಉಪನಿಷತ್ತು, ಋಗ್ವೇದವೂ ಉಪನಿಷತ್ತುಗಳೂ

"ಉಪನಿಷತ್ತುಗಳೆಂಬ ಅನುಭಾವಮಂತ್ರಗಳು ಮತ್ತು ಅವುಗಳಿಗಿಂತ 1000 ವರ್ಷದಷ್ಟಾದರೂ ಪೂರ್ವದಲ್ಲಿ ರಚಿಸಲ್ಪಟ್ಟ ಆರ್ಯರ ಆದ್ಯ ಕವನಗಳಾದ ಋಗ್ವೇದವು, ಇವುಗಳ ಸಂಬಂದವನ್ನು ಸ್ವಲ್ಪ ನೋಡುವದು ಬಹಳೇ ಮನೋವೇದಕವಾಗಬಹುದು. ಇಲ್ಲಿ ಲಕ್ಷ್ಯದಲ್ಲಿಡತಕ್ಕ ಮೊದಲನೆಯ ಮಾತೆಂದರೆ, ಋಗ್ವೇದವೆಂಬುದು ನಿಸರ್ಗಶಕ್ತಿಗಳಿಗೆ ದೇವತಾರೂಪಗಳನ್ನು ಮೊದಲನೆಯ ಮಾತೆಂದರೆ ಋಗ್ವೇದವೆಂಬುದು ನಿಸರ್ಗಶಕ್ತಿಗಳಿಗೆ ದೇವತಾರೂಪಗಳನ್ನು ಕಲ್ಪಿಸಿ ಸ್ತುವಿಸಿದ ಋಷಿಗಳ ಸೂಕ್ತಿಸಂಗ್ರಹವು

ಆದುದರಿಂದ ಮನುಷ್ಯನ ಮನದಲ್ಲಿ ಬೆಳೆಯುವ ಧರ್ಮಜಾಗೃತಿಯ ಮೊದಲನೆಯ ಮರದ ಮೊಳಿದೆ ಅದು. ಬಾಹ್ಯವಸ್ತುವನ್ನು ಲಕ್ಷಿಸುವದೇ ಅದರ ಮುಖ್ಯ ಲಕ್ಷಣವು. ಉಪನಿಷತ್ತುಗಳು ಅಂತರ್ವಸ್ತುವನ್ನು ಎಂದರೆ ಆತ್ಮನನ್ನು ಲಕ್ಷಿಸುವ ಧರ್ಮಗ್ರಂಥಗಳು ದೇವದೇವತೆಗಳನ್ನು ಹೊಗಳಿದ ಹಾಡುಗಳು ಇವುಗಳಲ್ಲಿಲ್ಲ. ಅದಕ್ಕೆ ಪ್ರತಿಯಾಗಿ ಸೃಷ್ಟಿಶಕ್ತಿಗಳಿಗೆ ಮೂಲಭೂತವಾಗಿರುವ ಆದಿತ್ಯವನ್ನು ಶಾಸ್ತ್ರೀಯ ಪದ್ಧತಿಯಿಂದ ಹುಡುಕುವದೇ ಉಪನಿಷತ್ತುಗಳ ಧ್ಯೆಯವಾಗಿದೆ. ಇವುಗಳಲ್ಲಿ ದೇವ ಪ್ರಾರ್ಥನೆಗಳೂ ಇಲ್ಲ ಅಥವಾ ದೇವತಾ ರೂಪವಾದ ದೈವೀ ಶಕ್ತಿಗಳ ಭೀಕರವಾದ ಕೋಪಕ್ಕೆ ಋಷಿಗಳು ಹೆದರಿದಂಥ ಸಂದರ್ಭಗಳೂ ಇಲ್ಲ. ಇನ್ನೊಂದು ಬಗೆಯಿಂದ ಹೇಳುವುದಾದರೆ, ನಾವು ವೈದಿಕ ಕಾಲದಿಂದ ಉಪನಿಷತ್ಕಾಲದ ಕಡೆಗೆ ಸಾಗಿದಂತೆ ಹೆಜ್ಜೆಜ್ಜಗೆ ಮನುಷ್ಯನ ಮನಸ್ಸು ದೇವಕಲ್ಪನೆಯಿಂದ ಆತ್ಮಕಲ್ಪನೆಯ ಕಡೆಗೆ ಹೊರಟಿದೆ. ಎಂದು ಸ್ಪಷ್ಟವಾಗಿ ತೋರುತ್ತಿದೆ. ಜೀವಾತ್ಮನು ವಿಶ್ವಾತ್ಮನಾದನೆಂದರೆ ಅಥವಾ ಅವನಿಗೆ ಅಪರೋಕ್ಷ ಜ್ಞಾನವಾಯಿತೆಂದರೆ ಯಾರು ಯಾರಿಗೆಂತು ಅಂಜುವದು? ಯಾರು ಯಾರಿಗೆಂತು ಆದ್ರಾತಿ ಕೊಡುವದು? ಯಾರಿಗೋಸ್ಕರ ಏತಕ್ಕೆಂದು ದೇವರನ್ನು ಪ್ರಾರ್ಥಿಸುವದು? ಒಟ್ಟಾರೆ ವೇದಕಾಲದ ಕಡೆಗೆ ನೋಡಿ ತರುವಾಯ ಉಪನಿಷತ್ತುಗಳ ಕಡೆಗೂ ನೋಡಿದರೆ ನಮ್ಮ ವೈದಿಕ ಋಷಿಗಳ ಮನಸ್ಸು ಪ್ರಾರ್ಥನೆಯಿಂದ ತತ್ತ್ವವಿಚಾರದ ಕಡೆಗೂ ಸೂಕ್ತಿಗಳಿಂದ ಅಯಾ ಜ್ಞಾನದ ಕಡೆಗೂ ಏಕದೇವತಾ ಪ್ರಧಾನ ಅನೇಕ ದೇವತಾವಾದರಿಂದ ಅನುಭವ ಸಿದ್ಧ ಏಕದೇವವಾದದ ಕಡೆಗೂ ವಿಕಾಸ ಹೊಂದುತ್ತಿರುವದು ಕಂಡು ಬರುವದು. ಎರಡನೆಯ ವಿಷಯವೇನೆಂದರೆ ಕೆಲವು ಋಗ್ವೇದ ಸೂಕ್ತಗಳಲ್ಲಿ ಸಹ ವಿಶ್ವೋತ್ಪತ್ತಿ ವಿಚಾರಗಳ ವಿಕಾಸವು ನಮಗೆ ಕಂಡು ಬರುವದು. ಅದನ್ನು ನಾವು ಕಣ್ಮರೆ ಮಾಡಲಿಕ್ಕಾಗದು. ಋಗ್ವೇದದಲ್ಲಿಯ 10ನೆಯ ಮಂಡಲದ 88ನೆಯ ಸೂಕ್ತವನ್ನು ನೋಡುವ ಸ್ವರ್ಲೋಕ ಭೂಲೋಕಗಳನ್ನು ಶಾಶ್ವತ ಸ್ಥೈರ್ಯವುಳ್ಳವುಗಳಾಗಿ ನಿರ್ಮಿಸಿದುದು ಯಾವ ಪದಾರ್ಥದಿಂದ ಸೃಷ್ಟಿಕರ್ತನು ಯಾವುದರ ಮೇಲೆ ನಿಂತು ಈ ಲೋಕಗಳನ್ನು ಎತ್ತಿ ಹಿಡಿದನು ಎಂಬ ಪ್ರಶ್ನೆಗಳನ್ನು ಆ ಸೂಕ್ತದಲ್ಲಿ ಋಷಿಯು ಕೇಳಿರುವನು 10ನೆಯ ಮಂಡಲದ 5ನೆಯ ಮತ್ತು 23ನೇಯ ಸೂಕ್ತಗಳಲ್ಲಿ ಸತ್ ಅಸತ್ ಇವುಗಳ ಕಲ್ಪನೆಯು ಮೊಟ್ಟಮೊದಲು ಸೂಚಿಸಲ್ಪಟ್ಟಿರುವುದು. 10ನೆಯ ಮಂಡಲದ 329ನೆಯ ಸೂಕ್ತದಲ್ಲಿಯ ಅಜ್ಞೇಯವಾದವನ್ನೇ ಪ್ರತಿಪಾದಿಸಿ ಮೂಲಪದಾರ್ಥವು ಸತ್ ಅಸತ್ ಇವುಗಳಿಗೂ ಶ್ರೇಷ್ಠವಿರುವುದೆಂದೂ ಸೃಷ್ಟಿಕರ್ತನಾದರೂ ಸ್ವ ಸಂಪತ್ತಿನಿಂದ ಚಲಿಸುವನೋ ಇಲ್ಲವೋ ಎಂಬ ಸಂಶಯವಿರುವುದೆಂದೂ ಋಷಿಗಳು ಹೇಳಿದ್ದಾರೆ. ಇವೆಲ್ಲವುಗಳ ಮೇಲಿಂದ ನೋಡಲಾಗಿ ಬ್ರಾಹ್ಮಣಕಾಲದಲ್ಲಿ ಬೆಳೆದು ಉಪನಿಷತ್ಕಾಲದ ಪ್ರಾರಂಭಕ್ಕೆ ಬಲಿತ ತತ್ತ್ವವಿಚಾರದ ಸ್ಫೂರ್ತಿಯು ಋಗ್ವೇದಕಾಲದಲ್ಲಿಯೇ ಹುಟ್ಟಿತೇನ್ನಲಿಕ್ಕೆ ಯಾವ

ಪ್ರತ್ಯಾದಾಯವೂ ಇಲ್ಲ. ಮೂರನೆಯ ಮಾತೆಂದರೆ ಮನಸಶಾಸ್ತ್ರ ದೃಷ್ಟಿಯಿಂದ ನೋಡಲಾಗಿ ಋಗ್ವೇದವು ಕಲ್ಪನಾಶಕ್ತಿಪ್ರಧಾನವೂ ಭಾವನಾಶಕ್ತಿ ಪ್ರಧಾನವೂ ಆಗಿದೆ. ಆದರೆ ಉಪನಿಷತ್ತುಗಳು ಬುದ್ಧಿಪ್ರಧಾನವೂ ತರ್ಕಪ್ರಧಾನವೂ ಆದಪುಗಳು ಭಾಷೆ ಭಾವನೆಗಳ ದೃಷ್ಟಿಯಿಂದ ಬಾಯಬಲ್ಲಿನ ಭಕ್ತಿ ಗೀತೆಗಳಿಗ ಹೋಲುವ ಸೂಕ್ತಗಳು ವಿಶೇಷತೆ ವರುಣಸೂಕ್ತಗಳು ಋಗ್ವೇದದಲ್ಲಿವೆ. ಉಪನಿಷತ್ತುಗಳಲ್ಲಿ ಅವು ವಿರಲಿ ಆದರೆ ಸತ್ಯವನ್ನು ಸುವ್ಯವಸ್ಥಿತವಾಗಿ ಶೋಧಿಸುವ ಶಾಂತವಾದ ಜ್ಞಾನದರ್ಜೆಯು ಉಪನಿಷತ್ತುಗಳಲ್ಲಿದೆ. ಎಂದು ಹೇಳುಬಹುದು. ಈ ಮೇರೆಗೆ ತನ್ನ ಕಲ್ಪನೆಯಿಂದ ಸೃಷ್ಟಿಸಿದ ದೇವತೆಯನ್ನು ಕುರಿತು ಅತ್ಯಂತ ನಮ್ರತೆಯಿಂದ ತನ್ನನ್ನು ಕ್ಷಮಿಸಲು ಬೇಡಿಕೊಳ್ಳುವ ಭಕ್ತನಂತೆ ನುಡಿದ ಅನೇಕ ಸೂಕ್ತಗಳು ಋಗ್ವೆದಲ್ಲಿ ಕಂಡುಬಂದರೆ ಉಪನಿಷತ್ತುಗಳಲ್ಲಿ ಈ ಕೆಳಗಿನ ಪ್ರೌಢೋಕ್ತಿಗಳು ಕಂಡುಬರುತ್ತವೆ. "ಇಂಥ ದೇವತೆಗಳಿಂದ ಯಾವ ಅನುಗ್ರಹವನ್ನೂ ಯಾಚಿಸಬೇಡ. ನೀನು ಪೂಜಿಸುತ್ತಿರುವುದು ನಿಜವಾದ ದೇವತೆಯಲ್ಲಿ 'ನೇದಂಯದಿದಂ ಉಪಾಸತೇ: ಈ ವಿಶ್ವದ ಸ್ಥಿತಿಯನ್ನು ಸ್ಥಿರವಾಗಿಡುವವನು ವಿಶ್ವದ ಹೊರಗಿಲ್ಲ. ಸ್ವಾಭಾವಿಕ ಮತ್ತು ನೈತಿಕ ವ್ಯವಸ್ಥೆಯ ಉಗಮವು ನಿನ್ನ ಹೊರಗಿಲ್ಲ. ಅಂತಬಾಹ್ಯಗಳ ಸಮನ್ವಯವಾದ ಆತ್ಮನಲ್ಲಿಯೇ ಎಲ್ಲವುಗಳ ಉಗಮವಿವು. ತೂಕವು ತಪ್ಪದಂತೆ ಸೃಷ್ಟಿಯನ್ನು ಅವನೇ ಧರಿಸುವನು. ಈ ಸ್ವೈರ ಪ್ರಪಂಚ ಪ್ರವಾಹವನ್ನು ಮೇಲೆ ತಪ್ಪದಂತೆ ಒಡ್ಡುಹಾಕಿ ಅಡ್ಡಗಟ್ಟಿ ನಿಯಮಿಸುವವನು ಅವನೇ." (ರಂ.ದಿವಾಕರ್ 1850 ಪು.)

ವಿವರಗಳಿಗೆ ನೋಡಿ: ವೇದ

ಋಣ

ಸಂಸ್ಕೃತದಲ್ಲಿ 'ಋಣ' ಎಂಬ ಒಂದು ಶಬ್ದವಿದೆ. ಈ ಶಬ್ದದ ಅರ್ಥವನ್ನು ನಾವು ಕನ್ನಡದಲ್ಲಿ ಸಾಲ ಎಂದು ಮಾಡಬಹುದು. ಆದರೆ ರೂಢಿಯಲ್ಲಿ ಸಾಲ ಎಂಬ ಶಬ್ದಕ್ಕೆ ಇರುವ ಅರ್ಥದ ವ್ಯಾಪ್ತಿಗಿಂತ ಹೆಚ್ಚು ಋಣ ಎಂಬ ಶಬ್ದದಲ್ಲಿರುತ್ತದೆ. ಇಂಗ್ಲಿಷ್ ಭಾಷೆಯಲ್ಲಿ ಸಾಲಕ್ಕೆ 'ಡೆಟ್' ಎಂದು ಪದವನ್ನೂ ಬಳಸುತ್ತಾರೆ. ಇದರೊಂದಿಗೆ ಇನ್ನೊಂದು ಶಬ್ದ 'ಆಬ್ಲಿಗೇಶನ್' ಎಂಬ ಪದವನ್ನು ಬಳಸುತ್ತಾರೆ. ಇವೆರಡು ಶಬ್ದಗಳ ಅರ್ಥದ ವ್ಯಾಪ್ತಿಯಲ್ಲಿ ಅಂತರವಿದೆ. ಒಕ್ಕಲು ಧನಿಯ ಋಣದಲ್ಲಿದ್ದಾನೆ ಎಂದರೆ ಅದರಲ್ಲಿ ಭೂಮಿ ಮತ್ತು ಕೂಲಿ ಎರಡರ ಸಮಸ್ಯೆಯೂ ಬರುತ್ತದೆ.

ಗಂಡ ಬಿಟ್ಟರೂ ಕೂಡ ಹೆಂಡತಿಗೆ ಅವನ ಋಣ ಉಳಿಯುತ್ತದೆ.

ದೇವ, ಅಗ್ನಿ, ದ್ವಿಜ, ಗುರು, ಪಿತೃ ಋಣಗಳ ಪರಿಕಲ್ಪನೆಯೂ ಸಾಂಸ್ಕೃತಿಕವಾಗಿ ಚಾಲ್ತಿಯಲ್ಲಿದೆ.

೧. "ಋತ" ಶಬ್ದವೂ 'ಋ' ಧಾತುವಿನಿಂದ ಬಂದದ್ದು. ಇಲ್ಲಿ "ಋ" ಎಂದರೆ ನಡೆಯುವುದು

"ಪಡೆಯುವುದು" ಎಂದರ್ಥ. ಕಾಲ ಕಾಲಕ್ಕೆ ಸರಿಯಾಗಿ ನಡೆಯುವುದು ಋತು.

೨. ಋಜು "ಶಬ್ದ" "ಋಜ" ಧಾತುವಿನಿಂದ ಬಂದದ್ದು. "ಋಜು" ಎಂದರೆ ನಡೆಯುವುದು ಇರುವುದು

ಸಂಪಾದಿಸುವುದು.

೩. "ಋಣ" ಶಬ್ದವೂ 'ಋತ' ಶಬ್ದದಂತೆ 'ಋ' ಧಾತುವಿನಿಂದ ಬಂದದ್ದು. (ಋ-ಗತಿ ಪ್ರಾಪಣಯೋಃ)

ಹಾಗೆಂದರೆ ಸಾಲ ಕಡೆ ಇಬ್ಬರೂ ಮನುಷ್ಯರ ಪರಸ್ಪರ ವರ್ತನೆಯಿಂದ ಸಹಜವಾಗಿ ಆಗುವ ಫಲಾಫಲಾ ಸಂಬಂಧವೇ ಋಣ. ಜೀವಕ್ಕೂ ಲೋಕಕ್ಕೂ ಆಗುವ ಸಂಪರ್ಕದಲ್ಲಿ ಸ್ವಾಭಾವಿಕವಾಗಿ ವಿಧಿಸುವ ಅನ್ಯೋನ್ಯ ಪರಿಣಾಮ ಪರಂಪರೆಯೇ "ಋಣ".

ವೈದಿಕ ಪರಿಭಾಷೆಯಲ್ಲಿ 'ದೇವಋಣ', 'ಗುರುಋಣ', ಪಿತೃಋಣ' – ಮೂರನ್ನು ತೀರಿಸುವುದು ಕಷ್ಟ 'ದೇವಋಣ'ವನ್ನು ಪೂಜೆ, ಪುರಸ್ಕಾರಗಳಿಂದ ; ಗುರು ಋಣವನ್ನು ವಿದ್ಯೆಯ ದಾನದ ಮೂಲಕ ; ಪಿತೃಋಣವನ್ನು ಪಿಂಡ ಪ್ರಧಾನ ಮಾಡುವುದರ ಮೂಲಕ ತೀರಿಸಲು ಸಾಧ್ಯ. 'ಋಣ'ವನ್ನು ದಾಟಲಾಗುವುದಿಲ್ಲ. ಹಾಗೂ ಋಣ ನಮ್ಮನ್ನು ಆಳುತ್ತದೆಯೆನ್ನುವುದು ಮೇಲು ನೋಟಕ್ಕೆ ತುಂಬಾ ಸಾಮಾನ್ಯವಾದ ಪರಿಭಾಷೆಯ ಹಾಗೆ ಕಾಣಿಸುತ್ತದೆ. ಆದರೆ, ಆಂತರಿಕವಾಗಿ ಇದು ವಸಾಹತು ಪೂರ್ವದ ಒಂದು ಅಲಿಖಿತ ಹಾಗೂ ನಿರ್ದಿಷ್ಟ ನಂಬಿಕೆಗಳನ್ನು ಹುಟ್ಟು ಹಾಕಿದ ಪರಿಕಲ್ಪನೆಯೂ ಹೌದು. ಧನಿಗೆ ಒಕ್ಕಲಿನ ಋಣ. ಒಕ್ಕಲಿಗೆ ಧನಿಯ ಋಣವಿದೆ. ಒಕ್ಕಲು ಧನಿಯನ್ನು ದಾಟಬಾರದು ಎನ್ನುವುದು 'ಅಧಿಕಾರ'ವರ್ಗದ ಒಂದು ಹಿತಾಸಕ್ತಿ. ಹೇಗೆ 'ಋಣ'ವೆನ್ನುವುದು ಇರುತ್ತದೆಯೋ ಹಾಗೆಯೇ 'ಋಣ' ಪರಿಹಾರಕ್ಕೂ ಕೆಲವು ವಿಧಿ ವಿಧಾನಗಳನ್ನು ಪರಿಕಲ್ಪಿಸಲಾಗಿದೆ. ಇದಕ್ಕೆ ಲೌಕಿಕದ ಅರ್ಥವಿರುವ ಹಾಗೆಯೇ ಅಲೌಕಿಕವಾದ ಅರ್ಥವೂ ಇದೆ. ಮತ್ತು 'ಋಣ' ಎನ್ನುವುದು ಒಂದು ಜಾತಿಯಲ್ಲಿರುವ ನಂಬಿಕೆಯ ಪ್ರಶ್ನೆಯಲ್ಲ. ಇದು ಎಲ್ಲಾ ಜಾತಿಯಲ್ಲೂ ಹಾಗೂ ಎಲ್ಲಾ ಪ್ರದೇಶಗಳಲ್ಲಿಯೂ ಇರುವ ಪರಿಭಾಷೆ. ದ್ಯೋತಕವೂ ಹೌದು. ಮೊದಲು ಕೆಲವು ಮಾದರಿಗಳನ್ನು ಪರಿಶೀಲಿಸಬಹುದು:

ಋಣ ಅನ್ನುವುದನ್ನು ತನ್ನ ಹಿಂದಿನ ಕವಿಗಳ ಮತ್ತು ಕಾವ್ಯಗಳ ಪ್ರೇರಣೆಯೆಂಬ ಅರ್ಥದಲ್ಲಿಯೂ ಬಳಸಿದ್ದಾರೆ. ಒಬ್ಬ ಲೇಖಕ ಬರೆದುದು ಮತ್ತೊಬ್ಬ ಲೇಖಕನ ಮೇಲೆ ಪ್ರಭಾವ ಬೀರುತ್ತದೆ. ಇದರಲ್ಲಿ ವಸ್ತುವಿಗೆ, ಶೈಲಿಗೆ ನಿರೂಪಣೆಯ ಕ್ರಮಕ್ಕೆ ಸಂಬಂಧಿಸಿದಂತೆ ಪ್ರೇರಣೆಗಳು ಬೇರೆ ಬೇರೆ ರೀತಿಯಲ್ಲಿರಬಹುದು. ಇಂಗ್ಲಿಷಿನಲ್ಲಿ

ಹೋಮರ್ ವರ್ಜಿಲನಿಗೆ; ವರ್ಜಿಲನು ಮಿಲ್ಟನಿಗೆ, ಮಿಲ್ಟನ್ ವರ್ಡ್ಸ್‌ವರ್ತನಿಗೆ ಪ್ರಭಾವ ಬೀರಿರುವುದು ಇಲ್ಲಿ ಗಮನಾರ್ಹವಾಗಿದೆ. ಈ ರೀತಿಯ ಪ್ರಭಾವಗಳನ್ನು Anxiety of Influence ಎಂದು ಹೆರಾಲ್ಡ್ ಬ್ಲೂಮ್ ಹೇಳುತ್ತಾನೆ. ಬ್ಲೂಮನ ಪ್ರಕಾರ ಒಬ್ಬ ಕವಿಯ ಮನಸ್ಸಿನ ಮೇಲೆ ಹಿಂದಿನ ಕವಿಗಳ ಬರವಣಿಗೆಯು ಬೇರೆ ಬೇರೆ ರೀತಿಯ ಪ್ರಭಾವವನ್ನು ಬೀರುತ್ತದೆ. ಹಾಗೆಯೇ ಹಿಂದಿನ ಕವಿಗಳ ಬರಹಗಳು ಅನಂತರದ ಕವಿಗಳ ಕಲ್ಪನೆಗೆ ಹೊಸ ದಾರಿಯನ್ನು ಹಾಕಿ ಕೊಡಬಹುದು. ಇದರಲ್ಲಿ ಸ್ವಾಯತ್ತತೆ ಇರುತ್ತದೆ. ಹೊಸ ಅವಕಾಶಗಳನ್ನು ತುಂಬಿಕೊಳ್ಳುವ ಇರಾದೆಗಳಿರುತ್ತವೆ. ರಾಮಾಯಣ ದರ್ಶನಂ ತನ್ನ ಹಿಂದಿನ ಎಲ್ಲಾ ಕವಿಗಳ ಪ್ರೇರಣೆಯನ್ನು ಪಡೆದುಕೊಂಡಿದ್ದರೂ ಹೊಸ ಯುಗದಲ್ಲಿ ಹೊಸ ಖಾಲಿಯಾದ ಜಾಗವನ್ನು ಅದು ಭರ್ತಿಮಾಡಿತು. ಹೊಸ ಅವಕಾಶವು ಕುವೆಂಪು ಅವರ ರಾಮಾಯಣ ದರ್ಶನಂ ಕೃತಿಗೆ ವಿಶಿಷ್ಟತೆಯನ್ನು ತಂದುಕೊಟ್ಟಿತು. ಹಿಂದಿನ ಕವಿಗಳಿಂದ ಪ್ರೇರಣೆಯನ್ನು ಪಡೆದುಕೊಳ್ಳುವಾಗ ಬೇರೆ ಬೇರೆ ಮಾದರಿಗಳಿರುತ್ತವೆ. ಒಂದನೆಯದಾಗಿ ಪುನರ್ ಪರಿಶೀಲನೆ, ಇದರಿಂದ ಮೂಲ ಕವಿತೆಗಳಿಗೆ ಹೊಸ ಅನ್ವಯಿಕತೆಯು ಸಾಧ್ಯವಾಗಬಹುದು. ಎರಡನೆಯದಾಗಿ ಪ್ರೇರಣೆಯನ್ನು ಪಡೆದುಕೊಂಡು ಕೂಡಾ ಸ್ವಂತಿಕೆಯನ್ನು ಉಳಿಸಿಕೊಳ್ಳುವುದು. ಇದನ್ನು ಮನೋವಿಜ್ಞಾನದಲ್ಲಿ ಸ್ವಯಂ ಪ್ರತಿರೋಧ (Defense Mechanism) ಎಂದು ಕರೆಯುತ್ತಾರೆ.

ಮೂರನೆಯದಾಗಿ ಹಿಂದಿನ ಕವಿಗಳನ್ನು ತನ್ನ ಕಾಲದ ಸನ್ನಿವೇಶಗಳ ಮೂಲಕ ಗ್ರಹಿಸುವುದು. ಹಳೆಯ ಕಾವ್ಯದ ಹೊಸ ಮಾದರಿಯ ಓದು ಇದಾಗಿರುತ್ತದೆ.ಈ ರೀತಿಯ ಓದು ತಪ್ಪು ಗ್ರಹಿಕೆಗೆ ಮತ್ತು ಅನ್ವಯಿಕಕ್ಕೆ ಕಾರಣವಾಗಬಹುದು. ನಾಲ್ಕನೆಯದಾಗಿ, ಪ್ರೇರಣೆಯನ್ನು ಪಡೆಯುವುದೆಂದರೆ ತನ್ನ ಆಸಕ್ತಿಯ ಕಾರಣಕ್ಕಾಗಿ. ಇಲ್ಲಿ ವೈಯಕ್ತಿಕ ಆಸಕ್ತಿಯೂ ಅಷ್ಟೇ ಮುಖ್ಯವಾಗಿರುತ್ತದೆ. ಐದನೆಯದಾಗಿ ಹಳೆಯ ಕೃತಿಗೆ ಹೊಸ ಸಾಧ್ಯತೆಗಳು ಈ ಪ್ರೇರಣೆಗಳಿಂದ ಹುಟ್ಟಿಕೊಳ್ಳುತ್ತವೆ. ಋಣವನ್ನು ಭಾರತೀಯ ಸಮಾಜದಲ್ಲಿ ಬೇರೆ ಅರ್ಥಗಳಲ್ಲಿಯೂ ಕರೆಯಲಾಗಿದೆ.ಋಣವು ಭಿನ್ನವಾಗಿರುತ್ತವೆ.ಗುರು ಋಣ,ಪಿತೃ ಋಣ,ಇತ್ಯಾದಿ.

ವಿವರಗಳಿಗೆ ನೋಡಿ: ಸುಕುಮಾರ್ ಅಟಿಕ್ಕೋಡ್ ವಿ.ಗೋಪಾಲಕೃಷ್ಣ (ಅನು) ೨೦೦೫ ತತ್ವಮಸಿ

Charis Smaje 2000 National Hierachies

Ronald Inden 1990 Imaging India

Madhavan T.N. 2001 Non-Renunciation

Harold Bloom 1973 Anxiety of Influence

ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 9–46

ಡಿ. ವಿ. ಜಿ. 1975 ಋತ, ಸತ್ಯ, ಧರ್ಮ ಪುಟ. 15–16

ಋತ/ಋಜು/ಋಣ

೧) ಋತು ೨) ಋಜು ೩) ಋಣ ಇವುಗಳ ನಿರ್ವಚನ ಹೀಗಿರುತ್ತದೆ:

೧) "ಋತು" ಶಬ್ದವೂ "ಋ" ಧಾತುವಿನಿಂದ ಬಂದದ್ದು. ಇಲ್ಲಿ "ಋ" ಎಂದರೆ "ನಡೆಯುವುದು" "ಪಡೆಯಿಸುವುದು" ಎಂದರ್ಥ (ಋ–ಗತಿಪ್ರಾಪಣಯೋಃ॥) ಭ್ವಾದಿಗಣ). ಕಾಲಕಾಲಕ್ಕೆ ಸರಿಯಾಗಿ ನಡೆಯುವಂಥಾದ್ದು ಋತು. ಅದು ಕಾಲಕ್ಲೃಪ್ತಿ ಅಥವಾ ನಿಯತಕಾಲೀನತೆ.

೨) "ಋಜು" ಶಬ್ದವು "ಋಜ" ಧಾತುವಿನಿಂದ ಬಂದದ್ದು. "ಋಜು" ಎಂದರೆ ನಡೆಯುವುದು, ಇರುವುದು, ಸಂಪಾದಿಸುವುದು, ಅನುಭವಿಸುವುದು (ಋಜ+ಗತಿ ಸ್ಥಾನಾರ್ಜನೋಪಾರ್ಜನೇಷು॥ ಭ್ವಾದಿ) ಇದು ಸಹಜಗುಣಾನುಸಾರವಾದ ವರ್ತನೆ. ಅದೇ ಋಜುತೆ ಅಥವಾ ಆರ್ಜವ. ನಡೆನುಡಿಗಳಲ್ಲಿ ಕೊಂಕುಕೃತ್ರಿಮಗಳಿಲ್ಲದಿರುವುದು.

೩) "ಋಣ" ಶಬ್ದವು "ಋತ" ಶಬ್ದದಂತೆ "ಋ" ಧಾತುವಿನಿಂದ ಬಂದದ್ದು (ಋ–ಗತಿಪ್ರಾಣಯೋಃ); ಹಾಗೆಂದರೆ ಸಾಲ, ಕಡ (ಕಾಲಾಂತರ ದೇಯ ವಿನಿಮಯೋಪಲಕ್ಷಣಾರ್ಥಮ್–ಧಾತುವೃತ್ತಿ). ಇಬ್ಬರು ಮನುಷ್ಯರ ಪರಸ್ಪರ ವರ್ತನೆಯಿಂದ ಸಹಜವಾಗಿ ಆಗುವ ಫಲಾಫಲಸಂಬಂಧವೇ ಋಣ. ಜೀವಕ್ಕೂ, ಲೋಕಕ್ಕೂ ಆಗುವ ಸಂಪರ್ಕದಲ್ಲಿ ಸ್ವಾಭಾವಿಕವಾಗಿ ಉದಿಸುವ ಅನ್ಯೋನ್ಯ ಪರಿಣಾಮ ಪರಂಪರೆಯೇ "ಋಣ". ಋತವೆಂಬುದು ಋಜು ಎಂಬುದಕ್ಕೆ ಸಮಾನಾರ್ಥಕ ಪದ. ಮನಸ್ಸಿನೊಳಗಡೆ ಕೃತ್ರಿಮವಿಲ್ಲದೆ ಇರುವಾಗ, ಮತ್ತು ಹೊರಗಡೆಯಿಂದ ಅದರ ಮೇಲೆ ಯಾವ ಪ್ರಭಾವವೂ ಬೀಳದಿರುವಾಗ ಒಂದಾನೊಂದು ವಿಷಯವನ್ನು ಕುರಿತು ಆ ಮನಸ್ಸಿನಲ್ಲಿ ಯಾವ ಭಾವನೆ ಹುಟ್ಟುತ್ತದೆಯೋ ಅದು ಋತ. ಅಂಥ ಋತಕ್ಕನುಗುಣವಾದ ನಡವಳಿಕೆಯೇ ಋಜುವರ್ತನೆ ಅಥವಾ ಆರ್ಜವ – ಋಜುಮಾರ್ಗ ಹೀಗೆ ಅದು ಸ್ವಾಭಾವಿಕವಾಗಿ ಉಂಟಾದದ್ದು; ಕೃತಕ ವಕ್ರಗಳಿಲ್ಲದ್ದು; ಆದಕಾರಣ ಅದು ನೈಜ ಅಥವಾ ನಿಜ. ಸಂಸ್ಕೃತದಲ್ಲಿ 'ನಿಜ' ಎಂಬ ಮಾತಿಗೆ 'ಸತ್ಯ' ಎಂಬುದರ ಪರ್ಯಾಯ ಪದವಾಗಿ ರೂಢಿಯಿಲ್ಲ. ಆದರೆ ಕನ್ನಡದಲ್ಲಿ ಅಂಥ ರೂಢಿ ಸಾಮಾನ್ಯವಾಗಿದೆ. 'ನಿಜ' ಎಂದರೆ 'ದಿಟ' ಎಂದು ಬಳಕೆಯ ಅರ್ಥ. ನಿಜ ಎಂಬುದಕ್ಕೆ 'ಸ್ವಾಭಾವಿಕ', 'ಸಹಜ' ಎಂದು ಸಂಸ್ಕೃತದಲ್ಲಿ ಅರ್ಥವೆಂಬುದನ್ನು ನಾವು ಜ್ಞಾಪಕಕ್ಕೆ ತಂದುಕೊಂಡು, 'ಋತ' ಎಂಬುದರ ಭಾವವೂ ಹಾಗೆಯೇ 'ಸ್ವಾಭಾವಿಕ' 'ಪ್ರಕೃತಿಸಿದ್ಧ' ಎಂಬುದನ್ನು ನೋಡಿದರೆ, ಆಗ ನಿಜ, ಋತ ಎಂಬೆರಡು ಮಾತುಗಳೂ ಕನ್ನಡ ಪ್ರಯೋಗದಲ್ಲಿರುವಂತೆ ಒಂದಕ್ಕೊಂದು

ಪರ್ಯಾಯಪದವಾಗಿರುವುದು ಯುಕ್ತವೆಂದು ತೋರುತ್ತದೆ.(ಡಿ.ವಿ.ಜಿ. ೧೯೭೫ ಋತ, ಸತ್ಯ, ಧರ್ಮ ಪುಟ ೧೫)

ಋತದ ಭಾವನೆ

ಋತದ ಭಾವನೆಯಲ್ಲಿ ಮೂರು ನಾಲ್ಕು ಪದರಗಳಿರುವಂತೆ ತೋರುತ್ತದೆಯೆಂದು ಡಿ.ವಿ.ಜಿ.ಯವರು ಹೇಳುತ್ತಾರೆ.

೧) ಜಗತ್ತಿನಲ್ಲಿ ಒಂದು ಕ್ರಮ ಅಥವಾ ವ್ಯವಸ್ಥೆ.

೨) 'ಅವಶ್ಯಂಭಾವಿ'ಯಾದ ಕರ್ಮ=ಫಲಸಂಬಂಧ ಮತ್ತು ಋಣ–ಋಣಿ ಸಂಬಂಧ. ಕಾರಣವಿದ್ದಲ್ಲಿ ಕಾರ್ಯ ಉಂಟೇ ಉಂಟು; ಬೇರಿದ್ದಲ್ಲಿ ಮೊಳಕೆ ಉಂಟೇ ಉಂಟು.

೩) ಸ್ವಭಾವ ವಿಕಾಸ: ಪ್ರತಿಯೊಬ್ಬ ಜೀವಿಯಲ್ಲಿಯೂ ಪ್ರತಿಯೊಂದು ಭೂತದಲ್ಲಿಯೂ ಯಾವುದೋ ಒಂದು ಗುಣಶಕ್ತಿ

ಸಂಚಯ ಹುದುಗಿಕೊಂಡಿರುತ್ತದೆ. ಅದೇ ಅದರ ಸಹಜ ಅಥವಾ ನೈಜ. ಈ ನೈಜ ಅನಾದಿಯಾದದ್ದು.

(ಡಿ.ವಿ.ಜಿ. ೧೯೭೫ ಋತ, ಸತ್ಯ, ಧರ್ಮ ಪುಟ ೧೧)

ಋತ್ವಿಕ್

ಆಹವನೀಯಾದಿ ಅಗ್ನಿ ಸ್ವೀಕಾರ, ಅಷ್ಟಕಾ, ಯಜ್ಞಗಳನ್ನು ಯಾವನನ್ನು ವರಿಸಿ ಗೃಹಪತಿಯು ಮಾಡುವನೋ, ಅವನು ಅವನಿಗೆ 'ಋತ್ವಿಕ್' ಎಂದು ಕರೆಯುವರು. (ಮನುಸ್ಮೃತಿ 2–143)

ಸ್ವಲ್ಪವಾದ ಶಾಸ್ತ್ರಾಧ್ಯಯನಕ್ಕೆ ಉಪಕಾರ ಮಾಡುವವನನ್ನು ಕೂಡ ಈ ಶಾಸ್ತ್ರದಲ್ಲಿ ಗುರುವೆಂದು ಸಮ್ಮತಿಸುತ್ತೇವೆ. ಶಾಸ್ತ್ರಜ್ಞಾನ ಉಪಕಾರವು ಆಗಲೂ ಉಂಟಾಯಿತು. ಹಿಂದೆ ಹೇಳಿದಂತೆ ಕೇವಲ ಸಂಸ್ಕಾರ ಕರ್ತೃವು ಗುರುಸಂಜ್ಞಾಯೋಗ್ಯನಾದರೂ ಇವನು ಅರ್ಥದಲ್ಲಿ ಗುರುವು, ಮಹತ್ವ ಉಳ್ಳವನು. (ಮನುಸ್ಮೃತಿ 2–149) ಇದು ವೈದಿಕ ಕರ್ಮಗಳಿಗೆ ಮಾತ್ರ ಸಂಬಂಧಿಸಿದೆ.

ಋತ್ವಿಜರು

ಋತ್ವಿಜರೆಂದರೆ ಯಾಗ ಮಾಡುವವನಿಗೆ ಸಹಾಯ ಮಾಡುವವರು ಅಥವಾ ಯಜ್ಞ ಪುರೋಹಿತರು. ದೀಕ್ಷಿತರು ಎಂದರೆ ದೀಕ್ಷೆ ತೊಟ್ಟವರು. ಇಲ್ಲಿ ಯುದ್ಧ ಯಜ್ಞದ ಪರಿಕಲ್ಪನೆಯಿದೆ.

ಯತ್ವಿಜರು ಹದಿನಾರು ಹೋತೃಗಣಗಳಲ್ಲಿ ಹೋತೃ, ಮೈತ್ರಾವರುಣ, ಅಚ್ಛಾವಾಕ ಗ್ರಾವಸ್ತುತ, ಅಧ್ವರ್ಯುಗಣ, ಅಧ್ವರ್ಯು, ಪ್ರಸ್ಥಾತಾ, ನೇಷ್ಟಾ, ಉನ್ನೇತಾ, ಉದ್ಗಾತೃಗಣ,

ಉದ್ಗಾಗತೃ, ಪ್ರಸ್ತೋತೃ, ಪ್ರತಿಹರ್ತೃ, ಸುಬ್ರಹ್ಮಣ್ಯ, ಬ್ರಹ್ಮಗಣ, ಬ್ರಹ್ಮ ಬ್ರಾಹ್ಮಣಾಚ್ಛರಿಸಿ, ಆಗ್ನೀಧ್ರ, ಸೋತೃ.

ಆಹವನೀಯಾದಿ ಅಗ್ನಿ ಸ್ವೀಕಾರ, ಅಷ್ಟಕಾ, ಯಜ್ಞಗಳನ್ನು ಯಾವನನ್ನು ವರಿಸಿ ಗೃಹಪತಿಯು ಮಾಡುವನೋ, ಅವನು, ಅವನಿಗೆ 'ಋತ್ವಿಕ್' ಎಂದು ಕರೆಯುವನು. (ಶ್ರೀವತ್ಸ ನಿಘಂಟು)

ಹದಿನಾರು ಮಂದಿ ಋತ್ವಿಜರು. ಅದರಲ್ಲಿ ಹೋತೃ, ಅಧ್ವರ್ಯು, ಬ್ರಹ್ಮ ಉದ್ಗಾತೃಗಳು, ಸಂಪೂರ್ಣ ದಕ್ಷಿಣೆಯ ಅರ್ಧಕ್ಕೆ ಹಕ್ಕುದಾರರು. 48 ಗೋವುಗಳು ಆ ಅರ್ಧವು. ಮೈತ್ರಾವರುಣಿ ಪ್ರತಿಪ್ರಸ್ಥಾತೃ, ಬ್ರಾಹ್ಮಣಾಚ್ಛರಿಸಿ, ಪ್ರಸ್ತೋತೃಗಳು ಅರ್ಧದ ಅರ್ಧ 24 ಗೋವುಗಳು ದಕ್ಷಿಣೆ ಉಳ್ಳವರು. ಅಚ್ಛಾವಾಜುನೇಷ್ಟ್ರ, ಅಗ್ನೀಧ್ರ, ಪ್ರತಿಹರ್ತೃ ಎಂಬುವರು ಮೂರನೆಯ ಒಂದು ಭಾಗದ ದಕ್ಷಿಣೆ ಉಳ್ಳವರು. 12 ಗೋವುಗಳು ಗ್ರಾವಸ್ತುತ್ ನೇತೃ, ಹೋತೃ, ಸುಬ್ರಹ್ಮಣ್ಯ ಈ ಋತ್ವಿಜರು ಮುಖ್ಯ ಋತ್ವಿಜರ ದಕ್ಷಿಣೆಯ ನಾಲ್ಕನೆಯ ಒಂದಂಶದ ದಕ್ಷಿಣೆ ಉಳ್ಳವರು ಎಂದು ಮನು ಹೇಳುತ್ತಾನೆ.

ವಿವರಗಳಿಗೆ ನೋಡಿ: ಟಿ. ವಿ. ವೆಂಕಟಾಚಲಶಾಸ್ತ್ರೀ ೧೯೯೯ ಶ್ರೀವತ್ಸ ನಿಘಂಟು ಪುಟ. ೬೬
ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೨-೧೪೩

ಋದ್ಧ

ಮೃಗ ಭೂ ಯುದ್ಧವೆಂದರೆ ಸುಂದರ ಸ್ತ್ರೀಯರ ತುರುಬಿನಲ್ಲಿ ಲೇಪಿಸಿಕೊಂಡಿದ್ದ ಕಸ್ತೂರಿಯ ಕಂಪು.

ಋದ್ಧಿ

ತಪಸ್ಸಿದ್ಧಿ ಪಡೆದವರಿಗೆ ಉಂಟಾಗುವ ಏಳು ಮಹಿಮೆಗಳು: ಬುದ್ಧಿ ಋದ್ಧಿ, ತಪರ್ಧಿ, ಔಷಧರ್ಧಿ, ರಸರ್ಧಿ, ಬಲರ್ಧಿ, ಜ್ಞಾನರ್ಧಿ, ಚಾರಣರ್ಧಿ.ಎಂದು ಜೈನ ಕವಿಗಳು ಹೇಳಿಕೊಂಡಿದ್ದಾರೆ.

ಋಷಿ

ಕ್ಷೇತ್ರ ಕ್ಷೇತ್ರಜ್ಞರ ಸ್ವರೂಪವನ್ನು ಋಷಿಗಳು ಬಹು ಪ್ರಕಾರವಾಗಿ ಹಾಡಿದ್ದಾರೆ. ವಿವಿಧವಾದ ಛಂದಸ್ಸು ಬೇರೆ ಬೇರೆಯಾಗಿ ಹಾಡಿವೆ. ಹೇತುಗಳಿಂದ ಕೂಡಿರುವ ಮತ್ತು ನಿಶ್ಚಯ ರೂಪವಾಗಿರುವ ಬ್ರಹ್ಮಸೂತ್ರ ಪದಗಳು ಹೇಳಿವೆ.

ಋಷಿಗಳು ಎಂದರೆ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡ ವ್ಯಕ್ತಿಗಳು. ಇವರನ್ನು ಮಂತ್ರದ್ರಷ್ಟಾ ಎನ್ನುತ್ತಾರೆ. ಇವರು ಪ್ರಪಂಚದಲ್ಲಿ ಸದಾ ಜಾಗೃತರಾಗಿರುವ ಆಧ್ಯಾತ್ಮಿಕ ಸತ್ಯಗಳನ್ನು ಮೊದಲು ಮನಗಂಡವರು. ಅದನ್ನು ತಯಾರು ಮಾಡಿದವರು

ಎಂದಲ್ಲ. ಯಾರೂ ಆ ಸತ್ಯಗಳನ್ನು ತಯಾರು ಮಾಡಿಲ್ಲ. ಆಧ್ಯಾತ್ಮಿಕ ಸತ್ಯಗಳು ಈ ಪ್ರಪಂಚದಲ್ಲಿ ಸದಾ ಇರುತ್ತವೆ. ಆದರೆ ಯಾವಾಗ ಒಬ್ಬ ವ್ಯಕ್ತಿ ತನ್ನ ಮನಸ್ಸನ್ನು ಶುದ್ಧ ಮಾಡಿಕೊಂಡು ಅದನ್ನು ಸತ್ಯದ ಮೇಲೆ ಕೇಂದ್ರಿಕರಿಸುತ್ತನೆಯೊ ಅವನಿಗೆ ಅದು ಅನುಭವ ಆಗುವುದು. ಯಾವುದನ್ನು ಅನುಭವಿಸುತ್ತಾನೆಯೊ ಅದನ್ನು ಕವಿ ಹಾಡುವಂತೆ ಹಾಡುತ್ತಾನೆ. ಅವನ ಅನುಭವಕ್ಕೆ ಒಂದು ಶಬ್ದ ರೂಪವನ್ನು ಕೊಡುತ್ತಾನೆ. ಆ ಶಬ್ದರೂಪ ಒಂದು ಪ್ರಾಸದ ಅಲಂಕಾರವನ್ನು ಹಾಕಿಕೊಂಡು ವ್ಯಕ್ತವಾಗುತ್ತದೆ. ವೇದಗಳಲ್ಲಿ ಹಲವು ಬಗೆಯ ಛಂದಸ್ಸುಗಳಿವೆ. ಒಂದೊಂದು ಮಂತ್ರವೂ ಒಂದೊಂದು ಛಂದಸ್ಸಿನ ಆಕಾರವನ್ನು ಧರಿಸಿ ವ್ಯಕ್ತವಾಗುವುದು ಎಂದು ಭಗವದ್ಗೀತೆಯಲ್ಲಿ ಬರುತ್ತದೆ. (ಗೀತಾಭಾವಧಾರೆ – ಸೋಮನಾಥಾನಂದ, ಪು. ಸಂ. 548 – 549) ಇಲ್ಲಿಯೇ ನಾವು ಗ್ರಹಿಸಬೇಕಾದ ಮತ್ತೊಂದು ಅಂಶವಿದೆ–"ನಾನೃಷಿ ಕುರುತೇ ಕಾವ್ಯಂ"ಋಷಿಯಲ್ಲದವನು ಕಾವ್ಯವನ್ನು ರಚಿಸಲಾರ.ಕಾವ್ಯವು ತಪಸ್ಸಿನ ರೀತಿಯಲ್ಲಿ ಏಕಾಗ್ರತೆಯನ್ನು ಬಯಸುತ್ತದೆಯೆನ್ನುವುದು ಇಲ್ಲಿಯ ಭಾವನೆಯಾಗಿದೆ.

ವೇದಕಾಲದಲ್ಲಿ ಋಷಿಯನ್ನು (ಅಥರ್ವವೇದದ ಎರಡು ಋಕ್ಕುಗಳಲ್ಲಿ) ರಾಜ ನಿರ್ಮಾತೃ ಎಂದು ಕರೆಯಲಾಗಿದೆ.

ಋಷಿಯರಲ್ಲದೆ ಬೇರೆಯವರಿಗೆ ಜ್ಯೋತಿಷ್ಯ ಕಲಿಸಬಾರದು ಎಂಬ ನಂಬಿಕೆಯು ಜೈನ ಧರ್ಮದಲ್ಲಿ ಇದೆ. ಜ್ಞಾನಹೊಂದಿ ಸಂಸಾರದ ಕೊನೆ ಮುಟ್ಟಿದವನು, ತತ್ವಜ್ಞಾನಿ.

ಏಳು ವಿಧದ ಋಷಿಗಳು ೧. ಬ್ರಹ್ಮರ್ಷಿ (ವಿಶ್ವಾಮಿತ್ರ) ೨. ದೇವಋಷಿ. (ಬ್ರಹ್ಮಸೃತಿ) ೩. ಮಹರ್ಷಿ (ವಾಲ್ಮೀಕಿ) ೪. ಪರಮಋಷಿ. ೫. ರಾಜರ್ಷಿ, ೬. ಕಾಂಡಋಷಿ ೭. ಶ್ರುತ ಋಷಿ, ಯಾರು ವೇದವನ್ನು ತಿಳಿದಿರುತ್ತಾರೋ ಅವರನ್ನು ಋಷಿಗಳೆಂದೇ ಕರೆಯುತ್ತೇವೆ. ಕ್ಷತ್ರಿಯ ವಂಶಜ ವಿಶ್ವಾಮಿತ್ರನಿಗೆ ತಾನು ಬ್ರಹ್ಮಋಷಿಯಾಗಿರಬೇಕೆಂಬ ಹಂಬಲವಿತ್ತು.

ಕಿತ್ತಡಿ, ಜತಿ, ಜೋಗಿ, ತವಸಿ, ರಿಸಿ ಇವು ಹಳೆಗನ್ನಡ ಕಾವ್ಯದಲ್ಲಿ ಹೆಚ್ಚು ಬಳಕೆಯಾಗುತ್ತಿದ್ದ ಪದಗಳು. ಬೆಳ್ಳುಡಿಯೆಂದರೆ ಗೊರವ. ಋಷಿಗಳು ಬಳಸುತ್ತಿದ್ದ ಜಲ ಪಾತ್ರಕ್ಕೆ ಗುಂಡಿಗೆಯೆಂದು ಹೆಸರು. ಮುನಿಗಳ ಜಡೆಗೆ ಕಡ್ಡಣವೆಂದು ಹೆಸರು. ಅವರ ಬಟ್ಟೆಯ ಪಟ್ಟಿಗೆ ಯೋಗ ಪಟ್ಟಿಕೆ ಎಂದು ಹೆಸರು.

ವಿವರಗಳಿಗೆ ನೋಡಿ: ಸ್ವಾಮಿ ಚಿದಂಬರಾನಂದ ೧೯೭೭ ಋಗ್ವೇದ ರಹಸ್ಯ
ಪುಟ. ೨

ವೇದವ್ರತ ವೈಶಂಪಾಯನ 1984 ಋಗ್ವೇದ
ಶೇಷ ನವರತ್ನ 1989 ನಾಲ್ಕು ವೇದಗಳು

ಎಕ್ಕ ಮದ್ದಳೆ

ಎಕ್ಕಮದ್ದಳೆಯೆಂದರೆ ಒಂದು ಬಗೆಯ ವಾದ್ಯ. ಇದನ್ನು ಬರಿಯ ಮದ್ದಳೆಯೆಂದೂ ಕರೆಯುತ್ತಾರೆ. ಎಕ್ಕವೆಂದರೆ ಏಕಮದ್ದಲೆಯೆಂದೂ ಆಗುತ್ತದೆ. ಚರ್ಮವಾದ್ಯಗಳಲ್ಲಿ ಇದೂ ಒಂದು. ಮದ್ದಳೆಯು ಈಗಲೂ ಯಕ್ಷಗಾನ: ಕರ್ನಾಟಕ ಸಂಗೀತದಲ್ಲಿ ಬಳಕೆಯಾಗುತ್ತದೆ. ಬರಿಯ ಮದ್ದಳೆಯ ವಾದನವು ಮುಖ್ಯವಲ್ಲ. ಆದುದರಿಂದ ಮದ್ದಳೆಯನ್ನು ಪಕ್ಕವಾದ್ಯವೆಂದು ಕರೆಯುತ್ತಾರೆ. ಹಾರ್ಮೋನಿಯಂ; ಪಿಟೀಲುಗಳು ಸ್ವರಜನ್ಯಗಳು. ಮದ್ದಳೆಯ ವಾದನವು ತಾಳಜನ್ಯ. ತಾಳಕ್ಕನುಸಾರವಾಗಿ ಮದ್ದಳೆಯನ್ನು ಬಾರಿಸಲಾಗುತ್ತದೆ. ಮದ್ದಲೆಗೆ ಚರ್ಮವನ್ನು ಬಳಸುವುದರಿಂದ ಚರ್ಮವಾದ್ಯವೆಂದು ಕರೆಯಲಾಗಿದೆ.

ಎಕ್ಕಲದೇವಿ

ಇವೆಲ್ಲವೂ ದುರ್ಗೆಯ ಉಪರೂಪಗಳು. ದೇವಿಯ ಅಷ್ಟ ಶಕ್ತಿಯರು– ಉಗ್ರಚಂಡಾ, ಪ್ರಚಂಡಾ, ಚಂಡೋಗ್ರಾ, ಚಂಡನಾಯಿಕಾ, ಚಂಡಾ: ಚಂಡವತೀ, ಚಂಡರೂಪಾ, ಅತಿಚಂಡಾ (ರಾಮಚಂದ್ರ ರಾವ್ ಎಸ್.ಕೆ. 1975. ಪು. 342) ವನದುರ್ಗೆ ಮತ್ತು ಜಯದುರ್ಗೆಯರು ಭಯಂಕರಾಕಾರದ ದೇವತೆಗಳು (ಅದೇ. ಪುಟ. 342). ಕಾಳಿಯ ಭೇದಗಳಲ್ಲಿ 'ಶ್ಮಶಾನಕಾಳಿ'ಯೂ ಒಂದು (ಅದೇ. ಪು. 343). ಕಾಳಿಯ ಕಲ್ಪನೆಯಲ್ಲಿ ತಾಂತ್ರಿಕರ ಕೊಡುಗೆಯಿದೆ ಮತ್ತು ಜೈನರ ಶಾಸನ ದೇವತೆಗಳಲ್ಲಿಯೂ ಕಾಳಿಕಾ, ಮಹಾಕಾಳಿ, ಶ್ಯಾಮ, ಚಂಡಾ, ಬಲಾ, ಅಂಬಿಕಾ (ದುರ್ಗಾ) ಮೊದಲಾದ ಕಾಳೀ ಭೇದಗಳು ಕಾಣಿಸಿಕೊಳ್ಳುತ್ತವೆ (ಅದೇ. ಪುಟ. 345).

ಎಕ್ಕವಡ

ಎಕ್ಕೆವಡ ಮತ್ತು ಕಟ್ಟಿದ ಮರದ ಬಿಲ್ಲು ಎಂದು ಇದರರ್ಥ. ಇಲ್ಲಿ ಎಕ್ಕವಡವೆಂದರೆ ಪಾದರಕ್ಷೆ.

ಕಿಟ್ಟೆಲ್ ಅವರು ಬೇಂಟೆಯ ಕೆರ; ಕೆರ್ಪು ಎಂಬ ಅರ್ಥವನ್ನು ನೀಡಿದ್ದಾರೆ. ಎಕ್ಕವಡದಲ್ಲಿ 'ವ' ಲೋಪವಾಗಿ ಎಕ್ಕಡ ಎಂದಾಗಿದೆ. ಎಕ್ಕಡದಲ್ಲಿ ಹೊಡೆ = ಅವಮಾನಮಾಡು. 'ಶಾಲು ಸುತ್ತಿ ಎಕ್ಕಡದಲ್ಲಿ ಹೊಡೆದ ಹಾಗೆ' – ಗಾದೆ ಮಾತು.

ಎಕ್ಕಡ (ನಾ) ಕಾಲಿಗೆ ಹಾಕಿಕೊಳ್ಳುವ ಚರ್ಮದ ಜೋಡು; ಪಾದರಕ್ಷೆ; ಮೆಟ್ಟು ಕೆರ; ಚಪ್ಪಲಿ; "ಎಕ್ಕವಡಂ ಬೇಂಟೆಯಕೆಱ" (ಚತು (ನಿ) 36) "ಎಕ್ಕವಡ ಕೆರ್ಪುಕ್ಕು" (ಶಬ್ದಮಂ.33)

ಬೇಂಟೆಯ ಕೆರ್ಪು ಬೇರೆ. ಎಕ್ಕವಡವೆಂದರೆ ಚಪ್ಪಲಿ. ಆದರೆ ಬೇಟೆಗಾಗಿ ಧರಿಸುವ ಎಕ್ಕವಡ ಬೇರೆ ಎಂಬುದು ಗಮನಾರ್ಹ. ಎಕ್ಕಡದಲ್ಲಿ ಹೊಡೆಯುವುದೆಂದರೆ ಅವಮಾನ ಸೂಚಕವಾಗಿದೆ. ಚೆರ್ಪು–ಕೆರ್ಪು ಆಗಿರುವುದೂ ಇಲ್ಲಿ ಉಲ್ಲೇಖನೀಯ.

ಎಣ್ಣೆರಲಪಟ್ಟ

ಹಣೆಗೆ ಬಾಸಿಂಗದ ಸ್ವರೂಪದಲ್ಲಿ ಕಿರೀಟವನ್ನು ಕಟ್ಟುತ್ತಿದ್ದರು. ಪಟ್ಟವೆಂದರೆ ಸಿಂಹಾಸನ. ಒಬ್ಬ ವ್ಯಕ್ತಿ ಪಟ್ಟವೇರಬೇಕಾದರೆ ಅವನಿಗೆ ಮೂರ್ಧಾಭೀಷೇಕ ಕ್ರಿಯೆ ನಡೆಯುತ್ತದೆ. ಸಿಂಹಾಸನವೇರುವುದು ಒಂದು ರೀತಿಯಿಂದ ಆಚರಣೆ. ಪಟ್ಟ ಕಟ್ಟುವುದು ಎಂದರೆ ಸಮಸ್ತರು ಒಬ್ಬನನ್ನು ಒಪ್ಪಿಕೊಳ್ಳುವುದು. ಸಿಂಹಾಸನವೇರುವುದಕ್ಕೆ ಅರ್ಹತೆ ಬೇಕು. ಅದರಂತೆ ಪಟ್ಟಕಟ್ಟಲಾಗುತ್ತದೆ. ಹಿಂದೆ ರಾಜರನ್ನು ಆಯ್ಕೆ ಮಾಡುವಾಗ ಅವನ ಅರ್ಹತೆಯು ಪ್ರಧಾನವಾಗಿತ್ತು. ಅವನು ಪ್ರಜಾಪತಿಯಾಗುವ; ನಿಷ್ಪಕ್ಷ ಧೋರಣೆಯ ವ್ಯಕ್ತಿಯಾಗಿರಬೇಕಾಗಿತ್ತು. ಪಟ್ಟಗಳಲ್ಲಿ ವಿಧಗಳಿವೆ; ಅಗ್ರಮಹಿಷಿ ಪಟ್ಟ; ಮಂತ್ರಿ ಪದವಿಯ ಪಟ್ಟ; ಸೇನಾಧಿಕಾರಿಯ ಪಟ್ಟ ಇತ್ಯಾದಿ.

ಎಸರು

ಅಡಿಗೆಗಾಗಿ ಕುದಿಯಲ್ಪಟ್ಟ ನೀರು; ಕುದಿನೀರು.ಹವ್ಯಕ ಭಾಷೆಯಲ್ಲಿ ಇಂದಿಗೂ ಈ ಪದವು ಚಾಲ್ತಿಯಲ್ಲಿದೆ.ಎಸರು ಮಡುಗು ಎಂದರೆ ಅನ್ನಕ್ಕೆ ನೀರನ್ನು ಕುದಿಯಲು ಇಡು. ಎಸರು ಎಂದರೆ ಅನ್ನ ಮಾಡುವ ಮೊದಲು ಕಾಯಿಸುವ ನೀರು. ಅಕ್ಕಿಗರ್ಚುವ ಎಂದರೆ ಅಕ್ಕಿತೊಳೆಯುವ ಕ್ರಿಯೆ. ಅಕ್ಕಿತೊಳೆದ ನೀರಿಗೆ ಅಕ್ಕಚ್ಚು ಎಂದು ಹೆಸರು.

ಎಳೆಗೋಣ

ಪ್ರಾಣಿ ಬಲಿಯು ಆಚರಣೆಗಳಲ್ಲಿ ಒಂದು. ಮಾರಿದೇವತೆಯ ಆಚರಣೆಯಲ್ಲಿ ಕೋಣನ ತಲೆ ಕಡಿಯುವುದು ಈಗಲೂ ರೂಢಿಯಲ್ಲಿದೆ. ಯಜ್ಞದಲ್ಲಿಯೂ ಪ್ರಾಣಿ ಬಲಿಯ ವಿಷಯ ಬರುತ್ತದೆ. ಅಶ್ವಮೇಧಯಾಗದಲ್ಲಿ ಕುದುರೆಯ ಬಲಿಯು ಮುಖ್ಯ. ಯಜ್ಞದಲ್ಲಿ ಎಳೆಗರುವನ್ನು ಬಲಿಗಾಗಿ ಬಳಸುತ್ತಿದ್ದರು. ಬಲಿಯು ಪ್ರಾಚೀನ ಭಾರತದಲ್ಲಿ ಒಂದು ಸಾಮಾನ್ಯ ಆಚರಣೆಯಾಗಿತ್ತು. 'ಕೆರೆಗೆ ಹಾರ' 'ನರಬಲಿ' ಯು ಇದಕ್ಕೆ ಉದಾಹರಣೆಗಳಾಗಿವೆ.

ವಿವರಗಳಿಗೆ ನೋಡಿ: ಡಿ. ಡಿ. ಕೊಸಾಂಬಿ ೨೦೦೩ ಪುರಾಣ ಮತ್ತು ವಾಸ್ತವ
ಕೂಡುದಾರಿಯಲ್ಲಿ ಮಾತೃದೇವತೆಯರು (ಲೇಖನ)
ಎಂ. ಎಂ. ಕಲಬುರ್ಗಿ ೧೯೮೦ ಸಮಾಧಿ ಬಲಿದಾನ
ವೀರಮರಣ ಸ್ಮಾರಕಗಳು

ಏಕಪಾಠಿ

ಒಂದು ಸಲ ಓದಿದರೆ ಮನನ ಮಾಡಿ ಮತ್ತೆ ಅದನ್ನು ಸಂಪೂರ್ಣವಾಗಿ ಒಪ್ಪಿಸುವವನು **ಏಕಪಾಠಿ**ಯಾಗಿರುತ್ತಾನೆ. ಮತ್ತೊಂದು ಘನಪಾಠದ ಕ್ರಮ. ವೇದಪಠಣದ ವಿಶೇಷ ರೀತಿಯೇ ಘನಪಾಠ. ವೇದ ಮಂತ್ರಗಳ ಮೂಲಸ್ವರೂಪವು ಬದಲಾಗಬಾರದೆಂದು ಅವುಗಳನ್ನು ಸಂಹಿತಪಾಠ. ಪದಪಾಠ, ಕ್ರಮಪಾಠ, ಜಟಾಪಾಠ,

ಎಂದು ಹಲವು ಪಾಠಕ್ರಮಗಳಲ್ಲಿ ಕಂಠಪಾಠ ಮಾಡುತ್ತಿದ್ದರು. ಎರಡು ವೇದಗಳನ್ನು ಕಂಠಪಾಠ ಮಾಡಿದವರು ದ್ವಿವೇದಿಗಳು. ಮೂರುವೇದ ಕಂಠ ಮಾಡಿದವರು ತ್ರಿವೇದಿ. ನಾಲ್ಕುವೇದ ಕಂಠಪಾಠ ಮಾಡಿದವರನ್ನು ಚತುರ್ವೇದಿಗಳೆಂದು ಕರೆಯುತ್ತಿದ್ದರು.

ಏತವಾಡು

"ಇದರಿಂದ 'ಏತ'ಕ್ಕೆ ಸಂಸ್ಕೃತದಲ್ಲಿ 'ಅರಘಟ'ದಂತೆ, 'ರಹಟ' ಎಂಬ ಹೆಸರಿರುವುದೂ ಸಿದ್ಧವಾಗುತ್ತಿದೆ. ಏಕಸ್ಥಾನೀಗಳಾದ 'ಘ-ಹ' ಕಾರಗಳು ಸಂಸ್ಕೃತದಲ್ಲಿ ವಿನಿಮಯ ವಡೆಯುವುದನ್ನು 'ಶತ್ರುಹಾ-ಶತ್ರುಘ್ನ' ಇವೇ ಮೊದಲಾದ ರೂಪಗಳ್ಲಿ ನೋಡಬಹುದು. ಇದರಿಂದ, ಆ 'ಅರಘಟ'ಕ್ಕೆ 'ರಹಟ' ಎಂಬುದರಂತೆ 'ರಘಟ' ಎಂಬ ಸ್ವರೂಪವೂ ಇದ್ದಿರಲೇಬೇಕು. ನಾಗವರ್ಮಾದಿ ಛಂದಶ್ಯಾಸ್ತ್ರಕಾರರೆನ್ನುವ 'ನಾನಾ ವಿಷಯ (ದೇಶ)' ಭಾಷಾಸಂಬದ್ಧವಾದ ಛಂದಸ್ಸಿನೊಳಗೆ 'ವೃತ್ತ' ಜಾತಿ ಎಂಬ ಎರಡು ಪ್ರಮುಖ ಭೇದಗಳಿವೆ. ಆ ಭೇದಗಳಲ್ಲಿ 'ರಗಳೆ'ಯನ್ನೊಳಕೊಂಡ 'ಜಾತಿ' ಎಂಬುದು 'ರಘಟಾ' ಎಂದು ಸ್ತ್ರೀವಾಚಕವಾಗಿಯೇ ಸೂಚಿಸಿರಬೇಕು 'ಅರಘಟ' (ಅರ=ನೀರಿನ; ಘಟ=ಗಡಿಗೆ, ಅಥವಾ ಘಟೀಯಂತ್ರ) ಎಂಬ ವ್ಯುತ್ಪತ್ತಿಯಿಂದ 'ಅರಘಟ್ಟ'ವೂ, ಸಂಕುಚಿತವಾಗಿ ರೂಪುವಡೆದ 'ರಹಟ'ವೂ ಸಾರ್ಥಕವೆನ್ನಿಸುತ್ತಿವೆ. ಒನಕೆಯಿಂದ ಅಕ್ಕಿಗುಟ್ಟುವಾಗ ಹಾಡುವುದೇ 'ಒನಕೆವಾಡ'ಲ್ಲವೆ? ಅದರಂತೆ, 'ರಘಟ'ದಿಂದ ನೀರನ್ನೆತ್ತುವಲ್ಲಿ, ಹಾಡುವ ಹಾಡೇ 'ರಘಟಾಬಂಧ' ಅಲ್ಲವೆ 'ರಗಳೆ' ಎಂಬುದು ಯುಕ್ತಿಯುಕ್ತವಾಗಿದೆ. ಅದನ್ನು 'ಏತವಾಡು' ಎನ್ನಲೂಬಹುದೆಂದು ನಮ್ಮ ಸೂಚನೆ. ಹಾಗೆ 'ರಘಟ'ದಿಂದ ನೀರನ್ನೆಳೆವುದೆಂಬುದು ಶ್ರಮದಾಯಕವಾದುದರಿಂದಲೇ, 'ರಗಳೆ' ಎಂಬುದಕ್ಕೆ 'ಬೇಸರಿಕೆ' ಎಂಬ ಇನ್ನೊಂದರ್ಥವೂ ರೂಢವಾದುದಾಗಿರಬೇಕು. ಹಲವು ತರದ ಬೇಸಾಯಗಳಿಗೆಡೆಯಾಗಿದ್ದ ನಮ್ಮ ಕನ್ನಡ ಬನವಾಸಿ ಪ್ರಾಂತವು, ಅಂಥ 'ರಘಟ' ಸಂಬಂಧದಿಂದ 'ರಗಳೆ'ಯಾಗಿ 'ವನವಾಸ ಸ್ತ್ರೀಸ್ವನಿತ' ರಮಣೀಯವಾಗಿ 'ವಾನವಾಸಿಕೆ'ಯಾಗಿದೆ. ಅದರಿಂದ 'ರಗಳೆ' ಮಾರ್ಗವನ್ನೊಂದಿದರೂ, ಪಂಪನ ನಾಡಾಗಿರಬೇಕಾದ ಬನವಾಸಿಯ ದೇಸಿವಾಡು ಎಂಬುದನ್ನು ಮರೆಯಬಾರದು"ಎಂದು ಮುಳಿಯ ತಿಮ್ಮಪ್ಪಯ್ಯನವರ ಅಭಿಪ್ರಾಯ.

ಏರಣಿಗ

ಚಿನ್ನದ ಕೆಲಸ ಮಾಡುವವರನ್ನು ಏರಣಿಗನೆಂದು ಕರೆಯುತ್ತಿದ್ದರು. ಸುವರ್ಣಕಾರನೆಂದರೂ ಚಿನ್ನದ ಕೆಲಸ ಮಾಡುವವನೆಂದೇ ಅರ್ಥ. ಚಿನ್ನ, ಬೆಳ್ಳಿಯ ಕೆಲಸ ಮಾಡುವವರನ್ನು ಕುಶಲ ಕರ್ಮಿಗಳು ಎಂದು ಕರೆಯುತ್ತಾರೆ. ಮರದ ಕೆಲಸ;

ಚಿನ್ನದ ಕೆಲಸ; ಕಬ್ಬಿಣದ ಕೆಲಸ ಮಾಡುವವರನ್ನು ಆಚಾರಿಗಳೆಂದು ಕರೆಯುತ್ತಾರೆ. ಮರದ ಕೆಲಸ: ಚಿನ್ನದ ಕೆಲಸ: ಕಬ್ಬಿಣದ ಕೆಲಸಗಳು ಸೂಕ್ಷ್ಮವಾದವುಗಳು. ಅವುಗಳು ಇತರೆ ಕೆಲಸಗಳಂತಲ್ಲ. ಅದರಲ್ಲಿಯೂ ಚಿನ್ನದ ಕೆಲಸವು ಅತ್ಯಂತ ಸೂಕ್ಷ್ಮ ಕುಶಲತೆಯನ್ನು ಬಯಸುತ್ತದೆ. ಕುಶಲವಾದ ಕಲೆಯು ಹೇಗೆ ಸಂಸ್ಕೃತಿಯಲ್ಲಿ ಮಹತ್ವ ಪಾತ್ರವನ್ನು ವಹಿಸುತ್ತದೆಯೆನ್ನುವುದಕ್ಕೆ ಈ ಪದವೇ ಸಾಕು.

ವಿವರಗಳಿಗೆ ನೋಡಿ: ಡಾ. ಎಂ. ಚಿದಾನಂದಮೂರ್ತಿ 2008 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

ಏಳು ಅಜೀವರತ್ನಗಳು

ಚಕ್ರವರ್ತಿಗೆ ತಾವಾಗಿ ಬಂದು ಸೇರಬೇಕಾದ ರತ್ನಗಳು ಎರಡು ಬಗೆಯವು; 1. ಚಕ್ರ, ಖಡ್ಗ, ಛತ್ರಿ ಮೊದಲಾದ ಏಳು ಅಜೀವರತ್ನಗಳು. 2. (ಗೃಹಪತಿ, ಸೇನಾಪತಿ, ಶಿಲ್ಪಿ, ಪುರೋಹಿತ, ಸ್ತ್ರೀ; ಮೊದಲಾದ ಏಳು ಜೀವರತ್ನಗಳು.)

ಇದು ಜೈನ ಧರ್ಮದ ವಿಶಿಷ್ಟ ಪರಿಭಾಷೆಯಾಗಿದೆ. ಏಳು ಅಜೀವರತ್ನಗಳ ಕುರಿತು ಬೇರೆ ಧರ್ಮಗಳಲ್ಲಿ ಉಲ್ಲೇಖಗೊಂಡಿಲ್ಲ.

ಏಟ್ಗೆವಾಡಿವ

ಶುದ್ಧಪಾಡ್ಯ, ಶುಕ್ಲ ಪ್ರಥಮೆಯೆನ್ನುವುದಕ್ಕೆ ಪಂಪನು ಏಟ್ಗೆವಾಡಿವ ಎಂದು ಬಳಸಿದ್ದಾನೆ. ಶುಕ್ಲಪಕ್ಷದಲ್ಲಿ ಚಂದ್ರನು ವೃದ್ಧಿಸುತ್ತಾನೆ. ಅದರಂತೆ ಮಕ್ಕಳು ದಿನೇ ದಿನೇ ಬೆಳೆದರು ಎಂದು ಹೇಳುವುದು ಮುಖ್ಯ ಗುರಿ. ಆದರೆ ಭಾರತೀಯ ಕಾಲಮಾನದ ಪದ್ಧತಿಯನ್ನು ಇದು ವಿವರಿಸುತ್ತದೆ. ಅದು ಸೌರಮಾನ ಮತ್ತು ಚಂದ್ರಮಾನ ಪದ್ಧತಿಗಳು. ಭಾರತೀಯ ಕಾಲಮಾನ ಪದ್ಧತಿಗಳು. ಇದನ್ನು ಆಚರಿಸುವವರಲ್ಲಿಯೂ ಭಿನ್ನತೆಗಳಿವೆ.

ಏಟ್ಗೆ+ಪಾಡಿವ ಎಂಬುದು ಏಟ್ಗೆವಾಡಿವ ಎಂದಾಗಿದೆ. ಪಾಡಿವ ಅಂದರೆ ಪಾಡ್ಯ. ಇಲ್ಲಿ ಪ>ವ ಕಾರವಾಗಿ ಬಳಕೆಯಾಗಿದೆ.

ವಿವರಗಳಿಗೆ ನೋಡಿ: ಸೌರಮತ.

ಐತಿಹ್ಯ

ಐತಿಹ್ಯವು ಜನಸಾಮಾನ್ಯರಿಂದ ಹುಟ್ಟಿವೆ ಮತ್ತು ಅವರಿಗೆ ಸಂಬಂಧಿಸಿದ್ದಾಗಿದೆ. ಐತಿಹ್ಯವೆಂದರೆ ಇತಿಹಾಸಕ್ಕೆ ಸಂಬಂಧಿಸಿದ ಕತೆಯೆಂದು ಅರ್ಥ. ಇದು ಸಾಂಪ್ರದಾಯಿಕವಾಗಿ ಬೆಳೆದು ಬಂದಿರುತ್ತದೆ. ಇದು ಸಂಪೂರ್ಣ ಚರಿತ್ರೆಯ ಅಂಶವನ್ನು ಹೊಂದಿರುವುದಿಲ್ಲ. ಅರೆ ಚಾರಿತ್ರಿಕ ಸಂಗತಿಗಳನ್ನು ಒಳಗೊಂಡಿರುತ್ತದೆ. ರಾಷ್ಟ್ರಿಯತೆ; ಸ್ಥಳೀಯತೆ; ಜನಸಂಸ್ಕೃತಿಗೆ ಅನುಸಾರವಾಗಿ ಐತಿಹ್ಯವು ನಿರೂಪಿತವಾಗುತ್ತದೆ.

ವಿವರಗಳಿಗೆ ನೋಡಿ: ಜಿ.ಎಸ್.ಆಮೂರ ೨೦೦೧ ಕಥನಶಾಸ್ತ್ರ

Julian wolfreys 2002 Key concepts in literary theory P.58

ಒಕ್ಕಲ್

ಒಕ್ಕಲ್ ಅಂದರೆ ಸಂಸಾರವೆಂದರ್ಥ. ಒಕ್ಕಲು ಹೂಡುವುದು ಎಂದರೆ ಹೊಸದಾಗಿ ಸಂಸಾರ ಮಾಡುವುದು ಎಂದು ಅರ್ಥವಿಸಿಕೊಳ್ಳಬೇಕು. ಈಗಲೂ "ಒಕ್ಕಲು ಹೂಡುವುದು" ಹೊಸದಾಗಿ ಮನೆ ಮಾಡುವುದು ಎಂದರ್ಥ. ಕಲ್ಮಷಿಕನಾಗಿ ತನ್ನ ಒಕ್ಕಲ್ಮಕ್ಕಳಿಸೆಕ್ಕಸಿರ್ಕಮಾದೊಡೆ" ಇಲ್ಲಿ ಒಕ್ಕಲು ಮಕ್ಕಳಿಗೆ ಅಂದರೆ (ಕೆಲಸದವರಿಗೆ) ಆಗುವ ತೊಂದರೆಯ ವಿವರಣೆ. ಕುತೂಹಲದಾಯಕ ಮತ್ತೊಂದು ಅಂಶವೆಂದರೆ ಬ್ರಾಹ್ಮಣನು "ಒಕ್ಕಲು ಮಕ್ಕಳಿಗೆ" ಮಮ್ಮಲ ಮರುಗುವುದು. ಯಜಮಾನನು ತನ್ನ ಒಕ್ಕಲುಗಳನ್ನು "ಒಕ್ಕಲ್ ಮಕ್ಕಳು" ಎಂದು ಕರೆಯುವುದು ಭಾವನಾತ್ಮಕ ಸಂಬಂಧವನ್ನು ಸೂಚಿಸುತ್ತದೆ.

ಒಕ್ಕಲು ಎಂದರೆ ಇಲ್ಲಿ ಕುಟುಂಬ ಎಂಬ ಅರ್ಥ ಧರ್ಮರಾಯನು ಒಕ್ಕಲುಗಳನ್ನು ಕೂಡಾ ಒತ್ತೆಯಿಡುತ್ತಾನೆ. ಒಕ್ಕಲುತನವೆಂದರೆ ಕೃಷಿಕ ಮಾಡುವುದು ಎಂಬ ಅರ್ಥವೂ ಇದೆ. ಒಕ್ಕಲು ಮಕ್ಕಳು ಎಂದರೆ ಕೂಲಿಯವರ ಮಕ್ಕಳು ಎಂಬ ಪದವೂ ಬಳಕೆಯಲ್ಲಿದೆಯೆಂಬುದು ಗಮನಾರ್ಹ.

ಪರದರು	–	ವ್ಯಾಪಾರಿಗಳು
ಪಾರ್ವರು	–	ಬ್ರಾಹ್ಮಣರು
ಒಕ್ಕಲಿಗರು	–	ಒಕ್ಕಲುಮಾಡುವವರು
ಸಾಮಂತರು	–	ಅಧೀನ ರಾಜರುಗಳು
ಪೊಟಿಲು	–	ಪಟ್ಟಣ

ಇವುಗಳು ಸಮಾಜದ ಬೇರೆ ವರ್ಗಗಳನ್ನು ಸೂಚಿಸುತ್ತದೆ. ಒಕ್ಕಲು ಮಾಡುವುದೆಂದರೆ ಧಾನ್ಯಗಳನ್ನು ಬೇರೆ ಮಾಡುವುದು ಎಂಬ ಅರ್ಥವೂ ಇದೆಯೆಂಬುದು ಗಮನಾರ್ಹ. ವೃತ್ತಿ ಸೂಚಕವಾಗಿದ್ದ ಇದು ಜಾತಿ ಸೂಚಕವಾಗಿ ಪರಿವರ್ತನೆ ಹೊಂದಿರುವುದು ಅನಂತರದ ಕಾಲಘಟ್ಟದಲ್ಲಿ.

"ಸೇಲಂ ಜಿಲ್ಲೆಯ ಕನ್ನಡ ಒಕ್ಕಲಿಗರಿಗೆ ನಾಟ್ಟರೆಂಬ ವಾಡಿಕೆಯಿದೆ. ಆದುದರಿಂದ, ನಾಟರೆಂಬವರು ತಮಿಳುರಿರುವಂತೆ ಕನ್ನಡರೂ ಉಂಟೆಂಬಲ್ಲಿ ಸಂದೇಹವಿಲ್ಲ. ಕನ್ನಡ ನಾಟರೇ ನಾಡವರು. ನಾಡವರು ಎಂದರೂ ಈ ನಾಡಿನ ಮೂಲನಿವಾಸಿ; ಒಕ್ಕಲುಮಕ್ಕಳೆಂಬ ಅರ್ಥ. ರಾಷ್ಟ್ರಕೂಟರು ಎಂದರೆ ಒಕ್ಕಲತನದವರೆಂಬ ಅರ್ಥ್ವೇ ಉಂಟೆಂದು ಶಾಸನ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ಶ್ರೀಮಾನ್ ಹೊಸಕೊಪ್ಪ ಕೃಷ್ಣರಾಯರು ನಿರ್ಧರಿಸಿದ್ದಾರೆ ಎಂದು ಶಂಬಾ ಜೋಶಿಯವರು ಹೇಳುತ್ತಾರೆ.

ಒಕ್ಕಲುತನಕ್ಕಿಂತ ಮುಂಚಿನ ಸ್ಥಿತಿಯಲ್ಲಿ ಮಾನವನಿಗೆ ಒಂದೆಡೆಯಲ್ಲಿ ಊರಿಸಿಕೊಂಡು ನಿಲ್ಲುವುದೇ ಸಾಧ್ಯವಿದ್ದಿಲ್ಲ. ಒಕ್ಕಲು ಶಬ್ದದಲ್ಲಿ ಈ ಅರ್ಥವೆಲ್ಲ

ಅಡಕವಾಗಿದೆ. ಆದುದರಿಂದಲೆ, ಒಕ್ಕಲುನತಕ್ಕೂ ಒಕ್ಕಲಾಗಿರುವುದಕ್ಕೂ ಇಷ್ಟೊಂದು ಅನ್ಯೋನ್ಯ ಸಂಬಂಧ. 'ಕುಡವ'ರೆ ಕುಳರಾದರು; ಕುಡುವಿ (ಕೂರ್ಮಿ=ರೆಡ್ಡಿ)– ಕುಟುಂಬಿಗಳಾದರು; ಕುಡ–ಒಕ್ಕಲರಾದರು/ ಊರೂರಿಗೆ ಕುಳಕುಲಗಳು ತಲೆಯೆತ್ತಿದುವು. ಜನಾಂಗವು ಊರು (ಪೂರ–ಪುರ)ಗಳನ್ನು ಕಟ್ಟಿಕೊಂಡು ಬಾಳಲಾರಂಭಿಸಿತು. ಮಾವವನು ಒಂದಡಿ ಮುಂದೆ ಇಟ್ಟನು. ಈ ಮುಂದಿನ ತರಗತಿಯಲ್ಲಿಯೇ ನಾಡು–ರಾಷ್ಟ್ರಗಳು ಉದಯವಾದುವು. ನಾಡವರೂ (ರಾಷ್ಟ್ರಿಕರೂ), ಒಂದೊಂದು ಜನಾಂಗದ ಹೆಸರಿನ ದೇಶಗಳೂ ಕಾಣಿಸಿಕೊಳ್ಳಲಾರಂಭಿಸಿದುವು."

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 1 ಪುಟ. 267, ಸಂಪುಟ. 2 ಪುಟ. 60–61.

ಒಡ್ಡೋಲಗ

ಒಡ್ಡೋಲಗ ಕೊಡು(ಕ್ರಿಯೆ) ದರ್ಬಾರು ನಡೆಸು. ಸಭೆ ಸೇರಿಸು (ಕೂಡಿಸು) ಒಡ್ಡುವೆಂದರೆ ಗುಂಪು: ರಾಶಿ: ಎಂಬರ್ಥವೂ ಇದೆ. ಮಹಾಸಭೆಗೆ ಒಡ್ಡೋಲಗವೆಂದು ಸಾಮಾನ್ಯ ರಾಜರು ನೀಡುವ ಸಭೆಗೆ ಓಲಗವೆಂದೂ; ತೀರ್ಮಾನದ ಸಂದರ್ಭದಲ್ಲಿ ರಾಜನು ಓಲಗ ಚಾವಡಿಯಲ್ಲಿರುತ್ತಾನೆಂದು ನಂಬಿಕೆಯಿದೆ.

ಒಡ್ಡೋಲಗವು ರಾಜ ಸಭೆ. ಇದರಲ್ಲಿ ರಾಜನು ಮುಖ್ಯ ಸಿಂಹಾಸನದಲ್ಲಿ ಮಂಡಿತನಾಗುತ್ತಾನೆ. ಅವನು ಕುಳಿತುಕೊಳ್ಳುವ ಜಾಗವು ಎತ್ತರದಲ್ಲಿರುತ್ತದೆ. ಒಡ್ಡೋಲಗದಲ್ಲಿ ಮಂತ್ರಿಗಳು; ರಾಜ ಪುರೋಹಿತರು; ಸೇನಾನಾಯಕರು; ಮಾಂಡಲಿಕರು ಕುಳಿತಿರುತ್ತಾರೆ. ಸಾಮಾನ್ಯ ಸಮಸ್ಯೆಗಳು ಒಡ್ಡೋಲಗದಲ್ಲಿ ಚರ್ಚೆಗೆ ಬರುತ್ತದೆ. ಒಡ್ಡೋಲಗಕ್ಕೆ ಸ್ತ್ರೀಯರ ಪ್ರವೇಶವಿಲ್ಲ. ಉದಾಃ ಕೌರವನ ಒಡ್ಡೋಲಗ– ದ್ರೌಪದಿಯ ವಸ್ತ್ರಾಪಹರಣ ಸನ್ನಿವೇಶ.

ಒತ್ತೆ

ಒತ್ತೆಯಿಡುವುದೆಂದರೆ ಆಧಾರವಾಗಿಡುವ ವಸ್ತು. ಒತ್ತೆಯಾಳು ಆಧಾರವಾಗಿರಿಸಿಕೊಟ್ಟ ಆಳು ಎಂದರ್ಥ. ಉಪಭೋಗ ರಹಿತವಾದ ಅಡವು ನಾಶಗೊಳ್ಳುವುದು ಮತ್ತು ಅದರ ಮೂಲ ಧನವು ಬೆಳೆಯುವುದು. ಸ್ಥಿರಾಸ್ಥಿಯು ಪ್ರಯಾಸಭೋಗ್ಯ ಫಲಯೋಗ್ಯ ಎಂದು ಎರಡು ವಿಧ. ಭೂಮಿ, ಮರ, ಗಿಡಗಳು, ಮುಂತಾದವನ್ನು ಒತ್ತೆ ಹಾಕಿಕೊಂಡು ತನ್ನ ಶಾರೀರಕ ಪರಿಶ್ರಮದಿಂದಲೇ ಅನುಭವಿಸತಕ್ಕುದು ಪ್ರಯಾಸಭೋಗ್ಯ. ಒತ್ತೆಯಿಟ್ಟವನ ಪರಿಶ್ರಮದ ಪರಿಣಾಮವಾಗಿ ಕೈಸೇರಿದ ಫಲವನ್ನು ಅನುಭವಿಸತಕ್ಕುದು ಫಲಭೋಗ್ಯ. ವ್ಯಾಪಾರದಲ್ಲಿ ಇಷ್ಟು ಲಾಭ ಬಂದರೆ ಇಷ್ಟನ್ನು ಕೊಡುವೆನೆಂದು ಮಾಡಿಕೊಂಡ ನಿರ್ಣಯದ ಫಲವಾಗಿ ಬಂದ ಬಡ್ಡಿಯು ಪ್ರಕ್ಷೇಪವೃದ್ಧಿ. ಅದರಿಂದ ಮೂಲಧನವನ್ನು ತೀರಿಸಿಕೊಂಡು

ಅನುಭವದಲ್ಲಿರುವ ಒತ್ತೆಮಾಲನ್ನು ಬಿಟ್ಟುಕೊಡಬೇಕೆಂದು ಕೌಟಲೀಯ ಅರ್ಥಶಾಸ್ತ್ರದಲ್ಲಿ ಬರುತ್ತದೆ. ಪ್ರಾಚೀನ ಭಾರತದ ಸಾಮಾಜಿಕ ಸನ್ನಿವೇಶದಲ್ಲಿ ಒತ್ತೆಯ ಪದ್ಧತಿಯೂ ಇತ್ತು ಎಂಬುದು ಗಮನಾರ್ಹ.

ವಿವರಗಳಿಗೆ ನೋಡಿ: ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು 2010
ಕೌಟಲೀಯ ಅರ್ಥಶಾಸ್ತ್ರ ಪುಟ. 270.

ಓಜಸ್ಸು/ಓಜಗುಣ

ಒಂದು ಕಾವ್ಯಗುಣ. ಭರತನಿಂದ ಹಿಡಿದು ಮುಂದಿನವರೆಲ್ಲ ಈ ಗುಣವನ್ನು ನಿರೂಪಿಸುತ್ತಲೇ ಬಂದಿದ್ದಾರೆ. ಭಾಮಹ ಹೇಳುವ ಮೂರು ಗುಣಗಳಲ್ಲಿ ಇದೂ ಒಂದು. ಸಮಾಸಗಳಿಂದ ಕೂಡಿದ ಜಟಿಲವಾದ ಶಬ್ದರಚನೆಯಲ್ಲಿ ಓಜೋಗುಣವಿರುತ್ತದೆಂದು ಹೇಳಲಾಗಿದೆ. ದಂಡಿಯಂತೂ ಇದನ್ನು ವೈದರ್ಭಿಮಾರ್ಗದ ಗದ್ಯದಲ್ಲಿ ಮಾತ್ರ ಇರುವ ಗುಣವೆಂದು ಸೂಚಿಸಿದ್ದಾನೆ. ವೈದರ್ಭಿಯ ವಿಪರ್ಯಯಗಳನ್ನು ಪ್ರಾಣವಾಗುಳ್ಳ ಗೌಡಿಯಲ್ಲಿ ಓಜಸ್ಸಿನ ವಿಪರ್ಯಯ ಯಾವುದೂ ಇಲ್ಲದಿದ್ದರೂ ಆ ಮಾರ್ಗದ ಪದ್ಯಗಳಲ್ಲೂ ಸಮಾಸಯುಕ್ತ ರಚನೆಗಳು ಬಂದು ಓಜಸ್ಸಿರುತ್ತದೆ. ರೌದ್ರ, ಅದ್ಭುತ ಮತ್ತು ವೀರರಸಗಳ ನಿರೂಪಣೆಯಲ್ಲಿ ಓಜೋಗುಣವಿರುವ ರಚನೆಯೇ ಔಚಿತ್ಯಪೂರ್ಣವೆಂದು ಹೇಳಲಾಗಿದೆ.

ಓದು

ಓದಬಲ್ಲವರಿಂದ ಓದಿಸಿಕೊಳ್ಳುವುದು. ಅವರು ಹೇಳಿರುವುದು ಎರಡು ದೃಷ್ಟಿಯಿಂದ ಮುಖ್ಯ: ಒಂದು ಗಮಕ. ಎರಡನೆಯದು ವಸಾಹತು ಕಾಲದಲ್ಲಿ ಓದುವ ರೀತಿಯು ಬದಲಾಗಿರುವುದು. ಬೇಂದ್ರೆಯವರು ಕೂಡಾ ಒಂದು ಸಂದರ್ಭದಲ್ಲಿ ಲಕ್ಷ್ಮೀಶನ ಕಾವ್ಯದ ಬಗ್ಗೆ ಬರೆಯುವಾಗ ವಸಾಹತು ಕಾಲದ ಶಿಕ್ಷಣ ಪದ್ಧತಿಯು "ಮೌನ ಓದನ್ನು" (Silent reading) ಪ್ರೋತ್ಸಾಹಿಸಿತು ಎಂದು ಹೇಳುತ್ತಾರೆ. ಇಂಗ್ಲಿಷಿನ ಸಾಹಿತ್ಯ ವಿಮರ್ಶೆಯಲ್ಲಿ 'ನಿಕಟಓದು' ಎಂಬ ಪರಿಕಲ್ಪನೆಯಿದೆ. ಇದು ಪ್ರಾರಂಭವಾಗಿರುವುದು ರೂಪನಿಷ್ಠ ವಿಮರ್ಶೆಯ ಪರಂಪರೆಯಲ್ಲಿ. ಸಾಹಿತ್ಯ ಕೃತಿಯು ಅದರಷ್ಟಕ್ಕೆ ಅದು ಪರಿಪೂರ್ಣವಾಗಿರುತ್ತದೆ. ಕೃತಿಯೊಂದರ ಆಶಯ; ಅದರ ನಿರೂಪಣೆ ಅದರ ಏಕತೆಯು ಮುಖ್ಯ. ಇದನ್ನು ಗ್ರಹಿಸಬೇಕಾದರೆ ಕೃತಿಕಾರನ ಉದ್ದೇಶವೇನು ಎನ್ನುವುದು ಮುಖ್ಯವಲ್ಲ. ನಿಕಟ ಓದನ್ನು ಎಫ್.ಆರ್.ಲೀವೀಸ್; ಐ.ಎ.ರಿಚರ್ಡ್ ಸಮರ್ಥಿಸುತ್ತಾರೆ.

ಓದು, ಓದುಗ, ಸಹೃದಯ, ರಸಿಕ ಮುಂತಾದ ಪದಗಳು ಚಾಲ್ತಿಯಲ್ಲಿವೆ. ಯಾರು ಬರೆದು ಮುಗಿಸಿರುತ್ತಾರೋ ಅವರ ಬರಹಗಳನ್ನು ಮೌಲ್ಯಮಾಪನ ಮಾಡುವವರು ಓದುಗರು. ಬೇರೆ ಬೇರೆ ಕಾರಣಗಳಿಗಾಗಿ ಓದುಗರು ಕೃತಿಯನ್ನು

ಓದುತ್ತಾರೆ. ಮನೋರಂಜನೆಗಾಗಿ, ವಿದ್ಯಾಭ್ಯಾಸಕ್ಕಾಗಿ, ತಿಳುವಳಿಕೆಗಾಗಿ, ಸಂತೋಷಕ್ಕಾಗಿ ಓದುಗರು ಓದುತ್ತಾರೆ. ಓದುವುದು ಅಂದರೆ ಅದೊಂದು ಕ್ರಿಯಾತ್ಮಕ ಚಟುವಟಿಕೆ. ಅದರ ಮೂಲಕ ಓದುಗ ಅರ್ಥವನ್ನು ಕ್ರಿಯಾಶೀಲವಾಗಿ ಕಟ್ಟುತ್ತಾನೆ. ಒಂದು ಪಠ್ಯವನ್ನು ಓದುವುದರ ಮೂಲಕ ಅರ್ಥದ ಸ್ವರೂಪವನ್ನು ಬೇರೆ ಬೇರೆ ಅನುಸಂಧಾನ ಮಾಡುತ್ತಾರೆ. ಕೃತಿಯನ್ನು ಓದುವಾಗ ಅದರ ಕ್ರಮಗಳು ಬೇರೆ ಬೇರೆ ಸಂದರ್ಭಗಳಲ್ಲಿ ಭಿನ್ನ ಭಿನ್ನವಾಗುತ್ತವೆ. ಒಂದು ಜಾಹೀರಾತನ್ನು, ಒಂದು ಪದ್ಯವನ್ನು ಓದುವುದು ಬೇರೆ ಬೇರೆ ಕ್ರಮಗಳಲ್ಲಿ. ಎರಡನ್ನು ಒಂದು ರೀತಿಯಲ್ಲಿ ಓದುವುದು ಮತ್ತು ಅರ್ಥವಿಸಿಕೊಳ್ಳುವುದು ಕಷ್ಟ. ಓದು ಅನ್ನುವುದು ಚಿರವಾದುದಲ್ಲ. ಅದು ಚರ ಸ್ವರೂಪಿಯಾಗಿರುತ್ತದೆ. ಓದು ಎನ್ನುವುದು ಯಾವುದೇ ರೀತಿಯ ಮಿತಿಗಳಿಗೆ ಒಳಪಡುವುದಿಲ್ಲ ಮತ್ತು ಅದರ ಅನುಭವ ಬೇರೆ ರೀತಿಯಲ್ಲಿರುತ್ತವೆ. ಒಂದು ಚಿತ್ರದಿಂದ ನಮಗೆ ಆಗುವ ಅನುಭವ, ಸಿನಿಮಾ ನೋಡುವಾಗ ಆಗುವ ಅನುಭವ ಮತ್ತು ಕೃತಿಯನ್ನು ಓದುವ ಅನುಭವಗಳು ಯಾವಾಗಲೂ ಭಿನ್ನವಾಗಿರುತ್ತದೆ. ಹಾಗೆಯೇ ಓದುವುದೆಂದರೆ ಸರಳವೆಂದು ಯಾರೂ ಭಾವಿಸುವುದಿಲ್ಲ. ಓದುವುದು ಅತ್ಯಂತ ಮುಗ್ಧವಾದ ಪ್ರತಿಕ್ರಿಯೆಯೂ ಅಲ್ಲ. ಹಾಗೆಯೇ ಓದುಗ ಒಂದು ಸಾಮಾಜಿಕ ಚರಿತ್ರೆ, ಸಂಸ್ಕೃತಿ, ನಿರ್ದಿಷ್ಟ ಸನ್ನಿವೇಶಗಳಲ್ಲಿ ಓದುತ್ತಿರುತ್ತಾನೆ. ಓದುವ ಪ್ರಕ್ರಿಯೆಯು ಸಂತೋಷಕ್ಕೇ ಆದರೂ ಅದರಲ್ಲಿ ನಿರ್ದಿಷ್ಟ ನಿಲುವು ಇರುತ್ತದೆ. ಅದೇ ರೀತಿಯಲ್ಲಿ ಓದುವುದೆಂದರೆ ಅದು ಬಹಿರ್ಮುಖವಾದ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶನಗಳಲ್ಲ. ಕೆಲವು ಜ್ಞಾನಕ್ಕಾಗಿ ಓದುವಾಗ ಅವರಿಗೆ ಗಂಭೀರ ಉದ್ದೇಶವಿರುತ್ತದೆ. ಆದರೆ ವಿದ್ಯಾರ್ಥಿಗಳು ಪರೀಕ್ಷೆಗಾಗಿ ಓದುವುದು ಮೇಲಿನ ಕಾರಣಕ್ಕಾಗಿ. ಹಾಗೆಯೇ ಓದುಗರು ಮಾರುಕಟ್ಟೆಯಲ್ಲಿ ಪುಸ್ತಕವನ್ನು ಕೊಳ್ಳುವವರಾದ್ದರಿಂದ ಅವರು ಗಿರಾಕಿಗಳು ಕೂಡಾ ಹೌದು. ಅಂದರೆ ಗಿರಾಕಿಗಳು ಬಂಡವಾಳವಾದದ ಉತ್ಪಾದನೆ.

ಓದುವವರು ನಿರ್ದಿಷ್ಟ ವರ್ಗಕ್ಕೆ ಸೇರಿದವರಾದುದರಿಂದ ಅವರು ಓದುವುದಕ್ಕೂ ಅವರು ಪ್ರತಿನಿಧಿಸುವ ವರ್ಗಕ್ಕೂ ಸಂಬಂಧವಿರುತ್ತದೆ. ಸಾಂಪ್ರದಾಯಿಕ ಓದಿನ ಕ್ರಮವೆಂದರೆ ಅದು ಸೌಂದರ್ಯಶಾಸ್ತ್ರದ ಪ್ರಶ್ನೆಯಾಗಿರುತ್ತದೆ. ಸೌಂದರ್ಯಶಾಸ್ತ್ರದ ಹಿನ್ನೆಲೆಯಲ್ಲಿ ಓದುವವರಿಗೆ ಪಾಂಡಿತ್ಯದ ಪ್ರಶ್ನೆ ; ತಾತ್ವಿಕ ಪ್ರಶ್ನೆಗಳು ಮುಖ್ಯವಾಗಿರುತ್ತದೆ. ಅಷ್ಟೇ ಅಲ್ಲ ಈ ಚಿಂತನೆಯನ್ನು ಇಟ್ಟುಕೊಂಡ ಓದುಗರು ಕೃತಿಯ ಮೌಲ್ಯಮಾಪನವನ್ನು ಮಾಡುತ್ತಾರೆ. ಓದಿನ ಕ್ರಮಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಪಂಥದ ತಾತ್ವಿಕತೆಗೆ ಅನುಸಾರವಾಗಿ ವಿವರಿಸುತ್ತಾರೆ. ನವ್ಯ ವಿಮರ್ಶಕರಿಗೆ ಕೃತಿಯನ್ನು ವಸ್ತುನಿಷ್ಠವಾಗಿ ಓದುವುದು ಮುಖ್ಯ. ಮಾರ್ಕ್ಸ್‌ವಾದಿಗಳು ಓದುವುದೆಂದರೆ ಕೃತಿಯ ತಾತ್ವಿಕ ಮುಖಾಮುಖಿಯೆಂದು ಪರಿಭಾವಿಸಿದ್ದಾರೆ. ಹೀಗಿದ್ದರೂ ಓದಿನಿಂದ ಆಗುವ ಅನುಭವವು ನಿಶ್ಚಿತವಾದುದಲ್ಲ. ಅದನ್ನು ಹೀಗೆಂದು ವಿವರಿಸುವಂತಿಲ್ಲ. ಓದಿಗೆ ಮುಕ್ತಾಯವಿಲ್ಲ.

ನೋಡಿ: David Punter Romanticism Modernism Lyric

Martin Gray 1984 A Dictionary of literary terms

Jeremy Hawthorn 2000 A Glossary of contemporary literary theory Arnold - London

ಸಿ.ಎನ್.ರಾಮಚಂದ್ರನ್ ೨೦೦೨ ಸಾಹಿತ್ಯ ವಿಮರ್ಶೆ

ರಾಜೇಂದ್ರ ಚೆನ್ನಿ ೨೦೦೩ ಅಮೂರ್ತತೆ ಮತ್ತು ಪರಿಸರ

ಡಾ.ಗಿರಡ್ಡಿ ಗೋವಿಂದರಾಜು ೨೦೦೭ ಪ್ರಮಾಣು

ಕೆ.ಪಿ.ನಾರಾಯಣ ೨೦೧೦ ತೊಂಡುಮೇವು(೯ ಕಂತೆ)

Abrahams M.H. 2000 A Glossary of Literary terms P.256, 4, 104, 122, 241, 266, 270, 320

Julian wolfreys 2002 Key concepts in literary theory P.72

ಓದುಗ

ನಾಟಕವನ್ನು ನೋಡುವವನು ಪ್ರೇಕ್ಷಕ, ಪುಸ್ತಕ ಓದುವವನು ಓದುಗ. ಇದಕ್ಕೆ ಸಂಬಂಧಿಸಿದಂತೆ ಓದುಗ ಕೇಂದ್ರಿತ ವಿಮರ್ಶೆಯ ಪಂಥವು ಓದುಗನ ಮನಸ್ಸನ್ನು ಒಂದು ಕೇಂದ್ರವೆಂದು ಪರಿಗಣಿಸಿದೆ.

ರೊಲಾಂಡ್ ಬಾರ್ತ Q/Z ಕೃತಿಯಲ್ಲಿ (೧೯೭೦, ೪-೫) ಓದುವ ಪಠ್ಯ ಮತ್ತು ಬರಹದ ಪಠ್ಯವೆಂದು ಎರಡು ವರ್ಗೀಕರಣ ಮಾಡುತ್ತಾನೆ. ಓದುವ ಪಠ್ಯವೆಂದು ಯಾವುದನ್ನು ಕರೆಯುತ್ತೇವೆಯೋ ಅದನ್ನು ಸಾಹಿತ್ಯವೆಂದು ಗುರುತಿಸುತ್ತೇವೆ. ಹಾಗೆಯೇ ಲೇಖಕ ಬರಹದಲ್ಲಿ ನಿರ್ದಿಷ್ಟ ಅರ್ಥಗಳನ್ನು ಸೂಚಿಸುತ್ತಾನೆ. ಆದರೆ ಓದುಗನು ಬರೆಯಲಾಗಿರುವ ಪಠ್ಯವನ್ನು ತನಗೆ ಬೇಕಾದ ರೀತಿಯಲ್ಲಿ ಅರ್ಥವಿಸಿಕೊಳ್ಳುತ್ತಾನೆ. ಬಾರ್ತ್ ಬರೆಯುವುದು ಮತ್ತು ಓದುವುದು ಎಂದರೆ ಕೆಲಸದ ವರ್ಗೀಕರಣವೆಂದು ಒಪ್ಪುತ್ತಾನೆ. ಬರೆದಿರುವ ಪಠ್ಯವು ಈ ರೀತಿಯ ಪಂಥಾಹ್ವಾನವನ್ನು ಒಡ್ಡುತ್ತದೆ. ಸಾಹಿತ್ಯ ಕೃತಿಯೆಂದರೆ ಅದು ಬರಿಯ ಉತ್ಪಾದನೆಯಲ್ಲ.ನಮ್ಮ ಸಹೃದಯತೆಯ ಕಲ್ಪನೆಗೂ ಓದುಗ ಕೇಂದ್ರಿತ ಚಿಂತನೆಗೂ ಅಷ್ಟಾಗಿ ಸಂಬಂಧವಿಲ್ಲ.

ನೋಡಿ: ಸಿ.ಎನ್.ರಾಮಚಂದ್ರನ್ ೨೦೦೨ ಸಾಹಿತ್ಯ ವಿಮರ್ಶೆ

ರಾಜೇಂದ್ರ ಚೆನ್ನಿ ೨೦೦೩ ಅಮೂರ್ತತೆ ಮತ್ತು ಪರಿಸರ

ಕೆ.ಪಿ.ನಾರಾಯಣ ೨೦೧೦ ತೊಂಡುಮೇವು(೯ ಕಂತೆ)

David Punter Romanticism Modernism Lyri

Elizabeth Frued 1987 Return of readers Reader response criticism

Bakhtin M.M. The dialogic imagination
Christopher Norris 1987 Derrida Fontana Press

ಓದುಗಳು

ಹತ್ತು-ಹಲವುಬಗೆಯ ವಿದ್ಯಾಭ್ಯಾಸವೆಂಬರ್ಥದಲ್ಲಿ ಈ ಪದ ಹಳೆಗನ್ನಡದಲ್ಲಿ ಪ್ರಯೋಗವಾಗಿದೆ. ಓದು ಕನ್ನಡದ ಪದವೆಂಬುದು ಅಷ್ಟೇ ಗಮನಾರ್ಹ. ಶುದ್ಧಕನ್ನಡದ ಅನೇಕ ಪ್ರಯೋಗಗಳು ವಡ್ಡಾರಾಧನೆಯಲ್ಲಿ ದೊರೆಯುತ್ತವೆ. ವಿದ್ಯಾಭ್ಯಾಸದಲ್ಲಿ ನಾಲ್ಕು ವೇದಗಳು: ಷಡಂಗಗಳು: ನ್ಯಾಯ, ತರ್ಕಶಾಸ್ತ್ರ, ಹದಿನೆಂಟು ಧರ್ಮಶಾಸ್ತ್ರಗಳು, ಮೀಮಾಂಸೆ: ವ್ಯಾಕರಣ, ಛಂದಸ್ಸು, ಅಲಂಕಾರಗಳು ಸೇರಿದ್ದವು. ಇವುಗಳಿಗೆ ಸಾಂಸ್ಕೃತಿಕ ಮಹತ್ವವಿದೆ.

ಪೇಟೆ-ಪಟ್ಟಣಗಳಲ್ಲಿರುವ ಶಿಕ್ಷಣಕೇಂದ್ರಗಳನ್ನು ಬ್ರಹ್ಮಪುರಿಗಳೆಂದು ಹೆಸರಿಸಲಾಗಿದೆ. ಬ್ರಾಹ್ಮಣರು ಇವುಗಳಲ್ಲಿ ವಾಸವಾಗಿರುತ್ತಿದ್ದರು. ಪೇಟೆ-ಪಟ್ಟಣಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಿಲ್ಲವಾದ್ದರಿಂದಾಗಿ ಅಗ್ರಹಾರಗಳ ಸಂಖ್ಯೆಯೇ ಹೆಚ್ಚು ಇತ್ತು. ಕೆಲವು ಶಾಸನಗಳಲ್ಲಿ ಅಗ್ರಹಾರಗಳನ್ನು ಬ್ರಹ್ಮಪುರಿಗಳೆಂದೇ ಹೆಸರಿಸಲಾಗಿದೆ. ಕ್ರಿ.ಶ.೧೦೨೮ರ ಮುಳುಗುಂದ ಶಾಸನವು ಮುಳಗುಂದವನ್ನು ಬ್ರಹ್ಮಪುರಿ ಎಂಬುವುದಾಗಿ ಹೆಸರಿಸಿದೆ. ನಾಗಸ್ವಾಮಿ ಎನ್ನುವವನು ಈ ಬ್ರಹ್ಮಪುರಿಯ ಮುಖ್ಯಸ್ಥನಾಗಿದ್ದು ಭೂಮಿ ಹಾಗೂ ಇತರ ವಸ್ತುಗಳನ್ನು ದಾನ ನೀಡಿದ ವಿವರ ಶಾಸನದಲ್ಲಿದೆ. ಆದರೆ ಮುಳುಗುಂದವು ಅಗ್ರಹಾರವಾಗಿತ್ತು ಎಂಬುದಾಗಿ ತಿಳಿದು ಬರುತ್ತದೆ. ಕೇಶಿರಾಜ ದಂಡಾಧಿಪ ಎನ್ನುವವನು ಕೇಶವ ದೇವಸ್ಥಾನವನ್ನು ನಿರ್ಮಿಸಿ ಅದರ ಎದುರುಗಡೆ ವೀರಕೇಶವಪುರ ಎಂಬ ಪಟ್ಟಣವನ್ನು ನಿರ್ಮಿಸಿದ. ಆ ಪಟ್ಟಣವನ್ನು ಶಾಸನದಲ್ಲಿ ಬ್ರಹ್ಮಪುರಿ ಎಂದು ಕರೆಯಲಾಗಿದೆ. ಕ್ರಿ.ಶ.೧೧೬೫ರ ಸೊರಬ ಶಾಸನವು ಮೂರು ಬ್ರಹ್ಮಪುರಿಗಳನ್ನು ಉಲ್ಲೇಖಿಸಿದರೆ, ಕ್ರಿ.ಶ. ೧೧೯೨ರ ಕಡ್ಲೇವೇಡು ಶಾಸನವು ಎಂಟು ಬ್ರಹ್ಮಪುರಿಗಳ ಕುರಿತು ಮಾಹಿತಿ ನೀಡುತ್ತದೆ. ಬ್ರಹ್ಮಪುರಿಗಳ ಅಧ್ಯಯನ ನಡೆಸುವಾಗ ಅವು ಅಗ್ರಹಾರಗಳಿಂದ ಭಿನ್ನವಾಗಿ ಗೋಚರಿಸುವುದಿಲ್ಲ. ಅವುಗಳ ಕೆಲಸ ಕಾರ್ಯಗಳಲ್ಲೂ ಭಿನ್ನತೆಗಳು ಕಂಡುಬರುವುದಿಲ್ಲ. ಇರುವ ಒಂದು ಭಿನ್ನತೆಯೆಂದರೆ ಅಗ್ರಹಾರಗಳು ಹಳ್ಳಿಗಳಲ್ಲಿದ್ದು, ಬ್ರಹ್ಮಪುರಿಗಳು ಪೇಟೆ-ಪಟ್ಟಣಗಳಲ್ಲಿ ಇರುವುದು. ಎರಡೂ ಕೇಂದ್ರಗಳು ಅರಸ ಮತ್ತು ಖಾಸಗಿ ವ್ಯಕ್ತಿಗಳಿಂದ ದಾನದತ್ತಿಗಳನ್ನು ಪಡೆಯುತ್ತಿದ್ದವು. ಕಲಿಸುವ ವಿಷಯಗಳು ಒಂದೇ ರೀತಿ ಇರುತ್ತಿದ್ದವು. ಸಾಂಸ್ಕೃತಿಕವಾಗಿ ಗಮನಿಸಬೇಕಾಗಿರುವ ಅಂಶಗಳಿವು. ಸಾಹಿತ್ಯ ವಿಮರ್ಶೆಯಲ್ಲಿ ಇದರ ಪರಿಕಲ್ಪನೆ ಭಿನ್ನ.

ಓದುಗನ ಮನಸ್ಸನ್ನು ತನ್ನ ಕೃತಿಯಲ್ಲಿ ವ್ಯಾಪಿಸಿರುವ ಭಾವದಿಂದ ಹೊರತಾಗಿಸಲರಿಯದವನ ರಚನೆಯನ್ನು ಓದುವ ವ್ಯಸನ ಮತ್ತು ಓದುವ ಕಷ್ಟವಾದರೂ

ಯಾಕೆ ಬೇಕು? ಕವಿಯಲ್ಲದವರನ್ನು ಪುರಸ್ಕರಿಸಬೇಕಾದ ಅಗತ್ಯವಿದೆಯೆ? (ಕವಿರಾಜಮಾರ್ಗಂ 1–12) ಇದು ಕವಿರಾಜಮಾರ್ಗಕಾರನ ನಿಲುವು. ಓದುವುದು ಒಂದು ರೀತಿಯ ಪ್ರತಿಕ್ರಿಯೆ. ಓದುವ ಪ್ರಕ್ರಿಯೆಯು ಜಡವಲ್ಲ. ಅದು ಓದುಗನ ಮನೋಸ್ಥಿತಿಯನ್ನು ಅವಲಂಬಿಸಿಕೊಂಡಿರುತ್ತದೆ. Reader Response theory/ Reception theoryಗಳು ಇದರ ಬಗೆಗೆ ವಿಶೇಷ ಚರ್ಚೆಯನ್ನು ನಡೆಸಿವೆ.

ಓದುಗ ಕೇಂದ್ರಿತ ವಿಮರ್ಶೆಯ ಪ್ರಕಾರ ಓದುಗನ ಮನಸ್ಸು ಒಂದು ಕೇಂದ್ರ. ಒಂದು ಕೃತಿಯನ್ನು ಓದುವುದೆಂದರೆ ಅದರ ಜೊತೆಗೆ ಅನುಸಂಧಾನ ನಡೆಸುವುದು. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಬರುವ ಸಹೃದಯ ಪರಿಕಲ್ಪನೆಯನ್ನು ನೆನಪಿಸಿಕೊಳ್ಳಬೇಕು. ಓದುಗ ಕೇಂದ್ರಿತ ವಿಮರ್ಶೆಯ ಪ್ರಕಾರ–ಓದುಗನು ಕೃತಿಯನ್ನು ಸ್ವೀಕರಿಸುವವನು. ಆದುದರಿಂದ ಕೃತಿಯು ಸಾಫಲ್ಯವನ್ನು ಪಡೆಯುವುದು ಓದುಗನಲ್ಲಿ ಮತ್ತು ಓದು ಅನ್ನುವುದು ಒಂದು ರೀತಿಯಲ್ಲಿರುವುದಿಲ್ಲ. ಕೃತಿಗೆ ಬೇರೆ ಬೇರೆ ರೀತಿಯ ಓದುಗಳಿರುತ್ತವೆ. ಅದಕ್ಕೆ ತಕ್ಕಂತೆ ಭಿನ್ನ ಭಿನ್ನ ಮಾದರಿಯ ಓದುಗರಿರುತ್ತಾರೆ. ಸಾಧಾರಣ ಓದುಗರು: ಆದರ್ಶ ಓದುಗರು: ಅನುಕರಣೆಯ ಓದುಗರು ಇತ್ಯಾದಿ.

ಓದು ಕೇಂದ್ರಿತ ವಿಮರ್ಶೆಯ ಪ್ರಕಾರ ಓದುಗನ ಮನಸ್ಸು ಒಂದು ಕೇಂದ್ರ. ಒಂದು ಕೃತಿಯನ್ನು ಓದುವುದೆಂದರೆ ಅದರ ಜೊತೆಗೆ ಅನುಸಂಧಾನ ನಡೆಸುವುದು ಭಾರತೀಯ ಕಾವ್ಯಮೀಮಾಂಸೆಯಲ್ಲಿ ಬರುವ ಸಹೃದಯ ಪರಿಕಲ್ಪನೆಯನ್ನು ನೆನಪಿಸಿಕೊಳ್ಳಬೇಕು. ಓದುಗ ಕೇಂದ್ರಿತ ವಿಮರ್ಶೆಯ ಪ್ರಕಾರ ಓದುಗನು ಕೃತಿಯನ್ನು ಸ್ವೀಕರಿಸುವವನು. ಓದು ಅನ್ನುವುದು ಒಂದು ರೀತಿಯಲ್ಲಿರುವುದಿಲ್ಲ. ಕೃತಿಗೆ ಬೇರೆ ಬೇರೆ ರೀತಿಯ ಓದುಗಳಿರುತ್ತವೆ. ಅದಕ್ಕೆ ತಕ್ಕಂತೆ–ಭಿನ್ನ ಭಿನ್ನ ಮಾದರಿಯ ಓದುಗರಿರುತ್ತಾರೆ. ಸಾಧಾರಣ ಓದುಗರು; ಆದರ್ಶ ಓದುಗರು; ಅನುಕರಣೆಯ ಓದುಗರು ಇತ್ಯಾದಿ.

ನೋಡಿ: Michel Payne 1996 Dictionary of cultural and literary theory

ಓದುಗ: ಒದು

ಓಲೆ

ಓಲೆಯನ್ನು ತಾಳೆಗರಿ; ವಸ್ತ್ರ; ಪತ್ರ(ಎಲೆ)ಯಲ್ಲಿ ಬರೆದು ಕಳಿಸುತ್ತಿದ್ದರು. ಸಂದೇಶವನ್ನು ಕಳಿಸುವ ವಿಧಾನಗಳಲ್ಲಿ ತಾಡೋಲೆಯೂ ಒಂದು ಎಂಬುದು ಗಮನಾರ್ಹ. ವಸಾಹತು ಕಾಲದವರೆಗೂ ಓಲೆಯನ್ನು ಕಳಿಸಲು ಒಬ್ಬರು ಇರುತ್ತಿದ್ದರು. ಪತ್ರ ವಾಹಕನು ಸಂದೇಶವನ್ನು ತಲುಪಿಸುತ್ತಿದ್ದ. ಸಂದೇಶವಾಹಕರೆಂಬುದು ಒಂದು ಉದ್ಯೋಗವೂ ಆಗಿತ್ತು. ಓಲೆಕಾರ ಒಂದು ಉದ್ಯೋಗದ ಸೂಚನೆಯಾಗಿದೆ. ಓಲೆಕಾರ – ಓಲೆ ಕೊಂಡೊಯ್ಯುವವನು: ಚರ್ಮದ ಕೆಲಸದವನು – ಚರ್ಮಕಾರ: ಕುಂಭದ ಕೆಲಸದವನು – ಕುಂಬಾರ. ವಾಲಗದವನು – ವಾಲಗಾರ – ವಾಲೀಕಾರ.

ಓಲೆವಾಗ್ಯ

ಓಲೆಭಾಗ್ಯವೆಂದರೆ ಪತಿವ್ರತೆಯಾಗಿ ಉಳಿಯುವುದು. ಗಂಡ ಸತ್ತರೆ ಓಲೆ; ಕರಿಮಣಿ; ಮೂಗುತಿ; ಕಾಲುಂಗುರ; ಹಣೆಬೊಟ್ಟು ತೆಗೆಯುತ್ತಾರೆ. ಓಲೆಭಾಗ್ಯ ಈ ದೃಷ್ಟಿಯಿಂದ ಮುತ್ತೈದೆತನದ ಸಂಕೇತ.

ಮುತ್ತೈದೆಯರು ಓಲೆ ಭಾಗ್ಯವನ್ನು ಹಂಬಲಿಸುತ್ತಿದ್ದರು. ಅದು ಪತಿವ್ರತಾ ಧರ್ಮದ ಸೂಚನೆ. ಒಂದು ಸಂಗತಿಯನ್ನು ನಾವಿಲ್ಲಿ ನೆನಪಿಟ್ಟುಕೊಳ್ಳಬೇಕು-ಗಂಡನ ಸಾವಿನ ಅನಂತರ ಹೆಂಡತಿಯು ವಿಧವೆಯಾಗುತ್ತಾಳೆ. ಮುತ್ತೈದೆಯಾಗಿ ಸಾಯುವುದರಿಂದ ಸ್ವರ್ಗ ಪ್ರಾಪ್ತಿಯಾಗುತ್ತದೆಯೆಂಬ ನಂಬಿಕೆಯ ಹಿನ್ನೆಲೆಯಲ್ಲಿ ಓಲೆಭಾಗ್ಯದ ಪರಿಕಲ್ಪನೆ ಬಂದಿದೆ.

ರಾಜಕೀಯ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಿದು. ರಾಜರು ಯುದ್ಧಕ್ಕೆ ಪ್ರೋತ್ಸಾಹ ಕೊಡುವಾಗ ಈ ರೀತಿಯ ಮೌಲ್ಯಗಳನ್ನು ಹೇರುತ್ತಿದ್ದರು. ಸೈನಿಕರಿಗೆ ಉತ್ಸಾಹ ತುಂಬಿಸಲು ಈ ರೀತಿಯ ಮಾತುಗಳು ಬೇಕಾಗಿರುತ್ತಿದ್ದವು. ಇದರ ಹಿಂದಿರುವ ಪಿತೃಸಂಸ್ಕೃತಿ ಧೋರಣೆಯು ಗಮನಾರ್ಹ.

ವಿವರಗಳಿಗೆ ನೋಡಿ: ಐದೆಮಿನುಗು; ಪತಿವ್ರತೆ.

ಔದುಂಬರ ಕುಷ್ಠ

ಪಾಪದ ಫಲದಿಂದ ಔದುಂಬರ ಕುಷ್ಠ ನಂಬಿಕೆಯಿದೆ. ಔದುಂಬರ ವೆಂದರೆ ಅತ್ತಿಯ ಮರ. ಔದುಂಬರ ಕುಷ್ಠವೆಂದರೆ ಅತ್ತಿಯ ಹಣ್ಣಿನಲ್ಲಿ ಹುಳಬೀಳುವಂತೆ ಕುಷ್ಠ ರೋಗದ ಒಂದು ಲಕ್ಷಣವಾದ ಮೈಮೇಲೆ ಹುಳವಾಗುವುದು, ಔದುಂಬರ ಕುಷ್ಠವಾಗುವುದು ಮಾತ್ರವಲ್ಲ. ದೊಂಬರ ಮನೆಯಲ್ಲಿ ಹೆಣ್ಣುಕತ್ತೆಯಾಗಿ ಜನಿಸುವುದು, ಪೇಪಂದಿಯಾಗುವುದು ಇತ್ಯಾದಿ.

ಕುಷ್ಠರೋಗ; ಕ್ಷಯ; ಪ್ಲೇಗು; ಕ್ಯಾನ್ಸರ್(ಏಡಿಹುಣ್ಣು) ಮಹಾನ್ ರೋಗಗಳೆಂದು ಪರಿಗಣಿತವಾಗಿದೆ. ಇವುಗಳಿಗೆ ಸರಿಯಾದ ಔಷಧಿಗಳಿಲ್ಲವೆಂದೂ; ಈ ರೋಗಗಳು ಪಾಪದ ಫಲಗಳ ಪರಿಣಾಮವೆಂದೂ ತಿಳಿಯುತ್ತಿದ್ದರು.

ಔಷಧಿ

ಚರಕಸಂಹಿತೆಯಲ್ಲಿ ಮೂರು ವಿಧದ ಔಷಧಿಗಳನ್ನು ಹೇಳಲಾಗಿದೆ. ದೈವವ್ಯಪಾಶ್ರಯ, ಯುಕ್ತಿವ್ಯಪಾಶ್ರಯ, ಸತ್ತ್ವಾವಜ. (ಚರಕ ಸಂಹಿತೆ 56–11–62) 'ಖಗೇಂದ್ರಮಣಿದರ್ಪಣ'ದಲ್ಲಿ ನಾಲ್ಕು ವಿಧದ ಔಷಧಿಯನ್ನು ಹೇಳಲಾಗಿದೆ. ಅಂಜನ, ನಸ್ಯ, ಪಾನ, ಲೇಪನ. ಈ ರೀತಿಯ ಔಷಧಿಯನ್ನು ನೀಡಲು ಸಿದ್ಧಿಯಿರಬೇಕು. ರೋಗವನ್ನು ಪತ್ತೆ ಮಾಡುವುದು ಮತ್ತು ಅದಕ್ಕೆ ಔಷಧಿ ಕೊಡುವುದು ಎರಡು

ಸಿದ್ಧಿಯಿಂದ ಸಾಧ್ಯವೆಂದು ಹೇಳುತ್ತಾರೆ. ಅದನ್ನು ಪಡೆಯುವುದು ತಪಸ್ಸಿನಿಂದ ಸಾಧ್ಯವೆಂದು ನಂಬಿಕೆಯಿದೆ.

ವಿವರಗಳಿಗೆ ನೋಡಿ: ಆಸವ

ಕಂಕಣ

ಮದುವೆ ಮುನ್ನ ಕಂಕಣ ಕಟ್ಟುವುದು ವ್ರತನಿಷ್ಠತೆಯ ಸೂಚಕ. ಕಂಕಣ ಕಟ್ಟಿದ ಮೇಲೆ ಯಾವುದೇ ರೀತಿಯ ಸೂತಕದ ಬಾಧೆಯಿಲ್ಲ. ಮಂಗಳ ಪ್ರಸಂಗಗಳಲ್ಲಿ ಮುಂಗೈಗೆ ಕಂಕಣವನ್ನು ಕಟ್ಟುತ್ತಾರೆ. ಇದು ಸಂಕಲ್ಪವನ್ನು ಸೂಚಿಸುತ್ತದೆ.

ಮಂಗಳ ಕಾರ್ಯಗಳಲ್ಲಿ ಮುಂಗೈಗೆ ಕಟ್ಟುವ ರಕ್ಷಾಸೂತ್ರಗಳಿಗೆ ಕಂಕಣವೆಂದು ಹೆಸರು. ರೂಢಿಯಲ್ಲಿ ಕಂಕಣ ಬದ್ಧನಾಗಿರುವುದು ಎಂದರೆ ವ್ರತನಿಷ್ಠನಾಗುವುದು ಎಂದೇ ಅರ್ಥ.

"ಆ ಕಂಕಣವು ದೊರತ ಬಳಿಕ ದೇವಿಯ ಅಪ್ಪಣೆಯಂತೆ ನೇಗಿಯನ್ನು ಕೆಯ್ಕೊಂಡ ವರ್ಣನೆಯಿದೆ. ಆದರೆ, ಜೀವಿಯು ಕೊಟ್ಟ ಕಂಕಣವು ಎಂತಹದು? .... ಎಂಬುದರ ಬಗ್ಗೆ ಮಾತ್ರ ಪುರಾಣವು ಮೌನವನ್ನು ತಾಳುತ್ತದೆ! ಅದು ಉಣ್ಣೆಯದೆ? ಹತ್ತಿಯದೆ? ಸ್ವಲ್ಪ ವಿಚಾರಿಸಿ ನೋಡಿದರೆ ಹತ್ತಿಗಿಂತ ಮೊದಲು ಉಣ್ಣೆಯೆಂಬುದು ಗೊತ್ತಾಗುವಂತಿದೆ. ಒಕ್ಕಲುತನವು ಗೊತ್ತಾದ ಬಳಿಕ ಹತ್ತಿ; ಕಾಡುಹತ್ತಿಯ ಗಿಡಗಳು ದೊರೆತ ಬಳಿಕ ಅದು ಮನುಷ್ಯನಿಗೆ ಗೊತ್ತು" ಎಂದು ಶಂಬಾ ಜೋಶಿ ಹೇಳುತ್ತಾರೆ.ಬಳೆಯನ್ನು ಕಂಕಣ ಭಾಗ್ಯವೆಂದು ಕರೆಯುವುದು ರೂಢಿಯಿದೆ.ವಿಧವೆಯರು ಬಳೆಯನ್ನು ತೊಡುವುದಿಲ್ಲವಾದ್ದರಿಂದ ಕಂಕಣವನ್ನು ಮುತ್ತೈದೆ ಸಂಕೇತವೆಂದು ಕರೆಯುತ್ತಾರೆ. ಈ ದೃಷ್ಟಿಯಿಂದ ಕಂಕಣಕ್ಕೆ ವಿಶೇಷ ಸಾಂಸ್ಕೃತಿಕ ಅರ್ಥವಂತಿಕೆಯಿದೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 1 ಪುಟ. 275

ಕೆ. ಕೃಷ್ಣ ಜೋಯಿಸ್ 1988 ಧರ್ಮಶಾಸ್ತ್ರಕರದೀಪಿಕಾ

ಕಂಚುಕಿ

ಕಂಚುಕಿಯು ರಾಣಿವಾಸದ ಅಧಿಕಾರಿ. ರಾಣಿವಾಸದ ಅಧಿಕಾರಿಗಳೆಂದರೆ – ಅಂತಃಪುರದ ಮೇಲ್ವಿಚಾರಕರೂ ಹೌದು. ರಾಣಿವಾಸದ ಕಂಚುಕಿಯರು ಹೇಗಿರಬೇಕೆಂದು ವಿವರಿಸುವಾಗ ಅವರು ವೃದ್ಧರಾಗಿರಬಹುದು; ನಪುಂಸಕರಾಗಿರಬಹುದು; ಎಂದು ಅವರು ನಂಬಿಕೆಗೆ ಅರ್ಹರಾಗಿರಬೇಕೆಂದೂ ಕೌಟಿಲ್ಯನು ವಿವರಿಸುತ್ತಾನೆ. ಕಂಚುಕವನ್ನು ತೊಟ್ಟುಕೊಂಡ (ನಾ) ಅಂತಃಪುರದ ಅಧಿಕಾರಿ; ರಾಣಿವಾಸದ ಪಾರುಪತ್ಯಗಾರ: ಕಂಚುಕವೆಂದರೆ ರವಿಕೆಯೆಂಬ ಅರ್ಥವಿದೆ.

ವಿವರಗಳಿಗೆ ನೋಡಿ: ಕೃಷ್ಣಭಟ್ಟ .ಕೆ ೧೯೭೨ ಕೌಟಿಲ್ಯನ ಅರ್ಥಶಾಸ್ತ್ರ

ಕಂದುಕ

ರಾಜ್ಯಕ್ಕೆ ಸೈನ್ಯ, ಕಂದುಕ, ದುರ್ಗಗಳ ಅವಶ್ಯಕತೆಯನ್ನು ಕೌಟಿಲ್ಯನು ಹೇಳುತ್ತಾನೆ.

ವಿವರಗಳಿಗೆ ನೋಡಿ: ಅಗಳ್ ಎಂ.ವಿ. ಕೃಷ್ಣರಾವ್. ೧೯೫೩. ಕೌಟಿಲ್ಯ. ಮೈಸೂರು. ವಿ. ವಿ. ಪು. ೨೫

ಕಚ್ಚುಟ

ಕಚ್ಚುಟವೆಂದರೆ ಕೌಪೀನ. ಸನ್ಯಾಸಿಗಳು ಬರಿಯ ಕೌಪೀನ ಮಾತ್ರ ಧರಿಸುತ್ತಾರೆ. ಕೌಪೀನ.ಮರ್ಮಾಂಗವನ್ನು ಮಾತ್ರ ಮುಚ್ಚುತ್ತದೆ. ಉಳಿದ ವಸನಗಳನ್ನು ಸನ್ಯಾಸಿಗಳು ತ್ಯಜಿಸುತ್ತಾರೆ. ಅದು ತ್ಯಾಗದ ಸಂಕೇತವೂ ಹೌದು. ಕೌಪೀನ ಮಾತ್ರ ಧರಿಸುವುದು ತ್ಯಾಗದ ಸಂಕೇತ ಮಾತ್ರವಲ್ಲ. ಅದು ಇಂದ್ರಿಯ ನಿಗ್ರಹದ ಸಂಕೇತ ಕೂಡಾ ಆಗಿದೆ. ಕೌಪೀನ ಧರಿಸುವುದು ಭಾರತೀಯರಲ್ಲಿ ಅಸಭ್ಯ ವರ್ತನೆಯಲ್ಲ.

ಕಟಕ

ಕೇಯೂರ ಕಟಕವೆಂದರೆ ತೋಳಬಂದಿಯೆಂದರ್ಥ. ಆದರೆ ಬರಿಯ ಕಟಕವೆಂದು ಬಳಸಿದರೆ ಸೈನ್ಯ ಎಂದಷ್ಟೇ ಅರ್ಥವಾಗುತ್ತದೆ.

ಕಟ್ಟಳೆ

ಕಟ್ಟಳೆಯೆಂದರೆ ತೂಕದ ಬೊಟ್ಟು. ದಾನ ಕಟ್ಟಳೆಯೆನ್ನುವುದು ಕಡಿದು+ಅಳೆ ಎಂಬುದರಿಂದ ಬಂದಿದೆ. ಕಟ್ಟಳೆಗೆ ನಾನಾ ಅರ್ಥಗಳಿವೆ. ಕೋಟಲೆ(ಗ್ರಾಮ್ಯದಲ್ಲಿ ಕೋಟ್ಲೆ–ಅವಧಿಜ್ವರ (ನೀರು ಕೋಟಲೆ) ವಿಧಿ: ನಿಯಮ; ಕಟ್ಟುಪಾಡು: ಎಲ್ಲೆ ಎಂಬ ಅರ್ಥಗಳಿವೆ. ಕಟ್ಟು–ಕಟ್ಟಳೆಯೆಂದರೆ ವಿಧಿನಿಷೇಧಗಳೆಂದು ಅರ್ಥ.

ವಿವರಗಳಿಗೆ ನೋಡಿ : ಯಜ್ಞ; ಹೋತೃ; ಅಧ್ವರ್ಯು

ಕಠಾರಿ – ಕಟಾರಿ

"ಇದು ಕತ್ತಿಗಿಂತಲೂ ಚಿಕ್ಕದಾಗಿದ್ದದ್ದು. (ಚಿತ್ರ ೮೬ರಿಂದ ೯೫) ಇದನ್ನು ಇರಿಯುವುದಕ್ಕಾಗಿ ಉಪಯೋಗಿಸುತ್ತಿದ್ದರು. ಗಂಗರ ಕಾಲದ ವೀರಗಲ್ಲುಗಳಲ್ಲಿ ಅದರಲ್ಲಿಯೂ ಕೋಲಾರ ಜಿಲ್ಲೆಯ ವೀರಗಲ್ಲುಗಳಲ್ಲಿ ಇವುಗಳನ್ನು ವಿಶೇಷವಾಗಿ ಗಮನಿಸಬಹುದು. ಹೆಗ್ಗಡದೇವನಕೋಟೆ ತಾಲ್ಲೂಕ್ ಮಗ್ಗ ಗ್ರಾಮದ ವೀರಗಲ್ಲಿನಲ್ಲಿ ಕಟಾರಿಗಾಳಗದ ಪ್ರಸ್ತಾಪ ಬರುತ್ತದೆ. ಸಿರಾದಿಂದ ಬೆಂಗಳೂರಿಗೆ ಹೋಗುವ ರಸ್ತೆಯಲ್ಲಿ ಬಲಗಡೆಗೆ 'ಕಠಾರಿ ವೀರನಹಳ್ಳಿ' ಎಂಬ ಗ್ರಾಮವಿದೆ."

ವಿವರಗಳಿಗೆ ನೋಡಿ: ಡಾ. ಆರ್. ಶೇಷಶಾಸ್ತ್ರಿ. ೨೦೦೪. ಪು. ೨೨೨

ಕಡಿತ

ಬಳಪದಿಂದ ಬರೆಯುವುದಕ್ಕಾಗಿ ಕಪ್ಪು ಲೇಖನ ಬಳಿದು ಮಾಡಿದ ಬಟ್ಟೆಯ ಪಟ್ಟಿ. ಅಂದು ಇದು ಲೆಕ್ಕದ ಪುಸ್ತಕವಾಗಿತ್ತು. ಈಗ ಮತ್ತೆ ಈ ಸಂಗತಿಯು ಚಾಲ್ತಿಯಲ್ಲಿದೆ.ಪ್ರಯೋಗವು ಹೀಗಿದೆ. "ಕಡತದಿಂದ ತೆಗೆದು ಹಾಕು".

ಕಣ್ಮಲೆ

ಇದನ್ನು ಕನ್ನಡದಲ್ಲಿ ಬೇರೆ ಬೇರೆ ರೀತಿಯಲ್ಲಿ ಹೇಳಲಾಗಿದೆ. "ಅಂತರ್ದೃಷ್ಟಿ", 'ಅಂತಃಚಕ್ಷು', 'ದರ್ಶನ', 'ಇಂದ್ರಿಯ ಗೋಚರ', 'ಉನ್ಮೀಲನ ದೃಷ್ಟಿ', ಪಂಪ 'ಕಣ್ಮಲೆ' ಎಂದು ಬಳಸಿದ್ದಾನೆ. ಕಣ್ಣಿಗೆ ಗೋಚರವಾಗದ ಆದರೆ ಮನಸ್ಸಿಗೆ ಗೋಚರವಾಗುವುದನ್ನು 'ಅಕ್ಷುದರ್ಶನ' ವೆಂದು ಕರೆಯುತ್ತಾರೆ. ಅಕ್ಷು ಎಂದರೆ ಕಣ್ಣು. ದರ್ಶನವೆಂದರೆ ಹೊಳಹು.

ಅಚಕ್ಷುರ್ದರ್ಶನ - ಅಚಕ್ಷುರ್ದರ್ಶನಾವರಣೀಯ ಕರ್ಮದ ಕ್ಷಯೋಪಶಮವಾಗಲು ಚಕ್ಷುರ್ಭಿನ್ನವಾದ ಇಂದ್ರಿಯಗಳೂ, ಇವುಗಳ ಸಹಾಯದಿಂದ ಆತ್ಮನಿಗೆ ಮೂರ್ತ, ಅಮೂರ್ತ ದ್ರವ್ಯಗಳ ವಿಕಲಜ್ಞಾನವುಂಟಾಗುವುದು; ಇದು ಅಚಕ್ಷುರ್ದರ್ಶನವು. ಕಣ್ಮಲೆಯೆನ್ನುವ ಪ್ರಯೋಗ ವಿಶಿಷ್ಟವಾಗಿದೆ.

ವಿವರಗಳಿಗೆ ನೋಡಿ: ಮಹದೇವ ಪ್ರಭಾಕರ ಪೂಜಾರ ೧೯೭೬ ಜೈನಧರ್ಮದ ಪರಿಭಾಷೆ ಪುಟ. ೪೧.

ಕಥಾ ಶ್ರವಣ

ಅನೇಕರಿಂದ ಹೇಳಲ್ಪಡುವ ಕತೆಗಳು ನಾಲ್ಕು ಬಗೆ. ಒಬ್ಬನು ಹೇಳುವ ಕತೆ ಏಕವಕ್ತ್ರಿಕೆ. ಇಬ್ಬರು ಹೇಳುವ ಕತೆ ದ್ವಿವಕ್ತ್ರಾ. ನಾಲ್ವರು ಹೇಳುವ ಕತೆಯನ್ನು ನಾಲ್ಕು ಬಾಯಿಯ ಕತೆ (ಚತುರ್ವಕ್ತ್ರಿಕ)ಅನೇಕರು ಹೇಳುವ ಕತೆಯನ್ನು ಬಹುಪುರುಷ ಎನಿಸಿಕೊಳ್ಳುತ್ತದೆ. ಪಾಕೃತ ಭಾಷೆಗಳ (ಗಾಥೆಗಳಿಂದ ಕೂಡಿದ) ಕಥೆಗಳನ್ನು ಸೂತ(ಈತನು ಕ್ಷತ್ರಿಯ ಪುರುಷ ಮತ್ತು ಬ್ರಾಹ್ಮಣ ಸ್ತ್ರೀಗೆ ಹುಟ್ಟಿದ, ಕಥನಕ್ಕೆಂದೆ ಮೀಸಲಾದವನು) ಮೂವರು ಗಾಯಕರ ಮಧ್ಯ ಮಧ್ಯದಲ್ಲಿ (ಗೀತಾದಿಗಳ ನಡುವೆ) ಹೇಳಬೇಕು. ಇದಕ್ಕೆ ಚತುರ್ವಕ್ತ್ರಿಕಾ ಎನ್ನುವರು. ವರ್ಣಕಗಳಿಂದ ಯಾರು ಕತೆಗಳನ್ನು ಹೇಳುವರೋ ಅಂಥವನನ್ನು ಚಿತ್ರ ಕಥಕನೆಂದು ಕರೆಯುತ್ತಾರೆ. ಗಾಯಕರು ಎಲ್ಲಿ ತಾಳಗಳಿಂದ ಮನೋಹರವಾಗಿ ಮೃದಂಗ ಸೇರಿಸಿಕೊಂಡು ಕತೆಯನ್ನು ಹೇಳುತ್ತಾರೋ ಅಂಥಾ ನಿರೂಪಣೆಯನ್ನು ಬಹು ರೂಪವೆಂದು ಕರೆಯುತ್ತಾರೆ, (ಮಾನಸೋಲ್ಲಾಸ-4-1445-1428)

ಪುರಾಣ ಕಥಾಶ್ರವಣವೆಂದರೆ ಪುರಾಣ ಕತೆಗಳನ್ನು ಹೇಳುವುದು. ಇದನ್ನು ಪುರಾಣ ವಾಚನವೆಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಶ್ರಾವಣಮಾಸದಲ್ಲಿ ಪುರಾಣ ವಾಚನ ಕಾರ್ಯಕ್ರಮಗಳು ಜರುಗುತ್ತವೆ. ಇದಕ್ಕೆ ಸಾಮಾನ್ಯವಾಗಿ ರಾಮಾಯಣ, ಮಹಾಭಾರತ, ಮತ್ತು ಪುರಾಣದ ಕತೆಗಳನ್ನು ಆಯ್ದುಕೊಳ್ಳುತ್ತಾರೆ. ಒಬ್ಬರು ಈ ರೀತಿಯ ಪತ್ಯಗಳನ್ನು ಓದುತ್ತಾರೆ. ಮತ್ತೊಬ್ಬರು ಅದನ್ನು ವಿವರಿಸುತ್ತಾರೆ. ಪುರಾಣವಾಚನವು ಜನರಲ್ಲಿ ನೈತಿಕತೆ, ಆದರ್ಶಗಳನ್ನು ತುಂಬುತ್ತವೆ. ಪುರಾಣದ

ಪ್ರಮುಖ ಆಶಯಗಳನ್ನು ಬಿತ್ತರಿಸುವುದೇ ಈ ರೀತಿಯ ಪುರಾಣ ವಾಚನದ ಪ್ರಮುಖ ಉದ್ದೇಶ. ಇದರಿಂದ ಮನಶ್ಶಾಂತಿ ದೊರೆಯುತ್ತದೆ ಎಂದು ಹೇಳುತ್ತಾರೆ. ಪುರಾಣ ಓದುವವರನ್ನು ಪುರಾಣಿಕರು ಎಂದು ಕರೆಯುತ್ತಾರೆ. ಕಥಾ ಶ್ರವಣವೂ ಒಂದು ಪರಂಪರೆಯಾಗಿರುವುದು ಗಮನಾರ್ಹ.

ಕನಸು

ಕನಸು (ಸ್ವಪ್ನ) ಎಂಬುದನ್ನು ಮನಶ್ಶಾಸ್ತ್ರೀಯ ಹಿನ್ನೆಲೆಯಿಂದ ವಿಶ್ಲೇಷಿಸಿದವನು ಸಿಗ್ಮಂಡ್ ಫ್ರಾಯ್ಡ್. (ಜರ್ಮನಿಯಲ್ಲಿ–೧೯೦೦) ಕನಸಿಗೂ ಮಾನಸಿಕ ಸ್ಥಿತಿಗೂ ಪರಸ್ಪರ ಸಂಬಂಧವಿದೆ. ಕನಸೆನ್ನುವುದು ಆಧ್ಯಾತ್ಮಿಕ ವರ್ತನೆಯಲ್ಲ. ಅದಕ್ಕೂ ನಮ್ಮ ನಿಜಜೀವನಕ್ಕೂ ಸಂಬಂಧವಿದೆ. ಈ ಕುರಿತು ಮೊದಲು ಅರಿಸ್ಟಾಟಲ್ ಪ್ರಸ್ತಾಪಿಸಿದ್ದ. ಹಾಗೆಯೇ ಸ್ವಪ್ನ–ಸುಷುಪ್ತಿಗಳನ್ನು ಉಪನಿಷತ್ತುಗಳು ಪ್ರಸ್ತಾವಿಸಿವೆ. ನಿದ್ದೆಯಲ್ಲಿ ಇದ್ದಾಗ ಕನಸುಗಳು ಬೀಳುತ್ತವೆ. ಕನಸುಗಳಲ್ಲಿ ಕೆಲವು ವಾಚ್ಯವಾಗಿರುತ್ತವೆ. ಮತ್ತೆ ಕೆಲವು ಸಾಂಕೇತಿಕವಾಗಿರುತ್ತವೆ. ಹಾಗೆಯೇ ಕೆಲವು ಕನಸುಗಳು ಅಸಂಗತವಾಗಿರುತ್ತವೆ. ಕನಸುಗಳೆಂದರೆ ನಮ್ಮ ಮಾನಸಿಕ ಚಟುವಟಿಕೆ. ಅದು ನಿದ್ದೆ ಅಥವಾ ಎಚ್ಚರಗಳ ನಡುವಣ ಸ್ಥಿತಿಯೂ ಹೌದು. ಅತ್ಯಂತ ಗಾಢವಾದ ನಿದ್ದೆಯು ಬಂದಾಗ ನಮಗೆ ಕನಸುಗಳು ಬೀಳುವುದಿಲ್ಲ. ಸಂಪೂರ್ಣ ಎಚ್ಚರವಿದ್ದಾಗ ನಾವು ಕಲ್ಪಿಸಿಕೊಳ್ಳುತ್ತೇವೆ. ಅವುಗಳು ನಿಜವಾದ ಅರ್ಥದಲ್ಲಿ ಕನಸುಗಳಲ್ಲ. ಅವುಗಳನ್ನು ಹಗಲುಗನಸು ಎಂದು ಕರೆಯುತ್ತೇವೆ. ಕನಸುಗಳಿಗೆ ಮತ್ತು ನಮ್ಮ ಆರೋಗ್ಯಕ್ಕೂ ಸಂಬಂಧವಿರುತ್ತದೆ. ಕನಸುಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದು; ಒಂದು ನೇರವಾಗಿ ನಮ್ಮ ವರ್ತಮಾನಗಳಿಗೆ ಸಂಬಂಧಿಸಿರುವುದು. ಎರಡನೆಯದು ಭವಿಷ್ಯದ ಕಲ್ಪನೆಗೆ ಸಂಬಂಧಿಸಿರುವುದು. ಹಾಗೆಯೇ ಕನಸುಗಳು ಸಾಂಕೇತಿಕವೂ ಆಗಿರುತ್ತದೆ. ಫ್ರಾಯ್ಡ್ ಹೇಳುವಂತೆ ಕನಸುಗಳನ್ನು ವೈಜ್ಞಾನಿಕವಾಗಿ ಅಧ್ಯಯನ ನಡೆಸಲು ಸಾಧ್ಯ.

ನೋಡಿ: Sigmand Freud.1961, The interpretation of dreams

ಡಾ.ಧನ್ಯಕುಮಾರ್ ಇಜಾರಿ ೧೯೯೦ ಆಯುರ್ವೇದ ವಿಜ್ಞಾನ ಪು ೭೮–೮೪

ಕನ್ನಡಂಗಳೊಳ್

ಹಲವು ಬಗೆಯ ಕನ್ನಡದ ಬಗ್ಗೆ ಕವಿರಾಜಮಾರ್ಗಕಾರನು ವಿವೇಚಿಸುತ್ತಾನೆ.

"ದೋಸಮಿನಿತೆಂದು ಬಗೆದು
ದ್ಭಾವಿಸಿ ತಱಿಸಂದು ಕನ್ನಡಂಗಳೊಳೆಂದುಂ
ವಾಸುಗಿಯುಮಱಿಯಲಾಱದೆ
ಬೇಸರುಗುಂ ದೇಶಿ ಬೇರೆ ವೇರಪ್ಪುದರಿಂ"
(ಕವಿರಾಜಮಾರ್ಗ 1–46)

“ಉದ್ಭಾಸಿಸಿ=ಉತ್+ಭಾಷಿಸಿ (ಸ್ಪಷ್ಟವಾಗಿ ಹೇಳಿ) ಅಥವಾ ಉತ್+ಭಾವಿಸಿ (ವಿಶೇಷವಾಗಿ ಬೆಳಗಿ, ಪ್ರಕಾಶಗೊಳಿಸಿ ಎಂದರೆ ಮೇಲೆ ಕಾಣುವಂತೆ ಹೊರಪಡಿಸಿ) (?); ತಱಿಸೆಂದು=(ಧಾ,.ತಣಿಸಲ್) ನಿಶ್ಚಯಿಸಿ, ಗೊತ್ತುಮಾಡಿ. ‘ಕನ್ನಡಂಗಳೊಳ್’, ‘ದೇಶಿಬೇರೆವೇರಪ್ಪುದರಿಂ’; ಪ್ರಪಂಚದ ಎಲ್ಲ ಭಾಷೆಗಳಲ್ಲಿಯೂ ಪ್ರಾದೇಶಿಕ ವ್ಯತ್ಯಾಸಗಳು ಇದ್ದುವು, ಈಗಲೂ ಇವೆ. ಅಂತೆಯೆ ಕನ್ನಡದಲ್ಲಿ ಈಗ ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರ್ವಾಡದ ಕನ್ನಡ ಎಂದು ಸ್ಥೂಲವಾಗಿ, (ವಿಶೇಷವಾಗಿ ಆಡುಮಾತಿನಲ್ಲಿ) ಮೂರು ಬಗೆಯ ‘ಕನ್ನಡಂಗಳು’ ಇರುವಂತೆ ಆಗಲೂ ಕೆಲಕೆಲವು ಪ್ರಾದೇಶಿಕ ಲಕ್ಷಣಗಳುಳ್ಳ ‘ಕನ್ನಡಂಗಳು’ ಇದ್ದಿರಬೇಕು; ಅವುಗಳ ‘ದೇಶಿ’ ಎಂದರೆ ಪ್ರಾದೇಶಿಕ ವೈಲಕ್ಷಣ್ಯ ಬೇರೆ ಬೇರೆಯಾಗಿದ್ದಿರಬೇಕು. ಒಂದು ಪ್ರಾಂತದಲ್ಲಿ ನಿರ್ದಿಷ್ಟವೆನಿಸಿದ ಭಾಷಾಪ್ರಯೋಗ ಇನ್ನೊಂದರಲ್ಲಿ ದೋಷವಾಗಿ ಕಾಣುತ್ತಿದ್ದಿರಬೇಕು. ಹೀಗೆ, ಸರ್ವಸಾಮಾನ್ಯವಾದ ದೋಷಗಳು ಹಾಗೂ ಪ್ರಾಂತ ಭೇದಗಳಿಂದ ಸಂಜನಿಸುತ್ತಿದ್ದ ದೋಷಗಳು – ಇವು ಕೂಡಿ, ದೋಷ ಪ್ರಮಾಣ ಅಪರಿಮಿತವಾಗಿದ್ದಿರಬೇಕು. ಸಾವಿರ ನಾಲಗೆಯುಳ್ಳ ಆದಿಶೇಷನೂ ಅವನ್ನು ತಿಳಿಯಹೇಳಲಾರದಷ್ಟು ಅಗಣಿತವಾಗಿದ್ದುವು ಎಂದು ‘ಮಾರ್ಗಕಾರ’ ಉತ್ಪ್ರೇಕ್ಷಿಸಿ ಹೇಳುವ ಮಟ್ಟಿಗೆ ಕನ್ನಡದ ಪರಿಸ್ಥಿತಿ ಶೋಚನೀಯವಾಗಿತ್ತು.” (ಎಂ.ವಿ.ಸೀತಾರಾಮಯ್ಯನವರ ಟಿಪ್ಪಣಿಗಳು). ಈ ಕುರಿತು ಅನೇಕ ರೀತಿಯ ಚರ್ಚೆಗಳಾಗಿವೆ.

ಕನ್ನಡದ ಪುರಾತನತೆ

ಕನ್ನಡದ ಪುರಾತನೆಯ ಕುರಿತು ಬೇರೆ ಬೇರೆ ಜಿಜ್ಞಾಸೆಗಳಿವೆ. ಕವಿರಾಜಮಾರ್ಗದಲ್ಲಿ “ಕುರಿತೋದದೆಯುಂ ಕಾವ್ಯ ಪರಿಣತ ಮತಿಗಳ್” ಎಂದು ಬರುತ್ತದೆ. ಕನ್ನಡದ ಪುರಾತನತೆಯ ಬಗ್ಗೆ ಮುಳಿಯ ತಿಮ್ಮಪ್ಪಯ್ಯನವರು ಹೀಗೆ ಹೇಳುತ್ತಾರೆ:

“ಕ್ರಿ.ಶಕ ೯ನೆಯ ಶತಮಾನಕ್ಕಿಂತ ಹಿಂದಣ, ೫-೬ನೆಯ ಶತಮಾನಕ್ಕಿಂತ ಮುಂದಣ ಕನ್ನಡನಾಡಿನ ವ್ಯಾಪ್ತಿಯನ್ನೇ ನಾನಿಲ್ಲಿ ವಿವೇಚಿಸಲು ಆರಂಭಿಸಿರುವುದು. ಅದಕ್ಕೇ ಮೇಲೆ ‘ಪುರಾತನ ಕನ್ನಡನಾಡು’ ಎಂಬ ಹೆಸರನ್ನಿತ್ತುದು. ಇದರಿಂದ ಅದಕ್ಕೂ ಮೊದಲು ಕನ್ನಡನಾಡು ಅಷ್ಟೊಂದು ವ್ಯಾಪಕವಾಗಿ ಇದ್ದಿಲ್ಲವೆಂಬುದು ನನ್ನ ಭಾವನೆ ಎಂದು ಯಾರೂ ಬಗೆಯಬಾರದು. ಅತಿ ಪುರಾತನವಾದ ಕನ್ನಡನಾಡಿನ ಆ ವ್ಯಾಪ್ತಿಯನ್ನು ವಿಸ್ತರಿಸುವುದು ಪ್ರಕೃತೋದ್ದೇಶವಲ್ಲ. ಮಾತ್ರವಲ; ಮಂದಟ್ಟಾದ ಆಧಾರವಿದ್ದಲ್ಲಿ ಮಾತ್ರವೇ ಸಂಶೋಧನೆ ಸಫಲವೆನ್ನಿಸುವುದು. ಅದಿಲ್ಲದೆ ‘ಕನ್ಯಾಕುಮಾರಿಯಿಂದ ಗೋಕರ್ಣದವರೆಗೆ ಕೇರಳಪ್ರಾಂತ’ ಎಂದಾಡಿದ ಐಕ್ಯಕೇರಳ ಸಂಘದವರ ಮಾತನ್ನೇ ಅನುಕರಿಸಿದಲ್ಲಿ, ನಾವೂ ಆಕಾಶಕ್ಕೆ ಏಣಿಗಟ್ಟಲು ಹವಣಿಸಿದ ಹವ್ಯಾಸವೇ ಆದೀತು. ಉತ್ತರಕನ್ನಡ ಜಿಲ್ಲೆಯೊಳಗಿನ ಗೋಕರ್ಣದ ಮಾತು ಒತ್ತಟ್ಟಿಗಿರಲಿ;

ದಕ್ಷಿಣ ಕನ್ನಡದ ತೆಂಕಣ ಗಡಿಯಾದ ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯಿಂದ ಬಡಗಣ ಭಾಗವನ್ನೀಕ್ಷಿಸುವ. ಅದನ್ನು 'ಕುಂಬಳೆ–ಸೀಮೆ' ಎನ್ನುತ್ತಾರೆ. ಆ ಭಾಗದೊಳಗಾದರೂ ಸರಿ, ಹಿಂದಿನಿಂದಿಂದಿನವರೆಗೆ ಒಂದೇ ಒಂದು ಮಲಯಾಳ ಸಾಹಿತ್ಯ ಗ್ರಂಥವಾಗಲಿ, ಮಲಯಾಳ ಶಾಸನವಾಗಲಿ ತಲೆದೋರಿದಂತೆ ಕಂಡುಬರುವುದಿಲ್ಲ. ಬದಲಾಗಿ, ಕನ್ನಡ ಯಕ್ಷಗಾನ ಪ್ರಂಬಂಧಗಳೇ ಮೊದಲಾದ ಉತ್ತಮ ಸಾಹಿತ್ಯಗ್ರಂಥಗಳೂ, ಹಲವಾರು ಕನ್ನಡ ಶಾಸನಗಳೂ ಉದಯಿಸಿದುದು ಕಂಡುಬರುವುದಿಲ್ಲ. ಅದರಿಂದ ನಮ್ಮ ಐಕ್ಯ ಕೇರಳದ, ಅದೇ ರೀತಿಯಲ್ಲಿ ಆಯಾ ಗಡಿನಾಡುಗಳ ಇತರ ಭಾಷಾಬಂಧುಗಳ ಕೆಲಕೆಲವು ಆಕ್ರಮಣ ಪ್ರಯತ್ನಕ್ಕೆ ವ್ಯಸನವಾಗುತ್ತಿದೆ. ಅದಂತಿರಲಿ, ಅಂಥ ಪುರಾತನ ಕನ್ನಡನಾಡಿನ ವ್ಯಾಪ್ತಿಯನ್ನು ಚಾರಿತ್ರಿಕ ವಿಷಯದಲ್ಲಿ ನಂಬಲರ್ಹವಾದ ಪ್ರಸಿದ್ಧ ಸಾಹಿತ್ಯ ಶಾಸನಗಳ ಹೇಳಿಕೆಗಳನ್ನೇ ಆಧರಿಸಿ ವಿದ್ವಾಂಸರ ವಿಚಾರಕ್ಕರ್ಪಿಸುವುದೇ ಪ್ರಕೃತೋದ್ದೇಶವು. 'ಸತ್ಯಮೇವ ಜಯತೇ ನಾನೃತಂ' ಎಂಬ ಹಿರಿಯರ ಮಾರ್ಗವನ್ನು ಸಂಶೋಧಕರು ಅಕ್ಷರಶಃ ಅನುಸರಿಸಲೇಬೇಕು." (೧೯೮೮ ಕನ್ನಡನಾಡೂ ದೇಸಿ ಸಾಹಿತ್ಯದವೂ. ಪು. ೩೮೩. ಸಂ:೨) ಮುಳಿಯರು ಹೇಳುವ ಈ ಮಾತು ಮುಖ್ಯವಾಗಿದೆ.

ಕನ್ನಡದ ಪ್ರಾಚೀನ ರಾಜಮನೆತನಗಳು

ಪುರಾತನದ ಕನ್ನಡನಾಡಿನ ಅರಸೊತ್ತಿಗೆಯಲ್ಲಿ ಚಾಲುಕ್ಯ ರಾಷ್ಟ್ರಕೂಟರು ಶುದ್ಧ ಕನ್ನಡಿಗರು ಎಂಬ ವಾದವಿದೆ. ಈ ವಾದವನ್ನು ಮುಳಿಯ ತಿಮ್ಮಪ್ಪಯ್ಯ ಹೀಗೆ ಮಂಡಿಸಿದ್ದಾರೆ. "ಚಾಳುಕ್ಯರು ಹೇಗೋ ಹಾಗೆ ರಾಷ್ಟ್ರಕೂಟ ರಾಜವಂಶೀಯರು ಅಚ್ಚಗನ್ನಡಿಗ ಮನೆತನದವರು. ಒಂದಷ್ಟು ಕಾಲದ ಹಿಂದೆ ಈ ರಾಷ್ಟ್ರಕೂಟರೆಂದರೆ ಕನ್ನಡಿಗರಲ್ಲ, ಮಹಾರಾಷ್ಟ್ರೀಯರು ಎಂಬ ಚರ್ಚೆಯುಂಟಾಗಿತ್ತು. ಶ್ರೀ ಎ.ಎಸ್. ಅಳ್ತೇಕರರು ತಮ್ಮ 'ರಾಷ್ಟ್ರಕೂ ಟರೂ ಅವರ ಕಾಲವೂ' (ಕ್ರಿ.ಶ.೧೯೩೪,ಪೂನಾ, ಓರಿಯಂಟಲ್ ಬುಕ್ ಏಜನ್ಸಿ) ಎಂಬ ಗ್ರಂಥದೊಳಗೆ ರಾಷ್ಟ್ರಕೂಟರು ಶುದ್ಧ ಕನ್ನಡಿಗರೆಂಬುದನ್ನು ಸಾಧಾರಣವಾಗಿ ಒಪ್ಪಿಕೊಂಡಿದ್ದಾರೆ. ಬಹುಶಃ ಆ ಮೇಲೆ ಚರ್ಚೆಯದು ಸಡಿಲಾಗಿ ತೊಟ್ಟಳಿದು ಬಿದ್ದಂತೆ ಭಾಸವಾಗುತ್ತಿದೆ. ಈ ವಂಶೀಯ ಪ್ರಸಿದ್ಧ ರಾಜರೊಳಗೂ ಕನ್ನಡಿಗರಿಗೆಲ್ಲ ಹೆಚ್ಚಾಗಿ ಪರಿಚಿತನಾದವನೆಂದರೆ ಅಮೋಘವರ್ಷ ನೃಪತುಂಗನೇ ಕನ್ನಡ ಮಾರ್ಗೀಯ ಸಾಹಿತ್ಯಕ್ಕೆ ಅಡಿಗಟ್ಟು ಎನ್ನಬಹುದಾದ 'ಕವಿರಾಜವಾರ್ಗ' ಗ್ರಂಥವು ಅವನ ಆಶ್ರಯದಲ್ಲಿ ತಲೆದೋರಿದುದೇ ಅದಕ್ಕೆ ಪ್ರಮುಖ ಕಾರಣ ಎನ್ನಬಹುದು. ರಾಜಕೀಯ ದೃಷ್ಟಿಯಲ್ಲಿಯೂ ಆತನು ಮೇಲುಮಟ್ಟದವನು. ಆದರೆ ಆತನ ತಂದೆ ಗೋವಿಂದರಾಜನೆಂದರೆ, ಕನ್ನಡಿಗರೊಳಗೆ ಮಾತ್ರವೆ ಅಲ್ಲ, ಇಡಿ ಭಾರತ ಭೂಮಿಯೊಳಗೆ ಅಸಾಮಾನ್ಯ ವ್ಯಕ್ತಿ. ಕ್ರಿ.ಶ. ೭೯೩ರಿಂದ೮೧೩ರ ವರೆಗೆ ಎಂದರೆ ಸುಮಾರು ೨೦ ವರ್ಷಗಳ ವರೆಗೆ

ಅವನಾಳುತ್ತಿದ್ದುದು. ಆ ಆಳಿಕೆಯಲ್ಲಿ ತನ್ನ ಪ್ರತಾಪವನ್ನು ಹಿಂದುಸ್ಥಾನದೊಳಗೆಲ್ಲಾ ಹಬ್ಬಿದುದಷ್ಟೇ ಅಲ್ಲ; ಕಡೆಗೆ, ಹಿಮವತ್ಪರ್ವತದಿಂದ ಹಿಡಿದು ತೆಂಕಣ ಲಂಕಾಂತವಾದ ಭೂಭಾಗವನ್ನೆಲ್ಲ ಅಂಕೆಯಲ್ಲಿರಿಸಿದ ಚಕ್ರವರ್ತಿಯಾಗಿದ್ದನು. ಪೌರಾಣಿಕ ಕಾಲದ ಹೇಳಿಕೆಗಳನ್ನು ಬದಿಗಿರಿಸುವ ಚಾರಿತ್ರಿಕ ಚಕ್ರವರ್ತಿಗಳೆನ್ನುವ ಮಹಾಪುರುಷರಾಗಿ ತೋರುವವರೆಂದರೆ ಇಬ್ಬರು. ಶಕಪುರುಷನೆನ್ನಿಸಿದ ವಿಕ್ರಮಾದಿತ್ಯನು ಮೊದಲಿಗನಾದರೆ, ಬೌದ್ಧಮತ ಸ್ಥಾಪಕನಾದ ಅಶೋಕ ಚಕ್ರವರ್ತಿ ಮತ್ತಿನವನು. ಆದಿಯವನ ಚಾರಿತ್ರಿಕಾಂಶದೊಳಗಿನ ಬಲುಭಾಗವು ಇನ್ನೂ ಪೌರಾಣಿಕ ಛಾಯೆಗೊಂಡು ಮುಸುಕಿ ಹೋಗಿದೆ. ಮತ್ತಿನಾತನ ಸಾರ್ವಭೌಮತೆ ಎಂದರೆ ಭುಜಬಲ ಪ್ರತಾಪಾದಿಗಳಿಂದ ಸಂಪಾದಿತವಾದುದಲ್ಲ; ಬರಿಯ ಶಾಂತತಾ ಪ್ರಸಾರಕವಾದ ಮತಬಲದಿಂದ ಕೈಸೇರಿದುದು, ಏನು, ಕೈಲಾಸವಾಸಿಗಳಾದ ಮಹಾತ್ಮಾ ಗಾಂಧಿಯವರನ್ನೂ ಈ ಚಕ್ರವರ್ತಿಗಳ ಸಾಲಿನಲ್ಲಿ ಸೇರಿಸುವುದೆ? ಸಲ್ಲದ ನಿರ್ಧಾರವದು. ಪರ್ಯಾಂಬರಿಸಿದಲ್ಲಿ ಗೌತಮ ಬುದ್ಧ, ಅಶೋಕ, ಕ್ರಿಸ್ತ, ಮಹಾತ್ಮಾಗಾಂಧಿ ಇವರು ಪ್ರಪಂಚಕ್ಕೆ ಮಾರ್ಗದರ್ಶಕರಾದ ಅಸಾಮಾನ್ಯ ವ್ಯಕ್ತಿಗಳು. ಅದರಿಂದ ಹಿಂದುಸ್ಥಾನದೊಳಗಿನ ಚಾರಿತ್ರಿಕ ಚಕ್ರವರ್ತಿ ಎಂದರೆ ನಮ್ಮ ಜಗತ್ತುಂಗ ಗೋವಿಂದ ರಾಜನೇ ಸರಿ. ಅವನು ಚಕ್ರವರ್ತಿಯಾಗಿದ್ದುದು ಸ್ವಲ್ಪವೇ ಕಾಲವಿರಬೇಕು ಅದರೂ ಇಡೀ ಭಾರತ ಭೂಮಿಯ ಆದಿಯ ಮತ್ತು ಅಂತ್ಯದ ಚಾರಿತ್ರಿಕ ಸಾರ್ವಭೌಮನಾಗಿದ್ದುದು ನಮ್ಮ ಕನ್ನಡಿಕ ರಾಜನೆಂಬುದನ್ನು ಯಾರೂ ಮರೆಯಬಾರದು. ಈ ನಿರ್ಧಾರವನ್ನು ಶ್ರೀ ಎ.ಎಸ್. ಅಳ್ತೇಕರರೇ ತಮ್ಮ ಗ್ರಂಥದಲ್ಲಿ ನಿವೇದಿಸಿದುದರಿಂದ, ಇದು ಕನ್ನಡಿಗರದೇ ಆದ ಆತ್ಮಸ್ತುತಿ ಎಂದು ಯಾರು ಭಾವಿಸಲಿಕ್ಕೆ ಆಸ್ಪದವಿಲ್ಲ." (೧೯೮೮. ಪು.೩೮೪. ಸಂ:೨)

ಕನ್ನೆಮಾಡ

ಕನ್ನೆಮಾಡವೆಂದರೆ ಕನ್ಯಾಂತಃಪುರವೆಂದರ್ಥ. ಮಾಡು ಎಂದರೆ ಚಾವಣಿ. ಹವ್ಯಕ ಕನ್ನಡದಲ್ಲಿ ಮಾಡು ಈಗಲೂ ಬಳಕೆಯಲ್ಲಿದೆ. ಓವರಿಯೆಂದರೆ ಕೋಣೆ; ಒಳಮನೆ. ಕನ್ನೆಮಾಡವೆಂಬ ಹೆಸರೂ ಇದೆ. ಮಾಡ ಎಂದರೆ ಎತ್ತರ, ಉಪ್ಪರಿಗೆ; ಚಾರಮಾಡಿ ಎಂದು ಮುಂತಾದ ಎಡೆಗಳಲ್ಲಿ ಮಾಡವು ಕಾಣಿಸಿಕೊಳ್ಳುವುದು ಮಾಳಗುಡ್ಡ, ಮಾಳಮರಡಿ ಎಂಬ ದ್ವಿರುಕ್ತಿಗಳು ಬಳಕೆಯಲ್ಲಿ ಬಂದುದು, ಅಲ್ಲಿ 'ಮಾಳ' ಶಬ್ದದ ಮೂಲಾರ್ಥದ ಅರಿವು ಕಡಿಮೆಯಾದುದರ ಕುರುಹು. ಮಾಳದ ಮೂಲಾರ್ಥವು ತಿಳಿದಿದ್ದರೆ ಮತ್ತೆ ಅದರ ಮುಂದೆ ಅದೇ ಅರ್ಥದ ಗುಡ್ಡ ಅಥವಾ ಮರಡಿ ಎಂಬುದನ್ನಿಡುವ ಸಂಭವವಿಲ್ಲ ಎಂದು ಶಂಬಾ ಜೋಶಿ ಹೇಳುತ್ತಾರೆ.

ವಿವರಗಳಿಗೆ ನೋಡಿ: ಕೈವಲ್ಯ; ಕೇವಲಿ

ಶಂಬಾ ಜೋಶಿ ೧೯೯೯ ಸಂಪುಟ. ೨ ಪುಟ. ೧೮೯

ಕನ್ಯಾ

ಮಹಾಭಾರತದಲ್ಲಿ 'ಎಲ್ಲರನ್ನು ಕಾಮಿಸುತ್ತಾಳೆಂಬುದೇ ಕನ್ಯಾಶಬ್ದವು. ಇದು 'ಕಮು' ಧಾತುವಿನಿಂದ ಬಂದಿದೆ. ಆದರೆ ಕನ್ಯೆಯು ಯಾವಾಗಲೂ ಸ್ವತಂತ್ರಳು. ಅವಳು ಪರತಂತ್ರಳಲ್ಲ. ಆತ್ಮ ಪ್ರಧಾನ ಮಾಡಲು ಅವಳಿಗೆ ಸ್ವಾತಂತ್ರ್ಯವಿದೆ ಎಂದು ಬರುತ್ತದೆ. (ರಾಮೇಶ್ವರಾವಧಾನಿ (ಸಂ) 1973 ಪುಟ.395)

ಐದು ಜನ ಕನ್ಯೆಯರನ್ನು ದಿನನಿತ್ಯ ವಂದಿಸಬೇಕು ಎಂದು ಸಂಸ್ಕೃತದ ಶ್ಲೋಕದಲ್ಲಿ ಬರುತ್ತದೆ. ಅಹಲ್ಯೆ, ದ್ರೌಪದಿ, ಸೀತಾ, ತಾರಾ, ಮಂಡೋದರಿ ಈ ಐವರನ್ನು ಪ್ರಾತಃ ಸ್ಮರಣೀಯ ಕನ್ಯೆಯರೆಂದು ಹೇಳಲಾಗಿದೆ. ಇವರನ್ನು ಮಹಾಪತಿವ್ರತೆಯರೆಂದೂ ಕರೆಯುತ್ತಾರೆ. ಸಂಸ್ಕೃತದಲ್ಲಿ ಇವರನ್ನು ಪಂಚಕನ್ಯೆಯರು ಎಂದು ಹೇಳುತ್ತಾರೆ. ಇವರನ್ನು ಸ್ಮರಿಸಿದ ಗೃಹಿಣಿಯರು ತಮ್ಮ ಪಾತಿವ್ರತ್ಯ ಉಳಿಸಿಕೊಳ್ಳುತ್ತಾರೆ. ಮತ್ತು ಓಲೆಭಾಗ್ಯ ಉಳಿಸಿಕೊಳ್ಳುತ್ತಾರೆಂದು ನಂಬಿಕೆಯಿದೆ. ಇಲ್ಲಿ ಕನ್ಯಾಶುಲ್ಕದ ಕುರಿತು ವಿವೇಚಿಸಬಹುದು.

ಸರಿಸುಮಾರು ಹದಿನಾಲ್ಕನೆಯ ಶತಮಾನದ ಅನಂತರ ಕನ್ಯಾಶುಲ್ಕ ಬಂದು ಅದೊಂದು ವ್ಯಾಪಾರದ ಮಾದರಿಯಾಯಿತು ಎಂದು ಇತಿಹಾಸಕಾರರು ಹೇಳುತ್ತಾರೆ.

ಕನ್ಯತ್ವದ ಶಂಕೆಯ ಬಗ್ಗೆ ಮನು ಈ ರೀತಿಯಾಗಿ ಹೇಳಿದ್ದಾನೆ. ಒಬ್ಬ ಗಂಡಸು ಒಬ್ಬಳ ಕನ್ಯತ್ವವನ್ನು ಶಂಕಿಸಿ ಆರೋಪಿಸಿದರೆ ಅವನು ಅದನ್ನು ಪುರಾವೆ ಸಹಿತ ಸಾಬೀತು ಮಾಡಬೇಕು. ಇಲ್ಲದಿದ್ದರೆ ಸುಳ್ಳು ಆರೋಪ ಮಾಡಿದವನಿಗೆ ದಂಡ ವಿಧಿಸಬೇಕು. ಕನ್ಯಾದಾನವೂ ಭಾರತೀಯ ಪರಂಪರೆಯಲ್ಲಿ ವಿಶಿಷ್ಟವಾಗಿದೆ.

ಬ್ರಾಹ್ಮಣರಲ್ಲಿ 'ಸಗೋತ್ರ' ವಿವಾಹಪದ್ಧತಿಯಿಲ್ಲ. ಗೋತ್ರಗಳನ್ನು 'ಋಷಿ ಪರಂಪರೆಗೆ' ಅನುಸಾರವಾಗಿ ಗುರುತಿಸಲಾಗುತ್ತದೆ. ಉದಾ : ವಸಿಷ್ಠಗೋತ್ರ; ವಿಶ್ವಾಮಿತ್ರ; ಗೌತಮ; ಇತ್ಯಾದಿ. ಮದುವೆಯ ಸಂದರ್ಭದಲ್ಲಿ ಅಳಿಯನ ಪಾದಪೂಜೆಯನ್ನು ಮಾವ (ಹೆಣ್ಣಿನ ತಂದೆ) ಮಾಡುತ್ತಾನೆ. ಮದುವೆಯನ್ನು 'ಕನ್ಯಾದಾನ' ವೆಂದು ಕರೆಯಲಾಗುತ್ತದೆ. ಆದರೆ ಈ 'ಕನ್ಯಾದಾನ' ಎಂಬುದು ಶಾಸ್ತ್ರಕ್ಕೆ ಸಂಬಂಧಿಸಿದ ಹಾಗೆಯೇ (Hypergamy) ಸಂಬಂಧಿಸಿದ್ದು ಎಂದು ಟ್ರಾಟ್‌ಮನ್ ಹೇಳುತ್ತಾರೆ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿಯೂ ಈ ರೀತಿಯ ಚಿತ್ರಣಗಳಿವೆ. ಕನ್ಯತ್ವವನ್ನು ಉಳಿಸಿಕೊಳ್ಳಬೇಕೆಂಬುದೇ ಒಂದು ಸಮಾಜದ ಮೌಲ್ಯವಾಗಿರುವುದು ವ್ಯಂಗ್ಯ.

ವಿವರಗಳಿಗೆ ನೋಡಿ: Patricia ubroi (ED) 1993 Family, kinship and marriage in india P. 888

ರಾಮೇಶ್ವರಾವಧಾನಿ (ಸಂ) 1972-76 ಮಹಾಭಾರತ (ಸಂಪುಟ-1-11) ಪುಟ: 395.

ಡಾ.ಶ್ರೀಕಂಠಯ್ಯ.ಕೆ. 1983 ವಿಜಯನಗರ ಕಾಲದ ಕನ್ನಡ

ಸಾಹಿತ್ಯದಲ್ಲಿ ಜನಜೀವನ ಚಿತ್ರಣ ಪು. 290.
ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 8 – 225.
Mahalingam .T.V. 1967 South Indian Polity P. 32.

ಕನ್ಯಾಪಹರಣ

ಇದು ಪೆಣ್ಬುಯ್ಯಲ್ ಕೂಡಾ ಹೌದು. ಸ್ವಯಂವರ ಮಂಟಪದಲ್ಲಿ ಉಳಿದ ರಾಜರನ್ನು ಪರಾಜಿತಗೊಳಿಸಿ ಪಡೆಯುವ ಭಾರ್ಯೆಯು ಅತಿಪ್ರಿಯಳಾಗುತ್ತಾಳೆಂದು ವ್ಯಾಸಭಾರತದಲ್ಲಿ ಬರುತ್ತದೆ. ಇದರ ಹಿಂದೆ ಪುರುಷರ ಅಸೂಯೆ: ವೀರತ್ವದ ಹಂಬಲವೂ ಇದೆ.

ಸ್ತ್ರೀ ಅಪಹರಣ ವೀರ ಹೋರಾಟದ ಮೂಲಕವೂ ನಡೆಯುತ್ತಿತ್ತು ಎನ್ನುವುದಕ್ಕೆ ಅಂಬೆ, ಅಂಬಿಕೆ, ಅಂಬಾಲಿಕೆಯರನ್ನು ಭೀಷ್ಮ ಕರೆದೊಯ್ಯುವುದು ಉದಾಹರಣೆಯಾಗಿದೆ. ವ್ಯಾಸ ಭಾರತದಲ್ಲಿಯೂ ಈ ರೀತಿಯದೇ ಉಲ್ಲೇಖವಿದೆ.

ಹೆಣ್ಣನ್ನು ಒಲಿಸಿ ಅಪಹರಿಸುವುದು ಒಂದು ವಿಧ. ಹೆಣ್ಣನ್ನು ಬಲಾತ್ಕರಿಸಿ ಅಪಹರಿಸುವುದು ಮತ್ತೊಂದು ವಿಧ. ಸ್ತ್ರೀಯರನ್ನು ಅಪಹರಿಸಿಕೊಂಡು ಹೋಗಿ ವಿವಾಹವಾಗುವ ಪದ್ಧತಿ'ಯು ಇಲ್ಲಾಗಲೇ 'ವೈಯಕ್ತಿಕ ವಿವಾಹ ಪದ್ಧತಿ'ಗೆ ಪರಿವರ್ತನೆಯಾದ ಲಕ್ಷಣವನ್ನು ಹೊರಗೆಡಹುತ್ತದೆ. ಈ ವೈಯಕ್ತಿಕ ವಿವಾಹ ಪದ್ಧತಿಯು ಕೊನೆಯ ಪಕ್ಷ ಯುಗ್ಮ ವಿವಾಹ ರೂಪದಲ್ಲಿ ಅಸ್ತಿತ್ವಕ್ಕೆ ಬಂದಿತೆನ್ನಬಹುದು. ಯುವಕನೊಬ್ಬ ತನ್ನ ಮಿತ್ರರ ಸಹಾಯದಿಂದ ಯುವತಿಯನ್ನು ಅಪಹರಿಸಿಕೊಂಡು ಹೋಗುತ್ತಾನೆ. ಅಥವಾ ಆಕೆಯೊಂದಿಗೆ ಪಲಾಯನ ಮಾಡುತ್ತಾನೆ. ಅನಂತರ ಅವರೆಲ್ಲರೂ ಆಕೆಯೊಂದಿಗೆ ಒಬ್ಬರ ನಂತರ ಒಬ್ಬರು ಸಂಭೋಗಿಸುತ್ತಾರೆ. ಆದರೆ ಆಕೆಯು ಈ ಅಪಹರಣಕ್ಕೆ ಕಾರಣವಾದ ಯುವಕನ ಪತ್ನಿಯೆಂದು ಭಾವಿಸಲ್ಪಡುತ್ತಾಳೆ. "ಅಪಹರಣ" ಎನ್ನುವ ಪದವು ಇಲ್ಲಿ ಗಮನಾರ್ಹ. ಕನ್ಯಾದಾನ ಮತ್ತು ಕನ್ಯಾಪಹರಣಗಳ ನಡುವೆ ಇರುವ ಭಿನ್ನತೆಯನ್ನು ಗುರುತಿಸಬಹುದು.

ವಿವರಗಳಿಗೆ ನೋಡಿ: ಪೆಣ್ಬುಯ್ಯಲ್ ಏಂಗೆಲ್ಸ್ ಮೂಲ: ೧೯೮೦ ಪುಟ. ೬೬
ರಾಮೇಶ್ವರಾವಧಾನಿ (ಸಂ) ೧೯೭೨-೭೬ ಮಹಾಭಾರತ (ಸಂಪುಟ-೧-೧೧) ಪುಟ. ೬೯೮

ಕನ್ಯಾಶುಲ್ಕ

ಸರಿಸುಮಾರು ಹದಿನಾಲ್ಕನೆಯ ಶತಮಾನದ ಅನಂತರ ಕನ್ಯಾಶುಲ್ಕ ಬಂದು ಅದೊಂದು ವ್ಯಾಪಾರದ ಮಾದರಿಯಾಯಿತು ಎಂದು ಇತಿಹಾಸಕಾರರು ಹೇಳುತ್ತಾರೆ.

ವಿವರಗಳಿಗೆ ನೋಡಿ: Mahalingam .T.V. 1975 P.32
ಕೆ. ಶ್ರೀಕಂಠಯ್ಯ 1983 ಪುಟ. 290

ಕಪ್ಪಂಗವಿ

ಆನೆಯನ್ನು ಹಿಡಿಯುವ ಹಳ್ಳದ ಮುಚ್ಚಳವನ್ನು ಕಪ್ಪಂಗವಿಯೆಂದು ಕರೆಯುತ್ತಾರೆ. ಇದನ್ನು ಖೆಡ್ಡಾ ಎಂದೂ ಕರೆಯುತ್ತಾರೆ.

ಕಪ್ಪಡ

ಕಪ್ಪಡವೆಂದರೆ ಹರಿದ ಬಟ್ಟೆ. ಇದು ಬಟ್ಟೆಯ ಮೇಲಿನ ವ್ಯಾಮೋಹವನ್ನು ಕಳಚುವ ದಾರಿಯೂ ಹೌದು. ಕಪ್ಪಡ ಧರಿಸುವುದೆಂದರೆ ಬಟ್ಟೆಯ ಬಗೆಗಿನ ಹಂಗು ತೊರೆಯುವುದು. ಕಪ್ಪಡ ಮತ್ತು ಅರ್ಧ ಕಪ್ಪಡವೆಂದು ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಉಕ್ತವಾಗಿದೆ. ಕರ್ಪಟವೆನ್ನುವುದು ಕನ್ನಡದಲ್ಲಿ ಕಪ್ಪಡವೆಂದಾಗಿದೆ. "ನೀಮುಮೆಡದ ಕೈಯನೆಟಿಲಿಕ್ಕಿಯೆರ್ದ ಗಪ್ಪಡಮನೆಡದ ಮುಯ್ವಿನಮೇಗಿಕ್ಕಿ" ಎಂದು ಕಿಟ್ಟಲ್ ಇದಕ್ಕೆ ಉದಾಹರಣೆ ನೀಡಿದ್ದಾರೆ. 'ಕುಂಡೆ ಸುಟ್ಟರೂ ಕಪ್ಪಡ ಸುಡಬಾರದು' – ಗಾದೆ.

ವಿವರಗಳಿಗೆ ನೋಡಿ: ಅರ್ಧಗಪ್ಪಡ ಸಂಘ
ಮರಿಯಪ್ಪ ಭಟ್ಟ ಎಂ. ರೆಟ್ಟೆಲರ ಕನ್ನಡ – ಇಂಗ್ಲೀಷ್ ನಿಘಂಟು (೪ ಸಂಪುಟಗಳು) (ಕಿಟ್ಟಲ್ ಕೋಶ)

ಕರಂಕವಾಹಿನಿ

ಕರಂಕವೆಂದರೆ ಭರಣಿ, ಪೆಟ್ಟಿಗೆಯೆಂದು ಅರ್ಥ ಹಿಡಿಯುವವಳು. ಕರಂಕವಾಹಿನಿ–ಭರಣಿ (ಪೀಕದಾನಿ) ಕರಂಕವಾಹಿನಿಯರ ಚಿತ್ರಣ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಬಹಳ ಸಲ ಬರುತ್ತದೆ. ಕರಂಕವಾಹಿನಿಯರು ಎಂಬುದು ಉದ್ಯೋಗ ಸೂಚಕ ಪದ. ಅರಸೊತ್ತಿಗೆಯಲ್ಲಿ ಕರಂಕವಾಹಿನಿಯರು ಪೀಕದಾನಿಯನ್ನು ಹಿಡಿದುಕೊಂಡು ಸೇವೆಯಲ್ಲಿ ಇರುತ್ತಿದ್ದರು.

ಕರಗ

ಕರಗವೆಂದರೆ ನೀರು ತುಂಬುವ ಕಲಶ ಕರಗವನ್ನು ತಲೆಯ ಮೇಲಿಟ್ಟುಕೊಂಡು ಉತ್ಸವ ಮಾಡುವ ಆಚರಣೆಯು ಈಗಲೂ ಚಾಲ್ತಿಯಲ್ಲಿದೆ. ಕರಗಕ್ಕೆ ದೀಕ್ಷೆಯೆಂಬ ಅರ್ಥವೂ ಇದೆಯೆಂದು ಗಮನಾರ್ಹ. ಹಸಿಮಣ್ಣಿನ ಕಳಸಕ್ಕೆ ಶಕ್ತಿಯನ್ನು ಆವಾಹಿಸಿ ಅಲಂಕರಿಸಿ ತಲೆ ಮೇಲೆ ಹೊತ್ತು ಮೆರೆಸುವ ಉತ್ಸವ. ಇದು ದ್ರೌಪದಿಯ ಆರಾಧನೆಯ ಸಂಕೇತವಾಗಿದೆ.

ವಿವರಗಳಿಗೆ ನೋಡಿ: ಎಚ್. ಎಲ್. ನಾಗೇಗೌಡ 1998 ಕನ್ನಡ ಜಾನಪದ ಕೋಶ.

ಕರಣ

ನೂರೆಂಟು ರೀತಿಯ ಕರಣಗಳಿವೆ. ಕರಣವೆನ್ನುವುದಕ್ಕೆ ಬೇರೆ ಬೇರೆ ಅರ್ಥಗಳಿವೆ. ಚರ/ಸ್ಥಿರ (ಅಂತಃಕರಣ, ಬಹಿಃಕರಣ): ಕರಣವೆಂದರೆ ವಾಕ್ಕು, ಮನಸ್ಸು, ಕಾಯ, ಕರ್ಮೇಂದ್ರಿಯ, ಜ್ಞಾನೇಂದ್ರಿಯ: ದಶೇಂದ್ರಿಯಗಳು.

ಆಂಗಿಕ ಅಭಿನಯ ಮೂರು ವಿಧದ್ದಾಗಿದೆ, ಒಂದು ಶರೀರ(ಅವಯವಗಳ)ದ್ದು, ಇನ್ನೊಂದು ಮುಖದ್ದು, ಮೂರನೆಯದು 'ಚೇಷ್ಟಾಕೃತ'–ಎಂದರೆ ಚಲನ–ವಲನಗಳದು.

ನೋಡಿ: ಅಂಗಹಾರ

ಅಮೂರ ಜಿ. ಎಸ್. ೨೦೦೬ ಶ್ರೀರಂಗ ಸಾರಸ್ವತ (ಸಂಪುಟ. ೮)

ಕರಣಾಂಗ ಹಾರ

ಕರಣಾಂಗಹಾರವೆಂದರೆ ಅಭಿನಯ ಮುದ್ರೆಯೆಂದರ್ಥ. ಭರತನಾಟ್ಯಶಾಸ್ತ್ರದಲ್ಲಿ ಅಭಿನಯ ಎನ್ನುವುದನ್ನು 'ಆಂಗಿಕ'ವೆಂದು ಕರೆಯಲಾಗಿದೆ. 'ಆಂಗಿಕ' 'ವಾಚಿಕ' 'ಆಹಾರ್ಯ' ಮೂರು ಪ್ರಭೇದ.

ಭರತನು ಹೀಗೆ ಹೇಳುತ್ತಾನೆ: 'ಈ ನೃತ್ತಕ್ಕೆ ಯಾವ ಉದ್ದೇಶವೂ ಇಲ್ಲ, ಆದರೆ ಇದರಿಂದ ಪ್ರಯೋಗ ಕಳೆಕಟ್ಟುವುದು. ಜನರಿಗೆ ಸಾಮಾನ್ಯವಾಗಿ ನೃತ್ತ ಇಷ್ಟ. ಮಂಗಲ ಕಾರ್ಯಗಳಲ್ಲೂ ಅದನ್ನು ಬಳಸುತ್ತಾರೆ. ಆದರೆ(ಪೂರ್ವರಂಗದಲ್ಲಿ) ಇದನ್ನು ಅತಿಯಾಗಿ ಮಾಡಬಾರದು. ಹಾಗೆ ಮಾಡಿದರೆ ನಟರಿಗೆ ಆಯಾಸ, ಪ್ರೇಕ್ಷಕರಿಗೆ ಬೇಸರ.

'ಈಗ ಇದರ ಪ್ರಯೋಗದ ಬಗ್ಗೆ ಹೇಳುವೆ. ಮೊದಲು ವಾದ್ಯಮೇಳವನ್ನು ಸಜ್ಜುಗೊಳಿಸಬೇಕು. ಆಮೇಲೆ ವಾದ್ಯದ ಹಿನ್ನೆಲೆಯಲ್ಲಿ ನರ್ತಕಿಯ ಪ್ರವೇಶ. ವಿಶಿಷ್ಟ ಚಾರಿ(ಇದು ಮುಂದೆ ಒಂದು ಅಧ್ಯಾಯದಲ್ಲಿ ವಿವರಿಸಲ್ಪಟ್ಟಿದೆ) ಬೊಗಸೆಯಲ್ಲಿಯ ಹೂಗಳನ್ನು ಚೆಲ್ಲಿ ರಂಗಪೀಠವನ್ನು ಪ್ರದಕ್ಷಿಣೆಯಿಂದ ಸುತ್ತಿ, ದೇವತೆಗಳನ್ನು ವಂದಿಸಿ ಅಭಿನಯಕ್ಕೆ ತೊಡಗಬೇಕು. ಗೀತ–ನೃತ್ತಗಳ ನಂತರ ಆಕೆಯ ನಿಷ್ಕ್ರಮಣ, ತರುವಾಯ ಮಿಕ್ಕ ಪಾತ್ರಗಳೂ ಹೀಗೆಯೆ ಪ್ರವೇಶಿಸಿ ಬೇರೆ ಬೇರೆ ಆಕೃತಿಗಳನ್ನು ರಚಿಸುತ್ತ, ಕುಣಿಯಬೇಕು. ಮೊದಲು ಹಾಡು, ಆಮೇಲೆ ಅದರ ಅರ್ಥಕ್ಕೆ ಅನುಗುಣವಾಗಿ ನೃತ್ತ.'

ಅನೇಕ ತರದ ಭಂಗಿಗಳನ್ನು, ರಸಗಳನ್ನು ಸ್ತ್ರೀ–ಪುರುಷ ಪಾತ್ರಗಳು ಹೇಗೆ ನೃತ್ತ ಗೀತದಲ್ಲಿ ಅಭಿನಯಿಸಬೇಕೆಂಬುದನ್ನು ಹೇಳಿ ಭರತನು ತಾಂಡವದ ವಿಷಯವನ್ನು ಮುಗಿಸುತ್ತಾನೆ."

ನೃತ್ಯಹಸ್ತವೂ ಒಂದು ಚಲನೆಯೂ ಕೂಡಿದರೆ ಕರಣವಾಗುತ್ತದೆ. ಎರಡು ಕರಣಗಳು ಕೂಡಿಕೊಂಡಿದ್ದರೆ ಒಂದು ಮಾಂತ್ರಿಕವಾಗುವುದು. 2, 3, 4 ಮಾಂತ್ರಿಕಗಳು ಕೂಡಿದ್ದರೆ ಒಂದು 'ಅಂಗಾಹಾರ'ವಾಗುವುದು. ಕರಣಗಳು ಕಾಲಿನ ಚಲನೆ, ಹಸ್ತದ ಚಲನೆಗೆ ತಳಹದಿಯಾಗಿವೆ.

ನೋಡಿ: ಅಂಗಹಾರ ; ಕರಣ ಯು.ಎಸ್.ಕೃಷ್ಣರಾವ್ ೧೯೭೧ ಆಧುನಿಕ ಭಾರತದಲ್ಲಿ ನೃತ್ಯಕಲೆ ಪುಟ. ೩೫

ಅಮೂರ ಜಿ. ಎಸ್. ೨೦೦೬ ಶ್ರೀರಂಗ ಸಾರಸ್ವತ (ಸಂಪುಟ. ೮) ಪುಟ. ೬೦೧.

ಕರಸ್ಥಿತಾಮಳಕ

ಕರತಲಾಮಲಕ, ಸುಲಭವೇದ್ಯ. ಕರಸ್ಥಿತಾಮಳಕ ಎಂದರೆ ಕರತಲಾಮಲಕ ಅಂದರೆ ಸುಲಭವೇದ್ಯವಾದುದು. ಅಂಗೈಯಲ್ಲಿರುವ ನೆಲ್ಲಿಕಾಯಿಯಷ್ಟು ಸೂರ್ಯ ಸ್ಪಷ್ಟವಾದುದು. ಅಂಗೈಯ ಮುಷ್ಟಿಯಲ್ಲಿರುವಷ್ಟೇ ಸಹಜವಾದ ಜ್ಞಾನ ಸಂಪತ್ತು.

ಕರುನಾಡು

ಕನ್ನಡ ನಾಡು ಎಂಬ ಪದದ ವ್ಯುತ್ಪತ್ತಿಯ ಕುರಿತು ಮುಳಿಯ ತಿಮ್ಮಪ್ಪಯ್ಯ ಹೀಗೆ ಹೇಳಿದ್ದಾರೆ. ಕೀರ್ತಿಶೇಷರಾದ ರೈಸ್ ಸಾಹೇಬರೇ ಮೊದಲಾದ ಪಾಶ್ಚಾತ್ಯ ಪಂಡಿತರು ಕನ್ನಡನಾಡವೆಂಬುದಕ್ಕೆ "ಕರಿಮಣ್ಣಿನ ನಾಡು" ಎಂಬರ್ಥವನ್ನೆಸಗಿದ್ದಾರೆ. "ಕಱುನಾಡಗಂ" ಎಂಬ ತಮಿೞು ಪ್ರಯೋಗವನ್ನು ನೋಡಿ ಅವರು ಹಾಗೆ ಭ್ರಮೆಗೊಂಡರೆಂದು ತೋರುತ್ತದೆ. "ಬನವಾಸಿ" ಶಬ್ದದ ರೂಪಾಂತರವಾದ "ಕಱ್ನಾಡು" ಅಥವಾ, "ಕರ್ನಾಡು" ಎಂಬುದೇ ತಮಿೞರ ಉಚ್ಚಾರಣೆಗನುವಾಗಿ "ಕಱುನಾಡು" ಎಂದಾಗಿ, ಸೀಮಾರ್ಥದಲ್ಲಿ ಅವರೇ ಹೆಚ್ಚಾಗಿ ಉಪಯೋಗಿಸುವ "ಅಗಮ್" ಶಬ್ದದೊಡೆಗೂಡಿ "ಕಱುನಾಡಗಮ್" ಎಂಬ ರೂಪಾಂತರವಾಗಿದೆ. ("ಅಗಮ್, ಅಗತ್ತ್" ಎಂದರೆ "ಒಳಗೆ" ಎಂಬಂರ್ಥವು.) "ಕರ್ಣಾಟಕ"ವೆಂಬ ಶಬ್ದವೂ ಈ "ಕಱನಾಡಗಮ್" ಶಬ್ದದ ಸಂಸ್ಕೃತರೂಪವಲ್ಲದೆ ಕರ್ಣಾಟ"ದ ಮೇಲೆ "ಕ" ಪ್ರತ್ಯಯವನ್ನು ಹಚ್ಚಿ ರೂಪಿಸಿದುದಲ್ಲ. ಕರಿಮಣ್ಣಿನ ನಾಡಾದುದರಿಂದಲೇ ಆ ಹೆಸರು ಬಂದಿರಬೇಕಾದರೆ, ತದ್ಭಿನ್ನವಾದ ಬಿಳಿಮಣ್ಣಿನ ನಾಡಾಗಲಿ, ಕೆಮ್ಮಣ್ಣಿನ ನಾಡಾಗಲಿ ಇರಬೇಕಲ್ಲವೆ? ಅದಾವುದು? ಪ್ರಸಿದ್ಧವಾದ ಅಂತಹುದೊಂದು ನಾಡಿಲ್ಲದೆ ತದ್ಭಿನ್ನವಾದ ಕರಿಮಣ್ಣಿನ ನಾಡಂಬ ವ್ಯುತ್ಪತ್ತಿಯನ್ನು ನಮ್ಮ ಕನ್ನಡ ನಾಡಿನ ಮೇಲೆ ಹೊರಿಸುವುದು ಹೇಗೆ? ಅಷ್ಟೇ ಅಲ್ಲ; "ಇದು ಬಿಳಿಮಣ್ಣು" ಅದು ಕರಿಮಣ್ಣು" ಎಂದು ಮೊದಲಾಗಿ ಮಣ್ಣನ್ನು ಪರೀಕ್ಷಿಸುವ, "ಸರ್ವೇ"ಯವರ ಪದ್ಧತಿಯೂ, ಆ ನಿರ್ಣಯವನ್ನನುಸರಿಸಿ ನಾಡುಗಳಿಗೆ ಹೆಸರಿಡುವ ಕ್ರಮವು ಆ ಪುರಾತನಕಾಲದಲ್ಲಿರಲಿಲ್ಲವೆಂಬುದನ್ನು ಧಾರಳವಾಗಿ ಹೇಳಬಹುದು. (ಮುಳಿಯ ತಿಮ್ಮಪ್ಪಯ್ಯ ೧೯೮೮.೨. ಪು.೩೦೯–೩೧೦)

ಈ ರೀತಿಯಲ್ಲಿ ನಾಡವರ ವರ್ಣನೆಗೆಯ್ದುದನ್ನೆಣಿಸಿದರೂ ಮೇಲೆ ಹೇಳಿದ ಭಾವವೇ ಸ್ಥಿರವಾಗುತ್ತದೆ. ಸುಭಟತ್ವಾದ್ಯನೇಗುಣಯುತರಾದ ನಾಡವರು ಅಭಿಜನರಾಗಿದ್ದರೆಂದೂ ಹೇಳುತ್ತಾನೆ. ಅಭಿಜನರೆಂದರೆ ಪರಂಪರೆವಿಡಿದು ಬಂದ ಮೂಲನಿವಾಸಿಗಳಾದ ದೇಶೀಯರೆಂಬರ್ಥವು. ನಾಡವರೆಂದರೆ ನಾಡೊಡೆಯರು, ಅಥವಾ ನಾಡಿನವರು ಎಂಬ ಅರ್ಥವು. ಅದರಿಂದ ಅಭಿಜನರಾದ ನಾಡವರನ್ನು ಸಂಬಂಧಿಸಿದ "ನಾಡು" ಶಬ್ದವು ಬಹಳ ಪುರಾತನವಾದುದಾಗಿರಲೇಬೇಕು. ಕೀರ್ತಿಶೇಷರಾದ ವಾಮನ ಶಿವರಾಮ ಅಪ್ಟೆಯವರ "ಸಂಸ್ಕೃತ ಇಂಗ್ಲಿಷು"

ನಿಘಂಟುವಿನಲ್ಲಿಯೂ, ಇನ್ನೂ ಬೇರೆ ನಿಘಂಟುಗಳಲ್ಲಿಯೂ "ನಾಟ"ವೆಂದರೆ ಕರ್ನಾಟ ದೇಶವೆಂಬರ್ಥವಿದೆ. ಸು. ೮–೯ನೆಯ ಶತಮಾನದವನಾದ ರಾಜಶೇಖರಕವಿ ವಿಜಯೆಯೆಂಬ ಕವಯಿತ್ರಿಯನ್ನು "ಕರ್ಣಾಟಿ"ಯೆಂದೂ ಹೇಳುತ್ತಾನೆ. ಈ ನಾಟ ಶಬ್ದವು ಸಂಸ್ಕೃತದ, "ನಲಿ, ಬೀಳು" ಎಂಬರ್ಥಗಳುಳ್ಳ "ನಟ" ಧಾತುವಿನಿಂದ ಹುಟ್ಟಿದೆ. ಪೂರ್ವೋಕ್ತವಾದ ಕನ್ನಡದ "ನಡು" ಧಾತುವಿಗೂ ಈ "ನಟ್" ಧಾತುವಿಗೂ ಪರಸ್ಪರ ಸಂಬಂಧವಿರಬೇಕೆಂದು ನನ್ನ ಭಾವನೆ. ಏಕೆಂದರೆ ಹಾಡುಗಳನ್ನು ಹಾಡಿಕೊಂಡು ಹೆಂಗಸರು ಅಗೆಯೆತ್ತಿ ನಡುವುದನ್ನು ನೋಡಿದರೆ, ಆ ಕೃಷಿ ಕರ್ಮವನ್ನು ಒಂದು ನರ್ತನವಲ್ಲವೆಂದು ಯಾರೂ ಹೇಳಲಿಕ್ಕಿಲ್ಲ. ಸುಮಾರು ೩ನೆಯ ಶತಮಾನದಲ್ಲಿ ಶೆಂಗಟ್ಟುವನೆಂಬ ಚೇರರಾಜನು ಉತ್ತರದಿಕ್ಕಿಗೆ ಹೋಗುವಾಗ ನೀಲಗಿರಿಯಲ್ಲಿ ಕನ್ನಡರು ಆಡುವ ಕುಣಿತವನ್ನು ನೋಡಿ ಸಂತೋಷಿಸಿದನೆಂದು "ಶಿಲಪ್ಪದಿಕಾರಂ" ಎಂಬ ತಮಿಳು ಗ್ರಂಥದಲ್ಲಿ ಹೇಳಿದುದಾಗಿ ತಿಳಿದುಬರುತ್ತದೆ. (ಅದೇ.) ತಮಿಳಿನಲ್ಲಿ 'ನಾಟು' ಎಂದರೆ ನಾಡು. ತುಳುವಿನಲ್ಲಿ ಮಾತ್ರ 'ನಟ್ಟು' ಎಂದರೆ ಬೇಡು ಎಂಬ ಅರ್ಥವೂ ಇದೆ. ಭರತ ಖಂಡೆ; ಕರ್ನಾಟಕ ದೇಶ; ಗೋಕರ್ಣ ಮಂಡಲ; ಪರಶುರಾಮಕ್ಷೇತ್ರವೆಂದು ಗುರುತಿಸುವ ಪದ್ಧತಿ ಇತ್ತು.

ಕರ್ಕಡೆ – ಕಕ್ಕಡೆ

ಇದು "ಕೈಯಿಂದ ಎಸೆಯುವ ಶೂಲದಂತಹ ಆಯುಧ" ಎಂಬುದಾಗಿ ಡಾ. ಎಂ. ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಡುತ್ತಾರೆ. ಅವರ ಅಭಿಪ್ರಾಯವನ್ನು ಸಮರ್ಥಿಸುವ ಅಂಶ ಶಾಸನವೊಂದರಿಂದ ದೊರೆಯುತ್ತದೆ. ಅಂತಪಾಲನೆಂಬ ದಂಡಾಧೀಶನ ನಾಲ್ವರು ತಮ್ಮಂದಿರನ್ನು ಹೊಗುಳುತ್ತಾ ಶಾಸನಕಾರ ಅವರು, " ಆರ್ದ್ರಾಂತೂರ್ಪ್ಪಿಡುವ ಕಕ್ಕಡೆಯೆಂಬ ವ್ರೋಲರ್ದಪರ್" ಎಂಬುದಾಗಿ ವರ್ಣಿಸುತ್ತಾನೆ. ಕಾಯ್ಕಿಣಿಯ ಮೂರು ವೀರಗಲ್ಲುಗಳ ಪಾತದಿಂದ ವೀರರು, 'ಚಿನ್ನದಿಂದ ಮಾಡಿದ ಕಕ್ಕಡೆ' ಎಂಬ ಆಯುಧವನ್ನು ಹಿಡಿದು ಯುದ್ಧಕ್ಕೆ ಹೊರಟ ವಿಷಯ ತಿಳಿಯುತ್ತದೆ. ಕಾಯ್ಕಿಣಿಯ ವೀರಗಲ್ಲುಗಳ ಶಿಲ್ಪವನ್ನು ಅವಲಂಬಿಸಿ ಕರ್ಕ್ಕಡೆಯ ಬಗ್ಗೆ ಹೇಳುವುದಾದರೆ, ಇದು ಅರ್ಧಭಾಗ ಕತ್ತಿಯ ಆಕಾರವನ್ನೂ, ಉಳಿದ ಅರ್ಧಭಾಗ ಈಟಿಯನ್ನೂ ಹೋಲುತ್ತದೆ. ನಡುಭಾಗದಲ್ಲಿ ಹಿಡಿದುಕೊಳ್ಳಲು ಬರುವಂತಿದೆ. ಇದರಿಂದ ಇರಿಯಲು ಮತ್ತು ಎಸೆಯಲು ಸಹ ಬರುವಂತೆ ತೋರುತ್ತದೆ.

ಕರ್ಣಧಾರ

ಕರ್ಣಧಾರನೆಂದರೆ ಹಡಗಿನ ಚುಕ್ಕಾಣಿ ಹಿಡಿದಿರುವವನು. ಹಡಗಿನ ನಾವಿಕ. ಕರ್ಣ ಎಂದರೆ ಚುಕ್ಕಾಣಿ. ಚುಕ್ಕಾಣಿಯನ್ನು ಹಿಡಿದವನು ಕರ್ಣಧಾರ.

ವಿವರಗಳಿಗೆ ನೋಡಿ: ಅತಿರಥ; ಮಹಾರಥ, ಅರ್ಧರಥ; ಸಮರಥ.

ಕರ್ಣಾಟ ಎಂಬ ಶಬ್ದ ವ್ಯುತ್ಪತ್ತಿ

"ಕರ್ಣಾಟ ಎಂಬ ಶಬ್ದದ ವ್ಯುತ್ಪತ್ತಿಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಕೇಶವವರ್ಣಿ (1359)ಎಂಬ ಜೈನಪಂಡಿತನು ಭೇದನಾರ್ಥಕವಾದ 'ಕರ್ಣ' ಧಾತುವಿನಿಂದ ಹುಟ್ಟಿತೆಂದು ಭಾವಿಸಿ ದಿವ್ಯಭಾಷೆಯಿಂದ ಬೇರೆಯಾಗಿ ವ್ಯವಹಾರದಲ್ಲಿರುವ ಭಾಷೆಯಾದ ಕಾರಣ ಇದಕ್ಕೆ ಕರ್ಣಾಟ ಎಂಬ ಹೆಸರು ಬಂದಿದೆ ಎಂದು ಹೇಳುತ್ತಾನೆ. ವಿಶ್ವಗುಣಾದರ್ಶ ಎಂಬ ಸಂಸ್ಕೃತ ಗ್ರಂಥವನ್ನು ಬರೆದ ವೆಂಕಟಾಧ್ವರಿ (ಸು. 1700) ಕರ್ಣಗಳಲ್ಲಿ ಅಟನ ಮಾಡುವುದರಿಂದ (ಎಂದರೆ ಎಲ್ಲರ ಕಿವಿಗಳಲ್ಲಿಯೂ ಬಿದ್ದು ಪ್ರಸಿದ್ಧವಾದುದರಿಂದ) ಇದಕ್ಕೆ ಕರ್ಣಾಟವೆಂಬ ಹೆಸರುಂಟಾಯಿತೆಂದು ಹೇಳುತ್ತಾನೆ. ಈ ಎರಡು ವ್ಯುತ್ಪತ್ತಿಗಳೂ ಕವಿಕಲ್ಪನೆಯೆಂದು ಹೇಳಬಹುದು. ಡಾಕ್ಟರ್ ಗುಂಡರ್ಟ್ ಎಂಬವನು ಈ ಶಬ್ದವು ಕರ್+ನಾಡು (ಕರಿಯ-ಮಣ್ಣುಳ್ಳ ದೇಶ) ಎಂಬ ಪದಗಳಿಂದ ಬಂದಿರಬೇಕೆಂದು ಅಭಿಪ್ರಾಯಪಡುತ್ತಾನೆ. ಇನ್ನು ಕೆಲವರು ಕರು+ನಾಡು (ಎತ್ತರವಾದ ಪ್ರದೇಶ) ಎಂಬ ಪದಗಳಿಂದ ಬಂದಿದೆ ಎನ್ನುತ್ತಾರೆ. ಕೇಶಿರಾಜನೂ ಭಟ್ಟಾಕಳಂಕನೂ ಕನ್ನಡ ಎಂಬುದು ಕರ್ಣಾಟ ಎಂಬುದರ ಅಪಭ್ರಂಶವೆಂದು ಹೇಳಿದ್ದಾರೆ. ಆದರೆ ಕರ್ಣಾಟ ಎಂಬುದು ಕನ್ನಡ ಎಂಬ ಮೂಲಪದದ ಸಂಸ್ಕೃತ ರೂಪವೆಂದು ಹೇಳಲಿಕ್ಕೂ ಅವಕಾಶವುಂಟು." (ಆರ್. ನರಸಿಂಹಾಚಾರ್)

ವಿವರಗಳಿಗೆ ನೋಡಿ: ಆರ್. ನರಸಿಂಹಾಚಾರ್ ೧೯೬೧ ಕರ್ಣಾಟಕ ಕವಿಚರಿತೆ ಸಂಪುಟ. ೧

ಕರ್ಣಾಟಕ. ಪ್ರಾಚೀನತೆ, ಮಹಿಮೆ ವ್ಯುತ್ಪತ್ತಿ, ಲಿಪಿ

ಕರ್ತವ್ಯ

ಕರ್ತವ್ಯ ಅನ್ನುವುದು ರಾಜಕೀಯ ಪರಿಭಾಷೆಯಾಗಿದೆ ಎನ್ನುವುದು ಗಮನಾರ್ಹ. ಆಧುನಿಕ ಸಮಾಜದಲ್ಲಿ ಪ್ರಜೆಗೆ ಹಕ್ಕು ಮತ್ತು ಕರ್ತವ್ಯ ಎರಡೂ ಇರುತ್ತದೆ. ಕರ್ತವ್ಯವೆನ್ನುವುದು ಮನೆಯೊಳಗೂ ಇರುತ್ತದೆ. ಉದಾ: ತಂದೆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದು ಕರ್ತವ್ಯ. ಇದರೊಂದಿಗೆ ಈ ಕರ್ತವ್ಯವೆನ್ನುವುದು ಆಧುನಿಕ ಆಡಳಿತ ಪರಿಭಾಷೆಯೂ ಆಗಿದೆ.

ವಿವರಗಳಿಗೆ ನೋಡಿ: ಮೋಹನ್ ದಾಸ್ ಕರಮಚಂದ್ ಗಾಂಧಿ ೨೦೦೮ ಹಿಂದ್ ಸ್ವರಾಜ್

ಕಬ್ಬೊನ್ನು

ಕಬ್ಬೊನ್ ಎಂದರೆ ಕಬ್ಬಿಣ ಎಂದರ್ಥ. ಕರಿದಾದಪೊನ್(ಲೋಹ) ಕಬ್ಬೊನ್ ಎಂದಾಗುತ್ತದೆ.

ಕರ್+ಪೊನ್–ಕರ್ಪೊನ್. ಪೊನ್ ಮಂತ್ರಲೋಹ. ಕರ್ಪೊನ್ ಅನಂತರ ಇದು ಕರ್ಬುನ. ಅನಂತರವೇ ಕಬ್ಬಿಣವೆಂಬ ಪದವು ರೂಢಿಗೆ ಬಂದಿರಬೇಕು. ಅನ್ನಂಭಟ್ಟನ ತರ್ಕ ಸಂಗ್ರಹದಲ್ಲಿ 'ಕಾಲಾಯಸ' 'ಸೀಸ' ಎಂಬ ಎರಡು ಹೆಸರುಗಳನ್ನು ಕಬ್ಬಿಣಕ್ಕೆ ಕೊಡಲಾಗಿದೆ. ತಾರ್ಕಿಕರು ಲೋಹಗಳನ್ನು ತೇಜಸ್ಸಿನ ವಿಷಯವೆಂದು ಅಂಗೀಕರಿಸಿದ್ದಾರೆ. ಇದಕ್ಕೆ ಅವರು ಕೊಡುವ ಕಾರಣ ಲೋಹಗಳಿಗೆ ರೂಪವಿದೆ. ದ್ರವತ್ವವಿದೆ. ಅವುಗಳು ಪಾರ್ಥಿವವಲ್ಲ. ಕಬ್ಬಿಣದ ಬಳಕೆಯು ಚಾರಿತ್ರಿಕವಾಗಿ ಮಹತ್ವದ್ದು. ವಿವರಗಳಿಗೆ ನೋಡಿ: ಮಹೇಶ್ ಅಡಕೋಳಿ (ಸಂ) ೧೯೯೨ ಅನ್ನಂಭಟ್ಟನ ತರ್ಕಸಂಗ್ರಹ ಪುಟ. ೬೪.

ಕಲಾ ವಿರುದ್ಧ

"ನಿರುಪಮವಾದ ಗಂಧರ್ವಗತಿ ಸ್ವರಾದಿಕ ಎಂದರೆ ಗಾಂಧರ್ವ ವಿದ್ಯೆಯೆಂದು ಪ್ರಸಿದ್ಧವಾದ ನೃತ್ತ ಗೀತ ಚಿತ್ರ ಶಿಲ್ಪವೇ ಮುಂತಾಗಿ ಕಲೆಗಳು ಚತುಷ್ಷಷ್ಟಿ ವಿಧಗಳು. ಇವು ಎಲ್ಲಿ ದೊರೆಕೊಳ್ಳದೋ ಅಲ್ಲಿ ಕಲಾವಿರುದ್ಧ ದೋಷವು ಸಂಘಟಿಸುವುದು. ಜನರೆಲ್ಲ ಇದನ್ನು ನಿಂದಿಸುವರು." ಎಂದು ಕವಿರಾಜಮಾರ್ಗದಲ್ಲಿ ಬರುತ್ತದೆ.

ಕಲಿ

ಕಲಿ(ನಾ) ಕಲಹ; ಜಗಳ; ಕಾಳಗ; ಬಂಟ, ಶೂರ, ವೀರ. ಕಲಿತನ (ಶೌರ್ಯ) ರಾಜಪ್ರಭುತ್ವದ ಸಂಘರ್ಷಗಳಲ್ಲಿ ಮುಖ್ಯ ಮೌಲ್ಯವಾದುದರಿಂದ ಇದಕ್ಕೆ ಸಂಬಂಧಿಸಿದಂತೆ ಮಹಾಕಾವ್ಯಗಳಲ್ಲಿ ಅನೇಕ ಮಾತುಗಳು ಬಂದಿವೆಯೆಂಬುದು ಗಮನಾರ್ಹ. ಕಲಿತನ, ಸಜ್ಜನಿಕೆ, ಧರ್ಮಪ್ರವೃತ್ತಿ, ದಾಕ್ಷಿಣ್ಯದ ಮಾತು, ಚಾಡಿ ಹೇಳದಿರುವಿಕೆಗಳು ಸಾಂಸ್ಕೃತಿಕ ಮೌಲ್ಯಗಳಾಗಿವೆಯೆಂಬುದು ಇಲ್ಲಿ ಮನನೀಯ.

ಕಲಿಗಂಟು

ಗಂಡುಡೆಯೆಂದರೆ ವೀರಗಚ್ಚೆ. ಕಲಿಗಂಟು+ಇಕ್ಕು–ಕಲಿಗಂಟಿಕ್ಕು, ವೀರರು ವೀರಕಚ್ಚೆ ಗಂಟಿಕ್ಕುವ ಒಂದು ಕ್ರಮ. ಕಲಿಗಂಟು ಎಂದರೆ ವೀರಗಚ್ಚೆ. ಗಂಡುಡೆಯೆನ್ನುವುದು ಇಲ್ಲಿ ಗಮನಾರ್ಹ. ವೀರಗಚ್ಚೆಯಲ್ಲಿ ಕಚ್ಚೆಯನ್ನು ಬಿಗಿದು ಗಂಟು ಹಾಕಿಕೊಳ್ಳುತ್ತಾರೆ. ಮಲ್ಲಯುದ್ಧದಲ್ಲಿ ವೀರಗಚ್ಚೆಯು ಮುಖ್ಯವಾಗಿದೆ. ಈ ರೀತಿಯಲ್ಲಿ ಗಂಟು ಹಾಕಿಕೊಳ್ಳುವುದು ಮುಖ್ಯ. ಕಲಿಗಂಟಿನ ಕಚ್ಚೆಯು ಮೊಣಕಾಲ ತನಕ ಇರುವುದರಿಂದ. ಯುದ್ಧದ ಸಂದರ್ಭದಲ್ಲಿ ಕಾಲಿಗೆ ತೊಡರಾಗುವ ಸಾಧ್ಯತೆಯಿಲ್ಲ. ವಿವರಗಳಿಗೆ ನೋಡಿ: ಮಾನಸೋಲ್ಲಾಸ.

ಕವಚ

ಕವಚವನ್ನು ಲೋಹದಿಂದ, ಚರ್ಮದಿಂದ, ಹತ್ತಿಯಿಂದ, ಮರದ

ತೊಗಟೆಯಿಂದ ರಚಿಸಬೇಕು. ಆದರೆ ಅದು ಸುರಕ್ಷಿತವಾಗಿರಬೇಕು ಎಂದು ಮಾನಸೋಲ್ಲಾಸದಲ್ಲಿ ಬರುತ್ತದೆ. (ಮಾನಸೋಲ್ಲಾಸ-2-562)ಯುದ್ಧಕ್ಕೆ ಇದು ಬೇಕಾಗಿರುತ್ತದೆ. ಭುಜಕೀರ್ತಿ; ಎದೆಕವಚ; ಕಾಲಿಗೆಕವಚ; ಶಿರಸ್ತ್ರಾಣಗಳು ಗಮನಿಸಬೇಕಾದ ಅಂಶಗಳಾಗಿವೆ.

ಕವರ್

ಕವರ್ ಎಂದರೆ ಅಪಹರಿಸು; ಸೂರೆಗೊಳ್ಳು. 'ಕವರ್ದ' ವೆನ್ನುವುದು ಶುದ್ಧ ಕನ್ನಡ ಪದ. ಕರ್ವುವಿಲ್ ಎಂದರೆ ಕಬ್ಬಿನ ಬಿಲ್ಲು ಮನ್ಮಥನ ಬಿಲ್ಲು. ಕರ್ವು ಎಂದರೆ ಕಬ್ಬು ಮನ್ಮಥನ ಶರಹತಿಯಿಂದ (ಮನ್ಮಥನ ಪಂಚಬಾಣಗಳಿಂದ) ಮನಸ್ಸು ಅಪಹೃತವಾಯಿತು.

ಕವಳಿಗೆ

ಕವಳಿಗೆ ಎನ್ನುವ ಪ್ರಯೋಗವು ದಕ್ಷಿಣ ಕನ್ನಡದಲ್ಲಿ ಚಾಲ್ತಿಯಲ್ಲಿದೆ. ಅಲ್ಲಿ 'ಎಲೆ' (ವೀಳ್ಯದೆಲೆಯನ್ನು) ಲೆಕ್ಕ ಮಾಡುವಾಗ ಒಂದು ಕವಳಿಗೆ ಎಂದು ಲೆಕ್ಕ ಮಾಡುತ್ತಾರೆ. ಕವಳ ಎಂದರೆ ಎಲೆ ಸೂಡಿ; ಓಲೆಗರಿಯ ಕಟ್ಟು; ಮಾಡಿನ ಮೂಲೆ ಯೆಂಬರ್ಥಗಳಿವೆ. ಕವಳಿಗೆ ಕಪಾಲಿಕೆ; ಕಪಾಲದ ಮೂಳೆ. ಚಿಕ್ಕ ಕಂಚಿನ ಅಥವಾ ಲೋಹಗಳ ಪಾತ್ರೆಯೆಂದೂ ಅರ್ಥವಿದೆ.

ಕಳಧೌತ

ಚಿನ್ನ, ಬೆಳ್ಳಿಯನ್ನು ಕಳಧೌತವೆಂದು ಕರೆಯುತ್ತಾರೆ.

ಕಳ್ಳರು

ಶ್ರೀಮಂತಿಕೆ ಮತ್ತು ಬಡತನದ ನಡುವೆ ತಾರತಮ್ಯ ಏರ್ಪಟ್ಟಾಗ ಕಳ್ಳರ ವರ್ಗ ಸೃಷ್ಟಿಯಾಗುತ್ತದೆ. ಕಳ್ಳತನವು ಎರಡು ರೀತಿಯಲ್ಲಿರುತ್ತವೆ: ಒಂದು ತಿಳಿಯದಂತೆ ಅಪಹರಿಸುವುದು ಮತ್ತು ಬಲಾತ್ಕಾರದ ಮೂಲಕ ಅಪಹರಿಸುವುದು. ತುರುಗೋಳು ಬಲಾತ್ಕಾರದ ಅಪಹರಣ. ಆದರೆ ಕಳ್ಳತನವು ಸಾಮಾಜಿಕ ಅಪರಾಧವೆಂದು ಪರಿಗಣಿಸಲ್ಪಟ್ಟಿದೆ. ಕಳ್ಳತನ ಮಾಡಿ ಬದುಕುವ ಜನಾಂಗಗಳು ಭಾರತದಲ್ಲಿವೆ. ಅಂಥ ಜನಾಂಗಗಳನ್ನು ಅಪರಾಧಿ ಜನಾಂಗಗಳೆಂದು ಕರೆಯುತ್ತಾರೆ.
ವಿವರಗಳಿಗೆ ನೋಡಿ: ಅಂಜನ

ಕಾಂಗ್ರೆಸ್

ಇದರಲ್ಲಿಯೂ ಶಿವಪುರದ ಸತ್ಯಾಗ್ರಹ ಚಾರಿತ್ರಿಕವಾಗಿ ಬಹಳ ಮುಖ್ಯವಾದ ಘಟನೆಯಾಗಿದೆ. ಗಾಂಧೀಜಿಯವರು 'ಹರಿಜನ'ದಲ್ಲಿ ಬರೆದ ಸಾಲುಗಳು ಹೀಗಿವೆ: 'ಪಾನ ನಿರೋಧದ ಕೂಗು, ಯಾವಾಗಲೂ ಒಂದು ಫ್ಯಾಷನ್ನಾಗಿದೆ. ೧೯೨೦ ರಲ್ಲಿ ಅದು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮದ ಒಂದು ಭಾಗವಾಯಿತು'.

ಬ್ರಿಟೀಶ್ ಪ್ರಭುತ್ವದ ವಿರುದ್ಧ ಹೋರಾಡಿದ ಕಾಂಗ್ರೆಸ್ ತತ್ವ ದೇಶದಾದ್ಯಂತ ಪ್ರಚುರಗೊಂಡಿತು. ಅಸ್ಪೃಶ್ಯತಾ ನಿವಾರಣೆ; ಪಾನ ವಿರೋಧ; ಸ್ವಾವಲಂಬಿತನ ಅದರ ರಚನಾತ್ಮಕ ಕಾರ್ಯಗಳು ಎಂದು ಗಾಂಧಿ ಹೇಳಿರುವುದು ಗಮನಾರ್ಹ.

"ಕಾಂಗ್ರೆಸ್ ಒಂದು ಇಡೀ ರಾಷ್ಟ್ರದ ಮುಖವಾಣಿ. ಒಬ್ಬ ಸದಸ್ಯ ತನ್ನ ಧೋರಣೆಗಳನ್ನಾಗಲೀ, ಕಾರ್ಯಕ್ರಮಗಳನ್ನಾಗಲೀ, ಕಾಂಗ್ರೆಸ್ ಅಂಗೀಕರಿಸಬೇಕೆಂದು ಬಯಸಿದರೆ, ಜನಾಭಿಪ್ರಾಯವನ್ನು ತನ್ನ ಪರವಾಗಿ ರೂಢಿಸುತ್ತಾನೆ. ಸಹಜವಾಗಿಯೇ ಅವುಗಳನ್ನು ಚರ್ಚಿಸಿ ನಿರ್ಣಯಿಸಲು ಕಾಂಗ್ರೆಸ್ಸನ್ನು ಕೋರುತ್ತಾನೆ. ಆದರೆ ಯಾವುದೇ ಒಂದು ನೀತಿಯಲ್ಲಿ ಒಂದು ಕಾರ್ಯದಲ್ಲಿ ಅಚಲ ಅದಮ್ಯ ಶ್ರದ್ಧೆಯುಳ್ಳವನಾದರೆ ಕಾಂಗ್ರೆಸ್ಸಿನ ನಿರ್ಣಯ ಘೋಷಣೆಗಾಗಿ ಕಾದು ಕುಳಿತುಕೊಳ್ಳುವುದು ಅಕ್ಷಮ್ಯ. ಅದಕ್ಕೆ ಬದಲಾಗಿ ಕ್ರಿಯಾಶೀಲನಾಗಿ ಮುನ್ನುಗ್ಗಿ ತನ್ನ ನಿಲುವಿನ ಔಚಿತ್ಯವನ್ನು ಸಾಧಿಸಿ, ರಾಷ್ಟ್ರ ಅದನ್ನು ಅಂಗೀಕರಿಸದೇ ಅನ್ಯಮಾರ್ಗವಿಲ್ಲ ಎನ್ನಿಸಬೇಕಾಗುತ್ತದೆ."

ಕಾಂಗ್ರೆಸ್‌ನ ಹುಟ್ಟಿನ ಕುರಿತು ಬಿಪನ್ ಚಂದ್ರ ಹೀಗೆ ಹೇಳುತ್ತಾರೆ. "೧೮೮೩ ರ ಡಿಸೆಂಬರಿನಲ್ಲಿ ಇಂಡಿಯನ್ ಅಸೋಸಿಯೇಷನ್ ಒಂದು ಅಖಿಲ ಭಾರತ ರಾಷ್ಟ್ರಿಯ ಸಮ್ಮೇಳನವನ್ನು ಸೂಚಿಸಿತ್ತು. ಆದರೆ ಪ್ರಯತ್ನವು ಅಷ್ಟಾಗಿ ಯಶಸ್ವಿಯಾಗಿರಲಿಲ್ಲ. ಈ ವಿಚಾರಕ್ಕೆ ರಾಷ್ಟ್ರೀಯವಾದೀ ರಾಜಕೀಯ ನಾಯಕರ ಬೊಂಬಾಯಿ ಗುಂಪು ಹೆಚ್ಚು ಖಚಿತವಾದ ರೂಪು ಕೊಟ್ಟಿತು. ಇಂಗ್ಲಿಷ್‌ನವನೂ ನಿವೃತ್ತ ಸಿವಿಲ್ ಅಧಿಕಾರಿಯೂ ಆಗಿದ್ದ ಎ.ಒ.ಹ್ಯೂಮ್(A.o.Hume) ಎಂಬುವನೊಂದಿಗೆ ಈ ಗುಂಪು ಸಹಕರಿಸಿ ೧೮೮೫ ರ ಡಿಸೆಂಬರ್ ತಿಂಗಳ ಕೊನೆಯ ದಿನಗಳಲ್ಲಿ ಭಾರತದ ಬೇರೆ ಬೇರೆ ಭಾಗಗಳ ರಾಜಕೀಯ ನಾಯಕರನ್ನು ಬರಮಾಡಿ, ಒಟ್ಟು ಸೇರಿಸುವ ಪ್ರಯತ್ನ ಮಾಡಿದರು. ಈ ನಾಯಕರು "ಭಾರತ ರಾಷ್ಟ್ರೀಯ ಕಾಂಗ್ರೆಸ್" (Indian National Congress)ನ್ನು ಸ್ಥಾಪಿಸಬೇಕೆಂದೂ ನಿರ್ಧರಿಸಿದರು.

ಕಾಂಗ್ರೆಸಿನ ಸ್ಥಾಪನೆಯನ್ನು ಪ್ರೋತ್ಸಾಹಿಸಿದುದರಲ್ಲಿ ಹ್ಯೂಮನ ಮುಖ್ಯ ಉದ್ದೇಶ, ಸುಶಿಕ್ಷಿತ ಭಾರತೀಯರಲ್ಲಿ ಬೆಳೆಯುತ್ತಿದ್ದ ಅತೃಪ್ತಿಗೆ ಒಂದು ಬಿಡುಗಂಡಿಯನ್ನು ಒದಗಿಸುವುದು ಅಥವಾ ಅದಕ್ಕೆ ಒಂದು 'ರಕ್ಷಕ ಕವಾಟ'ವನ್ನು ನಿರ್ಮಿಸುವುದು ಎಂದು ಹೇಳಲಾಗಿದೆ. ಅತೃಪ್ತ ರಾಷ್ಟ್ರೀಯ ವಿದ್ಯಾವಂತ ವರ್ಗವು ಅತೃಪ್ತ ಕೃಷಿಕ ವರ್ಗದೊಂದಿಗೆ ಬೆರೆಯುವುದನ್ನು ನಿವಾರಿಸಲು ಅವನು ಅಪೇಕ್ಷಿಸಿದನು. ಮೃದುವಾದ ರಾಜಕೀಯ ಚಳುವಳಿಯನ್ನು ಪೋಷಿಸುವುದರ ಮೂಲಕ, ಅದು ಉಲ್ಬಣಗೊಂಡು ಹತೋಟಿ ಮೀರುವ ಸಾಧ್ಯತೆಯನ್ನು ತಪ್ಪಿಸಬಹುದೆಂದು ಆಶಿಸಿದನು. ಹ್ಯೂಮ್ ಮುಂದೆ ಹೀಗೆ ಬರೆಯಲಿದ್ದನು: "ಚಳುವಳಿಗೆ ಮೂಲ ಪ್ರಚೋದನೆಯನ್ನು ಕೊಟ್ಟವರಿಗೆ ಬೇರೆ ದಾರಿಯೇ ಉಳಿದಿರಲಿಲ್ಲ. ಉದ್ರೇಕವು..... ತೀವ್ರವಾಗಿ ಉಲ್ಬಣಗೊಳ್ಳುತ್ತಿದ್ದ

ಒತ್ತಡದೊಂದಿಗೆ ಕಾರ್ಯತತ್ಪರವಾಗಿತ್ತು. ಅದು ತನ್ನ ಫಲಗಳನ್ನು, ಆಗಲೇ ಪ್ರಾರಂಭಮಾಡಿದ್ದಂತೆ, ಒಳಗೇ ಕೊರೆಯಲು ಬಿಡುವುದಕ್ಕೆ ಬದಲಾಗಿ ಸ್ಪಷ್ಟವಾದ ಸಾಂವಿಧಾನಿಕವಾದ ಮಾರ್ಗಗಳಲ್ಲಿ ಹರಿಯಲು ಬಿಡುವುದು ಅತ್ಯಂತ ಮುಖ್ಯವಾದ ವಿಚಾರವಾಗಿತ್ತು." (ಬಿಪನ್ ಚಂದ್ರ ೧೯೭೨ ಪುಟ ೫೩-೫೪)

ಸ್ವರಾಜ್ಯದ ಇಚ್ಛೆಯಿಂದ ಕಾಂಗ್ರೆಸ್ ಹುಟ್ಟಿತು ಎಂದು ಗಾಂಧಿ ಹೇಳುತ್ತಾರೆ: 'ರಾಷ್ಟ್ರೀಯ ಮಹಾಸಭೆ' National Congress ಸ್ಥಾಪಿತವಾದುದೇ ಆ ಇಚ್ಛೆಯಿಂದ. ಶಬ್ದವೇ ಅದನ್ನು ಸೂಚಿಸುತ್ತದೆ." ಕಾಂಗ್ರೆಸ್ ಎಂದರೆ ಒಟ್ಟು ಸೇರುವಿಕೆ, ಸಮ್ಮೇಳನ, ಯಾವುದೇ ವಿಷಯದ ಚರ್ಚೆಗೆ ನಿಯೋಜಿತವಾದ ಔಪಚಾರಿಕ ಸಮ್ಮೇಳನ, ಸಭೆ.

ವಿವರಗಳಿಗೆ ನೋಡಿ: ಡಾ.ಎಚ್.ತಿಪ್ಪೇರುದ್ರಸ್ವಾಮಿ ೧೯೮೧ ಮಹಾತ್ಮ ಸಂಪುಟ.೪ ಪು.೨೬೭

ಡಾ.ಎಚ್.ತಿಪ್ಪೇರುದ್ರಸ್ವಾಮಿ ೧೯೭೫ ಮಹಾತ್ಮ ಸಂಪುಟ.೩

ಡಿ.ಲಿಂಗಯ್ಯ ೧೯೭೬ ಶಿವಪುರ ಧ್ವಜಾಸತ್ಯಾಗ್ರಹ

ಮೋಹನ್ ದಾಸ್ ಕರಮಚಂದ್ ಗಾಂಧಿ ೨೦೦೮ ಹಿಂದ್ ಸ್ವರಾಜ್

ಕಾಂತಾರಭೈಕ್ಷ

ಕಾಡಿನಲ್ಲಿ ಭಿಕ್ಷೆ ಬೇಡುವವನು. ಉಕ್ತಗೊಂಡಿದೆ. ಊರಿನಲ್ಲಿ ಭಿಕ್ಷೆ ಬೇಡುವುದು ಸರಿ ಆದರೆ ಕಾಡಿನಲ್ಲಿಯೂ ಭಿಕ್ಷೆ ಬೇಡುವುದು ಜೈನ ಧರ್ಮದ ತಾತ್ವಿಕ ನಂಬಿಕೆಯನ್ನು ಸೂಚಿಸುತ್ತದೆ.

ಕಾನೀನ

ಕಾನೀನನೆಂದರೆ ಕನ್ಯೆಯಲ್ಲಿ ಹುಟ್ಟಿದವನು. ಕರ್ಣನನ್ನು 'ಕಾನೀನ'ನೆಂದು ಕರೆಯುತ್ತಾರೆ. ಮಹಾಭಾರತದಲ್ಲಿ 'ಕಾನೀನ' ಎಂದು ಕರ್ಣನನ್ನು ಗುರುತಿಸಲಾಗಿದೆ. ಕುಂತಿಯು ಕನ್ಯೆಯಾಗಿದ್ದಾಗ ಹುಟ್ಟಿದವನು ಕರ್ಣ. ಆದುದರಿಂದ ಅವನಿಗೆ ಆ ಹೆಸರು ಬಂತು. ಕನ್ನೆತನದಲ್ಲಿ ಮಗುವನ್ನು ಹೆರುವುದು ನೈತಿಕವಾಗಿ ಸರಿಯಲ್ಲ. ಕನ್ಯತ್ವವು ಪವಿತ್ರವೆಂದು ನಂಬಿಕೆಯಿರುವುದು ಇದಕ್ಕೆ ಪೂರಕವಾಗಿದೆ. ಎರಡನೆಯದಾಗಿ ಕನ್ಯತ್ವದಲ್ಲಿ ಹೆತ್ತ ಮಗನಿಗೂ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನಗಳು ಕಲ್ಪಿತವಾಗಿರಲಿಲ್ಲ. ಕಾನೀನದ ಪರಿಕಲ್ಪನೆಯು ಋಗ್ವೇದಲ್ಲಿಯೂ ಬರುತ್ತದೆ. ಕನ್ಯೆಯೆಂದರೆ ಯೋನಿಚ್ಛದವಾಗದವಳು. ಆದುದರಿಂದ ಕನ್ಯೆಗೆ ಅಕ್ಷತಕನ್ಯೆ (ತುಂಡಾಗದ=ಅಕ್ಷತ) ಎಂದೂ ಹೇಳುತ್ತಾರೆ. ಪಾರಂಪರಿಕವಾಗಿ ಮಕ್ಕಳನ್ನು ಈ ರೀತಿ ಪಡೆಯಬಹುದೆಂದು ಸೂಚಿಸಲಾಗಿದೆ.

೧. ಧರ್ಮಜ ಮಗ – ಸಫಲ ದಾಂಪತ್ಯದಲ್ಲಿ ಹುಟ್ಟಿದವನು – ಧಾರ್ಮಿಕ ಹಕ್ಕು ಇದೆ.

೨. ಕ್ಷೇತ್ರಜ – ಗಂಡನ ಸಮ್ಮತಿಯಿಂದ ತನ್ನ ಪತ್ನಿಯಲ್ಲಿ ಇನ್ನೊಬ್ಬ ಮಗನಿಂದ ಹುಟ್ಟಿದವನು.

೩. ಗಂಧಜ – ಗೋಪ್ಯವಾಗಿ ಹೆಂಡತಿಯು ಸಾಕಿದ ಮಗ.

೪. ಕಾನೀನ – ಅವಿವಾಹಿತ ಹುಡುಗಿಗೆ ಗೋಪ್ಯವಾಗಿ ಹುಟ್ಟಿದ ಮಗ.

೫. ಪುರಿಕಾ – ದತ್ತಕ್ಕೆ ಪಡೆಯಲ್ಪಟ್ಟ ಮಗಳ.

೬ ಸಹೋಧಜ – ವಿವಾಹಕಾಲದಲ್ಲಿ ಗರ್ಭಿಣಿಯಾಗಿರುವ ಹೆಂಗಸಿಗೆ ಹುಟ್ಟಿದ ಮಗ.

೭ ದತ್ತಕ – ದತ್ತಕ್ಕೆ ಪಡೆಯಲ್ಪಟ್ಟ ಮಗ.

೮. ಕರತ – ಖರೀದಿ ಮಾಡಲ್ಪಟ್ಟ ಮಗ.

೯. ಅನಾಥ ಮಗ.

೧೦. ಸ್ವಯಂದತ್ತ ಪರಿತ್ಯಜಿತನಾದ ಮಗನು ತನ್ನನ್ನು ತಾನು ಇನ್ನೊಬ್ಬನಿಗೆ ಅರ್ಪಿಸಿ ಮಗನಾದುದು.

೧೧. ಪುನರ್ಭವ – ಪುನರ್ವಿವಾಹಿತಳಾದ ಹೆಂಗಸಿನ ಮಗ.

೧೨. ಅಪವಿಧ – ಒಬ್ಬ ವ್ಯಕ್ತಿಯ ಮುಂದೆ ಬಂದು ಪರಿತ್ಯಕ್ತ ಮಗನನ್ನು ಸ್ವೀಕರಿಸುವುದು.

೧೩. ಬ್ರಾಹ್ಮಣ ಗಂಡನಿಂದ ಶೂದ್ರ ಹೆಂಡತಿಯಲ್ಲಿ ಹುಟ್ಟಿರುವ ಮಗ – ನಿಷಾದ.

ವಿವರಗಳಿಗೆ ನೋಡಿ: ಶೇಷ ನವರತ್ನ ೨೦೦೮ ಋಗ್ವೇದ ಒಂದು ಅಧ್ಯಯನ

ಕಾಪಿನಾಳ್

ರಕ್ಷಕ–(ಸೇವಕ)ನನ್ನು ಕಾಪಿನಾಳ್ ಎಂದು ಕರೆಯುತ್ತಾರೆ. ಕಾಪು ಎಂದರೆ ಕಾಯು. ಕಾಯುವವನು ಕಾಪಿನಾಳ್. ಕಾಪುನೆ ಎಂದರೆ ಕಾಯುವುದು ಎಂಬ ಪದ ಪ್ರಯೋಗವು ತುಳುವಿನಲ್ಲಿದೆ. ಈಗಿನ 'ವಾಚ್‌ಮೆನ್' ಪರಿಕಲ್ಪನೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕಾಯೋತ್ಸರ್ಗ

ಜೈನಧರ್ಮದಲ್ಲಿ ಧ್ಯಾನಮಾಡುವ ಕ್ರಿಯೆಗಳು ಬೇರೆ ಇವೆ. ಅವುಗಳಲ್ಲಿ ಕಾಯೋತ್ಸರ್ಗವೂ ಒಂದು. ಆದಿಪುರಾಣ ಕಾಯೋತ್ಸರ್ಗದ ಕುರಿತು ಬರುತ್ತದೆ. ಶರೀರಕ್ಕೆ ಆಗುವ ಉಪಸರ್ಗಗಳನ್ನು ಸಹಿಸಿ ನಿಷ್ಕಂಪನಾಗಿ ಎರಡೂ ಕೈಗಳನ್ನು ಇಳಿಬಿಟ್ಟು ನಿಂತು ಧ್ಯಾನಮಾಡುವುದು ಕಾಯೋತ್ಸರ್ಗ.

ಕಾರ್ಮಿಕ

ಕರ್ಮ ಅಂದರೆ ಕೆಲಸ, ಯಾರು ಕೆಲಸ ಮಾಡುತ್ತಾರೋ ಅವರು ಕಾರ್ಮಿಕರು. ಕೈಗಾರೀಕರಣವು ಕಾರ್ಮಿಕ ಎಂಬ ಪದಕ್ಕೆ ಹೊಸ ವ್ಯಾಖ್ಯಾನ ನೀಡಿತು. ಯಾರು ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಾರೋ ಅವರನ್ನು ಕಾರ್ಮಿಕರೆಂದು ಕರೆದಿರುವುದು ಬಂಡವಾಳವಾದ.

ವಿವರಗಳಿಗೆ ನೋಡಿ: Anand Prakash 2002 Marxist literary theory - A view

ಕಾರ್ಮುಕ

ಕಾರ್ಮುಕ ಎಂದರೆ ಬಿಲ್ಲು. ಕರ್ಣನ ಬಿಲ್ಲಿನ ಹೆಸರು ಕಾಳವಟ್ಟ. ಕಾರ್ಮುಕ ಗುರುವೆಂದರೆ ಧನುರ್ವಿದ್ಯಾ ಗುರು ಮರುಣಪ್ರಸಂಗದಿಂದಲೂ; ಸೂರ್ಯಪುತ್ರನೂ, ರಾಧೆಯ ಆರೈಕೆಯಲ್ಲಿ ಬೆಳೆದವನೂ, ಅಂಗದೇಶದ ಅರಸನೂ ಜನ್ಮತಃ ಶೂರನೂ, ಕಾಳವಟ್ಟವೆಂಬ ಬಿಲ್ಲನ್ನು ಉಳ್ಳವನೂ, ಧನುರ್ವಿದ್ಯಾ ಗುರುವಿನ ಪರಮ ಶಿಷ್ಯನೂ, ಪರಶುರಾಮನ ಶಿಷ್ಯನೂ, ಜನ್ಮಜಾತವಾಗಿಯೆ ಕವಚ ಧರಿಸಿದವನು ಮದಗಜದ ಲಕ್ಷಣ ಹೊಂದಿದ ಧ್ವಜ ಇರುವವನೂ ಆದ ಕರ್ಣನ ಕುರಿತಾದ ವರ್ಣನೆ ಇದು. ಜಾಮದಗ್ನ್ಯ=ಜಮದಗ್ನಿಯ ಮಗ ಪರಶುರಾಮ.

ಕಾರ್ಯ

ಬುದ್ಧಿವಂತರ ಕಾರ್ಯವು ಅವರ ವಿವೇಚನೆಯ ಶಕ್ತಿಯಿಂದ ಹುಟ್ಟಿಕೊಳ್ಳುತ್ತದೆ. ಕಾರ್ಯವೆಂದರೆ ವೃತ್ತಿ. ಪರಿಣಾಮ, ಆರಂಭ, ವಿವರ್ತ. ಇನ್ನೊಂದು ಕಾರ್ಯಗಳು ಒಟ್ಟು ಹದಿನಾರು ರೀತಿಯವು. ಅಂತಃಕರಣ, ದಶೇಂದ್ರಿಯಗಳು. ಪಂಚವಿಷಯಗಳು.

ವಿವರಗಳಿಗೆ ನೋಡಿ: ಡಾ. ಟಿ.ವಿ.ವೆಂಕಟಾಚಲಶಾಸ್ತ್ರೀ 1999 ಶ್ರೀವತ್ಸ ನಿಘಂಟು ಪುಟ. 100

ಕಾಲ್ಗಾಪು

ಪದಾತಿಸೈನ್ಯವನ್ನು ಕಾಲ್ಗಾಪುವೆಂದು ಕರೆಯುತ್ತಾರೆ. ಕಾಲು+ಕಾಪು–ಕಾಲ್ಗಾಪು. ಅಂದರೆ ಕಾಲಾಳು.

ಕಾಷ್ಠಕರ್ಮ

ಯಾರು ಮರದ ಕೆಲಸ ಮಾಡುತ್ತಾರೋ ಅವರನ್ನು ಕಾಷ್ಠ ಕರ್ಮಿಗಳು ಎಂದು ಕರೆಯುತ್ತಾರೆ. ಮರಗೆಲಸ ಮಾಡುವವರನ್ನು ಬಡಿಗರು ಎಂದು ಕರೆಯುತ್ತಾರೆ. ಬಡಗಿಗಳ ಕರ್ಮ–ಮರದ ಕೆಲಸ ಮಾಡುವುದು. ಮರದ ಕೆಲಸ ಮಾಡುವವರಿಗೆ ವಿಶಿಷ್ಟವಾದ ಕೌಶಲ್ಯವು ಬೇಕಾಗುತ್ತದೆ. ಮರದ ಸೂಕ್ಷ್ಮ ಕೆಲಸದ ಕುಶಲ ಕರ್ಮಿಗಳಿಗೆ ವಿಶೇಷ ಪ್ರಾಶಸ್ತ್ಯವಿತ್ತು. ಚಿನ್ನದ ಕೆಲಸ ಮಾಡುವವರು; ಕಬ್ಬಿಣದ ಕೆಲಸ ಮಾಡುವವರು;

ಮರದ ಕೆಲಸ ಮಾಡುವವರು, ಶಿಲ್ಪದ ಕೆಲಸ ಮಾಡುವವರು ಒಂದು ವರ್ಗಕ್ಕೆ ಸೇರುತ್ತಾರೆ. ಇವರನ್ನು "ಕುಶಲ ಕರ್ಮಿಗಳು" ಅಥವಾ "ಶಿಲ್ಪಾಚಾರ್ಯರು" ಎಂದು ಕರೆಯುತ್ತಾರೆ.

ಕಾಳಾಮುಖ

ಹನ್ನೆರಡನೆಯ ಶತಮಾನದಲ್ಲಿ ವೀರಶೈವ ಧರ್ಮವು ಪ್ರಬಲಿಸುವ ಮುನ್ನ ಕರ್ನಾಟಕದಲ್ಲಿ 'ಕಾಳಮುಖ'ರೆಂಬ ಶೈವರು ಬಹು ಪ್ರಬಲರಾಗಿದ್ದರೆಂದು ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಡುತ್ತಾರೆ.

ಶೈವರಲ್ಲಿ ನಾಲ್ಕಾರು ಗುಂಪುಗಳಾಗಿ ಹೆಸರಿಸಲ್ಪಟ್ಟಿರುವ ಗೊರವರು, ಕಾಪಾಲಿಕರು, ಕಾಳಾಮುಖರು ಮೊದಲಾದವರು. ಕಾಳಾಮುಖರ ಬೇರೆ ಬೇರೆ ಸಂಪ್ರದಾಯಗಳನ್ನು ಇವು ಸೂಚಿಸುತ್ತದೆ. ಕರ್ನಾಟಕದಲ್ಲಿ ಪ್ರಖ್ಯಾತರಾದ ಕಾಳಾಮುಖ ಗುರುಗಳ ಗುಂಪಿನಲ್ಲಿ ಸಾಮಾನ್ಯವಾಗಿದೆ. ಈ ಕಾಳಾಮುಖರು ಮತ್ತು ಅವರ ಅನುಯಾಯಿಗಳು, ಚಾಲುಕ್ಯರು ಮತ್ತು ಅವರ ಸಾಮಂತರ ಆದರಕ್ಕೊಳಗಾಗಿ ಜೈನಮತದಿಂದ ತಮ್ಮ ಮತಕ್ಕೆ ಜನರನ್ನು ಮತಾಂತರಗೊಳಿಸಿಕೊಳ್ಳುತ್ತಿದ್ದರೆಂದು ತಿಳಿಯಬಹುದು.

ಕ್ರಿಸ್ತಶಕ 1084 ರ ಶಾಸನ ನ್ಯಾಯ ಶಕ್ತಿ ಪಂಡಿತದೇವ ವಿದ್ಯೆ, ಆಹಾರ ದಾನಗಳಿಂದ ಪ್ರಸಿದ್ಧನಾಗಿ ಶಿವನೇ ಕಾಳಾಮುಖನಾಗಿ ಅವತರಿಸಿದನೆಂದು ಹೇಳಿದೆ. ಕಾಳಾಮುಖಕ್ಕೂ ಕಾಳಿಗೂ ಸಂಬಂಧವಿದೆ.

ಕಾಳಾಮುಖರ ಪ್ರಭಾವ ಬೆಳೆಯುತ್ತಿರುವಾಗಲೇ ವೈದಿಕ ಮತಾನುಯಾಯಿಗಳಾದ ಬ್ರಾಹ್ಮಣರು ಅವರೊಂದಿಗೆ ಹೊಂದಾಣಿಕೆಯಿಂದ ತಾವು ಅವರಂತೆಯೇ ಅಗ್ರಹಾರ, ಘಟಿಕಾಸ್ಥಾನಗಳಲ್ಲಿ ಸಾಂಪ್ರದಾಯಕ ವಿದ್ಯಾಭ್ಯಾಸವನ್ನು ಹೇಳಿಕೊಡುತ್ತ ರಾಜ ಮರ್ಯಾದೆಯನ್ನು ಸಂಪಾದಿಸುವುದರಲ್ಲಿ ಮಗ್ನರಾಗಿದ್ದರು. ಇದು ಕಾಳಾಮುಖರ ಪ್ರಭಾವವನ್ನು ಸೂಚಿಸುತ್ತದೆ.

ಕಾಳಾಮುಖರು ಪ್ರಬಲರಾಗಿ ರಾಜರ ಕೃಪೆಗೆ ಪಾತ್ರರಾದ ಮೇಲೆ ಅವರ ಮಠಗಳು ಅದರಲ್ಲೂ ಕ್ರಿಸ್ತ ಶಕ 1060ರಲ್ಲಿ ಬಳ್ಳಿಗಾವಿಯಲ್ಲಿ ಸ್ಥಾಪಿತವಾದ ಕೇದಾರೇಶ್ವರ ಮಠ ಬಹಳ ಪ್ರಭಾವಶಾಲಿಯಾಗಿ ಬೆಳೆಯತೊಡಗಿತು.

ಕರ್ನಾಟಕದಲ್ಲಿ ಕಾಳಾಮುಖ ಶೈವರು ಮಠಗಳನ್ನು ಕಟ್ಟಿ ಹನ್ನೆರಡನೇ ಶತಮಾನದ ಮಧ್ಯಭಾಗದ ಹೊತ್ತಿಗೆ ರಾಜಮಾನ್ಯರಾದುದ್ದನ್ನು ಗಮನಿಸಿದರೆ, ಆ ಪರಂಪರೆಯ ಆರಂಭದ ಕರುಹಾಗಿ ನಾಗವರ್ಮಾಚಾರ್ಯ ಕಾಣಿಸುತ್ತಾರೆ. ಕಾಳಿಗೂ ಶಿವನಿಗೂ ಇರುವ ಸಂಬಂಧ ಗಮನಾರ್ಹ. (ವೀರಣ್ಣ. ಸಿ)

ಬ್ರಾಹ್ಮಣೇತರ ವರ್ಗಗಳು ಶಿವನನ್ನು ತಮ್ಮ ದೈವವೆಂದು ತಿಳಿದಿದ್ದವು. ಆದರೆ ಶಿವ ಶಿಷ್ಟದೇವತೆಯಾಗಿ ಪರಿವರ್ತನೆಗೊಂಡಿರುವುದು ಜನಪದರ ನಂಬಿಕೆ,

ಆಚರಣೆಗಳಲ್ಲಿ ಮಹತ್ತರ ಬದಲಾವಣೆಗಳಾಗುವಂತೆ ಮಾಡಿತು. ಅವೈದಿಕ ದೇವತೆಗಳು ವೈದಿಕ ದೇವತೆಗಳಾಗಿ ಪರಿವರ್ತನೆಗೊಂಡಿರುವುದಕ್ಕೆ ರುದ್ರ ಶಿವನಾಗಿ ಪರಿವರ್ತನೆಗೊಂಡಿರುವುದೇ ಉತ್ತಮ ಉದಾಹರಣೆ. ಶೈವ ಮೂರ್ತಿಶಾಸ್ತ್ರವು ಶೈವ ಸಂಪ್ರದಾಯದಲ್ಲಿ ಅವೈದಿಕ ಆಚರಣೆಯೇ ಪ್ರಧಾನವಾಗಿರುವುದನ್ನು ಸೂಚಿಸುತ್ತದೆ. ಇದರಲ್ಲಿ ಪ್ರಮುಖವಾದದ್ದು ಕಾಳಾಮುಖ ಶೈವ ಪಂಥ. ಈ ಪಂಥವು ಕ್ರಿ.ಶ.೧೨ನೆಯ ಶತಮಾನದಲ್ಲಿ ಹೆಚ್ಚು ಪ್ರಚಾರದಲ್ಲಿತ್ತೆಂದು ತಿಳಿದುಬರುತ್ತದೆ. ಶಿಲ್ಪಿಗಳು ಈ ಪಂಥಕ್ಕೆ ಸೇರಿದವರಾಗಿದ್ದರು ಎನ್ನುವ ಮಾಹಿತಿಯು ಸಿಗುತ್ತದೆ. ಹತ್ತನೆಯ ಶತಮಾನದ ನಂತರ ಭೈರವ, ವೀರಭದ್ರ ಮುಂತಾದ ದೇವತೆಗಳು ಹೆಚ್ಚು ಪ್ರಚಾರವನ್ನು ಪಡೆದುಕೊಂಡವು. ಇವು ವೈದಿಕ ದೇವತೆಗಳ ವಿರೋಧಿ ಪ್ರತೀಕಗಳಾಗಿದ್ದವು. ವೀರಭದ್ರ ಹನ್ನೆರಡನೆಯ ಶತಮಾನದಲ್ಲಿ ಹೆಚ್ಚು ಪ್ರಚಾರವನ್ನು ಪಡೆದುಕೊಂಡ ದೇವತೆ. ಭೈರವ ಉಗ್ರರೂಪದಲ್ಲಿರುವ ದೇವತೆ. ಈ ದೇವತೆಯು ಅವೈದಿಕ ದೇವತೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಭೈರವನನ್ನು ಶಿವನಲ್ಲಿ ಗುರುತಿಸಿಕೊಳ್ಳಲಾಯಿತು. ಶಿವನ ರೂಪಕ್ಕೆ ಕಾಪಾಲಿಕ, ಕಾಳಾಮುಖ ಮುಂತಾದ ತಾಂತ್ರಿಕ ಪಂಥಗಳ ಹಿನ್ನೆಲೆಯೂ ಇದೆ. ಶಿವ ವೈದಿಕ ದೇವತೆಯಾಗಿ ಪರಿವರ್ತನೆಗೊಂಡರೂ ಅವೈದಿಕ ದೇವತೆಯನ್ನು ಹೋಲುವ ರೀತಿಯಲ್ಲಿಯೇ ಶಿವನ ಮೂರ್ತಿಗಳು ಕೆತ್ತಲ್ಪಟ್ಟಿವೆ ಎನ್ನುವುದು ಆರ್.ಎನ್.ನಂದಿ ಅವರ ಅಭಿಪ್ರಾಯ. ಲಕುಲೀಶ, ಕಾಪಾಲಿಕ, ಕಾಳಾಮುಖ ಮುಂತಾದ ಶೈವ ಸಂಪ್ರದಾಯದ ಉಪವಿಭಾಗಗಳು ಅವೈದಿಕ ಸಂಪ್ರದಾಯಗಳೇ ಆಗಿವೆ. ದೇವತೆಗಳು ಸ್ಥಾನಪಲ್ಲಟವನ್ನು ಮಾಡುವ, ಇನ್ನೊಂದು ದೇವತೆಯೊಂದಿಗೆ ಗುರುತಿಸಿಕೊಳ್ಳುವ ಅಥವಾ ಅವತಾರವೆಂದು ತಿಳಿಯುವ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತಿದ್ದವು. ರುದ್ರ; ಭೈರವ; ಶಿವ; ಕಾಳಿ; ಇವರ ಅರ್ಚನೆಗೆ ದೊಡ್ಡ ಇತಿಹಾಸವಿದೆ.

"ಕಾಳಾಮುಖರ- (ಲಕುಲೀಶ) ಸಂಪ್ರದಾಯ ಗುರ್ಜರ ದೇಶದಲ್ಲಿತ್ತು. ವೀರಶೈವಮತವು ಪ್ರಭಾವಶಾಲಿಯಾಗುವ ಮೊದಲು ಕಂನಾಡಿನ ಪ್ರಮುಖ ಗುರುವರ್ಗ, ಲಕುಲೀಶ ಕಾಳಾಮುಖ ಮತದವರದೇ ಆಗಿತ್ತು. ಕಂನಾಡಿನೊಡನೆ ಜೈನಸಂಪ್ರದಾಯದ ಪ್ರಾಚೀನ ಬಾಂಧವ್ಯವು ಸುಪ್ರಸಿದ್ಧವಿದೆ ಎಂದು ಶಂಬಾ ಅಭಿಪ್ರಾಯ.

ಗುಪ್ತಕಾಲದಲ್ಲಿ ಸಪ್ತಮಾತೃಕೆಗಳ ಪೂಜೆ ರೂಢವಿತ್ತು. ಅದರ ಸಾಂಕೇತಿಕ-ಶಾಸ್ತ್ರ ಇಂದಿಗೂ ನಡೆಯುತ್ತದೆ. ದೇವಿಯ ಸಂಚಾರವಾದ ಸ್ತ್ರೀಯರ ಪೂಜೆ ಆಗುತ್ತದೆ. ಅವರಿಂದ ಪ್ರಸಾದ ಪಡೆವ ವಾಡಿಕೆಯಿದೆ. ಶಾಕ್ತ ಸಂಪ್ರದಾಯದ ಆಚಾರ ಪದ್ಧತಿಯು ವಾಮ-ಮಾರ್ಗವೆಂದು ಬಗೆಯ ತೊಡಗಿದಂದಿನಿಂದ ಗುರುದೇವಿಯನ್ನು ಬಹಿರಂಗದಲ್ಲಿ ಪೂಜಿಸುವುದು ನಿಂತುಹೋಯಿತು. 'ಶಾಕ್ತ' ಎಂದರೆ ಶಕ್ತಿಯ ಉಪಾಸಕ. ಶಿವಶಕ್ತಿ, ಶಿವಾ (ಭವಾನಿ) ಇರುವಂತೆ ವಿಷ್ಣು-ಶಕ್ತಿ, ದೇವಿ ವೈಷ್ಣವಿಯೂ ಇದ್ದಾಳೆ." (*ಶಂಬಾ*)

ವಿವರಗಳಿಗೆ ನೋಡಿ: ಸಿ. ವೀರಣ್ಣ ೧೯೮೬ ಪ್ರಾಚೀನ ಸಾಹಿತ್ಯ: ರಾಜಸತ್ತೆಯ ವೈಭವದ ಕಾಲ ಪುಟ. ೪೨, ೭೧, ೭೨, ೭೩, ೭೯, ೩೭೯
ಶಂಬಾ ಜೋಶಿ ೧೯೯೯ ಹಾಲುಮತ ದರ್ಶನ ಸಂಪುಟ. ೩ ಪುಟ. ೯೫, ೧೧೨-೧೧೩
ಮೋಹನಕೃಷ್ಣ ರೈ ೨೦೦೪ ಪ್ರಭುತ್ವ ಮತ್ತು ಜನತೆ ಪುಟ. ೧೪೪
ಡಾ. ಎಂ. ಚಿದಾನಂದ ಮೂರ್ತಿ ೧೯೬೬ ಸಂಶೋಧನಾ ತರಂಗ ಸಂಪುಟ. ೧ ಪುಟ. ೪೦

ಕಿತ್ತಡ

ಕಿತ್ತಡಿಯೆಂದರೆ ಋಷಿಯೆಂಬ ಅರ್ಥವಿದೆ. ಕಿತ್ತಡವೆಂದರೆ ಅಸಹ್ಯಕರವೆಂದು ಅರ್ಥ. ತಡವೆಂಬ ವಿಧಿಯಿಂದ ಭೀಮ ಕೌರವರು ಅಸಹ್ಯಕರವೆಂಬ ಗತಿಯನ್ನು ಭೇದಿಸಿ ಹೊಕ್ಕು ಒಳಗೂ ಹೊರಗು ಬಲ ಮತ್ತು ಎಡವೆಂಬ ಎಡೆಯನ್ನು ಅರಿತು ಒಬ್ಬರಿಗೊಬ್ಬರು ಹೊಡೆದಾಡಿದರು. ಕಿತ್ತಾಡು ಪದವು ಇಂದಿಗೂ ಚಾಲ್ತಿಯಲ್ಲಿದೆ. ಪ್ರೊ. ಪಿ. ಸುಬ್ರಾಯಭಟ್ಟರು 'ಗದಾಯುದ್ಧ ದರ್ಪಣ'ದಲ್ಲಿ ಹೀಗೆಂದಿದ್ದಾರೆ; "ಪ್ರಸ್ತುತ ಪದ್ಯದಲ್ಲಿ 'ಕಿತ್ತಡಿ' ಎಂಬುದನ್ನು ನೆಲದಿಂದ ಕಿತ್ತ ಅಡಿ ಎಂಬರ್ಥದಲ್ಲಿ ಬಳಸಲಾಗಿದೆ. ಆದರೆ ಹಳಗನ್ನಡದಲ್ಲಿ 'ಕಿಟ್ಟಿ' ಎಂದಿರಬೇಕು.

ಕಿತ್ತಡವೆನ್ನುವುದಕ್ಕೆ ಮೋಸ, ವಂಚನೆಯೆಂಬ ಅರ್ಥವೂ ಇದೆ.

ವಿವರಗಳಿಗೆ ನೋಡಿ: ಪಿ. ಸುಬ್ರಾಯ ಭಟ್ ೧೯೭೫ ರನ್ನನ ಗದಾಯುದ್ಧ ದರ್ಪಣ.

ಕಿರೀಟ

ಕಿರೀಟವೆಂದರೆ ತಲೆಗೆ ಧರಿಸುವ ಆಭರಣ. ಇದನ್ನು ಮೌಳಿ ಎಂದೂ ಕರೆಯುತ್ತಾರೆ. ನಾಟ್ಯಶಾಸ್ತ್ರದ ಒಂದು ವಿವರಣೆಯನ್ನು ಇಲ್ಲಿ ಬಳಸಿಕೊಳ್ಳಬಹುದು: ನಾಟ್ಯಶಾಸ್ತ್ರದಲ್ಲಿ ಮೂರು ಮುಖ್ಯ ಅಂಶಗಳಿವೆ-1 ಆಂಗಿಕ. ಅಭಿನಯಕ್ಕೆ ಸಂಬಂಧಿಸಿದ್ದು 2 ವಾಚಿಕ-ಮಾತಿಗೆ ಸಂಬಂಧಿಸಿದ್ದು 3 ಆಹಾರ್ಯ- ವೇಷ ಭೂಷಣ. ಕಿರೀಟವು ವೇಷ ಭೂಷಣಕ್ಕೆ ಸಂಬಂಧಿಸಿದಂತೆ ಬಂದಿದೆ. ಕಿರೀಟದಲ್ಲಿ ಬೇರೆ ಬೇರೆ ಭೇದಗಳಿವೆ. ಜಟಾ, ಮೌಳಿ, ಕಿರೀಟ, ಕರಂಡ, ಶಿರಸ್ತ್ರಕ, ಕುಂತಲ, ಕೇಶಬದ್ಧ, ದಮ್ಮಿಲ್ಲ, ಅಲಕ, ಚೂಡಾ, ಮುಕುಟ, ಪತ್ರಪಟ್ಟ, ಪುಷ್ಪಪಟ್ಟ, ರತ್ನಪಟ್ಟ, ಇದನ್ನು ನಾಟಕ, ಯಕ್ಷಗಾನಗಳಲ್ಲಿ ಈಗಲೂ ಬಳಸುತ್ತಾರೆ.ಇದು ಪ್ರದರ್ಶನದ ದೃಷ್ಟಿಯಿಂದ ಅಗತ್ಯವಾಗಿದೆ.ಕಿರೀಟಗಳು ಹಿಂದಿನ ರಾಜರನ್ನು ಸಂಕೇತಿಸುವುದರಿಂದ ಈ ಬಳಕೆಯಿವೆ.

ವಿವರಗಳಿಗೆ ನೋಡಿ: ಟಿ.ವಿ.ವೆಂಕಟಾಚಲಶಾಸ್ತ್ರೀ ೧೯೯೯ ಶ್ರೀವತ್ಸ ನಿಘಂಟು ಪುಟ. ೧೦೪

ಅಮೂರ ಜಿ. ಎಸ್. ೨೦೦೬ ಶ್ರೀರಂಗ ಸಾರಸ್ವತ (ಸಂಪುಟ. ೮)

ಕಿಱುಗೂಸು

'ಕಿರುಗೂಸು' ಎಂದರೆ ಸಣ್ಣವಳು ಎಂದರ್ಥ. ಕಿರಿದು+ಕೂಸು ಇಲ್ಲಿ ತೊಟ್ಟಿಲಲ್ಲಿ ಮಲಗಿರುವ ಕೂಸು (ಮಗುವನ್ನು) ಕಿರುಗೂಸು ಎಂದೂ ಕರೆಯಲಾಗಿದೆ. ಕಿರುಗೂಸು ಎನ್ನುವುದಕ್ಕೆ ಗಂಡು-ಹೆಣ್ಣು ಎಂಬ ಭೇದವಿಲ್ಲ.

ವಿವರಗಳಿಗೆ ನೋಡಿ: ನಗ್ನಿಕಾ/ಗೌರಿ

ಕಿಱುವೇಂಟೆ

ಕಿರುಬೇಟೆಯು ಪ್ರಾಯಶಃ ವಿನೋದದ ಬೇಟೆಯಾಗಿರಬೇಕು. ಕಿರುಬೇಟೆಯಲ್ಲಿ ನಾಯಿಯ ಬಳಕೆಯೂ ಗಮನಾರ್ಹವಾಗಿದೆ. ಬೇಟೆಯ ಹವ್ಯಾಸವು ಬಹಳ ಪ್ರಾಚೀನವಾದುದು. ಮೂಲತಃ ಕಿರುಬೇಟೆಗೂ ಕೃಷಿಯ ಚಟುವಟಿಕೆಗೂ ಸಂಬಂಧವಿದೆ. ಕೃಷಿಗೆ ಹಾವಳಿಯನ್ನು ಕೊಡುವ ಪ್ರಾಣಿಗಳನ್ನು ಮನುಷ್ಯರು ಬೇಟೆಯಾಡುವುದು ಅನಿವಾರ್ಯ.ಕಿರುಬೇಟೆಯು ಸಣ್ಣ ರೀತಿಯ ಬೇಟೆಗಳಾಗಿವೆ.ದೊಡ್ಡ ಪ್ರಾಣಿಗಳನ್ನು ಬೇಟೆಯ ಉದ್ದೇಶವು ಬೇರೆ. ಉಪದ್ರವ ನೀಡುವ ಪ್ರಾಣಿಗಳನ್ನು ಬೇಟೆಯಾಡುವ ರೀತಿಯನ್ನು ದೊಡ್ಡ ಬೇಟೆಯೆಂದೂ, ಆಹಾರದ ಕಾರಣಕ್ಕೆ ಆಡುವ ಬೇಟೆಯನ್ನು ಕಿರು ಬೇಟೆಯೆಂದೂ ಕರೆಯುತ್ತಾರೆ.

ವಿವರಗಳಿಗೆ ನೋಡಿ: ಮುಳಿಯ ತಿಮ್ಮಪ್ಪಯ್ಯ ೨೦೦೬ ನಾಡೋಜಪಂಪ ಪುಟ. ೨೬೦-೬೫. ಮಾನಸೋಲ್ಲಾಸ

ಕಿಸುವೊಳಲ್/ಪುಲಿಗೆರೆ

ಇದು ಸ್ಥಳನಾಮ. ಆದರೆ ಚಾರಿತ್ರಿಕವಾಗಿ ಇದಕ್ಕೆ ಮಹತ್ವವಿದೆ. ಕಿಸುವೊಳಲ್=ಬಿಜಾಪುರ ಜಿಲ್ಲೆಯ ಈಗಿನ ಪಟ್ಟದಕಲ್ಲು; ಕೊಪಣ=ಈಗಿನ ಕೊಪ್ಪಳ, ಗದಗು ಬಳ್ಳಾರಿ ನಡುವಣ ರೈಲು ನಿಲ್ದಾಣ: ಪುಲಿಗೆರೆ=ಧಾರವಾಡ ಜಿಲ್ಲೆಯ(ಈಗಿನ) ಲಕ್ಷ್ಮೇಶ್ವರ: ಒಂಕುಂದ=ಬೆಳಗಾವಿ ಜಿಲ್ಲೆಯಲ್ಲಿನ(ಈಗಿನ) ಒಕ್ಕುಂದ. ಈ ನಾಲ್ಕು ಪಟ್ಟಣಗಳ ನಡುವಣ ನಾಡೆ ಸಂಪೂರ್ಣವಾಗಿ ಅಚ್ಚಗನ್ನಡ ಮಾತಾಡುವ ಜನರ ಪ್ರದೇಶವಾಗಿತ್ತು ಎಂದು ಮಾರ್ಗಕಾರನ ಹೇಳಿಕೆ. ಈ ಸಂದರ್ಭದಲ್ಲಿ "ರಾಜಸುಧಾನಿಯ ಪುಟವಹ ಸಾಜದ ಪುಲಿಗೆರೆಯ ತಿರುಳ ಕನ್ನಡದೊಳ್" ತನ್ನ ಗ್ರಂಥವನ್ನು ಬರೆದಿರುವುದಾಗಿ ಹೇಳಿರುವ ಪಂಪನ ಉಕ್ತಿಯನ್ನೂ ನೆನೆಯಬಹುದು.

ಕಿಳ್ಳೀಕಾತರು

"ಕೇತರು ಅಥವಾ ಕಿಳ್ಳೀಕೇತರೆಂಬ ಒಂದು ಜನವಿದೆ. ಇವರು ಸೋಗು ಹಾಕುವುದರಲ್ಲಿ, ಬಹಳ ಪ್ರಸಿದ್ಧ. ಸೂತ್ರದ ಬೊಂಬೆಗಳನ್ನು ಕುಣಿಸುವ ಹಾಗೂ

ಇರುಳಿನಲ್ಲಿ ತೆರೆಯ ಮೇಲೆ ಛಾಯಾಚಿತ್ರಗಳನ್ನು ಮೂಡಿಸಿ ಜನರಂಜನ ಮಾಡುವ ಕಲೆಯು ಇವರಿಗೆ ಸೇರಿದ್ದೆಂದು ತೋರುತ್ತದೆ. ಸೋಗುಹಾಕಿ ರೂಪ ಬದಲಾವಣೆಗಳನ್ನು ಮಾಡುವ ಇವರ ವಿದ್ಯೆಯಿಂದ ಬಹುರೂಪಿಗಳೆಂದು ಇವರಿಗೆ ಪರ್ಯಾಯ ನಾಮವಿದೆ. ಇವರ ಛಾಯಾಚಿತ್ರ, ಸೂತ್ರದ ಬೊಂಬೆಯಾಟಗಳ ವೈಶಿಷ್ಟದ ಮೂಲಕ ಈ ಜನ ಜಾವಾ-ಸಮಾತ್ರಾಗಳತ್ತಣಿಂದ ಬಂದವರಾಗಿಬೇಕೆಂದು ತೋರುತ್ತದೆ.

ದಾಸರೆಂಬ ಒಂದು ಪಂಗಡವು ಇವರಿಗೆ ಹತ್ತಿರದ್ದಿರಬಹುದು. ವೇಷಕಟ್ಟಿ ಆಡುವಲ್ಲಿ ಇವರೂ ಹೆಸರಾದವರು. ಇವರೊಡನೆಯ ಡೊಂಬರ ನೆನಪೂ ಆಗದೆ ಇರದು. ಪಂಪನು ಬಹುರೂಪಿಗಳೆಂದು ಡೊಂಬರಿಗೆ ಹೇಳಿದ್ದಾನೆ. ಕೃಷ್ಣನಿಂದೆಯ ಕಾಲದಲ್ಲಿ ಶಿಶುಪಾಲನ ಬಾಯಲ್ಲಿ ಈ ಮಾತು ಬಂದಿದೆ. 'ಮೀನಾವೆ, ಪಂದೆ...... ಮೊದಲಾದ ವೇಷಗಳನ್ನು ಧರಿಸುವ ಡೊಂಬ ವಿದ್ಯೆಯಲ್ಲಿ ನೀನು ನಿಪುಣನು' ಎಂದು ಕೃಷ್ಣನಿಗೆ ಶಿಶುಪಾಲನು ಆಡಿದ್ದುಂಟು. ಡೊಂಬ ವಿದ್ಯೆಗೆ ಡಾಂಭಿಕ ಅಥವಾ ಡಾಂಭಿಕತನವೆಂಬ ಹೆಸರು. ಡೊಂಬರ ಬಗ್ಗೆ ವಡ್ಡಾರಾಧನೆಯಲ್ಲಿಯೂ ವಿವರಗಳು ದೊರೆಯುತ್ತವೆ. ಅವರ ಚಿತ್ರಪಟ ಪ್ರದರ್ಶನ; ಇಂದ್ರಜಾಲಕ ವಿದ್ಯೆಯ ಕುರಿತೂ ವಡ್ಡಾರಾಧನೆಯಲ್ಲಿ ಬರುತ್ತದೆ. ಡೊಂಬರು ಅಲೆಮಾರಿಗಳು."(ಶಂ.ಬಾ,)
ವಿವರಗಳಿಗೆ ನೋಡಿ: ಶಂಬಾ ಜೋಶಿ ೧೯೯೯ ಸಂಪುಟ. ೨ ಪುಟ. ೧೭೩-೧೭೪.

ಕೀಲ್ಗುಂಟೆ

ಕೀಲ್ಗುಂಟೆ ಎಂಬ ಪದವು ಹಲವಾರು ಶಾಸನಗಳಲ್ಲಿ ದೊರೆಯುತ್ತದೆ. ಇದು ವೇಳೆವಾಳಿಗಳು, ಲೆಂಕರು ಮಡಿದ ವಿಧಾನವನ್ನು ಸೂಚಿಸುವಂತೆ ತೋರುತ್ತದೆ. ಅಂದರೆ, ಒಡೆಯನಾದವನನ್ನು ಹೂಳುವ ಮುನ್ನ ವೇಳೆವಾಳಿ ಅಥವಾ ಲೆಂಕನನ್ನು ಮಲಗಿಸಿ ಅವನ ಮೇಲೆ ಒಡೆಯನ ಹೆಣವನ್ನು ಇಟ್ಟು ಮಣ್ಣು ಮಾಡುತ್ತಿದ್ದರು. ಲೆಂಕ ಅಥವಾ ವೇಳೆವಾಳಿ ಈ ರೀತಿ ಸಮಾಧಿಯಲ್ಲಿ ಹೋಗುವ ಮುನ್ನ ತನ್ನ ಪ್ರಾಣವನ್ನು ತಾನೇ ತೆಗೆದುಕೊಂಡಿರಬಹುದು ಅಥವಾ ತಾನೇ ಜೀವಂತ ಮಲಗಿ ಮಣ್ಣು ಮುಚ್ಚಿದ ನಂತರ ಸಾಯಬಹುದಿತ್ತು. ಈ ಪದ್ಧತಿಯು ಹಿನ್ನೆಲೆಯಲ್ಲಿ ಜಮೀನುದಾರಿ ಮೌಲ್ಯಗಳು ಕೆಲಸಮಾಡಿರುವುದು ಸ್ಪಷ್ಟ. ಈ ಮಾದರಿಯ ಸಾಮಾಜಿಕ ವ್ಯವಸ್ಥೆಯು ವೇಳೆವಾಳಿಯನ್ನು ಹೇಗೆ ನಡೆಸಿಕೊಂಡಿತು ಎಂಬುದಕ್ಕೆ ಈ ಪದ್ಧತಿಯು ಸಾಕ್ಷಿಯಾಗಿದೆ.
ವಿವರಗಳಿಗೆ ನೋಡಿ: ಶ್ರೀ ಶೇಷಶಾಸ್ತ್ರಿ ೨೦೦೫ ಶಾಸನ ಪರಿಚಯ ಪುಟ. ೩೭

ಕುಂಟಣಿ

ಕುಂಟಣಿಯೆಂದರೆ ವೇಶ್ಯಾವಾಟಿಕೆಯು ಇರುವ ಸಂದರ್ಭದಲ್ಲಿ ಮಾತ್ರ ಕುಂಟಣಿಯು (ಮಧ್ಯವರ್ತಿ) ವಿಷಯ ಬರಲು ಸಾಧ್ಯ. ಎರಡನೆಯದಾಗಿ, ಕುಂಟಣಿಯ

ಉದ್ಯೋಗವು ಸಾಮಾಜಿಕವಾಗಿ ಗೌರವಯುತವಾಗಿರಲಿಲ್ಲ, ಈಗಿನ ಅರ್ಥದಲ್ಲಿ ತಲೆಹಿಡುಕ ಎಂದೂ ಕರೆಯುತ್ತೇವೆ. ಇಲ್ಲಿ ಹೆಣ್ಣಿನ ದೇಹದಲ್ಲಿ 'ತಲೆ'ಗೆ ಇರುವ ಒತ್ತು ಗಮನಾರ್ಹ. ವ್ಯಭಿಚಾರಕ್ಕಾಗಿ ಗಂಡು ಹೆಣ್ಣುಗಳನ್ನು ಹೊಂದಿಸುವ ದಾಸಿ; ತಲೆಹಿಡುಕಿ.

ಕುಂಡ

ವ್ಯಭಿಚಾರಕ್ಕೆ ಹುಟ್ಟಿದವನನ್ನು **'ಕುಂಡ'**ನೆಂದು ಕರೆಯುತ್ತಾರೆ. ವಾಸ್ತವವಾಗಿ ಕುಂಡ ಎನ್ನುವುದಕ್ಕೆ ಹೊಟ್ಟೆ, ಉದರವೆಂಬ ಅರ್ಥವೂ ಇದೆ. ಕೆಟ್ಟ ಉದರದಲ್ಲಿ ಹುಟ್ಟಿದವನು ಕುಂಡ. ಧೃತರಾಷ್ಟ್ರನ ಮಗನ ಹೆಸರು; ಸರ್ಪದ ಹೆಸರೂ ಕೂಡಾ ಹೌದು.

ಕುಡಿಯರು

ನಗರಗಳಲ್ಲಿ ಕಟ್ಟಿಗೆ ಹೊರೆಗಳನ್ನು ಹೊತ್ತು ತಂದು ಮಾರುತ್ತಿದ್ದ ಕುಡಿಯರ ಪ್ರಸ್ತಾಪವೂ ಈ ಕಾವ್ಯದಲ್ಲಿದೆ. ಆದಿವಾಸಿ ಜನಾಂಗವಾದ ಇವರ ಅಸ್ತಿತ್ವ ಕಾಡಿನೊಂದಿಗೇ ಇತ್ತೆಂಬುದನ್ನು ಇದು ತಿಳಿಸುತ್ತದೆ. ಕುಡಿಯರಿಗೂ ಕಾಡಿಗೂ ಸಂಬಂಧವಿದೆ.

ಕುಠಿ ಎಂದರೆ ಸಂಸ್ಕೃತದಲ್ಲಿ 'ಬೆಟ್ಟ' ಎಂದರ್ಥ. ಯಾರು ಬೆಟ್ಟ ಭಾಗಗಳಲ್ಲಿ ವಾಸಮಾಡುತ್ತಾರೋ ಅವರನ್ನು ಕುಡಿಯರು ಎಂದು ಕರೆಯಲಾಯಿತು ಎಂದು ಅನಿಸುತ್ತದೆ. ಕುಠಿ>ಕುಡಿ ಸಹಜ. ಕುಡಿಯೆಂದರೆ ಒಕ್ಕಲಿಗವೆಂಬ ಅರ್ಥವೂ ಇದೆ. ಕುಡಿಯೊಕ್ಕಲಿಗವೆಂದರೆ ಮಹಾಶೂದ್ರನೆಂಬ ಅರ್ಥವೂ ಬರುತ್ತದೆ. ಬೆಟ್ಟವನ್ನು ಆಶ್ರಯಿಸುವವರು ಕುಡಿಯರು.

ರಾಮಾಯಣದಲ್ಲಿ ರಾಮನು ಪಂಚವಟಿಯಲ್ಲಿ 'ಪರ್ಣಕುಟಿ' ನಿರ್ಮಾಣ ಮಾಡಿರುವುದು ಗಮನಾರ್ಹ.

ಗುಡಿಯ ಮೂಲ ಪ್ರತಿಮೆ, ಕುಡಿ>ಕುಟಿ. ಗೂಡಿನಂತಹ ಕುಟೀರದಲ್ಲಿರುವವನು 'ಕುಡಿ', ಕುರುಬ, ದನಗಾರ, ರೈತ, ಆಳು, ಬಡವ, ಯತಿ, ಮುನಿ ಎಂಬ ಅರ್ಥದ ವಲಯಗಳು ಕುಡಿ–ಕುಟಿಯ ಸುತ್ತಲು ಕಣ್ಣಿಗೆ ಬೀಳುತ್ತವೆ. 'ಕುಟಿ' ಸಂಸ್ಕೃತ ಸಾಹಿತ್ಯದಲ್ಲಿಯೂ ಸ್ಥಾನ ಪಡೆದಿದೆ. ಕುಡಿಯು ಋಗ್ವೇದಕ್ಕೂ ಪ್ರಾಚೀನನಾಗಿದ್ದಾನೆ. ಕುಟಿಯಲ್ಲಿರುವವನು ಯತಿ, ಮುನಿ; ಆದರೆ ಇದು ಮೂಲಾರ್ಥವಲ್ಲ. ನಿಸರ್ಗದಿಂದ ಸ್ವತಂತ್ರನಾಗಿ ಕುರುಬ, ದನಗಾರ, ರೈತ, ನಿರ್ಗತಿಕ, ದರಿದ್ರ ಕಾಲಗತಿಯಲ್ಲಿ ತನ್ನ ಸಂಸ್ಕೃತಿಯ ಆವರಣದಲ್ಲಿ ಪ್ರಕೃತಿಯಿಂದ ದೂರ ಹೊರಟವನು. ಐಹಿಕ ಜೀವನದಿಂದ ಮುಕ್ತವಾಗುವ ಹಂಬಲದ ವ್ಯಕ್ತಿ ಮಾತ್ರ ಹಿಂದುಳಿದಿತು. ಕುಡಿ–ಕುಟಿ; ಗೂಡು–ಗುಡಿ ಇದರ ಸ್ವಾಮಿತ್ವವು ಆತನ ಪಾಲಿಗೆ ಬಂತು. ಆ ಸ್ವಾಮಿಯೇ ಯತಿ; ಮುನಿ. ಇಂದಿನವರೆಗೂ ಆ ಪೀಳಿಗೆ ಅಖಂಡಿತವಾಗಿ ಉಳಿದು ಬಂದಿದೆ. 'ಕುಟಿ' ಎಂಬಲ್ಲಿ ಕುಟಿಯು ಮೊದಲು ಕುಡಿಯಾಗಿದ್ದುದು ಬಯಲಿಗೆ ಬರುತ್ತಿದೆ. ಗಿಡಗಳ ಆಶ್ರಯದಲ್ಲಿ,

ಎಲೆ ಬಳ್ಳಿಗಳ ಪೊದೆಗಳಲ್ಲಿ ಇದ್ದ ಗೂಡಿನಂತಹ ಎಡೆಗಳು ಮೊದಲ 'ಕೂಡು'ಗಳು; ಗೂಡುಗಳು. ಕುಡಿ>ಕುಟಿಯೂ ಅದೇ ಬಳಗದ್ದು; ಮಾನವನೊಳಗಿನ ಸೌಂದರ್ಯಪ್ರೀತಿಯ ಸುಪ್ತ–ಪ್ರೇರಣೆಯಿಂದ ಕುಡಿ–ಕುಟಿಯ(ಗುಡಿಸಲು) ಅಂದ–ಚೆಂದವು ಕ್ರಮವಾಗಿ ಅರಳುತ್ತ ಬಂದಿತು ಎಂದು ಶಂಬಾ ಹೇಳುತ್ತಾರೆ.

ಕುಡಿ>ಗುಡಿ, ಗುಂಡಿ ಈ ಬಳಗದ ನಿವಾಸಗಳು ಎಂತಹ ಪ್ರದೇಶದಲ್ಲಿ ಇರಬಹುದು? ಇದರ ಸ್ಪಷ್ಟೀಕರಣದ ಅವಶ್ಯಕತೆ ತೋರುವುದಿಲ್ಲ. ಮೊತ್ತ ಮೊದಲಲ್ಲಿ ಇವು ಗುಡ್ಡದ ಅಂಕುಡೊಂಕಾದ (ಡೋಂಗರದ) ಅಕ್ಕ ಪಕ್ಕದ ಬೀಡಾರಗಳು; ಇವು ಅಂದಿನ ನೆಲೆಗಾರರ ಬಾಳಿನ ಬಗೆಯ ಪ್ರತೀಕಗಳಾಗಿವೆ. ಕಾಡು–ಮೇಡುಗಳಲ್ಲಿ ಪ್ರಕೃತಿಮಾತೆಯ ಒಡಲಲ್ಲಿ ಬೆಳೆದ ಜನ. ಅವರು ಬೆಟ್ಟದ ಜೀವಿಗಳಾಗಿರಬೇಕು. ಈ ಜನದ ಕುಡಿ ಬೆಳೆದ ಹಾಗೆ, ಬಳಿಕ ಈ ಸ್ಥಳನಾಮಗಳು ಬೆಟ್ಟದಿಂದ ಸ್ವಲ್ಪ ದೂರದೂರ ತಲೆದೋರತೊಡಗಿರಬೇಕು. ಕುಡಿ' ಕೋಡಿ, ಕೋಡು, ಕೋಟಿ, ಗೋಡು, ಕೋಣೆ, ಗುಂಡಿ ಎಂಬೀ ಉತ್ತರಪದವಾಗಿರುವ ಅನೇಕ ಗ್ರಾಮಗಳು ಗುಡ್ಡದ ಸೆರಗಿನಲ್ಲಿ ಇರುವುದನ್ನು ಕಾಣಬಹುದು. ಕಂನಾಡಿನಲ್ಲಿ ಮಾತ್ರವಲ್ಲ, ಮಹಾರಾಷ್ಟ್ರದಲ್ಲಿಯೂ ಈ ಊರುಗಳಿವೆ; ಗುಡ್ಡದ ಗುಂಟ ಇವೆ. ಅದೇಕೆ, ಉತ್ತರಕ್ಕೆ ಕಾಶ್ಮೀರದಲ್ಲಿಯೂ ಕೂಡ 'ಕುಡ' ಉಂಟು! ಕಾಶ್ಮೀರದ ಒಬ್ಬ ರಾಜಕೀಯ ಮುಖಂಡನನ್ನು ಒಂದು ಗಿರಿನಿವಾಸದಲ್ಲಿ ಬಂಧಿಸಿಟ್ಟ ಗ್ರಾಮದ ಹೆಸರು ಕುಡ. ಪರ್ವತದ ಕೋಡಿಗೆ 'ಕೂಟ' (ಶಿಖರ) ಎಂದು ಸಂಸ್ಕೃತದಲ್ಲಿ ಹೆಸರು! ಹೇಮಕೂಟ, ತ್ರಿಕೂಟ, ಚಿತ್ರಕೂಟಗಳು ಉತ್ತರ ದೇಶದಲ್ಲಿವೆ. ಮೇಡು ಮತ್ತು (ಸಂಸ್ಕೃತ) ಮೇರು ಇವುಗಳಲ್ಲಿರುವ ಹೋಲಿಕೆ ವಿಚಾರಾರ್ಹವಾಗಿದೆ. ಪರ್ವತ–ವಾಚಕ 'ಕುಟ' ಈ ಶಬ್ದವು ಸಂಸ್ಕೃತದಲ್ಲಿದೆ. ಆದರೆ, ಅದು ಸಾಹಿತ್ಯದಲ್ಲಿ ದೊರೆಯುವುದಿಲ್ಲವೆಂದು ಮೋನಿಯರ್ ವಿಲಿಯಂಸ್‌ರು ನಮೂದಿಸಿರುತ್ತಾರೆ! ಕುಟಿ–ಕುಡ–ಕುಂಡ ಇವು ಆರ್ಯಾಭಾಷಾವರ್ಗದ ಪದಗಳಲ್ಲ ಎಂದ ತಜ್ಞರ ಮತವಿದೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ ೧೯೯೯ ಹಾಲುಮತ ದರ್ಶನ ಸಂಪುಟ. ೩ ಪುಟ. ೨೬–೨೭

ಸಿ. ವೀರಣ್ಣ ೧೯೮೬ ಪ್ರಾಚೀನ ಸಾಹಿತ್ಯ: ರಾಜಸತ್ತೆಯ ವೈಭವದ ಕಾಲ ಪುಟ. ೨೩೮

ಕುಮರಿ ಬೇಸಾಯ

ಈ ಹಂತದಲ್ಲಿ ಆರ್ಯರು ತಾವು ಹೊಸದಾಗಿ ವಿಸ್ತರಿಸುದ ಪ್ರಾಂತದಲ್ಲಿ ಕಾಡುಗಳನ್ನು ಹೇಗೆ ಸವರಿ ಕೃಷಿ ಯೋಗ್ಯವಾಗಿಸಿದರು ಎಂಬುದನ್ನು ಕುರಿತು ಕೂಡ ಯಜುರ್ವೇದ ಸಂಬಂಧೀ ಸಾಹಿತ್ಯವನ್ನು ಆಧರಿಸಿ ಅರ್ಥ ಮಾಡಿಕೊಳ್ಳಬಹುದು. ಮುಖ್ಯವಾಗಿ ಕಾಡುಗಳನ್ನು ಸುಡುತ್ತಿದ್ದರು. (ಇಂದಿಗೂ ಸಹಜ ಬೇಸಾಯವನ್ನು ಮಾಡುವ ಗಿರಿಜನರು ಇದೇ ಪದ್ಧತಿಯನ್ನೇ ಅನುಕರಿಸುವುದು) ಮಂತ್ರ ಸಾಹಿತ್ಯದಲ್ಲಿ

ಇದು ಕಾಡುಗಳನ್ನು ಅಗ್ನಿಗೆ ಅರ್ಪಿಸುವುದು ಎಂದೋ. ಅಗ್ನಿಯು ಕಾಡನ್ನು ಭುಂಜಿಸಿದನು ಎಂದೋ ವರ್ಣಿತವಾಗಿರುತ್ತದೆ. (ಡಿ. ಡಿ. ಕೊಸಾಂಬಿ ೧೯೯೮ ಪು. ೯೪-೯೫)

ಬೈಲು ಎಂದರೆ ಸಂಪೂರ್ಣವಾಗಿ ನೀರಾವರಿ ವ್ಯವಸ್ಥೆ ಇರುವ, ಮೂರು ಬೆಳೆ ತೆಗೆಯಬಹುದಾದ ಪ್ರದೇಶ. ಮಜಲುಗದ್ದೆ ಬೈಲುಗಿಂತ ಸ್ವಲ್ಪ ಎತ್ತರದಲ್ಲಿ ಇದ್ದು ಒಂದು ಬೆಳೆಯಷ್ಟೇ ತೆಗೆಯಬಹುದಾಗಿತ್ತು. ನೀರಿನ ಸರಿಯಾದ ವ್ಯವಸ್ಥೆ ಇದ್ದರೆ ಮಾತ್ರ ಎರಡು ಬೆಳೆ ತೆಗೆಯಬಹುದಿತ್ತು. ಬೆಟ್ಟವು ಎತ್ತರ ಪ್ರದೇಶದಲ್ಲಿರುವ ಕೃಷಿ ಭೂಮಿ. ಆದರೆ ಅಲ್ಲಿ ಬೆಳೆಗಳನ್ನು ಬೆಳೆಯುವುದು ಮಳೆಯನ್ನು ಅವಲಂಬಿಸಿರುತ್ತಿತ್ತು. ಬೆಟ್ಟಗುಡ್ಡಗಳಲ್ಲಿ ಕುಮೇರ್ (ಕುಮೇರಿ) ಎನ್ನುವ ಇನ್ನೊಂದು ರೀತಿಯ ಕೃಷಿ ಪ್ರದೇಶಗಳಿರುತ್ತಿದ್ದವು. ಇದನ್ನು ಕುಮೇರ್ ಕೃಷಿ ಎಂದೇ ಕರೆಯಲಾಗಿದೆ. ಈ ಕೃಷಿಯನ್ನು ವರ್ಷಕ್ಕೊಂದು ಸಲ ಅಥವಾ ಎರಡು ವರ್ಷಕ್ಕೊಮ್ಮೆ ಮಾಡಲಾಗುತ್ತಿತ್ತು. ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಬುಡಕಟ್ಟು. ಜನರು ಈ ಕೃಷಿ ಪದ್ಧತಿಯನ್ನು ಅನುಸರಿಸುತ್ತಿದ್ದರು. ಕಾಡನ್ನು ಕಡಿದು ಭೂಮಿಯನ್ನು ಕೃಷಿಯೋಗ್ಯವನ್ನಾಗಿ ಮಾಡಿ ಬಿತ್ತನೆ ಕೆಲಸವನ್ನು ಮಾಡಲಾಗುತ್ತಿತ್ತು. (ಮೋಹನಕೃಷ್ಣ ರೈ, ೨೦೦೪. ಪು. ೧೯)

ಕೃಷಿಯನ್ನು ಇಂಗ್ಲಿಷಿನಲ್ಲಿ "Agriculture" ಎಂದು ಕರೆಯುತ್ತಾರೆ. Culture ಎಂದರೆ ಕಟ್ಟುವಿಕೆ. ಅದು ಕೃತಕವಾದುದು ಉಳುಮೆಯು ಕೃಷಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಕೃಷಿ ಸಂಸ್ಕೃತಿಯು ಬೆಳೆಯದು ಪ್ರಮುಖ ಪರಿಕರವಾಗಿದೆ. ಆದರೆ ಹಿಂದಿನಿಂದಲೂ ಕೃಷಿ ಪದ್ಧತಿಯಿತ್ತು. ಕೃಷಿಯಲ್ಲಿ ಎರಡು ವಿಧಾನ ಒಂದು ಆಹಾರೋತ್ಪಾನೆಗೆ ಬೇಕಾದ ಕೃಷಿಯನ್ನು ಮಾಡುವುದು ಎರಡನೆಯದು ವಾಣಿಜ್ಯೋದ್ದೇಶಕ್ಕಾಗಿ ವಿಶೇಷವೆಂದರೆ ಪ್ರಾಚೀನ ಕನ್ನಡ ಸಂದರ್ಭದಲ್ಲಿ ಕೃಷಿಗೂ-ಸುಂಕಕ್ಕೂ ರಾಜ್ಯ ಬೊಕ್ಕಸಕ್ಕೂ ಸಂಬಂಧ ಕಲ್ಪಿತವಾಗಿರುವುದು. ಕುಮೆರ್ ಬೇಸಾಯ ಪ್ರಾಚೀನದಿಂದಲೂ ನಡೆದುಬಂದಿದೆ., ತುಳುವಿನಲ್ಲಿ ಕುಮೇರಿಯೆಂದರೆ ಬೆಟ್ಟಗಾಡು ಎಂಬರ್ಥವಿದೆ ಕುಮೇರಿ (ಕುಮ್ಮ್ಯು) ಬೇಸಾಯದ ವಿಶಿಷ್ಟಕ್ರಮವೆಂದರೆ ಬೆಟ್ಟಗಾಡುಗಳಲ್ಲಿ ಮೊದಲು ಗಿಡಗಂಟೆಗಳನ್ನು ಸವರಿ ಅನಂತರ ಭೂಮಿಯನ್ನು ಸುಡಲಾಗುತ್ತದೆ. ಇದರಲ್ಲಿ ಉಳುಮೆಯ ಪದ್ಧತಿಯಲ್ಲ. ಅದರ ಬದಲಿಗೆ ಮಳೆಗಾಲದಲ್ಲಿ ಅಲ್ಲಲ್ಲಿ ಕಡ್ಡಿಯಿಂದಲೋ ಬೇರೆಯಾವುದಾದರೂ ಸಲಕರಣೆಯಿಂದಲೋ ಭೂಮಿಯನ್ನು ಚುಚ್ಚಿ ಬೀಜ ಹಾಕಲಾಗುತ್ತದೆ. ಒಂದು ವರ್ಷ ಮಾಡಿದ ಜಾಗದಲ್ಲಿ ಮತ್ತೊಂದು ವರ್ಷ ಅದೇ ರೀತಿಯ ಬೇಸಾಯ ಮಾಡುವುದಿಲ್ಲ. ಬೇರೊಂದು ಪ್ರದೇಶದಲ್ಲಿ ಬೇಸಾಯ ಮಾಡಲಾಗುತ್ತದೆ. ಇದು ಕುಮೇರಿ ಬೇಸಾಯದ ವಿಶಿಷ್ಟತೆ ಈಗಲೂ ಈ ಕೃಷಿ ಪದ್ಧತಿಯು ಚಾಲ್ತಿಯಲ್ಲಿದೆ.

ಕುಮ್ಮರಿ–ಬವಸೆಯೆಂದು ವ್ಯವಸಾಯವನ್ನು ಹೇಳುತ್ತಾರೆ. ಈ ರೀತಿಯ ಕೃಷಿ ಪದ್ಧತಿಯು ಜಾಗತೀಕರಣದ ಸಂದರ್ಭದಲ್ಲಿ ಅತ್ಯಗತ್ಯ.

ಕುರುಕ್ಷೇತ್ರ

ಕುರುಕ್ಷೇತ್ರ–ಮತ್ಸ್ಯ–ಪಂಚಾಲ–ಶೂರಸೇನದೇಶಗಳು ಬ್ರಹ್ಮಾವರ್ತಕ್ಕೆ ಸಮಾನವಾಗಿದ್ದಂತೆ ಇದ್ದ ಪುಣ್ಯಭೂಮಿಗಳು. ಅಲ್ಲಿ ಬ್ರಹ್ಮರ್ಷಿಗಳು ಜನಿಸುವರು. (ಮನುಸ್ಮೃತಿ 2–19)

ಕುರುಕ್ಷೇತ್ರದಲ್ಲಿ ಮಹಾಭಾರತ ಯುದ್ಧ ನಡೆಯಿತು. ಜಗಳ; ರಣರಂಗಗಳಿಗೂ ಕುರುಕ್ಷೇತ್ರವೆಂದು ಕರೆಯುತ್ತಾರೆ.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೨–೧೯ ರಾಜಜ್ಞನಾರಾಯಣ ಉಡುಪ ೧೯೭೪ ಪುರಾಣ ಭಾರತಕೋಶ

ಕುರುಹು

ಕುರುಹು ಎಂದರೆ ಚಿಹ್ನೆ; ಗುರುತು, ಕುರುವು ಮುಂತಾದ ಪದಗಳು ಇದಕ್ಕೆ ಪರ್ಯಾಯವಾಗಿ ಬಳಕೆಯಾಗುತ್ತದೆ. ಮೈ ಮೇಲೆ ಇರುವ ಕಲೆ ಕೂಡಾ ಕುರುಹು. ವ್ಯಕ್ತಿಯ ನಡೆ ನುಡಿಯು ಕೂಡಾ ಕುರುಹು ಆಗಿರುತ್ತದೆ.

ಕುಱುವಡಿ

ಸಣ್ಣಮಡಿ; ಒಗೆದ ಚಿಕ್ಕ ವಸ್ತ್ರ: ಚಿಕ್ಕಮಡಿ ಬಟ್ಟೆಯನ್ನು ಕುಱುವಡಿಯೆಂದು ಕರೆದಿದ್ದಾನೆ. ಮಡಿಯೆನ್ನುವ ಪರಿಕಲ್ಪನೆಯನ್ನು ಪವಿತ್ರ ಎಂದು ಪರಿಭಾವಿಸಿಕೊಳ್ಳಲಾಗುತ್ತದೆ. "ಮಡಿ"ಯೆಂದರೆ ಶುದ್ಧವಾಗಿರುವುದು ಎಂದರ್ಥ. ಇದಕ್ಕೆ ಸಂಸ್ಕೃತಿಯಲ್ಲಿ ಸರಳ ದ್ವಂದ್ವಗಳಿವೆ. ಇದನ್ನು ಈ ಕೆಳಗಿನಂತೆ ಪರಿಭಾವಿಸಬಹುದು.

ಮಡಿ	ಮೈಲಿಗೆ
1. ಸ್ನಾನ ಮಾಡುವುದು	1. ಸ್ನಾನ ಮಾಡದಿರುವುದು
2. ಶುದ್ಧ ತೀರ್ಥೋದಕ	2. ಸಾಮಾನ್ಯ ನೀರಿನ ಸೇವನೆ
3. ಶುಭ್ರವಾದ ಮಡಿ ಬಟ್ಟೆ	3. ಮೇಲಿಂದ ಮೇಲೆ ಧರಿಸಿದ ಬಟ್ಟೆ
4. ಅಸ್ಪೃಶ್ಯರನ್ನು ಮುಟ್ಟದಿರುವುದು	4. ಅಸ್ಪೃಶ್ಯರನ್ನು ಮುಟ್ಟುವುದು

(ಇದನ್ನು ಯಾಜ್ಞವಲ್ಕ್ಯ; ಮನು ಮೊದಲಾದವರು ವಿವರಿಸಿದ್ದಾರೆ.)

5. ದೇವಸ್ಥಾನಕ್ಕೆ ಹೋಗುವಾಗ ಮಡಿಯಲ್ಲಿ ಹೋಗಬೇಕು	5. ಸಂತೆಯಲ್ಲಿ ಮೈಲಿಗೆಯಾದರೆ ಅಡ್ಡಿಯಿಲ್ಲ.

ಇದು ಮಡಿ ಮೈಲಿಗೆ ಸ್ಥೂಲಚಿತ್ರಣ, 'ಮಡಿ' ಬಟ್ಟೆ ಶುಭ್ರವಾದ, ಒಗೆದಿರಿಸಿದ ಬಟ್ಟೆ, ಸಾಮಾನ್ಯವಾಗಿ ರೇಶ್ಮೆಯ ವಸನಗಳು.

ವಿವರಗಳಿಗೆ ನೋಡಿ: ಪವಿತ್ರ; ಪಾತಿವ್ರತ್ಯ

ಕುಲ

"ಕುಲ ನ್ಯಾಯಾಲಯಗಳಲ್ಲಿ 'ಕುಲಕರು' ಅಥವಾ 'ಶ್ರೀಮಂತರು' 'ಕುಲ' ನ್ಯಾಯಾಲಯದ ಅಧ್ಯಕ್ಷರಾಗಿರುತ್ತಿದ್ದರು. 'ಕುಲ' ನ್ಯಾಯಾಲಯದಿಂದ ಹಿಡಿದು 'ಗಣ' ನ್ಯಾಯಾಲಯದವರೆಗೆ ಅಪೀಲು ಮಾಡುವ ಅವಕಾಶಗಳನ್ನು ನ್ಯಾಯಶಾಸ್ತ್ರ ನಿಯಮಗಳು ಕಲ್ಪಿಸಿಕೊಟ್ಟಿವೆ. ಜಾತಿ ಮತ್ತು ಕುಟುಂಬಗಳ ನಡುವೆ ರಕ್ತಸಂಬಂಧವನ್ನು ಇನ್ನೊಂದು ಸಾಮಾಜಿಕ ಸಮೂಹವಿದೆ. ಅದು ಕುಲ. ಕುಲ ಎನ್ನುವುದು ಕುಟುಂಬಗಳ ಸಮೂಹ. ಈ ಕುಟುಂಬಗಳು ಗಂಡಾಗಲಿ, ಹೆಣ್ಣಾಗಲಿ ಬಹು ಹಿಂದಿನ ಒಂದೇ ಮೂಲಕ್ಕೆ ತಮ್ಮನ್ನು ತೆಗೆದುಕೊಂಡು ಹೋಗುತ್ತವೆ. ಇಂಥ ಕುಲ ಹೊರ ಬಾಂಧವ್ಯದ್ದು. ಅದಕ್ಕೆ ಒಂದು ಹೆಸರಿರುತ್ತದೆ. ಈ ಹೆಸರು ಕೆಲವು ಸಲ ಆ ಕುಲಕ್ಕೆ ಸೇರಿದ ಉಪನಾಮವಾಗಿರುವುದೂ ಉಂಟು." ಇಂಗ್ಲಿಷಿನ Community ಎನ್ನುವುದಕ್ಕೆ ಪರ್ಯಾಯವಾಗಿ ಕುಲವೆಮದು ಬಳಸಿಕೊಂಡಿದ್ದೇವೆ. ಈ ಕುರಿತು ಭಿನ್ನಾಭಿಪ್ರಾಯವೂ ಇದೆ.

ವಿವರಗಳಿಗೆ ನೋಡಿ: (1) ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.2 1971 ಪುಟ. 415 (2) ಬಾಲಗಂಗಾಧರ್ ಪೂರ್ವಾವಲೋಕನ

ಕುಲ–ಗೋತ್ರಗಳು

ಗೋತ್ರಗಳು ಸಮುದಾಯ ವ್ಯವಸ್ಥೆಯನ್ನು ಮಾರ್ಪಡಿಸಿಕೊಂಡು ವರ್ಣ ವ್ಯವಸ್ಥೆಗೆ ರೂಪಾಂತರವಾದ ಹಂತ, ನಮ್ಮ ದೇಶಕ್ಕೆ ಆರ್ಯರು ಬಂದ ನಂತರದಲ್ಲಿ ಸಾಧಿಸಿದ ಮೊತ್ತಮೊದಲ ಪ್ರಮುಖ ಬದಲಾವಣೆ. ಆದಿಮ ಪಶುಪಾಲಕ ಸಮಾಜವನ್ನು ಬಿಟ್ಟು ಕಬ್ಬಿಣದ ಬಳಕೆಯನ್ನರಿತ ಕೃಷಿಕ ವರ್ಗ ಸಮಾಜ ರೂಪುಗೊಂಡ ಬದಲಾವಣೆ. ಅಲ್ಲಿಗೆ ಗೋತ್ರಗಳು–ಸಮುದಾಯಗಳು ಸಾಮಾಜಿಕವಾಗಿ ಅರ್ಥರಹಿತವಾಗಿ ಹೋದವು. ಆದರೆ ಎಲ್ಲ ವಿಷಯಗಳಲ್ಲಿಯೂ ನಮ್ಮ ದೇಶ ಹಳೆಯ ಕಸವನ್ನು ಬಿಸಾಡದೆ ಉಳಿಸಿಕೊಂಡೇ ಬಂದಿದೆ. ಇಂದಿಗೂ ಗೋತ್ರಗಳು ಬ್ರಾಹ್ಮಣರಲ್ಲಿ ಉಳಿದುಕೊಂಡು ಬಂದಿವೆ. ವಿವಾಹ ವಿಷಯದಲ್ಲಿ ಸಗೋತ್ರ ವಿವಾಹ ನಿಷಿದ್ಧವೆಂಬುದೂ ಉಳಿದು ಬಂದಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಗೋತ್ರಗಳು ಹೊರಟು ಹೋಗಿ ಕುಲಗಳು ಬಂದವಾದರೂ, ಆಚಾರಗಳಲ್ಲಿ ಇಂದಿಗೂ 'ಕುಲಗೋತ್ರ'ಗಳೆರಡೂ ಮುಖ್ಯವೇ.

(ಡಿ. ಡಿ. ಕೊಸಾಂಬಿ ೧೯೭೮ ಪು. ೭೬)

ವಿವರಗಳಿಗೆ ನೋಡಿ: ಸಿ.ವೀರಣ್ಣ 1986 ಪ್ರಾಚೀನ ಸಾಹಿತ್ಯ: ರಾಜಸತ್ತೆಯ ವೈಭವದ

ಕಾಲ ಪುಟ. 190– 164

ಶಂಬಾ ಜೋಶಿ 1999 ಸಂಪುಟ. 2 ಪುಟ. 415.ಸಂಪುಟ. 3

ಹಾಲುಮತ ದರ್ಶನ ಪುಟ. 32, 197

Raymond Williams 1983 Keywords

ಕುಲದೈವ

ಕುಲದೈವದ ಪರಿಕಲ್ಪನೆಯು ವಿಶಿಷ್ಟವಾದುದು. ಕುಟುಂಬ ದೈವ; ಜಾತಿ ದೈವ; ಜನಾಂಗ ದೈವ; ಊರಿನ ದೈವ; (ಗ್ರಾಮದೇವತೆ) ಹೀಗೆ ಬೇರೆ ಬೇರೆ ದೈವ ಪರಿಕಲ್ಪನೆಗಳಿವೆ. ಕುಟುಂಬ ಅಥವಾ ಕುಲದೈವವೆಂದರೆ ಆಯಾ ಕುಟುಂಬ ಮತ್ತು ಕುಲಕ್ಕೆ ಸಂಬಂಧಿಸಿದ ದೈವಗಳು. ಆಯಾ ಊರುಗಳ ದೇವತೆಗಳು ಬೇರೆ ಬೇರೆಯಿರುತ್ತವೆ. ಅವುಗಳ ಸ್ವರೂಪ ಬೇರೆಯಿರುತ್ತವೆ. ಆದರೆ ಆಯಾ ಊರಿನ ಎಲ್ಲರೂ ಊರಿನ ದೇವತೆಗೆ ನಡೆದುಕೊಳ್ಳುತ್ತಾರೆ. ಆಯಾ ಜಾತಿಗಳಿಗೂ ಬೇರೆ ಬೇರೆ ದೈವಗಳಿರುತ್ತವೆ.

"ರೇಣುಕಾ, ಜಗದಂಬಾ, ಚಂದಲಾ ಪರಮೇಶ್ವರಿ ಇತ್ಯಾದಿ ದೇವಿಯರೇ ಮುಖ್ಯ ಕುಲದೇವತೆಯಾಗಿರುವ ಮನೆತನಗಳು ಇಲ್ಲದಿಲ್ಲ. ಈ ಕುಲಾಚಾರದಲ್ಲಿ ಮಾತಾ – ದೇವಿ ಪ್ರಸಾದಕ್ಕೆ ಮಹತ್ವವಿರುತ್ತದೆ. ಆ ಪೂಜೆಗಳಲ್ಲಿ ದೇವಿಯರು ಗಂಡಂದಿರ ಹೆಸರು ಬಾರದಿರುವುದು ಕಂಡುಬರುತ್ತದೆ. ಕೊಲ್ಲಾಪುರದ ದೇವಿಯನ್ನು ಕೆಲವರು ಲಕ್ಷ್ಮೀರೂಪದಲ್ಲಿ ಕಾಣುತ್ತಾರೆ. ಕೆಲವರು ಅಂಬಾಭವಾನಿ (ಪಾರ್ವತಿ) ರೂಪದಲ್ಲಿ ಆರಾಧಿಸುತ್ತಾರೆ. ಇಲ್ಲಿ ವಿಷ್ಣು ಅಥವಾ ರುದ್ರ ದೂರ ಉಳಿಯುವುದು ಕಂಡುಬರುತ್ತದೆ. ಜಗಜ್ಜನನಿ ಅಂಬಾಭವಾನಿ. ಅವಳಿಂದ ವಿಶ್ವ ನಿರ್ಮಾಣವಾಗಿದೆ. ಇವಳೇ ಆದಿ–ಶಕ್ತಿ ಎಂಬ ನಿಷ್ಠೆಯಲ್ಲಿ ಗಂಡುದೇವರು ಗೌಣ ಎಂಬುದು ಸ್ಪಷ್ಟವಿದೆ." ವಿವರಗಳಿಗೆ ನೋಡಿ: ಕೆ. ಚಿನ್ನಪ್ಪಗೌಡ ೧೯೯೦ ಪುಟ. ೪೪–೪೫; ೧೦೬ ಶಂಬಾ ಜೋಶಿ ೧೯೯೯ ಹಾಲುಮತ ದರ್ಶನ ಸಂಪುಟ. ೩ ಪುಟ. ೧೧೩

ಕುಲಧನ

ಪಿತ್ರಾರ್ಜಿತವನ್ನು ಕುಲಧನವೆಂದು ಕರೆಯುತ್ತಾರೆ. ಕುಲಧನವು ಪರಂಪರಾನುಗತವಾಗಿ ಬಂದಿರುತ್ತದೆ. ಮಿತಾಕ್ಷರ ಕಾನೂನಿನ ಪ್ರಕಾರ ಅವಿಭಕ್ತ ಕುಟುಂಬದ ಪ್ರಬಂಧಕನು ತನ್ನ ಕುಟುಂಬದ ಎಲ್ಲಾ ಗಂಡು ಸದಸ್ಯರನ್ನು ಅವರ ಹೆಂಡತಿಯರನ್ನು ಪೋಷಿಸಲು ಬಾಧ್ಯನು. ಯಾವನಾದರೊಬ್ಬ ಗಂಡು ಸದಸ್ಯನು ಮೃತನಾದರೆ ಅವನ ವಿಧವೆ ಮತ್ತು ಮಕ್ಕಳನ್ನು ಪೋಷಿಸಲು ಬಾಧ್ಯನು. ದಾಯಾಭಾಗದ ಕಾನೂನಿನಂತೆ ಒಬ್ಬ ತಂದೆಯು ತನ್ನ ಅಪ್ರಾಯಸ್ಥ ಮಗಂದಿರನ್ನು ಪೋಷಿಸಲು ಎರಡು ರೀತಿಯ ಕಾನೂನುಗಳಿಗೆ ಬಾಧ್ಯನು. ಆದರೆ ತಂದೆಯು ಒಂದೊಮ್ಮೆ

ಪ್ರಬಂಧಕರಾಗಿದ್ದ ಪೂರ್ವಜರ ಸೊತ್ತು ಅವನ ಕೈಯಲ್ಲಿದ್ದರೆ ಮಿತಾಕ್ಷರ ಕಾನೂನಿನ ಮೇರೆಗೆ ಅವನ ಪ್ರಾಯಸ್ಥ ಮಗಂದಿರೂ ಸಹ ಪೂರ್ವಜರ ಸ್ವತ್ತಿನಿಂದ ಪಾಲಿಸ್ಪಡಲು ಬಾಧ್ಯರು. ಆದರೆ ದಾಯ ಭಾಗ ಕಾನೂನಿನ ಪ್ರಕಾರ ಮಗಂದಿರು ಪೂರ್ವಜರ ಸ್ವತ್ತಿನಲ್ಲಿ ಜನ್ಮತಃ ಅಧಿಕಾರ ಪಡೆಯುವುದಿಲ್ಲ. ಮಿತಾಕ್ಷರದ ಪ್ರಕಾರ–

1. ವಾರಸಿಗೆ ತಡೆಯಿಲ್ಲ.
2. ಒಪ್ಪಂದದಿಂದ ವಾರಸು ಆಧಾರೋಹಗೊಳಿಸುವಂತಿಲ್ಲ.
3. ಅನಿರೀಕ್ಷಿತ ಉತ್ತರಾಧಿಕಾರವು ಮನ್ನಿಸಲ್ಪಡುವುದಿಲ್ಲ.
4. ಗಂಡಸರು ಪರಮವಾಗಿ ಮತ್ತು ಹೆಮಗಸರು ನಿಯಮಿತವಾಗಿ ಸ್ವತ್ತನ್ನು ಪಡೆಯುವರು
5. ಹೊಸ ವಂಶಪರಮಪರೆ.
6. ಪ್ರಾತಿನಿಧ್ಯದ ಸಿದ್ಧಾಂತ.
7. ಕೊಡುಗೇಣಿದಾರರು ಮತ್ತು ತಲಾವಾರು ವಿಭಜಿಸಿ.
8. ಶಾಖಾವಾರು ಮತ್ತು ತಲಾವಾರು ವಿಭಜನೆ.
9. ಪೂರ್ಣ ರಕ್ತಕ್ಕೆ ಅರ್ಧರಕ್ತದ ಮೇಲೆ ಆಧ್ಯತೆ ಕೊಡಲಾಗುತ್ತದೆ.
10. ಸಮೀಪದ ರಕ್ತ ಸಂಬಂಧ ಮತ್ತು ಧಾರ್ಮಿಕ ಪ್ರಭಾವ.

ಕುಲವಿದ್ಯೆ

ಕುಲವಿದ್ಯೆಯು ಕುಲಕ್ಕೆ ಸಂಬಂಧಿಸಿದೆ. ಆಯಾಯ ಕುಲಗಳು ತಮಗೆ ಬೇಕಾದ ವಿದ್ಯೆಗಳನ್ನು ರೂಢಿಸಿಕೊಂಡಿರುತ್ತವೆ. ಅದು ಕುಲದ ಅನಿವಾರ್ಯತೆಗೆ ಸಂಬಂಧಿಸಿದ್ದು. ಇನ್ನೊಂದು ಜಾತಿವಿದ್ಯೆ, ಆಯಾ ಜಾತಿಗೆ ಸಂಬಂಧಿಸಿದ್ದು. ಮೂರನೆಯದು ವ್ಯಕ್ತಿಯು ಸಾಧಿಸಿಕೊಳ್ಳುವುದು. ಇದನ್ನು ಸಾಧಿತವಿದ್ಯೆಯೆಂದು ಕರೆಯುತ್ತಾರೆ.

ಕುಲಾಲ

ಕುಲಾಲರು ಎಂಬುದು ಜಾತಿಸೂಚಕವೂ ಹೌದು. ಕುಂಬಾರರನ್ನು ಕುಲಾಲರು ಎಂದು ಕರೆಯುತ್ತಾರೆ. ಈ ಜಾತಿಯನ್ನು ವರ್ಣದ ಚೌಕಟ್ಟಿನಲ್ಲಿ ವ್ಯಾಖ್ಯಾನಿಸುವಂತಿಲ್ಲ. ಜಾತಿ ಶ್ರೇಣೀಕರಣದ ದೃಷ್ಟಿಯಿಂದ ಕುಂಬಾರರಿಗೆ ಉನ್ನತದರ್ಜೆ ಇಲ್ಲವೆಂಬುದು ಗಮನಾರ್ಹ.

ವಿವರಗಳಿಗೆ ನೋಡಿ: ಡಾ. ಚಿದಾನಂದಮೂರ್ತಿ.ಎಂ. ೨೦೦೮ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ. ೪೪೨.

ಕುಲಿಂಗಿ

10ನೆಯ ಶತಮಾನದ ಹೊತ್ತಿಗಾಗಲೇ ಜೈನ ಧರ್ಮದಲ್ಲಿ ಭಿನ್ನ ಭಿನ್ನ ಅಭಿಪ್ರಾಯಗಳು ರೂಪುಗೊಂಡಿದ್ದನ್ನು ಈ ಮಾತು ತಿಳಿಸುತ್ತದೆ. ಮುಖ್ಯವಾಗಿ ಜೈನಧರ್ಮದಲ್ಲಿದ್ದುಕೊಂಡೇ ಆಚಾರ ವಿಚಾರಗಳನ್ನು ಅನುಸರಿಸದೆ ಇರುವವರನ್ನು ಪಂಡ ಕುಲಿಂಗಿಗಳು ಎಂದು ಕರೆಯುತ್ತಾನೆ. 'ಕುಲಿಂಗಿ' ಎನ್ನುವ ಪದವು ಮೂಲತಃ ಲಿಂಗವನ್ನು ಸೂಚಿಸುತ್ತದೆ. ದುರ್ಭಗ, ಕುಯೋನಿ, ಕುಲಿಂಗಿ–ಇವೆಲ್ಲವೂ ಹೀನ ವಾಚಕಗಳಾಗಿವೆ. ಬೈಗುಳ ಪದವಾಗಿ ಇಲ್ಲಿ ಬಳಸಲಾಗಿದೆ. ಇದರ ಇನ್ನೊಂದು ರೂಪ ಈಗಲೂ ಚಾಲ್ತಿಯಲ್ಲಿದೆ. ಸೂಳೇಮಗ, ಮುಂಡೇಮಗ ಎನ್ನುವುದು ಈಗ ಬೈಗುಳ ಪದವಾಗಿದೆ.

ಧಾರ್ಮಿಕವಾಗಿ ದುರಾಚಾರಕ್ಕೆ ತೊಡಗಿದವರನ್ನು; ಅನ್ಯಮತೀಯರನ್ನು ಈ ರೀತಿಯ ಬೈಗುಳ ಪದವನ್ನು ಬಳಸುವ ಮೂಲಕ ಖಂಡಿಸಿರುವುದು ಗಮನಾರ್ಹವಾಗಿದೆ.

ಇನ್ನೊಂದು ನೆಲೆಯಲ್ಲಿ ಕುಲಿಂಗಿ ಶಬ್ದವನ್ನು ಹೀಗೂ ಅರ್ಥೈಸಬಹುದಾಗಿದೆ. ಕುಲಿಂಗಿಗಳು ಅಂದರೆ ದುರಾಚಾರದಿಂದ ವರ್ತಿಸುವ ವೀರಶೈವ ಧರ್ಮಿಗಳಿರಬಹುದು. ಜೈನ ಧರ್ಮಕ್ಕೆ 10ನೆಯ ಶತಮಾನದ ಕೊನೆಗಾಗಲೇ ಅನ್ಯಧರ್ಮಗಳಿಂದ ಆಘಾತಗಳು ಪ್ರಾರಂಭವಾದುವು. ಪ್ರಮುಖವಾಗಿ ಶೈವ ಮತ್ತು ವೈಷ್ಣವ ಧರ್ಮಗಳು ಈ ಆಘಾತವನ್ನೊಡ್ಡುವುದರಲ್ಲಿ ಮುಂಚೂಣಿಯಲ್ಲಿದ್ದವು. ಹೀಗಿರುವಾಗ ಅನ್ಯಧರ್ಮೀಯರನ್ನು ನಿಂದನೆ ಮಾಡುವಲ್ಲಿ ಕುಲಿಂಗಿಗಳು ಎಂದು ಕರೆದಿರಬಹುದು. ಈ ಕುರಿತು ಹಳೆಗನ್ನಡದಲ್ಲಿ ಹೇರಳ ಬಳಕೆಯಿದೆ.

ಮಿಥ್ಯಾತ್ವವಾದಿ; ಪಾಷಂಡಿ ಮುನಿಗಳ ಕುರಿತು ಬಂದಿರುವ ಪ್ರಮುಖ ಟೀಕೆಯಿದು.

ಕೂಡು

ಗಂಡು ಹೆಣ್ಣಿನ ಅಕ್ರಮ ಸಂಬಂಧವನ್ನು ಹಳೆಗನ್ನಡದಲ್ಲಿ ಕೂಡು ಎಂದು ಕರೆದಿದ್ದಾರೆ. ಇದು ನಿಷೇಧಿತ ಸಂಬಂಧ. ಕೂಡುವಿಕೆಯು ಅಕ್ರಮ ಸಂಯೋಗವನ್ನು ಸೂಚಿಸುತ್ತದೆ. ಕೂಡು ಎಂದರೆ ಸೇರು ಎಂಬರ್ಥವಿದೆ. ಇದು ದೈಹಿಕ ಕೂಡುವಿಕೆಗೆ ಸಂಬಂಧಿಸಿದೆ.

ಕೃಷಿ

ಕೃಷಿಯೇತರ ಭೂಮಿಯನ್ನು ಕೃಷಿ ಭೂಮಿಯನ್ನಾಗಿ ಪರಿವರ್ತಿಸುವ ಪ್ರಕ್ರಿಯೆ ಕ್ರಿ.ಶ.೮ರಿಂದ ೧೪ನೆಯ ಶತಮಾನಗಳ ನಡುವಣ ಅವಧಿಯಲ್ಲಿ ಇತ್ತು ಎನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ. ಈ ಪರಿವರ್ತನಾ ಪ್ರಕ್ರಿಯೆಯ ಮೂಲ ಉದ್ದೇಶ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು. ಕೃಷಿ ಭೂಮಿಯ ವಿಸ್ತರಣೆ ಮುಖ್ಯವಾಗಿ ಎರಡು ಉದ್ದೇಶಗಳನ್ನು ಈಡೇರಿಸುತ್ತಿತ್ತು.

ಅವುಗಳೆಂದರೆ,

೧. ರಾಜ್ಯದ ಆದಾಯವನ್ನು ಹೆಚ್ಚಿಸುವುದು ಈ ವಿಸ್ತರಣೆಯ ಮೊದಲನೆಯ ಉದ್ದೇಶ. ಕೃಷಿ ಯೋಗ್ಯವಲ್ಲದ ಪ್ರದೇಶಗಳನ್ನು ಕೃಷಿ ಭೂಮಿಯನ್ನಾಗಿ ಪರಿವರ್ತಿಸಿ ಅದರಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಆದಾಯ ಬರುವಂತೆ ಮಾಡಲಾಯಿತು.

೨. ಜನಸಂಖ್ಯೆಯ ಒತ್ತಡವನ್ನು ಕಡಿಮೆಗೊಳಿಸುವುದು ಇನ್ನೊಂದು ಉದ್ದೇಶ. ಹೊಸದಾಗಿ ನಿರ್ಮಾಣಗೊಳ್ಳುವ

ಕೃಷಿಯೋಗ್ಯ ಭೂಮಿಯಲ್ಲಿ ಜನರು ವಾಸಮಾಡತೊಡಗುವುದು ಸಹಜ. ಇದು ಹೊಸ ಜನವಸತಿ ನಿರ್ಮಾಣಗೊಳ್ಳುವುದಕ್ಕೆ ಕಾರಣವಾಯಿತು. ಅದೇ ರೀತಿ ಇದರಿಂದ ಜನಸಂಖ್ಯೆಯ ಒತ್ತಡ ಕಡಿಮೆಯಾಗತೊಡಗಿತು. (ಮೋಹನಕೃಷ್ಣ ರೈ, ೨೦೦೪. ಪು. ೧೮) ಕೃಷಿ ಸಮಾಜದೊಂದಿಗೆ ಬೆಸೆಯುವ ಜಾಣ್ಮೆಯು ಅಗತ್ಯವಾಗಿದೆ. ಇಂಗ್ಲಿಷಿನ ರೊಮಾಂಟಿಕ್ ಪರಂಪರೆಯು ಇದೇ ರೀತಿ ವಾದಿಸಿದ್ದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು.

ಕೆಯ್ಯೆಡೆ

ನ್ಯಾಸವೆಂದು ಒಪ್ಪಿಸಿದ ವಸ್ತುವಿಗೆ **ಕೆಯ್ಯೆಡೆ**ಯೆಂದು ಕರೆಯುತ್ತಾರೆ. ನ್ಯಾಸವೆಂದರೆ ತೆಗೆದಿರಿಸಿದ ವಸ್ತು ಎಂದು ಭಾವಾರ್ಥ. ಎಡೆ ನೀಡುವುದು ಎಂಬ ಪ್ರಯೋಗ ದಿನನಿತ್ಯ ಮಾತುಕತೆಯಲ್ಲಿದೆ. ಎಡೆನೀಡುವುದೆಂದರೆ ಅರ್ಪಿಸುವುದು. ಕೆಯ್ಯೆಡೆಯೆಂದರೆ ಕೈಯಿಂದ ನೀಡುವ ಎಡೆ (ನ್ಯಾಸ) ಕೆಯ್ಯೆಡೆ – ಒತ್ತೆಯಿಡು; ಕೈಗೆ ಕೊಟ್ಟದ್ದು ಎಂಬ ಅರ್ಥಗಳಿವೆ. ಹಿರಿಯರಿಗೆ ಎಡೆ ನೀಡುವುದು ಎಂಬ ಪ್ರಯೋಗವನ್ನು ಇಲ್ಲಿ ಗಮನಿಸಬಹುದು.

ಕೆರೆಗಳು

ಕೃಷಿ ವ್ಯವಸ್ಥೆ ಜೀವಂತವಾಗಿರಬೇಕಾದರೆ ಅದರ ಜೊತೆಗೆ ನೀರಾವರಿ ವ್ಯವಸ್ಥೆಯೂ ಇರಬೇಕು. ಕೃಷಿ ಸಂಪೂರ್ಣವಾಗಿ ಮಳೆಯನ್ನೇ ಅವಲಂಬಿಸಿರಲು ಸಾಧ್ಯವಿಲ್ಲ. ಆದ್ದರಿಂದ ಕೃಷಿಗೆ ಕೃತಕ ನೀರಿನ ವ್ಯವಸ್ಥೆ ಅನಿವಾರ್ಯ. ರಾಜ್ಯದ ಆರ್ಥಿಕತೆಯಲ್ಲಿ ಕೃಷಿ ಪ್ರಧಾನವಾಗಿದ್ದರಿಂದಾಗಿ ಎಲ್ಲಾ ಅರಸುಮನೆತನಗಳು ನೀರಾವರಿಗೆ ಹೆಚ್ಚಿನ ಗಮನವನ್ನು ಕೊಡುವುದು ಅವಶ್ಯಕವಾಗಿತ್ತು. ಈ ಕಾರಣದಿಂದಾಗಿಯೇ ಕೃಷಿಯೋಗ್ಯ ಭೂಮಿಯನ್ನು ಎರಡು ರೀತಿಯಾಗಿ ವಿಂಗಡಿಸಲಾಗಿತ್ತು. ಅವುಗಳೆಂದರೆ,

೧. ಸಂಪೂರ್ಣವಾದ ಮಳೆಯನ್ನೇ ಅವಲಂಬಿಸಿರುವ ಕೃಷಿ ಭೂಮಿ

೨. ನದಿ, ಕೆರೆ, ಬಾವಿಗಳನ್ನು ಅವಲಂಬಿಸಿರುವ ಕೃಷಿಭೂಮಿ

ಪ್ರಾಚೀನ ಕೃಷಿ ವ್ಯವಸ್ಥೆಯಲ್ಲಿ ಕೆರೆಗಳ ಪಾತ್ರ ಮಹತ್ವದ್ದು. ನೀರಾವರಿ

ಬೇಸಾಯಕ್ಕೆ ಕೆರೆ, ಬಾವಿಗಳು ಬೇಕು. ಕೆರೆಗಳು ನೀರನ್ನು ಸಂಗ್ರಹಿಸುವ ಜಾಗಗಳು ಹೌದು. ಕೆರೆಯಲ್ಲಿ ನೀರು ತುಂಬಲು ಎರಡು ರೀತಿಯ ಮೂಲಗಳಿವೆ: ಒಂದು ಒರತೆಯ ಮೂಲ ಮತ್ತು ಮಳೆಯ ಆಶ್ರಯ. ಕೆರೆಯನ್ನು ಹೆಚ್ಚಿನ ರಾಜರು ಕಟ್ಟಿಸುತ್ತಿದ್ದರು ಮತ್ತು ಜನರು ಕೂಡಾ ಕೆರೆಯನ್ನು ಆಶ್ರಯಿಸುತ್ತಿದ್ದರು. ಊರಿಗೆ ಒಂದು ಕೆರೆಯೆಂಬುದು ಪ್ರಾಚೀನ ಪದ್ಧತಿಗಳಲ್ಲಿ ಒಂದು. ಕೆಲವು ಊರುಗಳಿಗೆ ಕೆರೆಗಳ ಹೆಸರುಗಳೂ ಅಂಟಿಕೊಂಡು ಬಂದಿವೆ. ಉದಾ: ತರೀಕೆರೆ; ಅರಸೀಕೆರೆ.

ವಿವರಗಳಿಗೆ ನೋಡಿ: ಮೋಹನಕೃಷ್ಣ ರೈ ೨೦೦೪ ಪ್ರಭುತ್ವ ಮತ್ತು ಜನತೆ ಪುಟ. ೨೧.

ಕೆಲಸಗಾರ

ಕೆಲಸ ಮಾಡುವವನನ್ನು ಕೆಲಸಗಾರನೆಂದು ಕರೆಯುತ್ತೇವೆ. ಕೆಲಸಗಳಲ್ಲಿ ಎರಡು ಪ್ರಮುಖ ವಿಧಗಳಿವೆ: ಒಂದು ಬೌದ್ಧಿಕ ಕೆಲಸ. ಇನ್ನೊಂದು ಭೌತಿಕ ಕೆಲಸ. ಬೌದ್ಧಿಕ ಕೆಲಸದಲ್ಲಿ ಬುದ್ಧಿಯು ಕೆಲಸ ಮಾಡುತ್ತದೆ. ಭೌತಿಕ ಕೆಲಸದಲ್ಲಿ ದೇಹವು ದುಡಿಮೆಯ ಮಾಧ್ಯಮವಾಗಿರುತ್ತದೆ. ದುಡಿಮೆಗೆ ಮೌಲ್ಯವು ನಿಗದಿಯಾಗಿರುತ್ತದೆ. ಬಂಡವಾಳಶಾಹಿ ಜಗತ್ತಿನಲ್ಲಿ ದುಡಿಮೆಗೆ ನಿರ್ದಿಷ್ಟ ಮೌಲ್ಯಗಳಿವೆ. ಕೈಗಾರಿಕೆಗಳು ಬಂದಾಗ ಅದು ನಿಗದಿ ಪಡಿಸಿದ ಮೌಲ್ಯಗಳ ಸ್ವರೂಪ ಬೇರೆ. ಕೈಗಾರಿಕೆಗಳಲ್ಲಿ ಭೌತಿಕ ದುಡಿಮೆ ಮಾಡುವವರನ್ನು ಕಾರ್ಮಿಕರು ಎಂದು ಕರೆಯುತ್ತಾರೆ. ಬೌದ್ಧಿಕ ಕೆಲಸ ಮಾಡುವವರನ್ನು ಬುದ್ಧಿಜೀವಿಗಳು ಎಂದು ಕರೆಯುತ್ತಾರೆ. ಕೃಷಿಯಲ್ಲಿ ದೈಹಿಕ ದುಡಿಮೆ ಮಾಡುವವರನ್ನು ರೈತರು; ಕೂಲಿಗಳು ಎಂದು ಕರೆಯುತ್ತಾರೆ. ದುಡಿಮೆಯ ರೂಪಕ್ಕೆ ಅನುಸಾರವಾಗಿ ಮೌಲ್ಯ ನಿಗದಿಯಾಗುತ್ತದೆ. ಬೌದ್ಧಿಕ ಕೆಲಸಕ್ಕೆ ಕೊಡುವ ವೇತನ ಹೆಚ್ಚು. ದೈಹಿಕ ದುಡಿಮೆಗೆ ವೇತನ ಕಡಿಮೆ. ಈ ತಾರತಮ್ಯದಿಂದ ಮನುಷ್ಯ ಮನುಷ್ಯರ ನಡುವೆ ಅಂತರ ಹೆಚ್ಚುತ್ತದೆ. ಬುದ್ಧಿಜೀವಿಗಳನ್ನು ವರ್ಗೀಕರಿಸುವಾಗ ಗ್ರಾಮ್ಶಿವು 'ನಗರಕೇಂದ್ರಿತ ಹಳ್ಳಿಕೇಂದ್ರಿತ ಬುದ್ಧಿಜೀವಿಗಳು' ಎಂದು ಎರಡು ರೀತಿಯಲ್ಲಿ ವರ್ಗೀಕರಿಸುತ್ತಾನೆ. ಕೆಲಸಗಾರರಿಗೂ ಬುದ್ಧಿಶಕ್ತಿಯ ಬಲ ಬೇಕು.

ವಿವರಗಳಿಗೆ ನೋಡಿ: ಮಹಾತ್ಮಾಗಾಂಧಿ ೧೯೫೪ ಧರ್ಮ ಮತ್ತು ನೀತಿ

Raymond Williams 1983 keywords P.177, 178

ಕೇಶ

ಬಾಲಶಬ್ದಕ್ಕೆ ಕೇಶ ಎಂಬ ಅರ್ಥ ದೊರೆತು ಬಿಟ್ಟಿದೆ. ಆದರೆ ಕೇಶ ಎಂಬ ಅರ್ಥದಲ್ಲಿ ಮೂಲಭೂತವಾಗಿ ಇದು ಬಳಕೆಗೆ ಬಂದಿಲ್ಲವೆಂಬುದರಲ್ಲಿ ಅನುಮಾನವೇನೂ ಉಳಿದಿಲ್ಲ. ಬ್ಯಾಬಿಲೋನ್ ಶಬ್ದದಿಂದ ಇದು ಬಂದಿದೆಯೆಂದು. (ಭಗವತ್ ಶರಣ ಉಪಾಧ್ಯಾಯ. ೨೦೦೪. ಪು. ೬೭) ಬಾಲ್ ಎಂದರೆ ಕೂದಲು ಎಂಬರ್ಥ ಹಿಂದಿಯಲ್ಲಿದೆ.

ಕೇಶಕಳಾಪ

ಕೂದಲನ್ನು ಐದು ಮುಷ್ಟಿಯಿಂದ ಕಿತ್ತುಕೊಳ್ಳುವುದನ್ನು ಕೇಶಕಳಾಪವೆಂದು ಕರೆಯುತ್ತಾರೆ. "ದ್ರೌಪದಿ ಕೇಶಕಳಾಪ" ಎಂಬ ಪ್ರಯೋಗವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕೇಶ ಸಂಸ್ಕಾರ

ಸಜ್ಜೆಮನೆಯಲ್ಲಿ ಮುಚ್ಚಿದ ಗವಾಕ್ಷ ತೆಗೆಯಲು ಮರೆತು ಕೇಶಸಂಸ್ಕಾರದ ಧೂಪದ ಹೊಗೆಯಲ್ಲಿ ಸಿಕ್ಕಿ ಹಾಕಿಕೊಂಡು ಸತ್ತ ದಂಪತಿಗಳ ವಿವರ ಬರುತ್ತದೆ. ಧೂಪದ ಹೊಗೆಯನ್ನು ಕೇಶಸಂಸ್ಕಾರಕ್ಕೆ ಬಳಸಿಕೊಳ್ಳುತ್ತಿದ್ದರು ಎಂದು ಇದರಿಂದ ತಿಳಿಯುತ್ತದೆ

ಕೇಶಸಂಸ್ಕಾರವು ವಿಶಿಷ್ಟ ಬಗೆಯದು. ಇಲ್ಲಿ ಸಂಸ್ಕಾರವೆಂದು ಬಳಸಿರುವುದು ಗಮನಾರ್ಹವಾಗಿದೆ. ಕೇಶವಿನ್ಯಾಸವೆಂದರೆ ತಲೆಗೂದಲನ್ನು ವಿನ್ಯಾಸಗೊಳಿಸುವುದು.ಮಿಂದ ಮೇಲೆ ತಲೆಗೂದಲು ಒದ್ದೆಯಾಗಿದ್ದಾಗ ಅದು ಒಣಗಲು ಸಂಸ್ಕಾರವನ್ನು ಬಯಸುತ್ತದೆ.

ವಿವರಗಳಿಗೆ ನೋಡಿ: ಸಂಸ್ಕಾರ

ಕೈಕಸುಬುಗಾರನ ಸ್ಥಾನ

ಈ ಕಾಲದಲ್ಲಿ ಶೂದ್ರ ಕೈಕಸುಬಿಗಳು ತಮ್ಮ ಪ್ರಾಮುಖ್ಯತೆಯನ್ನು ಉಳಿಸಿಕೊಂಡರು. ಮೂರು ಉಚ್ಚ ವರ್ಣಗಳ ಸೇವೆ ಮಾಡುವುದರ ಮೂಲಕ ಹೊಟ್ಟೆಪಾಡು ಕಳೆಯದಿದ್ದಾಗ ಮಾತ್ರ ಶೂದ್ರರು ಕೈಕಸುಬು ಹಾಗೂ ಕಲೆಗಳಲ್ಲಿ ತೊಡುಗುವುದಕ್ಕೆ ಹಿಂದಿನ ಕಾಲದ ಧರ್ಮ ಶಾಸ್ತ್ರಕಾರರು ಅನುಮತಿ ಕೊಟ್ಟಿದ್ದರು. ಆದರೆ ಈಗ ಈ ಷರತ್ತನ್ನು ತೆಗೆದುಹಾಕಲಾಯಿತು. ಶೂದ್ರರು ಸಾಮಾನ್ಯವಾಗಿ ಮಾಡಬಹುದಾದ ಕಸುಬುಗಳಲ್ಲಿ ಕೈಕಸುಬುಗಳನ್ನೂ ಸೇರಿಸಲಾಯಿತು (ಕಾಮಂದಕ ನೀತಿಸಾರ, II.೨೧; ಮಾರ್ಕಾಂಡೇಯ ಪುರಾಣ ೨೮.೩–೮; ವಿಷ್ಣುಸ್ಮೃತಿ III.೫; ಶೂದ್ರಸ್ಯ. . . . ಸರ್ವಶಿಲ್ಪಾನಿ, ಬೃಹಸ್ಪತಿ ಸ್ಮೃತಿ ೫೩೦ ಇತ್ಯಾದಿ). ಬೃಹಸ್ಪತಿ ಪ್ರಕಾರ (XIII. ೩೩) ಈ ಕೈಕಸುಬುಗಳು ಹೀಗಿವೆ : ಚಿನ್ನ ಹಾಗೂ ಕ್ಷುದರ ಲೋಹಗಳ ಕೆಲಸ, ಮರ, ನೂಲು, ಕಲ್ಲು, ಮತ್ತು ಚರ್ಮದ ಕೆಲಸಗಳು. ಅಮರಕೋಶದ ಶೂದ್ರ ವರ್ಗದಲ್ಲಿ ಕಂಡುಬರುವ ಕೈಕಸುಬುಗಳ ಪಟ್ಟಿಯಲ್ಲಿ ಸಾಮಾನ್ಯ ಕೈಕಸುಬಿಗಳು, ವೃತ್ತಿಸಂಘಗಳ ಮುಂದಾಳುಗಳು, ಮಾಲೆ ಕಟ್ಟುವವರು, ಅಗಸರು, ಕುಂಬಾರರು, ಇಟ್ಟಿಗೆ ಗೋಡೆ ಕಟ್ಟುವವರು, ನೇಯ್ಕಾರರು, ದರ್ಜಿಗಳು, ಚಿತ್ರಕಾರರು, ಚರ್ಮಕಾರರು, ಕಮ್ಮಾರರು, ಕಪ್ಪೆ ಚಿಪ್ಪು ಕೊರೆಯುವವರು ಹಾಗೂ ತಾಮ್ರದ ಕೆಲಸಗಾರರು ಇರುವರು; ಈ ಪ್ರತಿಯೊಂದು ಬಗೆಯ ಕೈಕಸುಬಿಯನ್ನೂ ಎರಡು ಹೆಸರುಗಳಿಂದ

ಅಲ್ಲಿ ಕರೆಯಲಾಗಿದೆ (II.೧೦.೫-೧೦). ಇದೇ ಪಟ್ಟಿಯು ಸೋನಗಾರರಿಗೆ ನಾಲ್ಕು ಹೆಸರುಗಳನ್ನೂ ಬಡಗಿಗಳಿಗೆ ಐದು ಹೆಸರುಗಳನ್ನೂ ಕೊಡುತ್ತದೆ (II. ೧೦.೮ ಮತ್ತು ೯). ತಮಟೆ, ಜಲತರಂಗ, ಕೊಳಲು ಹಾಗೂ ವೀಣೆ ನುಡಿಸುವವರು (II. ೧೦.೧೩), ನಟರು, ನಾಟ್ಯಗಾರರು ಮತ್ತು ಲಾಗ ಹಾಕುವವರು (II. ೧೦.೧೨), ಇವರನ್ನು ಸಹ ಅಮರನು ಶೂದ್ರವರ್ಗದಲ್ಲಿಯೇ ಸೇರಿಸುತ್ತಾನೆ. ಆದ್ದರಿಂದ ಶೂದ್ರರು ಎಲ್ಲ ಬಗೆಯ ಕಲೆ ಹಾಗೂ ಕೈಕಸುಬುಗಳಲ್ಲಿ ಭಾಗವಹಿಸುತ್ತಿದ್ದರೆಂದು ಹೇಳಬಹುದು. ಗೃಹ ರಚನೆಗೆ ಸಂಬಂಧಿಸಿದಂತೆ ವರಾಹಮಿಹಿರನ ನಿಯಮಗಳನ್ನು ನಾವಿಲ್ಲಿ ಗಮನಿಸಬಹುದು : ಬ್ರಾಹ್ಮಣನ ಮನೆಯು ಐದು ಕೋಣೆಗಳನ್ನೂ, ಕ್ಷತ್ರಿಯನದ್ದು ನಾಲ್ಕು, ನಾಲ್ಕು, ವೈಶ್ಯನದ್ದು ಮೂರು ಮತ್ತು ಶೂದ್ರನದ್ದು ಎರಡು ಕೊಠಡಿಗಳನ್ನೂ ಹೊಂದಿರಬೇಕು. ಇದಲ್ಲದೆ ಮುಖ್ಯ ಕೊಠಡಿಯ ಉದ್ದಗಲಗಳು ನಾಲ್ಕೂ ವರ್ಣಗಳಲ್ಲಿ ಪ್ರತಿಯೊಂದರ ಅಂತಸ್ತಿಗೆ ತಕ್ಕಂತೆ ಇರಬೇಕೆಂದು ಅವನು ನಿಯಮಿಸುತ್ತಾನೆ (ಬೃಹತ್‌ಸಂಹಿತಾ, ೫೨. ೧೨-೧೩).

ಕೈಗಾರಿಕೆ

ಕೈಗಾರೀಕರಣದಿಂದ ಪ್ರಕೃತಿ ಮತ್ತು ಮನುಷ್ಯರ ಸಂಬಂಧವು ಬೇರೆಯಾಗಿದೆ.

"ಹೀಗೆ ಹೊಸ-ಹೊಸ ಆವಿಷ್ಕಾರದ ಆರ್ಥಿಕ ಕಾರಣಗಳಲ್ಲದೆ, ಔದ್ಯೋಗಿಕ ಕ್ರಾಂತಿಗೆ ವಿಚಾರಶೀಲತೆಯಲ್ಲಿ ನಡೆದ ಬದಲಾವಣೆಯೂ ಕಾರಣವೆಂದು ಕೆಲವು ಲೇಖಕರು ಅಭಿಪ್ರಾಯಪಡುತ್ತಾರೆ. ನೋಲ್ಸ್ (Knowles) ಅವರು ಅಭಿಪ್ರಾಯಪಡುವಂತೆ, "ಬ್ರಿಟನ್ನಿನಲ್ಲಿ ಹೊಮ್ಮಿದ ಯಾಂತ್ರಿಕ ಆವಿಷ್ಕಾರಗಳು 'ಸ್ವಾತಂತ್ರ್ಯ, ಸ್ವೇಚ್ಛೆ ಮತ್ತು ಸಮಾನತೆ'ಗಳನ್ನು ಎತ್ತಿಹಿಡಿದ ಫ್ರಾನ್ಸಿನ ಕ್ರಾಂತಿ- ಈ ವಿಚಾರಗಳೆರಡರ ಸಂಯೋಜನೆಯ ಪರಿಣಾಮವೇ ೧೯ನೆಯ ಶತಮಾನ. ವಿಚಾರಕ್ರಾಂತಿಯ ಪರಿಣಾಮವಾಗಿ ಬ್ರಿಟನ್ನಿನಲ್ಲಿದ್ದ ಭೌತಿಕ ಹಾಗೂ ಕಾನೂನು ಅಡೆತಡೆಗಳು ತೊಡೆದುಹಾಕಲ್ಪಟ್ಟವು."

"ಕಾರ್ಖಾನೆ ವ್ಯವಸ್ಥೆಯ ಉಗಮ ಬಂಡವಾಳಷಾಹಿ ಅರ್ಥ ವ್ಯವಸ್ಥೆಗೆ ನಾಂದಿ ಹಾಡಿತು. ಈ ವ್ಯವಸ್ಥೆಯಲ್ಲಿ ಬಂಡವಾಳದಾರ ಕೇವಲ ಸರಳ ವ್ಯಾಪಾರಸ್ಥನಾಗಿರಲಿಲ್ಲ. ಆದರೆ ಆತ ಉದ್ಯಮದ ಮಾಲೀಕ, ಉತ್ಪನ್ನದ ಸಂಚಾಲಕ ಮತ್ತು ಯೋಜಕನಾಗಿದ್ದ.

ಬಂಡವಾಳದ ಸ್ಥಾನ ಪ್ರಮುಖವಾದಂತೆ, ಬೃಹತ್ ಪ್ರಮಾಣದ ಉತ್ಪನ್ನ. ಜಾರಿಗೆ ಬಂತು. ಒಬ್ಬನೆ ಬಂಡವಾಳದಾರ ಅಗತ್ಯ ಬಂಡವಾಳವನ್ನು ಒದಗಿಸುವುದು ಅಸಾಧ್ಯವಾಯಿತು. ಹೀಗಾಗಿ ಕೂಡು ಬಂಡವಾಳ ಕ್ರಮ ಜಾರಿಗೆ ಬಂತು.

ಔದ್ಯೋಗಿಕ ಕ್ರಾಂತಿಯ ಪೂರ್ವದಲ್ಲಿ ಜನಸಂಖ್ಯೆಯ ಹೆಚ್ಚಿನ ಶೇಕಡಾಂಶ ಹಳ್ಳಿಗಳಲ್ಲಿ ವಾಸಿಸುತ್ತಿದ್ದರು. ಜನದಟ್ಟಣೆಯ ಪ್ರದೇಶಗಳೆಂದರೆ ಇಂಗ್ಲೆಂಡಿನಲ್ಲಿ ಜನಸಂಖ್ಯೆ

ವಿರಳವಾಗಿತ್ತು. ಆದರೆ ಕ್ರಾಂತಿಯಿಂದ, ಅಸ್ತಿತ್ವಕ್ಕೆ ಬಂದ ಉತ್ತರದಲ್ಲಿನ ಕಬ್ಬಿಣ ಮತ್ತು ಕಲ್ಲಿದ್ದಲು ಕೈಗಾರಿಕೆಗಳು ಜನಗಳು ಉತ್ತರಕ್ಕೆ ಬರುವಂತೆ ಮಾಡಿದವು. ಹೆಚ್ಚಿನ ಜನರು ಹಳ್ಳಿಗಳಿಂದ ಪಟ್ಟಣಗಳಿಗೆ ಧಾವಿಸಿದರು. ಪಟ್ಟಣಗಳಲ್ಲಿ ಜನಸಂಖ್ಯೆ ವೃದ್ಧಿಸಿದಂತೆ ಹಳ್ಳಿಯ ಹಳೆಯ ಸಾಮಾಜಿಕ ಮೌಲ್ಯಗಳು ಕುಸಿದವು. ಪಟ್ಟಣಗಳ ಹೊಸ ವಾತಾವರಣದಲ್ಲಿ ಹೊಸ-ಹೊಸ ಸಾಮಾಜಿಕ ಮೌಲ್ಯಗಳು ಬೆಳೆದವು. ವೃತ್ತಿಯ ಸ್ವರೂಪ ಸಹ ಬದಲಾಯಿತು. ೧೭೦೦ರ ಸುಮ್ಮಾರಿನಲ್ಲಿ ಶೇ. ೭೭ರಷ್ಟು ಜನ ಕೃಷಿಯ ಮೇಲೆ ಅವಲಂಬಿಸಿದ್ದರೆ ೧೮೩೧ ರ ಸುಮಾರಿಗೆ ಈ ಶೇಕಡಾಂಶ ೨೮ ಕ್ಕಿಳಿಯಿತು. ಕೈಗಾರಿಕೆ ಪ್ರಧಾನವಾದ ವೃತ್ತಿಯಾಯಿತು. ಅರ್ಥವ್ಯವಸ್ಥೆ ಕೃಷಿಯಿಂದ ಕೈಗಾರಿಕೆಗೆ ಪ್ರಮಾಣ ಬೆಳೆಸಿತು. ಹೆಚ್ಚು ಹೆಚ್ಚು ಕೈಗಾರಿಕೆಗಳು ಉತ್ತರದ ಕಡೆಗೇ ಆಕರ್ಷಿತವಾದುವು. ಯೋಗ್ಯ ರೀತಿಯ ಸಾರಿಗೆವ್ಯವಸ್ಥೆ ಅಲ್ಲಿ ಇದ್ದುದೂ ಒಂದು ಕಾರಣ. ಕೈಗಾರಿಕಾ ಅರ್ಥವ್ಯವಸ್ಥೆಯ ಸಮಸ್ತ ಜಟಿಲತೆಯೊಡನೆ ಉತ್ತರವಲಯ ಆಧುನಿಕ ಕೈಗಾರಿಕಾ ಕೇಂದ್ರವಾಯಿತು."

"ಸಮಾಜದ ಈ ವಿಭಜನೆಗೆ ಪರ್ಯಾಯವಾಗಿ ಮತ್ತು ಅದರ ಜೊತೆ ಏಕತ್ರವಾಗಿ ಇದ್ದಂತೆಯೇ ಮಾನವನ ಮೂಲಸ್ವಭಾವ ಪರಸ್ಪರ ವಿರೋಧಿಸುವ ಎರಡು ಭಾಗಗಳಾಗಿ ಒಡೆದು ಹೋಗಿರುವುದು ಕಾಣುತ್ತದೆ. ಈ ವಿಭಜನೆ ಅನೇಕಾನೇಕ ರೀತಿಗಳಲ್ಲಿ ವ್ಯಕ್ತಗೊಳ್ಳುತ್ತದೆ. ಕಾರ್ಲ್‌ಮಾರ್ಕ್ಸ್ ತನ್ನ 'ಎಕನಾಮಿಕ್ ಅಂಡ್ ಫಿಲಾಸಫಿಕ್ ಮ್ಯಾನಸ್ಕ್ರಿಪ್ಟ್ಸ್ ಆಫ್ ೧೮೪೪' ಕೃತಿಯಲ್ಲಿ ವಿಶ್ವಾಸ ಕಳಕೊಂಡು ಪರಕೀಯವಾದ ನಿರ್ಜೀವ ದುಡಿಮೆಯ ಬಗ್ಗೆ ಪ್ರಸ್ತಾಪಿಸುವ ಸಂದರ್ಭದಲ್ಲಿ ಈ ಒಡಕಿನ ಸ್ಪಷ್ಟ ಸ್ವರೂಪ ನೀಡಿದ್ದಾನೆ. ಈ ನಿರ್ಜೀವ ದುಡಿಮೆಯನ್ನು ಹೋಗಲಾಡಿಸಲು ಮಾರ್ಕ್ಸ್ ಸಂವೇದನಾಪೂರ್ಣ ಮಾನವಕ್ರಿಯೆಯ ಪರಿಕಲ್ಪನೆಯನ್ನು ತನ್ನ 'ಫಸ್ಟ್ ಥೀಸಿಸ್ ಆಫ್ ಫ್ಯೂರ್ಬಾ' (Feurbach) ದಲ್ಲಿ ರೂಪಿಸುತ್ತಾನೆ. ಇದೇ ಒಡಕು ಅಸಂಗತವಾದ ಕ್ರಿಯೆಯಲ್ಲಿ ಬಲವಂತದ ಸೋಮಾರಿಯು ನಿರತವಾಗುವಂತೆ ಮಾಡಿದೆ. ಆತನಿಗೆ ಜಗತ್ತಿನಲ್ಲಿ ಲಭ್ಯವಿರುವ ಎಲ್ಲ ಸಮಯವನ್ನು ಕೊಟ್ಟು ಬಿಡುವಿಲ್ಲದೆ ದುಡಿಯುವಂತೆ ಮಾಡುತ್ತದೆ.

ವಿವರಗಳಿಗೆ ನೋಡಿ: ಮೋಹನ್ ದಾಸ್ ಕರಮಚಂದ್ ಗಾಂಧಿ ೨೦೦೮ ಹಿಂದ್ ಸ್ವರಾಜ್
ಮಹಾತ್ಮಾಗಾಂಧಿ ೧೯೫೮ ಧರ್ಮ ಮತ್ತು ನೀತಿ
ರೇಣುಕಾರಾಧ್ಯ ಪುಟ ೨೩/೨೪
ಗಾಂಧಿಯ ಸವಾಲು ಪುಟ ೬೩

ಕೈದೀವಿಗೆ

ಕೈದೀವಿಗೆಯ ಬೆಳಕು ಸೀಮಿತ. ಅದು ಜಗತ್ತಿಗೆ ಬೆಳಕು ಕೊಡಲಾರದು.

ಕೈದೀವಿಗೆಯೆಂದರೆ ಕೈಯಲ್ಲಿ ಹಿಡಿದುಕೊಂಡು ಹೋಗುವ ಬೆಳಕಿನ ವ್ಯವಸ್ಥೆ, ದೀವಟಿಗೆ, ಪಂಜು. ಇದಕ್ಕೆ ಕಿರುದೀಪವೆಂದೂ ಕರೆಯುತ್ತಾರೆ.

ಕೈನೀರಿನ ಧಾರೆ

ಪಾಣಿಗ್ರಹಣವೆಂದರೆ –ಕೈಹಿಡಿಯುವುದು ಎಂದರ್ಥವಾದರೂ ಇದಕ್ಕೆ ಬೇರೆ ಅರ್ಥ ಬರುತ್ತದೆ. ತುಳುವಿನಲ್ಲಿ ಕೈ ಹಿಡಿಯುವುದನ್ನು ಕೈಪತ್ತುನೆಯೆಂದು ಒಂದು ಸಂಪ್ರದಾಯವಿದೆ. ಗಂಡಸು ಎರಡನೆಯ ಮದುವೆಯಾದರೆ ಆ ಮದುವೆಗೆ 'ಕೈಪತ್ತುನ ಮದ್ಮೆ' ಎಂದು ಕರೆಯುತ್ತಾರೆ. ಇದರಲ್ಲಿ ಕೈಧಾರೆಯೆರೆಯುವುದು ಮುಂತಾದ ಸಂಪ್ರದಾಯಗಳು ಇರುವುದಿಲ್ಲ. ವೈದಿಕ ಸಂಪ್ರದಾಯದಲ್ಲಿ ಬೊಗಸೆಯಲ್ಲಿ ಅಕ್ಕಿಯನ್ನು ಹಿಡಿದುಕೊಂಡು ವಧುವು ಕುಳಿತಿರಬೇಕು. ಕೆಳಗೆ ಹರಿವಾಣವಿರುತ್ತದೆ. ಅವಳ ಬೊಗಸೆಯ ಮೇಲೆ ವರನೂ ಬೊಗಸೆಯಲ್ಲಿ ಅಕ್ಕಿಯನ್ನು ಹಿಡಿದುಕೊಂಡು ಕುಳಿತಿರಬೇಕು. ಅನಂತರ ಅವರ ಕೈಗಳಿಗೆ ಕೊಂಬುಗಿಂಡಿಯಲ್ಲಿ ಮಂತ್ರೋಚ್ಚಾರಣೆಯ ನೀರು ಬಿಡಲಾಗುತ್ತದೆ. ಇದು ಒಂದು ಆಚರಣೆ. ಎರಡನೆಯದಾಗಿ ಹೋಮಕ್ಕೆ ವರನ ಕಿರುಬೆರಳನ್ನು ಹಿಡಿದುಕೊಂಡು ವಧುವು ಮೂರು ಸುತ್ತು ಬರುತ್ತಾಳೆ. ಇದನ್ನು ಪಾಣಿಗ್ರಹಣವೆಂದು ಕರೆಯುತ್ತಾರೆ. ಕೈ ನೀರು ಎನ್ನುವುದು ದ.ಕ.ದ ಹವ್ಯಕ ಕನ್ನಡದಲ್ಲಿ ಬಳಕೆಯಿದೆ.ಊಟಕ್ಕೆ ಕುಳಿತಾಗ ಮೊದಲು ಬ್ರಾಹ್ಮಣರ ಅತಿಥಿಗಳಿಗೆ ಗೃಹಸ್ಥನು ನೀಡುತ್ತಾನೆ. ಅತಿಥಿಗಳು ಕೈನೀರನ್ನು ಸ್ವೀಕರಿಸಿ ಅನಂತರ ಊಟವನ್ನು ಶುರು ಮಾಡುತ್ತಾರೆ. ಇದಕ್ಕೆ ಹಸ್ತೋದಕವೆಂದೇ ಕರೆಯುತ್ತಾರೆ.

ಕೊಡಗೂಸು

""ಕೂಸು' ಎಂಬ ಶಬ್ದಕ್ಕೆ ಮೊದಲು 'ಹೆಣ್ಣು' ಎಂಬ ಅರ್ಥವಿತ್ತು. ಈಗ ಅದಕ್ಕೆ ಮಗು ಎಂಬ ಅರ್ಥ ಕನ್ನಡದಲ್ಲಿ ಬಂದಿದೆ" ಎಂದು ಪಾಣಿನಿಯವರು ಅಭಿಪ್ರಾಯ ಪಡುತ್ತಾರೆ ಮತ್ತು ಪಂಪನ ಆದಿಪುರಾಣದಲ್ಲಿ 'ಕೊಳದ ದೂರ್ವಾಂಕುರಂ' ಎಂಬ ಪ್ರಯೋಗವೊಂದು ದೊರೆಯುತ್ತದೆ. ಇಲ್ಲಿ 'ಕೊಳದ' ಎಂಬುದಕ್ಕೆ ಎಳೆಯ, ಹೊಸ, ಮೃದು ಎಂಬ ಅರ್ಥವೆಂದು ಡಿ.ಎಲ್. ನರಸಿಂಹಾಚಾರ್ಯರು ಹೇಳಿದ್ದಾರೆ. ಇದೂ ಸರಿ. 'ಎಳೆಯ ಗರಿಕೆ' ಎಂದು ಅದಕ್ಕೆ ಅರ್ಥ. ಈ ಎಂಬ ಮಾತೇ ಮುಂದೆ 'ಕೊಡ' ಎಂದಾಯಿತು. ಅದಕ್ಕೆ ಎಳೆಯ, ಯಂಗ್ [Young] 'ಟೆಂಡರ್' ಎಂಬ ಅರ್ಥ. ಕೊಡಗೂಸು ಎಂದರೆ ಎಳೆಯ ಹೆಣ್ಣು ಕನ್ಯೆ ಎಂಬ ಅರ್ಥ (ಅದೇ).

ಭಾರತೀಯ ಪರಂಪರೆಯಲ್ಲಿ ಮದುವೆಯ ಪೂರ್ವದ ಹೆಣ್ಣಿನ ಅವಸ್ಥೆಗಳನ್ನು ಈ ಕೆಳಗಿನಂತೆ ವಿಭಾಗ ಮಾಡಲಾಗಿದೆ:

1. ಗೌರಿ – ಏಳು ವರ್ಷ'.
2. ನಗ್ನಿಕಾ – ಹತ್ತು ವರ್ಷ.
3. ಕನ್ನಿಕಾ – ಹನ್ನೆರಡು ವರ್ಷ.

ಇನ್ನೂ ಮದುವೆಯಾಗದ, ಆದರೆ ಮದುವೆಗೆ ಒದಗಿಬಂದಿರುವ ಎಳೆಯಳನ್ನು ಕನ್ನಡ ಕಾವ್ಯಗಳು ಕೊಡಗೂಸು, ಕೊಡಗೂಸು ಎಂದು ಕರೆದಿವೆ.

ವಿವರಗಳಿಗೆ ನೋಡಿ: ಸಂತೋಷ (ಮಾಸಪತ್ರಿಕೆ) ಸಂಪುಟ–1 ಸಂಚಿಕೆ–5, ಮೇ. 1981 ಪುಟ. 35

Arora; Rajkumar 1972 Historical & Cultural Data From Bhavisya Purana P. 121.

ಕೊನ್ತ

ಇದು ಕತ್ತಿಯಂತಹುದೇ ಒಂದು ಆಯುಧವಿರಬೇಕು. ವೀರನು ಒಂದು ಕೈಯಲ್ಲಿ ಗುರಾಣಿಯನ್ನು ಮತ್ತೊಂದು ಕೈಯಲ್ಲಿ ಗುರಾಣಿಯನ್ನು ಮತ್ತೊಂದು ಕೈಯಲ್ಲಿ ಕೊಂತವನ್ನು ಹಿಡಿದು ಹೋರಾಡಿದ ವರ್ಣನೆ ಬರುತ್ತದೆ.

ಕೋರ್ಟು

ಭಾರತದಲ್ಲಿ ಕೋರ್ಟಿನ ಚರಿತ್ರೆಯು ಕುತೂಹಲಕಾರಿಯಾಗಿದೆ. ೧೭೯೩ರಲ್ಲಿ ಬ್ರಿಟೀಷರು (ಕಾರ್ನ್‌ವಾಲೀಸನ ಸಮಯ) ರೂಪಿಸಿದ ಪ್ರಮುಖ ಕಾಯಿದೆಗಳು ಹೀಗಿವೆ: ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೋರ್ಟು ಪ್ರಾರಂಭವಾಗಬೇಕು ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡಿಕೊಳ್ಳುವಂತಿರಬೇಕು.

ಜಿಲ್ಲಾನ್ಯಾಯಾಧೀಶರಾಗಿ ಬ್ರಿಟೀಷರಿದ್ದರೂ ಅದಕ್ಕಿಂತ ಕೆಳಗಿನ ಉದ್ಯೋಗಗಳಿಗೆ ಭಾರತೀಯರನ್ನು ನೇಮಕಮಾಡಬಹುದು. ಜಮೀನಿಗೆ ಭೂ ಕಂದಾಯ ನಿಗದಿಪಡಿಸಬೇಕು. ನ್ಯಾಯಾಲಯವು ಬ್ರಿಟಿಷ್ ನ್ಯಾಯಾಲಯದ ಮಾದರಿಯನ್ನು: ಅಲ್ಲಿನ ನಿಯಮ ಸಂಹಿತೆಯನ್ನು ಒಳಕೊಂಡಿರಬೇಕು. ಕಂದಾಯ ಇಲಾಖೆ ಹಾಗೂ ನ್ಯಾಯಾಲಯ ಕೆಲಸ ಕಾರ್ಯಗಳು ಭಿನ್ನವಾಗಿರಬೇಕು. ಜಮೀನಿಗೆ ಸಂಬಂಧಿಸಿದ ತಕರಾರುಗಳಿದ್ದಲ್ಲಿ ಅದು ಸಿವಿಲ್ ಕೋರ್ಟಿನಲ್ಲಿ ಇತ್ಯರ್ಥವಾಗಬೇಕು.

ಕೋಲರು

ದುರ್ಗಾಸಪ್ತಶತಿಯಲ್ಲಿ **ಕೋಲರ** ಉಲ್ಲೇಖವೂ ಬರುವುದು. ಕೋಲರು, ಮುಂಡರು, ಚಂಡರು ಕಂನಾಡಿನ ಆದಿವಾಸಿಗಳು. ಅವರ ಹೆಸರಿನ ಕುರುಹುಗಳು ಸಾವಿರಾರು ವರುಷಗಳಿಂದ ಉಳಿದು ಬಂದಿರುವುದು ಕೌತುಕ ಮತ್ತು ಆಶ್ಚರ್ಯವನ್ನುಂಟುಮಾಡುವುದು. ಕರ್ನಾಟಕದ ಮೂಲ ಜನಾಂಗಗಳಲ್ಲಿ ಕೋಲರದೂ ಒಂದು. ಹೀಗಾಗಿ ಕೋಲರ ಕೊಡುಗೆಯು ಸಾಂಸ್ಕೃತಿಕವಾಗಿ ಮಹತ್ವದ್ದು. ತುಳುವಿನಲ್ಲಿ ಭೂತಕೋಲವೆಂಬ ಪ್ರಯೋಗವಿರುವುದು ಗಮನಾರ್ಹ.

ವಿವರಗಳಿಗೆ ನೋಡಿ: ಶಂಬಾ ಜೋಶಿ ೧೯೯೯ ಸಂಪುಟ. ೨ ಪುಟ. ೧೭೨.

ಕೋಶಾಧ್ಯಕ್ಷ

ಕೋಶಾಧ್ಯಕ್ಷನಿಗೆ ರಾಜ್ಯ ವ್ಯವಸ್ಥೆಯಲ್ಲಿ ಪ್ರಧಾನ ಪಾತ್ರವಿದೆ. ಅವನಿಗೆ ದುರಾಸೆಯಿರಬಾರದು. ಸಮಾಧಾನವನ್ನು ಹೊಂದಿರಬೇಕು. ರಾಗ ದ್ವೇಷಗಳನ್ನು ಹೊಂದಿರಬಾರದು. ರಾಷ್ಟ್ರದಲ್ಲಿ ಗಣಕನೆಂದು ಬುದ್ಧಿವಂತನಾದವನನ್ನು ರಾಜನು ನೇಮಿಸಬೇಕು. ಎಂದು ಮಾನಸೋಲ್ಲಾಸದಲ್ಲಿ ಬರುತ್ತದೆ.

ವಿವರಗಳಿಗೆ ನೋಡಿ: ೨-೧೨೪

ಕೋಷ್ಠಾಗಾರ

ಕೋಷ್ಠಾಗಾರದ ಕರಣಗಳೆಂದರೆ ಕೋಷ್ಠಾಗಾರದ ಕೆಲಸವೆಂದು ಅರ್ಥ. ಅರಸನ ಕೋಷ್ಠಾಗಾರ (ಕಣಜಗಳ ಕೊಠಡಿ) ಕಾಪಿನವನನ್ನು(ಕಾವಲುಗಾರನನ್ನು) ವಂಚಿಸಿ ಕಳ್ಳನೊಬ್ಬ ಕದ್ದು ತೆಗೆದುಕೊಡುವ ಚಿತ್ರಣವು ಸಿಗುತ್ತವೆ. ಇದು "ಕೋಷ್ಠಾಗಾರದ ಕಾವಲುಗಾರ" ಮತ್ತು "ಕಣಜದಲ್ಲಿರುವುದನ್ನು" ಕದಿಯುವುದನ್ನು ಚಿತ್ರಿಸುತ್ತದೆ.

ಕೋಷ್ಠವೆಂದರೆ ಒಳಹೊಟ್ಟೆ; ಒಳಕೊಠಡಿ; ಕಣಜ, ಸುತ್ತುಗೋಡೆ, ಪೀಠವೆಂಬ ಅರ್ಥಗಳಿವೆ. ಕಣಜಗಳನ್ನು ತುಂಬಿಟ್ಟುಕೊಂಡು ಅಗತ್ಯಬಿದ್ದ ಸಂದರ್ಭದಲ್ಲಿ (ಬರಗಾಲ ಇತ್ಯಾದಿ) ಅದರಿಂದ ಧಾನ್ಯವನ್ನು ತೆಗೆಯುತ್ತಿದ್ದರು.

ಉಗ್ರಾಣದ ಅಧ್ಯಕ್ಷನು 1) ಸೀತಾ, 2) ರಾಷ್ಟ್ರ, 3) ಕ್ರಯಿಮ, 4) ಪರಿವರ್ತಕ 5) ಪ್ರಾಮಿತ್ಯಕ, 6) ಆಪಮಿತ್ಯಕ, 7) ಸಿಂಹನಿಕಾ, 8) ಅನ್ಯಜಾತ, 9) ವ್ಯಯಪ್ರತ್ಯಾಯ ಮತ್ತು 10) ಉಪಸ್ಥಾನಗಳೆಂಬ ಹತ್ತು ಭಾಗಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳಬೇಕು.

ವ್ಯವಸಾಯದ ಮುಖ್ಯಾಧಿಕಾರಿಯು ತಂದೊಪ್ಪಿಸಿದ ಧಾನ್ಯಜಾತಿಯು 1) ಸೀತಾ, ಹುಳುಕೂ, ಜಳ್ಳೂ ಇರದ ಧಾನ್ಯಗಳನ್ನು ಅಳತೆ ಕಡಿಮೆಯಿಲ್ಲದಂತೆ ಅವನು ಸ್ವೀಕರಿಸಬೇಕು. 2) ರಾಷ್ಟ್ರವು ಹತ್ತು ವಿಧ. ಕ್ಲಪ್ತವಾಗಿ ಗ್ರಾಮಗಳು ಸಲ್ಲಿಸುವ ಸುಂಕವು 1) ಪಿಂಡಕರ. ಆರನೆಯ ಒಂದು ಭಾಗ ಇಲ್ಲವೇ ನಾಲ್ಕನೆಯ ಒಂದುಭಾಗದ ರೂಪದಲ್ಲಿ ಬಂದ ರಾಜಭಾಗವು 2) ಷಡ್ಭಾಗ, ಸೇನೆಯು ಬೀಡುಬಿಟ್ಟಿರುವಾಗ ಈ ಪ್ರದೇಶದ ಜನರು ಅವುಗಳಿಗಾಗಿ ಸಲ್ಲಿಸುವ ಅಕ್ಕಿ, ಉಪ್ಪು ಮುಂತಾದ ರಾಜಭಾಗವು 3) ಸೇನಾ ಭಕ್ತ. ಷಡ್ಭಾಗಾತಿರಿಕ್ತವಾದ, ದೇಶಾನುಗುಣವಾಗಿ ಪ್ರತ್ಯರ್ಪಿಸುವ ಹತ್ತನೆಯ ಒಂದು ಭಾಗ ಇಲ್ಲವೇ ಇಪ್ಪತ್ತನೆಯ ಒಂದು ಭಾಗವು. 4) ಬಲಿ, ಫಲವೃಕ್ಷಗಳಿಗಾಗಿ ಕೊಡುವ ರಾಜಭಾಗವು 5) ಕರ. ರಾಜನಿಗೆ ಪುತ್ರಜನ್ಮವೇ ಮುಂತಾದ ಸಂತೋಷ ಕಾಲಗಳಲ್ಲಿ ಪೌರ ಜಾನಪದರಿತ್ತ ಹಣವು 6) ಉತ್ಸಂಗ. ನ್ಯಾಯವಾದ ಸುಂಕಕ್ಕಿಂತ ಹೆಚ್ಚು ಸುಂಕವನ್ನು ಎತ್ತುವುದು 6) ಪಾರ್ಶ್ವ, ನಾಲ್ಕು ಕಾಲಿನ ಪ್ರಾಣಿಗಳು ನಾಶಗೊಳಿಸಿದ ಸಸ್ಯಗಳಿಗಾಗಿ ಕೊಟ್ಟ ಹಣವು 8) ಪಾರಿಹೀಣಕ. ಕಾಣಿಕೆಯು 9) ಔಪಾಯನಿಕ.

ರಾಜನು ಕಟ್ಟಿದ ಕೆರೆ, ಅಣೆಕಟ್ಟು ಮುಂತಾದವುಗಳಿಂದ ಬಂದ ಸುಂಕವು 10. ಕೌಷ್ಠೇಯಕ–ಈ ಹತ್ತನ್ನು ರಾಷ್ಟ್ರವೆನ್ನುವರು. ಧಾನ್ಯ ವಿಕ್ರಯದಿಂದ ಬಂದ ಹಣವೂ, ಕೊಂಡ ಮಾಲೂ, ವೃದ್ಧಿ ಪ್ರಯುಕ್ತವಾಗಿ ಕೈಸೇರಿದ ಧಾನ್ಯವೂ 3) ಕ್ರಯಿಮ.

ಧಾನ್ಯಗಳನ್ನು ಭಿನ್ನ ಬೆಲೆಯಿಂದ ವಿನಿಮಯ ಮಾಡಿಕೊಳ್ಳುವುದು 4) ಪರಿವರ್ತಕ. ಪುನಃ ಹಿಂತಿರುಗಿಸಲು ಸಾಧ್ಯವಿಲ್ಲವೆಂದು ನುಡಿದು ಮಿತ್ರರಲ್ಲಿ ಧಾನ್ಯಗಳನ್ನು ಬೇಡುವುದು 5) ಪಾಮಿತ್ಯಕ.

ಸಮೃದ್ಧಿಕವಾಗಿ ಕೊಡುವೆನೆಂದು ಧಾನ್ಯಗಳನ್ನು ಪಡೆಯುವುದು 6) ಆಪಮಿತ್ಯಕ. ಕುಟ್ಟುವುದು, ಬೇಳೆಗಳನ್ನೊಡೆಯುವುದು, ಹಿಟ್ಟು ಮಾಡುವುದು, ಕಬ್ಬನ್ನು ಗಾಣ ಆಡುವುದು, ಅರೆಯುವುದು ಮುಂತಾದ ಕಾರ್ಯಗಳಲ್ಲಿ ತೊಡಗಿರುವ ಜನರಿಂದ ಎತ್ತಲ್ಪಡುವ ಸುಂಕವೂ, ಎಣ್ಣೆ ತೆಗೆಯುವುದು, ಆಡು, ಕುರಿಗಳ ಪ್ರಾಣಿಗಳನ್ನು ಯಜ್ಞದಲ್ಲಿ ತೆಗೆಯುವುದೂ ಮುಂತಾದ ಕಸುಬುಗಳಲ್ಲಿ ನಿರತರಾದವರಿಂದ ತೆಗೆದುಕೊಳ್ಳಲ್ಪಡುವ ಸುಂಕವೂ 7) ಸಿಂಹನಿಕಾ. ಮತ್ತೊಬ್ಬರಿಂದ ಕಳೆದುಕೊಳ್ಳಲ್ಪಟ್ಟು ಇಲ್ಲವೇ ಮರೆಯಲ್ಪಟ್ಟು ರಾಜನ ಕೈಸೇರಿದ ಹಣವು 8) ಅನ್ಯಜಾತ. ಕಾರ್ಯವೊಂದನ್ನು ಸಾಧಿಸಲು ಕಳುಹಿಸಲಾದ ಸೈನ್ಯದ ಖರ್ಚಿಗಾಗಿ ಉಳಿದ ಹಣವೂ, ಔಷಧಶಾಲೆಗಳಿಗೋಸ್ಕರ ಖರ್ಚುಗುಳಿದ ಹಣವೂ, ದುರ್ಗಪ್ರಾಸಾದಿಗಳ ವೆಚ್ಚಕ್ಕಾಗುಳಿದ ಹಣವೂ 9) ವ್ಯಯಪ್ರತ್ಯಾಯ. ಹೆಚ್ಚಿನ ತೂಕ ಅಳತೆಗಳಿಂದ ಸರಕುಗಳನ್ನು ಪಡೆದು ಕಡಿಮೆ ಅಳತೆ ತೂಕಗಳಿಂದ ಮಾಲುಗಳನ್ನು ಮಾರುವುದು, ಅಳತೆಯ ಪಾತ್ರೆಗಳಲ್ಲಿ ಧಾನ್ಯಾದಿಗಳನ್ನು ಅದುಮಿ ತುಂಬುವುದು. ಅಳತೆಯ ಪಾತ್ರೆಯ ಮೇಲಿರುವ ಧಾನ್ಯಗಳನ್ನು ಕೈಗಳಿಂದ ಹಿಡಿದುಕೊಳ್ಳುವುದು, ಧಾನ್ಯರಾಶಿ, ಎಣಿಕೆಗೂ, ಅಳತೆಗೂ ಅರ್ಹವೆನಿಸಿದ ಮಾಲುಗಳನ್ನಿಟ್ಟಿರುವುದು, ಪುನಃ ಅಳತೆ ಮಾಡಿದರೆ ಕಡಿಮೆ ಬೀಳದಿರುವುದಕ್ಕಾಗಿ ಪಡೆದ ಹದಿನಾರನೆ ಒಂದು ಭಾಗ ಧಾನ್ಯ, ಕಳೆದವರ್ಷದ ಶಿಲ್ಕು ಮತ್ತು ತನ್ನ ನೈಪುಣ್ಯದಿಂದ ಗಳಿಸಿದ ಪುಷ್ಪ ತಾಂಬೂಲಾದಿಗಳು 10) ಉಪಸ್ಥಾನ. ಕಸ ಗುಡಿಸುವವನು(ಮಾರ್ಜಕ), ಉಗ್ರಾಣವನ್ನು ನೋಡಿಕೊಳ್ಳುವವನು(ಆರಕ್ಷಕ), ತೂಕಮಾಡುವವನು(ಧಾರಕ), ಅಳತೆ ಮಾಡುವವನು(ಮಾಯಕ), ಅಳೆಯುವವರ ಮೇಲಿನ ಅಧಿಕಾರಿ (ಮಾಪಕ), ಕೊಡುವವನು (ದಾಯಕ), ಕೊಡಿಸುವವನು(ದಾಪಕ) ಭಾರವಾದ ದೊಣ್ಣೆಗಳನ್ನು ಹೊರುವವನು ದಾಸ, ಸೇವಕ–ಇವರು ವಿಷ್ಟಿ ಎನ್ನಲ್ಪಡುವರು.

ವಿವರಗಳಿಗೆ ನೋಡಿ: ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು 2010 ಕೌಟಿಲೀಯ ಅರ್ಥಶಾಸ್ತ್ರ

ಕೌಳಿಕ

ಕೌಳಿಕನಾದ ಮಾಡ ಎಂದರೆ ಕುಲಸಂಬಂಧವಾದ ಎಂದು ಭಾವಾರ್ಥ. ಕೌಳಿಕರು ಎಂದರೆ ಸೋಗುಗಾರರು ಎಂದೂ ಅರ್ಥವಿದೆ.

ಕ್ರೀಡೆ

'ಕ್ರೀಡೆ' ಎನ್ನುವುದಕ್ಕೆ ಅಮರಕೋಶದಲ್ಲಿ ಹೀಗೆ ಹೇಳಲಾಗಿದೆ: 'ದ್ರವ, ಕೇಲಿ, ಪರೀಹಾಸ, ಕ್ರೀಡಾ, ಲೀಲಾ, ನರ್ಮನ್ – ಕ್ರೀಡೆ, ವಿನೋದ ಮತ್ತು ಕ್ರೀಡಾ ಖೇಲಾ, ಕೂರ್ದನ – ಆಟ (ರಂಗನಾಥ ಶರ್ಮಾ. ಎನ್., 1975. ಪು. 48–49). ಈ ಅರ್ಥದಲ್ಲಿ 'ಕ್ರೀಡೆಯೆಂದರೆ, ವಿನೋದವನ್ನು ಉಂಟುಮಾಡುವಂತಹುದು ಎಂದು ಗ್ರಹಿಸಬಹುದು. 'ಕ್ರೀಡೆ'ಯು ಮನೋಲ್ಲಾಸವನ್ನು ಉಂಟು ಮಾಡುತ್ತದೆ.

ಇಲ್ಲಿ ವನಕ್ರೀಡೆಯೂ, ಜಲಕ್ರೀಡೆಯೂ ಮುಖ್ಯವಾದುದು. ಅಂತಃಪುರದ ಸ್ತ್ರೀಯರಿಗೆ ಉಂಟಾದ ಜಡತ್ವವನ್ನು ನೀಗಿಸುವುದಕ್ಕೆ ಈ ವನಕ್ರೀಡೆ, ಜಲಕ್ರೀಡೆಗಳು ರೂಪುಗೊಂಡಿರುವುದನ್ನು ಕಾವ್ಯಗಳು ತಿಳಿಸುತ್ತವೆ. ವನಕ್ರೀಡೆಯ ಉಪವಿಭಾಗವಾಗಿ ಪುಷ್ಪಾಚಯ ಕ್ರೀಡೆ [ಪುಷ್ಪಾಚಯ ಎಂದರೆ Gathering or collecting of flowers ಎಂದು ಕಿಟ್ಟೆಲ್ ಹೇಳಿದ್ದಾರೆ (ಮರಿಯಪ್ಪಭಟ್, 1975, ಕಿಟ್ಟೆಲ್ ಕೋಶ Vol III. P. 1059)]ಯು ಬರುತ್ತದೆ. ಪುಷ್ಪಾಚಯದ ಕ್ರೀಡೆಯು ಚೇಷ್ಟೆಯ ರೂಪದಲ್ಲಿಯೂ ವ್ಯಕ್ತವಾಗುವುದರಿಂದ, ಉಪವನದ ಕ್ರೀಡೆಯು ಅಂತಃಪುರದ ಸ್ತ್ರೀಯರಿಗೆ ಹೊರಗಿನ ಪ್ರಪಂಚದ ಅರಿವೇ ಇರುವ ಸಾಧ್ಯತೆಯು ಇಲ್ಲದ್ದರಿಂದ ಪುಷ್ಪಾಪಚಯವೂ ಒಂದು ಕ್ರೀಡೆಯಾಗುತ್ತದೆ ಮತ್ತು ಈ ಕ್ರೀಡೆಯು ಮೇಲುವರ್ಗದ ಸ್ತ್ರೀಯರ ಅಭಿವ್ಯಕ್ತಿಯೂ ಆಗುತ್ತದೆ. ಜಲ ಕ್ರೀಡೆಯಲ್ಲಿ ಇರುವ ಭಿನ್ನ ವಿಧಗಳನ್ನು ಪಂಪನು ಈ ರೀತಿಯಾಗಿ ಹೆಸರಿಸುತ್ತಾನೆ:. ವಿದೇಶಿ ಪ್ರವಾಸಿಗರು ಕೋಲಾಟವನ್ನು ಕುರಿತು ಹೇಳಿದ್ದನ್ನು ಡಾ. ಶಿವಾನಂದ ವಿರಕ್ತಮಠ ಅವರು ಗುರುತಿಸುತ್ತಾರೆ (ಶಿವಾನಂದ ವಿರಕ್ತಮಠ, 1978. ಪು. 62): "ಸಮವಯಸ್ಕರಾದ ಸ್ತ್ರೀ ಪುರುಷರು ಒಂದೇ ಆಕಾರದ ಪೋಷಾಕು ಧರಿಸಿ ಸಮೂಹಗಾನ ಹಾಡುತ್ತ ಕೋಲಾಟವನ್ನಾಡುತ್ತಿದ್ದರೆಂದೂ, ಆ ಕಾಲಕ್ಕೆ ಮೃದಂಗ ಹಾಗೂ ನಾನಾ ಪ್ರಕಾರದ ವಾದ್ಯ ವಿಶೇಷವನ್ನು ಬಳಸುತ್ತಿದ್ದರೆಂದೂ 'ಪೈಟ್ರೋಡೆಲ್ಲ್ ವೆಲ್ಲಿ (Pietrodella Valle) ಎಂಬ ಪ್ರವಾಸಿ ಇಕ್ಕೇರಿಯಲ್ಲಿ ತಾನು ಕಂಡ ಕೋಲಾಟವನ್ನು ವರ್ಣಿಸುತ್ತಾನೆ" ಇದರಿಂದ ಸ್ತ್ರೀಯರ ಕೋಲಾಟದ ಬಗೆಗೆ ಐತಿಹಾಸಿಕವಾಗಿಯೂ ದಾಖಲೆ ಸಿಕ್ಕಿದಂತಾಗಿದೆ.

ವಿವರಗಳಿಗೆ ನೋಡಿ: ಅರವಿಂದ ಮಾಲಗತ್ತಿ ೧೯೮೫ ಜಾನಪದ ಕ್ರೀಡೆಗಳು ಪುಟ. ೬೫
ಡಾ. ಶಿವಾನಂದ ವಿರಕ್ತಮಠ ೧೯೭೮ ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ ಪುಟ. ೬೨
ಡಿ. ಎಲ್. ನರಸಿಂಹಾಚಾರ್ ೧೯೭೧ ಪಂಪಭಾರತ ದೀಪಿಕೆ ಪುಟ. ೧೬೯

ಕ್ಷತ್ರಿಯ

ಬೌದ್ಧಮತದ ಬಹುತೇಕ ಕೃತಿಗಳು ಕ್ಷತ್ರಿಯರಿಗೆ ಬ್ರಾಹ್ಮಣರಿಗಿಂತ ಹೆಚ್ಚಿನ ಮಹತ್ತ್ವವನ್ನು ಕೊಟ್ಟಿವೆ. ಬುಡಕಟ್ಟು ಜನರ ಗುರಿಕಾರ ಮತ್ತು ಜಮೀನುದಾರನಿಗಿಂತಲೂ ಕ್ಷತ್ರಿಯನಿಗೆ ಹೆಚ್ಚಿನ ಪ್ರಾಶಸ್ತ್ಯವಿತ್ತು.

ವಿವರಗಳಿಗೆ ನೋಡಿ: Romila Thapar 1975 P.34

ಕ್ಷೇತ್ರ

ಹೆಂಡತಿಯನ್ನು ಕ್ಷೇತ್ರವೆಂದೂ, ಗಂಡಸನ್ನು ಬೀಜವೆಂದು ಕರೆಯುವುದು ರೂಢಿಯಲ್ಲಿ ಬಂದಿದೆ. ಕ್ಷೇತ್ರವೆಂದರೆ ಭೂಮಿಯೂ ಹೌದು. ಉಳುಮೆ ಮತ್ತು ಕ್ಷೇತ್ರ, ಕ್ಷೇತ್ರ ಮತ್ತು ಬೀಜ ಬಿತ್ತನೆ ಇವುಗಳಿರುವ ಸಾಂಕೇತಿಕ ಅರ್ಥಗಳು ಮುಖ್ಯವಾದವು. ವೈಶೇಷಿಕ ಪ್ರಕಾರ ಕ್ಷೇತ್ರವೆಂದರೆ ಆತ್ಮನ ಏಳುಗುಣಗಳು. ಇಚ್ಛೆ, ದ್ವೇಷ, ಸುಖ, ದುಃಖ, ಸಂಘಾತ, ಚೇತನ, ಧೃತಿ, ಇಲ್ಲಿ ಕ್ಷೇತ್ರವನ್ನು ಸ್ತ್ರೀಗೆ ಹೋಲಿಸಿರುವುದು ಮುಖ್ಯವಾಗಿದೆ.

ಖಂಡುಗ

ಖಂಡುಗ – ಅಳತೆಯ ಮಾಪನಗಳಲ್ಲಿ ಒಂದು. ಈಚಿನವರೆಗೂ 'ಖಂಡುಗ' ಎಂಬ ಅಳತೆಯ ಮಾಪನದ ಸಂದರ್ಭದಲ್ಲಿ 'ಖಂಡ' ಎಂದು ಪರಿವರ್ತನೆಯಾಗಿದೆ. 'ಹತ್ತು ಖಂಡಿ ಅಡಿಕೆ', 'ಇಪ್ಪತ್ತು ಖಂಡಿ' ಎಂದು ತೂಗುವ ಕ್ರಮವಿದೆ. ಮೂಸಾಸಿರ ಖಂಡುಗವೆಂಬುವುದು ಸಮಾಸವಾಗಿದೆ.

ಬಕಾಸುರನು ಹನ್ನೆರಡು ಖಂಡುಗದ ಅನ್ನ ತಿನ್ನುತ್ತಿದ್ದ ಎಂಬ ವಿವರವುಭಾರತದಲ್ಲಿ ಬರುತ್ತದೆ. ಪಾವು; ಸೇರು; ಕುಡ್ತೆ; ಖಂಡುಗಗಳು ಅಳತೆಯ ಮಾಪನಗಳು. ಧಾನ್ಯಗಳ ಅಳತೆಯ ಕೋಷ್ಟಕವು ಈ ರೀತಿಯಲ್ಲಿದೆ. 1 ಖಂಡುಗ – 4 ಪಂಚಕ, 1 ಪಂಚಕ – 5 ಕೊಳಗ, 1 ಕೊಳಗ – 4 ಬಳ್ಳ, 1 ಬಳ್ಳ – 4 ಮಾನ, 1 ಮಾನ – 4 ಸೊಲ್ಲಿಗೆ, 1 ಸೊಲ್ಲಿಗೆ – 4 ಗಿದ್ದಿಗೆ

ಖಂಡಿ, ಮಣ,ಸೇರು,ಪಾವು,ಕುಡ್ತೆ –ಇವುಗಳು ಕೆಲವೆಡೆ ಈಗಲೂ ಚಾಲ್ತಿಯಲ್ಲದೆ.

ವಿವರಗಳಿಗೆ ನೋಡಿ: ಹಾ. ಮಾ. ನಾಯಕ 1972 ಕನ್ನಡ ವಿಶ್ವಕೋಶ ಸಂಪುಟ. 7 ಪುಟ. 670

ಖಾಂಡವವನ ದಹನ

ಇದೆಲ್ಲಾ ನಂತರದ ವಿಷಯ. ಮತ್ತೆ ಯಜುರ್ವೇದ ಕಾಲಕ್ಕೆ ಬಂದರೆ, ಕಾಡುಗಳನ್ನು ಸುಟ್ಟು ಕೃಷಿಯೋಗ್ಯವಾಗಿಸಿಕೊಂಡ ವಿಧಾನವನ್ನು ಕುರಿತು ಶತಪಥ

ಬ್ರಾಹ್ಮಣದಲ್ಲಿ ಹಲವು ವಿವರಗಳು ದೊರಕುತ್ತವೆ. ಮಾಧವನೆಂಬ ವಿದೇಹದ ರಾಜನೂ, ರಘು ಸಮುದಾಯದ ಗೌತಮ ಗೋತ್ರಕನಾದ ಬ್ರಾಹ್ಮಣನೂ ತನ್ನ ಹಿಂದೆ ಹಿಂದೆಯೇ ಬರಲಾಗಿ ಅಗ್ನಿದೇವನು ಸರಸ್ವತೀ ನದಿಗೆ ಪೂರ್ವದಿಕ್ಕಿಗೆ ಇದ್ದ ಕಾಡನ್ನು ಸುಡುತ್ತಾ ಹೋದನೆಂದು ವರ್ಣಿತವಾಗಿದೆ. ಸದಾನೀರು ಎಂಬ ನದಿಯ ಪೂರ್ವ ದಿಕ್ಕಿನ ಭೂಭಾಗ ಹಿಂದಕ್ಕೆ ಬಹಳ ತೇವದಿಂದ ಕೂಡಿದ ಅಡವಿಗಳಿಂದ ತುಂಬಿತ್ತಂತೆ. ಏಕೆಂದರೆ ಅಗ್ನಿ ಆಗಿನ್ನೂ ಅವುಗಳ ರುಚಿ ನೋಡಿರಲಿಲ್ಲವಂತೆ. ಆದರೆ ಈಗ ಬ್ರಾಹ್ಮಣರು ಕ್ರತುಗಳ ಮೂಲಕ ಆ ಕಾಡಿನ ರುಚಿಯನ್ನು ಅಗ್ನಿಗೆ ತೋರಿಸಿದರು. ಹಾಗಾಗಿ ಅದು ಕೃಷಿಯೋಗ್ಯವೆನಿಸಿತಂತೆ. ಇದಕ್ಕಿಂತಲೂ ಸ್ಪಷ್ಟ ವಿವರಣೆಗಳ ಅಗತ್ಯವಿಲ್ಲ. ಮಹಾಭಾರತದಲ್ಲಿ ಪಾಂಡವರು ಕೃಷ್ಣನ ನೆರವಿಂದ ಯಮುನಾ ನದೀ ತೀರದ ಖಾಂಡವ ವನವನ್ನು ಅಗ್ನಿಗೆ ಅರ್ಪಿಸಿ ತಮ್ಮ ರಾಜಧಾನಿಯಾದ ಇಂದ್ರಪ್ರಸ್ಥವನ್ನು ನಿರ್ಮಿಸಿಕೊಂಡ ಕಥೆ ಕೂಡ ಮೇಲಿನ ಚಾರಿತ್ರಿಕ ಪರಿಣಾಮವನ್ನು ಸೂಚಿಸುವಂತಹುದೇ ಆಗಿದೆ ಎನ್ನುತ್ತಾರೆ ಕೊಸಾಂಬಿ. ಋಗ್ವೇದದಲ್ಲಿ ಅಗ್ನಿಯನ್ನು ಕಾಡುಗಳನ್ನು ನುಂಗುವವನು, ಕೊಡಲಿ ಎಂಬ ನಾಮಾಂತರಗಳಿಂದ ಕರೆಯಲಾಗಿದೆ. (ಡಿ.ಡಿ.ಕೊಸಾಂಬಿ೧೯೯೮ ಪು.೯೫)

ಬನವೆಂಕೆಯೆಂದು ದಾವಾಗ್ನಿ (ಕರ್ನಾಟಕ ಶಬ್ದಸಾರಂ ಪುಟ ೫೦)

ಗಂಗಾನದಿ

'ಗಂಗಾ' ಅತ್ಯಂತ ಪವಿತ್ರ ಪ್ರಮುಖ ನದಿ ಎಂದು ಭಾರತೀಯರೆಲ್ಲರ ನೆರೆ ನಂಬುಗೆಯಾಗಿದೆ. 'ಗಂಗಾ' ಇದರ ಅರ್ಥವನ್ನು ಅರಿಯಲು ಮಾಡಿದ ಪ್ರಯತ್ನಗಳಿಗೆ ಸಮಾಧಾನಕರವಾದ ಉತ್ತರವು ಮಾತ್ರ ದೊರೆತ ಹಾಗಿಲ್ಲ. ಗಂ–ಗಾ ಹೀಗೆ ಇದರಲ್ಲಿ ಎರಡು ಪದಗಳಿರುವಂತೆ ತೋರುತ್ತದೆ. ಗಾ ಎಂದರೆ ಗಾಮಿನಿ (ನದಿ), ನದಿಗೆ ಆಪ–ಗಾ ಎಂದು ಹೇಳುವುದುಂಟು. ಗಮನಾರ್ಥಕ 'ಗಾ' ವನ್ನುಳಿದರೆ 'ಗಂ'(ಗಾ) ಇದು ಆಪ ಎಂಬರ್ಥದಲ್ಲಿ ಬಳಸಿರುವ ಪದವೆಂದು ಅನುಮಾನ ಹೊರಡುತ್ತದೆ. ಕಂ=ಆಪ ಈ ಸಮೀಕರಣದಂತೆ ಗಂ<ಕಂ ಇದು ಜಲಾರ್ಥಕ ಸಂಕೇತವಾಗುತ್ತದೆ.

ಗಂಗಾನದಿಗೆ ಭಾರತೀಯ ಸಂಸ್ಕೃತಿಯಲ್ಲಿ ವಿಶೇಷ ಮಹತ್ವವಿದೆ. ಗಂಗೆಯ ಸ್ನಾನವು ಪವಿತ್ರವೆಂದು ಹೇಳುತ್ತಾರೆ. ನದಿಯಸ್ನಾನ ಮತ್ತು ಪುಣ್ಯ ಸಂಪಾದನೆಗೆ ಇರುವ ಸಂಬಂಧವು ಅರ್ಥ ಪೂರ್ಣವಾಗಿದೆ.

ನೋಡಿ: ಶಂಬಾ ಜೋಶಿ 1999 ಹಾಲುಮತ ದರ್ಶನ ಸಂಪುಟ. 3, ಪುಟ. 163

ಗಗನಗಾಮಿನೀ ವಿದ್ಯೆ

ಗಗನಗಾಮಿನೀ ವಿದ್ಯೆಯೆಂದರೆ ಆಕಾಶ ಪಥದಲ್ಲಿ ಹಾರಿಹೋಗುವ ಅಥವಾ ಲಂಘಿಸುವ ವಿದ್ಯೆ. ಇದು ಸಾಮಾನ್ಯವಾಗಿ ಎಲ್ಲಾ ಆಗಮಿಕ ಕಾವ್ಯಗಳಲ್ಲಿ ಕಾಣಿಸಿಕೊಳ್ಳುತ್ತದೆ.

ಇದರಂತೆಯೇ ಪಯೋಧರ ವಿದ್ಯೆಯ ಪರಿಕಲ್ಪನೆ. ಆಕಾಶಗಾಮಿ ವಿದ್ಯೆಗಿಂತ ಇದು ಬೇರೆಯಾಗಿದೆ. ಅದು ಆಕಾಶಗಾಮಿನಿ. ಇದು ನೀರಿನ ಮೂಲಕ ಇಳಿಯುವ (ಗಮಿಸುವ) ವಿದ್ಯೆ. ಈ ಪರಿಕಲ್ಪನೆಯು ಜೈನ ಆಗಮಿಕ ಕಾವ್ಯಗಳಲ್ಲಿ ಕಾಣಿಸಿಕೊಳ್ಳುತ್ತವೆ. ಇವುಗಳು ಕಲ್ಪನೆಗಳು ಮಾತ್ರ. ಗಗನವೆಂದರೆ ಆಕಾಶ. ಗಮನವೆಂದರೆ ಚಲನೆ: "ಆಕಾಶಗಾಮಿ" "ಗಗನಗಾಮಿ" ಒಂದೇ ಅರ್ಥವನ್ನು ಕೊಡುತ್ತದೆ.

ಗಡಿಕಲ್ಲು

"ಹೆಸರೇ ಸೂಚಿಸುವಂತೆ ಊರಿನ ಸೀಮಾರೇಖೆಯನ್ನು ಗುರುತಿಸಲು ಹಾಕುವ ಕಲ್ಲುಗಳು ಗಡಿಕಲ್ಲುಗಳು. ಕೆಲವು ಗ್ರಾಮಗಳಲ್ಲಿ, ಮತ್ತು ಹೊಲಗದ್ದೆಗಳಲ್ಲಿ ನಾವು ಶಿವಲಿಂಗ, ಸೂರ್ಯ, ಮತ್ತು ಚಂದ್ರ, ಮತ್ತೆ ಕೆಲವೊಮ್ಮೆ ಬಸವನ ಶಿಲ್ಪ ಹೊಂದಿರುವ ಕಲ್ಲನ್ನೋ ಅಥವಾ ಕುಳ್ಳ ವ್ಯಕ್ತಿಯೊಬ್ಬ ಒಂದು ಕೈಯಲ್ಲಿ ಕಮಂಡಲವನ್ನೂ ಮತ್ತೊಂದು ಕೈಯಲ್ಲಿ ಛತ್ರಿಯನ್ನು ಹಿಡಿದು ನಿಂತಿರುವ, ಅವನ ಎರಡೂ ಕಡೆ ಸೂರ್ಯ ಮತ್ತು ಮೂರು ನಾಮಗಳನ್ನು ಸೂರ್ಯ, ಚಂದ್ರರೊಂದಿಗೆ ಬಿಡಿಸಿರುವ ಕಲ್ಲುಗಳನ್ನೋ ಗಮನಿಸಿರುತ್ತೇವಲ್ಲವೆ? ಈ ಬಗೆಯ ಕಲ್ಲುಗಳ ಮೇಲೆ ಕೆಲವೊಮ್ಮೆ ಬರಹ ಇರುವುದು ಉಂಟು, ಇಲ್ಲದಿರುವ ನಿದರ್ಶನಗಳೂ ಉಂಟು ಇವೇ ಗಡಿಕಲ್ಲುಗಳು."

ವಿವರಗಳಿಗೆ ನೋಡಿ: ಶ್ರೀ ಶೇಷಶಾಸ್ತ್ರಿ 2005 ಶಾಸನ ಪರಿಚಯ ಪುಟ. 42.

ಗದೆ

ಗದೆಗಳು ಬೇರೆ ಬೇರೆ ರೀತಿಯಲ್ಲಿರುತ್ತವೆ. ಉತ್ತಮ ಗದೆಯು ಮೂವತ್ತು ಅಂಗುಲ ಉದ್ದವಿರುತ್ತದೆ. ಸಾವಿರ ಅಂಗುಲ ಸುತ್ತಳತೆ ಎಂಟು ಅಂಗುಲ ತೋರವುಳ್ಳ ಹಿಡಿಯಿರುತ್ತದೆ. ಇಪ್ಪತ್ತನಾಲ್ಕು ಅಂಗುಲ ನೂರು ಅಂಗುಲವಿರುವುದು ನಾಲ್ಕು ಅಂಗುಲ ಹಿಡಿ ಇರುವುದು ಮಧ್ಯಮ ಗಾತ್ರದ ಗದೆ. ಕ್ರಮವಾಗಿ ಹದಿನೆಂಟು, ಮೂವತ್ತಾರು, ಎರಡು ಅಂಗುಲವಿರುವುದು ಅಧಮ ಗದೆಯೆಂದನ್ನಸಿಕೊಳ್ಳುತ್ತದೆ.

ಗರುಡ

ಹನೊಂದನೆಯ ಶತಮಾನದ ಸುಮಾರಿಗೆ ಲೆಂಕ, ಲೆಂಕವಾಳಿ ಎನ್ನುವ ಪದಗಳು ಹೆಚ್ಚಾಗಿ ಕಾಣಿಸಿಕೊಳ್ಳಲಾರಂಭಿಸಿದವು. ಲೆಂಕವಾಳಿ ಎಂದರೆ ಅರಸರಿಗಾಗಿ ತಮ್ಮನ್ನು ಅರ್ಪಿಸಿಕೊಂಡವರು ಎಂದರ್ಥ. ಹೊಯ್ಸಳರ ಆಳ್ವಿಕೆಯ ಸಂದರ್ಭದಲ್ಲಿ ಇವರನ್ನು ಗರಡರು ಎನ್ನುವ ಹೆಸರಿನಿಂದ ಕರೆಯಲಾಗಿದೆ. ಈ ಕುರಿತು ವಾದ-ವಿವಾದಗಳಿವೆ. ಕೆಲವು ವಿದ್ವಾಂಸರ ಪ್ರಕಾರ ಹೊಯ್ಸಳರ ಅವಧಿಯಲ್ಲಿ ಲೆಂಕ-ಲೆಂಕವಾಳಿ ಎನ್ನುವ ಹೆಸರಿನಿಂದಲೇ ಈ ಸಂಪ್ರದಾಯ ಮುಂದುವರಿಯಿತು. ಇಲ್ಲಿ ಹೆಸರಿನ ಕುರಿತಾಗಿ ಚರ್ಚೆ ನಡೆಸುವುದಕ್ಕಿಂತಲೂ ಮುಖ್ಯವಾಗಿ ಅಂಥದ್ದೊಂದು ವ್ಯವಸ್ಥೆಯ ಅಸ್ತಿತ್ವ ಹಾಗೂ ಸ್ವರೂಪದ ಬಗೆಗಿನ ಚರ್ಚೆ ಹೆಚ್ಚು ಪ್ರಸ್ತುತವೆನಿಸುತ್ತದೆ.

ಲೆಂಕ-ಲೆಂಕವಾಳಿ ಅಥವಾ ಗರುಡ ಎನ್ನುವ ವ್ಯವಸ್ಥೆಯು ರಾಜಪ್ರಭುತ್ವದ ಅಧಿಕಾರಶಾಹಿತ್ವಕ್ಕೆ ಹಾಗೂ ಸಮಜದ ಶ್ರೇಣೀಕೃತ ರಚನೆಗೆ ಉತ್ತಮ ನಿದರ್ಶನವಾಗಿದೆ ಆದರೆ ಅರಸಕೇಂದ್ರಿತ ಚರಿತ್ರೆಯು ನೀಡುವ ಚಿತ್ರಣವೇ ಬೇರೆ. ಅದರ ಪ್ರಕಾರ ಈ ವ್ಯವಸ್ಥೆಯು ಸೇವಕರು ಅರಸರಿಗೆ ಅಥವಾ ಒಡೆಯರಿಗೆ ತೋರಿಸುವ ಸೇವಾಮನೋಭಾವ, ಭಕ್ತಿ ಹಾಗೂ ಕಾನೂನಿನ ಪಾಲನೆಯನ್ನು ಸೂಚಿಸುತ್ತದೆ. ಆದರೆ ಈ ರೀತಿಯ ಉಲ್ಲೇಖಗಳು ವಾಸ್ತವಕ್ಕೆ ದೂರವಾಗಿದ್ದು ಸತ್ಯವನ್ನು ಮರೆಮಾಚುತ್ತವೆ. ಗರುಡರು ಎನ್ನುವ ವ್ಯವಸ್ಥೆ ಮೇಲ್ನೋಟಕ್ಕೆ ಅರಸನೊಂದಿಗಿನ ವಿಶೇಷ ಬಾಂಧವ್ಯವನ್ನು ಸೂಚಿಸುತ್ತಾದರೂ ಅದರೊಳಗಿನ ಸಂಬಂಧಗಳು ಊಳಿಗ ಸ್ವರೂಪದ್ದೇ ಆಗಿವೆ. ಗರಡ ಎನ್ನುವ ಮಾತಿನ ಅರ್ಥವೇ ಇನ್ನೊಬ್ಬನ ಹೊರೆಯನ್ನು ಹೊತ್ತುಕೊಳ್ಳುವವ ಎನ್ನುವುದು. ಈ ಯೋಧರು ಅರಸನ ಆಯುಧಗಳಾಗಿ ಪರಿವರ್ತನೆಗೊಂಡಿದ್ದರು.ಅರಸ ಸತ್ತ ಮರುಕ್ಷಣವೇ ಇವರೆಲ್ಲರೂ ಸಾವನ್ನಪ್ಪುತ್ತಿದ್ದರು.(ಮೋಹನಕೃಷ್ಣ ರೈ, ೨೦೦೪. ಪು. ೯೦-೧೧೭)

ಗರುಡ ಪುರಾಣ

ಇದರಲ್ಲಿ 'ಗರುಡ ಪುರಾಣ'ವನ್ನು ಸತ್ತವನ ಹನ್ನೊಂದನೆಯ ದಿನದ ಕರ್ಮದಾಚರಣೆಯಲ್ಲಿ ಪುರೋಹಿತರು ಓದುತ್ತಾರೆ. ಹಾಗೂ ತಂದೆ-ತಾಯಿಯಿರುವವರು 'ಗರುಡಪುರಾಣ' ಓದಬಾರದೆಂಬ ನಂಬಿಕೆಯಿದೆ.ಗರುಡ ಪುರಾಣದಲ್ಲಿ ಪಾಪಿಗಳು ಮತ್ತು ಅವರು ಅನುಭವಿಸಬೇಕಾದ ಶಿಕ್ಷೆಯ ವಿವರವಿದೆ.ಇಹದ ಜೀವನದಲ್ಲಿ ನಾವು ಸರಿಯಾಗಿ ಇರಬೇಕಾದ ಅಗತ್ಯವನ್ನು ಈ ಕೃತಿಯು ಸೂಚಿಸುತ್ತದೆ.

ಗರ್ಭಾದಾನ

ಸಂಸ್ಕಾರಗಳಲ್ಲಿ ಮೊಟ್ಟಮೊದಲನೆಯದು ಗರ್ಭಾದಾನ. ಯಕ್ತಕಾಲದಲ್ಲಿ ದಂಪತಿಗಳು ಒಟ್ಟುಗೂಡಿ ಪಿತೃಋಣವನ್ನು ತೀರಿಸಲು ಕೈಗೊಳ್ಳುವ ಕ್ರಮವು ಗರ್ಭಾದಾನವೆಂದೆನ್ನಿಸುತ್ತದೆ. ಶ್ರುತಿಗಳ ಪ್ರಕಾರ ಪಿತೃ ಋಣ ತೀರಿಸದಿದ್ದರೆ ನರಕ ಪ್ರಾಪ್ತಿಯಾಗುತ್ತದೆ.

ವಿವರಗಳಿಗೆ ನೋಡಿ: Freud Sigmund 1961 The intrepreation of dreams
ಯುಗಯಾತ್ರೀ ಭಾರತೀಯ ಸಂಸ್ಕೃತಿ 1971 ಸಂಪುಟ. 2
ಪುಟ. 294

ಗಾಂಧರ್ವ ವಿವಾಹ

ಗಾಂಧರ್ವ ವಿವಾಹ ಪದ್ಧತಿಯಲ್ಲಿ ಗಂಡು ಮತ್ತು ಹೆಣ್ಣು ಪರಸ್ಪರ ಒಪ್ಪಿಕೊಂಡರೆ ಮುಗಿಯಿತು. ಇದಕ್ಕೆ ಹಿರಿಯರ ಒಪ್ಪಿಗೆ ಬೇಕೆಂದೇನೂ ಇಲ್ಲ. ಈ ವಿವಾಹ ಪದ್ಧತಿಯಲ್ಲಿ ಹೆಣ್ಣಿನ ಇಚ್ಛೆಯೂ ಕೂಡಾ ಬಹು ಮುಖ್ಯವಾದ ಪಾತ್ರ ವಹಿಸುತ್ತದೆ.

ಕ್ರಿ.ಶ. ಮೂರನೇ ಶತಮಾನದಿಂದ ಕ್ರಿಶ ಆರನೇ ಶತಮಾನದವರೆಗೆ ಚಾಲ್ತಿಯಲ್ಲಿತ್ತು ಎಂದು ಊಹಿಸುತ್ತಾರೆ. ಗಾಂಧರ್ವ ವಿವಾಹವು ಕುಟುಂಬದೊಳಗಣ ವಿವಾಹ ಪದ್ಧತಿಯಲ್ಲ. ಕನ್ನಡ ಸಾಹಿತ್ಯದಲ್ಲಿ ಬಂದ ಗಾಂಧರ್ವ ವಿವಾಹ ಪದ್ಧತಿಯನ್ನು ಲಕ್ಷಿಸಿಕೊಂಡು ಕೆಲವು ವಿಚಾರಗಳನ್ನು ಪ್ರಸ್ತಾಪಿಸಬಹುದಾಗಿದೆ. ಸಾಮಾನ್ಯವಾಗಿ ಬೇರೆ ಬೇರೆ ಗುಂಪಿಗೆ ಸೇರಿದ ಸ್ತ್ರೀ ಪುರುಷರಿಗೆ ಗಾಂಧರ್ವ ವಿವಾಹ ನಡೆಯುವುದು. ಇಲ್ಲಿ ಹೆಣ್ಣಿನ ಜಾತಿ ಯಾ ವರ್ಗವಾಗಲೀ ಅಷ್ಟೊಂದು ಪ್ರಧಾನವಲ್ಲ. ಅದರ ಬದಲು ಹೆಣ್ಣಿನ ಒಪ್ಪಿಗೆಯಷ್ಟೇ ಪ್ರಧಾನವಾಗಿರುತ್ತದೆ. ಈ ಅರ್ಥದಲ್ಲಿ ರಕ್ತ ಸಂಬಂಧದ ಕಠಿಣತೆಯನ್ನು ಗಾಂಧರ್ವ ವಿವಾಹ ಪದ್ಧತಿಯು ನಿರಾಕರಿಸುತ್ತದೆ. ಬೇರೆ ಗುಂಪಿಗೆ ಜಾತಿಗೆ ಸೇರಿದ ಗಂಡು ಮತ್ತು ಹೆಣ್ಣು ಮದುವೆಯಾಗುವುದಿದ್ದರೆ ಗಾಂಧರ್ವ ವಿವಾಹ ಪದ್ಧತಿಯೇ ಸೂಕ್ತವೆನ್ನುವ ನಂಬಿಕೆಯು ಈ ರೀತಿಯ ಸಂಬಂಧಗಳಲ್ಲಿ ವ್ಯಕ್ತವಾಗಿದೆ.

ವಿವರಗಳಿಗೆ ನೋಡಿ: ರಾಮೇಶ್ವರಾವಧಾನಿ (ಸಂ) ೧೯೭೨-೭೬ ಮಹಾಭಾರತ ಪುಟ. ೧೦೨೨

ಗಾಣರು

ಈ ಗಾಣರು ಬಹುಶಃ, ಶೌರ್ಯ ಪರಾಕ್ರಮದ ಮತ್ತು ರಮ್ಯಾದ್ಭುತದ ಕತೆಗಳನ್ನು ಹಾಡಿ ಸೈನಿಕರನ್ನು ರಂಜಿಸುತ್ತಿದ್ದ ಗಾಯಕ ಪರಂಪರೆಯವರೆಂದು ಕಾಣುತ್ತದೆ.

ಈ ಗಾಣರೇ ಎಕ್ಕಲಗಾಣರೆಂದು ಕರೆಸಿಕೊಳ್ಳುತ್ತಿದ್ದರೆಂದು ಊಹಿಸಬಹುದು. ಇವರದು ಒಂದು ಜನಪದ ಗಾಯಕ ಪರಂಪರೆಯಾಗಿದ್ದಿರಲೂಬಹುದು.

ಗಾಣವೆಂದರೆ ಗಾನ: ಗಾಯನ. ಗಾಣಗಾರ್ತಿಯೆಂದರೆ ಹಾಡುವವಳು: ಗಾಯಿಕೆ: ಗಾಣಕಾರನೆಂದರೆ ಗಾಯಕ: ಸಂಗೀತಕಾರ.

ವಿವರಗಳಿಗೆ ನೋಡಿ: ಸಿ.ವೀರಣ್ಣ ೧೯೮೬ ಪ್ರಾಚೀನ ಸಾಹಿತ್ಯ: ರಾಜಸತ್ತೆಯ ವೈಭವದ ಕಾಲ ಪುಟ. ೨೨, ೨೩, ೧೭೩, ೨೦೪, ೩೬೧.

ಗಾಣಿಗರು

ಕುಸಿಬಿ, ಸೇಂಗಾ, ಎಳ್ಳು ಮುಂತಾದ ಎಣ್ಣೆ ಕಾಳುಗಳನ್ನು ಗಾಣಕ್ಕೆ ಹಾಕಿ ಎಣ್ಣೆ ತೆಗೆಯುವ ಕಸಬುದಾರರನ್ನು ಗಾಣಿಗರು ಎಂದು ಕರೆಯಲಾಗುತ್ತದೆ. ಊರಿನಲ್ಲಿ ಇವರ ಓಣಿ ಪ್ರತ್ಯೇಕವಾಗಿರುತ್ತಿತ್ತು. ವಡ್ಡಾರಾಧನೆಯ ಮಹೇಂದ್ರದತ್ತಾ ಚಾರ್ಯರು ಮೊದಲಾದ ಐನೂರು ರಿಸಿಯರ್ಕಳ ಕಥೆಯಲ್ಲಿ ಎಣ್ಣೆಯ ಗಾಣಗಳ ಉಲ್ಲೇಖ ಬರುತ್ತದೆ. ವ್ಯಾಳನೆಂಬ ಮಂತ್ರಿ ಐನೂರು ಜನ ರಿಸಿಯರನ್ನು ಆ ಗಾಣದಲ್ಲಿ ಹಾಕಿ ಹಿಂಡಿಸಿದ ಕ್ರೂರ ರೀತಿಯಿಂದ ಕೊಂದ ಘಟನೆ ಅಲ್ಲಿ ಬರುತ್ತದೆ. ಎಣ್ಣೆ ಕಾಳುಗಳಿಂದ ಎಣ್ಣೆಯನ್ನು ತೆಗೆಯಲು ಗಾಣಿಗರು ಗಾಣಗಳನ್ನು ಉಪಯೋಗಿಸುತ್ತಿದ್ದರು.

ಗಾಣಿಗವೃತ್ತಿ ಸಾಮಾಜಿಕವಾಗಿ ಮಹತ್ವದ್ದು. ಗಾಣಗಳಲ್ಲಿ ಎತ್ತಿನ ಗಾಣ ಮತ್ತು ಕೈಗಾಣಗಳೆಂದು ಎರಡು ವಿಧ. ಕ್ರಿ.ಶ. 1145 ರಲ್ಲಿ ಆಸಕ್ಕ ಗಾವುಂಡ ಎಂಬುವನು ಮಾಡಿಸಿದ ಒಂದು ಕಲ್ಲಿನ ಗಾಣ ಈಗಲೂ ಇದೆ. ("ಗಣಿಗನೂರ ತನ್ನ ಪಕ್ಷರ ಚೆಂಡ ಗಾವುಂಡನ ಮಗಂ ಆಸಕ್ಕ ಗಾವುಂಡಂ ಮಾಡಿಸಿದ ಕಲ್ಲ ಗಾಣಂ ಇಂತಪ್ಪುದಕ್ಕೆ ಮಂಗಳ ಮಹಾಶ್ರೀ" EC III NJ 150, 1145 AD) ಇವರು ರೈತರ ಎಣ್ಣೆ ಬೀಜಗಳನ್ನು ಗಾಣಕ್ಕೆ ಹಾಕಿ ಎಣ್ಣೆ ಮಾಡಿಕೊಟ್ಟು ಜೀವನ ನಡೆಸುತ್ತಿದ್ದರು. ಅಲ್ಲದೆ ಎಣ್ಣೆಯ ಮಾರಾಟದಿಂದಲೂ ಜೀವನ ಸಾಗಿಸುತ್ತಿದ್ದರು. ಗಾಣಿಗರನ್ನು ತೆಲ್ಲಿಗ; ತೈಲಿಕ ಎಂದೂ ಕರೆಯಲಾಗುತ್ತದೆ.

ಗಾದೆಯ ಮಾತಿದೆ: ಬ್ರಾಹ್ಮಣರ ಎದುರು ನಿಲ್ಲಬಾರದು. ಕುದುರೆಯ ಹಿಂದೆ ನಿಲ್ಲಬಾರದು. ಗಾಣಿಗನಿಗೆ ಎತ್ತಾಗಬಾರದು. ಬ್ರಾಹ್ಮಣನ ಎದುರು ನಿಂತರೆ ಕೆಲಸ ಹೇಳುತ್ತಾನೆ. ಕುದುರೆಯ ಹಿಂದೆ ನಿಂತರೆ ಒದೆಯುತ್ತದೆ. ಗಾಣಿಗನಿಗೆ ಎತ್ತಾದರೆ, ಗಾಣದ ಸುತ್ತ ಸುತ್ತಿಸುತ್ತಾನೆ.

ವಿವರಗಳಿಗೆ ನೋಡಿ: ಡಾ. ವಿ. ಎಲ್. ಪಾಟೀಲ್ ೨೦೦೯ ವಡ್ಡಾರಾಧನೆ ಸಾಂಸ್ಕೃತಿಕ ಅಧ್ಯಯನ ಪುಟ. ೧೭೬-೧೭೭
ಚಿದಾನಂದಮೂರ್ತಿ ೨೦೦೮ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ. ೪೯೧-೪೯೪

ಗಾಮುಂಡ

ಗೌಡ ಎನ್ನುವುದಕ್ಕೆ ಗಾಮುಂಡ ಎಂದು ಕರೆಯಲಾಗಿದೆ. ಇದು ಅಧಿಕಾರ ಸೂಚಕ ಪದವೂ ಹೌದು. 'ಊರಗೌಡ'ನೆಂದರೆ ಊರಿನ ಸಮಸ್ತ ಸುಖ-ದುಃಖಗಳನ್ನು ನೋಡುವವನು.

ರಾಜ್ಯಾಡಳಿತದ ಬಹು ಚಿಕ್ಕ ಘಟಕವಾದ ಹಳ್ಳಿಯ ಆಡಳಿತ ಗಾವುಂಡರಿಗೆ ಸೇರಿದ್ದು. ಹಳ್ಳಿಗರು ರಾಜನಿಗೆ ತೆರಬೇಕಾದ ತೆರಿಗೆಯನ್ನು ಅವನಿಗೆ ಮುಟ್ಟಿಸುವುದು ಗಾವುಂಡರ ಮುಖ್ಯ ಕೆಲಸ. "ಅವರನ್ನು ರಾಜ್ಯದ ಅಧಿಕಾರಿಗಳೆನ್ನುವುದಕ್ಕಿಂತ ಹಳ್ಳಿಗಳ ಪ್ರತಿನಿಧಿಗಳೆನ್ನುವುದು ಸಮಂಜಸ"ವೆಂದು ಕೆಲವರ ಮತ. ಅದೇನೇ ಇದ್ದರೂ ಊರಿನ ಸಂರಕ್ಷಣೆ ಅದರ ಆಡಳಿತ ಮತ್ತು ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ಸಂಪೂರ್ಣ ಹೊಣೆ ಗಾವುಂಡರದು. ಒಂದೊಂದು ಊರಿಗೆ ಅಥವಾ ಪಟ್ಟಣಕ್ಕೆ ಒಬ್ಬನಿಗಿಂತ ಹೆಚ್ಚು ಗಾವುಂಡರಿದ್ದ ಬಗ್ಗೆ ಶಾಸನಗಳಿಂದ ತಿಳಿದು ಬರುತ್ತದೆ. ಹಳ್ಳಿಯಲ್ಲಿ ಗೌಡನಾಗಿದ್ದ ಆತ ಅರಸರನ್ನು ಕಂಡರೆ ಅತ್ಯಂತ ಭಯಭಕ್ತಿ ಗೌರವಗಳಿಂದ ನಡೆದುಕೊಳ್ಳುತ್ತಿದ್ದ ಎಂಬ ಉಲ್ಲೇಖ ಮಾತ್ರ ಬರುತ್ತದೆ.

ಇದು ಪ್ರಾಚೀನ ಕಾಲದ ರಾಜಕೀಯ ವ್ಯವಸ್ಥೆಯನ್ನು ಸೂಚಿಸುತ್ತದೆ. ರಾಜ, ಮಂತ್ರಿ, ಸೇನಾಧಿಪತಿ, ಪುರೋಹಿತ, ಸಾಮಂತರು, ಅವರ ಅನಂತರ ಗಾವುಂಡರ ಪಾತ್ರ

ಮಹತ್ವದ್ದು, ಈ ರೀತಿಯ ರಾಜಕೀಯ ವ್ಯವಸ್ಥೆಯನ್ನು ಬ್ರಿಟಿಷ್ ಕಾಲಘಟ್ಟದ ಆಧಿಪತ್ಯ ಮುರಿಯಿತು. ನಾಗರಿಕ ಕಾನೂನುಗಳು ಬದಲಾದವು. ಮಧ್ಯಕಾಲೀನ ಚರಿತ್ರೆಯಲ್ಲಿ ಗ್ರಾಮ ಸಮಾಜದ ಮುಖಂಡರನ್ನು ಮಹತ್ತರ; ಪಟ್ಟಕಿಲ; ಮತ್ತು ಗಾವುಂಡನೆಂದು ಕರೆಯತೊಡಗಿದರು. ಒಂದು, ಹತ್ತು, ಇಪ್ಪತ್ತು, ನೂರು, ಸಾವಿರ ಎಂದು ಬೇರೆ ಬೇರೆಯಾಗಿ ಗ್ರಾಮಗಳಿಗೆ ಅಧಿಪತಿಯನ್ನು ನಿಯಮಿಸಬೇಕು. ಎಂದು ಮನುವಿನ ಅಭಿಪ್ರಾಯ.

ದಶಗ್ರಾಮಪತಿಯು ಹನ್ನೆರಡು ಜೋಡೆತ್ತುಗಳಿಂದ ಉತ್ತು ಸಾಗುವಳಿ ಮಾಡಬಹುದಾದ ಹೊಲವನ್ನು ತನ್ನ ಜೀವನಕ್ಕೆ ವೃತ್ತಿವೇತನವಾಗಿ ಪಡೆಯುವನು. ಅದರಿಂದ ಅವನು ಜೀವಿಸುತ್ತ ಕರ್ತವ್ಯ ನಿರ್ವಹಿಸಬೇಕು. ಇಪ್ಪತ್ತು ಗ್ರಾಮಪತಿಯು ಅದರ ಐದರಷ್ಟು ವೇತನವಾದ ಭೂಮಿಯನ್ನು, ನೂರು ಗ್ರಾಮಪತಿಯು ಒಂದು ಗ್ರಾಮವನ್ನು ವೇತನವಾಗಿ, ಸಾವಿರ ಗ್ರಾಮಪತಿಯು ಒಂದು ಪುರವನ್ನು ಉಂಬಳಿಯಾಗಿ ಹೊಂದಿ, ಕಾರ್ಯ ವ್ಯಾಪೃತನಾಗಬೇಕು. ಎಂದು ಮನು ಹೇಳುತ್ತಾನೆ.

ಯದುಗಳು ಗೋವಳರು; ಗೌಳರು–ಗೌಡರು. ರಾಷ್ಟ್ರಕೂಟರು ಗೌಡರು, ನಾಡಗೌಡರು. ಇದು ಮಹತ್ವದಲ್ಲಿ ಮಹತ್ವದ ಸಂಗತಿ ಇನ್ನೊಂದು ಬೇರೆ ಇದೆ. ಗಂಗವಂಶಕ್ಕೂ ರಾಷ್ಟ್ರಕೂಟರಾಜರಿಗೂ ಬೀಗತನದ ಸಂಬಂಧವಿದ್ದುದು ಸುಪ್ರಸಿದ್ಧವಿದೆ. ರಾಷ್ಟ್ರಕೂಟರು ತಾವು ಸಾಮ್ರಾಟರಾಗಿದ್ದರೂ ತಮಗಿಂತಲೂ ಕಿರಿಯ ಅರಸರಾದ ಗಂಗರ ಮನೆತನಕ್ಕೆ ತಮ್ಮ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಟ್ಟಿದ್ದಾರೆ. ಆದುದರಿಂದ, ಗಂಗರಾಜರು ಕುಲವು ರಾಷ್ಟ್ರಕೂಟರ ಕುಲಕ್ಕಿಂತಲೂ ಕಡಿಮೆ ಎಂದೂ ಇರಲಾರದು. ರಾಷ್ಟ್ರಕೂಟರು ತಮಗೆ ಯದುವಂಶಿಗಳೆಂದುಕೊಳ್ಳುತ್ತಿದ್ದರೆ ಗಂಗರು ತಾವು ತುರ್ವಸುವಿನ ಸಂತತಿಯವರೆಂದು ಹೇಳುತ್ತಿದ್ದುದು ಶಾಸನಗಳಿಂದಲೆ ಗೊತ್ತಾಗಿದೆ.

ಶಂಬಾ ಅವರ ಪ್ರಕಾರ, ನಮ್ಮ ಶಾಸನಗಳಲ್ಲಿ ಇದು ಕಾಣಿಸಿಕೊಂಡ ರೀತಿಯೇ ಬೇರೆ. ಗಾಮುಂಡ, ಗಾವುಂಡ ಎಂಬ ತೆರನಾದ ರೂಪಗಳು ಪ್ರಾಚೀನ ಶಾಸನಗಳಲ್ಲಿ; ಗಾಮುಂಡ–ಗಾವುಂಡ–ಗವುಡ ಬಳಿಕ ಗೌಡ ಎಂದು ಈಗಿನ ರೂಪವೆಂಬುದಾಗಿ ಹಲವರ ಗ್ರಹಿಕೆಯಿದೆ. ಆದರೆ, ಇದೆಲ್ಲವೂ ಸರಿಯಾಗಿ ತಿರುವು ಮುರುವಾಗಿದೆಯೆಂದು ನನ್ನ ತಿಳುವಳಿಕೆ. ಮೂಲ ಉಚ್ಚಾರವೆ ಗೌಡವೆಂದಿದ್ದು ಶಾಸನಗಳನ್ನು ಬರೆದ ಕಾಲದ ಸುಮಾರಿಗೆ ಗೌಡ(ಳ)ರ ಆ ಪುರಾತನ ಪರಂಪರೆಯ ಅರ್ಥವು ಜನಗಳಲ್ಲಿ ಮರೆತು ಹೋಗಿದ್ದಿತು. ಗೌಡರು ಗ್ರಾಮಾಧಿಕಾರಿಗಳಾಗಿಯೂ ಇರುತ್ತಿದ್ದುದರಿಂದ ಗೌಡ ಶಬ್ದಕ್ಕೂ ಗ್ರಾಮಾಧಿಕಾರಕ್ಕೂ ತಳಕುಹಾಕಿದರು. ಗ್ರಾಮಾಧಿಕಾರಿಯೆಂಬ ಅರ್ಥವನ್ನೆ ಮುಖ್ಯವಾಗಿ ಕಣ್ಣೆದುರಿಗೆ ಇಟ್ಟುಕೊಂಡು 'ಗೌಡ' ಎಂಬ ರೂಢ ಶಬ್ದಕ್ಕೆ ನಿರುಕ್ತವನ್ನು ಹೇಳಹೋಗಿ, ಅದು ಗ್ರಾಮ ಶಬ್ದಕ್ಕೆ ಸಂಬಂದ ಪಟ್ಟಿರಲಿಕ್ಕೆಬೇಕೆಂಬ ತರ್ಕಸರಣಿಯ ಸುಳಿತಲ್ಲಿ ಸಿಕ್ಕುಬಿದ್ದಿರಲಿಕ್ಕೇ ಬೇಕು. ಈ ದೃಷ್ಟಿಯಿಂದ 'ಗೌಡ' ಶಬ್ದವನ್ನು ಗ್ರಾಮಪದಕ್ಕೆ

ಹತ್ತಿರ ಬರುವಂತೆ ತಿದ್ದಿಕೊಂಡರೆಂದು ಊಹಿಸಬೇಕಾಗುತ್ತದೆ. ಹೀಗಾಗಿ, ಮೂಲ ಗೌಡ ಶಬ್ದವು ಪ್ರೌಢರ ಶಾಸನಾದಿ ಲೇಖನಗಳಲ್ಲಿ ಕೆಲಕಾಲ ಗಾಮುಂಡ, ಗಾವುಂಡ, ಗವುಡ ಎಂಬ ರೂಪತಾಳಿದರೂ ಮತ್ತೆ ಜನರು ಬಳಕೆಯಲ್ಲಿ 'ಗೌಡ' ಎಂಬ ತನ್ನ ಮೊದಲಿನ ರೂಪದಲ್ಲಿಯೆ ಈಗಲೂ ಉಳಿದುಕೊಂಡಿದ್ದುದು ಕಂಡುಬರುತ್ತದೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 2 ಪುಟ. 145

ಸಿ. ವೀರಣ್ಣ 1986 ಪ್ರಾಚೀನ ಸಾಹಿತ್ಯ: ರಾಜಸತ್ತೆಯ ವೈಭವದ ಕಾಲ ಪುಟ. 237

ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 7–119

Romila Thapar 1975 The Past and Prejudice P. 37

A. S. Altekar 1967 Rastrakutas and their times- P. 189.

The code of civil procedure – 1908

Mysore law journal 1970

ಡಾ. ಚಿದಾನಂದಮೂರ್ತಿ 2008 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ. 391–400.

ಗಾವಿಲ

ಗ್ರಾಮೀಣ ಎಂಬುದರಿಂದ ಗಾವಿಳ, ಗಾವಿಲ ಎಂಬುದು ಬಂತೆನ್ನುವುದು ಗಮನಾರ್ಹ.

ಗಾವಿಲ ಎಂದರೆ ಅನಾಗರಿಕವೆಂದು: ಗಾವಿಲರು ಹೆಡ್ಡರೆಂದು ಕರೆದಿರುವುದು ವರ್ಗ ತಾರತಮ್ಯದ ಧೋರಣೆಯನ್ನು ಸೂಚಿಸುತ್ತದೆ. ಗಾವಿಲರು ಹೆಡ್ಡರೆಂದರೆ ನಾಗರಿಕರು ಹೆಡ್ಡರಲ್ಲವೆಂದು ಅರ್ಥವಾಗುತ್ತದೆ. ನಾಗರಿಕರ ಬೌದ್ಧಿಕ ರೂಪಕ್ಕೂ; ಗ್ರಾಮೀಣರ ಬುದ್ಧಿವಂತಿಕೆಯ ರೂಪಕ್ಕೂ ವ್ಯತ್ಯಾಸವಿದೆ.

ಗಾವ (ಗ್ರಾಮ)ದಲ್ಲಿ ಇರುವನು ಎಂಬರ್ಥದಲ್ಲಿ 'ಗಾವಿಲ' ಹೇಗೆ ಆಗುವುದೊ ಹಾಗೆಯೆ ಪಟ್ಟಿಯಲ್ಲಿ ಇರುವವನು ಎಂಬರ್ಥದಲ್ಲಿ 'ಪಟ್ಟಿಲ (ಪಾಟಿಲ)' ಎಂದಾಗುವುದು.

ವಿವರಗಳಿಗೆ ನೋಡಿ: Antonio Gramshi ? The Prison Note book ಶಂಬಾ ಜೋಶಿ 1999 ಸಂಪುಟ. 2 ಪುಟ. 143

ಗಾವುಂಡ

ಕುಲಕ್ಕೆ ಸಂಬಂಧಿಸಿದ ನಿಯಾಮಾವಳಿಗಳಿವೆ. ಕೂಡುಕಟ್ಟು (ಹಿರಿಯರ ಸಭೆ), ಆಧುನಿಕ ಅರ್ಥದಲ್ಲಿ ಪರಿಷತ್ತು ಗುರಿಕಾರ ಆಯಾ ಜನಜಾತಿ ಪರಿಷತ್ತಿನ ಪ್ರಧಾನಿ ಇಲ್ಲಿ ಗುರಿಕಾರನ ಕೆಲಸ ಕಾರ್ಯಗಳನ್ನು ಗಮನಿಸಬೇಕು. ಅವನು ಕುಲದ

ವಿಚಾರ: ಸರಿತಪ್ಪುಗಳು ನಿರ್ಣಯ : ದೈವಗಳನ್ನು ಮಾತಾಡಿಸುವುದು ಇತ್ಯಾದಿಗಳನ್ನು ಹೊರಬೇಕು. ಅಂದರೆ ಆಯಾ ಕುಲದ ಮೇಲ್ವಿಚಾರಕನಾಗಿ ಕೆಲವು ಜವಾಬ್ದಾರಿಗಳನ್ನು ಹೊರಬೇಕು. ಗುರಿಕಾರ ನ್ಯಾಯತೀರ್ಮಾನ ಮಾಡಬೇಕು ದೈವ ಸರ್ವೋಚ್ಛ ಅಧಿಕಾರ ಪಡೆದರೆ ಅದರ ಅನಂತರದ ಅಧಿಕಾರವನ್ನು ಗುರಿಕಾರ ಅನುಭವಿಸುತ್ತಾನೆ. ಅನೇಕ ಕುಟುಂಬದವರು ಸೇರಿ (ಕೂಡುಕಟ್ಟು) ಒಬ್ಬ ಗುರಿಕಾರನನ್ನು ಆಯ್ಕೆ ಮಾಡುತ್ತಾರೆ. ಇದು ಅವರ ಜನಜಾತಿ ಪರಿಷತ್ತಿನ ನಿಯಮ. ಗುರಿಕಾರನಿಗೆ ಪ್ರಾದೇಶಿಕ ಯಜಮಾನಿಕೆ ಇಲ್ಲ. ಆದರೆ ಅವರ ಜಾತಿಯ ಜನರ ಯಜಮಾನಿಕೆಯಿದೆ. ಈ ಅರ್ಥದಲ್ಲಿಯೂ ಅದು ಒಂದು ಪ್ರತ್ಯೇಕ ಸರಕಾರವನ್ನು ನಿರ್ಮಿಸಿಕೊಳ್ಳುತ್ತದೆ. ಧಾರ್ಮಿಕವಾಗಿಯೂ ಇದಕ್ಕೆ ಇದರದೇ ಆದ ಅನನ್ಯ ಸಂಹಿತೆಗಳಿರುತ್ತವೆ. ತನ್ನ ಸ್ಥಾನಮಾನಗಳನ್ನು ಹಿಂದೂ ಧರ್ಮದ ವ್ಯಾಖ್ಯೆಗೆ ಅನುಸಾರವಾಗಿ ರೂಪಿಸಿಕೊಂಡಿಲ್ಲ. ಮರುಮದುವೆ; ಬಹುಪತ್ನಿತ್ವ; ಲೈಂಗಿಕ ಸಂಬಂಧ; ದೈವಾರಾಧನೆ ಇವು ಬೇರೆ ಮಾದರಿಯದು, ಈ ಅರ್ಥದಲ್ಲಿ ಅದು ಪ್ರತ್ಯೇಕ ರಾಜಕೀಯ; ಧಾರ್ಮಿಕ ವ್ಯವಸ್ಥೆಯನ್ನು ಹೊಂದಿದೆ. ಕುಲದ ಆಚಾರ ವಿಚಾರಗಳಲ್ಲಿ ತಮ್ಮನ್ನು ತಾವೇ ರೂಪಿಸಿಕೊಂಡಿವೆ. ಹೀಗಾಗಿ ಮಲೆಕುಡಿಯರು ನಂಬುವ ರಾಜಕೀಯ ನಿಲುವುಗಳು ಪ್ರತ್ಯೇಕ ಹಾಗೂ ಅನನ್ಯ. ಇದಕ್ಕೂ ಭೂ ಯಜಮಾನಿಕೆಗೂ ಯಾವುದೇ ಸಂಬಂಧವಿಲ್ಲ. ಗುರಿಕಾರನ ಮೂಲಕ ದೈವವನ್ನು ಮಾತಾಡಿಸುತ್ತಾರೆ. ಇದರಿಂದಾಗಿ ಅಲೌಕಿಕ ಮತ್ತು ಲೌಕಿಕದ ನಡುವೆ ಒಂದು ಸಂಬಂಧ ಏರ್ಪಡುತ್ತದೆ ಮತ್ತು ಅವರ ನಂಬಿಕೆಗಳು ವೈಯಕ್ತಿಕವಲ್ಲ. ಯಾವುದನ್ನು ನಾವು ಸಾಮಾಜಿಕ ಪರಿಷತ್ತನ್ನು ಗುರುತಿಸಲು ಬರುವುದಿಲ್ಲ ಎಂದು ತಿಳಿಯಬೇಕು. ಪ್ರಭುತ್ವ; ಜಾತಿ; ನಾಗರಿಕತೆ ಮುಂತಾದುವುಗಳನ್ನು ಪಶ್ಚಿಮದ ನಾಗರಿಕ ಸಮಾಜದ ವ್ಯಾಖ್ಯೆಗೆ ಅನುಸಾರವಾಗಿ ಬಿಡಿಸಲು ಭಾರತೀಯರು ಹೊರಟರೆ ಬರಿಯ ಅನಾಗರಿಕರಾಗಿ ಕಾಣಿಸಬಹುದು.

ಹಿಂದಿನ ಕಾವ್ಯಗಳಲ್ಲಿ ಗುರಿಕಾರರನ್ನು ಊರಿನ ಒಡೆಯ ಗಾವುಂಡ ಎಂದೂ ಕರೆದಿದ್ದಾರೆ. ಮಧ್ಯಕಾಲೀನ ಚರಿತ್ರೆಯಲ್ಲಿ ಗ್ರಾಮ ಸಮಾಜದ ಮುಖಂಡರನ್ನು ಮಹತ್ತರ,ಪಟ್ಟಕಿಲ,ಗಾವುಂಡನೆಂದು ಕರೆಯ ತೊಡಗಿದರು.(ರೊಮಿಲಾ ಥಾಪರ್(1975ಪು37) ಊರಿನ ಸುಖ ದುಃಖವನ್ನು ವಿಚಾರಿಸುವವರು ಗೌಡರು.ಊರಿನ ಆಳ್ವಿಕೆಯು ಅವರದು.ಆದುದರಿಂದ ಅನೇಕ ಸಮಾಜ ಶಾಸ್ತ್ರಜ್ಞರು ಗ್ರಾಮಗಳ ಈ ವ್ಯವಸ್ಥೆಯನ್ನು ಕಿರುಗಣರಾಜ್ಯವೆಂದು ಕರೆದರು.

ವಿವರಗಳಿಗೆ ನೋಡಿ: Sudipta kaviraj (ED) 1977 politics in india.
Madan T.N. 2001 Non-Renuciahin
M.N. Srinivas 1987 The dominant caste and Essays.

ಗಾಳದೊಟ್ಟು

ಗಾಳುದೊಟ್ಟು ಎಂದರೆ ನಾಡಾಡಿ ದಾಸಿಯೆಂದು ಅರ್ಥ. ಸೇವಕಿಯೆನ್ನುವುದು ಇಲ್ಲಿ ಸಾಮಾನ್ಯ ಹೆಂಗಸು ರಾಣಿಯರಿಗೆ ಆಪ್ತದಾಸಿಯರು ಇರುತ್ತಿದ್ದರು ತೊಳ್ತು ಎಂದರೆ ದಾಸಿ. ಈ ಮಾತನ್ನು ಕನ್ನಡ ಕಾವ್ಯಗಳು ತುಂಬಾ ಬಣ್ಣಿಸಿವೆ. ತೊಳ್ತುಗಳಿಗೆ ತೊತ್ತು ಎಂದೂ ಕರೆದಿರುವುದೂ ಇದೆ.

ಗಾಳುಗೊರವ

ಗೊರವರು ಎಂದರೆ ಸನ್ಯಾಸಿಗಳು. ಗಾಳು ಗೊರವರು ಎಂದರೆ ಕಪಟ ಸನ್ಯಾಸಿಗಳು. ಸನ್ಯಾಸಿಗಳಿಗೆ ತಪವಾಚರಿಸಲು ಬೂದಿ, ಜಡೆಯಿದ್ದರೆ ಸಾಕು ಎಂಬುದು ಇಲ್ಲಿಯ ಭಾವಾರ್ಥ.

'ಧರ್ಮನಾಥ ಪುರಾಣ'ದ ಕರ್ತ ಮಧುರ ಕವಿಯು
"ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್ ।
ಕಂಡರ್ ಕೇಳ್ವೊಡೆ **ಗೊರವರ**
ಡುಂಡುಚಿಯೆ ಬೀದಿವರೆಯೆ ಬೀರನ ಕತೆಯೇ" (1–57) ಎಂದಿರುವುದನ್ನು ಸ್ಮರಿಸಿಕೊಳ್ಳಬಹುದು. ಗೊರವರ ಕೈಯಲ್ಲಿ ಡುಂಡುಚಿ. (ಒಂದು ಬಗೆಯ ಚರ್ಮವಾದ್ಯ) ಇರುತ್ತದೆಂಬುದನ್ನು ಈ ಪದ್ಯದ ಮೂಲಕ ತಿಳಿದುಕೊಳ್ಳಬಹುದು.

ಹಾಳು ಗೊರವ > ಗಾಳು ಗೊರವ ಎಂದು ಪರಿವರ್ತನೆಯಾಗಿದೆ. ಗೊರವನೆಂದರೆ ಶೈವ ಸನ್ಯಾಸಿ, ಜಂಗಮ, ತಿರುಕ, ಭಿಕ್ಷುಕ, ಮೈಲಾರ ದೇವರಭಕ್ತ.ಶೈವ ಭಕ್ತರನ್ನು ಕೆಲವರು ಕಟುವಾಗಿ ಟೀಕಿಸಿದ್ದಕ್ಕೆ ಇದು ಒಂದು ಉದಾಹರಣೆಯಾಗಿದೆ.

ವಿವರಗಳಿಗೆ ನೋಡಿ: ಡಾ. ಎಂ. ಚಿದಾನಂದ ಮೂರ್ತಿ ೧೯೭೯ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
ಡಾ. ಎಂ.ಎಂ. ಕಲ್ಬುರ್ಗಿ ೧೯೮೮ ಮಾರ್ಗ ೧ ಮತ್ತು ೨

ಗಿರಾಕಿ

ಆಧುನಿಕ ಇಂಗ್ಲಿಷಿನಲ್ಲಿ 'ಕನ್ಸೂಮರ' ಮತ್ತು 'ಕನ್ಸಂಪ್ಶನ್' (Consumer and Consumption)ಎಂಬ ಎರಡು ಪದಗಳನ್ನು ಬಳಸಲಾಗುತ್ತಿದೆ. ಈ ಪದಗಳು ಹೆಚ್ಚಾಗಿ ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿರುವ ಪದಗಳಾಗಿವೆ. ಇವು ಆರ್ಥಿಕ ವ್ಯವಹಾರಗಳನ್ನು ಸೂಚಿಸುತ್ತವೆ. ಇಂಗ್ಲಿಷಿಗೆ ಇದು ರೋಮನ್ ಪದದಿಂದ ಬಂತು. ರೋಮನ್ ಪದ "Consumer" ಅಂದರೆ ಹಾಳು ಮಾಡು; ಕಳೆ; ಎಂಬರ್ಥವಿದೆ. ಇಂಗ್ಲಿಷಿನಲ್ಲಿಯೂ ಮೊದಲಿಗೆ 'Consumer'ಎಂದರೆ ಹಾಳು ಮಾಡು; ಕೆಡಹು;

ಉಪಯೋಗಿಸು ಎಂಬ ಅರ್ಥವೆ ಇತ್ತು. ಕ್ರಿ.ಶ. ಹದಿನಾರನೆಯ ಶತಮಾನದವರೆಗೆ ಈ ಅರ್ಥವಿತ್ತು, ಅನಂತರದಲ್ಲಿ ಇದರ ಅರ್ಥವು ಬದಲಾಯಿತು. ಕ್ರಿ.ಶ. ಹದಿನೆಂಟನೆಯ ಶತಮಾನದಲ್ಲಿ ಮಾರುಕಟ್ಟೆಯು ವಿಸ್ತಾರಗೊಂಡಂತೆ Consumer ಅಥವಾ ಗಿರಾಕಿ ಎಂಬುದರ ಅರ್ಥವೂ ಬೇರೆಯಾಯಿತು. ಸ್ವಲ್ಪ ಮಟ್ಟಿಗೆ ಅದರ ಅರ್ಥವೂ ಅಮೂರ್ತವೂ ಆಯಿತು. ಹೊಸ ಮಾರುಕಟ್ಟೆಯ ವ್ಯವಸ್ಥೆಯ ದೆಸೆಯಿಂದಾಗಿ ಉತ್ಪಾದಕ ಮತ್ತು ಗಿರಾಕಿ; ಉತ್ಪಾದನೆ ಇವುಗಳ ನಡುವಣ ಸಂಬಂಧವು ಅಮೂರ್ತವಾಯಿತು 'ಗಿರಾಕಿ' ಎನ್ನುವ ಪದದ ಅರ್ಥವು ಈ ಆಧುನಿಕ ಯುಗದಲ್ಲಿ ತುಂಬಾ ಅಸ್ಪಷ್ಟವಾಗಿದೆ. ತೀರಾ ಸಾಮಾನ್ಯವಾದ ಅರ್ಥದಲ್ಲಿ ಮಾತ್ರ ನಾವು ಗಿರಾಕಿ ಎಂದರೆ 'ಕೊಂಡುಕೊಳ್ಳುವವನು' ಎಂದು ಬಳಸುತ್ತೇವೆ.

ಗುಣವ್ರತಗಳು

ಕೊಲೆ; ಪರಲಲನೆಯ ಬಗೆಗೆ ಆಸಕ್ತಿಯಿಲ್ಲದಿರುವುದು; ಕಳ್ಳತನವಿಲ್ಲದಿರುವುದು; ಪಂಚೇಂದ್ರಿಯಗಳ ಬಗೆಗೆ ಹಂಬಲಿಸದಿರುವುದು ಅಣುವ್ರತಗಳಾಗುತ್ತವೆ ಎಂದು ಜೈನ ಧರ್ಮವು ನಂಬುತ್ತದೆ.

ಸ್ತವರವೆಂದರೆ ಶ್ಲಾಘನೀಯ ವ್ಯಕ್ತಿತ್ವವುಳ್ಳವಳು. ಗುಣದಂಕಕಾರ್ತಿಗೆ ಸದ್ಗುಣಶೀಲೆಯೆಂದರ್ಥ ಗುಣಶಿಕ್ಷಾವ್ರತವೆಂದರೆ ಜೈನರಲ್ಲಿ ಸದ್ಗುಣಗಳೇ ವ್ರತವಾಗಿರುವವರು ಎಂದರ್ಥ. ಶ್ರಾವಕರು ಹೊಂದಿರುವ ದಿಗ್ವಿರತಿ, ದೇಶವಿರತಿ, ಅನರ್ಥದಂಡವಿರತಿ ಎಂಬ ಮೂರುವ್ರತಗಳನ್ನು ಹೊಂದಿರುವವರು ಎಂದರ್ಥ.

ಗುಪ್ತಚರ

ಕಾಪಟಿಕ, ಉದಾಸೀನ, ಗೃಹಪತಿ, ವೈದೇಹಿಕ, ತಾಪಸ ವ್ಯಂಜನ ಎಂದು ಐದು ವರ್ಗದ ಗೂಢಾಚಾರರು ನ ಪಂಚವರ್ಗ ಎನ್ನಲ್ಪಡುತ್ತಾರೆ. ಇನ್ನೊಬ್ಬರ ಗುಟ್ಟು ತಿಳಿಯುವುದರಲ್ಲಿ ಚತುರನಾದ ಸಮರ್ಥನು ತನಗೆ ಹಿತಕರನಾದರೂ ಕಪಟವಾಗಿ ಕೆಲಸ ಮಾಡುವುದರಿಂದ ಕಾಪಟಿಕನು. ಯಾರು ಕೆಟ್ಟ ಕೆಲಸ ಮಾಡುವರೋ ಅದನ್ನು ಆ ಕೂಡಲೆ ನನಗೆ ತಿಳಿಸಬೇಕು, ಎಂದು ನೇಮಿಸಿ ಕೆಲಸದಲ್ಲಿರುವ ಚಾರವರ್ಗ ಒಂದನೆಯದು. ಇಲ್ಲದ ಅಪರಾಧವನ್ನು ಪ್ರಚಾರ ಮಾಡಿ ಒಳ್ಳೆಯ ಜನರಿಗೆ ಜೀವನಕ್ಕೆ ಕೊಟ್ಟು ಅಪರಾಧಿಗಳನ್ನು ತಿಳಿಸು ಎಂದು, ಗುಟ್ಟಾಗಿ ಹೇಳಬೇಕು. ಅಂತಹವನು ಉದಾಸ್ಥಿತನು. ಒಳ್ಳೇ ಮನೆ, ಹೊಲ–ಗದ್ದೆ, ಕಾಳು–ಕಡಿ, ಅವನಿಗೆ ಕೊಡಬೇಕು. ತನ್ನ ಅನುಯಾಯಿಗಳನ್ನು ಸಾಕಬೇಕು. ಗೃಹಪತಿಯೆಂದರೆ ಸದ್ಗೃಹಸ್ತ. ಅಂತಹ ಗುಣವಂತನನ್ನು ಕರೆದು ಗುಟ್ಟಾಗಿ ಮೊದಲಿನಂತೆ ಹೇಳಬೇಕು. ಅವನು ತೋರಿಕೆಗೆ ಎಲ್ಲರಂತೆ ಸ್ವಕಾರ್ಯ ನಿರತನಾಗಿದ್ದು ರಾಜನಿಗೆ ಚಾರನಾಗಿರುವನು. ವ್ಯಾಪಾರಿಯು ರಾಜಧನವನ್ನು ಹೊಂದಿ ವಾಣಿಜ್ಯ ವೃತ್ತಿಯವನಾದರೂ ಅಪರಾಧಿಗಳ

ಸುದ್ದಿಯನ್ನು ತಿಳಿಸಬೇಕು. ಅವನು ವಾಣಿಕ್ಯಕವ್ಯಂಜನ ಚಾರನು. ಜಡೆ ಬೆಳೆಸಿಕೊಂಡು ಇಲ್ಲವೆ ಬೋಳಿಸಿಕೊಂಡು ಬೈರಾಗಿಯಂತೆ ಆಶ್ರಮದಲ್ಲಿದ್ದುಕೊಂಡು ಅಂತಹ ಶಿಷ್ಯಮಂಡಲವುಳ್ಳವನಾಗಿ ರಾಜಧನದಿಂದ ಬದುಕುತ್ತ ತಪಸ್ಸನ್ನು ನಟಿಸಬೇಕು. ಒಂದು ತಿಂಗಳು, ಎರಡು ತಿಂಗಳಿಗೊಮ್ಮೆ ಫಲಾಹಾರ ಮಾಡಬೇಕು. ಶಿಷ್ಯರು ಅವನು ಸರ್ವಜ್ಞನೆಂದು ಪ್ರಕಟಿಸಬೇಕು. ವಿಶ್ವಾಸ್ಯರಾದುದರಿಂದ ಕುಕರ್ಮ ತಿಳಿಯಲು ಒಳ್ಳೆಯ ಉಪಾಯ. ನೆರೆ ರಾಜ್ಯದ ರಾಜನು ಒಗ್ಗಟ್ಟಿನಿಂದ ಒಳಿತು ಮಾಡುವವನೂ ತನ್ನ ಮಿತ್ರತ್ವ ಬಿಟ್ಟರೆ ತನ್ನನ್ನು ಸಂಹರಿಸಬಲ್ಲವನೂ ಆದರೆ ಅವನು ಮಧ್ಯಮ ಶತ್ರುವು. ಪ್ರಜ್ಞಾ ಉತ್ಸಾಹ ಗುಣಪ್ರಕೃತ ಸಮರ್ಥನಾದವನು ವಿಜಿಗೀಷು ಮಧ್ಯಮ ಎಂಬ ಇಬ್ಬರು ಒಟ್ಟಾದರೆ ಅವರನ್ನು ಮಿತ್ರರಾಗಬಯಸುವ, ಬೇರೆ ಬೇರೆಯಾದರೆ ದಮನಿಸುವ, ಸಾಮರ್ಥ್ಯವುಳ್ಳವನು ಉದಾಸೀನನು, ಅಂತಹವನ ವಿಚಾರವನ್ನೂ ತಿಳಿಯಬೇಕು. ಇಂತಹವರು ರಾಜ್ಯದ ಒಳಗಿನವರೂ, ಹೊರಗಿನವರೂ ಆಗಿರಬಹುದು. ಇವರ ಬಲಸಂಚಯ, ಪ್ರಯತ್ನಗಳ ಪರಿಜ್ಞಾನವು ಸದಾ ಇರಬೇಕು. (ಮನುಸ್ಮೃತಿ 7–155)

ಗುಪ್ತಿ

ಸಮ್ಯಕ್ ಪ್ರಕಾಶದಿಂದ ಯೋಗಗಳ ನಿಗ್ರಹ ಮಾಡುವುದು ಗುಪ್ತಿಯೆನಿಸುತ್ತದೆ. (ತತ್ವಾರ್ಥ ಸೂತ್ರ 9–4) ಗುಪ್ತಿಯೆಂದರೆ ಕರ್ಮನಿರೋಧಕ್ಕೆ ಅಥವಾ ಸಂವರಸಾಧನಕ್ಕೆ ಅಗತ್ಯವಾದ ಆಚರಣೆ: ಮನ ವಚನ ಕಾಯಗಳ ವ್ಯಾಪಾರವನ್ನು ಬಾಹ್ಯ ಪ್ರವರ್ತನಕ್ಕೆ ಬಿಡದೆ ತಡೆಯುವುದು. ಇದೇ ಕ್ರಮವಾಗಿ ಮನೋಗುಪ್ತಿ. ವಚನಗುಪ್ತಿ, ಕಾಯಗುಪ್ತಿ. – ಇವು ಗುಪ್ತಿತ್ರಯಗಳು.

ಗುರಿಕಾರ ಮತ್ತು ಕೂಡುಕಟ್ಟು

ಕುಲಕ್ಕೆ ಸಂಬಂಧಿಸಿದ ನಿಯಾಮಾವಳಿಗಳಿವೆ. ಕೂಡುಕಟ್ಟು (ಹಿರಿಯರ ಸಭೆ), ಆಧುನಿಕ ಅರ್ಥದಲ್ಲಿ ಪರಿಷತ್ತು ಗುರಿಕಾರ ಆಯಾ ಜನಜಾತಿ ಪರಿಷತ್ತಿನ ಪ್ರಧಾನಿ ಇಲ್ಲಿ ಗುರಿಕಾರನ ಕೆಲಸ ಕಾರ್ಯಗಳನ್ನು ಗಮನಿಸಬೇಕು. ಅವನು ಕುಲದ ವಿಚಾರ: ಸರಿತಪ್ಪುಗಳು ನಿರ್ಣಯ : ದೈವಗಳನ್ನು ಮಾತಾಡಿಸುವುದು ಇತ್ಯಾದಿಗಳನ್ನು ಹೊರಬೇಕು. ಅಂದರೆ ಆಯಾ ಕುಲದ ಮೇಲ್ವಿಚಾರಕನಾಗಿ ಕೆಲವು ಜವಾಬ್ದಾರಿಗಳನ್ನು ಹೊರಬೇಕು. ಗುರಿಕಾರ ನ್ಯಾಯ ತೀರ್ಮಾನ ಮಾಡಬೇಕು ದೈವ ಸರ್ವೋಚ್ಚ ಅಧಿಕಾರ ಪಡೆದರೆ ಅದರ ಅನಂತರದ ಅಧಿಕಾರವನ್ನು ಗುರಿಕಾರ ಅನುಭವಿಸುತ್ತಾನೆ. ಅನೇಕ ಕುಟುಂಬದವರು ಸೇರಿ (ಕೂಡುಕಟ್ಟು) ಒಬ್ಬ ಗುರಿಕಾರನನ್ನು ಆಯ್ಕೆ ಮಾಡುತ್ತಾರೆ. ಇದು ಅವರ ಜನಜಾತಿ ಪರಿಷತ್ತಿನ ನಿಯಮ. ಗುರಿಕಾರನಿಗೆ ಪ್ರಾದೇಶಿಕ ಯಜಮಾನಿಕೆ ಇಲ್ಲ. ಆದರೆ ಅವರ ಜಾತಿಯ ಜನರ ಯಜಮಾನಿಕೆಯಿದೆ. ಈ ಅರ್ಥದಲ್ಲಿಯೂ ಅದು ಒಂದು ಪ್ರತ್ಯೇಕ ಸರಕಾರವನ್ನು ನಿರ್ಮಿಸಿಕೊಳ್ಳುತ್ತದೆ. ಧಾರ್ಮಿಕವಾಗಿಯೂ ಇದಕ್ಕೆ ಇದರದೇ ಆದ ಅನನ್ಯ ಸಂಹಿತೆಗಳಿರುತ್ತವೆ. ತನ್ನ ಸ್ಥಾನಮಾನಗಳನ್ನು ಹಿಂದೂ ಧರ್ಮದ ವ್ಯಾಖ್ಯೆಗೆ ಅನುಸಾರವಾಗಿ ರೂಪಿಸಿಕೊಂಡಿಲ್ಲ. ಮರುಮದುವೆ;

ಬಹುಪತ್ನಿತ್ವ; ಲೈಂಗಿಕ ಸಂಬಂಧ; ದೈವಾರಾಧನೆ ಇವು ಬೇರೆ ಮಾದರಿಯದು, ಈ ಅರ್ಥದಲ್ಲಿ ಅದು ಪ್ರತ್ಯೇಕ ರಾಜಕೀಯ; ಧಾರ್ಮಿಕ ವ್ಯವಸ್ಥೆಯನ್ನು ಹೊಂದಿದೆ. ಕುಲದ ಆಚಾರ ವಿಚಾರಗಳಲ್ಲಿ ತಮ್ಮನ್ನು ತಾವೇ ರೂಪಿಸಿಕೊಂಡಿವೆ. ಹೀಗಾಗಿ ಮಲೆ ಕುಡಿಯರು ನಂಬುವ ರಾಜಕೀಯ ನಿಲುವುಗಳು ಪ್ರತ್ಯೇಕ ಹಾಗೂ ಅನನ್ಯ ಮತ್ತು ಇದಕ್ಕೂ ಭೂ ಯಜಮಾನಿಕೆಗೂ ಯಾವುದೇ ಸಂಬಂಧವಿಲ್ಲ. ಪ್ರಭುತ್ವ; ಜಾತಿ; ನಾಗರಿಕತೆ ಮುಂತಾದುವುಗಳನ್ನು ಪಶ್ಚಿಮದ ನಾಗರಿಕ ಸಮಾಜದ ವ್ಯಾಖ್ಯೆಗೆ ಅನುಸಾರವಾಗಿ ಬಿಡಿಸಲು ಭಾರತೀಯರು ಹೊರಟರೆ ಬರಿಯ ಅನಾಗರಿಕರಾಗಿ ಕಾಣಿಸಬಹುದು.

ಹಿಂದಿನ ಕಾವ್ಯಗಳಲ್ಲಿ ಗುರಿಕಾರರನ್ನು ಊರಿನ ಒಡೆಯ ಗಾವುಂಡ ಎಂದೂ ಕರೆದಿದ್ದಾರೆ.

ವಿವರಗಳಿಗೆ ನೋಡಿ: Sudipta kaviraj (ED) 1977) polilies in india. Oup. madan. T.N. 2001. Non-renuciahin m.n. srinivas. 1987. The dominant caste and othwr oup. Essays.

ಗುರು

ಗುರು–3: (ಅ) ತಾಯಿ, ತಂದೆ, ಆಚಾರ್ಯ (ವಾರಾಮಾ. ಅಯೋಧ್ಯಾ 111–2) (ಆ) ದೀಕ್ಷಾಗುರು, ಶಿಕಾ–, ಜ್ಞಾನ–(ಶಿಶಬ್ದ.92) (ಇ) ಚೋದಕ, ಬೋಧಕ, ಮೋಕ್ಷದ (ಬ್ರಹ್ಮವಿದ್ಯೋಪನಿಷತ್ತು–ದಿ ಉಪನಿಷದ್ಸ್, 319).

ಗುರು–5: (ಅ) ನೋ. ಪಿತೃ–5. (ಆ) ನೋ. ಪರಮೇಷ್ಠಿ–5 (ಇ) ಪಿತಾ, ಮಾತಾ, ಅಗ್ನಿ, ಆತ್ಮಾ, ಗುರು, (ಮಹಾಭಾ. ವನ. 214–27) (ಈ) ಗುರು, ಪರಮ–, ಪರಮೇಷ್ಠಿ–, ಪರಾಪರ–, ಇನ್ನಿತರ ಬ್ರಹ್ಮವಿದ್ಯಾಚಾರ್ಯವರ್ಯರು (ಸಾಂಖ್ಯ.38).

ಗುರು–6: ಪ್ರೇರಕ ಗುರು, ಸೂಚಕ–, ವಾಚಕ–, ದರ್ಶಕ–, ಶಿಕ್ಷಕ–, ಬೋಧಕ– (ಕುಲಾಗಮ–ಸಂ.111)

ಗುರು–7: ಗುರು, ಮಾತಾ, ಪಿತಾ, ಸೂರ್ಯ, ಚಂದ್ರ, ಅಗ್ನಿ, ಮಂತ್ರದಾತಾ (ಸಂ.128).

ಗುರು–8: (ಅ) ಬೋಧಕಗುರು, ವೇದಕ–, ನಿಷಿದ್ಧ–, ಕಾಮ್ಯ–, ಸೂಚಕ–, ವಾಚಕ–, ಕಾರಣ–, ವಿಹಿತ (ವಿಚಿಂ. 1–27). (ಆ) ಅಕ್ಷರಾಭ್ಯಾಸದ ಗುರು, ಗಾಯತ್ರೀ ಉಪದೇಶದ–, ವೇದಾಧ್ಯಯನದ–, ಶಾಸ್ತ್ರಾಭ್ಯಾಸದ–, ಪುರಾಣೇತಿಹಾಸದ–, ಮತಸಂಪ್ರದಾಯ ಬೋಧನೆಯ–, ಇಂದ್ರಜಾಲಾದಿ ವಿದ್ಯೆಯ–, ಬ್ರಹ್ಮೋಪದೇಶಕ– (ವಿದ್ಯಾಕ. 4). (ಶ್ರೀವತ್ಸ ನಿಘಂಟು)

ಸ್ವಲ್ಪವಾದ ಶಾಸ್ತ್ರಾಧ್ಯಯನಕ್ಕೆ ಉಪಕಾರ ಮಾಡುವವನನ್ನು ಕೂಡ ಈ ಶಾಸ್ತ್ರದಲ್ಲಿ ಗುರುವೆಂದು ಸಮ್ಮತಿಸುತ್ತೇವೆ. ಶಾಸ್ತ್ರಜ್ಞಾನ ಉಪಕಾರವು ಆಗಲೂ ಉಂಟಾಯಿತು. ಹಿಂದೆ ಹೇಳಿದಂತೆ ಕೇವಲ ಸಂಸ್ಕಾರ ಕರ್ತೃವು ಗುರುಸಂಜ್ಞಾ ಯೋಗ್ಯನಾದರೂ ಇವನು ಅರ್ಥದಲ್ಲಿ ಗುರುವು, ಮಹತ್ವ ಉಳ್ಳವನು.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೨-೧೪೯
ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ೧೯೯೯ ಶ್ರೀವತ್ಸ ನಿಘಂಟು

ಗೃಹ

ಗೃಹ ರಚನೆಗೆ ಸಂಬಂಧಿಸಿದಂತೆ ವರಾಹಮಿಹಿರನ ನಿಯಮಗಳನ್ನು ನಾವಿಲ್ಲಿ ಗಮನಿಸಬಹುದು : ಬ್ರಾಹ್ಮಣನ ಮನೆಯು ಐದು ಕೋಣೆಗಳನ್ನೂ, ಕ್ಷತ್ರಿಯನದ್ದು ನಾಲ್ಕು, ನಾಲ್ಕು, ವೈಶ್ಯನದ್ದು ಮೂರು ಮತ್ತು ಶೂದ್ರನದ್ದು ಎರಡು ಕೊಠಡಿಗಳನ್ನೂ ಹೊಂದಿರಬೇಕು. ಇದಲ್ಲದೆ ಮುಖ್ಯ ಕೊಠಡಿಯ ಉದ್ದಗಲಗಳು ನಾಲ್ಕೂ ವರ್ಣಗಳಲ್ಲಿ ಪ್ರತಿಯೊಂದರ ಅಂತಸ್ತಿಗೆ ತಕ್ಕಂತೆ ಇರಬೇಕೆಂದು ಅವನು ನಿಯಮಿಸುತ್ತಾನೆ (ಬೃಹತ್‌ಸಂಹಿತಾ, ೫೨. ೧೨-೧೩). (ಆರ್. ಎಸ್. ಶರ್ಮ. ೨೦೦೪. ಪು.೧೪೭)ಆಧುನಿಕ ಪರಿಭಾಷೆಯಲ್ಲಿ ಇದನ್ನು ವಾಸ್ತು ಎಂದು ಕರೆಯುತ್ತಾರೆ. ಈಗ ಇದನ್ನು ಆಯವೆಂದು ಕರೆಯುತ್ತಾರೆ. ರಾಶಿಗೆ ಅನುಗುಣವಾಗಿ ಮನೆಯ ಆಯಗಳಿರುತ್ತವೆ. ಆಯವು ಶುಭ, ಅಶುಭಗಳನ್ನು ಸೂಚಿಸುತ್ತವೆ.

ಗೋಘ್ನ

ಗೋಘ್ನ (ನಾಮಪದ) ಹಸುಗಳನ್ನು ಕೊಂದವನು; ಗೋಹತ್ಯೆ ಮಾಡಿದವನು. ಗೋಮಾಂಸದಿಂದ ತಯಾರಿಸಿದ ಅನ್ನವನ್ನು ಗೋಘ್ನ ಎಂದು ಕರೆಯುತ್ತಾರೆ.ಗೋಹತ್ಯೆ ನಿಷಿದ್ಧವಲ್ಲ. ಗೋಮಾಂಸವನ್ನು ಹಿಂದೆ ಅತಿಥಿಗೆ ಉಣಬಡಿಸುತ್ತಿದ್ದರು.

ಯಜ್ಞಗಳಲ್ಲಿ ಅಧಿಕ ಪ್ರಮಾಣದಲ್ಲಿ ಪ್ರಾಣಿ ಬಲಿ, ಮುಖ್ಯವಾಗಿ ಗೋ ಸಂಪತ್ತಿನ ನಾಶ ಜರುಗುತ್ತಿತ್ತು. ಆಗ ಅತಿಥಿಯನ್ನು ಗೋಘ್ನಾ ಎಂದರೆ ಗೋವಿನ ಊಟ ನೀಡಲ್ಪಡುವವನು ಎಂದೇ ಕರೆಯುತ್ತಿದ್ದರು. (ಆರ್.ಎಸ್. ಶರ್ಮ ೧೯೯೭ ಪು.೮೭)

ಗೋತ್ರ

ಇವರ ಸಾಮಾಜಿಕ ವ್ಯವಸ್ಥೆ ಮುಖ್ಯವಾಗಿ ಸಮುದಾಯ ವ್ಯವಸ್ಥೆಯೇ. ಆದರೆ ಆಹಾರ ಸಂಗ್ರಹಣ ಜೀವನ ನಡೆಸುತ್ತಿದ್ದ ಅರಣ್ಯವಾಸಿಗಳಂತೆ ಮಾತ್ರ

ಪ್ರಧಾನ ವ್ಯವಸ್ಥೆಯಲ್ಲ. ಪಿತೃ ಸ್ವಾಮ್ಯವಾದದ್ದು. ಇದರ ಪ್ರತಿಫಲನವು ಅವರ ಬಹುತೇಕ ದೇವರುಗಳೆಲ್ಲರೂ ಪುರುಷರೇ ಎಂಬುದರಲ್ಲಿ ಕಾಣುತ್ತದೆ. ಪಶುಗಳೇ ಅವರ ಪ್ರಧಾನ ಸಂಪತ್ತಾದ ಕಾರಣ ಆರ್ಯರು ತಮ್ಮ ಸಮುದಾಯಗಳನ್ನು ಗೋತ್ರಗಳು ಎನ್ನುತ್ತಿದ್ದರು. ಒಂದು ಗೋತ್ರಕ್ಕೆ ಸೇರಿದವರ ಪಶುಸಂಪತ್ತು ಒಟ್ಟು ಆ ಗೋತ್ರದ ಸಾಮೂಹಿಕ ಸಂಪತ್ತು. (ಡಿ. ಡಿ. ಕೊಸಾಂಬಿ ೧೯೬೮ ಪು. ೭೫)

ಗೋತ್ರಗಳಲ್ಲಿಯೂ ತಾರತಮ್ಯವಿದೆ. (Romila Thapar 1975 P.31) ಸವರ್ಣೀಯ ಸ್ತ್ರೀಯನ್ನು ಮದುವೆಯಾಗಬೇಕು. ಆದರೆ ಆಕೆ ವಿಭಿನ್ನ ಗೋತ್ರದವಳಾಗಿರಬೇಕು ಎಂದು ಮನುವು ಹೇಳುತ್ತಾನೆ. (ಮನುಸ್ಮೃತಿ 3 – 5) ಈ ಮೂಲಕ ಮನುವು ಸಗೋತ್ರ ವಿವಾಹವನ್ನು ಮನುವು ಅಲ್ಲಗಳದಂತೆ ಆಗಿದೆ.

ಪ್ರತಿಯೊಂದು ಗೋತ್ರಕ್ಕೂ ಪ್ರವರ– ಅವರ ಪೂರ್ವಜರೆಂದು ಹೇಳಲಾದ ಋಷಿಗಳ ಹೆಸರುಗಳು ಎಂಬುದು ಬಂದಿದೆ. ಯಾಗದಲ್ಲಿ ಗೋತ್ರ ಮತ್ತು ಪ್ರವರದ ಉಪಯೋಗ ಎರಡು ತರಹದ್ದು. ಅದು ಆಪ್ರೀ ಸೂಕ್ತವನ್ನು ನಿರ್ಧರಿಸುತ್ತದೆ. ಇನ್ನೊಂದು ಉಪಯೋಗ ದೇವತೆಗಳ ಆಹ್ವಾನದಲ್ಲಿ.

ಮೂಲ ಋಷಿಗಳು ಏಳು ಜನ. ಅವರಲ್ಲಿ ನಾಲ್ವರು ಮಾನವರ ಮೂಲ ಪುರುಷರು. ಆದರೆ ಈ ನಾಲ್ವರಿಂದ ಹದಿನೆಂಟು ಪ್ರತ್ಯೇಕ ಪಂಗಡಗಳು ಹುಟ್ಟಿಕೊಂಡವು.

(ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.2 1971 ಪುಟ. 240)

ಪಾಣಿನಿಯ 'ವಿದ್ಯಾ–ಯೋನಿ ಸಂಬಂಧ' ಎಂಬ ಸೂತ್ರದ ಪ್ರಕಾರ ಗುರು ಮತ್ತು ತಂದೆ ಇಬ್ಬರ ಹೆಸರಿನಲ್ಲಿ ಗೋತ್ರಗಳನ್ನು ಗೊತ್ತು ಪಡಿಸಿಕೊಳ್ಳಬಹುದಾಗಿತ್ತು. (ಭಗವತ್ ಶರಣ ಉಪಾಧ್ಯಾಯ ೨೦೦೪. ಪು. ೧೯೧)

ವೈದಿಕ ಧರ್ಮದ ಪ್ರಕಾರ ಗೋತ್ರ ಪದ್ಧತಿಯು ಮೇಲುವರ್ಗದವರಿಗೆ ಮೀಸಲು. ಕೆಳಜಾತಿಯ ಜನರಲ್ಲಿ ಕುಲಪದ್ಧತಿಯಿದೆ. ವೈದಿಕ ಧರ್ಮದಲ್ಲಿ ಗೋತ್ರ ಪದ್ಧತಿಯು ಸಪ್ತ ಋಷಿಗಳ ಹೆಸರಿನಿಂದ ಕೂಡಿದೆ. ಸಗೋತ್ರದಲ್ಲಿ ವಿವಾಹ ನಿಷಿದ್ಧವೆಂದು ಗೋತ್ರ ಪದ್ಧತಿಯು ತಿಳಿಸುತ್ತದೆ. ಕೊಸಾಂಬಿಯವರು ಈ ರೀತಿ ಹೇಳುತ್ತಾರೆ.

ಗೋತ್ರಗಳು ಸಮುದಾಯ ವ್ಯವಸ್ಥೆಯನ್ನು ಮಾರ್ಪಡಿಸಿಕೊಂಡು ವರ್ಣ ವ್ಯವಸ್ಥೆಗೆ ರೂಪಾಂತರವಾದ ಪಂತ, ನಮ್ಮ ದೇಶಕ್ಕೆ ಆರ್ಯರು ಬಂದ ನಂತರದಲ್ಲಿ ಸಾಧಿಸಿದ ಮೊತ್ತಮೊದಲ ಪ್ರಮುಖ ಬದಲಾವಣೆ. ಆದಿಮ ಪಶುಪಾಲಕ ಸಮಾಜವನ್ನು ಬಿಟ್ಟು ಕಬ್ಬಿಣದ ಬಳಕೆಯನ್ನರಿತ ಕೃಷಿಕ ವರ್ಗ ಸಮಾಜ ರೂಪುಗೊಂಡ ಬದಲಾವಣೆ. ಅಲ್ಲಿಗೆ ಗೋತ್ರಗಳು–ಸಮುದಾಯಗಳು ಸಾಮಾಜಿಕವಾಗಿ ಅರ್ಥರಹಿತವಾಗಿ ಹೋದವು. ಆದರೆ ಎಲ್ಲ ವಿಷಯಗಳಲ್ಲಿಯೂ ನಮ್ಮ ದೇಶ ಹಳೆಯ ಕಸವನ್ನು ಬಿಸಾಡದೆ ಉಳಿಸಿಕೊಂಡೇ ಬಂದಿದೆ. ಇಂದಿಗೂ ಗೋತ್ರಗಳು ಬ್ರಾಹ್ಮಣರಲ್ಲಿ

ಉಳಿದುಕೊಂಡು ಬಂದಿವೆ. ವಿವಾಹ ವಿಷಯದಲ್ಲಿ ಸಗೋತ್ರ ವಿವಾಹ ನಿಷಿದ್ಧವೆಂಬುದೂ ಉಳಿದು ಬಂದಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಗೋತ್ರಗಳು ಹೊರಟು ಹೋಗಿ ಕುಲಗಳು ಬಂದವಾದರೂ, ಆಚಾರಗಳಲ್ಲಿ ಇಂದಿಗೂ 'ಕುಲಗೋತ್ರ'ಗಳೆರಡೂ ಮುಖ್ಯವೇ.

"ಮುಖ್ಯ ಋಷಿಗಳ ಸಂಖ್ಯೆಯು ಏಳೇ ಇದ್ದರೂ ಕೂಡ ಬ್ರಾಹ್ಮಣರಲ್ಲಿ ೧೮ ಮುಖ್ಯ ಗೋತ್ರಗಳಿವೆ. (J. Brough the early brahmainical system of gotra and pravara (ಕೆಂಬ್ರಿಡ್ಜ್, ೧೯೫೩) ಪುಟ ೨೭ರಲ್ಲಿ 'ಕೇವಲ ಅಂಗೀರಸ'ನನ್ನು 'ಹಿರಣ್ಯಕೇಶಿ ಸತ್ಯಸಾಧ' ಕೈ ಬಿಟ್ಟಿದೆ ಎಂದು ತಿಳಿಸುತ್ತಾರೆ. ಆದರೆ ಅದನ್ನು ಒಂದು ಆಕಸ್ಮಿಕ ಎಂದು ಪರಿಗಣಿಸುತ್ತಾರೆ. ಆದರೆ ಈ ಪ್ರಮಾಣದ ಲೋಪ ಅಸಂಭವ. Journal of the American oriental society ೭೩.೨೦೨–೨೦೮ ನಲ್ಲಿ ಪ್ರಕಟವಾದ ನನ್ನ ವಿಮರ್ಶೆಯನ್ನು ಪ್ರತಿವಾದ ಎಂದು ತಪ್ಪಾಗಿ ಅರ್ಥ ಮಾಡಿಕೊಂಡರು. ಆದರೆ ನಾನು ಹೇಳಿದ್ದು ಗೋತ್ರದ ಬಗೆಗಿರುವ ತಾತ್ವಿಕ ಕೃತಿಗಳನ್ನು ಸ್ವತಂತ್ರವಾಗಿ ಅವಲೋಕಿಸಬೇಕು ಎಂದಷ್ಟೇ. ಉದಾ: ಮಥುರಾದಲ್ಲಿನ ಬ್ರಾಹ್ಮೀ ಶಾಸನಗಳಲ್ಲಿ ಉಲ್ಲೇಖಿಸಿರುವ ಸೈಗ್ರವ ಗೋತ್ರದ ಉಲ್ಲೇಖ ಗ್ರಂಥಗಳಲ್ಲೆಲ್ಲೂ ಇಲ್ಲ. ಮತ್ತೂ ವಿಚಿತ್ರವೆಂದರೆ ಅಸಂಖ್ಯಾತ ಬ್ರಾಹ್ಮಣ ಗುಂಪುಗಳು ಒಪ್ಪಿಕೊಂಡಿರುವ ಈ ತತ್ವದ ಸತ್ಯಾಸತ್ಯತೆಯನ್ನು ಇಲ್ಲಿಯವರೆಗೆ ಪರೀಕ್ಷಿಸುವ ಗೋಜಿಗೆ ಹೋಗದಿರುವದು. ಮಹಾರಾಷ್ಟ್ರದ ನಗರವಾಸಿಗಳು ಬ್ರಾಹ್ಮಣರನ್ನು ಮೂಲಭೂತವಾಗಿ ಸಾರಸ್ವತ, ಚಿತ್ಪಾವನ, ದೇಶಸ್ತ ಮತ್ತು ಕರ್ಹಾಡ ಎಂಬ ನಾಲುಕ ಗುಂಪುಗಳಾಗಿ ವಿಂಗಡಿಸುತ್ತಾರೆ. ೧೯೪೧ರ ಬಂಬೆ ಪ್ರಾಂತ್ಯದ ಜಾತಿ ಗಣತಿಯ ಕೋಷ್ಟಕಗಳು ತೋರುಸುವಂತೆ ಮೇಲೆ ಹೇಳಿದ ನಾಲ್ಕು ಗುಂಪಿಗಿಂತಲೂ ಉಳಿದ ಬ್ರಾಹ್ಮಣಗುಂಪುಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಗ್ರಂಥಗಳು ಮುಂತಾದವು ಮೇಲೆ ಹೇಳಿದ ನಾಲ್ಕು ಗುಂಪಿನವರ ಹಿಡಿತದಲ್ಲಿತ್ತು. ಆದರೆ ಉಳಿದ ಬ್ರಾಹ್ಮಣರ ಸಂಖ್ಯೆ ಅವರಿಗಿಂತ ಹೆಚ್ಚಿಗೆ ಇತ್ತು. ವಿಎಸ್. ಸುಕ್ತಂಕರ್ ಅವರು ತಮ್ಮ ಉತ್ಕೃಷ್ಟ ಕೃತಿಯಲ್ಲಿ –Epic studies vi (ABORI 18 1-76 Mem Ed I. 278-337) ಸ್ಪಷ್ಟಪಡಿಸುವಂತೆ ಬೃಗುಗಳಿಗೂ ಮಹಾಭಾರತದ ಹಿಗ್ಗಿಸುವಿಕೆಗೂ ಸಂಭಂಧವಿತ್ತು. ಇಲ್ಲಿ ಗಮನಾರ್ಹ ವಿಚಾರವೆಂದರೆ ಭಾರ್ಗವರು ಮಹಾಭಾರತವನ್ನು ಹಿಗ್ಗಿಸುವ ಕ್ರಿಯೆಯು, ನಾರಾಯಣೀಯವನ್ನು ಹಿಗ್ಗಿಸುವ ಕ್ರಿಯೆಯನ್ನು ಅವಲಂಬಿಸಿರಲಿಲ್ಲ. ಆದರೆ ಆ ಪ್ರಯತ್ನಕ್ಕೆ ವಿರೋಧವೂ ಇರಲಿಲ್ಲ. ಏಕೆಂದರೆ, ಮಹಾಭಾರತವನ್ನು ಹಿಗ್ಗಿಸುವ ಪ್ರಕ್ರಿಯೆ ಹೆಚ್ಚು ಕಡಿಮೆ ನಿಂತು ಹೋಗುವ ಹಂತಕ್ಕೆ ಬಂದಾಗಲೂ ನರಾಯಣೀಯವನ್ನು ಹಿಗ್ಗಿಸುವ ಕ್ರಿಯೆ ಮುಂದುವರೆದೇ ಇತ್ತು. ಜನಪ್ರಿಯ ಮಹಾಭಾರತ ಆವೃತ್ತಿಗಳಲ್ಲಿ ಕಂಡುಬರುವ ಪ್ರಸಿದ್ಧ ಅಶೀರ್ವಚನದ ಶ್ಲೋಕ ನಾರಾಯಣಂ ನಮಸ್ಕೃತ್ಯವನ್ನು ವಿಮರ್ಶಾತ್ಮಕವಾಗಿ

ಸಂಪಾದಿಸಿರುವ ಆವೃತ್ತಿಯಲ್ಲಿ ಕೈಬಿಡಲಾಗಿದೆ. ಆದರೆ ಭಾರ್ಗವ ಪ್ರಕ್ಷೇಪದ ಬಹಳಷ್ಟು ಅಂಶಗಳು ಹಾಗೇ(ಉದಾ : ಪರಶುರಾಮನಿಗೆ ನೀಡಿರುವ ಪ್ರಾಮುಖ್ಯ) ಉಳಿದುಕೊಂಡಿವೆ. ಗೀತೆ ೧೦.೨೫ರಲ್ಲಿ ಕೃಷ್ಣ ತನ್ನನ್ನು ಮಹಾನ್ ಋಷಿಗಳಲ್ಲಿ ಭೃಗು ಎಂದು ಹೇಳಿಕೊಳ್ಳುತ್ತಾನೆ. (ಮಹರ್ಷೀಣಾಂ ಭೃಗುರಹಂ), ಆದರೆ ಈ ಋಷಿಗೆ ವೈದಿಕ ಪರಂಪರೆಯಲ್ಲಿ ಯಾವ ಸ್ಥಾನವೂ ಇಲ್ಲ ಮತ್ತು ಇದ್ದರೂ ಅದೂ ಕೂಡಾ ಅದು ತೀರಾ ಗೌಣವಾದ ಸ್ಥಾನ."(ಡಿ. ಡಿ. ಕೊಸಾಂಬಿ೨೦೦೩ ಪು. ೨೫)

ವಿವರಗಳಿಗೆ ನೋಡಿ: ಡಿ. ಡಿ. ಕೊಸಾಂಬಿ 2003 ಪುರಾಣ ಮತ್ತು ವಾಸ್ತವ ಪುಟ. 75–76, 25

ಡಿ. ಡಿ. ಕೊಸಾಂಬಿ 1998 ಪ್ರಾಚೀನ ಭಾರತದಲ್ಲಿ ಚರಿತ್ರೆ

ಆರ್. ಎಸ್. ಶರ್ಮ 2007 ಪ್ರಾಚೀನ ಭಾರತ ಪುಟ. 86

ಡಾ. ಟಿ.ವಿ.ವೆಂಕಟಾಚಲಶಾಸ್ತ್ರೀ 1999 ಶ್ರೀವತ್ಸ ನಿಘಂಟು

ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 3 – 5

Romila Thapar 1975 The Past and Prejudice P. 31

ಶಂಬಾ ಜೋಶಿ 1999 ಸಂಪುಟ. 2 ಪುಟ. 183

ಬಿ. ವಿ. ವೀರಭದ್ರಪ್ಪ 2007 ಅಶ್ವಘೋಷನ ವಜ್ರಸೂಚಿ ಪುಟ. 14

ಯುಗಯಾತ್ರೀ ಭಾರತೀಯ ಸಂಸ್ಕೃತಿ 1971 ಸಂಪುಟ. 2 ಪುಟ. 240–254.

ಗೋತ್ರಸ್ಖಲನೆ

ಹೆಸರನ್ನು ತಪ್ಪಾಗಿ ಕರೆಯುವುದನ್ನು ಗೋತ್ರಸ್ಖಲನೆಯೆಂದು ಕರೆಯುತ್ತಾರೆ. ಹೆಸರುಗಳನ್ನು ಸರಿಯಾಗಿ ಹೇಳಬೇಕು ಎಂಬುದು ಭಾವಾರ್ಥ. ಸಂಸ್ಕೃತದಲ್ಲಿ ಪರಿಚಯವನ್ನು ಹೇಳುವಾಗ ಮತ್ತು ಹಿರಿಯರಿಗೆ ಪಾದ ನಮಸ್ಕಾರ ಮಾಡುವಾಗ ಹೆಸರು; ತಂದೆ–ತಾಯಿಯರ ಹೆಸರು; ಗೋತ್ರಗಳ ಹೆಸರು ಹೇಳುವುದು ಪದ್ಧತಿಯಾಗಿದೆ. ತನ್ನ ಹೆಸರು ಹೇಳಿ ಅನಂತರ ಗೋತ್ರವನ್ನು ಸರಿಯಾಗಿ ಉಚ್ಚರಿಸಬೇಕು. ಅಲ್ಲಿ ಸ್ಖಾಲಿತ್ಯವುಂಟಾಗಬಾರದು. ಉಂಟಾದರೆ ಅದು ತಪ್ಪು ಎನ್ನುತ್ತೇವೆ. ವೈದಿಕ ಧರ್ಮದ ಪ್ರಕಾರ ಗೋತ್ರ ಪದ್ಧತಿಯು ಮೇಲುವರ್ಗದವರಿಗೆ ಮೀಸಲು. ಕೆಳಜಾತಿಯ ಜನರಲ್ಲಿ ಕುಲಪದ್ಧತಿಯಿದೆ. ವಯದಿಕ ಧರ್ಮದಲ್ಲಿ ಗೋತ್ರ ಪಗ್ಧತಿಯು ಸಪ್ತ ಋಷಿಗಳ ಹೆಸರಿನಿಂದ ಕೂಡಿದೆ. ಸಗೋತ್ರದಲ್ಲಿ ವಿವಾಹ ನಿಷಿದ್ಧವೆಂದು ಗೋತ್ರ ಪದ್ಧತಿಯು ತಿಳಿಸುತ್ತದೆ.

ಗೋಸಾಸ

ಗೋಸಾಸ ಪದವು ಪಟ್ಟದಕಲ್ಲು, ಐಹೊಳೆ, ಅಸೂಟಿ ಅಣ್ಣಿಗೇರಿ, ಸೊರಟೂರು, ಬೆಲಿಹೊಡ, ಚಂಚಲಿ, ಗುಡಿಗೇರಿ, ಹಳೇರಿತ್ತಿ, ದೇವಗೇರಿ ಹಿರೇಮಾಗನೂರು ಹೊಲಿಹಳ್ಳಿ ಬೆಳಾಗಿ ಮೊದಲಾದ ಶಾಸನಗಳಲ್ಲಿ ಈ ಪದವು ಕಂಡು ಬರುತ್ತದೆ. ಅವರು ಹೇಳುತ್ತಾರೆ.

ವಿವರಗಳಿಗೆ ನೋಡಿ: ಎಂ. ಎಂ. ಕಲಬುರ್ಗಿ. ೨೦೦೬. ಪು. ೧೯೦–೧೯೨

ಗ್ರಂಥಾಲಯ

ಗ್ರಂಥ ಭಂಡಾರ, ಗ್ರಂಥಾಲಯ, ಪುಸ್ತಕಮನೆ, ಓದುಮನೆ ಎನ್ನುವುದು ಸಂವಾದಿಯಾದ ಪದಗಳಾಗಿವೆ. ಆದರೆ ಗ್ರಂಥಾಲಯಗಳ ಚರಿತ್ರೆಯು ಕುತೂಹಲದಾಯಕವಾಗಿದೆ. ಗ್ರಂಥಾಲಯಗಳು ಎಂದರೆ ಅನೇಕ ರೀತಿಯ ಗ್ರಂಥಗಳು ಒಂದೆಡೆ ಸಿಗುವುದು ಎಂದರ್ಥವಾಗಿದೆ. 1753ರಲ್ಲಿ ಬ್ರಿಟನ್ನಿನಲ್ಲಿ ರಾಷ್ಟ್ರೀಯ ಗ್ರಂಥಾಲಯ ಎಂಬ ಪರಿಕಲ್ಪನೆಯೂ ಬಂದಿತು. ಪುಸ್ತಕಗಳ ಖರೀದಿ, ಹಸ್ತ ಪ್ರತಿ ಸಂಗ್ರಹ, ಮುಂತಾದವು ಅಗತ್ಯವೆಂದು ಆಗಿನ ಬ್ರಿಟೀಷ್ ಪಾರ್ಲಿಮೆಂಟ್ ನಿರ್ಧರಿಸಿತು. ಅನೇಕ ರೀತಿಯ ಪುಸ್ತಕಗಳು ಒಂದೆಡೆಯಲ್ಲಿ ದೊರೆಯುವುದರಿಂದ ಓದುಗರಿಗೆ ಅವರವರ ಆಸಕ್ತಿಗೆ ಅನುಸಾರವಾಗಿ ಓದಲು ಅವಕಾಶವಿದೆ. ರಾಷ್ಟ್ರೀಯ ಗ್ರಂಥಾಲಯದಲ್ಲಿ ಇಡಿಯ ರಾಷ್ಟ್ರದಲ್ಲಿ ಪ್ರಕಟವಾದ ಕೃತಿಗಳು ಲಭ್ಯವಾಗುತ್ತವೆ.

ಗ್ರಂಥಾಲಯುಗಳು ಸಾರ್ವಜನಿಕ ಉದ್ದೇಶಕ್ಕೆ ಅನುಸಾರವಾಗಿ ರೂಪುಗೊಂಡಿರುತ್ತವೆ ಮತ್ತು ಗ್ರಂಥಾಲಯಗಳ ಕಟ್ಟಡ ವಿನ್ಯಾಸ, ಅದರಲ್ಲಿನ ಕಪಾಟುಗಳು, ಅದಕ್ಕೆ ಬೇಕಾದ ಬೆಳಕಿನ ಸಂಯೋಜನೆ ಹಾಗೂ ಓದುಗರಿಗೆ ಕುಳಿತುಕೊಳ್ಳಲು ಬೇಕಾದ ಅವಕಾಶಗಳು ಕೂಡಾ ಅಷ್ಟೇ ಮುಖ್ಯವಾಗಿರುತ್ತದೆ. ಓದುಗರಿಗೆ ನಿರ್ದಿಷ್ಟ ಕಾಲಾವಧಿಯನ್ನು ಗ್ರಂಥಾಲಯದಲ್ಲಿ ನಿಗದಿಗೊಳಿಸಲಾಗುತ್ತದೆ. ಗ್ರಂಥಾಲಯದೊಳಗೆ ಪ್ರವೇಶಿಸಲು ಬೇಕಾದ ಅನುಕೂಲವನ್ನು ಕಲ್ಪಿಸಬೇಕಾಗುತ್ತದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಓದುಗರ ಸಂಖ್ಯೆಯು ಹೆಚ್ಚಾಯಿತು. ಪುನರುಜ್ಜೀವನ ಕಾಲಘಟ್ಟದ ಅನಂತರ ಉದಯವಾದ ಮುದ್ರಣ ಯಂತ್ರಗಳು ಒಂದು ಹಸ್ತಪ್ರತಿಯನ್ನು ಅನೇಕ ಪ್ರತಿಗಳಾಗಿ ಹಂಚಿದವು. ಗ್ರಂಥ ಮತ್ತು ಅದರ ಬೆಲೆಗಳು ನಿಗದಿಯಾಗಿರುವುದರಿಂದ ಪುಸ್ತಕ ಕ್ಷೇತ್ರ (ಸಾಹಿತ್ಯ ಕ್ಷೇತ್ರ)ಕ್ಕೆ ಬಂಡವಾಳಶಾಹಿಯು ಪ್ರವೇಶಿಸಿತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಪ್ರಕಟವಾದ ಕೃತಿಗಳು ಅಸಂಖ್ಯವಾಗಿದ್ದವು. ಯಾರೇ ಆದರೂ ಹದಿನೆಂಟು ಹತ್ತೊಂಬತ್ತನೆಯ ಶತಮಾನದಲ್ಲಿ ಬರೆಯಲಾದ ಕಾದಂಬರಿಗಳನ್ನು ಓದಿ ಮುಗಿಸಲು ಸಾಧ್ಯವಿರಲಿಲ್ಲ. ಎರಡನೆಯದಾಗಿ ಶಿಕ್ಷಣಕ್ಕೆ ಮತ್ತು ಓದಿಗೆ ಸಂಬಂಧವಿದೆ.

ಹತ್ತೊಂಬತ್ತನೆಯ ಶತಮಾನದ ಹೊತ್ತಿಗೆ ಗ್ರಂಥ ಸ್ವಾಮ್ಯದ ಕಾನೂನು ಬಂದುದರಿಂದ ಹಕ್ಕುಗಳು ಗ್ರಂಥಗಳಿಗೆ ಕಾದಿರಿಸಲ್ಪಟ್ಟವು. ಶಾಲೆ, ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಗ್ರಂಥಾಲಯಗಳು ಸ್ಥಾಪಿಸಲ್ಪಟ್ಟವು. ಒಂದು ಅಂಕಿ – ಅಂಶದ ಪ್ರಕಾರ ೧೮೮೧–೧೯೦೦ ಹೆಚ್ಚು ಕಡಿಮೆ ಇಪ್ಪತ್ತು ಸಾವಿರದಷ್ಟು ಗ್ರಂಥಾಲಯ ಬ್ರಿಟನ್ನಿನಲ್ಲಿ ಸ್ಥಾಪಿಸಲ್ಪಟ್ಟವು. ಆದರೆ ಎರಡು ಮಹಾಯುದ್ಧಗಳಿಂದಾಗಿ ಸಾರ್ವಜನಿಕ ಗ್ರಂಥಾಲಯಗಳಿಗೆ ಅಪಾಯವುಂಟಾಯಿತು.

ಗ್ರಂಥಾಲಯಗಳು ಖಾಸಗಿ ಗ್ರಂಥಾಲಯಗಳಂತಲ್ಲ. ಅದಕ್ಕೆ ನಿರ್ದಿಷ್ಟ ನಿಯಮಗಳಿರುತ್ತದೆ. ಒಟ್ಟಿನಲ್ಲಿ ಓದುಮನೆಯು ಓದುಗರ ಅಭಿರುಚಿಗೆ ಪೂರಕ ಅವಕಾಶ ಕಲ್ಪಿಸುತ್ತದೆ.

ನೋಡಿ: Raymond Williams 1983 keywords
Bakhtin M.M. The dialogic imagination
Raymond Williams 1961 The Long Revolution
Michel Foucault 1966 The order of things
David Punter Romanticism Modernism Lyric

ಗ್ರಹಣ

ಗ್ರಹಣವೆಂದರೆ ಹಿಡಿಯುವುದು. ಸೂರ್ಯ–ಚಂದ್ರರನ್ನು ರಾಹು ಬಂದು ಹಿಡಿಯುತ್ತದೆ. ಅದನ್ನು ಗ್ರಹಣವೆಂದು ಕರೆಯುತ್ತಾರೆ. ಗ್ರಹಣವೆಂದರೆ ಹಿಡಿಯುವುದು, ವಿಷಯವನ್ನು ತಿಳಿಯುವುದು. ಗಣಿತದ ಆಶ್ಚರ್ಯಗಳಲ್ಲಿ ಒಂದಾದ 'ಗ್ರಹಣ' ಬಹುಶಃ ಬ್ಯಾಬಿಲೋನಿಯ ಮೂಲದ್ದು. ಈ ರಹಸ್ಯವನ್ನು ಮೊದಲಿಗೆ ಕಂಡುಕೊಂಡುವನು ಅತ್ರಿ ಎಂಬುದಾಗಿ ವೈದಿಕ ಸಾಹಿತ್ಯದಲ್ಲಿ ಹೇಳಲಾಗಿದೆ. (ಭಗವತ್‌ಶರಣಉಪಾಧ್ಯಾಯ ೨೦೦೪ ಪು.೪೬)

ಗ್ರಾಮ

ಸಾಮಾಜಿಕ ಸಂಪತ್ತಿನಲ್ಲೂ ಪರಿವರ್ತನೆ ಬಂದಿರಬೇಕು. ಋಗ್ವೇದ ಕಾಲಕ್ಕೆ ಪಶುಗಳೇ ಪ್ರಧಾನ ಸಂಪತ್ತು. ಅವರು ತಮ್ಮ ಬದುಕಿನ ಹಲವು ಸಂಗತಿಗಳಿಗೆ ಕೊಟ್ಟಿರುವ ಹೆಸರುಗಳು 'ಗೋವ'ನ್ನು ಸಂಬಂಧಿಸಿಯೇ ಇದ್ದವು ಎಂಬುದನ್ನು ನಾವು ನೋಡಿದ್ದೇವೆ. ಋಗ್ವೇದದಲ್ಲಿ 'ಯವ' ಎಂಬ ಒಂದು ಧಾನ್ಯದ ಹೆಸರಷ್ಟೇ ಬರುತ್ತದೆ. ಅದು ಬಾರ್ಲಿ ಇರಬಹುದು ಎನ್ನುತ್ತಾರೆ ಕೊಸಾಂಬಿ. ವರಿ (ಪ್ರೀಹಾ) ಗೋಧಿಗಳ ಪ್ರಸ್ತಾಪ ಋಗ್ವೇದದಲ್ಲಿಲ್ಲ. ಸಂಸ್ಕೃತದಲ್ಲಿ ನೇಗಿಲಿಗೆ 'ಹಲ' ಎನ್ನುತ್ತಾರೆ. ಇದು ಸಹ ಋಗ್ವೇದದಲ್ಲಿಲ್ಲ. ಪಶುಗಳನ್ನು ಕೊಂದು ತಿಂದವರೇ ಹೊರತು ಅವುಗಳನ್ನು ಕೃಷಿಗೆ ಬಳಸುತ್ತಿದ್ದವರಲ್ಲ. 'ಗ್ರಾಮ' ಎಂದರೆ ಅಂದಿಗೆ ಸ್ಥಿರ ಆವಾಸವೆಂದೇನೂ ಅಲ್ಲ.

'ಗ್ರಾಮ' ಎಂದರೆ ಪಶುಗಳನ್ನು ಮೇಯಿಸುತ್ತಾ ಸಂಚರಿಸುವ ಗುಂಪು. ಅಂತಹ ಎರಡು ಗುಂಪುಗಳು ಮುಖಾಮುಖಿಯಾದಾಗ ಕಲಹಗಳು ಉಂಟಾಗುತ್ತಿದ್ದವು. ಇದರಿಂದಾಗಿಯೇ ಯುದ್ಧಕ್ಕೆ 'ಸಂಗ್ರಾಮ' ಎಂಬ ಮಾತು ಬಂತು. (ಡಿ. ಡಿ. ಕೊಸಾಂಬಿ ೧೯೬೮ ಪು. ೯೩–೯೪)

ಗ್ರಾಮಾಂತರಗಳಲ್ಲಿ ಗ್ರಾಮದ ಆಡಳಿತ ಹಳ್ಳಿಯ ಯಜಮಾನನ ಕೈಯಲ್ಲಿರುತ್ತಿತ್ತು. ಗ್ರಾಮ ಎಂಬ ಶಬ್ದವು ಬಣದ ಯೋಧರ ಪಡೆಗಳನ್ನು ಸೂಚಿಸುತ್ತಿದ್ದ ಕಾಲಕ್ಕೆ ಅದರ ನಾಯಕ ಪದವಿಯಾಗಿದ್ದ ಗ್ರಾಮಣಿ ಎಂಬುದು ಕೃಷಿ ಜೀವನವು ನೆಲೆಗೊಂಡು ನಿಂತಾಗ ಗ್ರಾಮ ಅಥವಾ ಹಳ್ಳಿಯ ಯಜಮಾನ ಪದವಿಗಾಗಿ ಮಾರ್ಪಟ್ಟಿತು. ಗ್ರಾಮ ಭೋಜಕ, ಗ್ರಾಮಿಣಿ, ಗ್ರಾಮಿಕ ಇವೆಲ್ಲ ಪರ್ಯಾಯ ಶಬ್ದಗಳು. ಇಂದಿಗೂ ಶ್ರೀಲಂಕೆಯಲ್ಲಿ ಗ್ರಾಮಿಣಿ, ಎಂಬ ಪದವಿ ಇದೆ. ಬಿಂಬಿಸಾರನು ಒಮ್ಮೆ ಎಂಬತ್ತಾರು ಸಾವಿರ ಗ್ರಾಮಿಕರಿಗೆ ಕರೆಕಳುಹಿಸಿದ್ದನಂತೆ. ಈ ಸಂಖ್ಯೆಯ ಯುಕ್ತಾಯುಕ್ತತೆಯು ಏನೇ ಇದ್ದರೂ, ಇದು ಹಳ್ಳಿಯ ಯಜಮಾನರು ಸಾಕಷ್ಟು ಪ್ರಮುಖ್ಯತೆ ಪಡೆದಿದ್ದು, ರಾಜನೊಂದಿಗೆ ನೇರ ಸಂಬಂಧ ಪಡೆದಿದ್ದರು ಎಂಬುದನ್ನು ತೋರಿಸುತ್ತದೆ. ಹಳ್ಳಿಯ ಯಜಮಾನರು ಗ್ರಾಮದ ಕಂದಾಯದ ತೀರ್ವೆ ಮಾಡಿ, ಗ್ರಾಮಸ್ಥರಿಂದ ವಸೂಲು ಮಾಡುತ್ತಿದ್ದರು. ಅವರು ಹಳ್ಳಿಯ ನೆಮ್ಮದಿ ಹಾಗೂ ಕಾನೂನು ಪಾಲನೆಗಳನ್ನೂ ನೋಡಿಕೊಳ್ಳುತ್ತಿದ್ದರು. ಕೆಲವೊಮ್ಮೆ ದುಂಡಾವೃತ್ತಿ ತೋರುವ ಯಜಮಾನರುಗಳನ್ನು ಗ್ರಾಮಸ್ಥರು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. (ಆರ್. ಎಸ್. ಶರ್ಮ ೧೯೯೭. ಪು.೧೨೩)

ಈ ಆರ್ಯರ ಗುಂಪುಗಳನ್ನು (ಸಮುದಾಯಗಳಿರಬಹುದು ಅಥವಾ ಅವಕ್ಕಿಂತ ಚಿಕ್ಕ ಚಿಕ್ಕ ಗುಂಪುಗಳೂ ಇರಬಹುದು) 'ಗ್ರಾಮಗಳು' ಎನ್ನುತ್ತಿದ್ದರು. ಸ್ಥಿರ ಕೃಷಿ ರೂಢಿಗೆ ಬಂದ ನಂತರದಲ್ಲಿ ಆ ಬೇಸಾಯ ಆವಾಸ ಸ್ಥಾನಗಳಿಗೆ ಇದೇ ಹೆಸರು ರೂಢಿಗೆ ಬಂದಿತು. ಈ ಸಂಚಾರಿ 'ಗ್ರಾಮ'ದ ಹಿರಿಯನನ್ನು 'ಗ್ರಾಮಣಿ' ಅಥವಾ 'ಗೋವುಡ' ಎಂದೂ, ಒಟ್ಟು ಬುಡಕಟ್ಟಿನ ಹಿರಿಯನನ್ನು 'ರಾಜ' ಎಂದೂ ಕರೆಯುತ್ತಿದ್ದರು. ಪದಗಳು ಕಾಲಕ್ರಮದಲ್ಲಿ ಬದಲಾದ ಅರ್ಥಗಳನ್ನು ಪಡೆಯುವ ಸಾಧ್ಯತೆಗಳಿವೆ ಎಂಬುದನ್ನು ಮರೆತರೆ, ಋಗ್ವೇದ ಕಾಲದಲ್ಲೂ ಕೃಷಿ ಗ್ರಾಮಗಳು, ರಾಜ್ಯಗಳು, ರಾಜರೂ – ಇದ್ದವೆಂಬ ತಪ್ಪು ಗ್ರಹಿಕೆಗಳಿಗೆ ಕಾರಣವಾಗುತ್ತದೆ. ಗೋವು ಆರ್ಯರ ಪ್ರಧಾನ ಸಂಪತ್ತಾಗಿ ಅವರ ಭಾಷೆಯಲ್ಲಿ ಗೋವಿನ ಸಂಬಂಧದ ಹೆಸರುಗಳೇ ರೂಢಿಗೆ ಬಂದಿತೆಂಬುದು ಸಹಜ. (ಡಿ. ಡಿ. ಕೊಸಾಂಬಿ ೧೯೬೮ ಪು. ೭೭)ಹಿಂದಿನ ಕಾಲದಲ್ಲಿ ಗ್ರಾಮ ದಾನವೂ ಚಾಲ್ತಿಯಲ್ಲಿತ್ತು. "ಹಿಂದಿನಸಂಗತಿಗಳು ಹಾಗಿರಲಿ, ಗೋವಿಂದರಾಜನು ಮಯೂರಖಂಡೀ ಸಮಾವಾಸಿತನಾಗಿದ್ದಲ್ಲಿ ಈ ದಾನಶಾಸನವನ್ನು ಬಿಟ್ಟರೂ ದತ್ತಿಯ 'ಗ್ರಾಮದಾನ'ಗಳು ಅಲ್ಲಿಯವಲ್ಲ. ಈ ವಿಷಯವು

ಗ್ರಾಮದಾನಗಳ ಪೂರ್ವ, ದಕ್ಷಿಣ, ಪಶ್ಚಿಮ ದಿಕ್ಕುಗಳ ಗಡಿಗಳನ್ನೆಲ್ಲ ಹೇಳಿ ಕಡೆಗೆ 'ಉತ್ತರತಃ ವಿಂಧ್ಯಪರ್ವತಃ ಎಂಬುದರಿಂದ ಸ್ಫುಟವಾಗುತ್ತಿದೆ. ಆ ದಾನಭೂಮಿಗಳ ಹೆಸರುಗಳಾದ 'ತಿಯಡಿ, ಭಗ್ಗಲಿ, ಪಿಟ್ಟ' ಎಂಬುವುಗಳನ್ನು ಪರಾಂಬರಿಸಿದಲ್ಲಿ ಅದು ಕನ್ನಡನಾಡಲ್ಲ ಎನ್ನಬಹುದೆ? ಭೂದಾನವೆಂಬ ಪರಿಕಲ್ಪನೆಯೂ ಇತ್ತು ಎನ್ನುವುದು ಗಮನಾರ್ಹ. (ಮುಳಿಯ ತಿಮ್ಮಪ್ಪಯ್ಯ. ೧೯೮೮. ಪು. ೪೦೧)

ಗ್ರಾಮ ದೇವತೆ

ಗ್ರಾಮದೇವತೆಗಳು ಆಯಾ ಗ್ರಾಮದ ಮತ್ತು ಪರಿಸರದ ಜನರ ಆರಾಧನೆಯನ್ನು ಒಳಗೊಳ್ಳುವ ದೇವತೆಗಳು. ಇವುಗಳಲ್ಲಿ ಸ್ತ್ರೀ ದೇವತೆಗಳನ್ನು 'ತಾಯಿ' ಅನ್ನುವ ಅರ್ಥದಲ್ಲಿ ಜನಪದರು ಗ್ರಹಿಸುತ್ತಾರೆ. ತಾಯಿಯ ಪಾಲನೆಯನ್ನು ಸಂಕೇತಿಸುವುದರಿಂದ ಇಂತಹ ಸ್ತ್ರೀ ಗ್ರಾಮದೇವತೆಗಳ ಆರಾಧನೆಗೆ ವಿಶಿಷ್ಟವಾದ ಅರ್ಥವಂತಿಕೆ ಇದೆ. ಲೌಕಿಕವಾಗಿ ತಾಯಿಯು ಮಗುವಿಗೆ ಆಹಾರವನ್ನು ಕೊಡುತ್ತಾಳೆ. ಮಗು ಕಾಯಿಲೆ ಬಿದ್ದಾಗ ಮಗುವಿಗೆ ರಕ್ಷಣೆಯನ್ನು ಮಾಡುತ್ತಾಳೆ. ಗ್ರಾಮದೇವತೆಗಳನ್ನು ತಾಯಿಯೆಂದಾಗಲೂ ಇದೇ ರೀತಿಯ ಪರಿಕಲ್ಪನೆಯಿರುತ್ತದೆ. ಈ ತಾಯಿಯು ಬೆಳೆಯನ್ನು ರಕ್ಷಣೆ ಮಾಡುತ್ತಾಳೆ. ಇದು ಆಹಾರದ ಉತ್ಪನ್ನಕ್ಕೆ ಸಂಬಂಧಪಟ್ಟದ್ದು. ಹಾಗೆಯೇ ಕಾಯಿಲೆಯನ್ನು ದೂರಮಾಡುವ ಶಕ್ತಿಯು ಸ್ತ್ರೀ ದೇವತೆಗಳಿಗೆ ಇದೆ ಎಂಬ ನಂಬಿಕೆ ಇದೆ. ಗ್ರಾಮದೇವತೆಯರನ್ನು ಎರಡು ಪ್ರಧಾನ ಕಾರ್ಯಗಳ ನಿರ್ವಾಹಕರಾಗಿ ಕಾಣಲಾಗಿದೆ. ಆಹಾರ ಮತ್ತು ಸಂರಕ್ಷಣೆ ಈ ಎರಡೂ ಅಂಶಗಳು ಮನುಷ್ಯನ ಅಸ್ತಿತ್ವಕ್ಕೆ ನೇರವಾಗಿ ಕಾರಣವಾದವುಗಳು. ಗ್ರಾಮದೇವತೆ ವಿಶ್ವಾತ್ಮಕವಲ್ಲ ಸ್ಥಳೀಯ.

ವಿವರಗಳಿಗೆ ನೋಡಿ: ಬಾದುಬ್ಬೆ.

ಗ್ರಾಮಾಧಿಪ

ಒಂದು, ಹತ್ತು, ಇಪ್ಪತ್ತು, ನೂರು, ಸಾವಿರ ಎಂದು ಬೇರೆ ಬೇರೆಯಾಗಿ ಗ್ರಾಮಗಳಿಗೆ ಅಧಿಪತಿಯನ್ನು ನಿಯಮಿಸಬೇಕು. (ಮನುಸ್ಮೃತಿ 7-115)

ಗ್ರಾಮ್ಯ

ಋಗ್ವೇದದ ಋಷಿಗಳು ನಗರಗಳಲ್ಲಿ ಮತ್ತು ಗ್ರಾಮಗಳಲ್ಲಿ ವಾಸಿಸುತ್ತಿದ್ದ ಪೌರರಾಗಿದ್ದರು: ಅವರು ತಪೋಧ್ಯಾನಾದಿಗಳಿಗಾಗಿ ಅರಣ್ಯವನ್ನಾಶ್ರಯಿಸಿದ ಜನರಲ್ಲ. ಹಾಗೂ ಬ್ರಾಹ್ಮಣಗಳ ವ್ಯವಹಾರನೀತಿಯಲ್ಲೂ ಅರಣ್ಯಗಳ ಪಾತ್ರವೇನೂ ಇಲ್ಲ. ಮನೆ ಮತ್ತು ಗ್ರಾಮಗಳಿಂದ ದೂರವಾದ ಸ್ಥಳದಲ್ಲೇ ಮಾಡಬೇಕಾದ ಒಂದು ಕಡ್ಡಾಯ ಅಧ್ಯಯನಕ್ರಮದ ಪ್ರಸ್ತಾಪವೇನೋ ತೈತ್ತಿರೀಯ ಅರಣ್ಯಕದಲ್ಲಿ ಒಮ್ಮೆ ಸೂಚಿತವಾಗಿದೆ. ಆ ಸ್ಥಳವು "ಅ-ಚ್ಛದಿ-ದರ್ಶ" ಎಂದರೆ, ಎಲ್ಲಿಂದ ಮನೆಗಳ

ಛಾವಣಿ (=ಛದಿ)ಗಳು ಕಾಣಿಸುವುದಿಲ್ಲವೋ ಅಂತಹ ಪ್ರದೇಶವಾಗಿರಬೇಕೆಂದು ವರ್ಣಿತವಾಗಿದೆ. 'ಗ್ರಾಮ್ಯ' ಅಥವಾ ಗ್ರಾಮದಲ್ಲಿಯೇ ಇದ್ದು ಮಾಡಬಹುದಾದ ಮತ್ತು 'ಅರಣ್ಯ', ಅಥವಾ ಕಾಡಿನಲ್ಲಿಯೇ ಮಾಡಬೇಕಾದ ಎರಡು ಬಗೆಯ ಕಡ್ಡಾಯ ಅಧ್ಯಯನದ ಕ್ರಮಗಳು ಭಾರತೀಯ ಜನಜೀವನಕ್ಕೆ ಸಂಬಂಧಿಸಿದ ವೇದಗಳ ಅರ್ವಾಚೀನ ಗ್ರಂಥಗಳಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿವೆ. ಗ್ರಾಮಗಳಿಂದ ಗ್ರಾಮ್ಯವೆಂಬುದು ಹುಟ್ಟಿದೆ. ನಾವೀಗ ಗ್ರಾಮ್ಯವೆಂದರೆ ಅನಾಗರಿಕ ಎಂಬ ಅರ್ಥದಲ್ಲಿ ಬಳಸುತ್ತಿದ್ದೇವೆ. ವಾಸ್ತವವಾಗಿ ನಮ್ಮ ಗ್ರಹಿಕೆಯ ಮಿತಿಯಿದು. "ಗ್ರಾಮ್ಯ" ಎಂದರೆ ದೇಸಿ ಎಂದೂ ನಾವು ಕರೆದಿದ್ದೇವೆ.

ಗ್ರಾಮ್ಯ ಮತ್ತು ಅರಣ್ಯದ ನಡುವಣ ಸಂಬಂಧವು ಇಲ್ಲಿ ಗಮನಾರ್ಹ. ಗ್ರಾಮ್ಯವಚನವೆಂದರೆ ಗ್ರಾಮದಲ್ಲಿ ವಾಸಿಸುವವರು ಆಡುವ ಭಾಷೆ. ಅಗ್ರಾಮ್ಯವೆಂದರೆ ಪುರಜನರ ಮಾತು. ಇನ್ನೊಂದು ಅರಣ್ಯವೆಂದರೆ ಅರಣ್ಯದಲ್ಲಿದ್ದು ನಡೆಸುವ ಅಧ್ಯಯನ ಕ್ರಮಗಳು. ಹಳೆಗನ್ನಡದಲ್ಲಿ "ಗ್ರಾಮ್ಯ ಜನರು" 'ದೇಸಿಗರು' ಎಂದು ಬಳಕೆಯಾಗಿದೆ. ಭಾಷೆಯನ್ನು ನಾವು ಶಿಷ್ಟ ರೀತಿಯಲ್ಲಿ ಗ್ರಹಿಸಿದರೆ ಅದಕ್ಕಿಂತ ಹೊರತಾಗಿರುವುದು ಗ್ರಾಮ್ಯವೆಂದು ಕರೆಸಲ್ಪಡುತ್ತದೆ.

ನೋಡಿ: ದೇಸಿ; ಮಾರ್ಗ-ದೇಸಿ

ಡಾ. ಸರ್ವಪಲ್ಲಿ ರಾಧಾಕೃಷ್ಣನ್ 1970 ತತ್ವಶಾಸ್ತ್ರ: ಪ್ರಾಚ್ಯ ಮತ್ತು ಪಾಶ್ಚಾತ್ಯ

ಗ್ರೈವೇಯಕ

ಸುದರ್ಶನ, ಅಮೋಘ, ಸುಪ್ರಬುದ್ಧ, ಯಶೋಧರ, ಸುಭದ್ರ, ಸುವಿಶಾಳ, ಸುಮನಸ, ಸೌಮನಸ, ಪ್ರೀತಿಂಕರ ಎಂಬ ಒಂಬತ್ತು ಗ್ರೈವೇಯಕಗಳು.

ಘರವಟ್ಟಿ

ಹಿಂದಿನ ಕಾಲದಲ್ಲಿ ಗಸ್ತು ತಿರುಗುವವರನ್ನು ಹೀಗೆ ಕರೆಯುತ್ತಿದ್ದರು. ಘರವಟ್ಟಿಗೆಯವರು ಆಗ ಗಸ್ತು ತಿರುಗುವ ಕೆಲಸ ಮಾಡುತ್ತಿದ್ದರು ಎಂದು ಇದರ ಮೂಲಕ ತಿಳಿಯುತ್ತದೆ.

ಘಾತಕರ್ಮ

ಇನ್ನು ಅರ್ಹಂತರು ನಾಲ್ಕು ಪ್ರಕಾರದ ಘಾತಿ ಕರ್ಮಗಳನ್ನು ಗೆದ್ದುದರಿಂದ 'ಜಿನ'ರೆನಿಸುವರು. ಇವರಿಗೆ ಅನಂತಜ್ಞಾನ. ದರ್ಶನ, ವೀರ್ಯ, ಸುಖಗಳು ಪ್ರಾಪ್ತವಾಗಿರುವವು. ಇವರೇ ಕ್ಷುಧೆ, ತೃಷೆ, ಭಯ, ದ್ವೇಷ, ರಾಗ, ಮೋಹ, ಚಿಂತೆ, ಜರೆ, ರೋಗ, ಮೃತ್ಯು, ಖೇದ, ಸ್ವೇದ, ಮದ, ಅರತಿ, ವಿಸ್ಮಯ, ಜನ್ಮ, ನಿದ್ರೆ, ವಿಷಾದ ಎಂಬ ಸದಿನೆಂಟು ದೋಷಗಳೂ ಇರುವುದಿಲ್ಲ. ವೀತರಾಗರಿವರು ಇವರು ಜಗತ್ತನ್ನು ಉದ್ಧರಿಸುವ ಧರ್ಮತೀಥವನ್ನು ನಿರ್ಮಾಣ ಮಾಡತಕ್ಕವರು. ಎಂತಲೇ

ತೀರ್ಥಂಕರರೆನಿಸುವರು. ಇವರಿಗೆ ಪವಿತ್ರ ದೇಹವು ಇರುವುದು. ಅದು ಸಪ್ತಧಾತುರಹಿತವಾದುದು. ಅತ್ಯುಜ್ವಲವಾದುದು. ಈ ಅರ್ಹಂತರ ಸಾಧನೆಯ ಕ್ರಮವನ್ನು ಆದರ್ಶವಾಗಿಟ್ಟುಕೊಳ್ಳುವುದೇ ಸಾಧಕರಿಗೆ ಸಹಕಾರಿಯಾದುದು, ಭಕ್ತರಿಗೆ ಫಲಕೊಡುವಂತಹದು. ಸಾಧಕನು ತನ್ನ ಆತ್ಮನಲ್ಲಿ ತಾನು ಪ್ರಸನ್ನವಾಗಿರುವುದರಿಂದ, ಉಪಚಾರಕ್ಕಾಗಿ ಪರಮಾತ್ಮನಲ್ಲಿಯೂ ಪ್ರಸನ್ನತೆಯನ್ನು ಕಲ್ಪಿಸಿರುವನು. ಇವರನ್ನು ಜೈನಾಗಮಗಳು 'ವಿಮಲತರ ಗುಣಸಮೃದ್ಧಂ' ಎಂದು ವರ್ಣಿಸುತ್ತವೆ. ಅರ್ಹಂತರಿಗೆ ಸ್ಥಿರಪದವು ದೂರಿಲ್ಲ. ಜೈನ ತತ್ವದರ್ಶನದಲ್ಲಿ ಅರ್ಹಂತರಂಗೆಲ್ಲಬೇಕಾದ ನಾಲ್ಕು ಪ್ರಕಾರದ ಘಾತಕರ್ಮವನ್ನು ಈ ರೀತಿಯಾಗಿ ಮಿರ್ಜಿಅಣ್ಣಾರಾಯರು ವಿವರಿಸಿದ್ದಾರೆ. (ಮಿರ್ಜಿಅಣ್ಣಾರಾಯ ಪು. 77).

ಚಂಡಾಲ

ಶೂದ್ರರಲ್ಲಿನ ಕೆಲವರ ಕೆಲಸಗಳನ್ನು ಹೀಯಾಳಿಸಿ ಕೊನೆಗೆ ಶೂದ್ರರನ್ನೆಲ್ಲ ಕ್ಷುದ್ರಾಚಾರಿಗಳೆಂದರು (ದೀಘನಿಕಾಯ III. 95). ಜೈನರ ಆಯಾರಂಗ (ಆಚಾರಾಂಗ) ಸೂತ್ರದಲ್ಲೂ (II. ೪.೧.೮) ವೃಷಲ, ಗೃಹದಾಸ, ಕೆಳಜಾತಿಯವನು ಎನ್ನುವುದನ್ನು ಕಳ್ಳ, ನಾಯಿ ಎಂದಂತೆ ಬೈಗುಳಾಗಿ ಬಳಸಿದೆ. ಚಂಡಾಲ, ನಿಷಾದ, ವೇಣ, ರಥಕಾರ, ಪುಕ್ಕುಸರನ್ನು ನೀಚಕುಲ, ಹೀನಾಜಾತಿಯವರೆಂದು ಭಾವಿಸಲಾಗಿತ್ತು (ಮ.ನಿ. III. 169-78; ವಿ.ಪಿ. II.೬). ಮೌರ್ಯಪೂರ್ವ ಯುಗದಲ್ಲಿ ಇದು ವ್ಯಾಪಕವಾಗಿತ್ತು. ಆದ್ದರಿಂದ ಬುದ್ಧನು ಭಿಕ್ಷುಗಳ ಪೂರ್ವಾಶ್ರಮದ ಜಾತಿ, ಕರ್ಮಗಳನ್ನು ಎತ್ತಾಡಬಾರದೆಂದು ದೀರ್ಘವಾಗಿ ಬೋಧಿಸಿದ (ವಿ. ಪಿ. IV. ೪–೧೧). **ಚಂಡಾಲ**ರಿಗೆ ಹಳೆಗನ್ನಡದಲ್ಲಿ ಬಿಯದ, ವ್ಯಾಧರು, ಬಿಲ್ಲರೆಂದೂ ಬಳಕೆಯಾಗಿದೆ. (ನೋಡಿ–ಕರ್ನಾಟಕ ಶಬ್ದಸಾರಂ ಪುಟ ೫೨)

ಚಂಡಾಲರ ಜೀವನವು ದುರ್ಭರವಾಗಿತ್ತು. ಅಂಗುತ್ತರ ನಿಕಾಯದಲ್ಲಿ ಹೇಳಿರುವಂತೆ (IV. ೩೭೬) ಒಬ್ಬ ಚಂಡಾಲ ಹುಡುಗ ಅಥವಾ ಹುಡುಗಿ ಚಿಂದಿಬಟ್ಟೆ ತೊಟ್ಟು, ಭಿಕ್ಷೆಗೆ ಬೋಕಿಯೊಂದನ್ನು ಹಿಡಿದು, ಗ್ರಾಮವೊಂದಕ್ಕೆ ಹೋಗಬೇಕಾದರೆ ತಗ್ಗಿ ಬಗ್ಗಿ ನಡೆಯಬೇಕಿತ್ತು. ಬೇರೆಯವರಿಂದ ಬೇರ್ಪಡಿಸಿ ಗುರುತಿಲು ಸಾಧ್ಯವಾಗುವಂತೆ ಅವರು ಬಣ್ಣದ ಬಟ್ಟೆ ತೊಟ್ಟು, ಸೊಂಟಕ್ಕೆ ಒಂದು ಹಗ್ಗ ಸುತ್ತಿಕೊಂಡು ಓಡಾಡಬೇಕಿತ್ತು (ಜಾತಕ VI. ೩೭೯). ಚಂಡಾಲನೆಂದರೆ ಯಾವ ಸದ್ಗುಣವೂ ಇಲ್ಲದವನು, ನಂಬಿಕೆ ಮತ್ತು ಮೌಲ್ಯಗಳನ್ನು ತಿಳಿಯದವನು ಎಂಬ ಭಾವನೆ ಸಾಮಾನ್ಯವಾಗಿತ್ತು. ಜಾತಕಗಳ ಚಿತ್ರಣಕ್ಕೂ ಧರ್ಮಶಾಸ್ತ್ರಗಳ ನಿಯಮಗಳಿಗೂ ಈ ವಿಷಯದಲ್ಲಿ ಅಷ್ಟೇನೂ ಅಂತರವಿಲ್ಲ. ಆದರೆ ಈ ಜಾತಕಗಳು ಮೌರ್ಯಪೂರ್ವಕಾಲದ ಅಂತಿಮ ಘಟ್ಟಕ್ಕೆ ಸೇರುವಂಥವು.

ಪಾಲಿ ಗ್ರಂಥಗಳಲ್ಲಿ ಹಲವು ಹೀನ ಕುಲದವರನ್ನು, ಅದರಲ್ಲೂ ನಿಷಾದ, ಚಂಡಾಲರನ್ನು, ಅಸ್ಪೃಶ್ಯರೆಂದು ಗುರುತಿಸಿದೆ. ಇವರನ್ನು ಅಂತ್ಯ ಮತ್ತು ಬಾಹ್ಯ

(ಊರಾಚೆ ಇರುವವನು) ಎಂದು ಕರೆದಿದೆ. ಗೌತಮನ ಪ್ರಕಾರ (IV. ೨೮) ಅಂತ್ಯನು ಪಾಪಿಷ್ಠ. ವಸಿಷ್ಠನ ಪ್ರಕಾರ (XVI. ೩೦) ಒಳ್ಳೆಯ ಶೂದ್ರ ಮತ್ತು ಆಂತ್ಯಯೋನಿಜರನ್ನು ಅವರರವರ ವಿಷಯದಲ್ಲಿ ಮಾತ್ರ ಸಾಕ್ಷಿಯಾಗಿ ಒಪ್ಪಬಹುದುತ್ತು. ಇವನೇ (XVIII.೩) ಶೂದ್ರನಿಗೆ ವೈಶ್ಯ ಹೆಣ್ಣಿನಲ್ಲಿ ಹುಟ್ಟಿದವರು 'ಅಂತವಸಾಯಿ' ಎಂದಿದ್ದಾನೆ.

ಪ್ರಾಚೀನ ಜೈನಮತ ಕೂಡ ವರ್ಣಭೇದವಿಲ್ಲದೆ ಎಲ್ಲರನೂ ತನ್ನ ಪಂಥದೊಳಕ್ಕೆ ಸೇರಿಸಿಕೊಳ್ಳುತ್ತಾ ಚಂಡಾಲರ ಸ್ಥಿತಿಯನ್ನು ಉತ್ತಮಗೊಳಿಸಲು ಯತ್ನಿಸಿತು. ಮಾತಂಗನೊಬ್ಬನಿಂದ ಉಪದೇಶ ಪಡೆಯಲು ಹೋದ ರಾಜನು ಕೆಳಗಿನ ಸ್ಥಾನದಲ್ಲಿ ಕುಳಿತನೆಂದು ಒಂದು ಜೈನಮೂಲ ತಿಳಿಸುತ್ತದೆ.

ಧಾರ್ಮಿಕ ಕ್ರಿಯೆಗಳ ಸಂದರ್ಭದಲ್ಲಿ ಪಾವಿತ್ರ್ಯ ಮತ್ತು ಶುಚಿತ್ವಗಳ ಕಾರಣದಿಂದಾಗಿಯೇ ಶೂದರರನ್ನು ಅವುಗಳಿಂದ ದೂರವಿರಿಸಲಾಯಿತೆಂಬ ಮಾತು ಅಸಂಗತ. ಅಂತೆಯೇ ಉಚ್ಚ ವರ್ಣದವರ ಜೊತೆ ಸಹಪಂಕ್ತಿಭೋಜನ ಕೂಡ. ಇಂತಹ ಭಾವನೆಗಳು ಹುಟ್ಟಿಕೊಳ್ಳುವುದು ಸಮಾಜದ ಒಂದು ವಿಭಾಗದವರನ್ನು ಹೀನರೆಂದು ತುಚ್ಛೀಕರಿಸಿದ ನಂತರವೇ ಎಂಬುದನ್ನು ಮನಗಾಣಬೇಕು. ಅವರನ್ನು ವಂಶಪಾರಂಪರ್ಯವಾಗಿ ದುಡಿಯುವ ವರ್ಗವೆಂದು ಪರಿಗಣಿಸಬೇಕು., ಅವರ ದೈಹಿಕ ದುಡಿಮೆಯಿಂದಾಗಿ ಅವರು ಅಶುದ್ಧರೆಂಬ ಭಾವನೆಯನ್ನು ಬೆಳಸಬೇಕು; ಹೀಗೆ ಮಾಡಿದ ನಂತರ ಮಾತ್ರವೇ ಅಸ್ಪೃಶ್ಯತೆಯು ಆಚರಣೆಗೆ ಬರಲು ಸಾಧ್ಯ.

ಉತ್ತರಾಧ್ಯಯನ ಸೂತ್ರ (ಟೀಕೆ ೧೩) ದಲ್ಲಿ ಉಲ್ಲೇಖವಾಗಿರುವಂತೆ ಕಾಮನ ಹಬ್ಬದಲ್ಲಿ ಕುಣಿಯುತ್ತಾ ಬಂದ ಮಾತಂಗರನ್ನು ಮೇಲುಜಾತಿಯವರು ಒದ್ದು ಊರಾಚೆ ಅಟ್ಟಿದ ಕಥೆ ಇದೆ. ಬೌದ್ಧ, ಜೈನ ಮೂಲಗಳಿಂದ ತಿಳಿದು ಬರುವಂತೆ ಚಂಡಾಲರನ್ನು ಅಸ್ಪೃಶ್ಯರೆಂದು ಮೇಲಿನ ವರ್ಣದವರು ಹೀಯಾಳಿಸುತ್ತಿದ್ದರು; ಆದರೆ ಬ್ರಾಹ್ಮಣರಿಗೆ ಅವರ ಮೇಲೆ ವಿಶೇಷ ದ್ವೇಷವಿತ್ತು. ಬ್ರಾಹ್ಮಣಾಧಿಕಾರದ ಸಮಾಜದಲ್ಲಿ ಚಂಡಾಲರು ಸೇರಿಕೊಂಡಾಗ ಅವರ ಬದುಕಿನ ಶೈಲಿಯಲ್ಲಿ ಸಂಪೂರ್ಣವಾದ ಬದಲಾವಣೆಗಳೇನೂ ಉಂಟಾಗಲಿಲ್ಲ. ಪ್ರಾಯಶಃ ಪಶು, ಪಕ್ಷಿಗಳ ಬೇಟೆಯಾಡುತ್ತಿದ್ದ ಚಂಡಾಲರನ್ನು ಪಶುಗಳ, ಮನುಷ್ಯರ ಹೆಣ ಒಪ್ಪ ಮಾಡಲು ಕರೆಯುತ್ತಿದ್ದರು. ಈ ಕೆಲಸ ಮಾಡುವ 'ಪಣ'ರನ್ನೂ ಚಂಡಾಲರೆಂದು ಕರೆಯುತ್ತಿದ್ದರು.

ಚಂಡಿಕಾದೇವಿ

ಬ್ರಾಹ್ಮೀ, ಮಾಹೇಶ್ವರಿ, ಚಂಡಿಕಾ, ಪರಮೇಶ್ವರಿ, ಲಲಿತೆ, ಅನ್ನಪೂರ್ಣೆ, ಕಾಳಿ, ಶಂಕರಿ, ಕಾತ್ಯಾಯಿನಿ ಮೊದಲಾದವರು ದುರ್ಗೆಯ ಬೇರೆ ಬೇರೆ ನಾಮರೂಪಗಳಾಗಿ: ಫಲವತ್ತತೆಯನ್ನು ಕರುಣಿಸುವ ಮಾತೃ ದೇವತೆಗಳಾಗಿವೆ.

ಚಟ್ಟೋಪಾಧ್ಯಾಯರು ಹೇಳುವಂತೆ, ಮೊದಲಿಗೆ ಈ ದೇವತೆಗಳ ಅರ್ಚನೆಯು ಆದಿವಾಸಿಗಳಲ್ಲಿ ಹೆಚ್ಚಿದ್ದು, ನಂತರ ಆಚರಣೆಯು ಸ್ವರೂಪವನ್ನು ಬದಲಾವಣೆಯಾಗಿರಬೇಕು. ಮಾತೃತ್ವದ ಬಗೆಗಿನ ಗೌರವವೇ ಈ ಆರಾಧನೆಯ ಮೂಲಗುಣವಾಗಿದೆ. ಸಮೂಹವೊಂದರ ನಂಬಿಕೆಯು ಈ ರೀತಿಯಲ್ಲಿ ಮೂರ್ತರೂಪವನ್ನು ತಳೆದಿರಬೇಕು.

ಈಗಲೂ ಕುಂಕುಮ ಕೆಂಪು ದಾಸವಾಳ, ರಕ್ತವಸ್ತ್ರ, ರಕ್ತಫಲ ಮೊದಲಾದವು ದೇವಿಗೆ ಪ್ರಿಯವಾದುದೆಂದೇ ಕಲ್ಪನೆಯಿದೆ' (ರಾಮಚಂದ್ರರಾವ್ ಎಸ್.ಕೆ. 1981, ಪು.79)

ಶಕ್ತಿ ಆರಾಧನೆಯಲ್ಲಿ ಮಾತೃದೇವತೆಯ ಪೂಜೆಯಿರುವುದು ಗಮನಾರ್ಹ. ಶಕ್ತಿ ತತ್ವವೆಂಬ ಪರಿಕಲ್ಪನೆಯು ಕೂಡಾ ಸಾಂಸ್ಕೃತಿಕವಾಗಿ ವಿಶಿಷ್ಟವಾಗಿದೆ.ಶಕ್ತಿಯ ಆರಾಧನೆಯಲ್ಲಿ ಬಲಿಯ ಆಚರಣೆಯು ಚಾಲ್ತಿಯಲ್ಲಿ ಇತ್ತು.ತಂತ್ರ ಶಾಸ್ತ್ರದಲ್ಲಿ ಶಕ್ತಿಗೆ ವಿಶೇಷ ಮಹತ್ವವಿದೆ.

ಚಂದ್ರ

ಸೂರ್ಯನು ಕೃಷ್ಣಪಕ್ಷದಲ್ಲಿ ಸುಷಮ್ನೆಯೆಂಬ ಹೆಸರುಳ್ಳ ತನ್ನ ಕಿರಣದಿಂದ ಚಂದ್ರನ ಕಲೆಗಳನ್ನು ಕುಡಿಯುತ್ತಾನೆ ಎಂದು ಪುರಾಣಗಳಲ್ಲಿ ಹೇಳಿದೆ. ಚಂದ್ರನ ಕುರಿತಾಗಿ ಎರಡು ಅಂಶಗಳು ಪ್ರಸ್ತಾವಿತಗೊಂಡಿವೆ. ಅವು ಗಮನಾರ್ಹ. ಒಂದು ಸೂರ್ಯನು ಕೃಷ್ಣಪಕ್ಷದಲ್ಲಿ ಚಂದ್ರನ ಕಲೆಗಳನ್ನು ಕುಡಿಯುತ್ತಾನೆ. ಎರಡನೆಯದು ಚಂದ್ರನ ಕಾಂತಿಯು ಮುನಿಕುಮಾರ ಮುಖದಲ್ಲಿದೆ ಎಂದು ವರ್ಣಿಸಿರುವುದು ಪುರುಷರನ್ನು ವರ್ಣಿಸುವಾಗ ಸೂರ್ಯತೇಜ; ಬ್ರಹ್ಮತೇಜವೆಂದು ಬಳಕೆಯಾಗುವುದು ಸಾಮಾನ್ಯ. ಆದರೆ ಚಂದ್ರನ ಕಾಂತಿಯೆಂದು ಹೇಳಲಾಗಿದೆ. ಎರಡನೆಯದಾಗಿ ಸೂರ್ಯನು ಚಂದ್ರನನ್ನು ಹಿಡಿಯುತ್ತಾನೆ. ಇದು ಗತಾನುಗತಿಕವಾಗಿ ಬಂದಿರುವ ನಂಬಿಕೆ. ಸೂರ್ಯ ಮತ್ತು ಚಂದ್ರರ ಸಂಬಂಧವು ವಿಶೇಷವಾದುದು. ಚಂದ್ರನನ್ನು ಉಷೆಗೂ ಹೋಲಿಸಲಾಗಿದೆ. ಹಾಗೆಯೇ ಚಂದ್ರನು ಸೂರ್ಯನ ಹೆಂಡತಿಯೆಂದೂ ಋಗ್ವೇದದಲ್ಲಿ ವರ್ಣಿಸಲಾಗಿದೆ.

ವಿವರಗಳಿಗೆ ನೋಡಿ: ಎಚ್.ಪಿ. ವೆಂಕಟರಾವ್ 1952 ಋಗ್ವೇದ ಸಂಹಿತಾ ಸಂಪುಟ. 1

ಚಂದ್ರವಂಶ

ಹಾವಿನ ವಿಚಾರವಾಗಿ – ನಾಗಪ್ರತಿಮೆಯನ್ನು ಕುರಿತು – ಪಡೆದ ವಿವರಣೆಯಲ್ಲಿ ಚಂದ್ರವಂಶ, ಚಂದ್ರಾದೇವಿಯರು – ಹಾಲಮ್ಮ ಮಾಳಮ್ಮ ಇವರೆಲ್ಲ ಮೂಲತಃ ಸರ್ಪರೂಪ ದೇವಿಯರೇ. ಈ ದೇವಿಯರ ದೇಗುಲಗಳು ದೇವಸ್ಥಾನ: ಕ್ಷೇತ್ರದ ಸಂದರ್ಭದಿಂದ 'ನಾಗ' ದರ್ಶನವು ತಪ್ಪದೆ ಆಗುತ್ತದೆ. ಈ ಕಾರಣದಿಂದಲೇ

ಹುಣ್ಣಿಮೆಗಳೊಡನೆ ಸಂಬದ್ಧ ಚಂದ್ರಾದೇವಿಯರನ್ನು ಇನ್ನೂ ಸ್ಮರಿಸಿಕೊಳ್ಳುವುದು ಅವಶ್ಯವೆನಿಸಿದೆ. ನಾಗನಾಮಕ್ಕೆ ಸಾಕ್ಷಾತ್ತಾಗಿ ಸಂಬಂಧಿಸಿದ ಸ್ಥಳನಾಮಗಳ ಸಂಖ್ಯೆ ವಿಶೇಷವಿರಲಿಕ್ಕಿಲ್ಲ. ಆದರೆ, ದೇವರ ಹಾವು ಇಲ್ಲದೆ ಇರುವ ಪ್ರಾಚೀನ ದೇವತಾಮಂದಿರ, ಕ್ಷೇತ್ರ-ತೀರ್ಥ ಒಂದೂ ಇಲ್ಲ. ಪುರಾತನ ದೇಗುಲದ ಲಕ್ಷಣವೆಂದರೆ ಗುಹೆಯಂತಿರುವ ಗರ್ಭಗುಡಿ: ಆ ಕತ್ತಲ ಗವಿಯಲ್ಲಿ ಒಂದು 'ಸ್ವಯಂಭೂ' ಗುಂಡೋ – ಕಲ್ಲೋ ಆ ದೇವತಾ ಪ್ರತಿಮೆಯಾಗಿ ಕಲ್ಪಿಸಲಾದುದನ್ನು ಕಾಣಲು ದೊರೆಯುತ್ತದೆ. ಆದರೆ ಈ ಸ್ಥಾವರ ಭೌತ ಪ್ರತಿಮಾ ಪೂಜೆ ಒಂದು ಬಗೆಯಲ್ಲಿ ಅರ್ವಾಚೀನವೇ ಸರಿ ಎಂದು ಶಂಬಾಜೋಶಿ ಹೇಳುತ್ತಾರೆ.

ಪಾಂಡವರು ಚಂದ್ರವಂಶದವರು ಎಂಬುದು ಗಮನೀಯ ಅಂಶವಾಗಿದೆ. ಚಂದ್ರವಂಶ; ಸೂರ್ಯವಂಶ; ಯದುವಂಶಗಳು ಪುರಾಣ ಪ್ರಸಿದ್ಧ ವಂಶಗಳು.

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 4 ಪುಟ. 161.

ಚತುರೋಪಾಯಗಳು

ಸಾಮೋಪಾಯವು ಶ್ರೇಷ್ಠವಾಗಿದೆ. ಭೇದೋಪಾಯವು ಮಧ್ಯಮ. ದಾನೋಪಾಯವು ಅಧಮ ಹಾಗೂ ದಂಡೋಪಾಯವು ಕಷ್ಟತಮವೆಂದು ಹೇಳುತ್ತಾರೆ. ಇವುಗಳ ಕುರಿತು ಮಾನಸೋಲ್ಲಾಸ ಹಲವು ವಿವರಗಳಿವೆ. ಮಾನಸೋಲ್ಲಾಸದಲ್ಲಿ ವಿವರಿಸಿರುವಂತೆ ಹನ್ನೆರಡು ವಿಧದ ದಂಡಗಳಿವೆ. ಬಂದಿ ಗ್ರಹವೆಂಬ ದಂಡ, ದೇಶನಿರ್ವಾಸಕ ದಂಡ, ದೇಶ ನಾಶಕ ದಂಡ, ಜನಾಂಗ ದೇಶಕ ದಂಡ, ಗೋಗ್ರಹ ದಂಡ, ಧಾನ್ಯಹರಣ ದಂಡ, ಬಂದಿಗ್ರಾಹ ದಂಡ, ದೇಶಹಾರಕ ದಂಡ, ಬಲಾದಾನ ದಂಡ, ಸರ್ವಸ್ವಹರಣ ದಂಡವೆಂದು ಹಲವು ವಿಧಗಳಿವೆ. (ಮಾನಸಲ್ಲೋಸ-2-927) ಅದೇ 1031-1047)

ಸಾಮ, ದಾನ, ಭೇದ, ದಂಡಗಳು **ಚತುರೋಪಾಯ**ಗಳಾಗಿವೆ. ಸಾಮಪ್ರಿಯ ಜನರಿಗೆ ಹೇಳಿಮಾಡಿಸಿದ ರೀತಿ. ಅಂದರೆ ಪ್ರಿಯ ಜನರನ್ನು ಸಾವಧಾನದಿಂದ ಸರಿದಾರಿಗೆ ತರಬೇಕು. ದುರ್ಬಲನಿಗೆ ದಾನವೇ ಸೂಕ್ತ. ಮಂತ್ರಿಯೋ, ಪುರೋಹಿತನೋ ರಾಜನಲ್ಲಿ ಅತೃಪ್ತಿ ಹೊಂದಿದರೆ ಅಲ್ಲಿ ಭೇದೋಪಾಯವು ಸರಿ. ಪೌರುಷ ಹೀನನಿಗೆ ದಂಡ ಉಪಾಯವು ಉಪಯುಕ್ತ. ಇವು ನಾಲ್ಕು ಚತುರೋಪಾಯದ ಸ್ವರೂಪಗಳು. ಅರ್ಥಶಾಸ್ತ್ರ, ಮನುಧರ್ಮಶಾಸ್ತ್ರ ಯಾಜ್ಞವಲ್ಕ್ಯಸ್ಮೃತಿ, ಕಾಮುಂಡಕೀಯ ನೀತಿಸಾರ ಮುಂತಾದ ಶಾಸ್ತ್ರ ಗ್ರಂಥಗಳಲ್ಲಿ ಮಾತ್ರವಲ್ಲ, ಮಹಾಭಾರತ, ಅಗ್ನಿಪುರಾಣದಂತಹ ಪುರಾಣಗಳಲ್ಲೂ ಇದರ ಪ್ರಸ್ತಾಪವಿದೆ.

ಮಿಕ್ಕ ರಾಜರನ್ನು ತನ್ನ ಹಿತಾನುಸಾರ ಇಟ್ಟುಕೊಳ್ಳಲು ಭೂಪತಿಯಾದವನು ಮೊದಲು ಸಾಮವನ್ನು ಬಳಸಿ ನೋಡಬೇಕು. ಸಾಮವೆಂದರೆ ಒಳ್ಳೆಯ ಮಾತಿನ

ಸಂಧಾನ. ಉಪಕಾರ ಸ್ಮರಣೆ, ಮೃದುವಚನ, ಸತ್ಕಾರ, ನಾನು ನಿನ್ನವನೆಂದು ಹಿತೈಷಿಯಂತೆ ಹೇಳುವಿಕೆ – ಇತ್ಯಾದಿ. ಸಾಮಕ್ಕೆ ಬಗ್ಗದಿರುವಾಗ ಎರಡನೆಯ ಉಪಾಯ ಪ್ರಯೋಗಿಸಬೇಕು. ಸಾಧುಗಳಾಗಲಿ ಅಸಾಧುಗಳಾಗಲಿ ದಾನಕ್ಕೆ ಬಲಿಯುವುದು ಸಹಜ. ಹಿಂದೆ ವಶಪಡಿಸಿಕೊಂಡ ಧನದ ದಾನ ಅಥವಾ ಹೊಸದಾಗಿ ಧನ ಕನಕಗಳ ದಾನ, ಸವಲತ್ತು ದಾನಗಳಿರಬಹುದು. ಇವೆರಡರಿಂದಲೂ ಸಾಧ್ಯವಾಗದಿದ್ದರೆ ಒಡಕನ್ನುಂಟುಮಾಡುವ ಭೇದೋಪಾಯವನ್ನು ತರಬೇಕು. ಇಬ್ಬರಲ್ಲಿ ಸ್ನೇಹ ತಪ್ಪಿಸಿ, ಕಲಹವುಂಟುಮಾಡುವುದು. ವೈಮನಸ್ಯ ತಿಳಿಸುವುದರಲ್ಲಿ ಕೆಲವೊಮ್ಮೆ ಕಾರ್ಯ ಸಾಧನೆಯಾಗುವುದಿದೆ.

ಈ ಮೂರಕ್ಕೂ ಬಗ್ಗದ ಸಂದರ್ಭದಲ್ಲಿ ವೈರಿಯನ್ನು ದಾರಿಗೆ ತರಲು ದಂಡೋಪಾಯವೇ ಗತಿ. ದಂಡ=ದಂಡನೆ, ಶಿಕ್ಷೆ, ಕೊಲೆ, ಯುದ್ಧ, ಹಿಂಸೆಗಳನ್ನು ತಂದೊಡ್ಡುವುದು ಇತ್ಯಾದಿ. ದಂಡಿಸಲು ಯೋಗ್ಯನಾದವನಿಗೆ ಮೊದಲಿನ ಮೂರು ಉಪಾಯಗಳೂ ಪ್ರಯೋಜನಕ್ಕೆ ಬಾರವು.

ಚತುರ್ಗತಿ

ದೇವಗತಿ, ನಾರಕಗತಿ, ಮನುಷ್ಯಗತಿ ಮತ್ತು ತಿರ್ಯಗ್ಗತಿ. ಎನ್ನುವುದು **ಚತುರ್ಗತಿ**ಗಳು. ಭಕ್ತಿಯಲ್ಲಿ ನಾಲ್ಕು ವಿಧ; ಪ್ರವಾಹ ಪುಷ್ಟಿ ಭಕ್ತಿ, ಮರ್ಯಾದ ಪುಷ್ಟಿ ಭಕ್ತಿ, ಪುಷ್ಟಿ ಪುಷ್ಟಿ ಭಕ್ತಿ, ಶುದ್ಧ ಪುಷ್ಟಿ ಭಕ್ತಿ. ಚತುರ್ಗತಿ ಸ್ವರೂಪ ನಿರೂಪಣಮಂ ಎಂದರೆ ದೇವ, ಮಾನವ, ತಿರ್ಯಕ, ನಾರಕ ಎಂಬ ನಾಲ್ಕು ವಿಧವಾದ ಜನ್ಮಗಳ ಸ್ವರೂಪದ ನಿರೂಪಣೆ. ಚತುರ್ಗತಿಯ ಪರಿಕಲ್ಪನೆಯು ಜೈನಧರ್ಮದ ವಿಶಿಷ್ಟ ಪರಿಕಲ್ಪನೆ. ದೇವಮಾನವ, ನಾರಕತಿರ್ಯಕ(ಜಂತು, ನಾರಕಗಳಲ್ಲಿ ಹುಟ್ಟುವುದು ಎಂದರೆ ನಮ್ಮ ನಮ್ಮ ಕರ್ಮಗಳ ಫಲವಾಗಿ. ಈ ದೃಷ್ಟಿಯಿಂದ ಹುಟ್ಟಿಗೂ ನಮ್ಮ ಜನ್ಮಕ್ಕೂ ಸಂಬಂಧವಿದೆ. "ಏಕೇಂದ್ರಿಯ, ದ್ವೀಂದ್ರಿಯ, ತ್ರೀಂದಿಯ, ಚತುರಿಂದ್ರಿಯ, ಅಸಂಜ್ಞಿಪಂಚೇಂದ್ರಿಯ ಹಾಗೂ ಸಂಜ್ಞೀತಿರ್ಯಂಚ ಪಂಚೇಂದ್ರಿಯ. ಈ ಎಲ್ಲವುಗಳ ಗತಿಗೆ ತಿರ್ಯಂಚಗತಿ ಎನ್ನುತ್ತಾರೆ.

ವಿವರಗಳಿಗೆ ನೋಡಿ: ಮಿರ್ಜಿ ಅಣ್ಣಾರಾಯ ೨೦೦೬ ಮಿರ್ಜಿ ಅಣ್ಣಾರಾಯರ ಆಯ್ದ ಲೇಖನಗಳು
ಮಹದೇವ ಪ್ರಭಾಕರ ಪೂಜಾರ ೧೯೭೬ ಜೈನಧರ್ಮದ ಪರಿಭಾಷೆ.

ಚತುರ್ಗತಿ ನಿರೂಪಣೆ

ಚತುರ್ಗತಿ ಸ್ವರೂಪ ನಿರೂಪಣೆ ಎಂದರೆ ದೇವ, ಮಾನವ, ತಿರ್ಯಕ, ನಾರಕ ಎಂಬ ನಾಲ್ಕು ವಿಧವಾದ ಜನ್ಮಗಳ ಸ್ವರೂಪದ ನಿರೂಪಣೆ.

ಚತುರ್ಗತಿಯ ಪರಿಕಲ್ಪನೆಯು ಜೈನಧರ್ಮದ ವಿಶಿಷ್ಟ ಪರಿಕಲ್ಪನೆ. ದೇವಮಾನವ, ತಿರ್ಯಕ(ಜಂತು, ನಾರಕಗಳಲ್ಲಿ ಹುಟ್ಟುವುದು ಎಂದರೆ ನಮ್ಮ ನಮ್ಮ ಕರ್ಮಗಳ ಫಲವಾಗಿ. ಈ ದೃಷ್ಟಿಯಿಂದ ಹುಟ್ಟಿಗೂ ನಮ್ಮ ಜನ್ಮಕ್ಕೂ ಸಂಬಂಧವಿದೆ. ಗತಿಯೆಂದರೆ ಚಲನೆಯೆಂದು ಅರ್ಥ.ಗತಿ ಗೋತ್ರವೆಂದು ಹೇಳಿದರೆ ಯಾರೂ ತನ್ನನ್ನು ವಿಚಾರಿಸಿಕೊಳ್ಳುವವರಿಲ್ಲವೆಂದು ಅರ್ಥ. ಹವ್ಯಕ ಭಾಷೆಯಲ್ಲಿ, "ಎನಗೆ **ಗತಿಗೋತ್ರ** ಇಲ್ಲೆ" ಎಂದರೆ ತನ್ನನ್ನು ನೋಡಿಕೊಳ್ಳುವವರಿಲ್ಲವೆಂದು ಅರ್ಥ. ತುಳುವಿನಲ್ಲಿ ಎಂಕ್ **ಗತಿಯಿಜ್ಜಿ** ಎಂದರೆ ತನ್ನನ್ನು ನೋಡಿಕೊಳ್ಳುವವರಿಲ್ಲ ಎಂದು ಅರ್ಥ. ಗತಿಯೆಂದರೆ ಚಲನೆ.

ಚತುರ್ವರ್ಣ

ಚತುರ್ವಿಧ ವಿಭಾಗವು ಪಾರಸಿಗಳಲ್ಲಿ ಕಂಡು ಬರುತ್ತದೆ. ಈ ವರ್ಗಗಳಿಗೆ ಪಾರಸಿಗಳಲ್ಲಿ ಇವುಗಳಿಗೆ ಬೇರೆ ಬೇರೆ ಹೆಸರುಗಳಿವೆ. ಅಥರ್ವರು, ರಥೇಸ್ಥರು, ವಸ್ತ್ರಘುಷುಯನರು ಮತ್ತು ಹೊಯ್ತಿ ಇತ್ಯಾದಿ.

(ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.2 1971 ಪುಟ. 238)

ಚತುರ್ವಿಧ ಅಭಿನಯ

ಆಂಗಿಕ, ವಾಚಿಕ, ಸಾತ್ವಿಕ, ಆಹಾರ್ಯಗಳೆಂಬ ನಾಲ್ಕು ರೀತಿ ಅಭಿನಯಗಳನ್ನು ಚತುರ್ವಿಧ ಅಭಿನಯವೆಂದು ಕರೆಯುತ್ತಾರೆ. ಆಂಗಿಕವನ್ನು ಅಂಗಾಭಿನಯವನ್ನು ಸೂಚಿಸುತ್ತದೆ. ವಾಚಿಕ ಅಭಿನಯವೆಂದರೆ ಅಭಿನಯಕ್ಕೆ ಅನುಸಾರವಾಗಿ ಮಾತುಗಳನ್ನಾಡುವುದು. ಆಹಾರ್ಯವೆನ್ನುವುದು ವಸ್ತ್ರವಿನ್ಯಾಸಗಳು.

ಚತುರ್ವಿಧ ಆಹಾರ

ಭಕ್ಷ್ಯ, ಭೋಜ್ಯ, ಚೋಷ್ಯ, ಲೇಹಗಳೆಂಬ ನಾಲ್ಕು ವಿಧದ ಆಹಾರಗಳು.

ಚಮತ್ಕಾರ

ಸಾಮಾನ್ಯ ಜೀವನದಲ್ಲಿ ಚಮತ್ಕಾರವನ್ನು ಆನಂದ ಎಂದು ಕರೆಯಲಾಗುತ್ತದೆ. ಅದು ಆನಂದಾವಸ್ಥೆಯನ್ನು ತಲುಪಿದ ಅನುಭವದ ಕ್ರಿಯೆಯಾಗಿದೆ. ಅದು ಲೌಕಿಕವಾದ ಚಮತ್ಕಾರ. ಅದು ವಿಷಯವಸ್ತುವನ್ನು ಅವಲಂಬಿಸಿದೆ ಮತ್ತು ಅದು ವಿಘ್ನರಹಿತವಲ್ಲ. ಆದ್ದರಿಂದ ಅದು ಅಪರಿಪೂರ್ಣ. ಆದರೆ ಅದರಲ್ಲಿ ಅನುಭವಿಸಿದ ಆನಂದದ ಕಣವು ಕ್ಷಣಕಾ ಆತ್ಮದ ಪ್ರತೀತಿಯಿಂದ ಹುಟ್ಟಿದುದು. ಉದಾಹರಣೆಗೆ, ಒಳ್ಳೆಯ ರುಚಿಯುಳ್ಳ ವ್ಯಕ್ತಿಯು ಮಧುರವಾದ ಭಕ್ಷ್ಯವನ್ನು ಸವಿಯುತ್ತಾನೆ ; ಅವನು ಅದನ್ನು ಸುಮ್ಮನೆ ಕಬಳಿಸಿ ಬಿಡುವುದಿಲ್ಲ. ಕೇವಲ ಪ್ರಮಾತೃವಾಗಿ ಅವನು ಅದರ ವಿಶಿಷ್ಟ ರುಚಿಯಿಂದ ಪ್ರಭಾವಿತವಾದ ತನ್ನ ಮಾನಸಿಕ ಸ್ಥಿತಿಯಲ್ಲಿ ವಿಶ್ರಾಂತಿ ಪಡೆಯುತ್ತಾನೆ ಮತ್ತು ಆ ಕಾರಣದಿಂದ ಸುಖ ಪಡೆಯುತ್ತಾನೆ. ಒಂದು ಕ್ಷಣಕಾಲ ಅವನು ಆನಂದದ

ಅನುಭವ ಹೊಂದಿರುತ್ತಾನೆ. ತನ್ನ ಪ್ರಮಾತೃ ಸ್ಥಿತಿಯಲ್ಲಿ ವಿಶ್ರಾಂತಿ ಪಡೆಯುತ್ತಿರುವ ವ್ಯಕ್ತಿಯನ್ನು ಪಾರಿಭಾಷಿಕವಾಗಿ ಭುಂಜಾನ ಎಂದು ಕರೆಯಲಾಗುತ್ತದೆ. ಇಂತೆಯೇ ಸೂಕ್ಷ್ಮ ರಸಾಭಿಜ್ಞತೆಯುಳ್ಳ ಒಬ್ಬ ವ್ಯಕ್ತಿ ರಂಗದ ಮೇಲೆ ಪ್ರದರ್ಶಿಸಿದ ಒಳ್ಳೆಯ ನಾಟಕವನ್ನು ನೋಡುವಾಗ ತನ್ನ ಆತ್ಮದಲ್ಲಿ ವಿಶ್ರಾಂತಿ ಪಡೆಯುತ್ತಾನೆ. ಈ ಎರಡು ಸ್ಥಿತಿಗಳ ನಡುವಣ ವ್ಯತ್ಯಾಸವೆಂದರೆ ರೂಢಿಯ ಜೀವನದಲ್ಲಿ ರುಚಿಯ ವಿಷಯವು ತನ್ನ ಸಂವೇದನಾಂಶದೊಡನೆ ತಾದಾತ್ಮ್ಯ ಹೊಂದಿರುವ ವ್ಯಕ್ತಿಗೆ ಸಂಬಂಧಿಸಿದ್ದರೆ, ರಸಾನುಭವದ ಸಂದರ್ಭದಲ್ಲಿ ವಿಷಯತ್ವವು ಸಂಪೂರ್ಣವಾಗಿ ಅದೃಶ್ಯವಾಗಿರುತ್ತದೆ. ಕೇವಲ ಸುಪ್ತ ಪ್ರಜ್ಞಾವಸ್ಥೆಯಲ್ಲಿರುವ ಸ್ಥಾಯಿಭಾವಕ್ಕೆ ಯಾವುದೇ ವಿಷಯವಿರುವುದಿಲ್ಲ. ಅದು ನಾಟಕದ ನಾಯಕನಿಗೆ ಸಂಬಂಧಿಸಿಲ್ಲ. ಅದು ತನ್ನ ಹಿನ್ನೆಲೆಯಲ್ಲಿ ಲೀನವಾದ ವಾಸನೆಯ ಕೇವಲ ಪುನರುದಯ ಮಾತ್ರ. ಅನುಭವಿಸುತ್ತಿರುವ ಜ್ಞಾತೃವೂ ಕೂಡ ರಸಾನುಭವದಲ್ಲಿ ಎಲ್ಲಾ ವ್ಯಕ್ತಿತ್ವಾಂಶದಿಂದಲೂ ಮುಕ್ತನಾಗಿರುತ್ತಾನೆ.

ಹೀಗೆ ರಸಾನುಭವದಲ್ಲಿ ವಿಷಯ ಪ್ರತೀತಿಯ ಸಂಪೂರ್ಣ ಅಭಾವವಿರುತ್ತದೆ. ಅದು ಸಾಧಾರಣೀಕೃತ ಪ್ರತಿತಿಯೊಡನೆ ನಿರಂತರ ಸಂಬಂಧ ಪಡೆದಿರುವ ವಿಮರ್ಶದ ಪ್ರಾಧಾನ್ಯದಿಂದ ಕೂಡಿರುತ್ತದೆ. ಅದನ್ನು ರಸನಾ, ಚರ್ವಣಾ, ನಿರ್ವೃತಿ, ಪ್ರಮಾತೃವಿಶ್ರಾಂತಿ, ಚಮತ್ಕಾರ ಎಂದು ಕರೆದಿದೆ. ಈ ಚಮತ್ಕಾರವು ರಸ, ಆನಂದ ಮತ್ತು ಪರಮಭೋಗಗಳಿಗೆ ಸಮಾನಾರ್ಥಕ ಪದವಾಗಿದೆ.

ಅಭಿನವಗುಪ್ತನ ಪ್ರಕಾರ ಚಮತ್ಕಾರವು ವಿಮರ್ಶೆ ಎಂದರೆ ಅದು ಶಕ್ತಿಯ ಮಟ್ಟದಲ್ಲಿನ ಅನುಭವ ಮತ್ತು ಅಲಂಕಾರಶಾಸ್ತ್ರದಲ್ಲಿ ಕೂಢ ಅವನು ಈ ಪದವನ್ನು ಅದೇ ಅರ್ಥದಲ್ಲಿ ಬಳಸುತ್ತಾನೆ ಎನ್ನುವುದನ್ನು ಇದು ಸ್ಪಷ್ಟವಾಗಿ ಸೂಚಿಸುತ್ತದೆ.

ಚರಕ-ಅಶ್ವಿನೀಮತ-ಸುಶ್ರುತ-ವಾಗ್ಭಟ ಸಂಹಿತೆಗಳು

ಭಾರತೀಯರು ವೈದ್ಯ, ಸಸ್ಯಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳಲ್ಲಿ ಗ್ರೀಕರಿಂದ ಮುಖ್ಯವಾದುದೇನನ್ನೂ ಕಲಿಯಲಿಲ್ಲ. ಈ ಮೂರು ಶಾಸ್ತ್ರಗಳನ್ನೂ ಕುರಿತು ಚರಕ ಮತ್ತು ಸುಶ್ರುತರು ಗ್ರಂಥ ರಚನೆ ಮಾಡಿದ್ದಾರೆ. ಚರಕ ಸಮಹಿತೆಯು ನೂರಾರು ಗಿಡಮೂಲಿಕೆಗಳ ಹೆಸರುಗಳನ್ನೂ, ಅವುಗಳಿಂದ ರೋಗಿಗಳಿಗೆ ಚಿಕಿತ್ಸೆ ಮಾಡಲು ತಯಾರಿಸಬಹುದಾದ ಮದ್ದುಗಳನ್ನೂ ವಿವರಿಸಿದೆ. ವಿವಿಧ ಗಿಡಮೂಲಿಕೆಗಳ ಚೂರ್ಣಗಳು ಮತ್ತು ಮಿಶ್ರಣಗಳನ್ನು ತಯಾರಿಸಲು ನಮೂದಿಸಿರುವ ಪ್ರಕ್ರಿಗಳು ಪ್ರಾಚೀನ ಭಾರತೀಯರಿಗೆ ರಸಾಯನ ಶಾಸ್ತ್ರದಲ್ಲಿದ್ದ ಗಹನವಾದ ತಿಳಿವಳಿಕೆಯ ಪರಿಚಯ ನೀಡುತ್ತವೆ. ಪ್ರಾಚೀನ ಭಾರತೀಯ ವೈದ್ಯರು ರೋಗ ನಿವಾರಣೆಗೆ ಮುಖ್ಯವಾಗಿ ಸಸ್ಯಗಳನ್ನೇ ನಂಬಿದ್ದರು. ಸಂಸ್ಕೃತದಲ್ಲಿ ಸಸ್ಯಗಳನ್ನು ಓಷಧಿ ಎಂದು ಕರೆಯುತ್ತಾರೆ. ಅದರಿಂದ ರೋಗ ನಿವಾರಕ ಮದ್ದು ಔಷಧ ಎಂಬ ಹೆಸರನ್ನು ಪಡೆದಿದೆ. (ಆರ್. ಎಸ್. ಶರ್ಮ ೧೯೯೭ ಪು.೧೬೫)

ಆಯುರ್ವೇದ ವಿಜ್ಞಾನಕ್ಕೆ ಸಂಬಂಧಿಸಿದಂತೆ ಬಹುಮುಖ್ಯ ಗ್ರಂಥಗಳು ಸುಶ್ರುತ ಮತ್ತು ಚರಕ ಸಂಹಿತೆಗಳು. ದೇಹದ ಆರೋಗ್ಯಕ್ಕೆ ಸಂಬಂಧಿಸಿದಂತೆ ಈ ಎರಡೂ ಗ್ರಂಥಗಳು ವಿವರಿಸುತ್ತವೆ. ದೇಹದ ಆರೋಗ್ಯ ಕಾಪಾಡಲು, ರೋಗ ಬಂದರೆ ಅವುಗಳನ್ನು ಬಗೆಹರಿಸಲು ಅನುಸರಿಸಬೇಕಾದ ನಿಯಮಗಳನ್ನು ಈ ಗ್ರಂಥಗಳು ಹೇಳುತ್ತವೆ. ಚರಕ, ಸುಶ್ರುತ ಮತ್ತು ವಾಗ್ಭಟ ಸಂಹಿತೆಗಳು ಆಯುರ್ವೇದದ ಮೂರು ಮುಖ್ಯ ಗ್ರಂಥಗಳು. ಈ ಗ್ರಂಥಗಳನ್ನು 'ಬೃಹತ್ತ್ರಯೀ' ಎಂದು ಕರೆಯುತ್ತಾರೆ. ಸುಶ್ರುತ ಸಂಹಿತೆಯನ್ನು ವಿಶ್ವಾಮಿತ್ರ ಋಷಿಗಳ ಮಗನಾದ ಸುಶ್ರುತ ಬರೆದರು. ಸುಶ್ರುತ ಆಯುರ್ವೇದ ವಿದ್ಯೆಯನ್ನು ಶ್ರೀ ಧನ್ವಂತರಿಯಿಂದ ಕಲಿತನು. ಚರಕ; ಸುಶ್ರುತ, ನರವೈದ್ಯ, ಮಂತ್ರ – ಮೊದಲಾದವುಗಳು ಶಾಸ್ತ್ರಭಾಗಗಳಾಗಿದ್ದವು ಎಂಬುದು ಗಮನಾರ್ಹ. ಈ ಸಂಹಿತೆಗಳು ಕೂಡ ವಿದ್ಯೆಯ ಒಂದು ಭಾಗವಾಗಿತ್ತು.

ಅಶ್ವಿನೀಮತವೆಂದರೆ ಅಶ್ವಿನಿದೇವತೆಗಳ ಮತವೆಂದು ಸೂಚಿತವಾಗುತ್ತದೆ. ಅಶ್ವಿನಿದೇವತೆಗಳು ಚ್ಯವನನಿಗೆ ಆಯ-ಆರೋಗ್ಯವನ್ನು ಕೊಟ್ಟರು. ಯೌವನವನ್ನು ಅವನು ಮರಳಿ ಪಡೆಯುವಂತಾಯಿತು. ಅಂದಿನಿಂದ 'ಅಶ್ವಿನೀ ಮಂತ್ರ'ವೆಂಬುದು ಚಾಲ್ತಿಗೆ ಬಂತೆಂದು ಕತೆಯಿದೆ. ಆದರೆ ಭಾರತೀಯರು ವೈದ್ಯ, ಸಸ್ಯಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳಲ್ಲಿ ಗ್ರೀಕರಿಂದ ಮುಖ್ಯವಾದುದೇನನ್ನೂ ಕಲಿಯಲಿಲ್ಲ. ಈ ಮೂರು ಶಾಸ್ತ್ರಗಳನ್ನೂ ಕುರಿತು ಚರಕ ಮತ್ತು ಸುಶ್ರುತರು ಗ್ರಂಥ ರಚನೆ ಮಾಡಿದ್ದಾರೆ. ಚರಕ ಸಂಹಿತೆಯು ನೂರಾರು ಗಿಡಮೂಲಿಕೆಗಳ ಹೆಸರುಗಳನ್ನೂ, ಅವುಗಳಿಂದ ರೋಗಿಗಳಿಗೆ ಚಿಕಿತ್ಸೆ ಮಾಡಲು ತಯಾರಿಸಬಹುದಾದ ಮದ್ದುಗಳನ್ನೂ ವಿವರಿಸಿದೆ. ವಿವಿಧ ಗಿಡಮೂಲಿಕೆಗಳ ಚೂರ್ಣಗಳು ಮತ್ತು ಮಿಶ್ರಣಗಳನ್ನು ತಯಾರಿಸಲು ನಮೂದಿಸಿರುವ ಪ್ರಕ್ರಿಯೆಗಳು ಪ್ರಾಚೀನ ಭಾರತೀಯರಿಗೆ ರಸಾಯನ ಶಾಸ್ತ್ರದಲ್ಲಿದ್ದ ಗಹನವಾದ ತಿಳಿವಳಿಕೆಯ ಪರಿಚಯ ನೀಡುತ್ತವೆ. ಪ್ರಾಚೀನ ಭಾರತೀಯ ವೈದ್ಯರು ರೋಗ ನಿವಾರಣೆಗೆ ಮುಖ್ಯವಾಗಿ ಸಸ್ಯಗಳನ್ನೇ ನಂಬಿದ್ದರು. ಸಂಸ್ಕೃತದಲ್ಲಿ ಸಸ್ಯಗಳನ್ನು 'ಓಷಧಿ' ಎಂದು ಕರೆಯುತ್ತಾರೆ. ಅದರಿಂದ 'ರೋಗ ನಿವಾರಕ ಮದ್ದು ಔಷಧ' ಎಂಬ ಹೆಸರನ್ನು ಪಡೆದಿದೆ.

ವಿವರಗಳಿಗೆ ನೋಡಿ: ಎನ್.ಎಲ್. ಭಟ್ಟಾಚಾರ್ಯ(ಮೂಲ) ೧೯೭೩ ಸುಶ್ರುತ ಸಂಹಿತಾ

ಆರ್. ಎಸ್. ಶರ್ಮ ೨೦೦೭ ಪ್ರಾಚೀನ ಭಾರತ ಪುಟ. ೧೬೪-೧೬೫.

ವೆಂಕಟರಾವ್ ಎಚ್.ಪಿ. (ಅನು) ೧೯೪೯ ಋಗ್ವೇದ ಸಂಹಿತಾ (ಭಾಗ-೧೮)

ಚರಣ ಗ್ರಂಥ

ಜೈನ ಶ್ರಾವಕಯತಿಗಳ ಆಚಾರ ವಿಚಾರವನ್ನು ತಿಳಿಸುವ ಗ್ರಂಥಕ್ಕೆ ಚರಣ

ಗ್ರಂಥವೆಂದು ಕರೆಯುತ್ತಾರೆ. ಚರವೆಂದರೆ ಚಲಿಸು ಎಂದು ಅರ್ಥ. ಯಾರು ಚರಿಸುತ್ತಾರೋ ಅವರು ಅನುಕರಿಸಲು ಯೋಗ್ಯವಾದ ಕೃತಿಯು ಚರೇಣ ಗ್ರಂಥವಾಗಿದೆ. ಲೋಕಾಕಾರವನ್ನು ತಿಳಿಸುವ ಗ್ರಂಥಗಳೇ ಲೋಗಾಣಿಗಳು.

ಚರಮತನು

ಭವಮೋಕ್ಷಗಾಮಿಯಾದ ಜೀವಿಯು ಕೊನೆಯದಾಗಿ ಧರಿಸುವ ಶರೀರ. ಇದು ಜೈನಧರ್ಮದ ಪರಿಭಾಷೆಯಾಗಿದೆ.

ಚರಿಗೆವರ್

ಚರಿಗೆ ವರ್ ಎಂದರೆ ಆಹಾರಕ್ಕಾಗಿ ಜೈನ ಯತಿಗಳು ಸುತ್ತಾಡುವುದು. ಇದನ್ನು ಬೇರೆ ರೀತಿಯಲ್ಲಿ ಹೇಳುವ ಕ್ರಮವಿದೆ. ವಾರಾನ್ನವೆನ್ನುವುದು ಚಾಲ್ತಿಯಲ್ಲಿತ್ತು. ಈಗಲೂ ಚರಿಗೆಯೆನ್ನುವುದು ದ.ಕ.ದ ಹವ್ಯಕ ಬ್ರಾಹ್ಮಣರಲ್ಲಿ ಈ ಪ್ರಯೋಗವಿದೆ. ಚರಿಗೆಯೆಂದರೆ ಬೆಂದ ಅನ್ನವನ್ನು ಇಳಿಸುವುದು ಎಂದು ಅರ್ಥ.

ವಿವರಗಳಿಗೆ ನೋಡಿ: ಚರಿಗೆ

ಚರಿತ

ಚರಿತ ಎಂದರೆ ಆಚರಣೆ ಎಂದು ಅರ್ಥ. ತನ್ನ ಕಾವ್ಯದ ಕುರಿತು ಹೇಳುವಾಗ ಪಂಪ ಪ್ರಥಮ ಆಶ್ವಾಸದಲ್ಲಿ ದಯಾ ರಸ ಚರಿತಂ ಎಂದು ಹೇಳುತ್ತಾನೆ. ದಯಾರಸದ ಚರಿತೆ ಎನ್ನುವುದು ಇಲ್ಲಿ ಮುಖ್ಯ. ಜೈನರಲ್ಲಿ ದಯೆ ಎನ್ನುವುದು ಮುಖ್ಯ ಗುಣವಾಗಿದೆ. ಚರಿತೆಯೆಂದರೆ ನಾವು ಇತಿಹಾಸ ಕಥನವೆಂದೂ ಅರ್ಥವಿಸಿಕೊಳ್ಳಬಹುದು. ಸಂಸ್ಕೃತದಲ್ಲಿ ಚರಿತ್ರೆಯೆಂದರೆ ವೃತ್ತಾಂತ, ಚಾರಿತ್ರ್ಯವೆಂದರೆ ಒಳ್ಳೆಯ ನಡತೆ, ಪ್ರಾಚೀನ ಘಟನೆಗಳನ್ನು ಹೇಳುವ ಮಹಾಭಾರತ ಮೊದಲಾದ ಗ್ರಂಥಗಳು ಚರಿತ್ರೆಯೇ. ಇತಿಹಾಸವಾದವೆಂದರೆ ಪೂರ್ವದಲ್ಲಿ ನಡೆದ ಕಥೆ, ಆಖ್ಯಾಯಿಕ. ಚಾರಿತ್ರವೆಂದರೆ ಗುಣ–ನಡತೆ. ಇಲ್ಲಿಯೇ ಪಂಪ ಹಲವು ಶೀಲದ ಬಗ್ಗೆ ಹೇಳುತ್ತಾನೆ. ಮೋಹವು ವಾಸ್ತವವಾಗಿ ಜೈನಧರ್ಮದಲ್ಲಿ ದುರ್ಮೋಹವಾಗಿರುವುದು. ಮೋಹ–ಅವಿದ್ಯೆ, ಅಜ್ಞಾನ, ಭ್ರಾಂತಿ. ಇಲ್ಲಿ ಕೆಟ್ಟ ಭ್ರಾಂತಿ, ಚಂಚಲತೆ ಎಂಬರ್ಥದಲ್ಲಿ ಪ್ರಯೋಗವಾಗಿದೆ. ಚರಿತಕ್ಕೂ ಚರಿತ್ರೆಗೂ ಇರುವ ಸಂಬಂಧಾಂತರಗಳು ಹೀಗಿವೆ:

"ಈ ರಾಜನು ಮೊದಲೋ ಆ ರಾಜನು ಮೊದಲೋ ಎಂಬುದು ಅನಗತ್ಯದ ಜಿಜ್ಞಾಸೆ. ಆದರೆ ಕಬ್ಬಿಣದ ಬಳಕೆ ಈ ರಾಜನ ಕಾಲದಲ್ಲಿ ಮೊದಲಾಯಿತೋ ಅಥವಾ ಇನ್ನೊಬ್ಬ ರಾಜನ ಕಾಲದಲ್ಲಿ ಮೊದಲಾಯಿತೋ ಎಂಬಂತಹ ಪ್ರಶ್ನೆ ವಿಶಿಷ್ಟವಾಗಿ ಪ್ರಮುಖವಾದ ಪ್ರಶ್ನೆ. ಅಂತಹ ಸಂದರ್ಭಗಳಲ್ಲಿ ಮಾತ್ರ ಅವರಿಬ್ಬರಲ್ಲಿ ಯಾರು ಮೊದಲಿನವರು ಎಂಬುದರ ನಿರ್ಣಯ ಮುಖ್ಯವಾಗುತ್ತದೆ" ಎಂದೆನ್ನುತ್ತಾರೆ. ಹಾಗಾದರೆ ಚರಿತ್ರೆ ಎಂಬುದನ್ನು ಹೇಗೆ ನಿರ್ವಚಿಸಿಕೊಳ್ಳಬೇಕು ಎಂಬ ಪ್ರಶ್ನೆಗೆ 'ಉತ್ಪಾದನಾ

ಶಕ್ತಿಗಳು ಹಾಗೂ ಉತ್ಪಾದನಾ ಸಂಬಂಧಗಳಲ್ಲಿ ಕ್ರಮಾಗತವಾಗಿ ಆಗುವ ಪರಿವರ್ತನೆಗಳನ್ನು ಕಾಲಾನುಕ್ರಮದಲ್ಲಿ ವಿವರಿಸುವುದೇ ಚರಿತ್ರೆ' ಎಂದು ಕೊಸಾಂಬಿಯವರು ಖಚಿತವಾಗಿ ಉತ್ತರ ಹೇಳುತ್ತಾರೆ.

ಸಾಮಾಯಿಕ, ಛೇದೋಪಸ್ಥಾಪನೆ, ಪರಿಹಾರ ಶುದ್ಧಿ, ಸೂಕ್ಷ್ಮ ಸಂಪ್ರದಾಯ ಯಥಾಖ್ಯಾತ ಚಾರಿತ್ರ ಎನಿಸಿಕೊಳ್ಳುತ್ತದೆ.

ನೋಡಿ: ಡಿ. ಡಿ. ಕೊಸಾಂಬಿ 1998 ಪ್ರಾಚೀನ ಭಾರತದಲ್ಲಿ ಚರಿತ್ರೆ ಪುಟ. 15.

ಚಾಂಡಾಲ

ಫಾಹಿಯಾನ್ ಹೀಗೆಂದು ಬರೆದಿದ್ದಾನೆ. 'ಚಾಂಡಾಲರು ನಗರ ಹೊರಗೆ ವಾಸಿಸುತ್ತಿದ್ದರು. ನಗರವನ್ನು ಪ್ರವೇಶ ಬೇಕಾಗಿ ಬಂದಾಗ ಸಮರ್ಣೀಯ ಹಿಂದೂಗಳು ತಮ್ಮನ್ನು ಸ್ಪರ್ಶಿಸದಂತೆ ನೋಡಿಕೊಳ್ಳುವ ಸಲುವಾಗಿ ದೊಣ್ಣೆಯಿಂದ ನೆಲವನ್ನು ಕುಟ್ಟುತ್ತ ಅವರನ್ನು ಎಚ್ಚರಿಸ ಬೇಕಾಗಿತ್ತು. (ಭಗವತ್ ಶರಣ ಉಪಾಧ್ಯಾಯ. ೨೦೦೪. ಪು. ೧೦೫) ಶೂದ್ರನಿಗೆ ವೈಶ್ಯಳಲ್ಲಿ ಆಯೋಗವ, ವ ಕ್ಷತ್ರಿಯಳಲ್ಲಿ ಕ್ಷತೃ. ಬ್ರಾಹ್ಮಣಳಲ್ಲಿ ಚಂಡಾಲನು ಜನಿಸುವರು. (ಮನುಸ್ಮೃತಿ 10–12)

"ಶೂದ್ರರಲ್ಲಿನ ಕೆಲವರ ಕೆಲಸಗಳನ್ನು ಹೀಯಾಳಿಸಿ ಕೊನೆಗೆ ಶೂದ್ರರನ್ನೆಲ್ಲ ಕ್ಷುದ್ರಾಚಾರಿಗಳೆಂದರು (ದೀಘನಿಕಾಯ III. 95). ಜೈನರ ಆಯಾರಂಗ (ಆಚಾರಾಂಗ) ಸೂತ್ರದಲ್ಲೂ (II. 4.1.8) ವೃಷಲ, ಗೃಹದಾಸ, ಕೆಳಜಾತಿಯವನು ಎನ್ನುವುದನ್ನು ಕಳ್ಳ, ನಾಯಿ ಎಂದಂತೆ ಬೈಗುಳಗಳಾಗಿ ಬಳಸಿದೆ. ಚಂಡಾಲ, ನಿಷಾದ, ವೇಣ, ರಥಕಾರ, ಪುಕ್ಕುಸರನ್ನು ನೀಚಕುಲ, ಹೀನಾಜಾತಿಯವರೆಂದು ಭಾವಿಸಲಾಗಿತ್ತು (ಮ.ನಿ. III. 169–78; ವಿ.ಪಿ. II. 6). ಮೌರ್ಯಪೂರ್ವಯುಗದಲ್ಲಿ ಇದು ವ್ಯಾಪಕವಾಗಿತ್ತು. ಆದ್ದರಿಂದ ಬುದ್ಧನು ಭಿಕ್ಷುಗಳ ಪೂರ್ವಾಶ್ರಮದ ಜಾತಿ, ಕರ್ಮಗಳನ್ನು ಎತ್ತಾಡಬಾರದೆಂದು ದೀರ್ಘವಾಗಿ ಬೋಧಿಸಿದ (ವಿ. ಪಿ. IV. 4–11). ಚಂಡಾಲರ ಜೀವನವು ದುರ್ಭರವಾಗಿತ್ತು. ಅಂಗುತ್ತರ ನಿಕಾಯದಲ್ಲಿ ಹೇಳಿರುವಂತೆ (IV. 376) ಒಬ್ಬ ಚಂಡಾಲ ಹುಡುಗ ಅಥವಾ ಹುಡುಗಿ ಚಿಂದಿಬಟ್ಟೆ ತೊಟ್ಟು, ಭಿಕ್ಷೆಗೆ ಬೋಕಿಯೊಂದನ್ನು ಹಿಡಿದು, ಗ್ರಾಮವೊಂದಕ್ಕೆ ಹೋಗಬೇಕಾದರೆ ತಗ್ಗಿ ಬಗ್ಗಿ ನಡೆಯಬೇಕಿತ್ತು. ಬೇರೆಯವರಿಂದ ಬೇರ್ಪಡಿಸಿ ಗುರುತಿಸಲು ಸಾಧ್ಯವಾಗುವಂತೆ ಅವರು ಬಣ್ಣದ ಬಟ್ಟೆ ತೊಟ್ಟು, ಸೊಂಟಕ್ಕೆ ಒಂದು ಹಗ್ಗ ಸುತ್ತಿಕೊಂಡು ಓಡಾಡಬೇಕಿತ್ತು (ಜಾತಕ VI. 379). ಚಂಡಾಲನೆಂದರೆ ಯಾವ ಸದ್ಗುಣವೂ ಇಲ್ಲದವನು, ನಂಬಿಕೆ ಮತ್ತು ಮೌಲ್ಯಗಳನ್ನು ತಿಳಿಯದವನು ಎಂಬ ಭಾವನೆ ಸಾಮಾನ್ಯವಾಗಿತ್ತು. ಜಾತಕಗಳ ಚಿತ್ರಣಕ್ಕೂ ಧರ್ಮಶಾಸ್ತ್ರಗಳ ನಿಯಮಗಳಿಗೂ ಈ ವಿಷಯದಲ್ಲಿ ಅಷ್ಟೇನೂ ಅಂತರವಿಲ್ಲ. ಆದರೆ ಈ ಜಾತಕಗಳು ಮೌರ್ಯಪೂರ್ವಕಾಲದ ಅಂತಿಮ ಘಟ್ಟಕ್ಕೆ ಸೇರುವಂಥವು.

ಪಾಲಿ ಗ್ರಂಥಗಳಲ್ಲಿ ಹಲವು ಹೀನ ಕುಲದವರನ್ನು, ಅದರಲ್ಲೂ ನಿಷಾದ, ಚಂಡಾಲರನ್ನು, ಅಸ್ಪೃಶ್ಯರೆಂದು ಗುರುತಿಸಿದೆ. ಇವರನ್ನು ಅಂತ್ಯ ಮತ್ತು ಬಾಹ್ಯ (ಊರಾಚೆ ಇರುವವನು) ಎಂದು ಕರೆದಿದೆ. ಗೌತಮನ ಪ್ರಕಾರ (IV. 28) ಅಂತ್ಯನು ಪಾಪಿಷ್ಠ. ವಸಿಷ್ಠನ ಪ್ರಕಾರ (XVI. 30) ಒಳ್ಳೆಯ ಶೂದ್ರ ಮತ್ತು ಅಂತ್ಯಯೋನಿಜರನ್ನು ಅವರವರ ವಿಷಯದಲ್ಲಿ ಮಾತ್ರ ಸಾಕ್ಷಿಯಾಗಿ ಒಪ್ಪಬಹುದುತ್ತು. ಇವನೇ (XVIII.3) ಶೂದ್ರನಿಗೆ ವೈಶ್ಯ ಹೆಣ್ಣಿನಲ್ಲಿ ಹುಟ್ಟಿದವರು 'ಅಂತವಸಾಯಿ' ಎಂದಿದ್ದಾನೆ. ಪ್ರಾಚೀನ ಜೈನಮತ ಕೂಡ ವರ್ಣಭೇದವಿಲ್ಲದೆ ಎಲ್ಲರನೂ ತನ್ನ ಪಂಥದೊಳಕ್ಕೆ ಸೇರಿಸಿಕೊಳ್ಳುತ್ತಾ ಚಂಡಾಲರ ಸ್ಥಿತಿಯನ್ನು ಉತ್ತಮಗೊಳಿಸಲು ಯತ್ನಿಸಿತು. ಮಾತಂಗನೊಬ್ಬನಿಂದ ಉಪದೇಶ ಪಡೆಯಲು ಹೋದ ರಾಜನು ಕೆಳಗಿನ ಸ್ಥಾನದಲ್ಲಿ ಕುಳಿತನೆಂದು ಒಂದು ಜೈನಮೂಲ ತಿಳಿಸುತ್ತದೆ. ಧಾರ್ಮಿಕ ಕ್ರಿಯೆಗಳ ಸಂದರ್ಭದಲ್ಲಿ ಪಾವಿತ್ರ್ಯ ಮತ್ತು ಶುಚಿತ್ವಗಳ ಕಾರಣದಿಂದಾಗಿಯೇ ಶೂದ್ರರನ್ನು ಅವುಗಳಿಂದ ದೂರವಿರಿಸಲಾಯಿತೆಂಬ ಮಾತು ಅಸಂಗತ. ಅಂತೆಯೇ ಉಚ್ಚವರ್ಣದವರ ಜೊತೆ ಸಹಪಂಕ್ತಿ ಭೋಜನ ಕೂಡ. ಇಂತಹ ಭಾವನೆಗಳು ಹುಟ್ಟಿಕೊಳ್ಳುವುದು ಸಮಾಜದ ಒಂದು ವಿಭಾಗದವರನ್ನು ಹೀನರೆಂದು ತುಚ್ಛೀಕರಿಸಿದ ನಂತರವೇ ಎಂಬುದನ್ನು ಮನಗಾಣಬೇಕು. ಅವರನ್ನು ವಂಶಪಾರಂಪರ್ಯವಾಗಿ ದುಡಿಯುವ ವರ್ಗವೆಂದು ಪರಿಗಣಿಸಬೇಕು., ಅವರ ದೈಹಿಕ ದುಡಿಮೆಯಿಂದಾಗಿ ಅವರು ಅಶುದ್ಧರೆಂಬ ಭಾವನೆಯನ್ನು ಬೆಳಸಬೇಕು; ಹೀಗೆ ಮಾಡಿದ ನಂತರ ಮಾತ್ರವೇ ಅಸ್ಪೃಶ್ಯತೆಯು ಆಚರಣೆಗೆ ಬರಲು ಸಾಧ್ಯ. ಉತ್ತರಾಧ್ಯಯನ ಸೂತ್ರ (ಟೀಕೆ 13)ದಲ್ಲಿ ಉಲ್ಲೇಖವಾಗಿರುವಂತೆ ಕಾಮನ ಹಬ್ಬದಲ್ಲಿ ಕುಣಿಯುತ್ತಾ ಬಂದ ಮಾತಂಗರನ್ನು ಮೇಲುಜಾತಿಯವರು ಒದ್ದು ಊರಾಚೆ ಅಟ್ಟಿದ ಕಥೆ ಇದೆ. ಬೌದ್ಧ, ಜೈನ ಮೂಲಗಳಿಂದ ತಿಳಿದು ಬರುವಂತೆ ಚಂಡಾಲರನ್ನು ಅಸ್ಪೃಶ್ಯರೆಂದು ಮೇಲಿನ ವರ್ಣದವರು ಹೀಯಾಳಿಸುತ್ತಿದ್ದರು; ಆದರೆ ಬ್ರಾಹ್ಮಣರಿಗೆ ಅವರ ಮೇಲೆ ವಿಶೇಷ ದ್ವೇಷವಿತ್ತು. ಬ್ರಾಹ್ಮಣಾಧಿಕಾರದ ಸಮಾಜದಲ್ಲಿ ಚಂಡಾಲರು ಸೇರಿಕೊಂಡಾಗ ಅವರ ಬದುಕಿನ ಶೈಲಿಯಲ್ಲಿ ಸಂಪೂರ್ಣವಾದ ಬದಲಾವಣೆಗಳೇನೂ ಉಂಟಾಗಲಿಲ್ಲ. ಪ್ರಾಯಶಃ ಪಶು, ಪಕ್ಷಿಗಳ ಬೇಟೆಯಾಡುತ್ತಿದ್ದ ಚಂಡಾಲರನ್ನು ಪಶುಗಳ, ಮನುಷ್ಯರ, ಹೆಣ ಒಪ್ಪ ಮಾಡಲು ಕರೆಯುತ್ತಿದ್ದರು. ಈ ಕೆಲಸ ಮಾಡುವ 'ಪಣ'ರನ್ನೂ ಚಂಡಾಲರೆಂದು ಕರೆಯುತ್ತಿದ್ದರು

ಕೆಲವರನ್ನು ವೈದಿಕಧರ್ಮವು ಚಾತುರ್ವರ್ಣ್ಯದಲ್ಲೂ ಸೇರಿಸದೆ ಚಂಡಾಲರೆಂದು ಊರಿನ ಹೊರಗಿಡುತ್ತಿತ್ತು.

ಅಪರಾಧಗಳನ್ನು ಮಾಡಿದವರನ್ನು ಹಿಂದೂ ಧರ್ಮ ಚಂಡಾಲರೆಂದು ದೂರವಿಡುತ್ತಿತ್ತು. ಜೈನಧರ್ಮವು ವೈದಿಕ ಧರ್ಮದ ವಿರುದ್ಧವಾಗಿ ಹುಟ್ಟಿ ಉತ್ತಮಗೆಂದು ಕರೆದುಕೊಂಡ ವೈದಿಕರು ಯಾರನ್ನು ಪಾಪಿಗಳು ನೀಚರು, ಚಂಡಾಲರೆಂದು

ಸಮಾಜದಿಂದ ಬಹಿಷ್ಕರಿಸಿದರೋ ಅವರನ್ನು ಧಾರ್ಮಿಕ ಜೀವಿಗಳನ್ನಾಗಿ ಮಾಡಿತು. ಬ್ರಾಹ್ಮಣನಿಗೆ ವೈಶ್ಯಕನ್ಯೆಯಲ್ಲಿ ಜನಿಸಿದವನು ಅಂಬಷ್ಠನು ಎಂದು ಕರೆಯಲ್ಪಡುತ್ತಾನೆ. ಬ್ರಾಹ್ಮಣನಿಗೆ ಶೂದ್ರಳಲ್ಲಿ ಹುಟ್ಟಿದವನನ್ನು ಪಾರಶವ ಎಂದು ಹೇಳುತ್ತಾರೆ. ನಿಷಾದ ಎಂದರೂ ಅವನೇ ಎಂದು ಮನು ಹೇಳುತ್ತಾನೆ. ಶೂದ್ರನಿಗೆ ವೈಶ್ಯಳಲ್ಲಿ ಆಯೋಗವ, ಕ್ಷತ್ರಿಯಳಲ್ಲಿ ಕ್ಷತ್ಯ. ಬ್ರಾಹ್ಮಣಳಲ್ಲಿ ಚಂಡಾಲನು ಜನಿಸುವರು ಎಂದು ಮನುವಿನ ಅಭಿಪ್ರಾಯ." (ಚಕ್ರಕೋಡಿ ಈಶ್ವರಶಾಸ್ತ್ರಿ)

"ಮುಂಡರೆಂಬ ಹೆಸರಿನ ಜನಗಳು ನಮ್ಮ ಭಾಗದಲ್ಲಿ ಈಗ ಇಲ್ಲವಾದರೂ ಬಂಗಾಳದ ಕಡೆಗೆ ಉಂಟು. ಚಂಡರು, ಈಗ ಚಾಂಡಾಲರೆಂಬ ಹೆಸರಿನ ಜನಗಳಾಗಿರಬೇಕು. ಕಂನಾಡಿನಲ್ಲಿ ವಿಶೇಷವಿಲ್ಲ. ಮಹಾರಾಷ್ಟ್ರದಲ್ಲೂ ವಿಶೇಷವಾಗಿ ಬಂಗಾಳದಲ್ಲೂ ಇದ್ದಾರೆ. ಚಾಮುಂಡಿ ಬೆಟ್ಟ, ಚಂಡಿಮುಂಡಿ ತೀರ್ಥ, ಚಂಡಿವಾಡಿ ವಿಷಯ, ಎಂಬ ಎಡೆಯ ಹೆಸರುಗಳು ಈ ಪುರಾತನ ಜನಗಳ ನೆನಹನ್ನು ಕೊಡುವುವು.

'ಕೋಲ'ವೆಂಬುದಕ್ಕೆ ಕಂನುಡಿಯಿಂದ ಅರ್ಥ ಮಾಡಿದರೆ ಬಿಲ್ಲವರೂ, ಅಂಬಿಗರೂ, ಕೋಲರೂ, ಹತ್ತುಗೆಯವರೆಂದು ಕಂಡುಬರುತ್ತದೆ. ಅಂಬು ಎಂದರೆ ಬಾಣ. ಬೇಟೆಯಿಂದ ಜೀವನವನ್ನು ಸಾಗಿಸುತ್ತಿದ್ದ ಕಾಲದ ಹೆಸರುಗಳಿವು. ಬೇಡರೂ ಬಿಲ್ಲವರೂ ಅಂಬಿಗರೂ ಕೋಲರೂ ಧನುರ್ವಿದ್ಯೆಯ ಬಲದಿಂದ ಬದುಕು ನಡೆಸುತ್ತಿದ್ದರೆಂದು ಅವರ ಹೆಸರುಗಳು ಸಾರ್ಥವಾಗಿವೆ. ಇವರು ತುಂಬ ಕಟ್ಟಾಳುಗಳು. ಕಂನಾಡು ಪಡೆಯಲ್ಲಿ ಇವರಿಗೊಂದು ಮಹತ್ವದ ಸ್ಥಾನವಿದ್ದಿತು. ಕಂನಾಡ ರಾಜರಿಗೆ ಹಲವು ದಿಗ್ವಿಜಯಗಳಲ್ಲಿ ಗೆಲುವನ್ನು ತಂದುಕೊಟ್ಟ ಶ್ರೇಯಸ್ಸು ಇವರಿಗಿದೆ. ಬೇಡರು, ಬಿಲ್ಲರು, ಅಂಬಿಗರ ಹೆಸರುಗಳು ಶಾಸನಗಳಲ್ಲಿ ಬರುತ್ತವೆ ಎನ್ನುವುದು ಶಂಬಾ ನಿಲುವು."

ವಿವರಗಳಿಗೆ ನೋಡಿ: ಶಂಬಾ ಜೋಶಿ ೧೯೯೯ ಸಂಪುಟ. ೨ ಪುಟ. ೧೭೨
ಸಿ.ವೀರಣ್ಣ ೧೯೮೬ ಪ್ರಾಚೀನ ಸಾಹಿತ್ಯ: ರಾಜಸತ್ತೆಯ ವೈಭವದ ಕಾಲ ಪುಟ. ೨೩೦, ೨೯೪
ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೧೦-೮-೧೨
ಪಿ. ವಿ. ಕಾಣೆ ೨೦೦೩ ಧರ್ಮಶಾಸ್ತ್ರದ ಇತಿಹಾಸ

ಚಾಂದ್ರಮಾನ

ನಿಯಮನಿರ್ಬಂಧಕ್ಕೆ ಒಗ್ಗದ ನಾಗ: ಚಾಂದ್ರ ಸಂಪ್ರದಾಯದ ಜೀವನ ರೀತಿಗೆ, ಸವಿತೃವಿನ ಪ್ರಕಾಶ – ಎಂದರೆ ಕಾರ್ಯ–ಕಾರಣ ಸಂಬಂಧದ ಮೀಮಾಂಸೆಯಿಂದ ದೊರೆವ, ಜೀವನದ ಅರ್ಥದ ಮೂಲಕ ಲಭಿಸುವ ಬೆಳಕು ಹಿಡಿಸದು, ಮಾತ್ರವಲ್ಲ ಈ ಪ್ರಕಾಶವು ಅಸಹ್ಯವಾಗುತ್ತದೆ ಎಂದು ಶಂಬಾ ಹೇಳುತ್ತಾರೆ.

ಚಾಂದ್ರಮಾನ ಮತ್ತು ಸೌರಮಾನ ಭಾರತೀಯ ಸಂಸ್ಕೃತಿಯಲ್ಲಿ ಕಾಲಸೂಚಕಗಳಾಗಿವೆ. ಸೂರ್ಯನ ಚಲನೆಗೆ ಅನುಸಾರವಾಗಿ ಕಾಲ ನಿರ್ಧಾರ ಮಾಡುವುದು ಸೌರಮಾನ. ಚಂದ್ರನ ಚಲನೆಗೆ ಅನುಸಾರ ನಿರ್ಧಾರಮಾಡುವ ಕಾಲಮಾಪನ ಚಾಂದ್ರಮಾನ.

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 4 ಪುಟ. 249.

ಚಾತುರ್ದಂತ

ಚತುರಂಗವೆಂದರೆ ಕಾಲಾಳು, ಅಶ್ವಾರೋಹಿಗಳು, ರಥಾರೋಹಿಗಳು, ಗಜಾರೋಹಿಗಳು–ಇವು ಚತುರಂಗ ಸೇನೆಯ ನಾಲ್ಕು ಘಟಕಗಳು.

ಕಾಲ್ದಳದ ಕೆಲಸ – ಶಸ್ತ್ರಗಳನ್ನು ಹೊತ್ತಿರುವುದು. ಯುದ್ಧ ಮಾಡುವುದು. ಕೋಟೆ ಬಾಗಿಲುಗಳನ್ನು ಒಡೆಯುವುದು. ತನ್ನ ಸೈನಿಕರನ್ನು ಬಿಡಿಸುವುದು. ಖಜಾನೆ ವಾಹನಾದಿಗಳನ್ನು ಶತ್ರುಗಳ ಕೈಗೆ ಸಿಗದಂತೆ ಸಾಗಿಸುವುದು ಆನೆಯ ಕೆಲಸ. ತನ್ನ ಸೇನೆಯ ರಕ್ಷಣೆ. ಶತ್ರುವಿನ ಚತುರಂಗ ಸೇನೆಯನ್ನು ಒಡೆಯುವುದು. ಶತ್ರುವಿಗೆ ತ್ರಾಸವುಂಟು ಮಾಡುವುದು ರಥಿಕನ ಕೆಲಸ. ಕುದುರೆಯ ಕೆಲಸವೆಂದರೆ ಚದುರಿದ ಸೈನಿಕರನ್ನು ಒಂದುಗೂಡಿಸುವುದು. ಶತ್ರುಗಳಿಗೆ ಹಿಂದು ಮುಂದಿನಿಂದ ಆಘಾತ ಕೊಡುವುದು ಅಶ್ವದ ಕೆಲಸ.

ವಿವರಗಳಿಗೆ ನೋಡಿ: ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು 2010 ಕೌಟಲೀಯ ಅರ್ಥಶಾಸ್ತ್ರ ಪುಟ. 511.

ಚಾತುರ್ವರ್ಣ

ಚಾತುರ್ವರ್ಣವೆಂದರೆ ಬ್ರಾಹ್ಮಣ; ಕ್ಷತ್ರಿಯ; ವೈಶ್ಯ; ಶೂದ್ರ ವರ್ಣಗಳು. ವರ್ಣ ಪದ್ಧತಿಯಲ್ಲಿ ಕೇವಲ ನಾಲ್ಕು ವರ್ಣಗಳನ್ನು ಮಾತ್ರ ಹೇಳಲಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಆದರೆ ಈ ಚೌಕಟ್ಟಿನಲ್ಲಿ ಭಾರತೀಯ ಸಮಾಜವನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಚಾತುರ್ವರ್ಣಸಂಘದ ಪರಿಕಲ್ಪನೆಯು ಜೈನ ಧರ್ಮದಲ್ಲಿ ಭಿನ್ನ. ಚತುರ್ವಿಧ ವಿಭಾಗವು ಪಾರಸಿಗಳಲ್ಲಿ ಕಂಡು ಬರುತ್ತದೆ. ಈ ವರ್ಗಗಳಿಗೆ ಪಾರಸಿಗಳಲ್ಲಿ ಇವುಗಳಿಗೆ ಬೇರೆ ಬೇರೆ ಹೆಸರುಗಳಿವೆ. ಅಥರ್ವರು, ರಥೇಸ್ಥರು, ವಸ್ತ್ರಘುಷುಯನರು ಮತ್ತು ಹೊಯ್ತಿ, ಯಾವಾಗ ವರ್ಣದ ಪರಿಕಲ್ಪನೆಯು ಪ್ರಾರಂಭವಾಯಿತೋ ಆಗ ಜಾತಿಯಲ್ಲಿಯೂ ಶ್ರೇಣೀಕೃತ ವ್ಯವಸ್ಥೆಯು ಪ್ರಾರಂಭವಾಯಿತು. ಮಧ್ಯಕಾಲೀನ ಭಾರತೀಯ ಚರಿತ್ರೆಯಲ್ಲಿ ಈ ಪರಿಕಲ್ಪನೆಯು ಕಾಣಿಸಿಕೊಂಡಿತು. ಅನಂತರ ಕಾನೂನುಗಳು ಮದುವೆಯ ಪರಿಕಲ್ಪನೆಗಳು: ಕೌಟುಂಬಿಕ ಪದ್ಧತಿಗಳು ಕೂಡಾ ಪರಿವರ್ತನೆಗಳಿಗೆ ಗುರಿಯಾದವು. ಮೇಲಿನ ಜಾತಿಯವರು ಧರ್ಮಶಾಸ್ತ್ರಕ್ಕೆ ಅನುಸಾರವಾಗಿ ಬದುಕಲು ಪ್ರಾರಂಭಿಸಿದರು. ಧರ್ಮಶಾಸ್ತ್ರಗಳು ಕಾನೂನುಗಳಲ್ಲಿ ಒಂದು ರೀತಿಯಲ್ಲಿ ಏಕರೂಪತೆಯನ್ನು ತರಲು ಪ್ರಯತ್ನಿಸಿತು.

ಮಧ್ಯಕಾಲೀನ ಭಾರತೀಯ ಚರಿತ್ರೆಯಲ್ಲಿ ಕ್ಷತ್ರಿಯರು ಮತ್ತು ಖಾತ್ರಿ ಜನಾಂಗದವರು ಪ್ರಧಾನ ಪಾತ್ರವನ್ನು ಉತ್ತರ ಭಾರತದಲ್ಲಿ ಹೊಂದಿದ್ದರು ಎಂದು ಎಲ್ಲರಿಗೂ ಮದುವೆ ಆಗುವಾಗ ಮೊದಲಿನ ಮದುವೆಗೆ ತನ್ನ ಜಾತಿಯ ಹುಡುಗಿ ಆಗಬೇಕು. ಕಾಮಕ್ಕಾಗಿ ಮಾತ್ರ ಆಗುವ ಮದುವೆಗೆ ಜಾತಿನಿಯಮವಿಲ್ಲ ಎಂದು ಮನುವು ಹೇಳುತ್ತಾನೆ.

ವಜ್ರ ಸೂಚಿಯಲ್ಲಿ ಇದಕ್ಕಿಂತ ಭಿನ್ನ ಅಭಿಪ್ರಾಯವಿದೆ: ಚತುರ್ವರ್ಣಗಳ ಪಟ್ಟಿಯಲ್ಲಿ ಶೂದ್ರರ ಹೆಸರು ಕೊನೆಯಲ್ಲಿರುವುದರಿಂದ ಅವರು ಅತ್ಯಂತ ಕೆಳಗಿನವರು. ಆದ್ದರಿಂದ ಅವರು ಬ್ರಾಹ್ಮಣರ ಸೇವೆಯನ್ನು ಮಾಡಬೇಕು ಎಂಬ ಮನು ವಾದಕ್ಕೆ ಇದರಲ್ಲಿ ಉತ್ತರವಿದೆ. ಭಾಷೆಯಲ್ಲಿ ಪ್ರಯೋಗಿಸಲಾದ ಪದಗಳಲ್ಲಿ ವಾಕ್ಯದ ಕೊನೆಯಲ್ಲಿ ಬಂದ ಕಾರಣಕ್ಕಾಗಿಯೇ ಅವು ಕನಿಷ್ಠವಾಗುವುದಿಲ್ಲ ಸದ್ಗುಣಗಳ ಪಾಲನೆಯಿಂದ ಶೂದ್ರರು ಬ್ರಾಹ್ಮಣರಾಗುತ್ತಾರೆ. ಆದ್ದರಿಂದ ಹುಟ್ಟಿನಿಂದ ಬ್ರಾಹ್ಮಣತ್ವ ನಿರ್ಣಯವಾಗುವುದಿಲ್ಲ. ಒಳ್ಳೆಯ ನಡತೆ ಮತ್ತು ಪರಿಶುದ್ಧತೆಯನ್ನು ಯಾರು ಹೊಂದಿರುತ್ತಾರೊ ಅವನು ಬ್ರಾಹ್ಮಣ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರು ಕ್ರಮವಾಗಿ ಪುರುಷನ (ಬಹ್ಮನ) ಬಾಯಿ, ತೋಳು, ತೊಡೆಗಳು ಮತ್ತು ಪಾದಗಳಿಂದ ಹುಟ್ಟಿದವರು ಎಂಬ ಋಗ್ ವೇದದ ಪುರುಷಸೂಕ್ತದ ಮಂತ್ರ ಒಂದು ಪ್ರಕ್ಷಿಪ್ತ ಭಾಗ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಪ್ರಚಲಿತವಿರುವ ಈ ಹೇಳಿಕೆಯನ್ನು ಚರ್ಚಿಸುವಲ್ಲಿ ಅಶ್ವಘೋಷನು ಅತ್ಯಂತ ತರ್ಕಬದ್ಧವಾಗಿ ತನ್ನ ವಾದವನ್ನು ಮಂಡಿಸುತ್ತಾನೆ. ಅವನು ಇರುವುದು ಒಂದೇ ವರ್ಣ, ಮಾನವನನ್ನು ನಾಲ್ಕು ವರ್ಣಗಳಲ್ಲಿ ವಿಭಾಗಿಸುವುದು ಸರಿಯಲ್ಲ (ತಸ್ಮಾದನೀಯತಮ್ ಬ್ರಾಹ್ಮಣ್ಯಂ) ಎಂದು ಮುಂದಿನಂತೆ ತನ್ನ ವಾದವನ್ನು ಮಂಡಿಸುತ್ತಾನೆ: 1.ಮೀನುಗಾರರ, ಮಡಿವಾಳರ ಹಾಗೂ ಚಾಂಡಾಲರ ಕುಟುಂಬಗಳಲ್ಲೂ ಬ್ರಾಹ್ಮಣ ಮತ್ತು ಇತರ ವರ್ಣಗಳವರು ಇರುತ್ತಾರೆ. 2.ಒಬ್ಬನೇ ತಂದೆಯಿಂದ ಹುಟ್ಟಿದ ಮಕ್ಕಳು ಹೇಗೆ ಭಿನ್ನವರ್ಣಗಳಿಗೆ ಸೇರಿದವರಾಗುವುದಿಲ್ಲವೋ ಹಾಗೆ ಒಬ್ಬನೇ ತಂದೆಯಾದ ಪುರುಷನಿಂದ ಉಗಮವಾದುದರಿಂದ ಬ್ರಾಹ್ಮಣರು ಮತ್ತು ಇತರ ವರ್ಣಗಳು ಭಿನ್ನವರ್ಣದವರಾಗುವುದಿಲ್ಲ. 3.ಬ್ರಾಹ್ಮಣರ ಮತ್ತು ಇತರ ವರ್ಣಗಳವರ ಪಾದ, ಭಗ, ಲಿಂಗ, ಬಣ್ಣ, ಆಕಾರ, ಮಲ, ಮೂತ್ರ, ಗಂಧ ಮತ್ತು ಧ್ವನಿಗಳಲ್ಲಿ ಭಿನ್ನ ಜಾತಿಯ ಪ್ರಾಣಿಗಳಲ್ಲಿ (ಉದಾ: ಹಸು ಮತ್ತು ಕುದುರೆ.) ತೋರುವಂತಹ ಯಾವ ವ್ಯತ್ಯಾಸಗಳೂ ಕಂಡುಬರುವುದಿಲ್ಲ. 4.ಅವರಲ್ಲಿ ಭಿನ್ನ ಜಾತಿಯ ವೃಕ್ಷಗಳ – ಉದಾ : ಮಾವಿನ ಮರ ಮತ್ತು ಬೇವಿನ ಮರ– ಅಂಗ ಪ್ರತ್ಯಂಗಗಳಾದ ಎಲೆ, ಹೂವು, ಹಣ್ಣು ಬೀಜ, ರಸ ಮತ್ತು ಗಂಧಗಳಲ್ಲಿ ಕಂಡು ಬರುವಂತಹ ಯಾವ

ವ್ಯತ್ಯಾಸಗಳೂ ಇಲ್ಲ. 5.ಮಾನವರೆಲ್ಲರ ಸುಖ, ದುಃಖ, ಜೀವನಾವಧಿ, ಬುದ್ಧಿಮತ್ತೆ, ರೀತಿ, ನೀತಿ, ಹುಟ್ಟು, ಸಾವು, ಭಯ, ಮೈಥುನ ಹಾಗೂ ಔಷಧೋಪಚಾರಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ. ವರ್ಣ ವ್ಯವಸ್ಥೆಯ ವಿರುದ್ಧ ಗಮನಾರ್ಹವಾದ ಒಂದು ಆಕ್ರೋಶ ಮೊಟ್ಟಮೊದಲಿಗೆ ವ್ಯಕ್ತವಾಗುವುದು 'ಕಾಠಕ ಸಂಹಿತೆ'ಯಲ್ಲಿ ಹುಟ್ಟಿನಿಂದ ಬ್ರಾಹ್ಮಣ ಶ್ರೇಷ್ಠ ಎಂದೇಕೆ ಪರಿಗಣಿಸಬೇಕು ಮತ್ತು ಬ್ರಾಹ್ಮಣನನ್ನು ಅವನ ತಂದೆಯ ಹಾಗೂ ತಂದೆಯ ತಂದೆಯ ಹೆಸರನ್ನು ಹೇಳಲು ಏಕೆ ಕೇಳಬೇಕು ಎಂದು ಅದರಲ್ಲಿ ಪ್ರಶ್ನಿಸಲಾಗಿದೆ. ಪ್ರಾರಂಭದ ಬೌದ್ಧ ಸಾಹಿತ್ಯದಲ್ಲೂ ಈ ವ್ಯವಸ್ಥೆಯು ಬೇರು ಬಿಟ್ಟಿರುವುದನ್ನು ನಾವು ಕಾಣುತ್ತೇವೆ. ಬೌದ್ಧರಾಮಗಳಲ್ಲಿ ವರ್ಣವ್ಯವಸ್ಥೆಯು ಇರಲಿಲ್ಲವಾದರೂ ಜನಸಾಮಾನ್ಯರಲ್ಲಿ ಆ ವಿಭಜನೆ ಇತ್ತು. ಬುದ್ಧನು ಆ ವ್ಯವಸ್ಥೆಯನ್ನು ಸಮಗ್ರವಾಗಿ ಪ್ರತಿಭಟಿಸಲಿಲ್ಲ. ಕೆಲವು ಸಾರಿ ಆ ವ್ಯವಸ್ಥೆಯ ಒಳಗೇ ತಾನು ಕಾರ್ಯನಿಷ್ಠನಾದ. ಅವನು ಕೆಲವು ಸಾರಿ ಆ ವ್ಯವಸ್ಥೆಯ ಒಳಗೇ ತಾನು ಕಾರ್ಯನಿಷ್ಠನಾದ. ಅವನು ಕೆಲವು ಸಾರಿ ಕ್ಷತ್ರಿಯರು ಬ್ರಾಹ್ಮಣರಿಗಿಂತ ಶ್ರೇಷ್ಠರು ಎಂದು ಸಾರಿದ (ಮಧ್ಯಮ ನಿಕಾಯ 11.128). ಅವನು ಬ್ರಾಹ್ಮಣರಿಗಿಂತ ಕ್ಷತ್ರಿಯರು ಶ್ರೇಷ್ಠರೆಂದು ವಾದಿಸಿದ (ದೀಘು ನಿಕಾಯ I 97–99). "ಯುಧಿಷ್ಠಿರನೆ ಆಲಿಸು, ಪ್ರಾಚೀನ ಕಾಲದಲ್ಲಿ ಜಗತ್ತಿನಲ್ಲೆಲ್ಲಾ ಒಂದೇ ವರ್ಣವಿತ್ತು. ಚಾತುರ್ವರ್ಣ್ಯ ವ್ಯವಸ್ಥೆಯು ವ್ಯಕ್ತಿಯ ಕರ್ಮ ಎಂದರೆ ವೃತ್ತಿಯ ಆಧಾರದ ಮೇಲೆ ನಿಶ್ಚಿತವಾಯಿತು.(41) (ವಜ್ರಸೂಚಿ)

ಎಲ್ಲ ಮಾನವರು ಸಮಾನ. ಅವರು ಮಾತೃಗರ್ಭದಿಂದ ಉಗಮವಾದವರು. ಎಲ್ಲ ವರ್ಣೀಯರು ಮಲ ಮೂತ್ರಗಳನ್ನು ಒಂದೇ ರೀತಿಯಲ್ಲಿ ವಿಸರ್ಜಿಸುತ್ತಾರೆ. ಅವರಿಗೆ ಒಂದೇ ರೀತಿಯ ಇಂದ್ರಿಯಗಳಿದ್ದು ಅವು ಒಂದೇ ರೀತಿಯ ವಸ್ತುಗಳಿಗಾಗಿ ಹಂಬಲಿಸುತ್ತವೆ. ಆದ್ದರಿಂದ "ಸದಾಚಾರ ಹಾಗೂ ಸದ್ಗುಣಗಳಿಂದ ಮಾನವನು ದ್ವಿಜನಾಗುತ್ತಾನೆ".(42)

ಯಾವನೇ ಒಬ್ಬ ಆರಂಭದಲ್ಲಿ ಶೂದ್ರನಾಗಿದ್ದರೂ ಶೀಲ ಸಂಪನ್ನನಾಗಿ ಸದಾಚಾರಶೀಲನಾಗಿ ಮುನ್ನಡೆದರೆ ಅವನಿಗೆ ಬ್ರಾಹ್ಮಣತ್ವ ಪ್ರಾಪ್ತವಾಗುತ್ತದೆ. ಮತ್ತು ಯಾವನೇ ಒಬ್ಬ ಆರಂಭದಲ್ಲಿ ಬ್ರಾಹ್ಮಣನಾಗಿದ್ದರೂ ಸದಾಚಾರ ಮತ್ತು ಸದ್ಗುಣ ವಿಹೀನನಾದರೆ ಅವನು ಶೂದ್ರನಿಗಿಂತಲೂ ಕೆಳಗಿನವನಾಗಿ ನಿಕೃಷ್ಟನಾಗುತ್ತಾನೆ. (43)

ವಿವರಗಳಿಗೆ ನೋಡಿ: ಬಿ. ವಿ. ವೀರಭದ್ರಪ್ಪ 2007 ಅಶ್ವಘೋಷನ ವಜ್ರಸೂಚಿ ಪುಟ. 6, 17, 19, 20, 8, 22

ಸಿ.ವೀರಣ್ಣ 1986 ಪ್ರಾಚೀನ ಸಾಹಿತ್ಯ: ರಾಜಸತ್ತೆಯ ವೈಭವದ ಕಾಲ ಪುಟ.93, 130, 295, 340, 384

Romila Thapar 1975 The Past and Prejudice P. 37-39

ಚಕ್ರಕೋಡಿ ಈಶ್ವರ ಶಾಸ್ತ್ರಿ 1967 ಮನುಸ್ಮೃತಿ 3–12
ಯುಗಯಾತ್ರೀ ಭಾರತೀಯ ಸಂಸ್ಕೃತಿ 1971 ಸಂಪುಟ. 2
ಪುಟ. 238

ಚಾಪ

ಅಳತೆಯ ಒಂದು ಪ್ರಮಾಣ, ಸಾಮಾನ್ಯವಾಗಿ ನಾಲ್ಕು ಮೊಳಕ್ಕೆ ಚಾಪವೆಂದೂ ಕರೆಯುತ್ತಾರೆ. ಬಿಲ್ಲು ಎಂದರೆ ಮೇಲೆ ನಾಲ್ಕು ಮೊಳ ಭೂಮಿಯ ಪರಿಕಲ್ಪನೆಯಾಗಿದೆ. ಇದು ಪಂಪನ ಕಾಲದಲ್ಲಿ ಜಾರಿಯಲ್ಲಿ ಇದ್ದಿರಬೇಕು. ಬ್ರಿಟೀಶರು ಬಂದ ಮೇಲೆ ಭೂಮಿಯನ್ನು ಅಳೆಯುವ ಕ್ರಮವು ಬೇರೆಯಾದವು.

ವಿವರಗಳಿಗೆ ನೋಡಿ: John Grimes 1996 A concise Dict. of Indian Philosophy

ಚಿತಾನಳ

ಚಿತಾನಳವೆಂದರೆ ಚಿತೆಗೆ ಇಟ್ಟ ಬೆಂಕಿ.

ಚಿತ್ರಪಟ

ಚಿತ್ರಕಥೆ ಪಟವೆಂಬುದು ಒಂದು ಮನೋರಂಜನೆಯ ಕಲೆ. ಚಿತ್ರಕಥೆಗಳ ಪಟದ ಕಥನವನ್ನು ನಿರೂಪಿಸುವುದು ಇದರಲ್ಲಿ ಒಂದು ಕ್ರಮವಾಗಿದೆ. ಒಂದು ಚಿತ್ರವನ್ನು ತೋರಿಸಿ ಅದರ ಮೂಲಕ ಕಥೆ ವಿವರಿಸಿ. ಅನಂತರ ಅದರ ಮುಂದುವರಿದ ಭಾಗವನ್ನು ವಿವರಿಸಲಾಗುತ್ತದೆ. ಕಥಾ ನಿರೂಪಣೆಯ ವಿಶಿಷ್ಟ ಶೈಲಿಗಳಲ್ಲಿ ಇದೂ ಒಂದು. ಇದರಲ್ಲಿ ಚಿತ್ರವೂ ಇರುತ್ತದೆ. ಕಥೆಯೂ ಇರುತ್ತದೆ. ಇದರ ಸಮೀಪದಲ್ಲಿಯೇ ಇರುವ ಮತ್ತೊಂದು ಕಲಾಪ್ರಕಾರ ಗೊಂಬೆಯಾಟ.

ಚೌಕಿ

ಇದು ಯಕ್ಷಗಾನದಲ್ಲಿ ಮೇಕಪ್ ರೂಮ್. ಸಂಸ್ಕೃತದಲ್ಲಿ ಇದನ್ನು ನೇಪಥ್ಯವೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಹನ್ನೆರಡು ಅಡಿ ಉದ್ದ, ಹತ್ತಡಿ ಅಗಲವಿರುತ್ತದೆ. ಈಗ ಪೋಲೀಸ್ ಚೌಕಿಯೆಂಬ ಪ್ರಯೋಗವೂ ಇದೆ. ಚೌಕದ ರೀತಿಯಲ್ಲಿ ಇರುವುದು ಚೌಕಿಯಾಗಿದೆ. ಯಕ್ಷಗಾನದಲ್ಲಿ ಚೌಕಿಯನ್ನು ಸುತ್ತ ಬಟ್ಟೆಯಿಂದ ಮುಚ್ಚಿರುತ್ತಾರೆ. ಇದು ಚರ ರೂಪಿಯಾದುದು. ಹಿಂದೆ ಚೌಕಿಯನ್ನು ಮಡಲಿನಿಂದ ಮುಚ್ಚುತ್ತಿದ್ದರು ಎಂದು ಹೇಳುತ್ತಾರೆ. ಯಕ್ಷಗಾನದಲ್ಲಿ ಚೌಕಿಯನ್ನು ನಿರ್ಮಾಣ ಮಾಡುವುದು ವೇಷಗಾರಿಕೆಯನ್ನು ಮಾಡಲು.

ಚೌಡೇಶ್ವರಿ

"ಮೈಸೂರು ಸಾಲೆಂಗಳ ಕಡೆಗೆ ಅಲ್ಲಿಯ ದೇವಾಂಗರು ಚೌಡೇಶ್ವರಿ (ಚಾಮುಂಡಿ?) ಎಂಬ ಹೆಸರಿನಿಂದ ಭಜಿಸುವ ದೇವಿಯ ಮಹಾಪೂಜೆಯ ಕಾಲಕ್ಕೆ

ಒಂದು ಬನವನ್ನು (Grove) ರಚಿಸಿ ಅದರಲ್ಲಿ ದೇವಿಯನ್ನು ಸ್ಥಾಪಿಸುವರು! ಬನಶಂಕರಿಯೆಂಬುದು ಮೊದಲಿನ ಅವತಾರ, ಚೌಡೇಶ್ವರಿಯು ಅದರ ಮುಂದಿನದಾಗಿರಬೇಕು. ಚಾಮುಂಡಿಯೆಂಬುದು ಚೌಡೇಶ್ವರಿಯ ಸಂಸ್ಕೃತರೂಪ. 'ಚಾಮುಂಡಿ' ಎಂಬುದಕ್ಕೆ ಹೇಳುವ ಅರ್ಥಕ್ಕಿಂತಲೂ ಚೌಡೇಶ್ವರಿ ಎಂಬ ಶಬ್ದಕ್ಕೆ ಆಗುವ ಅರ್ಥವು ಬಹಳ ಮಹತ್ವದ ಐತಿಹ್ಯವನ್ನು ಬೆಳಕಿಗೆ ತರುತ್ತದೆ. ಚೂಡಾ=ಕೂದಲು; (ಇದರೊಡನೆ ಕನ್ನಡದ ಸೂಡು, ತಮಿಳಿನ ಚೂಟ್ಟು, ಮತ್ತು ಕನ್ನಡದ ಜುಟ್ಟುಗಳನ್ನು ತೂಗಿ ನೋಡಿ). ಬನದ ಶಂಕರಿ ಅವಳು; ಚೂಡದ ಈಶ್ವರಿ ಇವಳು. ಇಬ್ಬರೂ ನೇಯ್ಕಾರರಿಗೆ ಜೀವನಾಧಾರವನ್ನೀವ ಮಹಾದೇವಿಯರೇ. ಚೂಡಾ ಎಂದರೆ ಕಂಕಣ (ಬಳಿ); ಕಾಜಿನ ಕಂಕಣಗಳು ಗೊತ್ತಾಗುವ ಮೊದಲು ಕೂದಲಿನ (ಚೂಡಾ). ಕಂಕಣವಿರಬೇಕೆಂದು ಊಹಿಸಬಹುದಾಗಿದೆ. ಮೊಟ್ಟಮೊದಲಿಗೆ ಉಣ್ಣಿಕಂಕಣವೇ ಎಲ್ಲರಲ್ಲಿ ಇದ್ದಿತೆಂದು ವ್ಯಕ್ತವಾಗಿದೆ. ಚೌಡೇಶ್ವರಿಯು ಕೂದಲು, ಕಂಕಣಗಳ ಅಧಿದೇವತೆ; ಆದುದರಿಂದಲೇ, ಭಾಗ್ಯದೇವತೆ; ಸೌಭಾಗ್ಯದಾಯಕ ಪರಮೇಶ್ವರಿ" ಎಂದು ಶಂಬಾರವರ ಅಭಿಪ್ರಾಯ. ಚೌಡೇಶ್ವರಿ; ಚೌಡಮ್ಮ; ಮುಂತಾದ ಹೆಸರುಗಳಿಗೂ – ಮಾತೃದೇವತೆಯರಿಗೆ ಇರುವ ಹೆಸರುಗಳಿಗೂ ಸಂಬಂಧವಿರುವುದು ಗಮನಾರ್ಹ.ಈಗಲೂ ಮೈಸೂರಿನ ಪ್ರಾಂತದಲ್ಲಿ ಮೈಮೇಲೆ ಚೌಡಿ ಬಂತು ಎಂದು ಹೇಳುತ್ತಾರೆ.ಚೌಡಿಯನ್ನು ಕ್ಷುದ್ರ ದೇವತೆಯೆಂದು ಕರೆಯುತ್ತಾರೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 1 ಪುಟ. 277.

ಚೌಪಳಿಗೆ

ಚಂದ್ರಕಾವಿ; ಧಮ್ಮಸ್ಸು ಮತ್ತು ಅಪರಂಜಿಯಿಂದ ಮಾಡಿದ ಮನೆಗಳ ತೊಟ್ಟಿಗಳು ಇಲ್ಲಿ ಗಮನಾರ್ಹವಾಗಿದೆ. ಇದು ಆ ಕಾಲದ ಮನೆಗಳ ಚಿತ್ರಣವನ್ನು ನೀಡುತ್ತವೆ. ಚಂದ್ರಕಾವಿ (ಬಣ್ಣ) ಧಮ್ಮಸ್ಸು ಸಲಕರಣೆ. ಅಪರಂಜಿಯಿಂದ ಮಾಡಿದ ಮನೆಯ ತೊಟ್ಟಿಗಳು ಈ ದೃಷ್ಟಿಯಿಂದ ಸಾಮಾಜಿಕ ಮಹತ್ವವನ್ನು ಪಡೆದಿದೆ. ಚೌಪಳಿಗೆ ಹಜಾರ, ಮಂಟಪವೆಂಬ ಅರ್ಥವಿದೆ. ಕಟ್ಟಡ ನಿರ್ಮಾಣದ ಒಂದು ಮಾದರಿಯು ಈ ಮೂಲಕ ವ್ಯಕ್ತವಾಗಿದೆ.

ಛಾಯಾಲಕ್ಷ್ಯ

ಪ್ರತಿಬಿಂಬದ ಗುರಿಗೆ ಛಾಯಾ ಲಕ್ಷ್ಯವೆಂದು ಕರೆಯುತ್ತಾರೆ. ಅರ್ಜುನನ ಗುರಿಸಾಧನೆಯನ್ನು ಪರೀಕ್ಷಿಸಲು ಪ್ರತಿಬಿಂಬ ಗುರಿಯನ್ನು ದ್ರೋಣಾಚಾರ್ಯರು ಒಡ್ಡುತ್ತಾರೆ. ಅಂದರೆ ಪ್ರತಿಬಿಂಬವನ್ನು ನೋಡಿಕೊಂಡು ಬಾಣ ಪ್ರಯೋಗ ಮಾಡಬೇಕು. ಇದು ಬಿಲ್ವಿದ್ಯೆಯ ಸಾಧನೆಯಲ್ಲಿ ಒಂದು ಕ್ರಮ. ಮತ್ಸ್ಯಭೇದನೆಯಲ್ಲಿಯೂ ಅರ್ಜುನನ ಗುರಿ ಸಾಫಲ್ಯ ಪಡೆದುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಜಟ್ಟಿಗೆ

'ಬೆನ್ನನಟ್ಟಿ ನಟ್ಟ ಜಟ್ಟಿಗೆಯಿಂ ಮಿಟ್ಟೆಗೊಂ(ಡಜಿ)ಟ್ಟಿಯಂತೆಯುಂ ಬಡಿಗೊಂಡ ಮೊಲದಂತೆಯುಂ ತಲೆ ಕೆಳಗಾಗಿ ಬಿಳ್ದರ್'(4–30 ವ). ಚಳ್ಳಕೆರೆ 8–4, ಕಾಲ 810 ರ ಒಂದು ಶಾಸನ(ಎಪಿಗ್ರಾಫಿಯಾ ಕರ್ನಾಟಕದ X1 ಸಂಪುಟದ) ಪ್ರಯೋಗ ಬಿಟ್ಟರೆ ಪೊನ್ನನ ಪ್ರಯೋಗವೊಂದೇ ಸಿಗುವುದು. ಇವೆರಡೂ ಪ್ರಯೋಗಗಳನ್ನು ಉದಾಹರಿಸಿ 'ಕ.ಸಾ.ಪ.ಕ.ನಿ.'ನಲ್ಲಿ 'ಒಂದು ಬಗೆಯ ಬಾಣ' ಎಂಬ ಸ್ಥೂಲ ಅರ್ಥ ಕೊಟ್ಟು ನಿಷ್ಪತ್ತಿ ಭಾಗದಲ್ಲಿ ಏನೂ ತಿಳಿಯದೆಂದು ಪ್ರಶ್ನೆ ಹಾಕಿದ್ದಾರೆ. ವಾಸ್ತವವಾಗಿ ಇದು ಸಂಸ್ಕೃತ ಭಾಷೆಯ ಯಷ್ಟಿಕಾ ಎಂಬ ಶಬ್ದದ ತದ್ಭವ ರೂಪ. ಎತ್ತುಂಗೋಲ್(10–164 ವ) ಶಬ್ದ ಮತ್ತು ಅರ್ಥ ಇಲ್ಲಿಗೆ ಪ್ರಸ್ತುತವಾಗುತ್ತದೆ; ಅದೂ ಕೂಡ ಕೋಲಿನಿಂದ ಮಾಡಿದ ಕೂರಂಬು. ಜಟ್ಟಿಗೆಯೂ ಕೂಡ ಕೋಲಿನಿಂದ ಮಾಡಿದ ಹರಿತವಾದ ಬಾಣ. ನಿಘಂಟಿನ ಮರುಮುದ್ರಣ ಕಾಲದಲ್ಲಿ ನಿಷ್ಪತ್ತಿ ಭಾಗದಲ್ಲಿ ಇದನ್ನು ಸೇರಿಸಿಕೊಳ್ಳಬೇಕು. ಸಂಸ್ಕೃತದ ಯಷ್ಟಿ ಎಂಬುದು ಪ್ರಾಕೃತದಲ್ಲಿ ಜಟ್ಟಿ ಎಂದಾಗುತ್ತದೆಯೆಂಬುದನ್ನೂ ಗಮನಿಸಬೇಕು. ಪ್ರಶ್ನಾರ್ಥಕ ಚಿಹ್ನೆಯನ್ನು ತೆಗೆದು ಸಂಸ್ಕೃತ ಪ್ರಾಕೃತ ಮೂಲರೂಪಗಳನ್ನು ತಿಳಿಸಬೇಕು.

ಜತುಗೃಹ

ಅರಗಿನ ಮೊದಲಾದ ತುಪ್ಪ, ಸಜ್ಜರಸ, ಸಣಂಬಿನ ರಸ, ಬೆಲ್ಲ ಇವುಗಳಿಂದ ನಿರ್ಮಿಸಿದ ದೇವೇಂದ್ರನರಮನೆ ಭೂಮಿಗಿಳಿದು ಬಂದಿದೆಯೋ ಎನಿಸಿದ್ದ ಅರಗಿನ ಮನೆಯನ್ನು ಕಟ್ಟಿದ ವಿವರವಿದೆ. ಅರಗು; ತುಪ್ಪ;ಬೆಲ್ಲ ಇವು ಬಿಸಿಗೆ ಕರಗುತ್ತವೆ. ಅರಗನ್ನು ಈಗಲೂ ಬಳಸುತ್ತಾರೆ. ಅದಕ್ಕೆ ಅಂಟುವ ಗುಣವಿದೆ. ಹಾಗೆಯೇ ಬೆಂಕಿಗೆ ಜ್ವಾಲೆಯೆಬ್ಬಿಸುವ ಗುಣವಿದೆ. ಬೆಲ್ಲ; ಸುಣ್ಣದ ಮಿಶ್ರಣವನ್ನು ಹಿಂದೆ ಗಾರೆಗೆ ಬಳಸುತ್ತಿದ್ದರು.ಮಹಾಭಾರತದಲ್ಲಿ ಪುರೋಚನನು ನಿರ್ಮಿಸಿದ ಈ ಅರಗಿನ ಅರಮನೆಗೆ ಜತುಗೃಹವೆಂದು ಕರೆಯುತ್ತಿದ್ದರು. ಗಮನಿಸಬೇಕಾದ ಅಂಶವೆಂದರೆ ತಂತ್ರಜ್ಞಾನದ ಬಳಕೆ.

ಜನಪದ

'ಜನ' ಎಂದರೆ Race; ಈ ಅರ್ಥದಿಂದ ಮಾನವ ಕುಟುಂಬದಲ್ಲಿಯ ಒಂದು 'ಜನ' (ಕುಲ) ಎಂಬುದು ಉಳಿದಿಲ್ಲ. ತಂಡು–ದಂಡುಗಳ ಬಾಳುವೆಯ ಘಟ್ಟದಲ್ಲಿಯೆ ವಂಶಮಿಶ್ರಣಕ್ಕೆ ಪ್ರಾರಂಭವಾಗಿದೆ. ಒಂದು ತಂಡದವರು ಇನ್ನೊಂದು ತಂಡದವರ ಹೆಣ್ಣು ಎತ್ತಿಕೊಂಡೊಯ್ಯುವುದು ಆ ಕಾಲದ ವಾಡಿಕೆಯೆ ಆಗಿತ್ತು. ದಂಡಿನ ಜನದಲ್ಲಿ, ತಂಡಗಳ ಮನೋವೃತ್ತಿಯ ಬಾಳವೆಯಲ್ಲಿ ಕನ್ಯಾಪಹರಣವು ಒಂದು ಬಗೆಯ ಪೌರುಷ ಎಂದು ಬಗೆಯಲಾಗುತ್ತದೆ, ಇಂದಿಗೂ! ಎಂದು ಶಂಬಾರವರ ಅಭಿಪ್ರಾಯ.

ಬುದ್ಧನ ಕಾಲದಲ್ಲಿ ಮಹಾಜನಪದಗಳು ಎಂದು ಕರೆಯಲಾಗುತ್ತಿದ್ದ ವಿಶಾಲ ರಾಜ್ಯಗಳನ್ನು ನಾವು ಕಾಣುತ್ತೇವೆ. ಅವು ವಿಂಧ್ಯದಿಂದ ಉತ್ತರದಲ್ಲಿ ವಾಯವ್ಯದ ಗಡಿಯಿಂದ ಬಿಹಾರದವರೆಗೆ ಹರಡಿದ್ದುವು. ಅವುಗಳಲ್ಲಿ ಮಗಧ, ಕೋಸಲ, ವತ್ಸ ಮತ್ತು ಅವಂತಿ ಈ ನಾಲ್ಕು ಸಾಕಷ್ಟು ಬಲಿಷ್ಠವಾಗಿದ್ದುವು. ಈಗಿನ ಮಾಂಘಿರ್ ಹಾಗೂ ಭಾಗಲಪುರ ಜಿಲ್ಲೆಗಳಲ್ಲಿ ವ್ಯಾಪಿಸಿದ್ದ ಅಂಗ ರಾಜ್ಯಕ್ಕೆ ಚಂಜಪ ರಾಜಧಾನಿಯಾಗಿತ್ತು. ಅಲ್ಲಿ ಕಿ. ಪೂ. ಆರನೆಯ ಶತಮಾನದಿಂದ ಜನ ನೆಲೆಗೊಂಡಿದ್ದ ಸೂಚನೆಗಳಿವೆ. ಕೊನೆಗೆ ನೆರೆಯ ಬಲಿಷ್ಠವಾದ ಮಗಧವು ಅಂಗ ರಾಜ್ಯವನ್ನು ನುಂಗಿತು. ಎಂದು ಆರ್. ಎಸ್. ಶರ್ಮ ಹೇಳುತ್ತಾರೆ.

ಜನಪದವೆಂದರೆ ಜನರ ಗುಂಪು. ಬುದ್ಧನ ಕಾಲದಲ್ಲಿ ಮಹಾಜನಪದಗಳು ರಾಜಕೀಯ ವ್ಯವಸ್ಥೆಯ ಒಂದು ಭಾಗವಾಗಿತ್ತು. ಮಹಾಜನಪದ ಮಹಾನ್ ರಾಜ್ಯಕ್ಕೆ ಪರ್ಯಾಯಗಳಾಗಿವೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 3 ಪುಟ. 79
ಆರ್. ಎಸ್. ಶರ್ಮ 2007 ಪ್ರಾಚೀನ ಭಾರತ ಪುಟ. 105

ಜನಿವಾರ

ನೀಲಮಾಣಿಕ್ಯಗಳನ್ನು ಕೂಡಿಸಿರುವ ಮನೋಹರವಾದ ವರ್ಣಸರವನ್ನು ಮಾಡಬೇಕಾಗುತ್ತದೆ. ಸರಗಳಿಂದ ಕೂಡಿರದೆ ಅದು ಮೃಣಾಲಗಳಿಂದ ಸರಿಯಾಗಿ ಹೆಣೆದರೆ ಅದು ಬ್ರಹ್ಮ ಸೂತ್ರವಾಗುತ್ತದೆ. (ಮಾನಸೋಲ್ಲಾದ–3–1072)

ಬ್ರಹ್ಮಸೂತ್ರ ; ಯಜ್ಞೋಪವೀತ ; ಜನಿವಾರ ಮೂರೂ ಪದಗಳು ಪರ್ಯಾಯ ಪದಗಳು. ಜನಿವಾರಕ್ಕೆ ಹಾಕುವ ಗಂಟಿನ ಹೆಸರು ಬ್ರಹ್ಮಗಂಟು, ಪಠಿಸುವ ಮಂತ್ರ ಬ್ರಹ್ಮ ಮಂತ್ರ;

ಯಜ್ಞದ ಎದುರಿನಲ್ಲಿ ಧರಿಸುವ ದಾರಕ್ಕೆ ಯಜ್ಞೋಪವೀತ ಎಂದು ಕರೆಯುತ್ತಾರೆ.

ದ್ವಿಜನಾದವನ ಜೀವನ ಸದಾಕಾಲವೂ ಸಾಮಾಜಿಕ ಮತ್ತು ಧಾರ್ಮಿಕ ಹೊಣೆಗಾರಿಕೆಯನ್ನು ನಿರ್ವಹಿಸಲು ಮುಡಿಪಿಟ್ಟದೆಂದು ಅವನು ಧರಿಸುವ ಯಜ್ಞೋಪವೀತವು ಸೂಚಿಸುತ್ತದೆ. ಅವನಿಗೆ ನಿಯಮಬದ್ಧ ಜೀವನ ನಡೆಸಲು ಅನುವಾಗುವಂತೆ ಜಿಂಕೆಯ ಚರ್ಮ (ಅಜಿನ ಮತ್ತು ಯೋಗ ದಂಡವನ್ನು ಕೊಡಲಾಗುತ್ತದೆ.)

ವೈಶ್ವದೇವ ಹೋಮ–ಬಲಿಕರ್ಮ–ನಿತ್ಯಶ್ರಾದ್ಧ–ಅತಿಥಿಭೋಜನ ರೂಪವಾದ ನಾಲ್ಕು ಪಾಕಯಜ್ಞಗಳು, ದಶಪೂರ್ಣ ಮಾಸಾದಿಗಳು ಇವೆಲ್ಲ ಜಪಯಜ್ಞವಾದ ಬ್ರಹ್ಮಯಜ್ಞದ ಹದಿನಾರನೇ ಒಂದು ಭಾಗದ ಮೂಲ್ಯ ಉಳ್ಳವುಗಳೂ ಅಲ್ಲ. ವೇದಶಾಸ್ತ್ರಾಧ್ಯಯನ ತದರ್ಥ ವಿಚಾರಗಳು ಬಹು ಫಲಗಳು ಎಂದು ಮನು

ಹಾಳುತ್ತಾನೆ.ಬ್ರಹ್ಮದ ಉಪದೇಶವಾಗುವುದರಿಂದ ಬ್ರಹ್ಮೋಪದೇಶವೆಂದು .ಜನಿವಾರಕ್ಕೆ ಹಾಕುವ ಗಂಟನ್ನು ಬ್ರಹ್ಮಗಂಟು ಎಂದು ಕರೆಯುತ್ತಾರೆ.

ವಿವರಗಳಿಗೆ ನೋಡಿ: ಯುಗಂಯಾತ್ರೀ ಭಾರತೀಯ ಸಂಸ್ಕೃತಿ ೧೯೭೧ ಸಂಪುಟ. ೨ ಪುಟ. ೨೯
ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೨-೮೬.

ಜನ್ಮಭೂಮಿ

'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂಬ ಸಂಸ್ಕೃತ ಉಕ್ತಿಯಿದೆ. ಇದರ ಪ್ರಕಾರ ಜನನಿಗೂ, ಜನ್ಮಭೂಮಿಗೂ ಸಂಬಂಧ ಕಲ್ಪಿಸಲಾಗಿದೆ. ಜನನಿ ಮತ್ತು ಜನ್ಮಭೂಮಿಯ ಋಣವನ್ನು ತೀರಿಸಲಾಗುವುದಿಲ್ಲ. ಇದರ ಅರ್ಥ ಈ ಎರಡು ಅಂಶಗಳಿಗೆ ಗೌರವವನ್ನು ಸೂಚಿಸಬೇಕು. ಎರಡನೆಯದಾಗಿ ಜನ್ಮಭೂಮಿಯೇ ಸ್ವರ್ಗಕ್ಕೆ ಸಮಾನವಾದುದು. ಜನ್ಮಭೂಮಿಯ ಶ್ರೇಷ್ಠತೆಯನ್ನು ಇದು ಕೊಂಡಾಡುತ್ತದೆ.

ಜಪಮಾಲೆ

ಜಪಮಾಲೆಯ ಬಳಕೆಯು ಅನೇಕ ಪುರಾಣಗಳಲ್ಲಿ ಕಾಣಿಸಿಕೊಂಡಿವೆ. ಜಪಮಾಲೆಯನ್ನು ರುದ್ರಾಕ್ಷಿ,ತುಳಸಿ, ಮಣಿಗಳಿಂದ ಮಾಡುವ ಕ್ರಮವಿದೆ. ಇದು ಜಪಮಾಡುವಾಗ ಬಳಕೆಯಾಗುತ್ತದೆ. ಜಪವನ್ನು ಮಾಡುವಾಗ ಅದರ ಸಂಖ್ಯೆಯನ್ನು ಎಣಿಸಲು ಅನುಕೂಲವಾಗುತ್ತದೆ.ಜಪವನ್ನು ಮಾಡುವಾಗ ಸಂಖ್ಯೆಯು ಪ್ರಧಾನವಾಗಿದೆ.ಸಮ ಸಂಖ್ಯೆ, ಬೆಸ ಸಂಖ್ಯೆ, ಇತ್ಯಾದಿಗಳಿಗೆ ಜಪದಲ್ಲಿ ತುಂಬಾ ಮಹತ್ವವಿದೆ. ಉದಾ:108, ಇತ್ಯಾದಿ. ಇದು ಕೂಡಾ ಜಪಕ್ಕೆ ಅನ್ವಯವಾಗುತ್ತದೆ. ಮಾಲಾ ಅಂದರೆ ಹಾರ; ಪಂಕ್ತಿ; ಸಾಲು; ಶ್ರೇಣಿ; ಜಪಸರ ಅಕ್ಷಮಾಲೆಯೆಂದರ್ಥ.

ವಿವರಗಳಿಗೆ ನೋಡಿ: ಅಕ್ಷಸೂತ್ರ

ಜಲದಾನ ಕ್ರಿಯೆ

ಅನ್ನ, ಎಳ್ಳು, ಭತ್ತ, ಯವ, ನೀರುಗಳಿಂದ ಪಿತೃ ಪ್ರೀತಿಗಾಗಿ ಪ್ರತಿ ದಿನ ಶ್ರಾದ್ಧ ಮಾಡಬೇಕು ಎಂದು ಮನು ಹೇಳುತ್ತಾನೆ. ಜಲದಾನ ಕ್ರಿಯೆಯೆಂದರೆ ಸತ್ತವರಿಗೆ ಬಿಡುವ ತರ್ಪಣ. ಅದು ಸದ್ಗತಿಗಾಗಿ ಅವಶ್ಯವಾಗಿದೆ. ಹೆಣವನ್ನು ಸುಡುವುದು ದಹನ ಕ್ರಿಯೆಯಾಗಿದೆ. ತರ್ಪಣ 1. ತೃಪ್ತಿ 2. ಸಂತೋಷಪಡಿಸುವುದು 3, ಪಿತೃಯಜ್ಞ 4, ದೇವಯಜ್ಞ 5, ಋಷಿಯಜ್ಞ (ದೇವರಿಗೆ ಋಷಿಗಳಿಗೆ ತರ್ಪಣ ನೀಡುವುದು ಪ್ರತಿದಿನದ ಕರ್ತವ್ಯ 6, ಪರ್ವಕಾಲದಲ್ಲಿ ಪಿತೃಗಳ ಪ್ರೀತ್ಯರ್ಥ ಮಾಡುವ ಜಲತರ್ಪಣ. ಇಲ್ಲಿಯ ಜಲದಾನ ಕ್ರಿಯೆಯು ಜಲತರ್ಪಣವನ್ನು ಸೂಚಿಸುತ್ತದೆ.

ಯಜುರ್ವೇದದಲ್ಲಿ ಈ ಕುರಿತ ವಿವರ ದೊರೆಯುತ್ತದೆ. ವೈದಿಕ ಜನಾಂಗವು ಸ್ಥೂಲದೇಹದ ವ್ಯಾಪಾರಗಳಿಗೆ ಆಶ್ರಯ ಸ್ಥಾನವಾದ ಅಧಿಷ್ಠಾನವೊಂದಿದೆ ಎಂದು

ನಂಬುತ್ತದೆ. ಅದೇ ಪಿತೃಲೋಕ ಶತಪಥ ಬ್ರಾಹ್ಮಣದಲ್ಲಿಯೆ 'ದೇವಲೋಕ' 'ಪಿತೃಲೋಕ' ಬ್ರಹ್ಮಲೋಕಗಳ, ಮನುಷ್ಯಲೋಕಗಳ ಕುರಿತು ಬರುತ್ತದೆ. 'ದೈವೀ ಸೃಷ್ಟಿಯ ಈ ಪಂಚದಿಶೆಗಳು ಪಂಚಲೋಕಗಳು ಬ್ರಹ್ಮ ದೇವ, ಗಂಧರ್ವ, ಪಿತೃ ಹಾಗೂ ಮಾನವಲೋಕಗಳು (ಯಜ್ಞವತ ಆವೆಂತು) ಯಜ್ಞೋಕ್ತ ತೇಜಸ್ಸಿನಿಂದ ಆವರಿಸಲ್ಪಡಲಿ' ಎಂದು ಯಜುರ್ವೇದದಲ್ಲಿ ಬರುತ್ತದೆ.

ವಿವರಗಳಿಗೆ ನೋಡಿ: ೧. ಶವ ಸಂಸ್ಕಾರ ೨. ದಾಹೋತ್ತರ
ವೇದವ್ರತ ವೈಶಂಪಾಯನ ೧೯೮೮ ಯಜುರ್ವೇದ ಒಂದು ಅಧ್ಯಯನ ಪುಟ. ೯೧
ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೩-೮೨

ಜವನಿಕೆ

ಜವನಿಕೆಗೆ ತೆರೆ ಎಂಬ ಅರ್ಥವೂ ಇದೆ. ನಾಟ್ಯಶಾಸ್ತ್ರದಲ್ಲಿ ಈ ಶಬ್ದಗಳಲ್ಲಿ ಹೇಳಲಾಗಿದೆ. ಅಂತರ್ಯವನಿಕಾಗತೈಃ। ಪ್ರಯೋಕ್ತೃಭಿಃ ಪ್ರಯೋಜ್ಯಾನಿ....॥

ಇಲ್ಲಿ 'ತೆರೆ ಇಲ್ಲವೆ ಪರದೆ' ಎಂಬುದಕ್ಕೆ 'ಯ(ಜ)ವನಿಕಾ' ಎಂಬ ಶಬ್ದವನ್ನು ಬಳಸಲಾಗಿದೆ 'ಯವನಿಕಾ' ಎಂಬ ಶಬ್ದದ ಮೂಲ ಗ್ರೀಕ್ 'Lonian' (ಒಂದು ಪ್ರದೇಶದ ನಿವಾಸಿಗಳಾದ ಗ್ರೀಕ್ ಜನತೆ) ಎಂಬ ಶಬ್ದ. ಗ್ರೀಕ್‌ರಿಂದ ನಮ್ಮವರು ಈ ಶಬ್ದವನ್ನು ಯಾವ ಕಾಲದಲ್ಲಿ ತೆಗೆದುಕೊಂಡರೆಂಬುದರ ದೃಷ್ಟಿಯಿಂದ ನೋಡಿದರೆ ಮೂಲ ಭರತನ ನಾಟ್ಯಶಾಸ್ತ್ರದಲ್ಲಿ 'ಜವನಿಕಾ' ಶಬ್ದ ಇರುವುದು ಅಸಂಭವನೀಯ. ಕಾಳಿದಾಸನ ನಾಟಕಗಳಲ್ಲಿ ಕೂಡ 'ತೆರೆ' ಎಂಬುದಕ್ಕೆ 'ತಿರಸ್ಕರಣೀ' (ಮರೆಮಾಡುವಂತಹದು) ಎಂಬ ಶಬ್ದವನ್ನು ಕಾಣುತ್ತೇವೆ.

ವಿವರಗಳಿಗೆ ನೋಡಿ: ಆಮೂರ ಜಿ. ಎಸ್. ೨೦೦೬ ಶ್ರೀರಂಗ ಸಾರಸ್ವತ (ಸಂಪುಟ. ೮) ಪುಟ. ೫೬೨-೬೩

ಜಾತಕರ್ಮ

ಮಗು ಹುಟ್ಟಿದ ಸಂದರ್ಭದಲ್ಲಿ ಕೆಲವು ಆಚರಣೆಗಳು ನಡೆಯುತ್ತವೆ. ಹತ್ತನೆಯ ದಿನವೇ ಮಗುವಿಗೆ ಹೆಸರಿಡುವ ಆಚರಣೆಯು ಜರುಗುತ್ತದೆ (ಅದೇ). ಗೃಹ್ಯಸೂತ್ರಗಳ ಪ್ರಕಾರ, ತಾಯಿ-ಮಗುವಿನ ಹೊಕ್ಕುಳ ಬಳ್ಳಿಯನ್ನು ಕಡಿದ ಗಳಿಗೆಯಿಂದ ಹತ್ತು ದಿನಗಳಲ್ಲಿ ಮಗುವಿಗೆ ಹೆಸರಿಡಬೇಕು. ನಾಭಿನಾಳವನ್ನು ತೆಗೆಯುವ ಮುನ್ನ ಜಾತಕರ್ಮ ನಡೆಸಲಾಗುತ್ತದೆ. ಇದು ಮೊದಲನೆಯ ವಿಧಿ. ಎರಡನೆಯ ವಿಧಿ ಆಯುಷ್ಯ, ದೀರ್ಘಾಯುಗಳಾದ ಋಷಿಗಳು, ಪಿತೃಗಳು, ಅಗ್ನಿ, ಸೋಮ ಮುಂತಾದವರ ನಿದರ್ಶನ ಮಂತ್ರ ಹೇಳಲಾಗುತ್ತದೆ. ಬಲವರ್ಧನ ಮೂರನೆಯ ವಿಧಿ. ಇದನ್ನು ಆಚರಿಸುವಾಗ, ನೀನು ಕಲ್ಲಿನಂತೆ, ಕಬ್ಬಿಣದಂತೆ ಗಡುಸಾಗು, ದೇವತೆಗಳಂತೆ ಅಮರನಾಗು, ಮಗುವಿನ ರೂಪದಲ್ಲಿ ಜನಿಸಿರುವ ಆತ್ಮನು ಶತಾಯುವಾಗು ಎಂದು

ಹಾರೈಸುತ್ತಾರೆ. ಅನಂತರ ನಾಭಿಯ ನಾಳವನ್ನು ಕತ್ತರಿಸಿ, ಮಗುವಿನ ಮೈತೊಳೆದು, ತಾಯಿಯಿಂದ ಸ್ತನ್ಯಪಾನ ಮಾಡಿಸುತ್ತಾರೆ.

ವಿವರಗಳಿಗೆ ನೋಡಿ: ಯುಗಯಾತ್ರೀ ಭಾರತೀಯ ಸಂಸ್ಕೃತಿ 1971 ಸಂಪುಟ. 2 ಪುಟ. 295

Apte V.M. 1954 Religious life in the Griha Sutras P. 68

Social and religious life in the grihya sutras

ಜಾತಿ

ಮಧ್ಯಕಾಲೀನ ಭಾರತದಲ್ಲಿ ಅಯಸ್ಕಾರ (ಕಬ್ಬಿಣ ಕೆಲಸಗಾರ) ಕುಂಬಾರ(ಮಡಕೆ ಮಾಡುವವನು) ತಂತುವಾಯ(ನೇಯ್ಗೆ ಕೆಲಸದವನು) ತೈಲಿಕ(ಎಣ್ಣೆ ತೆಗೆಯುವವನು) ಎಂಬ ಜಾತಿಗಳ ಉದಯವಾಯಿತು.

ಏಳನೆಯ ಶತಮಾನದ ನಂತರ ಹಲವಾರು ಜಾತಿಗಳು ಹುಟ್ಟಿಕೊಳ್ಳತೊಡಗಿದುವು. ಎಂಟನೆಯ ಶತಮಾನದ ಒಂದು ಪುರಾಣವು ವೈಶ್ಯ ಸ್ತ್ರೀಯರು ಮತ್ತು ಕೆಳಜಾತಿಗಳ ಗಂಡಸರ ಸಂಬಂಧಗಳಿಂದಾಗಿ ಸಾವಿರಾರು ಮಿಶ್ರಜಾತಿಗಳು ಹುಟ್ಟಿದವು ಎಂದು ತಿಳಿಸಿದೆ. ಶೂದ್ರರು ಮತ್ತು ಅಸ್ಪೃಶ್ಯರು ಅಸಂಖ್ಯಾತ ಜಾತಿ, ಉಪಜಾತಿಗಳಾಗಿ ವಿಂಗಡಗೊಂಡಿದ್ದರು ಎಂಬುದು ಇದರ ಇಂಗಿತ. ಬ್ರಾಹ್ಮಣರೂ ಹೀಗೆಯೇ ವಿಂಗಡಗೊಂಡಿದ್ದರು. ಏಳನೆಯ ಶತಮಾನದ ನಂತರ ಭಾರತದ ರಾಜ್ಯವ್ಯವಸ್ಥೆ ಹಾಗೂ ಸಮಾಜಗಳಲ್ಲಿ ಮಹತ್ವದ ಸ್ಥಾನವೊಂದನ್ನು ಪಡೆದ ರಜಪೂತರೂ ಇದೇ ರೀತಿ ವಿಂಗಡಗೊಂಡರು. ಆಗಿನ ಅರ್ಥ ವ್ಯವಸ್ಥೆಯಿಂದಾಗಿ ಜನರು ಸ್ಥಳದಿಂದ ಸ್ಥಳಕ್ಕೆ ಚಲಿಸುವುದು ಅಸಾಧ್ಯವಾಗಿದ್ದುದರಿಂದಲೂ ಜಾತಿಗಳ ಸಂಖ್ಯೆ ಹೆಚ್ಚಿತು. ಬೇರೆ ಬೇರೆ ಪ್ರದೇಶಗಳಲ್ಲಿ ಒಂದೇ ವೃತ್ತಿಯನ್ನು ಅನುಸರಿಸಿ ಜೀವಿಸುತ್ತಿದ್ದ ಜನರು ಸಹ ಪ್ರಾದೇಶಿಕವಾದ ಉಪಜಾತಿಗಳಾಗಿ ರೂಪುಗೊಂಡರು. ಇವುಗಳ ಜೊತೆಗೆ ಆದಿವಾಸಿ ಪ್ರದೇಶಗಳಲ್ಲಿ ಬ್ರಾಹ್ಮಣರಿಗೆ ಭೂಮಾನ್ಯಗಳು ದೊರೆದುದರಿಂದಾಗಿ ಆ ಆದಿವಾಸಿ ಜನಗಳೂ ಹಿಂದೂ ಸಮಾಜದೊಳಕ್ಕೆ ಬಂದರು. ಅವರಲ್ಲಿ ಬಹಳಷ್ಟು ಪಾಲು ಶೂದ್ರ ಮತ್ತು ಮಿಶ್ರ ಜಾತಿಗಳಾಗಿ ಒಳ ಸೇರಿದರು. ಪ್ರತಿಯೊಂದು ಆದಿವಾಸಿ ಬಣವೂ ಹಿಂದು ಸಮಾಜದ ಒಂದು ಪ್ರತ್ಯೇಕ ಜಾತಿಯಾಯಿತು.

ಜಾತಿಯನ್ನು ಆಧುನಿಕ ಯುಗದ ಚಿಂತಕರು ಒಂದು ದೊಡ್ಡ ಸಮಸ್ಯೆಯೆಂಬಂತೆ ಪರಿಗಣಿಸಿದ್ದಾರೆ. ಭಾರತದಲ್ಲಿ ಮನುಷ್ಯ ಜಾತಿಯನ್ನು ಮೀರಿದಾಗ ಮಾತ್ರ ಪ್ರಗತಿಪರನಾಗಲು ಸಾಧ್ಯವೆಂದು ಪದೇ ಪದೇ ಹೇಳಲಾಗುತ್ತಿದೆ. ಜಾತ್ಯತೀತರಾಗುವುದು ರಾಜ್ಯಾಂಗ ವ್ಯವಸ್ಥೆಯಲ್ಲಿ ಅನಿವಾರ್ಯವೆಂದು ಪ್ರತಿಪಾದಿಸಲಾಗುತ್ತದೆ.

ಜಾತ್ಯತೀತರಾಗುವುದೆಂದರೆ ಅದು ಸಾಂವಿಧಾನಿಕ ಅಗತ್ಯವೆಂದು ಪ್ರತಿಪಾದಿಸಿರುವ ಹಾಗೆಯೇ ಆಧುನಿಕ ಯುಗದ ಚಿಂತನೆಯು 'ಜಾತಿವಾದ' ಮತ್ತು 'ಜಾತ್ಯತೀತವಾದ'ವನ್ನು ಎರಡು ಸರಳದ್ವಂದ್ವವೆಂಬತೆ ನಿರೂಪಿಸಿದೆ. ವಸಾಹತ್ತೋತ್ತರ ಸಂದರ್ಭದಲ್ಲಿ 'ಜಾತಿ'ಯೆನ್ನುವುದು 'ಅಧಿಕಾರ' ಕೇಂದ್ರದ ಜೊತೆಗೆ ಸಮೀಕರಣಗೊಂಡಿರುವುದು ಕೂಡಾ ಅಷ್ಟೇ ಸತ್ಯ. ಅದೇ ಮಾದರಿಯಲ್ಲಿ 'ಜಾತಿ'ಯೆನ್ನುವುದು ಭಾರತದ ಅಭಿವೃದ್ಧಿಗೆ ಮಾರಕವೆಂಬಂತೆ ವಾದವನ್ನು ಹೂಡಿದ್ದಾರೆ. ಯಾಕೆ ಈ ಮಾತನ್ನು ಹೇಳಬೇಕಾಯಿತೆಂದರೆ ಜಾತಿಗೆ ಮತ್ತು ಅಭಿವೃದ್ಧಿಗೆ ನಿಜವಾದ ಸಂಬಂಧವಿದೆಯೇ ಎಂಬುದನ್ನು ತುಂಬಾ ಗಂಭೀರವಾಗಿ ಯೋಚಿಸಬೇಕಾಗಿದೆ. ಎರಡನೆಯದಾಗಿ 'ಜಾತಿ'ಯನ್ನು ನಾವು ಹೇಗೆ ನೋಡುತ್ತೇವೆ ಎಂಬುದು ಕೂಡಾ ಅಷ್ಟೇ ಮುಖ್ಯ. ಅಂದರೆ; ಜಾತಿಗೆ ಮತ್ತು ಹಿಡುವಳಿಗೆ; ಜಾತಿಗೆ ಮತ್ತು ಬ್ರಿಟೀಷ್ ಮಾದರಿಯ ಉತ್ಪಾದನೆಯ ಕ್ರಮಕ್ಕೆ; ಜಾತಿಗೆ ಮತ್ತು 'ವರ್ಣ'ದ ಕಲ್ಪನೆಗೆ ಇರುವ ಸಂಬಂಧ; ಹಾಗೂ ಜಾತಿಗೆ ಮತ್ತು ಅಸ್ಪೃಶ್ಯತೆಗೆ ಇರುವ ಸಂಬಂಧಗಳ ಕುರಿತು ಚಿಂತಿಸಬೇಕಾದ ಅಗತ್ಯವಿದೆ. 'ಜಾತಿ'ಯ ಬಗೆಗಿನ ನಮ್ಮ ಅನೇಕ ತಿಳುವಳಿಕೆಗಳು ಮುಗ್ಧವಾದ, ಯುರೋಪುಕೇಂದ್ರಿತ ಚಿಂತನೆಯ ಕ್ರಮದಿಂದ ರೂಪುಗೊಂಡಿರುವುದರಿಂದ ತುಂಬಾ ಬೀಸುನೋಟದ ಹೇಳಿಕೆಗಳು ಲಭ್ಯವಾಗಿವೆ. 'ಜಾತಿ'ಯೆನ್ನುವುದು 'ಜನ್ಯ'ವೆಂಬುದನ್ನು ಸೂಚಿಸುತ್ತದೆ. ಇಂಗ್ಲಿಷಿನಲ್ಲಿ 'ಜಾತಿ' ಎನ್ನುವುದಕ್ಕೆ "Caste" ಎಂದು ಗುರುತಿಸುವುದು ಸರಿಯಷ್ಟೇ?. ಭಾರತದಲ್ಲಿರುವ 'ಜಾತಿ' ಪದ್ಧತಿಯನ್ನು "Caste" ಎಂದು ಗುರುತಿಸುವ ಮೂಲಕ ಅದಕ್ಕೆ ಬೇರೊಂದು ವ್ಯಾಖ್ಯೆಯನ್ನು ಮಂಡಿಸಿರುವವರು ಪೋರ್ಚುಗೀಸರು. ಮೂಲತಃ ಇದು ಸ್ಪಾನಿಷ್ ಪದ. ಸ್ಪಾನಿಷ್‌ಗೆ ಬಂದಿರುವುದು ಲ್ಯಾಟಿನ್‌ನಿಂದ. ಲ್ಯಾಟಿನಿನಲ್ಲಿ 'Castus' "Chaste' ಎನ್ನುವುದನ್ನು ಸೂಚಿಸುತ್ತದೆ. ಹದಿನೈದನೆಯ ಶತಮಾನದಲ್ಲಿ ಪೋರ್ಚುಗೀಸರು ಇದನ್ನು ಭಾರತಕ್ಕೆ ಅನ್ವಯಿಸಿದರು. ಫ್ರೆಂಚ್‌ನಿಂದ ಬಂದ "Caste" ಎಂಬುದು ಇಂಗ್ಲಿಷಿನಲ್ಲಿಯೂ ಅದೇ ರೀತಿಯಲ್ಲಿ ಚಾಲ್ತಿಗೆ ಬಂತು. ಇದನ್ನು ವ್ಯಾಖ್ಯಾನಿಸುವಾಗ ಮೂರು ಪ್ರಮುಖ ಗುಣಲಕ್ಷಣಗಳನ್ನು ಹೇಳಲಾಯಿತು:

೧. ಪ್ರತ್ಯೇಕತೆ : ಮದುವೆ ಸಂಬಂಧಗಳಲ್ಲಿ ಹಾಗೂ ಊಟೋಪಚಾರಗಳಲ್ಲಿ ನೇರವಾಗಿಯೋ; ಅಪ್ರತ್ಯಕ್ಷವಾಗಿಯೋ ಪ್ರತ್ಯೇಕತೆಯುನ್ನು ಕಾಪಾಡುವುದು.

೨. ಕೆಲಸದ ವರ್ಗೀಕರಣ (Division of Labour): ಉದ್ಯೋಗದ ದೃಷ್ಟಿಯಿಂದ ಪ್ರತಿಯೊಂದು ಗುಂಪಿನ ಜನರೂ ಬೇರೆ ಬೇರೆ ಕೆಲಸಗಳನ್ನು ಮಾಡುವುದು ಮತ್ತು ಕೆಲಸ ಕಾರ್ಯಗಳಿಗೆ ಮಿತಿಯಿರುವುದು.

೬. ಶ್ರೇಣೀಕರಣ (Hierarchy): ಜನರಲ್ಲಿ ಕೆಲವರನ್ನು ಶ್ರೇಷ್ಠವೆಂದೂ ಮತ್ತೆ ಕೆಲವರನ್ನು ಕನಿಷ್ಠರೆಂದು ತಿಳಿಯುವ ಕ್ರಮಗಳು.

ಜಾತಿಯ ಕುರಿತು ಚರ್ಚಿಸಲು ಹೊರಡುವ ಬಹುತೇಕ ವಿದ್ವಾಂಸರು ಈ ದಾರಿಯಲ್ಲಿಯೇ ಸಾಗಿದ್ದಾರೆ. ಇದೇ ಮಾದರಿಯಿಂದ ಹೊರಟರೆ ನಮಗೆ ಜಾತಿಯ ಕುರಿತು ಚರ್ಚಿಸಲು ಸಿಗುವ ಮೂಲ ವೈಚಾರಿಕ ಆಕೃತಿಗಳು ಇವು ಮಾತ್ರ. ಮಾರ್ಕ್ಸ್‌ವೆಬರ್ ಜಾತಿಯನ್ನು ಒಂದು ನಿರ್ದಿಷ್ಟವಾದ : ಸ್ಥಾನಮಾನವನ್ನು ಸೂಚಿಸುವ ಗುಂಪು ಎಂದು ಕರೆಯುತ್ತಾನೆ. ಜಾತಿಯನ್ನು ಈ ತರಹ ಒಂದೇ ವೈಚಾರಿಕ ನೆಲೆಯಿಂದ ಚರ್ಚಿಸಿದಾಗ 'ಜಾತಿ' ಯು ಇಡಿಯ ಭಾರತದ ಮಟ್ಟಕ್ಕೆ ಒಂದು ತಿಳುವಳಿಕೆಯನ್ನು ಮಾತ್ರ ಹೇಳುತ್ತದೆ. ಆದರೆ ಇಡಿಯ ಭಾರತಕ್ಕೆ ಒಂದೇ ರೀತಿಯಲ್ಲಿ ಜಾತಿಯ ಶ್ರೇಣೀಕರಣವನ್ನು ಅನ್ವಯಿಸುವುದು ಕಷ್ಟ.

ಜಾತಿಗೆ ಮತ್ತು ಕುಟುಂಬದ ಸ್ವರೂಪಕ್ಕೆ ಹಾಗೂ ಜಾತಿಗೆ ಮತ್ತು ಉದ್ಯೋಗಕ್ಕೆ ಚಾರಿತ್ರಿಕವಾಗಿ ಸಂಬಂಧವನ್ನು ಕಲ್ಪಿಸಲಾಗಿದೆ. ಆದರೆ ಭಾರತದ ಗ್ರಾಮಸಮಾಜದಲ್ಲಿರುವ ಜಾತಿಗಳು: ಅವರ ಕಸುಬು ಮತ್ತು ಗ್ರಾಮೀಣ ಉತ್ಪಾದನೆಯ ಕ್ರಮಗಳಿಗೆ ಒಂದು ನಿಕಟ ಸಂಬಂಧವಿರುತ್ತದೆ. ಅಂದರೆ ಪ್ರತಿಯೊಂದು ಜಾತಿಯು ಕೂಡಾ ತನ್ನ ಅಗತ್ಯಕ್ಕೆ ತಕ್ಕಂತೆ; ಜೀವನೋಪಾಯಕ್ಕಾಗಿ ಉದ್ಯೋಗ ಮಾಡುತ್ತದೆ. ಜಾತಿ ಮತ್ತು ಕಸುಬಿನ ನಡುವಣ ಸಂಬಂಧ – ನಾವೀಗ ಹೇಳುವ ರೀತಿಯಲ್ಲಿ ಒಂದೇ ಅಲ್ಲ. ಅದು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆಯಾಗುತ್ತದೆ. ಇದರ ಪರಿಣಾಮವಾಗಿ ಆಳುವ ಮತ್ತು ಆಳಿಸಿಕೊಳ್ಳುವ ವರ್ಗಗಳೂ ಬೇರೆ ಬೇರೆ ರೀತಿಯ ಸಂವಾದವನ್ನು ಹೊಂದಿರುತ್ತವೆ. ಹಾಗೂ ಜಾತಿಗೆ ಒಂದು ಗುಣವೆನ್ನುವುದು ಇಲ್ಲ. ಪ್ರತಿಯೊಂದು ಜಾತಿಗೂ ಒಂದು ಗುಣವಿದೆಯೆಂದು ಕರೆಯುವುದು – ಆಧುನಿಕ ರಾಜಕಾರಣ ಪ್ರೇರಿತ ಪ್ರಯತ್ನ ಮಾತ್ರ.

ಪ್ರತಿಯೊಂದು ಗ್ರಾಮಸಮಾಜವೂ ಈ ಕಾರಣಗಳಿಂದ ಸ್ವಯಂತಂತ್ರ ಗಣರಾಜ್ಯದಂತೆ ಕೆಲಸ ಮಾಡುತ್ತಿತ್ತು. ಇದಕ್ಕೆ ತಕ್ಕಂತೆ ನಿಯಾಮಾವಳಿಗಳು ರೂಪುಗೊಂಡಿದ್ದವು. ಹಾಗೂ ನಿಯಾಮಾವಳಿಗಳೆಂದು ಯಾವುದನ್ನು ಗುರುತಿಸುತ್ತೇವೋ ಅವು ಅನೇಕ ಸಂದರ್ಭಗಳಲ್ಲಿ 'ಸಂವಾದಿ' ಯಾಗಿದ್ದವೇ ಹೊರತು ಅವಕ್ಕೆ ನಿರ್ದಿಷ್ಟ ಚಹರೆಯೆನ್ನುವುದು ಇರಲಿಲ್ಲ. ಗ್ರಾಮೀಣ ಜ್ಞಾನಪರಂಪರೆಯಾಗಲೀ ಅದಕ್ಕೆ ಸಂಬಂಧಿಸಿದಂತೆ ರೂಪುಗೊಂಡ ನಿಯಾಮಾವಳಿಗಳಾಗಲೀ ಒಂದು ಗ್ರಾಮಕ್ಕೆ; ಅದರ ಕೃಷಿ ಮೂಲವಾದ ಚಟುವಟಿಕೆಯಲ್ಲಿ ಅಗತ್ಯವಿಲ್ಲದ ಉದ್ಯೋಗಗಳು ಸೃಷ್ಟಿಯಾಗುವುದು ಸಾಧ್ಯವಿಲ್ಲ. ಪ್ರಾದೇಶಿಕವಾಗಿಯೂ ಒಂದೊಂದು ಜಾತಿಯ ಯಜಮಾನಿಕೆ; ಆಯಾ ಜಾತಿಗಳ ಸ್ಥಾನ–ಮಾನ; ಜಾತಿಗಳ ಮನೋಸ್ಥೈರ್ಯ ಇತ್ಯಾದಿಗಳು ಪ್ರಾದೇಶಿಕವಾಗಿ ಭಿನ್ನವಾಗುತ್ತಾ ಹೋಗುತ್ತವೆ.

'ಜಾತಿ'ಯೆನ್ನುವುದಕ್ಕೆ ಕಿಟ್ಟೆಲ್ ನಿಘಂಟುವಿನಲ್ಲಿ ಹೀಗೆ ಹೇಳಲಾಗಿದೆ: ಜಾತ=ಹುಟ್ಟು ಜಾತಿ=ಹುಟ್ಟು; ಕುಟುಂಬ; ಜನಾಂಗ; ಸ್ಥಾನ-ಮಾನ; ಬುಡಕಟ್ಟು; ಕುಲ ಮುಂತಾದ ಅರ್ಥಗಳಿವೆ. ಆ=ಹುಟ್ಟು. ಸಂಸ್ಕೃತದ ಪ್ರಕಾರ - 'ಜಾತಿ'ಯು 'ಜನ್'/ಜ ಧಾತುವಿನಿಂದ ಹುಟ್ಟಿದೆ. ಹುಟ್ಟು ಎನ್ನುವುದು ಇದರ ತಾತ್ಪರ್ಯ. (ನೋಡಿ : ಕಿಟ್ಟೆಲ್ ನಿಘಂಟು)

ಜಾತಿಗಳಲ್ಲೆಲ್ಲ ಬ್ರಾಹಣ ಶ್ರೇಷ್ಠ ಎಂಬುದು ಸಾರ್ವತ್ರಿಕವಾಗಿ ಒಪ್ಪಿತವಾಗಿದ್ದಿತು. ಅಂದಿನ ಸಾಹಿತ್ಯ ಕೃತಿಗಳು ಮತ್ತು ಶಾಸನಗಳು ಈ ಕುರಿತು ಹೇರಳವಾದ ಮಾಹಿತಿಗಳನ್ನು ನೀಡುತ್ತವೆ. ಅವುಗಳಲ್ಲಿ ಹದಿನೆಂಟು ಜಾತಿಗಳ ಉಲ್ಲೇಖಗಳಿದ್ದು, ಮೊದಲನೆಯದು ಬ್ರಾಹ್ಮಣ, ಕೊನೆಯದು ಅಂತ್ಯಜ ಅಥವಾ ಹೊಲೆಯ ಎನ್ನುವ ವಿವರಗಳಿವೆ. ಇದು ಅಂದಿನ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಯಥಾವತ್ತಾದ ಚಿತ್ರಣವಾಗಿ ಕಂಡುಬರುತ್ತದೆ. ಜಾತಿಗಳೂ ಹದಿನೆಂಟು ಎಂಬುದು ಒಂದು ಅಂಗೀಕೃತವಾದ ಮಾತಾಗಿದ್ದಿರಬಹುದೆಂದು ತೋರುತ್ತದೆ. ಏಕೆಂದರೆ ಜಾತಿಗಳು ಹದಿನೆಂಟಕ್ಕಿಂತ ಎಷ್ಟೋ ಹೆಚ್ಚಾಗಿದ್ದವು ಎಂಬುದು ಶಾಸನಗಳಿಂದ ಮತ್ತು ಸಾಹಿತ್ಯ ಕೃತಿಗಳಿಂದ ಗೊತ್ತಾಗುತ್ತದೆ. ವಚನಕಾರರು ಹದಿನೆಂಟು ಜಾತಿಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಸೊಡ್ಡಳ ಬಾಚರಸ ಎನ್ನುವವನು ಮನುಷ್ಯನ ದೇಹದ ಪ್ರತಿಯೊಂದು ಅಂಗಕ್ಕೂ ಒಂದೊಂದು ಜಾತಿಯನ್ನು ಸಮೀಕರಿಸಿ, ಹದಿನೆಂಟು ಜಾತಿಗಳ ಪಟ್ಟಿಯನ್ನು ಕೊಟ್ಟಿದ್ದಾನೆ. ಅವುಗಳೆಂದರೆ; ಬ್ರಾಹ್ಮಣ (ಶಿಖಿ), ಕ್ಷತ್ರಿಯ (ನಯನ), ಬಣಜಿಗ (ನಾಸಿಕ), ಒಕ್ಕಲಿಗ (ತುಟಿ), ಗೊಲ್ಲ (ಕರ್ಣ), ಕುಂಬಾರ (ಕೊರಳು), ಪಂಚಾಳ (ಬಾಹು), ಉಪ್ಪಾರ (ಅಂಗೈ), ನಾಯಿಂದ (ಉಗುರು), ಡೊಂಬ (ಒಡಲು), ಅಗಸ (ಬೆನ್ನು), ಜೇಡ (ಚರ್ಮ), ಕಬ್ಬಿಲ (ಪೃಷ್ಠ), ಹೊಲೆಯ (ಒಳದೊಡೆ), ಈಳಿಗ (ಮಣಿಕಾಲು), ಸಮಗಾರ (ಕಣಗಾಲು), ಮಚ್ಚಿಗ (ಮೇಗಾಲು), ಮತ್ತು ಶುದ್ಧ ಮಾದಿಗ (ಅಂಗಾಲು). ಅಂಬಿಗರ ಚೌಡಯ್ಯನು ಇದೇ ರೀತಿ ಮನುಷ್ಯನ ದೇಹದ ಪ್ರತಿಯೊಂದು ಅಂಗಕ್ಕೂ ಒಂದೊಂದು ಜಾತಿಯನ್ನು ಸಮೀಕರಿಸಿ ಹದಿನೆಂಟು ಜಾತಿಗಳ ಉಲ್ಲೇಖ ಮಾಡಿದ್ದಾನೆ. ಮೇಲಿನ ಉಲ್ಲೇಖಗಳು ಮನುಷ್ಯನ ದೇಹವನ್ನು ಆಧಾರವನ್ನಾಗಿಟ್ಟುಕೊಂಡು ಸಮಾಜದ ವಿಭಿನ್ನ ಸ್ತರಗಳನ್ನು ವಿವರಿಸುವ ಪ್ರಯತ್ನವಾಗಿ ಕಂಡುಬರುತ್ತವೆ. ಮನುಷ್ಯನ ದೇಹದ ಅಂಗಗಳು ಇಲ್ಲಿ ಸಾಂಕೇತಿಕವಾಗಿ ಕಂಡುಬರುತ್ತವಷ್ಟೆ. ಸಮಾಜವನ್ನು ಒಬ್ಬ ವ್ಯಕ್ತಿಯಲ್ಲಿ ಕಾಣುವ ವಚನಕಾರರ ದೃಷ್ಟಿ ಮತ್ತು ಆಶಯಗಳು ಏನೇ ಇದ್ದರೂ, ಅದು ಅಂದಿನ ಜಾತಿ ವ್ಯವಸ್ಥೆಯ ಹಾಗೂ ಸಮಾಜದ ರಚನೆಯ ಸ್ವರೂಪವನ್ನು ತಿಳಿಯಲು ಸಹಾಕಾರಿಯಾಗುತ್ತದೆ ಎಂದು ಮೋಹನಕೃಷ್ಣ ರೈ ಹೇಳುತ್ತಾರೆ.

ಜಾತಿ ಮತ್ತು ಬುಡಕಟ್ಟುಗಳ ಬಗ್ಗೆ ಹೇಗಳ ಅಪಕಲ್ಪನೆಗಳಿವೆ. ಜಾತಿ ಮತ್ತು ಬುಡಕಟ್ಟುಗಳನ್ನು ನೋಡುವ ವಿಧಾನಗಳಲ್ಲಿ ತಪ್ಪಿರುವಂತೆಯೇ, ಆ ಕಲ್ಪನೆಗಳನ್ನು

ಮಂಡಿಸುವ ವಿಧಾನಗಳಲ್ಲಿ ಕೂಡಾ ಕೆಲವು ಅಪಕಲ್ಪನೆಗಳು ಸೃಷ್ಟಿಯಾಗಿವೆ. ಜಾತಿ ಮತ್ತು ಬುಡಕಟ್ಟು ಜನಾಂಗಗಳನ್ನು ನೋಡುವಾಗಲೇ ಯೋರೋಪಿಯನ್ ಮೂಲದ ವಿದ್ವಾಂಸರಿಗೆ ಅದೊಂದು ಶಾಪವೆಂದು ಅನಿಸಿದ್ದರಿಂದ ಈ ಮಾದರಿಯ ವ್ಯಾಖ್ಯೆಗಳು ಉಂಟಾಗಿವೆ. ಹಿಂದೂ ಸಮಾಜದ ವಿವರಣಾತ್ಮಕ ವ್ಯಾಖ್ಯಾನಗಳನ್ನು ಮಾಡುವಾಗ ಯೂರೋಪಿಯನ್ನರು ತಮ್ಮ ಅನುಭವ ಮತ್ತು ಜ್ಞಾನದ ಮಾದರಿಗಳಿಂದ ಅದನ್ನು ರೂಪಿಸಿದರು. ನಮ್ಮಲ್ಲಿ ಅನೇಕರು ಇದೇ ಹಿನ್ನೆಲೆಯಿಂದ ಜಾತಿ ಮತ್ತು ಬುಡಕಟ್ಟುಗಳನ್ನು ವ್ಯಾಖ್ಯಾನಿಸುತ್ತಾರೆ. ಇನ್ನೊಂದು ಸ್ವರೂಪ ದೇಶೀಯ ವಿದ್ವಾಂಸರದ್ದು. ಅವರು ಜಾತಿ ಮತ್ತು ಬುಡಕಟ್ಟುಗಳನ್ನು ರಾಷ್ಟ್ರೀಯ ಮಾದರಿಯೊಳಗೆ ನಿರ್ವಚಿಸುವ ಪ್ರಯತ್ನವನ್ನು ಮಾಡಿದರು. ಹೀಗಾಗಿ ಜಾತಿ ಮತ್ತು ಬುಡಕಟ್ಟುಗಳನ್ನು ಕುರಿತು ಚರ್ಚಿಸುವ ವಿಧಾನವು ತುಂಬಾ ತೊಡಕಿನದಾಯಿತು. ವಾಸ್ತವವಾಗಿ ಜಾತಿಯ ಪರಿಕಲ್ಪನೆ ಮತ್ತು ಬುಡಕಟ್ಟಿನ ಪರಿಕಲ್ಪನೆಗಳು ಬೇರೆ. ಯುರೋಪಿಯನ್ನರಿಗೆ ಭಾರತದಲ್ಲಿರುವ ಜಾತಿ ಪದ್ಧತಿಯು ವಿಚಿತ್ರವಾಗಿ ಕಾಣಿಸಿತ್ತು. ಜಾತಿಯನ್ನು ಅವರು ವಿವರಿಸುವಾಗ ಅವರ ಮನಸ್ಸಿನಲ್ಲಿ ಒಂದೆರಡು ಅಂಶಗಳು ಮುಖ್ಯವಾಗಿದ್ದವು. ಯುರೋಪಿಯನ್ನರು ಅವರೆದುರುಗಡೆಗೆ ಒಂದು 'ನಾಗರಿಕ' ಸಮಾಜದ ಕಲ್ಪನೆಯನ್ನು ಇಟ್ಟುಕೊಂಡಿದ್ದರು. ಹದಿನೇಳನೆಯ ಶತಮಾನದ ಕೊನೆಯಲ್ಲಿ ಅವರ ಚಿಂತನೆಯ ಕ್ರಮವು 'ವ್ಯಕ್ತಿಯ ಅನನ್ಯತೆ' (Individualism) 'ಜ್ಞಾನ' (Knowledge) 'ವಸ್ತುನಿಷ್ಠತೆ' 'ನಿರ್ದಿಷ್ಟ ಮಾದರಿಯ ಕಾನೂನು' 'ಭಾರತೀಯ ಸಮಾಜದ ಪರಿವರ್ತನೆ' 'ಸಮಾನ ಕಾನೂನು' ಸಾಮಾಜಿಕ ರಚನೆಯಲ್ಲಿ ಬದಲಾವಣೆ' (Structural Change) 'ಸ್ಥಳೀಯ ಮೌಲ್ಯನಾಶ' 'ಯುರೋಪಿಯನ್ ಮಾದರಿಯ ಚಿಂತನೆಯ ಕ್ರಮದ ಸ್ಥಾಪನೆ ಹಾಗೂ ಸ್ಥಳೀಯ ನಂಬಿಕೆಗಳ ನಾಶ' ಇತ್ಯಾದಿಗಳನ್ನು ಒಳಗೊಂಡಿದ್ದವು. ಜಾತಿ ಮತ್ತು ಅಭಿವೃದ್ಧಿಗೆ ಸಂಬಂಧವನ್ನು ಕಲ್ಪಿಸಿದರು. ಇದರಿಂದ ಯುರೋಪಿಯನ್ನರಿಗೆ ಅನುಕೂಲವಿತ್ತು ಜಾತಿ; ಬುಡಕಟ್ಟು; ಜನಾಂಗವಾದ; ಧರ್ಮ – ಇತ್ಯಾದಿಗಳಿಗೆ ಯುರೋಪ್‌ನ ಆ ಕಾಲದ ಚಿಂತನೆಯ ಕ್ರಮ ಬೇರೊಂದು ವಾದವನ್ನು ಮಂಡಿಸಿತ್ತು. ಇಡಿಯ ಭಾರತದಲ್ಲಿಯೇ ಅನೇಕ ಬುಡಕಟ್ಟುಗಳನ್ನು ಜಾತಿ ಚೌಕಟ್ಟಿನಿಂದ ಹೊರಗೆ ಇರಿಸಲಾಗಿದೆ ಹಾಗೂ ಸ್ವಾತಂತ್ರ್ಯೋತ್ತರ ಕಾಲದಲ್ಲಿಯೂ ಅನೇಕ ಬುಡಕಟ್ಟುಗಳಿಗೆ ರಾಜಕೀಯ ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ಅನೇಕ ಸಂದರ್ಭಗಳಲ್ಲಿ ಆರ್ಯ ಫ ದ್ರಾವಿಡ; ಬ್ರಾಹ್ಮಣ ಫ ಶೂದ್ರವೆಂಬ ಧ್ರುವೀಕರಣದ ಪರಿಭಾಷೆಯಲ್ಲಿಯೇ ನಮ್ಮ ಚರ್ಚೆಗಳು ನಿಂತು ಬಿಡುತ್ತವೆ. ಮತ್ತು ಬ್ರಾಹ್ಮಣರು ಕೆಲವು ಸಂದರ್ಭಗಳಲ್ಲಿ ಹೇಳುವ ಮಂತ್ರಗಳು ಕೂಡ ಜಾತಿ ತಾರತಮ್ಯಗಳನ್ನು ಒಂದು ಪುರಾಣ ರೂಪಕವಾಗಿ ಮಾತ್ರ ಕಾಣುತ್ತದೆ. ಬುಡಕಟ್ಟು ಈ ಕಥನದ ಚೌಕಟ್ಟಿನೊಳಗೆ ಬರುವುದಿಲ್ಲ. ಆದುದರಿಂದ ಅದರ ವಾಸ್ತವದ ಸ್ಥಿತಿಯು ಬೇರೆಯಿದೆ. ಜಾತಿಯನ್ನಾಗಲೀ ಬುಡಕಟ್ಟಿನ

ಸಂಸ್ಕೃತಿಯನ್ನಾಗಲೀ – ಒಂದು ಚಿರವಾದ ಸಂಸ್ಥೆಯೆಂದಾಗಲಿ: ಅದನ್ನು ಕೆಲಸದ ವರ್ಗೀಕರಣದ ಹಿನ್ನೆಲೆಯಲ್ಲಿ ಚರ್ಚಿಸುವುದಾಗಲೀ ಕಷ್ಟ ಹಾಗೆಯೇ ಜಾತಿಯೆಂಬುದನ್ನು ಇಡಿಯ ಭಾರತೀಯ ಸಮಾಜಕ್ಕೆ ಒಂದು ನಿರ್ದಿಷ್ಟ ಮಾದರಿಯೆಂದು ಕರೆಯಲಾಗುವುದಿಲ್ಲ ಹಾಗೂ ಭಾರತದಲ್ಲಿ ಅಸಂಖ್ಯ ಜಾತಿಗಳಿವೆ. ಅವುಗಳಿಗೆ ಒಂದೇ ಧಾರ್ಮಿಕ ಸಂಪ್ರದಾಯ ಎನ್ನುವುದು ಇಲ್ಲ. ಪ್ರಾದೇಶಿಕತೆಗೆ ಅನುಸಾರವಾಗಿ ಜಾತಿಗಳ ನಡುವಣ ಸಂವಾದವು ಬೇರೆ ಬೇರೆ ರೀತಿಯಲ್ಲಿರುತ್ತವೆ. ಭೂ ಹಿಡುವಳಿ ಆಯಾ ಗುಂಪುಗಳ ಮಾನಸಿಕ ಸ್ಥಿರತೆ ಮುಂತಾದುವುಗಳನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಮನು ಧರ್ಮದಲ್ಲಿಯೂ ಇದು ಉಕ್ತವಾಗಿದೆ. ನಾಲ್ಕು ವೇದಗಳನ್ನು ಸಾಂಗೋಂಪಾಂಗವಾಗಿ ಅಧ್ಯಯನ ಮಾಡಿ ಅವುಗಳಿಗೆ ತತ್ವಾರ್ಥಗಳನ್ನು ತಿಳಿದುಕೊಂಡು ಬ್ರಾಹ್ಮಣನಾದವನೂ ಸಹ ಶೂದ್ರನಿಂದ ದಾನ ಪಡೆದದ್ದೇ ಆದರೆ ಅವನು ಕತ್ತೆಯಾಗಿ ಜನಿಸುತ್ತಾನೆ. ಅವನು ಸತತವಾಗಿ ಹನ್ನೆರಡು ಜನ್ಮಗಳ ಪರ್ಯಂತ ಕತ್ತೆಯ ಯೋನಿಯಿಂದ ಜನಿಸುತ್ತಾನೆ. ಅನಂತರ 60ನೇ ಮತ್ತು ಜನ್ಮದಲ್ಲಿ ಕ್ರಮವಾಗಿ ಹಂದಿ ಮತ್ತು ನಾಯಿಗಳ ಯೋನಿಯಲ್ಲಿ ಜನಿಸುತ್ತಾನೆ ಎಂದು ಮನು ಹೇಳಿದ್ದಾನೆ.

"ಜಾತಿಚರಿತ್ರೆಗಳನ್ನು ಬರೆಯುವ ನಮ್ಮ ಇಂದಿನ ವಿದ್ವಾಂಸರು, ತಮ್ಮ ಪುನರುದ್ಧರಣ ವಾದವನ್ನೂ ಮಂಡಿಸುತ್ತಾ, ಗುಪ್ತರಾಜರನ್ನು 'ಜಾತಿಯನ್ನು ಪುನರುದ್ಧರಿಸಿದ' ರಾಜರೆಂದು ಹೊಗುಳುತ್ತಾರಾದರೂ, ಗುಪ್ತರಾಜರ ಸ್ವರ್ಣಯುಗವನ್ನು ಸ್ತುತಿಸುತ್ತಾರಾದರೂ, ಈ ಗುಪ್ತರೆಂಬುವವರು ಆ ಕಾಲದ ಸಮಕಾಲೀನ ರಾಜರೆಲ್ಲರಂತೆಯೇ ಅನಾರ್ಯಜಾತಿಗಳಿಂದಲೇ ಬಂದವರೆಂಬುದು ಸ್ಪಷ್ಟವಾಗುತ್ತದೆ. ಇವರನ್ನು ಕುರಿತು ಚರಿತ್ರೆಕಾರರು ಬಹುವಾಗಿ ಮೆರಸಿ ಹೇಳುವ ಸಂಗತಿಗಳೆಲ್ಲವೂ ಅವರದೇ ಶಾಸನಗಳಲ್ಲಿ ಅವರೇ ಸ್ವತಃ ಹೊಗಳಿಕೊಂಡು ಬರೆಸಿದಂತಹವು. 'ಗುಪ್ತರಾಜರ ಸ್ವರ್ಣಯುಗ' ಎಂಬ ಮಾತಿಗೆ ಬಂದರೆ ಗುಪ್ತರ ಕಾಲಕ್ಕೆ ಸೇರಿದ ಚಿನ್ನದ ನಾಣ್ಯಗಳು ದೊರೆತಿರುವುದಂತೂ ವಾಸ್ತವ ಎಂಬುದನ್ನು ಕೊಸಾಂಬಿ ಖಚಿತವಾಗಿ ಹೇಳುತ್ತಾರೆ. ಆದರೆ ಇದು ಎಂತಹ 'ಸ್ವರ್ಣಯುಗ'ವೆಂದರೆ, ಗುಪ್ತ ರಾಜವಂಶವು ಪತನವಾಗುವ ವೇಳೆಗೆ ಅವರ ರಾಜಧಾನಿಯಾಗಿದ್ದ ಪಾಟಲಿಪುತ್ರವೆಂಬುದು ಕುಗ್ರಾಮವಾಗಿತ್ತು. ನಮ್ಮ ದೇಶಕ್ಕೆ ಚರಿತ್ರೆ ಎಂಬುದೇ ಇಲ್ಲ ಎಂಬ ಬ್ರಿಟಿಶ್ ಸಾಮ್ರಾಜ್ಯವಾದಿಗಳ ಅವಹೇಳನದ ಮಾತುಗಳನ್ನು ಸಹಿಸಲಾಗದ ನಮ್ಮ ಜಾತೀಯ ವಾದಿಗಳಿಗೆ ಸಮುದ್ರಗುಪ್ತನ ಶಾಸನಗಳು ದೊರಕಿದ್ದೆಂಬುದು, ನಮಗೂ ಸಹ ಚರಿತ್ರೆ ಇದೆ ಎಂಬುದನ್ನು ಹೊಗಳಿಕೊಂಡು ಹೇಳಲು ಒಂದು ಅವಕಾಶ ದೊರೆತಂತಾಯಿತು. "ಗುಪ್ತರು ಜಾತಿಯನ್ನು ಪುನರುದ್ಧರಿಸಲಿಲ್ಲ. ಜಾತೀಯ

ಉದ್ಭವವು ಗುಪ್ತರನ್ನು ಪುನರುದ್ಧರಿಸಿತಷ್ಟೇ" ಎನ್ನುತ್ತಾರೆ ಕೊಸಾಂಬಿ. (ಡಿ. ಡಿ. ಕೊಸಾಂಬಿ ೧೯೯೮ ಪು. ೨೨೬)

ಜಾದಿಯೇ ಜಾತಿಯೆಂದಾಗಿದೆ (ಚ.ನಿ.೧೧೦)

ವಿವರಗಳಿಗೆ ನೋಡಿ: P. V. Kane History of Dharma sastra Vol II – P.43; 44, 53, 69, 83, 88

Romila Thapar 1975 The Past and Prejudice P. 30

ಡಿ. ಡಿ. ಕೊಸಾಂಬಿ 1998 ಪ್ರಾಚೀನ ಭಾರತದಲ್ಲಿ ಚರಿತ್ರೆ ಪುಟ. 226

ಆರ್. ಎಸ್. ಶರ್ಮ 2007 ಪ್ರಾಚೀನ ಭಾರತ ಪುಟ. 251–262

Louis Dumont 1999 Homohireehicus

ಮೋಹನಕೃಷ್ಣರೈ 2004 ಪ್ರಭುತ್ವ ಮತ್ತು ಜನತೆ ಪುಟ. 61

Sudipta kaviraj 1997 Poeihics in india

Ronald Inden 1990 Imagining India P. 657

ಬಿ. ವಿ. ವೀರಭದ್ರಪ್ಪ 2007 ಅಶ್ವಘೋಷನ ವಜ್ರಸೂಚಿ 2007 ಪುಟ. 13, 14

ಜಾತಿ – ಕಸುಬು

ಒಂದು ಗ್ರಾಮೀಣ ಜನಸಮುದಾಯದಲ್ಲಿರುವ 'ಜಾತಿ'ಗಳು ಮತ್ತು ಅವುಗಳ ಕಸುಬುಗಳನ್ನು ಸ್ಥೂಲವಾಗಿ ಹೀಗೆ ಗ್ರಹಿಸಬಹುದು :

೧. ಬ್ರಾಹ್ಮಣರು – ಪೌರೋಹಿತ್ಯ ವರ್ಗ

೨. ಪಟೇಲರು – ದಂಡಾಧಿಕಾರಿ

೩. ಶಾನುಭೋಗರು – ಕಂದಾಯ

೪. ಗೌಡರು – ಯಜಮಾನಿಕೆ ವರ್ಗ

೫. ವ್ಯಾಪಾರಿವರ್ಗ – ಹಳೆಗನ್ನಡದಲ್ಲಿ ಪರದರು – ಶ್ರೇಷ್ಠಿಗಳು

೬. ಕುಂಬಾರರು – ಮಡಿಕೆ ಮಾಡುವ ವರ್ಗ

೭. ಕ್ಷೌರಿಕರು – ಕ್ಷೌರಿಕವೃತ್ತಿ

೮. ಕೃಷಿ ಕಾರ್ಮಿಕರು – ಕೂಲಿ ಕೆಲಸ – ನಿಗದಿತ ಜಾತಿಯಿಲ್ಲ – ಅಸ್ಪೃಶ್ಯ ವರ್ಗವೊಂದನ್ನು ಹೊರತುಪಡಿಸಿ

೯. ಸಮಗಾರರು – ಚರ್ಮದವೃತ್ತಿ

೧೦. ಆಚಾರಿವರ್ಗ – ಕಬ್ಬಿಣ/ಬಂಗಾರ/ಮರದ ಕೆಲಸ

೧೧. ಬುಟ್ಟಿ ಹೆಣೆಯುವವರು – ಅಸ್ಪೃಶ್ಯವರ್ಗ

ಪ್ರತಿಯೊಂದು ಗ್ರಾಮಸಮಾಜವೂ ಈ ಕಾರಣಗಳಿಂದ ಸ್ವಯಂತಂತ್ರ ಗಣರಾಜ್ಯದಂತೆ ಕೆಲಸ ಮಾಡುತ್ತಿತ್ತು. ಇದಕ್ಕೆ ತಕ್ಕಂತೆ ನಿಯಾಮಾವಳಿಗಳು ರೂಪುಗೊಂಡಿದ್ದವು. ಹಾಗೂ ನಿಯಾವಮಾವಳಿಗಳೆಂದು ಯಾವುದನ್ನು ಗುರುತಿಸುತ್ತೇವೋ ಅವು ಅನೇಕ ಸಂದರ್ಭಗಳಲ್ಲಿ 'ಸಂವಾದಿ' ಯಾಗಿದ್ದವೇ ಹೊರತು ಅವಕ್ಕೆ ನಿರ್ದಿಷ್ಟ ಚಹರೆಯೆನ್ನುವುದು ಇರಲಿಲ್ಲ. ಗ್ರಾಮೀಣ ಜ್ಞಾನಪರಂಪರೆಯಾಗಲೀ ಅದಕ್ಕೆ ಸಂಬಂಧಿಸಿದಂತೆ ರೂಪುಗೊಂಡ ನಿಯಾಮಾವಳಿಗಳಾಗಲೀ ಒಂದು ಗ್ರಾಮಕ್ಕೆ; ಅದರ ಕೃಷಿ ಮೂಲವಾದ ಚಟುವಟಿಕೆಯಲ್ಲಿ ಅಗತ್ಯವಿಲ್ಲದ ಉದ್ಯೋಗಗಳು ಸೃಷ್ಟಿಯಾಗುವುದು ಸಾಧ್ಯವಿಲ್ಲ. ಪ್ರಾದೇಶಿಕವಾಗಿಯೂ ಒಂದೊಂದು ಜಾತಿಯ ಯಜಮಾನಿಕೆ; ಆಯಾ ಜಾತಿಗಳ ಸ್ಥಾನ–ಮಾನ; ಜಾತಿಗಳ ಮನೋಸ್ಥೈರ್ಯ ಇತ್ಯಾದಿಗಳು ಪ್ರಾದೇಶಿಕವಾಗಿ ಭಿನ್ನವಾಗುತ್ತಾ ಹೋಗುತ್ತವೆ.

ಏಳನೆಯ ಶತಮಾನದ ನಂತರ ಹಲವಾರು ಜಾತಿಗಳು ಹುಟ್ಟಿಕೊಳ್ಳತೊಡಗಿದುವು. ಎಂಟನೆಯ ಶತಮಾನದ ಒಂದು ಪುರಾಣವು ವೈಶ್ಯ ಸ್ತ್ರೀಯರು ಮತ್ತು ಕೆಳಜಾತಿಗಳ ಗಂಡಸರ ಸಂಬಂಧಗಳಿಂದಾಗಿ ಸಾವಿರಾರು ಮಿಶ್ರಜಾತಿಗಳು ಹುಟ್ಟಿದವು ಎಂದು ತಿಳಿಸಿದೆ. ಶೂದ್ರರು ಮತ್ತು ಅಸ್ಪೃಶ್ಯರು ಅಸಂಖ್ಯಾತ ಜಾತಿ, ಉಪಜಾತಿಗಳಾಗಿ ವಿಂಗಡಗೊಂಡಿದ್ದರು ಎಂಬುದು ಇದರ ಇಂಗಿತ. ಬ್ರಾಹ್ಮಣರೂ ಹೀಗೆಯೇ ವಿಂಗಡಗೊಂಡಿದ್ದರು. ಏಳನೆಯ ಶತಮಾನದ ನಂತರ ಭಾರತದ ರಾಜ್ಯವ್ಯವಸ್ಥೆ ಹಾಗೂ ಸಮಾಜಗಳಲ್ಲಿ ಮಹತ್ವದ ಸ್ಥಾನವೊಂದನ್ನು ಪಡೆದ ರಜಪೂತರೂ ಇದೇ ರೀತಿ ವಿಂಗಡಗೊಂಡರು. ಆಗಿನ ಅರ್ಥ ವ್ಯವಸ್ಥೆಯಿಂದಾಗಿ ಜನರು ಸ್ಥಳದಿಂದ ಸ್ಥಳಕ್ಕೆ ಚಲಿಸುವುದು ಅಸಾಧ್ಯವಾಗುದ್ದುದರಿಂದಲೂ ಜಾತಿಗಳ ಸಂಖ್ಯೆ ಹೆಚ್ಚಿತು. ಬೇರೆ ಬೇರೆ ಪ್ರದೇಶಗಳಲ್ಲಿ ಒಂದೇ ವೃತಿಯನ್ನು ಅನುಸರಿಸಿ ಜೀವಿಸುತ್ತಿದ್ದ ಜನರು ಸಹ ಪ್ರಾದೇಶಿಕವಾದ ಉಪಜಾತಿಗಳಾಗಿ ರೂಪುಗೊಂಡರು. ಇವುಗಳ ಜೊತೆಗೆ ಆದಿವಾಸಿ ಪ್ರದೇಶಗಳಲ್ಲಿ ಬ್ರಾಹ್ಮಣರಿಗೆ ಭೂಮಾನ್ಯಗಳು ದೊರೆದುದರಿಂದಾಗಿ ಆ ಆದಿವಾಸಿ ಜನಗಳೂ ಹಿಂದೂ ಸಮಾಜದೊಳಕ್ಕೆ ಬಂದರು. ಅವರಲ್ಲಿ ಬಹಳಷ್ಟು ಪಾಲು ಶೂದ್ರ ಮತ್ತು ಮಿಶ್ರ ಜಾತಿಗಳಾಗಿ ಒಳ ಸೇರಿದರು. ಪ್ರತಿಯೊಂದು ಆದಿವಾಸಿ ಬಣವೂ ಹಿಂದು ಸಮಾಜದ ಒಂದು ಪ್ರತ್ಯೇಕ ಜಾತಿಯಾಯಿತು. (ಆರ್. ಎಸ್. ಶರ್ಮ ೧೯೯೭. ಪು. ೨೫೧–೨೬೨)

ಜಾತಿ ಮತ್ತು ವರ್ಣಗಳ ನಿರ್ವಚನ

ಇವುಗಳಲ್ಲಿ ಜಾತಿಯನ್ನು ದಾಟುವವರು ಇರುತ್ತಾರೆ. ಮತ್ತೆ ಕೆಲವರು ಜಾತಿ

ಸಂಬಂಧದ ನಿರ್ವಚನದೊಳಗಡೆಗೆ ಇರುತ್ತಾರೆ. ಅದೇ ರೀತಿಯಲ್ಲಿ ಕುಟುಂಬದ ಸಮಸ್ಯೆಯೂ ಕೂಡಾ. ಕುಟುಂಬವೆಂದರೆ – ಅದು ಒಬ್ಬ ವ್ಯಕ್ತಿಯಿಂದ ನಿರ್ಮಾಣವಾಗುವಂಥದಲ್ಲ. ಅದರಲ್ಲಿ ಬೇರೆ ಬೇರೆಯವರಿರುತ್ತಾರೆ. ಗಂಡ–ಹೆಂಡತಿ; ತಂದೆ–ತಾಯಿ; ಅಜ್ಜ–ಅಜ್ಜಿಯರು ಹಾಗೂ ನೆಂಟರಿಷ್ಟರು. ಕುಟುಂಬದಲ್ಲಿನ ಸಂಬಂಧಗಳು, ಕುಟುಂಬದೊಳಗಿನ ಕೆಲಸ ಕಾರ್ಯಗಳು ನಿಗದಿಯಾಗಿರುತ್ತದೆ. ಈ ಕೆಲಸ ಕಾರ್ಯಗಳು ಕುಟುಂಬದ ಅಭಿವೃದ್ಧಿಗೆ ತುಂಬಾ ಅಗತ್ಯವಾದುದು ಕೂಡಾ. ನಾವು ಒಪ್ಪಿಕೊಳ್ಳಬಹುದು ಅಥವಾ ಬಿಡಬಹುದು. ಕುಟುಂಬದೊಳಗಿನ ಕೆಲಸ ಕಾರ್ಯಗಳು ಮತ್ತು ಸಂಬಂಧಗಳಿಗೆ ನಿರ್ದಿಷ್ಟವಾದ ಸ್ವರೂಪವಿದೆ. ಈ ಕೆಲಸ–ಕಾರ್ಯಗಳು ಅಂತ ಏನಿವೆಯೋ ಅವು ಸ್ಪರ್ಧೆಯನ್ನು ನಿರೀಕ್ಷಿಸುವುದಿಲ್ಲ. ಹೀಗಾಗಿ ಕುಟುಂಬದೊಳಗಿನ ಪ್ರಜ್ಞೆಯನ್ನು ನಾವು ಚಾರಿತ್ರಿಕ; ಸಮಾಜೋಮನಶಾಸ್ತ್ರೀಯ ಹಿನ್ನೆಲೆಯಲ್ಲಿಯೂ ಗ್ರಹಿಸಲು ಸಾಧ್ಯವಿದೆ. ತಾಯ್ತನ; ಮನೆಯೊಳಗಿನ ಕೆಲಸ–ಇತ್ಯಾದಿಗಳಿಗೆ ನಮ್ಮ ಸಾಮಾಜಿಕ ಪರಿಸರದಲ್ಲಿ ವಿಶಿಷ್ಟವಾಗ ಅರ್ಥವಿದೆ. ಕುಟುಂಬ ಸದಸ್ಯರು ಬೇರೆ ಬೇರೆ ಕೆಲಸಗಳನ್ನು ಮಾಡದೇ ಹೋದರೆ 'ಮನೆ' ನಡೆಯುವುದೇ ಸಾಧ್ಯವಿಲ್ಲ. ಮತ್ತು 'ಕುಟುಂಬ'ವೆಂದು ಯಾವುದನ್ನು ಕರೆಯುತ್ತೇವೋ ಅದಕ್ಕೆ ನೈತಿಕ – ಭಾವನಾತ್ಮಕ – ಧಾರ್ಮಿಕ ಅರ್ಥಗಳು ಹುಟ್ಟಿಬಿಡುತ್ತವೆ. ಕೆಲವರಿಗೆ ಜಾತಿಯು ಅಭಿವೃದ್ಧಿಗೆ ತೊಡಕಾಗುವ ಪ್ರಶ್ನೆಯ ಹಾಗೆ ಕಾಣಿಸಿದೆ. ಮತ್ತೆ ಕೆಲವರು ಜಾತಿಯನ್ನು ವರ್ಣಸಿದ್ಧಾಂತದ ಹಿನ್ನೆಲೆಯಲ್ಲಿಯೂ ಮಂಡಿಸಿದ್ದಾರೆ. ಆದರೆ ಕೆಲವಂತೂ ನಮಗೆ ಸುಲಭವಾಗಿ ಅರ್ಥವಾಗುತ್ತದೆ: ಜಾತಿಯೆನ್ನುವುದು ಭಾರತದಲ್ಲಿರುವ ಒಂದು ಜೀವನಕ್ರಮ. ಆದರೂ ಅದರೊಳಗಡೆಗೆ ಕೆಲವು ವ್ಯಾಖ್ಯೆಗಳನ್ನು ಇಟ್ಟುಕೊಂಡಿವೆ. ಜಾತಿಗೂ – ಉದ್ಯೋಗಕ್ಕೂ; ಜಾತಿಗೂ ಪರಸ್ಪರರ ಸಂಬಂಧಗಳಿಗೂ ಒಂದು ಆಂತರಿಕ ತರ್ಕವಿದೆ. ಜಾತಿ ಹಾಗೂ ಅದರ ಯಜಮಾನಿಕೆಗಳು ಸ್ಥಳದಿಂದ – ಸ್ಥಳಕ್ಕೆ ಬೇರೆಯಾಗುತ್ತವೆ. ನಮ್ಮ ಸಮಾಜದ ಒಟ್ಟು ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು 'ಜಾತಿ' ಯೊಂದೇ ಉಪಕರಣವಾಗಬೇಕಾಗಿಲ್ಲ. ಆದರೆ ಅದು ಕೂಡಾ ಸಾಮಾಜಿಕ ವಾಸ್ತವಗಳಲ್ಲಿ ಒಂದು ಎಂಬುದನ್ನು ಮರೆಯುವ ಹಾಗಿಲ್ಲ. ಜಾತಿಗೆ ಮತ್ತು ಧರ್ಮಕ್ಕೆ; ಜಾತಿಗೆ ಮತ್ತು ಪ್ರಾದೇಶಿಕತೆಗೆ; ಜಾತಿಗೆ ಭೂ ಯಜಮಾನಿಕೆಗೆ; ಜಾತಿಗೆ ಮತ್ತು ಕುಟುಂಬಗಳಿಗೆ–ಹೀಗೆ ಬೇರೆ ಬೇರೆ ಮಾದರಿಯನ್ನು ಅದು ಒಳಗೊಂಡಿದೆ. ಹೀಗಾಗಿ ಜಾತಿಯು ಕೂಡಾ ಒಂದು ಸ್ಥಾನ ನಿರ್ದೇಶನದಂತೆಯೂ ಕೆಲಸ ಮಾಡುತ್ತದೆ. ಜಾತಿಗಳು ಕೂಡಾ ಅನೇಕ ಸಣ್ಣಸಣ್ಣ ಗುಂಪುಗಳಂತೆ ಕೆಲಸ ಮಾಡುತ್ತವೆ. 'ಜಾತಿ'ಯಲ್ಲಿಯೂ ಅನೇಕ ಪ್ರಭೇದಗಳುಂಟಾಗಿ–ತಾವು(ಪು.೧೪೫) ಶ್ರೇಷ್ಠ:ತಾವು ಶ್ರೇಷ್ಠ ಎಂದು ಹೇಳಿಕೊಳ್ಳುತ್ತವೆ. ಸಣ್ಣ ಪುಟ್ಟ ಭಿನ್ನತೆಗಳು ಕೂಡಾ ಗಮನಾರ್ಹ

ಭಿನ್ನತೆಯಾಗಬಹುದು. ಉದಾ: ಸ್ಮಾರ್ತರು; ವೈಷ್ಣವರು; 'ಜಾತಿ'ಯನ್ನು ನೋಡುವ ಕ್ರಮ ವಸಾಹತುಶಾಹಿ ಕಾಲಘಟ್ಟದಲ್ಲಿ ಬದಲಾಯಿತು.

ವಿವರಗಳಿಗೆ ನೋಡಿ: Ronald Inden. 1990. P. 657

ಜಾಲಗಾರ

ಮಿಂಗುಲಿಗ ಪದಕ್ಕೆ ಬೆಸ್ತ; ಬಕಪಕ್ಷಿಯೆಂಬ ಎರಡೂ ಅರ್ಥಗಳಿವೆಯೆಂಬುದು ಗಮನಾರ್ಹ. ಜಾಲಗಾರನೆಂದರೂ ಬೆಸ್ತನೇ. ಜಾಲವೆಂದರೆ ಬಲೆ. ಬಲೆ ಬೀಸುವವನು ಜಾಲಗಾರ. ಮೀನುಗಾರಿಕೆ ವೃತ್ತಿಯನ್ನೇ ಪ್ರಧಾನವಾಗಿ ಉಳ್ಳ ಜನಾಂಗಗಳು ಕರ್ನಾಟಕದ ಕರಾವಳಿ ತನಕ ಇಂದೂ ಇವೆ. ಇನ್ನು ಕೆರೆ, ಹಳ್ಳ, ಹೊಳೆಗಳಲ್ಲಿ ಮೀನು ಹಿಡಿಯುವಿಕೆ ಇದ್ದರೂ ಕೂಡ ಅದೊಂದು ಉಪಕಸುಬಾಗಿ ಇರುತ್ತದೆ. ಬೆಸ್ತರು ಎನ್ನುವ ಜನಾಂಗ ಮೂಲತಃ ಮೀನುಗಾರಿಕೆ ವೃತ್ತಿಯವರಾಗಿದ್ದರೂ, ಕಾಲಕ್ರಮೇಣ ಇತರ ವೃತ್ತಿಗಳ ಜೊತೆಗೆ ಮೀನುಗಾರಿಕೆಯನ್ನು ಉಪವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ.

ಮೀನು ಎಂಬುದು ಮೀಂ ಎಂದಾಗಿದೆ. ಕೊಲೆ ಮಾಡುವವನು ಕುಲಿಗ ಎಂದಾಗಿದೆ. ಆದ್ದರಿಂದ ಮೀನ್ + ಕುಲಿಗ – ಮಿಂಗುಲಿಗ = ಬೆಸ್ತ (ಅಂಬಿಗ) ಎಂಬ ಅರ್ಥ ಇಲ್ಲಿದೆ.

ಫಾ–ಝ್ವಿಯೆಸ್ ತಿಳಿಸುವಂತೆ ಚಾಂಡಾಲರು ಮೀನುಗಾರರು ಮತ್ತು ಬೇಟೆಗಾರರು ಮಿಶ್ರ ಜಾತಿಗೆ ಸೇರಿದವರು. ಕಾಲಿದಾಸನು ಭಿನ್ನವಾಗಿ ನೋಡುತ್ತಾನೆ. ಚಂಡಾಲರ ಗುಂಪಿಗೆ ಮೀನುಗಾರರನ್ನು ಸೇರಿಸಿದ್ದಾನೆ. ಮತ್ತು ಜಾತಿ ಶ್ರೇಣೀಕರಣದ ದೃಷ್ಟಿಯಿಂದ ಮೀನುಗಾರರಿಗೆ ಉನ್ನತ ಸ್ಥಾನವಿಲ್ಲ. ಪಂಪ ಭಾರತದಲ್ಲಿ ಮತ್ಸ್ಯಗಂಧಿಯನ್ನು ಆಕೆಯ ಶರೀರದ ಕೆಟ್ಟವಾಸನೆಯನ್ನು ಹೋಗಲಾಡಿಸಿ ಪರಾಶರನು ಅವಳನ್ನು ಸೇರಿದ್ದನ್ನು ನೆನಪಿಸಿಕೊಳ್ಳಬಹುದು.

ವಿವರಗಳಿಗೆ ನೋಡಿ: ಆರ್.ಎಸ್.ಶರ್ಮ ೨೦೦೪ ಪ್ರಾಚೀನ ಭಾರತದಲ್ಲಿ ಶೂದ್ರರು ಪುಟ. ೧೫೮

ಡಾ. ವಿ. ಎಲ್. ಪಾಟೀಲ ೨೦೦೯ ವಡ್ಡಾರಾಧನೆ ಜಾನಪದೀಯ ಅಧ್ಯಯನ ಪುಟ. ೧೭೮.

ಜಾಳರಿಗೆ

ಜಾಲರಿಯಿಂದ ಕೂಡಿದ ಕಿಟಕಿಗಳಿಂದ ಕೆಲವು ಅನುಕೂಲಗಳಿವೆ. ಮೊದಲನೆಯದಾಗಿ ಅದರ ಮೂಲಕ ಗಾಳಿಯು ಓಡಾಡುತ್ತದೆ. ಇದರಿಂದ ಸೆಕೆಯ ಅನುಭವವಾಗುವುದಿಲ್ಲ. ಎರಡನೆಯದಾಗಿ ಜಾಲರಿಯಿಂದ ಹೊರಗೆ ನೋಡಬಹುದು. ಆದರೆ, ಹೊರಗೆ ಇರುವವರು ಒಳಗೆ ನೋಡಲಾಗುವುದಿಲ್ಲ. ಜಾಲವೆಂದರೆ ಹೆಣಿಗೆ. 'ಝುಲ್ಲರಿಕಾ' ಇದರ ಸಂಸ್ಕೃತ ರೂಪ. ಝುಲ್ಲರಿ ಎಂದರೆ ಕುಚ್ಚು.

ಜಿತೇಂದ್ರಿಯ

ಸ್ತುತಿ–ನಿಂದೆಗಳನ್ನು ಕೇಳಿ, ಮೆತ್ತಗೆ–ಒರಟು ಮುಟ್ಟಿ, ಕೊಳಕು–ಚಂದ ನೋಡಿ. ರುಚಿ–ಅರುಚಿ ತಿಂದು, ದುರ್ವಾಸನೆ–ಸುವಾಸನೆ ಮೂಸಿ ಯಾವನಲ್ಲಿ ಸುಖದುಃಖಗಳು ಜನಿಸುವುದಿಲ್ಲವೋ ಅವನು ಜಿತೇಂದ್ರಿಯನು. (ಮನುಸ್ಮೃತಿ 2–98)

ಜೂಜು/ವ್ಯಭಿಚಾರ

ವರ್ತಕರ ಮೇಲೆ ಇಷ್ಟೆಲ್ಲಾ ನಿಯಂತ್ರಣಗಳನ್ನು ಹೇರಿದ್ದು ಮಾತ್ರವಲ್ಲದೆ ಸ್ವತ: ತಾನೇ ಬಹುಮಟ್ಟಿನ ವ್ಯಾಪಾರಗಳಲ್ಲಿ ಕೈಹಾಕಲು ಪ್ರಭುತ್ವವು ಮೊದಲು ಮಾಡಿತು. ಹೊಸದಾಗಿ ಆವಿರ್ಭವಿಸಿದ ಪಟ್ಟಣ ನಾಗರಿಕತೆಯ ಚಿಹ್ನೆಗಳಾದ ಮೂರು ಬಗೆಯ ವ್ಯಸನಗಳು – ಜೂಜು, ವ್ಯಭಿಚಾರ, ಮದ್ಯಪಾನ – ಪ್ರಭುತ್ವದ ನೇತೃತ್ವದಲ್ಲಿಯೇ ನಡೆಯತೊಡಗಿದವು. ಇವೆಲ್ಲಕ್ಕಿಂತಲೂ ಮುಖ್ಯವಾಗಿ ಗಣಿಗಳ ಮೇಲೆ, ಖನಿಜಗಳ ಮೇಲೆ ಪ್ರಭುತ್ವವು ಸಂಪೂರ್ಣವಾಗಿ ಅಧಿಪತ್ಯವನ್ನು ಸ್ಥಾಪಿಸಿತು. ವ್ಯವಸಾಯ ನಾಗರಿಕತೆಗೆ ಕಬ್ಬಿಣವೇ ಮೊದಲಾದ ಲೋಹಗಳು ಎಂತಹ ಪ್ರಮುಖ ಕೀಲಿಗೈಗಳು ಎಂಬುದನ್ನು ಕೌಟಿಲ್ಯನು ಸರಿಯಾಗಿಯೇ ಗುರುತಿಸಿದನು. "ಖಜಾನೆಗೆ ಗಣಿಗಳು ಆಧಾರ, ಸೈನ್ಯಕ್ಕೆ ಖಜಾನೆಯೇ ಆಧಾರ". ಹಾಗಾಗಿ ಪ್ರಪಂಚದಲ್ಲಿ ಅಧಿಪತ್ಯವನ್ನು ಸ್ಥಾಪಿಸಬೇಕೆಂದರೆ ಗಣಿಗಳನ್ನು ಅಜಮಾಯಿಸಿಕೊಳ್ಳಬೇಕು. ಇತರ ದೇಶಗಳ ಮೇಲೆ ಯುದ್ಧ ಮಾಡುವಲ್ಲಿ ಕೂಡ, ಬೀಡು ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಒಂದು ಪ್ರಮುಖ ಸಂಗತಿಯಾದರೆ. ಅಲ್ಲಿನ ಗಣಿಗಳನ್ನು ಸ್ವಾಧೀನಡಿಸಿಕೊಳ್ಳುವುದು ಅಷ್ಟೇ ಪ್ರಮುಖವಾದ ಇನ್ನೊಂದು ಸಂಗತಿ. (ಡಿ.ಡಿ. ಕೊಸಾಂಬಿ ೧೯೭೮ ಪು.೧೮೯)

ಜೈನ ಕ್ರೂರ ದೇವತೆಗಳು

ಪೂತಿನಿ, ಕೌಸಂಬಿ, ಕೇಸರಿ, ತಾಳಜಂಘಿನಿ ಎನ್ನುವ ಸ್ತ್ರೀ ದೇವತೆಗಳ ಹೆಸರುಗಳು ಬಂದಿದ್ದು ಇದನ್ನು ಕ್ರೂರದೇವತೆಗಳ ಸಾಲಿಗೆ ಸೇರಿಸಲಾಗಿದೆ. ಭಾಗವತ ಪುರಾಣಗಳಲ್ಲಿ ಈ ಹೆಸರುಗಳು ರಕ್ಕಸಿಯರನ್ನು ಸಂಕೇತಿಸುತ್ತವೆ. ಜೈನರು ಈ ಪರಿಕಲ್ಪನೆಯಲ್ಲಿ ಬದಲಾವಣೆ ಮಾಡಿಕೊಂಡಿದ್ದಾರೆ. ಕಾಳಿಯ ಪರಿಕಲ್ಪನೆಯು ಪ್ರಾಚೀನಸ್ತರದ್ದು ಮತ್ತು ತಾಂತ್ರಿಕ ನೆಲೆಯಲ್ಲಿ ಆರಂಭವಾದ ಮಾತೃಪೂಜೆಯ ಪ್ರಾಚೀನ ವಿಧಿಗಳು ಇತಿಹಾಸದ ಒತ್ತಡದಿಂದ ಖಂಡ ತುಂಡಾಗಿ ಜಾನಪದ ಚೌಕಟ್ಟಿನಲ್ಲಿ ಉಳಿದಿವೆ. ಈ ನೆಲೆಯಲ್ಲಿ ಉಂಡೆಯಾಗಿಯೇ ಉಳಿದು ಬಂದಿರುವ ವಿವರವೆಂದರೆ ಕಾಳೀಪೂಜೆ, ಆದರೆ ವೈದಿಕ ಸಂಪ್ರದಾಯವು ಹೆಚ್ಚು ಪ್ರಚಲಿತವಾದಂತೆ ಕಾಳಿದೇವತೆಯು ವಿಷ್ಣುವಿನ ಅನುಯಾಯಿಯಾಗಿ ರೂಪುಗೊಂಡಿರುವುದಕ್ಕೆ ಸಾಕ್ಷಿಗಳಿವೆ.

ವಿವರಗಳಿಗೆ ನೋಡಿ: ರಾಮಚಂದ್ರರಾವ್ .ಎಸ್. ಕೆ. 1975 ಮೂರ್ತಿಶಿಲ್ಪದ ನೆಲೆ–ಹಿನ್ನೆಲೆ ಪುಟ. 341–342.

ಜೈನಧರ್ಮದ ನಿಲುವು

ರಾಷ್ಟ್ರಕೂಟರಿಂದ ಹೊಯ್ಸಳರ ಅವನತಿಯವರೆಗಿನ ಅವಧಿಯಲ್ಲಿ ಪ್ರಚಾರದಲ್ಲಿದ್ದ ಧರ್ಮಗಳಲ್ಲಿ ಜೈನ ಧರ್ಮವೂ ಒಂದು. ಕ್ರಿ.ಶ.8ರಿಂದ 14ನೆಯ ಶತಮಾನಗಳ ನಡುವಣ ಅವಧಿಯಲ್ಲಿ ಜೈನ ಸಿದ್ಧಾಂತವು ರೂಪುಗೊಂಡ ಬಗೆ, ಅದು ಬೀರಿದ ಪ್ರಭಾವ ಪರಿಣಾಮ, ಸಿಕ್ಕಿರುವ ರಾಜಾಶ್ರಯ ಹಾಗೂ ಅಂದು ಪ್ರಚಾರದಲ್ಲಿದ್ದ ಇತರ ಧಾರ್ಮಿಕ ಸಿದ್ಧಾಂತಗಳೊಂದಿಗೆ ಹೊಂದಿದ್ದ ಸಂಬಂಧ ಮುಂತಾದ ವಿಚಾರಗಳ ಕುರಿತು ಇಲ್ಲಿ ಚರ್ಚೆ ನಡೆಸಲಾಗಿದೆ. ಕರ್ನಾಟಕದಲ್ಲಿ ಜೈನ ಧರ್ಮವು ವಿಕಾಸಹೊಂದುವುದಕ್ಕೆ ಭದ್ರ ತಳಹದಿ ಹಾಕಿಕೊಟ್ಟವರು ಗಂಗರು. ಗಂಗ ಅರಸರಾದ ಮಾರಸಿಂಹ ಮತ್ತು ಅವನ ಮಗ ರಾಚಮಲ್ಲರಿಗೆ ಮಂತ್ರಿ, ಸೇನಾಧಿಪತಿಯಾಗಿದ್ದ ಚಾಮುಂಡರಾಯನು ಶ್ರವಣಬೆಳಗೊಳದ ವಿಂಧ್ಯಗಿರಿಯ ಮೇಲೆ ಬಾಹುಬಲಿ ಮೂರ್ತಿಯ್ನು ಸ್ಥಾಪಿಸಿದನು. ಚಾಮುಂಡರಾಯನು 'ಚಾಮುಂಡರಾಯಪುರಾಣ' ಎನ್ನುವ ಕೃತಿಯನ್ನು ರಚಿಸಿ ಜೈನ ಸಾಹಿತ್ಯ ಮತ್ತು ಸಂಸ್ಕೃತಿಗಳೆರಡೂ ಹೆಚ್ಚಿನ ಪ್ರೋತ್ಸಾಹ ಮತ್ತು ಪ್ರಚಾರವನ್ನು ಪಡೆಯುವಂತೆ ಮಾಡಿದನು. ರಾಷ್ಟ್ರಕೂಟರ ಆಳ್ವಿಕೆಯೂ ಕರ್ನಾಟಕದಲ್ಲಿ ಜೈನಧರ್ಮವು ಏಳಿಗೆ ಹೊಂದುವುದಕ್ಕೆ ಸಹಕಾರಿಯಾಯಿತು. ಆದಿಪುರಾಣ, ಪ್ರಶ್ನೋತ್ತರ ರತ್ನಮಾಲಿಕಾ, ಅಮೋಘವೃತ್ತಿ, ಉತ್ತರಪುರಾಣ ಮುಂತಾದ ಜೈನ ಧರ್ಮವನ್ನು ಕುರಿತ ಗ್ರಂಥಗಳು ಈ ಅವಧಿಯಲ್ಲಿ ರಚನೆಗೊಂಡವು. ಜಿನಸೇನಾಚಾರ್ಯ, ಗುಣಭದ್ರಾಚಾರ್ಯ ಮುಂತಾದ ಜೈನ ಆಚಾರ್ಯರು ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಆಶ್ರಯವನ್ನು ಪಡೆದುಕೊಂಡರು.

ಜೈನಧರ್ಮದಲ್ಲಿ ದಿಗಂಬರ, ಶ್ವೇತಾಂಬರ ಹಾಗೂ ಯಾಪನೀಯ ಎಂಬ ಮೂರು ಸಂಪ್ರದಾಯಗಳು ಇದ್ದವು. ಜೈನ ಸಾಧುಗಳ ವಸ್ತ್ರಪರಿಧಾನವೇ ಈ ಸಂಪ್ರದಾಯಗಳ ಹುಟ್ಟಿಗೆ ಹಾಗೂ ಜೈನ ಸಂಘಗಳು ವಿಭಾಗಗೊಳ್ಳುವುದಕ್ಕೆ ಮೂಲಕಾರಣವಾಯಿತು. ಜೈನ ಧರ್ಮದ ವಿಭಿನ್ನ ಸಂಪ್ರದಾಯಗಳಲ್ಲಿ ತಾತ್ವಿಕ ದೃಷ್ಟಿಯಿಂದ ಭೇದಗಳಿರಲಿಲ್ಲ. ಎಲ್ಲ ಪಂಥಗಳೂ ಕರ್ಮಸಿದ್ಧಾಂತ ಅಹಿಂಸೆ, ಅನೇಕಾಂತವಾದ, ಆತ್ಮ, ಪರಮಾತ್ಮ ಮೊದಲಾದ ತತ್ವಗಳ ಅನುಯಾಯಿಗಳೇ ಆಗಿದ್ದವು. ಆದರೆ ವ್ಯಾವಹಾರಿಕ ದೃಷ್ಟಿಯಿಂದ ಅನೇಕ ಭೇದಗಳು ಇರುತ್ತಿದ್ದವು. ಜೈನಧರ್ಮದ ಈ ಎಲ್ಲ ಸಂಪ್ರದಾಯಗಳು ಕರ್ನಾಟಕದಲ್ಲಿ ಇದ್ದವು ಎನ್ನುವುದಕ್ಕೆ ಅಪಾರ ಸಂಖ್ಯೆಯ ಬಸದಿಗಳು, ಜೈನ ಗುಹೆಗಳು, ವಿಶ್ರಾಮಧಾಮಗಳು, ನಿಷಿಧಿ ಕಲ್ಲುಗಳೂ, ದಾನ ಶಾಸನಗಳು ಉದಾಹರಣೆಗಳಾಗಿವೆ.

ಪುದ್ಗಲ, ಆಕಾಶ, ಧರ್ಮ, ಅಧರ್ಮ ಎಂಬ ಈ ನಾಲ್ಕು ದ್ರವ್ಯಗಳ ಜೊತೆಗೆ ಜೈನ ಸಿದ್ಧಾಂತವು ಕಾಲವೆಂಬ ಐದನೆಯ ದ್ರವ್ಯವನ್ನು ಹೇಳುತ್ತದ. ಜೈನ ತತ್ವದ ಪ್ರಕಾರ ಪರ್ಯಾಯ ಚಲನೆಗಳೂ ಭೌತಪ್ರಪಂಚದಲ್ಲಿ ಒಂದು ಸತ್ತೆಯಾಗಿರುವುದರಿಂದಲೂ,

ಕಾಲವೂ ಕೂಡ ಒಂದು ಸತ್ತೆಯೆಂದು ಸ್ಥಾಪಿತವಾಗಿದೆ. ಕಾಲವನ್ನು ಮಿಥ್ಯೆಯೆಂದು ತಳ್ಳಿಹಾಕುವುದಾದರೆ ಚಲನೆ, ಬೆಳವಣಿಗೆಗಳನ್ನೊಳಗೊಂಡ ಪ್ರತಿಯೊಂದು ಪರ್ಯಾಯವನ್ನೂ ತರ್ಕವಶದಿಂದ ಅಷ್ಟೇ ಮಿಥ್ಯೆಯೆಂದು ಹೇಳಬೇಕಾಗುತ್ತದೆ. ಜೈನ ತತ್ವ ಈ ಪರಿಸ್ಥಿತಿಯನ್ನು ನಿವಾರಣೆ ಮಾಡಿಕೊಂಡಿದೆ. ಆದ್ದರಿಂದ ಕಾಲವು ಸತ್ ವಸ್ತುವೆಂದು ಅಂಗೀಕೃತವಾಗಿದೆ. ಈ ಕಾಲದ್ರವ್ಯವು ಕಾಲದ ಪರಮಾಣು ನಿಮಿಷಗಳಿಂದ ನಿರ್ಮಿತವಾದುದಾಗಿದೆ. ಈ ಐದು ಅಜೀವ ದ್ರವ್ಯಗಳೂ, ಜೀವದ್ರವ್ಯವೂ ಸೇರಿ ಸತ್ತೆಯ ಪ್ರಪಂಚವನ್ನು ರೂಪಿಸಿವೆ ಎಂದು ಜೈನಧರ್ಮ ಹೇಳುತ್ತದೆ.

ವಿವರಗಳಿಗೆ ನೋಡಿ: *ಡಾ. ಸರ್ವಪಲ್ಲಿ ರಾಧಾಕೃಷ್ಣನ್ ೧೯೭೦ ತತ್ವಶಾಸ್ತ್ರ: ಪ್ರಾಚ್ಯ ಮತ್ತು ಪಾಶ್ಚಾತ್ಯ ಪುಟ. ೧೪೩*
ಮೋಹನಕೃಷ್ಣ ರೈ ೨೦೦೪ ಪ್ರಭುತ್ವ ಮತ್ತು ಜನತೆ ಪುಟ. ೧೭೨.

ಜೈನ ನೀತಿ ತತ್ವ

ಇತರ ಹಿಂದೂದರ್ಶನಗಳಂತೆ ಜೈನದರ್ಶನವೂ ಮೋಕ್ಷಕ್ಕೆ ಮಾರ್ಗವೊಂದನ್ನು ವಿಧಿಸುತ್ತದೆ. "ಸಮ್ಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷ ಮಾರ್ಗಃ" ಎಂದು ಉಮಾಸ್ವಾಮಿಯ ಉಕ್ತಿ. ಸರಿಯಾದ ನಂಬಿಕೆ, ಸರಿಯಾದ ಜ್ಞಾನ, ಸರಿಯಾದ ನಡವಳಿಕೆ – ಈ ಮೂರು ಒಟ್ಟಿಗೆ ಸೇರಿಕೊಂಡು ಮೋಕ್ಷದ ಮಾರ್ಗವನ್ನು ರೂಪಿಸುತ್ತವೆ. ಉಮಾಸ್ವಾಮಿಯ ಈ ಸೂತ್ರ ಮೋಕ್ಷಮಾರ್ಗದ ಬಗ್ಗೆ ಇರುವ ಜೈನ ಭಾವನೆಯನ್ನು ಬಹು ಸಂಕ್ಷಿಪ್ತವಾಗಿ ವಿವರಿಸುತ್ತದೆ. ಇದರಲ್ಲಿ ಮೂರು ವಿಶಿಷ್ಟ ಅಂಶಗಳಿವೆ: ಸುಳ್ಳು ನಂಬಿಕೆಗೆ ಪ್ರತಿಯಾಗಿ ಒಳ್ಳೆಯ ದಿಟದ ನಂಬಿಕೆ, ಅನ್ಯಥಾಜ್ಞಾನಕ್ಕೆ ಬದಲಾಗಿ ಯಥಾರ್ಥ ಜ್ಞಾನ, ತಪ್ಪು ನಡತೆಗೆ ಪ್ರತಿಯಾಗಿ ಒಳ್ಳೆಯ ನಡತೆ. ಕೆಲವು ಹಿಂದೂ ದರ್ಶನಗಳು ಇವುಗಳಲ್ಲಿ ಒಂದನ್ನು ಮಾತ್ರ ಮೋಕ್ಷಕ್ಕೆ ಅತ್ಯವಶ್ಯವೆಂದು ಒತ್ತಿಹೇಳುತ್ತವೆ. ಕೆಲವು ನಂಬಿಕೆ ಅಥವಾ ಭಕ್ತಿಯನ್ನು ಪ್ರಧಾನವಾಗಿ ಹೇಳುತ್ತವೆ: ಭಕ್ತಿಯೊಂದಿದ್ದರೆ ಭಕ್ತನಿಗೆ ಮೋಕ್ಷ ಕಟ್ಟಿಟ್ಟ ಗಂಟು. ಕೆಲವು ಜ್ಞಾನದ ಪ್ರಧಾನತೆಯನ್ನು ಸಾರಿಹೇಳುತ್ತವೆ: ವಸ್ತುಗಳ ಸತ್ಯಸ್ವಭಾವವನ್ನು ತಿಳಿದುಕೊಂಡರೆ ಮನುಷ್ಯನು ತನ್ನ ವಿಶುದ್ಧಾತ್ಮದ ಅನುಭವವನ್ನು ಪಡೆಯುವನು. ಈ ಅನುಭವ ಜೀವದ ಕೊನೆಯ ಗುರಿ ಅಥವಾ ಮುಕ್ತಿ ಎಂದು ಭಾವಿಸಿದೆ. ಮತ್ತೆ ಕೆಲವು ಸರಿಯಾದ ನಡತೆಯನ್ನು ಪ್ರಧಾನವಾಗಿ ಗಣಿಸುತ್ತವೆ. ಜೈನಭಾವನೆಯ ಪ್ರಕಾರ ಈ ಮೂರರಲ್ಲಿ ಒಂದೊಂದೂ ಮೋಕ್ಷಮಾರ್ಗದ ಆಂಶಿಕ ವರ್ಣನೆಯೆಂದು ಹೇಳಬೇಕಾಗಿದೆ. ಒಬ್ಬ ವ್ಯಕ್ತಿ ಅವನು ಮೋಕ್ಷಾ ಪೇಕ್ಷಿಯಾಗಿದ್ದರೆ, ಅವನ ಜೀವನದಲ್ಲಿ ಈ ಮೂರೂ ಹುದುವಾಗಿ ಸೇರಿಕೊಳ್ಳಬೇಕು. ಪ್ರತಿಯೊಂದೂ ಅತ್ಯಾವಶ್ಯಕವೆಂಬುದರಲ್ಲಿ ಸಂದೇಹವಿಲ್ಲ. ಆದರೆ ತನ್ನ ಮಟ್ಟಿಗೆ ಅದು ಅಪೂರ್ಣ, ಅಸಮರ್ಪಕ.

ಸಮ್ಯಗ್ದರ್ಶನಜ್ಞಾನ ಚಾರಿತ್ರಗಳ ಅವಶ್ಯಕತೆಯನ್ನು ವಿವರಿಸುವಾಗ, ಸಾಧಾರಣವಾಗಿ ಒಬ್ಬ ರೋಗಿಯ ನಿದರ್ಶನವನ್ನು ಕೊಡುವುದುಂಟು. ಯಾವುದೋ ಬೇನೆಯಿಂದ ನರಳುತ್ತಿರುವ ರೋಗಿ ಗುಣಹೊಂದಲು ಬಯಸುವುದಾದರೆ, ಅವನಿಗೆ ವೈದ್ಯನಲ್ಲಿ ತುಂಬಾ ನಂಬಿಕೆಯಿರಬೇಕು: ಅವನು ಕೊಡುವ ಔಷಧಿಗಳ ಸ್ವಭಾವ ತಿಳಿದಿರಬೇಕು: ವೈದ್ಯನು ಹೇಳಿದಂತೆ ಸ್ವತಃ ಔಷಧ ಸೇವನೆಮಾಡಬೇಕು. ಸಮ್ಯಗ್ದರ್ಶನಜ್ಞಾನ ಚಾರಿತ್ರಗಳನ್ನು ಒಟ್ಟಿಗೆ ವೃದ್ಧಿಪಡಿಸಿಕೊಳ್ಳಬೇಕು. ಜಯವನ್ನು ಗಳಿಸುವ ಅಪೇಕ್ಷೆಯಿಂದ, ಈ ಮೂರನ್ನು ಒಟ್ಟಿಗೆ ರತ್ನತ್ರಯ ಎಂದು ಕರೆದಿದೆ. ಸಮ್ಯಗ್ದರ್ಶನವು ಕುರುಡು ನಂಬಿಕೆಯಲ್ಲ: ಉಪಾಧ್ಯಾಯನಲ್ಲೂ, ಅವನ ಉಪದೇಶದಲ್ಲೂ ಇರುವ ತಾರ್ಕಿಕವೂ, ವಿವೇಚನಾಯುಕ್ತವೂ ಆದ ನಂಬಿಕೆ. ಆದ್ದರಿಂದ ಮೂರುಬಗೆಯ ಮೌಢ್ಯಗಳನ್ನು ನಿರಸನಮಾಡುವುದರಿಂದ ಮಾತ್ರ ಸಮ್ಯಗ್ದರ್ಶನವನ್ನು ಪಡೆಯಬಹುದೆಂದು ಜೈನರು ದೃಢವಾಗಿ ಹೇಳುತ್ತಾರೆ. ಅವು ಯಾವುವೆಂದರೆ: ಲೋಕಮೂಢ: ಸಾಧಾರಣ ಜನರ ನಂಬಿಕೆಗಳು – ನದಿಗಳಲ್ಲಿ ಸ್ನಾನ, ವೃಕ್ಷ ಪ್ರದಕ್ಷಿಣೆ ಮುಂತಾದುವು ಪರಿಶುದ್ಧಿಗೊಳಿಸುವುವೆಂಬ ನಂಬಿಕೆ; ದೇವಮೂಢ ಎಂದರೆ ದೇವತೆಗಳಲ್ಲಿಟ್ಟಿರುವ ನಂಬಿಕೆ – ರೋಗ ಪರಿಹಾರಾರ್ಥವಾಗಿ ದೇವತೆಗಳನ್ನು ಪೂಜಿಸುವುದು ಇತ್ಯಾದಿ: ಪಾಷಂಡಿಮೂಢ ಎಂದರೆ ಧರ್ಮಿಷ್ಠರಂತೆ ನಟನೆ ಮಾಡುವವರನ್ನು ನಂಬುವುದು ಮತ್ತು ಅವರನ್ನು ಧರ್ಮೋಪದೇಶಕರನ್ನಾಗಿ ಸ್ವೀಕರಿಸುವುದು.

1. **ಪಂಚಮಹಾವ್ರತಗಳು:** ಸಮ್ಯಕ್ಚಾರಿತ್ರದ ಪರಿಪೂರ್ಣತೆಗೆ ಅಹಿಂಸಾ, ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ – ಎಂಬ ಐದು ವ್ರತಗಳನ್ನು ಜೈನಧರ್ಮವು ವಿಧಿಸುತ್ತದೆ. ಎಲ್ಲ ಪ್ರಾಣಿಗಳ ಮೇಲಿರುವ ದಯೆಯೂ, ಪ್ರೀತಿಯೂ ಅಹಿಂಸೆಯ ಆಚರಣೆಗೆ ಆಧಾರವಾಗಿದೆ.

2. **ಅಸ್ತೇಯ:** ಅಸ್ತೇಯ ಎಂದರೆ ಕದಿಯದಿರುವುದು: ಇನ್ನೊಬ್ಬನ ಆಸ್ತಿಯನ್ನು ಅವನ ಒಪ್ಪಿಗೆಯಿಲ್ಲದೆ ತೆಗೆದುಕೊಳ್ಳದಿರುವುದು. ಅಸ್ತೇಯ – ಕದಿಯದಿರುವುದು – ಎಂದು ಕರೆದಿದ್ದರೂ ಅದು ಹಲವು ವಿಷಯಗಳನ್ನು ಒಳಗೊಂಡಿದೆ.

3. ಬ್ರಹ್ಮಚರ್ಯವ್ರತವು ಲೈಂಗಿಕಭೋಗ ಲಂಪಟತೆಯನ್ನು ಮುಖ್ಯವಾಗಿ ವರ್ಜಿಸುವುದರಲ್ಲಿದೆ. ಆದರೆ ಕೆಲವು ಜೈನ ನೀತಿವಿದರು ಎಲ್ಲ ತೆರನಾದ ಇಂದ್ರಿಯ ಸಂತೃಪ್ತಿಗಳನ್ನೂ ತ್ಯಜಿಸುವುದೇ ಬ್ರಹ್ಮಚರ್ಯವೆಂದು ಅಭಿಪ್ರಾಯಪಡುತ್ತಾರೆ.

4. ಅಪರಿಗ್ರಹ: ಇದರ ವಾಚ್ಯಾರ್ಥ ಸ್ವೀಕರಿಸದಿರುವುದು. ಆಸ್ತಿ ಮಾಡದಿರುವುದು ಎಂದರೆ ಲಾಭವನ್ನು ವರ್ಜಿಸುವುದು. ಜೈನ ತತ್ವವಿದರ ಪ್ರಕಾರ ಇದು ಎರಡು ಬಗೆ: ಗೃಹಸ್ಥನ ವಿಷಯದಲ್ಲಿ ಇದು ಸ್ವಲ್ಪ ಸಡಿಲವಾಗಿರುತ್ತದೆ: ಮನೆ ಮಠಗಳಿಲ್ಲದ ಸಂನ್ಯಾಸಿಯ ವಿಷಯದಲ್ಲಿ ಬಿಗಿಯಾಗಿರುತ್ತದೆ. ಗೃಹಸ್ಥನ ವಿಷಯದಲ್ಲಿ ಬ್ರಹ್ಮಚರ್ಯವೆಂದರೆ ಏಕಪತ್ನೀ ವ್ರತ, ಸ್ವದಾರ ಸಂತೋಷವೊಂದನ್ನಲ್ಲದೆ ಅವನು ಅನ್ಯ ಲೈಂಗಿಕ ಸಂಬಂಧಗಳನನು ಹೊಂದಿರಕೂಡದು. ಯತಿಯ ವಿಷಯದಲ್ಲಿ ಲೈಂಗಿಕಜೀವನದ ಪೂರ್ಣತ್ಯಾಗವೇ ಬ್ರಹ್ಮಚರ್ಯವೆನಿಸುತ್ತದೆ. ಕಾಯಾ, ವಾಚಾ, ಮನಸಾ ಅವನು ಈ ವ್ರತವನ್ನು ಆಚರಿಸಬೇಕು. (ರಾಧಾಕೃಷ್ಣನ್ 1978 ಪುಟ.149)

ಜೈನರ ಬಗ್ಗೆ ಟೀಕೆ

ಜೈನರು ಅಶುಚಿಯಾಗಿರುವವರು. ಮಲಗ್ರಸ್ತರು, ಹಿಡಿದವರು ಎಂದೂ ಸ್ನಾನಮಾಡಿ ಅರಿಯದವರು ಎಂಬ ಕಡು ಟೀಕೆಗಳು ಇದ್ದವು.ಇತರ ಮತದವರು ಜೈನರನ್ನು ಕಡುವಾಗಿ ಟೀಕಿಸುತ್ತಿದ್ದರು.

ಜೈನಸಿದ್ಧಾಂತ

"ರಾಷ್ಟ್ರಕೂಟರಿಂದ ಹೊಯ್ಸಳರ ಅವನತಿಯವರೆಗಿನ ಅವಧಿಯಲ್ಲಿ ಪ್ರಚಾರದಲ್ಲಿದ್ದ ಧರ್ಮಗಳಲ್ಲಿ ಜೈನ ಧರ್ಮವೂ ಒಂದು. ಜೈನ ಧರ್ಮವು ಕರ್ನಾಟಕಕ್ಕೆ ಯಾವಾಗ ಬಂತು ಹಾಗೂ ಅದು ರಾಷ್ಟ್ರಕೂಟರ ಆಳ್ವಿಕೆಯ ಆರಂಭದವರೆಗೆ ಯಾವ ರೀತಿ ಬೆಳೆದು ಬಂತು ಎನ್ನುವ ವಿಚಾರಗಳತ್ತ ಪ್ರಸ್ತುತ ಅಧ್ಯಯನದಲ್ಲಿ ಚರ್ಚೆ ನಡೆಸಲಾಗಿಲ್ಲ. ಕ್ರಿ.ಶ.೮ರಿಂದ ೧೪ನೆಯ ಶತಮಾನಗಳ ನಡುವಣ ಅವಧಿಯಲ್ಲಿ ಜೈನ ಸಿದ್ಧಾಂತವು ರೂಪುಗೊಂಡ ಬಗೆ, ಅದು ಬೀರಿದ ಪ್ರಭಾವ ಪರಿಣಾಮ, ಸಿಕ್ಕಿರುವ ರಾಜಾಶ್ರಯ ಹಾಗೂ ಅಂದು ಪ್ರಚಾದಲ್ಲಿದ್ದ ಇತರ ಧಾರ್ಮಿಕ ಸಿದ್ಧಾಂತಗಳೊಂದಿಗೆ ಹೊಂದಿದ್ದ ಸಂಬಂಧ ಮುಂತಾದ ವಿಚಾರಗಳ ಕುರಿತು ಇಲ್ಲಿ ಚರ್ಚೆ ನಡೆಸಲಾಗಿದೆ. ಕರ್ನಾಟಕದಲ್ಲಿ ಜೈನ ಧರ್ಮವು ವಿಕಾಸಹೊಂದುವುದಕ್ಕೆ ಭದ್ರ ತಳಹದಿ ಹಾಕಿಕೊಟ್ಟವರು ಗಂಗರು. ಗಂಗ ಅರಸರಾದ ಮಾರಸಿಂಹ ಮತ್ತು ಅವನ ಮಗ ರಾಚಮಲ್ಲರಿಗೆ ಮಂತ್ರಿ, ಸೇನಾಧಿಪತಿಯಾಗಿದ್ದ ಚಾಮುಂಡರಾಯನು ಶ್ರವಣಬೆಳಗೊಳದ ವಿಂಧ್ಯಗಿರಿಯ ಮೇಲೆ ಬಾಹುಬಲಿ ಮೂರ್ತಿಯ್ನು ಸ್ಥಾಪಿಸಿದನು. ಚಾಮುಂಡರಾಯನು 'ಚಾಮುಂಡರಾಯಪುರಾಣ' ಎನ್ನುವ ಕೃತಿಯನ್ನು ರಚಿಸಿ ಜೈನ ಸಾಹಿತ್ಯ ಮತ್ತು ಸಂಸ್ಕೃತಿಗಳೆರಡೂ ಹೆಚ್ಚಿನ ಪ್ರೋತ್ಸಾಹ ಮತ್ತು ಪ್ರಚಾರವನ್ನು ಪಡೆಯುವಂತೆ ಮಾಡಿದನು. ರಾಷ್ಟ್ರಕೂಟರ ಆಳ್ವಿಕೆಯೂ ಕರ್ನಾಟಕದಲ್ಲಿ ಜೈನಧರ್ಮವು ಏಳಿಗೆ ಹೊಂದುವುದಕ್ಕೆ ಸಹಕಾರಿಯಾಯಿತು. ಆದಿಪುರಾಣ, ಪ್ರಶ್ನೋತ್ತರ ರತ್ನಮಾಲಿಕಾ,

ಅಮೋಘವೃತ್ತಿ, ಉತ್ತರಪುರಾಣ ಮುಂತಾದ ಜೈನ ಧರ್ಮವನ್ನು ಕುರಿತ ಗ್ರಂಥಗಳು ಈ ಅವಧಿಯಲ್ಲಿ ರಚನೆಗೊಂಡವು. ಜಿನಸೇನಾಚಾರ್ಯ, ಗುಣಭದ್ರಾಚಾರ್ಯ ಮುಂತಾದ ಜೈನ ಆಚಾರ್ಯರು ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಆಶ್ರಯವನ್ನು ಪಡೆದುಕೊಂಡರು". (ಮೋಹನಕೃಷ್ಣ ರೈ, ೨೦೦೪. ಪು. ೧೭೨)

ಜೋಯಿಸ

ಜೋಯಿಸ ಎನ್ನುವುದು ಒಂದು ವೃತ್ತಿ. ಜ್ಯೋತಿಷ್ಯದ ತದ್ಭವ ರೂಪ. ಶಕುನ ನೋಡುವುದು. ಜಾತಕವನ್ನು ನೋಡಿ ಶುಭಾಶುಭ ಫಲ ಹೇಳುವುದು. ಹುಟ್ಟಿದ ವೇಳೆಯನ್ನು ನೋಡಿ ಭವಿಷ್ಯ ಹೇಳುವುದು. ಪಂಚಾಂಗದ ಮುಖಾಂತರ ಶುಭಯೋಗ; ಶುಭಕರಣಗಳನ್ನು ಹೇಳುವುದು ಜೋಯಿಸನ ಕೆಲಸ.

ಜ್ಯೋತಿರಾಂಗ

ಸಕಲ ದಿಕ್ಮಂಡಲಗಳ ಪ್ರಕಾಶ; ಚಂದ್ರ; ಸೂರ್‍ಯರ ಬೆಳಕು; ಕಿರಣಗಳು ಜ್ಯೋತಿರಾಂಗಗಳೆನಿಸುವುವು.

ಜ್ಯೋತಿಷ್ಯ

ಫಲಿತ ಮತ್ತು ಗಣಿತ ಜ್ಯೋತಿಷ್ಯದ ತೀರ್ಮಾನಗಳು ವಿಭಿನ್ನ ಸಿದ್ಧಾಂತಗಳನ್ನು ಅವಲಂಬಿಸಿರುತ್ತವೆಯೆಂದು ಹೇಳಬಹುದಾಗಿದೆಯಾದರೂ. ಗ್ರಹಣದ ಬಗೆಗಿನ ಲೆಕ್ಕಾಚಾರಗಳು ಇಲ್ಲಿಯೂ ಇಷ್ಟೊಂದು ಪ್ರಾಚೀನವಾಗಿರುವುದನ್ನು ಗಮನಿಸಿದಾಗ ಗಣಿತ ಜ್ಯೋತಿಷದ ಬಗೆಗಿನ ಪ್ರಾರಮಭಿಕ ಕೀರ್ತಿಯು ಈ ನಾಡಿಗೆ ಸಲ್ಲುತ್ತದೆ. . . . . . .

ಭಾರತೀಯ ಜ್ಯೋತಿಷ್ಯ ಶಾಸ್ತ್ರದ 'ಹೋರಾಚಕ್ರಗ್ರೀಕ್ ಭಾಷೆಯ ಹಾರಸ್ಕೋಪ್ ಶಬ್ದದ ರೂಪಾಂತರವಾಗಿದೆ. ಇಂಗ್ಲೀಷ್ ಭಾಷೆಯ 'ಹವರ್' ಎಂಬ ಶಬ್ದ ಗ್ರೀಕ್ ಭಾಷೆಯಲ್ಲಿನ ಸೂರ್ಯಶಬ್ದದ ಪರ್ಯಾಯದಿಂದ ರೂಪಿತವಾಗಿದೆ.

ಜೋಯಿಸ ಎನ್ನುವುದು ಒಂದು ವೃತ್ತಿ. ಜ್ಯೋತಿಷ್ಯದ ತದ್ಭವ ರೂಪ. ಶಕುನ ನೋಡುವುದು. ಜಾತಕವನ್ನು ನೋಡಿ ಶುಭಾಶುಭ ಫಲ ಹೇಳುವುದು. ಹುಟ್ಟಿದ ವೇಳೆಯನ್ನು ನೋಡಿ ಭವಿಷ್ಯ ಹೇಳುವುದು. ಪಂಚಾಂಗದ ಮುಖಾಂತರ ಶುಭಯೋಗ, ಶುಭಕರಣಗಳನ್ನು ಹೇಳುವುದು ಜೋಯಿಸನ ಕೆಲಸ.

ಜ್ಯೋತಿಶ್ಯಾಸ್ತ್ರದಲ್ಲಿ ಭವಿಷ್ಯವನ್ನು ತಿಳಿಯಲು ಹುಟ್ಟಿದ ವೇಳೆ, ತಿಥಿ, ನಕ್ಷತ್ರಗಳನ್ನು ಗಣಿಸುತ್ತಾರೆ. ಮತ್ತು ಇದು ಸಂಖ್ಯಾಶಾಸ್ತ್ರಕ್ಕೂ ಸಂಬಂಧಿಸಿದೆ.
ವಿವರಗಳಿಗೆ ನೋಡಿ: ಭಗವತ್. ಶರಣ ಉಪಾಧ್ಯಾಯ. ೨೦೦೪. ಪು. ೪೬

ಡುಂಡುಚಿ

ಕರ್ನಾಟ-ಮಹಾರಾಷ್ಟ್ರದ ಮೈಲಾರ (ಮಲ್ಲಾರಿ) ಮಾರ್ತಾಂಡ ಭಕ್ತರ ವೇಷ, ಭಾಷೆ, ಕೈಯೊಳಗಿನ ಆಯುಧ, ಡಮರು, ವಾದ್ಯ (ಬೀರನ ಭಕ್ತರ ಈ

ವಾದ್ಯವನ್ನು **'ಡುಂಡುಚಿ'** ಎಂದು ಪ್ರಾಚೀನ ಕವಿಗಳು ಹೆಸರಿಸಿದ್ದಾರೆ). ಡೊಳ್ಳು ಇವರ ವಾದ್ಯ. ಈ ವಾದ್ಯಗಳಲ್ಲಿ 'ಕರಡೆ'ಯ ವಾದ್ಯ ಮುಖ್ಯ ಎಂದು ಶಂಬಾ ಹೇಳುತ್ತಾರೆ. ಈಗಲೂ ಡೊಳ್ಳು ಮೇಳದವರು ಡೊಳ್ಳು ಕುಣಿತದಲ್ಲಿ ಕಂಬಳಿಯನ್ನು ಸುತ್ತಿಕೊಳ್ಳುವುದು ಗಮನಾರ್ಹ.

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಹಾಲುಮತ ದರ್ಶನ ಸಂಪುಟ. 3 ಪುಟ. 61

ಡೊಂಬರು

ಡೊಂಬ ಎಂದರೆ ಡೊಂಬರವನು. ಡೊಂಬ ವಿದ್ಯೆ ಎಂದರೆ–ಯಕ್ಷಿಣಿವಿದ್ಯೆ. ಮಂತ್ರವಿದ್ಯೆ, ಮೋಡಿ, ಮಾಟ, ಗಾರುಡಿವಿದ್ಯೆ, ಕಣ್ಕಟ್ಟು ವಿದ್ಯೆ, ಮ್ಯಾಜಿಕ್ ಇದರ ಸಂವಾದಿ–ಪದಗಳು. ಅಲೆಮಾರಿ ಜನಾಂಗಕ್ಕೆ ಸೇರಿದ ಡೊಂಬರ ಉಲ್ಲೇಖ ಸುಮಾರು ಎಂಟನೆಯ ಶತಮಾನದ ಶಾಸನವೊಂದರಲ್ಲಿ ಬರುತ್ತದೆ. ಪ್ರಾಚೀನ ಶಾಸನ ಮತ್ತು ಗ್ರಂಥಗಳಲ್ಲಿ ಡೊಂಬ ಜನಾಂಗದ ಉಲ್ಲೇಖವಿರುವುದು ಕಂಡು ಬರುತ್ತದೆ. ಅದಕ್ಕೋಸ್ಕರ ಅವರು ಕತ್ತೆಗಳನ್ನು ಸಾಕಿದ್ದರು. ಡೊಂಬರದು ಗಾರುಡಿ ವಿದ್ಯೆ. ಗಾರುಡಿ ವಿದ್ಯೆಯು ಮಾಮೂಲಿ ವಿದ್ಯಾಪ್ರದರ್ಶನವಲ್ಲ. ಅದು ಕಣ್ಕಟ್ಟು ವಿದ್ಯೆ. ಕೃಷ್ಣನ ಕುರಿತು ಹೇಳುವಾಗ ಡೊಂಬ ವಿದ್ಯೆಯನ್ನು ಕಲಿತವನು ಎಂದು ಹೇಳುತ್ತಾರೆ.

ವಿವರಗಳಿಗೆ ನೋಡಿ: ಡಾ. ವಿ.ಎಲ್. ಪಾಟೀಲ್ ೨೦೦೯ ವಡ್ಡಾರಾಧನೆ ಜಾನಪದೀಯ ಅಧ್ಯಯನ ಪುಟ. ೧೭೯–೧೮೦.

ಡ್ರಾಮ್ಮಾ

ವಿಜ್ಞಾನ ಮತ್ತು ತಾಂತ್ರಿಕತೆ ಮೌರ್ಯೋತ್ತರ ಕಾಲದಲ್ಲಿ ಗ್ರೀಕರ ಸಂಪರ್ಕದಿಂದ ಭಾರತೀಯ ಜ್ಯೋತಿಷ್ಯ ಹಾಗೂ ಖಗೋಳ ವಿಜ್ಞಾನಿಗಳಿಗೆ ಬಹಳ ಲಾಭವಾಯಿತು. ಗ್ರಹಗಳ ಚಲನೆಗೆ ಸಂಬಂಧಪಟ್ಟ ಹಲವಾರು ಗ್ರೀಕ್ ಶಬ್ದಗಳನ್ನು ಸಂಸ್ಕೃತ ಗ್ರಂಥಗಳಲ್ಲಿ ಕಾಣಬಹುದು. ಸಂಸ್ಕೃತದಲ್ಲಿ ಜ್ಯೋತಿಷ್ಯವನ್ನು ಹೋರಾ ಶಸ್ತ್ರವೆಂದು ಸಹ ಕರೆಯುತ್ತಾರೆ. ಅದು ಹೋರೋಸ್ಕೋಪ್ ಎಂಬ ಗ್ರೀಕ್ ಶಬ್ದದಿಂದ ರೂಪತಳೆದುದು. ಗ್ರೀಕ್ ಭಾವನೆಗಳಿಂದ ಭಾರತೀಯ ಜ್ಯೋತಿಷ್ಯವು ಪ್ರಭಾವಿತವಾಗಿದೆ. ಕಚ್ಚು ಗುರುತಿನ ನ್ಯಾಣಗಳಿಗೆ ಹೋಲಿಸಿದರೆ ಗ್ರೀಕ್ ನಾಣ್ಯಗಳು ಆಕಾರ, ಮುದ್ರೆ ಎರಡರಲ್ಲೂ ಬಹಳ ಉತ್ತಮವಾಗಿದ್ದುವು. ಗ್ರೀಕ್ ಭಾಷೆಯ ನಾಣ್ಯ ಸೂಚಕ ಶಬ್ದ ಡ್ರಾಕ್ಮಾ ಎಂಬುದು ಭಾರತದಲ್ಲಿ ಡ್ರಾಮ್ಮಾ ಎಂದಾಯಿತು. ಗ್ರೀಕ್ ಅರಸರು ತಮ್ಮ ನಾಣ್ಯಗಳ ಮೇಲೆ ಬ್ರಾಹ್ಮಿಲಿಪಿಯನ್ನೂ, ಭಾರತೀಯ ಸಂಕೇತಗಳನ್ನೂ ಬಳಸತೊಡಗಿದರು. ನಾಯಿಗಳು, ದನಗಳು, ಸಂಬಾರ ವಸ್ತುಗಳು ಮತ್ತು ದವಸದ ವಸ್ತುಗಳನ್ನು ಅವರು ರಫ್ತು ಮಾಡುತ್ತಿದ್ದರು. ಆದರೆ ಅವರು ಭಾರತದಿಂದ ಯಾವುದಾದರೂ ಕುಶಲ್ ಕಲೆ

ಅಥವಾ ಕಸುಬನ್ನು ಕಲಿತರೇ ಎಂಬುದು ಸ್ಪಷ್ಟವಾಗಿ ತಿಳಿದುಬಂದಿಲ್ಲ ಎಂದು ಆರ್.ಎಸ್. ಶರ್ಮ ಅಭಿಪ್ರಾಯ ಪಡುತ್ತಾರೆ.

ವಿವರಗಳಿಗೆ ನೋಡಿ: ಆರ್. ಎಸ್. ಶರ್ಮ ೧೯೯೭. ಪು. ೧೬೪

ತಂತ್ರ

ರೋಗದಿಂದ ಬಳಲುತ್ತಿರುವ ಜನರನ್ನು ಮಂತ್ರ ಮತ್ತು ತಂತ್ರದಿಂದ ಗುಣಪಡಿಸುವ ಕ್ರಮವಿದೆ. ಕೆಲವೊಮ್ಮೆ ಮಂತ್ರವು ಉಪಯೋಗಕ್ಕೆ ಬಂದರೆ ಮತ್ತೆ ಕೆಲವೊಮ್ಮೆ ತಂತ್ರವು ಉಪಯೋಗಕ್ಕೆ ಬರುತ್ತಿತ್ತು. ಔಷಧ ಮತ್ತು ಮಂತ್ರಗಳ ಉಪಯೋಗವಿಲ್ಲದೆ ಚಿಕಿತ್ಸೆಯನ್ನು ತಂತ್ರವೆಂದು ಹೇಳುತ್ತಾರೆ. (ಮಾನಸೋಲ್ಲಾಸ – 1138) ಇದು ಭಾರತೀಯ ತಂತ್ರಜ್ಞಾನಕ್ಕೆ ಸಂಬಂಧಿಸಿದೆ. ಸಾಹಿತ್ಯದಲ್ಲಿ ತಂತ್ರವು ಬೇರೆ ರೀತಿಯಲ್ಲಿ ಪ್ರಯೋಗವಾಗಿದೆ. ನವ್ಯ ಸಾಹಿತ್ಯ ಸಂದರ್ಭದಲ್ಲಿ ತಂತ್ರವು ವಿಶೇಷ ಅರ್ಥದಲ್ಲಿ ಬಳಕೆಯಾಯಿತು.

ತಂತ್ರವೆಂದರೆ ವ್ಯೂಹವೆನ್ನುವ ಅರ್ಥವಿದೆ. ಇದನ್ನು ಟೆಕ್ನಿಕ್ ಅಂತ ಇಂಗ್ಲಿಷಿನಲ್ಲಿ ಕರೆಯುತ್ತಾರೆ. Technique ಅನ್ನುವುದು ಇಂಗ್ಲಿಷಿನಲ್ಲಿ ಪರಿವರ್ತನೆ ಹೊಂದಿ ತಂತ್ರಜ್ಞಾನವೆಂದಾಯಿತು. ಟೆಕ್ನಿಕ್ ಅನ್ನುವುದು ಸಾಹಿತ್ಯ ಮತ್ತು ಚಿತ್ರಕಲೆಯಲ್ಲಿ ಅಭಿವ್ಯಕ್ತಿಯ ಒಂದು ಸಾಧನ. ಫ್ರೆಂಚ್‌ನಲ್ಲಿ 'ಟೆಕ್ನಾಲಜಿಯಾ', ಗ್ರೀಕ್‌ನಲ್ಲಿ 'ಟೆಕ್ನೋಲೋಜಿಯಾ' ಎಂಬ ಪದವಿದೆ. ಇದರರ್ಥ ನಿಯಮ ಬದ್ಧ ನಿರೂಪಣೆ. ಈ ಪದದ ಮೂಲ ವ್ಯುತ್ಪತ್ತಿ Techne ಅಂದರೆ ಕಲೆ ಅಥವಾ ಕರಕುಶಲಕಲೆ. ಹದಿನೆಂಟನೆಯ ಶತಮಾನದಲ್ಲಿ ಯಾಂತ್ರಿಕತೆಯನ್ನು ಉದ್ದೇಶಿಸಿ ತಾಂತ್ರಿಕತೆಯೆಂಬ ಪರಿಕಲ್ಪನೆಯು ಜಾರಿಗೆ ಬಂತು. ಪ್ರಾಯೋಗಿಕ ಕಲೆಯ ಸಂದರ್ಭದಲ್ಲಿ ತಾಂತ್ರಿಕತೆಯು ವಿಶೇಷ ಅರ್ಥವನ್ನು ಒಳಗೊಂಡಿತು. ಆಧುನಿಕ ಯುಗದಲ್ಲಿ ತಾಂತ್ರಿಕತೆಯು ಭಿನ್ನ ಅರ್ಥವನ್ನು ಒಳಗೊಂಡಿತು. ವಿಜ್ಞಾನಿಗಳು ಜ್ಞಾನವನ್ನು ವಿಜ್ಞಾನವೆಂದು ಕರೆದರು. ಜ್ಞಾನದ ಮೂಲಕ ಅವರು ಅನ್ವಯಿಸಿಕೊಂಡ ಕ್ರಮವು ತಾಂತ್ರಿಕತೆಯೆಂದು ಪರಿಗಣಿಸಲ್ಪಟ್ಟಿತು. ಇದು ಹತ್ತೊಂಬತ್ತನೆಯ ಶತಮಾನದಲ್ಲಿ ಹೆಚ್ಚು ಚಾಲ್ತಿಗೆ ಬಂತು. ಕೈಗಾರೀಕರಣದ ಸಂದರ್ಭದಲ್ಲಿಯೂ ತಂತ್ರಜ್ಞಾನವೆಂದರೆ ವಿಶೇಷ ರೀತಿಯ ಜ್ಞಾನರೂಪವೆಂದು ಪರಿಗಣಿಸಲ್ಪಟ್ಟಿತು. ಇದರಿಂದಾಗಿ ತಂತ್ರಜ್ಞಾನವೆಂದರೆ ವಿಶೇಷ ರೀತಿಯ ಆನ್ವಯಿಕ ಕ್ರಮವೆಂಬ ಅರ್ಥವು ಸ್ಥಾಪಿಸಲ್ಪಟ್ಟಿದೆ. ಈಗ ತಾಂತ್ರಿಕತೆಯೆನ್ನುವುದು ತುಂಬಾ ಪ್ರಚಲಿತವಿರುವ ಪದವಾಗಿದೆ.

ಇದರ ಜೊತೆಗೆ ಸಾಹಿತ್ಯ ಸಂದರ್ಭದಲ್ಲಿ ಪ್ರಚಲಿತಕ್ಕೆ ಬಂದ ಎರಡು ಪರಿಭಾಷೆಗಳನ್ನು ನಾವಿಲ್ಲಿ ತೆಗೆದುಕೊಳ್ಳಬಹುದು. ಒಂದು ತಂತ್ರ, ಇನ್ನೊಂದು

ಸಂಕೇತ. ತಂತ್ರ ಎನ್ನುವುದು ಭಾರತೀಯ ಸಂದರ್ಭದಲ್ಲಿ ತಾಂತ್ರಿಕ ವಿದ್ಯೆಯನ್ನೂ ಸೂಚಿಸುವ ರೀತಿಯಲ್ಲಿದೆ. ಆದರೆ ನವ್ಯ ಸಂದರ್ಭದಲ್ಲಿ ತಂತ್ರ ಎನ್ನುವ ಪದವು ಬಂದಿರುವುದು ಪಶ್ಚಿಮದ ಎರವಲು ಪರಿಭಾಷೆಯಾಗಿ. ತಾಂತ್ರಿಕತೆಗೆ ಕೈಗಾರಿಕೀಕರಣದ ಸಂಸ್ಕೃತಿಯಲ್ಲಿ ವಿಶೇಷ ಅರ್ಥವಿದೆ. ಇದು ನೇರವಾಗಿ ತತ್ವಜ್ಞಾನಕ್ಕೆ ಸಂಬಂಧಿಸಿದ ಪರಿಭಾಷೆಯಲ್ಲ. ಬಂಡವಾಳಶಾಹಿ ವ್ಯವಸ್ಥೆಗೆ ಸಂಬಂಧಿಸಿದ ಪರಿಭಾಷೆ. ಅದನ್ನು ಯಾವುದೇ ಎಗ್ಗಿಲ್ಲದೆ ಸ್ವೀಕರಿಸಿದ ನವ್ಯಸಾಹಿತಿಗಳು ಮತ್ತೊಂದು ಕಡೆಯಿಂದ 'ಸಂಕೇತ'ವೆಂಬ ಪದವನ್ನೂ ಬಳಸಿಕೊಂಡರು. ಸಂಕೇತ ಕ್ರಿಶ್ಚಿಯನ್ ಧರ್ಮದ ಅರ್ಥವಂತಿಕೆಯನ್ನು ಒಳಗೊಂಡಿದೆ. 'Symbol' ಎನ್ನುವುದು ಕ್ರಿಶ್ಚಿಯನ್ ಧರ್ಮದ ಪ್ರಕಾರ ಶಿಲುಬೆ ಎನ್ನುವ ಅರ್ಥವನ್ನು ಕೊಡುತ್ತದೆ. ಈಗ ನಾವೆಲ್ಲಾ ಬಳಸುತ್ತಿರುವ 'ಸೆಮಿನಾರ್' ಎಂಬ ಪದವೂ ಅಷ್ಟೆ. ಇದು 'ಸೆಮಿನರಿ' ಎಂಬ ಪದದಿಂದ ಬಂದದ್ದು. ಸೆಮಿನರಿ ಎಂಬುದು ಚರ್ಚ್‌ನ ಪೂಜಾರಿಯಾಗುವವರಿಗೆ ತರಬೇತಿ ಕೊಡುವುದು ಎನ್ನುವ ಅರ್ಥವೂ ಇದೆ. ಈ ಎಲ್ಲಾ ಕಾರಣದಿಂದ ಸಾಹಿತ್ಯದ ಪ್ರಶ್ನೆಯನ್ನು ತಾತ್ವಿಕ ನಿಲುವುಗಳಿಂದ ಬೇರ್ಪಡಿಸುವ ಪ್ರಯತ್ನವೂ ಆಗಿದೆ. ಒಂದು ರೀತಿಯ ಸ್ವಕಪೋಲ ಕಲ್ಪಕತೆಯಾಗಿದೆ.

ಟೆಕ್ನಾಲಜಿಯೆಂದರೆ ತಂತ್ರಜ್ಞಾನ. ಸಾಹಿತ್ಯದಲ್ಲಿ ತಂತ್ರವೆಂದರೆ ನಿರೂಪಣೆಗೆ ಸಂಬಂಧಿಸಿದ್ದು. ನಿರೂಪಣೆಯ ಸಂದರ್ಭದಲ್ಲಿ ಲೇಖಕ ಯಾವ ವಿಧಾನವನ್ನು ಅನುಸರಿಸುತ್ತಾನೋ ಅದನ್ನು ನಿರೂಪಣಾ ತಂತ್ರ ಎಂದು ಕರೆಯುತ್ತಾರೆ.

ವಿವರಗಳಿಗೆ ನೋಡಿ: Raymond Williams 1983 keywords P. 315
ಜಿ.ಎಚ್. ನಾಯಕ ೨೦೦೬ ಕೃತಿಸಾಕ್ಷಿ

ತಟ್ಟಿ ಮೆಡಬು

ತಟ್ಟಿಮೆಡಬು ಅಂದರೆ ತಡಿಕೆ ಹೆಣಿ ತಡಿಕೆಹೆಣೆ ಎನ್ನುವುದು ವಿಶಿಷ್ಟ ಪ್ರಯೋಗ. ತಡಿಕೆಹೆಣೆಯುವ ಪ್ರಕ್ರಿಯೆಯನ್ನು ಸೂಚಿಸುತ್ತದೆಯೆಂಬುದು ಗಮನಾರ್ಹ.

ತಸ್ಕರವಿದ್ಯೆ

ಜೃಂಬಿನಿ (ಪ್ರತ್ಯಕ್ಷವಾಗುವುದು ಮತ್ತು ಮಾಯವಾಗುವುದು, ಸ್ತಂಭಿನಿ (ಗತಿನಿರೋಧ) ಮೋಹಿನಿ (ಮೂರ್ಛೆಉಂಟು ಮಾಡುವುದು) ಸರ್ಷಪಿ (ವಿಷಪ್ರಯೋಗ) ತಾಳೋದ್ಘಾಟಿನಿ ವಿದ್ಯಾ (ಬೀಗ ತೆಗೆಯುವ ವಿದ್ಯೆ) ಮಂತ್ರಪ್ರಯೋಗ, ಚೂರ್ಣ (ಪುಡಿ ಎರೆಚುವುದು) ಯೋಗ (ವಂಚನೆ, ಇಂದ್ರಜಾಲ, ಗುಪ್ತಚಾರತ್ವ ಮುಂತಾದವು) ಘುಟಿಕಾ–ಗುಳಿಗೆ, ಅಂಜನ (ಕಣ್ಣಿನ ಹಚ್ಚುವ ಲೇಪನ)ಇವುಗಳು ತಸ್ಕರವಿದ್ಯೆಯ ಗುಣಗಳು.

ತಾಂಡವ ವಿಧಿ

ಭರತನಾಟ್ಯದಲ್ಲಿ ಒಂದು ಪ್ರಕಾರ ವಾಸ್ತವವಾಗಿ ತಾಂಡವ ನೃತ್ಯಕ್ಕೆ ಒಂದು ಪೌರಾಣಿಕ ಹಿನ್ನೆಲೆಯಿದೆ. ದಾಕ್ಷಾಯಿಣಿಯು ದಕ್ಷನ ಯಜ್ಞದಲ್ಲಿ ಬಿದ್ದು ಸತ್ತು ಹೋದುದನ್ನು ಕೇಳಿದ ಶಿವ ಸಿಟ್ಟಿಗೇರುತ್ತಾನೆ.. ಸಿಟ್ಟಿನಲ್ಲಿಯೇ ಡಮರುಗವನ್ನು ಬಾರಿಸಿಕೊಂಡು ಭಯಂಕರ ನೃತ್ಯವನ್ನು ಮಾಡುತ್ತಾನೆ. ಈ ರೀತಿಯ ನೃತ್ಯ ಪ್ರಕಾರವನ್ನು ತಾಂಡವನೃತ್ಯವೆಂದು ಕರೆಯುತ್ತಾರೆ. ಈ ನೃತ್ಯ ಪದ್ಧತಿಯಲ್ಲಿ ರೌದ್ರವೇ ಸ್ಥಾಯಿ. ಹಾಗಾಗಿ ಆಂಗಿಕ ಅಭಿನಯಗಳು ಕೂಡಾ ರೂಕ್ಷರೀತಿಯಲ್ಲಿಯೇ. ಮತ್ತು ಏರು ಸ್ಥಾಯಿಯಲ್ಲಿಯೇ ಇರುತ್ತದೆ. ಆಂಗಿಕ ಅಭಿನಯಗಳು ಕೂಡಾ ಸೂಕ್ಷ್ಮವಾಗಿರುವುದಿಲ್ಲ ಎಂಬುದನ್ನು ಗಮನಿಸಬೇಕು. ತಂಡುವಿನಿಂದ ಹುಟ್ಟಿದುದು ತಾಂಡವ ಎಂದು ಸಿಂಹಭೂಪಾಲನು ಹೇಳುತ್ತಾನೆ. (1,56,58) ಒಂದು ರೀತಿಯಿಂದ ತಾಂಡವ ವಿಧಿಯಲ್ಲಿ ರೌದ್ರವೇ ಮುಖ್ಯ. ಆದುದರಿಂದ ತಾಂಡವ ನೃತ್ಯದ ಹೆಜ್ಜೆಗಾರಿಕೆಯು ಕೂಡಾ ಲಾಸ್ಯಕ್ಕಿಂತ ಭಿನ್ನವಾಗಿದೆ.

ತಾಂತ್ರಿಕ ಸಂಪ್ರದಾಯಗಳು

"ತಾಂತ್ರಿಕ ಸಂಪ್ರದಾಯಗಳ ಸಾಮಾನ್ಯ ಪ್ರವೃತ್ತಿಗಳನ್ನು ಧರ್ಮವೀರ ಭಾರತಿ ಅವರು ಈ ರೀತಿ ಗುರುತಿಸಿದ್ದಾರೆ. ಪ್ರತಿಯೊಂದು ಸಂಪ್ರದಾಯದ ದೇವತೆಗಳು, ಮಂತ್ರ ಹಾಗೂ ತತ್ವದರ್ಶನದ ಶಬ್ದಾವಳಿ ಬೇರೆಯಿದ್ದರೂ ಸಾಧನಾಪದ್ಧತಿ ಸಮಾನವಾಗಿತ್ತು. ಹೊಸ ಸಾಧನಾಪದ್ಧತಿಗಳನ್ನು ಒಂದು ಮತ್ತೊಂದರಿಂದ ಮುಕ್ತ ಹೃದಯದಿಂದ ಸ್ವೀಕರಿಸುತ್ತಿತ್ತು. ತತ್ವದರ್ಶನ ಗೌಣವಾಗಿತ್ತು. ಸಾಧನೆ, ಕ್ರಿಯೆ ಮತ್ತು ಚರ್ಯೆಗಳು ಪ್ರಮುಖವಾಗಿದ್ದವು. ಸಾಧನೆಯಲ್ಲಿ ಗುರುವಿಗೆ ಅತ್ಯಂತ ಮಹತ್ವವಿತ್ತು ಮತ್ತು ಈ ಸಾಧನೆ ಶಿವಶಕ್ತಿ, ಅಂಗ-ಲಿಂಗ, ರಸ-ಅಭ್ರಕ, ಪ್ರಜ್ಞೆ ಮತ್ತು ಉಪಾಯ ಮೊದಲಾದ ಯಾವುದೇ ಎರಡು ಪುರುಷ ಹಾಗೂ ಸ್ತ್ರೀ ಪ್ರತೀಕಗಳ ಅದ್ವಯ ಸಾಧನೆಯಾಗಿತ್ತು. ಇಲ್ಲಿ ದ್ವೈತದ ಭಾವವಿಲ್ಲ. ಸಾಧಾರಣವಾಗಿ ಎಲ್ಲ ಸಂಪ್ರದಾಯಗಳಲ್ಲೂ ಈ ಸಾಧನೆಯ ಮಿಥುನ ಪರವಾದ ವ್ಯಾಖ್ಯಾನ ದೊರೆಯುತ್ತದೆ. ಅದರ ಜೊತೆಗೆ ಗುಹ್ಯಾಚಾರಗಳ ವಿಧಾನವೂ ಕಂಡು ಬರುತ್ತದೆ. ಮೈಥುನವು ಸಾಧನೆಯ ಫಲವಾಗಿದೆ. ಈ ಸಾಧನೆಯಲ್ಲಿ ಜಾತಿ-ಪಂಥ, ವರ್ಣಭೇದಗಳಿರಲಿಲ್ಲ. ಸಾಧನೆಗೂ ಜಾತಿಗೂ ಸಂಬಂಧವಿಲ್ಲದಿರುವುದು ಗಮನಾರ್ಹ. ಈ ಸಾಧನೆಯಲ್ಲಿ ಶಕ್ತಿ ಪ್ರಧಾನವಾದುದರಿಂದ ಸ್ತ್ರೀಗೆ ವಿಶೇಷ ಮಹತ್ವವಿತ್ತುವೆಂಬುದು ಗಮನಾರ್ಹ. ಬ್ರಹ್ಮಾಂಡದಲ್ಲಿರುವ ಶಿವ ಶಕ್ತಿಗಳು ಕುಂಡಲಿನೀ ಮತ್ತು ಸಹಸ್ರಾರ ಅಥವಾ ಕಮಲ ಕುಲಿಶದ ರೂಪದಲ್ಲಿದ್ದವು. ಆದ್ದರಿಂದ ಯೋಗ ಸಾಧನೆಯ ವಿಧಾನವೂ ಇತ್ತು. ದೇಹ ಅತ್ಯಂತ ಮಹತ್ವಪೂರ್ಣವೆಂದು ಭಾವಿಸಲಾಗಿತ್ತು. ಮಿಥುನ ಸಾದನೆ ಹಾಗೂ ಯೋಗದಿಂದಾಗಿ ನಿರೂಪಣಾ ಶೈಲಿ ಪ್ರತೀಕಾತ್ಮಕವಾಗಿದೆ. ಪ್ರತೀಕಾದ ಸಾಧನೆಯು ಮುಖ್ಯ. ಜಾನಪದ ದೇವತೆಗಳ ಮತ್ತು

ಅವರ ಪೂಜೆಯ ಅಸಂಸ್ಕೃತ ವಿಧಾನಗಳ ಬಗೆಗೆ ಗೌರವ ಮತ್ತು ಅವರು ವೈದಿಕ ದೇವತೆಗಳಿಗಿಂತಲೂ ಹಿರಿಯರೆಂದು ಸಿದ್ಧಪಡಿಸಲು ಪ್ರಯತ್ನ ನಡೆಯುತ್ತಿತ್ತು. ಮರಣಾನಂತರ ದೊರೆಯುವ ಮುಕ್ತಿ ಅಥವಾ ನಿರ್ವಾಣಕ್ಕಿಂತ ಸಾಧನೆಯಿಂದ ಬದುಕಿರುವಾಗಲೇ ವಿವಿಧ ರೀತಿಯ ಸಿದ್ಧಿಗಳನ್ನು ಪಡೆದು ಸಿದ್ಧನಾಗುವುದು ಇವರ ಕಾಮ್ಯ, ರಸೇಶ್ವರ, ಕಾಪಾಲಿಕ, ಶಾಕ್ತ ಮತ್ತು ವಜ್ರಯಾನವೇ ಮೊದಲಾದವುಗಳಲ್ಲಿ ಸಿದ್ಧರಿಗೆ ಮನ್ನಣೆಯಿದೆ."(ಮೋಹನ ಕೃಷ್ಣ ರೈ) ಇದರ ಕುರಿತು ಅಲ್ಲಮನ ವಚನದಲ್ಲಿರುವ ಪ್ರತಿಕ್ರಿಯೆಯು ಗಮನಾರ್ಹ–

"ಹಠಯೋಗಲಂಬಿಕೆಯೆಂದು,ಅಕುಂಚನವೆಂದು,
ವಜ್ರಿ ಅಮರಿಯ ಕಲ್ಪವೆಂದು
ಮಲಮೂತ್ರಗಳಂ ಸೇವಿಸುತ,
ಇದು ಪೂರ್ವನವನಾಥ ಸಿದ್ಧರ ಮತ್ತೋಕ್ತವೆಂದು
ಕಾಪಾಲಿಕಾಚರಣೆಯನಾಚರಿಸುವರಲ್ಲ ಶರಣರು"

ಇದು ವಚನಕಾರರ ಪ್ರತಿಕ್ರಿಯೆಯೂ ಹೌದು.

ಭಾರತದಲ್ಲಿ ತಾಂತ್ರಿಕ ಸಂಪ್ರದಾಯವನ್ನು ಗುಪ್ತವೆಂದೂ ಕರೆಯಲಾಗಿದೆ. ಅದರ ಬಹುತೇಕ ಚಟುವಟಿಕೆಯು ರಾತ್ರಿಗೆ ಸಂಬಂಧಪಟ್ಟಿರುವುದು ಇಲ್ಲಿ ಉಲ್ಲೇಖನೀಯ. ಈ ಸಂಪ್ರದಾಯವನ್ನು ವಾಮಾಚಾರವೆಂದೂ ಹೇಳಿರುವುದು ಕೂಡಾ ಗಮನಾರ್ಹ. ಕೆಲವರು ಇದನ್ನು ಶಕ್ತಿ ಪೂಜೆಯೆಂದೂ ಕರೆದಿದ್ದಾರೆ. ಇದರದ್ದು ನಾರಿ ಪೂಜೆಯೆಂದೂ, ಇದು ದ್ರಾವಿಡಮೂಲದ್ದೂ ಎಂದೂ ಹೇಳುತ್ತಾರೆ. ವೇದದಲ್ಲಿ ಎಲ್ಲಿಯೂ ನಾರಿಪೂಜೆಯು ಇಲ್ಲವೆಂದೂ ಹೇಳುತ್ತಾರೆ. ಪಂಚ "ಮ"ಕಾರದ ಆರಾಧನೆಯು (ಮದ್ಯ, ಮಾಂಸ, ಮತ್ಸ್ಯ, ಮುದ್ರ, ಮೈಥುನ) ವೀರ ತಾಂತ್ರಿಕ ಪೂಜೆಯೂ ಹೌದು. ತಾಂತ್ರಿಕ ವೀರ ಭಾವಪೂಜೆಯನ್ನು ವಾಮಾಚಾರವೆಂದೇ ಹೇಳುತ್ತಾರೆ.ಗರ್ಭಾದಾನದಲ್ಲಿ ಬರುವ "ಗರ್ಭಂ ದೇಹಿ ಸಿನಿವಾಲಿ" ಎನ್ನುವ ಮಂತ್ರವು ನಾರಿ ಪೂಜೆಯನ್ನು ಸೂಚಿಸುತ್ತದೆ. ವಾಮವೆಂದರೆ ಬರೀ ಎಡವೆಂಬ ಅರ್ಥ ಮಾತ್ರವೇ ಇಲ್ಲ–ವಿಪರೀತವೆಂಬ ಅರ್ಥವೂ ಇದೆ. ಶಕ್ತಿದೇವತೆಯೆಂದರೆ ಸ್ತ್ರೀ. ಮಾತೃ ಕೂಡಾ ಹೌದು. ತಾಂತ್ರಿಕ ಸಂಪ್ರದಾಯವು ಮೂಲತಃ ವೈದಿಕ ಸಂಪ್ರದಾಯವಲ್ಲ. ಇದರಲ್ಲಿ ನಾರಿಯು ಜಡವಲ್ಲ. ಈ ಸಂಪ್ರದಾಯವನ್ನು ಕಪಿಲಾದಿ ಋಷಿಗಳು ಪ್ರಚುರ ಪಡಿಸಿದರು ಎಂದೂ ಹೇಳುತ್ತಾರೆ. ಇದು ಶಕ್ತಿ ತತ್ವ, ಏಕಕಾಲದಲ್ಲಿಯೇ ಸೃಷ್ಟಿ ಮತ್ತು ಪ್ರಳಯವನ್ನು ಸೂಚಿಸುತ್ತದೆ. ಇದನ್ನು ಗುಪ್ತವೆಂದು ಕರೆಯಲು ಕಾರಣವೂ ಇದೆ– "ಗುಪ್ತದಿಂದ ಗುಪ್ತಕ್ಕೆ ಹೋಗುವ ಶಕ್ತಿಯೇ ಏಕಶಕ್ತಿ." ಶ್ರೀ ರಾಮಕೃಷ್ಣ ಪರಮಹಂಸರು ಶಕ್ತಿ ತತ್ವವನ್ನು ನಂಬಿದ್ದರು. ಶಕ್ತಿ ಪೂಜೆಯ ಮತ್ತೊಂದು ರೂಪವೇ ವಿವಿಧ ದೇವಿ ಪೂಜೆಗಳು. ಕುಂಡಲಿನಿ ಶಕ್ತಿಯೂ ಗುಪ್ತವಾಗಿ ಜಾಗರಿತವಾಗಿ ತಲೆಯಲ್ಲಿರುವ

ಸಹಸ್ರಾರಕ್ಕೆ ಹೋಗುವಾಗ ಮೂಲಾಧಾರದಿಂದ ಆರಂಭವಾಗಿ ಪ್ರತಿ ಚಕ್ರದಲ್ಲಿ ಸುಳಿದು ವಾಮಾವರ್ತದ ಮೂಲಕ ಪರಿಭ್ರಮಣವಾಗಿ ಸಹಸ್ರಾರಕ್ಕೆ ಸೇರಿ ಸಮಾಧಿಯ ಕಡೆಗೆ ಹೋಗುವುದರಿಂದ ಇದಕ್ಕೆ ವಾಮಾಚಾರವೆಂದು ಬಂತು ಎಂದು ಹೇಳುತ್ತಾರೆ.

ವಿವರಗಳಿಗೆ ನೋಡಿ: ಮೋಹನಕೃಷ್ಣ ರೈ 2004 ಪ್ರಭುತ್ವ ಮತ್ತು ಜನತೆ ಪುಟ. 183.

ತಾಂತ್ರಿಕ ದರ್ಶನ

ತಾಂತ್ರಿಕ ದರ್ಶನ (ವಜ್ರಯಾನ, ಮಂತ್ರಯಾನ ಮೊದಲಾದವು) ವಿಜ್ಞಾನವಾದವನ್ನು ಹಿಂದಕ್ಕೆ ತಳ್ಳಿತು. ಶೂನ್ಯತೆಯ ಆಧಾರವನ್ನು ಹೊಂದಿದ ಮಂತ್ರ, ತಂತ್ರ ಮತ್ತು ಅರ್ಜನೆಗಳ ವಿಶಿಷ್ಟ ಸಮುಚ್ಚಯವೇ ತಾಂತ್ರಿಕ ದರ್ಶನ. ಅದು ಮತವೂ ಹೌದು ದರ್ಶನವೂ ಹೌದು. ಇಂಡಿಯಾದೇಶದಿಂದ ಅದು ಮರೆಯಾದಾಗ (ಹನ್ನೊಂದರಿಂದ ಹನ್ನೆರಡನೆಯ ಶತಮಾನ) ಟಿಬೆಟ್ಟಿನಲ್ಲಿ ವಿಶೇಷವಾಗಿ ಪ್ರಚಾರಮಾಡಲ್ಪಟ್ಟದ್ದು ಬೌದ್ಧಧರ್ಮದ ಈ ರೂಪವೇ. ಬೌದ್ಧ ಧರ್ಮದ ಹಲ-ಕೆಲವು ಪ್ರಾಚೀನ ಶಾಖೆಗಳು ಇಂದಿಗೂ ಚೀನಾ ಮತ್ತು ಜಪಾನ್ ದೇಶಗಳಲ್ಲಿ ಮುನ್ನಡೆಯುತ್ತಿದೆ.ಈ ತತ್ವವು ಬೇರೆಬೇರೆ ರೀತಿಯಲ್ಲಿಯೂ ಚಾಲ್ತಿಗೆ ಬಂದಿದೆ.

ತಾಂತ್ರಿಕ ದರ್ಶನ ಬೌದ್ಧರಲ್ಲಿ ವಜ್ರಯಾನ ಮತ್ತು ಮಂತ್ರಯಾನದ ಮೂಲಕ ಮುಂದುವರಿಯಿತು. ರಾಧಾಕೃಷ್ಣನ್ ಹೇಳುವಂತೆ ಅದು ಅನಂತರ ತಾಂತ್ರಿಕ ದರ್ಶನವಾಯಿತು. ತಾಂತ್ರಿಕ ದರ್ಶನವು ಹೆಸರೇ ಸೂಚಿಸುವಂತೆ ತಾಂತ್ರಿಕತೆಯೇ ಇದರಲ್ಲಿ ಮುಖ್ಯವಾಯಿತು. ನಮ್ಮಲ್ಲಿ ತಂತ್ರ ಮತ್ತು ಮಂತ್ರ ಈ ಎರಡರ ವರ್ಗೀಕರಣವು ಬಹಳಮಟ್ಟಿಗೆ ಅವಶ್ಯವಾಯಿತು. ತಂತ್ರದಲ್ಲಿ – ತಂತ್ರವೇ ಮುಖ್ಯ. ತಂತ್ರ ಆಚರಣೆಗೆ ಸಂಬಂಧಿಸಿರುವುದು ಮಂತ್ರವು ತಂತ್ರದ ಪರಿಕಲ್ಪನೆಗಿಂತ ಭಿನ್ನ.

ವಿವರಗಳಿಗೆ ನೋಡಿ: ಡಾ. ಸರ್ವಪಲ್ಲಿ ರಾಧಾಕೃಷ್ಣನ್ 1970 ತತ್ವಶಾಸ್ತ್ರ: ಪ್ರಾಚ್ಯ ಮತ್ತು ಪಾಶ್ಚಾತ್ಯ ಪುಟ. 195.

ತಾಂಬೂಲ

ಹಳೆಗನ್ನಡದಲ್ಲಿ ತಂಬುಲವೆಂಬ ಪ್ರಯೋಗವಿದೆ. ತಾಂಬೂಲ(ವೀಳ್ಯ)ವೆಂದರ್ಥ. ತಾಂಬೂಲವೆಂದರೆ ಶಿಷ್ಟಚಾರದ ಪ್ರಶ್ನೆ. ವೀಳ್ಯೆದೆಲೆ, ಅಡಕೆ, ಬಾಳೆಹಣ್ಣು ಮತ್ತು ತೆಂಗಿನಕಾಯಿಯು ಎಲ್ಲಾ ಮಂಗಲಕಾರ್ಯಗಳಲ್ಲಿಯೂ ಬಳಕೆಯಾಗುತ್ತಿತ್ತು. ಪೂಜೆಯಲ್ಲಿ, ವಿವಾಹ ಸಂದರ್ಭಗಳಲ್ಲಿ ತಾಂಬೂಲವು ಪ್ರಧಾನ ಪಾತ್ರವಹಿಸುತ್ತದೆ. ವಧೂವರರ ತಂದೆ-ತಾಯಂದಿರು ತಾಂಬೂಲ ಹಂಚಿಕೊಂಡರೆ ನಿಶ್ಚಿತಾರ್ಥವಾಯಿತು ಎಂದರ್ಥ. ವೀಳ್ಯೆದೆಲೆ, ಅಡಕೆ; ಬಾಳೇಹಣ್ಣು; ತೆಂಗಿನಕಾಯಿ, ಹಣ ಇವುಗಳನ್ನು ಪೂರ್ಣವಾಗಿ ಪುರೋಹಿತರಿಗೆ ನೀಡಿದರೆ ಅವರು ಸಂತೃಪ್ತರಾದರೆಂದು ಸಕಲ ಪುಣ್ಯಪ್ರಾಪ್ತಿಯು ಗೃಹಸ್ಥನಿಗೆ ದೊರಕಿತೆಂದೂ ಅರ್ಥ.

ಒಪ್ಪಂದವನ್ನು ಮಾಡಿಕೊಳ್ಳಲು ವೀಳ್ಯದೆಲೆಯನ್ನು ಉಪಯೋಗಿಸುವ ಕ್ರಮ ಜನಪದರಲ್ಲಿಯೂ ಇದೆ. ಮದುವೆಯ ಸಂದರ್ಭದಲ್ಲಿಯೂ 'ವೀಳ್ಯ'ವನ್ನು ವಿನಿಮಯ ಮಾಡುವುದರ ಮೂಲಕ ಒಪ್ಪಿಗೆಯನ್ನು ಸೂಚಿಸುತ್ತಾರೆ. ರಣವೀಳ್ಯವೆಂದರೆ ಯುದ್ಧಕ್ಕೆ ಆಹ್ವಾನ. ಭೂತಾರಾಧನೆಯಲ್ಲಿ ಪಾತ್ರಿಗೆ "ಬೂಳ್ಯ" ಕೊಡುವ ಪದ್ಧತಿಯಿದೆ.

ವಿವರಗಳಿಗೆ ನೋಡಿ: ಚಲುವೇಗೌಡ. ತ.ಜಿ. 1946 ಕೆಲವು ಜನಪದ ಸಂಪ್ರದಾಯಗಳು ಪುಟ. 36.

ತಾಯ್ತನ

ತಂದೆಗಿಂತ ತಾಯಿಗೆ ಸಾವಿರ ಪಾಲು ಹೆಚ್ಚು ಗೌರವ ತೋರಬೇಕು. *(ಮನುಸ್ಮೃತಿ. ೨-೧೪೫)*

ತಾರಾಭಗವತಿ

ಸೋಮೇಶ್ವರನ ಮಹಾಮಂತ್ರಿ ಸುಂಕಾಧಿಕಾರಿಯಾದ ದಂಡನಾಯಕ ರೂಪಭಟ್ಟಯ್ಯನು ಬಳ್ಳಿಗಾವಿಯ ಜಯಂತಿ ಬೌದ್ಧವಿಹಾರವನ್ನು ಕಟ್ಟಿಸಿ, ಅದಕ್ಕಾಗಿ ಮತ್ತು ತಾರಾಭಗವತಿ, ಕೇಶವ, ಲೋಕೇಶ್ವರ ಮತ್ತು ಬುದ್ಧದೇವ ಇನ್ನಿತರ ಆವರಣ ದೇವತೆಗಳ ಪೂಜೆಗಾಗಿ ಮತ್ತು ಯೋಗಿಣಿ, ಕುಸಲೀ (ಇವರು ಹೆಂಗಸರು) ಸನ್ಯಾಸಿಗಳ ಆಹಾರಕ್ಕಾಗಿ ದತ್ತಿಯನ್ನು ಬಿಟ್ಟಿರುವನು (ಕಾಲ 1065) (ಕೃಷ್ಣರಾವ್ ಕಪಟರಾಳ 1970 ಪುಟ. 27) ಈ ತಾರಾಭಗವತಿಯ ಪ್ರತಿಮೆಯನ್ನು ನಾಡಪೆರ್ಗಡೆಯಾದ ಹಂಪಸೆಟ್ಟಿಯ ಹೆಂಡತಿಯಾದ ನಾಗಿಯಕ್ಕ ಎಂಬವಳು ಕ್ರಿ.ಶ. 1067ನೆಯ ವರ್ಷದಲ್ಲಿ ಮಾಡಿಸಿದಳೆಂದು ಶಿಕಾರಿಪುರದ 179ನೆಯ ಶಾಸನದಿಂದ ತಿಳಿದು ಬರುವುದು (ಅದೇ ಪುಟ. 27).

ತಿಲಕಗಳು

ನಾಗವರ್ಮನು 'ಅಭಿಧಾನರತ್ನಮಾಲಾ ಕರ್ಣಾಟಕ ಟೀಕೆ'ಯಲ್ಲಿ ತಿಲಕದ ಕುರಿತಂತೆ ಹೀಗೆ ಹೇಳುತ್ತಾನೆ. "ತಿಳಕಂ, ತಮಾಳಪತ್ರಂ, ಚಿತ್ರಕಂ, ವಿಶೇಷಕಂ, ಪುಂಡ್ರಂ, ಲಲಾಟಿಕಾ – ಈ ಆರು ಬೊಟ್ಟು (378), ಕುಂಕುಮಂ, ಘುಸೃಣಂ, ವರ್ಣಂ, ಲೋಹಿತ ಚಂದನಂ, ಕಾಶ್ಮೀರಜಂ, ಕಾಲೇಯಂ, ಜಾಪಕಂ – ಈ ಏಳು ಕುಂಕುಮಂ (389), ಮೃಗನಾಭಿ: ಮೃಗಮದ: ಕಸ್ತೂರಿಕಾ – ಈ ಮೂರು ಕಸ್ತೂರಿ (390), ರಾಜಶೇಖರನು ತಿಲಕದಲ್ಲಿ ಪುಂಡ್ರ, ತನುಲ ಪತ್ರ, ಚಿತ್ರಕ, ವಿಶೇಷಕ ಎನ್ನುವ ನಾಲ್ಕು ವಿಭಾಗಗಳನ್ನು ಸೂಚಿಸುತ್ತಾರೆ

ತಿಸರ

ತ್ರಿಸರ – ಮೂರಳೆಯ ಸರವನ್ನು ತಿಸರವೆಂದು ಕರೆಯುತ್ತಾನೆ. "ತೊಡರ್ದ ತಿಸರದಿಂ" ಎಂಬುದು ಪ್ರಯೋಗ. ಮೂರೆಳೆಯ ಸರವನ್ನು ಧರಿಸುತ್ತಿದ್ದರು ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ತಿಸುಳ

ತ್ರಿಸುಳ–ತ್ರಿಶೂಲವೆಂಬುದಕ್ಕೆ ಪರ್ಯಾಯವಾಗಿ ಬಂದ ಪದವಾಗಿದೆ.

ಮುಮ್ಮೊನೆಗೆಯ್ದುವೆಂದು, ತಿಸುಳವೆಂದು,ಶಿವಂ ಪಿಡಿವ ತ್ರಿಶೂಲಂ. (*ಕರ್ನಾಟಕ ಶಬ್ದಸಾರಂ–ಪುಟ ೪೭*)

ತುರುಗೋಳ್

ಮಾನವನು ತನ್ನ ಜೀವನ ನಿರ್ವಹಣೆಗಾಗಿ ವ್ಯವಸಾಯವನ್ನು ಅವಲಂಬಿಸಿದಾಗ, ಅವನಿಗೆ ಹಲವಾರು ರೀತಿಗಳಲ್ಲಿ ನೆರವಾದ ಪ್ರಾಣಿ ಎಂದರೆ ಗೋವುಗಳು. ಆದ್ದರಿಂದ ಒಂದು ಸಮಾಜದ ಆರ್ಥಿಕವ್ಯವಸ್ಥೆಯು ತನ್ನ ಉತ್ತಮ ಸ್ಥಿತಿಗೆ ಈ ಜೀವಧನಗಳನ್ನು ಅವಲಂಬಿಸಿತ್ತು. ತಮ್ಮಲ್ಲಿನ ಆರ್ಥಿಕ ಮುಗ್ಗಟ್ಟನ್ನು ಸರಿಪಡಿಸಿಕೊಳ್ಳಲು ಸುಲಭವದ ಮಾರ್ಗವನ್ನು ಹುಡುಕಿದ ಮಾನವನಲ್ಲಿನ ಸಹಜವಾದ ಅಸೂಯಾಪರ ಬುದ್ಧಿ ಬೇರೆಯವರ ಜೀವಧನಗಳನ್ನು ಅಪಹರಿಸುವ ಪ್ರಯತ್ನ ಮಾಡಿತು. ಈ ರೀತಿ ಆರಂಭವಾದ 'ತುರುಗೋಳ್' ಅಥವಾ 'ಗೋಗ್ರಹಣ ಕ್ರಮೇಣ ಒಂದು ಖಚಿತವಾದ ರೂಪವನ್ನು ಪಡೆಯುತ್ತಾ ಬಂದಿತ್ತು. ಅಂದರೆ ಒಂದು ಗುಂಪಿನ ಜೀವಧನಗಳನ್ನು ಮತ್ತೊಂದು ಗುಂಪಿನ ಜನ ಅಪಹರಿಸಿದಾಗ ಅವರನ್ನು ಎದುರಿಸಿ ದನಗಳನ್ನು ಹಿಂತಿರುಗಿಸುವುದು ವೀರತನದ ಒಂದು ಮೌಲ್ಯವೆಂದು ಈ ಅವಧಿಯಲ್ಲಿಯೇ ಪರಿಗಣಿತವಾಯಿತು. ಭಾರತೀಯ ತುರುಗಾಳಗಗಳನ್ನು ಗಮನಿಸಿದಾಗ ಅವುಗಳನ್ನು ನಡೆಯಿಸುತ್ತಿದ್ದವರ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು – ರಾಜಕೀಯ ಕಾರಣಗಳನ್ನು ಉದ್ದೇಶವಾಗಿಟ್ಟುಕೊಂಡು ಅಪಹರಿಸುತ್ತಿದ್ದುದು ಮತ್ತು ಕೇವಲ ಕಳ್ಳತನಕ್ಕಾಗಿಯೇ ಅಪಹರಿಸುತ್ತಿದ್ದುದು ಎಂಬುದಾಗಿ ಎರಡು ಸ್ತರಗಳಲ್ಲಿ ಗುರುತಿಸಬಹುದು. ಆದರೆ, ಉದ್ದೇಶವೇನೇ ಇರಲಿ ತುರುಗಳ ಅಪಹರಣ ಮಾಡಿದವರನ್ನು ಎದುರಿಸುವುದು ವೀರತನವೆಂದೇ ಬಗೆಯಲಾಗಿತ್ತು.

(ಡಾ. ಆರ್. ಶೇಷಶಾಸ್ತ್ರಿ. ೨೦೦೪. ಪು.೧೮೩)ಗೋ ಎನ್ನುವ ಶಬ್ದವು ಬಹಳ ಹಿಂದಿನಿಂದಲೂ ಬಂದಿದೆ.ಗೋ ಎಂದರೆ ಹಲವಾರು ಅರ್ಥಗಳಿವೆ. ಅದರಲ್ಲಿ ಜ್ಞಾನವೆನ್ನುವುದೂ ಒಂದು. ಜ್ಞಾನದ ಆರಾಧನೆಯೇ ಗೋಪೂಜೆಯಾಗಿದೆ. ಗೋಪಾಲಕೃಷ್ಣನೆಂದರೆ ಜ್ಞಾನಪಾಲಕ.

ದನಗಳನ್ನು ಅಪಹರಿಸುವುದನ್ನು ಗೋಗ್ರಹಣ, **ತುರುಗೋಳು**, ತುರುಗಾಳಗವೆಂದು ಕರೆಯುತ್ತಾರೆ. ಇದರಲ್ಲಿ ಗೋವಿಗಾಗಿ ಹೋರಾಟಗಳು ನಡೆಯುತ್ತವೆ. ದನಗಳು ಪ್ರಾಚೀನ ಭಾರತದ ಆರ್ಥಿಕ ಸಂಪತ್ತೇ ಆಗಿದ್ದವು. ಒಬ್ಬ ವ್ಯಕ್ತಿಯ ಸಾಹುಕಾರತನವು ಅವನು ಹೊಂದಿರುವ ದನಗಳ ಸಂಖ್ಯೆಯನ್ನು ಅವಲಂಬಿಸಿತ್ತು. ಪೌಷ್ಟಿಕ ಆಹಾರವಾದ ಹಾಲು, ತುಪ್ಪ, ಮೊಸರು ಮುಂತಾದವುಗಳನ್ನೂ,

ವ್ಯವಸಾಯಕ್ಕೆ ಅಗತ್ಯವಾದ ಗೊಬ್ಬರವನ್ನೂ ನೀಡುವ, ಇವು ವ್ಯವಸಾಯ ಮಾಡಲು ಒಂದು ಶಕ್ತಿಯಾಗಿ ಮಾನವನ ನೆರವಿಗೆ ನಿಂತವು. ಆದ್ದರಿಂದ ದನಗಳನ್ನು ಹಣದ ಆಸೆಯಿಂದ ಕದಿಯಲು ಆರಂಭ ಮಾಡಿದರು. ಈ ರೀತಿ ದನಗಳನ್ನು ಅಪಹರಿಸಿದವರನ್ನು ಹಾಗೆಯೇ ಬಿಡುವುದು ಹೇಡಿತನದ ಪರಮಾವಧಿ ಎಂಬ ಒಂದು ಭಾವನೆ ಮೂಡಿತು. ಯಾವಾಗ ಇದು ಒಂದು ಮೌಲ್ಯವಾಗಿ ಪರಿಣಮಿಸಿತೋ ಆಗ ಶತ್ರುಗಳನ್ನು ಕೆಣಕಿ ಅವಮಾನ ಮಾಡುವುದಕ್ಕೆ ಅಥವಾ ಅವನ ಮೇಲೆ ಬೀಳುವುದಕ್ಕೋ ಆ ಅರಸನ ಪ್ರದೇಶದ ದನಗಳನ್ನು ಅಪಹರಿಸುವ ಯತ್ನಗಳು ನಡೆದುವು. ಶಂಬಾ ಅವರ ಅಭಿಪ್ರಾಯ ಹೀಗಿದೆ:

"ಕಾನಡ ಗೋವಳರ ಬೀಡಾದ ಕನ್ನ (ಖಾನ) ದೇಶವು ಪ್ರಾಚೀನ 'ಕನ್ನ' ಜನರ ಎಂದರೆ ಕಂನಾಡಿನ ಮೊದಲಿಗರ ನೆಲೆವೀಡು ಆಗಿರಬೇಕೆಂದು ಅಲ್ಲಿಯ ಬೇರೆ ಅನೇಕ ಸ್ಥಾನಿಕ ಸಮಗತಿಗಳಿಂದಲೂ ಅನುಮಾನವಾಗುತ್ತದೆ. ಆದುದರಿಂದ, ಈ ಗೋವಳರು ಕಂನಾಡ ತುರಕಾರ-ದನಗಾರರೆಂದು ಹೇಳಬೇಕಾಗುತ್ತದೆ."

ವಿವರಗಳಿಗೆ ನೋಡಿ: ಡಾ. ಆರ್. ಶೇಷಶಾಸ್ತ್ರಿ ೨೦೦೪ ಕರ್ನಾಟಕದ ವೀರಗಲ್ಲುಗಳು ಪುಟ. ೨೨-೨೩
ಶಂಬಾ ಜೋಶಿ ೧೯೯೯ ಹಾಲುಮತ ದರ್ಶನ ಸಂಪುಟ. ೩ ಪುಟ. ೨೦

ತುರುಪಟ್ಟಿ

ತುಱುಪಟ್ಟಿಯೆಂದರೆ ತುರುಸಮೂಹ. ತುರುಗಳನ್ನು ಕಾಯುವವರು ಗೊಲ್ಲರು. ಗೊಲ್ಲರು ಒಂದೆಡೆ ನಿಲ್ಲುವವರಲ್ಲ ವಲಸೆಗಾರರು. ಗೊಲ್ಲರದು ಗುಂಪುಜೀವನ ಪದ್ಧತಿ. ಮತ್ತು ಹಸುಕರುಗಳ ಮೇವಿಗಾಗಿ ಊರಿಂದ ಊರಿಗೆ ಹೋಗುತ್ತಿರುತ್ತಾರೆ.

ಹಸುವನ್ನು ಕಟ್ಟುವ ಹಟ್ಟಿ, ದನಗಳನ್ನು ಕಟ್ಟಲು ಹಟ್ಟಿ, ಆನೆಗಳನ್ನು ಕಟ್ಟಲು ಲಾಯ, ಕೋಳಿಗಳನ್ನು ಬಿಡಲು ಗೂಡು ಇರುವುದು ಸಹಜವಾಗಿದೆ. ಆದರೆ ಯಾವುದು ನಮ್ಮ ಉಪಯೋಗಕ್ಕೆ ಬರುತ್ತವೋ ಅವುಗಳನ್ನು ನಾವು ಸಾಕು ಪ್ರಾಣಿಗಳೆಂದು ಕರೆದು ಅವುಗಳ ರಕ್ಷಣೆಗೆ ಮುಂದಾಗಿರುವುದು ಗಮನಾರ್ಹ ಅವುಗಳೂ ಸಂಸ್ಕೃತಿಯ ಭಾಗಗಳಾಗಿವೆ.

ತುಳಾಭಾರ

ತುಲಾಭಾರ, ತನ್ನ ತೂಕಕ್ಕೆ ಸಮಾನವಾದ ತೂಕವನ್ನು ದಾನ ಮಾಡುವುದು ಎಂಬುದನ್ನು ತುಳಾಭಾರ ಎಂದು ಕರೆಯುತ್ತಾರೆ.

ತಕ್ಕಡಿಯಲ್ಲಿ ಒಂದು ಕಡೆ ಮನುಷ್ಯನಿದ್ದು ಮತ್ತೊಂದು ಕಡೆ ಅದಕ್ಕೆ ಸಮವಾದ ಸಂಪತ್ತನ್ನು ಹೇರಿದರೆ ಅದು ತುಲಾಭಾರವೆನಿಸುತ್ತದೆ. ತುಲಾಭಾರವನ್ನು ಸಾಮಾನ್ಯವಾಗಿ ಹರಕೆಯ ಸಂದರ್ಭದಲ್ಲಿ ಆಚರಿಸುತ್ತಾರೆ.

ತುಬಿಲ್

ತುಬುಲವೆಂದರೆ ಪೂಜೆ, ಸೇವೆ; ನಮಸ್ಕಾರ ದೇವರಿಗೆ ಹರಕೆ(ಪರಕೆ)ಯೊಪ್ಪಿಸುವ ಪದ್ಧತಿಯು ಹಿಂದಿನಿಂದಲೂ ಚಾಲ್ತಿಯಲ್ಲಿತ್ತು. ಹರಕೆಯು ಪೂಜೆ, ಹಣ, ಉರುಳು ಸೇವೆ ಮುಂತಾದ ರೀತಿಯಲ್ಲಿರುತ್ತವೆ. ಶಿಷ್ಟದೇವರಿಗೆ ಒದಗಿಸುವ ಹರಕೆಯು ಸಾತ್ವಿಕ ರೂಪದಲ್ಲಿರುತ್ತದೆ. ಉಗ್ರದೇವತೆಯರಿಗೆ ಪ್ರಾಣಿ ಬಲಿಯೇ ಹರಕೆ, ಮುಡಿಪು ಇಡುವುದು ಎಂದರೂ ಹರಕೆ. ಭಯ ನಿವಾರಣೆ, ರೋಗನಿವಾರಣೆ ಮುಂತಾದ ಕಾರಣಕ್ಕೆ ಹರಕೆಯನ್ನು ಹೇಳುತ್ತಾರೆ. ಹರಕೆಯು ಮನುಷ್ಯನಿಗೆ ಧೈರ್ಯ ತುಂಬುತ್ತದೆ ಮತ್ತು ಹರಕೆ ಹೇಳುವುದರ ಮೂಲಕ ಮನುಷ್ಯ ತನ್ನ ಅಭೀಷ್ಟವನ್ನು ನೆರವೇರಿಸಿಕೊಳ್ಳಲು ದೇವರ ಮೇಲೆ ಭಾರ ಹಾಕುತ್ತಾನೆ.

ತೆಗಳಿಗೆ

'ತೆಗಳು' ಎಂಬ ಪ್ರಯೋಗವು ರೂಢಿಯಲ್ಲಿದೆ. ಹವ್ಯಕ ಕನ್ನಡ ಪ್ರಯೋಗ; ಅದು ಯಾವ ನಮೂನೆ ತೆಗಳ್ತು ಗೊಂತಿದ್ದಾ?" (ಅವಳು ಯಾವ ರೀತಿ ಬೈತಾಳೆ; ಅವಮಾನಗೊಳಿಸುತ್ತಾಳೆ ಅಂತ ಗೊತ್ತಿದೆಯಾ?) ಇಲ್ಲಿ ತೆಗಳು ಎಂದರೆ ಬೈಯುವುದು ಎಂದರ್ಥ. ತುಳುವಿನಲ್ಲಿ: "ಐನ್ ಪೊತ್ತಾತು ಎನ್ನತೆಗಳೆ(ತಿಗಲೆ) ಪೊಂಡು" (ಅದನ್ನು ಉರಿಸಿ (ಊದಿಊದಿ) ನನ್ನ ಎದೆಯೇ ಹೋಯಿತು.)

ತೆರಿಗೆ

ಸಾಧುಗಳು, ಬ್ರಾಹ್ಮಣರು, ಮಠಗಳು ಮತ್ತು ವಿದ್ಯಾಪೀಠಗಳು ಕರವನ್ನು ಕೊಡುತ್ತಿರಲಿಲ್ಲ. ಕ್ಷಾಮ ಇತ್ಯಾದಿಗಳು ಬಂದರೆ ಕಂದಾಯ ತೆಗೆದುಕೊಳ್ಳುತ್ತಿರಲಿಲ್ಲ. ಭೂಕಂದಾಯವಲ್ಲದೆ ಖನಿ, ಉಪ್ಪು, ಅರಣ್ಯ ಮದಿರಾ, ಸೂನಾಗೃಹಗಳು. ಆಮದು ರಫ್ತಗಳಿಂದ ರಾಜ್ಯಾದಾಯ ಹೆಚ್ಚಿಸಬಹುದೆಂದು ಕೌಟಿಲ್ಯನು ಹೇಳುತ್ತಾನೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ನವರತ್ನ, ಹೂವು ಹಣ್ಣು, ತರಕಾರಿ, ಕಬ್ಬು, ವನಸ್ಪತಿಗಳು, ಮೃಗ ಪಕ್ಷಿಗಳ ಮಾರಾಟ, ಕುದುರೆ, ಒಂಟೆ, ಕುರಿ, ಆಡು, ಸುರಾ, ಸೂನಾ, ಸೂತ್ರ, ತೈಲಗಳಿಗೆ ಸುಂಕವಿತ್ತು ಎಂದು ಬರುತ್ತದೆ.

ರಾಜ್ಯದ ಆದಾಯವು ವಿವಿಧ ವಸ್ತುಗಳು, ವೃತ್ತಿಗಳು, ಆಸ್ತಿಗಳು, ಸಾಮಾಜಿಕ ಕಾರ್ಯಗಳು, ಮುಂತಾದವುಗಳ ಮೇಲೆ ವಿಧಿಸಲಾಗುತ್ತಿದ್ದ ಸುಂಕವನ್ನು 'ತಳಭಂಡದ ಸುಂಕ' ಎಂಬುದಾಗಿ ಕರೆಯುತ್ತಿದ್ದರು. ಅನಂತರ ಯಾವ ಯಾವ ಸಾಮಗ್ರಿಗೆ ಎಷ್ಟು ಸುಂಕ, ಈ ಸುಂಕವು ಹಣದ ರೂಪದಲ್ಲಿ ಬರಬೇಕೆ ಅಥವಾ ವಸ್ತುಗಳ ರೂಪದಲ್ಲಿ ಬರಬೇಕೆ ಎಂಬುದನ್ನು ನಮೂದಿಸುತ್ತಿದ್ದರು. ಈ ಕುರಿತು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವಿವರವಿದೆ.

ವಿವಿಧ ವೃತ್ತಿಗಳ ಮೇಲೆ ಸುಂಕವನ್ನು ವಿಧಿಸುತ್ತಿದ್ದರು. 'ಕುಱುಂಬ ದೆಜಿ' ಕುರುಬರು ಕೊಡಬೇಕಾದ ತೆರಿಗೆ, 'ಮಾದಾಜಿಕೆ' ಬಿದಿರಿನ ಕೆಲಸದವರು ನೀಡಬೇಕಾದ

ತೆರಿಗೆ, ‘ಕೂಡತಿವಣ’ ‘ಅಕ್ಕಸಾಲಿಯಾಯ’ ಬಡಗಿಗಳ ಮತ್ತು ಕಮ್ಮಾರ ಮೇಲೆ ವಿಧಿಸಿದ ತೆರಿಗೆ. ‘ಒಕ್ಕಲುದೆಜ’ ಹಾಗೆಯೇ ಎಣ್ಣೆ ಮತ್ತು ಕಬ್ಬಿನ ರಸವನ್ನು ತೆಗೆಯುತ್ತಿದ್ದ ಗಾಣಗಳ ಮೇಲೆ ವಿಧಿಸುತ್ತಿದ್ದ ತೆರಿಗೆ ‘ಗಾಣದ ಸುಂಕ’ ‘[illegible]ಯ ಸುಂಕ’.

ಸಾಮಾಜಿಕ ಕಾರ್ಯಗಳಾದ – ಮದುವೆ, ಮುಂಜಿ ಮುಂತಾದ ಆಚರಣೆಗಳ ಮೇಲೂ ಸುಂಕವನ್ನು ವಿಧಿಸುತ್ತಿದ್ದರು. ಇವುಗಳಲ್ಲದೆ ಇತರೇ ಸಣ್ಣ ಸಣ್ಣ ವಸ್ತುಗಳ ಮೇಲೆ ವಿಧಿಸುತ್ತಿದ್ದ ಸುಂಕಗಳನ್ನು ಒಟ್ಟಾಗಿ ಸೇರಿಸಿ ‘ಕಿಱುಕುಳ’ ಎಂಬುದಾಗಿ ಕರೆಯಲಾಗಿದೆ. ಅರಸನಾದವನು ಸೈನ್ಯ ಸಮೇತ ಪ್ರಯಾಣ ಹೊರಟಾಗ ಆಯಾ ಗ್ರಾಮದ ಜನರು. ಅರಸರ ನಿರೂಪದಿಂದ ಬಂದ ಕೆಲಸವನ್ನು ಯಾವ ಪ್ರತಿಫಲವೂ ಇಲ್ಲದೆ ಮಾಡಿಕೊಡಲೇಬೇಕಿತ್ತು. ಹಾಗೆ ಮಾಡದಿದ್ದರೆ ಬಲವಂತವಾಗಿಯಾದರೂ ಮಾಡಿಸುತ್ತಿದ್ದರು. ಇಂಥ ಕೆಲಸವನ್ನು ‘ಬಿಟ್ಟಿ’ ಎಂಬುದಾಗಿ ಕರೆಯಲಾಗಿದೆ. ಈ ‘ಮೂವಿಟ್ಟಿ’ ಎಂಬ ಪದ ಮೂರು ರೀತಿಯ ಬಿಟ್ಟಿ ಕೆಲಸಗಳನ್ನು ಸೂಚಿಸುವ ಪ್ರಯೋಗವಾಗಿದೆ ಎಂದು ಶೇಷಶಾಸ್ತ್ರಿಯವರು ಹೇಳುತ್ತಾರೆ.

ಅರಸನಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಭೂಸರ್ವೇಕ್ಷಣೆ ಮಾಡಿದ ನಂತರ ತೆರಿಗೆಯನ್ನು ನಿಗದಿಪಡಿಸುತ್ತಿದ್ದರು. ಈ ಅಧಿಕಾರಿಗಳನ್ನು ರಾಜನ ಜನರು ಎಂಬುದಾಗಿ ಉಲ್ಲೇಖಿಸಲಾಗಿದೆ. ರಾಷ್ಟ್ರಕೂಟ ಅರಸರು ಭೂಮಾಲೀಕರಾಗಿದ್ದ ಕೆಲವು ಗಣ್ಯರನ್ನು ಸರಕಾರದ ನಿಯೋಗಿಗಳಾಗಿ ತೆರಿಗೆ ವಸೂಲಿ ಮುಂತಾದ ಸರಕಾರಿ ಕೆಲಸಗಳಿಗೆ ನಿಯೋಜಿಸುತ್ತಿದ್ದರು. ಶ್ರೀಕರಣರು ಕಂದಾಯಾಧಿಕಾರಿಗಳಾಗಿದ್ದು, ಕೆಲವೊಮ್ಮೆ ನಾಡಗಂವುಡರಾಗಿಯೂ ಕೆಲಸ ನಿರ್ವಹಿಸುತ್ತಿದ್ದರು. ಇವರು ಭೂ ಸಂಬಂಧವಾದ ಅನೇಕ ಅಧಿಕಾರಿಗಳನ್ನು ಹೊಂದಿದ್ದರು. ರಾಷ್ಟ್ರಕೂಟ ಅರಸರು ಸ್ಥಳೀಯ ಹಂತಗಳಲ್ಲಿ ನಾಡಗವುಂಡರು, ಪೆರ್ಗಡೆಗಳು ಹಾಗೂ ಅವರಿಗಿಂತ ಸ್ವಲ್ಪ ಕೆಳಗಿನ ಗಣ್ಯರಿಗೆ ತೆರಿಗೆ ವಸೂಲಿ ಮಾಡುವ ಅಧಿಕಾರವನ್ನು ನೀಡಿದ್ದರು. ಇವರೆಲ್ಲರೂ ಜಮೀನುದಾರ ಕುಟುಂಬಕ್ಕೆ ಸೇರಿದವರಾಗಿದ್ದರು. ಹೊಯ್ಸಳರ ಆಳ್ವಿಕೆಯಲ್ಲೂ ಇದೇ ರೀತಿಯ ಆಡಳಿತ ಕ್ರಮ ಅಸ್ತಿತ್ವದಲ್ಲಿತ್ತು ಎಂದು ಮೋಹನ ಕೃಷ್ಣ ರೈ ಹೇಳುತ್ತಾರೆ.

ಯಾವುದೇ ರಾಜಕೀಯ ವ್ಯವಸ್ಥೆಯು ತನ್ನ ಬೊಕ್ಕಸವನ್ನು ತುಂಬಿಸಿಕೊಳ್ಳಲು ತೆರಿಗೆ ಪದ್ಧತಿಯನ್ನು ಜಾತಿಗೆ ತರುತ್ತದೆ. ಮೇಲೆ ಉಲ್ಲೇಖಿಸಿದಂತೆ ತೆರಿಗೆ ಬೇರೆ ಬೇರೆ ರೀತಿಯಲ್ಲಿರುತ್ತವೆ. ತೆರಿಗೆಯನ್ನು ಕಂದಾಯವೆಂದೂ ಇಂಗ್ಲಿಷಿನಲ್ಲಿ Revenue ಅಥವಾ Tax ಎಂದೂ ಕರೆಯುತ್ತಾರೆ. ರಾಜ ಪ್ರಭುತ್ವದಲ್ಲಿ ತೆರಿಗೆಯು ಆಯಾ ರಾಜನ ಮರ್ಜಿಗೆ ಅನುಸಾರವಾಗಿ ರೂಪುಗೊಳ್ಳುತ್ತಿತ್ತು. ಬ್ರಿಟೀಶರು ಬಂದ ಮೇಲೆ ತೆರಿಗೆಗೆ ಕಾನೂನುಬದ್ಧ ರೂಪವು ದೊರೆಯಿತು. ಕಂದಾಯವು ಮಾತ್ರ ಯಾವುದೇ ರಾಜಕೀಯ ಸಂದರ್ಭದಲ್ಲಿ ಆರ್ಥಿಕ ಮತ್ತು ಸಂಪನ್ಮೂಲ ಕ್ರೋಢೀಕರಣದಲ್ಲಿಯೇ ಇರುತ್ತದೆ. ರಾಜಕೀಯ ಅಧಿಕಾರದ ಎರಡು ಮುಖ್ಯ ಶಕ್ತಿಯೆಂದರೆ ಅಧಿಕಾರ ಮತ್ತು

ಆರ್ಥಿಕತೆ. ಅಧಿಕಾರಕ್ಕೆ ಒಂದು ರೂಪವಿದ್ದರೆ ಆರ್ಥಿಕತೆಯು ರಾಜಕೀಯದ ಒತ್ತಾಸೆಪಡು (Maintance) ಎಂಬುದನ್ನು ಸೂಚಿಸುತ್ತದೆ. ಈ ದೃಷ್ಟಿಯಿಂದ ರಾಜ್ಯವು ಆರ್ಥಿಕ ಮೂಲ ಕಂದಾಯವೇ ಆಗಿದೆ.

ಜಾನಪದರಿಂದ, ಸೀತಾ ಭೂಮಿಗಳಿಂದ ಆದಾಯವನ್ನು ಸಂಗ್ರಹಿಸಬೇಕು. ಈ ಆದಾಯವನ್ನು ಅಧಿಕಾರ ವರ್ಗದ ಅಗತ್ಯಗಳಾದ ವಿಲಾಸ ವಸ್ತುಗಳನ್ನಾಗಿ ಪರಿವರ್ತಿಸಬೇಕು. ಆದಾಯವನ್ನು ವಸೂಲು ಮಾಡುವ ಉದ್ಯೋಗಿಗಳಿಗೆ ಕೆಲವು ಗ್ರಾಮಗಳನ್ನು ಮಾನ್ಯವಾಗಿಯೋ, ಜಾಗೀರಾಗಿಯೋ ಕೊಟ್ಟ. ಆ ಗ್ರಾಮದ ಆದಾಯವನ್ನು ಅವರು ವಸೂಲು ಮಾಡಿಕೊಳ್ಳಬೇಕಾದ ಏರ್ಪಾಡು (ನಮ್ಮ ದೇಶದಲ್ಲಿ ಭೂಮಾಲೀಕ ವ್ಯವಸ್ಥೆಗೆ ಕೀಲಿಗೈಯಾದ ಏರ್ಪಾಡು) ಆಗಿನ್ನೂ ಸಾಧ್ಯಗೊಂಡಿರಲಿಲ್ಲ. ಉತ್ಪಾದಕತೆ ಇನ್ನೂ ಗಮನ ಸೆಳೆಯುವಷ್ಟೇನೂ ಬೆಳೆದಿರಲಿಲ್ಲ. ಅಲ್ಲದೆ, ಜಾನಪದರನ್ನೂ, ಸೀತಾ ಭೂಮಿಯನ್ನೂ ಎದುರು ಹಾಕಿಕೊಂಡರೆ, ಕೃಷಿಯೋಗ್ಯವಾಗಿ ಮಾಡಬೇಕಾಗಿದ್ದ ಎಷ್ಟೋ ಅರಣ್ಯಭಾಗಗಳು ಹಾಗೆಯೇ ಉಳಿದು ಬಿಡುತ್ತದೆ. ಅಂದರೆ ಹೆಚ್ಚುವರಿ ಉತ್ಪನ್ನವು ಸಾಕಷ್ಟು ಏರುವವರೆಗೂ, ಹೀಗೆ ಆ ಉದ್ಯೋಗಿಗಳನ್ನು ಸಾಕುವುದು ಸಾಧ್ಯವಾಗುವಂತಿರಲಿಲ್ಲ. ಇಂತಹ ಸ್ಥಿತಿಯಲ್ಲಿ ಶಿಸ್ತಿನ ಹತೋಟಿಯೆಲ್ಲವೂ ಸಂಪೂರ್ಣವಾಗಿ ಪ್ರಭುತ್ವದ ಹಿಡಿತದಲ್ಲಿ ಕೇಂದ್ರಿಕೃತವಾಗಿರಬೇಕು. ವಸೂಲಿ ಮಾಡುವ ಉದ್ಯೋಗಿಗಳಿಗೆ ನೌಕರಿ ಮಾತ್ರವೇ ಸಿಗುವುದು ಸಾಧ್ಯ ಎಂಬುದು ಡಿ. ಡಿ. ಕೊಸಾಂಬಿಯವರ ಅಭಿಪ್ರಾಯ.

ವಿವರಗಳಿಗೆ ನೋಡಿ: ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು ೨೦೧೦ ಕೌಟಲೀಯ ಅರ್ಥಶಾಸ್ತ್ರ ಪುಟ. ೨೮

ಮೋಹನಕೃಷ್ಣ ರೈ ೨೦೦೪ ಪ್ರಭುತ್ವ ಮತ್ತು ಜನತೆ ಪುಟ. ೨೫-೨೭

ಡಿ. ಡಿ. ಕೊಸಾಂಬಿ ೧೯೯೮ ಪ್ರಾಚೀನ ಭಾರತದಲ್ಲಿ ಚರಿತ್ರೆ ಪುಟ. ೧೮೮

ಶ್ರೀ ಶೇಷಶಾಸ್ತ್ರಿ ೨೦೦೫ ಶಾಸನ ಪರಿಚಯ ಪುಟ. ೭೨

ತೈಜಸ

ತೇಜಸ್ಸು ಎನ್ನುವುದಕ್ಕೆ ವೇದಾಂತದಲ್ಲಿ ಬೇರೆ ವ್ಯಾಖ್ಯಾನವಿದೆ. ತೈಜಸವೆಂದರೆ ತೇಜಸ್ಸಿನ; ಕಾಂತಿಯ; ತೇಜೋಗುಣವನ್ನು ಸೂಚಿಸುತ್ತದೆ. ವೇದಾಂತವು ತೈಜಸವನ್ನು ಈ ಕೆಳಗಿನಂತೆ ವಿವರಿಸಿದೆ. ಈ ವ್ಯಷ್ಟಿಯಿಂದ ಉಪಹಿತವಾದ ಚೈತನ್ಯವು ತೇಜೋಮಯವಾದ ಅಂತಃಕರಣದಿಂದ ಉಪಹಿತವಾಗಿರುವುದರಿಂದ, ತೈಜಸ ಆಗುತ್ತದೆ. (ವೇದಾಂತಸಾರ 1973 ಪುಟ.53)

ವ್ಯಷ್ಟಿಯೆಂದರೆ ಸೂಕ್ಷ್ಮಶರೀರದ ವ್ಯಷ್ಟಿ. ತೇಜೋಮಯವೆಂದರೆ ಅಂತಃಕರಣವು ಪಂಚಭೂತಾತ್ಮಕವಾದರೂ ಅದರಲ್ಲಿ ಪಂಚಭೂತಗಳ ಸತ್ವದ ಅಂಶ ಪ್ರಧಾನವಾಗಿರುವುದರಿಂದ ಅದು ತೇಜೋಮಯ ಎನಿಸುತ್ತದೆ. ತೈಜಸವು ಅಂತಃಕರಣದಿಂದ ಹುಟ್ಟುತ್ತದೆ. ಅದಕ್ಕೆ ಪಂಚಭೂತಗಳ ಅಂಶಗಳು ಕೂಡಾ ಕಾರಣವಾಗಿವೆ.

ವಿವರಗಳಿಗೆ ನೋಡಿ: ಪಂಚಾಶ್ಚರ್ಯ

ತೊಟ್ಟಿಲಿಗ

"ತೊಟ್ಟಿಲಿಗಂ ಗಜಪ್ರಿಯನಪ್ಪುದರಿಂ" ಎಂದು ಪಂಪ ಭಾರತದಲ್ಲಿ ಬರುತ್ತದೆ. ತೊಟ್ಟಿಲಿಗಂ ಎಂದರೆ ತೊಟ್ಟಿಲಮಗು. ತೊಟ್ಟಿಲಮಗುವೆಂಬುದಕ್ಕೆ ವಿಶೇಷ ಅರ್ಥವು ಇದೆ. 'ಅವನು ಆಗ ತೊಟ್ಟಿಲ ಮಗು' ಎಂದು ಹೇಳುವ ಕ್ರಮ ಈಗಲೂ ಇದೆ. ತೊಟ್ಟಿಲ ಕೂಸು ಎಂದರೆ ಸಣ್ಣ ಕೂಸು. ತೊಟ್ಟಿಲಲ್ಲಿ ಮಲಗಿರುವ ಕೂಸು ಎಂಬುದು ಭಾವಾರ್ಥ.

ತೊಟ್ಟುರ್

ತೊತ್ತುಗಳು ತೊಟ್ಟು ಎಂದರೆ ತೊತ್ತು; ದಾಸಿ ಎಂಬ ಅರ್ಥವಿದೆ. ಬೌದ್ಧ ಕೃತಿಯಲ್ಲಿಯೂ ದಾಸ್ಯದ ಪರಿಕಲ್ಪನೆಯು ಬಂದಿದೆ. ತ್ರಿಪಿಟಕಗಳ ಪ್ರಾಚೀನ ಭಾಗಗಳಲ್ಲಿ ಶೂದ್ರ ಎನ್ನುವುದಕ್ಕಿಂತ ದಾಸ, ಕಮ್ಮ (ರ್ಮ)ಕಾರ ಎಂಬ ಪದಗಳೇ ಹೆಚ್ಚು ಬಳಕೆಯಾಗಿವೆ. ಕೃಷಿ ಕೆಲಸಗಳಲ್ಲಿ ಅವರನ್ನು ತೊಡಗಿಸಲಾಗುತ್ತಿತ್ತು. ಭೂರಹಿತ ಶೂದ್ರರೇ ಕರ್ಮಕಾರರಾಗಿದ್ದರು. ದಾಸರು ಬಹುಪಾಲು ಶೂದ್ರರೇ. ಬುದ್ಧನೇ ದೀಘನಿಕಾಯದಲ್ಲಿ (ಪುಟ.104) ಮೂರು ವರ್ಣಗಳ ಬಗ್ಗೆ ಹೇಳಿ ನಂತರ "ಸುದ್ದೋ (ಶೂದ್ರೋ) ವಾ ಸುದ್ದದಾಸೋ ವಾ" ಎಂದಿದ್ದಾನೆ. ಶೂದ್ರದಾಸನೆಂದರೆ ಶೂದ್ರನ ದಾಸನಲ್ಲ; ಅವನು ಶೂದ್ರನಾದ ದಾಸ. ಧರ್ಮಸೂತ್ರಗಳಲ್ಲಿಲ್ಲದ ಶೂದ್ರ-ದಾಸ ಸಮೀಕರಣ ಬೌದ್ಧ ಕೃತಿಯಲ್ಲಿರುವುದು ಸ್ವಾರಸ್ಯಕರ. ಮುಂದೆ ಮೌರ್ಯೋತ್ತರ ಕಾಲದಲ್ಲಿ ಮನು ಈ ಸ್ಥಿತಿಯನ್ನು ಸ್ಪಷ್ಟವಾಗಿಯೇ ಹೇಳುತ್ತಾನೆ. ಋಗ್ವೇದದಲ್ಲಿ ದಾಸರ ಪರಿಕಲ್ಪನೆಯಿದೆ. ಋಗ್ವೇದದಲ್ಲಿ ಆರ್ಯರ ಶತ್ರುಗಳೆಂದು ಕರೆಯಲಾಗುವವರು (1) ವಣರು (2) ದಾಸರು(ದಸ್ಯುಗಳು) ವಣರು ಧನವಂತರೆಂದೂ, ಲೋಭಿಗಳೆಂದೂ ವೇದಗಳಲ್ಲಿ ವರ್ಣಿತವಾಗಿದೆ. ನಂತರದ ಕಾಲದಲ್ಲಿ ಪ್ರಚುರಗೊಂಡ ವಣಿಕರು (ವ್ಯಾಪಾರಸ್ಥರು). ಪಣಂ (ನಾಣ್ಯ). ವಣ್ಯಂ (ಸರಕು) ಎಂಬ ಶಬ್ದಗಳನ್ನು ಗಮನಿಸಿ, ಮೇಲೆ ಹೇಳಿದ ವಣರು ಬಹುಶ: ಸಿಂಧೂ ನಾಗರೀಕತೆಯ ವ್ಯಾಪಾರಸ್ಥರ ಅವಶೇಷಗಳಿರಬಹುದು ಎನ್ನುತ್ತಾರೆ ಕೊಸಾಂಬಿ. ಇಂದ್ರನು ಇವರ ಸಂಪತ್ತನ್ನು ಲೂಟಿ ಮಾಡುತ್ತಾನೆ. ಇನರು ರಾಕ್ಷಸರೆಂದೂ, ಆರ್ಯರ ಶತ್ರುಗಳೆಂದೂ ನಿರೂಪಿಸುತ್ತಾನೆ. ಒಂದು ಸಂದರ್ಭದಲ್ಲಿ ಶುನಕ ರೂಪದಲ್ಲಿ ಸರಮಾಎಂಬ ಮಾತೃದೇವತೆಯನ್ನು

ಇಂದ್ರನು ವಣರ ಬಳಿಗೆ ರಾಯಭಾರಿಯಾಗಿ ಕಳಿಸಿ ತನಗೆ ಪಶುಗಳನ್ನು 'ಕಪ್ಪ'ವಾಗಿ ಕೊಡಬೇಕೆಂದೂ, ತಪ್ಪಿದಲ್ಲಿ ಆಗುವ ಪ್ರಮಾದಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದೂ ಬೆದರಿಸುತ್ತಾನೆ.

'ದಾಸ' ಎಂದರೆ ನಂತರದ ಕಾಲದಲ್ಲಿ ಸೇವಕ, ಭೃತ್ಯ. ಆದರೆ ಋಗ್ವೇದ ಕಾಲದಲ್ಲಿ 'ದಾಸ' ಎಂದರೆ ಕೇವಲ ಆರ್ಯೇತರ ಎಂದಷ್ಟೇ ಅರ್ಥ. ಇವರು ಆರ್ಯರಿಗೆ ಮುಖ್ಯ ಶತ್ರುಗಳಾಗಿ ಕಾಣುತ್ತಾರೆ. ಇವರನ್ನು ಕೂಡ ರಾಕ್ಷಸರೆಂದೇ ವರ್ಣಿಸುತ್ತಾರೆ. ಅರ್ಬುದ ಎಂಬ ದಾಸನನ್ನು ಇಂದ್ರನು ತನ್ನ ಕಾಲ ಕೆಳಗೆ ಹಾಕಿ ತುಳಿದು ಕೊಂದನು. ನದಿಯ ನೀರಿಗೆ ಅಡ್ಡಲಾಗಿ ಮಲಗಿದ ವೃತ್ರನೆಂಬ ದಾಸನನ್ನು ವಜ್ರಾಯುಧದಿಂದ ಹೊಡೆದು ಈ 'ದಾಸರು' ದೀನದರಿದ್ರರೋ, ಸೇವಕರೋ ಆಗಿದ್ದಿರಲಾರರು ಎಂಬುದನ್ನು ಮತ್ತೊಮ್ಮೆ ಹೇಳಬೇಕಾಗಿದೆ. ಆರ್ಯರು ಕೃಷಿಕ ವರ್ಗ ಸಮಾಜವನ್ನು ರೂಪಿಸಿದ ನಂತರದಲ್ಲಿ, ಈ ದಾಸರಲ್ಲಿ ಕೆಲವರನ್ನು ಶೂದ್ರರನ್ನಾಗಿಸಿ ತಮ್ಮ ಅಧೀನವಾಗಿಸಿಕೊಂಡ ಮೇಲೆ ಇವರ ಹೆಸರೇ ದೀನತೆಯನ್ನು ಸೇವಕತನ ಸ್ವಭಾವನ್ನು ಸೂಚಿಸುವ ಪದವಾಗಿ ಬಿಟ್ಟಿತು. ಋಗ್ವೇದ ಕಾಲದಲ್ಲೇನೂ ಇಂಥ ಅರ್ಥದಲ್ಲಿ ಈ ಮಾತಿನ ಪ್ರಯೋಗವಿಲ್ಲ. ದಾಸರು ಎಂದರೆ ಆರ್ಯೇತರ ಜನ ಮಾತ್ರ. ಅವರು ಕಪ್ಪಗಿದ್ದವರು. (ಅವರ ಪುರಗಳನ್ನು ಕೃಷ್ಣಗರ್ಭ ಎನ್ನಲಾಗಿದೆ. ಎಂದರೆ ಕಪ್ಪಗಿನ ಜನರನ್ನು ತನ್ನ ಹೊಟ್ಟೆಯಲ್ಲಿ ಧರಿಸುವುದು ಎಂಬ ಅರ್ಥ) ಚಪ್ಪಟೆ ಮೂಗುಳ್ಳವರು (ಅನಾಸ-ಎಂದರೆ ಮೂಗಿಲ್ಲದವರು).

ಈ ದಾಸರು ಭೃತ್ಯರಾಗಿ, ಸೇವಕರಾಗಿ ಇನ್ನೂ ಅಧೀನರಾಗಿರದಿದ್ದ ಕಾಲಕ್ಕೆ ಮುಂಚೆಯೇ (ಅಂದರೆ ಋಗ್ವೇದ ಕಾಲದಲ್ಲಿಯೇ) ಆರ್ಯ-ದಾಸ ಮುಖ್ಯರ ವಿಲೀನತೆ ಆರಂಭವಾಗಿದ್ದಿತು. ಈ ವಿಲೀನತೆಯಲ್ಲಿ ಪುರೋಹಿತರು ಮುಖ್ಯಪಾತ್ರ ವಹಿಸಿದರು. ಆಗ ದಾಸ ಪುರೋಹಿತರೂ, ಆರ್ಯ ಪುರೋಹಿತರು ಒಂದಾಗಿ, ಇಬ್ಬರೂ ಕೂಡಿದ ಒಂದು ಬಲವಾದ ಬ್ರಾಹ್ಮಣ ವರ್ಗ ಸೃಷ್ಟಿಯಾಯಿತು. ಸಿಂಧೂ ನಾಗರಿಕತೆಯಲ್ಲಿ ಪುರೋಹಿತ ಪ್ರಾಬಲ್ಯ ಇದ್ದ ಸ್ಥಿತಿಯನ್ನು ಗುರುತಿಸಿದರೆ, ಬಹುಶ: ಈ ಬ್ರಾಹ್ಮಣ ಗೋತ್ರಗಳೂ, ಋಷಿಗಳೂ ಬಹುಮಟ್ಟಿಗೆ ದಾಸರಿಂದಲೇ ಬಂದವರು ಎಂಬುದು ಕೊಸಾಂಬಿಯವರ ಅಭಿಪ್ರಾಯ.

ಯಜಮಾನ ಸಂಸ್ಕೃತಿಯ ಅಥವಾ ಆಳುವ ವರ್ಗ ಆಸ್ತಿಯನ್ನು ಹೊಂದಿದ್ದಾಗ ಉಳಿದ ವರ್ಗಗಳನ್ನು ಆಳಿಸಿಕೊಳ್ಳುವ ವರ್ಗವಾಗಿ ನೋಡುತ್ತದೆ. ಆಳಿಸಿಕೊಳ್ಳುವ ವರ್ಗಗಳನ್ನು ದಾಸರೆಂದು ಪರಿಗಣಿಸಲಾಯಿತು. ದಾಸವರ್ಗದ್ದು ದೈಹಿಕ ಶ್ರಮವೆನ್ನುವುದು ಗಮನಾರ್ಹ.

ವಿವರಗಳಿಗೆ ನೋಡಿ: ಡಿ. ಡಿ. ಕೊಸಾಂಬಿ ೧೯೯೮ ಪ್ರಾಚೀನ ಭಾರತದಲ್ಲಿ ಚರಿತ್ರೆ ಪುಟ. ೮೭-೮೩

ಆರ್.ಎಸ್. ಶರ್ಮ ೨೦೦೪ ಪ್ರಾಚೀನ ಭಾರತದಲ್ಲಿ ಶೂದ್ರರು

ತೋಯಮಂತ್ರ

ತೋಯ ಮಂತ್ರವೆಂದರೆ ಜಲದ ಮೂಲಕ ನಡೆಸುವ ಮಂತ್ರ, ಕ್ರಿಯಾವಿಧಿಯು ಅಲ್ಲಿ ಬಣ್ಣಿತವಾಗಿದೆ. ಜಲ ಸ್ತಂಭನ ವಿದ್ಯೆಯೆಂದು ಅದನ್ನು ಕರೆಯುತ್ತಾರೆ. ಇದು ಪ್ರಾಚೀನ ವಿದ್ಯಾ ಪ್ರಕಾರಗಳಲ್ಲಿ ಒಂದು ಎಂದು ಪರಿಗಣಿತವಾಗಿದೆ.

ತ್ಯಾಗ

ಭಾರತೀಯ ಬಹುತೇಕ ತತ್ವಜ್ಞಾನ ಶಾಖೆಗಳಲ್ಲಿ ತ್ಯಾಗ ಎನ್ನುವುದು ಮಹತ್ವದ ವಿಷಯವಾಗಿದೆ. ಯಾರು ಇಹಲೋಕದಲ್ಲಿ ಇಂದ್ರಿಯಗಳನ್ನು ಗೆದ್ದು, ಸಕಲ ಭೋಗಗಳನ್ನು ತ್ಯಜಿಸಿ ಪಾಪಮುಕ್ತನಾಗುತ್ತಾನೊ ಅವನು ಮರುಜನ್ಮದಲ್ಲಿ ಉತ್ತಮ ಜೀವಿಯಾಗಿ ಹುಟ್ಟುತ್ತಾನೆ. ಇಲ್ಲವೆ ಸ್ವರ್ಗವನ್ನು ಪಡೆಯುತ್ತಾನೆ. ಆದುದರಿಂದ ಪಾಪಕರ್ಮಗಳಿಂದ ದೂರವಿದ್ದು, ಸಕಲವನ್ನೂ ತ್ಯಾಗಮಾಡಿ ಧ್ಯಾನಪರರಾಗಿ ಇದ್ದಾಗ ಮಾತ್ರ ಅವನ ಜೀವನಕ್ಕೆ ಒಂದು ಅರ್ಥವಿರುತ್ತದೆ ಎಂದು ಭಾರತೀಯ ಪ್ರಮುಖ ತತ್ವಜ್ಞಾನಗಳು ಒಪ್ಪಿಕೊಂಡಿವೆ. ಅದರಲ್ಲಿಯೂ ಅನಾಥರಿಗೆ, ಬಡವರಿಗೆ ತಮ್ಮಲ್ಲಿ ಇರುವುದನ್ನು ತ್ಯಾಗಮಾಡುವುದು ಅತ್ಯುತ್ತಮ ಸೇವೆ ಎಂದು ಭಾರತೀಯ ತತ್ವಜ್ಞಾನದ ಹಲವು ಶಾಖೆಗಳು ನಂಬಿವೆ.

ರಾಮಕೃಷ್ಣ ಪರಮಹಂಸ, ವಿವೇಕಾನಂದ, ಗಾಂಧಿ ಮೊದಲಾದವರ ನಂಬಿಕೆಯು ಕೂಡ ಇದುವೆ ಆಗಿದೆ. ಕ್ರಿಶ್ಚಿಯನ್ ಮತವು ಕೂಡ ಇದನ್ನು ನಂಬುತ್ತದೆ.

ಇಂಗ್ಲಿಷ್‌ನಲ್ಲಿ Charity ಎನ್ನುವ ಪದವಿದೆ. ಇದರ ಮೂಲ ಫ್ರೆಂಚ್‌ನದು. ಫ್ರೆಂಚ್‌ನಲ್ಲಿ Charite, ರೋಮನ್‌ನಲ್ಲಿ Corus ಅಂದರೆ ಪ್ರೀತಿಪಾತ್ರರಾದವರು ಎಂದರ್ಥ. ಬೈಬಲ್‌ನಲ್ಲಿಯೂ ದುಃಖಾರ್ತರನ್ನು ಸೇವೆ ಮಾಡು ಮತ್ತು ಅವರಿಗಾಗಿ ತಮ್ಮ ಬಳಿ ಇರುವುದನ್ನು ಕೊಡು ಎಂದು ಹೇಳುತ್ತದೆ.

Charity ಎಂದರೆ ಕ್ರಿಶ್ಚಿಯನ್ ಧರ್ಮದ ಪ್ರಕಾರ ದೇವರು ಮತ್ತು ಮನುಷ್ಯನ ನಡುವಣ ಪ್ರೇಮ ಮತ್ತು ಅಕ್ಕಪಕ್ಕದವರ ಜೊತೆಗೆ ಒಳ್ಳೆಯ ನಡತೆಯನ್ನು ಇಟ್ಟುಕೊಳ್ಳುವುದು.

ದಯೆ, ಧರ್ಮ, ತ್ಯಾಗ, ಕರುಣೆ ಇವೆಲ್ಲವು ಸಮಾನಾರ್ಥಕವಾಗಿ ಕೆಲಸ ಮಾಡುತ್ತವೆ. ಇವುಗಳ ಮೂಲ ಧ್ವನಿ ಏನೆಂದರೆ ಮನುಷ್ಯನು ಮನುಷ್ಯರನ್ನು ಪ್ರೀತಿಸುವುದು ಮತ್ತು ಗೌರವದಿಂದ ವರ್ತಿಸುವುದು. ಜಗತ್ತಿನಲ್ಲಿ ಶಾಂತಿ ಉಳಿಯಬೇಕಾದರೆ ಇದು ಮುಖ್ಯ ಸೂತ್ರವಾಗಿದೆ. ಆದರೆ ಹದಿನೆಂಟನೆ ಶತಮಾನದ ನಂತರ Charitable trustಗಳು ಬಂದು ಅವುಗಳ ಮೂಲಕ ಸಮಾಜಕಾರ್ಯಗಳು ನಡೆಯಲು ಪ್ರಾರಂಭವಾದವು. ಯಾವಾಗ Charitable ಸಂಸ್ಥೆಗಳು ಪ್ರಾರಂಭವಾದವೊ ಆಗ ಸಾರ್ವಜನಿಕರಿಂದ ವಂತಿಗೆಯನ್ನು ಕೂಡ ಪಡೆಯಲಾಯಿತು. ಇದರಿಂದಾಗಿ

Charitable trustಗಳು ನೊಂದವರನ್ನು ಸೇವೆ ಮಾಡುವ ಸಂಸ್ಥೆಗಳೆಂದು ಹೆಸರನ್ನು ಪಡೆದವು. ಇದರಿಂದಾಗಿ Charitable trustಗಳ ಸಂಪನ್ಮೂಲದ ಕ್ರೋಢೀಕರಣ ಮತ್ತು ಅವುಗಳ ವಿತರಣೆಯ ಕ್ರಮ ಹಿಂದಿನ ಉದ್ದೇಶಕ್ಕಿಂತ ಬೇರೆಯಾಯಿತು. ವಾಸ್ತವವಾಗಿ ಜನರಿಗೆ ಬೇಕಾಗಿರುವುದು ಮತ್ತೊಬ್ಬರ ಸೇವೆಯಲ್ಲ. ಅವರು ಪಡೆಯಬೇಕಾಗಿರುವುದು ಅವರ ಆ ಜನ್ಮ ಸಿದ್ಧ ಹಕ್ಕುಗಳನ್ನು. ಅದನ್ನು Charitable trust ಗಳೂ ಮರೆತಿವೆ. ಹಾಗೆಯೇ ಅನೇಕ ದೇಶಗಳ ಸರಕಾರಗಳು ಮರೆತಿವೆ. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ತ್ಯಾಗ ಮತ್ತು ಸೇವೆಗೆ ವಿಶಿಷ್ಟ ಅರ್ಥಗಳು ಬಂದವು. ಅದರಲ್ಲಿಯೂ ರಾಮಕೃಷ್ಣ ಮಿಷನ್‌ನವರು ಮಾಡಿದ ಕೆಲಸವು ಚಾರಿತ್ರಿಕವಾಗಿ ಮುಖ್ಯವಾದುದು. ಸ್ವತಃ ರಾಮಕೃಷ್ಣ ಪರಮಹಂಸರು, ವಿವೇಕಾನಂದರು, ಗಾಂಧಿ ಮೊದಲಾದವರು ಯಾವುದೇ ಜಾತಿ ಭೇದವಿಲ್ಲದೆ ಜನಸಾಮಾನ್ಯರ ಸೇವೆಗೆ ನಿಂತದ್ದಕ್ಕೆ ತಾತ್ವಿಕವಾದ ತಳಹದಿಯಿದೆ. ಇದು ಭಾರತೀಯ ಸನಾತನವಾದ ಧಾರ್ಮಿಕ ಚಹರೆಯಿಂದ ಹುಟ್ಟಿಕೊಂಡದ್ದಾಗಿದೆ.

ವಿವರಗಳಿಗೆ ನೋಡಿ: Raymond Williams 1983 keywords P. 54, 55

ಡಿ.ವಿ.ಜಿ. ೧೯೯೬ ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ

ಸ್ವಾಮಿ ಆದಿದೇವಾನಂದ ೧೯೭೦ ಪಾತಂಜಲಿ-ಯೋಗ ದರ್ಶನ

ಎನ್.ಬಾಲಸುಬ್ರಹ್ಮಣ್ಯ ೧೯೭೩ ವೇದಾಂತಸಾರ

ತ್ರಯಾಗ್ನಿ

ಆಹವನೀಯ; ಗ್ರಾಹ್ಯಪತ್ಯ, ದಕ್ಷಿಣಾಗ್ನಿಗಳೆಂಬುದು ಮೂರು ವಿಧ. (ಅಪಾನ–) ಗಾರ್ಹಪತ್ಯ, (ವ್ಯಾನ–) ಅನ್ವಾಹಾರ್ಯಪಚನ, (ಪ್ರಾಣ–) ಆಹವನೀಯ (ಪ್ರಶ್ನೆ.4–3) ಅಥವಾ ಗಾರ್ಹ್ಯಪತ್ಯ, (ಪಿತಾ), ದಕ್ಷಿಣ (ಮಾತಾ), ಆಹವನೀಯ (ಗುರು) (ಮನು. 2–231; ಅಮರ. 2–7–424) ತನುಗಳು (ಅನುಕ್ರಮವಾಗಿ): ಪೃಥಿವಿ, ಅಗ್ನಿ, ಅನ್ನ, ಆದಿತ್ಯ; ಅಪ್ಪು, ದಿಕ್ಕುಗಳು, ನಕ್ಷತ್ರಗಳು, ಚಂದ್ರ; ಪ್ರಾಣ, ಆಕಾಶ, ದ್ಯುಲೋಕ, ಮಿಂಚು (ಛಾಂದೋಗ್ಯ. 4–11–1, 4–12–1, 4–13–1) (ಆ) ಜ್ಞಾನಾಗ್ನಿ, ದರ್ಶನಾಗ್ನಿ, ಕೋಷ್ಠಾಗ್ನಿ (ಜಠರಾಗ್ನಿ) (ಸಂ.9). (ಇ) ಕ್ರೋಧಾಗ್ನಿ, ಕಾಮಾಗ್ನಿ, ಉದರಾಗ್ನಿ (ಉತ್ತಪು.381–202). ಎಂದು ಶ್ರೀ ವತ್ಸ ನಿಘಂಟಿನಲ್ಲಿ ಕೊಡಲಾಗಿದೆ. ಗ್ರಾಹ್ಯಪತ್ಯ-ಗೃಹಸ್ಥರು ಮಾಡುವ ಯಜ್ಞವಿಧಿ. ಆಹವನೀಯ ಆಹ್ವಾನಿಸಲಾಗಿರುವುದು. ದಕ್ಷಿಣಾಗ್ನಿ(ಮಾತಾ) ಎಂದು ಮೂರು ವಿಧ. ಗ್ರಾಹಪತ್ಯ. ಆಹವನೀಯ ದಕ್ಷಿಣಾಗ್ನಿಗಳು ಸುಪ್ರಸಿದ್ಧವಾದವುಗಳು. *(ಟಿ.ವಿ.ವೆಂಕಟಾಚಲ ಶಾಸ್ತ್ರಿ)*

ತ್ರಿಕರಣ ಶುದ್ಧಿ

ತ್ರಿಕರಣವೆಂದರೆ ಮೂರು ಕರಣಗಳು ಎಂದು ಅರ್ಥ ಮನಸ್ಸು, ವಾಕ್, ಕಾಯ ಇವು ಮೂರು ಶುದ್ಧವಾಗಿರಬೇಕು. ಈ ಮೂರು ವಾಸ್ತವವಾಗಿ ತ್ರಿಕರಣಗಳಾಗಿವೆ. ಕರ್ಮೇಂದ್ರಿಯಗಳ ಆ ಪಳಕವನ್ನೇ 'ತಪಸ್' ಎನ್ನುವುದು. ಆ ಗುರಿಯಿಲ್ಲದೆ ಬರಿಯ ಮೂಗುಮುಟ್ಟುವ ತಪಸ್ಸೆಂದರೆ, ಅರ್ಥವನ್ನರಿಯದ ಗಿಳಿಪಾಠದ ವೇದಾಧ್ಯಯನವೇ ಸರಿ. ಅಂಥ 'ತಪಸ್ಸಿನಿಂದಲೇ ಮನೋವಾಕ್ಕಾಯರೂಪ ತ್ರಿಕರಣ ಪರಿಶುದ್ಧಿ ನೆಲೆಗೊಳ್ಳುವುದು. ಈ ತ್ರಿಕರಣ ಪರಿಶುದ್ಧಿ ಎಂದರೆ, ಧಾರ್ಮಿಕಾಂತ ರಂಗಾಂಶವಾದ ಮನಸ್ಸಿನಲ್ಲೆಣಿಸಿದಂತೆ ಮಾತು (ವಾಕ್– ಕರ್ಮೇಂದ್ರಿಯ), ಮಾತಿನಲ್ಲೆಂದಂತೆ ಮಾಡಿಕೆಗಳು ಅನ್ವಯವಡೆವುದು. ತ್ರಿಕರಣೈಕ್ಯವೇ ಸತ್ಯವು. ಇಂಥ ಸತ್ಯಾಚಾರವನ್ನೇ 'ಶೀಲ' (ಸ್ವಭಾವ) ಎನ್ನುವುದು. ಇಂಥ ಶೀಲದಲ್ಲಿ ಯಾವಾಗಲೂ ಚೈತನ್ಯಸಾರವಾದ ದಯೆ ಸುರಿಯುತ್ತಲೇ ಇರುತ್ತಿದೆ. ದಯೆ ಎಂದರದು ವಿಶ್ವಪ್ರೇಮ ರೂಪವಾದುದು.ಇಲ್ಲಿ ಮೂರು ಕರಣಗಳ ಶುದ್ಧಿಯು ಮುಖ್ಯ.ಕಾಯದ ಶುದ್ಧಿಯು ಸ್ನಾನಾದಿಗಳಿಂದ ಸಾಧ್ಯ.ವಾಕ್ ಅಂದರೆ ಮಾತು.ಇದು ಮಾತಿನ ಪಾವಿತ್ರವನ್ನು ಸೂಚಿಸುತ್ತದೆ.ಮನೋಶುದ್ಧಿಯು ಮನಸ್ಸಿನ ಶುದ್ಧತೆಯನ್ನು ಸೂಚಿಸುತ್ತದೆ.

ತ್ರಿಗುಣ

ಕಾಮಜನಕ ತಮೋಗುಣಕ್ಕಿಂತ ರಜಸ್ಸು, ಅರ್ಥಕಾರಕ ರಜೋಗುಣಕ್ಕಿಂತ ಸತ್ವ ಶ್ರೇಷ್ಠವಾಗಿದೆ. ಸತ್ವವು ಧರ್ಮಜನಕವಾಗಿದೆ. ಅರ್ಥಕಾಮಗಳು ಧರ್ಮದಿಂದ ನಿರಾಬಾಧವಾಗಿ ಬರುವುವು. (ಮನುಸ್ಮೃತಿ 12–38)

ಸತ್ವಗುಣಯುಕ್ತರು ದೇವತ್ವವನ್ನು, ರಜೋಗುಣ ಪ್ರಧಾನರು ಮನುಷ್ಯತ್ವವನ್ನು, ತಾಮಸಿಗಳು ಪ್ರಾಣಿಜನ್ಮವನ್ನು ಹೊಂದುತ್ತಾರೆ.

ತ್ರಿಪುಂಡ್ರ

ಹಣೆಯ ಮೇಲೆ ಧರಿಸುವ ಮೂರು ಗೆರೆಯನ್ನು ತ್ರಿಪುಂಡ್ರವೆಂದು ಕರೆಯುತ್ತಾರೆ. ತ್ರಿಪುಂಡ್ರವೆಂದರೆ ಹಣೆಯಲ್ಲಿ ಮೂರು ವಿಭೂತಿಯ ಅಡ್ಡನಾಮ ಧರಿಸುವುದು. ನಾಮಗಳು ಮತ್ತು ತಿಲಕಗಳು ಧಾರ್ಮಿಕ ಸಂಕೇತಗಳಾಗಿವೆ. ಕಸ್ತೂರಿ ತಿಲಕ; ಉದ್ದನಾಮ ವೈಷ್ಣವ ಸಂಕೇತಗಳು, ಅಡ್ಡನಾಮವು ಶೈವ ಸಂಕೇತ, ಶಿವನು ಸ್ಮಶಾನದ ಬೂದಿಯನ್ನು ಧರಿಸುತ್ತಿದ್ದನು. ವಿಭೂತಿ ನಾಮ ಇದನ್ನು ಸಂಕೇತಿಸುತ್ತದೆ.

ತ್ರಿಭಾಷಾ ಸೂತ್ರ

ಯಾವಾಗಲೂ ಪ್ರಧಾನ ಸಂಸ್ಕೃತಿಯು ತನಗೆ ಬೇಕಾದ ಭಾಷೆಯನ್ನು ಸೃಷ್ಟಿಸುತ್ತದೆ. ಅದು ನಿರ್ದಿಷ್ಟ ಕ್ರಿಯಾತ್ಮಕ ಸ್ವರೂಪವನ್ನು ಒಳಗೊಂಡಿರುತ್ತದೆ. ಭಾರತೀಯ ಪರಿಸರದಲ್ಲೂ ಇದೇ ಸಂಗತಿಗಳು ಜರುಗಿದವು. ೧೮೩೫ ರಲ್ಲಿ

ವಿಲಿಯಂ ಬೆಂಟಿಂಕ್‌ನ ಇಂಗ್ಲಿಷ್ ಎಜುಕೇಷನ್ ಆಕ್ಟ್ ಜಾರಿಗೆ ಬಂತು. ಆ ಸಂದರ್ಭದಲ್ಲಿಯೇ ತ್ರಿಭಾಷಾ ಸೂತ್ರವೂ ಶಿಕ್ಷಣ ಕ್ರಮಕ್ಕೆ ಅನ್ವಯವಾಯಿತು. ವಿಶೇಷವೆಂದರೆ ಸಂಸ್ಕೃತ ಕಾಲೇಜು ಮತ್ತು ಮದರಸಗಳಲ್ಲಿ ಇಂಗ್ಲಿಷ್ ಕಲಿಕೆ ಇರಲಿಲ್ಲ.

ವಿವರಗಳಿಗೆ ನೋಡಿ: ಮೋಹನ್ ದಾಸ್ ಕರಮಚಂದ್ ಗಾಂಧಿ ೧೯೬೬ ಜೀವನ ಶಿಕ್ಷಣ

Gauri Vishwanathan 1989 Masks of Conquest

ತ್ರಿಲೋಕ

ಜೈನ ಧರ್ಮದಲ್ಲಿ ಮೂರು ಲೋಕಗಳ ಬಗ್ಗೆ ಮಾತ್ರ ಉಲ್ಲೇಖವಾಗುತ್ತದೆ.- ಊರ್ಧ್ವ ಲೋಕ: ಮಧ್ಯಮ ಲೋಕ ಹಾಗೂ ಅಧೋಲೋಕಗಳು. ಪುರಾಣಗಳ ಪ್ರಕಾರ ಸಪ್ತ ಲೋಕಗಳು.

ಇವುಗಳಲ್ಲಿ ಸ್ವಾಭಾವಿಕವಾಗಿ ಅಧೋಲೋಕದ ಆಕಾರವು ಬೆತ್ತದ ಆಸನದಂತೆ, ಮಧ್ಯಲೋಕದ ಆಕಾರವು ನಿಲ್ಲಿಸಿದ ಅರ್ಧ ಮೃದಂಗದಂತೆ- ಊರ್ಧ್ವಲೋಕದ ಆಕಾರವು ನಿಲ್ಲಿಸಿದ ಮೃದಂಗದಂತೆ ಇರುತ್ತದೆ. ಈಗ ಈ ಮೂರು ಲೋಕಗಳ ಆಕೃತಿ ಪರಿಮಾಣವನ್ನು ಶ್ರೀವತ್ಸ ನಿಘಂಟಿನಲ್ಲಿ ಹೀಗೆ ನಿರೂಪಿಸಲಾಗಿದೆ. ಅಧೋಲೋಕ, ಮಧ್ಯಲೋಕ ಮತ್ತು ಊರ್ಧ್ವಲೋಕಗಳು ಅನುಕ್ರಮವಾಗಿ ಏಳುರಜ್ಜು, ಒಂದುಲಕ್ಷ ಯೋಜನೆ ಮತ್ತು ಒಂದು ಲಕ್ಷ ಯೋಜನೆ ಕಡಿಮೆ ಏಳು ರಜ್ಜುಗಳಷ್ಟು ಎತ್ತರವಾಗಿವೆ.

ಲೋಕ–3: (ಅ) ಇಹಲೋಕ–(ಭೂಮಿ), ಅಂತರ್–(ಅಂತರಿಕ್ಷ), ದ್ಯು–(ದ್ಯೌ) (ಛಾಂದೋಗ್ಯ. 30). (ಆ) ಮನುಷ್ಯಲೋಕ, ಪಿತೃ–, ದೇವ–,(ಬೃಹದಾ.1–5–16); ಕೇನ. ಭಾ.5 ಐತರೇ. 25). (ಇ) ಪುತ್ರ, ಕರ್ಮ, ಉಪಾಸನಾ (ಬೃಹದಾ. 1–5–16). (ಈ) ಭೂಃ, ಭುವಃ, ಸ್ವಃ(ಬೃಹದಾ. I-1–5–4; ಗೀತಾಭಾ.378; ಗೌಧಸೂ. 25–6 ಭಾ). (ಉ) ನೋ. ಜಗತ್ತು–3 (ಊ)ಅಧೋಲೋಕ, ಮಧ್ಯ–, ಊರ್ಧ್ವ– (ಆದಿಪು; 1–50) (ಋ) ಜನಲೋಕ–, ತಪೋ–, ಸತ್ಯ– (ವಿಷ್ಣುಪು. II-7–19–ಪು. ಇಂ. II 54).

ಲೋಕ–4: (ಅ) ಕರ್ಮಿ, ಭಕ್ತ, ಜ್ಞಾನಿ, ಯೋಗಿ (ರಾಮಗೀತಾ. 11–3). (ಆ) ದೇವಲೋಕ, ಸತ್ಯಲೋಕ, ವೈಕುಂಠ, ಕೈಲಾಸ.

ಲೋಕ–5: (ಅ) ಸತ್ಯಲೋಕ, ವೈಕುಂಠಲೋಕ, ಕೈಲಾಸ, ಆಶ್ರಯ, ನಿರಾಶ್ರಯ (ಕಪಿಲಗೀತಾ. 2–26). (ಆ) ಸಮಸ್ತಲೋಕ, ಅಧೋ–, ಊರ್ಧ್ವ–, ತಿರ್ಯಕ್–, ಮನುಷ್ಯ–(ಜೈಧ. 320).

ಲೋಕ–7: ಭೂಲೋಕ (ಭೂಃ), ಭುವರ್ಲೋಕ (ಭುವಃ), ಸ್ವರ್ಲೋಕ (ಸ್ವಃ), ಮಹರ್ಲೋಕ (ಮಹಃ), ಜನಲೋಕ(ಜನಃ) ತಪೋಲೋಕ(ತಪಃ), ಸತ್ಯಲೋಕ (ಸತ್ಯಮ್) (ವಾಯುಪು. ಪೂ. 50–79; ಗರುಡ. 15–58; ಯಾಪ್ರಪಾ. 1–3). ಸ್ಥಾನಗಳು: ನಾಭಿಮಧ್ಯ, ಉದರ, ಹೃದಯ, ಕಂಠ, ವಕ್ತ್ರ, ಲಲಾಟ, ಬ್ರಹ್ಮರಂಧ್ರ (ಗರುಡ. 15–58, 59)

ಲೋಕ–8: ಅಗ್ನಿ, ಹೃದಯ, ಚಕ್ಷುಸ್ಸು, ಶ್ರೋತ್ರ, ಹೃದಯ, ಚಕ್ಷುಸ್ಸು, ಹೃದಯ, ಹೃದಯ (ಬೃಹದಾ. II –124).

ಲೋಕ–9: ಪಿತೃಲೋಕ, ಮಾತೃ–, ಭ್ರಾತೃ–, ಸ್ವಸೃ–, ಸಖೀ–, ಗಂಧಮಾಲ್ಯ–, ಅನ್ನಪಾನ–, ಗೀತವಾದಿತ್ರ–, ಸ್ತ್ರೀ–(ಛಾಂದೋಗ್ಯ. 8–2–1–9). ಲೋಕದ ಪರಿಕಲ್ಪನೆಯು ವಿಶಿಷ್ಟವಾಗಿದೆ. ಮೇಲೆ ಸೂಚಿತವಾದಂತೆ ಲೋಕವೆನ್ನುವುದಕ್ಕೆ ಬೇರೆ ಅರ್ಥಗಳಿವೆ.

ಬೃಹದಾರಣ್ಯಕದಲ್ಲಿ ಯಾವುದೇ ಕಲ್ಪನಾ ವೈಚಿತ್ರಗಳಿಲ್ಲದೆ ಖಂಡತುಂಡವಾಗಿ ಹೀಗೆ ಹೇಳಿದೆ: "ಮೂರು ಲೋಕಗಳಿವೆ – ಮನುಷ್ಯ ಲೋಕ, ಪಿತೃಲೋಕ, ದೇವಲೋಕ. ಮನುಷ್ಯಲೋಕವನ್ನು ಪುತ್ರನಿಂದಲೂ, ಪಿತೃಲೋಕವನ್ನು ಯಾಗದಿಂದಲೂ ದೇವಲೋಕವನ್ನು ವಿದ್ಯೆಯಿಂದಲೂ ಜಯಿಸಬಹುದು. ಇವುಗಳಲ್ಲಿ ಶ್ರೇಷ್ಠವಾದುದು ದೇವಲೋಕ. ಆದ್ದರಿಂದ ವಿದ್ಯೆಯನ್ನು ಪ್ರಶಂಸಿಸಲಾಗಿದೆ". (೧, ೫, ೧೬). ವಿದ್ಯೆಯೆಂದರೆ ಕೆಲವರು ಧ್ಯಾನವೆಂದು ಹೇಳುತ್ತಾರೆ. ರಾಮಾನುಜಾಚಾರ್ಯರು ಬ್ರಹ್ಮವಿದ್ಯೆ ಎಂಬ ಭಾಷ್ಯದಲ್ಲಿ ಇದನ್ನು ಹೇಳುತ್ತಾರೆ. ಸಾವಿರ ವರ್ಷಗಳು ಯಾಗ ಮಾಡಿದರೂ ಫಲವಿಲ್ಲ; ಒಬ್ಬ ಕೃಪಣನು ಮಾತ್ರ ಅದನ್ನು ಮಾಡುತ್ತಾನೆ; ಬ್ರಾಹ್ಮಣನು ಬ್ರಹ್ಮನನ್ನು ಅರಿಯುತ್ತಾನೆ (ಬೃಹ. ೩, ೮, ೧೦). ಯಾಗವು ಅಜ್ಞಾನವೆಂದೂ ಬ್ರಹ್ಮಜ್ಞಾನ ಅಮೃತವೆಂದೂ ರಾಮಾನುಜರು ಭಾಷ್ಯದಲ್ಲಿ ಹೇಳಿದ್ದಾರೆ.

(ಸುಕುಮಾರ್ ಅಟಿಕ್ಕೋಡ್ ೨೦೦೫ ತತ್ವಮಸಿ ಪುಟ ೧೦೦) ಮೂರು ಲೋಕದ ಕಲ್ಪನೆಯಲ್ಲಿ ಭೂಲೋಕವು ನಮ್ಮ ಲೌಕಿಕಕ್ಕೆ ಸಂಬಂಧಿಸಿದೆ. ಭೂಮಿಯನ್ನು ಮೇದಿನಿಯೆಂದು ಪುರಾಣಗಳು ಕರೆದಿವೆ. ಮೇದಿನಿಯ ಪರಿಕಲ್ಪನೆಯು ದೇವಿ ಮಹಾತ್ಮೆಯಲ್ಲಿ ಬರುತ್ತದೆ, ಮಧು ಕೈಟಭರ ಮೇದಸ್ಸಿನಿಂದ ರಚಿತವಾದುದು ಮೇದಿನಿ. ಪೃಥು ರಾಜನಿಂದ ಆಳಲ್ಪಟ್ಟದ್ದು ಪೃಥ್ವಿ

ತ್ರಿವಿದ್ಯೆ

ತ್ರೈವಿದ್ಯೆಯೆಂದರೆ ಋಕ್, ಯಜಸ್, ಸಾಮವೇದಗಳನ್ನು ತಿಳಿದವನು. ಜೈನರಲ್ಲಿ ಜೀವಸ್ಥಾನ, ಕ್ಷುದ್ರಕ ಸಂಬಂಧ, ಬಂಧ ಸ್ವಾಮಿತ್ವ, ವಿಚಯಗಳೆಂಬ ಆರು ಖಂಡಾಗಮವನ್ನು ಮೂರು ಖಂಡಗಳನ್ನು ತಿಳಿದವನು. ವ್ಯಾಕರಣ, ತರ್ಕ, ಸಿದ್ಧಾಂತಗಳು ಇವುಗಳನ್ನು ಯಾರು ಓದಿರುತ್ತಾರೆಯೋ ಅವರು ತ್ರೈವಿದ್ಯಾ ಪಾರಂಗತರು. ಇಲ್ಲಿ ಬೇರೆ ವಿದ್ಯೆಗಳನ್ನು ಪರಿಗಣಿಸಿಲ್ಲವೆಂಬುದು ಗಮನಾರ್ಹ.

ತ್ರಿಶಲ್ಯ

ತ್ರಿಶಲ್ಯವೆಂದರೆ ಮಾಯೆ; ಮಿಥ್ಯೆ; ಮತ್ತು ನಿಧಾನಗಳು. ಇದರ ಕುರಿತಂತೆ ಅನೇಕ ಜೈನ ಕಾವ್ಯಗಳಲ್ಲಿ ಬರುತ್ತದೆ.

ತ್ರೀಂದ್ರಿಯ

ಸ್ಪರ್ಶನ, ರಸನ, ಘ್ರಾಣೇಂದ್ರಿಯಗಳುಳ್ಳ ಜೀವಿಗಳು. ಜೈನಧರ್ಮದಲ್ಲಿ ವಿಶಿಷ್ಟ ಪರಿಕಲ್ಪನೆಗಳಲ್ಲಿ ಇದೂ ಒಂದು.

ತ್ರಿಸಂಧ್ಯೆ

ತ್ರಿಸಂಧ್ಯೆ-ಬೆಳಿಗ್ಗೆ, ಮಧ್ಯಾಹ್ನ, ಸಂಜೆ ತ್ರಿಸಂಧ್ಯಾ ಸೇವೆಯೆಂದರೆ ಬೆಳಿಗ್ಗೆ, ಮಧ್ಯಾಹ್ನ, ಸಂಜೆಗಳಲ್ಲಿ ಮಾಡುವ ಸೇವೆಯೆಂದು ಅರ್ಥ.

ದಂಡ

ಕೌಟಿಲ್ಯನು ರಾಜನನ್ನು ದಂಡಧರ ಎಂದು ಕರೆದಿದ್ದಾನೆ. ಮನು ಹೇಳಿರುವುದನ್ನು ಗಮನಿಸಿದರೆ ಈ ಮಾತಿನ ಅರ್ಥ ಸ್ಪಷ್ಟವಾದೀತು. ಮನು ಹೇಳುವುದಿದು. "ಲೋಕಕ್ಕೆ ರಾಜನಿಲ್ಲದಿದ್ದಾಗ ಅದು ಭಯಪೀಡಿತವಾಗಿತ್ತು. ದುಷ್ಟ ಶಿಕ್ಷಣ ಶಿಷ್ಟ ಪರಿಪಾಲನೆಗಳ ಮೂಲಕ ಲೋಕವನ್ನು ರಕ್ಷಿಸುವುದಕ್ಕಾಗಿ ಬ್ರಹ್ಮನು ರಾಜನನ್ನು ಸೃಷ್ಟಿಸಿದನು. ರಾಜನಿಗೆ ನೆರವಾಗಲು ತನ್ನ ಮಗನೂ ಸರ್ವಭೂತ ಹತ ರಕ್ಷಕನೂ ಆದ ದಂಡನನ್ನು ಸೃಷ್ಟಿಸಿದನು. ದಂಡನು ಬ್ರಹ್ಮ ತೇಜಸ್ಸಿನಿಂದ ಪ್ರಕಾಶಿತನು. ಅವನ ಭಯದಿಂದ ಸರ್ವಭೂತಗಳೂ ತಮ್ಮ ಧರ್ಮವನ್ನನುಸರಿಸುವುವು. ದಂಡನೇ ಪ್ರಭುವು. ನಾಲ್ಕು ಆಶ್ರಮಗಳವರೂ ತಮ್ಮ ಧರ್ಮಗಳನ್ನು ಪಾಲಿಸುವುದಕ್ಕೆ ಅವನೇ ಹೊಣೆ. ಸರ್ವವೂ ನಿದ್ರಿಸುತ್ತಿರುವಾಗ ಅವನು ಜಾಗ್ರತನಾಗಿರುವನು. ಧರ್ಮದ ಮೂರ್ತಿಯೇ ಅವನು. ಧೀಮಂತನಾದ ದೊರೆ ದಂಡನ ನೆರವಿನಿಂದ ಪ್ರಜಾಕ್ಷೇಮವನ್ನುಂಟುಮಾಡುವನು. ಪ್ರಜಾಕ್ಷೇಮದ ಅಥವಾ ಲೋಕಕಲ್ಯಾಣದ ಸಾಧನೆಗೆ ದೇವತೆಗಳ ನೆರವು ಸಿಗಬೇಕಾದರೂ ದಂಡನ ಸಹಾಯದಿಂದಲೇ. ಅಸಂಸ್ಕೃತನಾದ ಅಕೃತಾತ್ಮನಾದ ರಾಜನ ಕೈಯ್ಯಲ್ಲಿನ ದಂಡ ಅವನಿಗೆ ಶತೃವಾಗುವುದು. ಅವನ ವಂಶವನ್ನು ನಿರ್ಮೂಲ ಮಾಡುವುದಲ್ಲದೆ ಅವನ ರಾಜ್ಯದ ಪ್ರಜೆಗಳೂ ಋಷಿಮುನಿಗಳೂ ದೇವತೆಗಳೂ ಸಂಕಟಕ್ಕೀಡಾಗುವರು". ರಾಜನು ನಾಲ್ಕು ರೀತಿಯಲ್ಲಿ ವ್ಯವಹರಿಸಬೇಕು. ಸಾಮ, ಧಾನ, ಭೇದ ದಂಡ. ಮೊದಲನೆಯ ಸಾಮವು ಹಿತವಚನವನ್ನು ಸೌಮ್ಯ ಮಾರ್ಗವನ್ನು ಸೂಚಿಸುತ್ತದೆ. ಎರಡನೆಯದು ಭೇದ, ಅಂದರೆ ಶತ್ರುಪಕ್ಷದಲ್ಲಿ ಭೇದೋಪಾಯದಿಂದ ತಾರತಮ್ಯ ಉಂಟಾಗುವಂತೆ ಮಾಡುವುದು. "ಭೇದದಲ್ಲಿ ಹೊಕ್ಕಿರಿದನೋ ಪರಮಾತ್ಮ" ಎಂದು ಕರ್ಣ ಕೃಷ್ಣನ ಬಗ್ಗೆ ಹೇಳುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಕೃಷ್ಣ ಸಂಧಾನ

ಮುರಿದುಬಿದ್ದು, ಕೃಷ್ಣನು ಮರಳಿಗೆ ಹೊರಡುವಾಗ ಮಾರ್ಗಮಧ್ಯದಲ್ಲಿ ಸಿಕ್ಕಿದ ಕರ್ಣನಿಗೆ ಅವನ ಜನ್ಮವೃತ್ತಾಂತವನ್ನು ತಿಳಿಸುತ್ತಾನೆ. ಇದನ್ನು ಭೇದೋಪಾಯ ಎನ್ನಬಹುದು. ದಾನವೆಂದರೆ ಇನ್ನೊಬ್ಬರಿಗೆ ಕೊಡುವುದು. ಇದರಲ್ಲಿ ಪ್ರತಿಫಲಾಪೇಕ್ಷೆಯು ಇರಕೂಡದು. ಕೊನೆಯದು ದಂಡ. ದಂಡವೆಂದರೆ ಶಿಕ್ಷೆಯೆಂಬ ಅರ್ಥವು ಇದೆ. ರಾಜನು ಈ ರೀತಿಯ ನಾಲ್ಕು ಮಾರ್ಗಗಳನ್ನು ಕೈಗೊಳ್ಳುತ್ತಾನೆ. ಇದನ್ನು ರಾಜಧರ್ಮವೆಂದು ಕರೆಯುತ್ತಾರೆ. ಒಂದು ದೃಷ್ಟಿಯಿಂದ ಇವು ರಾಜ ಶಾಸನವೂ ಹೌದು. ಆದರೆ ರಾಜ ಶಾಸನಕ್ಕೆ ಯಾವುದೇ ರೀತಿಯ ಬರಹ ರೂಪಗಳಾಗಿಲ್ಲ. ವಸಾಹತು ಪೂರ್ವದ ರಾಜಾಡಳಿತ ಇದನ್ನು ಹೊಂದಿತ್ತು ಎಂದು ರಣಜಿತ್ ಗುಹಾ ಹೇಳುತ್ತಾರೆ.

ಧರ್ಮವನ್ನು ಕಾಪಾಡಲು ಪರಮಾತ್ಮನು ದಂಡವನ್ನು ನಿರ್ಮಿಸಿದನು. ಇವರ ಹೆದರಿಕೆಯಿಂದ ಎಲ್ಲಾ ಜೀವಿಗಳು ಸನ್ಮಾರ್ಗವನ್ನು ಅವಲಂಬಿಸಬೇಕಾಗುತ್ತದೆ. ಈ ತತ್ವದ ಪುರುಷಾಕಾರವಿದ್ದಂತೆ ರಾಜನಿದ್ದಾನೆ. ರಾಜನು ದೇವಾಂಶನು ಆದುದರಿಂದ ಪ್ರಜಾರಕ್ಷಣೆಯಲ್ಲಿ ಆತನು ನಿಜಕ್ಕೂ ದೇವರ ಪ್ರತಿನಿಧಿಯಾಗಿದ್ದಾನೆ ಎಂದು ಮನುವು ಹೇಳುತ್ತಾನೆ.

(ಮನುಸ್ಮೃತಿ 7 –22; 4–301, 9–303–11)

ದಂಡವು ರಾಜನ ಗೌರವವನ್ನು ಕಾಪಾಡುತ್ತದೆ. ದಂಡವು ರಾಜನನ್ನು ಮುನ್ನಡೆಸುತ್ತದೆ. ಅಧರ್ಮವನ್ನು ಅದು ದೂರಮಾಡುತ್ತದೆ. ಆದ್ದರಿಂದ ರಾಜನು ಅಗತ್ಯವಿದ್ದಾಗ ದಂಡವನ್ನು ಪ್ರಯೋಗಿಸಬೇಕು. (ಮಾನಸೋಲ್ಲಾಸ–2–1294)

ಸಾಮ, ದಾನ, ಭೇದ ದಂಡ ನಾಲ್ಕು ಉಪಾಯಗಳು. ಆದರೆ ದಂಡವನ್ನು ಪ್ರಯೋಗಿಸುವುದು ತಪ್ಪು. ಆದುದರಿಂದ ದಂಡವನ್ನು ಪ್ರಯೋಗಿಸಬಾರದು, ಅದು ಪಾಪಕರ.

'ದಂಡ' ಶಬ್ದವು ಆರ್ಯಭಾಷಾ ವರ್ಗಕ್ಕೆ ಸೇರಿದ್ದಲ್ಲ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಟಿ. ಬರೋ ಅವರು, ಸಂಸ್ಕೃತ ಸಾಹಿತ್ಯದಲ್ಲಿ ಸೇರಿರುವ ಇಂತಹ ಅನೇಕ ದೇಶೀಯರ ಪದಗಳನ್ನು ಎತ್ತಿ ಸಾಧಾರಣವಾಗಿ ವಿವರಿಸಿದ್ದಾರೆ. ತಂಡ (ದಂಡ)– ಎಂಬ ಸಮೂಹಾರ್ಥದ ದೇಶೀಯ ಶಬ್ದವುಂಟು ಎಂದು ಶಂಬಾ ಜೋಶಿ ಹೇಳಿದ್ದಾರೆ.

ದಂಡವು ವಿಧಿವತ್ತಾದ ಶಾಸನ. ಪಾಳೇಯಗಾರಿ ಮತ್ತು ಜಮೀನುದಾರಿ ಪದ್ಧತಿಯಲ್ಲಿ ದೇಹದಂಡನೆಯು ಅಪರಾಧಕ್ಕೆ ಅನುಗುಣವಾಗಿ ಭಿನ್ನವಾಗುತ್ತಿತ್ತು. ಈ ರೀತಿಯ ಸಮಾಜಗಳಲ್ಲಿ ಮನೋದಂಡನೆಗಿಂತ ದೇಹ ದಂಡನೆಯು ಪ್ರಧಾನವಾಗಿದೆ. ಮತ್ತು ದೇಹದಂಡನೆ, ಪಣದಂಡನೆ, ಭಿನ್ನ ಭಿನ್ನ ಎಂದು ಮನು ಹೇಳಿರುವುದನ್ನು ಗಮನಿಸಬೇಕು. ಅವನ ಪ್ರಕಾರ ಅಪರಾಧಿ ರಾಜನು ಸಾವಿರ ಪಣ ಬ್ರಾಹ್ಮಣನಿಗೆ ನೀಡಿದರೆ ಅಪರಾಧವು ಪರಿಹಾರವಾಗುತ್ತದೆ.

ವಿವರಗಳಿಗೆ ನೋಡಿ: ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು ೨೦೧೦ ಕೌಟಿಲ್ಯನ ಅರ್ಥಶಾಸ್ತ್ರ ಪುಟ. ೫೯೨

Ranajith Guha 1998 Dominance without the hegemony

Ranjith Guha (Ed) 1989 Subaltern Studies, Vol.I

ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 7 –22; 4–301, 9–303–11), (7–14),(7–15), (8–336)

ಎಂ. ವಿ. ಕೃಷ್ಣರಾವ್ 1953 ಕೌಟಿಲ್ಯ

R. P. Kangle 1988 The kautiliya Arthashastra. (part-3)

ಶಂಬಾ ಜೋಶಿ 1999 ಹಾಲುಮತ ದರ್ಶನ ಸಂಪುಟ. 3 ಪುಟ. 16.

ದಂಡವಿಧಾನ

ಸಾಮಾನ್ಯ ಜನರು ಮಾಡಿದ ಯಾವ ಅಪರಾಧಕ್ಕೆ ಒಂದು ಕಾರ್ಷಾಪಣ ದಂಡವೋ ಅದೇ ಅಪರಾಧ ರಾಜನು ಮಾಡಿದರೆ ಸಾವಿರ ಪಣ ದಂಡನೆಯು. ಆ ದಂಡಧನವನ್ನು ನೀರಿಗೆಸೆಯಬಹುದು. ಬ್ರಾಹ್ಮಣನಿಗೆ ಕೊಡಬಹುದು. ಇದು ಪಕ್ಷಪಾತವಿಲ್ಲದ ದಂಡವಿಧಾನವು. (ಮನುಸ್ಮೃತಿ 8–336)

ಗಂಡು ತನಗಿಂತ ಹೀನ ಜಾತಿಯ ಸ್ತ್ರೀಯನ್ನು ಸೇವಿಸಿದರೆ ಏನೂ ದಂಡನೆಯಿಲ್ಲ. ಹೆಣ್ಣು ತನಗಿಂತ ಕೀಳು ಜಾತಿಯ ಪುರುಷನನ್ನು ಹಿಂಬಾಲಿಸಿದರೆ ಅವಳನ್ನು ಮನೆಯಲ್ಲಿ ಬಂದೋಬಸ್ತಿನಲ್ಲಿಟ್ಟು ಅವನನ್ನು ಮರೆಯುವಂತೆ ಮಾಡಬೇಕು. (ಮನುಸ್ಮೃತಿ)

ಹೀನನು ಉತ್ತಮ ಸ್ತ್ರೀಯನ್ನು ವಶೀಕರಿಸಿದರೆ ಹಿಂಸಾರ್ಹನು. ಹೀನಳನ್ನು ಮೋಹಿಸಿದವನನ್ನು ಅವಳ ತಂದೆಯು ಸಮ್ಮತಿಸಿದರೆ ದ್ರವ್ಯ ಕೊಟ್ಟು ಮದುವೆಯಾಗಬಹುದು. (ಮನುಸ್ಮೃತಿ)

ಸಮಜಾತಿಯವನು ಅಂತಹ ಕನ್ಯೆಯ ಸಮ್ಮತಿಯಿಲ್ಲದೆ ಬಲಾತ್ಕಾರದಿಂದ ದೂಷಿಸಿದರೆ ಅವನ ಕೈಬೆರಳನ್ನು ಕಡಿಯಬೇಕು.

(ಮನುಸ್ಮೃತಿ)

ಸ್ವಜಾತಿಯ ಹೆಣ್ಣು ಅನುರಕ್ತಳಾಗಿ ಪುರುಷಸಂಗ ಪಡೆದರೆ ಗಂಡಿಗೆ ಹಿಂಸೆಯಿಲ್ಲ. ಇನ್ನೊಂದು ಪಣ ಧನದಂಡನೆಯು.

(ಮನುಸ್ಮೃತಿ 8–360)

ಇವು ಸಾಮಾಜಿಕ ನೀತಿಸಂಹಿತೆಗಳಾಗಿವೆ. ಮನುವಿನ ಈ ಧೋರಣೆಯನ್ನು ಮತ್ತೆ ಪ್ರತ್ಯೇಕವಾಗಿ ವಿವರಿಸಬೇಕಾಗಿಲ್ಲ.

ದಂತಕಥೆ

ದಂತಕಥೆಯು ಮೌಖಿಕ ಪರಂಪರೆಯಲ್ಲಿ ಬರುವ ಕಥನವಿಧಾನ. ವಾಸ್ತವವಾಗಿ ಇವು ಲಿಖಿತ ರೂಪಕ್ಕೆ ಸೇರಿಕೊಂಡಿರುವುದಿಲ್ಲ. ಆದುದರಿಂದ ದಂತಕಥೆಗಳಿಗೆ ನಿರ್ದಿಷ್ಟರೂಪವೆಂಬುದು ಇರುವುದಿಲ್ಲ. ಕತೆಯನ್ನು ಒಬ್ಬರಿಗೆ ಇನ್ನೊಬ್ಬರಿಗೆ ಹೇಳುತ್ತಾರೆ. ಕೇಳಿಸಿಕೊಂಡವನು ಕತೆಯನ್ನು ಮುಂದುವರಿಸಬಹುದು. ಅದಕ್ಕೆ ಬೇರೆ ರೂಪವನ್ನು ಕೊಡಬಹುದು, ದಂತಕತೆ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗಬಹುದು. ದಂತಕತೆಗಳಲ್ಲಿ ಹೇಳುವವರ ದೃಷ್ಟಿಕೋನಕ್ಕೆ ಅನುಸಾರವಾಗಿ ಕತೆಗಳ ಆಶಯವು ಬದಲಾಗಬಹುದು. ಅದಕ್ಕೆ ಕಾಲದ ನಿಗದಿಯಿಲ್ಲ. ಕತೆಯು ಹಿಗ್ಗಬಹುದು ಅಥವಾ ಕುಗ್ಗಬಹುದು. ಅದೇ ರೀತಿಯಲ್ಲಿ ದಂತಕತೆಯನ್ನು ಹೇಳುವುದಕ್ಕೂ ಸರಿಯಾದ ಸಮಯವಿಲ್ಲ. ಇಷ್ಟು ಹೊತ್ತಿಗೆ ಕತೆಯನ್ನು ಹೇಳಬೇಕೆಂದು ಯಾರೂ ಆಶಿಸುವುದಿಲ್ಲ. ಹಾಗೆಯೇ ದಂತಕತೆಯು ರೂಪಾಂತರವಾಗಲೂಬಹುದು. ಅನೇಕ ಸಂದರ್ಭಗಳಲ್ಲಿ ಅದು ಕೇಳುಗರಿಗೆ ಅನುಸಾರವಾಗಿ ರೂಪುಗೊಂಡಿರುತ್ತದೆ. ದಂತಕತೆಗಳ ಮತ್ತೊಂದು ಪ್ರಮುಖ ಅಂಶವೆಂದರೆ ಅವುಗಳು ಸಂಸ್ಕೃತಿಯು ವಿಭಿನ್ನ ನಂಬಿಕೆಗಳನ್ನು ಸೂಚಿಸುವುದು.

ವಿವರಗಳಿಗೆ ನೋಡಿ: ಜಿ.ಎಸ್.ಆಮೂರ ೨೦೦೧ ಕಥನಶಾಸ್ತ್ರ

ದಮ್ಮ

'ದಮ್ಮ' ಎನ್ನುವುದು ಹಣವೆನ್ನುವ ರೂಪದಲ್ಲಿ ಬಳಕೆಯಾಗಿದೆ. ದ್ರಮ್ಮದಿಂದ ದಮ್ಮ ಬಂದಿದೆ. ಈಶಾನ್ಯ ಭಾರತದಲ್ಲಿ ಹಲವು ನಗರಗಳು ತಲೆಯೆತ್ತಿದುವು. ಅಲಹಾಬಾದಿನ ಬಳಿಯ ಕೌಶಾಂಬಿ, ಉತ್ತರ ಪ್ರದೇಶದ ದಿಯೋರಿಯಾ ಜಿಲ್ಲೆಯಲ್ಲಿರುವ ಕುಶೀ ನಗರ, ವಾರಣಾಸಿ, ಬಿಹಾರದಲ್ಲಿರುವ ವೈಶಾಲಿ, ಚಿರಾಂಡ್ ಮತ್ತು ರಾಜಗೃಹಗಳು ಉತ್ತಮ ಉದಾಹರಣೆಗಳು. ಈ ನಗರಗಳಲ್ಲೆಲ್ಲಾ ಕುಶಲ ಕಸುಬುಗಾರರು ಮತ್ತು ವ್ಯಾಪಾರಿಗಳು ನೆಲೆಸಿದ್ದು ಅವರು ಮೊಟ್ಟಮೊದಲಿಗೆ ನಾಣ್ಯಗಳನ್ನು ಬಳಸಲಾರಂಭಿಸಿದರು. ಈ ಅತ್ಯಂತ ಪ್ರಾಚೀನ ನಾಣ್ಯಗಳು ಕ್ರಿಪೂ. ಐದನೆಯ ಶತಮಾನದವು. ಅವುಗಳನ್ನು ಕಚ್ಚು ಗುರುತಿನ ಅಥವಾ ಪಂಚ್‌ಮಾರ್ಕ್ಡ್ ನಾಣ್ಯಗಳೆಂದು ಕರೆಯುತ್ತಾರೆ. ಅವು ಪೂರ್ವ ಉತ್ತರ ಪ್ರದೇಶದಲ್ಲಿ ಹಾಗೂ ಬಿಹಾರದಲ್ಲಿ ಚಲಾವಣೆಗೆ ಬಂದವು. ಈ ನಾಣ್ಯಗಳು ವ್ಯಾಪಾರ ವ್ಯವಹಾರಗಳನ್ನು ಬಲಪಡಿಸಿದವು. ಇದರಿಂದ

ವರ್ಣವಿಭಜಿತ ಸಮಾಜದಲ್ಲಿ ಮೂರನೆಯ ಸ್ಥಾನದಲ್ಲಿದ್ದ ವೈಶ್ಯರು ತಮ್ಮ ಸ್ಥಾನವನ್ನು ಉನ್ನತಗೊಳಿಸುವ ಬೇರಾವುದಾದರೂ ಮತಧರ್ಮದತ್ತ ಗಮನ ಹರಿಸತೊಡಗಿದರು. ಸಹಜವಾಗಿ ಅವರು ಮಹಾವೀರ ಮತ್ತು ಗೌತಮ ಬುದ್ಧರಿಗೆ ಧಾರಾಳವಾಗಿ ಬೆಂಬಲ ನೀಡಿದರು. ಸೇಠಿಗಳೆಂದು ಹೆಸರಾಗಿದ್ದ ವ್ಯಾಪಾರಸ್ಥರು ಗೌತಮ ಬುದ್ಧನಿಗೂ ಅವನ ಶಿಷ್ಯರಿಗೂ ಕೊಡುಗೈಯಿಂದ ಕಾಣಿಕೆಗಳನ್ನಿತ್ತರು. ಇದಕ್ಕೆ ಹಲವು ಕಾರಣಗಳನ್ನು ಗುರುತಿಸಬಹುದು. ಆರಂಭ ಹಂತದಲ್ಲಿ ಜೈನ ಹಾಗೂ ಬೌದ್ಧ ಮತಗಳು ಪ್ರಚಲಿತವಾಗಿದ್ದ ವರ್ಣ ವ್ಯವಸ್ಥೆಗೆ ಮಹತ್ವ ನೀಡಲಿಲ್ಲ. ಎರಡನೆಯದಾಗಿ ಅವೆರಡು ಮತಗಳೂ, ರಾಜ್ಯ ರಾಜ್ಯಗಳ ನಡುವಣ ಯುದ್ಧಗಳಿಗೆ ತಡೆ ವಿಧಿಸಿ, ವ್ಯಾಪಾರ ವಾಣಿಜ್ಯಗಳಿಗೆ ಪ್ರೋತ್ಸಾಹ ನೀಡಬಹುದಾಗಿದ್ದಂತಹ ಅಹಿಂಸೆಯನ್ನು ಪ್ರತಿಪಾದಿಸುತ್ತಿದ್ದುವು. ಮೂರನೆಯದಾಗಿ ಬ್ರಾಹ್ಮಣೀಯ ನ್ಯಾಯಶಾಸ್ತ್ರ ಗ್ರಂಥಗಳಾದ ಧರ್ಮಸೂತ್ರಗಳು ಬಡ್ಡಿಯ ಮೇಲೆ ಹಣವನ್ನು ಸಾಲ ನೀಡುವುದನ್ನು ಧಿಕ್ಕರಿಸಿ, ಅಂತಹವರನ್ನು ಖಂಡಿಸುತ್ತಿದ್ದುವು. ಆ ಕಾರಣದಿಂದ ವಿಸ್ತಾರಗೊಳ್ಳುತ್ತಿದ್ದ ವ್ಯಾಪಾರ ವಾಣಿಜ್ಯಗಳಿಗಾಗಿ ಬಡ್ಡಿಗೆ ಹಣ ನೀಡುತ್ತಿದ್ದ ವೈಶ್ಯರಲ್ಲಿ ಸಮಾಜವು ಗೌರವ ಭಾವ ತಳೆದಿರಲಿಲ್ಲ. ಅವರು ತಮ್ಮ ಸ್ಥಾನಮಾನಗಳನ್ನು ಉತ್ತಮ ಪಡಿಸಿಕೊಳ್ಳುವುದಕ್ಕೆ ಕಾತುರರಾಗಿದ್ದರು.

ಹಾಗೆಯೇ ಹಣದ ಚಲಾವಣೆಯು ವ್ಯಾಪಾರಕ್ಕೆ ಉತ್ತೇಜನ ನೀಡಿತು. ವೈದಿಕ ಗ್ರಂಥಗಳಲ್ಲಿ ಕಂಡುಬರುವ ನಿಷ್ಕ ಮತ್ತು ಶತಮಾನ ಎಂಬವು ನಾಣ್ಯಗಳ ಹೆಸರು ಎಂದು ಪರಿಗಣಿತವಾಗಿದ್ದರೂ ಅವು ಲೋಹದಲ್ಲಿ ಮಾಡಿದ ಪ್ರತಿಷ್ಠೆಯ ವಸ್ತುಗಳಾಗಿದ್ದುವೆಂದು ತೋರುತ್ತದೆ. ದೊರೆತಿರುವ ನಾಣ್ಯಗಳು ಕ್ರಿ.ಪೂ. ಆರನೆಯ ಶತಮಾನಕ್ಕಿಂತ ಹಿಂದಕ್ಕೆ ಹೋಗುವುದಿಲ್ಲ. ವೇದ ಕಾಲದಲ್ಲಿ ವಸ್ತುಗಳ ಅದಲು-ಬದಲು ಅಥವಾ ವಿನಿಮಯ ಜರುಗುತ್ತಿತ್ತು. ಕೆಲವೊಮ್ಮೆ ಧನಗಳು ನಾಣ್ಯಗಳ ಕಾರ್ಯ ನಿರ್ವಹಿಸಿರಬಹುದು. ಮೊದಮೊದಲ ಲೋಹ ನಾಣ್ಯಗಳು ಗೌತಮ ಬುದ್ಧನ ಕಾಲಕ್ಕೆ ಸೇರಿದವು. ಅತ್ಯಂತ ಪ್ರಾಚೀನವಾದಂತಹವು ಬಹುಮಟ್ಟಿಗೆ ಬೆಳ್ಳಿಯವಾದರೂ, ಕೆಲವು ತಾಮ್ರದವೂ ಇವೆ. ಅವು ಕಚ್ಚು ಗುರುತು ನಾಣ್ಯಗಳು. ಅವುಗಳ ಮೇಲೆ ಬೆಟ್ಟ, ಮರ, ಮೀನು, ಎತ್ತು, ಆನೆ, ಬಾಲಚಂದ್ರ ಇತ್ಯಾದಿ ಚಿತ್ರಗಳನ್ನು ಮೂಡಿಸಲಾಗಿದೆ. ಅತ್ಯಂತ ಪ್ರಾಚೀನವಾದಂತಹವು ಪೂರ್ವ ಉತ್ತರ ಪ್ರದೇಶ ಮತ್ತು ಮಗಧಗಳಲ್ಲಿ, ಕೆಲವೇ ಕೆಲವು ತಕ್ಷಶಿಲೆಯಲ್ಲೂ ದೊರೆತಿವೆ. ಪಾಲಿ ಗ್ರಂಥಗಳು ವ್ಯಾಪಕವಾದ ಹಣ ಚಲಾವಣೆಯನ್ನೂ, ಕೂಲಿ ಮತ್ತು ಬೆಲೆಗಳು ನಾಣ್ಯಗಳಲ್ಲಿ ನೀಡಲ್ಪಡುತ್ತಿದ್ದುದನ್ನೂ ಸೂಚಿಸಿವೆ. ಹಣ ಎಷ್ಟುಮಟ್ಟಿಗೆ ಸಾಮಾನ್ಯ ಬಳಕೆಗೆ ಬಂದಿತ್ತೆಂದರೆ, ಸತ್ತ ಇಲಿಯ ಬೆಲೆಯನ್ನು ಸಹ ಹಣರೂಪದಲ್ಲಿ ಅಂದಾಜು ಮಾಡಲಾಗುತ್ತಿತ್ತು.

ವಿವರಗಳಿಗೆ ನೋಡಿ: ಆರ್. ಎಸ್. ಶರ್ಮ 2007 ಪ್ರಾಚೀನ ಭಾರತ ಪುಟ. 91–93, 118–119, 164

ದರ್ಭಾಧಿಕಾರ

ದರ್ಭೆಯನ್ನು ಹಿಡಿಯುವುದು ಕೂಡಾ ಅಧಿಕಾರವೆಂಬ ಪರಿಕಲ್ಪನೆ ಬಂದಿರುವುದು ವಿಶೇಷ. ರಾಜರಿಗೆ ದಂಡಾಧಿಕಾರ. ಬ್ರಾಹ್ಮಣರಿಗೆ ದರ್ಭಾಧಿಕಾರವೆಂದಿರುವುದು ಧಾರ್ಮಿಕ ಹಿತಾಸಕ್ತಿಯನ್ನು ಸೂಚಿಸುತ್ತದೆ. ಎರಡನೆಯದು ದರ್ಭೆಯನ್ನು ಹಿಡಿಯುವುದು ಬ್ರಾಹ್ಮಣರ ಹಕ್ಕು. ಅದನ್ನು ಉಳಿದ ಜಾತಿಯವರು ಬಳಸುವಂತಿಲ್ಲ.

ವಿವರಗಳಿಗೆ ನೋಡಿ: ಸಾಹಸ ಭೀಮ ವಿಜಯ 3–34.

ದಶದಾನ

ಕನ್ಯಾದಾನ, ಸುವರ್ಣದಾನ, ಹಸ್ತಿದಾನ, ದಾಸೀದಾನ, ತಿಲದಾನ, ಭೂಮಿದಾನ, ಗೃಹದಾನ, ಕಪಿಲದಾನ(ಹಸುದಾನ) ತುರಗದಾನವೆಂಬ ದಶವಿಧ ದಾನಗಳಿವೆ.

ದಶಪ್ರಾಣ

ದಶಪ್ರಾಣವೆಂದರೆ ಐದು ಪ್ರಾಣವಾಯುಗಳು. (ಪ್ರಾಣ, ಅಪಾನ; ವ್ಯಾನ; ಉದಾನ; ಸಮಾನ) ಮತ್ತು ಐದು ಉಪವಾಯುಗಳು (ನಾಗ, ಕೂರ್ಮ, ಕೈಕರ, ದೇವದತ್ತ, ಧನಂಜಯ).

ದಸ್ಯು

ಋಗ್ವೇದದಲ್ಲಿ ದಸ್ಯುಗಳೆಂದರೆ ಕಪ್ಪಗಿನವರು. ಚಪ್ಪಟೆ ಮೂಗಿನವರು ಎಂದು ಬಣ್ಣಿಸಲಾಗಿದೆ. ಮತ್ತು ಆರ್ಯರು ಸುಂದರರು. ಉದ್ದವಾಗಿರುವ ಮೂಗಿನವರು ಎಂದು ಆರ್ಯರೇ ತಮ್ಮನ್ನು ತಾವೇ ವರ್ಣಿಸಿಕೊಂಡಿದ್ದಾರೆ. ಆರ್ಯರು ಪಿತೃಪ್ರಧಾನ ಸಂಸ್ಕೃತಿಯುಳ್ಳವರು. ಕೃಷಿ ವ್ಯವಸ್ಥೆಯನ್ನು ನಂಬಿಕೊಂಡಿದ್ದವರು. ಮತ್ತು ಧಾರ್ಮಿಕ ಆಚರಣೆಗಳನ್ನು ಹುಟ್ಟು ಹಾಕಿದವರಾಗಿದ್ದರು. (Romila Thapar 1975 P.25) ದಾಸನೆಂದರೆ ಶರಣನೆಂದು ಹೇಳುತ್ತಾರೆ. ಸುದಾಸನೆಂದರೆ ಜ್ಞಾನ ಪಂಥದಲ್ಲಿರುವ ಜೀವಾತ್ಮ

ದಾಂಪತ್ಯ

ಕ್ರಿಪೂ. ಐನೂರರ ಬಳಿಕ ರೂಪುಗೊಂಡ ಪ್ರಬಲವಾದ ರಾಜಕೀಯ ವ್ಯವಸ್ಥೆಯು ತನಗೆ ಪೂರಕವಾಗಿ ಧರ್ಮ, ನೀತಿಗಳ ನಿಯಮಾವಳಿಗಳನ್ನು ರೂಪಿಸಿತು. ಇಂತಹ ರಾಜಕೀಯ ವ್ಯವಸ್ಥೆಯ ರೂಪುರೇಷೆಗಳು ಋಗ್ವೇದ ಕಾಲದಲ್ಲಿ ಅಸ್ಪಷ್ಟವಾಗಿ ಕಾಣಸಿಗುತ್ತವೆಯಾದರೂ ಅವುಗಳ ಮೂರ್ತರೂಪ ಕಾಣಸಿಗುವುದು ಕ್ರಿಪೂ. ಐನೂರರ ಬಳಿಕ. ಅರ್ಯರ ಪ್ರಾಬಲ್ಯವು ತನಗೆ ಇಷ್ಟವಾದ ಮೌಲ್ಯಗಳನ್ನು ರೂಪಿಸಿತು. ಇದರ ಪರಿಣಾಮವಾಗಿ ಲಂಪಟತನ, ಕರಪದ್ಧತಿ, ರಾಜಕೇಂದ್ರಿತ ರಾಜಕೀಯ

ವ್ಯವಸ್ಥೆ, ಜಾತಿಯ ನೆಲಗಳ ಪ್ರಾಬಲ್ಯ ಸ್ಪಷ್ಟ ರೂಪವನ್ನು ತಾಳಿದವು. ರಾಜರು ಆಡಳಿತ ವ್ಯವಸ್ಥೆಯ ಕೇಂದ್ರವಾಗಿ ಅವರಿಗೆ ಅನುಗುಣವಾಗದ ಮೌಲ್ಯಗಳು ಸಿದ್ಧಗೊಂಡಾಗ ಸಹಜವಾಗಿ ಕೇಂದ್ರೀಕೃತ ಅರ್ಥ ವ್ಯವಸ್ಥೆಯು ರೂಪುಗೊಳ್ಳುತ್ತವೆ. ಆಸ್ತಿಯ ಪರಿಕಲ್ಪನೆಯಲ್ಲಿ ಸಂಚಯದ ಮನೋಧರ್ಮ ಅಡಕವಾಗಿದೆ. ಇದರ ಪರಿಣಾಮವಾಗಿ ದಾಸ, ಶೂದ್ರ, ಮ್ಲೇಚ್ಛದಂತಹ ಪರಿಕಲ್ಪನೆಗಳು ಹುಟ್ಟಿಕೊಳ್ಳುತ್ತವೆ. ಇಂತಹ ಧಾರ್ಮಿಕ ವ್ಯವಸ್ಥೆಯಲ್ಲಿ ಹೆಣ್ಣಿಗೆ ಎರಡನೆಯ ದರ್ಜೆಯ ಸ್ಥಾನವು ಕಲ್ಪಿತವಾಯಿತು. ಇದರ ಪರಿಣಾಮವಾಗಿ ದಾಂಪತ್ಯವು ಪುತ್ರ ಸಂತಾನಕ್ಕಾಗಿ ಎನ್ನುವ ಕಲ್ಪನೆಯು ಕಾಣಿಸಿಕೊಂಡಿತು.

ವಿವರಗಳಿಗೆ ನೋಡಿ: Basham A.L. (Ed) 1975 A Cultural History of India P. 20-26.

ದಾದಿ

ದಾದಿಯೆಂದರೆ ಇಲ್ಲಿ ಸೇವಕಿಯೆಂದರ್ಥ. ಓದು ಕಲಿತ ಸಾಮಾನ್ಯಳು ಈಕೆ. ಆ ಕಾಲದಲ್ಲಿ ದಾದಿಯರೂ ಓದಿನಲ್ಲಿ ನಿಷ್ಣಾತರಾಗಿದ್ದರು. ಜೊತೆಗೆ ಇತರ ಕಲಾ ಪರಿಣತಿಯೂ ಅವರಲ್ಲಿರುತ್ತಿತ್ತೆಂಬುದು ವ್ಯಕ್ತವಾಗುತ್ತದೆ.

ಕ್ಷೀರಧಾತ್ರಿ (ಹಾಲೂಡಿಸುವವಳು) ಮಜ್ಜನಧಾತ್ರಿ (ಸ್ನಾನ ಮಾಡಿಸುವವಳು) ಕಿಳವನಧಾತ್ರಿ (ಆಟವಾಡಿಸುವವಳು) ಮಂಡನಧಾತ್ರಿ (ಅಲಂಕಾರ ಮಾಡುವವಳು) ಅಂಕಧಾತ್ರಿ (ಲೇಪನ ಮಾಡುವವಳು) ಎಂಬುವರಿದ್ದರು.

ದಾನ

ರಾಜನು ಯಾವಾಗಲೂ ಮಂತ್ರಿಗಳೊಡನೆ ಷಾಡ್ಗುಣ್ಯಗಳನ್ನು ಉಪಯೋಗಿಸಿ ಮಂತ್ರಾಲೋಚನೆ ಮಾಡುತ್ತಿರಬೇಕು. ಇಲ್ಲವಾದರೆ ಶತ್ರುಗಳು ಭೇದಿಸಿ ನಾಶಮಾಡುತ್ತಾರೆ, ಯತಿಯು ಲೋಕದ ಲೋಕ ಸಂಪರ್ಕವನ್ನು ಬಿಟ್ಟಿರಬೇಕು. ಇಲ್ಲವಾದರೆ ಸಂಗದಿಂದ ಕಾಮ ಕ್ರೋದಾಧಿಗಳು ಸಂಭವಿಸಿ ಅವನು ಹಾಳಾಗುತ್ತಾನೆ. ಮಗನನ್ನು ಅತಿಯಾಗಿ ಲಾಲನೆ ಮಾಡಬಾರದು, ಎಷ್ಟು ಪ್ರೇಮವಿರಬೇಕೋ ಅಷ್ಟೇ ಇಟ್ಟು ಶಿಕ್ಷಣ ಕೊಡಬೇಕು. ಬ್ರಾಹ್ಮಣನು ಅಧ್ಯಯನ ಮಾಡದಿದ್ದರೆ ಪೂಜಿತನಾಗುವುದಿಲ್ಲ. ವಂಶೋನ್ನತಿಯಾಗಬೇಕಾದರೆ ಸುಪುತ್ರನಿರಬೇಕು, ಸದಾಚಾರದಲ್ಲಿರುವವನು ಎಂದೂ ದುಷ್ಟರ ಸಂಸರ್ಗ ಮಾಡಬಾರದು. ಹೆಂಡ ಸೇವಿಸುವವನು, ನಾಚಿಕೆ ಕಳೆದು ಎಲ್ಲರಿಂದಲೂ ನಿಂದಿತನಾಗುತ್ತಾನೆ. ಕೃಷಿ ಮಾಡುವವನು ಯಾವಾಗಲೂ ಅದನ್ನು ನೋಡುತ್ತಿರಬೇಕು, ಪುತ್ರದಾರಾದಿ ಪ್ರೇಮವು ಬಹುಕಾಲು ಪರದೇಶವಾಸ ಮಾಡಿದರೆ ನಶಿಸುತ್ತದೆ, ಸ್ನೇಹವಿಲ್ಲದ ಗೆಳೆತನವು ವ್ಯರ್ಥವು. ನ್ಯಾಯವಿಲ್ಲದೆ ವ್ಯವಹರಿಸಿದರೆ ಧಾನ್ಯಾದಿ ಸಮೃದ್ಧಿಯೂ ನಾಶವಾಗುತ್ತದೆ, ಸತ್ಪಾತ್ರರನ್ನು ನೋಡಿಯೇ ದಾನ ಮಾಡಬೇಕು. ಅದಿಲ್ಲದೆ ಹೇಗೋ ತ್ಯಾಗ ಮಾಡಿದರೆ ಆಗ ಹಣವು ನಾಶವಾಗುವುದು (ಭರ್ತೃಹರಿಯ ನೀತಿಶತಕ, 1974– ಶ್ಲೋಕ – 34).

ಪ್ರತಿದಿನ ಲಕ್ಷ ಗೋದಾನವುಳ್ಳ ಯಜ್ಞವನ್ನು ಮಾಡಿದ ಫಲವು ರಾಜನಿಗೆ ಧರ್ಮಬದ್ಧವಾದ ಪ್ರಜಾಪಾಲನೆಯಿಂದ ಲಭಿಸುವುದು.(ಮನುಸ್ಮೃತಿ 8–307)

ಬ್ರಾಹ್ಮಣರಿಗೆ ಭೂಮಿಯನ್ನು ದಾನವಾಗಿ ನೀಡಿರುವುದು ಹೊಸ ಭೂಮಾಲೀಕ ಮಧ್ಯವರ್ತಿಗಳ ಹುಟ್ಟಿಗೂ ಕಾರಣವಾಯಿತು. ಬ್ರಾಹ್ಮಣರು ಮಹಾಜನರಾಗಿ ನಿರ್ವಹಿಸುತ್ತಿದ್ದ ಕೆಲಸ ಕಾರ್ಯಗಳ ಕುರಿತು ಈಗಾಗಲೇ ಚರ್ಚಿಸಲಾಗಿದೆ. ರಾಷ್ಟ್ರಕೂಟರಿಂದ ಹೊಯ್ಸಳರವರೆಗಿನ ಅವಧಿಯಲ್ಲಿ ಬ್ರಾಹ್ಮಣರಿಗೆ, ಬ್ರಾಹ್ಮಣೇತರ ವರ್ಗದವರಿಗೆ ಹಾಗೂ ಸ್ಮಾರಕಗಳಿಗೆ ನೀಡಿದ ದಾನಗಳ ಕೆಲವು ಉದಾಹರಣೆಗಳನ್ನು ಇಲ್ಲಿ ನೀಡಲಾಗಿದೆ. ರಾಷ್ಟ್ರಕೂಟರ ಅನೇಕ ದಾನಶಾಸನಗಳು ಲಭ್ಯವಿವೆ. ಕ್ರಿ.ಶ. ೮ನೆಯ ಶತಮಾನದ ಶಾಸನವೊಂದರಲ್ಲಿ ಜೈನ ಯತಿಗೆ ದಾನವನ್ನು ನೀಡಿದ ಉಲ್ಲೇಖವಿದೆ. ರಾಷ್ಟ್ರಕೂಟ ದೊರೆಗಳಾದ ದಂತಿದುರ್ಗ, ಇಂದ್ರ, ನಾಲ್ಕನೆಯ ಗೋವಿಂದ ಮುಂತಾದವರು ದಾನಶೀಲರಾಗಿದ್ದರು ಹಾಗೂ ಇವರೆಲ್ಲರೂ ದಾನಧರ್ಮಗಳ ಸಲುವಾಗಿ ದೇವಾಲಯಗಳಿಗೆ ಮೀಸಲಾಗಿಡುತ್ತಿದ್ದ ಸಂಪತ್ತಿನ ಒಂದು ಭಾಗವನ್ನು ದಾರಿದ್ರ್ಯ ನಿರ್ಮೂಲನಕ್ಕಾಗಿ ವಿನಿಯೋಗಿಸುತ್ತಿದ್ದರು ಎನ್ನುವ ವಿವರಣೆಯನ್ನು ಆಲ್ಟೇಕರ್ ನೀಡುತ್ತಾರೆ. ಕ್ರಿ.ಶ.೮೦೦ಕ್ಕೆ ಸೇರಿದ ಮಹಾಶಿವಗುಪ್ತ ಎನ್ನುವವನ ಶಿವಪುರದ ಶಾಸನವು ಬಡಗಿ, ಕಮ್ಮಾರ, ಕುಂಬಾರ ಮೊದಲಾದ ಗ್ರಾಮಪಾಮಚಾಳರಿಗೆ ಅವರ ವೃತ್ತಿ ಸೇವೆಗಾಗಿ ನಿರ್ದಿಷ್ಟ ಧಾನ್ಯ ಭಾಗವನ್ನು ಹಂಚಿಕೊಡಲಾಗುತ್ತಿತ್ತೆಂದು ಹೇಳುತ್ತದೆ. ರಾಷ್ಟ್ರಕೂಟರು ನೀಡಿರುವ ದಾನಗಳಲ್ಲಿ ಧಾರ್ಮಿಕ ಸ್ವರೂಪದ ದಾನಗಳ ಸಂಖ್ಯೆಯೇ ಹೆಚ್ಚಿನದು. ಅವರ ಮೂವತ್ತು ಭೂದಾನಗಳಲ್ಲಿ ಇಪ್ಪತ್ತನಾಲ್ಕು ಬ್ರಾಹ್ಮಣರಿಗೆ ಮತ್ತು ದೇವಾಲಯಗಳಿಗೆ ನೀಡಿದವು. ಕಲ್ಯಾಣದ ಚಾಲುಕ್ಯರ ದಾನಶಾಸನಗಳಲ್ಲಿ ಮೂರು ತಲೆಮಾರುಗಳು ಅನುಭವಿಸುವ ದಾನ, ಅಧಿಕಾರ ಪಡೆದ ವ್ಯಕ್ತಿಯು ಜೀವಂತವಾಗಿರುವವರೆಗೆ ಅನುಭವಿಸುವ ದಾನ ಮುಂತಾದ ಉಲ್ಲೇಖಗಳು ಸಿಗುತ್ತವೆ. ಆರನೆಯ ವಿಕ್ರಮಾದಿತ್ಯನು ಪಟ್ಟಕ್ಕೆ ಬಂದ ಮೊದಲ ವರ್ಷದಲ್ಲಿಯೇ ಮಹಾದಾನಗಳನ್ನು ನೀಡಿದ ಉಲ್ಲೇಖಗಳು ಸಿಗುತ್ತವೆ. ಕಲ್ಯಾಣದ ಚಾಲುಕ್ಯರ ಮಹಾಮಂಡಳೇಶ್ವರನಾದ ಚಿದ್ದಣಚೋಳ ಎನ್ನುವವನು ಅಗ್ರಹಾರವೊಂದರ ಮಹಾಜನರಿಗೆ ದಾನವನ್ನು ಬಿಡುತ್ತಾನೆ. ಈ ದಾನವನ್ನು ಪುನರ್‌ದತ್ತಿ ಎಂಬುದಾಗಿಯೂ ಹೆಸರಿಸಲಾಗಿದೆ. (ಮೋಹನಕೃಷ್ಣ ರೈ, ೨೦೦೪. ಪು. ೫೨) ದಾನಶಾಸನಗಳು ಹೆಸರೇ ಸೂಚಿಸುವಂತೆ ದಾನಗಳಿಗೆ ಸಂಬಂಧಿಸಿದಂತೆ ಇದೆ. ದಾನಗಳು ಹಲವು ರೀತಿಯಲ್ಲಿರುತ್ತವೆ. ದಾನ ಕೊಡುವ ಪದ್ಧತಿಗಳು ಹಿಂದಿನಿಂದಲೂ ನಡೆದುಕೊಂಡು ಬಂದಿರುವುದನ್ನು ಮೇಲಿನ ವಿವರಗಳು ಸೂಚಿಸುತ್ತವೆ. ದಾನ ಕೊಡುವವನು ಮತ್ತು ದಾನ ಸ್ವೀಕರಿಸುವವರ ನಡುವೆ ಇರುವ ಸಂಬಂಧಗಳು ಗಮನಾರ್ಹವಾಗಿವೆ. ದಾನ ಕೊಡುವುದು ಅಂದರೆ ತನ್ನಲ್ಲಿರುವುದನ್ನು ಮಾತ್ರ

ಕೊಡಲು ಸಾಧ್ಯ. ಎರಡನೆಯದಾಗಿ ದಾನ ಕೊಡುವವನಿಗೂ ನಿರ್ದಿಷ್ಟ ಉದ್ದೇಶಗಳಿರುತ್ತವೆ. ದಾನಕೊಡುವುದು ಪಾಪ ಪರಿಹಾರಕ್ಕೆ ಅಥವಾ ಇನ್ನಿತರ ತನ್ನ ಉದ್ದೇಶಕ್ಕೆ ದಾನ ಕೊಡುವುದು ಪಾಪಪರಿಹಾರಕ್ಕೆ ಅಥವಾ ಇನ್ನಿತರ ತನ್ನ ಉದ್ದೇಶಕ್ಕೆ ದಾನ ಸ್ವೀಕರಿಸುವವನು ದಾನ ಕೊಡುವವನಿಗಿಂತ ಸಣ್ಣವನಾಗಿರಬಹುದು. ದಾನ ಕೊಡುವವನಿಗೆ ಇರುವ ಉದ್ದೇಶವು ದಾನ ತೆಗೆದುಕೊಳ್ಳುವವನಿಗೆ ಇರುವುದಿಲ್ಲ ದಾನವೆನ್ನುವುದು ಮಾತ್ರ ಧಾರ್ಮಿಕ ನೈತಿಕ ಉದ್ದೇಶಗಳಿಗೆ ಅನುಸಾರವಾಗಿರುತ್ತದೆ. ದಾನಗಳಲ್ಲಿ ಎರಡು ಬಗೆ: ಒಂದು ಸದುದ್ದೇಶದಿಂದ ಮಾಡಿರುವ ದಾನಗಳು ಇನ್ನೊಂದು ದುರ್ದಾನ ದುರ್ದಾನವು ಕೆಟ್ಟ ಉದ್ದೇಶದಿಂದ ಕೂಡಿರುತ್ತದೆ. ಉದಾ: ವಿಶ್ವಾಮಿತ್ರ – ಹರಿಶ್ಚಂದ್ರನ ಹತ್ತಿರ ಪಡೆದ ದಾನವು ದುರ್ದಾನವಾಗಿರುತ್ತದೆ.

ಬೇಡಿದವನಿಗೆ ಮತ್ಸರವಿಲ್ಲದೆ ಇದ್ದದ್ದು ಕೊಡಬೇಕು. ಆದುದರಿಂದ ಎಂದಾದರೂ ಸತ್ಪಾತ್ರದಾನವಾಗಿ ತನ್ನ ದುರಿತ ನಿವೃತ್ತಿಯಾಗುವುದು. (ಮನುಸ್ಮೃತಿ)

ಜಲದಾನದಿಂದ ತೃಪ್ತಿಯು, ಅನ್ನದಾನದಿಂದ ಅಕ್ಷಯ ಸುಖವು, ತಿಲದಾನದಿಂದ ಸತ್ಪ್ರಜೆಯು, ದೀಪದಾನದಿಂದ ಉತ್ತಮ ದೃಷ್ಟಿಯು ದಾತೃವಿಗೆ ಲಭಿಸುವುದು. (ಮನುಸ್ಮೃತಿ)

ಭೂದಾನದಿಂದ ಭೂಮಿಯು, ಹಿರಣ್ಯದಾನದಿಂದ ದೀರ್ಘಾಯುಸ್ಸು, ಗೃಹದಾನದಿಂದ ಒಳ್ಳೆ ಮನೆಯು, ಬೆಳ್ಳಿದಾನದಿಂದ ಸೌಂದರ್ಯವು, ಕಾಲಾಂತರದಲ್ಲಿ ಪ್ರಾಪ್ತವಾಗುವುದು. (ಮನುಸ್ಮೃತಿ)

ವಸ್ತ್ರದಾನದಿಂದ ಚಂದ್ರನು, ಅಶ್ವದಾನದಿಂದ ಅಶ್ವಿನಿದೇವತೆಗಳು, ವೃಷಭದಾನದಿಂದ ಐಶ್ವರ್ಯ ದೇವತೆಯು, ಕರೆಯುವ-ಗೋದಾನದಿಂದ ಸೂರ್ಯನು ತೃಪ್ತಿಯನ್ನು ಹೊಂದುತ್ತಾರೆ. (ಮನುಸ್ಮೃತಿ)

ವಾಹನ, ಮಂಚಗಳ ದಾನದಿಂದ ಒಳ್ಳೆ ಹೆಂಡತಿ, ಅಭಯ ದಾನದಿಂದ ಐಶ್ವರ್ಯ, ಧಾನ್ಯದಾನದಿಂದ ಸುಖ, ವೇದಾರ್ಥ ದಾನದಿಂದ ಬ್ರಹ್ಮಪ್ರೀತಿ, ಇವುಗಳನ್ನು ಸಂಪಾದಿಸುವನು. (ಮನುಸ್ಮೃತಿ)

ನೀರು, ಅನ್ನ, ಗೋವು, ಎಮ್ಮೆ, ಬಟ್ಟೆ, ಎಳ್ಳು, ಚಿನ್ನ, ತುಪ್ಪಗಳ ದಾನಕ್ಕಿಂತ ಬ್ರಹ್ಮಜ್ಞಾನ ದಾನವು ಪ್ರಧಾನವು ಬಹುಫಲವುಳ್ಳದು. (ಮನುಸ್ಮೃತಿ 4–228; 230) ದಾನಗಳು ಹದಿನಾರು ವಿಧವೆಂದು ಹೇಳುತ್ತಾರೆ

1) ಅಭೀಷ್ಟ ದಾನ–ಯಾವ ವ್ಯಕಿಗೆ ಯಾವ ವಸ್ತು ರುಚಿಸುತ್ತದೆಯೋ ಆವ್ಯಕ್ತಿಗೆ ನೀಡುವ ದಾನವು ಅಭೀಷ್ಟ ದಾನ. ಇದು ಉತ್ತಮ ದಾನ.

2) ಹಾಯನ– ಒಂದು ಕುಟುಂಬದ ಪಾಲನೆ ಪೋಷಣೆಗೆ ಬೇಕಾಗುವಷ್ಟು ದಾನವನ್ನು ದಾನ ನೀಡಿದರೆ ಅದಕ್ಕೆ ಹಾಯನವೆಂದು ಕರೆಯುತ್ತಾರೆ.

3) ದೇಶ್ಯ ದಾನ_ ಒಂದು ವಿಶಿಷ್ಟವಾದ ಪ್ರದೇಶವನ್ನು ದಾನ ನೀಡುವುದಕ್ಕೆ ದೇಶ್ಯ ದಾನವೆಂದು ಕರೆಯುತ್ತಾರೆ.

4) ಕರಜ– ರಾಷ್ಟ್ರದಲ್ಲಿ ದೊರೆಯುವ ಕರವನ್ನು ದಾನ ಮಾಡಿದರೆ ಅದಕ್ಕೆ ಕರಜವೆಂದು ಕರೆಯುತ್ತಾರೆ.

5) ದಂತಿಜ– ಆನೆಯನ್ನು ದಾನ ಮಾಡಿದರೆ ಅದಕ್ಕೆ ದಂತಿಜವೆಂದು ಕರೆಯುತ್ತಾರೆ.

6) ಸಪ್ತಿಜ –ಕುದುರೆಯನ್ನು ದಾನ ಮಾಡಿದರೆ ಅದಕ್ಕೆ ಸಪ್ತಿಜವೆಂದು ಕರೆಯುತ್ತಾರೆ.

7) ಗ್ರಾಮಜ ದಾನ–ಗ್ರಾಮವೊಂದನ್ನು ದಾನವಾಗಿ ನೀಡಿದರೆ ಅದಕ್ಕೆ ಗ್ರಾಮಜವೆಂದು ಕರೆಯುತ್ತಾರೆ.

8) ಶಾಸನ – ಏಕ ಮನಸ್ಸಿನಿಂದ ನೀಡಿದ ದಾನವು ಶಾಸನವೆನ್ನಿಸಿಕೊಳ್ಳುತ್ತದೆ.

9) ಭೂಷಾ ದಾನ_ಶ್ರೇಷ್ಠವಾದ ರತ್ನದಿಂದ ಕೂಡಿದ ಆಭರಣವನ್ನು ದಾನವಾಗಿ ನೀಡಿರುವುದಕ್ಕೆ ಭೂಷಾ ದಾನವೆಂದು ಕರೆಯುತ್ತಾರೆ.

10) ವಸನ_ ಅತಿ ಸುಂದರವಾದ ಸಾಕಷ್ಟು ಸಂಖ್ಯೆಯ ವಸ್ತ್ರಗಳನ್ನು ನೀಡುವುಕ್ಕೆ ವಸನ ದಾನವೆಂದು ಕರೆಯುತ್ತಾರೆ.

11) ಪ್ರತಿಪತ್ತಿಕ–ಆಸನ ಚಾಮರ,ಛತ್ರ,ವಾಹನ ಮುಂತಾದವುಗಳನ್ನು ದಾನ ನೀಡುವುದಕ್ಕೆ ಪ್ರತಿಪತ್ತಿಕವೆಂದು ಕರೆಯುತ್ತಾರೆ.

12) ಆಕರ ದಾನ_ಯಾವ ಭೂಮಿಯಲ್ಲಿ ಬೆಳ್ಳಿ ಬಂಗಾರ ಹಾಗೂ ರತ್ನಗಳ ಖಣಿಗಳಿರುತ್ತವೆಯೋ ಅದಕ್ಕೆ ಆಕರ ದಾನವೆಂದು ಕರೆಯುತ್ತಾರೆ.

13) ರುಕ್ಮಜ ದಾನ_ ಬಂಗಾರದ ನಾಣ್ಯಗಳನ್ನು ದಾನ ನೀಡುವುದಕ್ಕೆ ರುಕ್ಮಜ ದಾನವೆಂದು ಕರೆಯುತ್ತಾರೆ.

14) ಕನ್ಯಾದಾನ_ ಕನ್ಯೆಯನ್ನು ದಾನ ನೀಡುವುದಕ್ಕೆ ಕನ್ಯಾದಾನವೆಂದು ಕರೆಯುತ್ತಾರೆ.

15) ವೈಶ್ಯ ದಾನ_ವೇಶ್ಯೆಯನ್ನು ದಾನ ನೀಡುವುದಕ್ಕೆ ವೈಶ್ಯ ದಾನವೆಂದು ಕರೆಯುತ್ತಾರೆ.

16) ವೇಲಾಕರ ದಾನ_ಬಂದರು ದಾನ ನೀಡುವುದಕ್ಕೆ ವೇಲಾಕರೆ ದಾನವೆಂದು ಕರೆಯುತ್ತಾರೆ.

ಹೀಗೆ ಒಟ್ಟು ಹದಿನಾರು ವಿಧದ ದಾನಗಳು ಇವೆ. (ಮಾನಸೋಲ್ಲಾಸ–2–1010–1027)

ದಾನಶಾಸನ

"ಯಾರಾದರೂ ಒಬ್ಬರು ಮತ್ತೊಬ್ಬರಿಗೆ ಯಾವುದನ್ನಾದರೂ ಕೊಡುವುದನ್ನು ದಾನವೆಂದು ಕರೆಯುತ್ತಾರೆ. ದಾನವು ಬೇರೆ ಬೇರೆ ರೂಪದಲ್ಲಿರಬಹುದು. ಆದರೆ

ದಾನದ ಹಿಂದೆ ಸದುದ್ದೇಶವಿರುತ್ತದೆ. ದಾನಗಳು ಸಾಮಾನ್ಯವಾಗಿ ದೇವಾಲಯದಲ್ಲಿ ನಡೆಯುವ ಪೂಜೆ, ಪುನಸ್ಕಾರಗಳಿಗೋ, ಒಂದು ಮಠದಲ್ಲಿ ನಡೆಯುವ ವಿದ್ಯಾದಾನಕ್ಕೋ, ದೇವಾಲಯದಲ್ಲಿ ಪೂಜೆ ಮಾಡುವ ಪೂಜಾರಿಗಳಿಗೋ, ನರ್ತಿಸುವ ನರ್ತಕಿಯರಿಗೋ, ಸಾಂಸ್ಕೃತಿಕ ವಿಷಯಗಳಿಗೋ, ಅರವಟ್ಟಿಗೆ, ಕೆರೆ–ಬಾವಿ, ಮುಂತಾದ ಲೋಕೋಪಯೋಗಿ ಕಾರ್ಯಗಳಿಗೋ ವ್ಯಕ್ತಿಯೊಬ್ಬನ ಸೇವೆ ಪರಾಕ್ರಮಗಳನ್ನು ಮನ್ನಿಸಿಯೋ ನೀಡಿದ ದಾನವಾಗಿರುತ್ತವೆ. ದಾನವಾಗಿ ನೀಡುವ ಆರ್ಥಿಕ ಮೂಲವು ಭೂಮಿಯಾಗಿರಬಹುದು, ನಗದುರೂಪದ ಹಣ ವಾಗಿರಬಹುದು ಅಥವಾ ಅಗತ್ಯ ವಸ್ತುಗಳ ಪೂರೈಕೆ ಇರಬಹುದು ದಾನಶಾಸನದಲ್ಲಿ ದಾನ ನೀಡುವ ವ್ಯಕ್ತಿಯ ವಿವರ ಹಾಗೂ ದಾನಸ್ವೀಕರಿಸುವವರ ವಿವರಗಳು ನಮಗೆ ದೊರೆಯುತ್ತವೆ. ಅನೇಕ ದಾನ ಶಾಸನಗಳಲ್ಲಿ ದಾನ ನೀಡುವವರನ್ನು ವೈಭವೀಕರಿಸಲಾಗುತ್ತದೆ." ದಾನಶಾಸನಗಳು: ಉಮಬಳಿಗಳು ಜಾರಿಯಲ್ಲಿತ್ತು.

ವಿವರಗಳಿಗೆ ನೋಡಿ: ಶ್ರೀ ಶೇಷಶಾಸ್ತ್ರಿ ೨೦೦೫ ಶಾಸನ ಪರಿಚಯ ಪುಟ. ೭.

ದಾಯಾದಿ

ಸೋದರರಲ್ಲಿ ಒಬ್ಬನು ವಿಭಾಗ ಕಾಲದಲ್ಲಿ ಯಾವುದಾದರೂ ಕಾರಣದಿಂದ ಭಾಗ ಸ್ವೀಕರಿಸದೆ ಉಳಿದು ಸತ್ತರೆ ಅವನ ಅಂಶವು ಲೋಪ ಹೊಂದುವುದಿಲ್ಲ. ಈ ಅರ್ಥದಲ್ಲಿ ದಾಯಾದಿಗಳ ನಡುವಣ ಹಂಚಿಕೆಯ ಕ್ರಮವು ಚರ್ಚಾರ್ಹವಾಯಿತು. ದಾಯಾದಿ ಕಲಹವೆನ್ನುವ ಮಾತು ಸುಪ್ರಸಿದ್ಧವಾಗಿದೆ.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೯–೨೧೧.

ದಾರಿಕಳ್ಳರು ಮತ್ತು ವೀರರ ಸ್ಮಾರಕಗಳು

ವ್ಯಾಪಾರದ ಸಲುವಾಗಿಯೋ ಅಥವಾ ಪ್ರಯಾಣದ ನಿಮಿತ್ತವಾಗಿಯೋ ಹೊರಟ ಪಥಿಕರ ಮೇಲೆ, ದಾರಿಕಳ್ಳರು ಬಂದು ಎರಗಿ ಅವರ ಬಳಿಯಿರುವ ಒಡವೆ ವಸ್ತುಗಳನ್ನು ಅಪಹರಿಸುತ್ತಿದ್ದರು. ಇಂಥ ಕಳ್ಳರಿಗೆ ಹೆದರದೆ ಅವರೊಂದಿಗೆ ಹೋರಾಡಿ ಮಡಿದವರಿಗಾಗಿ ಸ್ಮಾರಕ ಶಿಲೆಗಳನ್ನು ಹಾಕಿಸಿರುವ ಹಲವಾರು ನಿದರ್ಶನಗಳು ಇವೆ. ಕ್ರಿ.ಶ. 1291ರ ಒಂದು ವೀರಗಲ್ಲು – 'ಶಾಉರಣ್ಣ' ಮತ್ತು'ಸಾದ' ಎಂಬುವರು ಹನಿಯೂರು ಗ್ರಾಮದ ಸಂತೆಗೆ ಹೋಗಿ, ಬರುತ್ತಿರುವಾಗ ದಾರಿಗಳ್ಳರು ಅವರನ್ನು ಆಕ್ರಮಣ ಮಾಡುತ್ತಾರೆ. ಆಗ 'ಶಾ ಉರಣ್ಣ'ನೂ 'ಸದಾ'ನೂ ಅವರೊಡನೆ ಹೋರಾಡುತ್ತಾರೆ. ಈ ಹೋರಾಟದಲ್ಲಿ ಶಾ ಉರಣ್ಣನು ಸಾಯುತ್ತಾನೆ. ಆಗ ಅವನ ಪರಾಕ್ರಮವು ತಿಳಿಯುವಂತೆ, ವೀರಗಲ್ಲನ್ನು ಅವನ ತಂದೆ ಮತ್ತು ಸೋದರರು ನಿಲ್ಲಿಸಿದರು ಎಂಬ ವಿಷಯವನ್ನು ತಿಳಿಸುತ್ತದೆ.

ಕಳ್ಳರು ರಾತ್ರಿಯ ವೇಳೆ ಮನೆಗಳಿಗೋ ಅಥವಾ ದೇವಾಲಯಗಳಿಗೂ ನುಗ್ಗಿ ಅಥವ ಕನ್ನವಿಕ್ಕಿ ಅಪಹರಿಸುತ್ತಿದ್ದುದುಂಟು. ಸುಮಾರು ಒಂಭತ್ತನೆಯ ಶತಮಾನಕ್ಕೆ

ಸೇರಿದ ಒಂದು ಶಾಸನದಿಂದ ಮನೆಗೆ ಕನ್ನ ಹಾಕಿ ಕಳ್ಳತನ ಮಾಡಲು ಬಂದ ಒಂಭತ್ತು ಜನ ಕಳ್ಳರನ್ನು ಕೊಂದು ಮಡಿದ ತನ್ನ ಆಳು 'ಕಲಿಯ ಗಂಡ' ಎಂಬುವನಿಗೆ ಮುತ್ತರಸ ಎಂಬುವನು ಪರಿಹಾರವಾಗಿ ಜಮೀನನ್ನು ದತ್ತಿ ಬಿಟ್ಟ ವಿಷಯ ತಿಳಿಯುತ್ತದೆ. ಕ್ರಿ.ಶ 1432ರ ಮತ್ತೊಂದು ವೀರಗಲ್ಲಿನಿಂದ ಸ್ವಾರಸ್ಯವಾದ ವಿಷಯ ತಿಳಿಯುತ್ತದೆ. ಶಿವರಾತ್ರಿಯ ದಿನ ಎಲ್ಲರೂ ಉಪವಾಸ ಇದ್ದು, ಊರ ಹೊರಗಿನ 'ದೇವರ ವನ'ದಲ್ಲಿ ಜಾಗರಣೆ ಮಾಡುತ್ತಿರುವಾಗ, ಕಳ್ಳರು ಇದೇ ಸರಿಯಾದ ಸಮಯವೆಂದು ಶಿವದೇವಾಲಯವನ್ನು ಮುತ್ತಿಗೆ ಹಾಕುತ್ತಾರೆ. ಅದು ಹೇಗೋ ಜನರಿಗೆ ತಿಳಿದು ಕಳ್ಳರನ್ನು ಹಿಡಿಯಲು ಹೊರಡುತ್ತಾರೆ. ಕಳ್ಳರೊಡನೆ ಹೋರಾಡುವಲ್ಲಿ ಮಲ್ಲಯ ಎಂಬುವನು ಸಾಯುತ್ತಾನೆ. ಕಳ್ಳರೊಡನೆ ಹೋರಾಡಿದವರೂ ಕೂಡಾ ಗೌರವಿಸಬೇಕಾದ ವ್ಯಕ್ತಿಗಳು ಎಂಬ ಕಾರಣಕ್ಕೆ ಅವರ ಸ್ಮಾರಕಗಳನ್ನು ನಿಲ್ಲಿಸುತ್ತಾರೆ. ಎರಡನೆಯದಾಗಿ ದಾರಿಕಳ್ಳರನ್ನು ಎದುರಿಸುವುದು ಮಹತ್ವದ್ದು ಎಂಬ ಕಾರಣಕ್ಕೆ ಅವರ ಸ್ಮಾರಕವಿರುತ್ತದೆ ಎಂದು ಶೇಷಶಾಸ್ತ್ರಿಯವರು ಹೇಳುತ್ತಾರೆ.

ವಿವರಗಳಿಗೆ ನೋಡಿ: ಶ್ರೀ ಶೇಷಶಾಸ್ತ್ರಿ ೨೦೦೫ ಶಾಸನ ಪರಿಚಯ
ಪುಟ. ೨೭-೨೮.

ದಾರುಣ ಕರ್ಮ, ಪ್ರೇರಣೆ

ದಾರುಣ ಕರ್ಮ ಪ್ರೇರಣೆಯೆಂದರೆ ಹಿಂದಿನ ಜನ್ಮದಲ್ಲಿ ಮಾಡಿರುವ ಅತಿಯಾದ ದುಷ್ಕರ್ಮದ ಪ್ರೇರಣೆಯೆಂಬ ಜೈನರ ನಂಬಿಕೆಯೇ ಇಲ್ಲಿ ಪುನರ್ ವ್ಯಕ್ತವಾಗಿದೆ.

ವಿವರಗಳಿಗೆ ನೋಡಿ: ಕರ್ಮ

ದಾಸ

ಋಗ್ವೇದದಲ್ಲಿ ಆರ್ಯರ ಶತ್ರುಗಳೆಂದು ಕರೆಯಲಾಗುವವರು (೧) ಪಣರು (೨) ದಾಸರು(ದಸ್ಯುಗಳು) ಪಣರು ಧನವಂತರೆಂದೂ, ಲೋಭಿಗಳೆಂದೂ ವೇದಗಳಲ್ಲಿ ವರ್ಣಿತವಾಗಿದೆ. ನಂತರದ ಕಾಲದಲ್ಲಿ ಪ್ರಚುರಗೊಂಡ ವಣಿಕರು (ವ್ಯಾಪಾರಸ್ಥರು). ಪಣಂ (ನಾಣ್ಯ). ಪಣ್ಯಂ (ಸರಕು) ಎಂಬ ಶಬ್ದಗಳನ್ನು ಗಮನಿಸಿ, ಮೇಲೆ ಹೇಳಿದ ಪಣರು ಬಹುಶ: ಸಿಂಧೂ ನಾಗರೀಕತೆಯ ವ್ಯಾಪಾರಸ್ಥರ ಅವಶೇಷಗಳಿರಬಹುದು ಎನ್ನುತ್ತಾರೆ ಕೊಸಾಂಬಿ. ಇಂದ್ರನು ಇವರ ಸಂಪತ್ತನ್ನು ಲೂಟಿ ಮಾಡುತ್ತಾನೆ. ಇವರು ರಾಕ್ಷಸರೆಂದೂ, ಆರ್ಯರ ಶತ್ರುಗಳೆಂದೂ ನಿರೂಪಿಸುತ್ತಾನೆ. ಒಂದು ಸಂದರ್ಭದಲ್ಲಿ ಶುನಕ ರೂಪದಲ್ಲಿ ಸರಮಾಎಂಬ ಮಾತೃದೇವತೆಯನ್ನು ಇಂದ್ರನು ಪಣರ ಬಳಿಗೆ ರಾಯಭಾರಿಯಾಗಿ ಕಳಿಸಿ ತನಗೆ ಪಶುಗಳನ್ನು 'ಕಪ್ಪ'ವಾಗಿ ಕೊಡಬೇಕೆಂದೂ, ತಪ್ಪಿದಲ್ಲಿ ಆಗುವ ಪ್ರಮಾದಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದೂ ಬೆದರಿಸುತ್ತಾನೆ. 'ದಾಸ' ಎಂದರೆ ನಂತರದ ಕಾಲದಲ್ಲಿ ಸೇವಕ, ಭೃತ್ಯ. ಆದರೆ

ಋಗ್ವೇದ ಕಾಲದಲ್ಲಿ 'ದಾಸ' ಎಂದರೆ ಕೇವಲ ಆರ್ಯೇತರ ಎಂದಷ್ಟೇ ಅರ್ಥ. ಇವರು ಆರ್ಯರಿಗೆ ಮುಖ್ಯ ಶತ್ರುಗಳಾಗಿ ಕಾಣುತ್ತಾರೆ. ಇವರನ್ನು ಕೂಡ ರಾಕ್ಷಸರೆಂದೇ ವರ್ಣಿಸುತ್ತಾರೆ. ಅರ್ಬುದ ಎಂಬ ದಾಸನನ್ನು ಇಂದ್ರನು ತನ್ನ ಕಾಲ ಕೆಳಗೆ ಹಾಕಿ ತುಳಿದು ಕೊಂದನು. ನದಿಯ ನೀರಿಗೆ ಅಡ್ಡಲಾಗಿ ಮಲಗಿದ ವೃತ್ರನೆಂಬ ದಾಸನನ್ನು ವಜ್ರಾಯುಧದಿಂದ ಹೊಡೆದು ಈ 'ದಾಸರು' ದೀನದರಿದ್ರರೋ, ಸೇವಕರೋ ಆಗಿದ್ದಿರಲಾರರು ಎಂಬುದನ್ನು ಮತ್ತೊಮ್ಮೆ ಹೇಳಬೇಕಾಗಿದೆ. ಆರ್ಯರು ಕೃಷಿಕ ವರ್ಗ ಸಮಾಜವನ್ನು ರೂಪಿಸಿದ ನಂತರದಲ್ಲಿ, ಈ ದಾಸರಲ್ಲಿ ಕೆಲವರನ್ನು ಶೂದರರನ್ನಾಗಿಸಿ ತಮ್ಮ ಅಧೀನವಾಗಿಸಿಕೊಂಡ ಮೇಲೆ ಇವರ ಹೆಸರೇ ದೀನತೆಯನ್ನು ಸೇವಕತನ ಸ್ವಭಾವನ್ನು ಸೂಚಿಸುವ ಪದವಾಗಿ ಬಿಟ್ಟಿತು. ಋಗ್ವೇದ ಕಾಲದಲ್ಲೇನೂ ಇಂಥ ಅರ್ಥದಲ್ಲಿ ಈ ಮಾತಿನ ಪ್ರಯೋಗವಿಲ್ಲ. ದಾಸರು ಎಂದರೆ ಆರ್ಯೇತನ ಜನ ಮಾತ್ರ. ಅವರು ಕಪ್ಪಗಿದ್ದವರು. (ಅವರ ಪುರಗಳನ್ನು ಕೃಷ್ಣಗರ್ಭ ಎನ್ನಲಾಗಿದೆ. ಎಂದರೆ ಕಪ್ಪಗಿನ ಜನರನ್ನು ತನ್ನ ಹೊಟ್ಟೆಯಲ್ಲಿ ಧರಿಸುವುದು ಎಂಬ ಅರ್ಥ) ಚಪ್ಪಟೆ ಮೂಗುಳ್ಳವರು (ಅನಾಸ–ಎಂದರೆ ಮೂಗಿಲ್ಲದವರು). ಈ ದಾಸರು ಭೃತ್ಯರಾಗಿ, ಸೇವರಾಗಿ ಇನ್ನೂ ಅಧೀನರಾಗಿರದಿದ್ದ ಕಾಲಕ್ಕೆ ಮುಂಚೆಯೇ (ಅಂದರೆ ಋಗ್ವೇದ ಕಾಲದಲ್ಲಿಯೇ) ಆರ್ಯ–ದಾಸ ಮುಖ್ಯರ ವಿಲೀನತೆ ಆರಂಭವಾಗಿದ್ದಿತು. ಈ ವಿಲೀನತೆಯಲ್ಲಿ ಪುರೋಹಿತರು ಮುಖ್ಯಪಾತ್ರ ವಹಿಸಿದರು. ಆಗ ದಾಸಪುರೋಹಿತರೂ, ಆರ್ಯ ಪುರೋಹಿತರು ಒಂದಾಗಿ, ಇಬ್ಬರೂ ಕೂಡಿದ ಒಂದು ಬಲವಾದ ಬ್ರಾಹ್ಮಣ ವರ್ಗ ಸೃಷ್ಟಿಯಾಯಿತು. ಸಿಂಧೂ ನಾಗರೀಕತೆಯಲ್ಲಿ ಪುರೋಹಿತ ಪ್ರಾಬಲ್ಯ ಇದ್ದ ಸ್ಥಿತಿಯನ್ನು ಗುರುತಿಸಿದರೆ, ಬಹುಶ: ಈ ಬ್ರಾಹ್ಮಣ ಗೋತ್ರಗಳೂ, ಋಷಿಗಳೂ ಬಹುಮಟ್ಟಿಗೆ ದಾಸರಿಂದಲೇ ಬಂದವರು ಎಂಬುದು ಕೊಸಾಂಬಿಯವರ ಅಭಿಪ್ರಾಯ. (ಡಿ. ಡಿ. ಕೊಸಾಂಬಿ ೧೯೭೮ ಪು. ೮೨–೮೩)

ತಿಪಿಟಕಗಳ ಪ್ರಾಚೀನ ಭಾಗಗಳಲ್ಲಿ ಶೂದ್ರ ಎನ್ನುವುದಕ್ಕಿಂತ ದಾಸ, ಕಮ್ಮ (ರ್ಮ)ಕಾರ ಎಂಬ ಪದಗಳೇ ಹೆಚ್ಚು ಬಳಕೆಯಾಗಿವೆ. ಕೃಷಿ ಕೆಲಸಗಳಲ್ಲಿ ಅವರನ್ನು ತೊಡಗಿಸಲಾಗುತ್ತಿತ್ತು. ಭೂರಹಿತ ಶೂದ್ರರೇ ಕರ್ಮಕಾರರಾಗಿದ್ದರು. ದಾಸರು ಬಹುಪಾಲು ಶೂದ್ರರೇ. ಬುದ್ಧನೇ ದೀಘನಿಕಾಯದಲ್ಲಿ (I. ೧೦೪) ಮೂರು ವರ್ಣಗಳ ಬಗ್ಗೆ ಹೇಳಿ ನಂತರ "ಸುದ್ದೋ (ಶೂದ್ರೋ) ವಾ ಸುದ್ದದಾಸೋ ವಾ" ಎಂದಿದ್ದಾನೆ. ಶೂದ್ರದಾಸನೆಂದರೆ ಶೂದ್ರನ ದಾಸನಲ್ಲ; ಅವನು ಶೂದ್ರನಾದ ದಾಸ. ಧರ್ಮಸೂತ್ರಗಳಲ್ಲಿಲ್ಲದ ಶೂದ್ರ–ದಾಸ ಸಮೀಕರಣ ಬೌದ್ಧ ಕೃತಿಯಲ್ಲಿರುವುದು ಸ್ವಾರಸ್ಯಕರ. ಮುಂದೆ ಮೌರ್ಯೋತ್ತರ ಕಾಲದಲ್ಲಿ ಮನು ಈ ಸಿತ್ಥಿಯನ್ನು ಸ್ಪಷ್ಟವಾಗಿಯೇ ಹೇಳುತ್ತಾನೆ.

ಹಿಂದೊಮ್ಮೆ ಆರ್ಯರು ಯಾರನ್ನು 'ಕೃಷ್ಣಾ' (ಕಪ್ಪಗಿರುವವನು ಅನಾಸಾ: (ಮೂಗಿಲ್ಲದವರು) ಅದೇವಯು (ಅಧಾರ್ಮಿಕರು) (ಒರಟು ಮಾತನ್ನಾಡುವವರು) ಅಯಜ್ವನ (ಯಜ್ಞಯಾಗಾದಿಗಳನ್ನು ಮಾಡದವರು) ಶಿಶ್ನದೇವಾ: (ಅಂಗಪೂಜಕರು) ದಾಸಾ: (ಗುಲಾಮರು) ದಸ್ಯು: (ಪಾಪ ಕರ್ಮಿಗಳು)ಎಂದು ಹೆಸರಿಸಿದ್ದರೋ ಅವರನ್ನೇ ತಮ್ಮ ಸಾಮಾಜಿಕ ಅಂತಸ್ತಿಗೆ ಅನುಸಾರವಾಗಿ ದಾಸರನ್ನಾಗಿರಿಸಿದರು. (ಭಗವತ್ ಶರಣ ಉಪಾಧ್ಯಾಯ. ೨೦೦೪. ಪು. ೭೫) ಬ್ರಿಟಿಷ್ ಆಳ್ವಿಕೆಯನ್ನು ಸಾಮಾನ್ಯವಾಗಿ ವಸಾಹತುಶಾಹಿ ಅನುಭವದ ಕಾಲಘಟ್ಟ ಎಂದು ಕರೆಯುತ್ತೇವೆ. ವಸಾಹತುಶಾಹಿ ಅನುಭವ ಎನ್ನುವುದು ಕೇವಲ ಆಳ್ವಿಕೆಗೆ ಸಂಬಂಧಪಟ್ಟ ಪರಿಭಾಷೆಯಲ್ಲ. ಬ್ರಿಟಿಷ್ ಆಳ್ವಿಕೆಯು ಭೂಮಿಯ ಮೇಲೆ ಮಾತ್ರವೇ ಹಿಡಿತವನ್ನು ಹೊಂದಿರಲಿಲ್ಲ. ಸಂಸ್ಕೃತಿಯ ಜೊತೆಗೆ ಸಾಮಾಜಿಕ ಪರಿವರ್ತನೆ, ಕಾನೂನುಗಳ ಬದಲಾವಣೆ, ಶಿಕ್ಷಣ ವ್ಯವಸ್ಥೆಯಲ್ಲಿ ರೂಪಾಂತರ ಮುಂತಾದವುಗಳನ್ನು ಬ್ರಿಟೀಶರು ಜಾಲ್ತಿಗೆ ತಂದರು. ಇದನ್ನು ಹೊಸ ಮಾದರಿಯ ಪ್ರಭುತ್ವದ ಧೋರಣೆಯೆಂದು ಕರೆಯಬಹುದು. ಎಡ್ವರ್ಡ್ ಸೈದ್ ಹೇಳುವಂತೆ ಬ್ರಿಟಿಷ್ ಆಳ್ವಿಕೆಯು ವಸಾಹತು ದೇಶಗಳಲ್ಲಿ ತನ್ನ ಪ್ರಭುತ್ವಕ್ಕೆ ತಕ್ಕಂತೆ ಸಮಾಜವನ್ನು ನಿಯಂತ್ರಿಸಿತು. ಇದು ಕೇವಲ ಸಾಮಾನ್ಯ ರೀತಿಯ ಸಂಬಂಧವಲ್ಲ. ವಸಾಹತುಶಾಹಿ ಸಂದರ್ಭದ ಆಳ್ವಿಕೆ ಮತ್ತು ಆಳ್ವಿಕೆಗೆ ಒಳಪಟ್ಟ ನಡುವಣ ಸಂಕಥನಗಳು ಒಂದೇ ಮಾದರಿಯದಾಗಿರಲಿಲ್ಲ. ಇದನ್ನು ಏಕಕೇಂದ್ರಿತ ಚರ್ಚೆ ಎಂದು ಕರೆಯುವಂತಿಲ್ಲ. ಬ್ರಿಟಿಷ್ ಅಧಿಕಾರವು ತನಗೆ ಬೇಕಾದುದ್ದನ್ನು ಅಳವಡಿಸುವದೊಂದಿಗೆ ಆಳುವ ಮತ್ತು ಆಳಿಸಿಕೊಳ್ಳುವವರ ನಡುವಣ ವಿಭಿನ್ನ ಸಂಕಥನಗಳನ್ನು ಅದು ರೂಪಿಸಿತು. ಅನುಕರಣೆ, ನಿರಾಕರಣೆ, ಸಂಕರ, ಅಸಹಕಾರ ಇವುಗಳೆಲ್ಲಾ ವಸಾಹತುಶಾಹಿ ಅನುಭವದ ಬೇರೆ ಬೇರೆ ಮಾದರಿ ಕೊಡುಗೆಗಳಾಗಿದೆ.

ವಿವರಗಳಿಗೆ ನೋಡಿ: ಮೋ ಗಾಂಧಿ ೧೯೬೭ ಜೀವನ ಶಿಕ್ಷಣ
ಮೋಹನ್ ದಾಸ್ ಕರಮಚಂದ್ ಗಾಂಧಿ ೨೦೦೮ ಹಿಂದ್ ಸ್ವರಾಜ್
ಮಹಾತ್ಮಾಗಾಂಧಿ ೧೯೫೮ ಧರ್ಮ ಮತ್ತು ನೀತಿ
ಆದ್ಯರಂಗಾಚಾರ್ಯ(ಸಂ) ೧೯೭೩ ಕನ್ನಡದಲ್ಲಿ ಅರವಿಂದ ದರ್ಶನ
ಮುಳಿಯ ತಿಮ್ಮಪ್ಪಯ್ಯ ೧೯೯೭ ಮಹಾಬಲಭಟ್(ಸಂ)
ಮುಳಿಯ ತಿಮ್ಮಪ್ಪಯ್ಯ ಸಮಗ್ರ ಸಾಹಿತ್ಯ(ಸಂ ೨)
Bill Asheroft 1001 Key concepts in post colonial studies
Veena Das 1995 Critical Events
Diana Brydon 2000 Post colonialism

Edward said - Intellectuals in postcolonialy world (Article)

ದಾಹೋತ್ತರಕ್ರಿಯೆ

ದಾಹ ಎಂದರೆ ಸಂಸ್ಕೃತ ಭಾಷೆಯಲ್ಲಿ ಸುಡುವುದು. ಉತ್ತರ ಕ್ರಿಯೆಯೆಂದರೆ ಹಿರಿಯರ ಮರಣಾನಂತರದಲ್ಲಿ ಮಕ್ಕಳು ಮಾಡುವ ಪಿತೃಕರ್ಮ.

"ಕಿರ್ಚೆಂದು ದಾಹಂ" (ಕರ್ನಾಟಕ ಶಬ್ದಸಾರಂ ಪುಟ ೪೮)

ಋಗ್ವೇದದಲ್ಲಿ ಮೃತಶರೀರದ ದಹನ ಹಾಗೂ ಖನನಗಳೆರಡನ್ನೂ ಕುರಿತು ಪ್ರಸ್ತಾವಿಸಲಾಗಿದೆ. "ಎಲೈ ಅಗ್ನಿಯೆ ಇವನನ್ನು ಅತಿಶಯವಾಗಿ ದಹಿಸಬೇಡ ನೋಯಿಸಬೇಡ ಇವನ ಚರ್ಮವನ್ನು ವಿಕೃತಗೊಳಿಸಬೇಡ, ಶರೀರವನ್ನು ಚದುರಿಸಬೇಡ ಅಗ್ನಿಯೇ ಇವನನ್ನು ಹದವಾಗಿ ದಹಿಸಿದ ಮೇಲೆ ಈ ಮೃತನನ್ನು ಪಿತೃಗಳ ಕಡೆಗೆ ಕಳುಹು" ಎಂದು ಋಗ್ವೇದದಲ್ಲಿ ಬರುತ್ತದೆ. (10–16–1)

1. ಸಾವಿನ ಆಗಮನ ತಿಳಿದ ಸಂದರ್ಭದಲ್ಲಿ ದಾನ ಮಾಡುವುದು. 2. ಅಂತ್ಯ ಕ್ರಿಯೆಗಿಂತ ಮುಂಚೆ ಪವಿತ್ರಾಗ್ನಿಗೆ ಹೋಮ ಮಾಡುವುದು. 3. ಶವದಾನಿ–ಶವವನ್ನು ರುದ್ರಭೂಮಿ ಒಯ್ಯಲೋಸುಗ ಚಟ್ಟಕ್ಕೆ ಇಡುವುದು. 4. ಶವವನ್ನು ಸಾಗಿಸುವುದು, 5. ಶವದ ಮೆರವಣಿಗೆ 6. ಅನುಸ್ತರಸಿ–ಮೃತ್ಯು ಸಾಗರವನ್ನು ಅನುಕೂಲವಾಗಲೆಂದು ಹಸುವನ್ನು ಸ್ವತಂತ್ರವಾಗಿ ಬಿಡುವುದು. 7. ಅಗ್ನಿಸ್ಪರ್ಶ 8. ಉದಕಕರ್ಮ –ಚಿತಾಗ್ನಿಗೆ ನೀರೆರೆಯುವುದು 9. ಶೋಕತಪ್ತರನ್ನು ಸಂತೈಸುವುದು 10. ಅಶೌಚ ಸಾವನ್ನು ಮೈಲಿಗೆಯೆಂದು ಮೃತನ ಬಂಧುವರ್ಗದವರು ಮಿಕ್ಕವರಿಂದ ದೂರವಿರುವುದು. 11. ಅಸ್ಥಿ ಸಂಚಯನ–ದಹಿಸಿ ಉಳಿದ ಮೂಳೆಗಳನ್ನು ಶೇಖರಿಸಿ ನೀರಿನಲ್ಲಿ ಬಿಡುವುದು. 12. ಶಾಂತಿಗಾಗಿ ಕರ್ಮ 13. ಸ್ಮಾರಕ 14. ಶ್ರಾದ್ಧ (ಸತ್ತವರಿಗೆ ನೈವೇದ್ಯವರ್ಪಿಸುವ ಕ್ರಮ) 15. ಸಂಪಿಂಡೀಕರಣ (ಮೃತ ಆತ್ಮವನ್ನು ಪಿತೃ ಗಣದೊಂದಿಗೆ ಸೇರಿಸುವ ಕ್ರಮ) ಸಂಸ್ಕಾರಗಳಾಗಿವೆ.

ಎರಡು ವರ್ಷವಾಗದ ಮಗುವಿಗೆ ಅಗ್ನಿ ಸಂಸ್ಕಾರವು ಬೇಡ. ಜಲ ತರ್ಪಣ ಬೇಡ. ಕಾಡಿನ ಕಟ್ಟಿಗೆಯಂತೆ ಪರಿಗಣಿಸಬಹುದು ಎಂದು ಮನು ಹೇಳುತ್ತಾನೆ.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 5–69

ವಿ. ಎಲ್. ಪಾಟೀಲ್ 2009 ವಡ್ಡಾರಾಧನೆ ಜಾನಪದೀಯ ಅಧ್ಯಯನ ಪುಟ. 165–166

ಯುಗಯಾತ್ರೀ ಭಾರತೀಯ ಸಂಸ್ಕೃತಿ 1971 ಸಂಪುಟ. 2 ಪುಟ. 303

ದಿಕ್ಪತಿ

ನಮ್ಮ ಪಾರಂಪರಿಕ ಜ್ಞಾನ ಪರಂಪರೆಯಲ್ಲಿ ಪ್ರತಿಯೊಂದು ದಿಕ್ಕು ದಿಕ್ಕುಗಳಿಗೂ ಬೇರೆ ಬೇರೆ ಅಧಿದೇವತೆಗಳಿರುತ್ತಾರೆ. ಅಷ್ಟ ದಿಕ್ಕುಗಳು ಮತ್ತು ಅದಕ್ಕೆ ಸರಿಯಾಗಿ ಅಷ್ಟ ಅಧಿದೇವತೆಗಳಿರುತ್ತಾರೆ. ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ನಾಲ್ಕು ಪ್ರಧಾನ ದಿಕ್ಕುಗಳು. ಈಶಾನ್ಯ, ವಾಯುವ್ಯ; ನೈರುತ್ಯ.

ದಿಗ್ವಿಜಯದ ಯಾತ್ರೆಗಳು

ಸಂಧನಜಾ, ಪಾರ್ಷ್ಣಿರೋಧ, ಮಿತ್ರ ವಿಗ್ರಹಿಣಿ, ದ್ವಂದ್ವಜ, ನಿರ್ವ್ಯಾಜಜಾ, ಕುಲ್ಯಾ ಏಳನೆಯದು ಶೀಘ್ರ ಎಂದು ಏಳು ವಿಧದ ದಿಗ್ವಿಜಯದ ಯಾತ್ರೆಗಳಿವೆ. ಶತ್ರುವಿನ ಜೊತೆಯಲ್ಲಿ ಸಂಧಾನ ಮಾಡಿಕೊಂಡು ನಡೆಸುವ ಯಾತ್ರೆಯನ್ನು ಸಂಧನಜ ಎಂದು ಕರೆಯುತ್ತಾರೆ. ಶತ್ರುವನ್ನು ತಡೆಗಟ್ಟಲು ನಡೆಸುವ ಜೈತ್ರಯಾತ್ರೆಯು ಬೇರೆ ರೀತಿಯಾಗಿರುತ್ತದೆ. ಅದಕ್ಕೆ ಪಾರ್ಷ್ಣಿ ರೋಧವೆಂದು ಹೆಸರು. ಅದೇ ಅಲ್ಲದೆ ತನ್ನ ಮಿತ್ರನೊಂದಿಗೆ ಯುದ್ಧ ಮಾಡಲು ಹಚ್ಚಿ ನಡೆಸುವ ಯುದ್ಧಕ್ಕೆ ಮಿತ್ರ ವಿಗ್ರಹಿಣಿ ಎಂದು ಕರೆಯುತ್ತಾರೆ. ಯಾವ ವೈರಿಯ ಮೇಲೆ ತಾನೇ ಸ್ವಯಂ ಧಾಳಿ ಮಾಡಿ ಯುದ್ಧ ಮಾಡುವ ಕ್ರಮವಿದೆಯೋ ಅದಕ್ಕೆ ದ್ವಂದ್ವಜವೆಂದು ಹೆಸರು. ಎಲ್ಲಾ ರೀತಿಯಿಂದಲೂ ನಿರಾತಂಕವಾದ ಯುದ್ಧವನ್ನು ಮಾಡಲು ಸಾಧ್ಯವಾಗುವುದೋ ಅದಕ್ಕೆ ‘ನಿರ್ವ್ಯಾಜ”ವೆಂದು ಕರೆಯುತ್ತಾರೆ. ವೈರಿಯ ವಿನಾಶಕ್ಕಾಗಿ ಯಾವ ರಾಜನು ವೈರಿಯ ಕುಲದಲ್ಲಿ ಹುಟ್ಟಿದವನನ್ನು ಜೊತೆ ಮಾಡಿಕೊಂಡು ಮಾಡುವ ಜೈತ್ರ ಯಾತ್ರೆಗೆ ಕುಲ್ಯವೆಂದು ಕರೆಯುತ್ತಾರೆ. ವೈರಿಯ ನಾಶವನ್ನು ಗುರಿಯಾಗಿಟ್ಟುಕೊಂಡು ಇನ್ನೆಲ್ಲಾ ಇತರ ಕಾರ್ಯಗಳನ್ನು ಬದಿಗೊತ್ತಿಕೊಂಡು ನಡೆಸುವ ಯುದ್ಧಕ್ಕೆ ಶೀಘ್ರಾವೆಂದು ಕರೆಯುತ್ತಾರೆ. (ಮಾನಸೋಲ್ಲಸ–2–746–753) ದಿಗ್ವಿಜಯದ ಯಾತ್ರೆಗಳಿಗೆ ಇದ್ದ ಬೇರೆ ಬೇರೆ ಹೆಸರುಗಳು ಗಮನಾರ್ಹ.

ದಿಬ್ಯ

ಪ್ರಮಾಣಮಾಡುವುದಕ್ಕೆ ಹಿಡಿದುಕೊಳ್ಳುವ ಕಾದ ಕಬ್ಬಿಣ ಮುಂತಾದವು. ವಿವಾದವೊಂದನ್ನು ನಿರ್ಣಯಿಸಲು ಮಾನುಷ ಪ್ರಮಾಣಗಳ ಅಭಾವವಿರುವಾಗ ಅನುಸರಿಸುವ ವಿಧಾನವೇ ದಿವ್ಯ ಎನ್ನಲಾಗಿದೆ. “ತತ್ರ ಮಾನುಷ ಪ್ರಮಾಣಾ ನಿರ್ಣೇಯ ಸ್ಯಾಪಿ ನಿರ್ಣಾಯಕಂ ಯತ್ತದ್ದಿವ್ಯಮಿತಿ ಲೋಕ ಪ್ರಸಿದ್ಧಂ” ಪ್ರಾಚೀನ ಕರ್ನಾಟಕದಲ್ಲಿ ಪ್ರಚಲಿತದಲ್ಲಿದ್ದ ಸಪ್ತದಿವ್ಯಗಳಾವುವೆಂದರೆ – ಕೋಶ, ರವಿ, ತಂಡುಲ, ಅಗ್ನಿ, ತಪ್ತಮಾಷ, ಜಲ, ವಿಷ.

ದಿವ್ಯವನ್ನು ಹಿಡಿಯುವ ವ್ಯಕ್ತಿಯೇ ಶೋಧ್ಯನೆನಿಸುತ್ತಾನೆ. ಕಾಸಿದ ಕಬ್ಬಿಣದ ತುಂಡನ್ನು ಕೈಯಲ್ಲಿ ಹಿಡಿದೋ, ಕಾಸಿದ ತುಪ್ಪದಲ್ಲಿ ಕೈಯದ್ದಿಯೋ ಅಂತೂ ದಿವ್ಯದ ಪರೀಕ್ಷೆಯಲ್ಲಿ ಗೆದ್ದು ಬರಬೇಕಾಗುತ್ತಿತ್ತು. ಕನ್ನಡ ಕಾವ್ಯಗಳಲ್ಲಿಯೂ ದಿವ್ಯದ ಪ್ರಸ್ತಾಪವಿದೆ.

ಪಂಪಭಾರತ, ಶಾಂತಿಪುರಾಣ, ಧರ್ಮಾಮೃತ, ಪಂಪರಾಮಾಯಣ, ಬಸವಣ್ಣನವರ ಷಟ್‌ಸ್ಥಲದ ವಚನಗಳು ಸಿದ್ಧರಾಮಚಾರಿತ್ರ ಇತ್ಯಾದಿ ದಿವ್ಯಗಳನ್ನು ಸಾಮಾನ್ಯವಾಗಿ ದೇವಸ್ಥಾನಗಳಲ್ಲಿ ಬ್ರಾಹ್ಮಣರ ಮುಂದೆ ನಡೆಯಿಸುತ್ತಿದ್ದುದು ಕಂಡು ಬರುತ್ತದೆ.

ನೋಡಿ: P.V. Kane 1941 History of dhasmashastra (Vol- III) P. 363

ಡಾ. ಎಂ. ಚಿದಾನಂದ ಮೂರ್ತಿ 1970 ಸಂಶೋಧನೆ ತರಂಗ ಪುಟ. 87–104.

ದೀವಗಾರ

ದೀವಗಾರನೆಂದರೆ ಬೇಟೆಗಾಗಿ ಮೃಗ ಪಕ್ಷಿಗಳನ್ನು ಸಾಕುವವನು.

ದೀವದ ಬೇಂಟೆ

ಇದರ ಕುರಿತು ಮುಳಿಯ ತಿಮ್ಮಪ್ಪಯ್ಯರ ವ್ಯಾಖ್ಯಾನ ಹೀಗಿದೆ: ಇಂದು ರಾತ್ರಿಯಲ್ಲಾಡುವ ಬೇಟೆ ಎಂಬುದನ್ನು 'ದೀವದ' (ದೀಪದ) ಎಂಬ ವಿಶೇಷಣವೇ ಸೂಚಿಸುತ್ತಿದೆ. ಈ ತರದ ಬೇಟೆಯನ್ನೀಗಲೂ ನಟ್ಟಿರುಳಿನಲ್ಲಾಡುವವರುಂಟು. ಆದರೆ, ಇದು ಅಧಾರ್ಮಿಕವಾದ ಬೇಟೆ; ಇದನ್ನಾಡಬಾರದು ಎಂದು ತಿಳಿದು ಬಂದ ಈ 'ದೀವದ ಬೇಂಟೆ'ಯ ಬಗೆಯನ್ನೊಂದಿಷ್ಟು ಮೊತ್ತ ಮೊದಲು ವಿವರಿಸಿದರೆ ದೇಸಿಯನ್ನರಿಯದ ವಾಚಕರಿಗೆ ಹೆಚ್ಚಿನ ಅನುಕೂಲ್ಯವಾಗಬಹುದೆಂದು ಭಾವಿಸುತ್ತೇವೆ.

ಮುಕ್ಕಡೆಯಲ್ಲಿಯೂ ಮುಚ್ಚುಳಗೊಂಡು ಒಂದೆಡೆಯಲ್ಲಿ ಮಾತ್ರವೇ ತೆರೆದುಕೊಂಡಿರುವ ಪೆಟ್ಟಿಗೆಯೊಂದರೊಳಗೆ, ಕುಪ್ಪಿಗೆಯಿಂದಾವೃತವಾಗಿ ಗಾಳಿಗೆ ನಂದಿ ಹೋಗದೆ ಜ್ವಲಿಸುವ ಒಂದು ದೀಪವನ್ನು ಅಲುಗಾಡುವಂತೆ ನೆಲೆಗೊಳಿಸಬೇಕು. ತೆರೆದ ಬಾಗಿಲನ್ನು ಮುಂದುಮಾಡಿದ ಆ ಪೆಟ್ಟಿಗೆಯನ್ನು ಹೊತ್ತುಕೊಂಡು, ಪಳಗಿದವನೊಬ್ಬನು ಮೆಲ್ಲ ಮೆಲ್ಲನೆ ಮುಂಬರಿಯುತ್ತಾ ತನಗೆ ಹೊಲಬಾದ ಮೃಗಗಳ ಇಕ್ಕೆಪಕ್ಕೆಗಳತ್ತ ಹೋಗಬೇಕು. ಸಜ್ಜಾದ ಕೋವಿಯನ್ನೆತ್ತಿಕೊಂಡು, ಜಾಣ ಬೇಟೆಗಾರನೊಬ್ಬನು ಆ ದೀಪದ ಪೆಟ್ಟಿಗೆಯನ್ನು ಹಿಂಬಾಲಿಸಿಕೊಂಡು ಸದ್ದಿಲ್ಲದೈದಬೇಕು. ಸದ್ದಿನ ಸುದ್ದಿಯೂ ಇಲ್ಲದ ಕಗ್ಗತ್ತಲೆಯ ಕಾಡಿನೊಳಗೆ, ಅಂತರಾಳದಲ್ಲಿ ತನ್ನತ್ತಲೇ ಹರಿದುಬರುತ್ತಿರುವ ಜ್ಯೋತಿ ರಿಂಗಣವದು ಪಕ್ಕೆಯಲ್ಲಿದ್ದ ಮೃಗದ ಕಣ್ಣನ್ನು ಕುಕ್ಕುತ್ತಿದೆ. ಆ ಜ್ಯೋತಿಯೆಂದರೆ ತನ್ನನ್ನು ಗಿಳಂಕರಿಸಲಿಕ್ಕೆಂದು ಹುಡುಕುತ್ತಾ ಬರುತ್ತಿರುವ ಪ್ರಬಲವಾದ ಮೃಗದ ಕಣ್ಣೋ, ಅಥವಾ ಬೇರಾವುದಾದರೂ ಅಪಾಯಕರ ವ್ಯಕ್ತಿಯೋ ಎಂದು ಮೃಗಮದು ದಿಗಿಲುಗೊಳ್ಳುತ್ತಿದೆ. ಅಂಜುಕುಳಿಯಾಗಿದ್ದರೆ ಅದು ಓಡಲಾರಂಭಿಸುವುದು; ಧೈರ್ಯಶಾಲಿಯಾಗಿದ್ದರೆ ಮಲೆದು ಮೇಲೆ ಹಾರಲಿಕ್ಕೆ ಸನ್ನದ್ಧವಾಗುವುದು. ನೆಟ್ಟಗಿದಿರಾದಲ್ಲಿ, ಆ ಜ್ಯೋತಿ ಕಣ್ಣನ್ನು ಕುಕ್ಕುವುದರಿಂದ ಮೃಗವು ಕುರುಡುಗೊಂಡು ಸ್ತಬ್ಧವಾಗುವುದು. ಹೇಗಾದರೂ ಸರಿ. ಪಕ್ಕೆಯಲ್ಲಿದ್ದ ಮೃಗವು

ಎದ್ದು ಚಲಿಸಬೇಕು; ಆ ಚಲನವು ತಮ್ಮ ಕಣ್ಣಿಗೆ ವ್ಯಕ್ತವಾಗಿ ತೋರಬೇಕು ಎಂಬ ಬೇಟೆಗಾರನ ಗುರಿ ಈಡೇರುತ್ತದೆ. ಬೇಟೆಗಾರರೊಳಗೆ ದೇಸಿಯಾಗಿರುವ ಈ ಸಂಗತಿಯನ್ನರಿತುಕೊಂಡರೆ, ಹಿಂದೆ ದೃಷ್ಟಾಂತಿಸಿದ, ಮುಂದೆ ದೃಷ್ಟಾಂತಿಸಲಿರುವ, ಈ 'ದೀವದ ಬೇಂಟೆ'ಯ ಒಳವನ್ನರಿತುಕೊಳ್ಳಲು ಸುಗಮವಾಗಬಹುದು. ಮಾನಸೋಲ್ಲಾಸದಲ್ಲಿಯೂ ಇದರ ಉಲ್ಲೇಖಗಳಿವೆ.

ವಿವರಗಳಿಗೆ ನೋಡಿ: ಮುಳಿಯ ತಿಮ್ಮಪ್ಪಯ್ಯ ೨೦೦೬ ನಾಡೋಜಪಂಪ ಪುಟ. ೨೬೦-೬೫

ದುಂದುಮೆ

ದುಂದುಮೆ ಎಂಬುದು ಒಂದು ಬಗೆಯ ಡೋಲು, ಚರ್ಮವಾದ್ಯ ಡಂಗುರ. ಈ ವಾದ್ಯ ನುಡಿಸುವ ಸಂತೋಷದ ಕಾಲವೇ ದುಂದುಮೆಗಾಲ. ಇದನ್ನು ದುಂದು, ದುಂದುಭಿ ಎಂಬ ಜ್ಞಾತಿ ಶಬ್ದದೊಡನೆ ಸಮೀಕರಿಸಬಹುದು. ಇದು ದುಮು ದುಮು ಎಂದು ಧ್ವನಿ ಮಾಡುವುದರಿಂದ ಈ ವಾದ್ಯಕ್ಕೆ ಅನುಕರಣವಾಚಕವಾಗಿ ದುಂದುಮೆ ಎಂಬ ಹೆಸರು ಬಂದಿರಬಹುದು ಎಂದು ಹಂ.ಪ.ನಾ. ಶಾಂತಿಪುರಾಣದ ಮುನ್ನುಡಿಯಲ್ಲಿ ಹೇಳುತ್ತಾರೆ.

ದುರ್ಜನ

ದುಷ್ಟರು ಸ್ವಭಾವದಿಂದಲೇ ಕಠೋರ ಮನಸ್ಸುಳ್ಳವರಾಗಿರುತ್ತಾರೆ, ಕಾರಣವಿಲ್ಲದೇ ಜನರೊಡನೆ ಕಲಹ ಮಾಡುತ್ತಾರೆ. ಇತರರ ಸ್ವತ್ತು ತಮಗೆ ಬೇಕೆಂದು ಅಪಹರಣದಲ್ಲಿ ಉದ್ಯುಕ್ತರಾಗುತ್ತಾರೆ. ಪರಸ್ತ್ರೀಯರನ್ನು ಸದಾ ಬಯಸುತ್ತಾರೆ. ಸಜ್ಜನರ ಉತ್ಕರ್ಷವನ್ನು ಸಹಿಸುವುದಿಲ್ಲ. ತಮ್ಮ ಬಂದುಗಳಲ್ಲೇ ಮಾತ್ಸರ್ಯ ತೋರಿಸುತ್ತಾರೆ (ಭರ್ತೃಹರಿಯ ನೀತಿಶತಕ, 1974-ಶ್ಲೋಕ-42).

ದುಷ್ಟ ನೃಪಾಲರ್

ಶಾಸ್ತ್ರಹೀನನನ್ನು ಅಮಾತ್ಯ ಮುಂತಾದ ಸಹಾಯಕರ ಸಂಪತ್ತಿಯಿಂದ ಎಲ್ಲೆಲ್ಲಿ ತಿಳಿಯದೋ ಅಲ್ಲಲ್ಲಿ ತಿಳಿಯಪಡಿಸಿ ಸರಿಮಾಡಬಹುದು: ಶಾಸ್ತ್ರ ತಿಳಿದು ಅದನ್ನು ಮೀರುವವನು: ಶಾಸ್ತ್ರ ವಿರುದ್ಧವಾದ ಹಟವನ್ನಿಟ್ಟುಕೊಂಡು ಆ ಬುದ್ಧಿಯಿಂದ ಅನ್ಯಾಯವಾಗಿ ರಾಜ್ಯವನ್ನೂ ಮತ್ತು ತನ್ನನ್ನೂ ಸಹ ನಾಶಗೊಳಿಸಿಕೊಳ್ಳುವನು. ಆದ್ದರಿಂದ ಶಾಸ್ತ್ರಜ್ಞಾನ ವಿಹೀನ(ಅಂಧನೇ). ಒಳ್ಳೆಯವನು ಎಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬರುತ್ತದೆ.

ಸಾಮಾನ್ಯವಾಗಿ ರಾಜರು ಕೋಪ ಸ್ವಭಾವದವರು, ಸ್ವಲ್ಪ ಅಸಮಾಧಾನವಾದರೂ ಭಯಂಕರ ಕೋಪ ಹೊಂದಿ ಶಿಕ್ಷಿಸುತ್ತಾರೆ. ಅಗ್ನಿಯನ್ನಿಟ್ಟುಕೊಂಡು ಹೋತೃ ಎಂಬ ಋತ್ವಿಜನು ಹೋಮ ಮಾಡುತ್ತಿರುತ್ತಾನೆ. ಅಗ್ನಿಗೆ ಆಜ್ಯ ಹವಿಸ್ಸು ಮುಂತಾದವುಗಳನ್ನು

ಸಮರ್ಪಿಸುತ್ತಾನೆ. ಆದರೂ ಪ್ರಮಾದದಿಂದ ಎಲ್ಲಿಯಾದರೂ ಅದರ ಸ್ಪರ್ಶವಾದರೆ ಅದು ಅವನನ್ನು ಸುಡದೇ ಬಿಡುವುದಿಲ್ಲ. ಅದರಂತೆ ರಾಜನಿಗೆ ತನ್ನವರೆಂಬ ಮಮತೆ ಇಲ್ಲದೆ ಶಿಕ್ಷಿಸುತ್ತಾನೆ. ಇಂತಹವನನ್ನು ಆಶ್ರಯಿಸಬಾರದು. (ಭರ್ತೃಹರಿ)

ವಿವರಗಳಿಗೆ ನೋಡಿ: ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು ೨೦೧೦
ಕೌಟಿಲೀಯ ಅರ್ಥಶಾಸ್ತ್ರ ಪುಟ. ೪೫೩
ಭರ್ತೃಹರಿಯ ನೀತಿಶತಕ ೧೯೭೪- ಶ್ಲೋಕ ೪೭.

ದೃಷ್ಟಿಯುದ್ಧ

ದೃಷ್ಟಿಯುದ್ಧವು ಪ್ರಾಚೀನ ಕಾಲದ ಯುದ್ಧದ ವಿಧಾನಗಳಲ್ಲಿ ಒಂದು. ಕಣ್ಣಿನ ರೆಪ್ಪೆಗಳನ್ನು ಮುಚ್ಚದೆ ಒಬ್ಬರಿಗೊಬ್ಬರು ನೋಡುವುದು ಈ ರೀತಿಯ ಯುದ್ಧ ಕ್ರಮಗಳಲ್ಲಿ ಮುಖ್ಯ ಅಂಶವಾಗಿದೆ. ಯಾರು ಕಣ್ಣಿನ ರೆಪ್ಪೆಗಳನ್ನು ಮುಚ್ಚುತ್ತರೋ ಅವರು ಯುದ್ಧದಲ್ಲಿ ಸೋತಂತೆ. ಆದರೆ ಯುದ್ಧವು ಕೇವಲ ಶಸ್ತ್ರಾಸ್ತ್ರಗಳ ಮೂಲಕ ನಡೆಯುತ್ತಿರಲಿಲ್ಲವೆಂಬುದು ಗಮನಾರ್ಹ ಅಂಶವಾಗಿದೆ.

ವಿವರಗಳಿಗೆ ನೋಡಿ: ರನ್ನನ ಗದಾಯುದ್ಧ ೮-೨

ದೇವತೆಗಳು

ಗ್ರಾಮದೇವತೆಗಳ ಆರಾಧನೆಯ ಕ್ರಮವು ಹೆಚ್ಚು ಉಗ್ರವಾದ ನೆಲೆಯಲ್ಲಿರುವಂತೆ ಕನ್ನಡ ಕಾವ್ಯಗಳಲ್ಲಿ ಚಿತ್ರಿತವಾಗಿದೆ. ಸಾಮಾನ್ಯ ಜನರು ತಾವು ಸೇವಿಸುತ್ತಿದ್ದ ಕಳ್ಳು, ಮಾಂಸ ಇತ್ಯಾದಿಗಳನ್ನೇ ಈ ದೇವತೆಗಳಿಗೆ ಅರ್ಪಿಸುತ್ತಿದ್ದರೆನ್ನುವುದಕ್ಕೆ ಕನ್ನಡ ಕಾವ್ಯಗಳಲ್ಲಿ ಹೇರಳವಾದ ಆಧಾರಗಳು ದೊರೆಯುತ್ತವೆ. ಸಾಮಾಜಿಕ ರೋಗ ರುಜಿನಗಳಿಗಾಗಿ ಮಾತ್ರವೇ ಈ ರೀತಿಯ ದೇವತೆಗಳ ಆರಾಧನೆಯು ನಡೆಯುತ್ತಿದ್ದು, ಈ ಆರಾಧನೆಯ ಹಿನ್ನೆಲೆಯಲ್ಲಿ ಸಮಷ್ಟಿಯ ಪ್ರಜ್ಞೆಯು ಕೆಲಸ ಮಾಡಿರುವುದನ್ನು ಗಮನಿಸಬಹುದು. ಕೆಲವೊಮ್ಮೆ ಇದೇ ತಾಂತ್ರಿಕ ಪಂಥದ ರೂಪವನ್ನು ತಾಳಿರುವುದಕ್ಕೂ ನಿದರ್ಶನಗಳು ದೊರೆಯುತ್ತವೆ. ಇಂತಹ ದೇವತೆಗಳ ಆರಾಧನೆಗಳು ಅನೇಕ ಬಾರಿ ಜಾತ್ರೆಗಳ ಸ್ವರೂಪದಲ್ಲಿಯೂ ಇದ್ದುದನ್ನು ಕೆಲವು ಕನ್ನಡ ಕಾವ್ಯಗಳು ತಿಳಿಸುತ್ತವೆ. ಕಾಯಿಲೆಗಳ ನಿವಾರಣೆ, ಗ್ರಾಮ ಸಂರಕ್ಷಣೆ, ಲೈಂಗಿಕ ಮುಕ್ತತೆಗಳಂತಹ ಆಶಯಗಳು ಇಂತಹ ಜನಪದ ಸ್ತ್ರೀ ದೇವತೆಗಳ ಆರಾಧನೆಯಲ್ಲಿ ಮುಖ್ಯವಾಗಿ ಇರುವುದನ್ನು ಗಮನಿಸಬಹುದು. ಜೈನ ಧರ್ಮದ ದೇವತೆಗಳು ಈ ರೀತಿಯಿವೆ. ದೇವತೆಗಳಲ್ಲಿ ಮುಖ್ಯವಾಗಿ ಭವನವಾಸಿ, ವ್ಯಂತರವಾಸಿ, ಜ್ಯೋತಿಷ್ಕ, ವೈಮಾನಿಕ ಎಂದು ನಾಲ್ಕು ವರ್ಗಗಳು. ಮೊದಲಿನ ಮೂರು ವರ್ಗಗಳ ದೇವರು ಕೃಷ್ಣ, ನೀಲ, ಕಾಪೋತ, ಪೀತ, ಲೇಶ್ಯಗಳುಳ್ಳವರು. ಹದಿನಾರನೆಯ ಸ್ವರ್ಗದವರೆಗೆ ಈ ನಾಲ್ಕು ತೆರದ ದೇವತೆಗಳಲ್ಲಿ ಕ್ರಮದಿಂದ 10, 8, 5, 12 ಭೇದಗಳುಂಟು. ಎಂದರೆ ಭವನ ವಾಸಿಗಳಲ್ಲಿ 10, ವ್ಯಂತರರಲ್ಲಿ 8, ಜ್ಯೋತಿಷ್ಕರಲ್ಲಿ 5. ಕಲ್ಪವಾಸಿ ವೈಮಾನಿಕರಲ್ಲಿ 12

ಭೇದಗಳು. ಈ ನಾಲ್ಕೂ ಪ್ರಕಾರದ ದೇವತೆಗಳಲ್ಲಿ ಇಂದ್ರ, ಸಾಮಾನಿಕ, ತ್ರಾಯಸ್ತ್ರಿಂಶ, ಪಾರಿಷದ, ಆತ್ಮರಕ್ಷ, ಲೋಕಪಾಲ, ಅನೀಕ, ಪ್ರಕೀರ್ಣಕ, ಆಭಿಯೋಗ್ಯ, ಕಿಲೀಷಿಕ ಎಂದು ಹತ್ತು ಭೇದಗಳಿವೆ. ದೇವತೆಗಳ ಪರಮಾಯುಷ್ಯವು 1 ಸಾಗರದಿಂದ 33 ಸಾಗರದವರೆಗಿರುವುದು. ದೇವ, ನಾರಕ, ಮನುಷ್ಯ ಇವರ ಹೊರತು ಉಳಿದ ಜೀವಗಳು ತಿರ್ಯಂಚಗಳು. ಈ ನಾಲ್ಕು ಜನ್ಮಗಳಿಗೆ ಚತುರ್ಗತಿಗಳೆಂಬ ಹೆಸರು. ಸೂಕ್ಷ್ಮವಾದ ಏಕೇಂದ್ರಿಯ ಜೀವಗಳು ಸಂಪೂರ್ಣ ಲೋಕವನ್ನೆಲ್ಲ ತುಂಬಿರುವುವು. ಲೋಕದ ಯಾವ ಭಾಗವೂ ಈ ಸೂಕ್ಷ್ಮ ಜೀವಗಳಿಂದ ತುಂಬದೆ ಇಲ್ಲ. ಉಷೋದೇವತೆಯ ಬಗ್ಗೆ ಋಗ್ವೇದದಲ್ಲಿ ಹೀಗೆ ಬರುತ್ತದೆ. ಊರ್ವಶಿಗೆ, ಅರುಣೋದಯದ ದೇವತೆಯಾದ ಉಷಸ್ ಮತ್ತು ಪ್ರಾಯಶಃ 5: 41.19ರಲ್ಲಿ ಬರುವ ಬೃಹದ್ದಿವಾ ಜೊತೆಯಲ್ಲಿ ಸಂಬಂಧವಿತ್ತು. ಇದು ತೀರಾ ಮುಖ್ಯವಾದ ಅಂಶ. ಆದರೆ ಹೆಚ್ಚಿನ ಅನುವಾದಗಳಲ್ಲಿ ಇದು ಕಾಣೆಯಾಗಿದೆ. 10:95.2 ರಲ್ಲಿ ತಾನು ಮೊದಲ ಮುಂಜಾನೆಯಂತೆ ಹಾದು ಹೋದೆ ಎಂದು ಊರ್ವಶಿಯು ಹೇಳುತ್ತಾಳೆ. ಇದು ಕೇವಲ ಒಂದು ಉಪಮೆಯಾಗಿ ಕಾಣುತ್ತದೆ. ಅದು ಕೇವಲ ಉಷಸ್ ಪಟ್ಟವಲ್ಲ ಒಬ್ಬ ಮಾತೃದೇವತೆಯ ಪಟ್ಟವೂ ಆಗಿತ್ತು ಎಂದು ಡಿ.ಡಿ.ಕೊಸಾಂಬಿ ವಿವರಿಸುತ್ತಾರೆ.

(ಬೃಹದ್ದೇವತಾ ಸೂರ್ಯ, ಸರಣ್ಯು ಮತ್ತು ವೃಷಪಾಯೀಯನ್ನು ಕೂಡಾ ಉಷಸ್ ಸ್ವರೂಪಗಳಾಗಿ ತೆಗೆದುಕೊಳ್ಳುತ್ತದೆ. ಮಾತಿನ ದೇವತೆ ವಾಕ್‌ಳನ್ನು ಅಲ್ಲಿ ದುರ್ಗಾ, ಸರಮಾ, ಊರ್ವಶಿ ಮತ್ತು ಯಮಿಯೊಂದಿಗೆ ಮಧ್ಯ ವಲಯದಲ್ಲಿ (11–77)ಮತ್ತು ಉಷಸ್‌ನೊಂದಿಗೆ 1 79–80 ರಲ್ಲಿ ಸಮೀಕರಿಸಲಾಗಿದೆ. 'ಊರ್ವಶೀ' ಎಂಬ ಪದದಿಂದ ವ್ಯುತ್ಪತ್ತಿಯಾಗಿದೆ(1 5.9). ಇಂತಹ ವೈದಿಕೋತ್ತರ ವ್ಯಾಖ್ಯೆಗಳಲ್ಲಿ ಕಾಣುವ ಸಮ್ಮಿಶ್ರಣಗೊಳಿಸುವ ಪ್ರವೃತ್ತಿಯನ್ನು ಸಾಧ್ಯವಾದ ಎಲ್ಲಾ ರೀತಿಯಲ್ಲೂ ಗಮನಕ್ಕೆ ತಗೊಂಡರೆ, ಈ ಹೆಣ್ಣು ದೇವತೆಗಳಲ್ಲಿ ಏನೋ ಸಾಮಾನ್ಯ ಅಂಶ ಇರುವುದು ಸ್ಪಷ್ಟವಾಗುತ್ತದೆ. ಇವರೆಲ್ಲಾ ಮಾತೃ ದೇವತೆಗಳಾಗಿರುವುದು ಮಾತ್ರವೇ ಆ ಸಮಾನ ಅಂಶವಾಗಿರಲು ಸಾಧ್ಯ. ಸರಮಾ ಮತ್ತು ಹೆಸರು 'ಮಾ' ದಿಂದ ಕೊನೆಗೊಳ್ಳುವ ಇತರ ಎಲ್ಲಾ ದೇವತೆಗಳಿಗೆ ನಮಗೆ ನಂತರದ್ದಾದರೂ ಸ್ಪಷ್ಟವಾದ ಪ್ರಮಾಣ ಅಮರಕೋಶ 1.1.29 ರಲ್ಲಿ ಕಾಣುತ್ತದೆ. ಇಂದಿರಾ ಲೋಕಮಾತಾ ಮಾ ಕ್ಷೀರೋದ – ತನಾಯಾ ರಮಾ. ಈ ಪದವಿಯನ್ನು ಪಡೆಯುವುದು ಅವಳ ವಿಧಿಯಾಗಿತ್ತು. ಅಂತೆಯೆ ಬಲಿಯಾಗುವುದು ಅವಳ ಪ್ರಿಯಕರನ ವಿಧಿಯೂ ಆಗಿತ್ತು. ಋಗ್ವೇದದಲ್ಲಿ (10:95. 8.9) ಅಪ್ಸರೆ ಹಾಗೂ ಅವಳ ಸಂಗಾತಿಯರು ತಮ್ಮ ಬಟ್ಟೆಗಳನ್ನು ಕಳಚುವುದನ್ನು ಗಮನಿಸಿದ್ದೇವೆ. ಋಷಿಗಳನ್ನು ಆಕರ್ಷಿಸಿ ತಪೋಭ್ರಷ್ಟರನ್ನಾಗಿ ಮಾಡಲು ಮೇನಕೆ ಮತ್ತಿತರರು ಕೂಡ ಇದೇ ರೀತಿ ಮಾಡುತ್ತಿದ್ದರು. ತೀರಾ ಗಮನಾರ್ಹವಾದ ಅಂಶವೆಂದರೆ ಗಂಡಸರ ಮುಂದೆ ಹೀಗೆ ಹೆಚ್ಚಾಗಿ

ಬೆತ್ತಲಾಗುತ್ತಿದ್ದವಳು ಉಷಸ್ ದೇವತೆ. 1.123.11ರಲ್ಲಿ ಅವಳು ತಾಯಿಯಿಂದ ಅಲಂಕೃತಗೊಂಡ ಯುವತಿಯಂತೆ ತನ್ನ ದೇಹವನ್ನು ಪ್ರದರ್ಶಿಸುತ್ತಾಳೆ. 1.124.7ರಲ್ಲಿ "ಉಷಾ ಹಸ್ರೇಮ ನಿ ರಿಣೀತೇ ಅಪ್ಸಾಃ" ಎಂದು ಬರುತ್ತದೆ. ಅವಳು ತನ್ನ ಗುಪ್ತ ಸೌಂದರ್ಯವನ್ನು ಉನ್ಮತ್ತ ತರುಣಿಯಂತೆ ಅಥವಾ 'ಹಸ್ರ' ಎಂಬುದನ್ನು ಪರಿಗಣಿಸಿದಲ್ಲಿ ನಸುನಗುವ ಯುವತಿಯಂತೆ ಪ್ರದರ್ಶಿಸುತ್ತಾಳೆ. ಹೀಗಾಗಿ ಉಷಸ್ ಒಬ್ಬ ತೀರಾ ಪ್ರಮುಖ ಮಾತೃದೇವತೆ ಎಂಬುದು ಸ್ಪಷ್ಟ. ಅಕ್ಷರಶಃ ಪ್ರಾತಃ ಕಾಲದ ಮಾತೆ. ಈ ಸ್ಥಾನ ಅವಳ ಕೈತಪ್ಪಿ ಹೋಗಿದ್ದು ಹೇಗೆ? ವಸಿಷ್ಠ ಅಭೂತ್ ಉಷಾ ಇಂದ್ರತಮಾ ಮೇಘೋನೀ (7:79.3) ಎನ್ನುತ್ತಾನೆ. ಅವನು ಬಳಸಿರುವ ಅನಿಶ್ಚಿತ ಭೂತಕಾಲದ ಪ್ರಯೋಗದಿಂದ ಹಿಂದೊಮ್ಮೆ ಉಷಸ್ ಇಂದ್ರನಿಗೆ ಸರಿಸಮನಾದ ದೇವತೆಯಾಗಿದ್ದಳು, ಆದರೆ ಈಗ ಅವಳಿಗೆ ಆ ಸ್ಥಾನವಿಲ್ಲ ಎಂದು ಭಾಸವಾಗುತ್ತದೆ. ಈ ಎರಡೂ ದೇವತೆಗಳ ನಡುವಿನ ಸಂಘರ್ಷದ ಕಥೆ ಇದನ್ನು ಸಮರ್ಥಿಸುತ್ತದೆ.

ವಿವರಗಳಿಗೆ ನೋಡಿ: Mishra. O.P. 1985 Mother Goddess in India.
Drimaton; James . J. 1980 Cult of Goddess
ಮಹದೇವ ಪ್ರಭಾಕರ ಪೂಜಾರ 1976 ಜೈನಧರ್ಮ ಪರಿಭಾಷೆ ಪುಟ. 57–58, 60
ಡಿ. ಡಿ. ಕೊಸಾಂಬಿ 2003 ಪುರಾಣ ಮತ್ತು ವಾಸ್ತವ ಪುಟ. 87, 89.

ದೇವತೆಗಳ್

ಅಮರ್ದುದುಣಿಸುಗಳ್ (ಉಣಿಯೆಂದರೆ ಊಟ) (ಅಮೃತವನ್ನು ಉಣ್ಣುವವರು), ಕನಸಿಲ್ಲದಿಲ್ಲದವರ್, ನರೆದೋವರ್ (ಜರೆಯಿಲ್ಲದವರು) ಎವೆಯಿಕ್ಕದರ್ (ಕಣ್ಣಿನ ರೆಪ್ಪೆಯನ್ನು ಮುಚ್ಚದವರು) ಜನ್ನ ಗೂಳರ್ (ಯಾಗದ ಹವಿಸ್ಸನ್ನು ಸ್ವೀಕರಿಸುವವರು) ಆಗಸವಟ್ಟೆಯುವರು (ಆಕಾಶವನ್ನು ದಾರಿಯನ್ನಾಗಿಸಿದವರು) ಸಗ್ಗಿಗರು (ಸ್ವರ್ಗವನ್ನು ಆವಾಸ ಸ್ಥಾನವನ್ನಾಗಿರಿಕೊಂಡವರು) ಬರ್ದಿಲರು (ಬರ್ದುಇಲ್ಲದವರು, ಬರ್ದು ಎಂದರೆ ಮರಣ ಅಥವಾ ಸಾವಿಲ್ಲದವರು) ಬಿಡುಗಣ್ಣರು (ಬಿಟ್ಟ ಕಣ್ಣುಳ್ಳವರು), ಬಿಜ್ಜೋದರರ್, ಗಾಳಿವಟ್ಟೆಗರ್ (ಗಾಳಿಯೇ ದಾರಿಯಾಗಿರುವವರು), ಅಚ್ಚರರ್, ಬೋಳೆಯರ್, (ಕೂದಲು ಇಲ್ಲದವರು) ಇವು ದೇವರ್ಕ್‌ಕಳ ಪೆಸರ್. (ಕರ್ನಾಟಕ ಶಬ್ದಸಾರಂ ಪುಟ ೪೮)

ದೇವದಾಸಿಯರು

ಕರ್ನಾಟಕದ ಸಂದರ್ಭದಲ್ಲಿ ವಿರೂಪಾಕ್ಷ ದೇವಳ (ಪಟ್ಟದ ಕಲ್ಲು) ಶಾಸನದಲ್ಲಿ 'ದೇಗುಲದ ಸೂಳೆ'ಯ ಕುರಿತು ಬರುವ ಉಲ್ಲೇಖವೇ 'ದೇವದಾಸಿ' ಪದ್ಧತಿಯ ಪ್ರಥಮ ಉಲ್ಲೇಖವಾಗಿದೆ. ಈ ಶಾಸನದ ಕಾಲ ಕ್ರಿ.ಶ. 778–73 ಕರ್ನಾಟಕದಲ್ಲಿ ಕ್ರಿ.ಶ. 802ರ ತಾಮ್ರಪಟದ ಶಾಸನ, ಕ್ರಿ.ಶ. 850ರ ಶಾಸನ, ಕ್ರಿ.ಶ. ಸು. 800ರ ವಿಜಯೇಶ್ವರ

ದೇವಸ್ಥಾನದ ಶಾಸನ, ಕ್ರಿ.ಶ. 947ರ ಶಾಸನಗಳು ದೇವಸ್ಥಾನದ ಸೂಳೆಯರ ಕುರಿತಂತೆ ಹೇಳುತ್ತವೆ (ಚಿದಾನಂದಮೂರ್ತಿ ಎಂ. 1979. ಪು. 184). ಹತ್ತನೆಯ ಶತಮಾನದ ತರುವಾಯ 'ಸೂಳೆ' ಮತ್ತು 'ಪಾತ್ರ'ವೆಂಬ ವ್ಯತ್ಯಾಸವು ಕಂಡು ಬರುತ್ತದೆಯೆಂದೂ, 'ಪಾತ್ರ' ಎಂದರೆ ಶಬ್ದ, ನೃತ್ಯ, ಗೀತಾದಿಗಳಲ್ಲಿ ಪರಿಣತಳಾದವಳೆಂದೂ, 'ಸೂಳೆ'ಯು ಸೇವಾಕಾರ್ಯ ಮಾಡುವವಳನ್ನು ಸೂಚಿಸುತ್ತದೆಯೆಂದೂ ಡಾ. ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಡುತ್ತಾರೆ (ಅದೇ. ಪುಟ. 184–185). ಕ್ರಿ.ಶ. 1054ರ ಅಕ್ಕೇಶ್ವರ ದೇವಸ್ಥಾನದ ಶಾಸನ: ಕ್ರಿ.ಶ. 1058ರ ನಾಗೇಶ್ವರದ ಶಾಸನ: ಕ್ರಿ.ಶ. 1112ರ ಶಾಸನಗಳು ದೇವದಾಸಿಯರ ಕುರಿತಂತೆ ಹೇಳುತ್ತವೆ. (ಅದೇ ಪುಟ. 185–187).

'ದೇವದಾಸಿ' ಪದವು ಅದಕ್ಕೂ, ಆಚರಣೆಗೂ ಸಂಬಂಧವಿರುವುದನ್ನು ಸೂಚಿಸುತ್ತದೆ. ದೇವದಾಸಿ ಪದ್ಧತಿಯು ಭಾರತದಲ್ಲಿ ಮಾತ್ರವಲ್ಲದೆ, ಇತರ ದೇಶಗಳಲ್ಲಿಯೂ ಅಸ್ತಿತ್ವದಲ್ಲಿದೆ ಎಂದು ಕ್ರೂಕೆಯವರು ಅಭಿಪ್ರಾಯ ಪಡುತ್ತಾರೆ ಚರಿತ್ರೆಕಾರರ ಪಿತಾಮಹನಾದ ಹಿರೋಡೋಟಸ್ ತನ್ನ ಗ್ರಂಥದಲ್ಲಿ 'ವಿವಾಹಕ್ಕೆ ಮೊದಲು ಎಲ್ಲಾ ಸ್ತ್ರೀಯರು ಆಚಾರ ಪ್ರಕಾರವಾಗಿ ದೇವತೆಯ ಸಮಕ್ಷಮದಲ್ಲಿ ಇತರರೊಡನೆ ಸಂಭೋಗ ಮಾಡಬೇಕು' ಎಂದು ಬರೆದಿರುತ್ತಾನೆ (ಧರ್ಮರಾವ. ತಾಪಿ. (ಮೂ.) 1983. ಪು. 34). 'ಮದುವೆ ಮಾಡಿಕೊಳ್ಳದೆ ಜೀವಿತ ಕಾಲವನ್ನು ದೇವಾಲಯದಲ್ಲಿಯೇ ಈ ಲೈಂಗಿಕ ಕೆಲಸಗಳಿಂದ ದೇವತಾರಾಧನೆಯನ್ನು ಮಾಡಬೇಕೆಂದು ನಿಶ್ಚಯಿಸಿದ ಸ್ತ್ರೀಯರೂ ಇದ್ದರು. ತಮ್ಮ ಜೀವಿತವನ್ನೆಲ್ಲಾ ಭಗವತ್ಸೇವೆಗೆ ಸಮರ್ಪಿಸಿದ ಈ ಹೆಂಗಸರು ಆ ದಿನಗಳಲ್ಲಿ ಗೌರವಾರ್ಹರಾಗಿದ್ದರು. ಈ ವೃತ್ತಿಯಲ್ಲಿ ಸಂಪಾದಿಸಿದ ಅಲ್ಪ–ಸ್ವಲ್ಪ ಹಣವನ್ನು ಇವರು ದೇವಾಲಯಕ್ಕೆ ದಾನ ಮಾಡುವರು. ಹೀಗೆ ದೇವಾಲಯಗಳಿಗೆ ತಮ್ಮ ಸರ್ವಸ್ವವನ್ನೂ ಧಾರೆಯೆರೆದಿರುವವರು ದೇವದಾಸಿಗಳಾದರು' (ಅದೇ. ಪುಟ. 35).

ಭಾರತದ ದೇವಸ್ಥಾನಗಳಲ್ಲಿ ಭಗವಂತನನ್ನು ಜೀವಂತ ವ್ಯಕ್ತಿಯೆಂಬಂತೆ ಭಾವಿಸಿ, ವೈಭವದಲ್ಲಿ ಬಾಳುವ ಒಬ್ಬ ವ್ಯಕ್ತಿಯ ಎಲ್ಲ ಭೋಗಗಳನ್ನು ಭಗವಂತನಿಗೆ ಅರ್ಪಿಸುವುದು ರೂಢಿಯಲ್ಲಿದೆ. ದೇವದಾಸಿ ಸಂಪ್ರದಾಯದ ಮೂಲ ಇಲ್ಲಿರಬಹುದು. ಕರ್ನಾಟಕದ ಶಾಸನಗಳಲ್ಲಿ 'ಅಂಗಭೋಗ' ಮತ್ತು 'ರಂಗಭೋಗ' ಎಂಬ ಮಾತುಗಳು ಬರುತ್ತವೆ. ವಿಗ್ರಹದ ದೇಹಕ್ಕೆ ಸಲ್ಲುವ ಭೋಗ ಎಂದರೆ ಸ್ನಾನ, ಗಂಧಲೇಪನ, ಧೂಪ, ದೀಪ, ಪುಷ್ಪ ಇತ್ಯಾದಿ ಅಂಗ ಭೋಗಗಳು. ಗರ್ಭಗುಡಿಯ ಮುಂದಿನ ರಂಗದ ಮೇಲೆ ಎಂದರೆ ದೇವತಾ ಮೂರ್ತಿಯ ಮುಂದೆ ಸುಂದರಿಯರಿಂದ ನಡೆಯುವ ಗೀತ, ನೃತ್ಯಗಳೇ ರಂಗ ಭೋಗಗಳು. ದೇವದಾಸಿಯರು ರಂಗಭೋಗದ ಉಪಕರಣಗಳು. (ಚಿದಾನಂದ ಮೂರ್ತಿ ಎಂ. 1979. ಪುಟ. 183).

ಈ ರೀತಿಯ ಪವಿತ್ರ ಸೂಳೆಗಾರಿಕೆಯ ಸಿಂಧೂಕೊಳ್ಳದ ನಾಗರಿಕತೆಯಲ್ಲಿ ಪ್ರಾರಂಭವಾಗಿರಬಹುದೆಂಬ ಅಭಿಪ್ರಾಯವನ್ನು ವಿದ್ವಾಂಸರು ಹೊಂದಿದ್ದಾರೆ. ಋಗ್ವೇದದ ಕಾಲಕ್ಕೆ ಇದು ಸಾಕಷ್ಟು ಪ್ರಚಲಿತವಾಗಿತ್ತೆಂದೂ ತಿಳಿದು ಬರುತ್ತದೆ. ವೇದಗಳಲ್ಲಿ ಬರುವ ಪುಂಶ್ಚಲಿ (ಋಗ್ವೇದ I 124. 7IV 5.5 ಅಥರ್ವವೇದ I 17.1) ಮತ್ತು ಮಹಾನಗ್ನಿ (ಅಥರ್ವವೇದ XV 2.) ಮುಂತಾದವುಗಳು ದೇವದಾಸಿ ಪದ್ಧತಿಯ ಸೂಚಕಗಳಾಗಿವೆ (ಅದೇ. ಪುಟ. 1). 'ಮಹಾನಿರ್ವಾಣ ತಂತ್ರ'ದಲ್ಲಿ ದೇವದಾಸಿಯ ಉಲ್ಲೇಖವಿದೆ (ಅದೇ.). 'ಗೌತಮಧರ್ಮಸೂತ್ರ'ದಲ್ಲಿಯೂ ದೇವದಾಸಿ ಪದ್ಧತಿಯ ಬಗೆಗೆ ಸೂಚನೆಗಳಿವೆ (ಗೌತಮಧರ್ಮ ಸೂತ್ರ 2–13. 16)

ಮೌರ್ಯರ ಕಾಲದ ಜೋಗಿ ಮಾರ ಗುಹೆಯ ಶಾಸನವು ಸ್ಪಷ್ಟವಾಗಿ ದೇವದಾಸಿ ಪದ್ಧತಿಯನ್ನು ಶ್ರುತಪಡಿಸುತ್ತದೆ. ಇದರ ಕಾಲ ಕ್ರಿಪೂ. ಮೂರನೇ ಶತಮಾನ ಗುಪ್ತ ಸಾಮ್ರಾಜ್ಯದಲ್ಲಿ ಇವು ಪ್ರಚಲಿತವಾಗ ತೊಡಗಿದವು ಎಂದು ತಿಳಿದು ಬರುತ್ತದೆ. ಬಾಣನ ಕಾದಂಬರಿಯಲ್ಲಿ ಕಾಮನ ದೇವಸ್ಥಾನದಲ್ಲಿ ನೃತ್ಯಗಾತಿಯರು ನೃತ್ಯ ಮಾಡಿದ ವಿವರವು ಬರುತ್ತದೆ (ಅದೇ. ಪುಟ. 121). ಉಜ್ಜಯಿನಿಯ ಮಹಾಕಾಲ ದೇವಸ್ಥಾನದಲ್ಲಿ ನರ್ತಕಿಯರಿದ್ದ ವಿಷಯವನ್ನು ಕಾಳಿದಾಸನು ನಿರೂಪಿಸುತ್ತಾನೆ (ಮೇಘದೂತ; 1.35) (ಚಿದಾನಂದ ಮೂರ್ತಿ ಎಂ. 1973, ಪುಟ 183). ಭವಿಷ್ಯ ಪುರಾಣವು ದೇವದಾಸಿಯರ ಕುರಿತು ಉಲ್ಲೇಖವಮಾಡಿದೆ (ಅದೇ. ಪುಟ. 183). ರಾಜತರಂಗಿಣಿಯಲ್ಲಿಯೂ ದೇವದಾಸಿಯರ ವಿಚಾರವು ಬರುತ್ತದೆ ಅಶೋಕನ ಶಾಸನಗಳಲ್ಲಿ ದೇವದಾಸಿಯರ ಉಲ್ಲೇಖವಿದೆ. ರಾಜರಾಜ ಚೋಳನು (ಕಾಲ: 985–1014) ನಾನೂರು ದೇವದಾಸಿಯರನ್ನು ತಂಜಾವೂರಿನ ದೇವಸ್ಥಾನಕ್ಕೆ ಒಪ್ಪಿಸಿದ ವಿವರವು ಸಿಗುತ್ತದೆ (ಅದೇ. ಪು. 245). ಗುಜರಾತಿನ ಸೋಮನಾಥ ದೇವಸ್ಥಾನದಲ್ಲಿ ಐನೂರು ಜನ ದೇವದಾಸಿಯರಿದ್ದರೆಂದು ತಿಳಿಯುತ್ತದೆ (ಅದೇ. ಪು. 245).

ಒಟ್ಟಾಗಿ ಹೇಳುವುದಾದರೆ, ಆರನೇ ಶತಮಾನದ ವೇಳೆಗೆ 'ದೇವದಾಸಿ ಪದ್ಧತಿ' ಪ್ರಚಲಿತವಾಯಿತು. ಅದಕ್ಕಿಂತ ಮೊದಲು, ದೇವದಾಸಿ ಪದ್ಧತಿಯು ಆ ಹೆಸರಿನಲ್ಲಿ ಪ್ರಚಲಿತವಿರಲಿಲ್ಲವೆಂದು ತೋರುತ್ತದೆ.

ಕರ್ನಾಟಕದ ಸಂದರ್ಭದಲ್ಲಿ ವಿರೂಪಾಕ್ಷ ದೇವಳ(ಪಟ್ಟದ ಕಲ್ಲು) ಶಾಸನದಲ್ಲಿ 'ದೇಗುಲದ ಸೂಳೆ'ಯ ಕುರಿತು ಬರುವ ಉಲ್ಲೇಖವೇ ದೇವದಾಸಿ ಪದ್ಧತಿಯ ಪ್ರಥಮ ಉಲ್ಲೇಖವಾಗಿದೆ. ಈ ಶಾಸನದ ಕಾಲ ಕ್ರಿ.ಶ. 778–73.

ಆದುದರಿಂದ ರಾಜ್ಯಶಾಹಿ ವ್ಯಕ್ತಿತ್ವವು ಕೆಳವರ್ಗದ ಸ್ತ್ರೀಯರನ್ನು ದೇವದಾಸಿಯನ್ನಾಗಿ ಮಾಡಿರುವುದನ್ನು ಗಮನಿಸಬಹುದಾಗಿದೆ. ಈ ದೃಷ್ಟಿಯಿಂದ, ದೇವದಾಸಿ ಪದ್ಧತಿಯ

ಮೇಲೆ ಇಬ್ಬಗೆಯ ಪ್ರಭಾವವು ಉಂಟಾಗಿರುವುದನ್ನು ಕಾಣಬಹುದು. ಅ) ರಾಜ್ಯಶಾಹಿ ಪದ್ಧತಿ ಆ) ಮತ್ತು ಧಾರ್ಮಿಕ ಗುಲಾಮಿತನ.

ದೇವದಾಸಿಯರಲ್ಲಿ ಏಳು ವಿಧವಿದೆ:

1. ದತ್ತಾ –ತನ್ನನ್ನು ತಾನೇ ಯಾವುದಾದರೊಂದು ದೇವಾಲಯವೊಂದಕ್ಕೆ ಅರ್ಪಿಸಿಕೊಂಡವಳು.
2. ವಿಕ್ರೀತಾ –ದೇವಾಲಯದ ಸೇವಾ ಕಾರ್ಯಗಳಿಗೆ ತನ್ನನ್ನೇ ಮಾರಿಕೊಂಡವಳು.
3. ಭೃತ್ಯಾ- ತನ್ನ ಕುಟುಂಬದವರ ಪೋಷಣೆಗಾಗಿ ದೇವದಾಸಿಯಾದವಳು.
4. ಭಕ್ತಾ – ಕೇವಲ ಭಕ್ತಿಭಾವದಿಂದ ಪ್ರೇರಿತಳಾದ ದೇವಾಲಯವನ್ನು ಪ್ರವೇಶಿಸಿದವಳು.
5. ಹೃತಾ–ಅಪಹರಿಸಿಕೊಂಡು ತಂದ ಹೆಣ್ಣು. ದೇವಸ್ಥಾನಕ್ಕೆ ಉಡುಗೊರೆಯಾಗಿ ಬಂದವಳು.
6. ಅಲಂಕಾರಾ – ರಾಜ ಅಥವಾ ಮಂತ್ರಿಯಾದ ಯುವತಿಯನ್ನು ಅಪೇಕ್ಷಿತ ಪರಂಪರೆಯಲ್ಲಿ ಸಂಪೂರ್ಣ ದೀಕ್ಷಿತೆಯೆಂದು ಭಾವಿಸುತ್ತಿದ್ದರೋ ಅಂತಹ ಯುವತಿಯನ್ನು ಅಲಂಕರಿಸಿ ದೇವಾಲಯಕ್ಕೆ ಒಪ್ಪಿಸುತ್ತಿದ್ದರು.
7. ರುದ್ರಗಣಿಕಾ ಅಥವಾ ಗೋ ಪಿಕಾ–ನಿಯಮಿತ ವೃತ್ತಿ ಅಥವಾ ವೇತನ ಪಡೆದು ನಾಟ್ಯಗಾಯನ ಮೊದಲಾದ ಕೆಲಸ ನಿರ್ವಹಿಸುವವಳು. (ಕನ್ನಡ ವಿಶ್ವಕೋಶ (ಸಂ:9) 1977 ಪುಟ.718)

ವಿವರಗಳಿಗೆ ನೋಡಿ: Gururajachar S. 1974 Some aspect of economic & Social Life in Karnataka P. 245

James Hastings: (Ed): 1967 Encyclopedia Religion & Ethics P. 406

Candra Cakravati 1963 Sex Life in Ancient India Firms P. 101

Motichandra 1973 The world of Courtesans P.1, 45

Stein M.A.1961 Kalhana'sRajatarangini A Chronicle of Kings of Koshmir Vol-II P.17

Nilakanta Sastri (Ed) 1972 Foreign Notices of South-India P.171

Basham A.L. (Ed) 1975 A Cultural History of India P.58-59

Stein, Burton (Ed) 1976 Essays on South India P.48

ಶ್ರೀಕಂಠಶಾಸ್ತ್ರೀ 2006 ಭಾರತೀಯ ಸಂಸ್ಕೃತಿ ಪುಟ. 205

ಡಾ. ಶಿವಾನಂದ ವಿರಕ್ತಮಠ 1978 ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ ಪುಟ. 61

ಚಿದಾನಂದ ಮೂರ್ತಿ ಎಂ. 1979 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

ಶ್ರೀ ಕಂಠಯ್ಯ .ಕೆ. 1983 ವಿಜಯನಗರ ಕಾಲದ ಅರಸೊತ್ತಿಗೆಯ ಜನಜೀವನ ಚಿತ್ರಣ ಪುಟ. 261

ಮೋಹನಕೃಷ್ಣ ರೈ 2004 ಪ್ರಭುತ್ವ ಮತ್ತು ಜನತೆ ಪುಟ. 136,

ದೇವಮಾತೃಕ

ಮಳೆಯ ನೀರಿನಿಂದ ತರೀ ಫಸಲು ಬೆಳೆಯುವ ಪ್ರದೇಶವನ್ನು ದೇವಮಾತೃಕವೆಂದು ಕರೆದಿದ್ದಾರೆ. ಪ್ರಾಚೀನ ಕೃಷಿ ಪದ್ಧತಿಗಳಲ್ಲಿ ಇದೂ ಒಂದು. ದೇವ: (ತ್ರಜನ್ಯ) ಮಾತಾ ಇವಯಸ್ಯ – ದೇವಮಾತೃಕ. ಋಗ್ವೇದದಲ್ಲಿ ನೀರಾವರಿ ವ್ಯವಸಾಯ ಸಹಜವಾದ ಕೃತಕ ಕಾಲುವೆಗಳ ಮೂಲಕ ಭೂಮಿಗೆ ನೀರುಣ್ಣಿಸುವ ವಿಧಾನದ ಉಲ್ಲೇಖಗಳು ಬರುತ್ತವೆ. 'ಕೃಷಿ ಎಂತಿ ಕೃಷತ್ವ' ಎಂಬ ವ್ಯಾಖ್ಯೆ ಋಗ್ವೇದದಲ್ಲಿ ದೊರೆಯುತ್ತದೆ (೧೦–೩೪) "ನೇಗಿಲುಗಳನ್ನು ಹೂಡಿರಿ ನೊಗಗಳನ್ನು ವಿಸ್ತಾರಗೊಳಿಸಿರಿ. ಹರಗಿದ ಮಡಿ ಸಾಲುಗಳಲ್ಲಿ ಕಾಳುಗಳನ್ನು ಬಿತ್ತನೆ ಮಾಡಿರಿ ನಾವು ಮಾಡಿದ ಸ್ತುತಿಗಳಿಂದ (ದೇವತೆಗಳಲ್ಲಿ) ಉತ್ತಮ ಬೆಳೆ ಬರುತ್ತದೆ. ಕೊಯ್ಲು ಮಾಡುವವರು ಕುಡುಗೋಲುಗಳನ್ನು ತೆಗೆದುಕೊಂಡು ಮಾಗಿದ ಪೈರಿನ ಕಡೆ ಬರುವಂತಾಗಲಿ" ಎಂದು ಋಗ್ವೇದದಲ್ಲಿ ಬರುತ್ತದೆ. (೧೦–೧೦೧–೩.)

ದೇಶ ಮಾಧ್ಯಮ – ಶಿಕ್ಷಣ

ಹೊಸ ಶಿಕ್ಷಣ ಕ್ರಮದಿಂದಾಗಿ ಸಂಸ್ಕೃತಿಯೊಳಗಡೆ ಬೇರು ಬಿಡತೊಡಗಿದ ಉದಾರವಾದ ನೀತಿಯು ಭಾರತೀಯ ಪರಿಸರದಲ್ಲಿ ವಿವಿಧ ಸಾಧ್ಯತೆಯನ್ನು ತೆಗೆದುಕೊಟ್ಟವು. ೧೯ನೆಯ ಶತಮಾನದ ಹೊತ್ತಿಗೆ ಲಾರ್ಡ ಬೆಂಟಿಂಕನು ಪ್ರತಿಪಾದಿಸಿದ ನಿಲುವುಗಳು ಆತನ ಉದಾರವಾದಿ ಪ್ರಭುತ್ವಪರ ನಿಲುವಿಗೆ ಸಾಕ್ಷಿಯಾಗಿವೆ. ಆಳುವ

ವರ್ಗ ಮತ್ತು ಆಳಿಸಿಕೊಳ್ಳುವವರ ನಡುವಣ ಸಹಮತದ ಬಗೆಗಿನ ಆತನ ನಿಲುವು ಪ್ರಭುತ್ವಕ್ಕೆ ಪರವಾಗಿಯೇ ನಿಂತಿತು.

ಈ ದೃಷ್ಟಿಯಿಂದ ದೇಶಮಾಧ್ಯಮ ಶಿಕ್ಷಣ ಬಹುಮುಖ್ಯ ಪರಿಕಲ್ಪನೆ. ಸ್ವಾತಂತ್ರ್ಯ ಆಂದೋಲನದ ಸಂದರ್ಭದಲ್ಲಿ ಪ್ರಾರಂಭವಾಗಿದ್ದ ದೇಶೀ ಶಾಲೆಯ ಮಾದರಿಗಳನ್ನು ನೆನಪಿಸಿಕೊಳ್ಳಬಹುದು.

ವಿವರಗಳಿಗೆ ನೋಡಿ: ಮೋಹನ್ ದಾಸ್ ಕರಮಚಂದ್ ಗಾಂಧಿ ೧೯೬೬ ಜೀವನ ಶಿಕ್ಷಣ

Gauri Vishwanathan 1989 Masks of Conquest

Aijaz Ahmad 1999 In theory P.77, 243

ದೇಸಿಗ

ದೇಸಿಗನೆಂದರೆ ದಿಕ್ಕಿಲ್ಲದವನು ಎಂದರ್ಥ. ನಾಡಾಡಿಗಳು, ದೇಸಿಗರು ಒಂದೇ ರೀತಿಯ ಅರ್ಥವ್ಯಾಪ್ತಿಯನ್ನು ಹೊಂದಿದೆ.

ದೇಸಿಗರು

ದೇಸಿಗರಿಗೆ ಕಾಲುರಿಚನೆಂದು, ಬೆಳಕ್ಕರಿಗರೆಂದು ಕರೆಯುತ್ತಿದ್ದರು (ಕರ್ನಾಟಕ ಶಬ್ದಸಾರಂ ಪುಟ ೬೦)

ದೇಸಿರಾಗ

ಅಗ್ಗಳನು 'ಚಂದ್ರಪ್ರಭ ಪುರಾಣ'ದಲ್ಲಿ ಹೀಗೆ ಹೇಳುತ್ತಾನೆ: ಷಡ್ಜ ಮಧ್ಯಮ ಗ್ರಾಮ ಸಂಬಂಧಗಳಾದ ಹದಿನೆಂಟು ಜಾತಿಗಳಲ್ಲಿ ಹುಟ್ಟಿದ ಗ್ರಾಮರಾಗ, ಅಲ್ಲಿ ಹುಟ್ಟಿದ ಭಾಷೆ, ಭಾಷೆಗಳಲ್ಲಿ ಹುಟ್ಟಿದ ವಿಭಾಷೆ, ವಿಭಾಷೆಗಳಲ್ಲಿ ಹುಟ್ಟಿದ ಅಂತರಭಾಷೆ, ಅವುಗಳ ಅಂಗಗಳಾದ ರಾಗಾಂಗ, ಭಾಷಾಂಗ, ಉಪಾಂಗ, ಕ್ರಿಯಾಂಗ ಎಂಬ ದೇಶೀರಾಗಗಳಲ್ಲಿಯೂ, ಮತ್ತು ಸ್ಥಾನತ್ರಯ ನಿಯತವೂ ಸ್ಥಾಯಿಯ ಮೊದಲಾದ ವರ್ಣಯುಕ್ತವೂ ಅಮುಕ್ತಸ್ಥಾನ ರಂಜನವೂ, ನಾನಾರಸಾಲಂಕಾರ ಸಹಿತವೂ ಅಂದವಾದ ಸಾದನ್ಯಸದಿಂದ ಇಂಪಾಗಿಯೂ, ತಂ. ಹ. ಯ. ಎ. ಎ. ಆ. ದ. ತಿನಂ ನಿತ ಎಂಬ ಗೀತಾಲಕ್ಷಣಗಳಿಂದ ಉಪಲಕ್ಷಿತವೂ ಗಮಕಮಣೀಯವೂ, ಸಕಲಗೀತ ವಸ್ತುರೂಪವೂ ಆದ ಅಲಾಪಿಯಲ್ಲಿಯೂ, ವಿಸ್ತರ, ಸಂಕೀರ್ಣ, ಶುದ್ಧ, ಮಿಶ್ರ ಎಂಬ ನಾಲ್ಕು ಬಗೆಯ ರಾಗಗಳಿಂದ ಉದ್ಗ್ರಾಹ, ಧ್ರುವ, ವೇಳಾಪ, ಭೋಗ ಎಂಬ ನಾಲ್ಕು ಧಾತ್ವಂಗಗಳಿಂದ, ಸ್ವರ, ಪದ, ಬಿರುದ, ಪಾಟ, ತೆನ್ನ ತಾಳ, ಎಂಬ ಆರು ಅಂಗಗಳಿಂದ ನಳ, ಕೃತ, ಪ್ರಸನ್ನ, ವ್ಯಕ್ತ, ಪೂರ್ಣ, ಸಮ ಸುಕುಮಾರ, ಸುರಕ್ತ, ಶಿಕ್ಷಣ, ಮಧುರ, ವಿನಿಕೃಷ್ಟ ಎಂಬ ಹತ್ತು ಗುಣಗಳಿಂದ ಶೋಭಿಸುವ ಗೀತಕವೆ ಮೊದಲಾದ ಶುದ್ಧ

ಪ್ರಬಂಧಗಳಲ್ಲಿಯೂ, ಮಾತೃಕವೇ ಮೊದಲಾದ ದೇಶೀ ಪ್ರಬಂಧಗಳಲ್ಲಿಯೂ... (15-71ವ).

ಸಂಗೀತದಲ್ಲಿಯೂ ಮಾರ್ಗ ಮತ್ತು ದೇಶಿ ಎಂದು ವ್ಯತ್ಯಾಸವಿದ್ದು ಅವುಗಳ ವ್ಯತ್ಯಾಸವು ಇಂತಿದೆ.

1. ದೇಶೀ ಸಂಗೀತದಲ್ಲಿ ಸ್ವರ ಪ್ರಧಾನ, ಮಾರ್ಗೀ ಸಂಗೀತವು ಪ್ರಧಾನವಾಗಿದೆ.
2. ಮಾರ್ಗಸಂಗೀತವು ಅನೇಕ ಕಟ್ಟು ನಿಟ್ಟುಗಳಿಂದ ಕೂಡಿದೆ. ದೇಶಿ ಸಂಗೀತದಲ್ಲಿ ಮಾರ್ಗೀ ಸಂಗೀತದಂತೆ ಕಟ್ಟುನಿಟ್ಟಾದ ನಿಯಮಗಳಿಲ್ಲ.
3. ಮಾರ್ಗೀ ಸಂಗೀತದಲ್ಲಿ ಬದಲಾವಣೆ ಸಾಧ್ಯವಿಲ್ಲ. ದೇಶಿ ಸಂಗೀತದಲ್ಲಿ ಪರಿವರ್ತನೆ ಸಾಧ್ಯ. ದೇಸಿಯಲ್ಲಿ ವಿಶೇಷವಾದ ಅಂಶವೆಂದರೆ ಧ್ವನಿಯ ಏರಿಳಿತ: ತಾಳ: ಮತ್ತು ಲಯಗಳು ಸೂಕ್ಷ್ಮತೆಗಿಂತಲೂ ಇದರ ಸ್ಥಾಯಿಯೇ ಭಿನ್ನ. (ಪಾಠಕ: ಬಿ.ಡಿ. 1975. ಪು. 7-8)

ದ್ಯೂತ

ದ್ಯೂತ, ಜನವಾದ, ಪರಿವಾದ, ಸುಳ್ಳು, ಸ್ತ್ರೀಪ್ರೇಕ್ಷಣೆ ಇತ್ಯಾದಿಗಳು ವಿದ್ಯಾರ್ಥಿಗೆ ಅಧಿಕಪ್ರಸಂಗಗಳು. ಅವುಗಳಲ್ಲಿ ತನ್ಮಯನಾದಂತೆ ಆತನ ವಿದ್ಯಾಭಂಗವಾಗುತ್ತದೆ. (ಮನುಸ್ಮೃತಿ 2-179)

ಸ್ತ್ರೀಯರಿಗೆ ಪುರುಷದ್ರೋಹಕತ್ವವು ಜನ್ಮಸಿದ್ಧವು. ಆದುದರಿಂದ ಬುದ್ಧಿವಂತರು ಸ್ತ್ರೀಯರ ವಿಷಯದಲ್ಲಿ ಅಜಾಗರೂಕತೆ ವಹಿಸಬಾರದು. (ಮನುಸ್ಮೃತಿ 2-213-214)

ಜೂಜು ತ್ಯಾಗ: ಅನರ್ಥ ದಂಡಗಳಲ್ಲಿ ಮಹಾ ಅನರ್ಥ ಮಾಡುವಂಥದು ಜೂಜು ಇದೆ. ಜೂಜು ಸಮಸ್ತ ವ್ಯಸನಗಳಲ್ಲಿ ಮುಖ್ಯವಿದೆ, ಸಮಸ್ತ ಪಾಪಗಳ ಸಂಕೇತ ಸ್ಥಾನವಿದೆ, ಮಹಾನ ವಿಪತ್ತದ ಕಾರಣವಿದೆ, ಸಮಸ್ತ ಅನೀತಿಗಳಲ್ಲಿ ಮಹಾ ಅನೀತಿಯಿದೆ. ಜೂಜುಗಾರನ ಪರಿಣಾಮವೇ ಮಹಾ ದುಷ್ಟವಿರುತ್ತದೆ. ಅವನು ತನ್ನ ಸಮಸ್ತ ಮನೆ, ಸಂಪತ್ತುಗಳನ್ನು ಜೂಜುನಲ್ಲಿ ಸೋತು ಕೂಡ ಇತರರ ಧನ ಪಡೆಯಲಪೇಕ್ಷಿಸುತ್ತಾನೆ. ಜೂಜುಗಾರನಿಗೆ ಎಷ್ಟು ಅಧಿಕ ಲೋಭವಿರುತ್ತದೆಯೆಂದರೆ ಅವನು "ಇತರರ ಧನವು ನನ್ನ ಹತ್ತಿರ ಬರಲೇಬೇಕು !" ಅದರ ಸಲುವಾಗಿ ಏನು ಬೇಕಾದರೂ ಆಗಲಿ, ನನ್ನ ಧನವು ಹೋಗುತ್ತಿದ್ದರೆ ಹೋಗಲಿ, ಅಪಶಯವು ಬರುತ್ತಿದ್ದರೆ ಬರಲಿ, ದರಿದ್ರತೆ ಬರುತ್ತಿದ್ದರೆ ಬರಲಿ, ಯಾವುದೇ ಪ್ರಕಾರದಿಂದ ನಾನು ಇತರರ ಧನವನ್ನು ಗೆದ್ದುಕೊಂಡಾಗಲೇ ನಾನು ಜೀವಂತವಾಗಿರುವಿಕೆಗೆ ಸಾರ್ಥಕತೆಯಿದೆಂಬೆಂಬ ವಿಚಾರವನ್ನು ಯಾವಾಗಲೂ ಮಾಡುತ್ತಿರುತ್ತಾನೆ.ಜೂಜಿನಿಂದಲೇ ನಳ, ಧರ್ಮರಾಯರು ಕೆಟ್ಟರು ಎಂದು ಜನಜನಿತ

ಕತೆಯಿದೆ. ಜನಪದದಲ್ಲಿ ಮತ್ತೊಂದು ಸಂಗತಿಯೂ ಇದೆ–"ಹಟ ಮತ್ತು ಚಟ" ಅಪಾಯಕಾರಿ.

ದ್ರವಿಳ

'ದ್ರವಿಳ' ಎಂಬುದು ದಕ್ಷಿಣಾಪಥದಲ್ಲಿ ದ್ರಾವಿಡದೇಶ ಎಂಬರ್ಥದಲ್ಲಿ ಬಂದಿದೆ. ಶುದ್ಧ ದ್ರಮಿಳ ಜನರು' ಎಂದು ಟೀಕೆಯಾಗಿಯೂ ಬರುತ್ತದೆ. ದ್ರಮಿಳರು ಎಂದರೆ 'ಅನಾಗರಿಕರು' ಎಂಬರ್ಥದಲ್ಲಿಯೂ ಬಳಕೆಯಾಗಿರುವುದೂ ಇದೆ.

ವಿವರಗಳಿಗೆ ನೋಡಿ: ದೇಸಿಗ, ನಾಡಾಡಿ

ದ್ವಿಜ

ಗನಹರು, ನೇರಿದರು, ಇಳೆಯ ಪಿರಿಯರು, ಎಂದರೆ ದ್ವಿಜರು. ನೇರು ಎಂದರೆ ಆರೋಹಣ, ಗಹನರು ಎಂದರೆ ಅಗಾಧರು, ಇಳೆಗೆ ಹಿರಿಯಾಗಿರುವುದರಿಂದ ಪಿರಿಯರು, ಸೈದರೆನಲಾಗಿ ಹವಿಗರು, ದಿಮ್ಮಿದರುಂ ಎನಲಾಗಿ ದಿಮ್ಮಿದರು.

ದ್ವಿಜರನ್ನು ನೆಲದಮರ್ದುಣಿಸುಗಳೆಂದು, ನೆಲನಮರ್ದುಣಿಗಳೆಂದು, ವಿಪ್ರರ್ಗೆ ಪೆಸರೆಂದು ಕರ್ನಾಟಕ ಶಬ್ದಸಾರದಲ್ಲಿ ಬರುತ್ತದೆ. *(ಕರ್ನಾಟಕ ಶಬ್ದಸಾರಂ ಪುಟ ೬೦.)*

ದ್ವಿಜ ಎಂದರೆ ಎರಡನೆಯ ಬಾರಿ ಹುಟ್ಟಿದವನು. ಉಪನಯನದ ಅನಂತರ ಬ್ರಾಹ್ಮಣನು ಎರಡನೆಯ ಬಾರಿ ಹುಟ್ಟುತ್ತಾನೆ.

ದ್ವಿಜನ್ಮ ಘೋಷದಿಂದ ಪಾಪ ನಾಶವಾಗುವುದು. ಅಂದರೆ ಬ್ರಾಹ್ಮಣರ ವೇದಘೋಷದಿಂದ ಪಾಪನಾಶವಾಗುವುದು ಎಂಬುದು ಒಂದು ನಂಬಿಕೆ.

ಬ್ರಹ್ಮನ್ ಮತ್ತು ಕ್ಷತ್ರ ಎಂಬ ಭಾವವಾಚಕ ಪದಗಳು ವೃತ್ತಿ ಗುಣವನ್ನು ಸೂಚಿಸುತ್ತವೆ. ಉಳಿದ ಆರ್ಯಜನರ ನಾಮಧೇಯ ವಿಶ್. ಈ ಮೂರು ಹೆಸರುಗಳು ಆರ್ಯ ವರ್ಗವನ್ನು ಪೂರೈಸುತ್ತವೆ. ಆರ್ಯರು ಮೂರು ವರ್ಣಗಳ ಜನರು ಎಂಬ ವಾಕ್ಯವನ್ನು ಸಂಸ್ಕೃತ ಗ್ರಂಥಗಳಲ್ಲಿ ಕಾಣುತ್ತೇವೆ. ಬ್ರಾಹ್ಮಣರು ಬ್ರಹ್ಮನಿಂದ ಜನಿಸಿದರು ಎಂಬ ನಂಬಿಕೆಯೂ ಇದೆ. ಬ್ರಹ್ಮದಿಂದ ಬ್ರಾಹ್ಮಣ: ಕ್ಷತ್ರದಿಂದ ಕ್ಷತ್ರಿಯ: ವಿಶ್ ನಿಂದ ವೈಶ್ಯ ಹುಟ್ಟಿದೆ ಮತ್ತು ಇವು ಸಂಸ್ಕೃತ ವ್ಯಾಖ್ಯಾನಗಳು ಎಂಬುದು ಗಮನಾರ್ಹ. ನಾಲ್ಕು ವರ್ಣಗಳಲ್ಲಿ ಬ್ರಾಹ್ಮಣನು ಪ್ರಭುವು. ಸಂಸ್ಕಾರ, ನಿಯಮ, ಪ್ರಕೃತಿ ವಿಶೇಷಗಳು ಹೆಚ್ಚುಗಾರಿಕೆಗಳು. ಇದರ ತೀರ್ಮಾನವು ಕ್ಷಣಿಕವಲ್ಲ ಎಂದು ಮನು ಹೇಳುತ್ತಾನೆ. ಬ್ರಹ್ಮಹತ್ಯದೋಷಕ್ಕೆ ಮನು ಮತ್ತು ಯಾಜ್ಞವಲ್ಕ್ಯರು ಹನ್ನೆರಡು ವರ್ಷ ವ್ರತವಾಚರಿಸಬೇಕೆಂದು ಹೇಳುತ್ತಾರೆ. ಅನುದ್ದೇಶಪೂರ್ವಕ ನರಹತ್ಯೆ ಮಾಡಿದವನು ಕಾಡಿನಲ್ಲಿ ಗುಡಿಸಲನ್ನು ಕಟ್ಟಿಕೊಂಡು ಭಿಕ್ಷೆ ಬೇಡಿಕೊಂಡು ಮೃತನ ತಲೆಬುರುಡೆಯನ್ನು ಲಾಂಛನವನ್ನಾಗಿಸಿಕೊಂಡು ಇರಬೇಕಾಗುತ್ತದೆ.

(ಬ್ರಾಹ್ಮಣ) ಜ್ಞಾನೋಪಾಸಕನು, ಧರ್ಮದ ಪ್ರತ್ಯಕ್ಷ ರೂಪವು. ಆತ್ಮಜ್ಞಾನವೇ ಪ್ರಮುಖವು. ಮೋಕ್ಷವೇ ಆತ್ಮಜ್ಞಾನವು–ಗಮ್ಯವು ಎನ್ನುವುದು ಮನು ಅಭಿಪ್ರಾಯ.ಈ ನಿಲುವು ಒಂದು ರೀತಿಯ ವ್ಯಾಖ್ಯಾನಗಳು ಮಾತ್ರ.

ಬ್ರಾಹ್ಮಣರು ತಮ್ಮ ಸಂಬಂಧಿಗಳಾದ ಬ್ರಾಹ್ಮಣರ ಶವಗಳನ್ನು ಚಿತೆಯಲ್ಲಿ ಸುಟ್ಟರೆ ಬ್ರಾಹ್ಮಣ ಹತ್ಯೆಯ ಪಾತಕವನ್ನು ಮಾಡಿದಂತಾಗುತ್ತದೆ. ಬ್ರಾಹ್ಮಣರ ಸಂಪರ್ಕಕ್ಕೆ ಬಂದ ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರೂ ಸಹ ಬ್ರಾಹ್ಮಣರಾಗುತ್ತಾರೆ. ಆದರೆ ಎಂದೂ ಹಾಗೆ ಆಗಿಲ್ಲ. ಬ್ರಾಹ್ಮಣನ ದೇಹವನ್ನು ನಾಶಗೊಳಿಸಿದ ಮೇಲೆ ಪ್ರಾರ್ಥನೆ, ಪೂಜೆ, ಅಧ್ಯಯನ, ಬೋಧನೆ, ದಾನ ಮತ್ತು ಅದರ ಫಲಗಳೂ ನಾಶವಾಗಬೇಕಾಗುತ್ತದೆ. ಆದರೆ ಅದನ್ನು ನೀವು ಒಪ್ಪುವುದಿಲ್ಲ. ಆದ್ದರಿಂದ ದೇಹದಿಂದ ಒಬ್ಬನು ಬ್ರಾಹ್ಮಣನಾಗುವುದಿಲ್ಲ ಎಂದು ನಮ್ಮ ಗ್ರಹಿಕೆ. ಬ್ರಾಹ್ಮಣಿಕೆ ಮತ್ತು ದೇಹದ ನಡುವಣ ಚರ್ಚೆಯು ಇಲ್ಲಿ ಮುಖ್ಯ.

ಜ್ಞಾನದಿಂದ ಒಬ್ಬನು ಬ್ರಾಹ್ಮಣನಾಗುವುದಿಲ್ಲ. ಏಕೆಂದರೆ ಎಷ್ಟೇ ಜ್ಞಾನವಿದ್ದರೂ ಅದಕ್ಕೆ ಬೆಲೆಯಿಲ್ಲ. ಇದ್ದಿದ್ದರೆ ಜ್ಞಾನಿಗಳಾದ ಶೂದ್ರರೆಲ್ಲರೂ ಬ್ರಾಹ್ಮಣರಾಗುತ್ತಿದ್ದರು. ಕೆಲವು ವೇಳೆ ವೇದ, ವ್ಯಾಕರಣ, ಮೀಮಾಂಸ, ಸಾಂಖ್ಯಾ, ವೈಶೇಷಿಕ, ಜ್ಯೋತಿಷ ಇತ್ಯಾದಿಗಳ ಮೇಲೆ ಶೂದ್ರರು ಪಾಂಡಿತ್ಯ ಸಾಧಿಸಿರುವುದನ್ನು ನೋಡಬಹುದು. ಆದ್ದರಿಂದ ಜ್ಞಾನವೂ ಸಹ ಬ್ರಾಹ್ಮಣತ್ವಕ್ಕೆ ಕಾರಣವಾಗುವುದಿಲ್ಲ. ಒಳ್ಳೆಯ ನಡತೆಯಿಂದಲೂ ಬ್ರಾಹ್ಮಣನಾಗಲು ಸಾಧ್ಯವಿಲ್ಲ. ಹಾಗಿದ್ದರೆ ಒಳ್ಳೆಯ ನಡತೆಯ ಶೂದ್ರರೆಲ್ಲರೂ ಬ್ರಾಹ್ಮಣರಾಗುತ್ತಿದ್ದರು. ಅನೇಕ ನಟರು, ಭಟ (ಸೈನಿಕ)ರು, ಕೈವರ್ತರು (ಮೀನುಗಾರರು), ಭಂಡ (ವಿದೂಷಕ) ಇತ್ಯಾದಿಗಳು ಒಳ್ಳೆಯ ನಡತೆಯವರಾಗಿದ್ದರೂ ಅವರು ಬ್ರಾಹ್ಮಣರಾಗಿಲ್ಲದಿರುವುದನ್ನು ನಾವು ನೋಡುತ್ತೇವೆ. ಆದ್ದರಿಂದ ತನ್ನ ಸದ್ಗುಣಗಳಿಂದ ಒಬ್ಬನು ಬ್ರಾಹ್ಮಣನಾಗಲಾರ. ಇಲ್ಲಿ 'ಜನ್ಮನಾ ಜಾಯತೇ ಜಂತು: ಕರ್ಮಣಾ ಜಾಯತೇ ದ್ವಿಜಃ ಮಾತನ್ನು ನೆನಪಿಸಿಕೊಳ್ಳಬಹುದು. ತನ್ನ ವೃತ್ತಿಯಿಂದಲೂ ಒಬ್ಬನು ಬ್ರಾಹ್ಮಣನಾಗಲಾರ. ಕ್ಷತ್ರಿಯ, ವೈಶ್ಯ, ಶೂದ್ರರು ಪ್ರಾರ್ಥನೆ, ಅಧ್ಯಯನ, ಮಂತ್ರ ಪಠನ, ಬೋಧನೆ, ದಾನ ಇತ್ಯಾದಿಗಳಿಂದ ಕೂಡಿದ್ದರೂ ಅವರನ್ನು ನೀವು ಬ್ರಾಹ್ಮಣರೆಂದು ಒಪ್ಪುವುದಿಲ್ಲ. ಆದ್ದರಿಂದ ವೃತ್ತಿಯಿಂದಲೂ ಬ್ರಾಹ್ಮಣತ್ವ ಸಾಧ್ಯವಿಲ್ಲ. ಇಲ್ಲಿ ವೃತ್ತಿ ಮತ್ತು ಬ್ರಾಹ್ಮಣತ್ವಕ್ಕಿರುವ ಸಂಬಂಧವನ್ನು ಹೇಳಲಾಗಿದೆ.

ವೇದಪಾರಂಗತನಾಗುವುದರಿಂದ ಒಬ್ಬನು ಬ್ರಾಹ್ಮಣನಾಗುವುದಿಲ್ಲ. ರಾವಣ ಹೆಸರಿನ ಒಬ್ಬ ಋಗ್, ಯಜುರ್. ಸಾಮ ಮತ್ತು ಅಥರ್ವ ವೇದಗಳ ಮೇಲೆ ಪ್ರಭುತ್ವಗಳಿಸಿದ್ದ. ರಾಕ್ಷಸರ ಪ್ರತಿಯೊಂದು ಮನೆಯಲ್ಲೂ ವೇದಾನುಷ್ಠಾನ ನಡೆದಿತ್ತು. ಆದರೆ ಅವರನ್ನು ಬ್ರಾಹ್ಮಣರೆಂದು ಅಂಗೀಕರಿಸಿರಲಿಲ್ಲ. ಆದ್ದರಿಂದ ವೇದ ಪಾಂಡಿತ್ಯದಿಂದಲೂ ಒಬ್ಬನು ಬ್ರಾಹ್ಮಣನಾಗಲಾರ ಎಂದು ನಾವು ತಿಳಿಯುತ್ತೇವೆ.

ಶಾಸ್ತ್ರಗಳ ಜ್ಞಾನದಿಂದ, ವಿವಿಧ ಸಂಸ್ಕಾರಗಳಿಂದ, ಕುಲದಿಂದ ವೇದ ಪಠನದಿಂದ ಮತ್ತು ಯಾವುದೇ ವೃತ್ತಿ (ಕರ್ಮ)ಯಿಂದ ಬ್ರಾಹ್ಮಣತ್ವ ಪ್ರಾಪ್ತಿಯಾಗುವುದಿಲ್ಲ. ಬ್ರಾಹ್ಮಣತ್ವವು ಆಧ್ಯಾತ್ಮದ ಬೆಳವಣಿಗೆಯಲ್ಲಿ ಒಂದು ಹಂತವನ್ನು ಪ್ರತಿನಿಧಿಸುತ್ತದೆ. ಅದು ಎಲ್ಲ ಪಾಪಗಳ ನಿರ್ಮೂಲ ಹಾಗೂ ಕುಂದ ಪುಷ್ಪ ಮತ್ತು ಚಂದ್ರನ ಧವಳಕಾಂತಿಯಂತೆ ಶ್ವೇತವೂ ಆಗಿದೆ."

ವಿವರಗಳಿಗೆ ನೋಡಿ: ಬ್ರಾಹ್ಮಣ

ಬಿ.ವಿ.ವೀರಭದ್ರಪ್ಪ ೨೦೦೭ ಅಶ್ವಘೋಷನ ವಜ್ರಸೂಚಿ ಪುಟ. ೭, ೮, ೧೨, ೫, ೧೫, ೧೬, ೧೭

ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂಪುಟ. ೨ ೧೯೭೧ ಪುಟ. ೨೩೯, ೨೮೬

ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೧೦-೩, ೧-೯೮

ದಿ. ನಾಗೇಶ ರಂಗೋ ಕುಲಕರ್ಣಿ ೨೦೦೭ ಯಾಜ್ಞವಲ್ಕ್ಯ ಸ್ಮೃತಿ ಉಪೋದ್ಘಾತ ಪ್ರಕರಣ - ೧೦.

ಧೋತ್ರ

ಧೋತರ (ವಲ್ಲಿ) ಹಾಗು ಉತ್ತರೀಯಗಳು ಪ್ರಮುಖ ಉಡುಗೆಗಳಾಗಿವೆ. ಉಡುವ ಧೋತರಕ್ಕೆ 'ವಾಸಸ್' ಎಂತಲೂ, ಹೊರುವ ಉತ್ತರೀಯಕ್ಕೆ 'ಅಧಿವಾಸಸ್' ಎಂತಲೂ ಕರೆದಿದ್ದಾರೆ. ಜನರು ಸ್ವತಃ ಬಟ್ಟೆ ನೇಯುತ್ತಿದ್ದರು ಎಂಬ ಮಾತು ಮೇಲಿಂದ ಮೇಲೆ ಬರುತ್ತದೆ. ನಾರಿಯರು ಸುಂದರವಾದ ವಸ್ತ್ರಗಳನ್ನು ತೊಡುತ್ತಿದ್ದುದರ ಉಲ್ಲೇಖವು ೧-೧೯೨-೪ ರಲ್ಲಿ ಸಿಗುತ್ತದೆ. ೨-೩-೬ ರಲ್ಲಿ ನಾರಿಯರ ಆಭರಣಪ್ರಿಯತೆಯ ಪ್ರಸ್ತಾಪದ ಜೊತೆಗೆ ವಿವಿಧ ಆಭರಣಗಳ ಪರಿಚಯವೂ ಪಾ.ಪ. ವಾಗುತ್ತದೆ.

ಧ್ರುವ ಪ್ರಯೋಗ

ಧ್ರುವ ಪ್ರಯೋಗವನ್ನುವುದು ಧ್ರುವರಾಗದ (ಧ್ರುಮೆ)ರಾಗವನ್ನು ಸೂಚಿಸುತ್ತದೆ. ಸಂಗೀತದ ಒಂದು ರಾಗದ ಹೆಸರಿದು. ಯಾವುದೇ ರಾಗವನ್ನು ಶುದ್ಧ ಮತ್ತು ಸ್ವತಂತ್ರ ಮತ್ತು ರಾಗದ ಛಾಯೆ ಸ್ಥಿರವಾಗಿಟ್ಟು ಹಾಡಬೇಕಾದರೆ ರಾಗದ ಚಲನೆಯಲ್ಲಿ ಯಾವ ಸ್ವರವನ್ನು ದೀರ್ಘವಾಗಿ ಉಚ್ಚರಿಸಬೇಕು. ಯಾವ ಸ್ವರಗಳನ್ನು ಮಿತವಾಗಿ ಉಪಯೋಗಿಸಬೇಕು.: ಯಾವ ರಾಗವನ್ನು ವಕ್ರವಾಗಿಸಬೇಕು. ಯಾವ ಸ್ವರವನ್ನು ಮೀಂಟಿ ರೂಪದಲ್ಲಿ ಬಳಸಬೇಕು ಎಂಬುದು ಸಂಗೀತಕಾರನಿಗೆ ತಿಳಿದಿರುತ್ತದೆ. ಜೊತೆಗೆ ರಾಗದ ಜೊತೆಗೆ ಸ್ವರಸಂಗತಿಗಳಾವುವು ಎಂದೂ ಅರ್ಥಮಾಡಿಕೊಳ್ಳಬೇಕು.

ವಿವರಗಳಿಗೆ ನೋಡಿ: ದೇಸಿರಾಗ.

ನಗರ

ನಗರ ಎನ್ನುವ ಪರಿಕಲ್ಪನೆಯ ಹಿನ್ನೆಲೆಯೇ ವಿಶಿಷ್ಟವಾಗಿದೆ. ನಗರವೆಂದರೆ–ಹಳ್ಳಿಗಿಂತ ಬೇರೆಯಾದುದು ಎಂಬುದು ಸಾಮಾನ್ಯವಾದ ಅರ್ಥವಾಗಿದೆ. ಯಾವಾಗ ಕೈಗಾರಿಕಾ ಕ್ರಾಂತಿಯಾಯಿತೋ ಅಂದಿನಿಂದ ಹಳ್ಳಿ–ಪಟ್ಟಣ–ನಗರಗಳ ನಡುವಣ ವ್ಯತ್ಯಾಸವು ಬಹಳ ದೊಡ್ಡದಾಯಿತು. ಮತ್ತು ಮನುಷ್ಯರನ್ನು ಗುರುತಿಸುವ ಕ್ರಮಗಳು ಕೂಡಾ ಬೇರೆಯಾದವು. ಉದಾಹರಣೆಗೆ ಹಳ್ಳಿಗರು =ಹಳ್ಳಿಯಲ್ಲಿ ವಾಸಿಸುವವರು, ನಾಗರಿಕರು=ನಗರಗಳಲ್ಲಿ ವಾಸಿಸುವವರು. ಅಂದರೆ ಜೀವನಕ್ರಮಕ್ಕೂ ವಾಸಸ್ಥಳಕ್ಕೂ ಒಂದು ಸಂಬಂಧವು ಸ್ಥಾಪಿತವಾದಂತಾಯಿತು. ನಗರವನ್ನು ಇಂಗ್ಲಿಷಿನಲ್ಲಿ 'ಸಿಟಿ' ಎಂದು ಕರೆಯುತ್ತಾರೆ. 'ಸಿಟಿ' ಎನ್ನುವ ಪದವು ರೋಮನ್ ಪದ 'ಸಿವಿಟಸ್' ನಿಂದ ಬಂತು. ಸಿವಿಟಸ್ ಎನ್ನುವುದು ಆಧುನಿಕವಾದ ನಗರ ಎಂಬ ಅರ್ಥದಲ್ಲಿ ಬಳಕೆಯಾಗಿಲ್ಲ. ಲ್ಯಾಟಿನಿನಲ್ಲಿ ಸಿವಿಟಸ್ ಎಂದು ಕರೆಯುತ್ತಾರೆ. ಸಿವಿಟಸ್ ಎನ್ನುವುದು ನಾಮಪದ. ಹಾಗೆಂದರೆ ಒಂದೆಡೆಗೆ ವಾಸಿಸುವವನು ಎಂಬ ಅರ್ಥ ಬರುತ್ತದೆ. ಕನ್ನಡದಲ್ಲಿ ನಾಗರಿಕರು ಎಲ್ಲಿ ವಾಸಿಸುತ್ತಾರೆಯೋ ಅದು ನಗರವಾಗುತ್ತದೆ. ಈಗ ನಾವು 'ಸಿಟಿ' ಎಂಬುದನ್ನು ಬೇರೆ ಬೇರೆ ಅರ್ಥಗಳಲ್ಲಿಯೂ ಬಳಸುತ್ತೇವೆ. ಯೂನಿವರ್ಸಿಟಿ ಇದಕ್ಕೆ ಒಂದು ಉದಾಹರಣೆಯಾಗಿದೆ.

ನಗರಕ್ಕೆ ಪೊಳಲು ಎಂದೂ ಕರೆಯಲಾಗಿದೆ. ನಗರ ದ್ವಾರಮತ್ತು, ಬೀದಿಗಳನ್ನು ಬೇರೆ ಬೇರೆ ಹೆಸರಿನಿಂದಲೂ ಕರೆಯಲಾಗಿದೆ. ನಗರದಲ್ಲಿ ಸಿರಿಯದರಂ, ಸಿರಿಯದಾರಂ, ಸಿರಿಯಬಾರಂ– ಎಂದು ಶ್ರೀ ದ್ವಾರಕ್ಕೆ ಎನ್ನುತ್ತಾರೆ. ವಂಕದರಂ, ವಂಕದಾರಂ, ವಂಕಬಾರಂ ಎಂದು ಮೂರು ಹೆಸರುಗಳು ವಕ್ರದ್ವಾರಕ್ಕೆ ಇದ್ದವು. ಪಾಣಿಯದಾರಂ, ಪಾಣಿಯದಾರಂ, ಪಾಣಿಯಬಾರಂ ಎಂಬುದು ಮೂರು ಪಾನೀಯ ದ್ವಾರಕ್ಕೆ ಹೆಸರು. ಕಂಟಿಯಬಾರಂ ಎಂಬುದು ಕಂಟಕದ್ವಾರಕ್ಕೆ ಹೆಸರು. (ನೋಡಿ–ಕರ್ನಾಟಕ ಶಬ್ದ ಮಂಜರಿ ಪುಟ ೫೮)

"ಕ್ರಿ.ಶ. ೮ರಿಂದ ೧೮ನೆಯ ಶತಮಾನಗಳ ಅವಧಿಯಲ್ಲಿ ಅನೇಕ ಪೇಟೆ–ಪಟ್ಟಣಗಳು ಅಸ್ತಿತ್ವಕ್ಕೆ ಬಂದಿದ್ದವು. ಅವುಗಳಲ್ಲಿ ಕೆಲವು ಹೊಸದಾಗಿ ಹುಟ್ಟಿಕೊಂಡರೆ ಇನ್ನು ಕೆಲವು ಹಿಂದೆಯೇ ಅಸ್ತಿತ್ವದಲ್ಲಿದ್ದವು. ಶಾಸನಗಳು ಮತ್ತು ಸಾಹಿತ್ಯಕ ಕೃತಿಗಳು ಈ ಅಧ್ಯಯನಕ್ಕೆ ಪ್ರಮುಖ ಆಧಾರಗಳಾಗಿವೆ. ಕ್ರಿ.ಶ. ೭ರಿಂದ ೧೦ನೆಯ ಶತಮಾನಗಳವರೆಗಿನ ಶಾಸನಗಳಲ್ಲಿ ಪುರ ಎನ್ನುವ ಪದದ ಉಲ್ಲೇಖವಿದ್ದರೆ, ಕ್ರಿ.ಶ. ೧೧ ರಿಂದ ೧೫ನೆಯ ಶತಮಾನಗಳವರೆಗಿನ ಶಾಸನಗಳಲ್ಲಿ ನಗರ, ಮಹಾನಗರ, ಪಟ್ಟಣ ಎನ್ನುವ ಉಲ್ಲೇಖಗಳಿರುವುದು ಕಂಡುಬರುತ್ತದೆ. ಅದೇ ರೀತಿ ಆಡಳಿತ ಪಟ್ಟಣಗಳು, ಧಾರ್ಮಿಕ ಪಟ್ಟಣಗಳು, ವಾಣಿಜ್ಯ ಪಟ್ಟಣಗಳೂ, ಶೈಕ್ಷಣಿಕ ಪಟ್ಟಣಗಳು ಮುಂತಾದ ವಿವಿಧ ಸ್ವರೂಪದ ನಗರಕೇಂದ್ರಗಳ ಉಲ್ಲೇಖಗಳು ಸಿಗುತ್ತವೆ. ಓ.ಪಿ.

ಪ್ರಸಾದ್ ಅವರು ಕ್ರಿ. ಶ. ೮ರಿಂದ ೧೨ನೆಯ ಶತಮಾನಗಳ ಅವಧಿಯಲ್ಲಿದ್ದ ಕೆಲವು ಪ್ರಮುಖ ಪೇಟೆ-ಪಟ್ಟಣಗಳ ಪಟ್ಟಿಯನ್ನು ನೀಡಿದ್ದಾರೆ. ಅವುಗಳೆಂದರೆ, ಬನವಾಸಿ, ಬಾದಾಮಿ, ತಲಕಾಡು, ಶ್ರವಣಬೆಳಗೊಳ, ಪೊಬುಚ್ಚ, ಮುಳುಗುಂದ, ಪುಲಿಗೆರೆ, ಬಂಕಾಪುರ, ಮಾನ್ಯಖೇಟ, ಅಣ್ಣಿಗೆರೆ, ಕಲ್ಯಾಣಿ, ಮಂಗಳೂರು, ಗುತ್ತಿ, ಉಚ್ಚಂಗಿ, ಐಹೊಳೆ, ಲಕ್ಕುಂಡಿ, ದೋರಸಮುದ್ರ, ಬಳ್ಳಿಗಾವೆ, ಕುಡತಿನಿ, ಸೂಡಿ, ಸೊಸೆವೂರು, ಕೋಲಾರ, ಅರಸಿಕೆರೆ, ಬೆಳಗಾಂ, ರೋಣ, ಭಟ್ಕಳ, ಬಾರಕೂರು, ಬಸ್ರೂರು, ಕೊಪ್ಪಳ, ಕುರುಗೋಡು, ಹಾನ್‌ಗಲ್, ಕುರುವತ್ತಿ, ಹೊನ್ನಾವರ, ಗದಗ ಮುಂತಾದವು. ಇವುಗಳಲ್ಲಿ ಅನೇಕ ನಗರ ಕೇಂದ್ರಗಳು ೧೩ ಮತ್ತು ೧೪ನೆಯ ಶತಮಾನಗಳಲ್ಲೂ ಅಸ್ತಿತ್ವದಲ್ಲಿದ್ದವು. ಅದೇ ರೀತಿ ಇನ್ನೂ ಅನೇಕ ಹೊಸ ನಗರ ಕೇಂದ್ರಗಳು ಹುಟ್ಟಿಕೊಂಡವನು. ಅವುಗಳೆಂದರೆ, ಐಹೊಳೆ, ಬೇಲೂರು, ಹಳೇಬೀಡು, ಬಳ್ಳಿಗಾವೆ, ಮಂಗಳೂರು, ಬಾರಕೂರು, ಗದಗ, ಕೊಪ್ಪಳ, ಶ್ರವಣಬೆಳಗೊಳ, ಲಕ್ಕುಂಡಿ, ಹೊನ್ನಾವರ, ಮೂಗೂರು, ಉಪೇಂದ್ರಪುರ, ಸೋಮನಾಥಪುರ, ತಲಕಾಡು, ತೊಣ್ಣೂರು ಮುಂತಾದವು." (ಮೋಹನಕೃಷ್ಣ ರೈ, ೨೦೦೪. ಪು. ೮೬-೮೭) ನಾಗರಿಕತೆಯಿಂದ ನಗರ ನಗರದಿಂದ ನಾಗರಿಕತೆ ಹೀಗೆ ಇವುಗಳಿಗೆ ದ್ವಂದ್ವಾತ್ಮಕ ಸಂಬಂಧವಿದೆ

ವಿವರಗಳಿಗೆ ನೋಡಿ: Raymond Williams keywords 1983 P.57

ಮೋಹನ್ ದಾಸ್ ಕರಮಚಂದ್ ಗಾಂಧಿ ೨೦೦೮ ಹಿಂದ್ ಸ್ವರಾಜ್

ಅಗ್ರಹಾರ ಕೃಷ್ಣಮೂರ್ತಿ(ಸಂ) ೨೦೦೬ ಸಂಸ್ಕೃತಿ ಕಥನ

ನಟ್ಟುವ

ನಟ್ಟುವ ಎಂದರೆ ನಟ ಎಂದರ್ಥ. ಕ್ರಿಶ ೧೩೦೦ರ ಚೌಂಡರಸ ಕವಿಯು ನಟ್ಟುವನ ಕುರಿತು ಬರೆದಿದ್ದಾನೆ. ಆದಿಯೊಳದಗೆ ಕಥಾವಸ್ತುವನ್ನು ನಿರೂಪಿಸುವಲ್ಲಿ ಅವನಾಡಿದ ವಿಷಯವನ್ನೀಕ್ಷಿಸಿರಿ: ಮೊದಲೊಳ್ ದಂಡಿಕವೀಶ್ವರಂ ದಶಕುಮಾರಾಖ್ಯಾತ ಚಾರಿತ್ರಮಂ।

ಪದಪಿಂ ಸಂಸ್ಕೃತ ಭಾಷೆಯಿಂ ರಚಿಸಿದಂ ಧಾತ್ರೀಜನಸ್ತೋಮ ಸ -।

ಮ್ಮದಮಪ್ಪಂತದನಾಂ ಪ್ರಸಿದ್ಧಿ ಯವತಾರಾಕಾರಮಂ ನಟ್ಟುವಂ।

ವಿದಿತಂ ರಂಗದೊಳಾಡಿ ತೋರ್ಪ ತೆರದಿಂ ಪೇಳ್ವೆಂ ಸುಕರ್ಣಾಟದಿಂ॥(ಚೌಂಡರಸ-ದಶಕುಮಾರಚರಿತೆ)

ಈ ಪದ್ಯದೊಳಗೆ ಕವಿ 'ಪ್ರಸಿದ್ಧಿಯವತಾರಾಕಾರಮಂ'. ಎಂದರೆ ಶ್ರೀವಿಷ್ಣುವಿನ ಪ್ರಸಿದ್ಧಿವಡೆದ ಮತ್ಸ್ಯಕೂರ್ಮಾದಿ ದಶಾವತಾರಗಳ ಆಕಾರವನ್ನು ನಟ್ಟುವನು ರಂಗದಲ್ಲಿ ಆಡಿತೋರಿಸುವಂತೆ, ತಾನು ಈ ಕಾವ್ಯದಲ್ಲಿ ರಾಜವಂಶೀಯರಾದ ದಶಕುಮಾರಕರ ಚರಿತವನ್ನು ವಿಸ್ತರಿಸುತ್ತೇನೆ. ಎಂದು ಚೌಂಡರಸ ಹೇಳುತ್ತಾನೆ. (ಮುಳಿಯ ತಿಮ್ಮಪ್ಪಯ್ಯ ೧೯೮೩. ಸಂ:೨. ಪು.೪೨೬)

ನಾಟು ಎಂದು ಆದಿಪುರಾಣದಲ್ಲಿಯೂ ಬರುತ್ತದೆ.

ಕೋಟಿತ್ರಜದಿಂದಮಸೆವೀ
ನಾಟಕಮಂ ತೋರೆ ಮಾಣ್ಡಳಿಲ್ಲಳ್ ಬಗೆಯೊಳ್ ।
ನಾಟುವಿನಮಮರಿ ಸಂಸ್ಕೃತಿ
ನಾಟಕಮುಮನೆನಗೆ ನೆರೆಯೆ ತೋರೆದಳೀಗಳ್ ॥ (ಒಂಬತ್ತನೆಯ ಆಶ್ವಾಸ –೪೫)

ಕೋಟಿರೀತಿಯಲ್ಲಿ ಕಾಣಿಸಿಕೊಳ್ಳುವ ನಾಟಕವನ್ನು ತೋರಿಸಿ, ಅವಳು "ನಾಟುವಿನಮಮರಿ ಸಂಸ್ಕೃತಿ" ನಾಟಕವನ್ನು ತೋರಿದಳು ಎಂದು ಉಕ್ತವಾಗಿದೆ. ನಟ್ಟು: ನಾಡು: ನಟ: ನಾಟಕ ಈ ಪದಗಳನ್ನು ಗಮನಿಸಬಹುದು.

ನಡತೆ

ನಡತೆಯೆಂದರೆ ನಮ್ಮ ನಡವಳಿಕೆಯೆಂಬ ಅರ್ಥವನ್ನು ಸೂಚಿಸುತ್ತದೆ. ರೋಮನ್‌ನಲ್ಲಿ 'ಹಬ್ಬನ್' ಎಂದರೆ 'ಹಿಡಿದಿರಿಸು' ಎಂದರ್ಥ. ಇಂಗ್ಲಿಷಿನಲ್ಲಿ 'Behaviour' ಎಂದು ಕರೆಯುತ್ತಾರೆ. 'to have one self' ಎಂಬುದನ್ನು ಇದು ಸೂಚಿಸುತ್ತದೆ. 'Behave' ಎಂದರೆ 'ನಿನ್ನದು' 'ಸ್ವಂತದ್ದು' ಎಂಬ ಅರ್ಥವೂ ಬರುತ್ತದೆ. ನಡತೆಗೂ ಸಾರ್ವಜನಿಕವಾಗಿ ನಾವು ವರ್ತಿಸುವ ಕ್ರಮಕ್ಕೆ ಇರುವ ಸಂಬಂಧಗಳಿಗೂ ಮುಖ್ಯ ಸಂಬಂಧವಿದೆ. ನಡತೆಯು ನಮ್ಮ ಬಾಹ್ಯ ವ್ಯಾಪಾರಕ್ಕೆ ಸಂಬಂಧಿಸಿದ ವಿಷಯವೂ ಆಗಿದೆ. ಹತ್ತೊಂಬತ್ತನೆಯ ಶತಮಾನದ ಅನಂತರದಲ್ಲಿ ನಡತೆಯ ಬಗ್ಗೆ ಬೇರೆ ಬೇರೆ ರೀತಿಯ ಅಧ್ಯಯನ ಕ್ರಮಗಳು ಪ್ರಾರಂಭವಾದವು. ಉದಾ: ಪ್ರಾಣಿಗಳ ನಡತೆ, (Animal Behaviour)

ಮನುಷ್ಯನ ನಡವಳಿಕೆಯ ಮನಶ್ಶಾಸ್ತ್ರವು ಇದರಲ್ಲಿ ಒಂದು. ಮನುಷ್ಯನ ನಡವಳಿಕೆ ಮತ್ತು ಮನಸ್ಸಿಗೆ ಒಂದು ಸಂಬಂಧವಿದೆಯೆಂದು ಹತ್ತೊಂಬತ್ತನೆಯ ಶತಮಾನದಲ್ಲಿ ಚರ್ಚೆಯು ಪ್ರಾರಂಭವಾಯಿತು. ನಡವಳಿಕೆಯೆನ್ನುವುದು ಮಾನವಶಾಸ್ತ್ರಕ್ಕೆ ಸಂಬಂಧಿಸಿದ್ದು, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ್ದು. ಆಧುನಿಕ ಯುಗದಲ್ಲಿ ಕಾವ್ಯವು ಮನುಷ್ಯನ ಅಭಿರುಚಿಯನ್ನು; ಗುಣ ನಡತೆಯನ್ನು ತಿದ್ದುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದು ಅನಂತರ ಪ್ರತಿಪಾದಿಸಲಾಯಿತು.

ವಿವರಗಳಿಗೆ ನೋಡಿ: Raymond Williams keywords 1983 P.45
Andrew Edgar 1998 key concepts in cultural theory P.37-39

ಮೋಹನ್ ದಾಸ್ ಕರಮಚಂದ್ ಗಾಂಧಿ ೨೦೦೮ ಹಿಂದ್ ಸ್ವರಾಜ್

ನವದುರ್ಗಗಳು

ಒಂಬತ್ತು ರೀತಿಯ ದುರ್ಗಗಳಿರುತ್ತವೆ ಎಂದು ಮಾನಸೋಲ್ಲಾಸದಲ್ಲಿ ಬರುತ್ತದೆ. ಜಲದುರ್ಗ, ಗಿರಿದುರ್ಗ, ಪಾಷಾಣ ನಿರ್ಮಿತ ದುರ್ಗ, ಇಟ್ಟಿಗೆಗಳಿಂದ

ರಚಿತವಾದ ದುರ್ಗ ಹಾಗೂ ನರ ನಿರ್ಮಿತ ದುರ್ಗಗಳು ಮುಖ್ಯವಾದವು. (ಮಾನಸೋಲ್ಲಾಸ- 2-541)

ರಾಜ್ಯವನ್ನು ಕಟ್ಟುವಾಗ ಮತ್ತು ಅದನ್ನು ರಕ್ಷಿಸುವಾಗ ರಾಜನು ಗಮನಿಸಲೇಬೇಕಾಗಿದ್ದ ಅಂಶಗಳಿವು.

ನವನೋಕಷಾಯ

ಮೋಹನೀಯ ಕರ್ಮಭೇದ, ಕಿಂಚಿತ್ ಕಷಾಯ. ಇದು ಒಂಬತ್ತು ವಿಧ- ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ಸ್ತ್ರೀವೇದ, ಪುಂವೇದ ಮತ್ತು ನಪುಂಸಕವೇದ. ಇದು ಜೈನಧರ್ಮದ ಪರಿಭಾಷೆಯಾಗಿದೆ.

ನವವಿಧ ಪುಣ್ಯ

ನವವಿಧ ಪುಣ್ಯ ಮುನಿಗಳು ಚರಿಗೆಗೆ ಬಂದಾಗ ಅವರಿಗೆ ದಾನಮಾಡುವ ಒಂಬತ್ತು ಕ್ರಮಗಳು: ಮೂರು ಪ್ರದಕ್ಷಿಣೆ, ಉಚ್ಚಸ್ಥಾನ, ಪಾದೋದಕ, ಅರ್ಚನ, ಪ್ರಣಾಮ, ವಚನ ಶುದ್ಧಿ, ಕಾಯಶುದ್ಧಿ, ಮನಶ್ಶುದ್ಧಿ, ಏಷಣಾಶುದ್ಧಿ. ಇವು ಜೈನ ಧರ್ಮದ ಪರಿಭಾಷೆಗಳೆಂಬುದು ಗಮನಾರ್ಹ.

ನಾಗಬಂಧ

ನಾಗಬಂಧವೆನ್ನುವುದು ರತಿಕ್ರೀಡೆಯ ಒಂದು ಭಂಗಿ. ನಾಗಗಳು ಮೈಥುನದಲ್ಲಿ ತೊಡಗುವಾಗ ಒಂದಕ್ಕೊಂದು ಬೆಸೆದುಕೊಂಡು ಸುದೀರ್ಘಕಾಲ ಇರುತ್ತವೆ. ಅವಕ್ಕೆ ಆ ಸಂದರ್ಭದಲ್ಲಿ ಬೇರೆ ಅರಿವು ಇರುವುದಿಲ್ಲ. ಹಾವುಗಳು ಎಣೆಯಾಡುವುದನ್ನು ನೋಡಬಾರದೆನ್ನುವ ನಂಬಿಕೆಯಿದೆ. ನಾಗಬಂಧ ಲೈಂಗಿಕ ಕ್ರೀಡೆಯಲ್ಲಿನ ಒಂದು ರೀತಿಯ ಪಟ್ಟು ಎಂದೇ ಹೇಳುತ್ತಾರೆ. ನಾಗಗಳು ಪರಸ್ಪರ ಎಣೆಯಾಡುವಂತೆ ಗಂಡು ಹೆಣ್ಣು ರತಿಬಂಧದಲ್ಲಿ ತೊಡಗುವುದನ್ನು ನಾಗಬಂಧವೆಂದು ಕರೆಯುತ್ತಾರ

ನಾಗರು

ನಾಗರು ಕಂನಾಡಿನಲ್ಲಿ ಬಂದು ನೆಲೆಸಿದ ಬಳಿಕ ಇಲ್ಲಿಯ ಜನಗಳಲ್ಲಿ ಬೆರೆತು ಒಂದಾದರೆಂದು ತೋರುತ್ತದೆ. ನಾಗರ ಕನ್ಯೆಯರು ತುಂಬ ಚೆಲುವೆಯರೆಂದು ಪೂರ್ವಕಾಲದಲ್ಲಿ ಖ್ಯಾತಿಯಿದ್ದಿತು. ಕದಂಬ ರಾಜರು ನಾಗಕನ್ಯೆಯರನ್ನು ಮದುವೆಯಾದರು. ಸಿಂದರೊಡನೆ ಚಾಲುಕ್ಯರಾಜರ ಬೀಗತನವಿದ್ದುದು ತಿಳಿದುಬರುತ್ತದೆ. ಈಗ ಸಿಂದಗಿಯವರೆಂಬ ಕೆಲವು (ಸಿರಿವಂತರ) ಮನೆತನಗಳುಂಟು. ಅವರೆಲ್ಲ ಸಿಂದರ ಬಳಗವೆಂದೇ ನಿಶ್ಚಿತವಾಗಿ ಹೇಳಲಿಕ್ಕಾಗದೆ ಇದ್ದರೂ ಅವು ಐತಿಹಾಸಿಕ ಮಹತ್ವದ ಕುಳಗಳೆಂಬಲ್ಲಿ ಸಂದೇಹವಿಲ್ಲ. ಬನವಾಸಿ ನಾಡಿನಲ್ಲಿ ನಾಗರಖಂಡದ ಭಾಗಕ್ಕೆ ಹತ್ತಿರ ಸುಮಾರಾಗಿ ಹೈವೆ ಅಥವಾ ಹೈಗವೆಂಬ ಹೆಸರುಂಟು.

ಅಲ್ಲಿಯ ಬ್ರಾಹ್ಮಣರಿಗೆ ಹವಿಕರೆಂದು ಕರೆವ ವಾಡಿಕೆಯಿದೆ. ಇವರನ್ನು ಕದಂಬ ಮಯೂರಶರ್ಮನು ಅಹಿಚ್ಛತ್ರದಿಂದ ತಂದನೆಂದು ಒಂದು ಕತೆಯಿದೆ. ಅಹಿಚ್ಛತ್ರದಿಂದ ಬಂದು ನೆಲೆಸಿದ ಈ ಜನರಿರುವ ಪ್ರದೇಶವೆಂದೇ ಇದಕ್ಕೆ (ಅಹಿವೆ?=)ಹೈವೆ ಎಂದು ಹೆಸರು ಬಂದಿರಬಹುದೆ?

ಕಂನಾಡಿನಲ್ಲಿ ಹವ್ಯಕರದೊಂದೇ ಸ್ವತಂತ್ರ ಗುಂಪು ಇದ್ದಂತಿದೆ. ಇವರು ಅಹಿಚ್ಛತ್ರದಿಂದ ಬಂದುದನ್ನೂ ನಾಗರೂ ಅತ್ತಣವರೆ ಆಗಿರುವುದನ್ನೂ ನೋಡಿದರೆ ಗುಜರಾತಿನಲ್ಲಿರುವಂತೆ ಇವರೂ ನಾಗರ ಬ್ರಾಹ್ಮಣರಾಗಿರಬಹುದೆ? ಎಂಬ ಒಂದು ವಿಚಾರವು ತಲೆದೋರುತ್ತದೆ. ಆದರೆ, ನಾಗರ ಬ್ರಾಹ್ಮಣರ ಮತ್ತು ಹವ್ಯಕರ ಗೋತ್ರಸೂತ್ರಗಳ ವಿಚಾರವನ್ನೂ ಮಾಡಬೇಕಲ್ಲದೆ ಆಧುನಿಕ ಶಾಸ್ತ್ರೀಯ ಪದ್ಧತಿಯಿಂದ ರೂಪ ಆಕಾರಾದಿಗಳ ಅಳತೆ (Anthropometrical measurements) ಮಾಡಿದಲ್ಲದೆ ಯಾವ ಕೊನೆಯ ನಿರ್ಣಯವನ್ನೂ ಹೇಳಲಿಕ್ಕಾಗುವುದಿಲ್ಲ. ಮೈಸೂರ ಶಾಸನಗಳಲ್ಲಿ ಅಹಿಚ್ಛತ್ರಪುರ (ವಿಜಯಪುರ), ಅಹಿಚ್ಛತ್ರ ಅಗ್ರಹಾರ ಎಂಬ ಹೆಸರುಗಳು ಆಗಾಗ ಬಂದಿವೆ. ಆದುದರಿಂದ, ಅಲ್ಲಿಂದ ಕಂನಾಡಿಗೆ ಬ್ರಾಹ್ಮಣರೂ ಬೇರೆ ಜನಗಳೂ ಬಂದ ಬಗೆಗೆ ಸಂದೇಹವಿಲ್ಲ.

(ಶಂಬಾ ಜೋಶಿ 1999 ಸಂಪುಟ. 2 ಪುಟ. 181.) ಹವ್ಯಕರು ಒಂದು ಬ್ರಾಹ್ಮಣ ಸಮೂಹ ದಕ್ಷಿಣ ಕನ್ನಡ: ಉತ್ತರ ಕನ್ನಡ ಜಿಲ್ಲೆಗಳಲ್ಲಿ ನೆಲೆಯೂರಿದ್ದಾರೆ.

ನಾಗಾರಾಧನೆ

ನಾಗಪ್ರತಿಮೆಯ ಪೂಜೆಯು ಶಾಕ್ತ, ಶೈವ, ವೈಷ್ಣವ, ಬೌದ್ಧ ಮತ್ತು ಜೈನ ಸಂಪ್ರದಾಯಗಳಲ್ಲಿವೆಯೆಂದು ಶಂಬಾ ಜೋಶಿ ಹೇಳುತ್ತಾರೆ. ನಾಗವು ಸೃಜನ ಶಕ್ತಿಯ ಪ್ರತೀಕವೆಂದು ಅವರ ನಿಲುವು.

"ಪ್ರಂಪಂಚದ ಆದಿದೈವತ ನಾಗ-ಸರ್ಪ; ನಾಗ-ಸರ್ಪ-ಸಂಕೇತಕ್ಕೆ ಕತ್ತಲೆ, ರಾತ್ರಿ, ಚಂದ್ರ, ಆಪ : ರಸ ಎಂಬ ಛಾಯಾರ್ಥಗಳು ಸಂಭವಿಸುವುದನ್ನು ವಿವರಿಸಿದ್ದಾಗಿದೆ.

'ನಾಗಪೂಜೆ' ಎಂದರೆ ಇಂದ್ರಿಯ (ವೃತ್ತಿಗಳ) ಪೂಜೆಯಾಗಿದೆ, ಎಂಬ ಪ್ರಜ್ಞೆ ಮೂಡುತ್ತದೆ! ಈ ವೈಯಕ್ತಿಕ ಪ್ರಜ್ಞೆಯೊಡನೆ ಸಾಮಾಜಿಕ ಪ್ರಜ್ಞೆ (ಸವಿತೃ=ಸೂರ್ಯನ) ಉದಯವಾಗುವುದು ಅನಿವಾರ್ಯ. ಆಗ ಅನಿಷ್ಠ ಪ್ರಕಾರವು ತಲೆಯೆತ್ತಿದ್ದುಂಟು; ಭಾರತೀಯ ನಾಗ-ಸಂಪ್ರದಾಯದ ಸಂಶೋಧಕ ವ್ಹೊಗೆಲ್ ಕಂಡಿರುವಂತೆ. ನಾಗನು ಸಂತನಾಗಿ ಮಾರ್ಪಡುತ್ತಾನೆ! ವೀರ್ಯವಂತನ ಭೋಗವೃತ್ತಿ, ಮೃತ್ಯುವನ್ನು ಅಪ್ಪಿದಂತೆ! ಈ ವಿಪರೀತ ಅನುಭವ ಭೋಗಿಯನ್ನು ತ್ಯಾಗವೀರ ನನ್ನಾಗಿಸುತ್ತದೆ. ಈ ಮಾತು ಭಾರತದಲ್ಲಿ ಮಾತ್ರವಲ್ಲ; ಜಾಗತಿಕ ಸ್ವರೂಪದ ದೃಶ್ಯವಾಗಿದೆ.

ವೃತ್ರ : ಅಹಿ-ಹನ್ ಇಂದ್ರನು ಸೌರನು; ಪ್ರಕಾಶತತ್ತ್ವದ ಪ್ರತಿಮೆ, ಎಂದಲ್ಲಿ

ವೃತ್ರ: ಅಹಿ (:ನಾಗ) ಕತ್ತಲೆಯ ಪ್ರತೀಕವಿರಲೇಬೇಕಾಯ್ತು! ಋಗ್ ವೇದದಲ್ಲಿ ನಾಗಪ್ರತಿಮಾ ಪೂಜೆಯು ಇಲ್ಲವೇ ಇಲ್ಲ ಎಂದು ತಜ್ಞರು ಸಾರಿದ್ದಾರೆ. ಆದರೆ, ಈ ಸಂಹಿತೆಯಲ್ಲಿಯೆ 'ಸಾರ್ಪರಾಜ್ಞೀ ಸೂರ್ಯೋ ವಾ' ಈ ದೈವತ್ವವು ಉಂಟು. ಭಾದ್ರಪದ ಆಶ್ವೀಜಗಳಲ್ಲಿ ಇಂತಹ ದಾರದ ಹಬ್ಬಗಳಿವೆ. ದೀಪಾವಳಿಯ ಪ್ರಾರಂಭದ, ನರಕಚತುರ್ದಶಿ, ನಿಜವಾಗಿ ಹಾವಿಗೆ ಸಂಬಂಧಿಸಿದ್ದೇ. ನರಕ ಇದರ ಉಚ್ಚಾರವು, ನಾರಕ ಎಂದೂ ಉಂಟು. ವಾಜಸನೇಯ ಸಂಹಿತೆ, ಅಥರ್ವವೇದ ಇವುಗಳಲ್ಲಿ 'ನಾರಕ' ಈ ಪದಪ್ರಯೋಗವೆ ಇದೆ. ನರಕಾಸುರನನನು ಯಾದವ ಕೃಷ್ಣನು ಕೊಂದನೆಂದು ಸಾಂಪ್ರದಾಯಿಕ ನಂಬುಗೆಯಿದೆ. ಯಮುನಾ ನದಿಯಲ್ಲಿ ಕೊಲ್ಲಲ್ಪಟ್ಟ ಕಾಲಿಯನಂತೆ ನರಕ : 'ನಾರಕ'ನೆಂಬುವನೂ ಒಬ್ಬ ನಾಗರಾಜನೇ ಸರಿ. ಇದನ್ನು, 'ನಾರ' ಈ ಶಬ್ದ ಸಂಕೇತವೆ ಸಾರಿ ಹೇಳುತ್ತಿದೆ. ಏಕೆಂದರೆ ನಾರ : ನೀರು ಮತ್ತು ನಾಗ (ಹಾವು) ಇವು ಸಮಾನಾರ್ಥಕ (ಶಬ್ದ) ಸಂಕೇತಗಳೂ ಅಹುದು. ಆದರೆ,, 'ನಾರಕ'ನು ನಾಗರೂಪನೆಂಬುದು ಪುರಾಣಕಥೆಗಳಲ್ಲಿ ಬಚ್ಚಿ ಉಳಿದಿದೆ! 'ನಾರಕ'ನು ಸರ್ಪನೆಂದರೆ 'ನಾರಣ'ನೂ ಸರ್ಪನೆಂಬುದು ಬಯಲಿಗೆ ಬರಲಿದೆ! 'ನಾರ'-'ನಾರಕ' ಈ ಶಬ್ದಸಂಕೇತಗಳ ಮೂಲಕ, ನಾಗ ಮತ್ತು ನೀರು ಇವೆರಡರಲ್ಲಿ ಇರುವ ಅನ್ಯೋನ್ಯ ಸಂಬಂಧವು ಬೆಳಕಿಗೆ ಬರುತ್ತಿದೆ. 'ನಾರ' ಎಂದು ನೀರಿಗೆ ಇನ್ನೊಂದು ಹೆಸರು. 'ನಾರಾಯಣ' ವಿಷ್ಣುದೈವತಕ್ಕೆ ಜಲಶಾಯೀ ಎಂಬ ಪರ್ಯಾಯ ನಾಮವಿದೆ. ಇದೇ ಮೇರೆಗೆ ದೇವರ ಶೇಷ-ಶಯನ ಪ್ರತಿಮಾ ಚಿತ್ರಗಳು ಸುಪ್ರಸಿದ್ಧವಾಗಿವೆ. ಈ ಹಿನ್ನೆಲೆಯಲ್ಲಿ ನೀರು : ನಾರ ಮತ್ತು ಹಾವು ಇವು ಸಮಾನಾರ್ಥ ಪದಗಳಾಗುತ್ತವೆ. 'ಆಪೋನಾರಾಃ ಎಂದು ಹೇಳಿ 'ಆಪೋ ವೈ ನರಸೂನವಃ' ಇರುವುದಾಗಿ ಮಹಾಭಾರತವು ಹೇಳುತ್ತಿದೆ. ಆದಕಾರಣ 'ನರಸೂನವಃ' ಎಂದರೆ ನರರ ಸಂತಾನವು, ನೀರಿನ ರೂಪದ್ದೇ ಆಯಿತು. ಇಂತು ನಾರ ಮತ್ತು ನರ, ಇವು ಎರಡೂ ಅಭಿನ್ನ ನಾಗಪ್ರತಿಮೆಯ ಎರಡು ರೂಪಗಳೆ ಎಂಬುದು ಇಲ್ಲಿ ದೃಢಪಡುತ್ತಿದೆ. ನಾಗ ಪೂಜೆ ಎಂದರೆ 'ನಾಗ'ನು ಮೈಯಲ್ಲಿ ಬರುತ್ತಿದ್ದಂತಹ ಒಂದು 'ದಿವ್ಯ' ವ್ಯಕ್ತಿಯ ಪೂಜೆಯಿಂದಲೆ ಈ ಸಂಪ್ರದಾಯವು ಆರಂಭವಾಗಿದೆ ಎಂಬಲ್ಲಿ ಸಂದೇಹವೇ ಇಲ್ಲ."

ವಿವರಗಳಿಗೆ ನೋಡಿ: ಶಂಬಾ ಜೋಶಿ ೧೯೯೯ ಸಂಪುಟ. ೪ ಪುಟ. ೩೨, ೩೪, ೪೩, ೧೧೩, ೧೪೨, ೧೪೪

ನಾಟುನುಡಿ

ಹೃದಯಕ್ಕೆ ನಾಟಬಹುದಾದ ನುಡಿಯನ್ನು ನಾಟುನುಡಿ ಎಂದು ಕರೆಯುತ್ತಾರೆ. ಇದನ್ನು ಇಂಗ್ಲಿಷಿನಲ್ಲಿ ಎಫಿಗ್ರಂ ಎನ್ನುತ್ತಾರೆ. ಸುಭಾಷಿತ, ಮುಕ್ತಕ, ಚಾಟು ಪದ್ಯ ಇವುಗಳಿಗೆ ಸಂವಾದಿಯಾಗಿದೆ. (ತಮಿಳಿನ ಮೂಲ: 'ನಾಟು' ಎಂದರೆ ಗ್ರಾಮ.) ನಾಟುನುಡಿ ಅಂದರೆ ತಮಿಳಿನಲ್ಲಿ ನಾಡಿನ ಜನರ ಮಾತು.

ನಾಡವರ್ಗಳ್

ನಾಡವರ್ಗಳ್ ಎಂದರೆ 'ನಾಡವರು' 'ಆಯಾ ನಾಡಿನ ಮನುಷ್ಯರು' ಎಂದು ಅರ್ಥ. ಇದರ ಕುರಿತು ಕವಿರಾಜಮಾರ್ಗಕಾರನು ಹೀಗೆ ಹೇಳಿದ್ದಾನೆ:

ಇದರಿಂದ ಕನ್ನಡನಾಡಿನ ಆಗಿನ ಸಂಸ್ಕೃತಿಯ ಮಟ್ಟ ಹೇಗಿತ್ತೆಂಬುದು ಗೊತ್ತಾಗುತ್ತಿದೆ. ಆಗ ಸಂಸ್ಕೃತ ಪ್ರಾಕೃತಗಳು ಮಾತ್ರವೇ ಪ್ರಮುಖ ಸಾಹಿತ್ಯಭಾಷೆಗಳು. ಅವುಗಳೊಳಗೆ ಲಕ್ಷ್ಯ ಲಕ್ಷಣಗಳೆಂಬ ಎರಡೂ ಬಗೆಯ ಗ್ರಂಥಗಳು ದೊರೆಯುತ್ತಿದ್ದುದರಿಂದ 'ಬಗೆದಂತೆ ಸಮರ ಪೇಳಲ್' ಎಂದರೆ ಬೇರೆ ಯಾರ ಸಹಾಯಕ್ಕೂ ಎರವಾಗದೆ ಆ ಗ್ರಂಥಗಳಿಂದಲೇ ತಮ್ಮ ಸಂದೇಹಗಳನ್ನು ಬಗೆಹರಿಸಿಕೊಂಡು, ಹೊಸ ಪ್ರಬಂಧಗಳನ್ನು ನಿರ್ಮಿಸಬಹುದಾಗಿತ್ತು. ಕನ್ನಡದ ಪರಿಸ್ಥಿತಿ ಹಾಗಿದ್ದಿಲ್ಲ. ಕನ್ನಡಕ್ಕೆ ನಾಡವರೇ ಒವಜರಾಗಿದ್ದರು. 'ತಿರಿಕೊರಗೊಂಡು' (ಇತರ ಲಕ್ಷಣಗ್ರಂಥಗಳನ್ನೋದಿ ಅವಗಾಹಿಸಿಕೊಂಡು) ಕನ್ನಡ ಕವಿ ಲೇಖಕರಿಗೆ ಬೋಧಿಸಲು ಅವರಿಗೆ ಅಸಾಧ್ಯವಾಗಿತ್ತು. 'ಕನ್ನಡಕ್ಕೆ ನಾಡವರೊವಜರ್' ಎಂಬುದು, ಮೇಲಿಂದ ಮೇಲೆ ನಾಡವರನ್ನು ಹೊಗಳಿದಂತೆ ಭಾಸವಾಗುತ್ತಿದೆ. ಆದರಿದು, ಕನ್ನಡ ಸಾಹಿತ್ಯದೊಳಗಿದ್ದ ನ್ಯೂನತೆಯನ್ನೇ ಗ್ರಂಥಕಾರನು ಯಾರಿಗೂ ನೋವಾಗದಂತೆ ಬಣ್ಣಿಸಿದ ಬಗೆ ಎಂಬುದನ್ನು ಮರೆಯಲಾಗದು. 'ಕನ್ನಡಕ್ಕೊವಜರಾದ ನಾಡವರು, ಪರಮಾಚಾರ್ಯರವೋಲ್ ಸೈತಿರಲಜೆಯರ್' ಎಂಬುದರಿಂದ ಆ ಭಾವನೆ ಸಿದ್ಧವಾಗುತ್ತಿದೆ."

ವಿವರಗಳಿಗೆ ನೋಡಿ: ಮುಳಿಯ ತಿಮ್ಮಪ್ಪಯ್ಯ ೧೯೭೭ ಶ್ರದ್ಧಾಂಜಲಿ ಸಂಪುಟ. ೨ ಪುಟ. ೪೦೪.

ನಾಡಾಡಿ

ನಾಡಾಡಿಗಳೆಂದರೆ ಜನಸಾಮಾನ್ಯರು. ನಾಡಾಡಿ ಎಂದರೆ ಸಾಮಾನ್ಯ ಮನುಷ್ಯ. ಒಂದು ನಾಡಿನಲ್ಲಿ ವಾಸಿಸುತ್ತಿರುವವನು. ದೇಸಿಗ; ಹಾಳಾದವನು ಎಂಬರ್ಥ. ಕಿಟ್ಟೆಲ್ ನಿಘಂಟಿನಲ್ಲಿದೆ. ನಾಡಾಡಿಯೆನ್ನುವುದಕ್ಕೆ ಅನಂತರ ಹೀನಾರ್ಥವು ಬಂದಿತು. ನಾಡಾಡಿಯೆಂದರೆ ಸಾಮಾನ್ಯ ಮನುಷ್ಯರು ವರ್ಗೀಕರಿಸಿದಾಗ 'ನಾಗರಿಕ' 'ಅನಾಗರಿಕ' ಎಂಬ ಅರ್ಥವು ಬರುತ್ತದೆ.

ವಿವರಗಳಿಗೆ ನೋಡಿ: ಮರಿಯಪ್ಪ ಭಟ್ಟ ಎಂ. ೧೯೭೧ ಕಿಟ್ಟೆಲ್‌ರ ಕನ್ನಡ-ಇಂಗ್ಲೀಷ್ ನಿಘಂಟು ಪುಟ. ೬೦೩

ನಾಣ್ಯ

ಇದೇ ಕಾಲಾವಧಿಯಲ್ಲಿ ಈಶಾನ್ಯ ಭಾರತದಲ್ಲಿ ಹಲವು ನಗರಗಳು ತಲೆಯೆತ್ತಿದುವು. ಅಲಹಾಬಾದಿನ ಬಳಿಯ ಕೌಶಾಂಬಿ, ಉತ್ತರ ಪ್ರದೇಶದ ದಿಯೋರಿಯಾ

ಜಿಲ್ಲೆಯಲ್ಲಿರುವ ಕುಶೀ ನಗರ, ವಾರಣಾಸಿ, ಬಿಹಾರದಲ್ಲಿರುವ ವೈಶಾಲಿ, ಚಿರಾಂಡ್ ಮತ್ತು ರಾಜಗೃಹಗಳು ಉತ್ತಮ ಉದಾಹರಣೆಗಳು. ಈ ನಗರಗಳಲ್ಲೆಲ್ಲಾ ಕುಶಲ ಕಸುಬುಗಾರರು ಮತ್ತು ವ್ಯಾಪಾರಿಗಳು ನೆಲೆಸಿದ್ದು ಅವರು ಮೊಟ್ಟಮೊದಲಿಗೆ ನಾಣ್ಯಗಳನ್ನು ಬಳಸಲಾರಂಭಿಸಿದರು. ಈ ಅತ್ಯಂತ ಪ್ರಾಚೀನ ನಾಣ್ಯಗಳು ಕ್ರಿ.ಪೂ. ಐದನೆಯ ಶತಮಾನದವು. ಅವುಗಳನ್ನು ಕಚ್ಚು ಗುರುತಿನ ಅಥವಾ ಪಂಚ್‌ಮಾರ್ಕ್ಡ್ ನಾಣ್ಯಗಳೆಂದು ಕರೆಯುತ್ತಾರೆ. ಅವು ಪೂರ್ವ ಉತ್ತರ ಪ್ರದೇಶದಲ್ಲಿ ಹಾಗೂ ಬಿಹಾರದಲ್ಲಿ ಚಲಾವಣೆಗೆ ಬಂದವು. ಈ ನಾಣ್ಯಗಳು ವ್ಯಾಪಾರ ವ್ಯವಹಾರಗಳನ್ನು ಬಲಪಡಿಸಿದವು. ಇದರಿಂದ ವರ್ಣವಿಭಜಿತ ಸಮಾಜದಲ್ಲಿ ಮೂರನೆಯ ಸ್ಥಾನದಲ್ಲಿದ್ದ ವೈಶ್ಯರು ತಮ್ಮ ಸ್ಥಾನವನ್ನು ಉನ್ನತಗೊಳಿಸುವ ಬೇರಾವುದಾದರೂ ಮತಧರ್ಮದತ್ತ ಗಮನ ಹರಿಸತೊಡಗಿದರು. ಸಹಜವಾಗಿ ಅವರು ಮಹಾವೀರ ಮತ್ತು ಗೌತಮ ಬುದ್ಧರಿಗೆ ಧಾರಳವಾಗಿ ಬೆಂಬಲ ನೀಡಿದರು. ಸೇಠಿಗಳೆಂದು ಹೆಸರಾಗಿದ್ದ ವ್ಯಾಪಾರಸ್ಥರು ಗೌತಮ ಬುದ್ಧನಿಗೂ ಅವನ ಶಿಷ್ಯರಿಗೂ ಕೊಡುಗೈಯಿಂದ ಕಾಣಿಕೆಗಳನ್ನಿತ್ತರು. ಇದಕ್ಕೆ ಹಲವು ಕಾರಣಗಳನ್ನು ಗುರುತಿಸಬಹುದು. ಆರಂಭ ಹಂತದಲ್ಲಿ ಜೈನ ಹಾಗೂ ಬೌದ್ಧ ಮತಗಳು ಪ್ರಚಲಿತವಾಗಿದ್ದ ವರ್ಣ ವ್ಯವಸ್ಥೆಗೆ ಮಹತ್ವ ನೀಡಲಿಲ್ಲ. ಎರಡನೆಯದಾಗಿ ಅವೆರಡು ಮತಗಳೂ, ರಾಜ್ಯ ರಾಜ್ಯಗಳ ನಡುವಣ ಯುದ್ಧಗಳಿಗೆ ತಡೆ ವಿಧಿಸಿ, ವ್ಯಾಪಾರ ವಾಣಿಜ್ಯಗಳಿಗೆ ಪ್ರೋತ್ಸಾಹ ನೀಡಬಹುದಾಗಿದ್ದಂತಹ ಅಹಿಂಸೆಯನ್ನು ಪ್ರತಿಪಾದಿಸುತ್ತಿದ್ದುವು. ಮೂರನೆಯದಾಗಿ ಬ್ರಾಹ್ಮಣೀಯ ನ್ಯಾಯಶಾಸ್ತ್ರ ಗ್ರಂಥಗಳಾದ ಧರ್ಮಸೂತ್ರಗಳು ಬಡ್ಡಿಯ ಮೇಲೆ ಹಣವನ್ನು ಸಾಲ ನೀಡುವುದನ್ನು ಧಿಕ್ಕರಿಸಿ, ಅಂತಹವರನ್ನು ಖಂಡಿಸುತ್ತಿದ್ದುವು. ಆ ಕಾರಣದಿಂದ ವಿಸ್ತಾರಗೊಳ್ಳುತ್ತಿದ್ದ ವ್ಯಾಪಾರ ವಾಣಿಜ್ಯಗಳಿಗಾಗಿ ಬಡ್ಡಿಗೆ ಹಣ ನೀಡುತ್ತಿದ್ದ ವೈಶ್ಯರಲ್ಲಿ ಸಮಾಜವು ಗೌರವ ಭಾವ ತಳೆದಿರಲಿಲ್ಲ. ಅವರು ತಮಮ್ ಸ್ಥಾನಮಾನಗಳನ್ನು ಉತ್ತಮ ಪಡಿಸಿಕೊಳ್ಳುವುದಕ್ಕೆ ಕಾತುರರಾಗಿದ್ದರು. (ಆರ್. ಎಸ್. ಶರ್ಮ ೧೯೯೭. ಪು.೯೧-೯೩)

ನಾಮಕರಣ

ಜಾತಕರ್ಮದ ಸಂದರ್ಭದಲ್ಲಿ ತಂದೆಯು ಮಗುವಿಗೆ ಇಡುವ ಹೆಸರನ್ನು ಮಗುವಿನ ಕಿವಿಯಲ್ಲಿ ಮೂರು ಬಾರಿ ಹೇಳಿದ ಬಳಿಕ ಮಗುವಿಗೆ 'ಬಾಯೆಣ್ಣೆ'ಯನ್ನು ಇಕ್ಕುವ ಪದ್ಧತಿಯನ್ನು ಹರಿಹರನು ಪ್ರಸ್ತಾಪಿಸಿದ್ದಾನೆ. ಮಗುವಿಗೆ 'ಬಾಯೆಣ್ಣೆ'ಯನ್ನು ಇಕ್ಕುವ ಕ್ರಮದ ಬಗ್ಗೆ ಇತರೆಡೆಗಳಲ್ಲಿಯೂ ಮಾಹಿತಿ ದೊರೆಯುತ್ತದೆ. ನಾಮಕರಣವು ತಂದೆ ತಾಯಿ ಮತ್ತು ಮಗುವಿಗೆ ಮಾತ್ರ ತಿಳಿದಿರಬೇಕು ಎನ್ನುವ ನಂಬಿಕೆಯಿತ್ತು. ಅದಕ್ಕಾಗಿ ಮಗುವಿಗೆ ಕಿವಿಯಲ್ಲಿ ಮಾತ್ರ ಹೆಸರನ್ನು ಹೇಳುವ ಪದ್ಧತಿ ರೂಢಿಯಲ್ಲಿತ್ತು. ಇದಕ್ಕೆ ಲಿಂಗ ವ್ಯತ್ಯಾಸಗಳಿರಲಿಲ್ಲ. ಆಮೇಲೆ ತಂದೆಯು ತನ್ನ ನಾಲ್ಕನೆಯ ಬೆರಳಿನಲ್ಲಿ ಮೂರು ಬಾರಿ 'ಬಾಯೆಣ್ಣೆ'ಯನ್ನು ಮಗುವಿನ ಬಾಯಿಗೆ ಇಡುವ ಕ್ರಮವಿತ್ತು.

ಮಗುವಿಗೆ ನಾಮಕರಣ ಮಾಡುವುದು ಸರ್ವೇಸಾಮಾನ್ಯ ವಿಷಯ. ಈ ನಾಮಕರಣಕ್ಕಾಗಿ ಹೆಸರನ್ನು ಆಯ್ಕೆ ಮಾಡುವುದು ಜನಪದರಿಗೆ ಸಮಸ್ಯೆಯಾಗಿ ಕಾಡಿಲ್ಲ. ಅವರು ಸಹಜವಾಗಿ ಅಜ್ಜ-ಅಜ್ಜಿಯರ ಹೆಸರುಗಳನ್ನೇ ಮೊಮ್ಮಕ್ಕಳಿಗೆ ಇಡುವುದನ್ನು ಕಾಣುತ್ತೇವೆ. ಕೆಲವೊಮ್ಮೆ ಗುರುವಿನ ಇಲ್ಲವೆ ದೇವರ ಹೆಸರುಗಳನ್ನು ಇಟ್ಟು ಬಿಡುತ್ತಾರೆ. ಮುಖ್ಯವಾಗಿ ನಾಮಕರಣವನ್ನು ಹುಟ್ಟಿ ಹತ್ತು ಅಥವಾ ಹದಿನೈದು ದಿನಗಳಲ್ಲಿ ಮಾಡಬೇಕು. ಇತರ ಶುಭದಿನಗಳಲ್ಲಿಯೂ ಆಗಬಹುದು. ನಕ್ಷತ್ರ, ಮರ, ನದಿ, ಅಂತ್ಯಜ, ಪರ್ವತ, ಪಕ್ಷಿ, ನಾಗಭಯಂಕರ ಇತ್ಯಾದಿ ಅರ್ಥದ ಹೆಸರು ಹುಡುಗಿಗೆ ಇರಬಾರದು. ಸ್ತ್ರೀಯನ್ನು ಯಾವಾಗಲೂ ಭವತಿ, ಸುಭಗೀ, ಶೋಭನೆಯೆಂದು ಕರೆಯಬೇಕು ಎಂದು ಮನು ಹೇಳುತ್ತಾರೆ. ಹುಟ್ಟಿದ ಮಗುವಿಗೆ ಯಾವುದಾದರೂ ಕಾಯಿಲೆ ಬಂದರೆ ಅಥವಾ ಮಗು ದೇವರ ಹರಕೆಯಿಂದ ಹುಟ್ಟಿದರೆ ಆ ಮಗುವಿಗೆ ಆಯಾ ದೇವರ ಹೆಸರಿಡುವುದು ರೂಢಿ. ಇಲ್ಲಿಯೂ ಅದೇ ಅಮಶವು ಮುಖ್ಯವಾಗಿದೆ. ವ್ಯತ್ಯಾಸವೆಂದರೆ-ಮೇಲು ಜಾತಿಯ ಜನರಿಗೆ ಒಂದು ರೀತಿಯ ಹೆಸರು ಕೆಳ ಜಾತಿಯ ಜನರಿಗೆ ಮತ್ತೊಂದು ರೀತಿಯ ಹೆಸರಿರುತ್ತದೆ. ಮತ್ತು ಮೇಲು ಜಾತಿಯ ಜನರಲ್ಲಿ ಅಜ್ಜನ ಹೆಸರನ್ನು ಮೊಮ್ಮಗನಿಗೆ ಇಡುತ್ತಾರೆ. ಮಗುವಿನ ತಂದೆಯ ಹೆಸರನ್ನು ಮೊದಲನೆಯ ಮಗನಿಗೆ ; ತಾಯಿಯ ಹೆಸರನ್ನು ಮೊದಲ ಮಗಳಿಗೆ; ತಾಯಿಯ ತಂದೆ (ಅಜ್ಜ) ಎರಡನೆಯ ಮಗನಿಗೂ ತಾಯಿಯ ತಾಯಿಯ ಹೆಸರನ್ನು ಎರಡನೆಯ ಮಗಳಿಗೂ ಇಡುವುದು ರೂಢಿ. ಆದರೆ ಇದೇ ಮಾದರಿಯ (ಅನುವಂಶಿಕ ಹೆಸರು) ಹೆಸರಿಡುವ ಕ್ರಮವು ಬುಡಕಟ್ಟು ಜನರಲ್ಲಿಲ್ಲ. ಮತ್ತು ಬುಡಕಟ್ಟು ಜನರ ಹೆಸರು ಅವರು ಹುಟ್ಟಿದ ದಿನ ಅಥವಾ ಕೌಟುಂಬಿಕ ಹಿರಿಯರ ಆಸಕ್ತಿಯ ಮೇಲೆ ನಿರ್ಧಾರಿತವಾಗುತ್ತದೆ. ಸೋಮವಾರ ಹುಟ್ಟಿದರೆ ಚೋಮ (ಸೋಮ ಚೋಮ: ಪುಲ್ಲಿಂಗ) ಚೋಮ (ಸ್ತ್ರೀಲಿಂಗ) ಮಂಗಳವಾರ ಹುಟ್ಟಿದರೆ (ತುಳುವಿನಲ್ಲಿ ಮಂಗಳವಾರಕ್ಕೆ ಅಂಗಾರ ಎಂದು ಕರೆಯುತ್ತಾರೆ) ಅಂಗಾರ. ಗಂಡು ಮಗುವಾದರೆ ದೇವಸ್ಥಾನಕ್ಕೆ ಬಂದು ಚವಲ (ಮೊದಲನೆಯ ಬಾರಿ ದೇವರಿಗೆ ಮುಡಿಯೊಪ್ಪಿಸುವುದು ಅಥವಾ ಕ್ಷೌರಮಾಡಿಸುವುದು) ಮಾಡಿಸುವುದು ಒಂದು ಸಾಂಸ್ಕೃತಿಕ ನಂಬಿಕೆಯಾಗಿದೆ. ಸಂಪ್ರದಾಯವಂತರಲ್ಲಿ ಮಕ್ಕಳಿಗೆ ಕುಲಾಚಾರದ ದೇವರ ನಾಮಗಳಂತೆ, ಆ ದೇವರ ಆಯುಧಾದಿ ಹೆಸರುಗಳೂ ಮನೆತನದಲ್ಲಿ ನಡೆದು ಬಂದಿದೆ. 'ಬಸವ' ಶಿವನ ವಾಹನ; ಮಯೂರ ಸೇನಾನಿ ಸ್ಕಂದನ ವಾಹನ, ಕದಂಬ ವಂಶದಲ್ಲಿ 'ಶಿವ-ರಥ' ರಾಜನಾದವನು; ಸಿಂಘಣ ಇದೇ ಬಗೆಯ ಹೆಸರು. ಎರಡನೆಯ ಪುಲಿಕೇಶಿಯ ತಂದೆ ಕೀರ್ತಿವರ್ಮನನ್ನು 'ಕತ್ತಿ'ಯರಸರನೆಂದು ಸಂಬೋಧಿಸಿದ ತಾಮ್ರಪಟವುಂಟು. ಇದಕ್ಕೆ ಸಂಬಂಧಿಸಿದಂತೆ ಶಂ.ಬಾ. ಅವರ ವಾದ ಹೀಗಿದೆ:

"ಹೆಣ್ಣು ಮಕ್ಕಳಿಗೆ ನದೀ ಹೆಸರನ್ನು ಇಡಕೂಡದು ಎಂಬ ವಾಡಿಕೆಯುಂಟಾಗಲು ಕಾರಣವೇನಿರಬಹುದು? ನದಿಯು ಕೆಳಕೆಳಗೆ ಇಳಿಯುತ್ತ ಹೋಗುವಳು (ಆಪಗಾ).

ಕೆಳಗೆ ಹರಿಯುತ್ತ ಹೊರಡುವುದು ಅಧೋಮಾರ್ಗದಲ್ಲಿ ಸಾಗಿದಂತೆ. ಆದಕಾರಣ ಸ್ತ್ರೀಯರಿಗೆ ನದಿಯ ಹೆಸರು (ಇಂತಹ ಆದರ್ಶವು) ಅವರಿಗೆ ಬೇಡ; ಎಂದು ಈ ನಿರ್ಬಂಧದ ಕಾರಣವನ್ನು ಹೇಳಲಾಗುತ್ತದೆ. 'ನಾರಿ : ನೀರೆ' ಈ ಪ್ರಾಚೀನ ಸಂಕೇತ (ಪ್ರತಿಮೆ) ಸಂಸ್ಕೃತ ಸಂಪ್ರದಾಯವಂತರಲ್ಲಿ ಮರೆತು ಹೋದುದು ಸ್ಪಷ್ಟವಿದೆ. (ನಾರಿ) ನೀರೆಯರ ನೀರು ಅವರನ್ನು ಸನ್ಮಾರ್ಗದಿಂದ ದೂರ ಒಯ್ಯುವುದು ಎಂಬ ಅನುಭವ ಬಂದ ಸಮಾಜದಲ್ಲಿ ಈ ನಿರ್ಬಂಧ ಅವಶ್ಯವೆನಿಸಿರಲಿಕ್ಕೆಬೇಕು. ನೀರು ಕೆಳಕೆಳಗೆ ಹೋಗುವುದು ನಿಸರ್ಗದ ನಿಯಮವೆ ಆಗಿದೆ. ಮಹಿಳೆಯರಿಗೆ ಗಂಗಾ, ಗೋದಾ, ಯಮುನಾ, ಕಾವೇರಿ, ಕೃಷ್ಣವೇಣಿ ಈ ಬಗೆಯ ನದೀನಾಮ ಇರಲೇಬಾರದಾಗಿತ್ತು. ಏಕೆಂದರೆ, ನದಿಗಳು ಎಂದೂ ಮೇಲ್ಗಡೆ ಹರಿಯುವದಕ್ಕೆ ಪ್ರಾರಂಭಿಸಿಲ್ಲ. ನದಿಯ ಹಸರು ಸ್ತ್ರೀಲಿಂಗವಾಚಿ. ಹೆಣ್ಣು ಕೂಸುಗಳಿಗೆ ಇಡಲು ಯೋಗ್ಯವಾದುದು. ಜಲತತ್ವವು ಉತ್ಪತ್ತಿ ಲಕ್ಷಣವುಳ್ಳದ್ದೆಂದು ಹೆಣ್ಣಿಗೆ ನದಿಯ ಹೆಸರು ಇಡಬೇಕೆಂಬ ಪದ್ಧತಿಯು ಬಂದಿರಬಹುದು. ಆದರೆ, ಆ ರೀತಿ ನಾಮಕರಣ ಸಲ್ಲದು ಎಂಬುದಕ್ಕೆ ನದಿಯ ಗತಿ ಅಧೋಗತಿ ಎಂಬುದು ಕಾರಣವಾಗಿರಬೇಕು ಎಂಬ ವಿಧಾನವನ್ನು ಗ್ರಂಥದಲ್ಲಿ ಮಾಡಿದೆ. ಆದರೆ, ಇದು ಸಮಾಜಶಾಸ್ತ್ರದ ವಿಷಯವಾಯಿತು. ಅಲ್ಲಿ ರೂಢಿ ಸಂಪ್ರದಾಯಗಳಿಗೆ ಸಾಮಾಜಿಕ ಬೆಲೆಯು ಇರುವುದು. ಸ್ತ್ರೀಯು ಪ್ರಧಾನವಾಗಿದ್ದ ಸಮಾಜದಲ್ಲಿ ಸ್ತ್ರೀಯ ಯಾವ ಗುಣವೂ ಗೌರವವನ್ನೇ ತೋರುವುದು. ಅವಳೇ ಪದ್ಧತಿಯ ಬೆಲೆಯನ್ನು ನಿರ್ಣಯಿಸುವವಳು. "ನಾನು ಬೇಕಾದರೆ ನೀನು ಬಾ" ಎಂದು ಗಂಡಸಿಗೆ ಆಜ್ಞೆ ಹೇಳಿ ತಾನು ತನ್ನ ಮನೆಯಲ್ಲಿ ಅಧಿಕಾರಿಯಾಗಿ ಇರಬಹುದು. ಗಂಡಸು ತಾನು ಎಲ್ಲಿಂದಲೋ ಬಂದವ ಎಂಬ ಅತಿಥಿಯ ಹಾಗೆ ಬಂದು ಹೋಗಬೇಕಾಗುವುದು. ಅವನಿಗೆ ಆ ಮನೆಯಲ್ಲಿ, ಮಕ್ಕಳ ಬಗ್ಗೆ ಯಾವ ಅಧಿಕಾರವೂ ಇರದು. ನದಿಯ ನಾಮಕರಣಕ್ಕೆ ಉಂಟಾದ ಅಗೌರವವು ಸ್ತ್ರೀಪ್ರಧಾನ–ಮಾತೃಪ್ರಧಾನ ಸಮಾಜವ್ಯವಸ್ಥೆಯ ಲಕ್ಷಣವಲ್ಲ. 'ನಾಗ' ಈ ಹೆಸರನ್ನು ಇಡುವುದು ಮಕ್ಕಳ 'ಆಲಂಕರಣ ಎಂದುದಕ್ಕೆ ಕಾರಣವಿದೆ : ಅಲಂಕೃ–ಆರಂಕೃ ಎಂಬ ಮಾತು ವೇದಗಳಲ್ಲಿ ಬರುತ್ತದೆ. ಅಲ್ಲಿರುವ ಮೂಲಾರ್ಥವು ಒಂದು ಕಾಲದ ನಮ್ಮ ನಂಬುಗೆಗಳ ಸ್ವರೂಪವನ್ನು ಬೆಳಕಿಗೆ ತರುತ್ತಿದೆ. 'ಅಲಂ' – 'ಅರಂ' ಈ ಪದಕ್ಕೆ ಯೋಗ್ಯ ಎಂಬ ಅರ್ಥವಿದ್ದು, ಸಾಕಷ್ಟು ಸಾಮರ್ಥ್ಯಯೋಗ್ಯತೆ, ಶಕ್ತಿ ಪ್ರಾಪ್ತವಾಗಲೆಂದು ಮಂತ್ರಸಾಮರ್ಥ್ಯಯುಕ್ತ 'ದಿವ್ಯ' ನಾಮವನ್ನು ಧಾರಣ ಮಾಡಲಾಗುತ್ತಿತ್ತು."

ಸ್ತ್ರೀಯನ್ನು ಯಾವಾಗಲೂ ಭವತಿ, ಸುಭಗೀ, ಶೋಭನೆಯೆಂದು ಕರೆಯಬೇಕು. (ಮನುಸ್ಮೃತಿ. ೧–೧೪೫)

ಪರಾಸ್ಪರ ಗೃಹ್ಯಸೂತ್ರದ ಪ್ರಕಾರ ಹೆಸರುಗಳು ಉಚ್ಚರಿಸಬಲ್ಲಂತಹ ಅಪೂರ್ಣ ಸ್ವರಾಕ್ಷರದಿಂದ ತದ್ಧಿತ ಪ್ರತ್ಯಯವಲ್ಲದ ಕೃತ್ ಪ್ರತ್ಯಯವುಳ್ಳ ವಿಸರ್ಗದಿಂದ ಅಂತ್ಯವಾಗುವ

ಎರಡು ಇಲ್ಲವೆ ನಾಲ್ಕು ಅಕ್ಷರ ಉಳ್ಳದ್ದಾಗಿರಬೇಕು. ಉಳಿದ ಗೃಹ್ಯಸೂತ್ರಗಳು ಬೇರೆ ಸೂಚನೆ ನೀಡುತ್ತವೆ. ಹೆಣ್ಣುಮಕ್ಕಳ ಹೆಸರುಗಳು ಅಸಮ ಸಂಖ್ಯೆಯ ಅಕ್ಷರದಿಂದ ಕೂಡಿ ತದ್ಧಿತವಾದ ಆ ಅಂತ್ಯವಾಗಿ ಕೇಳಲು ಕಠೋರವಿಲ್ಲದೆ, ಸುಲಭೋಚ್ಚಾರವೂ ಸ್ಪಷ್ಟವೂ, ಶುಭಪ್ರದವೂ, ಮೋಹಕವೂ, ಅನುಗ್ರಹಪೂರ್ವಕವಾಗಿದ್ದು ದೀರ್ಘ ಸ್ವರಾಕ್ಷರದಿಂದ ಅಂತ್ಯಗೊಂಡಿರಬೇಕು. ನಕ್ಷತ್ರಗಳು, ವೃಕ್ಷ, ನದಿ, ಬೆಟ್ಟ, ಪಕ್ಷಿ, ಸೇವಕ ಇಲ್ಲವೆ ಭೀತಿ ಸೂಚಕವಾದ ಯಾವ ಹೆಸರನ್ನು ಇಡಬಾರದು.

ಹೆಸರಿಡುವ ವಿಧಾನಗಳು ನಾಲ್ಕು:

1. ಜನನ ನಕ್ಷತ್ರಕ್ಕೆ ಹೊಂದುವ ಹೆಸರು
2. ಆಯಾಮಾಸದ ಹೆಸರು
3. ಮನೆದೇವರಿಗೆ ಹೊಂದುವ ಹೆಸರು
4. ಆಯಾ ಸಂಸಾರದ ವಿದ್ಯೆ ಮತ್ತು ಸಂಸ್ಕೃತಿಯನ್ನು ಹೊಂದುವ ಹೆಸರು

(ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.2 1971 ಪುಟ. 296)

ಮುಖ್ಯವಾಗಿ ನಾಮಕರಣವನ್ನು ಹುಟ್ಟಿ ಹತ್ತು ಅಥವಾ ಹದಿನೈದು ದಿನಗಳಲ್ಲಿ ಮಾಡಬೇಕು. ಇತರ ಶುಭದಿನಗಳಲ್ಲಿಯೂ ಆಗಬಹುದು. ನಕ್ಷತ್ರ, ಮರ, ನದಿ, ಅಂತ್ಯಜ, ಪರ್ವತ, ಪಕ್ಷಿ, ನಾಗಭಯಂಕರ ಇತ್ಯಾದಿ ಅರ್ಥದ ಹೆಸರು ಹುಡುಗಿಗೆ ಇರಬಾರದು. (ಮನುಸ್ಮೃತಿ 3–9)

ಎಲ್ಲರಿಗೂ ಮದುವೆ ಆಗುವಾಗ ಮೊದಲಿನ ಮದುವೆಗೆ ತನ್ನ ಜಾತಿಯ ಹುಡುಗಿ ಆಗಬೇಕು. ಕಾಮಕ್ಕಾಗಿ ಮಾತ್ರ ಆಗುವ ಮದುವೆಗೆ ಜಾತಿನಿಯಮವಿಲ್ಲ. (ಮನುಸ್ಮೃತಿ 3–12)

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಹಾಲುಮತ ದರ್ಶನ ಸಂಪುಟ. 3 ಪುಟ. 121, 165, 198

Devi Prasad Chattopadyaya 1981 Lokayata P. 235,328,357,168-170

Apte V.M. 1954 Religious life in the Griha Sutras P. 68

ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 3–9, 1–145

ನಾಯಿಕೆಯರು

ನಾಯಿಕೆಯರು ಅಬಲಾ, ಕಾಮಿನಿ, ಮುಗ್ಧ, ವಿದಗ್ಧ ಎಂದು ನಾಲ್ಕು ವಿಧ. ಅದನ್ನು ತಿಳಿದು ಅದಕ್ಕೆ ಅನುಸಾರವಾಗಿ ಅವರನ್ನು ಸಂಭೋಗಿಸಬೇಕು. ಅವರಲ್ಲಿ ಭಿನ್ನ ರೀತಿಯ ಮನೋಸ್ಥಿತಿಯಿರುತ್ತದೆ. ಲಜ್ಜಿತ ಎಂದರೆ ರತಿಯಲ್ಲಿ ನಾಚಿಕೆಯನ್ನು

ಪಡುವವಳು, ನಿಸ್ತ್ರಪಾ–ನಾಚಿಕೆಯನ್ನು ವರ್ಜಿಸಿದವಳು, ಧೃಷ್ಟಾ–ದಿಟ್ಟತನದಿಂದ ರತಿಯಲ್ಲಿ ಭಾಗವಹಿಸುವವಳು, ಕರ್ಕಶಾ–ಒರಟಾಗಿ ವರ್ತಿಸುವವಳು, ಕಾಮಲಲಸಾ–ಸಂಭೋಗದಲ್ಲಿ ಅತ್ಯಾಸಕ್ತಿಯನ್ನು ಹೊಂದಿರುವವಳು, ಸ್ತ್ರೀಯರ ಮನೋಧರ್ಮವು ಹಾಗೆ ಭಿನ್ನವಾಗಿರುತ್ತದೆಯೋ ಅದೇ ಅವರ ಪ್ರಕೃತಿಯು ಭಿನ್ನವಾಗಿರುತ್ತದೆ. ದ್ರುತ, ಮಧ್ಯ, ವಿಲಂಬಿತವೆಂದೂ, ಕಫ, ಪಿತ್ತ, ಅನಿಲ, ಆತ್ಮಕವೆಂದು ಭಿನ್ನವಾಗಿರುತ್ತದೆ. ಮುಗ್ಧ ನಾಯಿಕೆಯಾದರೆ ಅವಳನ್ನು ಕತ್ತಲೆಯಲ್ಲಿ ಸಂಭೋಗಿಸಬೇಕು. ಅವಳಿಗೆ ನೋವನ್ನು ಉಂಟುಮಾಡಬಾರದು. ಧೃಷ್ಟಾ ನಾಯಿಕೆಯನ್ನು ಬೆಳಕಿನಲ್ಲಿ ಸಂಭೋಗಿಸಬೇಕು. ಕರ್ಕಶಾ ನಾಯಿಕೆಯಲ್ಲಿ ಒರಟು ಸಂಭೋಗವೇ ಹಿತ. ಅವಳಿಗೆ ರತಿಯಲ್ಲಿ ಏಟು ಕೊಡುವುದು, ಹಲ್ಲಿನಿಂದ ಗೀಚುವುದು, ಉಗುರಿನಿಂದ ಗೀರುವುದು ಮುಂತಾದವುಗಳನ್ನು ಮಾಡಬೇಕು. ಕಾಮಿನಿಯಾದ ಸ್ತ್ರೀಯನ್ನು ನಾನಾ ವಿಧವಾದ ಕರಣ, ಆಲಿಂಗನಗಳಿಂದಲೂ ಸುರತವನ್ನು ಮಾಡಬೇಕು. ದ್ರುತಾ ಸ್ತ್ರೀಯು ಬೇಗನೇ ದ್ರವಿಸುವವಳು. ಅವಳನ್ನು ನೇರವಾಗಿ ಸಂಭೋಗಿಸಬೇಕು. ಮಧ್ಯಾ ನಾಯಕಿಯು ಪಿತ್ತ ಪ್ರಕೃತಿಯವಳು. ಬಾಹ್ಯ ಮತ್ತು ಅಭ್ಯಂತರವೆಂಬ ಎರಡು ವಿಧದಲ್ಲಿ ಅವಳನ್ನು ಸುರತವನ್ನು ಅನುಸರಿಸಬೇಕು. ವಿಲಂಬ ಸ್ತ್ರೀಯು ವಾತ ಪ್ರಕೃತಿಯವಳು. ಅವಳಲ್ಲಿ ಬಾಹ್ಯ ರತವನ್ನು ಆಚರಿಸಬೇಕು. ಅವಳಲ್ಲಿ ರತೇಚ್ಛೆಯು ಪ್ರಕಟಿತವಾದಾಗ ಸಂಭೋಗವನ್ನು ಆಚರಿಸಬೇಕು. ಕುರಂಗೀ ಎಂಬ ಜಾತಿಯ ಸ್ತ್ರೀಯನ್ನು ಉದ್ಯಾನ, ಹುಲ್ಲುಗಾವಲು ಮೊದಲಾದ ಪ್ರದೇಶಗಳಲ್ಲಿ ಸಂಭೋಗವನ್ನು ಮಾಡಬೇಕು. ಪದ್ಮಿನಿ ಜಾತಿಯ ಸ್ತ್ರೀಯನ್ನು ನೀರಿನ ಸಮೀಪದಲ್ಲಿ ಅಥವಾ ಮಣಿದೀಪಗಳಿಂದ ಬೆಳಗುವ ಪ್ರದೇಶದಲ್ಲಿ ಸಂಭೋಗಿಸಬೇಕು. ತುರಂಗ ರೀತಿಯ ಸ್ತ್ರೀಯನ್ನು ತುರುಬನ್ನು ಸೆಳೆದು ಬಿಗಿಯಾದ ಅಪ್ಪುಗೆಯಿಂದಲೇ ರತಿಯನ್ನು ಪ್ರಾರಂಭಿಸಬೇಕು. ಚಿತ್ರಣಿ ಜಾತಿಯ ಸ್ತ್ರೀಯನ್ನು ಕೈ ಉಗುರಿನಿಂದ ಗೀರಿ, ಹಲ್ಲಿನಿಂದ ಮೆಲ್ಲಗೆ ಕಚ್ಚಿ ವಿಚಿತ್ರವಾಗಿ ಸಂಭೋಗಿಸಬೇಕು. ಹಾಗೆಯೇ ಬೇರೆ ಬೇರೆ ಜಾತಿಯ ಸ್ತ್ರೀಯನ್ನು ಸಂಭೋಗಿಸುವಾಗಲೂ ಅವುಗಳಿಗೆ ಕಾಲವೂ ನಿಗದಿಯಾಗಿರುತ್ತದೆ. ಕಫ ಪ್ರಕೃತಿಯ ಸ್ತ್ರೀಯನ್ನು ರಾತ್ರಿಯ ಆದಿಭಾಗದಲ್ಲಿಯೂ, ಪಿತ್ತ ಪ್ರಕೃತಿಯ ಸ್ತ್ರೀಯನ್ನು ಅರ್ಧರಾತ್ರಿಯಲ್ಲಿ ಸಂಭೋಗಿಸಬೇಕು. ವಾತ ಪ್ರಕೃತಿಯ ಸ್ತ್ರೀಯನ್ನು ಮಧ್ಯರಾತ್ರಿ ಕಳೆದ ಮೇಲೆಯೇ ರತಿಗೆ ತೊಡಗಿಸಬೇಕು. ದೇವಸತ್ವದ ಸ್ತ್ರೀಯನ್ನು ಮನೋಹರವಾದ ಜಾಗದಲ್ಲಿ ಸಂಭೋಗಿಸಬೇಕು. ಗಂಧರ್ವ ಸತ್ವದ ಸ್ತ್ರೀಯನ್ನು ಸಂಗೀತಗಳಿಂದ ತೃಪ್ತಿ ಪಡಿಸಿ, ರಮ್ಯಸ್ಥಳದಲ್ಲಿ ಸುರತವಾಚರಿಸಬೇಕು. ಯಕ್ಷಸತ್ವದ ಸ್ತ್ರೀಯನ್ನು ಭೋಗಿಸಬೇಕಾದ ಮೊದಲು ಮೈಗೆ ಸುಗಂಧ ದ್ರವ್ಯವನ್ನು ಲೇಪಿಸಿಕೊಳ್ಳಬೇಕು. ಸರ್‍ರನೆ ಹಠದಿಂದ ಸಂಭೋಗಿಸಬೇಕು. ನಾಗಸತ್ವದಿಂದ ಕೂಡಿದ ಸ್ತ್ರೀಯನ್ನು ವೃಕ್ಷಾದಿ ರೂಢಕ ಮುಂತಾದ ಆಲಿಂಗನ ಬಂಧಗಳನ್ನು ಉಪಯೋಗಿಸಿ ಭೋಗಿಸಬೇಕು.

(ಮಾನಸೋಲ್ಲಾಸ–5–1340–1366)

ನಾರಾಚ

ನಾರಾಚವೆಂದರೆ ಹೊನ್ನನ್ನು ತೂಗುವ ತಕ್ಕಡಿ.ನಾರಾಚವು ಹಿಂದೆ ಚಿನ್ನವನ್ನು ತೂಗಲು ಬಳಸುತ್ತಿದ್ದರು ಎಂಬುದಕ್ಕೆ ಇದು ಉದಾಹರಣೆಯಾಗಿದೆ. ನಾರಾಚಕ್ಕೆ ಮತ್ತೊಂದು ಹೆಸರು ತ್ರಾಸು.

ನಾರಾಯಣ

'ನಾರಾ' ಎಂದರೆ ನೀರು. ಅಯನವು ಎಂದರೆ ಆಶ್ರಯ. ಬ್ರಹ್ಮನು ಅಂಡದವನು, ಜಲಾಶ್ರಯನು ಆದುದರಿಂದ ನಾರಾಯಣ ಶಬ್ದವು ಬ್ರಹ್ಮವಾಚಕವು ಎಂದು ಮನು ಹೇಳುತ್ತಾನೆ. ನಾರಾಯಣನು ತ್ರಿಮೂರ್ತಿಗಳಲ್ಲಿ ಒಬ್ಬ. ಜಗತ್ತಿನ ರಕ್ಷಣೆಯ ಕಾರ್ಯ ಇವನಿಗೆ ಸೇರಿದ್ದು. ಜಲದಲ್ಲಿ ವಾಸ, ದಶಾವತಾರವನ್ನು ಎತ್ತಿ, ಭೂಮಿಗೆ ಬಂದು ಭಕ್ತರ ರಕ್ಷಣೆ ಮಾಡಿದನೆಂದು ನಂಬಿಕೆಯಿದೆ. ಜಲಶಾಯಿ ನಾರಾಯಣ-ವಿಷ್ಣು ಪ್ರತಿಮೆಯ 'ನಾಭಿ' ಕಮಲದಲ್ಲಿ ಹುಟ್ಟುವ ಬ್ರಹ್ಮನು, ನಾರಣರೂಪನು ಎಂದರೆ, ನಾಗರೂಪನೇ ಸರಿ. ಋಗ್ವೇದದ ಪ್ರಜಾಪತಿಯೆ, ಆ ಬಳಿಕ ಬ್ರಹ್ಮನ್ ಎನಿಸುತ್ತಾನೆ. ಅಲ್ಲಿ ಪ್ರಜಾಪತಿ, ಆಪ : ರಸ ಸ್ವರೂಪಿಯಾಗಿರುವ ಬಗೆಗೆ ಭಿನ್ನಾಭಿಪ್ರಾಯಗಳಿಲ್ಲ. ನಾರ : ಆಪ ಸಂಕೇತವು ರಸ : ರೇತ ಎಂಬ ಅರ್ಥವುಳ್ಳದು. ಆ ಕಾರಣದಿಂದ ಋಗ್ವೇದದ 'ಆಪ: ರಸ ಅಥವಾ 'ಮಧುಮತ್ ಪಯಸ್' ಇದು ವೇದದಲ್ಲಿಯೆ ಮೆಲ್ಲನೆ 'ಪುಷ್ಕರ'– ಪದ್ಮ, ಕಮಲವಾಗಿ ರೂಪ-ಆಕೃತಿ ಬದಲಿಸಿಕೊಳ್ಳುತ್ತದೆ. 'ನಾಗ'ವು ಬೇಕಾದ ವೇಷ ಧರಿಸಬಲ್ಲುದು, ಎಂಬ ಮೂಲಶ್ರದ್ಧೆಯನ್ನು ಮರೆತರೆ ಈ ಆಪ : ರಸ ಸಂಕೇತ : ಪ್ರತಿಮೆಗಳ ಸ್ವಾರಸ್ಯದ ಅಂತರಾರ್ಥಕ್ಕೆ ಎರವಾಗಬೇಕಾಗುತ್ತದೆ. ಈ ರಹಸ್ಯಾರ್ಥವನ್ನು ಶತಪಥ ಬ್ರಾಹ್ಮಣವೆ ಬಯಲಿಗೆ ತರುತ್ತಿದೆ: ಆಪೋ ವೈ ಪುಷ್ಕರಂ (6-4-22; 7-4-1.8). 'ಆಪೋ ವೈ ಪ್ರಜಾಪತಿಃ-ಪರಾಮೇಷ್ಠೀ' ಎಂದು ವಾಜಸನೇಯ ಸಂಹಿತೆ ಹೇಳುತ್ತದೆ! (14.9). ಈ ಪ್ರಜಾಪತಿ : ಬ್ರಹ್ಮನ್ ಸೃಜನಶಕ್ತಿಯ ದೈವತ ಎಂಬ ಬಗೆಗೆ ಸಂದೇಹ ಪಡಬೇಕಾಗಿಲ್ಲ ಎಂದು ಶಂಬಾ ಅಭಿಪ್ರಾಯ.

ಋಗ್ವೇದದ ಋಷಿ ನಾರಾಯಣನೂ ಜಲಸಂಪ್ರದಾಯದವನೇ ಆಗಿರಬೇಕು. ವೇದಕಾಲದ ಯದು-ತುರ್ವಸಾದಿಗಳ ಕಥಾಭಾಗಗಳು ಸಂಗ್ರಹಿಸಿ ಮಹಾಭಾರತದಲ್ಲಿ ಹೆಣೆದುಕೊಂಡ ವ್ಯಾಸರಿಗೆ (ಅವರೂ ನಾರಾಯಣ ಸಂಪ್ರದಾಯದವರೇ) 'ನಾರಾಯಣ' ನಾಮದ ರಹಸ್ಯಾಥ್ವು ತಿಳಿದಿರಲೇಬೇಕು. 'ಆಪೋ-ನಾರಃ ಇತಿಪ್ರೋಕ್ತಾ' ಎಂದು ತಲೆಮಾರಿನಿಂದ ತಲೆಮಾರಿಗೆ ನಡೆದು ಬಂದ (ಇತಿಪ್ರಥಕ್ತಾಃ) ಗುಹ್ಯಾರ್ಥವು ಇದು, ಎಂದು ಭಾರತದಲ್ಲಿ ಹೇಳಲಾಗಿದೆ ಎನ್ನುವುದು ಶಂಬಾ ನಿಲುವು.

ವೇದಗಳಲ್ಲಿನ ವಿಷ್ಣುವಿಗೂ, ಈಚಿನ ಹಿಂದೂಮತದಲ್ಲಿನ ವಿಷ್ಣುವಿಗೂ ನಾಮ ಮಾತ್ರ ಇರುವ ಸಾದೃಶ್ಯದ ಜತೆಗೆ 'ತ್ರಿವಿಕ್ರಮ'ನೆಂಬ ಮತ್ತೊಂದು ವಿಶ್ಲೇಷಣೆ. 'ಶಿವ'

ಎಂಬ ಪದವೂ 'ರುದ್ರ' ಎಂಬ ಪದವೂ ಸಮಾನಾರ್ಥಕವಾಗಿರುವುದೊಂದನ್ನು ಉಳಿದು, ವೇದದ 'ರುದ್ರ'ನಿಗೂ ಅರ್ವಾಚೀನ ಹಿಂದೂಮತದ 'ಶಿವ'ನಿಗೂ ಹೋಲಿಕೆಗಳು ತೀರ ಅತ್ಯಲ್ಪ. ಹೊಸಧರ್ಮವು ವೇದಗಳಿಗೆ ತನ್ನ ನಿಷ್ಠೆಯನ್ನು ತೋರ್ಪಡಿಸಿದರೂ, ಗ್ರಾಮಗಳ ಅಸಂಖ್ಯಾತ ದೇವ – ದೇವಿಯರು ಅನೇಕ ವಿಧವಾದ ತಮ್ಮ ಕರ್ತವ್ಯಗಳು, ಕಥೆಗಳು ಮತ್ತು ವಿಶ್ಲೇಷಣೆಗಳೊಂದಿಗೆ ವೈದಿಕಧರ್ಮದಲ್ಲೆಲ್ಲಾ ಕ್ರಾಂತಿಯನ್ನು ಎಬ್ಬಿಸಿದರು. ವಿಷ್ಣುವಿನ ಆರಾಧನೆಯು ರುದ್ರ; ಗಣಪತಿ; ಗೌರಿಯರ ಆರಾಧನೆಯ ಅನಂತರ ರೂಪುಗೊಂಡಿರುವುದು ಸ್ಪಷ್ಟ.

ವಿವರಗಳಿಗೆ ನೋಡಿ: DeviPrasad Chattopadyaya 1981 Lokayata P. 235, 328, 357, 149, 168-169; 170

ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 1–10

ಶಂಬಾ ಜೋಶಿ 1999 ಸಂಪುಟ. 3 ಪುಟ. 171, ಸಂಪುಟ. 4 ಪುಟ. 176

ನಾಳ್ಪಗರಣ

ಇದನ್ನು ಮುಳಿಯರು ನಾಡಿನ ಪಗರಣವೆಂದು ಅರ್ಥ ಮಾಡಿಕೊಂಡಿದ್ದಾರೆ. ಅವರು ಪಾರ್ತಿಸುಬ್ಬನ ಕುರಿತು ಬರೆಯುವಾಗ ಆಟವನ್ನು ನಾಳ್ಪಗರಣಕ್ಕೆ ಹೋಲಿಸಿದ್ದಾರೆ. (ಪಾರ್ತಿಸುಬ್ಬ)

ನಿಕಷ

ನಿಕಷವೆಂದರೆ ಒರೆಗೆ ಹಚ್ಚಿ ನೋಡು ಎಂದು ಅರ್ಥ. ಚಿನ್ನವನ್ನು ಅಸಲಿಯೋ ನಕಲಿಯೋ ಎಂದು ನೋಡುವುದನ್ನು ಒರೆಗೆ ಹಚ್ಚಿ ನೋಡುವುದು ನಿಕಷ. ರನ್ನನ ಅದನ್ನು ಹೇಳಿರುವುದು ಗಮನಾರ್ಹವಾಗಿದೆ.

ನಿಚ್ಚಟ

ನಿಚ್ಚಟವೆಂದರೆ ನಿಶ್ಚಯ: ದೃಢವಾದ ನಿರ್ಧಾರ.

ನಿಜವಾದ ರಾಜ

ಅನುಗ್ರಹದಲ್ಲಿ, ನಿಗ್ರಹದಲ್ಲಿ, ದಾನದಲ್ಲಿ, ಆದಾನದಲ್ಲಿ, (ತೆಗೆದುಕೊಳ್ಳುವುದರಲ್ಲಿ) ಪ್ರವೃತ್ತಿಗಳಲ್ಲಿ ಹಾಗೂ ನಿವೃತ್ತಿಗಳಲ್ಲಿ, ಗ್ರಹಣ ಹಾಗೂ ಮೋಕ್ಷಣದಲ್ಲಿ (ಹಿಡಿಯುವುದು ಹಾಗೂ ಬಿಡುವುದು)ಯಾವ ರಾಜನು ಸ್ವಯಂ ಸಮರ್ಥನಾಗಿದ್ದಾನೋ, ಯಾರ ಆಜ್ಞೆಯು ಅನುಲ್ಲಂಘನೀಯವೋ ಯಾವನು ಸ್ವಂತ ಶಕ್ತಿಯನ್ನು ಅವಲಂಬಿಸಿದ್ದಾನೋ ಆ ರಾಜನೇ ನಿಜವಾದ ರಾಜನಾಗಿರುತ್ತಾನೆ. (ಮಾನಸೋಲ್ಲಾಸ–964–965)

ನಿಯತಿ

ನಿಯತಿ ಎಂದರೆ ವಿಧಿಯೆಂಬ ಅರ್ಥವಿದೆ. ಅಭಿನವಗುಪ್ತನು ನಿಯತಿತತ್ತ್ವ ಈ ಕೆಳಗಿನಂತೆ ವಿವರಿಸಿದ್ದಾನೆ:

ನಿಯತಿತತ್ತ್ವ ಎಲ್ಲಾ ವಸ್ತುಗಳ ಕಾರಣ ಸಾಮರ್ಥ್ಯವನ್ನು ಸೀಮಿತಗೊಳಿಸುವ ಶಕ್ತಿ ಇದು. ಅದನ್ನು ಒಂದು ಕ್ಷೇತ್ರದಲ್ಲಿನ ಯಾಂತ್ರಿಕ ಕಾರ್ಯಕಾರಣ ಸಂಬಂಧ ಎನ್ನಬಹುದು. ಇದು ಕೂಡ ವ್ಯಕ್ತಿಯೊಬ್ಬನ ಉಪಾಧಿಗಳಲ್ಲಿ ಒಂದು, ಏಕೆಂದರೆ ಅವನು ತನ್ನ ಚಟುವಟಿಕೆಗಳಲ್ಲಿ ಈ ಶಕ್ತಿಯಿಂದ ನಿಯಂತ್ರಿತನಾಗಿರುತ್ತಾನೆ.

ವಿದ್ಯಾ, ರಾಗ, ಕಾಲ ಮತ್ತು ನಿಯತಿ ಈ ನಾಲ್ಕು ತತ್ತ್ವಗಳು ಕಲಾತತ್ತ್ವದ ಕಾರ್ಯಗಳು. ಕಲಾದಿಂದ ನಿಯತಿವರೆಗಿನ(ಎರಡನ್ನೂ ಸೇರಿಸಿ) ಐದು ತತ್ತ್ವಗಳನ್ನು ಕಂಚುಕಗಳು, ಎಂದರೆ ಉಡುಪುಗಳು ಅಥವಾ ಹೊದಿಕೆಗಳು, ಎಂದು ಕರೆಯಲಾಗಿದೆ. ಮಾಯೆಯಿಂದ ಜೀವಾತ್ಮನ ನಿಜಸ್ವರೂಪ ಆವೃತವಾಗಿ ಅವನು ತನ್ನ ಸ್ವಸ್ವರೂಪವನ್ನು ಮತ್ತು ಅನಂತಶಕ್ತಿಗಳನ್ನು ಕಳೆದುಕೊಂಡು ಈ ನಾನಾತ್ವದ ಪ್ರಪಂಚದಲ್ಲಿ ಈ ಐದು ಕಂಚುಕಗಳೊಡನೆ ಸಂಚರಿಸುತ್ತಾನೆ.

ವಿವರಗಳಿಗೆ ನೋಡಿ: ಜಿ.ಟಿ.ದೇಶಪಾಂಡೆ ಪುಟ.೫೯

ನಿಯಮಾಚಾರ

ಆಚಾರವನ್ನು ಕಟ್ಟು ನಿಟ್ಟಾಗಿ ಪಾಲಿಸುವುದು 'ನಿಯಮಾಚಾರ'ವೆಂದೆನ್ನಿಸಿಕೊಳ್ಳುತ್ತದೆ. ಒಂದು ನಿಯಮವನ್ನು ಆಚರಿಸಿಕೊಂಡು ವ್ಯವಹರಿಸುವುದು ನಿಯಾಮಾಚಾರವೆನಿಸಿಕೊಳ್ಳುತ್ತದೆ.

ನಿಯೋಗ

ನಿಯೋಗವೆಂದರೆ ಕಾರ್ಯ. ನಿಯಮವೆಂಬ ಅರ್ಥವೂ ಇದೆ. ನಿಯೋಗಿಸಿ ಎಂದರೆ ಹೇಳಿ ಮಾಡಿಸಿ ಎಂದರ್ಥ.

ನಾರದ ಸ್ಮೃತಿಯಲ್ಲಿ, ಸ್ತ್ರೀಯರ ಪುನರ್ ವಿವಾಹ; ನಿಯಮಾನುಸಾರವಾಗಿ ದ್ಯೂತಕ್ಕೆ ಅವಕಾಶ ಕಲ್ಪಿಸಲಾಗಿದೆ. ಮನು ಮತ್ತು ಬೃಹಸ್ಪತಿ ಇಬ್ಬರೂ ನಿಯೋಗವನ್ನು ವಿರೋಧಿಸಿದ್ದಾರೆ. (ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.2 1971 ಪುಟ. 226)

ಭೌದಾಯಾನ ಮತ್ತು ಗೌತಮರು ನಿಯೋಗವನ್ನು ಒಪ್ಪಿದ್ದಾರೆ. ನಿಯೋಗಕ್ಕೆ ಬಾಲವಿಧವಾ ವಿವಾಹಕ್ಕೆ ವಸಿಷ್ಠನ ಸಮ್ಮತಿಯಿದೆ. ಅವನು ಬ್ರಾಹ್ಮ, ದೈವ, ಆರ್ಷ, ಗಾಂಧರ್ವ, ಕ್ಷಾತ್ರ, ಮಾನುಷವೆಂದು ಆರು ಬಗೆಯ ವಿವಾಹವನ್ನು ಹೇಳಿದ್ದಾನೆ. (1–84ವ)(ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.2 1971 ಪುಟ. 222)

ವಿಶ್ವರೂಪನ ಪ್ರಕಾರ ನಿಯೋಗದ ಅಧಿಕಾರವು ಕೇವಲ ಶೂದ್ರರಿಗೆ ಮತ್ತು ವಂಶಭೇದವಾಗುವ ಪರಿಸ್ಥಿತಿ ಬಂದಾಗ ಕ್ಷತ್ರಿಯರಿಗೆ ಮೀಸಲು. ಈತನ ಕಾಲ ಸುಮಾರು ಕ್ರಿ.ಶ. 750–1000)

(ನೋಡಿ: ಪಿ.ವಿ.ಕಾಣೆ(ಮೂ) 1980 ಪುಟ.309)

ಸೋದರರಲ್ಲಿ ಒಬ್ಬನು ಮೃತನಾಗಿ ನಿಃಸಂತತಿಯಾಗಿದ್ದರೆ ವಿಧಿವತ್ತಾಗಿ ಮುಂದೆ ಹೇಳುವ ನಿಯೋಗದಿಂದ ಗರ್ಭಾದಾನಕ್ಕೆ ಸಮ್ಮತಿಯಿದ್ದರೂ ಇತರ ಕಾಮವಿಕಾರಗಳನ್ನು ಅನುರಾಗಪೂರ್ವಕವಾಗಿ ಸೋದರನ ಪತ್ನಿಯಲ್ಲಿ ಆಚರಿಸಬಾರದು. ಇಂತಹ ಕಾಮಪ್ರವೃತ್ತಿಯು ದಿಧಿಷೂಪತಿಯೆಂಬ ನಿಂದಾಕಾರಣವಾಗಿ ಅವನ ಅಪಾತ್ರತೆಯನ್ನು ಕಲ್ಪಿಸುವುದು. ಹವ್ಯಕವ್ಯಗಳಿಗೆ ಅರ್ಹನಲ್ಲ. ಕಾಮಕ್ರೀಡೆಯಿಲ್ಲ. ಸಂತತಿ ಜನನವು ಮಾತ್ರ ಅಪೇಕ್ಷಿತವು. (ಮನುಸ್ಮೃತಿ 3–173)

ಮನುವಿನಂತೆ ಬೃಹಸ್ಪತಿಯೂ 'ನಿಯೋಗ'ಕ್ಕೆ ವಿರೋಧಿಯಾಗಿದ್ದಾನೆ. ಅಷ್ಟಾದಶ 'ವ್ಯವಹಾರ ಪದ'ಗಳಲ್ಲಿ ಹದಿನಾಲ್ಕನ್ನು ಲೌಕಿಕಕ್ಕೆ (ಧನಮೂಲ) ಮತ್ತು ನಾಲ್ಕನ್ನು ದಂಡಕ್ಕೆ ಸಂಬಂಧಪಟ್ಟಂತೆ ಎರಡು ಬೇರೆ ಬೇರೆ ವರ್ಗಗಳಾಗಿ ಮಾಡಿದ್ದಾನೆ. ಅಲ್ಲದೆ ಒಂಭತ್ತು ಬಗೆಯ ರುಜುವಾತುಗಳು ('ದಿವ್ಯ'ಗಳು) ಅವನಿಂದ ಪ್ರತಿಪಾದಿತವಾಗಿದೆ. (ಯುಗಯಾತ್ರಿ ಭಾರತೀಯ ಸಂಸ್ಕೃತಿ. ೧೯೭೧. ಪು. ೨೨೬)

ನಿಯೋಗಕ್ಕೆ ಕೆಲವು ಆಚರಣೆಯೂ ಇದೆ. ಇದು ಸೋದರ ಪತ್ನಿ ವಿಧವೆಯಲ್ಲಿ ಸಂತಾನಕ್ಕಾಗಿ ನಿಯುಕ್ತನು ಗೋಘೃತವನ್ನು ಮೈಗೆ ಹಚ್ಚಿಕೊಂಡು ಮೌನವಾಗಿ ರಾತ್ರಿಯಲ್ಲಿ ಋತುಕಾಲದಲ್ಲಿ ಗರ್ಭದರ್ಶನ ಪರ್ಯಂತ ಸಹವಾಸ ಮಾಡಬೇಕು. ದ್ವಿತೀಯ ಸಂತತಿಯು ನಿಷಿದ್ಧ. ಮಹಾಭಾರತದಲ್ಲಿ ನಿಯೋಗ ಪರಿಕಲ್ಪನೆಯು ಬಂದಿದೆ.

ನಿರ್ನಾಮಿಕೆಯರು

ಕೂಲಿ ಮಾಡಿ ಬದುಕುವ ವರ್ಗದ ಹೆಂಗಸರನ್ನು ನಿರ್ನಾಮಿಕೆಯರು ಎಂದು ಕರೆಯುತ್ತಿದ್ದರು. ನಿರ್ನಾಮಿಕೆಯರು ಎಂದರೆ ಹೆಸರಿಲ್ಲದವರು. ಗತಿಗೋತ್ರವಿಲ್ಲದವರು. ಹತ್ತನೆಯ ಶತಮಾನದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ಇದು ವಿವರಿಸುತ್ತದೆ. ಗಂಡು ಸಂತಾನ ಇಲ್ಲದವರ ಆಸ್ತಿಯನ್ನು ಮುಟ್ಟುಗೋಲು ಹಾಕುತ್ತಿದ್ದರು ಎಂಬುದೇ ಆಗಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸುತ್ತದೆ.

ನಿರ್ಯಾಪಕಾಚಾರ್ಯ

ಆಚಾರ್ಯನೆಂದರೆ ಗುರುವೆಂದರ್ಥ. ನಿರ್ಯಾಪಕಾಚಾರ್ಯನು ಸಲ್ಲೇಖನ ವ್ರತದ ಕುರಿತು ಬೋಧಿಸುತ್ತಾನೆಂದು ಇಲ್ಲಿಯ ಭಾವಾರ್ಥವಾಗಿದೆ. ಭಾರತೀಯ ಪರಂಪರೆಯಲ್ಲಿ ಆಚಾರ್ಯ ಪದವಿಗೆ ಶ್ರೇಷ್ಠ ಅರ್ಥವಿದೆ. ಅದರಲ್ಲೂ ತತ್ತ್ವಶಾಸ್ತ್ರವೂ,

ವೇದಾಂತವು ಗುರುವಿಗೆ ಮಹತ್ವದ ಸ್ಥಾನವನ್ನು ಕೊಟ್ಟಿದೆ. ನಿರ್ಯಾಪಕಾಚಾರ್ಯ(2-51 ವ): ಸಲ್ಲೇಖನದ ವ್ರತಕ್ರಮವನ್ನು ಆ ವ್ರತಿಕರಿಗೆ ಉಪದೇಶಿಸಿ ಅದನ್ನು ಆಚರಿಸಲು ನೆರವಾಗುವ ಮಾರ್ಗದರ್ಶಕ. ಜೈನಧರ್ಮದಲ್ಲಿ ಪಂಚಗುರುಗಳ ಪರಿಕಲ್ಪನೆಯು ವಿಶಿಷ್ಟವಾಗಿದೆ.

ನಿರ್ವಾಯ

ನಿರ್ವಾಯವೆಂದರೆ ಅಲಗಿಲ್ಲದ ಬಾಣವೆಂದು ಅರ್ಥ. ಬಾಯಿಯಿಲ್ಲದ್ದು ಎಂದು ಅರ್ಥ. 'ಬ' ಕಾರಕ್ಕೆ 'ವ' ಕಾರ ಬಂದಿದೆ.

ನಿಶ್ಶಲ್ಯ

ಮೂರು ಬಗೆಯ ಶಲ್ಯಗಳು. ಮಾಯಾ ಶಲ್ಯ, ಮಿಥ್ಯಾಶಲ್ಯ, ನಿದಾನಶಲ್ಯ, ಇವು ಜೈನ ಧರ್ಮದ ಧಾರ್ಮಿಕ ನಂಬಿಕೆಗಳಾಗಿವೆ.

ನಿಷಾದ

ಬ್ರಾಹ್ಮಣನಿಗೆ ವೈಶ್ಯಕನ್ಯೆಯಲ್ಲಿ ಜನಿಸಿದವನು ಅಂಬಷ್ಠನು ಎಂದು ಕರೆಯಲ್ಪಡುತ್ತಾನೆ. ಬ್ರಾಹ್ಮಣನಿಗೆ ಶೂದ್ರಳಲ್ಲಿ ಹುಟ್ಟಿದವನನ್ನು ಪಾರಶವ ಎಂದು ಹೇಳುತ್ತಾರೆ. ನಿಷಾದ ಎಂದರೂ ಅವನೇ.

ನಿಷಿಧಿ ಗಲ್ಲುಗಳು

ನಿಷಿಧಿ ಎಂದರೆ ಜೈನ ಮುನಿಗಳ ಸಮಾಧಿ. ಗದ್ದುಗೆ, ಸಮಾಧಿಯ ಮೇಲೆ ನೆಟ್ಟಕಲ್ಲುಗಳು ಎಂಬ ಅರ್ಥಗಳಿವೆ. ಈ ಆರ್.ಶೇಷಶಾಸ್ತ್ರಿಯವರು ನಿಷಿಧಿ ಕಲ್ಲಿನ ಕುರಿತು ಈ ರೀತಿ ವಿವರಿಸಿದ್ದಾರೆ. ಸಲ್ಲೇಖನದಿಂದ ದೇಹತ್ಯಾಗವನ್ನು ಮಾಡಿದವರ ಕಲ್ಲುಗಳನ್ನು ನಿಷಿಧಿ ಕಲ್ಲುಗಳೆಂದು ಕರೆಯುತ್ತಾರೆ. ಇವುಗಳ ಶಿಲ್ಪದ ವಿವರಗಳನ್ನು ಸಹ ಸಾಮಾನ್ಯವಾಗಿ ವೀರಗಲ್ಲುಗಳ ಶಿಲ್ಪದಂತೆಯೇ ಎರಡು ಮೂರು ಹಂತಗಳಲ್ಲಿ ಬಿಡಿಸಲಾಗಿರುತ್ತದೆ. ಮೊದಲ ಹಂತದಲ್ಲಿ ಅಂದರೆ, ತಳಭಾಗದಲ್ಲಿ ವ್ರತವನ್ನು ಸ್ವೀಕರಿಸುವ ವ್ಯಕ್ತಿಯು ಗುರುವಿನ ಬಳಿ ಕುಳಿತು ಉಪದೇಶ ಸ್ವೀಕರಿಸುತ್ತಿರುವಂತೆಯೂ ವ್ಯಾಸ ಪೀಠದ ಮೇಲೆ ಧರ್ಮಗ್ರಂಥವನ್ನು ಪಠಣ ಮಾಡುತ್ತಿರುವ ಗುರುವನ್ನು ಶಿಲ್ಪದ ವಿವರಗಳಲ್ಲಿ ಬಿಡಿಸಲಾಗಿರುತ್ತದೆ. ಗಂಡ ಹೆಂಡಿರುಗಳಿಬ್ಬರೂ ಒಟ್ಟಿಗೆ ವ್ರತವನ್ನು ಸ್ವೀಕರಿಸಿದ್ದರೆ ಅವರಿಬ್ಬರೂ ಉಪದೇಶದಲ್ಲಿ ಸ್ವೀಕರಿಸುತ್ತಿರುವಂತೆ ಶಿಲ್ಪವನ್ನು ಬಿಡಿಸಲಾಗಿರುತ್ತದೆ. ಗಂಡನಾದವನು ವ್ರತದ ಮೂಲಕ ದೇಹವನ್ನು ತ್ಯಜಿಸಿದಾಗ ಆತನ ಹೆಂಡತಿಯು ಸಹಗಮನದ ಮೂಲಕ ತನ್ನ ಗಂಡನನ್ನು ಅನುಸರಿಸಿದ್ದರೆ ಆಗ ಉಪದೇಶವನ್ನು ಪಡೆಯುತ್ತಿರುವ ತನ್ನ ಗಂಡನ ಬದಿಯಲ್ಲಿ ಹೆಣ್ಣು ತನ್ನ ಬಲಗೈಯನ್ನು ಎತ್ತಿ ತೋರಿಸುತ್ತಿರುವಂತೆ ಬಿಡಿಸಲಾಗಿರುತ್ತದೆ.

ಎರಡನೆಯ ಹಂತದಲ್ಲಿ ವ್ಯಕ್ತಿಯು ಗುರುವಿನಿಂದ ಕಲಿತ ವ್ರತವನ್ನು ಸಾಧನೆ ಮಾಡುತ್ತ ಸಿದ್ಧಿಯ ಹಂತವನ್ನು ತಲುಪುತ್ತಿರುವಂತೆ, ಅಂದರೆ ಅವನು ಜಿತೇಂದ್ರಿಯನಂತೆ ಅವನು ಮುಕ್ತಿಯನ್ನು ಪಡೆದು ಪದ್ಮಾಸನದಲ್ಲಿ ಕುಳಿತಿರುವಂತೆ ಬಿಡಿಸಲಾಗಿರುತ್ತದೆ. ಈ ನಿಷಿಧಿ ಕಲ್ಲುಗಳಿಗೂ ಕೆಲವೊಮ್ಮೆ ಕೀರ್ತಿ ಮುಖವನ್ನು ಬಿಡಿಸಿರುವುದುಂಟು.

ವಿವರಗಳಿಗೆ ನೋಡಿ: ಆರ್. ಶೇಷಶಾಸ್ತ್ರಿ ೨೦೦೫ ಶಾಸನ ಪರಿಚಯ ಪುಟ. ೬೦-೬೧.

ನೀಚರ ಸ್ವಭಾವ

ನೀಚರಿಗೆ ಉಪಕಾರ ಮಾಡಿದರೂ ಅವರು ಅಪಕಾರವನ್ನೇ ಮಾಡುತ್ತಾರೆ. ಹಾವಿಗೆ ಹಾಲೆರೆದರೆ ಯಾವ ಪ್ರಯೋಜನವಿದೆ. ಅದು ಅದರ ವಿಷವನ್ನು ಬಿಡಲಾರದು. ಅದರಂತೆ ನೀಚರೂ ಕೂಡಾ ಉಪಕಾರ ಮಾಡಿದವರಿಗೆ ಅಪಕಾರ ಮಾಡದೆ ಬಿಡಲಾರರು.

ಯಾರು ಉತ್ತಮರು ಮತ್ತು ಯಾರು ನೀಚರು ಎಂದು ನಿರ್ಣಯಿಸುವುದು ನೈತಿಕ ವ್ಯಾಖ್ಯೆಗೆ ಸಂಬಂಧಿಸಿದೆ. ನೀತಿಶಾಸ್ತ್ರವು ಉತ್ತಮರು, ಮಧ್ಯಮರು ಮತ್ತು ನೀಚರು ಎಂದು ವರ್ಗೀಕರಿಸುತ್ತದೆ. ಉತ್ತಮ ಧಾರ್ಮಿಕ ಚೌಕಟ್ಟಿನೊಳಗೆ ನೀತಿಯುತರಾಗಿ ಬಾಳುತ್ತಾರೆ. ಅಧಮ ಅನೀತಿಯನ್ನೇ ತಮ್ಮ ಜೀವನಕ್ರಮವಾಗಿರಿಸಿಕೊಳ್ಳುತ್ತಾರೆ. ಮಧ್ಯಮರು ನೀತಿ-ಅನೀತಿಗಳ ಮಧ್ಯೆ ಇರುತ್ತಾರೆ. ಆದುದರಿಂದ ನೀಚರಿಗೆ ಸಾಮಾಜಿಕ ಮಾನ್ಯತೆಯಿಲ್ಲವೆಂಬುದು ಗಮನಾರ್ಹ.

ನೀರಕ್ಷೀರನ್ಯಾಯ

ಕೆಲವು ಪದಾರ್ಥಗಳು ಪರಸ್ಪರ ಹೊಂದಿಕೊಳ್ಳುತ್ತವೆ. ಮತ್ತು ತಮ್ಮ ಮೂಲಗುಣವನ್ನು ಕಳೆದುಕೊಳ್ಳುತ್ತವೆ. ಇಲ್ಲಿ ನೀರು ಮತ್ತು ಹಾಲು ಹೇಗೆ ಒಂದಕ್ಕೊಂದು ಹೊಂದಿಕೊಳ್ಳುತ್ತದೆಯೆಂಬುದನ್ನು ವಿವರಿಸಿದ್ದಾನೆ. ಹಾಲು-ನೀರು ಎರಡೂ ಹೊಂದಿಕೊಳ್ಳುತ್ತವೆ. ಒಮ್ಮೆ ಹಾಲಿಗೆ ನೀರೆರೆದರೆ ಮತ್ತೆ ನೀರನ್ನು ಪ್ರತ್ಯೇಕಗೊಳಿಸುವಂತಿಲ್ಲ. ಗಂಡ ಹೆಂಡತಿ ಸಂಬಂಧವೂ ಹಾಗಿರಬೇಕೆಂಬುದು ಭಾವಾರ್ಥ.

ನೀರಾವರಿ

ನೀರಾವರಿ ಎಷ್ಟು ಮಹತ್ವದ್ದು ಎನ್ನುವುದನ್ನು ವಿಜ್ಞಾನೇಶ್ವರರು ತಮ್ಮ ಮಿತಾಕ್ಷರದಲ್ಲಿ ಈ ರೀತಿ ಹೇಳಿದ್ದಾರೆ, 'ನೀರಾವರಿ ಕೆಲಸಕಾರ್ಯಗಳು ರಾಜ್ಯದ ಮೊದಲ ಕೆಲಸವಾಗಿದೆ. ಅಣೆಕಟ್ಟುಗಳನ್ನು ನಿರ್ಮಿಸುವುದರಿಂದ ಕೆಲವರಿಗೆ ಅನ್ಯಾಯವಾದರೂ ಹಲವಾರು ಜನರಿಗೆ ನ್ಯಾಯ ಸಿಗುತ್ತದೆ, ಅನುಕೂಲವಾಗುತ್ತದೆ. ಈ ಕಾರಣದಿಂದಾಗಿ ಅಣೆಕಟ್ಟು ನಿರ್ಮಾಣವನ್ನು ಯಾರೂ ವಿರೋಧಿಸಬಾರದು'.

ಮೋಹನಕೃಷ್ಣ ರೈಯವರು ವಿವರಿಸುವಂತೆ ಕೃಷಿಗೆ ಸಂಬಂಧಿಸಿದ ಹಾಗೆ ಪ್ರಾಚೀನ ಕಾಲದಲ್ಲಿ ಎರಡು ರೀತಿಯಲ್ಲಿ ಕೃಷಿ ಚಟುವಟಿಕೆಯು ನಡೆಯುತ್ತಿತ್ತು.

ಒಂದು ಮಳೆಯನ್ನು ಆಶ್ರಯಿಸಿದ ಕೃಷಿ. ಇದು ಮಳೆಗಾಲದಲ್ಲಿ ನಡೆಯುತ್ತಿತ್ತು. ಆದುದ್ದರಿಂದ ಈ ಪದ್ಧತಿಯಲ್ಲಿ 'ಏಕಬೆಳೆ' ಮಾತ್ರ ಸಾಧ್ಯವಾಗಿತ್ತು. ಕೆರೆ ನೀರನ್ನು ಆಶ್ರಯಿಸಿದ ಬೆಳೆಗಳು ವರ್ಷದಲ್ಲಿ ಮೂರು ಬೆಳೆಯನ್ನು ತೆಗೆಯುತ್ತಿದ್ದರು. ಹೀಗಾಗಿ ಕೆರೆ ನಿರ್ಮಾಣ ಪದ್ಧತಿಯು ಸಹಜವಾಗಿಯೇ ರೂಪುಗೊಂಡವು. ಆಂಡಯ್ಯನಲ್ಲಿ ಬರುವ ಈ ಕೆಳಗಿನ ಸಾಲುಗಳು ಇದಕ್ಕೆ ಪೂರಕವಾಗಿದೆ. "ಕೆರೆಯ ಕಟ್ಟಿಸು ಬಾವಿಯ ತೋಡಿಸು" ಇದು ಕೆರೆಗೆ ಇರುವ ಪ್ರಾಶಸ್ತ್ಯವನ್ನು ಸೂಚಿಸುತ್ತದೆ. ನೀರಾವರಿ ವ್ಯವಸ್ಥೆಯು ಒಂದು ಸಮಾಜದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಮೇಲಿನ ಮಾತುಗಳು ನೀರಾವರಿಯ ಕೆಲಸ-ಕಾರ್ಯಗಳನ್ನು ವಿವರಿಸುತ್ತವೆ. ನೀರಾವರಿ ವ್ಯವಸ್ಥೆ-ಕೃಷಿ ಚಟುವಟಿಕೆಗೂ ಸಂಬಂಧವಿದೆ. ಅದರಂತೆ ಕೃಷಿಯಲ್ಲಿ ಪ್ರಧಾನ ಪಾತ್ರವಹಿಸುವ ನೀರಾವರಿ ವ್ಯವಸ್ಥೆ ಪರೋಕ್ಷವಾಗಿ ಸಂಪನ್ಮೂಲದ ವ್ಯವಸ್ಥೆಗೆ ಕಾರಣವಾಗುತ್ತದೆ. ಕೆರೆ ಮತ್ತು ಬಾವಿಗಳ ನೀರಾವರಿಯು ಎರಡು ಉದ್ದೇಶಗಳನ್ನು ಹೊಂದಿವೆ.

೧. ಕೃಷಿ ಚಟುವಟಿಕೆಗೆ ಪೂರಕವಾಗಿ

೨. ಮನುಷ್ಯ ದಿನಂದಿನ ಬದುಕಿಗೆ ಅವಶ್ಯವಾದ ನೀರಿನ ಬಳಕೆಗಾಗಿ ಕೆರೆ, ಬಾವಿಗಳು ನೀರಿನ ಶೇಖರಣ ಕೇಂದ್ರಗಳು ಎಂಬುದನ್ನು ಮರೆಯಲಾಗದು.

ವಿವರಗಳಿಗೆ ನೋಡಿ: ಮೋಹನಕೃಷ್ಣ ರೈ ೨೦೦೪ ಪ್ರಭುತ್ವ ಮತ್ತು ಜನತೆ.
ಡಾ.ಎಂ. ಚಿದಾನಂದ ಮೂರ್ತಿ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

ನುಡಿಗಳ ದೇಸಿ

ಸಾಹಿತ್ಯಭಾಷಾಶಿಶುವಿನ ಜಾತಕವನ್ನು ಬರೆದ ವೈಯಾಕರಣರು ಅದರೊಳಗೆ 'ನಾಮ', 'ಆಖ್ಯಾತ', 'ಅವ್ಯಯ', 'ನಿಪಾತ'ಗಳೆಂದು ನಾಲ್ಕು ಪ್ರಮುಖಭೇದದ ಲಕ್ಷಣವನ್ನು ಹೇಳುತ್ತಾರಷ್ಟೆ ಅವುಗಳೊಳಗೆ ಮತ್ತಿನ ಎರಡಾದ 'ಅವ್ಯಯ', 'ನಿಪಾತ'ಗಳ ವಿಷಯವಾಗಿ ಅವರೂ ಅಷ್ಟೊಂದು ಹೆಚ್ಚು ವಿಸ್ತರಿಸುವುದಿಲ್ಲ. ಅವರ ಗ್ರಹಣೆಗೊಳಗಾಗದಷ್ಟು ಆಗಲೇ ಅವುಗಳು ಸ್ಥಿರತೆವಡೆದುದೇ ಅದಕ್ಕೆ ಕಾರಣ. ಆದರೆ, ಮೊದಲಿನ ಎರಡು (ನಾಮ-ಕ್ರಿಯಾ) ಪದಗಳ ಅಂಗೋಪಾಂಗಗಳನ್ನೆಲ್ಲ ಹಿಡಿದು ಅವರು ಓದುವುದಕ್ಕೊ ಅಂದವಾಗುವುದಲ್ಲದೆ, ದ್ವಿತೀಯ ಪಾದಾದಿಯ 'ವಟ್ಟ'ವೂ ತ್ರಿಮಾತ್ರಾಬದ್ಧವೇ ಆಗುತ್ತಿದೆ. ಅದರಿಂದ, ನಮ್ಮ ಮನಸ್ಸಿನೊಳಗೆ ಆ ಮೇಲೆ ಹೊಳೆದ ಈ ರಗಳೆಯ ಸ್ವರೂಪವನ್ನು ವಾಚಾನಾನುಸಾರಿಯಾಗುವಂತೆ ಬರೆಯುತ್ತೇವೆ. (ಮುಳಿಯ 2006)

ನುಡಿವಳಿ

ವಾಗ್ದಾನ; ಪ್ರತಿಜ್ಞೆ ಪದಕ್ಕೆ ಪರ್ಯಾಯವಾಗಿ ನುಡಿವಳಿ ಎಂದು ಕರೆಯುತ್ತಾರೆ.

ವಾಗ್ದಾನ ಅಥವಾ ಪ್ರತಿಜ್ಞೆಗೆ ವಿಶೇಷ ಅರ್ಥವಿದೆ. ಶಪಥಗೈಯ್ಯುವುದು.

ಪೂಣ್ಕೆ ಇವುಗಳು ಕೂಡಾ ವಾಗ್ದಾನವನ್ನು ಸೂಚಿಸುತ್ತದೆ. ವಾಗ್ದಾನವೆಂದರೆ ವಾಕ್‌ನ ದಾನ. ಮಾಡಿಯೇ ತೀರುತ್ತೇನೆ ಎಂಬುದು ಪ್ರತಿಜ್ಞೆಯ ಮೂಲಭಾವ. ಮಾತಿಗೆ ಇರುವ ಮಹತ್ವವನ್ನು ಇದು ಸೂಚಿಸುತ್ತದೆ. ಇಟ್ಟ ಕಾಲನ್ನು ಹಿಂದಕ್ಕೆ ತೆಗೆಯಲಾರೆ ಮತ್ತು ಕೊಟ್ಟ ಮಾತನ್ನು ವಾಪಾಸು ಪಡೆಯಲಾರೆ ಎಂಬುದು ಪ್ರತಿಜ್ಞೆಯ ಮೂಲರೂಪವಾಗಿದೆ. ಕೊಟ್ಟ ಮಾತಿಗೆ ಇರುವ ಮಹತ್ವವನ್ನು ಪ್ರತಿಜ್ಞೆಯು ಸೂಚಿಸುತ್ತದೆ.

ನೃತ್ಯ

ಕ್ರಿ.ಶ.1583ರ ಸಿಂಹಭೂಪಾಲನ 'ಲಾಸ್ಯರಂಜನ' ಕೃತಿಯಲ್ಲಿ ನಾಟ್ಯದ ಬಗೆಗೆ ಅನೇಕ ವಿವರಗಳನ್ನು ಕೊಡುತ್ತಾನೆ. ಕೆಲವನ್ನು ಸಂಗ್ರಹಿಸಿ ಇಲ್ಲಿ ಹೇಳಲಾಗಿದೆ.

1. ನಾಟ್ಯದಲ್ಲಿ ಎರಡು ವಿಧವಿದೆ. ಮಾರ್ಗ ಮತ್ತು ದೇಶೀ, ಬ್ರಹ್ಮ, ಇಂದ್ರ ಮೊದಲಾದವರು ಅಭಿನಯಿಸಿದುದು ಮಾರ್ಗ. ಈ ಭೂಲೋಕದಲ್ಲಿ ದೇಶ ದೇಶಗಳಲ್ಲೂ ಅದನ್ನು ವಿಸ್ತರಿಸಿ ಅಭಿನಯಿಸುವುದೇ ದೇಶೀ. (1–20, 21)
2. ಮೇಳ ವಾದ್ಯದವರ ವಿವರ: ನೃತ್ಯ ಮಂದಿರದಲ್ಲಿ ಇಬ್ಬರು ತಾಳದವರು, ಇಬ್ಬರು ಮದ್ದಳೆಯವರು, ಇಬ್ಬರು ಸಂಗೀತಕಾರರು, ಇಬ್ಬರು ಕಹಳೆಯವರೂ, ಇಬ್ಬರು ಕೊಳಲೂದುವವರೂ, ಇಬ್ಬರು ತಂಬೂರಿ ಬಾರಿಸುವವರೂ ಇರಬೇಕು (1–42)
3. ನರ್ತಕಿ ಲಕ್ಷಣ: ಅತಿಸ್ಥೂಲ ಶರೀರವಿಲ್ಲದವಳೂ, ಅತಿಕೃಶ ದೇಹವನ್ನುಳ್ಳದವಳೂ, ಅತಿ ಎತ್ತರವಾಗಿರದವಳೂ, ಅತಿ ಕುಳ್ಳಾಗಿಲ್ಲದವಳೂ, ವಿಕಲಾಂಗಳಲ್ಲದವಳೂ, ಕೋಮಲ ಕಂಠವುಳ್ಳದವಳೂ, ರೂಪವತಿಯೂ, ಮಿತಭಾಷಿಣಿಯೂ, ದಾನಿಯೂ, ದೇಶಭಾಷಾ ಪ್ರವೀಣೆಯೂ, ದೈವಗುರು ಬ್ರಾಹ್ಮಣರನ್ನು ವಂದಿಸುವವಳೂ, ಉಬ್ಬಿರುವ ಕುಚ, ವಿಸ್ತಾರವಾದ ನಿತಂಬ ಇವುಗಳನ್ನು ಉಳ್ಳವಳೂ, ಯುಕ್ತಿವಂತೆಯೂ, ಗೀತವಾದ್ಯ ಮೊದಲಾದ ಕಲೆಗಳಲ್ಲಿ ವಿಲಾಸೆಯೂ ಆದವಳನ್ನು ನೃತ್ಯಮಾಡಲು ರಾಜರು ನೇಮಿಸಬೇಕು. (1–43, 46)
4. ನಾಟ್ಯ, ನೃತ್ಯ ಇವೆರಡನ್ನು ಪರ್ವ ಕಾಲಗಳಲ್ಲೂ, ನೃತ್ಯವನ್ನು ರಾಜರ ಪಟ್ಟಾಭಿಷೇಕ, ಮಹೋತ್ಸವ, ದಂಡಯಾತ್ರೆ, ಹರಿಹರ ಪೂಜೆ ಮತ್ತು ಉತ್ಸವ, ವಿವಾಹ, ಮನೋಹರ ಪ್ರಸಂಗ, ಪುತ್ರೋತ್ಸವ, ಪುರ ಪ್ರವೇಶ, ಗೃಹ ಪ್ರವೇಶ, ದಾನಕಾಲ ಇವುಗಳಲ್ಲಿ ಅಭಿನಯಿಸಬೇಕು.(1–48)

5. ಭಾವಾಭಿನಯವಿಲ್ಲದೆ ಕೈ ಕಾಲುಗಳನ್ನು ಆಡಿಸುವುದೇ ನೃತ್ಯ. ಇದರಲ್ಲಿ ಮೂರು ವಿಧ.

ಅ. ರಜ್ಜಂ ಭ್ರಮಣ (ಹಗ್ಗದಾಟ) ಮೊದಲಾದವು ವಿಷಮ ನೃತ್ಯಗಳು:

ಆ. ವಿಧವಿಧವಾದ ರೂಪವನ್ನು ಹೊಂದಿರುವುದೇ ವಿಕಟ ನೃತ್ಯ.

ಇ. ಆಂಗಿಕ ಮೊದಲಾದ ಅಲ್ಪಕರಣಗಳನ್ನು ಮಾಡುವುದು ಲಘುನೃತ್ಯ. (1–63, 67)

6. ಕೇವಲ ಅಂಗಾಭಿನಯಗಳಿಂದ ಭಾವಗಳನ್ನು ತೋರಿಸುವುದೇ ನೃತ್ಯ (1–62)

ವಿವರಗಳಿಗೆ ನೋಡಿ: ನಾಟಕ; ಅಂಗಾಹಾರ; ಕರಣಾಂಗಹಾರ; ಪ್ರಹಸನ

ನೃತ್ಯದಲ್ಲಿನ ವಿಶೇಷಗಳು

ಭಾರತಿ – ಶಾಬ್ದಿಕ, ಸಾತ್ವಕಿ – ಸತ್ವಯುಕ್ತ, ಗಂಭೀರ, ಭರ್ಜರಿ, ಆರಭಟೀ – ಎಂಬ ಪದಗಳಿಗೆ ಬಲವಾದ್ದು, ಆರ್ಭಟವುಳ್ಳದ್ದು ಎನ್ನುವ ಅರ್ಥಗಳಿವೆ. (ಮರುಳ ಸಿದ್ದಯ್ಯ. 1973.ಪು.9) ಹಾಗೆಯೇ 'ಅಂಗವಿಕ್ಷೇಪ'ವೇ ಆಂಗಿಕ. ಕಾವ್ಯನಾಟಕ ಇವುಗಳ ಅರ್ಥವನ್ನು ಕೂಡಿಸಿ ಹೇಳುವುದೇ ವಾಚಿಕಾಭಿನಯ. ಆಭರಣ, ವಸ್ತ್ರ ಮೊದಲಾದವುಗಳಿಂದ ಅಲಂಕರಿಸಿಕೊಂಡು ಪ್ರಕಾಶಿಸುವುದೇ ಆಹಾರ್ಯಾಭಿನಯ, ಸಾತ್ವಿಕ ಭಾವವನ್ನು ತೋರಿಸುವುದೇ ಸಾತ್ವಿಕಾಭಿನಯ' ಎಂದು ಸಿಂಹಭೂಪಾಲನು 'ಲಾಸ್ಯರಂಜಸ'ದಲ್ಲಿ ಹೇಳುತ್ತಾನೆ. (1–49, 53) ಅಂಗಹಾರ, ಕರಣ ಇವುಗಳ ಅಭಿನಯಕ್ಕೆ ನೃತ್ಯವೆಂದು ಹೆಸರು ಎಂದು ಸಿಂಹಭೂಪಾಲ ಹೇಳುತ್ತಾನೆ. (1–69, 73)

ನೆಹರೂ

ಸಾಮಾಜಿಕ, ಆರ್ಥಿಕ, ತಾಂತ್ರಿಕ ಸಂಚಲನೆಯ ಪರಿಣಾಮವಾಗಿ ಸಾರ್ವಜನಿಕ (Public) ಅನ್ನುವ ಪರಿಕಲ್ಪನೆಯು ಒಡಮೂಡಿ ಬಂತು. ಈ ಸಂದರ್ಭದಲ್ಲಿ ಪಶ್ಚಿಮದ ಮಾದರಿ ಶ್ರೇಷ್ಠವಾದುದು ಎನ್ನುವ ಪರಿಭಾಷೆಯು ಬಂದದ್ದು ಆಧುನಿಕತೆಯ ಜೊತೆ. ದೇಸೀಯ ಪರಿಕಲ್ಪನೆಯನ್ನು ವಿವರಿಸುವಾಗ ಗಾಂಧಿ ಸಾರ್ವಜನಿಕ ಹಿತಾಸಕ್ತಿಯೆನ್ನುವುದನ್ನು ಚಾಲ್ತಿಗೆ ತಂದರೆ, ಆಧುನಿಕತೆಯ ಪರವಾಗಿದ್ದ ನೆಹರೂ ದೃಷ್ಟಿಕೋನ ಇದಕ್ಕಿಂತ ಭಿನ್ನವಾದುದು. ಸಾರ್ವಜನಿಕ ಹಿತಾಸಕ್ತಿಯೇ ನೆಹರೂ ಪರಿಭಾಷೆಯಾಗಿತ್ತೆಂಬುದು ಇಲ್ಲಿ ಉಲ್ಲೇಖಾರ್ಹ. ಈ ದೃಷ್ಟಿಯಿಂದ ಗಾಂಧಿಯ ಮಾರ್ಗ ಒಂದಾದರೆ ನೆಹರೂ ಮಾರ್ಗ ಮತ್ತೊಂದು. ಕನ್ನಡದಲ್ಲಿ ನೆಹರೂ ಪ್ರಭಾವಕ್ಕಿಂತ ಗಾಂಧಿ ಪ್ರಭಾವವೇ ಹೆಚ್ಚು. ಅವರಿಬ್ಬರದು ಭಿನ್ನ ರಾಜಕೀಯ ಶೈಲಿಯಾದರೂ ಕನ್ನಡದ ಬರಹಗಾರರ ಆಯ್ಕೆ ಗಾಂಧಿಯ ಪರವಾಗಿತ್ತು ಹಾಗೆ

ನೋಡುವುದಿದ್ದರೆ ಇದು ಗಾಂಧಿ, ನೆಹರೂ ಪ್ರಶ್ನೆಯಲ್ಲ! ರಾಷ್ಟ್ರೀಯತೆಯ ಆಂದೋಲನದಲ್ಲಿ ಮಹತ್ವದ ಪಾತ್ರವಹಿಸಿದ "ಕಾಂಗ್ರೆಸ್‌ನಲ್ಲಿ ಕೆಲವರು ಮದ್ಯಪಾನ ನಿಷೇಧ, ಗೋರಕ್ಷಣೆಯ ಬಗೆಗೂ, ಕೆಲವರು ಉಕ್ಕಿನ ಕಾರ್ಖಾನೆಯ ಬಗ್ಗೆ ಮಾತನಾಡಿದರು. ಇದು ದೊಡ್ಡ ಸಮಸ್ಯೆಯೆಂದು ಕಾಂಗ್ರೆಸ್‌ನವರಿಗೆ ಅನ್ನಿಸಲಿಲ್ಲ." (T.B.Bottomore 1975, P.145) ನೆಹರೂರವರನ್ನು ಪ್ರಬಲವಾಗಿ ಟೀಕಿಸುವ ಮಾಸ್ತಿಯವರೂ ಕೂಡಾ ಹೀಗೆ ಹೇಳುತ್ತಾರೆ. 'ಪಂಡಿತರಿಗೆ "ಮಾಡರ್ನ್" ಶಬ್ದ ಹಾವಿಗೆ ಪುಂಗಿಯಂತೆ ಮೋಹಕವಾಗಿ ಹೋಗಿದೆ. ಆದೇಶದಲ್ಲಿ ಹೀಗಾಯಿತು. ಈ ದೇಶದಲ್ಲಿ ಹೀಗಾಯಿತು, ನಮ್ಮ ದೇಶದಲ್ಲೂ ಹಾಗೆಯೇ ಆಗಿ ಬಿಡಬೇಕು. ಇದು ಅವರ ಆಸೆ'. (ಮಾಸ್ತಿ: ೧೯೬೭, ಸಂಪಾದಕೀಯ ಬಂಧು ಪುಟ.೩೦೪) ಹಾಗೆಯೇ ಗಾಂಧಿ ಮತ್ತು ನೆಹರೂರವರ ಭಿನ್ನ ರಾಜಕೀಯ ನಿಲುವುಗಳ ಕುರಿತಂತೆಯೂ ಮಾಸ್ತಿಯವರು ಪ್ರಸ್ತಾಪಿಸಿದ್ದಾರೆ. (ಅದೇ ಪುಟ: ೨೭೬) ಮಾಸ್ತಿಯವರು ಈ ಆಧುನಿಕತೆಯು ಬಿತ್ತಿದ ಮನೋಭಾವದ ಕುರಿತು ತುಂಬಾ ವಿಷಾದದಿಂದ ಬರೆಯುವ ಮಾತೊಂದು ಹೀಗಿದೆ – "ಪಂಡಿತ ನೆಹರೂ ಆಗಲಿ, ನಾವಾಗಲಿ, ನಮ್ಮ ಜನರ ಮೂಢಾಚಾರವನ್ನು ಖಂಡಿಸುವ ಮನೋಧರ್ಮವನ್ನು ಆಂಗ್ಲರಿಂದ ಕಲಿತೆವು. ಆಂಗ್ಲರಲ್ಲಿ ಹಲವರು ನಮಗೆ ಕ್ರೈಸ್ತ ಧರ್ಮವನ್ನು ಕಲಿಸುವ ಸಲುವಾಗಿ ಹಿಂದೂಧರ್ಮವನ್ನು ಹಳಿದರು. ಅವರ ಮಾತು ನಿಜವೆಂದು ತೋರಿ ನಾವು ನಮ್ಮ ಧರ್ಮದ ವಿಷಯದಲ್ಲಿ ನಾಚಿಕೊಂಡೆವು." (ಅದೇ ಪುಟ:೨೭೭) ಆಧುನಿಕತೆ ಕಾಂಗ್ರೆಸ್‌ನ ಒಳಗಡೆ ಭಿನ್ನ ರೀತಿಯಲ್ಲಿ ಪ್ರವೇಶ ಪಡೆದಿತ್ತು. ನೆಹರೂ ಅವರ ವಾದ ಒಂದು ರೀತಿಯದ್ದಾಗಿದ್ದರೆ ಗಾಂಧಿಯವರ ವಾದ ಇನ್ನೊಂದು ರೀತಿಯದ್ದಾಗಿತ್ತು. ಇಬ್ಬರಲ್ಲಿಯೂ ಭಿನ್ನ ದೃಷ್ಟಿಕೋನಗಳಿದ್ದವು. ಗಾಂಧಿಯು ಕೈಗಾರಿಕೆಗಳು, ಯಂತ್ರೋಪಕರಣಗಳು ಮನುಷ್ಯರನ್ನು ಲೋಲುಪರನ್ನಾಗಿ ಮಾಡುತ್ತದೆ ಎಂದು ನಂಬಿದ್ದರು. ಆದರೆ ನೆಹರೂ ಆಧುನಿಕ ನಾಗರಿಕ ಜಗತ್ತಿನ ವಿರೋಧಿಯಲ್ಲ.

ನೇಕಾರರು

ನೇಯ್ಗೆ ನೇಕಾರರ ಪ್ರಮುಖ ವೃತ್ತಿ. ಈ ವೃತ್ತಿಗೆ ಸಂಬಂಧಿಸಿದಂತೆ ನೂಲುವವರು, ಬಣ್ಣಹಾಕುವವರು ಇರುತ್ತಾರೆ. ಕರ್ನಾಟಕದಲ್ಲಿ ಬಹಳ ಹಿಂದಿನಿಂದಲೂ ವಾಣಿಜ್ಯ ಕ್ಷೇತ್ರದಲ್ಲಿ ನೇಕಾರರಿಗೆ ಪ್ರಮುಖ ಪಾತ್ರವಿತ್ತು. ಕರ್ನಾಟಕ ಹತ್ತಿ ದೇಶ–ವಿದೇಶಗಳಲ್ಲಿ ವಿಖ್ಯಾತವಾಗಿತ್ತು ಎಂಬುದು ಗಮನಾರ್ಹ.

ವಿವರಗಳಿಗೆ ನೋಡಿ: ಡಾ. ವಿ. ಎಲ್. ಪಾಟೀಲ್ ೨೦೦೯ ವಡ್ಡಾರಾಧನೆ ಜಾನಪದೀಯ ಅಧ್ಯಯನ ಪುಟ. ೧೭೭.

ನೈಜಭಾವ

ಎಷ್ಟು ಕಲಿಸಿದರೂ ಹುಟ್ಟು ಗುಣ ಬಿಟ್ಟು ಹೋಗುವುದಿಲ್ಲ. ಗಾದೆಯ ಮಾತನ್ನು ರನ್ನನು ಬಳಸಿಕೊಂಡಿದ್ದಾನೆ. ಹುಟ್ಟು ಗುಣ ಘಟ್ಟ ಹತ್ತಿದರೂ ಬಿಡುವುದಿಲ್ಲ

ಎನ್ನುವುದು ಇಲ್ಲಿ ಬದಲಾವಣೆ ಹೊಂದಿದೆ. ನಿಜವಾದುದು ಯಾರು ಹೇಳಿದರೂ ಬಿಟ್ಟು ಹೋಗುವುದಿಲ್ಲ. ಗುಣವನ್ನು ಬದಲಿಸಲು ಬರುವುದಿಲ್ಲ. ಗುಣ ಸ್ವಭಾವಗಳು ಪರಿವರ್ತನೆ ಹೊಂದದವುಗಳು. ಮನುಷ್ಯನ ಗುಣದ ಕುರಿತಾದ ವಿವರಣೆಯಿದು. ರನ್ನನು ಇದನ್ನು ನೈಜ ಭಾವವೆಂದು ಕರೆದಿದ್ದಾನೆ.

ನೈತಿಕ ಸ್ವಾತಂತ್ರ್ಯ

ಯಾವುದೇ ನೀತಿ ನಿಯಮಾವಳಿಯನ್ನು ನಿರಾಕರಿಸುವುದು ಅನೈತಿಕತೆ ಎಂದು ಕರೆಯಿಸಲ್ಪಡುತ್ತವೆ. ನೈತಿಕತೆ ಎನ್ನುವುದು ಒಂದು ಪ್ರಜ್ಞಾಪೂರ್ವಕವಾದ ಹಾಗೂ ನಿಯಮಬದ್ಧವಾದ ಪ್ರತಿಕ್ರಿಯೆಯಾಗಿದೆ. ಸಾಮಾಜಿಕ ಒಳ್ಳೆಯತನವು ನೀತಿಯಾದರೆ ಸಾಮಾಜಿಕ ಕೆಡುಕು ಅನೈತಿಕವಾಗುತ್ತದೆ. ಅನೈತಿಕತೆ ಎನ್ನುವುದು ಇನ್ನೊಂದೆಡೆಯಿಂದ ಅಮಾನವೀಯತೆಯ ಮುಖವನ್ನು ಹೊಂದಿರುತ್ತದೆ. ಇದಕ್ಕೆ ಸಾಮಾಜಿಕತೆಯ ಬಗ್ಗೆ ಯಾವ ಗೌರವವೂ ಇಲ್ಲ. ಇದು ಬೂರ್ಜ್ವಾಗಳ ಸಿನಿಕ ಪ್ರವೃತ್ತಿಯನ್ನು ಸಂಕೇತಿಸುತ್ತದೆ. ನೀತಿ ಮತ್ತು ಅನೀತಿಯ ನಡುವಣ ಸಂಬಂಧವು ತುಂಬಾ ತೆಳುವಾದ ಅಂತರವನ್ನು ಹೊಂದಿದೆ. ಒಂದು ಸಂದರ್ಭದಲ್ಲಿ ನೈತಿಕವಾದುದು ಇನ್ನೊಂದು ಸಂದರ್ಭದಲ್ಲಿ ಅನೈತಿಕವಾಗಬಹುದು. ಈ ನೀತಿ–ಅನೀತಿಯ ಪರಿಕಲ್ಪನೆಯನ್ನು ಹೇರುವುದು ಕೂಡಾ ಸಮಾಜ ಮತ್ತು ರಾಜಕೀಯ ನಿಲುವುಗಳು. ರಾಜಕಾರಣಕ್ಕೆ ನೀತಿ ಸಂಹಿತೆಗಳು ಮುಖ್ಯ. ಹಾಗೆಯೇ ಧಾರ್ಮಿಕ ಸಂಸ್ಥೆಗಳು ಕೂಡಾ ಮನುಷ್ಯರನ್ನು ಹದ್ದು ಬಸ್ತಿನಲ್ಲಿಡಲು ನೀತಿ–ನಿಯಮಾವಳಿಗಳನ್ನು ರೂಪಿಸುತ್ತದೆ.

ವಿವರಗಳಿಗೆ ನೋಡಿ: ಸುನಿಲ್ ಸಹಸ್ರಬುಧೆ, ಕೆ.ಪುಟ್ಟಸ್ವಾಮಿ(ಅನು) ೨೦೦೩ ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು
ಮಹಾತ್ಮಾಗಾಂಧಿ ೧೯೫೮ ಧರ್ಮ ಮತ್ತು ನೀತಿ
ಶ್ರೀಮನ್ ನಾರಾಯಣ ೨೦೦೧ ಮಹಾತ್ಮಗಾಂಧಿಯವರ ಆಯ್ದ ಕೃತಿಗಳು(೩)
Aijaz Ahmad 1999 In theory

ನೈವೇದ್ಯ

ನಿವೇದನೆಯೆನ್ನುವುದರಿಂದ ನೈವೇದ್ಯವು ಹುಟ್ಟಿಕೊಂಡಿದೆ. ಯಾವ ವಸ್ತುವನ್ನು ದೇವರಿಗೆ ನಿವೇದನೆ ಮಾಡಲು ಹೊರಟಿರುತ್ತೇವೆಯೋ ಅದು ನೈವೇದ್ಯವಾಗುತ್ತದೆ. ಮೂರ್ತಿ ಪೂಜೆಯಲ್ಲಿ ನೈವೇದ್ಯಕ್ಕೆ ವಿಶೇಷ ಮಹತ್ವವಿದೆಯೆಂಬುದು ಗಮನಾರ್ಹ. ನೈವೇದ್ಯ ಮಾಡಿರುವುದನ್ನು ಅನಂತರ ಪ್ರಸಾದ ರೂಪವಾಗಿ ಸ್ವೀಕರಿಸಲಾಗುತ್ತದೆ.

ನ್ಯಾಯತೀರ್ಮಾನ

ಕೌಟಿಲ್ಯನ ಅರ್ಥ ಶಾಸ್ತ್ರದಲ್ಲಿ ಸಾಲ, ಮಾನಭಂಗ, ಹೊಡೆದಾಟ, ದಾಯವಿಭಾಗ ಮುಂತಾದ ವ್ಯವಹಾರಗಳಿಗೆ ಧರ್ಮಸ್ಥೀಯ ಎಂಬ ನ್ಯಾಯಸ್ಥಾನಗಳಿದ್ದವು. (ಎಂ.ವಿ. ಕೃಷ್ಣರಾವ್ ೧೯೫೩ ಕೌಟಿಲ್ಯ ಮೈಸೂರು ವಿ.ವಿ. ಪು. ೩೫–೩೬)

ನ್ಯಾಯ ವಿರುದ್ಧ

ಉಕ್ತ ಎಂದರೆ ಹೇಳಿದ ವಿಚಾರಗಳೆಲ್ಲವೂ ನ್ಯಾಯಶಾಸ್ತ್ರದ ಪ್ರಮಾಣಗಳಿಗೆ ಸಮ್ಮತವಾಗಿರಬೇಕು. ಈ ಪ್ರಮಾಣಗಳು ನಾಲ್ಕು: ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಬ್ದ. ನ್ಯಾಯವಿರುದ್ಧವನ್ನು ಕವಿರಾಜ ಮಾರ್ಗಕಾರನು'ಮಹಾದೋಷ'ವೆಂದು ಕರೆದಿದ್ದಾನೆ.

ಪಂಚಕಾಮಬಾಣಗಳು

ಅರವಿಂದ, ಅಶೋಕ, ಭೂತ, ನವಮಲ್ಲಿಕಾ, ನೀಲೋಫತ್ಪಲ ಪಂಚಕಾಮಬಾಣಗಳು. ಉತ್ಪಾದನೆ. ಶೋಷಣ, ಸ್ತಂಭನ, ಸಮ್ಮೋಹನ (ಇನ್ನೊಂದು) ಪಂಚಬಾಣಗಳ ಗುಣಗಳು. ಮೊದಲನೆಯದರಲ್ಲಿ ಭಾವವನ್ನು ಉತ್ಪಾದಿಸುವ ಗುಣವಿದೆ. ಅಶೋಕಕ್ಕೆ ಮತ್ತೊಂದು ಗುಣ. ಹೀಗೆ ಒಂದೊಂದು ಗುಣ ಒಂದೊಂದಕ್ಕೆ ಇದೆಯೆಂದು ಪುರಾಣಗಳು ಹೇಳುತ್ತವೆ. ಇವು ಮನ್ಮಥನ ಬಾಣಗಳಾಗಿವೆ. ಮತ್ತು ಬಾಣಗಳು ಕೂಡಾ ಹೂಗಳ ಹೆಸರುಗಳನ್ನು ಹೊಂದಿವೆ. ಹೂಗಳು ಕ್ರೂರವಲ್ಲ. ಬೇರೆ ಬಾಣಗಳಂತೆ ಈ ಬಾಣಗಳು ಗಾಯ ಮಾಡುವುದಿಲ್ಲ. ಇವುಗಳ ಗುಣ ಮನಸ್ಸಿನ ಮೇಲೆ ಪ್ರಭಾವ ಬೀರುವುದು ಮಾತ್ರ. ಅದಕ್ಕೆ ಮನ್ಮಥನೆಂದು ಬಂದಿದೆ. ಮನವನ್ನು ಮಥಿಸುವವನು. ಮನ್ಮಥನನ್ನು ಅಂಗಜ, ಕಾಮ, ಮನಸಿಜಾರಿ, ಎಂದೂ ಕರೆಯುತ್ತಾರೆ.

ಪಂಚಗವ್ಯ

ಹಾಲು ಮೊಸರು, ತುಪ್ಪ, ಗಂಜಲ, ಸಗಣಿ ಇವುಗಳನ್ನು ಮಿಶ್ರಮಾಡಿ ಶುದ್ಧಿಗಾಗಿ ಉಪಯೋಗಿಸುವ ಪದಾರ್ಥವೇ ಪಂಚಗವ್ಯ. ಪಂಚಗವ್ಯವನ್ನು ತಳಿಸುವುದು ಎಂದರೆ ಶುದ್ಧಿಗೊಳಿಸುವುದು ಎಂದರ್ಥ. ಹಸು ಪವಿತ್ರ ಹಸುವಿನ ಹಾಲು ಅಷ್ಟೇ ಪವಿತ್ರವೆಂಬ ನಂಬಿಕೆಯ ತಳಹದಿಯ ಮೇಲೆ ಇದು ರೂಪುಗೊಂಡಿದೆ. ಹಾಲು, ಮೊಸರು, ಗಂಜಲ, ಸಗಣಿ–ಇವುಗಳು ತುಂಬಾ ಪವಿತ್ರವಾದ ವಸ್ತುಗಳು. ಇಲ್ಲಿ ಗೋವಿಗೆ ಕೊಟ್ಟ ಮಹತ್ವವು ಗಮನಾರ್ಹ. ಇದು ವೈದಿಕ ಆಚರಣೆಯಲ್ಲಿ ಬರುತ್ತದೆ.

ಪಂಚಗುರು

ಪಂಚಪರಮೇಷ್ಠಿಗಳು; ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸರ್ವಸಾಧುಗಳು. ಇವರು ಪಂಚಗುರುವೆನಿಸಿಕೊಳ್ಳುತ್ತಾರೆ. ಇದು ಜೈನಧರ್ಮದ ಪರಿಭಾಷೆಯಾಗಿದೆ.

ಪಂಚ ತಂತ್ರ ಪ್ರಕಾರಗಳು

ಸ್ನೇಹಿತರಲ್ಲಿ ಒಡಕುಂಟು ಮಾಡುವುದು ಭೇದ. ವಿಚಾರಿಸಿಕೊಳ್ಳದೆ ಕೆಲಸ ಮಾಡುವುದು ಸರಿಯಲ್ಲ. ಆದುದರಿಂದ ಸರಿಯಾಗಿ ಪರೀಕ್ಷಿಸಿ ಕೆಲಸ ಮಾಡುವುದು

ಪರೀಕ್ಷೆಯೆನಿಸಿಕೊಳ್ಳುತ್ತದೆ. ನಂಬದವರನ್ನು ನಂಬುವಂತ ಮಾತಿನಲ್ಲಿ ಒಪ್ಪಿಸಿ ಕೆಲಸ ಮಾಡುವುದು ವಿಶ್ವಾಸವೆನಿಸಿಕೊಳ್ಳುತ್ತದೆ. ಅನ್ಯರ ಬಗೆಯನ್ನು ತಿಳಿದು ಸಂಧಾನಗೆಯ್ದು ವಂಚಿಸುವುದು ವಂಚನೆಯೆನ್ನಿಸಿಕೊಳ್ಳುತ್ತದೆ. ಸಂಬಂಧಿಸಿದವರನ್ನು ನಂಬುವಂತೆ ಮಾಡಿ ತಮ್ಮವರನ್ನಾಗಿಸಿಕೊಳ್ಳುವುದು ಮಿತ್ರಕಾರ್ಯ. ಇದುವೇ ಪಂಚತಂತ್ರ ಕೃತಿಯ ಮೂಲ ತಿರುಳಾಗಿದೆ.

ವಿವರಗಳಿಗೆ ನೋಡಿ: ತೆಕ್ಕುಂಜ ಗೋಪಾಲಕೃಷ್ಣ ೧೯೫೬ ಶ್ರದ್ಧಾಂಜಲಿ ಪುಟ. ೧೨೮-೧೨೯

ಪಂಚತ್ವ

ಪಂಚತ್ವವೆಂದರೆ ಸಾವು. ಸಂಸ್ಕೃತದಲ್ಲಿ ಪಂಚತಾ ಅಂದರೆ ಮರಣ; ಸಾವು; ಶರೀರಕ್ಕೆ ಆರಂಭಕವಾದ ಪಂಚಮಹಾಭೂತಗಳು. ಕನ್ನಡದಲ್ಲಿ ಪಂಚತ್ವವೆಂದರೆ ಸಾವು ಸ್ವಲ್ಪಮಟ್ಟಿಗೆ ಇದು ಅಪರೂಪವಾದ ಪದ. ಪಂಚ ಮಹಾಭೂತಗಳಲ್ಲಿ ಪ್ರಾಣವು ಲೀನವಾಗುವುದರಿಂದ ಪಂಚತ್ವವೆಂದು ಬಂದಿರಬೇಕು.

ಪಂಚಪದಂಗಳ್

ಪಂಚಪದ ಎಂದರೆ ಪಂಚ ಪರಮೇಷ್ಠಿಗಳಿಗೆ ನಮಸ್ಕಾರ ಮಾಡುವಾಗ ಹೇಳುವ ಮಂತ್ರ. ಪದವೆನ್ನುವುದು ಕನ್ನಡದ್ದು "ಪಂಚ" ಸಂಸ್ಕೃತ.

ಪಂಚಪ್ರಾಣಗಳು

ಪಂಚ ಪ್ರಾಣಗಳು, ಐದು ಜ್ಞಾನೇಂದ್ರಿಯ ಮತ್ತು ಐದು ಕರ್ಮೇಂದ್ರಿಯಗಳು, ಬುದ್ಧಿ ಮತ್ತು ಮನಸ್ಸಿನಿಂದ ಕೂಡಿ ಪಂಚೀಕರಣವಾಗದ ಐದು ಮಹಾಭೂತಗಳಿಂದ ನಿರ್ಮಿತವಾದ ಈ ಸೂಕ್ಷ್ಮ ಶರೀರವು "ಭೋಗದ ಉಪಕರಣ"ವೆನಿಸುತ್ತದೆ.

(ಸ್ವಾಮಿ ಚಿನ್ಮಯಾನಂದ 1988 I – 2)

ಈ ಶ್ಲೋಕದಲ್ಲಿ "ಪ್ರಾಣ" ಎನ್ನುವ ಪದದ ಅರ್ಥ ಸರಿಯಾಗಿ ಮನದಟ್ಟು ಮಾಡಿಕೊಳ್ಳಬೇಕು. ಅದು "ನಮ್ಮ ದೇಹದಲ್ಲಿನ ಚೇತನದ ವ್ಯಕ್ತತೆ" ಮತ್ತು ಐದು ಪ್ರಾಣಗಳು, ಅದರ ಐದು ಕಾರ್ಯಕ್ಷೇತ್ರಗಳು ಅಥವಾ ಐದು ವಿಧವಾಗಿ ಕಾರ್ಯೋನ್ಮುಖವಾಗಿರುವ ಪ್ರಾಣದ ಪ್ರದರ್ಶನ ಮಾತ್ರ.

ಪ್ರಾಣವೆಂದರೆ ಅದು ನಮ್ಮ ಚೇತನವನ್ನು ಸೂಚಿಸುತ್ತದೆ. ಅವು –

(1) ಪ್ರಾಣ :– ಇಂದ್ರಿಯಗಳ ವಿವಿಧ ಸಕರ್ಮಕ ಕಾರ್ಯಗಳನ್ನು ನಿಯಂತ್ರಿಸುವ ಜೀವ–ಬಲ. ಈ ಪ್ರಾಣದ ಪ್ರಾಭಾವದಿಂದ ನಮ್ಮ ಜ್ಞಾನೇಂದ್ರಿಯಗಳು ಕೆಲಸ ಮಾಡುತ್ತವೆ.

(2) ಅಪಾನ :– ನಮ್ಮ ದೇಹದಿಂದ ವಿಸರ್ಜಿಸುವ ಶಕ್ತಿ, ಇದರಿಂದಲೇ ನಮ್ಮ ಶರೀರವು ತನಗೆ ಬೇಡದ ಮತ್ತು ವಿಷಪ್ರದವಾದ ವಸ್ತುಗಳನ್ನು ಶರೀರದಿಂದ ಹೊರದೂಡಬಲ್ಲದು.

(3) ವ್ಯಾನ :– ವ್ಯಾನವು ಆಹಾರದ ಸಮರ್ಪಕ ಜೀರ್ಣತೆಗೆ ಸಹಕಾರಿಯಾದ ಶಕ್ತಿ. ಇದರಿಂದಲೇ ತಿಂದ ಆಹಾರವು ಸರಿಯಾಗಿ ಪಚನವಾಗಿ ರಕ್ತಗತವಾಗಲು ಸಾಧ್ಯವಾಗುವುದು.

(4) ಸಮಾನ :– 'ಸಮಾನ'ವು ರಕ್ತಗತವಾದ ಆಹಾರವನ್ನು ದೇಹದ ಬೇರೆ ಬೇರೆ ಭಾಗಗಳಿಗೆ ಅವುಗಳ ಕೆಲಸಕ್ಕೆ ಅನುಸಾರವಾಗಿ, ಸರಿಯಾದ ರೀತಿಯಲ್ಲಿ ಹಂಚುವ ಶಕ್ತಿ. ಕೆಲಸ ಮಾಡುವ, ಕಡಿಯುವ ಮತ್ತು ಇತರ ಕಷ್ಟತರವಾದ ಕೆಲಸ ಮಾಡುವ ಕೈಗಳಿಗೆ ಹೆಚ್ಚು ಆಹಾರ, ಹೆಚ್ಚು ನಡೆಯುವ ಕಾಲುಗಳಿಗೆ ಸಮರ್ಪಕವಾದ (ಓಡುವುದೇ ಮೊದಲಾದ ಕ್ರೀಡಾ ಪಟುಗಳಲ್ಲಿ) ಆಹಾರ ವಿನಿಮಯ "ಸಮಾನ"ದ ಕಾರ್ಯ.

(5) ಉದಾನ :– ಇರುವ ಸನ್ನಿವೇಶದಿಂದ ಮೇಲಕ್ಕೆ ಮತ್ತು ಮುಂದೆ ಈಕ್ಷಿಸಿ ಹೊಸ ಹೊಸ ವಿಷಯಗಳ, ಜ್ಞಾನ ಪ್ರಾಪ್ತಿಯನ್ನು ಪಡೆದು, ಅದರಿಂದ ನಮ್ಮಲ್ಲಿ ಇರುವ ತಪ್ಪು ಭಾವನೆಗಳನ್ನು ತಿದ್ದಿಕೊಂಡು, ಕೆಟ್ಟ ನಡತೆಯನ್ನು ಸರಿ ಪಡಿಸಿಕೊಂಡು ನಮ್ಮನ್ನು ನಾವು ಸುಧಾರಿಸಿಕೊಳ್ಳುವಂತೆ ಮಾಡುವ ಶಕ್ತಿ ಉದಾನ. (ಶಂಕರರ ಆತ್ಮಬೋಧ)

ಪಂಚ ಮಹಾಪಾತಕಂಗಳ್

ಬ್ರಹ್ಮ ಹತ್ಯೆ, ಸುರಾಪಾನ, ಸ್ತೇಯ ಮತ್ತು ಗುರುತಲ್ಪ ಗಮನವನ್ನು ಮಹಾಪಾತಕವೆಂದು ಗೌತಮದಿಂದ ಹಿಡಿದು ಮನು, ಯಾಜ್ಞವಲ್ಕ್ಯರು ಹೇಳಿದ್ದಾರೆ. ಪಾಪಿಗಳೊಡನೆ ಸೇರುವುದೂ ಮಹಾಪಾತಕವಾಗಿದೆ.

ಬಾಲ; ಸ್ತ್ರೀ; ಬ್ರಾಹ್ಮಣ; ಋಷಿ; ಗೋವು ಇವು ಮತಾಚಾರಕ್ಕೆ ಸಂಬಂಧಿಸಿದವು.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ
ಯುಗಯಾತ್ರೀ ಭಾರತೀಯ ಸಂಸ್ಕೃತಿ ೧೯೭೧ ಸಂಪುಟ. ೨ ಪುಟ. ೨೮೫
ದಿ. ನಾಗೇಶ ರಂಗೋ ಕುಲಕರ್ಣಿ (ಅನು) ೨೦೦೭ ಯಾಜ್ಞವಲ್ಕ್ಯ ಸ್ಮೃತಿ

ಪಂಚಮಹಾಭೂತಗಳು

ಪಂಚಮಹಾಭೂತಗಳ ವಿಚಾರವಾಗಿಯೂ ಹಿಂದೂ ಸಂಸ್ಕೃತಿಗಿಂತ ಭಿನ್ನವಾದ ನಿಲುಮೆ ಪ್ರತಿ ಸಂಸ್ಕೃತಿ ಶ್ರಮಣ ಪರಂಪರೆಯಲ್ಲಿ ಪ್ರತಿಪಾದಿತವಾಗಿದೆ. ಅಗ್ನಿ ಚಂದ್ರ ಸೂರ್ಯರಿಗೆ ಜೈನರಲ್ಲಿರುವ ಮಾನ್ಯತೆ ಅವು ದೈವದ ಪ್ರತೀಕವೆಂಬ ಅರ್ಥದಲ್ಲಿ ಅಲ್ಲ. ವೈದಿಕರಂತೆ ಜೈನರೂ ಸುಡುವರು–ಅಗ್ನಿ ಸಂಸ್ಕಾರ ಸಮಾನ ಆದರೆ ಪವಿತ್ರಾಗ್ನಿಯ ಪೂಜೆಯ ಕ್ರಮ ಇಲ್ಲಿ ಇಲ್ಲ. ಅಗ್ನಿ ಹೋತ್ರಗಳು ಇಲ್ಲಿಲ್ಲ. ನೀರು, ನೆಲ, ಗಾಳಿ ಇವುಗಳನ್ನು ದೈವವೆಂದು ತಿಳಿದಿಲ್ಲವೆಂದು (ಹಂ.ಪ.ನಾ.೨೦೦೬. ಪು. ೪೩)

ಪಂಚ ಮಹಾವಾದ್ಯಗಳು

ಕೊಂಬು, ತಮಟೆ, ಶಂಖ, ಭೇರಿ, ಜಾಗಟೆ ಇವು ಪಂಚ ಮಹಾವಾದ್ಯಗಳು.

ವಿವರಗಳಿಗೆ ನೋಡಿ: ಚಿದಾನಂದ ಮೂರ್ತಿ ಎಂ. ೨೦೦೮ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

ಪಂಚಮಹಾಶಬ್ದ

ಬಿರುದಾವಳಿಗಳನ್ನು ಹೊಗಳುವ ಪ್ರಸ್ತಾಪದಲ್ಲಿ ಮಾತ್ರ ಪಂಚಮಹಾಶಬ್ದಗಳ ಬಳಕೆಯಾಗುತ್ತಿತ್ತು. (ಕೊಂಬು, ತಮಟೆ, ಶಂಖ, ಭೇರಿ, ರಾಜಘಂಟ)

ಪಂಚಮುಷ್ಟಿ

ಕರ್ಮದ ಬೇರನ್ನು ಹರಿಯುವಂತೆ ಪಂಚಮುಷ್ಟಿಯಿಂದ ಕೇಶ ಪಾಶವನ್ನು ಕಿತ್ತುಕೊಂಡ ಚಿತ್ರಣ ಜೈನ ಕಾವ್ಯಗಳಲ್ಲಿ ಬರುತ್ತದೆ. ಐದು ಮುಷ್ಟಿಗಳಿಂದ ತಲೆಗೂದಲನ್ನು ತೆಗೆಯುವುದು ಜೈನ ಸಂಪ್ರದಾಯಗಳಲ್ಲಿ ಒಂದು.

ಪಂಚರತ್ನಗಳು

ನೀಲ, ವಜ್ರ, ಪದ್ಮರಾಗ, ಮುತ್ತು, ಹವಳಗಳು ಪಂಚರತ್ನಗಳಾಗಿವೆ. ಪಂಚರತ್ನಗಳಿಗೆ ವಿಶೇಷ ಮಹತ್ವವಿದೆ. ಜನ್ಮ ನಕ್ಷತ್ರಗಳಿಗೂ ರತ್ನಗಳನ್ನು ಧರಿಸುವುದಕ್ಕೂ ಸಂಬಂಧವಿದೆಯೆಂದು ಪ್ರತಿಪಾದಿಸುತ್ತಾರೆ.

ಪಂಚರತ್ನ ಮಂಗಳಜಳ

ಸುವರ್ಣ, ರಜತ, ಮುಕ್ತಾ, ಮಾಣಿಕ್ಯ, ಪ್ರವಾಳಕ ಎನ್ನುವುದು ನೀಲ, ವಜ್ರ, ಪದ್ಮರಾಗ ಮುತ್ತು ಹವಳಗಳನ್ನು ಪಂಚರತ್ನವೆನ್ನುತ್ತಾರೆ. ಪಂಚರತ್ನಗಳು ಶಾತ ಕುಂಭವೆಂದರೆ ಚಿನ್ನದ ಕಲಶ, ಕಲಶದಲ್ಲಿನ ನೀರು ಮಂತ್ರ ಪೂರಿತವಾದರೆ ಆಗ ಅದು ಮಂಗಳ ಜಲವಾಗುತ್ತದೆ. ಕಲಶದಲ್ಲಿರುವ ನೀರನ್ನು ತಲೆಗೆ ಸುರಿದರೆ ಆಗ ಮಂಗಳ ಜಲದ ಸ್ನಾನವಾಗುತ್ತದೆ. ಶುಭಕಾರ್ಯಕ್ಕೆ ಮಂಗಳ ಸ್ನಾನವಾಗಬೇಕು. ಇದು ಬಹಿರ್‌ಶುದ್ಧಿಗೆ ಕಾರಣವಾಗುತ್ತದೆ. ಲೌಕಿಕವಾಗಿ ಇದನ್ನು 'ಮಡಿ'ಯೆಂದು ಕರೆಯುತ್ತಾರೆ.

ವ್ರತಕ್ಕೆ ಕೂರುವ ಮುನ್ನ ಮಂಗಳ ಸ್ನಾನವಾದರೆ –ಅನಂತರ ಅವರು ಯಾರನ್ನು ಮುಟ್ಟಬಾರದು. ಮುಟ್ಟಿದರೆ ಮೈಲಿಗೆಯಾಗುತ್ತದೆಯೆಂಬ ನಂಬಿಕೆಯಿದೆ. ವಿವರಗಳಿಗೆ ನೋಡಿ: : ಹ.ಪ.ಸಂ .

ಪಂಚವಿಧಬ್ರಹ್ಮಚರ್ಯ

ಸ್ತ್ರೀಯರ ಕಥಾಶ್ರವಣ, ದರ್ಶನ, ಅವರೊಡನೆ ಈ ಮೊದಲು ಭೋಗಿಸಿದ ಸುಖ ಸ್ಮರಣೆ, ಅವರನ್ನು ಆಕರ್ಷಿಸುವಂತೆ ದೇಹಾಲಂಕರಣ, ಕಾಮವಿಕಾರವನ್ನು ವೃದ್ಧಿಪಡಿಸುವಂತಹ ಆಹಾರಸೇವನೆ –ಈ ಐದು ವಿಷಯಗಳನ್ನು ತ್ಯಜಿಸುವುದು ಪಂಚವಿಧ ಬ್ರಹ್ಮಚರ್ಯವೆನಿಸುವುದು ಎನ್ನುವುದು ಜೈನಧರ್ಮದ ನಂಬಿಕೆಯಾಗಿದೆ.(ಶಾಂತಿಪುರಾಣ 6–54)

ಪಂಚಾಗ್ನಿ

ಪಂಚಾಗ್ನಿಯೆಂದರೆ ಐದು ಬಗೆಯ ಅಗ್ನಿಗಳು – ಪವನ, ಪಾವನ, ಆಹವನೀಯ, ತ್ರೇತಾ, ಗಾರ್ಹಪತ್ಯ. ಇದರಲ್ಲಿ ಕೊನೆಯದನ್ನು ಗೃಹಸ್ಥರು ಆಚರಿಸಬೇಕು. ಋಷಿಗಳು ಬೇಸಿಗೆಯಲ್ಲಿ ನಾಲ್ಕು ಕಡೆ ಬೆಂಕಿ ಉರಿಸಿ, ಮಧ್ಯೆ ಕುಳಿತು, ನಡುನೆತ್ತಿಗೆ ಸೂರ್ಯನ ಬಿಸಿಲು ಬೀಳುವಾಗ ತಪಸ್ಸನ್ನು ಆಚರಿಸುವ ಕ್ರಮವನ್ನು ಪಂಚಾಗ್ನಿ ಮಧ್ಯದ ತಪಸ್ಸು ಎಂದು ಹೇಳುತ್ತಾರೆ.

ಬೆಂಕಿ: ವೇದದ ಕಾಲದ ಅಧಿದೇವತೆ. ಅಗ್ನಿ ಐದು ಬಗೆ:

ಕಾಲಾಗ್ನಿ – ಕಾಲಕ್ಕೆ ಸಂಬಂಧಿಸಿದ್ದು

ಕ್ಷುಧಾಗ್ನಿ – ಹಸಿವೆಗೆ ಸಂಬಂಧಿಸಿದ್ದು

ಶೀತಾಗ್ನಿ – ಶೀತಕ್ಕೆ ಸಂಬಂಧಿಸಿದ್ದು

ಜ್ಞಾನಾಗ್ನಿ – ಜ್ಞಾನಕ್ಕೆ ಸಂಬಂಧಿಸಿದ್ದು

ಈ ಐದು ಅಗ್ನಿಗಳು ನಮ್ಮ ದೇಹದಲ್ಲಿದೆಯೆಂದು ಹೇಳುತ್ತಾರೆ. ಶ್ರೌತ ಸಿದ್ಧಾಂತದಲ್ಲಿ ಗ್ರಾಹಪತ್ಯ ಅಗ್ನಿ; ಆಹಾವೇನೀಯ ಮತ್ತು ದಕ್ಷಿಣಾಗ್ನಿ. ಋಗ್ವೇದದಲ್ಲಿ ಅಗ್ನಿಯ ಕುರಿತು ವಿಶೇಷವಾದ ಸೂತ್ರಗಳಿವೆ. ಅವನು ದೇವತೆಗಳ ಪುರೋಹಿತ. ವಿಶ್ವದ್ಯಾಪಾರದಲ್ಲಿನ ನಡೆಯುವ ನಿಯಮಕ್ಕೂ ಋತವೆಂದು ಹೆಸರು. ಅವನು ನಿಯಮಕ್ಕೆ ಅಧಿಪತಿ. ಅವನು ನಿಯಮಕ್ಕೆ ಅಧಿಪತಿಯಾಗಿರುವುದರಿಂದ ಮಾತರಿಶ್ವ ಎಂಬುದು ಅವನ ಮತ್ತೊಂದು ಹೆಸರು. ಬೆಂಕಿಯಿಂದ (ಅನಲ) ಅಶುಚಿಯಾದ ವಸ್ತುಗಳು ಶುಭ್ರವಾಗುತ್ತವೆ. ಅಂದರೆ ಬೆಂಕಿಯಿಂದ ಉರಿದು ಬೂದಿಯಾಗಿ ಶುಭ್ರವಾಗುತ್ತವೆ ಅಥವಾ ಪರಿವರ್ತಿತವಾಗುತ್ತವೆ.

"ಇಂದ್ರನನ್ನು ಬಿಟ್ಟರೆ ಅಗ್ನಿಯನ್ನು ಸ್ತುತಿಸಿರುವಷ್ಟು ಮತ್ತೆ ಯಾವ ದೇವತೆಯನ್ನೂ ಸ್ತುತಿಸಿಲ್ಲ. ಇವನ ಸ್ತೋತ್ರಕ್ಕಾಗಿಯೇ ಸುಮಾರು ಇನ್ನೂರು ಸೂಕ್ತಗಳಿವೆ. ಅಗ್ನಿಯ ಪೂಜೆ ಹಿಂದೂಗಳಲ್ಲೂ ಪಾರಸಿಕರಲ್ಲೂ ವಿಶೇಷವಾಗಿ ಆಚರಣೆಯಲ್ಲಿದೆ.

ದೇವತೆಗಳನ್ನು ಕರೆದುಕೊಂಡು ಬರುವವನು ಅಗ್ನಿ. ಅವನು ದೇವತೆಗಳ ಪುರೋಹಿತ, ಯಜ್ಞಕ್ಕೆ ಹೋತೃ. ಅವನು ಋತದ ಗೋಪಾ. ವಿಶ್ವ ವ್ಯಾಪಾರದಲ್ಲಿ ಕಾಣಬಹುದಾದ ಕ್ರಮಕ್ಕೂ ನಮ್ಮ ನಡತೆಯಲ್ಲಿ ಕಾಣಬಹುದಾದ ನಿಯಮಕ್ಕೂ ಋತ ಎಂದು ಹೆಸರು. ಅಗ್ನಿ ಆ ನಿಯಮಕ್ಕೆ ಅಧಿಪತಿ. ಮಾತರಿಶ್ವನ್ ಎಂಬುದು ಅವನ ಇನ್ನೊಂದು ಹೆಸರು. ಅವನು ಪ್ರಕಾಶಮಾನವಾದ ದೇವತೆ; ಸೂರ್ಯನಂತೆ, ಮಿಂಚಿನಂತೆ ಹೊಳೆಯುತ್ತಾನೆ. ಅವನು ರಾತ್ರಿಯಲ್ಲಿ ಬೆಳಗಿ ಕತ್ತಲನ್ನು ಓಡಿಸುತ್ತಾನೆ. ಅವನು ಚಿನ್ನದಂತೆ ಪ್ರಕಾಶಮಾನವಾದ ರಥವನ್ನು ಪಡೆದಿರುತ್ತಾನೆ. ಹೊಗೆಯೇ ಅವನ ಧ್ವಜ. 'ಧೂಮಕೇತು' ಎಂಬುದು ಅವನ ಹೆಸರುಗಳಲ್ಲಿ ಒಂದು. ಅಗ್ನಿ 'ದ್ಯೌಃ'ನ ಮಗ. ದ್ಯಾವಾಪೃಥಿವಿಗಳ ಮಗ ಎಂದು ಹೇಳುವುದೂ ಉಂಟು. ಹವಿಸ್ಸನ್ನು ಹೊತ್ತುಕೊಂಡು ಹೋಗಿ ದೇವತೆಗಳಿಗೆ ಅವರವರ ಭಾಗವನ್ನು ಹಂಚುವುದು ಅಗ್ನಿಯ ಕೆಲಸ. ಸತ್ತವರನ್ನು ಪಿತೃಲೋಕಕ್ಕೆ ಕರೆದುಕೊಂಡು ಹೋಗುವುದೂ ಅವನ ಕೆಲಸ. ಅಗ್ನಿ ಮಾನವರಿಗೆ ಬಹಳ ಹತ್ತಿರದ ಸಂಬಂಧಿ. ಅವನು ಅವರ ತಂದೆ, ಅಣ್ಣ, ಅವರ ಮಗನೆಂದೂ ಕೆಲವು ವೇಳೆ ಹೇಳುವುದುಂಟು. ಅವನು ಅವರೊಡನೆ ಅವರ ಮನೆಯಲ್ಲಿ ವಾಸಿಸುತ್ತಾನೆ. ಆದುದರಿಂದ ಅವನಿಗೆ 'ಗೃಹಪರಿ' ಎಂದು ಹೆಸರು ಬಂದಿದೆ.

ಅಗ್ನಿ ಋತದ ಗೋಪನಲ್ಲದೆ ಜ್ಞಾನಿ, ಎಲ್ಲವನ್ನೂ ತಿಳಿದವನು. ಆದುದರಿಂದ ಅವನನ್ನು 'ಜಾತವೇದಸ್' ಎಂದು ಕರೆಯುವುದು ವಾಡಿಕೆ. ಅವನು ಮಾನವನಿಗೆ ಬಹಳ ಉಪಕಾರಿ; ಸಂತಾನ, ಸಂಪತ್ತು ಮತ್ತು ಸೌಖ್ಯಗಳನ್ನು ಕೊಡುತ್ತಾನೆ."(ಜಿ. ಹನುಮಂತರಾವ್)

ವಿವರಗಳಿಗೆ ನೋಡಿ: ಜಿ. ಹನುಮಂತರಾವ್ ೨೦೦೧ ಋಗ್ವೇದ ಸೂಕ್ತಗಳು ಪುಟ. ೮೪–೮೫
ಟಿ.ವಿ.ವೆಂಕಟಾಚಲಶಾಸ್ತ್ರಿ ೧೯೯೯ ಶ್ರೀವತ್ಸ ನಿಘಂಟು

ಪಂಡಿತೆ

ಪಂಡಿತದ ಸ್ತ್ರೀವಚನ ಪಂಡಿತೆ. ವಾತ್ಸ್ಯಾಯನನ 'ಕಾಮಸೂತ್ರ'ದಲ್ಲಿ ಆರು ಮಂದಿ ಅಧ್ಯಾಪಿಕೆಯರು ಈ ರೀತಿಯಲ್ಲಿರುತ್ತಾರೆ:

1. ಪುರುಷನ ಸಹವಾಸ ಹೊಂದಿದ ಎಂದರೆ ಜತೆಗಾರ ದಾಯಿಯ ಮಗಳು
2. ನಿರ್ದೋಷವಾಗಿ ಮಾತಾಡುವ ಗೆಳತಿ
3. ಸಮ ವಯಸ್ಕಳಾದ ಚಿಕ್ಕಮ್ಮ
4. ಚಿಕ್ಕಮ್ಮನಂತೆಯೇ ವಿಶ್ವಾಸಕ್ಕೆ ಯೋಗ್ಯಳಾದ ವೃದ್ಧದಾಸಿ
5. ಮೊದಲಿನಿಂದಲೂ ಪರಿಚಯವಿದ್ದ ಭಿಕ್ಷುಕಿ
6. ತನ್ನ ಅಕ್ಕ (ವೆಂಕಟ ಭಸ್ಮೆ ಜಿ. 1983. ಪು. 9)

ವಿವರಗಳಿಗೆ ನೋಡಿ: Acharya vipin 1973 Kamasutra Chandra Bandhu.

ಪಂಥಾತಿಚಾರ

ದಾರಿಯಲ್ಲಿ ನಡೆಯುವಾಗ ಆಗುವ ಪ್ರಾಣಿಹಿಂಸೆ ಮುಂತಾದ ಅತಿಚಾರಗಳು ಪಂಥಾತಿಚಾರವೆನಿಸಿಕೊಳ್ಳುತ್ತದೆ. ಇದಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಜೈನಧರ್ಮವು ಹೇಳಿದೆ.

ಪಂದಿವೇಂಟೆ

ಹಂದಿಯು ಬೆಳೆಗಳಿಗೆ ಉಪದ್ರವಕಾರಿ ಪ್ರಾಣಿ. ಬೆಳೆಯನ್ನು ರಕ್ಷಿಸಲು ಈಗಲೂ ಹಂದಿಯನ್ನು ಬೇಟೆಯಾಡುತ್ತಾರೆ. ಮಲೆನಾಡಿನಲ್ಲಿ ಹಂದಿಬೇಟೆ ವಿಶಿಷ್ಟವಾಗಿದೆ. ಬೇಟೆಯಾಗಿಯೂ ವ್ಯಸನ. ಎರಡನೆಯದಾಗಿ ಬೆಳೆ ಸಂರಕ್ಷಣೆಗೆ ಬೇಟೆಯು ಅತ್ಯಗತ್ಯ.

ವಿವರಗಳಿಗೆ ನೋಡಿ: ಮುಳಿಯ ತಿಮ್ಮಪ್ಪಯ್ಯ ೨೦೦೬ ನಾಡೋಜಪಂಪ ಪುಟ. ೨೬೦–೬೫.

ಪಂದೆ

ಪಂದೆಯೆಂದರೆ ಹೇಡಿಯೆಂದು ಅರ್ಥ. ರಣಹೇಡಿಗಳಿಗೆ ಸಮಾಜದಲ್ಲಿ ಸ್ಥಾನವಿಲ್ಲದ ಕಾಲದಲ್ಲಿ ಪಂದೆ ಎಂಬ ಶಬ್ದ ಅನೇಕ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಬಳಕೆಯಾಗುತ್ತದೆ. ಪಕಾರ ಹಕಾರವಾಗಿಯೂ ಪ್ರಯೋಗವಾಗಿದೆ ಎಂಬುದು ಗಮನಾರ್ಹ.

ಪಗರಣ

ವಿದ್ವಾಂಸರಾದ ಕವಿಗಳು ನಾಟಕಗಳನ್ನು ರಚಿಸಿರದಿದ್ದರೂ, ಜನಸಾಮಾನ್ಯರಲ್ಲಿ 'ಪಗರಣ' (ಸಂ. ಪ್ರಕರಣ)ಗಳೆಂಬ ಜನಪ್ರಿಯ ನಾಟಕಗಳಿದ್ದವು. ಪಗರಣದ ಉಲ್ಲೇಖ ಅತ್ತಿಮಬ್ಬೆಯ ಲಕ್ಕುಂಡಿ ಶಾಸನದಲ್ಲಿದೆ. ("ಪಗರಣಂ ಅಣ್ಮು.........") ಕವಿರಾಜಮಾರ್ಗ, ಧರ್ಮಾಮೃತ, ಕುಮಾರವ್ಯಾಸ ಭಾರತ ಮುಂತಾದ ಕಾವ್ಯಗಳಲ್ಲಿ ಬರುವ ಸಂಗತಿಗಳನ್ನು ನೋಡಿದರೆ, ಪಗರಣವು ವೇಷ, ಅಭಿನಯಗಳೇ ಪ್ರಧಾನವಾಗಿದ್ದು, ವಾಚಿಕಾಂಶವು ಅವುಗಳಿಗೆ ಅಧೀನವಾಗಿದ್ದ ಒಂದು ಬಗೆಯ ವಿನೋದ ವೇಷ ಪ್ರದರ್ಶನ ಎಂಬ ಭಾವನೆ ಬರುತ್ತದೆ. (ಡಾ.ಎಂ ಚಿದಾನಂದಮೂರ್ತಿ, 2008.ಪು. 518)

ಪ್ರಾಚೀನ ಕಾಲದಿಂದಲೂ ಜನಪದರನ್ನು ರಂಜಿಸುತ್ತಾ ಬಂದಿರುವ 'ಪಗರಣ ಇಂದಿನ ನವನಾಗರಿಕ ಕಾಲದವರೆಗೂ ಉಳಿಸಿಕೊಂಡು ಬಂದಿರುವುದು ಅದರ ಜನಪ್ರಿಯತೆಯನ್ನು ತಿಳಿಸುತ್ತದೆ. ಸಂಸ್ಕೃತ ನಾಟಕ ಪ್ರಭೇದಗಳಲ್ಲಿ 'ಪ್ರಕರಣ ರೂಪಕವೇ ಕನ್ನಡದಲ್ಲಿ 'ಪಗರಣ'ವಾಗಿದೆ ಎಂಬುದು ಸರ್ವಸಮ್ಮತ ಅಭಿಪ್ರಾಯವಾಗಿದೆ. ಈ ಪಗರಣ> ಹಗರಣ> ಹಗಣವಾಗಿ ಶಾಬ್ಧಿಕ ಪರಿವರ್ತನೆಯಾಗಿದೆ. ಹಾಸ್ಯ ಪ್ರಧಾನವುಳ್ಳ ಈ ಹಗರಣದ ಅರ್ಥವು ಒಂದು ಕೃತಕ (ಅಸಂಭವ)ವೆಂಬ ಅರ್ಥದತ್ತ ಹೊರಳಿದೆ.

ಕನ್ನಡದ ಮೊದಲ ಗ್ರಂಥವಾದ ಕವಿರಾಜಮಾರ್ಗದಲ್ಲಿ "ಶ್ರುತಿಕಷ್ಟ, ಶ್ರುತಿದುಷ್ಟ, ಅರ್ಥದುಷ್ಟ ಮತ್ತು ಕಲ್ಪನೋಕ್ತಿಕಷ್ಟ ಇವು ಕಾವ್ಯದೋಷಗಳು, ಶ್ರುತಿಕಷ್ಟ, ಅರ್ಥದುಷ್ಟ, ಕಲ್ಪನೋಕ್ತಿಕಷ್ಟ ಈ ಮೂರು "ನಗಿಸುಗುಮಪ್ಪುದರಿನಲ್ಲಿಗಂತವದೋಷಂ" ಆದ್ದರಿಂದ

ಇವು ಪಗರಣದಲ್ಲಿರಬಹುದೆಂದು ಹೇಳಲಾಗಿದೆ. ಇದರಿಂದ ಪಗರಣ ಹಾಸ್ಯ-ವಿನೋದಗಳಿಂದ ಮತ್ತು ಅಶ್ಲೀಲ ಅಸಂಬಧ್ಧ ಸಂಭಾಷಣೆಗಳಿಂದ ಕೂಡಿರಬಹುದೆಂದು ತಿಳಿಯುತ್ತದೆ.

ವಿದ್ವಾಂಸರಾದ ಕವಿಗಳು ನಾಟಕಗಳನ್ನು ರಚಿಸಿರದಿದ್ದರೂ, ಜನಸಾಮಾನ್ಯರಲ್ಲಿ 'ಪಗರಣ' (ಸಂ. ಪ್ರಕರಣ)ಗಳೆಂಬ ಜನಪ್ರಿಯ ನಾಟಕಗಳಿದ್ದವು. ಪಗರಣದ ಉಲ್ಲೇಖ ಅತ್ತಿಮಬ್ಬೆಯ ಲಕ್ಕುಂಡಿ ಶಾಸನದಲ್ಲಿದೆ. ("ಪಗರಣಂ ಅಣ್ಮು........") ಕವಿರಾಜಮಾರ್ಗ, ಧರ್ಮಾಮೃತ, ಕುಮಾರವ್ಯಾಸ ಭಾರತ ಮುಂತಾದ ಕಾವ್ಯಗಳಲ್ಲಿ ಬರುವ ಸಂಗತಿಗಳನ್ನು ನೋಡಿದರೆ, ಪಗರಣವು ವೇಷ, ಅಭಿನಯಗಳೇ ಪ್ರಧಾನವಾಗಿದ್ದು, ವಾಚಿಕಾಂಶವು ಅವುಗಳಿಗೆ ಅಧೀನವಾಗಿದ್ದ ಒಂದು ಬಗೆಯ ವಿನೋದ ವೇಷ ಪ್ರದರ್ಶನ ಎಂಬ ಭಾವನೆ ಬರುತ್ತದೆ.

ವಿವರಗಳಿಗೆ ನೋಡಿ: ಡಾ. ಎಂ ಚಿದಾನಂದಮೂರ್ತಿ ೨೦೦೮ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ. ೫೧೮
ಡಾ. ವಿ. ಎಲ್. ಪಾಟೀಲ ೨೦೦೯ ವಡ್ಡಾರಾಧನೆ ಜಾನಪದೀಯ ಅಧ್ಯಯನ ಪುಟ. ೧೯೨-೧೯೩
ಡಾ॥ ಟಿ.ವಿ.ವೆಂಕಟಾಚಲಶಾಸ್ತ್ರಿ ೧೯೯೯ ಶ್ರೀ ವತ್ಸ ನಿಘಂಟು ಪುಟ. ೩೨೫
ಯುಗಯಾತ್ರೀ ಭಾರತೀಯ ಸಂಸ್ಕೃತಿ ೧೯೭೧ ಸಂಪುಟ. ೨ ಪುಟ. ೩೨೬

ಪಗರಣದ ನಾಲ್ಕು ಸಮಸ್ಯೆಗಳು

ಪಗರಣದಲ್ಲಿ ಮೂರು ರೀತಿಯ ಕಷ್ಟಗಳು ಇವೆ. ಒಂದು ಶ್ರುತಿ ಕಷ್ಟಮತ್ತೊಂದು ಅರ್ಥ ಕಷ್ಟ ಹಾಗೂ ಮೂರನೆಯದು ಶ್ರುತ ದುಷ್ಟ ಹಾಗೂ ನಾಲ್ಕನೆಯದು ಕಲ್ಪನೆಯ ಕಷ್ಟ. ಕೇಳಲು ಕಷ್ಟವಾಗುವುದನ್ನು ಶ್ರುತಿ ಕಷ್ಟವೆಂದು ಕರೆಯುತ್ತಾರೆ. ಅರ್ಥದಲ್ಲಿ ಉಂಟಾಗುವ ಕಷ್ಟವನ್ನು ಅರ್ಥ ಕಷ್ಟವೆಂದು ಕರೆಯುತ್ತಾರೆ. ಪದವು ಸುಂದರವಾಗಿದ್ದರೂ ಅದರ ಅರ್ಥವು ಕಷ್ಟವಾದರೆ ಅದನ್ನು ಅರ್ಥ ಕಷ್ಟವೆಂದು ಕರೆಯುತ್ತಾರೆ. ಆದರೆ ಪಗರಣದಲ್ಲಿ ಶ್ರುತಿ ಕಷ್ಟ, ಅರ್ಥ ಕಷ್ಟ ಮತ್ತು ಶ್ರುತ ಕಷ್ಟವೆನ್ನುವುದು ದೋಷವಲ್ಲ. ಆದರೆ ಕಲ್ಪನೆಯ ಕಷ್ಟವಿರಬಾರದು ಎಂದು ಹೇಳುತ್ತಾರೆ.(ಮುಳಿಯ ತಿಮ್ಮಪ್ಪಯ್ಯ-ಪಾರ್ತಿಸುಬ್ಬ)

ಮುಳಿಯರ ಈ ಅಭಿಪ್ರಾಯವನ್ನು ಕೇಶೀರಾಜನ ಶ್ರುತಿ ಕಷ್ಟವೆಂಬ ಪರಿಭಾಷೆಯನ್ನು ತುಲನೆ ಮಾಡಬಹುದು.

ವಿವರಗಳಿಗೆ ನೋಡಿ: ಮುಳಿಯ ತಿಮ್ಮಪ್ಪಯ್ಯ ಸಮಗ್ರ ಸಾಹಿತ್ಯ ಸಂ. ೨ ಮುಳಿಯ ತಿಮ್ಮಪ್ಪಯ್ಯ ಶತಮಾನೋತ್ಸವ ಸಮಿತಿ ಮಂಗಳೂರು

ಪಚ್ಚಾಳು

ಪಚ್ಚಾಳು ಎಂದರೆ ವಿಭಾಗ ಮಾಡಿ ಆಳು. ಪಚ್ಚು ಎಂದರೆ ಪಾಲು ಮಾಡು. ಪಾಲನ್ನು ಮಾಡಿಕೊಂಡು ರಾಜ್ಯವನ್ನು ಆಳುವುದಕ್ಕೆ ಪಚ್ಚಾಳು ಎಂದು ರನ್ನನು ಹೇಳುತ್ತಾನೆ. ರಾಜ್ಯವನ್ನು ಪಾಲು ಮಾಡುತ್ತಾ ವಿಭಾಗಗಳನ್ನು ಆಳುವ ಕ್ರಮವು ಚಾಲ್ತಿಗೆ ಬಂದುದನ್ನು ಇದು ಸೂಚಿಸುತ್ತದೆ.

ಪಟ್ಟಣ

ಹರಪ್ಪ, ಮೊಹೆಂಜೊದಾರೋಗಳ ನಂತರದಲ್ಲಿ ನಮ್ಮ ದೇಶದಲ್ಲಿ ಯಾವುದೇ ನಗರವೂ ಒಂದು ಯೋಜಿತ ರೀತಿಯಲ್ಲಿ ನಿರ್ಮಾಣವಾದವಲ್ಲವೆಂದೂ, ಆ ನಗರಗಳು ಅಕ್ಕಪಕ್ಕದ ಹಲವು ಗ್ರಾಮಗಳು ಕೂಡಿಕೊಂಡದ್ದರಿಂದ ನಿರ್ಮಾಣಗೊಂಡವುಗಳೆಂದೂ, ನಗರಗಳ ರಹದಾರಿಗಳು ಹೀಗೊಮ್ಮೆ ಹಳ್ಳಿಗಳನ್ನು ಕೂಡಿಸಿದ್ದರಿಂದಾಗಿ ನಿರ್ಮಾಣಗೊಂಡವು ಎಂಬುದರಿಂದಾಗಿಯೇ ಅಷ್ಟೊಂದು ಅವ್ಯವಸ್ಥೆಯದಾಗಿ ನಿರ್ಮಾಣಗೊಂಡವು ಎಂಬುದರಿಂದಾಗಿಯೇ ಅಷ್ಟೊಂದು ಅವ್ಯವಸ್ಥೆಯದಾಗಿ ಇರುತ್ತವೆ ಎಂದೂ ಕೊಸಾಂಬಿಯವರು ವಿವರಿಸುತ್ತಾರೆ. ನಗರಗಳ ನಿರ್ಮಾಣದಲ್ಲಿನ ಅರಾಜಕತೆ ಅರ್ಥವಾಗುತ್ತದೆ.

"ಪೂರ್ವಕಾಲದ ಪಟ್ಟಣಗಳು ಮಹಾಪ್ರಾಕಾರ–ಆವರಣವುಳ್ಳವುಗಳು. ನಾಲ್ಕು ದಿಕ್ಕಿಗೆ ನಾಲ್ಕು ಮಹಾದ್ವಾರಗಳು. ಅಂತಹ ನಗರನಿವಾಸದ ವ್ಯವಸ್ಥೆ ಇರುವಲ್ಲಿ ಹೊರಗಿನ ಸ್ಮಶಾನಕ್ಕೆ ಶವವನ್ನು ಕೊಂಡೊಯ್ಯುವಾಗ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರನ್ನು ಪೂರ್ವ, ಉತ್ತರ, ಪಶ್ಚಿಮ, ದಕ್ಷಿಣದ್ವಾರಗಳನ್ನು ಕ್ರಮವಾಗಿ ಆಶ್ರಯಿಸಬಹುದು. ಈ ವ್ಯವಸ್ಥೆಯಿಂದ ಮಾರ್ಗ ನೋಡಿಯೇ ಶವವನ್ನು ಗುರುತಿಸಬಹುದು. ಇಂತಹ ರೀತಿಯು ಸರ್ವತ್ರ ಇದೆ. ಕಾಲುಂಗುರ, ಉದ್ದಬೊಟ್ಟು, ಬೈತಲೆ, ಅಂಗಾರ, ಭಸ್ಮ ಇತ್ಯಾದಿಗಳಿಂದ ಒಂದೊಂದು ವಿಷಯದ ಸೂಚನೆಯನ್ನು ಕೊಡುವುದಕ್ಕಾಗಿ ಮಾಡುವುದುಂಟು. ರಾಷ್ಟ್ರದ ಎಲ್ಲ ಮಟ್ಟದ ಅಧಿಕಾರಿಗಳಿಗೆ ಮರಣಪೂರ್ವದಲ್ಲಿ ಮತ್ತು ಮರಣೋತ್ತರ ವಿವಿಧ ಚಿಹ್ನ, ತುಪಾಕಿನ ಗುಂಡಿನ ಸಂಖ್ಯೆ, ಸೈನಿಕ ಸಂಖ್ಯೆ ಇವುಗಳಿಂದ ವರ್ಗಭೇದ, ಗೌರವ, ತಾರತಮ್ಯ, ಕಲ್ಪನೆಯು ಎಂದೂ ಇರುವುದಿಲ್ಲ. ಒಮ್ಮೆ ಒಂದು ಬದಲಾಯಿಸಿರಬಹುದು. ಕಲ್ಪನೆಯು ಎಂದೂ ಇಲ್ಲದಾಗುವುದಿಲ್ಲ. ಜೀವನಾವಶ್ಯಕ ಸಾಮಗ್ರಿ ವ್ಯವಸ್ಥೆಗಳಲ್ಲಿ ಸಮಾನತೆಯಲ್ಲದೆ ಅನ್ಯತ್ರ ಅಸಮಾನತೆಯು ನಿಂದೆಗಾಗಿ ವಿರಚಿತವಾಗುವುದಲ್ಲ" ಎಂದು ಮನು ಹೇಳುತ್ತಾನೆ.

"ಕ್ರಿ.ಶ. ೮ರಿಂದ ೧೪ನೆಯ ಶತಮಾನಗಳ ಅವಧಿಯಲ್ಲಿ ಅನೇಕ ಪೇಟೆ–ಪಟ್ಟಣಗಳು ಅಸ್ತಿತ್ವಕ್ಕೆ ಬಂದಿದ್ದವು. ಅವುಗಳಲ್ಲಿ ಕೆಲವು ಹೊಸದಾಗಿ ಹುಟ್ಟಿಕೊಂಡರೆ ಇನ್ನು ಕೆಲವು ಹಿಂದೆಯೇ ಅಸ್ತಿತ್ವದಲ್ಲಿದ್ದವು. ಶಾಸನಗಳು ಮತ್ತು ಸಾಹಿತ್ಯಕ ಕೃತಿಗಳು ಈ ಅಧ್ಯಯನಕ್ಕೆ ಪ್ರಮುಖ ಆಧಾರಗಳಾಗಿವೆ. ಕ್ರಿ.ಶ. ೭ರಿಂದ ೧೦ನೆಯ

ಶತಮಾನಗಳವರೆಗಿನ ಶಾಸನಗಳಲ್ಲಿ ಪುರ ಎನ್ನುವ ಪದದ ಉಲ್ಲೇಖವಿದ್ದರೆ, ಕ್ರಿ.ಶ. ೧೧ ರಿಂದ ೧೩ನೆಯ ಶತಮಾನಗಳವರೆಗಿನ ಶಾಸನಗಳಲ್ಲಿ ನಗರ, ಮಹಾನಗರ, ಪಟ್ಟಣ ಎನ್ನುವ ಉಲ್ಲೇಖಗಳಿರುವುದು ಕಂಡುಬರುತ್ತದೆ. ಅದೇ ರೀತಿ ಆಡಳಿತ ಪಟ್ಟಣಗಳು, ಧಾರ್ಮಿಕ ಪಟ್ಟಣಗಳು, ವಾಣಿಜ್ಯ ಪಟ್ಟಣಗಳೂ, ಶೈಕ್ಷಣಿಕ ಪಟ್ಟಣಗಳು ಮುಂತಾದ ವಿವಿಧ ಸ್ವರೂಪದ ನಗರಕೇಂದ್ರಗಳ ಉಲ್ಲೇಖಗಳು ಸಿಗುತ್ತವೆ. ಓ.ಪಿ. ಪ್ರಸಾದ್ ಅವರು ಕ್ರಿ. ಶ. ೮ರಿಂದ ೧೨ನೆಯ ಶತಮಾನಗಳ ಅವಧಿಯಲ್ಲಿದ್ದ ಕೆಲವು ಪ್ರಮುಖ ಪೇಟೆ-ಪಟ್ಟಣಗಳ ಪಟ್ಟಿಯನ್ನು ನೀಡಿದ್ದಾರೆ. ಅವುಗಳೆಂದರೆ, ಬನವಾಸಿ, ಬಾದಾಮಿ, ತಲಕಾಡು, ಶ್ರವಣಬೆಳಗೊಳ, ಪೊಬುಚ್ಚ, ಮುಳುಗುಂದ, ಪುಲಿಗೆರೆ, ಬಂಕಾಪುರ, ಮಾನ್ಯಖೇಟ, ಅಣ್ಣಿಗೆರೆ, ಕಲ್ಯಾಣಿ, ಮಂಗಳೂರು, ಗುತ್ತಿ, ಉಚ್ಚಂಗಿ, ಐಹೊಳೆ, ಲಕ್ಕುಂಡಿ, ದೋರಸಮುದ್ರ, ಬಳ್ಳಿಗಾವೆ, ಕುಡತಿನಿ, ಸೂಡಿ, ಸೊಸೆವೂರು, ಕೋಲಾರ, ಅರಸಿಕೆರೆ, ಬೆಳಗಾಂ, ರೋಣ, ಭಟ್ಕಳ, ಬಾರಕೂರು, ಬಸ್ರೂರು, ಕೊಪ್ಪಳ, ಕುರುಗೋಡು, ಹಾನ್‌ಗಲ್, ಕುರುವತ್ತಿ, ಹೊನ್ನಾವರ, ಗದಗ ಮುಂತಾದವು. ಇವುಗಳಲ್ಲಿ ಅನೇಕ ನಗರ ಕೇಂದ್ರಗಳು ೧೩ ಮತ್ತು ೧೪ನೆಯ ಶತಮಾನಗಳಲ್ಲೂ ಅಸ್ತಿತ್ವದಲ್ಲಿದ್ದವು. ಅದೇ ರೀತಿ ಇನ್ನೂ ಅನೇಕ ಹೊಸ ನಗರ ಕೇಂದ್ರಗಳು ಹುಟ್ಟಿಕೊಂಡವನು. ಅವುಗಳೆಂದರೆ, ಐಹೊಳೆ, ಬೇಲೂರು, ಹಳೇಬೀಡು, ಬಳ್ಳಿಗಾವೆ, ಮಂಗಳೂರು, ಬಾರಕೂರು, ಗದಗ, ಕೊಪ್ಪಳ, ಶ್ರವಣಬೆಳಗೊಳ, ಲಕ್ಕುಂಡಿ, ಹೊನ್ನಾವರ, ಮೂಗೂರು, ಉಪೇಂದ್ರಪುರ, ಸೋಮನಾಥಪುರ, ತಲಕಾಡು; ತೊಣ್ಣೂರು ಮುಂತಾದವು." (ಮೋಹನಕೃಷ್ಣರೈ)

ಪಟ್ಟಿಯಲ್ಲಿ ಒಕ್ಕಲುತನದ ಮಟ್ಟದಿಂದ ಮುಂದಿನ ವ್ಯಾಪಾರೋದ್ಯೋಗ, ರಾಜ್ಯವ್ಯವಹಾರದ ಕಾಲದ ಅರ್ಥವೂ ಲಾಕ್ಷಣಿಕವಾಗಿ ಮುಂದೆ ಬಂದುದುಂಟು. ಪಟ್ಟ, ಪಾಟ; ಪಟ್ಟಣ; ಹಟ್ಟ, ಹಾಟ, ಪೇಟೆ ಎಂಬಿವೆ. ಮೊದಲಾದ ಶಬ್ದಗಳು ಇದಕ್ಕೆ ದೃಷ್ಟಾಂತ. ಪ್ರತಿಷ್ಠಾನದ ರೂಪವೆಂದು ಹೇಳುವ ಪೈಠಣವು ಪಟ್ಟಣ, ಪೇಠ ಶಬ್ದಗಳಿಗೇ ಹೆಚ್ಚು ಸಮೀಪವಾಗಿದೆ. ಅದರ ನಿಜವಾದ ಹೆಸರು ಪಟ್ಟಣವೆಂದಿರಬೇಕೆಂದು ನನ್ನ ತಿಳುವಳಿಕೆ ಎಂದು ಶಂಬಾ ಅಭಿಪ್ರಾಯ.

"ಪಟ್ಟ, ಹಟ್ಟಗಳಷ್ಟೇ ಅಲ್ಲ; ಪಾಡಿಗಳೂ ಮಹಾರಾಷ್ಟ್ರದಲ್ಲಿವೆ. ಹಟ್ಟ ಮತ್ತು ಹಾಟ ಎಂಬುವುದಕ್ಕೆ ಆರಿಯ ಮಾತಿನಲ್ಲಿ ಇರುವ ಅರ್ಥಗಳಿವು: ಹಟ್ಟ, ಹಾಟ: ಪೇಟೆ; ಸಂತೆ; ತಿರುಗುವ ಪೇಟೆ; ಜಾತ್ರೆ; ಹಾಟವಟಿ; ಹಟ್ಟವಟ; ಹಾಟ ಬಾಜಾರ ಎಂಬ ಜೋಡು ನುಡಿಗಳನ್ನೂ ಅಲ್ಲಿ ಹೇಳಿದ್ದಾರೆ;

ಹಟ್ಟ: 1. ಸಣ್ಣಸಂತೆ; ಜಾತ್ರೆ; 2. ಒಂದೇ ಬಗೆಯ ವ್ಯವಸಾಯದ ಅಥವಾ ಜಾತಿಯ ಜನರ ಮನೆಗಳ ಎಡೆ; 3. ಊರಿಂದ ಕಿರಿದು ಅಂತರದಲ್ಲಿರುವ ಭಿಲ್ಲ, ರಾಮೋಶಿ ಮೊದಲಾದವರ ಬಿಡಾರ; 4. ಭಿಲ್ಲ, ರಾಮೋಶಿ, ಕೊರಚರ ಬೀಡು; 5. ಇಂತಹರ ತಂಡ; ಟೋಳಿ. ಅಗಲಕಡಿಮೆ ಇದ್ದು ಉದ್ದವಾಗಿರುವ ನೆಲದ

ತುಂಡು; ಹೊಲ; (ಅಲ್ಲದೆ ಇನ್ನೂ ಹಲವು ಬೇರೆ ಬಗೆಯ ಅರ್ಥಗಳೂ ಉಂಟು.)
ಪಾಡಾ, ಪಾಡಿ: 1. ಒಕ್ಕಲುತನದ ಅನುಕೂಲತೆಗಾಗಿ ಊರಿಂದ ಸ್ವಲ್ಪ ದೂರ ಹೊಲದ ಹತ್ತಿರಕಟ್ಟಿದ ಗುಡಿಸಲುಗಳ; 'ವಾಡಿ' ಸಣ್ಣಹಳ್ಳಿ; 2. ಒಕ್ಕಲತನದವರ ಗುಡಿಸಲು; 3. ಪಟ್ಟಣದೊಳಗಿನ ಪೇಟೆ, ದೊಡ್ಡ ಓಣಿ; ಎಂಬ ಅರ್ಥಗಳನ್ನು ಕೊಟ್ಟು ಇದು ಗುಜರಾತಿಯಲ್ಲಿ ಪಾಡೋ (ಹಳ್ಳಿ) ಬಂಗಾಳಿಯಲ್ಲಿ ಪಾಡಾ (ಪೇಟೆ); ಸಿಂಧಿಯಲ್ಲಿ ಪಾಡೋ (ವಸತಿ ಸ್ಥಾನ) ಎಂಬ ತೆರನಾಗಿ ಬಳಕೆಯಲ್ಲಿರುವುದಾಗಿ ಹೇಳಿದೆ. (ಶಂಬಾ)

'ಹಟ್ಟ' ಶಬ್ದಕ್ಕಿರುವ 'ಪೇಟೆ'ಯೆಂಬರ್ಥವು ಮನನೀಯವಾಗಿದೆ. ಖೇಟ ಅಥವಾ ಖೇಡವೆಂಬ ಸಂಸ್ಕೃತ ಜನ್ಯ ಶಬ್ದದಲ್ಲೂ ಒಕ್ಕಲತನದ ಊರೆಂಬ ಧ್ವನಿಯಿದೆ. ಇದು ಮೂಲ ಸಂಸ್ಕೃತ ಪದವಲ್ಲ. ಪಾಕೃತದಿಂದ ಸಂಸ್ಕೃತದಲ್ಲೂ ದೇಶಭಾಷೆಗಳಲ್ಲೂ ಸೇರಿದೆ. ಕುಡಿ ಎಂದರೆ ಒಕ್ಕಲರ ಊರು, ಎಂಬಂತೆ ಖೇಡ ಅಥವಾ ಖೇಟವೆಂದರೂ ಅದೇ ಅರ್ಥವೆ ಇದೆ. ಖೇಟ 'ಅಥವಾ ಖೇಡವನ್ನು ಕ್ಷೇತ್ರ, ಖೇತಗಳೊಡನೆ ಹೋಲಿಸಿ ನೋಡಬಹುದು. ಖೇಡ ಧಾತುವಿಗೆ ಪ್ರಾಕೃತದಲ್ಲಿ ಕೃಷ್, ಒಕ್ಕಲತನ ಮಾಡು ಎಂದರ್ಥವಿದೆ. ಆದ ಕರಾಣ ಖೇಡ (ಹಳ್ಳಿ) ಎಂಬ ನಾಮಪದವು ಖೇಡ (ಒಕ್ಕಲುತನ ಮಾಡು) ಧಾತುವಿನಿಂದ ಬಂದಿತೆಂದು ಊಹಿಸಿದರೆ ತಪ್ಪಾಗಲಾರದು. ಮರ್ಹಾಟಿಯಲ್ಲಿ ಖೇಡೆಗಾವ ಎಂದು ಹಳ್ಳಿಗೆ ಹೆಸರು. ಖೇಟ-ಖೇಡಗಳಿಗೆ ಕೆಲವು ಕೋಶಗಳಲ್ಲಿ ಮಣ್ಣುಗೋಡೆಯ ಪ್ರಕಾರವಿದ್ದ ಪಟ್ಟಣ, ನದಿ ಅಥವಾ ಪರ್ವತದ ನೆರೆಯ ದೊಡ್ಡ ಊರು ಎಂದು ಅರ್ಥ ಕೊಟ್ಟಿದೆ. ಆದರೆ, ಇದು ಆರಂಭದ ಮೂಲಾರ್ಥವಲ್ಲ. ಮುಂದಿನ ಕಾಲದಲ್ಲಿ ಪ್ರಾಪ್ತವಾದ ವಿಶೇಷಾರ್ಥ. ಹಟ್ಟಿಯೆಂದರೆ ದನಗಳನ್ನು ಕಟ್ಟಿಹಾಕುವ ಸ್ಥಳವೂ ಹೌದು.

ಪತ್ತನ<ಪಟ್ಟಣ>ಪಾಟಣ ಎಂದರೆ ರಾಜಧಾನಿ ಸ್ಥಾನ, ಗೋಪ(ರಾಜ)ರು ಪಟ್ಟಿರುವ ಸ್ಥಳ, ಅವರ 'ಪಟ್ಟ' (ಸಿಂಹಾಸನ) ಇರುವ ಮಹಾನಗರ ಎಂಬ ಲಕ್ಷಣಾರ್ಥವು ಇದರಲ್ಲಿ ಕಾಣಿಸಿಕೊಂಡುದುಂಟು. ಈ ಸ್ಥಳನಾಮಗಳ ಹೆಚ್ಚಳವು ಆ ಪ್ರದೇಶದಲ್ಲಿ ದನಗಾರರ (=ಕುರುಬ ಧನಗರರ) ಪ್ರಭಾವವು -ಪ್ರಭುತ್ವವು ಎಷ್ಟೋ ಬೆಳೆದಿರಬೇಕೆಂಬುದರ ನಿದರ್ಶಕವಾಗಿದೆ.

ಕುಡಿಯ ಬಳಿಕ ಪೊಲ, ಪೊಟಲುಗಳು ಬೆಳೆದು ಬಂದುವು. ಪೊಳಲುಗಳ ಪ್ರಾಚೀನತೆಗೆ ಮುದಿಪೊಳಲು=ಮುದುವೊಳಲು (ಮುಧೋಳ) ಎಂಬ ಊರುಗಳೇ ಸಾಕ್ಷಿ. ಇಂದ್ರನು ಶತ್ರುಗಳ ಪುರ (ಕೋಟೆ)ಗಳನ್ನು ನಾಶ ಮಾಡಿದ ವರ್ಣನೆಗಳು ವೇದದಲ್ಲಿ ಬರುತ್ತವೆ. ಪುರಗಳಿಗೆ ಕೋಟೆ ಎಂದು ವೇದತಜ್ಞರು ಅರ್ಥ ಹೇಳಿದ್ದಾರೆ. ಇಂದ್ರನಿಗೆ 'ಪುರಂದರ'ನೆಂದು ಹೆಸರು. ಆ ಪುರಗಳು ಮುಖ್ಯವಾಗಿ ಪರ್ವತಗಳ ವೈರಿ ಎಂದು ಪುರಾಣ ಕಥೆಗಳಿಂದ ತಿಳಿಯುತ್ತದೆ." (ಶಂಬಾ)

ಋಗ್ವೇದದಲ್ಲಿ ಪುರುಷದ ಉಲ್ಲೇಖವಿಲ್ಲದಿದ್ದರೂ ಪುರ ಶಬ್ದವು ಹಲವೆಡೆಗೆ ಬಂದಿದೆ... ಪುರದಲ್ಲಿ ಇರುವವನು ಎಂಬರ್ಥದಲ್ಲಿ ದೇಹಿಗೆ ಪುರುಷ ಈ ಹೆಸರು ಬಂದಿತಾಗಿ ವೈದಿಕ ಸಾಹಿತ್ಯದಿಂದಲೇ ಗೊತ್ತಾಗುತ್ತದೆ. ಪುರೀ ಲಿಂಗ ಶರೀರೆ ಶೇತೇ ಸಃ ಪುರಷ ಎಂಬುದು ವಾಖ್ಯೆ. ಈ ವಾಖ್ಯೆಯಲ್ಲಿ ಪುರುಷ ಆಗಬೇಕಾಗಿದ್ದುದು ಪುರಷ ಆದುದುರ ಅರ್ಥ ಹೊರಡದು. ಹೀಗೇಕೆ ಎಂದು ಕೇಳಿದಾಗ ಅದು ಛಾಂದಸ ಪ್ರಯೋಗ ಎಂದು ಹೇಳಲಾಗುವುದು. ಆದರೆ, ವೇದಗಳಲ್ಲಿ ಪುರು ಶಬ್ದವು ಬರುತ್ತದೆ. ಪುರು ವಿದ್ವಾನ್ ಎಂಬ ಶಬ್ದವು ಸರ್ವಜ್ಞ(Omniscient) ಎಂಬ ಅರ್ಥದಲ್ಲಿ ಬಂದಿದೆ. ಪುರು ರೂಪಂ, ಪುರುಕೃತ್, ಪುರುಹೂತ ಎಂಬ ಪದಗಳೂ ಬರುವುವು. ಇವುಗಳಲ್ಲಿಯ 'ಪುರು ' ಶಬ್ದಕ್ಕೆ ಪ್ರಾಚೀನ, ಸರ್ವತ್ರ, ದಿವ್ಯ, ಸುಂದರ ಎಂಬ ಅರ್ಥಗಳು ಆಗಿರುವುವು. ಪುರುಚ ಎಂಬುಎದಕ್ಕೆ Soul of the universe ಎಂಬ ಅರ್ಥವೂ ಇದೆ. Pupil of the eye ಎಂದೂ ಇದೆ. ಮೇಲ್ನೋಟಕ ಎಂದೂ ಇದೆ. ಪುರು+ಸ್ಥ – ಪುರುಷ: ಎಲ್ಲ ಕಡೆಗೂ ಇರುವರ ಎಂಬ ರೂಪವು ಇದು. ಸಹಸ್ರಾಕ್ಷ, ಸಹಸ್ರ ಶೀರ್ಷ ಸಹಸ್ರ ಬಾಹು, ಸಹಸ್ರ ಪಾತ್, ಇವು ಪುರುಷನ ವಿಶೇಷಣಗಳು. ಆದ್ದರಿಂದ ಪುರುಷ ಇದು ಪುರ ಶಬ್ದದಿಂದ ಉಂಟಾಗಿರದೆ, ಪುರ– Omni –ಸ್ಥ– Present ಎಂಬುದಾಗಿ ಆಗಿರಬಹುದೆಂದು ಪುರು ಶಬ್ದದ ಅರ್ಥದಿಂದ ಹೊರಡುತ್ತದೆ."

ನಗರದ ಸುತ್ತಲೂ ಕೋಟೆ–ಕೊತ್ತಳಗಳನ್ನು ಕಟ್ಟಿ ಭದ್ರತೆಯಲ್ಲಿ ಜೀವಿಸುತ್ತಿದ್ದ ಜನರಿಗೆ ವೇದಕಾಲದ ಋಷಿಗಳು ಪೂರು ಎಂದು ಹೆಸರು ಕೊಟ್ಟಿರುವ ಸಾಧ್ಯತೆ ಇದೆ. ಆರ್ಯರಿಗಿಂತ ಮೊದಲೇ ಇದ್ದ ಹರಪ್ಪಾ. ಮೊಹೆಂಜೊದಾರೋದಂಥ ಪುರಾತನ ನಗರಗಳನ್ನು ನೋಡಿದಾಗ 'ಪೂರು' ಹೆಸರಿನ ಔಚಿತ್ಯ ಸ್ಪಷ್ಟವಾಗುತ್ತದೆ. ಪೂರುವಿನ ಉಳಿದ ತಮ್ಮಂದಿರು ಇನ್ನೂ ಪಶುಪಾಲನ ವೃತ್ತಿಯಲ್ಲಿದ್ದರೆಂದು ಅವರ ಹೆಸರುಗಳ ಮೇಲಿಂದ ವ್ಯಕ್ತವಾಗುತ್ತದೆ. (ಶಂಬಾ)

ಪಟ್ಟಣ: ಐನೂರು ಗ್ರಾಮವಿರುವವು ಪಟ್ಟಣವೆನಿಸಿಕೊಳ್ಳುತ್ತದೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ ೧೯೯೯ ಸಂಪುಟ. ೧ ಪುಟ. ೧೩೯, ಸಂಪುಟ. ೨ ಪುಟ. ೧೮೭, ೧೪೭–೧೫೩

ಸಂಪುಟ. ೩ ಹಾಲುಮತದರ್ಶನ ಪುಟ. ೩೧, ೫೫, ೨೦೦

ಮೋಹನ ಕೃಷ್ಣರೈ ಕೆ. ೨೦೦೯ ಚರಿತ್ರೆ ಕಥನ. ಪುಟ. ೮೬–೮೭

ಡಿ. ಡಿ. ಕೊಸಾಂಬಿ ೧೯೯೮ ಪ್ರಾಚಿನ ಭಾರತದ ಚರಿತ್ರೆ ಪುಟ. ೧೧

ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೫–೯೨

ಪಟ್ಟಬಂಧ

ಪಟ್ಟಬಂಧನವೆನ್ನುವುದು ಒಂದು ವಿಶೇಷವಾದ ಆಚರಣೆ. ಮೇಲೆ ಪಂಪನು ವಿವರಿಸಿದಂತೆ ಪಟ್ಟಬಂಧಕ್ಕೆ ಋಷಿಶ್ರೇಷ್ಠರು ಬರುತ್ತಾರೆ. ಈಶ್ವರನ ನಂದಿಯ ಕೊಂಬಿನಿಂದ ಎಬ್ಬಿಸಿದ ಮಣ್ಣನು ತರುವುದು ಭೂಮಿಯ ಆಳ್ವಿಕೆಯ ದೃಷ್ಟಿಯಿಂದ ವಿಶೇಷವಾಗಿದೆ. ವರುಣ ಹದಿನಾಲ್ಕು ಮಹಾನದಿಗಳಿಂದ ನೀರನ್ನು ತರುತ್ತಾನೆ.

ಪಡಿಕಮಣ

ಪಡಿಕಮಣವೆಂದರೆ ಪ್ರಾಯಶ್ಚಿತ್ತ. ಪ್ರಾಯಶ್ಚಿತ್ತವನ್ನು ಅನುಭವಿಸುವುದು ಬಹಳ ಮುಖ್ಯವೆಂದು ಅದು ನಂಬುತ್ತದೆ. ಪಾಪ ಮತ್ತು ಪ್ರಾಯಶ್ಚಿತ್ತದ ಕುರಿತು ಬೇರೆ ಬೇರೆ ಧರ್ಮಗಳಲ್ಲಿ ಬೇರೆ ಬೇರೆ ರೀತಿಯ ನಂಬಿಕೆಗಳಿವೆ ಎನ್ನುವುದು ಇಲ್ಲಿ ಗಮನಾರ್ಹ.

ಷಡ್ಗುಣ

ಸಾಮದಾನ ಭೇದದಂಡ ರಾಜನಿಗೆ ಬೇಕಾಗಿರುವುದು. ರಾಜನಿಗೆ ಇರಬೇಕಾದ ಆರು ಗುಣಗಳು ಹೀಗಿವೆ: ಸಂಧಿ, ವಿಗ್ರಹ, ಯಾನ, ಆಸನ, ಸಂಶಯ ಮತ್ತು ದ್ವೈಧೀಭಾವ. ಇವುಗಳನ್ನು ರಾಜನ ಷಡ್ಗುಣಗಳೆಂದು ಕರೆಯುತ್ತಾರೆ.

ವಿವರಗಳಿಗೆ ನೋಡಿ: ಹ.ಪ.ಸಂ

ಪಣವ

ಸಂಸ್ಕೃತದ ಪ್ರಣವ ಕನ್ನಡದಲ್ಲಿ ಪಣವ ಎಂದಾಗಿದೆ. ಪ್ರಣವವೆಂದರೆ ಓಂಕಾರನಾದ. ಆದರೆ ಪಣವ ಎಂದರೆ ಒಂದು ಬಗೆಯ ವಾದ್ಯವೂ ಹೌದು.

ಪಣ್ಯಾಂಗನಾ

ಪಣೆಯೆಂದರೆ ವಾಸ್ತವವಾಗಿ ಕೃಷಿ ಮಾಡುವ ಸ್ಥಳ. ಪಣ್ಯ ಎಂದರೆ ಪಣ್ಣೆಯ. ಪಣ್ಣೆಯವೆಂದರೆ ಪಣೆ. ಆದುದರಿಂದ ಪಣ್ಯಾಂಗನಾ ವೇಶ್ಯಾಸ್ತ್ರೀಯೆಂದರೂ ಈ ದೃಷ್ಟಿಯಿಂದ ಇದರ ವ್ಯುತ್ಪತ್ತಿ ಬೇರೆಯಾಗುತ್ತದೆ. ವೇಶ್ಯೆಗಿರುವ ಪರ್ಯಾಯ ನಾಮಗಳಲ್ಲಿ ಇದು ಒಂದು. ಇದರರ್ಥ ವಿಕ್ರಯಿಸಲು; ಮಾರಲು ಅರ್ಹವಾದ ವಸ್ತು; ವ್ಯವಹರಿಸಲು ಯೋಗ್ಯವಾದ ಅಂಗನೆಯೆಂದರೆ ಹೆಂಗಸು. ಪಣ್ಯ ಎಂದರೆ ವರ್ತಕ; ಅಂಗಡಿ ಬೀದಿ ಎಂಬ ಅರ್ಥದಲ್ಲಿ ಪಣ್ಯ ವೀಥಿ, ಪಣ್ಯಶಾಲಾ, ಪಣ್ಯಜೀವ ಎಂಬ ಪದಗಳು ಬರುತ್ತವೆ.

"ಪಣೆಯೆಂದರೆ ವಾಸ್ತವವಾಗಿ ಕೃಷಿ ಮಾಡುವ ಸ್ಥಳ. ಪಣ್ಯ ಎಂದರೆ ಪಣ್ಣೆಯ. ಪಣ್ಣೆಯವೆಂದರೆ ಪಣೆ. ಆದುದರಿಂದ ಪಣ್ಯಾಂಗನಾ ವೇಶ್ಯಾಸ್ತ್ರೀಯೆಂದರೂ ಈ ದೃಷ್ಟಿಯಿಂದ ಇದರ ವ್ಯುತ್ಪತ್ತಿ ಬೇರೆಯಾಗುತ್ತದೆ. ಪಣ್ಯವರ್ಮವೆಂದರೆ ವೇಶ್ಯೆಯರ ಬೀದಿ ಎಂದು ಅರ್ಥ."

ಪತಿ

'ಪತಿ' ಈ ಸಂಕೇತ ಪ್ರಾಮುಖ್ಯದಿಂದ ಶೈವ ಸಂಪ್ರದಾಯದವರ ಸೊತ್ತು ಆಗಿದೆ. 'ಅಯ್ಯ' 'ಆಚಾರಿ' (ರ್ಯ) ಹಂಚಿಹೋದಂತೆ. ಅರ್ವಚೀನ ಪಶು–ಪತಿ ಮಠ–ಪತಿ ಇಂತಹ ಪ್ರಯೋಗಗಳು ಮಾತ್ರವಲ್ಲ; ವ್ರಾತ–ಪತಿ, ಸ್ತೇನಾನಾಂ–ಪತಿ, ಅರಣ್ಯನಾಂ ಪತಿ, ಪತ್ತೀನಾಂ ಪತಿ, ಗಣ–ಪತಿ ಇತ್ಯಾದಿ ಪ್ರಯೋಗಗಳು ರುದ್ರಾಧ್ಯಾಯದಲ್ಲಿ ಬಂದಿವೆ. ಕೆಲವು ಸಂಕೇತಗಳು, ಕೆಲವೊಂದು ಪಕ್ಷ– ಪಂಥಗಳ ವಿಶೇಷ ಸಂಬಂಧದ ಮೂಲಕ ಅವರ ವೈಶಿಷ್ಟ್ಯ ಸೂಚಕವಾಗಿ ನಿಲ್ಲುತ್ತವೆ. ಹೀಗೆ 'ಪತಿ' ಇದು ಶೈವ ಸಂಪ್ರದಯದ ಚಿಹ್ನವಾಗಿರುವದು ಕಂಡುಬರುತ್ತದೆ ಎಂದು ಶಂಬಾ ಹೇಳುತ್ತಾರೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ ೧೯೭೯ ಹಾಲುಮತ ದರ್ಶನ ಸಂಪುಟ. ೩ ಪುಟ. ೧೩೭.

ಪತ್ತಳೆ

ಪತ್ರಿಕಾ (ಸಂ) ಓಲೆ, ಪತ್ರ, ಕಾಗದ ಸಂಸ್ಕೃತದ ಪತ್ರಿಕೆಯೆನ್ನುವುದು ಕನ್ನಡದಲ್ಲಿ ಪತ್ತಳೆಯೆಂದಾಗಿದೆಯೆಂಬುದು ಗಮನಾರ್ಹ.

ಪತ್ರಿಕಾ ಮನೋಧರ್ಮ

ಪತ್ರಿಕೆಯ ಮನೋಧರ್ಮವೆಂದರೆ ಪತ್ರಿಕೆ ಹಿನ್ನೆಲೆಯಲ್ಲಿರುವ ಮನಸ್ಸು. ಅದು ಆರೋಗ್ಯಕರವಾಗಿರಬೇಕು ಎಂಬುದು ನಿಲುವು. ಡಿ.ವಿ.ಜಿ.ಯವರು ವೃತ್ತ ಪತ್ರಿಕೆಗಳ ಕುರಿತು ಈ ರೀತಿಯಾಗಿ ಹೇಳುತ್ತಾರೆ. "ವೃತ್ತ ಪತ್ರಿಕೆಯೆಂಬುದೇ ಆ ಮುಖ್ಯಾವತಾರ. ವೃತ್ತ ಪತ್ರಿಕೆಗಳ ಪ್ರಚಾರವೂ ಪ್ರಾಬಲ್ಯವೂ ನಮ್ಮ ದೇಶದಲ್ಲಿ ಈಗ ಹೆಚ್ಚಾಗುತ್ತಿವೆ. ವಿದ್ಯಾಭ್ಯಾಸವೂ ರಾಜಕೀಯ ಬುದ್ಧಿಯೂ ಜನರಲ್ಲಿ ಹರಡುತ್ತ ಹೋದ ಹಾಗೆಲ್ಲ ಪತ್ರಿಕೆಗಳ ಬಲವೂ ವ್ಯಾಪನೆಯೂ ಇನ್ನೂ ಹೆಚ್ಚಲೇಬೇಕು. ಜನರ ಜ್ಞಾನ, ಅಭಿಪ್ರಾಯ, ನಡತೆ, ಮಾತು, ವ್ಯಾಪಾರ, ವ್ಯವಹಾರ – ಇವೆಲ್ಲವನ್ನೂ ಪತ್ರಿಕೆಗಳು ಪ್ರತಿ ದಿನವೂ ಒಂದು ಬಗೆಯಲ್ಲದಿದ್ದರೆ ಇನ್ನೊಂದು ಬಗೆಯಲ್ಲಿ ತಿದ್ದುತ್ತಲೇ ಇರುತ್ತವೆ. ಹೀಗೆ ದೇಶ ಜೀವನದ ಮುಖ್ಯ ಉಪಕರಣಗಳ ಪೈಕಿ ಅತಿ ಮುಖ್ಯವಾದ ಒಂದಾಗಿ, ನಮ್ಮೆಲ್ಲರ ದಿನಚರ್ಯೆಗೆ ಅತ್ಯಂತ ಗಾಢವಾಗಿ ಸಂಬಂಧಪಟ್ಟಿರುವ ವೃತ್ತ ಪತ್ರಿಕೆ ಎಂಬ ಹೊಸ ಚೈತನ್ಯದ ಪೂರ್ವೋತ್ತರ ಚರಿತ್ರೆಯನ್ನೂ, ಅದರ ಕರ್ತವ್ಯಾಕರ್ತವ್ಯಗಳನ್ನೂ ಅದರ ಕಷ್ಟ ಕೊರತೆಗಳನ್ನೂ ನಾವೆಲ್ಲರೂ ಚೆನ್ನಾಗಿ ತಿಳಿದುಕೊಳ್ಳುವುದು ನಮ್ಮ ಯೋಗಕ್ಷೇಮಗಳಿಗೆ ಅವಶ್ಯವಾದ ಸಂಗತಿ.

ಲೋಕವಾರ್ತೆಯನ್ನು ರಾಜನೂ ರಾಜವಾರ್ತೆಯನ್ನು ಪ್ರಜೆಗಳೂ ತಿಳಿದುಕೊಳ್ಳುವುದು ಅವಶ್ಯಕವೆಂಬುದನ್ನು ನಮ್ಮ ಪೂರ್ವಿಕರು ಕಂಡುಕೊಂಡಿದ್ದರು. ಅದಕ್ಕಾಗಿ ಪುರಾತನ ಹಿಂದೂರಾಜ್ಯಗಳಲ್ಲಿ ಬೇಹುಗಾರರು ರಾಜರಿಗೋಸ್ಕರವಾಗಿಯೂ,

ಡಂಗುರಿಗರು ಪ್ರಜೆಗೋಸ್ಕರವಾಗಿಯೂ ನೇಮಕವಾಗಿರುತ್ತಿದ್ದರು. ಪ್ರಾಚೀನ ರೋಮ್ ರಾಷ್ಟ್ರದಲ್ಲಿ ಆಯಾ ದಿವಸದ ವಿಶೇಷ ಸಂಗತಿಗಳನ್ನು ದಿನವಾರ್ತೆ ಎಂಬ ಒಂದು ದಫ್ತರದಲ್ಲಿ ಬರೆಯಿಸಿ ಚಾವಡಿಯಲ್ಲಿರಿಸುವ ಪದ್ಧತಿಯಿತ್ತು. ಆದರೆ ದೇಶವಿದೇಶಗಳ ವೃತ್ತಾಂತಗಳನ್ನು ಕಾಗದದ ಹಾಳೆಗಳ ಮೇಲೆ ಅನೇಕ ಪ್ರತಿಗಳಲ್ಲಿ ಅಚ್ಚೊತ್ತು ಜನರಲ್ಲಿ ಹಂಚುವ ವಿಚಾರದಲ್ಲಿ ನಿಜಾಮರು ಆಸಕ್ತಿಯೇನನ್ನೂ ತೋರಿಸಲಿಲ್ಲವೆಂದೂ, ಆ ಯಂತ್ರದ ಉಪಯೋಗವನ್ನು ತೋರಿಸಿಕೊಡಲು ಮದ್ರಾಸಿನಿಂದ ಬಂದಿದ್ದ ಅಚ್ಚಕ್ಷರ ಜೋಡಿಸುವ (ಕಂಪಾಸಿಟರ್) ಕೆಲಸಗಾರರಿಗೆ ನಿಜಾಮರು ಇನಾಮು ಸಹ ಕೊಡಲಿಲ್ಲವೆಂದೂ ಅರಿಕೆಮಾಡಿಕೊಂಡದ್ದಲ್ಲದೆ, ಆ ಮುದ್ರಣ ಯಂತ್ರವು ಹೈದರಾಬಾದಿನಲ್ಲಿ ಉಳಿದಿರುವ ವಿಷಯದಲ್ಲಿ ಬ್ರಿಟಿಷ್ ಸರಕಾರಕ್ಕೆ ಇನ್ನೂ ಶಂಕೆಯೇನಾದರೂ ಇದ್ದ ಪಕ್ಷದಲ್ಲಿ ತಾನೇ ಉಪಾಯಾಂತರದಿಂದ ನಿಜಾಮರ ತೋಷಾಖಾನೆಗೆ(ಖಜಾನೆ) ಹೋಗಿ, ಅಲ್ಲಿ ಯಾರಿಗೂ ತಿಳಿಯದಂತೆ ಆ ಮುದ್ರಣ ಯಂತ್ರವನ್ನು ಭಿನ್ನ ಪಡಿಸಿ, ಅದು ಕೆಲಸಕ್ಕೆ ಬಾರದಂತೆ ಮಾಡುವುದಾಗಿ ಭರವಸೆ ಕೊಟ್ಟನು.

ಹೀಗಿತ್ತು ಆ ಕಾಲದಲ್ಲಿ ಮುದ್ರಣಯಂತ್ರದ ಭಯ. ಜನರಿಗೆ ತಿಳಿಯದ ವಿಷಯಗಳನ್ನು ತಿಳಿಯಪಡಿಸಿ, ಇಲ್ಲದಿರುವ ಆಸೆ ಆಶಯಗಳನ್ನು ಉಂಟುಮಾಡಿಸಿ, ಅವರಲ್ಲಿ ಹೊಸ ಆವೇಶವನ್ನೂ ಹೊಸ ಧೈರ್ಯವನ್ನೂ ಹುಟ್ಟಿಸಿ, ಅವರ ಬುದ್ಧಿಯನ್ನೂ ನಡವಳಿಕೆಯನ್ನೂ ಬದಲಾಯಿಸಬಲ್ಲುದಲ್ಲವೆ ಈ ಮುದ್ರಣ ಯಂತ್ರ ? ಅದರ ಸಂಕ್ಷೋಭಕಾರಕವಾದ ಪ್ರಭಾವವನ್ನು ಬ್ರಿಟಿಷರು ಮೊದಮೊದಲೇ ಕಂಡುಕೊಂಡಿದ್ದರು. ಆದುದರಿಂದಲೇ ಈ ದೇಶದಲ್ಲಿ ವೃತ್ತ ಪತ್ರಿಕೆಗಳ (ವೃತ್ತ ಪತ್ರಿಕೆ, ವಾರ್ತಾ ಪತ್ರಿಕೆ, ವೃತ್ತಾಂತಪತ್ರಿಕೆ, ವರ್ತಮಾನ ಪತ್ರಿಕೆ, ಸಮಾಚಾರ ಪತ್ರಿಕೆ, ನ್ಯೂಸ್ ಪೇಪರ್ – ಇವೆಲ್ಲವೂ ಏಕಾರ್ಥಪದಗಳು. ಇವುಗಳ ಸ್ಥಾನದಲ್ಲಿ ಪತ್ರಿಕೆ ಎಂಬ ಸಂಕ್ಷೇಪ ಪದವನ್ನು ಕೆಲವು ಕಡೆ ಸ್ಥಳಸೌಲಭ್ಯಕ್ಕಾಗಿ ಉಪಯೋಗಿಸಿದೆ) – ತತ್ರಾಪಿ ದೇಶ ಭಾಷೆಯ ಪತ್ರಿಕೆಗಳ ಬೆಳವಣಿಗೆಯ ವಿಷಯವಾಗಿ ಅವರಿಗೆ ಸಂತೋಷವಿಲ್ಲದೆ ಇದ್ದದ್ದು. ಮಾನವ ವರ್ಗದ ನಯನಾಗರಿಕತೆಗಳ ಚರಿತ್ರೆಯಲ್ಲಿ ಮುದ್ರಣಯಂತ್ರದಿಂದ ಆಗಿರುವುದಕ್ಕಿಂತ ವ್ಯಾಪಾರವು ಈಚಿನದು (ವೃತ್ತ ಪತ್ರಿಕೆ)."

ವಿವರಗಳಿಗೆ ನೋಡಿ: ಡಿ.ವಿ.ಜಿ. ೧೯೬೮ ವೃತ್ತಪತ್ರಿಕೆ ಪುಟ.೧೦–೧೨

ಪತ್ರಿಕಾವರದಿ

ಪತ್ರಿಕೆಯನ್ನು ನಾವು ಸಮೂಹ ಮಾಧ್ಯಮವೆಂದು ಕರೆಯುತ್ತೇವೆ. ವರದಿ ಎಂದರೆ ವರ್ತಮಾನ, ಸಮಾಚಾರ, ನೆರವೇರಿಸಿದ ಕಾರ್ಯಕ್ರಮ ವಿವರಗಳ ನಿರೂಪಣೆ ಎಂದರ್ಥ.

ಡಿ.ವಿ.ಜಿ.ಯವರು ಪತ್ರಿಕೆಯ ಧರ್ಮದ ಕುರಿತು ಹೀಗೆ ಹೇಳುತ್ತಾರೆ: ಬಹುಮಂದಿಗೆ ಉತ್ಸಾಹವಿರುವ ವಿಷಯದಲ್ಲಿ ನಿರುತ್ಸಾಹದ ಮಾತನ್ನಾಡಿದಾಗ ಅದಕ್ಕಿರುವ ಕಾರಣಗಳನ್ನು ತೋರಿಸುವುದು ಅವಶ್ಯಕ..

೧. ವೃತ್ತ ಪತ್ರಿಕಾವೃತ್ತಿಯು ದೇಶದ ದೃಷ್ಟಿಯಿಂದ ಅತ್ಯಂತ ಮಹತ್ವವುಳ್ಳದ್ದೆನ್ನಲು ಅಡ್ಡಿಯಿಲ್ಲ.

೨. ಮನುಷ್ಯ ಲೋಕದ ನೀತಿ ಸಂಸ್ಕಾರ ದೃಷ್ಟಿಯಿಂದಲೂ ಅದು ಅಂಥಾದ್ದು.

೩. ಆದುದರಿಂದಲೇ ಅದು ಹೊರಬೇಕಾದ ಪ್ರತ್ಯುತ್ತರ ಭಾರ (ಜವಾಬ್ದಾರಿ) ಬಹುದೊಡ್ಡದು.

೪. ಆ ಭಾರದಲ್ಲಿ ಎರಡಂಶಗಳು ಸೇರಿವೆ: ಒಂದು ಜ್ಞಾನ ಪ್ರಸಾರದ್ದು; ಇನ್ನೊಂದು ನೀತಿ ಪ್ರಸಾರದ್ದು.

೫. ಜ್ಞಾನಕಾರ್ಯವು ನಾನಾ ಶಾಸ್ತ್ರಪರಿಶ್ರಮವನ್ನು ಅಪೇಕ್ಷಿಸುತ್ತದೆ. ಅದು ಎಷ್ಟಿದ್ದರೂ ಸಾಲದು.

೬ ನೀತಿ ಕಾರ್ಯವು ಬುದ್ಧಿಯ ನಿಷ್ಪಕ್ಷಪಾತವನ್ನೂ ನ್ಯಾಯ ವಿಮರ್ಶನ ಜಾಗರೂಕತೆಯನ್ನೂ ಅಪೇಕ್ಷಿಸುತ್ತದೆ.

೭ ಅಂಥಾ ವಿದ್ವತ್ಸಂಪತ್ತೂ ನ್ಯಾಯಶೋಧನ ಸಾಮರ್ಥ್ಯವೂ ತನಗೆ ತಕ್ಕಷ್ಟು ಉಂಟೆಂಬ ಭರವಸೆ ಎಂಥವನಿಗೂ ದುರ್ಲಭವೇ.

೮. ಪಟ್ಟ ಪ್ರಯಾಸಕ್ಕೆ ತಕ್ಕ ಐಹಿಕ ಪ್ರತಿಫಲ ದೊರೆಯುವುದು ಅದೃಷ್ಟದ ಮಾತು. ಅಲ್ಲಿ ನಿಶ್ಚಯದ ಮಾತಿಲ್ಲ.

ಕುವೆಂಪು ಅವರು ಕೂಡಾ ಪತ್ರಿಕಾವರದಿಗಳು ಸತ್ಯಕ್ಕೆ ಹತ್ತಿರವಾಗಿರುತ್ತವೆಯೆನ್ನುತ್ತಾರೆ.

ವಿವರಗಳಿಗೆ ನೋಡಿ: ಡಿ.ವಿ.ಜಿ. ೧೯೬೮ ವೃತ್ತಪತ್ರಿಕೆ

Raymond Williams 1961 The Long Revolution

Milton C.Albert The sociology of Art and literature

ಪತ್ರಿಕೆಯ ಸಂಪಾದಕ

ಇದರೊಂದಿಗೆ ನಾವು ಈಗ ವಾರಪತ್ರಿಕೆಗಳಲ್ಲಿ ಅನೇಕ ಕಥೆ ಕವನಗಳನ್ನು ಓದುತ್ತೇವೆ. ಪತ್ರಿಕೆಯ ಸಂಪಾದಕರು ಪತ್ರಿಕೆಯಲ್ಲಿ ಪ್ರಕಟಿಸುವ ಸಾಹಿತ್ಯವನ್ನು ನಮಗೆ ಸಂಪಾದಿಸಿಕೊಡುತ್ತಾರೆ. ಸಾಹಿತ್ಯವನ್ನು ಸಂಪಾದಿಸುವಾಗ ಸಂಪಾದಕರು ಅದನ್ನು ನಿರ್ದಿಷ್ಟವಾದ ಮಾನದಂಡದೊಂದಿಗೆ ಅಳೆದು ತೂಗಿ ನೋಡುತ್ತಾರೆ. ಯಾವುದೇ

ವಾರಪತ್ರಿಕೆಯ ಸಂಪಾದಕನು ಮೊದಲಿಗೆ ತನ್ನ ಎದುರಿಗೆ ಇಟ್ಟುಕೊಳ್ಳುವ ಪ್ರಶ್ನೆಯೆಂದರೆ ತನ್ನ ಪತ್ರಿಕೆಯಲ್ಲಿ ಕೊಡುತ್ತಿರುವ ಸಾಹಿತ್ಯವು ಹಿಡಿಸುತ್ತದೆಯೋ ಇಲ್ಲವೋ ಎಂದು. ಸಾಮಾನ್ಯವಾಗಿ ಪತ್ರಿಕೆಯ ಸಂಪಾದಕರು ಜನರ ಅಭಿರುಚಿಯ ಹಿನ್ನೆಲೆಯಲ್ಲಿ ಅವರು ಸಾಹಿತ್ಯವನ್ನು ವ್ಯಾಖ್ಯಾನ ಮಾಡಲು ಹೋಗುವುದಿಲ್ಲ. ಜನರ ಅಭಿರುಚಿ ಎನ್ನುವುದೇ ಈ ಸಂದರ್ಭದಲ್ಲಿ ಸಾಹಿತ್ಯದ ಮೌಲ್ಯವನ್ನು ನಿರ್ಣಯಿಸುವ ಅಂಶವಾಗಿರುತ್ತದೆ. ಪತ್ರಿಕೆಯ ಸಂಪಾದಕರು ಎದುರಿಸುವ ಮತ್ತೊಂದು ಸಮಸ್ಯೆಯೆಂದರೆ – ಸಾಹಿತ್ಯವನ್ನು ಅವರು ಸೃಜನಶೀಲ ಹಾಗೂ ಕಾಲ್ಪನಿಕ ಎಂಬ ಗ್ರಹಿಎಕಯಲ್ಲಿ ಕಂಡುಕೊಳ್ಳಲು ಪ್ರಯತ್ನಿಸುವುದು. ಇದರಿಂದಾಗಿ ಪತ್ರಿಕೆಯ ಸಂಪಾದಕನಿಗೆ ಸೃಜನಶೀಲವೆಂದು ಅನಿಸಿದ್ದನ್ನು ನಿಜವಾದ ಸಾಹಿತ್ಯ ಎಂಬಂತೆ ಜನರ ಮನಸ್ಸಿನಲ್ಲಿ ಬಿಂಬಿಸಲು ಪ್ರಯತ್ನಿಸುತ್ತಾನೆ. ನಾಡಿನ ಜನರಿಗೆ ಬೇಕಾದ ಸಾಹಿತ್ಯವೆಂಬ ಹಣೆಪಟ್ಟಿಯನ್ನು ಈ ರೀತಿಯ ಬರಹಗಳು ಪರೋಕ್ಷವಾಗಿ ಸೂಚಿಸುತ್ತಿರುತ್ತವೆ. ಪತ್ರಿಕೆಗಳು ನಿಲ್ಲುವುದು ಜನರ ಬೇಡಿಕೆಯ ಮೇಲೆ. ಎನರ ಬೇಡಿಕೆಯು ಅವರ ಅಕ್ಷರ ಜ್ಞಾನದ ಅರಿವಿನ ಮೇಲೆ ನಿರ್ಣೀತವಾಗುತ್ತಿರುತ್ತದೆ. ಹಾಗಾಗಿ ಇವುಗಳ ನಡುವೆ ಸರಪಣಿಯು ಪರೋಕ್ಷವಾಗಿ ಕೆಲಸ ಮಾಡುತ್ತಿರುತ್ತದೆ. ವಾರ ಪತ್ರಿಕೆಗಳನ್ನೇ ಉದಾಹರಣೆಯಾಗಿ ತೆಗೆದುಕೊಂಡರೂ ಸಾಕು. ವಾರ ಪತ್ರಿಕೆಗಳನ್ನು ಜನರು ಯಾಕೆ ಓದುತ್ತಾರೆ? ಅದರಲ್ಲಿ ಪ್ರಕಟವಾಗುವ ಧಾರವಾಹಿಗಾಗಿ ಮತ್ತು ಮನಸ್ಸು ಹಗುರವಾಗಲು. ಈ ಎರಡೂ ಕಾರಣಗಳೂ ಕೂಡಾ ವಾರ ಪತ್ರಿಕೆ ಮತ್ತು ಜನರ ಅಭಿರುಚಿ ನಡುವಣ ಸಂಬಂಧಗಳನ್ನು ವ್ಯಾಖ್ಯಾನಿಸುತ್ತವೆ. ಜನರ ಅಭಿರುಚಿ ಎನ್ನುವುದು ಅಮೂರ್ತವಾಗಿ ರೂಪುಗೊಳ್ಳುವ ಪ್ರಕ್ರಿಯೆಯಲ್ಲ. ಆದರೆ ಆಧುನಿಕ ಮಧ್ಯಮ ವರ್ಗದಲ್ಲಿ ತುಂಬಿಕೊಳ್ಳುತ್ತಿರುವ ಅಸಹನೆ ಮತ್ತು ಅತೃಪ್ತಿಗಳನ್ನು ನೋಡಿ: ಈ ಅತೃಪ್ತಿ ತೀರಾ ಸಾಮಾನ್ಯವಾದ ಸಂಗತಿಯೇನೂ ಅಲ್ಲ. ಮಧ್ಯಮವರ್ಗದಲ್ಲಿ ತುಂಬಿಕೊಳ್ಳುತ್ತಿರುವ ಅತೃಪ್ತಿಗೆ ತೀವ್ರವಾದ ಹಿನ್ನೆಲೆಯಿದೆ.

ಕನ್ನಡ ನಾಡಿನಲ್ಲಿ ಹಿತೇಚ್ಛುವೆಂಬುದು 1870ರಲ್ಲಿ ಕಲಾದಗಿ (ಕಲಾಡ್ಗಿ)ಯಿಂದ ಪ್ರಚುರವಾಗುತ್ತಿತ್ತು (ಬಾಗಲಕೋಟೆಯ ವೃತ್ತ ಪತ್ರಕರ್ತರ ಪರಿಷತ್ತಿನ ಸ್ವಾಗತ ಸಭಾಧ್ಯಕ್ಷರಾದ ಶ್ರೀ ಯಲಗುರ್ದ ವಾಸುದೇವ ಧಾರವಾಡ ವಕೀಲರು ತಮ್ಮ ಸ್ವಾರಸ್ಯವುಳ್ಳ ಪ್ರಾರಂಭ ಭಾಷಣದಲ್ಲಿ ಈ ಸಂಗೀತಯನ್ನು ಹೇಳಿರುವರು). 1880ರಲ್ಲಿ ಧಾರವಾಡದಲ್ಲಿ ಮೂರು ಕನ್ನಡ ಪತ್ರಿಕೆಗಳೂ, ಬೆಳಗಾಂವಿಯಲ್ಲಿ ಇನ್ನು ಮೂರು ಪ್ರಚುರವಾಗುತ್ತಿದ್ದವು. ಮೈಸೂರಿನಲ್ಲಿ ಮೊದಲನೆಯ ಮುದ್ರಣಯಂತ್ರವು 1840ರಲ್ಲಿ ಗ್ಯಾರೆಟ್ ಎಂಬ ಕ್ರೈಸ್ತ ಬೋಧಕನಿಂದ ಸ್ಥಾಪಿತವಾಯಿತು. ಮೈಸೂರು ಸರಕಾರದ ಗೆಜೆಟ್ 1866ರಲ್ಲಿ ಉಪಕ್ರಮಿಸಿತು. ಡೆಯಿಲೀ ಪೋಸ್ಟ್, ಈವನಿಂಗ್ ಮೆಯಿಲ್ ಎಂಬ ಇಂಗ್ಲೀಷ್ ಪತ್ರಿಕೆಗಳೂ, ಹಿಂದೆ ಇದ್ದ ಕರ್ಣಾಟಕ ಪ್ರಕಾಶಿಕೆ (1865) ಮತ್ತು

ಈಗಲೂ (1928) ಇರುವ ಮೈಸೂರು ಸ್ಟಾರ್, ವೃತ್ತಾಂತ ಪತ್ರಿಕೆ (ವೃತ್ತಾಂತ ಪತ್ರಿಕೆ, ಮೈಸೂರು ಸ್ಟಾರ್ – ಇವು ಈಗ (1954) ಇಲ್ಲ) ಎಂಬ ಕನ್ನಡ ಪತ್ರಿಕೆಗಳೂ ಮೈಸೂರು ರಾಜ್ಯದಲ್ಲಿ ಮೊದಮೊದಲು ಹುಟ್ಟಿದ ಪತ್ರಿಕೆಗಳ ಪೈಕಿ ಮುಖ್ಯವಾದವು.

ಪತ್ರಿಕೋದ್ಯಮಿ

ಪತ್ರಿಕೆಯು ಯಾವಾಗ ಉದ್ಯಮವಾಗುತ್ತದೆಯೊ ಆಗ ಲಾಭ ನಷ್ಟದ ವಿಷಯಬರುತ್ತದೆ. ಎರಡನೆಯದಾಗಿ ಯಾವ ಪತಿಕೋದ್ಯಮ ಲಾಭ ನಷ್ಟದ ಚಿಂತನೆಯನ್ನು ಮಾಡುತ್ತದೆಯೋ ಆಗ ನಿಷ್ಪಕ್ಷಪಾತವಾಗಿ ಉದ್ಯಮವನ್ನು ನಡೆಸಲಾಗುವುದಿಲ್ಲ. ಯೂರೋಪಿನ ಇತಿಹಾಸವನ್ನು ಗಮನಿಸಿದರೆ ಪತ್ರಿಕೋದ್ಯಮವು ಸಂವಿಧಾನದ ರೀತಿಯಲ್ಲಿ ಕೆಲಸ ಮಾಡುತ್ತಿತ್ತು. ಪತ್ರಿಕೋದ್ಯಮವು ಉದ್ಯಮವಾಗಿರುವುದರಿಂದ ಈ ಕೆಳಗಿನ ಅಂಶಗಳು ಮುಖ್ಯವಾಗಿವೆ :

೧. ಬಂಡವಾಳಗಾರ : ಪತ್ರಿಕೆಯನ್ನು ನಡೆಸಲು ಬೇಕಾದ ಬಂಡವಾಳ ಹೂಡುತ್ತಾನೆ.

೨. ಸಂಪಾದಕ : ಬಂಡವಾಳಗಾರ ಮತ್ತು ಓದುಗರ ನಡುವೆ ಸಂಬಂಧ ರೂಪಿಸುತ್ತಾನೆ "ಸಂಪಾದನೆ" ವಿಷಯ ಸಂಗ್ರಹಿಸಿ ಅದಕ್ಕೆ ಬೇಕಾದ ರೂಪ ನಿರ್ಧರಿಸುವುದು.

೩. ಸಂಪಾದಕರಿಗೆ ಸುದ್ಧಿಯನ್ನು ಕೊಡುವವರು ವರದಿಗಾರರು.

೪. ಇವುಗಳಲ್ಲಿ ಸಂಪಾದಕರ ಹುದ್ಧೆಯು ಜವಾಬ್ದಾರಿಯುತವಾದುದು. ಸಂಪಾದಕರು ಓದುಗರ ಅಭಿರುಚಿ: ಸುದ್ಧಿಯನ್ನು ಪ್ರಕಟಿಸುವ ಕ್ರಮವನ್ನು ಸಂಯೋಜಿಸಬೇಕಾಗುತ್ತದೆ. ಆದುದರಿಂದ ಪತ್ರಿಕೋದ್ಯಮವು ಅಭಿರುಚಿ ನಿರ್ಮಾಣ; ಮಾಹಿತಿ ನೀಡುವಿಕೆ; ಜ್ಞಾನಪ್ರಸರಣ ಇತ್ಯಾದಿ ಎಲ್ಲಾ ಅಂಶಗಳನ್ನು ಗಮನಿಸಬೇಕಾಗುತ್ತದೆ. ಆದುದರಿಂದ ಸಾಮಾಜಿಕವಾಗಿ ಪತ್ರಿಕೋದ್ಯಮದ ಜವಾಬ್ದಾರಿ ದೊಡ್ಡದು.

ಪಥ್ಯಾಹಾರ

ವೈದ್ಯರ ಸಲಹೆಯಂತೆ ಅಡುಗೆಯವನು ರೋಗಿಗೆ ಪಥ್ಯಾಹಾರ ಒದಗಿಸುವಂತೆ ಎನ್ನುವುದು ಇಲ್ಲಿಯ ಭಾವಾರ್ಥ. ಆಯುರ್ವೇದ ಶಾಸ್ತ್ರದಲ್ಲಿ ರೋಗ ನಿಧಾನಕ್ಕೆ ಪಥ್ಯಾಹಾರ ಅಗತ್ಯ. ಅಂದರೆ ಆಹಾರದ ವಿಷಯದಲ್ಲಿ ರೋಗಿಯು ಕಟ್ಟುನಿಟ್ಟಾಗಿರಬೇಕು. ಪಥ್ಯವೆಂದರೆ ರೋಗಿಗೆ ಬಾಧಕವಾಗದಿರುವಂಥದ್ದು. ಅಪಥ್ಯವೆಂದರೆ ರೋಗಿಯ ದೇಹಕ್ಕೆ ಹೊಂದದಿರುವುದು. ಯೋಗ್ಯವಾದ, ಹಿತವಾದ, ಉಚಿತವಾದ, ಒಳಿತಾಗಬಹುದಾದ್ದು ಪಥ್ಯ. "ಅವನ ಮಾತು ಪಥ್ಯವಾಗಲಿಲ್ಲ"

ಅಂದರೆ ಅವನ ಮಾತು ಹಿಡಿಸಿಲ್ಲವೆಂದು ಅರ್ಥ. ಪಥ್ಯಾಹಾರವೆಂದರೆ ರೋಗಿಯು ವೈದ್ಯರು ಹೇಳಿದಂತೆ ಅನುಪಾನದ ಮೇರೆಗೆ ಅನ್ನಾಹಾರಗಳನ್ನು ಸೇವಿಸುವುದು.

ಪದಿನೆಂಟು ದೋಷಗಳು

ಹಸಿವು, ಬಾಯಾರಿಕೆ, ಹೆದರಿಕೆ, ಹಗೆತನ, ಪ್ರೀತಿ, ಮೋಹ, ಚಿಂತೆ, ಮುಪ್ಪು, ರೋಗ, ಮರಣ, ಬೆವರು, ಖೇದ, ಮದ, ರತಿ, ಆಶ್ಚರ್ಯ, ಜನನ, ನಿದ್ರೆ, ವಿಷಾದ ಇವು ಹದಿನೆಂಟು ದೋಷಗಳು ಎಂದು ಜೈನ ಧರ್ಮವು ನಂಬುತ್ತದೆ.

ಪದಿರು

ಒಗಟು; ಗೂಢಾರ್ಥವುಳ್ಳ ಮಾತು. ಪದರು, ಪದಿರು, ಪದುರು, ಹದರು, ಹದಿರ್, ಹದಿರು ಹದುರು (ನಾ) ಅ. ಎರಡರ್ಥವುಳ್ಳ ಮಾತು; ದ್ವಂದ್ವಾರ್ಥದ ನುಡಿ: ಜಾನಪದದ ಪ್ರಕಾರಗಳಲ್ಲಿ ಒಗಟು ಕೂಡಾ ಒಂದು. ಒಗಟನ್ನು ಬಿಡಿಸುವವನನ್ನು ಜಾಣನೆಂದು ಕರೆಯುತ್ತಾರೆ. ಒಗಟು ಸುಲಭವಾಗಿ ತಿಳಿಯದ ಮಾತು. ಗೂಢವಾದ ಮಾತು. ಒಗಟು ಹೇಳುವುದು ಮತ್ತು ಅದರ ಅರ್ಥವನ್ನು ಬಿಡಿಸುವುದು ಒಂದು ಮನೋರಂಜನೆಯೂ ಹೌದು. ಉದಾಃ ಅಂಕು ಡೊಂಕು ಸಂಕಪಾಲ ಮೂರು ತಲೆ ಹತ್ತು ಕಾಲು.

ಅಂಕು ಡೊಂಕು ಸಂಕಪಾಲ ಎಂದರೆ ಅಂಕು ಡೊಂಕಾಗಿ ಸಂಕಪಾಲದಂತೆ ಹೋಗುವ ಗೆರೆಗಳು. ಮೂರು ತಲೆಯೆಂದರೆ ಉಳುವವನು ಮತ್ತು ಎರಡು ಎತ್ತು. ಹತ್ತು ಕಾಲು ಎಂದರೆ ಎತ್ತುಗಳ ಎಂಟು ಕಾಲು ಮನುಷ್ಯರ ಎರಡು ಕಾಲುಗಳು.

ಪರಂಗನಾರತಿ

ಸುಳ್ಳು, ಪರಸ್ತ್ರೀ ಸಂಬಂಧ, ಮದ್ಯ ಮಾಂಸಗಳ ಸೇವನೆಗಳಿಗೆ ಒಗ್ಗಿದ ದುರ್ವ್ಯಸನಿ" ಎಂದು ಬರುತ್ತದೆ. ಯಾರು ಈ ಕೆಲಸ ಮಾಡುತ್ತಾರೋ ಅವರು ದುರ್ವ್ಯಸನಿಗಳು. 'ನಿಮಗೆ ಆಗಮ ಅಸತ್ಯವೆಂದೆನ್ನಿಸುತ್ತದೆ. ಜೀವನಿಲ್ಲವೆಂದು ಹೇಳುತ್ತೀರಿ. ಹೀಗೆಲ್ಲಾ ಹೇಳಲು ನಾಲಿಗೆಯಾದರೂ ಹೇಗೆ ಹೊರಳುತ್ತದೆ? ಇದು ತಾತ್ತ್ವಿಕ ಪ್ರಶ್ನೆ, ಲೋಕಾಯತರ ಮತ್ತು ಜೈನರ ನಡುವಣ ಸಂಘರ್ಷವನ್ನು ಸೂಚಿಸುತ್ತದೆ. "ಸ್ವರ್ಗ ಮೋಕ್ಷ ಖಾಲಿ ಮಾತುಗಳು. ಪರಲೋಕಕ್ಕೆ ಹೋಗುವುದನ್ನು ಕಲ್ಪಿಸಿಕೊಳ್ಳಲಾಗಿರುವ ಆತ್ಮ ಯಾವುದು ಇಲ್ಲ. ವರ್ಣಾಶ್ರಮ ಧರ್ಮ ಫಲಕಾರಿಯಲ್ಲ. ಅಗ್ನಿಹೋತ್ರ, ಮೂರು ವೇದಗಳು ಶರೀರಕ್ಕೆ ಬೂದಿ ಮೆತ್ತಿಕೊಳ್ಳುವುದು ಅರ್ಥಹೀನ. ಶ್ರಾದ್ಧಾದಿಗಳು ಅರ್ಥಹೀನ. ಕರ್ಮ ಸಿದ್ಧಾಂತ ಅರ್ಥಹೀನ. ಇವುಗಳು ಚಾರ್ವಾಕ ಮತದ ಪ್ರಮುಖ ನಿಲುವು. ಇದನ್ನು ಪ್ರಶ್ನಿಸುವುದು ಜೈನಧರ್ಮದ ಮುಖ್ಯ ತಾತ್ವಿಕತೆಯೂ ಆಗಿತ್ತು ಎಂಬುದಿಲ್ಲಿ ಗಮನಾರ್ಹ. ವ್ಯಭಿಚಾರಕ್ಕೆ 'ಯಮಧರ್ಮ ಸಾರ'ದಲ್ಲಿ ಹೀಗೆ ಬರುತ್ತದೆ.

ಶೂದ್ರನೊಡನೆ ವ್ಯಭಿಚಾರ ಮಾಡುವ ಬ್ರಾಹ್ಮಣ ಸ್ತ್ರೀಯನ್ನು ನಾಯಿಗಳಿಗೆ ಆಹಾರವಾಗಿ ಎಸೆಯಬೇಕೆಂದೂ, ಕ್ಷತ್ರಿಯನೊಡನೆ ಅಥವಾ ವೈಶ್ಯನೊಡನೆ ವ್ಯಭಿಚಾರ ಮಾಡಿದ್ದರೆ ತಲೆಬೋಳಿಸಬೇಕೆಂದೂ, ಕತ್ತೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಬೇಕೆಂದೂ ಹೇಳಿದೆ. ಭಾರತೀಯ ಪರಂಪರೆಯಲ್ಲಿ ಚರ್ಚಿತವಾಗಿರುವ 'ಬೀಜ ಪ್ರಾಧಾನ್ಯ' ಮತ್ತು 'ಕ್ಷೇತ್ರ ಪ್ರಧಾನ್ಯ' ಸ್ಥಿತಿಯಲ್ಲಿ 'ಕ್ಷೇತ್ರಪ್ರಾಧಾನ್ಯ'ವು ಹೆಣ್ಣಿನ ಪ್ರಾಧಾನ್ಯವನ್ನು ಸೂಚಿಸುತ್ತಿರುತ್ತದೆ. 'ಬೀಜ ಪ್ರಧಾನ್ಯ' ಸ್ಥಿತಿಯಲ್ಲಿ ಗಂಡು ಫಲವತ್ತತೆಯ ಪ್ರತೀಕವಾಗುವುದು ಮತ್ತು ಅವನು ಸಾಮಾಜಿಕವಾಗಿ ಉನ್ನತ ಸ್ಥಾನದಲ್ಲಿ ಇರುವುದರ ಸೂಚನೆಯೂ ಇರುತ್ತದೆ.

ಪರದ

ಪರದನೆಂದರೆ ವ್ಯಾಪಾರಿ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಪರದರ ಉಲ್ಲೇಖ ಅನೇಖ ಕಡೆ ಬರುತ್ತದೆ. ವ್ಯಾಪಾರ ಹೆಚ್ಚಿರುವ ಸಂದರ್ಭದಲ್ಲಿ 'ಪರದರ' ಉಲ್ಲೇಖ ಸಹಜವಾಗಿಯೇ ಬರುತ್ತದೆ. ವ್ಯಾಪಾರಿ ಎಂಬುದನ್ನು 'ಪರದ'ವೆಂದು ಕನ್ನಡಕ್ಕೆ ತರಲಾಗಿರುವುದು ವಿಶೇಷ.

ಪರದಾರಗಮನ

ಪರಸ್ತ್ರೀಗಮನದಿಂದ ಆಯುಷ್ಯ ತೀರುವುದು ಎಂದು ಇಲ್ಲಿಯ ಪರಿಕಲ್ಪನೆಯಾಗಿದೆ. ಪರಸ್ತ್ರೀಗಮನ ಸಭ್ಯತೆಯಲ್ಲ. ಅದು ಸಂಸ್ಕಾರವೂ ಅಲ್ಲವೆಂಬ ಧ್ವನಿ ಇಲ್ಲಿ ಮುಖ್ಯವಾಗಿದೆ. ಕ್ರಿ.ಶ. 916ರ ಪರ್ಷಿಯಾ ದೇಶದ ಸುಲೇಮಾನ್ ಎಂಬ ಪ್ರವಾಸಿಗ ಹೀಗೆ ಹೇಳುತ್ತಾನೆ: 'ವ್ಯಭಿಚಾರಗೈದವರನ್ನು ಮರಣದಂಡನೆಗೆ ಗುರಿಪಡಿಸುತ್ತಾರೆ. ಈ ಶಿಕ್ಷೆ ಇಂಡಿಯಾ ದೇಶದಲ್ಲೆಲ್ಲಾ ಇದೆ. ಆದರೆ ಗಂಡಸು ಹೆಂಗಸಿನ ಮೇಲೆ ಬಲಾತ್ಕಾರ ಮಾಡಿದರೆ ಗಂಡಸಿಗೆ ಮಾತ್ರ ಮರಣದಂಡನೆ. ಹೆಂಗಸಿನ ಒಪ್ಪಿಗೆಯಿಂದ ವ್ಯಭಿಚಾರ ಮಾಡಿದರೆ ಆಕೆಗೂ ಆಕೆಯ ಮಿಂಡನಿಗೂ ಮರಣದಂಡನೆ ವಿಧಿಸುತ್ತಾರೆ.

ಮನುವು ವ್ಯಭಿಚಾರಕ್ಕೆ ಈ ಕೆಳಗಿನ ಶಿಕ್ಷೆಯನ್ನು ಹೇಳಿದ್ದಾರೆ:

ಗಂಡು ತನಗಿಂತ ಹೀನ ಜಾತಿಯ ಸ್ತ್ರೀಯನ್ನು ಸೇವಿಸಿದರೆ ಏನೂ ದಂಡನೆಯಿಲ್ಲ. ಹೆಣ್ಣು ತನಗಿಂತ ಕೀಳು ಜಾತಿಯ ಪುರುಷನನ್ನು ಹಿಂಬಾಲಿಸಿದರೆ ಅವಳನ್ನು ಮನೆಯಲ್ಲಿ ಬಂದೋಬಸ್ತಿನಲ್ಲಿಟ್ಟು ಅವನನ್ನು ಮರೆಯುವಂತೆ ಮಾಡಬೇಕು. ಹೀನನು ಉತ್ತಮ ಸ್ತ್ರೀಯನ್ನು ವಶೀಕರಿಸಿದರೆ ಹಿಂಸಾರ್ಹನು. ಹೀನಳನ್ನು ಮೋಹಿಸಿದವನನ್ನು ಅವಳ ತಂದೆಯು ಸಮ್ಮತಿಸಿದರೆ ದ್ರವ್ಯ ಕೊಟ್ಟು ಮದುವೆಯಾಗಬಹುದು. ಸಮಜಾತಿಯವನು ಅಂತಹ ಕನ್ಯೆಯ ಸಮ್ಮತಿಯಿಲ್ಲದೆ ಬಲಾತ್ಕಾರದಿಂದ ದೂಷಿಸಿದರೆ ಅವನ ಕೈಬೆರಳನ್ನು ಕಡಿಯಬೇಕು. ಸ್ವಜಾತಿಯ ಹೆಣ್ಣು ಅನುರಕ್ತಳಾಗಿ ಪುರುಷಸಂಗ ಪಡೆದರೆ ಗಂಡಿಗೆ ಹಿಂಸೆಯಿಲ್ಲ. ಇನ್ನೊಂದು ಪಣ ಧನದಂಡನೆಯು.

ವಿವರಗಳಿಗೆ ನೋಡಿ: ಎಸ್.ಜಿ.ಸರ್ದೇಸಾಯಿ ೨೦೦೨ ಪ್ರಾಚೀನ ಭಾರತದಲ್ಲಿ ದಾರ್ಶನಿಕ ಸಂಘರ್ಷ ಮತ್ತು ಅದರ ಸಾಮಾಜಿಕಮಹತ್ವ ಪುಟ.೨೮-೩೦.

ಪಿ.ವಿ.ಕಾಣೆ (ಮೂಲ) ರಾಮಚಂದ್ರ ರಾವ್: ಎಸ್.ಕೆ. (ಅನು) ೧೯೮೦ ಧರ್ಮಶಾಸ್ತ್ರದ ಇತಿಹಾಸ ಪುಟ. ೨೮೮-೨೯೧

ಎಚ್.ಎಲ್ ನಾಗೇಗೌಡ (ಸಂ) ೧೯೬೪ ಪ್ರವಾಸಿ ಕಂಡ ಇಂಡಿಯಾ ಪುಟ. ೩೦೭

ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೮-೩೬೦.

ಪರದೇಶ

ಪರದೇಶವೆಂದರೆ ತನ್ನದಲ್ಲದ ದೇಶ ಎಂಬರ್ಥವಿದೆ. ಪರಕೀಯ ಅಂದರೆ ಅಪರಿಚಿತ; ತನಗೆ ಸಂಬಂಧಿಸದವನು ಎಂದರ್ಥ. ಪರದೇಶಿಯೆಂದರೆ ತನ್ನ ದೇಶಕ್ಕೆ ಸಂಬಂಧಿಸದೆ ಇರುವವನು. ೧೪೫೯ ರಲ್ಲಿ ಈ ಪದವು ಮೊಟ್ಟಮೊದಲು ಜಾರಿಗೆ ಬಂತು. ಪರಊರಿನಿಂದ ಬಂದವನು, ಪ್ರತ್ಯೇಕತಾವಾದಿ; ಏಕಾಂತವಾದಿ; ಪರದೇಶಿ ಎಂಬರ್ಥದಲ್ಲಿ ಈ ಪದವು ಬಳಕೆಯಾಯಿತು. ಯಾರು ತಮ್ಮ ರೀತಿಯ ಅಭ್ಯಾಸಗಳನ್ನು ರೂಢಿಸಿಕೊಂಡಿಲ್ಲವೋ ಅಂಥವರನ್ನು ಪರದೇಶಿಗಳೆಂದು ಕರೆಯುವಾಗ, ಜನಾಂಗ; ಮೈಬಣ್ಣ; ವೇಷಭೂಷಣ ಎಲ್ಲವೂ ಮಾನದಂಡವಾಯಿತು. ಹತ್ತೊಂಬತ್ತನೆಯ ಶತಮಾನದ ಅನಂತರ "ಪರಕೀಯರು" ಎನ್ನುವುದಕ್ಕೆ ವಿಶೇಷ ಅರ್ಥ ಬಂದಿತು. 'ಪರದೇಶಿಯರ ಆಳ್ವಿಕೆ'ಯ ಬಗ್ಗೆ ಎರಡು ಧೋರಣೆಗಳು ವ್ಯಕ್ತವಾದವು. ಪರದೇಶಿಯ ಆಳ್ವಿಕೆಯಲ್ಲಿ ಜಾರಿಗೆ ಬಂದ ಕಾನೂನು ಸುವ್ಯವಸ್ಥೆ; ಶಿಸ್ತು; ಭಾರತೀಯರ ರಾಜ ಆಳ್ವಿಕೆಯಿಂದ ಭಿನ್ನವೆಂಬ ಕಾರಣಕ್ಕೆ ಅದನ್ನು ಪ್ರಶ್ನಿಸಲಾಯಿತು.

ಭಾರತದಲ್ಲಿ ವಿದೇಶಿಯರು ತಮ್ಮ ಆರ್ಥಿಕ ನೀತಿಯನ್ನು ರೂಪಿಸಿರುವುದು. ಭಾರತೀಯ ಉತ್ಪಾದನೆಯ ಸಂಬಂಧಗಳನ್ನು ಪರಿವರ್ತಿಸಿತು. ಪರದೇಶದ ವಸ್ತು, ಅಲ್ಲಿಯ ಸರಕುಗಳು ಮಾರುಕಟ್ಟೆಯಲ್ಲಿ ಲಭ್ಯವಾಯಿತು. ಭಾರತದಲ್ಲಿ ವಿದೇಶದ ಸಸ್ಯಗಳು ಹುಟ್ಟಿಕೊಂಡವು. ಈ ದೃಷ್ಟಿಯಿಂದ ವಿದೇಶಿಯ ಜ್ಞಾನವು ಭಾರತೀಯ ಜ್ಞಾನ ಪರಂಪರೆಯನ್ನು ಮೂಲೆ ಗುಂಪು ಮಾಡಿತು. ಇದರ ಪರಿಣಾಮವಾಗಿ ಹೊಸ ಸಾಂಸ್ಕೃತಿಕ ಪರಿವೇಷಗಳು ರೂಪುಗೊಂಡವು. ವಿದೇಶಿಯರು ಮತ್ತು ದೇಶಿಯರ ನಡುವೆ ಅಂತರವು ಹೆಚ್ಚಾಯಿತು.

ದೇಹಕ್ಕೆ ಹೊರಗಿನಿಂದ ಮುಳ್ಳು ಚುಚ್ಚಿದರೆ ಅದನ್ನು "ಫಾರಿನ್" ಎಲಿಮೆಂಟ್ ಎಂದು ಕರೆಯುತ್ತಾರೆ.ವಿದೇಶದಿಂದ ವಸ್ತ್ರವು ಬಂದರೆ ಅದನ್ನು ವಿದೇಶಿ ಬಟ್ಟೆಯೆಂದು ಕರೆಯುತ್ತಾರೆ. ಊರಿನಿಂದ ಹೊರಗಿನವರು ಬಂದರೆ ಪರ ಊರಿನವರು ಎಂದು

ಕರೆಯುತ್ತಾರೆ. ಹೀಗೆ ಪರವೆನ್ನುವುದಕ್ಕೆ ಬೇರೆ ಬೇರೆ ಅರ್ಥಗಳಿವೆಯೆನ್ನುವುದು ಗಮನಾರ್ಹ

ಹೆಚ್ಚಿನ ಓದಿಗೆ: ಸುನಿಲ್ ಸಹಸ್ರಬುಧೆ, ಕೆ.ಪುಟ್ಟಸ್ವಾಮಿ(ಅನು) ೨೦೦೩ ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು

ವಿವರಗಳಿಗೆ ನೋಡಿ: ಮೋಹನ್ ದಾಸ್ ಕರಮಚಂದ್ ಗಾಂಧಿ ೨೦೦೮ ಹಿಂದ್ ಸ್ವರಾಜ್

ರಾಜೇಂದ್ರ ಚೆನ್ನಿ ೧೯೯೯ ದೇಶೀವಾದ

ಶ್ರೀಮನ್ ನಾರಾಯಣ ೨೦೦೧ ಮಹಾತ್ಮಗಾಂಧಿಯವರ ಆಯ್ದ ಕೃತಿಗಳು(೩)

Eric Strokes 1989 The English Utiliterian and India

ಪರಿಚಾರಕರ ಲಕ್ಷಣ

ಯೋಗ ಕ್ಷೇಮವನ್ನು ನೋಡಿಕೊಳ್ಳುವವನು, ದುಷ್ಟರ ನಿಯಂತ್ರಣ ಮಾಡಲು ಶಕ್ತನಾದವನು, ತನಗೆ ಸಂತೋಷ ಉಂಟು ಮಾಡಬಲ್ಲವನು, ಅಂತಃಪುರದ ರಕ್ಷಕನಾಗಿರಬೇಕು. (ಮಾನಸಲ್ಲೋಸ–2–150)

ಪರುಸವೇದಿ

ಸ್ಪರ್ಶವೇದಿ, ಮುಟ್ಟಿದ್ದನ್ನೆಲ್ಲ ಚೆನ್ನವನ್ನಾಗಿ ಮಾಡುವ ಕಲೆಗೆ ಪರುಸವೇದಿ ಎಂದು ಕರೆಯುತ್ತಾರೆ.

ಸ್ಪರ್ಶಶಿಲೆಯ ಗಣಿಯೂ ಇವೆಯೆಂದರೆ ಅವಿಚ್ಛಿನ್ನವಾದ ದಾನಕ್ಕೆ ಭದ್ರದೇವನನ್ನು ಹೋಲುವರಾರಿದ್ದಾರೆ.

ಪಲ್ಯಂಕಾಸನ

ಬಲಪಾದವನ್ನು ಎಡತೊಡೆಯ ಮೇಲೂ ಎಡಪಾದವನ್ನು ಬಲ ತೊಡೆಯ ಮೇಲೂ ಇಟ್ಟು ಧ್ಯಾನಕ್ಕೆ ಕುಳಿತುಕೊಳ್ಳುವುದು.

ಪವಿತ್ರ ಮತ್ತು ಅಪವಿತ್ರ

'ಪವಿತ್ರ' ಮತ್ತು 'ಅಪವಿತ್ರ'ವೆನ್ನುವುದು ಕೂಡಾ ಮನಸ್ಸಿನ ಭಾವನೆಗೆ ಸಂಬಂಧಿಸಿದ ವಿಷಯ. ಹಾಗೆಯೇ ಇದು ಸಾಮಾಜಿಕ ವರ್ತನೆಯ ಮೇಲೂ ಪ್ರಭಾವ ಬೀರುತ್ತದೆ. ಅನೇಕ ಸಂದರ್ಭಗಳಲ್ಲಿ 'ಪವಿತ್ರ' ಮತ್ತು 'ಅಪವಿತ್ರ'ವೆಂದು ಕರೆಯುವ ಸಂಗತಿಗಳಿಗೆ ಯಾವ ಆಧಾರವೂ ಇಲ್ಲ. 'ಪವಿತ್ರ' ವೆಂದರೆ ಶುದ್ಧ : ಮಡಿ : ಶುಭವೆನ್ನುವ ಕಲ್ಪನೆಯು ಇರುವ ಹಾಗೆಯೇ 'ಅಪವಿತ್ರ'ವೆಂದು ಕರೆಯುವುದಕ್ಕೆ 'ಅಶುಭ', 'ಅಮಂಗಲ', 'ಮೈಲಿಗೆ' ಯೆಂಬ ಅರ್ಥವಿದೆ. ಹಾಗೆಯೇ 'ಶೌಚ' – ಅಶೌಚ'ವೆನ್ನುವ ಪರಿಭಾಷೆಯೂ

ಚಾಲ್ತಿಯಲ್ಲಿದೆ. ಮಡಿ ಮತ್ತು ಮೈಲಿಗೆಯೆನ್ನುವ ಪರಿಕಲ್ಪನೆಯನ್ನು ಹುಟ್ಟುಹಾಕಿರುವುದು ವೈದಿಕ ಧರ್ಮವೆಂದು ಹೇಳಲಾಗುತ್ತಿದೆ. ಆದರೆ ಮಡ್ಡಿ ಮೈಲಿಗೆಯ ಪರಿಕಲ್ಪನೆಯು ಎಲ್ಲಾ ಜನಾಂಗಗಳಲ್ಲಿ ಇವೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಉದಾಹರಣೆಗೆ ಬ್ರಾಹ್ಮಣರಲ್ಲಿ 'ಶುಭಕರಣ', 'ಶುಭನಕ್ಷತ್ರ', 'ಶುಭಮಹೂರ್ತ'ದ ಪರಿಕಲ್ಪನೆಯು ಇರುವ ಹಾಗೆಯೇ ಬುಡಕಟ್ಟುಗಳಲ್ಲಿ 'ಶುಭಶಕುನ', 'ಅಪಶಕುನ'ದ ಪರಿಕಲ್ಪನೆಗಳಿವೆ. ಮುಸ್ಲಿಮರಲ್ಲಿಯೂ 'ಹರಮ್' ಎಂದರೆ ಮಡಿಯಿಲ್ಲದ್ದು ಎನ್ನುವ ನಂಬಿಕೆಯಿದೆ. ಇದು ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿರುವ ನಂಬಿಕೆಯೂ ಹೌದು. 'ಶುಭ' ಎನ್ನುವುದು ಒಂದು ಪೂರ್ವಪದ. ಇದನ್ನು ಸೇರಿಸಿಕೊಂಡು ಅನೇಕ ಭಾಷಿಕರಚನೆಗಳಿವೆ. 'ಶುಭಮಹೂರ್ತ' (ಶುಭಕಾಲ) ಶುಭದಿವಸ (ದಿನಕ್ಕೆ ಸಂಬಂಧಿಸಿದ್ದು – ಉದಾ: ಕೆಲವರಿಗೆ ಮಂಗಳವಾರ ಶುಭದಿನವಲ್ಲ) ಶುಭಕಾರ್ಯ (ಕೆಲಸಕ್ಕೆ ಸಂಬಂಧಿಸಿರುವುದು) ಶುಭಸಮಕಲ್ಪ (ಮನಸ್ಸಿಗೆ ಸಂಬಂಧಿಸಿದ್ದು) ಶುಭಾರಂಭ (ಆರಂಭಕ್ಕೆ ಸಂಬಂಧಿಸಿದ್ದು). ಅಶುಭ ಮಹೂರ್ತ (ಮದುವೆಗೆ ಸಂಬಂಧಿಸಿದ್ದು) ಶುಭಯಾತ್ರೆ (ಯಾತ್ರೆಗೆ ಸಂಬಂಧಿಸಿದ್ದು) ಶುಭಶಕುನ (ನಂಬಿಕೆಗೆ ಸಂಬಂಧಿಸಿದ್ದು) – ಹೀಗೆ ಬೇರೆ ಬೇರೆ ಸಂದರ್ಭಗಳನ್ನು ಇವು ಸೂಚಿಸುತ್ತವೆ. ಗ್ರಹಗಳಿಗೆ ಸಂಬಂಧಿಸಿದ ಹಾಗೆ ಕೂಡಾ ಶುಭ ಮತ್ತು ಅಶುಭವೆಂಬ ವರ್ಗೀಕರಣವಿದೆ (ಶನಿ=ಅಶುಭಗ್ರಹ).

ಇದೇ ಮಾದರಿಯಲ್ಲಿ ಶುದ್ಧ ಮತ್ತು ಅಶುದ್ಧ (ಮಡಿ ಮತ್ತು ಮೈಲಿಗೆ)ಯ ಪರಿಕಲ್ಪನೆಯಿದೆ. ಕೆಳಜಾತಿಯ ಜನರ ಸ್ಪರ್ಶ; ಪ್ರಾಣಿಗಳು; ಚರ್ಮದ ವಸ್ತುಗಳು; ಮಾಂಸಾಹಾರ; ಹುಟ್ಟು ಮತ್ತು ಸಾವು – ಅಶುದ್ಧವೆಂದು ತಿಳಿಯಲಾಗಿದೆ.

ವಿವರಗಳಿಗೆ ನೋಡಿ: Lauis Dumont 1999. Homohirehicas

ಪಶ್ಚಿಮರಂಗ

ಪೂರ್ವರಂಗ ಮತ್ತು ಪಶ್ಚಿಮ ರಂಗ ಎಂದು ಎರಡು ವಿಭಾಗ ಮಾಡಿ ಸ್ವಾತಂತ್ರ್ಯ ಹೋರಾಟದ ನಮೂನೆಗಳನ್ನು ಗುರುತಿಸುತ್ತಾರೆ. ಆದರೆ ಇಡಿಯ ಭೂಗೋಳವನ್ನು ವಿಭಾಗಿಸಿ ಒಂದನ್ನು ಪೂರ್ವದೇಶಗಳೆಂದು ಮತ್ತೆ ಕೆಲವನ್ನು ಪಶ್ಚಿಮ ದೇಶಗಳೆಂದು ಕರೆಯಲಾಗುತ್ತದೆ. ಇದರಲ್ಲಿ ದಿಕ್ಕುಗಳು ಮೊದಲ ಮಾನದಂಡವಾಗಿ ಬಳಕೆಯಾಗಿದೆ ಎಂಬುದು ಗಮನಾರ್ಹ. ಮೊದಲು ಪಶ್ಚಿಮವೆಂದರೆ ಕ್ರಿಶ್ಚಿಯನ್ ಧರ್ಮಗಳಿರುವ ದೇಶಗಳೆಂದು, ಪೂರ್ವವನ್ನು ಇಸ್ಲಾಂ ದೇಶಗಳೆಂದು ಕರೆಯಲಾಗುತ್ತಿತ್ತು. ಪೂರ್ವ ಮತ್ತು ಪಶ್ಚಿಮ ಅನ್ನುವುದನ್ನು ಅನಂತರದ ದಿನಗಳಲ್ಲಿ ಜೀವನ ಕ್ರಮಕ್ಕೂ ಅನ್ವಯಿಸಲಾಯಿತು. ಪಶ್ಚಿಮ ಶೈಲಿ, ಪೂರ್ವ ಶೈಲಿ ಇದಕ್ಕೆ ಉದಾಹರಣೆಯಾಗಿದೆ ಇದರೊಂದಿಗೆ ಪೌರಾತ್ಯ ಪಾಶ್ಚಿಮಾತ್ಯ ಎಂಬ ವರ್ಗೀಕರಣಗಳು ಚಾಲ್ತಿಯಲ್ಲಿದೆ.

ವಿವರಗಳಿಗೆ ನೋಡಿ: Raymond Williams 1983 keywords P.336-334
ಜಿ.ಎಸ್.ಚಕ್ರವರ್ತಿ ೨೦೦೩ ಇತಿಹಾಸ ಪ್ರದೀಪ
ಎನ್.ರಂಗನಾಥ, ಶರ್ಮ(ಅನು) ಡಿ.ಆರ್.ನಾಗರಾಜ್(ಸಂ)
೧೯೯೩ ಭರ್ತೃಹರಿಯ ವಾಕ್ಯಪದೀಯ

ಪಸದನ

ಪಸದನವೆಂದರೆ ಪ್ರಸಾದನ. ಪ್ರಸಾಧನವೇ ವಾಸ್ತವವಾಗಿ ಒಂದು ಕಲೆ. ಪಸದನವನ್ನು ಅಲಂಕಾರ; ಒಡವೆಯೆಂದೂ ಕರೆಯುತ್ತಾರೆ.

ಪಾಟಾಳಿಗಳು

ಪಾಟಾಳಿಗಳು ಎಂದರೆ ದೇವಸ್ಥಾನದಲ್ಲಿ ದೇವರಿಗೆ ಹೂವನ್ನು ಕೊಡುವ ಕಾಯಕದವರು. ಅವರದು ಅಳಿಯ ಸಂತಾನ ಕಟ್ಟು. ಪಾಡಾಳಿಯೇ ಪಾಟಾಳಿಯಾಯಿತು ಎಂದು ಮುಳಿಯರು ಅಭಿಪ್ರಾಯ ಪಡುತ್ತಾರೆ. ದೇವಸ್ಥಾನದಲ್ಲಿ ಹಾಡುವವರೇ ಪಾಟಾಳಿಯಾಗಿರಬಹುದು. ಆಳು ಎನ್ನುವುದು ಆಳಿ ಎಂದು ಆಗಿರಬಹುದು. ದೇವರ ಆರಾಧನೆಯಲ್ಲಿ ಹಾಡುವುದು ಕೂಡಾ ಒಂದು ಸೇವೆಯೆಂಬುದಿಲ್ಲಿ ಗಮನಾರ್ಹ. ಪಾಟ್ ಎಂದರೆ ಹಾಡು. ಯಾರು 'ಪಾಟ್' ಹೇಳುತ್ತಾರೋ ಅವರು ಪಾಟಾಳಿಗಳು.

(ಮುಳಿಯ ತಿಮ್ಮಪ್ಪಯ್ಯ-ಪಾರ್ತಿಸುಬ್ಬ)

ಪಾಣಿಗ್ರಹಣ

ಕೌಟಿಲ್ಯನು ಬ್ರಾಹ್ಯ, ಪ್ರಾಜಾಪತ್ಯ, ಆರ್ಷ ಮತ್ತು ದೈವ ಪದ್ಧತಿಯ ವಿವಾಹಗಳು ಪ್ರಾಚೀನವಾದುದು ಎಂದು ಹೇಳುತ್ತಾನೆ. ಅವನ ಪ್ರಕಾರ ಗಾಂಧರ್ವ, ಅಸುರ ರಾಕ್ಷಸ, ಪೈಶಾಚವಿವಾಹಗಳು ಸಮಾಜದಲ್ಲಿ ಮನ್ನಣೆ ಹೊಂದಲು ಸಾಧ್ಯ, ಕೌಟಿಲ್ಯನ ಪ್ರತಿಲೋಮವಿವಾಹವನ್ನು ಒಪ್ಪುವುದಿಲ್ಲ. (ಎಂ.ವಿ. ಕೃಷ್ಣರಾವ್. ೧೯೫೩. ಕೌಟಿಲ್ಯ. ಮೈಸೂರು. ವಿ. ವಿ.)

ಹೆಣ್ಣಿನ ಕೈಯನ್ನು ಗಂಡು ಹಿಡಿದುಕೊಳ್ಳುವುದೇ ಪಾಣಿಗ್ರಹಣ.

1. ವಾಗ್ದಾನ 2. ವರನ ಸಮ್ಮತಿ 3. ಕನ್ಯಾದಾನ 4. ವಿವಾಹ ಹೋಮ 5. ಪಾಣಿಗ್ರಹಣ 6. ಹೃದಯ ಸ್ಪರ್ಶ

7. ಸಪ್ತಪದಿ 8. ಸ್ಥಿರತೆಯ ಸೂಚಕವಾಗಿ ಬಂಡೆಯೇರುವುದು 9. ಸೂರ್ಯದರ್ಶನ 10. ಧ್ರುವದರ್ಶನ 11. ಸಂಯಮದ ಮೂರು ರಾತ್ರಿಗಳು 12. ಚತುರ್ಥಿಕರ್ಮ

ನಿಶ್ಚಿತಾರ್ಥ-ಸಾಂಕೇತಿಕ ವಿಧಿ, ವಾಗ್ದಾನ ಒಂದು ಒಪ್ಪಂದ. ವರವರಣವು ವರನನ್ನು ಆರಿಸಲಾಗಿದೆಯೆಂದು ಸೂಚಿಸುತ್ತದೆ. ಕನ್ಯಾದಾನದಲ್ಲಿ ವಧು ಅಗ್ನಿಸಾಕ್ಷಿಯಾಗಿ ವರನಿಗೆ ಒಪ್ಪಿಸಲಾಗುತ್ತದೆ. ಹೋಮಕ್ಕೆ ಸುತ್ತು ಬರುವುದು (ಅಗ್ನಿಸಾಕ್ಷಿ). ವಧೂವರರನ್ನು

ಒಂದು ಕೂಡಿಸುವ ಸಂಕೇತ. ಕೈ ಹಿಡಿಯುವುದು ಪರಿಗ್ರಹವನ್ನು ಸೂಚಿಸುತ್ತದೆ. ಸಪ್ತಪದಿಯಲ್ಲಿ ಮೊದಲ ಹೆಜ್ಜೆ ರಸದ ಸೂಚಕ ಎರಡನೆಯದು ಸವಿ. ಮೂರನೆಯದು ಧನವೃದ್ಧಿ ನಾಲ್ಕನೆಯದು ಸೌಲಭ್ಯ, ಐದನೆಯದು ಗೋಸಂಪತ್ತು, ಆರನೆಯದು ಋತುಮಾನ, ಏಳನೆಯದು ಪರಸ್ಪರ ಅನುರಕ್ತರಾಗುವುದನ್ನು ಸೂಚಿಸುತ್ತದೆ.

ಪಾಣಿಗ್ರಹಣವೆಂದರೆ ಕೈಹಿಡಿಯುವುದು. ಇಲ್ಲಿ ಗ್ರಹಣವೆಂದರೆ ಹಿಡಿಯುವಿಕೆ, ಪಾಣಿಯೆಂದರೆ ಕೈ, ಪಾಣಿ ಗ್ರಹಣವೆಂದರೆ ವರನು ವಧುವಿನ ಕೈಹಿಡಿಯುವುದು. ಅಗ್ನಿಯ ಸುತ್ತ ವಧುವಿನ ಕೈಹಿಡಿದು ನಡೆಯುವುದು ವಿವಾಹದ ಒಂದು ಸಂಸ್ಕಾರವಿಧಿ.

ಉದಾ: ಚಂದ್ರಗ್ರಹಣ (ರಾಹು ಚಂದ್ರನನ್ನು ಹಿಡಿಯುವುದು.) ಗೋಗ್ರಹಣ. (ಗೋವುಗಳನ್ನು ಹಿಡಿಯುವುದು) ಪ್ರಾಣಿಗ್ರಹಣವೆಂದರೆ ಮದುವೆಯನ್ನು ಸಂಕೇತಿಸುತ್ತದೆ. (ಉದಾ: ಯಯಾತಿ – ದೇವಯಾನಿ ಸಂಬಂಧದಲ್ಲಿ ಯಯಾತಿಯು ದೇವಯಾನಿ ಕೈಹಿಡಿದುದೇ ಮದುವೆಗೆ ಕಾರಣವಾಯಿತು. ಇಲ್ಲಿ ಪಾಣಿಗ್ರಹಣ ಮುಖ್ಯ. ಇದು ಶುಭ, ಚಂದ್ರಗ್ರಹಣ, ಸೂರ್ಯಗ್ರಹಣವೆನ್ನುವಲ್ಲಿ ರಾಹು, ಚಂದ್ರ-ಸೂರ್ಯರನ್ನು ಹಿಡಿಯುತ್ತಾನೆ ಎನ್ನುವುದು ನಂಬಿಕೆ. ಗೋಗ್ರಹಣ ಶುಭವಲ್ಲ.

ಋಗ್ವೇದದಲ್ಲಿ ಸ್ತ್ರೀಯರಿಗೆ 'ಗೃಹಸ್ವಾಮಿನಿ', 'ಆನಂದ', ಕಲ್ಯಾಣೀ' ಎಂದು ಸಂಬೋಧಿಸಲಾಗಿದೆ. 'ಜಾಯೇದಸ್ತಮ್, ಕಲ್ಯಾಣಿರ್ಜಾಯಾ ಸುರಾಣಾಂ ಗೃಹೇತೇ (3–53–4;6). ಪುರುಷನ ಜೊತೆಗೆ ಯಜ್ಞಕಾರ್ಯದಲ್ಲಿ ಸಹಭಾಗಿನಿಯಾಗುವ ಅವಕಾಶವನ್ನಿತ್ತು, ಅವಳಿಗೆ ದೈವಿಕ ಹಾಗು ಆತ್ಮಿಕ ಸಾಧನೆಯಲ್ಲಿ ಸಮಾನವಾದ ಅನುಕೂಲವನ್ನುಂಟು ಮಾಡಲಾಗಿದೆ. ಪುರುಷನ ರಾಗದ ಭೋಗದ ಸಾಧನವಾದ ಹೆಣ್ಣು ತನ್ನ ಸುಂದರ ಮಾತುಗಳಿಂದ ಪತಿಯನ್ನು ಆಕರ್ಷಿಸುತ್ತಾಳೆ. 'ಜಾಯಾ ಪತಿಂ ವಹತಿ ವಗ್ನುನಾ' (10–32–3). ಹಾಗೆಯೇ ಸೋಮರಸವು ಆನಂದಗೊಳಿಸುವಂತೆ ಪತ್ನಿಯು ಪತಿಯನ್ನು ಪ್ರಸನ್ನಗೊಳಿಸುತ್ತಾಳೆ, 'ಜಾಯೇವ ಪತ್ಯಾವಧಿ ಶೇವ ಮಹಂತೇ' (9–82–4). ಹೀಗೆ ಹೆಣ್ತನದ ರಾಗಮಯತೆಯನ್ನು ಮಾರ್ಮಿಕವಾಗಿ ಚಿತ್ರಿಸಿದ ಋಗ್ವೇದವು ಹೆಣ್ಣನ್ನು "ಪೃಥಿವಿರೂಪಾ" ಎಂದು ಕರೆದು, ಅವಳ ತಾಯ್ತನದ ಪಾವಿತ್ರ್ಯವನ್ನು ಉಗ್ಗಡಿಸಿದೆ. ಋಗ್ವೇದದಲ್ಲಿ ಸ್ವಯಂವರವಿಧಿಯ ವಿವಾಹದ ಬಗೆಗೆ ಪ್ರಸ್ತಾಪವಿದೆ. ವೇದಗಳಲ್ಲಿ ಉಕ್ತವಾಗಿದೆ. *ನೋಡಿ : ೨.*

ವಿವರಗಳಿಗೆ ನೋಡಿ: ಶೇಷ ನವರತ್ನ ೨೦೦೮. ಪು. ೩೪
ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.೨ ೧೯೭೧ ಪುಟ. ೩೦೨

ಪಾಣ್ಬ

ಪಾಣ್ಬರಂಕುಸವೆಂದರೆ ಜಾರರಿಗೆ ಅಂಕುಶಪ್ರಾಯವಾದವನು. ಹಾದರವೂ ಕೂಡಾ ಅನೈತಿಕವೆಂಬ ಕಾರಣಕ್ಕೆ ಶಿಕ್ಷಾರ್ಹವಾಗಿತ್ತು.

ಪಾತ್ರರಿಗೆ ದಾನ

ಅಭಯದಾನದ ಪ್ರಾಮುಖ್ಯತೆಯನ್ನು ಕರ್ನಾಟಕ ಪಂಚತಂತ್ರದಲ್ಲಿ ಹೇಳಲಾಗಿದೆ. ಗೋದಾನ, ಭೂದಾನ, ಅನ್ನದಾನ, ಚಿನ್ನದಾನದಿಂದ ಯಾವ ಪ್ರಯೋಜನಗಳೂ ಇಲ್ಲ. ಅವು ಕ್ಷಣಕಾಲಕ್ಕೆ ಮಾತ್ರ ಸೀಮಿತ. ಅಭಯದಾನವು ಮನುಷ್ಯನಿಗೆ ದೃಢತೆಯನ್ನು ತಂದುಕೊಡುತ್ತದೆ. ಆತ್ಮವಿಶ್ವಾಸ ಮೂಡಿಸುತ್ತದೆ. ಅಷ್ಟೇ ಅಲ್ಲ, ಸೋತವರಿಗೆ ಅಭಯವು ರಕ್ಷಣೆಯನ್ನು ನೀಡುತ್ತದೆ. ಆದುದರಿಂದ ಅಭಯದಾನವು ಮುಖ್ಯವಾಗಿದೆ.

ಅಪಾತ್ರರಾದವರಿಗೆ ದಾನ ಮಾಡುವುದರಿಂದ ಉಪಯೋಗವಿಲ್ಲ. ಅಪಾತ್ರರಿಗೆ ದಾನ ಮಾಡುವುದರಿಂದ ಪಾಪ ಬರುವುದೇ ಹೊರತು ಮತ್ತೇನೂ ಅಲ್ಲ. ಆದರೆ ಪಾತ್ರರಾದವರಿಗೆ ದಾನ ಮಾಡುವುದರಿಂದ ತನಗೂ ದಾನ ಸ್ವೀಕರಿಸಿದವನಿಗೂ ಪುಣ್ಯ ಸಂಚಯವಾಗುವುದು ಎಂದು ಚಾವುಂಡರಾಯನು ವಿವರಿಸುತ್ತಾನೆ. ಋಗ್ವೇದದಲ್ಲಿಯೂ ದಾನದ ವಿಷಯವು ಬರುತ್ತದೆ. ದಾನಿಯೊಡನೆ ಎಲ್ಲರೂ ಸ್ನೇಹ ಮಾಡಿಕೊಳ್ಳುವರು. ದಾನಿಯು ಅಮೃತತ್ವವನ್ನು ಹೊಂದುತ್ತಾನೆ. ದಾನ ಹೀನನನ್ನು ಅವನ ಗೆಳೆಯರೂ ತೊರೆದಾನು. ಧನದಾನ ಮಾಡುವ ಮತ್ತೊಬ್ಬನ ಸಖ್ಯವನ್ನು ಸಹಾಯಾಪೇಕ್ಷಿ ಮಿತ್ರನು ಹೊಂದಬಹುದು. (ಋಗ್ವೇದ 10–117–3; 10–17–4; 1–125–6)

ಪ್ರತ್ಯುಪಕಾರವನ್ನು ಬಯಸಿ ಫಲವನ್ನು ನಿರೀಕ್ಷಿಸಿಕೊಂಡು ಕ್ಲೇಶದಿಂದ ಕೊಡುವ ದಾನವು ರಾಜಸ. ದೇಶ ಕಾಲವನ್ನು ಲೆಕ್ಕಿಸದೆ ಅಯೋಗ್ಯರಾದವರಿಗೆ ತಿರಸ್ಕಾರದಿಂದ ಕೊಡುವ ದಾನವು ತಾಮಸ ದಾನ. ಫಲಾಕಾಂಕ್ಷೆಯಿಲ್ಲದೆ ನೀಡುವ ದಾನವು ಸಾತ್ವಿಕ ದಾನವಾಗಿದೆ ಎಂದು ಭಗವದ್ಗೀತೆಯಲ್ಲಿ ಬರುತ್ತದೆ.

ಭಾರತದ ಬಹುತೇಕ ಧರ್ಮಗಳು "ದಾನ"ವನ್ನು ಒಪ್ಪಿವೆ. ದಾನ ಮಾಡಿದರೆ ಪುಣ್ಯ ಬರುತ್ತದೆ. ಆದರಿಸಿ ಸನ್ಮಾನಿಸಿ ಅವರ ಆಶೀರ್ವಾದ ಪಡೆದರೂ ಪುಣ್ಯ ಬರುತ್ತದೆಯೆಂಬ ನಂಬಿಕೆಯು ಮುಖ್ಯವಾಗಿದೆ. ಋಗ್ವೇದದಲ್ಲಿ ದಾನ ಮಾಡುವುದರ ಬಗೆಗೆ ಗೌರವಾದರಗಳು ವ್ಯಕ್ತವಾಗಿವೆ. ಸಂಹಿತೆಗಳಲ್ಲಿ ಅನೇಕ ಕಡೆ ರಾಜರ ಹೆಸರು. ಅವರ ವಂಶವಿಸ್ತಾರ. ಅವರು ಮಾಡಿದ ದಾನ ವರ್ಣನೆ, ಅವರಿಂದ ದಾನ ಪಡೆದ ಋಷಿಗಳ ವರ್ಣನೆಯು ಬರುತ್ತದೆ. ಇವುಗಳಿಗೆ ಸಂಬಂಧಿಸಿದ ಸ್ತುತಿಗಳಿವೆ. ಇವುಗಳನ್ನು ದಾನ ಸ್ತುತಿಗಳೆಂದು ಕರೆಯುತ್ತಾರೆ. ದಾನಸ್ತುತಿಗಳು ಸಂಪತ್ತಿನ ಅಸಮಾನ ಹಂಚಿಕೆಯನ್ನು ಪರೋಕ್ಷವಾಗಿ ವಿರೋಧಿಸುತ್ತವೆ. ಅನ್ನ ಬೇಡಿ ಬಂದವನಿಗೆ ಅನ್ನ ನೀಡುವವನೇ ನಿಜವಾದ ದಾತ. ಅವನಿಗೆ ಯಜ್ಞಫಲಗಳು ಸಿಗುವುವು. ದಾನಿಯೊಡನೆ ಎಲ್ಲರೂ ಸ್ನೇಹ ಮಾಡಿಕೊಳ್ಳುವರು. ಆಪ್ತನಾದ ಗೆಳೆಯನಿಗೆ ಧನಾದಿ ಸಹಾಯ ನಾಡದವನು ಮಿತ್ರನೇ ಅಲ್ಲ. ಅಂಥ ದಾನ ಹೀನನನ್ನು ಅವನ ಗೆಳೆಯನು ತೊರೆದಾನು.

ಆಗ ಪ್ರಿಯರಿಂದ ಬಿಡಲ್ಪಟ್ಟ ಅವನ ಮನೆ. ಮನೆಯೆಂದು ಎನಿಸಿಕೊಳ್ಳಲಾರದು. (ಋಗ್ವೇದ 10-117-4) ಮನು ಈ ಕೆಳಗಿನ ದಾನ ವಿಧಾನಗಳನ್ನು ಹೇಳಿದ್ದಾನೆ: ಜ್ಯೋತಿಷ್ಟೋಮಾದಿ ಯಜ್ಞದಲ್ಲಿ ಋತ್ವಿಜನಾಗಿ ವ್ಯಾಪೃತನಾದವನಿಗೆ ಅಲಂಕೃತ ಕನ್ಯಾದಾನವು ದೈವವಿವಾಹವು. ಬೇಡಿದವನಿಗೆ ಮತ್ಸರವಿಲ್ಲದೆ ಇದ್ದದ್ದು ಕೊಡಬೇಕು. ಆದುದರಿಂದ ಎಂದಾದರೂ ಸತ್ಪಾತ್ರದಾನವಾಗಿ ತನ್ನ ದುರಿತ ನಿವೃತ್ತಿಯಾಗುವುದು. ಜಲದಾನದಿಂದ ತೃಪ್ತಿಯು, ಅನ್ನದಾನದಿಂದ ಅಕ್ಷಯ ಸುಖವು, ತಿಲದಾನದಿಂದ ಸತ್ಪ್ರಜೆಯು, ದೀಪದಾನದಿಂದ ಉತ್ತಮ ದೃಷ್ಟಿಯು ದಾತೃವಿಗೆ ಲಭಿಸುವುದು. ಭೂದಾನದಿಂದ ಭೂಮಿಯು, ಹಿರಣ್ಯದಾನದಿಂದ ದೀರ್ಘಾಯುಸ್ಸು, ಗೃಹದಾನದಿಂದ ಒಳ್ಳೆ ಮನೆಯು, ಬೆಳ್ಳಿದಾನದಿಂದ ಸೌಂದರ್ಯವು, ಕಾಲಾಂತರದಲ್ಲಿ ಪ್ರಾಪ್ತವಾಗುವುದು. ವಸ್ತ್ರದಾನದಿಂದ ಚಂದ್ರನು, ಅಶ್ವದಾನದಿಂದ ಅಶ್ವಿನಿದೇವತೆಗಳು, ವೃಷಭದಾನದಿಂದ ಐಶ್ವರ್ಯ ದೇವತೆಯು, ಕರೆಯುವ-ಗೋದಾನದಿಂದ ಸೂರ್ಯನು ತೃಪ್ತಿಯನ್ನು ಹೊಂದುತ್ತಾರೆ.

ವಾಹನ, ಮಂಚಗಳ ದಾನದಿಂದ ಒಳ್ಳೆ ಹೆಂಡತಿ, ಅಭಯ ದಾನದಿಂದ ಐಶ್ವರ್ಯ, ಧಾನ್ಯದಾನದಿಂದ ಸುಖ, ವೇದಾರ್ಥ ದಾನದಿಂದ ಬ್ರಹ್ಮಪ್ರೀತಿ, ಇವುಗಳನ್ನು ಸಂಪಾದಿಸುವನು.

ನೀರು, ಅನ್ನ, ಗೋವು, ಎಮ್ಮೆ, ಬಟ್ಟೆ, ಎಳ್ಳು, ಚಿನ್ನ, ತುಪ್ಪಗಳ ದಾನಕ್ಕಿಂತ ಬ್ರಹ್ಮಜ್ಞಾನ ದಾನವು ಪ್ರಧಾನವು ಬಹುಫಲವುಳ್ಳದು.

ವಿವರಗಳಿಗೆ ನೋಡಿ: ಶೇಷ ನವರತ್ನ ೨೦೦೮ ಋಗ್ವೇದ ಪುಟ. ೩೭-೩೮.
ಡಿ. ವಿ. ಜಿ. ೧೯೯೬ ಭಗವದ್ಗೀತೆ ಶ್ಲೋಕಗಳು - ೧೭ ೫-೬,೨೧,೨೨
ಡಾ. ಶಿವಾನಂದ ವಿರಕ್ತಮಠ ೧೯೭೮ ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ ಪುಟ. ೬೧
ಶೇಷನವರತ್ನ ೧೯೮೯ ನಾಲ್ಕು ವೇದಗಳು
ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೪-೨೨೮; ೨೩೦, ೩-೨೮

ಪಾಪ

ಜೈನಧರ್ಮವು ಸುಗುಣ ಮತ್ತು ದುರ್ಗುಣವೆಂದು ಬೇರೆ ಮಾಡುತ್ತದೆ. ದುರ್ಗುಣವು ಮರುಜನ್ಮಕ್ಕೆ ಕಾರಣವಾಗುತ್ತದೆ. ಕರ್ಮದೊಂದಿಗೆ ಬೆರೆತ ಜೀವವನ್ನು ಬದ್ಧ ಜೀವವೆಂದು ಕರೆಯುತ್ತಾರೆ. ಪಾಪವೆಂದರೆ ಅಪರಾಧ, ಕೇಡು, ಜೈನಧರ್ಮದ ಪ್ರಕಾರ ಪಾಪವೆನ್ನುವುದು ಅಜೀವ. ಮಧು, ಮದ್ಯಮಾಂಸ ಸೇವನೆ, ವಧಾನುರಾಗ: (ಹಿಂಸಾರತಿ) ಜಿನಾಗಮದಲ್ಲಿ ಅರುಚಿ: ಕುಟಿಲತೆಗಳು ಪಾಪಹೇತುಗಳಾಗಿವೆ. ಇವು

ಜೈನ ಧರ್ಮದ ನಂಬಿಕೆಗಳಾಗಿವೆ. ಪಾಪ ಎನ್ನುವುದರ ಮತ್ತೊಂದು ಪ್ರಯೋಗವಿದೆ: 'ಅವನು ತುಂಬಾ ಪಾಪ' ಅಂದರೆ ಅವನು ಸಾಧು ಸ್ವಭಾವದವನು.

ವಿವರಗಳಿಗೆ ನೋಡಿ: ಎಂ. ಹಿರಿಯಣ್ಣ. ೧೯೬೨ ಭಾರತೀಯ ತತ್ವಶಾಸ್ತ್ರದ ರೂಪುರೇಷೆಗಳು ಪುಟ. ೧೭೯
ಸಿ. ವೀರಣ್ಣ ೧೯೮೬ ಪ್ರಾಚೀನ ಸಾಹಿತ್ಯ ರಾಜಸತ್ತೆಯ ವೈಭವದ ಕಾಲ ಪುಟ ೬೯
ಡಾ. ಟಿ.ವಿ.ವೆಂಕಟಾಚಲಶಾಸ್ತ್ರೀ ೧೯೯೯ ಶ್ರೀವತ್ಸ ನಿಘಂಟು ಪುಟ. ೨೨೪-೨೨೫

ಪಾಪಪರಿಪಾಕ

ಪಾಪ ಪರಿಪಾಕವೆಂದರೆ ಪಾಪವು ಪರಿಪಕ್ವ ಸ್ಥಿತಿಗೆ ಬಂದಿದೆ. ಪಾಪವು ಮಿತಿಮೀರಿದಾಗ ಈ ರೀತಿಯ ಮಾತುಗಳು ಬರುತ್ತವೆ. ಪಾಪವೆನ್ನುವುದು ದುಷ್ಕರ್ಮದಿಂದ ಹುಟ್ಟುತ್ತದೆ. ಸತ್ಕರ್ಮದಿಂದ ಪುಣ್ಯವು ಲಭಿಸುತ್ತದೆ. ಇದನ್ನು ಭಾರತದ ಹೆಚ್ಚಿನ ಮತಗಳು ಒಪ್ಪಿಕೊಂಡಿವೆ. ಪಾಪದ ಕೊಡ ತುಂಬ ಬೇಕು ಎನ್ನುವುದು ಲೋಕ ರೂಢಿಯ ಮಾತು. ಪಾಪವನ್ನು ಕೊಡಕ್ಕೆ ಹೋಲಿಸುವುದು ಗಮನಾರ್ಹ. ಪುಣ್ಯವನ್ನು ಸಂಚಯನಕ್ಕೆ ಹೋಲಿಸುತ್ತಾರೆ.

ಪಾರಮಾರ್ಥಿಕ ದೃಷ್ಟಿ

ಸತ್ಯವಸ್ತುವನ್ನು ನಾವು ಅನುಭವಿಸಿಲ್ಲವಾದ್ದರಿಂದ, ಅದರ ಜಾಗದಲ್ಲಿ ವಿವಿಧ ನಾಮರೂಪಗಳಿಂದ ಕೂಡಿದ ಸುಖದುಃಖಗಳೆಂಬ ದ್ವಂದ್ವಗಳಿಂದ ಕೂಡಿದ ಪ್ರಪಂಚ ನಮಗೆ ಗೋಚರವಾಗುತ್ತದೆ. ಸತ್ಯದ ಅರಿವಾದೊಡನೆ, ನಾನತ್ತ್ವವು ನಾಶವಾಗಿ ಏಕಮೇವ ಬ್ರಹ್ಮನೇ ಇದೆಲ್ಲ, ಎಂಬ ಅರಿವಾಗುತ್ತದೆ. ಪಾರಮಾರ್ಥಿಕ ದೃಷ್ಟಿಯಿಂದ ಜಗತ್ತೇ ಇಲ್ಲವಾದರೂ, ಜಗತ್ತಿಗೆ ವ್ಯವಹಾರಿಕ ಸತ್ಯತೆಯನ್ನು ವೇದಾಂತವು ದಯಪಾಲಿಸಿದೆ.

(ಆದಿಶಂಕರ ವಿರಚಿತ ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ೧೯೮೦ ಸ್ವಾಮಿ ಚಿನ್ಮಯಾನಂದ ಪುಟ ೧೩)

ಪಾರ್ವೊಕ್ಕಲ್

ವ್ಯವಸಾಯ ಮಾಡುವವನನ್ನು ಪಾರ್ವೊಕ್ಕಲು ಎಂದು ಕರೆಯುತ್ತಾರೆ. ಬ್ರಾಹ್ಮಣರು ಬೇಸಾಯ ಮಾಡಬಾರದೆಂದು ಸ್ಮೃತಿಗಳು ಹೇಳುತ್ತವೆ. ಬ್ರಾಹ್ಮಣರು ಮೂಲತಃ ಆರಾಧನೆ ಹಾಗೂ ಪೂಜಾರಿ ವೃತ್ತಿಯನ್ನು ನಂಬಿದ್ದರೂ ಅದುವೇ ಅವರ ಜೀವನೋಪಾಯದ ಹಾದಿಯಾಗಿರಲಿಲ್ಲ. (ಪು. ೨೦೫) ಇದರ ಬಗೆಗೆ ಹೇರಳವಾದ ಉದಾಹರಣೆಗಳು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ದೊರೆಯುತ್ತವೆ.

ವಿವರಗಳಿಗೆ ನೋಡಿ: M.N. Srinivas 1987 The dominant caste and other essays

ಪಾಲೆ

ಕಿವಿಯ ಹಾಲೆ, ಹತ್ತ ಕಡಕವನ್ನು ಧರಿಸುವ ಭಾಗ ಕರ್ಣಾಟ ಕರ್ಣಪೂರನ ಕಿವಿಯ ಹಾಲೆಗಳು ಎನ್ನುವುದು ಇಲ್ಲಿಯ ತಾತ್ಪರ್ಯ. ಕಿವಿಗೆ ಚುಚ್ಚಿಸಿಕೊಳ್ಳುವ ಭಾಗವನ್ನು ಕಿವಿಯ ಹಾಲೆಗಳು ಎಂದು ಕರೆಯುತ್ತಾರೆ.

ಪಾವಿತ್ರ್ಯ

ವಸಿಷ್ಠಸ್ಮೃತಿಯಲ್ಲಿ ಹೆಣ್ಣು ಮೂರು ಜನರ ಒಳಗಾಗಿರುತ್ತಾಳೆ. ಸೋಮ (ಚಂದ್ರ), ಗಂಧರ್ವ (ಲಿಬಿಡೋ) ಮತ್ತು ಅಗ್ನಿ (ಉಷ್ಣ) ಸೋಮನು ಶುಭ್ರತೆಯನ್ನು ಕೊಡುತ್ತಾನೆ. ಗಂಧರ್ವನು ಒಳ್ಳೆಯ ರಾಗವನ್ನು ಕರುಣಿಸುತ್ತಾನೆ. (ರಾಗ–ವರ್ಣ) ಸೋಮ ಋತುವನ್ನು ಕೊಡುತ್ತಾನೆ. ಅಗ್ನಿಯು ಅಸೌಖ್ಯವನ್ನು ನಿವಾರಿಸುತ್ತಾನೆ. ಆದ್ದರಿಂದ ಹೆಣ್ಣು ಪವಿತ್ರಳಾಗಿರುತ್ತಾಳೆ.(ವಸಿಷ್ಠ ಸ್ಮೃತಿ 23–19, 9)
ಸ್ತ್ರೀಯು ಅಲಂಕೃತಳಾಗಿ ಗಂಡನಿಗೆ ಮನೋಹರಳಾಗದಿದ್ದರೆ ಮನೆಯವರಿಗೂ ತನಗೂ ಸುಖವಿಲ್ಲ. ಸಂತೋಷವಿಲ್ಲ. ಪರಪುರುಷ ಸಂಕ್ರಾತಳಾದರೆ ಪವಿತ್ರತೆಯೂ ಇಲ್ಲ ಎಂದು ಮನುವಿನ ಅಭಿಪ್ರಾಯ. ಅವನು ಶಿಲ್ಪ, ಬಡ್ಡಿಗೆ ಹಣಕೊಡುವುದು, ಸ್ವಜಾತಿಯಲ್ಲಿ ಸಂತತಿಯಿಲ್ಲದೆ ಶೂದ್ರಸ್ತ್ರೀ ಸಂತತಿ ಮಾತ್ರವಿರುವುದು, ಗೋವು–ಕುದುರೆಗಳ ಮಾರಾಟ, ಕೃಷಿ, ರಾಜಸೇವೆಗಳಿಂದ ಕುಲವು ಕೆಡುವುದು. ಮತ್ತು ಅಯಾಜ್ಯಯಾಜನ ನಾಸ್ತಿಕ್ಯಗಳೂ ಭೂಷಣಗಳಲ್ಲ. ಇವುಗಳನ್ನು ಮಾಡುತ್ತಿರುವುದರಿಂದ ಸ್ವಕರ್ಮವನ್ನು ಬಿಟ್ಟಂತಾಗುವುದೆಂಬ ದೋಷವು ಎಂದು ಹೇಳುತ್ತಾನೆ.

ವೇದಶಾಸ್ತ್ರಗಳನ್ನು ಸಮೃದ್ಧವಾಗಿ ಸಂಪಾದಿಸಿಕೊಂಡು ನಿರ್ಧನರಾಗಿದ್ದರೂ ಆ ಕುಲವು ಸತ್ಕುಲವು. ಕೀರ್ತಿಯುಳ್ಳದ್ದು ಎಂದು ಮನು ಪ್ರತಿಪಾದಿಸುತ್ತಾನೆ.

'ಪವಿತ್ರ' ಮತ್ತು 'ಅಪವಿತ್ರ'ವೆನ್ನುವುದು ಕೂಡಾ ಮನಸ್ಸಿನ ಭಾವನೆಗೆ ಸಂಬಂಧಿಸಿದ ವಿಷಯ. ಹಾಗೆಯೇ ಇದು ಸಾಮಾಜಿಕ ವರ್ತನೆಯ ಮೇಲೂ ಪ್ರಭಾವ ಬೀರುತ್ತದೆ. ಅನೇಕ ಸಂದರ್ಭಗಳಲ್ಲಿ 'ಪವಿತ್ರ' ಮತ್ತು 'ಅಪವಿತ್ರ'ವೆಂದು ಕರೆಯುವ ಸಂಗತಿಗಳಿಗೆ ಯಾವ ಆಧಾರವೂ ಇಲ್ಲ. 'ಪವಿತ್ರ' ವೆಂದರೆ ಶುದ್ಧ : ಮಡಿ : ಶುಭವೆನ್ನುವ ಕಲ್ಪನೆಯು ಇರುವ ಹಾಗೆಯೇ 'ಅಪವಿತ್ರ'ವೆಂದು ಕರೆಯುವುದಕ್ಕೆ 'ಅಶುಭ', 'ಅಮಂಗಲ', 'ಮೈಲಿಗೆ' ಯೆಂಬ ಅರ್ಥವಿದೆ. ಹಾಗೆಯೇ 'ಶೌಚ' – ಅಶೌಚ'ವೆನ್ನುವ ಪರಿಭಾಷೆಯೂ ಚಾಲ್ತಿಯಲ್ಲಿದೆ. ಮಡಿ ಮತ್ತು ಮೈಲಿಗೆಯೆನ್ನುವ ಪರಿಕಲ್ಪನೆಯನ್ನು ಹುಟ್ಟುಹಾಕಿರುವುದು ವೈದಿಕ ಧರ್ಮವೆಂದು ಹೇಳಲಾಗುತ್ತಿದೆ. ಆದರೆ ಮಡಿ ಮೈಲಿಗೆಯ ಪರಿಕಲ್ಪನೆಯು ಎಲ್ಲಾ ಜನಾಂಗಗಳಲ್ಲಿ ಇವೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ವಿವರಗಳಿಗೆ ನೋಡಿ: Louis Dumont 1999 Hono hericha
ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 3–62, 64; 66

ಪಿಂಭಾಚಾರ್ಯರ್

ತತ್ವಾರ್ಥವನ್ನು ಸೂಚಿಸಿದವರನ್ನು ಪಿಂಭಾಚಾರ್ಯರು ಎಂದು ಕರೆಯುತ್ತಾರೆ. ಪಿಂಭಾಚಾರ್ಯರು ಎಂದರೆ ಹಿಂದಿನ ಆಚಾರ್ಯರು ಎಂದರ್ಥ.

ಪಿತೃಋಣ

ಹುಟ್ಟಿಸಿದವನು. ಉಪನಯನ ಮಾಡಿದವನು, ವಿದ್ಯೆ ಕಲಿಸಿದವನು, ಭಯದ ಸಂದರ್ಭದಲ್ಲಿ ರಕ್ಷಿಸಿದವನು, ಅನ್ನಕೊಟ್ಟವನು ಹೀಗೆ ಐವರು ತಂದೆಗಳೆಂದು ತಿಳಿಯಬೇಕು. ಈ ಐವರ ಋಣ ನಮ್ಮ ಮೇಲೆ ಇರುತ್ತದೆ. ಪುತ್ರಪ್ರಾಪ್ತಿಯಿಂದ ಪುತ್ರ ಋಣವು ತೀರಿಹೋಗುತ್ತದೆ. ಶಿಷ್ಯನು ಮತ್ತೊಬ್ಬರಿಗೆ ಪಾಠ ಮಾಡುವುದರ ಮೂಲಕ ತನ್ನ ಗುರು ಋಣವನ್ನು ತೀರಿಸುತ್ತಾನೆ.

ಪುಂಸವನ

ಗರ್ಭಧಾರಣೆಯು ನಿಶ್ಚಿತವಾದ ಮೇಲೆ ತಾಯಿಗೆ ಶಾರೀರಿಕ ಮತ್ತು ಮಾನಸಿಕ ಚಿಕಿತ್ಸೆಯನ್ನು ನೀಡಲಾಗುತ್ತದೆ. ಗರ್ಭಧಾರಣೆಯಾದ ಮೂರು ಅಥವಾ ನಾಲ್ಕನೆಯ ತಿಂಗಳಲ್ಲಿ ಚಂದ್ರನು ಪುರುಷ ನಕ್ಷತ್ರದಲ್ಲಿರುವಾಗ ಅದರಲ್ಲಿಯೂ ಪುಷ್ಯ ನಕ್ಷತ್ರದಲ್ಲಿರುವ ಯಾವುದಾದರೂ ಒಂದು ದಿನ ಪುಂಸವನವನ್ನು ಆಚರಿಸಲಾಗುವುದು. ಆ ದಿನ ತಾಯಿಯು ಉಪವಾಸವಿರುತ್ತಾಳೆ. ಮತ್ತು ಆಲದ ಮರದ ಕುಡಿಯನ್ನು ಕುಟ್ಟಿ ತೆಗೆದ ರಸವನ್ನು ಆ ರಾತ್ರಿ 'ಹಿರಣ್ಯಗರ್ಭಾಹ' ಮುಂತಾದ ವೇದಮಂತ್ರಗಳನ್ನು ಉಚ್ಚರಿಸುತ್ತಾ ಆಕೆಯ ಮೂಗಿನ ಹೊಳ್ಳೆಯಲ್ಲಿ ಹಾಕುತ್ತಾರೆ. ಪುರುಷ ನಕ್ಷತ್ರದೊಂದಿಗೆ ಚಂದ್ರನ ಸಂಯೋಗವಾಗುವುದು ಗಂಡು ಸಂತಾನ ಇಲ್ಲವೆ ಪೌರುಷವುಳ್ಳ ಶಿಶುವಿನ ಜನನದ ಸೂಚಕ. ಆದ್ದರಿಂದಲೇ ಪುಂಸವನವೆಂದರೆ ಭ್ರೂಣವನ್ನು ಸ್ವಚ್ಛಗೊಳಿಸಲಾಗುತ್ತದೆ. ಸುಶ್ರುತನು ವಟಶುಂಗ, ಸಹದೇವಿ ಮತ್ತು ವಿಶ್ವದೇವ ಎಂಬ ಗಳನ್ನು ಹಾಲಿನೊಂದಿಗೆ ಪುಡಿಮಾಡಿ ಗರ್ಭಿಣಿ ಸ್ತ್ರೀಯ ಮೂಗಿನ ಬಲಹೊಳ್ಳೆಯಲ್ಲಿ ಮೂರು ನಾಲ್ಕು ತೊಟ್ಟನ್ನು ಹಾಕಿದಲ್ಲಿ ಗಂಡು ಸಂತಾನವಾಗುವುದೆಂದು ಹೇಳಿದ್ದಾನೆ.

ವಿವರಗಳಿಗೆ ನೋಡಿ: ಯುಗಯಾತ್ರೀ ಭಾರತೀಯ ಸಂಸ್ಕೃತಿ 1971 ಸಂಪುಟ. 2 ಪುಟ. 294
ಪಂಡಿತ ಎನ್.ಎಲ್. ಭಟ್ಟಾಚಾರ್ಯ 1973 ಸುಶ್ರುತ ಸಂಹಿತಾ

ಪುಣ್ಯಪಾಠಕ

ಮಂಗಳವನ್ನು ಹಾಡುವವನು ಪುಣ್ಯ ಪಾಠಕರೆಂದು ಕರೆಯುತ್ತಾರೆ.

ಪುಣ್ಯಪಾಠಕನೆಂದರೆ ಶುಭವನ್ನು ಕೋರಿ ಹಾಡುವವನು. ಪುಣ್ಯಪಾಠಕರು ಮತ್ತು ಶುಭಕ್ಕಿರುವ ಅಂತರ್ಗತ ಸಂಬಂಧ ಗಮನಾರ್ಹವಾಗಿದೆ. ಈಗಲೂ ಪುಣ್ಯಪಾಠಕರು ಶುಭವನ್ನು ಕೋರುತ್ತಾರೆ

ಪುತ್ರಕಾಮೇಷ್ಠಿಯಾಗ

ಯಾವುದೇ ಯಜ್ಞ-ಯಾಗಾದಿಗಳನ್ನು: ಪೂಜೆಗಳನ್ನು ಮಾಡುವಾಗ ಪುರೋಹಿತರು ಮೊದಲು ಸಂಕಲ್ಪ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಸಂಕಲ್ಪವೆಂದರೆ ಮನಸ್ಸಿನಲ್ಲಿ ತಮ್ಮ ಇಚ್ಚಿತ ಕಾಮನೆಗಳನ್ನು ಸೂಚಿಸುವುದು. ಯಜ್ಞ-ಯಾಗಾದಿಗಳು ಮುಗಿದ ಮೇಲೆ ಪುರೋಹಿತರು "ಸಂಕಲ್ಪ ಸಿದ್ಧಿ ರಸ್ತು" ಎಂದು ಹೇಳುತ್ತಾರೆ. ಅಂದರೆ ಸಂಕಲ್ಪವು ಈಡೇರಲಿ ಎಂಬುದು ಭಾವಾರ್ಥ. ಹಾಗೆಯೇ ಕೆಲವು ಯಾಗಗಳಿಗೆ ನಿರ್ದಿಷ್ಟ ಉದ್ದೇಶವಿರುತ್ತದೆ. ಅದರಂತೆ ಸಂಕಲ್ಪವನ್ನು ಮಾಡಿಕೊಳ್ಳುತ್ತಾರೆ. ಅಶ್ವಮೇಧಯಾಗ; ಪುತ್ರಕಾಮೇಷ್ಠಿಯಾಗ ಇದಕ್ಕೆ ಉದಾಹರಣೆಗಳಾಗಿವೆ. ಪುತ್ರ ಕಾಮೇಷ್ಠಿಯಾಗವು ಪುತ್ರಾಕಾಂಕ್ಷೆಗಾಗಿ ನಡೆಸುವ ಯಾಗವಾಗಿದೆ.

ಪುದುವಾಳ್ಕೆ

ಪುದುವಾಳ್ಕೆ ಎಂದರೆ ಹೊಸಬಾಳು, ಅಥವಾ ಸಹಬಾಳು. ಸಹಬಾಳಿನಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಮನೋಭಾವಬೇಕು. ಸಹಬಾಳಿನಲ್ಲಿ ಪರಸ್ಪರ ಹೊಂದಾಣಿಕೆಯು ಅನಿವಾರ್ಯ. ಸ್ವಯಂ ನಿಷ್ಠವಾದಿಯು ಇನ್ನೊಬ್ಬರೊಂದಿಗೆ ಸಹಜೀವನವನ್ನು ನಡೆಸಲಾರ. ಗರ್ವದ ವ್ಯಕ್ತಿಯು ಕೂಡಾ.ಗಂಡನನ್ನು ತೊರೆದು ಬೇರೊಬ್ಬನನ್ನು ಸೇರುವುದನ್ನು ಕೂಡಾ ಪುದುವಾಳು ಎಂದು ಕರೆಯುತ್ತಾರೆ.

ಪುನರ್‌ಜನ್ಮ

ಋಗ್ವೇದದಲ್ಲಿ ಹೀಗೆ ಬರುತ್ತದೆ. "ಅಗ್ನಿಯೇ! ಸಂಸ್ಕಾರಪೂರ್ವಕ ಅಗ್ನಿಯಲ್ಲಿ ಅರ್ಪಿತನಾದವನೂ, ಸ್ವಧಾಕಾರಗಳಿಂದ ಕೊಡಲ್ಪಟ್ಟ ಉದಯಕವುಳ್ಳವನೂ ಆದ ಈ ಮೃತನನ್ನು ಅವನ ಪಿತೃಗಳ ಸಮೀಪಕ್ಕೆ ಕೊಂಡು ಹೋಗು. ಇವನು ಆಯುಸ್ಸಿನಿಂದ ಯುಕ್ತನಾಗಿ ಶರೀರ ಹೊಂದಲಿ. ಎಲೈ ಜಾತವೇದನೆ, ನಿನ್ನ ಕೃಪೆಯಿಂದ ಇವನಿಗೆ ಶರೀರವು ಪ್ರಾಪ್ತವಾಗಲಿ".

ವಿವರಗಳಿಗೆ ನೋಡಿ: ಶೇಷ ನವರತ್ನ 2008 ಋಗ್ವೇದ ಪುಟ. 95.

ಪುನರ್ ವಿವಾಹ

ಪುನಭೂಣ ಎಂದರೆ ಎರಡನೆಯ ಸಲ ಮದುವೆಯಾದವಳು **ಪುನರೂಢಾ** ಎಂದೂ ಕರೆಯುತ್ತಾರೆ. ಹೆಂಗಸಿನ ಪುನರ್ವಿವಾಹವನ್ನು ಕೌಟಿಲ್ಯನು ಒಪ್ಪುತ್ತಾನೆ. ಮನು ಹೀಗೆ ಹೇಳುತ್ತಾನೆ: "ಗರ್ಭಿಣಿಯಾಗದ ಹೆಣ್ಣನ್ನು ಎಂಟು ವರ್ಷ, ಹುಟ್ಟಿ ಬೆಳೆಯುವ ಸಾಯುವ ಸಂತಾನ ಹೆರುವವಳನ್ನು ಹತ್ತು ವರ್ಷ, ಕೇವಲ ಹೆಣ್ಣು

ಹಡೆಯುವವಳನ್ನು ಹನ್ನೊಂದು ವರ್ಷಗಳವರೆಗೆ ಅನುಭವಿಸಿದ ಮೇಲೆ ಗಂಡ ಬೇರೆ ಮದುವೆಯಾಗಬಹುದು."

"ಗಂಡನು ಎರಡನೆಯ ಮದುವೆಯಾದಾಗ ಮೊದಲನೆಯವಳು ಸಿಟ್ಟುಗೊಂಡರೆ ಅವಳನ್ನು ಹಗ್ಗದಿಂದ ಬಿಗಿಯಬೇಕು ಅಥವಾ ತವರು ಮನೆಯಲ್ಲಿ ಅವಳನ್ನು ಬಿಡಬೇಕು. ಹೆಣ್ಣಿಗೆ ಲೈಂಗಿಕ ಸ್ವಾತಂತ್ರ್ಯವಿಲ್ಲ. ಆದ್ದರಿಂದ ಅವಳಿಗೆ ಪುನರ್ವಿವಾಹವಿಲ್ಲ. ಮದ್ಯಪಾನ ಮಾಡುವ ಕೆಟ್ಟ ನಡತೆಯ, ಚಂಡಿಯಾದ, ರೋಗಿಯಾದ, ಹೆಂಡತಿಯನ್ನು ಬಿಟ್ಟು ಗಂಡನು ಬೇರೆ ಮದುವೆಯಾಗಬೇಕು." ಇದು ಮನುವಿನ ನಿಲುವು. ಇದರಲ್ಲಿ ಹೆಣ್ಣಿನ ಕುರಿತಾದ ಧೋರಣೆಯು ಸ್ಪಷ್ಟವಾಗಿ ವ್ಯಕ್ತವಾಗಿದೆ.

ಹೆಣ್ಣಿಗೆ ಲೈಂಗಿಕ ಸ್ವಾತಂತ್ರ್ಯವಿಲ್ಲ. ಆದ್ದರಿಂದ ಅವಳಿಗೆ ಪುನರ್ವಿವಾಹವಿಲ್ಲ. (ಮನುಸ್ಮೃತಿ. ೫-೧೫೮, ೧೬೦, ೯-೬೫)

ಮದ್ಯಪಾನ ಮಾಡುವ ಕೆಟ್ಟ ನಡತೆಯ, ಚಂಡಿಯಾದ, ರೋಗಿಯಾದ, ಹೆಂಡತಿಯನ್ನು ಬಿಟ್ಟು ಗಂಡನು ಬೇರೆ ಮದುವೆಯಾಗಬೇಕು. (ಮನುಸ್ಮೃತಿ. ೯-೮೦) ಆದರೂ ಇಲ್ಲಿ ಸಾಮಾಜಿಕ ದೃಷ್ಟಿ ಧೋರಣೆಗಳು ವ್ಯಕ್ತವಾಗಿದೆ.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೫-೧೫೮, ೧೬೦, ೯-೬೫, ೯-೮೧
ಎಂ. ವಿ. ಕೃಷ್ಣರಾವ್ ೧೯೫೩ ಕೌಟಿಲ್ಯ

ಪುರಂಧ್ರಿ

ಅಕ್ಷತೆ, ಗರಿಕೆಯ ಚಿಗುರು, ಮೊದಲ ಹಣ್ಣು, ಕನ್ನಡಿ, ಅಕ್ಷತೆಯ ಕಾಳು ಕೈಯಲ್ಲಿ ಧರಿಸಿದ್ದ ಸ್ತ್ರೀಯರು. . . . ಬರುವ ದಾರಿಯಲ್ಲಿ ಎದುರಾದರೆ ಶುಭ. ವಿಧವೆಯರು ಕಂಡರೆ ಅಪಶಕುನವೆಂದು ಕರೆಯುತ್ತಾರೆ.

ಮಲಯದ 'ಭಿಲ್ಲ(ಬಿಲ್ಲವ) ಪುರಂಧ್ರಿಯರು. ದಿನಾಲು ತಮ್ಮ ಅಡುಗೆಗೆ ಸುಡುತ್ತಿರುವ ಚಂದನತರು ಕಾಷ್ಠಗಳ ನರುಗಂಪಿಗೆ' ಮನಸೋತು ಮಲೆನಾಡಿನಲ್ಲಿ (ಮಾಳವದಲ್ಲಿ) ಕಾಲೂರಿರಬೇಕು. ಮಲೆನಾಡು ಮಾಳವಾ ಆಯಿತು ಎಂದು ಶಂಬಾ ಹೇಳುತ್ತಾರೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 1 ಪುಟ. 17

ಪುರಿ

ಗ್ರಾಮ – ನೂರಕ್ಕೆ ಕಡಿಮೆಯಾಗದೆ ಐನೂರಕ್ಕೆ ಹೆಚ್ಚಾಗದೆ ಕೃಷಿಕ ಕುಟುಂಬಗಳು ವಾಸಮಾಡುವ ಹಳ್ಳಿ.

ನಗರ – ರಾಜಧಾನಿ

ಖೇಡ – ಎತ್ತರವಾದ ಕೋಟೆಯುಳ್ಳ ಊರು

ಖರ್ವಡ – ಚಿಕ್ಕಪ್ರಾಕಾರವಿರುವ ಊರು.

ಮಡಂಬ – ದೂರಸ್ಥಳ, ಸೀಮೆಯ ಕೊನೆಯಲ್ಲಿರುವ ಪುರ.

ಪತ್ತನ – ಬಂಡಿಗಳಲ್ಲಾಗಲಿ, ನಾವೆಗಳಲ್ಲಾಗಲಿ. ಪ್ರಯಾಣ ಮಾಡಿ ಸೇರಬಹುದಾದ ಪುರ.

ದ್ರೋಣಮುಖ– ಜಲಮಾರ್ಗ, ಸ್ಥಳಮಾರ್ಗ ಎರಡು ಇರುವ ಊರು.

ಪಾಳಿಧ್ವಜ –ಒಂದು ಬಗೆಯ ಧ್ವಜ. ವ್ಯೂಹ, ಹಾರ, ವಸ್ತ್ರ, ನವಿಲು, ಕಮಲ, ಹಂಸ, ಮೀನು, ಸಿಂಹ, ವೃಷಭ, ಆನೆ, ಚಕ್ರ – ಈ ಲಾಂಛನಗಳುಳ್ಳ ಬಾವುಟಗಳು.

ಪುರುಷಾರ್ಥ

ಪುರುಷಾರ್ಥಗಳು ನಾಲ್ಕು, ಧರ್ಮ, ಅರ್ಥ, ಕಾಮ, ಮೋಕ್ಷವು ಅಂತಿಮವಾದುದು. ಅದಕ್ಕೆ ಪೂರಕವಾಗಿ ಧರ್ಮ, ಅರ್ಥ (ಹಣ) ಕಾಮ ಇರಬೇಕೆಂದು ಧರ್ಮಶಾಸ್ತ್ರಗಳು ಹೇಳುತ್ತವೆ. ಮನುಷ್ಯನು ಪುರುಷಾರ್ಥ ಸಿದ್ಧಿಯನ್ನು ಸಾಧಿಸಬೇಕು. ಪುರುಷಾರ್ಥಗಳು ನಾಲ್ಕು 1. ಪಡೆಯದುದನ್ನು ಪಡೆಯುವುದು 2. ಪಡೆದುದನ್ನು ರಕ್ಷಿಸಿಕೊಳ್ಳುವುದು 3. ರಕ್ಷಿಸಿದುದನ್ನು ವೃದ್ಧಿಪಡಿಸುವುದು 4. ವೃದ್ಧಿಪಡಿಸಿದುದನ್ನು ಸರಿಯಾಗಿ ವಿನಿಯೋಗಿಸುವುದು.

ವಿವರಗಳಿಗೆ ನೋಡಿ: ಪಿ. ವಿ. ಕಾಣೆ 2003 ಧರ್ಮಶಾಸ್ತ್ರದ ಇತಿಹಾಸ

ಪುರೋಹಿತ

ಪುರೋಹಿತನೆಂದರೆ ಪುರಕ್ಕೆ ಹಿತವನ್ನು ಉಂಟು ಮಾಡುವವನು ಎಂದು ಮಾತ್ರ ಅರ್ಥವಲ್ಲ. ಅವನು ಮರದ ಕೆಲಸವನ್ನೋ ಗಾರೆಯ ಕೆಲಸವನ್ನೋ ಮಾಡಲಾರ ಎಂಬುದು ಕೂಡಾ ಅರ್ಥವೇ. ಬ್ರಾಹ್ಮಣರಿಗೆ ಸಾಮಾಜಿಕ ಮಾನ್ಯತೆಯನ್ನು ಇದು ಸೂಚಿಸುತ್ತದೆ.

ಪುರೋಹಿತನೆಂದರೆ ಪುರಕ್ಕೆ ಹಿತವನ್ನು ಬಯಸುವವನು ಎಂದರ್ಥ. ಅರಸೊತ್ತಿಗೆಯ ಕಾಲದಲ್ಲಿ ಪುರೋಹಿತನಿಗೆ ವಿಶೇಷಸ್ಥಾನಮಾನವಿತ್ತು. ಪುರೋಹಿತರು ರಾಜರಿಗೆ ಹಿತೋಪದೇಶ ಮತ್ತು ಧರ್ಮಸೂಕ್ಷ್ಮತೆಯನ್ನು ಹೇಳುತ್ತಿದ್ದರು. ಮಂತ್ರಿ, ಪುರೋಹಿತ; ಸೇನಾಧಿಪತಿಗಳು ರಾಜರಿಗೆ ಆಪ್ತರಾಗಿದ್ದರು.

ಮೂರು ವೇದಗಳನ್ನು ಓದಿದವರು,ದಂಡ ನೀತಿಯಲ್ಲಿ, ಶಾಂತಿಕರ್ಮದಲ್ಲಿ, ಪೌಷ್ಟಿಕ ಕರ್ಮದಲ್ಲಿ, ಅಥರ್ವಣದಲ್ಲಿ ಕುಶಲನಾದವನು ರಾಜಪುರೋಹಿತನಾಗಿರಬೇಕು. (ಮಾನಸಲ್ಲೋಸ_2–60)

ವಿವರಗಳಿಗೆ ನೋಡಿ: Romila Thapar 1975 The Past and Prejudice P. 31

ಚರ್ಮಕಾರ, ಕಾವಲಿನವನು, ಕೋಶಾಧ್ಯಕ್ಷ

ಪುಲಿಗೆರೆ

ಮಾರ್ಗಕಾರನ ಹೇಳಿಕೆ. "ರಾಜಧಾನಿಯ ಪಟವಹ ಸಾಜದ ಪುಲಿಗೆರೆಯ ತಿರುಳ ಕನ್ನಡದೊಳ್ ಇದು ಸ್ಥಳನಾಮ. ಆದರೆ ಚಾರಿತ್ರಿಕವಾಗಿ ಇದಕ್ಕೆ ಮಹತ್ವವಿದೆ. ಕಿಸುವೊಳಲ್=ಬಿಜಾಪುರ ಜಿಲ್ಲೆಯ ಈಗಿನ ಪಟ್ಟದಕಲ್ಲು; ಕೊಪಣ=ಈಗಿನ ಕೊಪ್ಪಳ, ಗದಗು ಬಳ್ಳಾರಿ ನಡುವಣ ರೈಲು ನಿಲ್ದಾಣ: ಪುಲಿಗೆರೆ=ಧಾರವಾಡ ಜಿಲ್ಲೆಯ(ಈಗಿನ) ಲಕ್ಷ್ಮೇಶ್ವರ: ಒಂಕುಂದ=ಬೆಳಗಾವಿ ಜಿಲ್ಲೆಯಲ್ಲಿನ(ಈಗಿನ) ಒಕ್ಕುಂದ. ಈ ನಾಲ್ಕು ಪಟ್ಟಣಗಳ ನಡುವಣ ನಾಡೆ ಸಂಪೂರ್ಣವಾಗಿ ಅಚ್ಚಗನ್ನಡ ಮಾತಾಡುವ ಜನರ ಪ್ರದೇಶವಾಗಿತ್ತು ಎಂದು"

ಪುಷ್ಪದರ್ಶನ.......

ರಜಸ್ವಲೆಯಾದ ಅನಂತರ ಗಂಡನನ್ನು ಸೇರುವುದರಿಂದ ಪುತ್ರಲಾಭವೆನ್ನುವುದು. ಇಲ್ಲಿಯ ಗಮನಾರ್ಹ ಅಂಶವಾಗಿದೆ. ರಜೋದರ್ಶನವು ನಿಷ್ಫಲವಾಗಬಾರದು.

ರಜೋದರ್ಶನದಿಂದ ಆರಂಭಿಸಿ ಹದಿನಾರು ದಿನ ಪರ್ಯಂತ ಋತು ಕಾಲವು. ಆದರೆ ಋತುವು (ರಜಸ್ಸು ಅತ್ಯಲ್ಪವಾಗಿ) ಪ್ರತ್ಯಕ್ಷವಾಗದೆ ಗರ್ಭಧಾರಣೆ ಆದುದು ತುಂಬ ಇದೆ. ಇದು ಪ್ರಥಮ ದ್ವಿತೀಯಾದಿ ಗರ್ಭಗಳಲ್ಲಿ ಸಾಮಾನ್ಯ.

ಎಂದು ಮನು ಹೇಳುತ್ತಾನೆ. ರಜೋದರ್ಶನ ಕಾಲದಿಂದ ಮೊದಲಿನ ನಾಲ್ಕು, ಹನ್ನೊಂದು, ಹದಿಮೂರು ಎಂದು ಆರು ರಾತ್ರಿಗಳು ಪ್ರಶಸ್ತವಲ್ಲ. ರಜಸ್ಸಿನ ಆರಂಭವು ರಾತ್ರಿಯಾದಾಗ ದಿನಕಾಲವು ಅಸ್ತವ್ಯಸ್ತವಾಗುವುದು. ದೈಹಿಕವಾಗಿ ವ್ಯತ್ಯಾಸವು ಇರುವುದರಿಂದ ಇದು ಸಾಮಾನ್ಯ ವಿಷಯವು. ಸಂತತಿಯ ಕ್ಷೇಮ ವಿಚಾರವನ್ನು ಹಿಂದೆ ಮಾಡಿ ಆಗಿದೆ.

6–8–10–12–14–16ನೆಯ ರಾತ್ರಿಗಳಲ್ಲಿ ಜನಿಸಿದ ಗರ್ಭವು ಗಂಡು, 5–7–9–15ನೆಯ ರಾತ್ರಿಗಳಲ್ಲಿ ಸ್ತ್ರೀಪ್ರಜೆಯು ಎಂದು ಸಿದ್ಧಾಂತವು ಎನ್ನುವುದು ಮನುವಿನ ಅಭಿಪ್ರಾಯ. ಅವನು ಮತ್ತೊಂದು ಕಡೆ ಹೀಗೆ ಹೇಳಿದ್ದಾನೆ: ತನ್ನ ಸ್ತ್ರೀಯು ರಜಸ್ವಲೆಯಾದಾಗ ಅವಳ ಎಲ್ಲ ತರದ ಸಂಬಂಧವನ್ನು ಬಿಡಬೇಕು.

ರಜಸ್ವಲಾ ಸಂಗವನ್ನು ಬಿಟ್ಟರೆ ಬುದ್ಧಿ, ವರ್ಚಸ್ಸು, ಬಲ ನೇತ್ರಶಕ್ತಿ, ಆಯುಸ್ಸು ಕ್ಷೀಣವಾಗದೆ ವೃದ್ಧಿಯಾಗುವುದು.

ರಜಸ್ವಲಾ ಸ್ತ್ರೀಯೊಡನೆ ಮಾತಾಡಬಾರದು. (ಆಮಂತ್ರಣ) ವರಣ ಮಾಡದೆ ಯಜ್ಞಕ್ಕೆ ಹೋಗಬಾರದು.

ಆದರೆ ಹುಡುಗಿಯು ಋತುಮತಿಯಾಗಿ ಮೂರು ವರ್ಷ ಕಾದಿದ್ದ ಮೇಲೆ ತನಗೆ ಅನುರೂಪ ಪತಿಯನ್ನು ತಾನು ವರಿಸಬಹುದು. ಆಮೇಲೆ ಹಿರಿಯರನ್ನು ನಿರೀಕ್ಷಿಸುವುದು ಬೇಡ. (ಮನುಸ್ಮೃತಿ)

ಋತು ಕಾಲದಲ್ಲಿ ರಾಣಿಗೆ ಋತ್ವಿಜರು ಇಂದ್ರಾ ಬಾರ್ಹಸ್ವತ ಚರುವನ್ನು ಕೊಡಬೇಕು. ಗರ್ಭ ಮತ್ತು ಪ್ರಸವ ಕೌಮಾರಭೃತ್ಯ ಶುಶ್ರೂಶೆಯನ್ನು ಮಾಡಬೇಕು. ಪುರೋಹಿತನು ಪುತ್ರನನ್ನು ಸಂಸ್ಕರಿಸಬೇಕು. ಪ್ರೌಢನಾದ ಮೇಲೆ ವಿದ್ಯಾವಿನಯಶೀಲವನ್ನಾಗಿಸಬೇಕು ಎಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬರುತ್ತದೆ.

ಫಲವತ್ತತೆಗೆ ಮತ್ತು ಪುಷ್ಪವತಿಯಾಗುವುದಕ್ಕೆ ಸಂಬಂಧವು ಕಲ್ಪಿತವಾಗಿದೆ. ಇದರ ತಾರ್ಕಿಕ ಜಿಜ್ಞಾಸೆಯು ಲಕ್ಷ್ಮೀಶನ ಜೈಮಿನಿ ಭಾರತದ ಸುಧನ್ವ ಪ್ರಭಾವತಿಯರ ಸಂಬಂಧದಲ್ಲಿ ಬಂದಿದೆ.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 3–46;48, 4–40;41, 4–57, 9–90

ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು 2010 ಕೌಟಿಲ್ಯನ ಅರ್ಥಶಾಸ್ತ್ರ ಪುಟ. 13

ಪೂರ್ವ ಪಕ್ಷ

ಪ್ರತಿಪಕ್ಷದವನು ಎತ್ತುವ ಆಕ್ಷೇಪಣೆಗೆ ಪೂರ್ವ ಪಕ್ಷವೆಂದು ಕರೆಯುತ್ತಾರೆ. ಇದು ನಮ್ಮ ಹಳೆಯ ನ್ಯಾಯಶಾಸ್ತ್ರದಲ್ಲಿ ಚಾಲ್ತಿಯಲ್ಲಿತ್ತು. ಪೂರ್ವ ಪಕ್ಷವನ್ನು ವಾದವೆಂದು ಪ್ರತಿಪಕ್ಷವನ್ನು ಪ್ರತಿವಾದವೆಂದು ಕರೆಯುತ್ತಿದ್ದಾರೆ. ವಾದ ಪ್ರತಿವಾದದ ಮೂಲಕ ತಲುಪುವ ನಿರ್ಧಾರವನ್ನು ನಿಲುವೆಂದು ಕರೆಯುತ್ತಿದ್ದಾರೆ. ಪೂರ್ವ ಪಕ್ಷವು ತನ್ನ ವಾದವನ್ನು ಮಂಡಿಸುತ್ತದೆ. ಅದಕ್ಕೆ ಪ್ರತಿವಾದವು ನಡೆದ ಮೇಲೆ ಒಂದು ನಿಲುವು ಸಿದ್ದವಾಗುತ್ತದೆ. ಪ್ರಾಚೀನ ನ್ಯಾಯಶಾಸ್ತ್ರವು ಈ ವಿಧಾನದ ಮೂಲಕವೇ ಶಿಕ್ಷೆಯನ್ನು ವಿಧಿಸುತ್ತದೆ ಸಿದ್ಧಾಂತವನ್ನು ಅನೇಕ ಸರ್ತಿ ಸರಿಯಾದ ನ್ಯಾಯವೆಂದು ಹೇಳುವುದು ರೂಢಿಯಲ್ಲಿದೆ.

ವಿವರಗಳಿಗೆ ನೋಡಿ; ಎನ್. ಎಸ್. ಸಂಗೊಳ್ಳಿ–೧೯೮೫–ನ್ಯಾಯಶಾಸ್ತ್ರ ಪ್ರವೇಶಿಕೆ

ಪೂರ್ವಾಂಗಗಳು

ನಿರ್ಭಯನಿಗೆ ನಿಃಶಂಕಿತ ಅಂಗವಿರುತ್ತದೆ. ಕರ್ಮಫಲದ ಇಚ್ಛೆ ಮಾಡುವುದಿಲ್ಲವೋ ಅದು ನಿಃಕಾಂಕ್ಷಿತ ಅಂಗ; ತಮ್ಮಲ್ಲಿ ತಮ್ಮ ಗುಣದ ದೊಡ್ಡಸ್ತಿಕೆಯ ಬುದ್ಧಿಯಿಂದ ತಮ್ಮನ್ನು ಶ್ರೇಷ್ಠವೆಂದು ಮನ್ನಿಸಿ ಪರದಲ್ಲಿ ಬುದ್ಧಿಯಿರುವುದು ಅದನ್ನು ವಿಚಿಕಿತ್ಸೆಯೆಂದು ಹೇಳುತ್ತಾರೆ. ಇದನ್ನು ನಿರ್ವಿಚಿಕಿತ್ಸೆ ಅಂಗವೆಂದು ಕರೆಯುತ್ತಾರೆ.

ಯಥಾರ್ಥ ದೃಷ್ಟಿಯಿದ್ದರೆ ಅಮೂಢ ಅಂಗವೆಂದು ಕರೆಯುತ್ತಾರೆ. ಆತ್ಮಶಕ್ತಿಯನ್ನು ಹೆಚ್ಚಿಸುವುದು ಉಪಗೂಹನವೆಂದು ಕರೆಯುತ್ತಾರೆ. ಧರ್ಮಸ್ಥಾಪನೆಗೊಳಿಸುವುದು ಸ್ಥಿತಿಕರಣದ ಅಂಗ. "ಯಾವ ಕಪಟ ಭಾವನೆಯೂ ಇಲ್ಲದೆ ಸದ್ಭಾವನೆಯಿಂದ ಧರ್ಮಬಂಧುವಿಗೆ ಯೋಗ್ಯತೆಗೆ ತಕ್ಕಂತೆ ಆದರ ಸತ್ಕಾರಗಳನ್ನು ಮಾಡುವುದೇ ವಾತ್ಸಲ್ಯಾಂಗ ಜಿನ ಧರ್ಮದ ಉದ್ಯೋತ ಮಾಡುವುದು ಪ್ರಭಾವನಾ ಅಂಗ. ಇವು ಎಂಟು ಪೂರ್ವಾಂಗಗಳು." ಇದು ಜೈನಧರ್ಮದ ಪರಿಭಾಷೆಯಾಗಿದೆ.

ಪೃಥ್ವಿ

ಈ ಭೂಮಿಯು ಮೊದಲು ಪೃಥುರಾಜನಿಂದ ಆಳಲ್ಪಟ್ಟಿದೆ. ಪೃಥುವಿನ ಹೆಂಡತಿಯಂದೇ ಭೂಮಿಯನ್ನು ಹೇಳುವರು. ಮುಳ್ಳುಗಿಡ ಕಡಿದವನು ಹೊಲದ ಹಕ್ಕುದಾರನು. ಬಾಣ ಹೊಡೆದವನಿಗೆ ಮೃಗದ ಹಕ್ಕು. ಇದರಂತೆ ವಿವಾಹವಾದವನು ಹೆಣ್ಣಿಗೆ ಹಕ್ಕುದಾರನು. ಅಕ್ರಮಸಂಬಂಧವು ಸ್ವತ್ವವನ್ನು ಉಂಟು ಮಾಡುವುದಿಲ್ಲ. (ಮನುಸ್ಮೃತಿ 9–44)

ಇಲ್ಲಿ ಪೃಥು ಮತ್ತು ಪೃಥೆಯೆನ್ನುವ ಪರಿಕಲ್ಪನೆಯು ಗಮನಾರ್ಹವಾಗಿದೆ.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 9–44

ಪೆಂಡವಾಸ

ಅಂತ: ಪುರಸ್ತ್ರೀಯರ ಜಾಗವನ್ನು ಪೆಂಡವಾಸವೆಂದು ಕರೆಯುತ್ತಿದ್ದರು. (ಕರ್ನಾಟಕ ಶಬ್ದಸಾರಂ ಪುಟ ೬೦)

ಪೆಣ್ಬುಯ್ಯಲ್

ಪೆಣ್ ಎಂದರೆ ಹೆಣ್ಣು, ಪುಯ್ಯಲ್ ಅಂದರೆ ಅಪಹರಣ ಕಾಲದಲ್ಲಿನ ಅಳು. ಹೆಣ್ಣನ್ನು ಅಪಹರಿಸುವಾಗ ಹೆಣ್ಣು ಅಳುವುದನ್ನು ಅವಳ ಆರ್ತಧ್ವನಿಯನ್ನು ಪೆಣ್ಬುಯ್ಯಲ್ ಸೂಚಿಸುತ್ತದೆ.

ತಮ್ಮ ಶತ್ರುಗಳನ್ನು ಸದೆಬಡಿದು ಅವರ ಮೇಲೆ ಮತ್ತೂ ಸೇಡು ತೀರಿಸಿಕೊಳ್ಳುವ ಸಲುವಾಗಿ ಗೆಲುವಿನತ್ತ ಹೊರಟವರು ಸೋತವರ ಊರುಗಳ ಮೇಲೆ ಬೀಳುತ್ತಿದ್ದರು. ಇಂತಹ ಸಮಯಗಳಲ್ಲಿ ಅಸಹಾಯಕರಾದ ಹೆಣ್ಣು ಮಕ್ಕಳು ಅಪಮಾನಕ್ಕೆ ಗುರಿಯಾಗುತ್ತಿದ್ದರು. ಅಷ್ಟೇ ಅಲ್ಲ, ಮನೆಗಳು ದರೋಡೆಗೆ ಒಳಗಾಗುತ್ತಿದ್ದವು.

ಶೇಷಶಾಸ್ತ್ರಿ ಹೀಗೆ ಹೇಳುತ್ತಾರೆ: ಹೆಂಗಸರನ್ನು ಮಾನಭಂಗ ಮಾಡಲು ಯತ್ನಿಸಿದಾಗ ಅವರು ರಕ್ಷಣೆಗಾಗಿ ಕೂಗಿಕೊಳ್ಳುತ್ತಿದ್ದರು. ಇದನ್ನು ಕೇಳಿ ಸಹಿಸಲಾರದ ಗಂಡಸರು ಶಕ್ತಿ ಮೀರಿ ತಮ್ಮ ಪರಾಕ್ರಮವನ್ನು ತೋರುತ್ತಿದ್ದರು. ಶಾಸನಗಳಲ್ಲಿ ಇಂಥ ಘಟನೆಗಳನ್ನು 'ಪೆಣ್ಬುಯ್ಯಲ್(ಅಂದರೆ 'ಹೆಂಗಸರ ಕೂಗು')' "ಪೆಣ್ದಿರುತಡೆಯುಬ್ಚುರ್" (ಹೆಣ್ಣುಮಕ್ಕಳ ಉಡೆಯನ್ನು ಬಿಚ್ಚಿ ಮಾನಭಂಗಕ್ಕೆ ಪ್ರಯತ್ನಿಸುವುದು) ಎಂಬುದಾಗಿ ಕರೆದಿದೆ. ಸುಮಾರು

ಹದಿಮೂರನೆಯ ಶತಮಾನಕ್ಕೆ ಸೇರಿದ ಅಬ್ಬಲೂರಿನ ಎರಡು ವೀರಗಲ್ಲುಗಳಲ್ಲಿ ಆಕ್ರಮಣಕಾರರು ಹೆಂಗಸರ ಮಾನಭಂಗ ಮಾಡುತ್ತಿರುವ, ಮಾಡಿರುವ ವಿವರಗಳನ್ನು ಶಿಲ್ಪದಲ್ಲಿ ಬಿಡಿಸಲಾಗಿದೆ. ಮಾನಭಂಗಕ್ಕೆ ಯತ್ನಿಸಿದ ಆಕ್ರಮಣಕಾರರನ್ನು ಹಿಮ್ಮೆಟ್ಟಿಸಿದ ವೀರನ ಹಿಂದೆ ತಮ್ಮ ಒಂದು ಕೈಲಿ ಮರ್ಮಾಂಗವನ್ನು ಮತ್ತೊಂದು ಕೈ ಮತ್ತೊಂದು ಕೈಯಲ್ಲಿ ಸ್ತನಗಳ ಮುಚ್ಚಿಕೊಂಡು ಅವಮಾನದಿಂದ ತಲೆ ತಗ್ಗಿಸಿರುವ ಸ್ತ್ರೀಯರು, ಮಗುವನ್ನು ಹೊತ್ತ ತಾಯಿ, ಅಪಮಾನಕ್ಕೆ ಒಳಗಾದರೂ ತನ್ನ ಕಂದನನ್ನು ಎತ್ತಿಕೊಂಡು ಆ ಮೂಲಕ ತನ್ನ ಮರ್ಯಾದೆ ಕಾಪಾಡಿಕೊಳ್ಳಲು ಕಂಗಾಲು ಪಡುತ್ತಿರುವ ತಾಯಿ ಈ ಅಮಾನವೀಯ ಕೃತ್ಯಗಳನ್ನು ಕಂಡು ಏನೊಂದೂ ತಿಳಿಯದೆ ಬೆಕ್ಕಸ ಬೆರಗಿನಿಂದ ನೋಡುತ್ತಾ ತನ್ನ ಒಂದು ಕೈಯಿಂದ ತನ್ನ ತಾಯಿಯ ಕೈಹಿಡಿದಿರುವ ಮಗು ಮುಂತಾದ ಶಿಲ್ಪದ ವಿವರಗಳು ಮನಸ್ಸನ್ನು ಕಲಕುತ್ತದೆ.

ಪೆಣ್ ಎಂದರೆ ಹೆಣ್ಣು, ಪುಯ್ಯಲ್ ಅಂದರೆ ಅಪಹರಣ ಕಾಲದಲ್ಲಿನ ಅಳು. ಹೆಣ್ಣನ್ನು ಅಪಹರಿಸುವಾಗ ಹೆಣ್ಣು ಅಳುವುದನ್ನು ಅವಳ ಆರ್ತಧ್ವನಿಯನ್ನು ಪೆಣ್ಬುಯ್ಯಲ್ ಸೂಚಿಸುತ್ತದೆ. ತಮ್ಮ ಶತ್ರುಗಳನ್ನು ಸದೆಬಡಿದು ಅವರ ಮೇಲೆ ಮತ್ತೂ ಸೇಡು ತೀರಿಸಿಕೊಳ್ಳುವ ಸಲುವಾಗಿ ಗೆಲುವಿನತ್ತ ಹೊರಟವರು ಸೋತವರ ಊರುಗಳ ಮೇಲೆ ಬೀಳುತ್ತಿದ್ದರು. ಇಂತಹ ಸಮಯಗಳಲ್ಲಿ ಅಸಾಯಕರಾದ ಹೆಣ್ಣು ಮಕ್ಕಳು ಅಪಮಾನಕ್ಕೆ ಗುರಿಯಾಗುತ್ತಿದ್ದರು. ಅಷ್ಟೇ ಅಲ್ಲ, ಮನೆಗಳು ದರೋಡೆಗೆ ಒಳಗಾಗುತ್ತಿದ್ದವು. ಹೆಣ್ಣಿನ ಮಾನಭಂಗದ ಸಂದರ್ಭದಲ್ಲಿ ಹೋರಾಡಿದ ವೀರರನ್ನು ಸ್ಮಾರಕಗಳು ಹೊಗಳುತ್ತವೆ. ಆದರೆ ಪೆಣ್ಬುಯ್ಯಲ್ ಅನ್ನುವುದು ಮಾತ್ರ ಅತ್ಯಂತ ಅಮಾನವೀಯ ಪದ್ಧತಿಯಾಗಿದೆ.

ಪೆಣ್ಬುಯ್ಯಲುಗಳು ಯಾವಾಗ ಆಗುತ್ತಿದ್ದುವು ಎಂಬುದನ್ನು ಹೇಳುವುದು ಕಷ್ಟ. ಯುದ್ಧಾನಂತರ ಸೋತ ಅರಸರ ಊರುಗಳನ್ನು ಗೆದ್ದವರು ಆಕ್ರಮಿಸಿದಾಗ ನಡೆದಿರಬಹುದು ಅಥವಾ ಹೆಣ್ಣುಮಕ್ಕಳು ಒಂಟಿಯಾಗಿದ್ದಾಗ ನಡೆದಿರಬಹುದು. "ಒಮ್ಮೊಮ್ಮೆ ಕೇವಲ ಸ್ತ್ರೀಯರನ್ನು ಅವಮಾನಗೊಳಿಸುವ ಉದ್ದೇಶದಿಂದಲೂ ದಾಳಿಕಾರರು ಬರುತ್ತಿದ್ದರು" ಈ ರೀತಿಯ ಹುಯ್ಯಲುಗಳ ಪ್ರಸ್ತಾಪ ವೀರಗಲ್ಲುಗಳಲ್ಲಿ ಅಪರೂಪ. ಆದರೂ ಈ ಅಂಶ "ಪೆಂಡಿರುಡೆಯುಬ್ಚುವಾಗಳು" ಎಂಬ ವಾಕ್ಯದಲ್ಲಿ ಸೂಚಿತವಾಗಿದ್ದಂತೆ ತೋರುತ್ತದೆ. ಆದರೆ ಪೆಣ್ಬುಯ್ಯಲಿನ ವಿವರಗಳು ಅವುಗಳಿಂದ ದೊರೆಯುವುದಿಲ್ಲ ಎಂದು ಶೇಷಶಾಸ್ತ್ರಿಯವರ ಅಭಿಪ್ರಾಯ.

ವಿವರಗಳಿಗೆ ನೋಡಿ: ಡಾ. ಆರ್. ಶೇಷಶಾಸ್ತ್ರಿ ೨೦೦೫ ಶಾಸನ ಪರಿಚಯ ಪುಟ. ೨೬-೨೭, ೧೫೮
ಡಾ. ಎಂ. ಚಿದಾನಂದಮೂರ್ತಿ ೨೦೦೮ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

ಪೆರ್ಗಡೆಗಳು

ಪೆರ್ಗಡೆಗಳ ಕುರಿತು ಜಿ. ಎಸ್. ದೀಕ್ಷಿತರು " ನಾಡು ಅಥವಾ ಗ್ರಾಮದ ಮುಖ್ಯಸ್ಥ ಗಾವುಂಡ, ಪೆರ್ಗಡೆ ಎಂಬವರು ನಾಡುಗಳ ಇಲ್ಲವೆ ಹಳ್ಳಿಗಳ ಇಲ್ಲವೆ ಯಾವುದೇ ವಿಭಾಗದ ಮುಖ್ಯಸ್ಥರಾಗಿದ್ದಾರೆ. ತೆರಿಗೆ ಸಂಗ್ರಹಿಸುವ ಅಧಿಕಾರ ಹೊಂದಿದ್ದ ಪೆರ್ಗಡೆಯನ್ನು 'ಸುಂಕದ ಹೆಗ್ಗಡೆ' ಎಂದು ಕರೆದಿದ್ದಾರೆ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಮಾತಿನಿಂದ ಪೆರ್ಗಡೆಗಳಲ್ಲಿ ಕೆಲವರು ಯಾವುದೇ ವಿಭಾಗದ ಆಡಳಿತಾಧಿಕಾರಿಗಳಾಗಿದ್ದು ಮತ್ತೆ ಕೆಲವರು ಸುಂಕದಧಿಕಾರಿಗಳಾಗಿದ್ದರೆಂದು ತಿಳಿಯುತ್ತದೆ. 'ಪೆರ್ಗಡೆ' ಎಂಬುದು ಸಂಸ್ಕೃತದ 'ಮಹತ್ತರ' ಎಂಬುದರ ಸಮಾನ ಪದವಾಗಿರಲೂ ಸಾಧ್ಯ' ಎಂದು ಡಾ. ಎಂ. ಚಿದಾನಂದ ಮೂರ್ತಿಯವರು ಹೇಳಿದ್ದಾರೆ.

ಪೆರ್ಗಡೆಗಳು ವಿವಿಧ ತೆರನಾದ ಸುಂಕವನ್ನು ಸಂಗ್ರಹಿಸುವ ಅಧಿಕಾರಿಗಳಾಗಿದ್ದಾರೆ. ಅವರನ್ನು ಸುಂಕವೆಗ್ಗಡೆಗಳೆಂದು ಕರೆಯುತ್ತಾರೆ. ಅವರಲ್ಲಿ ಕೆಲವರು ಒಂದೇ ಸುಂಕವನ್ನು ಸಂಗ್ರಹಿಸುವ ಅಧಿಕಾರಿಗಳಾಗಿದ್ದರೆ ಮತ್ತೆ ಕೆಲವರು ಒಂದಕ್ಕಿಂತ ಹೆಚ್ಚು ಸುಂಕವನ್ನು ಸಂಗ್ರಹಿಸುವವರಿದ್ದಾರೆ. ಸಂಗ್ರಹಿಸುವ ಸುಂಕದಲ್ಲಿ ಕೆಲವು ಭಾಗ ಇವರಿಗೆ ಸಂಬಳವಾಗಿ ಸಲ್ಲುತ್ತಿತ್ತು.

ವಿವರಗಳಿಗೆ ನೋಡಿ: Dikshit G. S. 1974 Local Self Government in Medival Karnataka P. 37

ಡಾ. ಎಂ. ಚಿದಾನಂದಮೂರ್ತಿ 2008 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ. 282.

ಪೊಲತಿ

ಕ್ರಿ.ಶ. ೧೧೨೫ರ ಶಾಸನವೊಂದರಲ್ಲಿ 'ಪೊರೆಗೆ ಚಂಡಾಲಾ ಲಯಂ', 'ನೀರು ಸಾಗರಕ್ಕೆ ಹೋದ ಓಣಿಯಿಂ ಪೊಡುವಲು ಹೊಲೆಗೇರಿಯಂ ಪೊಡು ಮುಖವಾಗಿ' ಎನ್ನುವ ಮಾಹಿತಿಯಿದೆ. ಅದೇ ರೀತಿ ೧೦ನೆಯ ಶತಮಾನದ ಶಾಸನವೊಂದರಲ್ಲಿ, 'ಕಾಸರಗೋಡು ತಾಲೂಕಿನ ತಳಗೇರಿ ಎಂಬ ಊರ ಹೊರಗಡೆ ತೊರೆಯ ದಡದ ಹತ್ತಿರ ಪುತ್ತೂರಿನ ಹೊಲೆಯರ ಕೇರಿ ಇತ್ತು' ಎನ್ನುವ ವಿವರ ಸಿಗುತ್ತದೆ. ಶ್ರವಣ ಬೆಳಗೊಳ ಮತ್ತು ಜಿನನಾಥಪುರ ಪಟ್ಟಣಗಳ ಹೊರವಲಯಗಳಲ್ಲಿ ಕೆಳಜಾತಿಯವರು ವಾಸಿಸುತ್ತಿದ್ದರು ಎನ್ನುವ ವಿವರ ಶಾಸನವೊಂದರಲ್ಲಿದೆ. ಇವರ ವೃತ್ತಿಗಳನ್ನು ಮೇಲ್‌ವರ್ಗಗಳೇ ನಿರ್ಧರಿಸುತ್ತಿದ್ದವು. ಊರ ಕಸವನ್ನು ಗುಡಿಸುವುದು, ಸತ್ತ ದನವನ್ನು ಹೊತ್ತು ಸಾಗಿಸುವುದು, ಸ್ಮಶಾನದಲ್ಲಿ ಗುಂಡಿ ತೋಡುವುದು, ಮರಣ ದಂಡನೆಗೆ ಒಳಗಾದವರನ್ನು ಗಲ್ಲಿಗೇರಿಸುವುದು ಮುಂತಾದವು ಅಸ್ಪೃಶ್ಯರು ಮಾಡಬೇಕಾದ ಕೆಲಸಗಳಾಗಿದ್ದವು. ಇಂಥ ಕೆಲಸಗಳನ್ನು ಮಾಡಿಸುವುದಕ್ಕಾಗಿ ಮಾನವರಲ್ಲಿಯೇ

ಅಸ್ಪೃಶ್ಯರೆನ್ನುವ ವರ್ಗವೊಂದನ್ನು ಹುಟ್ಟು ಹಾಕಿ, ಅವರನ್ನು ತೀರ ನಿಕೃಷ್ಟವಾಗಿ ನೋಡಿಕೊಳ್ಳಲಾಯಿತು.

(ಮೋಹನಕೃಷ್ಣ ರೈ, ೨೦೦೪. ಪು. ೬೬) ಅಸ್ಪೃಶ್ಯತೆಯು ಜಾತಿ ಶ್ರೇಣೀಕರಣದಲ್ಲಿ .ಅತ್ಯಂತ ಕೆಳ ತುದಿಯಲ್ಲಿರುತ್ತದೆ. ಸ್ಪರ್ಶ ಎಂದರೆ ಮುಟ್ಟಬಹುದಾದವನು. ಅಸ್ಪೃಶ್ಯವೆಂದರೆ ಮುಟ್ಟಬಾರದವನು. ಇದರಲ್ಲಿ ಮಡಿ, ಮೈಲಿಗೆ, ಪವಿತ್ರ–ಅಪವಿತ್ರ ಎಂಬ ಧೋರಣೆಯಿದೆ.

ವಿವರಗಳಿಗೆ ನೋಡಿ: ಮೋಹನಕೃಷ್ಣ ರೈ 2009 ಚರಿತ್ರೆ ಕಥನ ಪುಟ. 66

ಪೊಸದೇಸೆ

ಪೊಸ ದೇಸೆಯ ನುಡಿಗಳು ಎಂದರೆ ದೇಶಿಯ ನುಡಿಗಟ್ಟುಗಳಿಂದ. ದೇಸೆ ಎಂಬುದು ವಿಶೇಷ ಪದವಾಗಿದೆ. ತುಳುವಿನಳಿ ದೇಸೆ ಪಾಡುನೆ ಎಂಬ ಪ್ರಯೋಗವಿದೆ. ತುಳುವಿನಲ್ಲಿ ದೇಸೆ ಪಾಡುನೆ ಎಂದರೆ ಉಡುಗೆರೆ ಕೊಡುವುದು ಎಂದರ್ಥ.

ವಿವರಗಳಿಗೆ ನೋಡಿ–ದೇಸಿ

ಪೊಬ್ತು

ಪೊಬ್ತು ಎಂಬುದು ಹೊತ್ತು ಎಂದಾಗಿದೆ. ಹೊತ್ತಿನಂತೆ ಎಂದರೆ ಮುಂಜಾವು ಎಂಬ ಅರ್ಥವೂ ಇದೆ. ಒತ್ತಾರೆ, ವತಾರೆ, ವತ್ತರೆ, ಹೊತರೆ, ಹೊತ್ತಾರೆ ಎಂಬ ಗ್ರಾಮ್ಯ ಪದಗಳು ಚಾಲ್ತಿಯಲ್ಲಿವೆ.

ಹೊತ್ತು ಎಂಬುದಕ್ಕೆ ಸೂರ್ಯ ಎಂಬ ಅರ್ಥವೂ ಇದೆ. ಹೊತ್ತು ಮುಳುಗಿದ ಮೇಲೆ ಅಂದರೆ ಸೂರ್ಯಾಸ್ತವಾದ ಮೇಲೆ ಎಂದರ್ಥ. ಮಧ್ಯಾಹ್ನದ ಹೊತ್ತು ಹೊಳ್ಳುವುದು ತಡವಲ್ಲ' – ಜನಪದ ಗೀತೆಯಿಂದ ಆಯ್ದುಕೊಂಡ ಸಾಲು ಇದು. ಇಲ್ಲಿ ಮಧ್ಯಾಹ್ನದ ಸೂರ್ಯ ಮುಳುಗುವುದಕ್ಕೆ ಹೊರಳುವುದು ಎನ್ನಲಾಗಿದೆ.

ವಿವರಗಳಿಗೆ ನೋಡಿ: Arjun Appadorai ? Time narration and space (The Local culture)

ಪ್ರಜಾಪ್ರತಿನಿಧಿ ಸಭೆ

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಏಕೀಕರಣಕ್ಕೆ ಇದು ಸಕಾಲವಲ್ಲ ಎಂಬ ನಿರ್ಣಯ ಅಂಗೀಕೃತವಾಯಿತು (ನವೆಂಬರ್ 1949) ಎಂಬ ಕವಿಗೆ ಪ್ರಜೆಗಳಿಂದ ಆಯ್ಕೆಯಾದ ಪ್ರತಿನಿಧಿಗಳೆಂದು ಕರೆಯುತ್ತಾರೆ. ಕುತೂಹಲದಾಯಕ ಸಂಗತಿಯಂದರೆ ಮೈಸೂರು ಪ್ರಾಂತ್ಯದಲ್ಲಿಯೇ ಪ್ರಜಾಪ್ರತಿನಿಧಿ ಸರ್ಕಾರವು ಜಾರಿಗೆ ಬಂತು.

ಪ್ರಜಾ ಸರ್ಕಾರ

ಒಂದು ಸಮಾಜದಲ್ಲಿ ಒಬ್ಬ ವ್ಯಕ್ತಿಯು ಯಾವ ರೀತಿಯಲ್ಲಿ ನಡೆಯಬೇಕು ಎಂಬುದನ್ನು ಪ್ರಭುತ್ವವು ವಿವರಿಸುತ್ತದೆ. ಅದಕ್ಕೆ ನಿರ್ದಿಷ್ಟ ನಿಯಮಾವಳಿಗಳಿರುತ್ತವೆ,

ಕರ್ತವ್ಯಗಳು, ಹಕ್ಕುಗಳು, ಸ್ವಾತಂತ್ರ್ಯ, ಸಾರ್ವಜನಿಕ ಹಿತಾಸಕ್ತಿಗಳು ಸೇರಿಕೊಂಡು ನಾಗರಿಕ ಸಮಾಜ ಉಂಟಾಗುತ್ತದೆ. ಯಾರು ಈ ರೀತಿಯ ಸಮಾಜಕ್ಕೆ ಸದಸ್ಯರಾಗಿರುತ್ತಾರೋ ಅವರನ್ನು ಪ್ರಜೆಗಳೆಂದು ಕರೆಯುತ್ತಾರೆ. ಅವರನ್ನು ಪ್ರತಿನಿಧಿಸುವುದು ಪ್ರಜಾಪ್ರತಿನಿಧಿ ಸಭೆ ಪ್ರಜೆಗಳು ಆಯ್ಕೆಮಾಡಿಕೊಂಡಿರುವ ಸರಕಾರವನ್ನು ಪ್ರಜಾಪ್ರತಿನಿಧಿ ಸರಕಾರವೆಂದು ಕರೆಯುತ್ತಾರೆ. ಅದು ಈಗ ಪ್ರಜಾಪ್ರಭುತ್ವವೆಂದು ಎಂಬ ಹೆಸರನ್ನು ಪಡೆದುಕೊಂಡಿದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಸ್ವಾತಂತ್ರ್ಯವಿರುತ್ತದೆ. ಅದು ನಿರಂಕುಶ ಪ್ರಭುತ್ವವಲ್ಲ.

ಪ್ರಜಾಸ್ವಾತಂತ್ರ್ಯವಾದ

ಆಧುನಿಕ ಮಾನವನ ನವೀನ ದೃಷ್ಟಿಯ ರಚನೆಯಲ್ಲಿ ಉಜ್ಞಾನದ ಪ್ರಭಾವ ಬಹು ಮುಖ್ಯವಾದ ಭಾಗ ವಹಿಸಿಕೊಂಡಿದೆ. ಭೌತಶಾಸ್ತ್ರ, ಖಗೋಲಶಾಸ್ತ್ರ, ಜೀವಶಾಸ್ತ್ರ, ಮನಃಶಾಸ್ತ್ರ ಮೊದಲಾದ ಶಾಸ್ತ್ರಗಳೂ ; ಪರಿಣಾಮವಾದ ಅಥವಾ ವಿಕಾಸವಾದ ಪ್ರಜಾಸ್ವಾತಂತ್ರ್ಯವಾದ ಮತ್ತು ಸಮತಾವಾದ ಮೊದಲಾದ ವಾದಗಳೂ ; ವೈಜ್ಞಾನಿಕ ಸಂಶೋಧನೆಯ ಉಪಲಭ್ಯಗಳಾಗಿ ಮೊರೆಕೊಂಡಿರುವ ಸೌಕರ್ಯಗಳೂ ಮನುಷ್ಯನ ದೃಷ್ಟಿಯನ್ನು ಎಷ್ಟರ ಮಟ್ಟಿಗೆ ಬದಲಾಯಿಸಿವೆ ಎಂದರೆ, ಒಂದು ಶತಮಾನದ ಹಿಂದಿನ ವ್ಯಕ್ತಿಗಳಲ್ಲಿ ಯಾರಾದರೂ ಈಗ ಭೂಮಿಗೆ ಇಳಿದುಬಂದರೆ, ಅದನ್ನೂ ಅದರಲ್ಲಿ ವಾಸಿಸುವವರನ್ನೂ ಗುರುತಿಸಲಾರದೆ ನಿಬ್ಬೆರಗಾರಬಹುದೆಂದು ತೋರುತ್ತದೆ (ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ).

ಭಾರತದಲ್ಲಿ ಜಾರಿಗೆ ಬಂದ ಪ್ರಜಾಪ್ರಭುತ್ವವು ಒಂದು ದೃಷ್ಟಿಯಿಂದ ಅನುಕರಣೆಯಿಂದ ಜನ್ಯವಾಗಿದೆ ಎಂದು ರಾಷ್ಟ್ರೀಯತೆಯು ಅನೇಕ ವಾದ ವಿವಾದಗಳಿಂದ ಹುಟ್ಟಿಕೊಂಡಿದೆ ಎಂದು ಪಾರ್ಥೋ ಚಟರ್ಜಿಯವರು ವಿವರಿಸುತ್ತಾರೆ (ನೋಡಿ : ನ್ಯಾಷನಲಿಸ್ಟ್ ಥಾಟ್ ಅಂಡ್ ಇಟ್ಸ್ ಫ್ರಾಗ್‌ಮೆಂಟ್).

ಪ್ರತಿಕಮಣ

ದ್ರವ್ಯತತ್ವವೆಂದರೆ ದ್ರವ್ಯಕ್ಕಾಗಿ ಮಾಡುವ ತಪಸ್ಸು. ನಿರ್ವ್ಯಾಕುಳ ತಪವೆಂದರೆ ಭಾವರಹಿತ ತಪಸ್ಸು. ಪ್ರತಿಕ್ರಮಣವೆಂದರೆ ತಂದೊಪ್ಪಿಸುವುದು. ನಿಮಿತ್ತವೆಂದರೆ ಶಕುನ.

ಪ್ರತಿಕೂಲ ದೈವ

ವಿಧಿವಾದಿಗಳು ನಂಬುವುದು ದೈವವನ್ನು. ದೈವದ ಮೇಲೆ ಅವರು ತಮ್ಮ ವಿಶ್ವಾಸವನ್ನು ವ್ಯಕ್ತ ಪಡಿಸುತ್ತಾನೆ. ದೈವವು ಮುನಿದರೆ ಹಾನಿಯಾಗುತ್ತದೆ. ಅದರಿಂದ ಜೀವನವು ನಾಶವಾಗುತ್ತದೆ ಎಂಬುದು ವಿಧಿವಾದಿಗಳ ನಂಬಿಕೆ. ಪ್ರತಿಕೂಲ ದೈವ ಎಂಬ ಪರಿಕಲ್ಪನೆಯನ್ನು ಬೇರೆ ಅರ್ಥಗಳಲ್ಲಿಯೂ ಬಳಸುವುದು ಇದೆ. ದೈವವು ಮುನಿದರೆ ದುರಾದೃಷ್ಟ. ದೈವದ ವಿರೋಧವು ಹಾನಿಯನ್ನುಂಟು ಮಾಡುತ್ತದೆಯೆಂದು ಇಲ್ಲಿಯ ಗ್ರಹಿಕೆಯಾಗಿದೆ.

ಪ್ರತಿಕೃತಿ

ಕಲೆಗೆ ಅತ್ಯಂತ ಅವಶ್ಯವಾದ ಮೂರು ಅಂಶಗಳನ್ನು ಕುರಿತು ಇಲ್ಲಿ ಗಮನಿಸಬೇಕು. ಪ್ರತಿಕೃತಿ: ಇದು ಕಲೆಯು ಹೊರಗಣ ಜಗತ್ತಿನ ಬಿಂಬವೆಂಬ ನಿಲುವನ್ನು ಪ್ರತಿಪಾದಿಸುತ್ತದೆ. ಇದನ್ನು ಹೆಚ್ಚು ವಿಸ್ತರಿಸಿದರೆ ಕಲೆ ವಾಸ್ತವತಾವಾದ ನಿಲುವಿನ ಹತ್ತಿರ ಬರುತ್ತದೆ. ಆದರೆ ಜಗತ್ತಿನ ಯಥಾಪ್ರತಿಯಲ್ಲ.

೧. ಪ್ರತಿಮಾ ವಿಧಾನ: ಒಂದು ವಸ್ತುವಿನ ಬದಲಿಗೆ ಮತ್ತೊಂದು ವಸ್ತುವನ್ನು ತಂದು ಅದರ ಮೂಲಕ ಕಲಾತ್ಮಕತೆಯನ್ನು ರೂಪಿಸುವುದು. ಇದು ಪ್ರತಿಕೃತಿಗಿಂತ ಭಿನ್ನವಾದುದು. ಅದರಲ್ಲಿ ಹೇಳಲಾಗದುದನ್ನು ಪ್ರತಿಮಾವಿಧಾನದಲ್ಲಿ ಹೇಳಬಹುದು.

೨. ಉಪಮೆ: ಉಪಮೆಯು ಕಾವ್ಯದ ಬಹುಮುಖ್ಯ ಭಾಗವೆಂದು ಪರಿಗಣಿತವಾಗಿದೆ.

ವಿವರಗಳಿಗೆ ನೋಡಿ: ಟಿ.ಪಿ.ಅಶೋಕ ೧೯೯೯ ವಾಸ್ತವತಾವಾದ

ಪ್ರತಿಪತ್ತಿ

ಪ್ರತಿಪತ್ತಿಯೆಂದರೆ ಕಾಣಿಕೆ. ರಾಜರಿಗೆ ಸಲ್ಲಿಸುವುದನ್ನು ಕಾಣಿಕೆ ಪ್ರತಿಪತ್ತಿಯೆಂದು ಕರೆಯುತ್ತಾರೆ. ಅದು ದಾನವಲ್ಲವೆನ್ನುವುದು ಇಲ್ಲಿ ಗಮನಾರ್ಹವಾಗಿದೆ.

ಪ್ರತಿಬೋಧೆ

ಪ್ರತಿಬೋಧೆಯೆಂದರೆ ದುರ್ಮಾಗಿಗಳಾದವರಿಗೆ, ನಡತೆಬಾಹಿರರಾದವರಿಗೆ ಪ್ರತಿಯಾಗಿ ಬೋಧಿಸುವುದು, ಎಚ್ಚರಿಸುವುದು, ತನ್ಮೂಲಕ ಅವರನ್ನು ಸರಿದಾರಿಗೆ ತರುವುದು ಎಂದರ್ಥ.

ಪ್ರತಿಹತ

ತಳ್ವೋಯ್, ತಡಂಬರೆ, ಪೋರ್ಕುಳಿ, ತೊಡರ್ದುದು, ಮಾರ್ಕೊಂಡುದು, ಅಂಡಲೆದುದು, ಪಳಂಚಿದುದು, ಅಲಗಣಸಾದುದು, ಮಿಕ್ಕುದು, ಅಳ್ಕಿಸುದುದು, ಓರಂಡಲಂತೆಗೆದುದು, ಜಕ್ಕುಲಿಸುದುದು, ಎಡೆಗೆಡಿಸು, ಅಳ್ಕಿಸು, ಮೀರು, ತೊಡರು, ಉರ್ಕೇಕೆ, ಮಿಗು, ತಡಂಬೊಯ್, ೨೫ ಪ್ರತಿಹತಕ್ಕೆ ಹೆಸರು ಎಂದು ಕರ್ನಾಟಕ ಶಬ್ದಸಾರಂನಲ್ಲಿ ಹೇಳಲಾಗಿದೆ.

(ಕರ್ನಾಟಕ ಶಬ್ದಸಾರಂ ಪುಟ ೫೮)

ಪ್ರತಿಹಾರ

ಪ್ರತಿಹಾರ ಸಂಸ್ಕೃತದ ಪದ. ಸಂಸ್ಕೃತದಲ್ಲಿ ಪ್ರತಿಹಾರವೆಂದರೆ ಬಾಗಿಲು ಎಂಬ ಅರ್ಥವೂ ಇದೆ. ಸಂಸ್ಕೃತದ ನಾಟಕಗಳಲ್ಲಿ ಪ್ರತಿಹಾರ ಚಾಲ್ತಿಯಲ್ಲಿತ್ತು.

ದ್ವಾರಪಾಲಕನು ಬಂದವರ ವಿವರಗಳನ್ನು ರಾಜನಿಗೆ ಒಪ್ಪಿಸುತ್ತಾನೆ. ಪಸಾಯಿತನಿಗೆ ಪಡವಳನೆಂದು, ಪ್ರತಿಹಾರನಿಗೆ ಕಟ್ಟಿಗೆ ಕಾರನೆಂದು ಕರೆಯಲಾಗಿರುವುದು ಗಮನಾರ್ಹವಾಗಿದೆ.

ವಿವರಗಳಿಗೆ ನೋಡಿ: ಚತುರಾಸ್ಯ ನಿಘಂಟು–೧೦೮

ಪ್ರದೇಶ

ಪ್ರದೇಶ ಮತ್ತು ಸಂಸ್ಕೃತಿಗಳಿಗೆ ಇರುವ ಸಂಬಂಧಗಳು ಅತ್ಯಂತ ನಿಕಟವಾಗಿದ್ದು ಇವು ರಾಷ್ಟ್ರೀಯತೆಯ ಮಹಾನ್ ನಿರೂಪಣೆಯನ್ನು ಒಳಗೊಂಡಿಲ್ಲ. ಪ್ರಾದೇಶಿಕತೆಯ ಬಗೆಗೆ ಅತ್ಯಂತ ಹೆಚ್ಚು ಚರ್ಚೆ ಬಂದಿರುವುದು ನವೋದಯ ಕಾಲಘಟ್ಟದಲ್ಲಿ. ಒಂದು ಪ್ರದೇಶ ಅದರದ್ದೇ ಆದ ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿರುತ್ತದೆ. ವಸಾಹತುಶಾಹಿಕಾಲದ ಸಂದರ್ಭದಲ್ಲಿ ಪ್ರದೇಶ ಮತ್ತು ಸಂಸ್ಕೃತಿ ನಡುವೆ ಏಕತೆಯ ಪರಿಕಲ್ಪನೆಯಿದೆ. ವಸಾಹತೋತ್ತರ ಸಂದರ್ಭದ ಬಹುತೇಕ ವಿಮರ್ಶಕರು ಪ್ರಾದೇಶಿಕ ಸಂಸ್ಕೃತಿಯ ಬಗ್ಗೆ ಮಾತನಾಡುವುದು ವಸಾಹತುವಾದದ ವಿರುದ್ಧ ಪರಿಕಲ್ಪನೆಯೆಂದು ಪ್ರತಿಪಾದಿಸಿದ್ದಾರೆ.

ವಿವರಗಳಿಗೆ ನೋಡಿ: ರಾಜೇಂದ್ರ ಚೆನ್ನಿ ೧೯೯೯ ದೇಶೀವಾದ

ಪ್ರಭುತ್ವ

ಕೌಟುಂಬಿಕ ನೆಲೆಯಲ್ಲಿ ಅಥವಾ ಒಂದು ಊರ ಮಿತಿಯಲ್ಲಿ ಅಧಿಕಾರ ಚಲಾಯಿಸುವ ಮತ್ತು ಜನಸಮುದಾಯವನ್ನು ನಿಯಂತ್ರಿಸುವ ಪ್ರಕ್ರಿಯೆಯನ್ನು ಯಜಮಾನಿಕೆ ಎಂದು ಗುರುತಿಸಿದರೆ ಅದೇ ಪ್ರಕ್ರಿಯೆಯನ್ನು ರಾಜ್ಯ ಅಥವಾ ರಾಷ್ಟ್ರಮಟ್ಟದಲ್ಲಿ ಪ್ರಭುತ್ವವೆಂದು ಗುರುತಿಸಬಹುದಾಗಿದೆ. ವಸಾಹತುಶಾಹಿ ಕಾಲಘಟ್ಟದಲ್ಲಿ ಬ್ರಿಟಿಷ್ ಪ್ರಭುತ್ವವು ಹೊಸ ಹೊಸ ಮಾದರಿಗಳಲ್ಲಿ ತನ್ನ ಯಾಜಮಾನ್ಯವನ್ನು ಬಲಗೊಳಿಸುವ ಪ್ರಯತ್ನ ಮಾಡಿತು. ತನ್ನ ಅಧಿಕಾರವನ್ನು ಭದ್ರಗೊಳಿಸುವ ಸಲುವಾಗಿ ಆಡಳಿತಶಾಹಿಯನ್ನು ಸಜ್ಜುಗೊಳಿಸಲು ಜಾರಿಗೊಳಿಸಿದ ಇಂಗ್ಲಿಷ್ ಶಿಕ್ಷಣ ವ್ಯವಸ್ಥೆ ಇಲ್ಲಿನ ಅಧಿಕಾರ ಕೇಂದ್ರೀಕರಣಕ್ಕೆ ಕೀಲಿಕೈಯಾಯಿತು. ಭಾರತೀಯ ದೇಸಿ ಭಾಷೆಗಳ ಎದುರು ನಿಂತ ಇಂಗ್ಲಿಷ್ ಜನಜೀವನದ ಎಲ್ಲಾ ಮೂಲಗಳನ್ನು ಆಕ್ರಮಿಸಿಕೊಂಡಿತು. ಅಧಿಕಾರ ಮತ್ತು ಜ್ಞಾನವನ್ನು, ಚಿರಪ್ರಾಧಾನ್ಯತೆಯನ್ನು ಪಡೆದುಕೊಳ್ಳುವ ಸಲುವಾಗಿ ಸ್ವಹಿತಾಸಕ್ತಿಗೆ ಬಳಸಿದ ವಸಾಹತುಶಾಹಿ ಪ್ರಭುತ್ವವು ತನ್ನ ಶ್ರೇಷ್ಠತೆ ಮತ್ತು ನಿಯಂತ್ರಣವನ್ನು ಭದ್ರಗೊಳಿಸಿಕೊಂಡಿತು. ಅಧಿಕಾರವನ್ನು ತಮ್ಮ ತಾಳಕ್ಕೆ ತಕ್ಕಂತೆ ಆಡಿಸುವ ಕೆಲವು ಏಜನ್ಸಿಗಳು ಜ್ಞಾನವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತವೆ ಮತ್ತು ಈ ಏಜನ್ಸಿಗಳೇ ತಮ್ಮ ಕೈಗೊಂಬೆಯಾದ ಸ್ಥಾಪಿತ ಭಾಷಿಕ ಸಂರಚನೆಗಳ ಮೂಲಕ ಸಮಾಜದ ಮೇಲೆ ಹೇರಿಕೆಗಳನ್ನು ಒಡ್ಡುತ್ತವೆ (ಎಡ್ವರ್ಡ್ ಸೈದ್, ಮೂಲ :

ಶೆಲ್ಲಿವಾಲಿಯ, ಅನು : ರಾಮಲಿಂಗಪ್ಪ, ಟಿ. ಬೇಗೂರು, ಪು. 22, 2003) ಎಂದು ಪುಕೊ ಹೇಳುವುದು ಈ ಕಾರಣವಾಗಿಯೆ. ಈ ಏಜನ್ಸಿಗಳನ್ನು ವಸಾಹತುಶಾಹಿ ಆಡಳಿತ ವ್ಯವಸ್ಥಿತವಾಗಿ ರೂಪಿಸಿಕೊಂಡಿತು. ಆ ಮೂಲಕವಾಗಿ ತಮ್ಮ ಯಜಮಾನಿಕೆಯನ್ನು ಶಾಶ್ವತಗೊಳಿಸಿಕೊಳ್ಳಲು ಮುಂದಾಯಿತು. ಅವರು ತಮ್ಮೊಂದಿಗೆ ತಂದ ಪೋಲಿಸ್ ವ್ಯವಸ್ಥೆ, ಕಾನೂನು, ಸಂವಿಧಾನ ಇತ್ಯಾದಿಗಳು ಕೂಡ ಭಾರತೀಯರನ್ನು ಅಧೀನದಲ್ಲಿಯೇ ಇರಿಸಿಕೊಂಡು ಹೋಗಲು ಸಹಾಯಕವಾದವು.

ಎಲ್ಲಾ ಬಗೆಯ ಪ್ರಭುತ್ವಕ್ಕೂ ಅದರದೇ ಆದ ಸ್ವಹಿತಾಸಕ್ತಿಗಳಿರುತ್ತವೆ. ಆಳಿದ ದೇಶದ ಪ್ರಕ್ರಿಯೆಗಳು ಆಳಿಸಿಕೊಂಡ ದೇಶದ ಮೇಲೆ ಅನೇಕ ಪರಿಣಾಮಗಳನ್ನು ಬೀರುತ್ತಿರುತ್ತವೆ. ಈ ಪರಿಣಾಮಗಳು ಆಳಿಸಿಕೊಳ್ಳುವ ದೇಶದ ದೀನತೆಯನ್ನು ಪೋಷಿಸುತ್ತಲೇ ಇರುತ್ತವೆ. ವಸಾಹತುಶಾಹಿ ಆಡಳಿತ ಒಂದೆಡೆ ತನ್ನ ಕಾನೂನು, ಪೋಲಿಸ್ ವ್ಯವಸ್ಥೆ, ಶಿಕ್ಷಣ, ಅಧಿಕಾರದ ಮೂಲಕ ತನ್ನ ಯಜಮಾನಿಕೆಯನ್ನು ವಿಸ್ತರಿಸಿಕೊಳ್ಳುತ್ತಲೇ ಹೋಗುತ್ತದೆ. ಹಾಗೆಯೇ ಇನ್ನೊಂದೆಡೆ ತನ್ನ ವಸಾಹತು ರಾಷ್ಟ್ರಗಳ ಜನಸಮುದಾಯದಲ್ಲಿ ಅಭದ್ರತೆ ಮತ್ತು ಕೀಳರಿಮೆಯನ್ನು ತುಂಬಿ ತನ್ನ ಅಧಿಕಾರವನ್ನು ಶಾಶ್ವತಮಾಡಿಕೊಳ್ಳಲು ಮುಂದಾಗುತ್ತದೆ. ಅಭಿವೃದ್ಧಿ ಮತ್ತು ಸುಧಾರಣೆಯ ಹೆಸರಲ್ಲಿ ದೇಸೀ ನಂಬಿಕೆ, ಸಂಸ್ಕೃತಿ, ಭಾಷೆ, ಆಚರಣೆ, ಸಂಪ್ರದಾಯ, ಕಾನೂನು, ಇತ್ಯಾದಿಗಳೆಲ್ಲವನ್ನೂ ಅವಜ್ಞೆ ಮಾಡುತ್ತಾ ಬರುತ್ತದೆ. ಅಧಿಕಾರಕ್ಕಾಗಿ ತನ್ನ ಏಕಸಂಸ್ಕೃತಿಯನ್ನು ಹೇರುತ್ತದೆ. ಈ ಬಗೆಯ ಯಜಮಾನಿಕೆಯಲ್ಲಿ ಆಜ್ಞೆಗಳನ್ನು ಮಾತ್ರ ಮಾಡಿ ಅದನ್ನು ಪಾಲಿಸಲು ಅಧಿಕಾರವರ್ಗವನ್ನು ಬಳಸಲಾಗುತ್ತದೆ. ತನ್ನ ಏಕ ಸಾರ್ವಭೌಮತ್ವವನ್ನು ಪ್ರತಿಭಟಿಸಿದರೆ, ವಿರೋಧಿಸಿದರೆ, ಒಪ್ಪದಿದ್ದರೆ ಅಂಥ ದನಿಗಳನ್ನು ಎದುರಿಸಿ ಮಟ್ಟ ಹಾಕಲು ಪೋಲಿಸ್, ಜೈಲು, ನೇಣು, ದಂಡ ಇತ್ಯಾದಿಗಳನ್ನು ಪ್ರಭುತ್ವ ಬಳಸುತ್ತದೆ. ಈ ಬಗೆಯ ಪ್ರಭುತ್ವವೇ ಇಂದಿಗೂ ಮುಂದುವರಿಯುತ್ತಿರುವದು. ಇದರ ಅನೇಕ ರೂಪಗಳನ್ನು ಇತಿಹಾಸ ಆವಾಗಿನಿಂದಲೂ ದಾಖಲಿಸಿದೆ.

ಬಲ ಪ್ರಯೋಗದ ಮೂಲಕ ಆಳ್ವಿಕೆ ನಡೆಸಿದಂತೆ ಜ್ಞಾನದ ಹೊಸ ಸಂರಚನೆಗಳ ಮೂಲಕವೂ ಯಜಮಾನಿಕೆಯನ್ನು ನಡೆಸುವುದು ಸಾಧ್ಯ. ಅಧಿಕಾರದ ಚಲಾವಣೆಯೇ ಸ್ವಯಂ ಹೊಸ ಜ್ಞಾನ ವಿಚಾರಗಳು ಹುಟ್ಟಿಕೊಳ್ಳಲು ಅಥವಾ ರೂಪುಗೊಳ್ಳಲು ಕಾರಣವಾಗಬಹುದು ಮತು ಇದು ಹೊಸ ಮಾಹಿತಿ ಕೋಶಗಳನ್ನು ರೂಪಿಸಿಕೊಳ್ಳಬಲ್ಲುದು ಎಂದು ಫುಕೋ ಹೇಳುತ್ತಾನೆ (ಅದೇ, ಪು. 21, 2003). ಹೀಗೆ ರೂಪಿಸಿದ ಹೊಸ ಮಾಹಿತಿ ಕೋಶಗಳು ಮತ್ತು ಜ್ಞಾನ ಸಂಕಥನಗಳು ಇಂದಿಗೂ ರಾಜ್ಯಾಧಿಕಾರವನ್ನು / ಪ್ರಭುತ್ವವನ್ನು ಸದಾ ಪೋಷಿಸುತ್ತಲೇ ಬಂದಿವೆ.

ಪ್ರಭುಶಕ್ತಿ

ಯಾವ ರಾಜನ ಶಕ್ತಿಯು ಅನುಲ್ಲಂಘನೀಯವೋ ,ಯಾವುದು ಆಜ್ಞೆಯ ರೂಪದಲ್ಲಿರುವುದೋ ಆ ಶಕ್ತಿಯು ಪ್ರಭು ಶಕ್ತಿಯಾಗಿರುತ್ತದೆ (ಮಾನಸೋಲ್ಲಾಸ-2-696)ಇದು ಹಿಂದಿನ ರಾಜಕೀಯ ವ್ಯವಸ್ಥೆಯನ್ನು ಕುರಿತು ಹೇಳುತ್ತದೆ. ನೋಡಿ: ದಂಡ

ವಿವರಗಳಿಗೆ ನೋಡಿ: Julian wolfreys 2002 Key concepts in literary theory

ಮೋಹನ್ ದಾಸ್ ಕರಮಚಂದ್ ಗಾಂಧಿ ೨೦೦೮ ಹಿಂದ್ ಸ್ವರಾಜ್

ಬರಗೂರು ರಾಮಚಂದ್ರಪ್ಪ ೧೯೯೩ ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ

ಸಿ.ಎನ್. ರಾಮಚಂದ್ರನ್ ೨೦೦೨ ವಸಾಹತೋತ್ತರ ಚಿಂತನೆ

ಪ್ರಮಿತಿ

ಪ್ರಮಿತಿಯೆಂದರೆ ಜ್ಞಾನ ಈ ಕುರಿತು ಅಭಿನವಗುಪ್ತನ ವಿವರಣೆಯು ಈ ರೀತಿಯಲ್ಲಿದೆ: " ಈ ಸ್ಥಿರವಾದ ದೀಪವು ವಸ್ತುವೊಂದರ ಪ್ರತಿಬಿಂಬಕ್ಕೆ ಪ್ರತಿಕ್ರಿಯೆ ತೋರಿದಾಗ, ಎಂದರೆ ಅದರಲ್ಲಿ ಆಂತರಿಕ ಅಭಿವ್ಯಕ್ತಿ. ಉದಯಿಸಿದಾಗ, ಅದನ್ನು ಜ್ಞಾನ(ಪ್ರಮಿತಿ) ಎಂದು ಕರೆಯಲಾಗುತ್ತದೆ." *(ಜಿ.ಟಿ.ದೇಶಪಾಂಡೆ ಪುಟ.64)*

ಪ್ರಶಸ್ತಿ ಶಾಸನಗಳು

ಪ್ರಶಸ್ತಿ ಎಂದರೆ ಹೊಗಳಿಕೆ, ಬಿರುದು ಎಂದು ಅರ್ಥ. ಪ್ರಶಸ್ತಿಶಾಸನಗಳು ಯಾವನೇ ಒಬ್ಬವ್ಯಕ್ತಿಯ ಕುರಿತು ಹೊಗಳಿಕೆಯ ಮಾತುಗಳನ್ನು ಹೊಂದಿರುತ್ತದೆ. ಅವನ ಬಿರುದುಗಳನ್ನು ದಾಖಲಿಸುತ್ತವೆ.

ಯಾವನೇ ಒಬ್ಬ ವ್ಯಕ್ತಿಯ ಗುಣಗಳನ್ನು ಕೀರ್ತಿಸುವ ಉದ್ದೇಶದಿಂದಲೇ ಹಾಕಿಸಲಾಗಿರುವ ಶಾಸನಗಳು ಇವು. ಇವು ಸಾಮಾನ್ಯವಾಗಿ ಶಿಲಾಶಾಸನಗಳೇ ಆಗಿರುತ್ತವೆ. ಅರಸನೋ, ಅಧಿಕಾರಿಯೋ ದತ್ತಿ, ದಾನ ನೀಡಿದಾಗ, ಲೋಕೋಪಯೋಗಿ ಕಾರ್ಯಗಳನ್ನು ಮಾಡಿದಾಗ, ಅವುಗಳನ್ನು ತಿಳಿಸುವ ನೆವದಲ್ಲಿ, ಆ ವ್ಯಕ್ತಿಯನ್ನು ಮತ್ತು ಅವನ ವಂಶವನ್ನೂ ಕೀರ್ತಿಸುವ ಉದ್ದೇಶವನ್ನೇ ಮಹತ್ವದನ್ನಾಗಿ ಈ ಬಗೆಯ ಶಾಸನಗಳು ಮಾಡುತ್ತವೆ. ಕೇವಲ ದಾನ ಮಾಡಿದ ಸಂದರ್ಭದಲ್ಲಿ ಮಾತ್ರವಲ್ಲ, ವಿರೋಚಿತವಾದ ಕಾರ್ಯವನ್ನು ಎಸಗಿದಾಗ, ಆಯಾ ಧರ್ಮವು ಶ್ರೇಷ್ಠವಾದುದು ಅಥವಾ ಕಠಿಣವಾದುದು ಎಂದು ಭಾವಿಸಿರುವ ವ್ರತವನ್ನು ಯಶಸ್ವಿಯಾಗಿ ನಡೆಸಿದಾಗ, ತನ್ನ ಜೀವದ ಮೇಲೆ ಆಸೆ ತೊರೆದು ತಾನು ನಂಬಿದ ಮೌಲ್ಯಗಳಿಗಾಗಿ ನಡೆಸಿದಾಗ, ತನ್ನ

ಜೀವವನ್ನೇ ತೆತ್ತ ಮಹಾಸತಿಯರ, ವೀರರ, ಗರುಡರ ವಿಷಯವನ್ನು ತಿಳಿಸುವ ಕೆಲವು ಶಾಸನಗಳು ಅವರನ್ನು ಮನತುಂಬಿ ಕೀರ್ತಿಸಿವೆ ಎಂದು ಶೇಷಶಾಸ್ತ್ರಿ ಹೇಳುತ್ತಾರೆ.

ಇದರಲ್ಲಿ ಹೊಗಳಿಕೆಯು ಪ್ರಧಾನವಾಗಿ ಎದ್ದು ಕಾಣಿಸುತ್ತದೆ. ಕೀರ್ತನೆಯ ಸ್ವಭಾವವು ಇದರಲ್ಲಿ ಮುಖ್ಯವಾಗಿರುವುದರಿಂದ ಪ್ರಶಸ್ತಿ ಶಾಸನಗಳು ಎಂದು ಗುರುತಿಸಲ್ಪಟ್ಟಿವೆ.

ವಿವರಗಳಿಗೆ ನೋಡಿ: ಆರ್. ಶೇಷಶಾಸ್ತ್ರಿ 2005 ಶಾಸನ ಪರಿಚಯ ಪುಟ. 17.

ಪ್ರಸನ್ನ ಗುಣ

ಲೋಕಪ್ರಸಿದ್ಧವಾದ ಅರ್ಥವನ್ನು ಸುಂದರವಾಗಿ ಸುಲಭವಾಗಿ ತಿಳಿಸುವ ಮಾತೇ ಪ್ರಸನ್ನ ಗುಣ.(ಕವಿರಾಜ ಮಾರ್ಗ77–78)

ಪ್ರಸವಧರ್ಮಿಣಿ

ಭಾರತೀಯ ಪರಂಪರೆಯಲ್ಲಿ ಹೆಣ್ಣನ್ನು ಪ್ರಕೃತಿಯೆಂದೂ ಗಂಡನ್ನು ಪುರುಷನೆಂದೂ ಕರೆಯಲಾಗಿದೆ. ಸುಶ್ರುತನು ತನ್ನ ಸುಶ್ರುತ ಸಂಹಿತೆಯಲ್ಲಿ ಹೆಣ್ಣನ್ನು ಜಡ, 'ಏಕ', ಪ್ರಸವಧರ್ಮಿಣೀ ಎಂದು ಗುರುತಿಸುತ್ತಾನೆ.

ವಿವರಗಳಿಗೆ ನೋಡಿ: ಪಂಡಿತ ಎನ್.ಎಲ್. ಭಟ್ಟಾಚಾರ್ಯ 1973 ಸುಶ್ರುತ ಸಂಹಿತಾ ಪುಟ. 23

ಪ್ರಸೂತಿ

ಆದಿವಾಸಿಗಳಲ್ಲಿ ಇರುವ ನಂಬಿಕೆಯ ನವೀಕರಣ ರೂಪವಾಗಿ ಇದು ಕಂಡುಬರುತ್ತದೆ. 'ಕೆಲವರಲ್ಲಿ ಸ್ತ್ರೀಯು ಪ್ರಸವಿಸುವ ಮೊದಲು ಮನೆಗೆ ಸ್ವಲ್ಪ ದೂರದಲ್ಲಿ ಮರದ ಬಳಿ ಕಟ್ಟಿಸಿರುವ ಹಟ್ಟಿಯಲ್ಲಿ ವಾಸ ಮಾಡುತ್ತಾಳೆ. ಪ್ರಸವಿಸುವ ವೇಳೆಯಲ್ಲಿ ಅವಳ ಸಹಾಯಕ್ಕೆ ಯಾರು ಇರುವುದಿಲ್ಲ. ಕಾರಣವೇನೆಂದರೆ, ಪ್ರಸವ ಕಾಲದಲ್ಲಿ ಎಷ್ಟೋ ಸ್ತ್ರೀಯರು ಮೃತರಾಗುತ್ತಾರೆ. ಕೆಲವು ವೇಳೆ ನಿಶ್ಯಕ್ತರಾಗಿ ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಹೆರುವ ಕ್ರಿಯೆಯ ಬಗೆಗಿನ ಭಯ ಮತ್ತು ಅದರ ಕುರಿತಂತೆ ಹುಟ್ಟಿದ ನಂಬಿಕೆಯೇ ಈ ಸಂಪ್ರದಾಯವನ್ನು ಹುಟ್ಟುಹಾಕಿರಬೇಕು.

ವಿವರಗಳಿಗೆ ನೋಡಿ: ನಂಜಮ್ಮಣ್ಣಿ .ಎಂ 1971 ಸಾಮಾಜಿಕ ಮಾನವಶಾಸ್ತ್ರ ಪುಟ. 153 (ಕೊನೆಗೆ)

ಪ್ರಸೂ ತಾಯಿ; ಜನನಿಯೆಂದರ್ಥ. ಪ್ರಸವಿಸು ಎಂದರೆ ಹೆರು; ಪ್ರಸೂತಿಯೆಂದರೆ ಹೆರು ಎಂದರ್ಥ.

ಪ್ರಸೂತಿಗೃಹ

ಪ್ರಸೂತಿಗೃಹವನ್ನು ಬೇರೆ ಮಾಡಬೇಕೆಂಬ ನಂಬಿಕೆಯಿದೆ. ಪ್ರಸೂತಿಗೃಹದಲ್ಲಿ ಕಂಚುಕಿಯರಿರಬೇಕು. ಕುಸುಮ ಇತ್ಯಾದಿಗಳು ಆವರಿಸಿಕೊಂಡಿರಬೇಕು.

ಪ್ರಾಂತ್ಯದ ದಾನ

ದಾನ ಪ್ರಗತಿಗ್ರಹವೆಸಗಿದ ಆಯಾ ನಾಡುಗಳ ವಿದ್ವಾಂಸರ ಕೆಲವು ಹೆಸರುಗಳನೀಕ್ಷಿಸಿರಿ:

ಸಂಣ ಸಾವಿಭಟ್ಟ, ರಿಸಿಯಪ್ಪಭಟ್ಟ ಎಂಬ ತಂದೆಮಕ್ಕಳ ಸಂಸಾರವು ಅಚ್ಚ ಕನ್ನಡಿಗ ಮನೆತನಕ್ಕೇ ಸೇರಿದುದೆಂಬಲ್ಲಿ ಸಂಶಯವಿಲ್ಲ. ಉಳಿದ ಎರಡು ಮನೆತನದವರೂ ಕನ್ನಡಿಗರೇ ಆಗಿರಬೇಕೆಂದು ತೋರುತ್ತಿದೆ.

ಇದು ಸಂಸ್ಕೃತ ಶಾಸನ ಗದ್ಯಭಾಗವಾದರೂ ಅಲ್ಲಲ್ಲಿ ಹೆಣೆದು ಬರುವ ಕನ್ನಡ ನುಡಿಗಳ ಅಂದವನ್ನು ಗುರುತಿಸಬೇಕು. ಮೇಲೆ ಸೂಚಿತವಾದುವುಗಳು ಬರಿಯ ಹೆಸರುಗಳೆಂದು ಅವಗಣಿಸಬಾರದು. 'ಮಾಸೋಪವಾಸಿಯ' ಎಂಬ ಕನ್ನಡ ಪ್ರತ್ಯಯವನ್ನೀಕ್ಷಿಸಿರಿ. ಮೂರು ಕಡೆಯಲ್ಲಿ 'ವಾಸ್ತವ್ಯತ' ಎಂಬ ಒಂದೇ ಪದ ಉಪಯುಕ್ತವಾಗಿದೆ. ಕೊನೆಯ 'ತ' ಕಾರವು, ಶಾಸನವನ್ನು ಅಚ್ಚೊತ್ತುವಲ್ಲಿಯೇ ವ್ಯತ್ಯಸ್ತವಾದುದಿರಬೇಕು. ಅದು 'ವಾಸ್ತವ್ಯದ' ಎಂದೇ ಇದ್ದಿರಬೇಕು. (ಮುಳಿಯ) ಪ್ರಾಂತ್ಯವನ್ನು ದಾನ ಮಾಡುತ್ತಿದ್ದರು ಎಂಬುದಕ್ಕೆ ಮೇಲಿನ ಮಾತು ಉದಾಹರಣೆಯಾಗಿದೆ.

ಪ್ರಾಚೀನ

ಪ್ರಾಚೀನ ಮಧ್ಯಕಾಲೀನ, ಆಧುನಿಕ ಎಂದು ಕರೆಯಲು ಪ್ರಾರಂಭಿಸಿದವರು ಬ್ರಿಟಿಶ್ ಚರಿತ್ರೆಕಾರರು. ಅವರು Ancient, Middle, Modern ಎಂದು ಕರೆಯಲು ಶುರುಮಾಡಿದರು. ಅವರ ಪ್ರಕಾರ, ಆಧುನಿಕ ಚರಿತ್ರೆಯೆಂದರೆ, ಕೈಗಾರೀಕರಣಗೊಂಡು, ವೈಜ್ಞಾನಿಕವಾಗಿ ಮುಂದುವರಿದ ಬಂಡವಾಳವಾದ ಹುಟ್ಟಿಕೊಂಡ ಮತ್ತು ಅಭಿವೃದ್ಧಿಯ ಕಡೆಗೆ ಕಣ್ಣುಹಾಯಿಸಿದ ಮತ್ತು ಸ್ವಯಂ ಲಾಭಕರ ಯುಗವನ್ನು ಕಂಡದ್ದೆಲ್ಲವೂ "ಆಧುನಿಕ". ಈ ಆಧುನಿಕ ಕಾಲದಲ್ಲಿ ನಿಂತುಕೊಂಡು ಚರಿತ್ರೆಕಾರ ಬ್ರಿಟನ್ನಿನ ಅಥವಾ ಒಟ್ಟಾಗಿ ಪಶ್ಚಿಮ ಸಮಾಜದಲ್ಲಿರುವ 'ಕಾಲ' Time ಮತ್ತು 'ಅವಕಾಶ' Space ಪರಿಕಲ್ಪನೆಯಿಂದಾಗಿ ಪುನರುಜ್ಜೀವನದ ಹಿಂದಿನ ಕಾಲವನ್ನು ಮಧ್ಯಯುಗೀನ ಎಂದು ಕರೆದು, ಅದಕ್ಕಿಂತಲೂ ಹಿಂದಿನ ಕಾಲವನ್ನು ಪ್ರಾಚೀನವೆಂದು ಕರೆದರು. ಯಾವುದನ್ನು ಚರಿತ್ರೆಕಾರರು ಹೀಗೆ ಗುರುತಿಸುವ ಪ್ರಯತ್ನದಿಂದಾಗಿ "ಚರಿತ್ರೆ" (ಕಾಲ) ಒಂದು ಉದ್ದನೆಯ ಸರಳ ರೇಖಾಕೃತಿ ಪರಿಕಲ್ಪನೆಯು ಹುಟ್ಟಿಕೊಂಡಿತು.

ಪ್ರಾಚೀನ: ತುಂಬಾ ಹಳೆಯದು. ಫ್ಯೂಡಲ್ ಗುಣ ಹೊಂದಿರುವುದು.

ಮಧ್ಯಕಾಲೀನ: ಪರಿವರ್ತನೆಯ ಕಾಲದ ಯುಗ ಈ ಕಾಲದಲ್ಲಿ ಹಣದ ಚಲಾವಣೆ ರೂಪುಗೊಂಡಿತು. ಪ್ರಭುತ್ವ ಹಾಗೂ ಚರ್ಚ್‌ಗಳು ಸಮಾಜದ ಮೇಲೆ ಬೀರಿದ ಪ್ರಭಾವ ಕಡಿಮೆಯಾಗತೊಡಗಿತು. ಚರ್ಚಿನ ಹಾದಿ, ಪ್ರಭುತ್ವದ ಹಾದಿ ಬೇರೆಯಾಗತೊಡಗಿತು ಹಾಗೂ ಅವುಗಳ ನಡುವೆ ಒಳ ಒಪ್ಪಂದ ನಡೆಯಿತು.

ಆಧುನಿಕ – ಹಿಂದಿನ ಚರಿತ್ರೆಯನ್ನು ಗುರುತಿಸಿದರೆ ಈ ಯುಗ ಆಧುನಿಕವಾದದ್ದು, ಇಲ್ಲಿ ವ್ಯಕ್ತಿವಾದ ಬೆಳೆಯಿತು. ವಿಜ್ಞಾನ ತಂತ್ರಜ್ಞಾನವು ಮುಂದುವರಿಯಿತು. ವಿನಿಮಯ ಮೌಲ್ಯಗಳು ಬದಲಾದವು.

ಪ್ರಾಚೀನ ರಾಜಕೀಯ ವ್ಯವಸ್ಥೆ

ಪ್ರಾಚೀನ ಕಾಲದ ರಾಜಕೀಯ ಸ್ವರೂಪವನ್ನು ಮುಖ್ಯವಾಗಿ ಹೀಗೆ ಪರಿಗಣಿಸಬಹುದು.

1. ರಾಜ – ರಾಜಕೀಯದ ಪರಮೋಚ್ಚ ಅಧಿಕಾರ ಹೊಂದಿದವನು.
2. ಮಂತ್ರಿ – ರಾಜನ ರಾಜಕೀಯ ವ್ಯವಹಾರದ ಸಲಹೆಗಾರ.
3. ಸೇನಾಧಿಪತಿ – ಸೇನೆಯ ಅಧಿಕಾರಿ.
4. ಪುರೋಹಿತ – ಧಾರ್ಮಿಕ ಮುಖಂಡ.
5. ಪ್ರಜೆಗಳು – ಸಾಮಾನ್ಯ ಜನರು ಮತ್ತು ರಾಜನೀತಿಗೆ ಅನುಸಾರವಾಗಿ ಬದುಕುವವರು.

ಪ್ರಾಣಿವಧೆ

ಮೊದಮೊದಲು ಪ್ರಾಣಿವಧೆಯನ್ನು ಹಿಂಸೆಯೆಂದು ಯಾರೂ ನಂಬುತ್ತಿರಲಿಲ್ಲ. ಯಜ್ಞ–ಯಾಗಾದಿಗಳಲ್ಲಿ ಪ್ರಾಣಿವಧೆಯನ್ನು ಮಾಡುತ್ತಿದ್ದರು. ಅಶ್ವಮೇಧಯಾಗದಲ್ಲಿ ಕುದುರೆಯನ್ನು ಬಲಿಕೊಡುತ್ತಿದ್ದರು. ಬಲಿಕೊಟ್ಟ ಕುದುರೆಯ ವಪೆಯನ್ನು ಯಾರು ತಿನ್ನಬೇಕು: ಕಾಲಿನ ಮಾಂಸಖಂಡವನ್ನು ಯಾರು ತಿನ್ನಬೇಕೆಂದು ಎಂಬ ಲೆಕ್ಕಾಚಾರವಿತ್ತು. ಹಾಗೆಯೇ ಯಾಗದಲ್ಲಿ ಕರುವಿನ ತಲೆಯನ್ನು ಕಡಿಯುತ್ತಿದ್ದರು. ಅದರಿಂದಾಗಿ ಜೈಮಿನಿ ಭಾರತದಲ್ಲಿ ವಾಲ್ಮೀಕಿಗೆ ಗೋಘ್ನ ಎಂದು ಕರೆದಿದ್ದಾರೆ. ಅಗ್ನಿಕಾರ್ಯದಲ್ಲಿ ಯೂಪಸ್ತಂಭವು ಕೂಡಾ ಪ್ರಧಾನವಾದುದು. ಯಾಗದಲ್ಲಿ ಪ್ರಾಣಿಯ ಶಿರಸ್ಸನ್ನು ಅಗ್ನಿಗೆ ಅರ್ಪಿಸಿ ಅನಂತರ ಅದನ್ನು ಪ್ರಸಾದ ರೂಪವಾಗಿ ಸ್ವೀಕರಿಸಿದ ಅನೇಕ ಉದಾಹರಣೆಗಳಿವೆ. ಜೈನಧರ್ಮದ ಪ್ರಚಾರದಿಂದಾಗಿ ಅಹಿಂಸೆಯ ತತ್ವವು ಪ್ರಧಾನವಾಯಿತು. ಮತ್ತು ಅದರಿಂದ ಯಾಗದಲ್ಲಿ ಪ್ರಾಣಿ ವಧೆ ನಿಷೇಧಿತವಾಯಿತು ಎಂಬ ಚರ್ಚೆಯೂ ಇದೆ.

ವೃಥಾಪಶುವಧೆಯನ್ನು ಮಾಡಿದವನು ಪಶುವಿನ ಮೈಯಲ್ಲಿ ಎಷ್ಟು ರೋಮಗಳಿವೆಯೋ ಅಷ್ಟು ಬಾರಿ ತನ್ನನ್ನು ಕೊಲ್ಲಿಸಿಕೊಳ್ಳುವನು. ಅಲ್ಲದೆ ನರಕವನ್ನೂ ಪಶುತ್ವವನ್ನು ಹೊಂದುವನು. ಇದೊಂದು ನೀತಿಪಾಠ. ಮೂಲತಃ ಹಿಂಸೆ ಅನಗತ್ಯ ಎಂಬುದನ್ನು ಇದು ಪ್ರತಿಪಾದಿಸುತ್ತದೆ. ಹಿಂಸೆ ಮತ್ತು ಅಹಿಂಸೆಯ ನಡುವಣ ಸಾಂಸ್ಕೃತಿಕ ಸಂಘರ್ಷವನ್ನು ಇದು ಸೂಚಿಸುತ್ತದೆ.

ವಿವರಗಳಿಗೆ ನೋಡಿ: ಅಹಿಂಸೆ: ಯಜ್ಞ

ಪ್ರಾತಿಹಾರ್ಯ

ಪ್ರಾತಿಹಾರ್ಯ=ಕೇವಲ ಜ್ಞಾನಿಗಳಾದ ತೀರ್ಥಂಕರರ ಎಂಟು ವಿಧದ ಸಂಪತ್ತು ಪ್ರಾತಿಹಾರ್ಯ=ಕೇವಲ ಜ್ಞಾನಿಗಳಾದ ತೀರ್ಥಂಕರರ ಎಂಟು ವಿಧದ ಸಂಪತ್ತು. ತೀರ್ಥಂಕರನಿಗೆ ಒದಗುವ ಅಶೋಕವೃಕ್ಷ, ದಿವ್ಯಪುಷ್ಪವೃಷ್ಟಿ, ದಿವ್ಯಧ್ವನಿ, ಚಾಮರ, ಆಸನ, ಭಾಮಂಡಲ, ದೇವದುಂದುಭಿ, ಛತ್ರಗಳೆಂಬ ಎಂಟು ಸವಲತ್ತುಗಳು. ಇದು ಜೈನ ಧರ್ಮದ ಪರಿಭಾಷೆ.

ಪ್ರಾಯೋಪಗಮನ

ಪ್ರಾಯೋಪಗಮನ ಎನ್ನುವುದು ಜೈನಧರ್ಮ ಮತ್ತೊಂದು ಪ್ರಮುಖ ಪರಿಕಲ್ಪನೆಯಾಗಿದೆ. ಆದರೆ ಇದು ಕೂಡಾ ಸ್ವಯಂ ಮರಣವನ್ನು ಆಹ್ವಾನಿಸುವ ಕ್ರಮವನ್ನು ಸೂಚಿಸುತ್ತದೆ. ಪ್ರಾಯೋಪಗಮನ ಜೈನಯತಿಗಳು ತಮ್ಮ ರೋಗಕ್ಕೆ ತಾವೂ ಚಿಕಿತ್ಸೆ ಮಾಡಿಕೊಳ್ಳದೆ, ಬೇರೆಯವರು ಮಾಡಲೂ ಎಡೆಗೊಡದೆ ಧ್ಯಾನದಲ್ಲಿ ಲೀನರಾಗಿ, ಅಚಲರಾಗಿದ್ದುಕೊಂಡು ಪ್ರಾಣತ್ಯಾಗಮಾಡುವುದು.

ಪ್ರೇತ

ಶರೀರವನ್ನು ಬಿಟ್ಟ ಜೀವವನ್ನು ಪ್ರೇತವೆಂದು ಕರೆಯುತ್ತಾರೆ. ಯಾರಿಗೆ ಶವಸಂಸ್ಕಾರಗಳು ಸರಿಯಾಗಿ ಜರುಗುವುದಿಲ್ಲವೋ ಅಂಥವರು ಪ್ರೇತವಾಗುತ್ತಾರೆ. ಮತ್ತು ಕೆಲವರಿಗೆ ಪಿಂಡ ಪ್ರಧಾನ ಕಾರ್ಯವು ಜರುಗಿರುವುದಿಲ್ಲ. ಪಿಂಡಪ್ರಧಾನ ಶ್ರಾದ್ಧಾದಿ ಕರ್ಮಗಳು ಸರಿಯಾಗಿ ಜರುಗಿಲ್ಲವಾದರೆ ಅಂಥವರ ಜೀವಾತ್ಮವು ಸ್ವರ್ಗಕ್ಕೆ ಹೋಗುವುದಿಲ್ಲ. ಅವರ ಜೀವಾತ್ಮ ಪ್ರೇತವಾಗಿ ಕಾಡುತ್ತದೆ. ಪ್ರೇತವು ಮನುಷ್ಯರನ್ನು ಹಿಡಿಯುತ್ತದೆ. ಮತ್ತು ಪ್ರೇತವು ಹಿಡಿದ ಮನುಷ್ಯರು ನಮ್ಮನ್ನು ಕಾಡ ತೊಡಗುತ್ತಾರೆ. ಇದಕ್ಕೆ ಪೂರಕವಾಗಿ ಮತ್ತೊಂದು ನಂಬಿಕೆಯಿದೆ. ಅದೆಂದರೆ ಸತ್ತವರು ಬ್ರಾಹ್ಮಣರಾಗಿದ್ದು ಅವರಿಗೆ ಸರಿಯಾದ ರೀತಿಯಲ್ಲಿ ಶವಸಂಸ್ಕಾರವಾಗಿಲ್ಲವಾದರೆ ಅವರು ಬ್ರಹ್ಮರಾಕ್ಷಸರಾಗುತ್ತಾರೆ. ಮೂರು ತಲೆಮಾರಿನ ಹಿಂದಿನವರಿಗೂ ಪಿಂಡಪ್ರಧಾನ ಮಾಡುವುದು ಈ ಕಾರಣಕ್ಕೆ.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ.

ಪ್ರೋಪದೋಪ ವಾಸಿ

ಪ್ರೋಷಧವೆಂದರೆ ಉಪವಾಸದ ಹಿಂದಿನ ಮತ್ತು ಮುಂದಿನ ದಿನ ಒಂದೇ ಹೊತ್ತು ಮಾಡುವ ವ್ರತ. ಪ್ರೋಷ ದೋಷವಾಸಿಯೆಂದರೆ ಪ್ರೋಷದೋಷವಾಸ ಮಾಡುವವನು ಎಂದರ್ಥ.

ಪಚಿಗುಟ್ಟು

ವಾಸ್ತವವಾಗಿ ಮಂತ್ರವೆಂದರೆ ಪವಿತ್ರವಾದ ಶ್ಲೋಕಪಠಣವೆಂದು ಅರ್ಥ. ಆಧ್ಯಾತ್ಮಿಕ ಶಕ್ತಿಯನ್ನು ಇದು ಸೂಚಿಸುತ್ತದೆ. ಸಂಸ್ಕೃತದಲ್ಲಿ 'ಮನ್' ಅಂದರೆ ಆಲೋಚಿಸು ಎಂದರ್ಥ. ಇದು ಧ್ವನಿಯನ್ನು (ಸ್ವರ) ಅವಲಂಬಿಸಿದೆ. ಮಂತ್ರಗಳು ಆಚರಣೆಗೆ ಸಂಬಂಧಿಸಿವೆ. ಮಂತ್ರಗಳಲ್ಲಿ ಎರಡು ವಿಧ: ಒಂದು 'ಕಾಂತಿಕ' ಅಂದರೆ ದೊಡ್ಡ ಧ್ವನಿಯಲ್ಲಿ ಉಚ್ಚರಿಸುವುದು. ಮತ್ತೊಂದು 'ಅಜಪ' ಎಂದರೆ ಅಂತರಂಗದಲ್ಲಿ ಧ್ಯಾನಸ್ಥರಾಗಿ ನುಡಿಯುವುದು. ಇದರಲ್ಲಿ ಪುನರಾವರ್ತನೆಯಿರುತ್ತದೆ. ಯಾರು ಮಂತ್ರಗಳ ಮೂಲಕ ಆಚರಣೆ ಮಾಡುತ್ತಾರೋ ಅವರೆಲ್ಲ ಮಂತ್ರವಾದಿಗಳೇ. ಮಂತ್ರವಾದಿಗಳೆಂದರೆ ವಾಮಾಚಾರಿಗಳು ಎಂಬ ಅರ್ಥವೂ ಇದೆ. ಮಾಯಾ–ಮಾಟ ಮೊದಲಾದ ಆಚಾರಗಳನ್ನು ಮಾಡುವವರು ಮಂತ್ರವಾದಿಗಳು. ಇವರನ್ನು ನೀಚೋಪಾಸಕರೆಂದೂ ಕರೆಯುತ್ತಾರೆ.

ಪಟಿಗಾಳೆಗ

ಪಟಿ ಎಂದರೆ ಹಳಿ; ತೆಗಳು; ಕೀಳ್ಮಾಡು; ಹೊಡೆ; ಎಂಬ ಅರ್ಥಗಳಿವೆ. ಪಟಿಗಾಳಿಗವೆಂದರೆ ನಿಂದಿಸುತ್ತಾ
ಯುದ್ಧ ಮಾಡುವುದು.

ಫಲ

ಫಲ ಅಥವಾ ಪರಿಣಾಮವು ಪ್ರತ್ಯಯಮಯವೂ ಅಲ್ಲ ಅಪ್ರತ್ಯಯಮಯವೂ ಅಲ್ಲ (ಅವುಗಳಿಂದ) ಫಲವುಂಟಾಗಿಲ್ಲವೆಂದಾಗ ಪ್ರತ್ಯಯಗಳೋ ಅಪ್ರತ್ಯಯಗಳೋ ಅವೆಲ್ಲಿ? ಕಾರಣ ಮತ್ತು ಪರಿಣಾಮಗಳ ಏಕತ್ವ(ಪ್ರತ್ಯಯಮಯ)ವನ್ನಾಗಲೀ, ಕಾರಣ–ಪರಿಣಾಮಗಳ ಭಿನ್ನತೆಯನ್ನಾಗಲೀ(ಅಪ್ರತ್ಯಯಮಯ) ಗುರುತಿಸಹೊರಡುವುದು ಯುಕ್ತವಲ್ಲ. ಪ್ರತ್ಯಯ–ಫಲಗಳ ನಡುವಿನ ಸಂಬಂಧವನ್ನು ಭಿನ್ನಾಭಿನ್ನಗಳ ಮೂಲಕ ವ್ಯಾಖ್ಯಾನಿಸುವುದು ಅಸಾಧ್ಯ. ಎಲ್ಲವೂ ಸಂಬಂಧದಲ್ಲಿ ಉಂಟಾಗಿ ಸಂಬಂಧ ಭಂಗಗೊಂಡಾಗ ಭಂಗಗೊಳ್ಳುತ್ತವೆ. ಬಂದು ಹೋಗುವ ಸಂಗತಿಗೆ ತಂಗಬೇಕಾದ ವ್ಯವಸ್ಥೆಯ ಅಗತ್ಯವಿಲ್ಲ. (ನಟರಾಜ ಬೂದಾಳು ೨೦೦೬ ಪುಟ.೧೧)

ಬಂದಿಕಾರ

ಬಂದಿಕಾಜನೆಂದರೆ ಸೆರೆ ಹಿಡಿಯುವವನು. ಬಂದಿಕಾರವೆನ್ನುವುದೇ ಉದ್ಯೋಗವೊಂದನ್ನು ಸೂಚಿಸುತ್ತದೆ. ಬರಿಯ ಬಂದಿಯೆಂದರೆ ಆಭರಣ ವಿಶೇಷ. ತೋಳಬಂದಿ – ಪ್ರಯೋಗ. ಬಂದಿಯಲ್ಲಿ ವ್ಯವಹರಿಸುವವನು ಬಂದಿಕಾರ. ಬಂದೀ – ವಂದೀ, ಪ್ರಗ್ರಹ; ಗ್ರಾಹಕವೆಂಬ ಅರ್ಥಗಳೂ ಇವೆ. ರಾಜ್ಯದ ಆಡಳಿತಾತ್ಮಕ ವ್ಯವಸ್ಥೆಗೆ ಕಾರಾಗೃಹ ಮತ್ತು ಬಂದಿಕಾರರ ಆವಶ್ಯಕತೆಯಿರುತ್ತವೆ.

ವಿವರಗಳಿಗೆ ನೋಡಿ: ವೃತ್ತಿಗಳು

ಬಡಿಗರು

ಪ್ರಾಚೀನ ಕಾಲದಿಂದಲೂ ಮರದ ಕೆತ್ತನೆ ಕೆಲಸದ ಮೂಲಕ ಅರಮನೆ, ದೇವಾಲಯ, ಮನೆ, ಕೃಷಿಗೆ ಬೇಕಾದ ಉಪಕರಣಗಳನ್ನು ತಯಾರಿಸುವ ಬಡಿಗರನ್ನು ಪಂಚಾಳರಲ್ಲಿ ಸೇರಿಸುತ್ತಾರೆ. ಬಡಿಗ, ಅಕ್ಕಸಾಲಿ, ಕಂಬಾರ, ಕಂಚುಗಾರ, ಕಲ್ಕುಡಿಗ– ಈ ಐವರನ್ನು ಪಂಚಾಳರೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಕರಕುಶಲ ಕಲೆಯಲ್ಲಿ ಇವರು ಪರಿಣಿತರಾಗಿರುತ್ತಾರೆ. ಪ್ರಾಚೀನ ಕಾಲದಲ್ಲಿ ದೇವಸ್ಥಾನಕ್ಕೆ ಸಂಬಂಧಿಸಿದ ಮರಗೆಲಸಗಳನ್ನು ಮಾಡಲು ಮುರಿದು ಹೋದ ಸಾಮಾನುಗಳನ್ನು ಸರಿಪಡಿಸಲು ಇವರಿಗೆ ಶಾಶ್ವತವಾದ ದತ್ತಿಗಳನ್ನು ಬಿಟ್ಟು ಕೊಡುತ್ತಿದ್ದರು. (BKI.I, i. 68, 1032 AD, EC III sa. 109. 1042 AD,) ತಕ್ಷ ಎಂದರೆ ಬಡಿಗ, ತರ್ಕ್ಷ್ ಆಖ್ಯಾತದ ಮುಖ್ಯಾರ್ಥ: ಮಾಡು ನಿರ್ಮಿಸು, ರೂಪಿಸು. ತಕ್ಷಕನು ಎಂದರೆ ಬಡಿಗನು ಮಾತ್ರವಲ್ಲ ಕುಶಲ ಕಲಾವಿದನು ಎಂಬರ್ಥವಾಗುತ್ತದೆ. ನಾಟಕದ ಸೂತ್ರಧಾರನೆಂದೂ ಅರ್ಥವಿದೆ. ಸೃಷ್ಟಿಕರ್ತ ವಿಶ್ವಕರ್ಮನಿಗೆ ತಕ್ಷಕ ಎಂದು ಹೆಸರಿದ್ದುದಾಗಿ ತಿಳಿಯುತ್ತದೆ. ತ್ವಷ್ಟಾ (ಪ್ರಜಾಪತಿ: ವಿಶ್ವಕರ್ಮನು) ದೇವತೆಗಳ ಶಿಲ್ಪಿ ಎಂದು ಅಥರ್ವಣವೇದದಲ್ಲಿದೆ. ವಿಶ್ವಕರ್ಮನಿಂದ ರಚಿತವಾದ ಒಂದು ಸೂಕ್ತವು ಋಗ್ವೇದದ ಹತ್ತನೆಯ ಮಂಡಲದಲ್ಲಿದೆ. ವಿಶ್ವಕರ್ಮನು ಸೃಷ್ಟಿಕರ್ತನೆಂದು ವರ್ಣಿಸಲ್ಪಟ್ಟಿದ್ದಾನೆ. ಇವನು ವಿಶ್ವತೋಮುಖನು. ಕಾಲಿನಿಂದ ಸ್ವರ್ಗವನ್ನೂ ಕೈಯಿಂದ ಭೂಲೋಕವನ್ನೂ ನಿರ್ಮಿಸುತ್ತಾನೆ. ವಿಶ್ವಕರ್ಮನಿಗಾಗಿ ಯಾಗಗಳು ಆಗುತ್ತಿದ್ದವು. ಋಗ್ವೇದದ 1ನೆಯ ಮತ್ತು 10ನೆಯ ಮಂಡಲದಲ್ಲಿ ಅನೇಕ ಹೊಸ ಮಾತುಗಳು ಬರುತ್ತದೆ. 'ಕಂ' ದೇವರ ಸೂಕ್ತದಂತೆ ವಿಶ್ವಕರ್ಮನು ಕುರಿತು ವರ್ಣನೆಯೂ ಹೊಸದು. ವಿಶ್ವನಿರ್ಮಾಣ ಮತ್ತು ಸಂರಕ್ಷಣದ ಏಕಮೇವ ಅಧಿಕಾರಿ ಯಾರು, ಎಂಬ ವಿವಾದಗಳ ಪ್ರತಿಧ್ವನಿ ಇಂತಹ ಕೆಲವು ಸೂಕ್ತಗಳಲ್ಲಿ ಕೇಳಬರುತ್ತದೆ. ಇಂದ್ರನ ಅದ್ವಿತೀಯತ್ವದ ಕಾಲವು ಮುಗಿದು ಆ ಸ್ಥಳವನ್ನು ತಮ್ಮ ತಮ್ಮ ಇಷ್ಟದೇವರಿಗೆ ದೊರಕಿಸಿ ಕೊಡುವಲ್ಲಿ ಋಷಿವರ್ಗದಲ್ಲಿ ಸ್ಪರ್ಧೆ ನಡೆದಂತೆ ತೋರುತ್ತದೆ. ಇಂದ್ರ ಸಂಪ್ರದಾಯದಲ್ಲಿ ಈ ನೂತನ ಪಂಥದ ಪಕ್ಷಪಾತಿಗಳ ಸಂಖ್ಯೆ ಹೆಚ್ಚುತ್ತಾ ಹೋಗಿ ಯಜ್ಞಸಂಸ್ಥೆಯ ಪ್ರಭಾವವು ಕ್ಷೀಣವಾಗುತ್ತ ಹೋಗಿರಬೇಕೆಂದು ಮುಂದಿನ ಕಾಲದ ಘಟನೆಗಳಿಂದ ಅರ್ಥವಾಗುತ್ತದೆ.

ಋಗ್ವೇದ ಕಾಲದಲ್ಲಿ ಶಿಲ್ಪವಿದ್ಯೆ ಸಾಕಷ್ಟು ಉನ್ನತ ಸ್ಥಿತಿಯಲ್ಲಿ ಇತ್ತು. ಅಂದಿನ ವಿವಿಧ ಪ್ರಕಾರದ ಅಲಂಕಾರಗಳು, ಪಾತ್ರೆಗಳು, ನಿವಸನಗಳು, ಯಜ್ಞವೇದಿಕೆಯ ಪ್ರಕಾರಗಳು ಇವೆಲ್ಲವುಗಳ ರಚನೆ ತಜ್ಞರಿಂದಲ್ಲದೆ ಬೀಡಿಹೋಕರಿಂದ ಆಗದು. ದೇವತೆಗಳೂ ರಾಜರೂ ರಥಗಳಲ್ಲಿ ತಿರುಗುತ್ತಿದ್ದರು. ಯುದ್ಧದಲ್ಲಿ ಬಂಡಿಗಳು ಮೊದಲು ಬೇಕು. ಉಭಯ ಪಕ್ಷದವರ ರಥಕಾರರು ಆಯುಧ ಸಿದ್ಧಪಡಿಸುವವರು ಇರಲೇಬೇಕು. 'ರಥೇಭ್ಯೋ ರಥಕಾರೇಭ್ಯೋ ನಮಃ' ಎಂಬ ವಂದನೆಯ ಮಂತ್ರವುಂಟು.

ಈ ಮಂತ್ರವು ರುದ್ರಾಧ್ಯಾಯದಲ್ಲಿ ಬರುತ್ತದೆ. ಶೈವಸಂಪ್ರದಾಯಕ್ಕೆ ಸೇರಿದ ಜನವಿರಬೇಕೆಂದು ಎನಿಸುತ್ತದೆ. ಪಾಂಚಾಲರು ಇಂದು ವಿಶ್ವಕರ್ಮ ಬ್ರಾಹ್ಮಣರು ಎನಿಸುತ್ತಾರೆ ಎಂದು ಶಂಬಾ ಹೇಳುತ್ತಾರೆ.

ಅರ್ವಾಚೀನ 'ವಿಶ್ವಕರ್ಮ' ಬ್ರಾಹ್ಮಣರನ್ನು ಪಾಂಚಾಳರೆಂದು ಕರೆವ ವಾಡಿಕೆಯು, ಈ ಹಿನ್ನೆಲೆಯಲ್ಲಿ ವಿಶೇಷಾರ್ಥ ಪಡೆಯುತ್ತದೆ. ಉಪ್ಪಾರ, ಕಮ್ಮಾರ, ಬಡಿಗ, ಕಂಚುಗಾರ, ಸೊನ್ನಾರರೆಂಬ ಐದು ಶಾಖೆಗಳೆಲ್ಲ ಕೂಡಿ ಪಾಂಚಾಳರೆಂಬ ಹೆಸರು ಇರುವುದು ನಿಜ ಎಂದು ಶಂಬಾ ಹೇಳುತ್ತಾರೆ. ತ್ವಷ್ಟಾರನೆಂದರೆ ಬಡಿಗ. 'ತಕ್ಷ್: ಕೆತ್ತು–ಬಾಚು, (ನುಣಪಾದ ಆಕಾರ ನಿರ್ಮಿಸು) ಆಖ್ಯಾತ ಸಾಧಿತ ನಾಮ–ಸಂಕೇತ, ತಷ್ಟ್ರ ಮತ್ತು ತಕ್ಷಕ.

ಕರ್ಣಾಟದೊಳಗಿನ ಅಮೃತ ಶಿಲ್ಪಿ ಜಕ್ಕ(ಣ)>ಯಕ್ಷ ಈ ಶಬ್ದ–ಪ್ರತಿಮೆಯ ಮೂಲಕ ದೊರೆವ ಮೌಲಿಕ ಪ್ರಕಾಶವು, ಋಗ್ವೇದದ ತ್ವಷ್ಟಾರ=ವಿಶ್ವಕರ್ಮರ ಸ್ಪಷ್ಟೀಕರಣಕ್ಕೆ ಉಪಯುಕ್ತವಿದೆ. ಕೇನೋಪನಿಷತ್ತಿನ 'ಯಕ್ಷ'ವು ಋಗ್ವೇದ ತ್ವಷ್ಟಾರ–ವಿಶ್ವಕರ್ಮ ಬಗೆಯ ಅದೇ ಅರ್ಥಗರ್ಭದ ಇನ್ನೊಂದು ಸಂಕೇತ ಎಂಬುದನ್ನೂ ಮನಗಾಣಿಸಿ ಕೊಡುತ್ತಿದೆ. ಈ ಪಾಂಚಾಳ ಮನೆತನಗಳು 'ಕಾಳೀ' ಉಪಾಸಕರವು! 'ಯಕ್ಷ' ಪ್ರತಿಮೆಯೊಡನೆ, ಕೇನೋಪನಿಷತ್ತಿನಲ್ಲಿ ಉಮಾ ಹೈಮವತಿಯು ಬರುತ್ತಾಳೆ. ವೇದದಲ್ಲಿ ಬರುವ 'ರಥಕಾರ'ರ ಉಲ್ಲೇಖಗಳಲ್ಲಿ ಈ ವಿಶ್ವಕರ್ಮ ಪರಂಪರೆಯವರು ಕೆಲವರು ಒಳಗೊಳ್ಳುತ್ತಿರಬೇಕು. ಋಭುಗಳು ಇವರಿಗೆ ಹತ್ತಿರದವರಾಗಿ ಕಾಣುತ್ತಾರೆ. ಸರ್ಪವಿದ್ಯೆಗಾಗಿ, ಮಂತ್ರ ಔಷಧಿಗಳಲ್ಲಿ ತಜ್ಞರೆಂದು, ನಿಕ್ಷಿಪ್ತ ಧನವನ್ನು ಕಾಣುವ ಅಂಜನಾದಿಗಳನ್ನು ಬಲ್ಲವರೆಂದು, ಪ್ರತಿಮಾ ಶಿಲ್ಪಿಗಳೆಂದು ಇವರ ಮನೆತನಗಳು ಕಳೆದ ತಲೆಮಾರಿನವರೆಗೂ ಪ್ರಖ್ಯಾತವಿದ್ದುವು ಎಂದು ಶಂಬಾರವರ ಅಭಿಪ್ರಾಯ. ಬಡಿಗರು ಬಹಳ ಹಿಂದಿನಿಂದಲೂ ತಮ್ಮ ಕುಶಲಕರ್ಮಕ್ಕೆ ಹೆಸರಾದವರು. ಕರ್ನಾಟಕದ ಸಾಂಸ್ಕೃತಿಕ ಪರಂಪರೆಗೂ ಅವರಿಗೂ ನಿಕಟ ಸಂಬಂಧವಿದೆ. ಪ್ರಾಚೀನ ಕೆತ್ತನೆಯ ಕೆಲಸಗಳಲ್ಲಿ ಅವರ ಕೊಡುಗೆಯೂ ಅಪಾರವಾಗಿದೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 3 ಹಾಲುಮತ ದರ್ಶನ ಪುಟ. 159, 160, 225, ಸಂಪುಟ. 4 ಪುಟ. 225, 226.

ಬದ್ದವಣ

ಬದ್ದವಣವೆಂದರೆ ಮಂಗಳವಾದ ವಾದ್ಯಗಳು. ಮಂಗಳವಾದ್ಯಗಳನ್ನು ಶುಭ ಸಮಾರಂಭದಲ್ಲಿ ನುಡಿಸುತ್ತಾರೆ. ಶಂಖ; ಜಾಗಟೆ ಮೊದಲಾದವುಗಳು ಈ ಬಗೆಯವು. ವಾದ್ಯಗಳಲ್ಲಿ ಅಮಂಗಳಕರವಾದುದೂ ಇವೆಯೆಂಬುದು ಗಮನಾರ್ಹ.

ಬದ್ಧ ವೈರ

ಬದ್ಧ ವೈರವೆಂದರೆ ಬದ್ಧ ದ್ವೇಷ. ಇದು ಹವ್ಯಕ ಭಾಷೆಯಲ್ಲಿ ಚಾಲ್ತಿಯಲ್ಲಿದೆ. ಪೂರ್ವ ಸಂಬಂಧಿಯಾದ ದ್ವೇಷವನ್ನು ಬದ್ಧ ದ್ವೇಷವೆಂದು ಕರೆಯುತ್ತಾರೆ. ಈ ಮಾದರಿಯ ದ್ವೇಷವು ಮತ್ತೆ ಬದಲಾಗುವುದಿಲ್ಲ. ಬದಲಾಗದ ದ್ವೇಷ ಯಾವುದಿದೆಯೋ ಅದು ಯಾವ ಕಾಲಕ್ಕೂ ಬದಲಾಗುವುದಿಲ್ಲ. ಇದನ್ನೇ ಜೈನ ಕವಿಗಳು ಭವ ಸಂಬಂಧಿ ವೈರವೆಂದು ಕರೆದಿದ್ದಾರೆ. ಕೆಲವೊಮ್ಮೆ ಇದನ್ನೇ ಜನ್ಮಾಂತರದ ದ್ವೇಷವೆಂದೂ ಕರೆದಿರುವುದಿದೆ. ಬದ್ಧ ದ್ವೇಷಕ್ಕೆ ಕರುಣೆಯಿಲ್ಲ.

ಬನದಬ್ಬೆ

ಆಗಮಗಳಲ್ಲಿ ನೀಲಕಂಠೀ, ಕ್ಷೇಮಂಕರೀ, ಹರಸಿದ್ಧಿ ರುದ್ರಾಂಶ ದುರ್ಗ: ವನದುರ್ಗ, ಅಗ್ನಿದುರ್ಗಾ, ಜಯ ದುರ್ಗ(ಜಲದುರ್ಗ) ವಿಂಧ್ಯವಾಸಿನಿ, ರಿಪುಮಾರಿ ಎಂಬ ಹೆಸರುಗಳು ನವದುರ್ಗೆಯ ಹೆಸರುಗಳೆಂದು ಸಸ್ಯ ಪ್ರಪಂಚಕ್ಕೆ ಅಭಿಮಾನೀ ದೇವತೆಯೆನಿಸಿ ಶಾಕಂಬರಿಯಾಗಿ ಇರುತ್ತದೆಯೆಂದು ರಾಮಚಂದ್ರ ರಾವ್; ಎಸ್.ಕೆ. ಹೇಳುತ್ತಾರೆ. (1975 ಪುಟ.175) ವನದುರ್ಗೆಯು ಬನದಬ್ಬೆಯೆಂದಾಗಿರಬಹುದು.

ವಿವರಗಳಿಗೆ ನೋಡಿ: ಮಾತೃದೇವತೆ

ಬಲಿಸ್ಥಪನ

ಬಲಿಸ್ಥಪನಮೆಂಬುದು ಆ ಮೂರು ಸಂಜೆಯೊಳು ಜಗತ್ರಯ ಬಂಧುವಿಗೆ ಮಾಡುವ ಮಹಾ ಅಷ್ಟ ಆಹ್ನಿಕ." ಮೂರು ಸಂಜೆಯೆಂದರೆ ಮುಸ್ಸಂಜೆ. ಮುಸ್ಸಂಜೆಯಲ್ಲಿ ಬಲಿನೀಡುವುದು ವಾಮಾಚಾರದಲ್ಲಿ ಬರುತ್ತದೆ.

ಬಹುಅರ್ಥ

ವಾಚ್ಯಾರ್ಥವು ನೇರವಾಗಿ ಶಬ್ದದೊಡನೆ ಸಂಬಂಧ ಹೊಂದಿರುತ್ತದೆ. ವ್ಯಂಗ್ಯಾರ್ಥವು ವಾಚ್ಯಾರ್ಥದ ಸಾಮರ್ಥ್ಯದಿಂದ ಸೂಚಿತವಾಗುವ ಕಾರಣ ಶಬ್ದಕ್ಕೆ ಸಂಬಂಧಿಸುತ್ತದೆ. ಆ ವ್ಯಂಗ್ಯಾರ್ಥಕ್ಕೂ ಶಬ್ದದೊಡನೆ ಸಾಕ್ಷಾತ್ತಾದ ಸಂಬಂಧವೇ ಇದ್ದು ಬಿಟ್ಟಿದ್ದ ಪಕ್ಷದಲ್ಲಿ ಆಗ ಅದನ್ನು ಅರ್ಥಾಂತರವೆಂದು ಕರೆಯುವ ಕಾರಣವೇ ಇರುತ್ತಿರಲಿಲ್ಲ.

ವಿವರಗಳಿಗೆ ನೋಡಿ: ಕೆ.ಕೃಷ್ಣಮೂರ್ತಿ ೧೯೬೦ ಕನ್ನಡ ಧ್ವನ್ಯಾಲೋಕ ಮತ್ತು ಲೋಚನಸಾರ ಪುಟ.೧೯೫

ಬಹುಪತ್ನಿತ್ವ

ಇದು ಬಹುಪತ್ನಿತ್ವವನ್ನು ಕುರಿತ ಸೂಚನೆಯಾಗಿದೆ. ಬಹುಪತ್ನಿತ್ವದ ಸೂಚನೆಯು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಅನೇಕ ಕಡೆ ಬರುತ್ತದೆ. 'ಆಸ್ತಿಯ ಸ್ವರೂಪಕ್ಕೆ

ಅನುಗುಣವಾಗಿ ಬಹುಪತ್ನಿತ್ವದಲ್ಲಿ ಸಂಖ್ಯೆಯೂ ಕೂಡಾ ಬದಲಾಗುತ್ತದೆ. ಆಯಾಯಾ ವ್ಯಕ್ತಿಯ ಆಸ್ತಿಯ ವೈಭವಕ್ಕೆ ಅನುಗುಣವಾಗಿ ರೂಪುಗೊಳ್ಳುವ ಈ ರೀತಿಯ ಸಂಬಂಧಗಳು ನಿರ್ದಿಷ್ಟ ಸಂಖ್ಯಾಮಿತಿಯನ್ನು ಹೊಂದಿಲ್ಲ. ಈ ಅರ್ಥದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಬಹುಪತ್ನಿವಲ್ಲಭರಾದ ನಾಯಕರು ಸಿಗುವುದಕ್ಕೂ ಇವರು ಸಾಮಾನ್ಯವಾಗಿ ರಾಜರುಗಳು ಆಗಿರುವುದಕ್ಕೂ ನಿಕಟವಾದ ಸಂಬಂಧವಿದೆ.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಕಾಣಿಸುವ ಮತ್ತೊಂದು ವಿವಾಹ ಕ್ರಮವೆಂದರೆ, ಬಹುಪತ್ನಿತ್ವದ ಪದ್ಧತಿ. ಗಂಡಸರು ಆಚರಿಸುತ್ತಿದ್ದ ಬಹುಪತ್ನಿತ್ವವು ಮುಖ್ಯವಾಗಿ ಗುಲಾಮಗಿರಿಯ ಪ್ರತೀಕವೆಂದೂ, ಇದು ಮಾತೃ ಅಧಿಕಾರವನ್ನು ಅಳಿಸಿ ಹಾಕಿದ ನಂತರದ ಬಹುಮುಖ್ಯ ಬೆಳವಣಿಗೆಯೆಂದೂ ಏಂಗೆಲ್ಸ್ ಹೇಳುತ್ತಾನೆ. ಇದಕ್ಕೆ ಶಾಸ್ತ್ರದ ಸಮ್ಮತಿಯೂ ಇದೆ. ಈ ರೀತಿಯ ವಿವಾಹ ಕ್ರಮದಲ್ಲಿ ಹೆಣ್ಣಿಗೆ ಹೆಚ್ಚಿನ ಸ್ಥಾನಮಾನವು ಕಲ್ಪಿತವಾಗಿರುವುದಿಲ್ಲ.

"ಪ್ರಾಚೀನ ಕರ್ನಾಟಕದಲ್ಲಿ ಬಹುಪತ್ನಿತ್ವದ ಪದ್ಧತಿಯು ತುಂಬಾ ಪ್ರಬಲವಾಗಿದ್ದಂತೆ ತೋರುತ್ತದೆ. ರಾಜರಂತೂ ಯಾವಾಗಲೂ. ರಾಜರಂತೂ ಯಾವಾಗಲೂ 'ಬಹುವಲ್ಲಭ'ರು. ರಾಜನ ಪತ್ನಿಯರಲ್ಲಿ ಹಿರಿಯವಳೇ 'ಅಗ್ರಮಹಿಷಿ' ಅಥವಾ 'ಪಿರಿಯರಸಿ'. ಅವಳಿಗೂ ಉಳಿದ ರಾಣಿಯರಿಗೂ ಸಾಕಷ್ಟು ತಿಕ್ಕಾಟ ನಡೆಯುತ್ತಿದ್ದಿರಬೇಕು. ಏಕೆಂದರೆ ಅನೇಕ ಶಾಸನಗಳಲ್ಲಿ ಪಿರಿಯರಸಿಯರನ್ನು 'ಸವತಿಮದ ಭಂಜನೆ' ಎಂಬುದಾಗಿ ಕರೆದಿರುವುದುಂಟು. ಸೋಮೇಶ್ವರ ಎಂಬ ರಾಜನಿಗೆ ಒಟ್ಟು ನಾಲ್ವರು ಪತ್ನಿಯರು. ಧವಳಶಂಖ, ಉದ್ದಂಡ, ಪುಂಡರೀಕ, ಕನಕದಂಡ, ಚಾಮರಸ್ತೋಮಗಳು ಪಟ್ಟದ ರಾಣಿಯ ಚಿಹ್ನೆಗಳಾಗಿದ್ದುವು. (ಬಹುಶಃ ಉಳಿದವರಿಗೆ ಈ ಗೌರವಗಳಿದ್ದಿಲ್ಲವೆಂದು ಕಾಣುತ್ತದೆ.) ರಾಜರಲ್ಲದೆ ಉಳಿದವರಲ್ಲಿಯೂ ಬಹುಪತ್ನಿತ್ವದ ಸಂಪ್ರದಾಯವಿದ್ದಿತು. ನಾಗದೇವ ಎನ್ನುವವನು ಅತ್ತಿಮಬ್ಬೆ ಮತ್ತು ಗುಂಡಮಬ್ಬೆ ಎಂಬ ಸೋದರಿಯರನ್ನು ಮದುವೆ ಮಾಡಿಕೊಂಡಿದ್ದನು. ಬೇಂಟೆಯ ತಿಪ್ಪೆಯ ನಾಯಕ ಎನ್ನುವವನಿಗೆ ಸೋವೆ ನಾಯಕಿತಿ ಮತ್ತು ಮಾಚವೆ ನಾಯಕಿತಿ ಎಂಬ ಇಬ್ಬರು ಪತ್ನಿಯರಿದ್ದರು. ಎಡೆವರದೇವ ಎಂಬ ಸಾಮಂತನಿಗೆ ಮೂವರು ಪತ್ನಿಯರಿದ್ದರು. ಮಾಚಗಾವುಂಡ ಎನ್ನುವವನ ನಾಲ್ಕನೆಯ ಹೆಂಡತಿ ಮಾಚಗಾವುಂಡಿಗೆ ಕಾಳಗಾವುಂಡ ಮತ್ತು ಲೆಂಕರಾಯರೆಂಬ ಮಕ್ಕಳಿದ್ದಂತೆ ಒಂದು ಶಾಸನವು ತಿಳಿಸುತ್ತದೆ." (ಚಿದಾನಂದ ಮೂರ್ತಿ)

"ಸ್ವಜಾತಿಸ್ತ್ರೀಯಲ್ಲದೆ ಮದುವೆಯಾದ ಪರಜಾತಿಯ ಕಾಮಸ್ತ್ರೀಯಲ್ಲಿ ಸಂತತಿ, ಅಧರಚುಂಬನಮಸಹಶಯ್ಯೆ ಮಾಡದೆ ಕೇವಲ ಅಂಗಸಂಗ ಅನುಭವಿಸುವುದು ಒಳ್ಳೆಯದು. ಅದಕ್ಕೆ ಋತುಕಾಲ ಹೊರತು ಸುಖ ಅನುಭವಿಸುವುದು ಉಪಾಯವು. ಶಸ್ತ್ರಿಯೆ ಸಾಧ್ಯವಾದರೆ ತುಂಬಾ ಒಳ್ಳೆಯದು. ಕಾಮದಿಂದ ಮದುವೆಯಾದವಳಿಗೆ

ಸಂತತಿಯ ಆಶೆ ಇಲ್ಲದಿರುವುದು ಸ್ವಾಭಾವಿಕ. ಸಂತತಿಗಾಗಿ ಮದುವೆಯಾಗುವವಳು ವಿವಾಹಿತನನ್ನು ಕಾಮಲೀಲೆಯಿಂದ ಸಂತೋಷಪಡಿ(ಅಪೇಕ್ಷಿ)ಸದಿರುವುದು ಯಥಾರ್ಥ" ಎಂದು ಮನು ಹೇಳುತ್ತಾನೆ.

"ಬಹುಪತ್ನಿತ್ವವು ಕ್ರಿ.ಶ.೮ರಿಂದ ೧೪ನೆ ಶತಮಾನದವರೆಗೆ ಯಾವ ಅಡೆತಡೆಯೂ ಇಲ್ಲದೆ ಮುಂದುವರಿದುಕೊಂಡು ಬಂದಿರುವುದಂತೂ ಸ್ಪಷ್ಟ. ಪ್ರತಿಯೊಂದು ಅರಸು ಮನೆತನಕ್ಕೆ ಸಂಬಂಧಿಸಿದ ಶಾಸನಗಳಲ್ಲಿ ಈ ವಿವರಗಳು ಸಿಗುತ್ತವೆ. ಅಂದಿನ ಸಮಾಜ ಬಹುಪತ್ನಿತ್ವವನ್ನು ಒಪ್ಪಿಕೊಂಡಿತ್ತು. ಇದರರ್ಥ ಸಮಾಜದ ಎಲ್ಲ ವರ್ಗಗಳಲ್ಲಿಯೂ ಈ ವ್ಯವಸ್ಥೆ ಸಮಾನವಾಗಿತ್ತು ಎಂದಲ್ಲ. ಬಹುಪತ್ನಿತ್ವವನ್ನು ರಾಜಪ್ರಭುತ್ವದ ಒಂದು ಲಕ್ಷಣ ಎಂಬುದಾಗಿ ಪರಿಗಣಿಸಲಾಗಿತ್ತು. ಸಾಮಾನ್ಯ ಜನಸಮುದಾಯದಲ್ಲಿ ಈ ಪದ್ಧತಿ ಪ್ರಚಾರದಲ್ಲಿತ್ತು ಎನ್ನುವುದಕ್ಕೆ ಸಾಕಷ್ಟು ಆಧಾರಗಳು ಸಿಗುವುದಿಲ್ಲ. ಮನುಸ್ಮೃತಿಯಲ್ಲಿ ಈ ವ್ಯವಸ್ಥೆಯ ಕುರಿತು ಹೇಳಲಾಗಿದೆ. ಬ್ರಾಹ್ಮಣರು ನಾಲ್ಕು ಜನರನ್ನು, ಕ್ಷತ್ರಿಯ ಮೂರು ಜನರನ್ನು, ವೈಶ್ಯ ಇಬ್ಬರನ್ನು, ಶೂದ್ರ ಒಬ್ಬಳನ್ನು ಮದುವೆಯಾಗಬಹುದೆಂದು ಹೇಳಲಾಗಿದೆ. ಇದು ಬಹುಪತ್ನಿತ್ವ ವ್ಯವಸ್ಥೆ ವೈದಿಕ ಹಿನ್ನೆಲೆಯು ಚಾತುರ್ವರ್ಣ ಪದ್ಧತಿಯನ್ನು ಸಂಪೂರ್ಣವಾಗಿ ಅವಲಂಬಿಸಿಕೊಂಡಿರುವುದನ್ನು ಸೂಚಿಸುತ್ತದೆ. ಚಕ್ರವರ್ತಿಗಳು ಮತ್ತು ಇತರ ಸಾಮಂತ ಅರಸರು ಅನೇಕ ಮಂದಿ ರಾಣಿಯರನ್ನು ಹೊಂದಿರುತ್ತಿದ್ದರು. ಅದೊಂದು ಪ್ರತಿಷ್ಠೆಯ ವಿಷಯವೂ ಆಗಿತ್ತು." ಇದು ಮೋಹನಕೃಷ್ಣ ರೈಯವರ ಅಭಿಪ್ರಾಯ.

ವಿವರಗಳಿಗೆ ನೋಡಿ: ಏಂಗೆಲ್ಸ್ (ಮೂಲ) ೧೯೮೦ ಪುಟ. ೮೭
ತಿಪ್ಪೇರುದ್ರಸ್ವಾಮಿ. ಎಚ್ ೨೦೦೭ ಕರ್ಣಾಟಕ ಸಂಸ್ಕೃತಿ ಸಮೀಕ್ಷೆ ಪುಟ. ೨೧೭
ಡಾ. ಎಂ ಚಿದಾನಂದಮೂರ್ತಿ ೨೦೦೮ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ. ೪೬೩-೪೬೪
ವಿವಾಹಪುರಾಣ- ಕನ್ನಡ ಅತ್ಯಂತ ಪ್ರಾಚೀನ ಶಾಸನಸ್ಥ ಜಾನಪದಕೃತಿ ಪುಟ. ೩೧೬ (ಲೇಖನ)
ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೩-೧೯
ಕಪಾಡಿಯಾ.ಕೆ.ಎಂ(ಮೂಲ) ಮಹೇಶ್ವರಪ್ಪ(ಅನು)೧೯೭೮ ಭಾರತದಲ್ಲಿ ವಿವಾಹ ಮತ್ತು ಕುಟುಂಬ ಪುಟ. ೧೨೦-೧೪೬

ಬಹುಸಂಸ್ಕೃತಿ

ಒಂದು ಸಮಾಜದಲ್ಲಿ ಬೇರೆ ಬೇರೆ ಜನಾಂಗಳಿರುವುದನ್ನು ಬಹು ಸಂಸ್ಕೃತಿಯೆಂದು ಕರೆಯುತ್ತಾರೆ. ಜನಾಂಗಗಳು ಪ್ರಾದೇಶಿಕಸಂಸ್ಕೃತಿ, ಊಟದಲ್ಲಿ

ವಿವಿಧತೆ, ಸಂಗೀತ, ಕಲೆ, ಸಾಹಿತ್ಯ ಇವೆಲ್ಲವೂ ಭಿನ್ನ ಭಿನ್ನವಾಗಿದ್ದಾಗ ಬಹುಸಂಸ್ಕೃತಿಯು ಉಂಟಾಗುತ್ತದೆ. ಒಂದೇ ಸ್ಥಳದಲ್ಲಿ ವಾಸಮಾಡುತ್ತಿದ್ದರೂ, ಒಂದೇ ಭಾಷೆಯು ಇದ್ದರೂ ಕೂಡಾ ಅದರಲ್ಲಿ ವಿವಿಧತೆಯಿರುತ್ತದೆ. ಅನೇಕ ರೀತಿಯ ಸಾಂಸ್ಕೃತಿಕ ವೈವಿಧ್ಯಗಳಿದ್ದವು. ಅದು ಬಹು ಸಂಸ್ಕೃತಿಯಗುಣ.

ಬಳುವಳಿ

ತವರುಮನೆಯಿಂದ ಹೆಂಗಸರಿಗೆ ಕೊಡುವ ಉಡುಗೊರೆಗಳನ್ನು 'ಬಳುವಳಿ'ಯೆಂದು ಕರೆಯುತ್ತಾರೆ. ಇದು ಒಂದು ಸಂಪ್ರದಾಯ. ಇದಕ್ಕೆ 'ಬಾಳ ಬಳುವಳಿ' ಎಂತಲೂ ಕರೆಯುತ್ತಾರೆ.

ಇದು ಒಂದು ಸಂಪ್ರದಾಯ. ತವರು ಮನೆಯಿಂದ ಕೊಡುವುದನ್ನು ಬಳುವಳಿಯೆಂದು ಕರೆದರೂ ಅದು ಮೂಲತಃ ವಧುವಿನ ಸಂಪನ್ಮೂಲವೇ ಆಗಿರುತ್ತದೆ.ಅದನ್ನು ಮಾತ್ರ ಚರ ಸೊತ್ತು ಎಂದು ಪರಿಗಣಿಸುತ್ತಾರೆ.

(ನೋಡಿ: ಕನ್ಯಾಶುಲ್ಕ)

ಬಳ್ಳ

ಬಳ್ಳವೆಂದರೆ ಬತ್ತವನ್ನು ಅಳೆಯುವ ಸಾಧನ. ಕುಡುತೆ, ಸೇರು, ಬಳ್ಳಗಳು ಅಳತೆಯ ಪ್ರಮಾಣಗಳು. ಅಕ್ಕಿ ಆ ಕಾಲದಲ್ಲಿ ಆ ಪ್ರದೇಶಗಳ ಪ್ರಮುಖ ಆಹಾರ ಧಾನ್ಯವಾಗಿತ್ತು. ಪಾಲಿ ಗ್ರಂಥಗಳಲ್ಲಿ ಹಲವು ಬಗೆಯ ಭತ್ತಗಳು ಹಾಗೂ ಬತ್ತದ ನಾಟಿಗೆ ಸೂಕ್ತ ಶಬ್ದ ಬಳಕೆಯಾಗಿದೆ. ಬುದ್ಧನ ಕಾಲದಲ್ಲಿ ನಾಟಿ ಆರಂಭವಾಗಿರಬೇಕೆಂದು ತೋರುತ್ತದೆ. ಇದರಿಂದ ಬತ್ತದ ಉತ್ಪಾದನೆ ಅಪಾರವಾಗಿ ಹೆಚ್ಚಿತು. ಜೊತೆಗೆ ರೈತರು ಬಾರ್ಲಿ, ದ್ವಿದಳ ಧಾನ್ಯಗಳು, ಸಾಸಿವೆ, ನವಣೆ ಮುಂತಾದವು ಹತ್ತಿ ಹಾಗೂ ಕಬ್ಬುಗಳನ್ನು ಬೆಳೆಸುತ್ತಿದ್ದರು. ಅಲಹಾಬಾದ್ ಮತ್ತು ರಾಜಮಹಲ್‌ಗಳ ನಡುವಣ ಮೆಕ್ಕಲು ಮಣ್ಣಿನ ವಿಪುಲ ಫಲವತ್ತತೆ ಹಾಗೂ ನೇಗಿಲಿಗೆ ಕಬ್ಬಿಣದ ಗುಳ ಹೂಡಿದುದು ಇವೆರಡೂ ಕೂಡಿ ಕೃಷಿಯಲ್ಲಿ ಅಪಾರ ಅಭಿವೃದ್ಧಿ ಸಾಧ್ಯವಾಯಿತು ಎಂದು ಆರ್. ಎಸ್. ಶರ್ಮ ಹೇಳುತ್ತಾರೆ.

ವಿವರಗಳಿಗೆ ನೋಡಿ: ಆರ್. ಎಸ್. ಶರ್ಮ 2007 ಪ್ರಾಚೀನ ಭಾರತ ಪುಟ. 121

ಬಾಂಧವರು

ಮಾನಸೋಲ್ಲಾಸದಲ್ಲಿ ಬಾಂಧವರನ್ನು ತಂದೆಯ ಅಥವಾ ತಾಯಿಯ ವಂಶಕ್ಕೆ ಸೇರಿದವರು ಎಂದು ಗುರುತಿಸಲಾಗಿದೆ. ಕನ್ನಡದಲ್ಲಿ ನಾವು ರಕ್ತ ಸಂಬಂಧಿಗಳೂ ಎಂದೂ ಕರೆಯುತ್ತೇವೆ. ಹೊಕ್ಕು ಬಳಕೆಯವರು ಎಂದೂ ಕರೆಯುವುದಿದೆ. ಹಾಗೆಯೇ ಅದನ್ನು ನಾವು ಕುಲಕ್ಕೆ ಸೇರಿದವರು ಎಂದೂ ಕರೆಯುವುದಿದೆ. (ಮಾನಸೋಲ್ಲಾಸ_1–302).

ಬಾಂಧವ್ಯದಲ್ಲಿ ಅನೇಕ ವಿಧಗಳಿವೆ – ಕುಲ ಬಾಂಧವ್ಯ, ಜಾತಿ ಬಾಂಧವ್ಯ, ಕುಟುಂಬ ಬಾಂಧವ್ಯ, ಔದ್ಯೋಗಿಕ (ಕಸುಬು) ಬಾಂಧವ್ಯ, ರಕ್ತ ಬಾಂಧವ್ಯ ಇತ್ಯಾದಿ.

ಬಾಕು

ಕತ್ತಿಯ ಆಕಾರವನ್ನೇ ಹೋಲುವ ಈ ಗೇಣುದ್ದದ ಆಯುಧವು ಆರಂಭದ ವೀರಗಲ್ಲುಗಳಿಂದ ಹಿಡಿದು ವಿಜಯನಗರದವರೆಗಿನ ವೀರಗಲ್ಲುಗಳ ಶಿಲ್ಪದಲ್ಲಿ ನಿರೂಪಿತವಾಗಿದೆ. ಇದನ್ನು ವೀರರು ಸೊಂಟಕ್ಕೆ ಕಟ್ಟಿಕೊಳ್ಳುತ್ತಿದ್ದರು. ಇರಿಯಲು ಇದನ್ನು ಉಪಯೋಗಿಸುತ್ತಿದ್ದರು.

ಬಾಣ

ಅಂಬು ಎಂದರೆ ಬಾಣ; ನೀರು; ಒಣಗು ಎಂಬ ಅರ್ಥಗಳಿವೆ. ಸಂದರ್ಭಕ್ಕೆ ಅನುಸಾರವಾಗಿ ಅದನ್ನು ಅರ್ಥಮಾಡಿಕೊಳ್ಳಬೇಕು.

ಬಾಣಸಿಗರು

ಅಡಬಳನೆಂದು ಕರೆಯುತ್ತಿದ್ದರು. (ಕರ್ನಾಟಕ ಶಬ್ದಸಾರಂ ಪುಟ ೬೦)

ಬಾದುಬ್ಬೆ

ಬಾದುಬ್ಬೆ ಸಸ್ಯದೇವತೆ. ಜಾನಪದರು ಮಿಕ್ಕ ಮಾಂಸಾಹಾರಿ ದೇವತೆಗಳಾದ ಮಾರಿ ಮಸಣೆಯರಿಂದ ಬೇರೆಗೊಳಿಸಲು ಬಾಡು+ಉಂಬ+ಅಬ್ಬೆ=ಬಾಡುಂಬಬ್ಬೆ ಎಂದು ಈಕೆಯನ್ನು ಕರೆದಿರಬೇಕು ಎಂದು ಎಂ. ಎಂ. ಕಲಬುರ್ಗಿಯವರು ಹೇಳುತ್ತಾರೆ. ದೇವಿಹೊಸೂರ ಗ್ರಾಮದ ಬನಶಂಕರಿಯ ಶಾಸನ (ಕ್ರಿ. ಶ. ೧೧೧೯.) ಬನಶಂಕರಿಯನ್ನು ಮೊಳಚಿಯೆಂದು ಕರೆದಿದೆ. (S.II. VII 69. (ಕ್ರಿ. ಶ. ೧೦೬೩.) ೧೫೨ (ಕ್ರಿ. ಶ. ೧೧೧೯) (ವೇದವ್ರತ ವೈಶಂಪಾಯನ. ೧೯೮೪. ಯಜುರ್ವೇದ ಪು.೭೧)

ಬಾರಿ

ಆನೆಗಳನ್ನು ಹಿಡಿಯಲು ಕಟ್ಟಿದ ಕೋಟೆಯನ್ನು 'ಬಾರಿ'ಯೆಂದು ಕರೆಯುತ್ತಾರೆ. ಆನೆಗಳನ್ನು ಹಿಡಿಯಲು ಎರಡು ವಿಧಗಳಿವೆ: ಒಂದು ಖೆಡ್ಡಾ ರಚನೆ ಖೆಡ್ಡಾದಲ್ಲಿ ಗುಂಡಿಯನ್ನು ತೆಗೆದು ಅದರ ಮೇಲೆ ಮುಚ್ಚಿ ಯಾವುದಾದರೂ ಬೆಳೆಯನ್ನು ತೆಗೆಯುವುದು. ಇನ್ನೊಂದು ಕೋಟೆಯನ್ನು ಕಟ್ಟಿ ಅದರ ಮೂಲಕ ಆನೆಗಳನ್ನು ಹಿಡಿಯುವುದು.

ಬಾಲವದ್ದೆ

ಬಾಲವದ್ದೆಯೆಂದರೆ ಬಾಣಂತಿ. ಬಾಣಂತಿಯರಿಗೆ ವಿಶೇಷ ಶುಶ್ರೂಷೆ ಅಗತ್ಯ ಆದುದರಿಂದ ಬಾಣಂತಿಯರಿಗೆ ವಿಶೇಷ ಕೋಣೆಯು ಇರುತ್ತದೆ. ಇದನ್ನು

'ಸೂತಿಕಾಗೃಹ'ವೆಂದು ಕರೆಯುತ್ತಾರೆ. ಬಾಣಂತಿಯರು ಇರುವ ಜಾಗವು ಮೈಲಿಗೆಯೆಂದು ಅರ್ಥ.

ಬಾಲಪತಿ (ನಾ) ಹೆರಿಗೆಯಾಗಿ ಇನ್ನೂ ಆರೈಕೆಯನ್ನು ಹೊಂದುತ್ತಿರುವವಳು ಬಾಣಂತಿ ಎಂದಾಗಿರುವುದು ಗಮನಾರ್ಹ.

ವಿವರಗಳಿಗೆ ನೋಡಿ: ಸೂತಕ

ಬಾಲ್ಯ ವಿವಾಹ

ಐತಿಹಾಸಿಕವಾಗಿ ನೋಡಿದರೆ ವಿಜಯನಗರದ ಅರಸರ ಕಾಲದಲ್ಲಿ ಬಾಲ್ಯವಿವಾಹ ಪದ್ಧತಿಯು ಸಾಕಷ್ಟು ಪ್ರಚಲಿತವಾಗಿತ್ತು. ಲಿನ್ಸಕೋಟನ್ ಎಂಬ ವಿದೇಶಿ ಪ್ರವಾಸಿಗನು. 'ಈ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ಏಳನೇ ವರುಷದಲ್ಲಿ ಮದುವೆಯಾಗುತ್ತಿತ್ತು' ಎಂದು ದಾಖಲಿಸಿದ್ದಾನೆ. ಈ ರೀತಿಯ ವಿವಾಹ ಕ್ರಮದ ಮೇಲೆ ಬ್ರಾಹ್ಮಣ ಧರ್ಮದ ಪ್ರಭಾವ ಸಾಕಷ್ಟಿತ್ತು ಎಂದು ಇತಿಹಾಸಕಾರರು ಶತಮಾನದ ತರುವಾಯ 'ಕನ್ಯಾಶುಲ್ಕ'ದಂತಹ ಪಿಡುಗಿನಿಂದ ಮದುವೆಯು ಒಂದು ವ್ಯಾಪಾರ ಮಾದರಿಯಾಗಿ ರೂಪುಗೊಂಡಿತೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಬರಬರುತ್ತ ಜನರು ಹಣದಾಸೆಗೆ ಒಳಗಾಗಿ ಮದುವೆಯನ್ನು ಒಂದು ವ್ಯಾಪಾರ–ವ್ಯವಹಾರವನ್ನಾಗಿ ಮಾಡಿದರು. ಕ್ರಮೇಣ ಈ ಪದ್ಧತಿ ತೀವ್ರವಾಗಿ ಹಿಂದೂ ಸಂಸಾರಗಳ ಆರ್ಥಿಕ ಪ್ರಗತಿಯ ಮೇಲೆ ಪರಿಣಾಮವನ್ನುಂಟು ಮಾಡಿತು. ಸಾಮಾನ್ಯ ಜನರ ಮೇಲೆ ಇದರ ಪ್ರಭಾವ ಎಷ್ಟಿತ್ತೆಂಬುದನ್ನು ತಿಳಿಯಲು ಕಷ್ಟವಾದರೂ ಅನುಕೂಲಸ್ಥರು ಇಡೀ ಹಳ್ಳಿಯನ್ನೆ ಮದುವೆಯಲ್ಲಿ ಕನ್ಯಾಶುಲ್ಕವಾಗಿ ಕೊಡುವ ಪದ್ಧತಿ ಇತ್ತು.

ಎಳೆಯ ವಯಸ್ಸಿಗೆ ಹೆಣ್ಣಿಗೆ ಮದುವೆ ಮಾಡುವ ಕ್ರಮವು ವಿಜಯನಗರ ಅರಸರ ಕಾಲದಲ್ಲಿ ಹೆಣ್ಣು ಪ್ರಬಲವಾಗಿ ರೂಪುಗೊಂಡಿರಬಹುದೆಂದೂ ಮೇಲಿನ ಆಧಾರಗಳಿಂದ ತಿಳಿಯಬಹುದಾಗಿದೆ. ಕನ್ನಡ ಸಾಹಿತ್ಯದಲ್ಲಿ ವಿವಾಹ ಯೌವನದಲ್ಲಿ ನಡೆಯುತ್ತದೆ ಎನ್ನುವುದು ಹೆಚ್ಚು ವರ್ಣಿತವಾಗಿದೆ. ಕೆಲವೆಡೆಯಲ್ಲಿ ಬಾಲ್ಯದಲ್ಲಿ 'ವಿವಾಹ' ಎನ್ನುವುದು ಬಂದರೂ, ಕಾವ್ಯಗಳಲ್ಲಿ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯವಿಲ್ಲ.

1955ರಲ್ಲಿ ವರನ ವಯಸ್ಸು ಹದಿನೆಂಟಕ್ಕೂ, ವಧುವಿನ ವಯಸ್ಸು ಹದಿನೈದಕ್ಕೂ ನಿರ್ದಿಷ್ಟಪಡಿಸಲಾಯಿತು. 1978ರಲ್ಲಿ ವಿವಾಹದ ವಯಸ್ಸನ್ನು ಹೆಚ್ಚಿಸಲಾಯಿತು. ವಧುವಿನ ವಯಸ್ಸು ಹದಿನೈದರಿಂದ ಹದಿನೆಂಟಕ್ಕೇರಿತು.

ಸೋದರ ಸಂಬಂಧದಲ್ಲಿ ಮದುವೆಯೆನ್ನುವುದು ಕುಲಬಾಂಧವ್ಯದ ದೃಷ್ಟಿಯಿಂದ ಮುಖ್ಯ. ಈ ರೀತಿಯ ಸಂಬಂಧದ ಸಮಾಜಶಾಸ್ತ್ರೀಯ ವಿವರಣೆಗಳು ಬೇರೆ ಇವೆ. "Endogamy" ಮತ್ತು "Exogamy" ಎಂಬ ಎರಡು ರೀತಿಯ ವಿವಾಹ ಸಂಬಂಧಗಳನ್ನು ಸಮಾಜಶಾಸ್ತ್ರವು ಹೇಳುತ್ತದೆ. ಸೋದರ ಸಂಬಂಧವು Endogamy

ವರ್ಗಕ್ಕೆ ಸೇರಿರುವುದು. ಸೋದರಮಾವನ ಮಗನನ್ನೋ, ಮಗಳನ್ನೋ, ಮದುವೆಯಾಗುವುದಕ್ಕೆ ಸೋದರ ಸಂಬಂಧವೆಂದು ಕರೆಯುತ್ತಾರೆ. ಸಹ ಉದರವೆಂದರೆ ಒಂದೇ ಹೊಟ್ಟೆಯಲ್ಲಿ ಹುಟ್ಟಿದ ಎಂದರ್ಥ. ಸೋದರ ಸಂಬಂಧವೆಂದರೆ 'ಕುಟುಂಬದೊಳಗಣ ವಿವಾಹ'ವೆಂದು ಅರ್ಥ.

ಸೋದರ ಸಂಬಂಧವು ನಡೆಯುವುದಕ್ಕೆ ಕೆಲವು ಮುಖ್ಯ ಕಾರಣಗಳನ್ನು ಸಮಾಜಶಾಸ್ತ್ರಜ್ಞರು ಹೇಳುತ್ತಾರೆ. 1. ಆ ಪ್ರದೇಶದಲ್ಲಿ ಆ ಜನಾಂಗದ ಜನಗಳು ಕಡಿಮೆ ಇರುವುದು 2. ರಕ್ತ ಸಂಬಂಧದ ಕುರಿತಂತೆ ಕಾಳಜಿ 3. ಒಳ ಬಾಂಧವ್ಯದ ಲಕ್ಷಣ 4. ಜಾತಿಯ ಬಗೆಗಿನ ಪ್ರೀತಿ 5. ಆರ್ಥಿಕ ನೆಲೆಗಟ್ಟಿನ ದೃಷ್ಟಿ 6. ಅಹಂಕಾರದ (ಜಾತಿ) ಇನ್ನೊಂದು ರೂಪ 7. ಸಹಜ ದೃಷ್ಟಿ ಸೋದರ ಸಂಬಂಧದಲ್ಲಿ ರಕ್ತ ಸಂಬಂಧದ ಪರಿಕಲ್ಪನೆಯಿದೆ. ಇದು ಸಂಬಂಧವನ್ನು ಶಾಶ್ವತಗೊಳಿಸುವ ಇರಾದೆಯನ್ನು ಹೊಂದಿರುತ್ತದೆ. ವಿಜ್ಞಾನೇಶ್ವರನ ಅಭಿಪ್ರಾಯದಲ್ಲಿ ಇಬ್ಬರು ವ್ಯಕ್ತಿಗಳೊಳಗಿನ ಸಪಿಂಡ ಸಂಬಂಧವು ಅವರ ಶರೀರದ ಕಣಗಳಿಂದ ಉತ್ಪನ್ನವಾಗುತ್ತದೆ. ಅವನು ಈ ಸಂಬಂಧವನ್ನು ತಂದೆಯಿಂದ ಮೇಲ್ಮುಖವಾಗಿ ಏಳನೆಯ ಹಂತಕ್ಕೂ ತಾಯಿಯಿಂದ ಐದನೆಯ ಹಂತಕ್ಕೂ ನಿಗದಿ ಮಾಡಿದ್ದಾನೆ. ಮಿತಾಕ್ಷರದ ಅಭಿಪ್ರಾಯದಂತೆ ಸಪಿಂಡರು– ಒಬ್ಬ ಪುರುಷನ ಅಥವಾ ಅವನು ವರಿಸಬೇಕೆಂದಿರುವ ಹುಡುಗಿಯ ಒಬ್ಬನೇ ವಂಶಜನು ಅವನ ಅಥವಾ ಅವಳ ತಂದೆಯಿಂದ ಏಳನೇ ಹಂತದಿಂದ ಹೊರಗಿರದಿದ್ದರೆ ಅಥವಾ ಅವರಿಬ್ಬರ ಪೂರ್ವಜನು ಅವರ ತಾಯಿಯಿಂದ ಐದನೇ ಹಂತದಿಂದ ಹೊರಗಿರದಿದ್ದರೆ ಅವರು ಒಬ್ಬರನ್ನೊಬ್ಬರು ವಿವಾಹವಾಗುವಂತಿಲ್ಲ. ಸಪಿಂಡ ಸಂಬಂಧವೆಂದರೆ ಅರ್ಧರಕ್ತ ಸಂಬಂಧ ಏಕೋದರ ರಕ್ತ ಸಂಬಂಧ ಮತ್ತು ಪೂರ್ಣರಕ್ತ ಸಂಬಂಧ. ಎರಡನೆಯದಾಗಿ ಅನೌರಸ ಮತ್ತು ಔರಸ ರಕ್ತಸಂಬಂಧ ಮೂರನೆಯದಾಗಿ ದತ್ತಕದಿಂದ ಮತ್ತು ರಕ್ತದಿಂದ ಉಂಟಾದ ಸಂಬಂಧವನ್ನು ಒಳಗೊಳ್ಳುತ್ತದೆ.

ವಿವರಗಳಿಗೆ ನೋಡಿ: ಶ್ರೀ ಕಂಠಯ್ಯ ಕೆ. 1983 ವಿಜಯನಗರ ಕಾಲದ ಅರಸೊತ್ತಿಗೆಯಲ್ಲಿ ಜನಜೀವನ ಚಿತ್ರಣ ಪುಟ. 290

Vetuk Sylia(Ed) 1978 American Studies in the Anthropology P. 172

Jack Goody 1976 Production and Reproduction P. 3, 45

Khare.R. S. 1983 Normative Culture & Kinship P. 41

ಬಾಸಿಗ

ಬಾಸಿಗವೆಂದರೆ ತಲೆಗೆ ಧರಿಸುವ ಹೂಮಾಲೆ. ವಿಶೇಷ ಸಂದರ್ಭಗಳಲ್ಲಿ ಬಾಸಿಗವನ್ನು ಕಟ್ಟುತ್ತಾರೆ.

ಬಿಟ್ಟಿಬೆಸ

ದಾರಿಯುದ್ದಕ್ಕೂ ರಾಜನು ಧರ್ಮಕಾರ್ಯಗಳ್ನು ಮಾಡುತ್ತಿದ್ದನು. ಸೈನ್ಯದ ಚಲನೆಯು ಸುಗಮವಾಗಿರುವುದಕ್ಕಾಗಿ ದಾರಿಯನ್ನು ಸಿದ್ಧಪಡಿಸಲು ಸೈನ್ಯಕ್ಕಿಂತ ಮುಂಚೆಯೇ ಪಥ ತಂತ್ರಜ್ಞರು ತಮ್ಮ ಸಿಬ್ಬಂದಿಯೊಡನೆ ಹೋಗಿ ಆಯಾ ಗ್ರಾಮದ ಜನಗಳಿಂದ 'ಬಿಟ್ಟಿ' (ಸಂ. ವಿಷ್ಟಿ) ಕೆಲಸವನ್ನು ಮಾಡಿಸುತ್ತಿದ್ದರು. ಬಿಟ್ಟಿಯು ಮೂರು ತೆರನಾದುದು (ಇದೇ ಶಾಸನಗಳಲ್ಲಿ ಬರುವ ಮೂವಿಟ್ಟ'). 1) ಶೋಧನ ಕರ್ಮ–ಮಾರ್ಗಮಧ್ಯದ ರಸ್ತೆಯನ್ನು ಸರಿಪಡಿಸುವುದು; ಸೇತುವೆ, ನದಿ, ಬಾವಿ ಇತ್ಯಾದಿಗಳನ್ನು ಪರೀಕ್ಷಿಸುವುದು. 2) ವಹನ ಕರ್ಮ–ಆಯುಧ, ಕವಚ, ಧಾನ್ಯ ಮುಂತಾದುವನ್ನು ಹೊರುವುದು. 3) ಅಪನಯನ ಕರ್ಮ–ಪೆಟ್ಟುತಿಂದು ಕೆಳಕ್ಕೆ ಬಿದ್ದ ಸೈನಿಕರನ್ನು ಅವರ ಆಯುಧಗಳ ಸಮೇತ ಹೊರುವುದು.

ಇವುಗಳಲ್ಲಿ ಮೊದಲನೆಯ ಕರ್ಮವು ಸೇನೆ ಬರುವುದಕ್ಕಿಂತ ಮೊದಲೂ, ಎರಡನೆಯ ಕರ್ಮವು ಸೇನೆಯ ಜೊತೆಯಲ್ಲೂ, ಮೂರನೆಯ ಕರ್ಮವು ಯುದ್ಧರಂಗದಲ್ಲೂ ನಡೆಯಬೇಕಾದುವು. ಸೋತುಹೋದ ರಾಜ್ಯನ ಪ್ರಜೆಗಳಿಂದಲೂ ಬಲವಂತವಾಗಿ ಈ ಕೆಲಸಗಳನ್ನು ಮಾಡಿಸುತ್ತಿದ್ದರು.

ಜನರು ಈ ಕೆಲಸಗಳನ್ನು ಪ್ರತಿಫಲವಿಲ್ಲದೆ ಮಾಡಬೇಕಿದ್ದಿತು. ಬಿಟ್ಟಿಯು ಒಂದು ರೀತಿಯಲ್ಲಿ ಹಂಗಿನ ಕೆಲಸವೂ ಹೌದು. ಅನೇಕ ಅಗ್ರಹಾರಗಳಿಗೆ ಅನೇಕ ತೆರಿಗೆಗಳ ಜೊತೆಯಲ್ಲಿ "ವಿಷ್ಟಿ" ಯನ್ನೂ ತೆಗೆದು ಹಾಕಿರುವುದನ್ನು ನೋಡಿದರೆ. ಬಿಟ್ಟಿ ಎಂದರೆ ಜನರು ಬಹು ಭಯಪಡುತ್ತಿದ್ದರೆಂದು ಕಾಣುತ್ತದೆ. ತಾವು ಮಾಡುವ ಬಿಟ್ಟಿ ಕೆಲಸವು ರಾಜನಿಗೆ ತಿಳಿತಬೇಕು, ಅವನಿಂದ ಮಾನ್ಯತೆ ಪಡೆಯಬೇಕೆಂಬ ಭಾವನೆ ಹಲವರಿಗೆ ಬಂದಿರಲೂ ಸಾಧ್ಯ.

ಬಿಲ್ಲು

ಅಳತೆಯ ಒಂದು ಪ್ರಮಾಣ, ಸಾಮಾನ್ಯವಾಗಿ ನಾಲ್ಕು ಮೊಳ. ಬಿಲ್ಲು ಎಂದರೆ ಮೇಲೆ ನಾಲ್ಕು ಮೊಳ ಭೂಮಿಯ ಪರಿಕಲ್ಪನೆಯಾಗಿದೆ. ವಸಾಹತು ಅಳತೆಯ ಪರಿಮಾಣಗಳಲ್ಲಿ ಇದೂ ಒಂದು. ಬ್ರಿಟೀಶರು ಬಂದ ಮೇಲೆ ಭೂಮಿಯನ್ನು ಅಳೆಯುವ ಕ್ರಮವು ಬೇರೆಯಾದವು. (Sumith Sarkar)

ಇವುಗಳನ್ನು ಪ್ರಾಚೀನ ಕರ್ನಾಟಕದಲ್ಲಿ ಪದಾತಿಗಳು ಬಹಳವಾಗಿ ಉಪಯೋಗಿಸುತ್ತಿದ್ದರು. ಇವುಗಳ ಹೆಸರು ಮತ್ತು ಯುದ್ಧದಲ್ಲಿ ಇವುಗಳ ಉಪಯೋಗದ

ಬಗ್ಗೆ ಸಾಕಷ್ಟು ಮಾಹಿತಿ ಶಾಸನಗಳಿಂದ ಮತ್ತು ಕಾವ್ಯಗಳಿಂದ ತಿಳಿದುಬರುತ್ತದೆ. ಇವುಗಳನ್ನು ಯುದ್ಧದಲ್ಲಿ ಮಾತ್ರವಲ್ಲದೆ ಬೇಟೆಯಲ್ಲಿಯೂ ಸಹ ಉಪಯೋಗಿಸುತ್ತಿದ್ದರು.

ಬಾಣವು ಆದಷ್ಟು ಬಿರುಸಾಗಿ ಹೋಗಿ ಶತ್ರುವನ್ನು ತಾಗಲಿ ಎಂಬ ಉದ್ದೇಶದಿಂದ ಬಿಲ್ಲನ್ನು ವಿವಿಧ ರೀತಿಗಳಲ್ಲಿ ಬಾಗಿಸಿಕಟ್ಟುತ್ತಿದ್ದರು. ಬಾಣವು ಶತ್ರುವಿನ ದೇಹವನ್ನು ನಾಟುವುದೆಂದು ವಿವಿಧ ರೀತಿಯ ಮೊನಚಾದ ಭಾಗಗಳನ್ನು ಮಾಡುತ್ತಿದ್ದರು. ಅವುಗಳನ್ನು ಹಿಡಿದು ಬಿಲ್ಲಿಗೆ ಹೂಡುವುದಕ್ಕೆ ಅನುಕೂಲವಾಗಿ ಅವುಗಳ ವೇಗ ಹೆಚ್ಚಲೆಂಧು ಬಾಣಗಳ ಹಿಂಭಾಗದಲ್ಲಿ ಗರಿಗಳನ್ನು ಕಟ್ಟುತ್ತಿದ್ದರು. ಬಾಣಗಳನ್ನು ಇಟ್ಟುಕೊಳ್ಳಲು ಬೆನ್ನಿಗೆ ಬತ್ತಳಿಕೆಯನ್ನು ಕಟ್ಟಿಕೊಳ್ಳುತ್ತಿದ್ದರು. ಕೆಲವೊಮ್ಮೆ ಬಾಣಗಳನ್ನು ಬೇರೆಯವರು ಒದಗಿಸಿಕೊಡುತ್ತಿರುವಂತೆಯೂ ವೀರಗಲ್ಲಿನ ಶಿಲ್ಪವೊಂದರಲ್ಲಿ ಬಿಡಿಸಲಾಗಿದೆ. ಇವುಗಳ ಬಳಕೆ ಆರಂಭದ ಕಾಲದಿಂದ ಹಿಡಿದು ವಿಜಯನಗರದ ಕಾಲದವರೆಗೆ ಇತ್ತೆಂದು ವೀರಗಲ್ಲುಗಳ ಶಿಲ್ಪದ ಆಧಾರದ ಮೇಲೆ ಹೇಳಬಹುದು. (ಚಿದಾನಂದ ಮೂರ್ತಿ,ಶೇಷಶಾಸ್ತ್ರಿ)

ಬೀಡು

ಬೀಡಾರ, ಮನೆ, ವಾಸಸ್ಥಾನವೆನ್ನುವುದಕ್ಕೆ ಬೀಡು ಎಂದು ಕರೆಯುತ್ತಾರೆ. ಬೀಡು: ಬಿಡಾರ: ಗುಡಾರಗಳ ಅಂತರ್ಗತ ಸಂಬಂಧಗಳನ್ನು ಗಮನಿಸಬಹುದು.

ಬುಡಕಟ್ಟು

ಋಗ್ವೇದದಲ್ಲಿ 'ಜನ' ಎಂಬ ಪದವು 275 ಸಲ, ವಿಶ್ ಎಂಬ ಪದವು 170 ಸಲ ಬಂದರೆ ಬ್ರಾಹ್ಮಣ ಎಂಬ ಪದವು 15 ಸಲ ಮತ್ತು ಕ್ಷತ್ರಿಯ ಎಂಬ ಪದವು 9 ಸಲ ಬರುತ್ತವೆ. ಇದರಿಂದ ಆ ಸಮಾಜ ವರ್ಗ ವಿಭಜಿತವಾಗಿರಲಿಲ್ಲ, ಬದಲು ಆ ಪ್ರಕ್ರಿಯೆಯ ಭ್ರೂಣಾವಸ್ಥೆಯಲ್ಲೇ ಇತ್ತು ಎನ್ನಬಹುದು. ಮೂಲತಃ ಅದರ ಬುಡಕಟ್ಟು ಲಕ್ಷಣ ಇನ್ನೂ ಉಳಿದಿತ್ತು.

'ದಸ್' ಎಂಬ ಧಾತುಸಾಧಿತ ದಾಸ ಶಬ್ದವೂ ಬಲ್ಬೂಥ, ತರುಕ್ಷ ಮುಂತಾದ ದಾಸ ನಾಯಕರ ಸ್ತುತಿಯೂ ದಾಸರು ಉದಾರ ದಾನಿಗಳಾಗಿದ್ದರೆಂದು ಹಾಗೂ ಹೊಸ ಸಮಾಜದಲ್ಲಿ ಉಚ್ಚಸ್ತರದಲ್ಲಿದ್ದರೆಂದೂ ಸೂಚಿಸುತ್ತದೆ. ದಾಸರೆಂದರೆ ಯಾರು? ಇವರು ದಸ್ಯುಗಳಿಂದ ಭಿನ್ನರಲ್ಲವೆಂಬ ತಪ್ಪು ತಿಳುವಳಿಕೆ ಇದೆ. ದಸ್ಯು–ಹತ್ಯೆ ಇದ್ದಂತೆ ದಾಸ–ಹತ್ಯೆ ಇಲ್ಲ. ಆರ್ಯರ ಬುಡಕಟ್ಟುಗಳ ಒಳಜಗಳಗಳಲ್ಲಿ ದಾಸರು ಅವರೊಂದಿಗೆ ಇದ್ದಾರೆ. ದಸ್ಯುಗಳನ್ನೆಂದಂತೆ ದಾಸರನ್ನು ಅಪವ್ರತ, ಅನ್ಯವ್ರತ ಎಂದಿಲ್ಲ; ಆದರೆ, 'ದಾಸವಿಶಃ' ಎಂಬ ಪ್ರಸ್ತಾಪವಿದೆ. ಮೇಲಾಗಿ ಪ್ರಾಚೀನ ಇರಾನಿನ 'ದಾಹೆ' ಎಂಬ ಶಿಥಿಯನ್ ಬುಡಕಟ್ಟಿನವರೊಡನೆ ಇವರನ್ನು ಹೋಲಿಸಲಾಗಿದೆ. ದಸ್ಯುಗಳು ಆರ್ಯರಿಂದ ಪೂರ್ತಿ ಪ್ರತ್ಯೇಕವಾಗಿರುವಂತೆ ದಾಸರು ಪ್ರತ್ಯೇಕವಲ್ಲ. ಅಲ್ಲದೆ,

ದಸ್ಯುಗಳನ್ನು ಸೂಚಿಸುವಂತಹ ಬೇರಾವ ಇಂಡೋ-ಯೂರೋಪಿಯನ್ ಪದವೂ ಇಲ್ಲ. ಶಬ್ದಸಾಮ್ಯವಿರುವ ಅವೆಸ್ತದ 'ದಹ್ಯು'ಗೆ ವಾಸಸ್ಥಳವೆಂದರ್ಥ. ತದ್ವಿರುದ್ಧವಾಗಿ 'ದಾಸ' ಪದವು ಮನುಷ್ಯ ವಾಚಕವಾಗಿದೆ. ಇದೇ ಅರ್ಥದಲ್ಲಿ ಹಲವು ಭಾಷೆಗಳಿಂದ 'ದಾಸ' ಪದಕ್ಕೆ ಸಮಾನಾರ್ಥಕ ಪದಗಳು ಲಭ್ಯವಿವೆ. ಗ್ರೀಕ್‌ನಲ್ಲಿ ದೂಲೋಸ್ ಎಂದಿದ್ದದ್ದು ಮೈಸೇನಿಯಯನ್‌ನಲ್ಲಿ 'ದೊ ಎರೋ' ಎಂದಾಗಿದೆ ಇರಾನಿನಲ್ಲಿ 'ದಹ' ಎಂಬ ಪದಪ್ರಯೋಗವಾಗಿದೆ. ಇಂಡೋ-ಯುರೋಪಿಯನ್‌ನಲ್ಲಿ ಇದ್ದಿರಬಹುದಾದ 'ದೋಸ್' ಎಂಬ ಮೂಲ ರೂಪ ಇದರಿಂದ ಸೂಚಿತವಾಗುತ್ತದೆ. ಎಚ್. ಡಬ್ಲ್ಯು. ಬೈಲಿ 'ದಾಸ' ಎನ್ನುವುದು ಒಂದು ಗುಂಪಲ್ಲವೆಂದೂ, ಆರ್ಯೇತರ ಸಾಮಾನ್ಯ ಪಂಗಡಗಳನೇಕಕ್ಕೆ ಆ ಹೆಸರೆಂದೂ ಪ್ರಾಚೀನ ಪರ್ಶಿಯನ್‌ನ ಆಧಾರದಿಂದ ಹೇಳುತ್ತಾನೆ. ಆದರೆ ಒಂದಂಶವನ್ನು ಗಮನಿಸಬೇಕು: ಅದೇನೆಂದರೆ, 'ದಾಸ' ಶಬ್ದವು ಋಗ್ವೇದದಲ್ಲಿ ಆರ್ಯರ ಹಾಗೂ ಅವರ ಬೆಂಬಲಿಗರ ವಿರೋಧಿಗಳು ಎಂಬರ್ಥದಲ್ಲಿ ಪ್ರಯೋಗವಾಗಿದೆ. 'ದಸ್' ಎಂಬ ಧಾತುವಿನಿಂದ 'ದಾಸ' ಶಬ್ದದ ವ್ಯುತ್ಪತ್ತಿಯನ್ನು ಹೇಳಿದಾಗ ಅದಕ್ಕೆ 'ಕ್ರೂರವಾಗಿ ನಡೆಸಿಕೊಳ್ಳುವುದು' ಎಂಬರ್ಥ ಬರುತ್ತದೆ. ದಾಸರೆಂದು ಕರೆಸಿಕೊಂಡವರೆಲ್ಲಾ ಒಂದು ನಿರ್ದಿಷ್ಟ ಜನಾಂಗದವರಾಗಿಲ್ಲದೆ ಬೇರೆ ಬೇರೆ ಜನಾಂಗಗಳಿಗೆ ಸೇರಿದ್ದಿರಬಹುದು; ಆದರೆ ಅವರನ್ನೆಲ್ಲಾ ಒಟ್ಟಾಗಿ ಒಂದು ಗುಂಪಿನವರೆಂದು ಋಗ್ವೇದದ ಕಾಲದಲ್ಲಿ ಪರಿಗಣಿಸಲಾಗಿದ್ದಿತೆಂಬುದು ನಿಸ್ಸಂಶಯ. ಇರಾನಿನಲ್ಲೂ 'ದಹ' ಎಂಬ ಜನಾಂಗದವರು ಇದ್ದರು; ಪ್ರಾಚೀನ ಪರ್ಷಿಯನ್ ಭಾಷೆಯಲ್ಲಿ ಅವರನ್ನು 'ದಹಾ' ಎಂದು ಕರೆಯುತ್ತಿದ್ದರೆಂಬುದು ಝರ್ಸಸ್‌ನ ಒಂದು ಶಾಸನದಿಂದ ತಿಳಿದುಬರುತ್ತದೆ. ಪ್ರಾಚೀನ ಭಾರತದಲ್ಲಿ 'ದಾಸ' ಪದವು ನಿಂದಾರ್ಥದಲ್ಲಿ ಬಳಕೆಯಾದದ್ದು ಸಾಕಷ್ಟು ನಂತರದ ಕಾಲದಲ್ಲೇ ಎಂಬ ಊಹೆಗೆ ಆಧಾರವಿದೆ. ದಸ್ಯು, ದಸ್;ದಾಸ ಇವೆಲ್ಲಾ ಹತ್ತಿರದ ಪದಗಳು. ದಸ್‌ನಿಂದ ದಾಸ್ಯವು ಬಂದಿದೆ. ಆದರೆ ಗಮನಿಸಬೇಕಾದ ಅಂಶವೆಂದರೆ –ದಾಸತ್ವ ಯಜಮಾನಿಕೆಯನ್ನು ಒಂದು ಹಂತದಲ್ಲಿ ಒಪ್ಪಿಕೊಳ್ಳುತ್ತದೆ ಎಂದು ಆರ್.ಎಸ್. ಶರ್ಮ ಹೇಳುತ್ತಾರೆ.

ನಾಡವರು, ಬಂಟರು, ಒಕ್ಕಲರು, ಕುಡುವರು, ರೆಡ್ಡಿಗಳು, ಗಂಗಡಿಕಾರರು, ಗೌಡರು, ಕ್ಷತ್ರಿಯರು, ಬ್ರಹ್ಮಕ್ಷತ್ರಿಯರು, ಎಂಬೀ ಬಗೆಯ ಭೇದಾಭೇದಗಳು ಬೆಳೆದುದುಂಟು. ಆದರೆ, ಮೊದಲಲ್ಲಿ ಇವೆಲ್ಲ ಜನಗಳು ಒಂದೇ ಬುಡಕಟ್ಟಿನವರೆಂದು ಸ್ವಲ್ಪ ಸೂಕ್ಷ್ಮ ನಿರೀಕ್ಷಣೆಯಿಂದ ಕಂಡುಕೊಳ್ಳಬಹುದಾಗಿದೆ. ಇದು ಶಂಬಾರವರ ಅಭಿಪ್ರಾಯ. ಬುಡಕಟ್ಟು ಜನರನ್ನು ಬ್ರಿಟೀಶರು ಕ್ರಿಮಿನಲ್ ಟ್ರೈಬ್ ಎಂದು ಕರೆದಿರುವುದು ಇಲ್ಲಿ ಉಲ್ಲೇಖನೀಯ.ಬ್ರಿಟೀಶರ ನಾಗರಿಕ ಸಂಹಿತೆಯ ಪ್ರಕಾರ ಬುಡಕಟ್ಟು ಜನರು ಅಪರಾಧಿಗಳಾಗಿದ್ದರು.

ಈ ಹಿನ್ನೆಲೆಯಿಂದ ಠಕ್ಕನೊಬ್ಬನ ಆತ್ಮಚರಿತೆಯು ಗಮನಾರ್ಹ.

ವಿವರಗಳಿಗೆ ನೋಡಿ: ಆರ್.ಎಸ್. ಶರ್ಮ 2004 ಪ್ರಾಚೀನ ಭಾರತದಲ್ಲಿ ಶೂದ್ರರು ಶಂಬಾ ಜೋಶಿ 1999 ಸಂಪುಟ. 2 ಪುಟ. 63

ಬೆಚ್ಚುನೀರ್

ಬೆಚ್ಚು ನೀರು ಎಂದರೆ ಹೆದರಿಕೆ ಹೋಗುವುದಕ್ಕಾಗಿ ಎರಚುವ ನೀರು. ಬೆಚ್ಚುನೀರೆಂದರೆ, ಮಕ್ಕಳ ಮೇಲೆ ಪರಿಣಮಿಸಬಹುದಾದ ಲೋಕದ ದೃಷ್ಟಿಬಾಧೆ ಪಿಶಾಚಿಪೀಡೆ ವಚನದೋಷಗಳನ್ನು ಬೆಚ್ಚಿಸಿ ಹೋಗಾಡಿಸಲೆಂದು ಪರಂಪರಾಗತ ವಿಶ್ವಾಸದಿಂದ ಎರಚುವ ಅದೊಂದು ಮಂತ್ರಪೂರಿತವಾದ ಬೇಳಂಬದ ನೀರು.

ವಿವರಗಳಿಗೆ ನೋಡಿ: ಮುಳಿಯ ತಿಮ್ಮಪ್ಪಯ್ಯ 2006 ನಾಡೋಜ ಪಂಪ ಪುಟ. 41.

ಬೆಲೆವೆಣ್

ಹರಿತವಿಲ್ಲದ ಕತ್ತಿ (ಕರೆವಾಳ್) ಕಡುಪಿಲ್ಲದ ಕುದುರೆ ಮತ್ತು ಸೌಂದರ್ಯವಿಲ್ಲದ ಬೆಲೆವಣ್ (ಸೂಳೆ) ಇವುಗಳಿಂದ ಯಾವ ಪ್ರಯೋಜನವೂ ಇಲ್ಲ. ಸುರತ ಸುಖಕೊಟ್ಟುದಕ್ಕೆ ಬೆಲೆಯನ್ನು ಕೇಳುವವಳು 'ಬೆಲೆವೆಣ್'. ಆಧುನಿಕವಾಗಿ ಇವರನ್ನು ಲೈಂಗಿಕಕಾರ್ಯ ಕರ್ತೆಯರು (Sex workers) ಎಂದು ಕರೆಯುತ್ತಾರೆ.

ಋಗ್ವೇದದಲ್ಲಿ ಇದಕ್ಕಿಂತ ಭಿನ್ನವಾದಂತಹ ವೇಶ್ಯಾವೃತ್ತಿಯ ಅಸ್ಪಷ್ಟ ಕುರುಹುಗಳನ್ನು ನೋಡಬಹುದು. ಬಹುಶಃ ಅದು, ಆರ್ಯಪೂರ್ವ ಮಾತೃದೇವತಾ ಪಂಥಗಳಿಗಿಂತಲೂ ಹೆಚ್ಚಾಗಿ ಆರ್ಯರ ಸಾಮುದಾಯಿಕ ವಿವಾಹದ ಕುರುಹುಗಳಿದ್ದಿರಬಹುದು. ಹೀಗೆಂದ ಮಾತ್ರಕ್ಕೆ ಆ ಎರಡು ಪಂಥಗಳ ನಡುವೆ ಸಂಪರ್ಕವೇ ಇರಲಿಲ್ಲ ಎಂದೇನು ಆಗಬೇಕಾಗಿಲ್ಲ. ಈ ಬಗ್ಗೆ ಋಗ್ವೇದದಲ್ಲಿ (1–167–4) ಒಂದು ನಿರ್ದಿಷ್ಟ ಉದಾಹರಣೆ ದೊರಕುತ್ತದೆ. ರೋದಸೀ ಎಂಬ ದೇವತೆಯು ಮರುತ್‌ಗಳೆಲ್ಲರಿಗೂ ಪತ್ನಿ. ಅವಳಿಗೆ ಸಾಧಾರಣೀ ಎಂಬ ಹೆಸರಿತ್ತು. (ಜೊತೆಗೆ, ಯವ್ಯಾ ಎಂಬ ಹೆಸರೂ ಇತ್ತು. ಅಂದರೆ ಬಹುಶಃ ಫಲವತಿ ಎಂದಿರಬಹುದೇ? ಅದರ ಅರ್ಥ ಅಗ್ರಾಹ್ಯವಾಗಿದೆ) ಅಥವಾ ಒಂದು ತೆರನಾದ ವೇಶ್ಯಾವೃತ್ತಿಯನ್ನು ಸೂಚಿಸುತ್ತದೆಯೋ ಎಂಬುದು ಸ್ಪಷ್ಟವಿಲ್ಲ. ಬೇರೊಂದು ಕಡೆಯಲ್ಲಿ ರೋದಸಿಯನ್ನು (ತಪ್ಪು ಉಚ್ಚಾರದಿಂದಾಗಿ) ದ್ಯಾವ–ಪೃಥ್ವಿ ಜೊಡಿಯೊಂದಿಗೆ ಸಮೀಕರಿಸಲಾಗಿದೆ. ಇದರಿಂದ ಸಮಸ್ಯೆ ಮತ್ತಷ್ಟು ಬಿಗಡಾಯಿಸಿದೆ. ಏಕೆಂದರೆ ಇಲ್ಲಿ ಒಬ್ಬರಲ್ಲ ಇಬ್ಬರು ದೇವತೆಯರಿದ್ದಾರೆ ಎಂದಾಗುತ್ತದೆ. ಅಶ್ವಿನಿ ದೇವತೆಗಳು ಸೋಮನೊಂದಿಗೆ ಸೂರ್ಯಳ ಮದುವೆಯನ್ನು ಮಾಡುವ ಮಧ್ಯಸ್ತಿಕೆ ವಹಿಸಿಕೊಳ್ಳುತ್ತಾರೆ (10. 85: 8–9 ರ ಪ್ರಕಾರ ಇಬು ಮೂಲದಲ್ಲಿ ಚಂದ್ರ ದೇವನೊಂದಿಗೆ ಸೂರ್ಯದೇವಿಯ ಮದುವೆ). ಹೀಗೆ ವಿವಾಹದ ಮಧ್ಯಸ್ತಿಕೆಯನ್ನು ವಹಿಸಿಕೊಳ್ಳುವ ಮುಲಕ ಅಶ್ವಿನಿದೇವತೆಯರು ಸಂಬಂಧದ

ದೃಷ್ಟಿಯಿಂದ ಅವಳಿಗೆ ಸಹೋದರರಾಗುತ್ತಾರೆ. ಆದರೆ ಋಗ್ವೇದದ ಇನ್ನೊಂದು ಸೂಕ್ತದ ಪ್ರಕಾರ (4. 43.6) ಅವರು ಅವಳ ಪತಿಯರು. ಇದು ಕೂಡ ಹಿಂದಿನ ಸಾಮುದಾಯಿಕ ವಿವಾಹ ಪದ್ಧತಿಯ ಪ್ರಕಾರ ಅಸಮಂಜಸ ಎಂದೆನಿಸಿಕೊಳ್ಳುವುದಿಲ್ಲ. ನಂತರದ ಸಂಪ್ರದಾಯದಲ್ಲಿ ಸೂರ್ಯಳನ್ನು ಉಷಸ್ ಹಾಗೂ ಊರ್ವಶಿಯೊಂದಿಗೆ ಸಮೀಕರಿಸುವುದನ್ನು ಈಗಾಗಲೇ ಗಮನಿಸಿದ್ದೇವೆ, ನಂತರದ ಸೂಕ್ತವು ಸೂರ್ಯಳ ಮದುವೆಯನ್ನು ಪ್ರಚಲಿತದಲ್ಲಿರುವ ವಿವಾಹ ವಿಧಿಯನ್ನಾಗಿ ಮಾರ್ಪಡಿಸಿದೆ. ಮಾನವ ದಂಪತಿಗಳು ದೇವ ದಂಪತಿಗಳ ಪಾತ್ರ ಧರಿಸಿದಾಗ ಈ ರೀತಿ ಆಗುತ್ತದೆ. ಮದುವೆಯ ನಿರ್ಣಾಯಕ ಘಟ್ಟದಲ್ಲಿ ವರನು ತನ್ನ ಹೆಂಡತಿಯ ಕೈಯ್ಯನ್ನು ಹಿಡಿದುಕೊಳ್ಳುತ್ತಾನೆ (10. 85–36), ಆದರೆ ಅದರ ಮುಂದಿನ ಋಕ್ಕಿನಲ್ಲಿ ವಧುವನ್ನು ಹಲವು ಮದಿ ಪುರುಷರ ವೀರ್ಯವನ್ನು (ಬೀಜವನ್ನು) ಧರಿಸುವಳು ಎಂದು ಸಂಬೋಧಿಸಲಾಗಿದೆ; "ಯಸ್ಯಾಂ ಬೀಜಂ ಮನುಷ್ಯಾ ವಪಂತಿ". ಬಹುಶಃ ತೀರಾ ಪುರಾತನ ಕಾಲದಲ್ಲಿ, ಹೆಂಗಸೊಬ್ಬಳು ಯಾರನ್ನಾದರೂ ಮದುವೆಯಾದಳೆಂದರೆ, ಆಕೆ ಆತನ ಸಹೋದರರಿಗೆ ಅಥವಾ ಕುಲಬಾಂಧವರಿಗೂ ಪತ್ನಿಯಾಗುತ್ತಿದ್ದಂತಹ ಪದ್ಧತಿ ಇದ್ದಿರಲೇಬೇಕು. ಇಲ್ಲವಾದಲ್ಲಿ ಆಕೆಗೆ ಬಳಸಿರುವ ಇಂಥ ಸಾರ್ವತ್ರಿಕ ಸಂಬೋಧನೆಯು ವಿಲಕ್ಷಣ ಎನಿಸಿಕೊಳ್ಳುತ್ತದೆ.

ಋಗ್ವೇದದ 'ವಿಷ್ಯಾ ಇವ ವ್ರಾ ಅನಸ್ವಂತಃ, (1.126.5.) ಅನ್ನುವುದನ್ನು ಗೆಲ್ಡನರನು ಚೆನ್ನಾಗಿಯೇ ಅನುವಾದಿಸಿದ್ದಾನೆ ಎನ್ನಿಸುತ್ತದೆ. ಏಕೆಂದರೆ 'ವಿಷ್ಯಾ' ಎನ್ನುವುದು ಸ್ತ್ರೀಲಿಂಗ ಬಹುವಾಚಕ ಪದ. ಅದನ್ನು ವೇಶ್ಯೆ ಎಂದು ಅನುವಾದಿಸುವುದು ಈ ಸಂದರ್ಭದಲ್ಲಿ ತೀರಾ ಒರಟಾಗಿ ತೋರುತ್ತದೆ. ಅವರು, ಸಾಮೂಹಿಕ ವಿವಾಹ ಪದ್ಧತಿಯ ಪ್ರಕಾರ ಇಡೀ ಅಲೇಮಾರಿ ಬುಡಕಟ್ಟಿಗೇ ಪತ್ನಿಯಾಗಿದ್ದವರು. ಹಾಗೂ ಅವರು ಪ್ರಯಾಣ ಮಾಡುತ್ತಿದ್ದ ಎತ್ತಿನ ಗಾಡಿಗಳು ಕೇವಲ ಸಾಗಾಣಿಕೆಯ ಸಾಧನವಾಗಿದ್ದಿರಬಹುದು. ಅದಕ್ಕೂ ಉಷಸ್ಸಿನ ವಾಹನಕ್ಕೂ ಸಂಬಂಧವಿರಬೇಕೆಂದೇನಿಲ್ಲ. ಸಾಯಣನು ವ್ರಾ ಮತ್ತು ಉಷಸ್ ಇವುಗಳನ್ನು ಸಮಾನಾರ್ಥಕ ಪದಗಳಾಗಿಯೇ ಎರಡು ಕಡೆ ಬಳಸಿದ್ದಾನೆ. 'ವಿಶ್ಯಾ' ಎನ್ನುವುದು ಒಂದು ಮನೆಯಲ್ಲಿನ ಎಲ್ಲಾ ಗಂಡಸರಿಗೂ ಸೇರಿದಂಥ ಹೆಂಗಸನ್ನು ಸೂಚಿಸುತ್ತದೆ. ಈ 'ವಿಶ್ಯಾ' ಎಂಬ ಪದ ಎರಡಕ್ಕೂ ಮೂಲ ಪದ ಒಂದೇ ಎಂದು ಕಾಣುತ್ತದೆ. 'ಗಣಿಕಾ' ಎಂಬುದಂತೂ ಸ್ಪಷ್ಟವಾಗಿ 'ಗಣಪತ್ನಿಯರು' ಎನ್ನುವುದರಿಂದ ಹುಟ್ಟಿಕೊಂಡಿದೆ. ಸಾಕಷ್ಟು ಅಭಿವೃದ್ಧಿಹೊಂದಿದ, ಆದರೆ ಆದಿಮ ಆಚರಣೆಗಳನ್ನು ಇನ್ನೂ ಉಳಿಸಿಕೊಂಡಿರುವಂಥ ಎಷ್ಟೋ ಸಮಾಜದಲ್ಲಿ ಸಾಮೂಹಿಕ ವಿವಾಹ ರದ್ದಾಗಿದ್ದರ ಪರಿಣಾಮವಾಗಿ ವೇಶ್ಯಾವೃತ್ತಿ ಹುಟ್ಟಿಕೊಂಡಿರುವುದನ್ನು ಗಮನಿಸಬಹುದು. ಇವೆರಡೂ ಕೂಡ ಹೊಸ ಆಸ್ತಿ ವಿಧಾನದಿಂದ ಉಂಟಾದ ಪರಿಣಾಮಗಳೇ ಆಗಿವೆ. ಇವೆಲ್ಲಾ,

ಅಲ್ಲಿಯವರೆಗೂ ಇದ್ದಂಥ ಸಾಮೂಹಿಕ ಉತ್ಪಾದನಾ ವಿಧಾನದ ಸ್ಥಾನದಲ್ಲಿ ಪಿತೃಪ್ರಧಾನ ಖಾಸಗಿ ಆಸ್ತಿಯ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದದ್ದರಿಂದಲೇ ಆದಂತಹ ಬದಲಾವಣೆಗಳು. ಅಥರ್ವ ವೇದದ ಋಕ್ಕೊಂದರಲ್ಲಿ (15) ಆ ಕಾಲದಲ್ಲಿ ಅಷ್ಟೊಂದು ರೂಢಿಯಲ್ಲಿ ಇಲ್ಲದಿದ್ದ, ಫಲವತ್ತತೆಗೆ ಸಂಬಂಧಿಸಿದ ವ್ರಾತ್ಯ ವಿಧಿಯಲ್ಲಿ ವೇಶ್ಯೆಯರಿಗೆ ಪ್ರಾಮುಖ್ಯ ನೀಡಿರುವುದನ್ನು ಕಾಣಬಹುದು ಪಣ್ಯಾಂಗನೆ ಎಂದು ಕರೆಯುತ್ತಾರೆ.

(ನೋಡಿ : ಕೊಸಾಂಬಿ. 2003. ಪುರಾಣ ಮತ್ತು ವಾಸ್ತವ 94–96)

ಬೆಳ್ಳ

"ಬೆಳ್ಳರೆಂದರೆ ಅನಾಗರಿಕರಲ್ಲ. ಇದರಿಂದ ಬೆಳ್ಳರೆಂದರೆ ಆಸ್ತಿಕರಾದ ವಿಶಿಷ್ಟ ದೇವತಾಭಕ್ತರು, ಅದೊಂದು ತರದ ವಾಙ್ಮಯಪ್ರವಣರು, ವೀರತ್ವ ಶೂರತ್ವಗಳಿಂದೊಡಗೂಡಿದವರು, ಮೊದಲಾದವುಗಳನ್ನು ಊಹಿಸಿಕೊಂಡರೆ ತಪ್ಪಾಗದು. ಆ ವಿಷಯವನ್ನು ಇನ್ನಷ್ಟು ವಿಚಾರಿಸಿ ನೋಡಿಕೊಳ್ಳುವ, 'ಬೇಳ್, ಬೇಳ್ವೆ'ಗಳೆಂಬ ಧಾತು, ಭಾವನಾಮಗಳಿಗೆ 'ಹೋಮಿಸು', 'ಯಜ್ಞ' ಎಂಬ ಅರ್ಥಗಳು ಕನ್ನಡದಲ್ಲಿ ರೂಢವಾಗಿವೆ.

ಎರಡು ದೃಷ್ಟಾಂತಗಳು 'ಬೇಳ್' ಧಾತುವಿನ ವೈದಿಕ ಮಾರ್ಗಾನುಸಾರವಾಗಿ 'ಹೋಮಿಸುವುದು' ಎಂಬರ್ಥವಾದರೆ, ಮತ್ತಿನ ಭಾವ ನಾಮಪದಕ್ಕೆ ತದ್ವಿರುದ್ಧವಾದ 'ಅಭಿಚಾರಾಗ್ನಿಕಾರ್ಯ'ವೆಂಬ ಅರ್ಥವು ಸ್ಫುಟವಾಗುತ್ತಿದೆ. ಮೊದಲಿನದು ಇಂದ್ರಾದಿಗಳ ತೃಪ್ತಿಗಾಗಿ ಮಾಡುವ ಕ್ರಿಯೆಯಾದರೆ, ಮತ್ತಿನದು 'ಬೆಳ್ಳಡಿಯ'ನ್ನು ಅವನಡಿಯ ದೇವತೆಗಳನ್ನೂ ಒಲಿಸಲಿಕ್ಕಾಗಿ ಆಚರಿಸಲ್ಪಡುವ ಒಂದು ತರದ ಹೋಮ. ಆದರೆ, ಎರಡೂ ಅಗ್ನಿಕಾರ್ಯಗಳೆ. 'ಬೇಳೆಂಬ' ವೆಂಬ ಇನ್ನೊಂದು ಪದವನ್ನೀಕ್ಷಿಸಿರಿ. 'ಬೇಳ್' ಧಾತುವಿನಿಂದ ಹುಟ್ಟಿದುದಾದರೂ ಅದು ವೈದಿಕಕ್ರಿಯೆಯಲ್ಲಿ ಉಪಯೋಗಿಸಲ್ಪಡದೆ ಅಭಿಚಾರ (ಮಾಟ)ದಲ್ಲಿಯೂ, ಲಾಕ್ಷಣಿಕವಾಗಿ ವಂಚನಾದಿ ಕ್ರಿಯೆಗಳಲ್ಲಿಯೂ ದೃಢವಾಗಿದೆ. ಅಗ್ನಿಸಂಬಂಧದಿಂದಾಗಿ ವೈದಿಕ ಯಾಗದಲ್ಲುಪಯುಕ್ತವಾದರೂ ಆ 'ಬೇಳ್'ಧಾತು ಬೆಳ್ಳರ ಅಭಿಚಾರಾಗ್ನಿ ಕಾರ್ಯಸೂಚಕವಾಗಿಯೇ ನೆಲೆಗೊಂಡುದು ಎಂದೆಣಿಸಿದರೆ ಆ ಮಾರ್ಗವಾಗಲಾರದು. ಅದರಿಂದ 'ಬೇಳ್' ಎಂಬುದರ ನಿಜವಾದ ಅರ್ಥವು 'ಬೆಳಗು' (ಬೆಳ್ + ಆಗು = ಬೆಳಕನ್ನಾಗಿಸು) ಎಂದೇ ಆಗಿರಬೇಕು. ಹಾಗೆ ಬೆಳಕಿಗೆ ಆಧಾರವಾದ ತೇಜೋಮಯ ದ್ರವ್ಯವೆಂದರೇ 'ಬೆಂಕಿ (ಬೆಳ್+ಕಿ)'ಗೆ ಆ ಹೆಸರಾಗಿರಬೇಕು. ದುಸ್ಯುವರ್ಗದೊಳಗಿನವರಾಗಿ ಅರಣ್ಯವಾಸಿಗಳಾಗಿದ್ದು ಕಲ್ಲು – ಅರಣಿಗಳಿಂದ ಮೊತ್ತ ಮೊದಲು ಬೆಂಕಿಯನ್ನುಂಟು ಮಾಡಿದ ಪಂಗಡದವರಿಗೆ ಬೆಳ್, ಬೆಳ್ಳ, ಮೇಲು ಮೊದಲಾದ ಹೆಸರುಗಳಾದುವೆಂದು ಭಾವಿಸಿದರೆ ತಪ್ಪಾಗುವುದೆ? ಆಧುನಿಕರಾದ

ಚರಿತ್ರ ವಿಮರ್ಶಕರು ಸಿದ್ಧಾಂತಿಸುವ, ಅತಿ ಪುರಾತನಕಾಲದ ನಮ್ಮ ನಾಡಿನ ಅಂಥ ಜನರೆಂದರೆ ಈ ಬೆಳ್ಳರೇ ಆಗಿರಲಿಕ್ಕಿಲ್ಲವೆ?"(ಮುಳಿಯ)

ಬೆಳ್ಳಕ್ಕರಿಗರು ಎಂದರೆ ಬೇರೆ ಅರ್ಥವೂ ಬರುತ್ತದೆ. ಅದೇ ರೀತಿ ಬೆಳ್ಳವೆಂದರೆ ಮಳೆಗಾಲದಲ್ಲಿ ನದಿಯಲ್ಲಿ ಹೆಚ್ಚು ನೀರು ಬರುವುದಕ್ಕೂ 'ಬೆಳ್ಳ'ವೆಂದು ಕರೆಯುತ್ತಾರೆ. ವಿವರಗಳಿಗೆ ನೋಡಿ: ಮುಳಿಯ ತಿಮ್ಮಪ್ಪಯ್ಯ 2006 ನಾಡೋಜಪಂಪ ಪುಟ. 66

ಬೆಳ್ಳಕ್ಕರಿಗರು

ಕಾವ್ಯಗಳನ್ನೂ ನಿಂದಿಸಿರಬೇಕು. ಅದರಿಂದ ಕೆರಳಿದವನಾದ ಕವಿ, ಹಿಂದೊಮ್ಮೆ ದೃಷ್ಟಾಂತಿಸಿದ ಇದೇ ಸಂದರ್ಭದ ಪದ್ಯದಲ್ಲಿ ತೋರುವಂತೆ ಆ 'ಶುಷ್ಕ ವೈಯಾಕರಣ', 'ಶುಷ್ಕತಾರ್ಕಿಕ', 'ಬೆಳ್ಳಕ್ಕರಿಗ'ರೆಂಬವರನ್ನು ನಿಂದಿಸಿದ್ದನು. ಹಾಗೆ ಪಂಪನ ಕಾವ್ಯಗಳನ್ನು ನಿಂದಿಸಿದವರೊಳಗೆ 'ಬೆಳ್ಳಕ್ಕರಿಗರು (ವೆಂಗಿವಿಷಯದ ವಿದ್ವಾಂಸರೆಂಬವರು?) ಇರುವುದರಿಂದಲೂ 'ಕವಿ ಕದಂಬಕವಿಷಯ' ದವನಾದುದರಿಂದಲೂ ಪ್ರಾಂತಭೇದದ ಒಳಜಗಳವೂ ಆ ರಾಜವಿದ್ವತ್ಸಭೆಯೊಳಗೆ ನುಸುಳಿಕೊಂಡಿದ್ದುದೋ ಎಂಬ ಸಂದೇಹವೂ ಇಲ್ಲಿ ತೋರುತ್ತಿದೆ. (ಮುಳಿಯ 2006)

ಬೆಳ್ಳವಾಸ

ಬೆಳ್ಳವಾಸವೆಂದರೆ ಜಲಮಧ್ಯದಲ್ಲಿ ವಾಸಿಸುವುದು. ಬೆಳ್ಳ ಎಂದರೆ ಹರಿಯುವ ನೀರು ಎಂಬ ಪ್ರಯೋಗವು ಹವ್ಯಕ ಭಾಷೆಯಲ್ಲಿದೆ. ತುಳುವಿನಲ್ಲಿ ಬೊಳ್ಳ ಎಂದೂ ಕರೆಯುತ್ತಾರೆ.

ಬೇಕನಾಟ

"ಸಾಯಣ– ಯಾಸ್ಕರ 'ಬೇಕನಾಟ' ಪದದ ವ್ಯುತ್ಪತ್ತಿ. ವೇದಾರ್ಥ ವಿವರಣದಲ್ಲಿ ಸಾಯಣಾಚಾರ್ಯನಿಗೆ ಯಾಸ್ಕನ 'ನಿರುಕ್ತ'ವು ಬಹುಮಟ್ಟಿಗೆ ಸಹಾಯಕವಾಗಿದೆ ಎಂಬಲ್ಲಿ ಸಂದೇಹವಿಲ್ಲ. ಆದರೆ, ಆ 'ನಿರುಕ್ತ'ಕಾರನು ಈ 'ಬೇಕನಾಟ' ಪದಕ್ಕೆ ಯಾವ ಅರ್ಥವನ್ನು ವ್ಯುತ್ಪಾದಿಸಿದ್ದಾನೆಂಬುದನ್ನು ನೋಡುವ. 'ದ್ವಿಗುಣಕಾರಿಣೋ ವಾ ದ್ವಿಗುಣದಾಯಿನೋ ವಾ ದ್ವಿಗುಣಂ ಕಾಮಯಂತ ಇತಿ ವಾ' ಎಂಬುದು ಆತನ ವ್ಯುತ್ಪತ್ತಿ. 'ಬೇಕನಾಟರೆಂದರೆ ಕೊಟ್ಟುದರ ಇಮ್ಮಡಿ ಹಣವನ್ನೆಸಗುವವರು, ಅಥವಾ ಕೇಳಿದುದಕ್ಕೆರಡಷ್ಟು ಸಾಲವನ್ನು ಕೊಡುವವರು, ಅಲ್ಲವೆ ದ್ವಿಗುಣ (ಎರಡಷ್ಟು) ದ್ರವ್ಯವನ್ನಾಶಿಸುವವರು' ಎಂದು ಇದರ ತಾತ್ಪರ್ಯ. ಸಾಯಣನಂತೆ 'ಬೇ', 'ಏಕ' ಪದಗಳನ್ನವನು ಸಂದುಗೂಡಿಸುವುದಿಲ್ಲವಾದರೂ, 'ಬೇಕ' ಎಂಬುದೇ 'ದ್ವಿಗುಣ' ಎಂಬರ್ಥದಲ್ಲುಪಯುಕ್ತವಾದ ಪದವೆಂಬುದು ಅವನ ಭಾವನೆ ಇದ್ದಂತೆ ತೋರುತ್ತಿದೆ.

ಆದರೆ 'ಬೇಕ' ಪದವು ಹೇಗೆ ರೂಪಿಸಿತು. ಅದರ ನಿರುಕ್ತಿ ಹೇಗೆ ಎಂಬುದನ್ನು 'ನಿರುಕ್ತ'ಕಾರನಾಗಲಿ, ವ್ಯಾಕ್ಯಾತೃ ದುರ್ಗಾಚಾರ್ಯನಾಗಲಿ, ನಿರೂಪಿಸಲಿಲ್ಲ.

'ಬೇಕನಾಟ' ಪದದಿಂದ ಅಂಥ ನೀಚಾರ್ಥವನ್ನು ಹೊಸೆದು ತಂದ ಮೇಲೆ ವ್ಯಾಖ್ಯಾನಕಾರರು 'ಅಹರ್ದೃಶ' ಪದದಿಂದಲೂ ಅದಕ್ಕನುವಾದ ಅರ್ಥವನ್ನೇ ಹಿಂಡಿದುದು ಆಶ್ಚರ್ಯವಲ್ಲ. ಆದರೆ 'ಅಸೂರ್ಯಂ ಪಾಶ್ಯಃ' ಎಂಬ ಪುರಾತನವಾದೊಂದು ಪದವಿದೆ. ಅದಕ್ಕೆ 'ಸೂರ್ಯನನ್ನೀಕ್ಷಿಸಿದ ಕಷ್ಟಾಸಹಿಷ್ಣುಗಳಾದವರು' ಎಂಬರ್ಥ. ಅರಸರ ಅಂತಃಪುರ ಸ್ತ್ರೀಯರಿಗೆ ವಿಶೇಷಿಸುವ ಪ್ರಸಿದ್ಧವಾದ ಪದವದು. ಅದರಂತೆ 'ಅಹರ್ದೃಶಃ' ಎಂಬುದಕ್ಕೆ 'ಬಿರುಬಿಸಿಲನ್ನೂ ಗಣಿಸದ ಶ್ರಮಸಹಿಷ್ಣುಗಳು – ಬಲಶಾಲಿಗಳು' ಎಂಬ ಅರ್ಥವೇ ವ್ಯಕ್ತವಾಗುತ್ತಿದೆಯಲ್ಲವೆ? ಇರಲಿ, ಅಷ್ಟೊಂದು ಹೆಣಗಾಡಿದರೂ ವ್ಯಾಖ್ಯಾನಕಾರರು ತಮ್ಮ ಗುರಿಯನ್ನಾದರೂ ಮುಟ್ಟಿ ಕೃತಾರ್ಥರಾಗಲಿಲ್ಲ ಎಂಬುದು ಮುಂದೆ ಸ್ಫುಟವಾಗುತ್ತಿದೆ. ಅಂಥ 'ಬೇಕನಾಟರನ್ನೆಲ್ಲ ಗೆದ್ದ ಇಂದ್ರನು ಪಣಿಗಳನ್ನೂ ಗೆದ್ದನು ಎನ್ನಬೇಕೆ? ಎಂಬ ಮಾತಿನ ಮಟ್ಟಿನಲ್ಲೇ ಆ 'ಬೇಕನಾಟ'ರೆಂದರೆ ಅತಿ ಸಮರ್ಥರು ಎಂಬುದು ಹೊಳೆಯುತ್ತಿದೆ. 'ಬೇಕನಾಟ'ರೆಂದರೆ ಕ್ಷುದ್ರಜೀವಿಗಳು ಎಂದಾದರೆ, ಅವರನ್ನಣಗಿಸಿದ ಇಂದ್ರನಿಗೆ, ಮುಂದೆ ಈ ಪಣಿಗಳನ್ನೊತ್ತಿದುದರಿಂದ ಮಹಿಮೆಯಾದರೂ ಹೇಗೊದಗಬೇಕು?.

'ಬೇಕನಾಟಾನ್' ಎಂಬಲ್ಲಿ 'ವೇ' ಮತ್ತು 'ಬೇಕ' ಎಂಬವು 'ದ್ವಿ' ಮತ್ತು 'ದ್ವಿಕ' ಎಂಬವುಗಳ ಅಪಭ್ರಂಶರೂಪಗಳೆಂದು ಭಾವಿಸುವಲ್ಲಿಯೇ ವ್ಯಾಖ್ಯಾನಕಾರರ ಹಿಡಿತವು ಸಡಿಲಾಗಿದೆ. ಮಂತ್ರದ್ರಷ್ಟಾರರು ಇಂಥ ಅಪಭ್ರಂಶ ಪದಪ್ರಯೋಗವೆಸಗಿದರೆಂದರೆ ಸಾಂಯಣಾಚಾರ್ಯನ ಮಾತು ಕೊರಳಿಂದ ಮೇಗಿನದಲ್ಲದೆ ಎದೆಯಿಂದೇರಿದುದಲ್ಲವೆಂದೇ ತೋರುತ್ತಿದೆ ಮಾತ್ರವಲ್ಲ. ಆ ಪದಕ್ಕೆ ವೃದ್ಧಿಜೀವಿಗಳೆಂಬ ಅರ್ಥವನ್ನು ತುರುಕಿದ ಕ್ರಮವಂತೂ 'ಒತ್ತಾಯದ ಸಾಕ್ಷಿ'ಯೇ ಎಂಬುದನ್ನು ವಾಚಕರೇ ಸುಲಭವಾಗಿ ಎಣಿಸುವಂತಿದೆ. ಆ ಮೇಲಿನ 'ಅಹರ್ದೃಶ' ಪದವ್ಯುತ್ಪತ್ತಿಯಂತೂ ಅದೇ 'ಒತ್ತಾಯದ ಸಾಕ್ಷಿ'ಯ ಪುನರ್ವಿಚಾರಣೆಯಾದಂತೆ ಹೊಳೆಯುತ್ತಿದೆ. ವ್ಯಾಖ್ಯಾನಕಾರರು ಆ 'ಬೇಕನಾಟ'ರನ್ನೂ 'ಪಣಿ'ಗಳನ್ನೂ ನಾಸ್ತಿಕವರ್ಗದಲ್ಲಿ ಸೇರಿಸಲಿಕ್ಕಾಗಿ ಇಷ್ಟೊಂದು ಪ್ರಯತ್ನಿಸಿದುದಲ್ಲದೆ."

ಬೇಕನಾಟದ ಕುರಿತು ಪದ ವಿವೇಚನೆ ಮಾಡಿದವರಲ್ಲಿ ಮುಳಿಯ ತಿಮ್ಮಪ್ಪಯ್ಯನವರೂ ಒಬ್ಬರು. ಇದು ಸಾಂಸ್ಕೃತಿಕವಾಗಿಯೂ ಮಹತ್ವದ್ದು ಎಂಬುದು ಮುಳಿಯರ ವಾದದಿಂದ ಸ್ಪಷ್ಟವಾಗುತ್ತದೆ.

ವಿವರಗಳಿಗೆ ನೋಡಿ: ಮುಳಿಯ ತಿಮ್ಮಪ್ಪಯ್ಯ 2006 ನಾಡೋಜಪಂಪ.

ಬೇಟೆ

ಅಶ್ವಿನಾ – ಕುದುರೆಯಮೇಲೆ ಕುಳಿತು ಬೇಟೆಯಾಡುವುದು.

ಸಜಾಲ – ಬಲೆಯ ಮೂಲಕ ಬೇಟೆಯಾಡುವುದು.

ಕಾಲ್ಯಾ – ತಂತ್ರಗಳನ್ನುಪಯೋಗಿಸಿ ಬೇಟೆಯಾಡುವುದು.

ಯಾವಶೀ – ಪ್ರಾಣಿಗಳ ಚಹರೆಯನ್ನು ಅನುಸರಿಸಿ ಬೇಟೆಯಾಡುವುದು ಅಥವಾ ಪ್ರಾಣಿಗಳ ಇರುವಿಕೆಯನ್ನೂ ಅದರ ಕುರುಹುಗಳನ್ನೂ ಅರಿತು ಬೇಟೆಯಾಡುವುದು.

ಸಾಪ್ರೇಕ್ಷ – ಪ್ರಾಣಿಯನ್ನು ಗುರಿ ನೋಡಿ, ಆ ಗುರಿಗೆ ಅಸ್ತ್ರಗಳನ್ನು ಒಗೆದು ಬೀಸಿ ಕೊಲ್ಲುವುದು.

ಪಾದಪ್ರೇಕ್ಷ– ಪ್ರಾಣಿಯ ಕಾಲಿನ ಗುರುತುಗಳನ್ನು ಹಿಡಿದು ಬೇಟೆಯಾಡುವ ವಿಧಾನ.

ಶ್ವಗಣಿಕಾ – ನಾಯಿಗಳನ್ನು ಪ್ರಾಣಿಗಳ ಮೇಲೆ ಬಿಟ್ಟು, ಆ ಮೂಲಕ ಅವುಗಳನ್ನು ನಿಲ್ಲಿಸಿ, ಶಸ್ತ್ರಪ್ರಯೋಗ ಮಾಡಿ ಬೇಟೆ ಯಾಡುವುದು.

ಪ್ರಾಚೀನ ಕರ್ನಾಟಕದ ಜನ ಬೇಟೆಯನ್ನು ಹಲವಾರು ರೀತಿಗಳಲ್ಲಿ ವಿಂಗಡಿಸಿರುವುದನ್ನು ಗಮನಿಸಬಹುದು. ಯಾವ ಪ್ರಾಣಿ ಎಂಬುದರ ಮೇಲೆ ಈ ವಿಭಾಗಕ್ಕೆ ಹೆಸರು ನೀಡಲಾಗಿದೆ. ಅಂದರೆ ಬೇಟೆಯನ್ನು 'ಮಿಗವೇಂಟೆ', 'ನೀರ್ವೇಂಟೆ', 'ಕಿಱುವೇಂಟೆ' – ಎಂಬುದಾಗಿ ಗುರುತಿಸಬಹುದು. ಹಂದಿ, ಪುಲ್ಲೆ, ಮಱಿಸಾರಂಗ ಮೊದಲಾದ ಮೃಗಗಳನ್ನು ಬೇಟೆಯಾಡುವುದು 'ಮಿಗವೇಂಟೆ' ; ಗವುಜ, ಗೀಜಗ, ಗೊರವ, ಪಾರಿವಾಳ, ಗುಬ್ಬಿ, ಕಬ್ಬಕ್ಕಿ, ಬೆಳ್ವಕ್ಕಿ ಮೊದಲಾದ ಪಕ್ಷಿಗಳನ್ನು ಬೇಟೆಯಾಡುವುದು 'ಪಕ್ಷಿವೇಂಟೆ'; ಮೀನು, ಏಡಿ ಮೊದಲಾದ ಜಲಚರ ಪ್ರಾಣಿಗಳನ್ನು ಹಿಡಿಯುವುದು 'ನೀರ್ವೇಂಟೆ' ; ಇಲಿ, ಬೆಳ್ವಿಲಿ ಮೊದಲಾದ ಬಿಲಚರ ಪ್ರಾಣಿಗಳನ್ನು ಹಿಡಿಯುವುದು 'ಕಿಱುವೇಂಟೆ'.

ವಿವರಗಳಿಗೆ ನೋಡಿ: ಡಾ. ಆರ್. ಶೇಷಶಾಸ್ತ್ರಿ. ೨೦೦೪. ಪು. ೧೭೦–೧೭೧

ಬೇಟೆಯಲ್ಲಿ ಮಡಿದ ವೀರರ ಸ್ಮಾರಕಗಳು

ಈ ವಿಭಾಗದ ಶಾಸನಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದು; ಮೊದಲನೆಯದಾಗಿ ಬೇಟೆಯ ತೊಡಗಿದ್ದ ವೀರರ ಅಂದರೆ; ಮನುಷ್ಯರ ವೀರಗಲ್ಲುಗಳು, ಎರಡನೆಯದಾಗಿ ಬೇಟೆಯಲ್ಲಿ ಮನುಷ್ಯನಿಗೆ ನೆರವಾಗಿ ನಿಂತ ಅವನ ನಾಯಿಗಳ

ಸ್ಮಾರಕಗಳು – ಎಂಬುದಾಗಿ ಬೇಟೆಯು ಸಹಜವಾಗಿದ್ದ ಸಂದರ್ಭದಲ್ಲಿ ಇದು ರೂಪುಗೊಂಡಿದೆ.

ಯಾವುದಾದರೂ ದುಷ್ಟಮೃಗವೊಂದು ಬಂದು ಜನರಿಗೋ ಅಥವಾ ಅವನು ಬೆಳೆದ ಬೆಳೆಗಳಿಗೂ ಹಾನಿಯನ್ನುಂಟು ಮಾಡುತ್ತಿದ್ದರೆ ಅಂತಹ ದುಷ್ಟ ಮೃಗಗಳನ್ನು ಬೇಟೆಯಾಡಲು ಹೋಗಿ ಮಡಿದ ವೀರರ ಸ್ಮಾರಕ ಶಿಲೆಗಳು ನಮಗೆ ದೊರೆಯುತ್ತವೆ. ದುಷ್ಟ ಮೃಗಗಳು ಎಂದರೆ ಮುಖ್ಯವಾಗಿ ಹುಲಿ, ಚಿರತೆ ಮತ್ತು ಕಾಡುಹಂದಿಗಳು. ಕಾನಕಾನಹಳ್ಳಿಯ ವೀರಗಲ್ಲೊಂದು ಗ್ರಾಮಕ್ಕೆ ನುಗ್ಗಿ ಜನರನ್ನು ಹಿಂಸಿಸುತ್ತಿದ್ದ ಪೆಂಟಿ ಹುಲಿಯನ್ನು ಕೊಂದು ತಾನೂ ಸತ್ತ ವೀರನೊಬ್ಬನ ವಿಷಯವನ್ನು ತಿಳಿಸುತ್ತದೆ. ಮಂಡಿಕಲ್ಲು ಎಂಬ ಗ್ರಾಮಕ್ಕೆ ಹೆಬ್ಬುಲಿಯೊಂದು ನುಗ್ಗಿ ಎಮ್ಮೆಯ ಕರುವನ್ನು ಎತ್ತಿಕೊಂಡು ಹೋದಾಗ, ಅದೇ ಗ್ರಾಮದ ಕಮ್ಬುಳದಾನ ಎಂಬುವವನು ತಾನು ಆ ಹುಲಿಯನ್ನು ಒಂದು ಜಾವದೊಳಗೆ ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿ ಅದರಂತೆ ಆ ಹುಲಿಯನ್ನು ಕೊಂದ ವಿಷಯವನ್ನು ಕ್ರಿ.ಶ. 950ರ ವೀರಗಲ್ಲು ತಿಳಿಸುತ್ತದೆ. ಈ ವೀರಗಲ್ಲು ಕಮ್ಬುಳದಾನದ 'ಜಯಪತ್ರ'ವೂ ಹೌದು ಮತ್ತು ಅವನಿಗೆ ಬೇಟೆಯಲ್ಲಿ ಸಹಾಯಕ್ಕೆನಿಂತ ನಾಯಿಗಳೆರಡರ ಸ್ಮಾರಕವೂ ಹೌದು. 20ನೇ ಶತಮಾನದ ಆದಿಭಾಗದಲ್ಲಿ ಚಿರತೆಯೊಡನೆ ಹೋರಾಡಿ ಮಡಿದ ಯೆತ್ರ ಮಂಚಯ್ಯ ಎಂಬುವವನ ಸ್ಮಾರಕವಾಗಿ ವೀರಗಲ್ಲನ್ನು ಹಾಕಿಸಿದ್ದಾರೆ. ಈ ವೀರಗಲ್ಲು ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು, ಕೋನಸಾಗರ ಎಂಬ ಗ್ರಾಮದಲ್ಲಿದೆ. ಆರ್. ಶೇಷಶಾಸ್ತ್ರಿಯವರು ಮೇಲಿನಂತೆ ಅಭಿಪ್ರಾಯ ಪಟ್ಟಿದ್ದಾರೆ.

ವಿವರಗಳಿಗೆ ನೋಡಿ: ಚಿದಾನಂದ ಮೂರ್ತಿ ಎಂ. ೨೦೦೮ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
ಆರ್. ಶೇಷಶಾಸ್ತ್ರೀ ೨೦೦೫ ಶಾಸನ ಪರಿಚಯ ಪುಟ. ೨೦–೨೫
ಡಿ. ಡಿ. ಕೊಸಾಂಬಿ ೨೦೦೩ ಪುರಾಣ ಮತ್ತು ವಾಸ್ತವ ಪುಟ. ೪೭

ಬೇಡರು

"ಬೇಡರನ್ನು ನಾಯಕರು ಎಂಬುದಾಗಿಯೂ ಕರೆಯುತ್ತಾರೆ. "ಇವರು ಮೊದಲಿನಿಂದಲೂ ದಂಡಿನ ಊಳಿಗಕ್ಕಾಗಿ ಮೀಸಲಾಗಿದ್ದ ಕ್ಷಾತ್ರವೃತ್ತಿಯ ವೀರಜನಾಂಗ, ಈ ಜನಾಂಗದವರು ಕರ್ನಾಟಕದ ವಿಶಾಲವಾದ ಪ್ರದೇಶಗಳಲ್ಲಿಯೂ, ಆಂಧ್ರ ಮತ್ತು ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿಯೂ ನೆಲಸಿದರು. ಇವರ ಇತಿಹಾಸದ ಪ್ರಾಚೀನ ಚರಿತ್ರೆ ಕನಿಷ್ಠ ಪಕ್ಷ ೧೨ – ೧೩ ನೆಯ ಶತಮಾನದ ಹಿಂದಿನ ಕಾಲದವರೆಗೆ ಹೋಗುವುದು. ಬೇಡರೆಂದರೆ ಕರ್ನಾಟಕದ ರಜಪೂತರು, ರಜಪೂತರು, ತಾವು

ರಾಜಪುತ್ರರು ಎಂದರೆ ಅರಸನ ಮಕ್ಕಳು ಎಂದು ಹೇಳಿಕೊಳ್ಳುವಂತೆ ಈ ಬೇಡರು ತಾವು ದೊರೆಯ ಮಕ್ಕಳು, ನಾಯಕರ ಮಕ್ಕಳು ಇಲ್ಲವೆ ಕನ್ನಯ್ಯನವರು ಎಂದರೆ ಶ್ರೀ ಕೃಷ್ಣನ ಪರಿವಾರದವರು ಎಂಬುದಾಗಿ ಗೌರವದಿಂದ ಕರೆಯಿಸಿಕೊಳ್ಳುವರು." ಇಂಥವರು ವೀರರ ಆರಾಧಕರು ಎಂಬುದಾಗಿ ಬೇರೆ ಹೇಳಬೇಕಾಗಿಲ್ಲ. ಇವರು ಆರಾಧಿಸುವ ವೀರರಲ್ಲಿ ಕುಮಾರರಾಮ ಪ್ರಮುಖ. ಈ ಕುಮಾರರಾಮನು ತಮ್ಮ ಕುಲದೈವ ಎಂಬುದಾಗಿ ಅವನನ್ನು ಆರಾಧಿಸುತ್ತಾರೆ. ಕುಮಾರರಾಮನ ದೇವಾಲಯಗಳು ಕರ್ನಾಟಕದಲ್ಲಿ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕ್ ದೊಡ್ಡಪಾಲನಹಳ್ಳಿ. ಉತ್ತರ ಕನ್ನಡ ಜಿಲ್ಲೆ ಬೇಡ್ಕಣಿ, ಬಳ್ಳಾರಿ ಜಿಲ್ಲೆ ಗಂಗಾವತಿ ತಾಲ್ಲೂಕ್ ರಾಮದುರ್ಗದಲ್ಲಿಯೂ ಇವೆ."

(ಡಾ. ಆರ್. ಶೇಷಶಾಸ್ತ್ರಿ. ೨೦೦೪. ಪು. ೬೩)

ಬ್ರಹ್ಮ

ಬಾಹ್ಯ ಪ್ರತಿಮಾರಾಧನೆ ಹಿಂದೂ ಮತದ ಪರ್ಯಾಯವಾಗಿ ಪರಿಣಮಿಸಿತು. ಸಾಮಾನ್ಯ ಜನರು ಉಪಾಸನೆ ಮಾಡುವುದು 'ಅದಲ್ಲ'ವೆಂದು ಕೇನೋಪನಿಷತ್ತು ಒತ್ತಿ ಒತ್ತಿ ಹೇಳುತ್ತದೆ. "ನೇದಂ ಯದಿದಂ ಉಪಾಸತೇ" (೧,೫-೯). "ಎಷ್ಟೇ ಮಹತ್ತರವಾದ ಪ್ರತೀಕವಾಗಲೀ ಅದನ್ನು ಬ್ರಹ್ಮವೆಂದು ಭ್ರಮಿಸಕೂಡದು" ಎಂಬುದು ಇದರ ಅರ್ಥವೆಂದು ರಾಧಾಕೃಷ್ಣನ್ ಅವರು ವ್ಯಾಖ್ಯಾನ ನೀಡುತ್ತಾರೆ. (ಸುಕುಮಾರ್ ಅಟಿಕ್ಕೋಡ್ ೨೦೦೫ ತತ್ವಮಸಿ ಪುಟ ೧೨೮)

ಪರಬ್ರಹ್ಮನನ್ನು ಕುರಿತು ಯಾವ ಇತ್ಯಾತ್ಮಕ ವಿಶೇಷಣಗಳನ್ನೂ ಕೊಡುವುದು ಅಸಾಧ್ಯ ಎಂದು ಉಪನಿಷತ್ತುಗಳ ಅನೇಕ ಮಂತ್ರಗಳಲ್ಲಿ ಹೇಳಿದೆ. 'ನೇತಿ' 'ನೇತಿ' (ಇದಲ್ಲ, ಇದಲ್ಲ) ಎಂಬ ಪ್ರಖ್ಯಾತ ವಾಕ್ಯವು ಬ್ರಹ್ಮ ಜಗತ್ತಿಗೆ ಕೇವಲ ಅತೀತವಾದುದು ಎಂಬುದನ್ನು ಹೇಳುತ್ತದೆ. ಅದು ವ್ಯಾವಹಾರಿಕ ಜಗತ್ತಿನ ಆಚೆ ಇರುವುದು. ತರ್ಕಜ್ಞಾನದಿಂದ ಅದನ್ನು ತಿಳಿಯಲಾಗುವುದಿಲ್ಲ. ಕಲ್ಪನಾರಹಿತವಾದ ಶುದ್ಧ ಪ್ರತ್ಯಗಾತ್ಮ ಅದು. ಅದು ಅಖಂಡ, ಅತ್ಯಾಜ್ಯ. ಅದು ಹೊರಗಿನದೂ ಅಲ್ಲ, ಅಥವಾ ಬಾಹ್ಯ ಕಾರಣಗಳಿಂದ ನಿಯಂತ್ರಿತವಾದುದೂ ಅಲ್ಲ. ಅದನ್ನು ನಿರ್ದೇಶಿಸುವುದಾದರೆ ಅದು ವಿಷಯವಾಗುವುದು. ಅದು 'ಏಕ' ಎಂದು ನಾವು ಹೇಳಲಾಗುವುದಿಲ್ಲ. ಅದು ಅದ್ವೈತ, ಎರಡನೆಯದಿಲ್ಲದ್ದು. ಅದ್ವೈತದಲ್ಲಿ ಬರುವ ವಿಷಯವಿದು.(ರಾಧಾಕೃಷ್ಣನ್ 1970 ಪುಟ.291)

"ಓಂ – ತತ್ – ಸತ್ ಎಂದು ಬ್ರಹ್ಮಕ್ಕೆ ಮೂರು ಬಗೆಯ ಹೆಸರುಂಟೆಂದು ಬಲ್ಲವರು ಹೇಳುತ್ತಾರೆ. ಪೂರ್ವದಲ್ಲಿ

ಬ್ರಾಹ್ಮಣರು, ವೇದಗಳು, ಯಜ್ಞಗಳು ಅದರಿಂದಲೇ ನಿರ್ಮಿತವಾಗಿವೆ. ಓಂ – ತತ್ – ಸತ್ ಎಂಬೀ ಮೂರು ಪರಬ್ರಹ್ಮನನ್ನು ನಿರ್ದೇಶಿಸುವ ಶಬ್ದಗಳು.

ಧಾರ್ಮಿಕ ವಿಧಿಗಳಲ್ಲಿ ಈ ಮೂರನ್ನು ಉಚ್ಚರಿಸುವುದರಿಂದ ಏನು ಹೆಚ್ಚು ಕಡಿಮೆಯಾಗಿದ್ದರೂ ಅದು ಪರಿಹಾರವಾಗುವುದು." (ಶ್ರೀಮದ್ ಭಗವದ್ಗೀತೆ – ಪು.ಸಂ. 504 – 505)

ಬ್ರಹ್ಮಚರ್ಯ ವ್ರತ

ಉಪನಯನ ಸಂಸ್ಕಾರವಾದ ಮೇಲೆ ವಟುವು ಬ್ರಹ್ಮಚರ್ಯ ವ್ರತದಲ್ಲಿರುತ್ತಾನೆ. ಬ್ರಹ್ಮಚರ್ಯ ವ್ರತಧಾರಿಯು ನಿತ್ಯ ಸಂಧ್ಯಾವಂದನೆಯನ್ನು ಮಾಡಬೇಕು. ಅವನು ಸದಾ ಅಗ್ನಿಕಾರ್ಯಗಳನ್ನು ನೆರವೇರಿಸಬೇಕು. ಮತ್ತು ಪರಸ್ತ್ರೀಯರ ಒಡನಾಟ; ರತಿಕ್ರಿಯೆಗಳಲ್ಲಿ ತೊಡಗಬಾರದು. ನಿಯಮಾಚಾರಗಳನ್ನು ಮುರಿಯಬಾರದು. ನೈಷ್ಠಿಕ ಬ್ರಹ್ಮಚರ್ಯದಲ್ಲಿ ತೊಡಗಿದವನ ರೇತುಸ್ಖಲನವಾದರೆ ಅವನು ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಎಂಬ ನಿಯಮಗಳನ್ನು ಮನುವು ಹೇಳುತ್ತಾನೆ. ಮಹಾಭಾರತದಲ್ಲಿ ಬರುವ ಭೀಷ್ಮಾಚಾರ್ಯರು ನೈಷ್ಠಿಕ ಬ್ರಹ್ಮಚಾರಿಯೇ ಉಳಿದಿದ್ದರು ಎಂಬುದು ಗಮನಾರ್ಹ. ಗೃಹಸ್ಥಾಶ್ರಮಕ್ಕಿಂತ ಪೂರ್ವದ ಹಂತವೇ ಬ್ರಹ್ಮಚರ್ಯವ್ರತ. ಬ್ರಹ್ಮನನ್ನು ಸೇರಲು ಇರುವ ಹಾದಿಯು ಬ್ರಹ್ಮಚರ್ಯ. ಬ್ರಹ್ಮಚಾರಿಯು ಗುರುಕುಲದಲ್ಲಿರುತ್ತಾನೆ. ಜೈನ ಧರ್ಮದಲ್ಲಿ ಬ್ರಹ್ಮಚರ್ಯವು ಮಹಾವ್ರತ ಮತ್ತು ಚಾರಿತ್ರ್ಯಕ್ಕೆ ಸಂಬಂಧಿಸಿದ್ದು.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ

ಬ್ರಹ್ಮಹತ್ಯೆ

ಬ್ರಹ್ಮಹತ್ಯದೋಷಕ್ಕೆ ಮನು ಮತ್ತು ಯಾಜ್ಞವಲ್ಕ್ಯರು ಹನ್ನೆರಡು ವರ್ಷ ವ್ರತವಾಚರಿಸಬೇಕೆಂದು ಹೇಳುತ್ತಾರೆ. ಅನುದ್ದೇಶಪೂರ್ವಕ ನರಹತ್ಯೆ ಮಾಡಿದವನು ಕಾಡಿನಲ್ಲಿ ಗುಡಿಸಲನ್ನು ಕಟ್ಟಿಕೊಂಡು ಭಿಕ್ಷೆ ಬೇಡಿಕೊಂಡು ಮೃತನ ತಲೆಬುರುಡೆಯನ್ನು ಲಾಂಛನವನ್ನಾಗಿಸಿಕೊಂಡು ಇರಬೇಕಾಗುತ್ತದೆ.

(ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.2 1971 ಪುಟ. 286)

ಬ್ರಾಹ್ಮಣ

ವಿರಾಟ ಪುರುಷನ ಮುಖದಿಂದ ಬ್ರಾಹ್ಮಣರು ಹುಟ್ಟಿದರು. ಬ್ರಾಹ್ಮಣರ ಕರ್ಮಸ್ವರೂಪಕ್ಕೂ ಜಾತಿಗೂ ನಿಕಟ ಸಂಬಂಧ ಕಲ್ಪಿಸಲಾಗಿದೆ. ಪುರುಷ ಸೂಕ್ತದ ವ್ಯಾಖ್ಯೆಯು ಚತುರ್ವರ್ಣವೆಂಬ ಪರಿಕಲ್ಪನೆಯ ಮೇಲೆ ನಿಂತಿದೆ. ನಮ್ಮಲ್ಲಿ ಜಾತಿಯ ಕುರಿತು ಚರ್ಚಿಸುವವರು ಇದೇ ಪರಿಕಲ್ಪನೆಯನ್ನು ಮುಂದಿಡುತ್ತಾರೆ. ಬ್ರಾಹ್ಮಣ ಜಾತಿಗೂ – ಅವರ ಕೆಲಸಕ್ಕೂ ಸಂಬಂಧಕಲ್ಪಿಸಿಕೊಂಡು ಬ್ರಾಹ್ಮಣರೆಂದರೆ ಇಷ್ಟು ಎನ್ನುವ ತಿಳುವಳಿಕೆಯನ್ನು ಮಾತ್ರ ಮಂಡಿಸುತ್ತಾರೆ. ಆದರೆ ವಾಸ್ತವವಾಗಿ ಹಾಗಲ್ಲ. "ಬ್ರಾಹ್ಮಣ = ವೈದಿಕ' ಎನ್ನುವ ಸರಳ ಹೇಳಿಕೆಯು ಉಪಯುಕ್ತವಲ್ಲ. ವೈದಿಕ ಅನ್ನುವುದು ಈ ಮೊದಲು ಉಲ್ಲೇಖಿಸಲಾದ ವೇದ ಪ್ರಣೀತ ಅನುಸರಣೆಗೆ ಸಂಬಂಧಿಸಿರುವುದು. ಯಾರು ವೇದಾಧ್ಯಯನ ಮಾಡಿದ್ದಾರೋ

ಅವರು ವೈದಿಕರು. ಋಗ್ವೇದದ ಕಾಲದಲ್ಲಿ ಬಂದ ಈ ಕತೆಗೂ ಈಗ ಬದುಕಿರುವ ಬ್ರಾಹ್ಮಣರಿಗೂ ಒಂದೇ ಸೂತ್ರವನ್ನು ಅಳವಡಿಸಲು ಸಾಧ್ಯವಿಲ್ಲ ಮತ್ತು ಆ ಕಾಲದಲ್ಲಿ ವಿಪ್ರ ಎಂದೂ ಕರೆಯಲಾಗುತ್ತಿತ್ತು. ಹಾಗೆಯೇ ಬ್ರಹ್ಮ ಜ್ಞಾನ ಪಡೆದವನು ಬ್ರಾಹ್ಮಣ. ಮೊದಲು ಮಾಂಸಾಹಾರಿಗಳಾಗಿದ್ದ ಬ್ರಾಹ್ಮಣರು ಅನಂತರ ಸಸ್ಯಾಹಾರಿಗಳಾಗಿ ಪರಿವರ್ತನೆ ಹೊಂದಿದರು: ಮತ್ತು ಬ್ರಾಹ್ಮಣರೂ ಬೇರೆ ಬೇರೆ ಚಾರಿತ್ರಿಕ ಘಟ್ಟಗಳಲ್ಲಿ ತಮ್ಮ ಜಾತಿಯ ಅಸ್ತಿತ್ವಕ್ಕಾಗಿ ಪುನರ್ ವ್ಯಾಖ್ಯಾನಕ್ಕೆ ಗುರಿಯಾಗಬೇಕಾಗಿ ಬಂತು. ಹೇಳಿಕೊಳ್ಳುವುದಕ್ಕೆ ಬ್ರಾಹ್ಮಣರಿಗೆ ಪುರುಷ ಸೂಕ್ತವಿದೆಯಾದರೂ ಬ್ರಾಹ್ಮಣರು ಕಾಲಕಾಲಕ್ಕೆ ತಮ್ಮ ವ್ಯವಹಾರ ನೀತಿಗಳನ್ನು ಮತ್ತು ಕರ್ಮಗಳನ್ನು ಬದಲಾಯಿಸಿದರು. ಒಂದು ಪ್ರದೇಶದ ಬ್ರಾಹ್ಮಣರು ಮತ್ತೊಂದು ಪ್ರದೇಶದ ಬ್ರಾಹ್ಮಣರು ಅವರವರ ಲೌಕಿಕದ ಅಗತ್ಯಕ್ಕೆ ಅನುಸಾರವಾಗಿ ಬೇರೆ ಬೇರೆ ಉದ್ಯೋಗಗಳನ್ನು ಹಿಡಿದರು. ಜಾತಿಯ ದೃಷ್ಟಿಯಿಂದ ಬ್ರಾಹ್ಮಣರು ಅತ್ಯಂತ ಮೇಲ್ತುದಿಯಲ್ಲಿದ್ದಾರೆಂದು ನಾವು ಹೇಳುವಾಗಲೂ ಬ್ರಾಹ್ಮಣರಲ್ಲಿರುವ ಬೇರೆ ಬೇರೆ ಶ್ರೇಣೀಕರಣಗಳನ್ನು ಗಮನಿಸಬೇಕು.

ಬ್ರಹ್ಮನ್ ಮತ್ತು ಕ್ಷತ್ರ ಎಂಬ ಭಾವವಾಚಕ ಪದಗಳು ವೃತ್ತಿ ಗುಣವನ್ನು ಸೂಚಿಸುತ್ತವೆ. ಉಳಿದ ಆರ್ಯಜನರ ನಾಮಧೇಯ ವಿಶ್. ಈ ಮೂರು ಹೆಸರುಗಳು ಆರ್ಯ ವರ್ಗವನ್ನು ಪೂರೈಸುತ್ತವೆ. ಆರ್ಯರು ಮೂರು ವರ್ಣಗಳ ಜನರು ಎಂಬ ವಾಕ್ಯವನ್ನು ಸಂಸ್ಕೃತ ಗ್ರಂಥಗಳಲ್ಲಿ ಕಾಣುತ್ತೇವೆ. ಬ್ರಾಹ್ಮಣರು ಬ್ರಹ್ಮನಿಂದ ಜನಿಸಿದರು ಎಂಬ ನಂಬಿಕೆಯೂ ಇದೆ.

(ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.2 1971 ಪುಟ. 239) ಮನುವಿನ ಅಭಿಪ್ರಾಯವು ಹೀಗಿದೆ:

(ಬ್ರಾಹ್ಮಣ) ಜ್ಞಾನೋಪಾಸಕನು, ಧರ್ಮದ ಪ್ರತ್ಯಕ್ಷ ರೂಪವು. ಆತ್ಮಜ್ಞಾನವೇ ಪ್ರಮುಖವು. ಮೋಕ್ಷವೇ ಆತ್ಮಜ್ಞಾನವು–ಗಮ್ಯವು.

(ಮನುಸ್ಮೃತಿ 1–98)ಮನುವಿನ ಈ ಅಭಿಪ್ರಾಯದ ಪ್ರಕಾರ ಜ್ಞಾನ ಮತ್ತು ಧರ್ಮಕ್ಕೆ ಸಂಬಂಧವಿದೆ.

ನಾಲ್ಕು ವರ್ಣಗಳಲ್ಲಿ ಬ್ರಾಹ್ಮಣನು ಪ್ರಭುವು. ಸಂಸ್ಕಾರ, ನಿಯಮ, ಪ್ರಕೃತಿ ವಿಶೇಷಗಳು ಹೆಚ್ಚುಗಾರಿಕೆಗಳು. ಇದರ ತೀರ್ಮಾನವು ಕ್ಷಣಿಕವಲ್ಲ. (ಮನುಸ್ಮೃತಿ 10–3) ಮನುವಿನ ಈ ವಾದದಂತೆ ಬ್ರಾಹ್ಮಣ ಮತ್ತು ಸಂಸ್ಕಾರಕ್ಕೆ ಸಂಬಂಧವಿದೆ.

ವಿವರಗಳಿಗೆ ನೋಡಿ: Sudipta Kaviraj 1995 The unhappy Consciousness

Srinivas M.N. 1990 The remembered village

Sudipta Kaviraj (Ed:) 1997 Politics in India

ಭಂಡ

ಅಸಲು; ಮೂಲಧನ; ಭಂಡವಾಳ: ಭಂಡವೆಂಬುದಕ್ಕೆ ಅಸಲು, ಮೂಲಧನ, ಬಂಡವಾಳ, ಸರಕು, ಮಾರುವ ವಸ್ತು ಎಂಬೆಲ್ಲ ಅರ್ಥಗಳಿವೆ. ಇಲ್ಲಿ ಭಂಡವನ್ನು ಮಾರಾಟದ ಸರಕು ಎಂಬರ್ಥದಲ್ಲಿ ಬಳಸಲಾಗಿದೆ. ಭಂಡವೆಂದರೆ ಸರಕು, ಸರಕು ಎಂದರೆ ಮಾರಾಟ ವಸ್ತು. ವಸ್ತುವಿನ ಮಾರಾಟವು ವ್ಯಾಪಾರೋದ್ದಿಮೆಯನ್ನು ಸೂಚಿಸುತ್ತದೆ. ಎಲ್ಲಿ ಮಾರಾಟ ವಸ್ತುವಿರುತ್ತದೆಯೋ ಅದು ಮಾರುಕಟ್ಟೆಯ ವ್ಯವಸ್ಥೆಯನ್ನು ಸೂಚಿಸುತ್ತದೆ. ಮಾರಾಟವೆಂದರೆ ಅಲ್ಲಿ ವ್ಯಾಪಾರಿ ವರ್ಗವೊಂದು ಉದಯವಾಗುತ್ತದೆಯೆಂಬುದು ಗಮನಾರ್ಹ. ಭಂಡಸಾಲೆಯೆಂಬ ಪದವು ಚಾಲ್ತಿಯಲ್ಲಿದೆ.

ವಿವರಗಳಿಗೆ ನೋಡಿ: ಸೆಟ್ಟಿ

ಭಗವತಿ

ಭಗವತಿಯೆಂದರೆ ದೇವತೆ. ದಕ್ಷಿಣ ಕನ್ನಡದಲ್ಲಿ ಭಗವತಿಯಾರಾಧನೆಯು ಈಗಲೂ ಇದೆ. ಕ್ರಿ.ಶ ಏಳು ಮತ್ತು ಒಂಬತ್ತನೆಯ ಶತಮಾನದ ವೇಳೆಗೆ ದಕ್ಷಿಣ ಭಾರತದಲ್ಲಿ ದುರ್ಗೆಯ ಪೂಜೆಯು ಹೆಚ್ಚು ಪ್ರಚಲಿತವಿತ್ತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಭಾಗ ಆರಾಧನೆಯು ಕ್ರಿಸ್ತಪೂರ್ವದಲ್ಲಿಯೇ ಆಚರಣೆಯಲ್ಲಿದ್ದು ಚೀನಾದಿಂದ ಭಾರತಕ್ಕೆ ಡಾಯೋ ಸಿದ್ಧಾಂತದ ಮೂಲಕ ಬಂತೆಂದು ಚಂದ್ರ ಚಕ್ರವರ್ತಿಯವರು ಅಭಿಪ್ರಾಯ ಪಡುತ್ತಾರೆ. (ಅದೇ ಪು. 89) ಇದು ಮುಖ್ಯವಾಗಿ ನೀಚಾರ್ಥ ಸೂಚಕವಾಗಿ ಕೃತಿಯಲ್ಲಿ ಬಂದಿದೆ. ಬಹುಶಃ ಜೈನಧರ್ಮದ ಪ್ರಾದುರ್ಭಾವದ ಹೊತ್ತಿನಲ್ಲಿ ಈ ರೀತಿಯ ಆಚರಣೆಯು ಅರ್ಥಶೂನ್ಯವಾಗಿ ಕಂಡಿರಬೇಕು. ಇದಕ್ಕಾಗಿ ಪಂಪನು ಹೀಗೆ ಪ್ರತಿಪಾದಿಸಿರಬೇಕು. ಆದರೆ ಭಗವತಿಯ ಆರಾಧನೆಯ ಗುಡಿಗಳು ದಕ್ಷಿಣ ಕನ್ನಡದಲ್ಲಿ ಮತ್ತು ಕೇರಳದ ಗಡಿ ಪ್ರದೇಶದಲ್ಲಿ ಈಗಲೂ ಇವೆ: ಭಗವತಿಯ ವಿಶೇಷ ಉತ್ಸವ (ಕಳಿಯಾಟ)ವು ಹತ್ತು ವರ್ಷ, ಹನ್ನೆರಡು ವರ್ಷ, ಅರವತ್ತು ವರ್ಷಗಳಿಗೊಮ್ಮೆ ನಡೆಯುತ್ತದೆ. ವರ್ಷಕ್ಕೊಮ್ಮೆ ಜಾತ್ರೆಯಿರುತ್ತದೆ.

ದುರ್ಗೆಯು ಫಲವತ್ತತೆಯ ಮಾತೃ ದೇವತೆಯೆಂದು ದೇವಿಪ್ರಸಾದ ಚಟ್ಟೋಪಾಧ್ಯಾಯ ಹೇಳುತ್ತಾರೆ.

ವಿವರಗಳಿಗೆ ನೋಡಿ: ರಾಮಚಂದ್ರರಾವ್ ಎಸ್.ಕೆ. 1981 ವಿವಾಹ ಪದ್ಧತಿಗಳು ಪುಟ. 79

Chandra Chakravati 1963 Sex Life in Ancient India Firms P. 97

Bhattacharya Narendranath 1975 Ancient Indian Ritual and their Social ContentP.122

ಭರತವಂಶ

ರಾಮಾಯಣದಲ್ಲಿ ಬರುವುದು ರಘುವಂಶದ ಕತೆ. ರಾಮಾಯಣವನ್ನು ಸೂರ್ಯವಂಶದ ಕತೆಯೆಂದೂ ಸೂರ್ಯವಂಶದವರು ಚಕ್ರವರ್ತಿಗಳಾಗಿದ್ದರೆಂದೂ ಹೇಳುತ್ತಾರೆ. ಮಹಾಭಾರತದಲ್ಲಿ ಬರುವುದು ಚಂದ್ರವಂಶದ ಕತೆ. ಚಂದ್ರವಂಶದ ಕತೆಯನ್ನು ಭರತವಂಶದ ಕತೆಯೆಂದು ಕರೆಯುವುದು ರೂಢಿ. ಚಂದ್ರವಂಶದಲ್ಲಿ ಅನಂತರ ಯದುವಂಶ ಮತ್ತು ಪುರುವಂಶವೆಂದು ಎರಡಾಯಿತು. "ಯದು, ಪುರುಗಳೆಂಬ ವಂಶವೆರಡಾಯ್ತು" ಎಂದು ಪದ್ಯಭಾಗವಿದೆ. ಸೂರ್ಯವಂಶದ ಹೆಗ್ಗಳಿಕೆಯೇನೆಂದರೆ – ಸೂರ್ಯ ಬಿಸಿಲು ಎಲ್ಲೆಲ್ಲಿ ಬೀಳುತ್ತದೋ ಅದೆಲ್ಲವೂ ಸೂರ್ಯವಂಶದವರ ಸೊತ್ತಾಗಿತ್ತು ಎಂದು ಹೇಳುತ್ತಾರೆ.

ವಿವರಗಳಿಗೆ ನೋಡಿ: Romila Thapar 1975 The Past and Prejudice

ಭರ್ಜಿ

"ಹಿಂದಿನ ಕಾಲದ ಪ್ರಮುಖ ಆಯುಧವು ಭರ್ಜಿ. ಇದರ ಮೊನೆಯ ಭಾಗದ ಆಕಾರವನ್ನು ಅನುಸರಿಸಿ ಎಲೆಭರ್ಜಿ, ಸೂಜಿಭರ್ಜಿ ಎಂಬುದಾಗಿ ಗುರುತಿಸುತ್ತಾರೆ. ಇದು ಯಾವುದೇ ವಾಹನದ ಮೇಲೆ ಕುಳಿತು ಪ್ರಯೋಗಿಸುವುದಕ್ಕೆ ಅನುಕೂಲವಾಗುವುದರಿಂದ, ಶತ್ರುವು ತನ್ನ ಮೇಲರಗಿ ಬಂದು ಅಪಾಯ ಮಾಡುವ ಮೊದಲೇ,ದೂರದಿಂದಲೇ ಶತ್ರುಸಂಹಾರ ಮಾಡಬಹುದಾದ ಮಾರಕಾಸ್ತ್ರವಾಗಿತ್ತು. ಕುದುರೆಯ ಮೇಲೆ ಕುಳಿತು ಭರ್ಜಿಗಳಿಂದ ಯುದ್ಧಮಾಡುತ್ತಿರುವ ದೃಶ್ಯವನ್ನು ನಾವು ಕಾಣಬಹುದು." (ಡಾ. ಆರ್. ಶೇಷಶಾಸ್ತ್ರಿ. ೨೦೦೪. ಪು. ೨೨೨) ಎಲೆಯ ಆಕಾರದ ಭರ್ಜಿಯ ಮೊನೆಯು ಎಲೆಯ ರೀತಿಯಲ್ಲಿ ಇರುತ್ತದೆ. ಸೂಜಿ ಭರ್ಜಿಯು ಸೂಜಿಯಂತೆ ಇರುತ್ತದೆ.

ಭವಪ್ರತ್ಯಯಜ್ಞಾನ

ಭವಪ್ರತ್ಯಯಜ್ಞಾನ: ನಾರಕಿಗಳಿಗೂ ದೇವತೆಗಳಿಗೂ ಆಯಾ ಭವಗಳು ಕಾರಣವಾಗಿ ಉಂಟಾಗುವ ಜ್ಞಾನ.

ಭವವೈರತ್ವ

ಭವ ಸಂಬಂಧಿ ವೈರವೆಂದರೆ ಇಹಕ್ಕೆ ಸಂಬಂಧಿಸಿದ ವೈರ ಎಂದರ್ಥ. ವೈರವನ್ನು ಬೇರೆ ಬೇರೆ ಭವಾವಳಿಗಳಲ್ಲಿಯೂ ಬಂದು ಕಾಡುವುದು ಜೈನಧರ್ಮದ ಅನೇಕ ಕಾವ್ಯಗಳಲ್ಲಿ ಚಿತ್ರಿತವಾಗಿದೆ. ಇದು ಜೈನಧರ್ಮಕ್ಕೆ ವಿಶಿಷ್ಟವಾದುದು. ಹಿಂದಿನ ಜನ್ಮದಲ್ಲಿ ಮಾಡಿದ ಪಾಪ – ಪುಣ್ಯಗಳು ಮರು ಜನ್ಮದಲ್ಲಿಯೂ ಕಾಡುತ್ತವೆ. ಪಾಪ – ಪುಣ್ಯಾದಿ ಮರುಜನ್ಮಕ್ಕೂ ಬರುತ್ತವೆ ಎಂಬುದನ್ನು ವೈದಿಕ ಧರ್ಮವೂ ನಂಬುತ್ತದೆ.

ಭಸ್ಮ ಶಯ್ಯೆ

ಕಟ್ಟುನಿಟ್ಟಾದ ಪಾಶುಪತವ್ರತವನ್ನು ಆಚರಿಸುವವರು ವಿಭೂತಿಯಿಂದ ಏರ್ಪಡಿಸಿರುವ ಹಾಸಿಗೆಯ ಮೇಲೆ ಮಲಗುತ್ತಾರೆ. ಅದಕ್ಕೆ 'ಭಸ್ಮಶಯ್ಯೆ' ಎಂದು ಹೇಳುತ್ತಾರೆ.

ಪಶುಪತಿಯೆಂದರೆ ಶಿವ. ಶಿವನನ್ನು ಆರಾಧಿಸುವ ವ್ರತವನ್ನು ಪಾಶುಪತ ವ್ರತವೆಂದು ಕರೆಯುತ್ತಾರೆ. ಕಠಿಣವಾದ ಪಾಶುಪತ ವ್ರತದಲ್ಲಿ (ವಿಭೂತಿಯೆಂದರೆ ವಿಶೇಷವಾಗಿ ಆಗುವಿಕೆ – ಪರಿವರ್ತನೆ) ಶಿವನ ಆರಾಧಕರು ವಿಭೂತಿಯನ್ನು ಧರಿಸುತ್ತಾರೆ. ಹಾಸಿಗೆಯ ಮೇಲೆ ಮಲಗುತ್ತಾರೆ. ಪರ್ಯಾಯವಾಗಿ ಇದು ಭಸ್ಮಲೇಪನ.

ಆಚಾರಹೀನರು, ಪಾಖಂಡಿಗಳು, ಸುರಾಪಾನ ಮಾಡುವವರು, ಜಟಾಭಸ್ಮಗಳನ್ನು ಧರಿಸುವವರಾಗಿದ್ದು ಇಂಥ ಮೂರ್ಖರು ನಿನ್ನ ಭಕ್ತರಾಗುವವರು ಮತ್ತು ಇಂದ್ರಾದಿಗಳ ಜೊತೆಗೆ ನಿನಗೆ ಹವಿರ್ಭಾಗ ದೊರೆಯಲಾರದು–ಇಂಥ ವರ್ಣನೆಗಳು ಭಾಗವತದಲ್ಲಿವೆ. ಶೈವ ಸಂಪ್ರದಾಯದಲ್ಲಿ ಈ ರೀತಿಯ ಅನಾಚಾರಗಳಿಗೆ ಅವಕಾಶವಿದೆ ಮತ್ತು ಇತ್ತು ಎಂಬುದನ್ನು ಈ ಪಂಥದ ಇತಿಹಾಸ ಬಲ್ಲವರಿಗೆ ಹೇಳುವ ಕಾರಣವಿಲ್ಲ ಎಂದು ಶಂಬಾ ಪ್ರತಿಕ್ರಿಯಿಸಿದ್ದಾರೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 1 ಪುಟ. 174

ಭಾರತತಾಯಿ

'ಭಾರತತಾಯಿ' ಎನ್ನುವ ಪದವು ರಾಷ್ಟ್ರೀಯತೆಯನ್ನು ಕಟ್ಟಲು ಬಳಸಿರುವ ಪದ. ಭಾರತವನ್ನು ತಾಯಿಗೆ ಹೋಲಿಸುವ ಮೂಲಕ ರಾಷ್ಟ್ರೀಯತೆಯ ಹೊಸ ಪರಿಭಾಷೆಯನ್ನು ಕಲ್ಪಿಸಿತು. ಕೇರಳ, ಕನ್ನಡ, ಆಂಧ್ರ ಪ್ರದೇಶಗಳು ಭಾರತತಾಯಿಯ ಮಕ್ಕಳು. "ಜಯ ಹೇ ಕರ್ನಾಟಕ ಮಾತೆ

ಭಾರತ ಜನನಿಯ ತನುಜಾತೆ" ಎಂದು ಕರೆದಿರುವುದು ಇಲ್ಲಿ ಗಮನಾರ್ಹ, ತಾಯಿಯ ಪರಿಕಲ್ಪನೆ ಆದರ್ಶಕ್ಕೆ ಸಂಬಂಧಿಸಿರುವುದು. ರಾಷ್ಟ್ರೀಯತೆಯ ಹೋರಾಟದಲ್ಲಿ ಅತ್ಯಂತ ಆಕರ್ಷಕವಾಗಿ ಬಳಸಿರುವ ನುಡಿಗಟ್ಟುಗಳಲ್ಲಿ ಇದೂ ಒಂದು: ಭಾರತಮಾತೆಯನ್ನು ಪರದಾಸ್ಯದಿಂದ ಮುಕ್ತಿಗೊಳಿಸಬೇಕು ಎನ್ನುವುದು ಇಲ್ಲಿಯ ಆಶಯ. ಹಾಗೆಯೇ ಭಾರತ ಮಾತೆಯ ಪರಿಕಲ್ಪನೆಯಲ್ಲಿ ಭಾವನಾತ್ಮಕ ಅಂಶವೂ ಸೇರಿಕೊಂಡಿದೆ.ನವೋದಯದ ಕಾಲಘಟ್ಟದಲ್ಲಿ ಭಾರತಾಂಬೆಯ ಕುರಿತು ಅನೇಕ ರೀತಿಯ ಕವಿತೆಗಳು ಬಂದಿವೆಯೆಂಬುದು ಗಮನಾರ್ಹ.

ವಿವರಗಳಿಗೆ ನೋಡಿ: ಸುನಿಲ್ ಸಹಸ್ರಬುಧೆ, ಕೆ.ಪುಟ್ಟಸ್ವಾಮಿ(ಅನು) ೨೦೦೩ ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು

ಭಾರತೀಯ ಸಂಸ್ಕೃತಿ

ಭಾರತೀಯ ಸಂಸ್ಕೃತಿಯೆಂದರೆ ಬರಿಯ ವೈದಿಕವಲ್ಲ; ಭಾರತೀಯ ಸಂಸ್ಕೃತಿಯಲ್ಲಿ ಅನೇಕ ಅಂಶಗಳು ಸೇರಿಕೊಂಡಿವೆ. ಬೇರೆ ಬೇರೆ ಪಂಥಗಳಿವೆಯೆಂಬುದು ಗಮನಾರ್ಹ. ಬುದ್ಧನಿಂದ ಪ್ರಾರಂಭವಾದ ಬೌದ್ಧ, ಮಹಾವೀರನಿಂದ ಪ್ರಾರಂಭವಾದ ಜೈನ ಮತಗಳು ಸೇರಿಕೊಂಡಿವೆ. ನ್ಯಾಯ, ವೈಶೇಷಿಕ, ಸಾಂಖ್ಯ ತತ್ತ್ವಗಳು ಸೇರಿವೆ. ಹೇಳುತ್ತಾರೆ. ಅಂದರೆ ಭಾರತೀಯ ಸಂಸ್ಕೃತಿಯಲ್ಲಿ ಅನೇಕತೆಯಿದೆ. ಅದು ಭಾರತೀಯ ಲಕ್ಷಣವಾಗಿದೆ.ವಿವಿಧತೆಯು ಭಾರತೀಯತೆಯ ಲಕ್ಷಣವಾಗಿದೆಯೆಂದು ಅನೇಕರು ಗುರುತಿಸಿದ್ದಾರೆ.

ವಿವರಗಳಿಗೆ ನೋಡಿ: ಸುನಿಲ್ ಸಹಸ್ರಬುಧೆ, ಕೆ.ಪುಟ್ಟಸ್ವಾಮಿ(ಅನು) ೨೦೦೩ ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು
ಮಹಾತ್ಮಾಗಾಂಧಿ ೧೯೫೮ ಧರ್ಮ ಮತ್ತು ನೀತಿ
Frant 2 Fanon 1990 Wretched of Earth

ಭಾರ್ಗವ ಪರ್ಣಶಾಲೆ

ಭಾರ್ಗವ ಪರ್ಣಶಾಲೆಯೆಂದರೆ ಕುಂಬಾರನ ಗುಡಿಸಲು. ಇದು ಆ ಕಾಲದ ಕುಂಬಾರರ ಪರಿಸ್ಥಿತಿಯನ್ನು ವಿವರಿಸುತ್ತದೆ. ಪರ್ಣವು ಸಂಸ್ಕೃತದ ಪದವಾಗಿದೆ. ಪರ್ಣವೆಂದರೆ ಎಲೆ. ಎಲೆಯಿಂದ ರಚಿತವಾದ ಶಾಲೆಯು ಪರ್ಣಶಾಲೆಯಾಗಿದೆ.

ಭೂತ ಭೋಜನ

ಪಿಶಾಚಿಗಳಿಗೆ ಬಡಿಸುವ ಮಾಂಸ ಭೋಜನವನ್ನು ಭೂತಭೋಜನವೆಂದು ಕರೆಯುತ್ತಾರೆ. ದೇವರುಗಳಿಗೆ ಸಸ್ಯಾಹಾರವನ್ನು ಉಣಬಡಿಸುತ್ತಾರೆ. ದೈವಗಳಿಗೆ ಪಿಶಾಚಿಗಳಿಗೆ ಮಾಂಸವನ್ನು ಉಣಬಡಿಸುತ್ತಾರೆ. ಅಭಿಚಾರ ಕ್ರಿಯೆಯಲ್ಲಿಯೂ ಮಾಂಸವೇ ನೈವೇದ್ಯವಾಗಿರುತ್ತದೆ. ಮಾಂಸವನ್ನು ದೇವರಿಗೆ ಅರ್ಪಿಸುವಲ್ಲಿ ಹಿಂಸೆಯ ಅಂಶವು ಮುಖ್ಯವಾಗಿರುತ್ತದೆ. ಭೂತ ಭೋಜನವು ಹಿಂಸಾಚಾರದ ಕರ್ಮವಾಗಿದೆ. ಭೂತವೆಂದರೆ ಕಳೆದು ಹೋದುದು ಎಂಬ ಅರ್ಥ ಬರುತ್ತದೆ. ಸತ್ತವನು ಭೂತವಾಗುತ್ತಾನೆ.ಭೂತವನ್ನು ಡೆವಿಲ್ ಎಂದು ಕರೆದಿದ್ದಾರೆ.ಇನ್ನೊಂದು ವಾದದ ಪ್ರಕಾರ ಸಾಯುವ ಕಾಲದಲ್ಲಿ ಬಾಯಿಗೆ ನೀರು ಕೊಡದೇ ಹೋದಲ್ಲಿ ಅವರು ಭೂತವಾಗುತ್ತಾರೆ. ಇದಕ್ಕೆ ಸಂಬಂಧ ಪಟ್ಟಂತೆ ಸಾಯುವ ವ್ಯಕ್ತಿಯು ಹೇಗಿದ್ದನೆಂಬುದೂ ಮುಖ್ಯ.ಮತ್ತೆ ಭೂತದ ಪರಿಕಲ್ಪನೆಯೇ ಮೂಲತಃ ಅವೈದಿಕವೆಂದೂ ಹೇಳುತ್ತಾರೆ.

ಭೂದಾನ

ಭೂದಾನವನ್ನ ಕುರಿತು ವಿನೋಬಾರವರು ಈ ರೀತಿಯಾಗಿ ಹೇಳುತ್ತಾರೆ. " ಗಾಳಿ, ಬೆಳಕು, ನೀರು ಇವು ಮೂರನ್ನು ಭಗವಂತ ಎಲ್ಲರಿಗೂ ಕೊಟ್ಟಿದ್ದಾನೆ. ಅದೇ

ರೀತಿ ಭೂಮಿಯನ್ನೂ ನೀರನ್ನೂ ಒಬ್ಬಾತ ತನ್ನ ವಶಪಡಿಸಿಕೊಳ್ಳುತ್ತಾನೆಂದು ಭಾವಿಸೋಣ. ಅನಂತರ ಏನಾದೀತು? ನೀರು ಎಲ್ಲರಿಗೂ ಅಗತ್ಯ. ಏಕೆಂದರೆ ನಾವೆಲ್ಲ ದೇವರ ಮಕ್ಕಳು, ದೇವರಿಂದ ಕೊಡಲ್ಪಟ್ಟಿರುವುದು ನಮ್ಮೆಲ್ಲರಿಗೂ ಸೇರತಕ್ಕದ್ದು. ಗಾಳಿ, ಬೆಳಕು, ನೀರು ಇವು ಭಗವಂತನ ಪ್ರಸಾದ. ಇವು ಹೇಗೆ ಎಲ್ಲರಿಗೂ ಸ್ವಂತದ್ದೋ, ಅದೇ ರೀತಿ ಭೂಮಿಯೂ ಆತನ ಪ್ರಸಾದ. ಎಲ್ಲರಿಗೂ ಸೇರಿದ್ದು. ಒಂದು ಕುಟುಂಬಕ್ಕೆ ಐದು ಅಥವಾ ಆರು ಎಕರೆ ನೆಲದ ಅಗತ್ಯ ಇದೆ. ಅದಕ್ಕಿಂತ ಐದಾರು ಪಾಲು ಹೆಚ್ಚಾಗಿ ಇಟ್ಟುಕೊಳ್ಳಲು ಏನು ಅಧಿಕಾರ ಇದೆ? ನನ್ನ ತಲೆ ಇಪ್ಪತ್ತು ಸೇರು ಭಾರ ಹೊರಬಲ್ಲುದು. ನನಗೆ ಅಷ್ಟು ಸಾಕು. ಹೀಗಿರುವಾಗ, ಇದಕ್ಕಿಂತ ನಾಲ್ಕೈದರಷ್ಟು ಭಾರ ಹೊರುವ ಅಧಿಕಾರ ಕೊಡುವ ಉದ್ದೇಶವಾದರೂ ಏನು? ಮಿಕ್ಕವರನ್ನು ಅವರ ಪಾಲಿನಿಂದ ವಂಚಿಸುವುದಕ್ಕೆ ತಾನೆ? ಎಲ್ಲರಿಗೂ ಸೇರಿದ ಈ ಭೂಮಿಯಲ್ಲಿ ಎಲ್ಲರಿಗೂ ಏಕೆ ಸಮಪಾಲು ಇರಕೂಡದು? ಗ್ರಾಮದ ಭೂಮಿ ಎಲ್ಲ ಗ್ರಾಮಸ್ಥರಿಗೂ ಸೇರಿದ್ದು. ಹೀಗೆ ನಾವು ಭಾವಿಸಿದ್ದೇ ಆದರೆ ಸರ್ವೋದಯದ ತತ್ವ ನಮಗೆ ಅರ್ಥವಾಗುತ್ತದೆ. ಭೂಮಿಯ ಮಕ್ಕಳೆಲ್ಲರಿಗೂ ಅದರ ಪಾಲು ದೊರಕುವವರೆಗೂ ನನ್ನ ಕೆಲಸ ಪೂರ್ತಿಯಾಗುವುದಿಲ್ಲ."

ಈ ಹಿನ್ನೆಲೆಯಲ್ಲಿ ಭೂದಾನದ ಕುರಿತ ಚಾರಿತ್ರಿಕ ವಿವರಣೆಯನ್ನು ಗಮನಿಸಬೇಕು: (ನಾಡೋಡಿ ಮದರಾಸು ೧೯೫೭ ವಿನೋಬಾ ಅಣಿಮುತ್ತುಗಳು)

ಐದು ಆರನೆಯ ಶತಮಾನಗಳಿಂದ ಬ್ರಾಹ್ಮಣರಿಗೆ ಭೂಮಾನ್ಯ ನೀಡುವ ಪದ್ಧತಿಯು ಬಲಗೊಂಡ ಕಾರಣ, ಆದಿವಾಸಿ ಪ್ರದೇಶಗಳಲ್ಲಿ ಅವರಿಗೆ ಮತ್ತು ಇತರ ಮತಧರ್ಮಿಯ ಮಾನ್ಯದಾರರಿಗೆ ಕೃಷಿಕರ ಮೇಲಿನ ಹತೋಟಿಯನ್ನು ನೀಡಿದಂತಾಯಿತು. ಆರನೆಯ ಶತಮಾನದ ನಂತರ ಒರಿಸ್ಸಾ, ದಖನ್ ಮುಂತಾದ ಹಿಂದುಳಿದ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ರೈತರು ಮತ್ತು ವಾರಗಾರರು ತಮ್ಮ ತಮ್ಮ ಭೂಮಿಗಳ ಮಾನ್ಯದಾರರ ಆಶ್ರಯದಲ್ಲಿಯೇ ನೆಲಸತಕ್ಕದ್ದೆಂದು ಹೇಳಲಾಯಿತು. ಅಲ್ಲಿಂದ ಈ ರೂಢಿ ಗಂಗಾ ಬಯಲಿಗೂ ವ್ಯಾಪಿಸಿತು. ಉತ್ತರ ಭಾರತದಲ್ಲಿಯೂ ಕಸುಬುದಾರರು ಹಾಗೂ ರೈತರಿಗೆ ಮಾನ್ಯದಾರರ ಹಳ್ಳಿಗಳಲ್ಲೇ ನೆಲೆಸುವಂತೆ ಆದೇಶ ನೀಡಲಾಯಿತು. ಅವರು ಹಳ್ಳಿಯಿಂದ ಹಳ್ಳಿಗೆ ಹೋಗುವಂತಿರಲಿಲ್ಲ. ಬದಲಾಗಿ ಮಾನ್ಯದಾರರ ಅಗತ್ಯಗಳನ್ನು ಪೂರೈಸುವ ಸಲುವಾಗಿ ಒಂದೇ ಹಳ್ಳಿಯಲ್ಲಿ ನೆಲಸಬೇಕಾಯಿತು.

ವಿವರಗಳಿಗೆ ನೋಡಿ: ಆರ್. ಎಸ್. ಶರ್ಮ ೧೯೯೭. ಪು. ೨೫೫

ಭೂಷಣಾಂಗ

'ಕಟಕ, ಕಟಿಸೂತ್ರ, ಕುಂಡಲ; ಹಾರ; ಕೇಯೂರ, ನೂಪುರಾದಿಗಳು' ಸ್ತ್ರೀ ಪುರುಷರಿಗೆ ವಿಶೇಷ ಭೂಷಣವೆನಿಸುವುದು.

ಭೈಕ್ಷ್ಯ

ಭಿಕ್ಷೆಯಲ್ಲಿ ಬೇರೆ ಬೇರೆ ವಿಧಗಳಿವೆ. ಒಂದು ಯತಿಗಳು ಬೇಡುವ ಭಿಕ್ಷೆ. ಇದನ್ನು ಚರಿಗೆಯೆಂದು ಕರೆಯುತ್ತಾರೆ. ಇನ್ನೊಂದು ಬಡತನದ ಕಾರಣಕ್ಕಾಗಿ ಬೇಡುವ ಭಿಕ್ಷೆ. ಈ ಎರಡರ ಉಲ್ಲೇಖವೂ ವಡ್ಡಾರಾಧನೆಯಲ್ಲಿ ಬರುತ್ತದೆ. ಯತಿಗಳು ಬೇಡುವ ಭಿಕ್ಷೆಯು ಸೀಮಿತವಾದುದು. ಎಷ್ಟು ಬೇಕೋ ಅಷ್ಟನ್ನು ಮಾತ್ರ ಅವರು ಭಿಕ್ಷೆ ಬೇಡುತ್ತಾರೆ. ಬಡತನದಿಂದ ಬೇಡುವ ಭಿಕ್ಷೆಗೆ ಮಿತಿಯಿಲ್ಲ.

ಭೋಜನ

ಸದ್ಯ ಮದುವೆಯಾದ ಹುಡುಗಿಯರು, ಮದುವೆಯಾಗದ ಹುಡುಗಿಯರು, ರೋಗಿಗಳು ಮತ್ತು ಗರ್ಭಿಣಿಯರು ಇವರಿಗೆ ಮೊದಲು ಊಟ ನೀಡಬೇಕು. (ಮನುಸ್ಮೃತಿ. ೧-೧೧೪) ಹಸಿವಾದವನಿಗೆ ಅನ್ನ ನೀಡುವುದು ಸಂಸ್ಕೃತಿಯಲ್ಲಿ ನಡೆದು ಬಂದಿರುವ ಕ್ರಮವಾಗಿದೆ.

ಅನ್ನ, ವಸನ, ವಸತಿ ಇವು ಮೂರು ಮನುಷ್ಯನ ಪ್ರಮುಖ ಸಮಸ್ಯೆಗಳಾಗಿವೆ. ದೇಹಧಾರಣೆಗೆ ಭೋಜನವು ಅತ್ಯಗತ್ಯ. ಸಾಲ ಮಾಡಿಯಾದರೂ ತುಪ್ಪ ತಿನ್ನು ಎನ್ನುವುದು ಒಂದು ಮತ. ಅನ್ನ, ವಸನ, ವಸತಿ ನಿರಾಕರಣೆಯು ಜೈನಧರ್ಮದ ಪ್ರಮುಖ ನಿಲುವಾಗಿದೆ. ಇವೆರಡೂ ಜೀವನದ ದೃಷ್ಟಿಕೋನಗಳನ್ನು ವಿವರಿಸುತ್ತವೆ.

ಬೇಟೆಗಾಗಿ ನಾಯಿ ಸಾಕುವವರ, ಕಳ್ಳು ಮಾರುವವರ, ಅಗಸರ, ಬಟ್ಟೆಗೆ ಬಣ್ಣ ಹಾಕುವವರ, ಕಟುಕನ, ಮಿಂಡರಿರುವ ಹೆಂಡತಿಯ ಗಂಡನ ಅನ್ನವು ವರ್ಜ್ಯವು. (ಮನುಸ್ಮೃತಿ) ಅನ್ನವನ್ನು ತಿರಸ್ಕರಿಸಬೇಕಾದ ಅಗತ್ಯವನ್ನು ಇದು ಹೇಳುತ್ತದೆ.

ಹೆಂಡತಿಯ ಮಿಂಡನನ್ನು ತಿಳಿದು ಇರುವವರು, ಹೆಂಡತಿಯ ಅಧೀನರು, ಸತ್ತು ಹತ್ತುದಿನ ಕಳೆಯದ ಮನೆಯ, ಅಸಂತೋಷಕರವಾದ ಅನ್ನವು ನಿಂದಿತವು. (ಮನುಸ್ಮೃತಿ)

ರಾಜಾನ್ನವು ತೇಜಸ್ಸನ್ನು, ಶೂದ್ರಾನ್ನವು ಬ್ರಹ್ಮವರ್ಚಸ್ಸನ್ನು, ಸೊನಗಾರನ ಅನ್ನವು ಆಯುಸ್ಸನ್ನು, ಚರ್ಮಕಾರನ ಅನ್ನ ಕೀರ್ತಿಯನ್ನು ಕೆಡಿಸುತ್ತದೆ. (ಮನುಸ್ಮೃತಿ)

ಅಡಿಗೆಯವನ ಅನ್ನ ಸಂತತಿಯನ್ನು, ಅಗಸನ ಅನ್ನ ಬಲವನ್ನು, ಸೂಳೆಯ ಅನ್ನ -ಭೂರಿಭೋಜನಗಳು ಇತರ ಪುಣ್ಯಗಳನ್ನು ಕೆಡಿಸುತ್ತವೆ. (ಮನುಸ್ಮೃತಿ)

ವೈದ್ಯನ ಅನ್ನವು ಕಿವಿಗೆ, ಜಾರಿಣಿಯ ಅನ್ನವು ವೀರ್ಯಕ್ಕೂ, ಬಡ್ಡಿಯಿಂದ ಬದುಕುವವನ ಅನ್ನ ಹಕ್ಕಿಮಲಕ್ಕೂ, ಶಸ್ತ್ರವಿಕ್ರಯಿಯ ಅನ್ನ ಮನುಷ್ಯ ಮಲಕ್ಕೂ ಸಮಾನವಾದುದರಿಂದ ಅವುಗಳೆಲ್ಲ ತ್ಯಾಜ್ಯ. ಇಲ್ಲಿ ಬಂದಿರುವ ವಿಧಿ ನಿಷೇಧವು ಗಮನಾರ್ಹವಾಗಿದೆ. (ಮನುಸ್ಮೃತಿ) ಮನು ಹೇಳುವ ಕ್ರಮವನ್ನು ಮುಖ್ಯವಾಗಿ

ಗಮನಿಸಬೇಕು. ಯಾರು ನೀಡಿದ ಅನ್ನವನ್ನು ಸ್ವೀಕರಿಸಬೇಕು ಯಾವುದನ್ನು ಸ್ವೀಕರಿಸಬೇಕು ಎನ್ನುವುದೇ ಇಲ್ಲಿ ಮುಖ್ಯ.

ವಿವರಗಳಿಗೆ ನೋಡಿ: ಮಡಿಮೈಲಿಗೆ; ಪವಿತ್ರ-ಅಪವಿತ್ರ

ಭೋಜನಾಂಗ

ಭೋಜನಾಂಗ ಮನುಷ್ಯರಿಗೆ ತೇಜಸ್ಸು, ಬಲ, ಆಯುಸ್ಸು, ಆರೋಗ್ಯ, ತುಷ್ಟಿ, ಪುಷ್ಟಿ, ಪ್ರತಿಭಾ, ಪ್ರಭೃತಿದಾಯಿಗಳಪ್ಪ ಅಮೃತಾಂಗಗಳನ್ನು ನೀಡುವುವು. ಇದು ನಮ್ಮ ಆಹಾರ ಮತ್ತು ಪಾನೀಯಗಳಿಗೆ ಸಂಬಂಧಿಸಿದ ವಿಚಾರಗಳು.

ಮಂಗಳಗೀತಿ

ಮಂಗಳದ ಹಾಡು ಎನ್ನುವುದಕ್ಕೆ ಮಂಗಳಗೀತೆಯೆಂದು ಕರೆಯುತ್ತಾರೆ. ಯಾವುದು ಮಂಗಳವನ್ನು ಸೂಚಿಸುತ್ತದೆಯೋ ಅದು ಮಂಗಳಗೀತೆಯಾಗಿರುತ್ತದೆ.

ವಿವರಗಳಿಗೆ ನೋಡಿ: ಪಂಪ ಭಾರತ ೧೧-೫೨

ಮಂಗಳ ಜಲ

ಸುವರ್ಣ, ರಜತ, ಮುಕ್ತಾ, ಮಾಣಿಕ್ಯ, ಪ್ರವಾಳಕ ಅಥವಾ ನೀಲ, ವಜ್ರ, ಪದ್ಮರಾಗ ಮುತ್ತು ಹವಳಗಳನ್ನು ಪಂಚರತ್ನವೆನ್ನುತ್ತಾರೆ. ಶಾತ ಕುಂಭವೆಂದರೆ ಚಿನ್ನದ ಕಲಶ, ಕಲಶದಲ್ಲಿನ ನೀರು ಮಂತ್ರ ಪೂರಿತವಾದರೆ ಆಗ ಅದು ಮಂಗಳಜಲವಾಗುತ್ತದೆ. ಕಲಶದಲ್ಲಿರುವ ನೀರನ್ನು ತಲೆಗೆ ಸುರಿದರೆ ಆಗ ಮಂಗಳಜಲದ ಸ್ನಾನವಾಗುತ್ತದೆ. ಶುಭಕಾರ್ಯಕ್ಕೆ ಮಂಗಳಸ್ನಾನವಾಗಬೇಕು. ಇದು ಬಹಿರ್‌ಶುದ್ಧಿಗೆ ಕಾರಣವಾಗುತ್ತದೆ. ಲೌಕಿಕವಾಗಿ ಇದನ್ನು 'ಮಡಿ'ಯೆಂದು ಕರೆಯುತ್ತಾರೆ. ವ್ರತಕ್ಕೆ ಕೂರುವ ಮುನ್ನ ಮಂಗಳ ಸ್ನಾನವಾದರೆ - ಅನಂತರ ಅವರು ಯಾರನ್ನು ಮುಟ್ಟಬಾರದು. ಮುಟ್ಟಿದರೆ ಮೈಲಿಗೆಯಾಗುತ್ತದೆಯೆಂಬ ನಂಬಿಕೆಯಿದೆ. ಪಂಚರತ್ನಗಳು: ಶಾತ ಕುಂಭ: ಮಂಗಲಜಲದ ಪರಿಕಲ್ಪನೆಯು ವಿಶಿಷ್ಟವಾದುದು.

ಮಂಡಲ

ರಾಜ್ಯವೆನ್ನುವುದನ್ನು ಮಂಡಲವೆಂದು ಕರೆಯುತ್ತಾರೆ.

ಮಂಡಲಿಕ

ಊರನ್ನು (ಗ್ರಾಮವನ್ನು) ಆಳುವವನು ಗಾವುಂಡ. ಮಂಡಲವನ್ನು ಆಳುವವನು ಮಂಡಲಿಕ. ರಾಜನ ಅನಂತರದ ಮಹಾಮಂಡಲೇಶ್ವರನದು. ಅದರ ಅನಂತರ ಮಂಡಲೇಶ್ವರ. ಇದು ರಾಜಸತ್ತೆಯ ಅಧಿಕಾರದ ವಿಭಾಗ ಕ್ರಮಗಳನ್ನು ಸೂಚಿಸುತ್ತವೆ. ಯಾರು ಮಂಡಲವನ್ನು ಆಳುತ್ತಾರೋ ಅವರು ಮಂಡಲಿಕರು.

ಮಂತ್ರ

ಹುಡುಗಿಯು ಹೆಂಡತಿಯಾಗುವುದು ಮಂತ್ರಗಳಿಂದ. ಸುಖ, ಧನ, ಪರಿಚರ್ಯೆಗಳನ್ನು ಸಂಬಳದವಳೂ ಕೊಡಬಹುದು. ದೀರ್ಘಕಾಲದ ವಿವಾಹ ಸಂಸ್ಕಾರದಲ್ಲಿ ಸಪ್ತಪದಾ ವಿಧಿಯಲ್ಲಿ ಮಂತ್ರವು ಗೆಳತಿಯಾಗೆಂದು ಹೇಳುವುದರಿಂದ ಆ ಬಳಿಕ ವಿಚ್ಛೇದವಿಲ್ಲದ ಸಂಬಂಧ. ಈ ಮೊದಲು ವರನು ಮೃತಪಟ್ಟರೆ, ದೋಷ(ರೋಗ)ವುಳ್ಳವನೆಂದು ತಿಳಿದರೆ ಯೋಗ್ಯ ವರನೊಡನೆ ಬೇರೆ ವಿವಾಹ ಮಾಡಬಹುದು. (ಮನುಸ್ಮೃತಿ 8–226, 227) ಮಂತ್ರಗಳು ನಾಲ್ಕು ತರನಾಗಿವೆ: ಮೂರು ಪ್ರಧಾನವಾಗಿ ಯಜ್ಞಕ್ಕೆ ಸಂಬಂಧಿಸಿದವು 1) ಪಠಿಸಲುಯೋಗ್ಯವಾದ ಪದ್ಯಗಳು (ಋಚ್), 2) ಹಾಡಲು ಯೋಗ್ಯವಾದ ಪದ್ಯಗಳು (ಸಾಮನ್), ಮತ್ತು 3) ಗದ್ಯರೂಪವಾದ ಪದಸಮುದಾಯ (ಯಜಸ್) ಮತ್ತು ಕೊನೆಯದಾಗಿ 4) ಮೊದಲನೆಯ ಮತ್ತು ಮೂರನೆಯ ವಿಧಗಳಿಂದ ರೂಪಭೇದವಿಲ್ಲದಿದ್ದರೂ 'ಮಂತ್ರ' (ಯಕ್ಷಿಣೀ ವಿದ್ಯೆ) ಮಾಟ ಮತ್ತು ಸಂಸ್ಕಾರ (ವಿವಾಹ, ಅಭಿಷೇಕ, ಪ್ರೇತಕರ್ಮ ಮುಂತಾದವು)ಗಳಿಗೆ ಸಂಬಂಧಿಸಿದುವು. ಸಂಧಿನಿಯಮಗಳನ್ನನುಸರಿಸಿ ಸುವ್ಯವಸ್ಥಿತವವಾದ ಈ ಮೇಲೆ ಹೇಳಿದುವುಗಳೊಂದೊಂದರ ಒಟ್ಟು ಕೂಡಿಸಿದ ರೂಪವೇ ಸಂಹಿತೆ –ಋಗ್ವೇದಸಂಹಿತೆ, ಸಾಮವೇದ ಸಂಹಿತೆ, ಯಜುರ್ವೇದಸಂಹಿತೆ (ಬ್ರಾಹ್ಮಣ ಭಾಗ ಸೇರಿಯೇ ಅಥವಾ ಸೇರದೆಯೇ ಇದೆಯೇ ಎಂಬುದರ ಆಧಾರದಿಂದ "ಕೃಷ್ಣ" ಮತ್ತು "ಶುಕ್ಲ") ಮತ್ತು ಅಥರ್ವವೇದ ಸಂಹಿತೆ. ಇವುಗಳನ್ನವಲಂಬಿಸಿದ "ಬ್ರಾಹ್ಮಣ"ಗಳು ಯಜ್ಞಗಳನ್ನು ವಿಸ್ತರಿಸಿ ಪ್ರಶಂಸಿಸುವ ಗದ್ಯರಚನೆಗಳು, ಇವು ಒಂದೊಂದು ಸಂಹಿತೆಗೂ ಸೇರಿಕೊಂಡಿದ್ದು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗುವ ತರ್ಕಾತೀತವೂ ತಾತ್ವಿಕವಿಷಯಕವೂ ಆದ ಅರಣ್ಯಕಗಳು ಮತ್ತು ಉಪನಿಷತ್ತುಗಳನ್ನು ತಮ್ಮೊಳಗೆ ಹೊಂದಿವೆ. ಪ್ರತಿಯೊಂದು ಸಂಹಿತೆಯೂ ಕೆಲವು ಬ್ರಾಹ್ಮಣಗಳೂ ಕಾಲಕ್ರಮದಲ್ಲಿ ಶಾಖಾಭೇದಗಳನ್ನು ಹೊಂದಿದವು. ಮಂತ್ರಗಳು ಪವಿತ್ರವಾದವು ಎಂಬ ನಂಬಿಕೆಯಿದೆ. ಆರಾಧನೆಯಲ್ಲಿ ಮಂತ್ರಗಳು ಮಹತ್ವದ ಪಾತ್ರವನ್ನು ವಹಿಸುತ್ತದೆ. "ದೈವ ಮಂತ್ರಾಧೀನಂ" ಎಂಬ ಸೂತ್ರಸಿದ್ಧ ವಾಕ್ಯವಿದೆ. ಮಂತ್ರವೆನ್ನುವುದಕ್ಕೆ ನಾವು ಹೇಳುವುದು.ಬೇಡುವುದು ಎಂದು ಪ್ರಯೋಗಿಸಿರುವುದೂ ಇದೆ."

'ಮನನದಿಂದ ಮಂತ್ರ' ಎಂದು ಯಾಸ್ಕನು 'ನಿರುಕ್ತ'ದಲ್ಲಿ (೭,೩,೬) ಹೇಳಿದ್ದಾನೆ. ಗೂಢವಾದ ಮಾತು ಎಂದಾಗಿರಬೇಕು ಅದರ ಅರ್ಥ. "ಮಂತ್ರ್ಯತೇ ಗುಪ್ತಂ ಸಂಭಾಷ್ಯತೇ" ಎಂದು ಶಬ್ದಕಲ್ಪದ್ರುಮ", "ಮಂತ್ರರಾಶಿರ್ವೇದ ಇತ್ಯುಚ್ಯತೇ" ಎಂದು ಉವಟಾಚಾರ್ಯನ (೧೦೧೦–೧೦೬೦) ಒಂದು ನಿರ್ವಚನದಲ್ಲಿ ಕಂಡು ಬರುತ್ತದೆ.

ಬ್ರಹ್ಮ ಎಂಬ ಶಬ್ದವು ಋಕ್ ಸಂಹಿತೆಯಲ್ಲಿ 'ಮಂತ್ರ' ಎಂಬ ಅರ್ಥಕ್ಕೆ ಪರ್ಯಾಯವಾದ ಪದವಾಗಿದೆ.

(ಶೇಷ ನವರತ್ನ ೧೯೮೯. ಪು. ೭೯)

ವಿವರಗಳಿಗೆ ನೋಡಿ: ಸುಕುಮಾರ್ ಅಟಿಕ್ಕೋಡ್ ೨೦೦೫ ತತ್ವಮಸಿ ಪುಟ ೩೪
ಉಪನಿಷತ್ತು ಸಂದೇಶ, ಶ್ರೀಮದ್ಭಗವದ್ಗೀತಾ, ತೈತ್ತಿರೀಯ ಉಪನಿಷತ್ತು

ಮಂತ್ರಾಲೋಚನೆ

ಮಂತ್ರಿಯೊಂದಿಗೆ ರಾಜನು ಏಕಾಂತದಲ್ಲಿ ಚರ್ಚಿಸುವುದನ್ನು ಮಂತ್ರಾಲೋಚನೆಯೆಂದು ಕರೆಯುತ್ತಾರೆ. ಮಂತ್ರಾಲೋಚನೆಯು ಗೌಪ್ಯದ್ದು. ಪ್ರಾಚೀನ ರಾಜಕೀಯದಲ್ಲಿ ರಾಜ ಮಂತ್ರಿಯ ಸಂಬಂಧವು ಗಟ್ಟಿಯಾದುದು. ಗೌಪ್ಯದ ಅನೇಕ ಸಂಗತಿಗಳನ್ನು ಮಂತ್ರಿಯೊಂದಿಗೆ ರಾಜನು ಸಮಾಲೋಚಿಸುತ್ತಾನೆ. ಪ್ರಾಚೀನ ರಾಜಕೀಯ ವ್ಯವಸ್ಥೆಯಲ್ಲಿ ರಾಜನು ಮಂತ್ರಿ, ಸೇನಾಧಿಪತಿ, ಪುರೋಹಿತರೊಂದಿಗೆ ಮಂತ್ರಾಲೋಚನೆ ಮಾಡಿ ನಿರ್ಧಾರಕ್ಕೆ ಬರುತ್ತಿದ್ದರು. ಆದರೆ ಇದಕ್ಕೆ ಲಿಖಿತ ರೂಪವಿರುತ್ತಿರಲಿಲ್ಲ. ಮಂತು – ಮಂಥಾನಂ – ಮಂತ್ರಿ. ಪರಸ್ಪರ ಸಂಬಂಧಿತಗಳು ಮಂತ್ರಿಗಳೊಂದಿಗೆ ಆಲೋಚನೆಯನ್ನು ಮಂಥಿಸುವುದಕ್ಕೆ ಮಂತ್ರಾಲೋಚನೆ ಎಂದು ಕರೆಯುತ್ತಾರೆ.

ಮಂತ್ರಾವಾಸ

ರಾಜ ಕಾರ್ಯವನ್ನು ವಿಚಾರಮಾಡುವ ಗುಪ್ತ ಗೃಹವನ್ನು ಮಂತ್ರವಾಸವೆಂದು ಕರೆಯುತ್ತಾರೆ.

ಮಂತ್ರಿ

ಅಜ್ಜ–ಮುತ್ತಜ್ಜರಾದಿಯಾಗಿ ಹಿತಚಿಂತಕರಾದವರು, ಶಾಸ್ತ್ರಜ್ಞರು, ಶೂರರು, ಶಸ್ತ್ರಾಸ್ತ್ರ ನಿಪುಣರು, ಸತ್ಕುಲ ಪ್ರಸೂತರು ಆದವರನ್ನು ಯೋಗ್ಯರೆಂದು ಕಂಡುಕೊಂಡು ಏಳುಮಂದಿ ಮಂತ್ರಿಗಳನ್ನು ನಿಯಮಿಸಬೇಕು. (ಮನುಸ್ಮೃತಿ 7–54)

ಅಂತಹ ಆಪ್ತಮಂತ್ರಿಗಳೊಡನೆ ವಿಚಾರ ಮಾಡುವಂತೆ ಎಲ್ಲ ವಿಷಯಗಳನ್ನು ವಿಮರ್ಶಿಸಬೇಕು. ಸಾಮಾನ್ಯವಾಗಿ ಸಂಧಿ, ಯುದ್ಧ, ರಾಷ್ಟ್ರಸ್ಥಿತಿ ಕಾರಣ ಉತ್ಪತ್ತಿಮೂಲಗಳಾದ ಖನಿ, ತನ್ನ ಮತ್ತು ರಾಜ್ಯದ ರಕ್ಷಣೆ, ಸತ್ಪಾತ್ರ ವಿನಿಯೋಗ ಮುಂತಾದ ವಿಷಯಗಳು ಚರ್ಚಿಸಲ್ಪಡತಕ್ಕವುಗಳು. (ಮನುಸ್ಮೃತಿ)

ಆ ಮಂತ್ರಿಗಳನ್ನು ಬೇರೆ–ಬೇರೆಯಾಗಿಯೂ ಒಟ್ಟಿಗೂ ಕರೆದು ಸಮಾಲೋಚನೆ ನಡೆಸಬೇಕು. ಪ್ರತ್ಯೇಕ ವಿಚಾರದಲ್ಲಿ ಅಭಿಪ್ರಾಯವೂ, ಅವರೆಲ್ಲರ ಸಮ್ಮೇಳನದಲ್ಲಿ ವಿಮರ್ಶೆ ಸಾರಾಸಾರ ಗೌರವಲಾಘವಗಳೂ ತಿಳಿದು ಬರುವುವು. ಈ ರೀತಿ ತನ್ನ ಮತ್ತು ರಾಷ್ಟ್ರದ ಹಿತವನ್ನು ದೂರವಾಗಿ ಆಲೋಚಿಸಬೇಕು. (ಮನುಸ್ಮೃತಿ 7–56, 57)

ಅಮಾತ್ಯರು ಎಂದರೆ ಮಂತ್ರಿಗಳು ಎಂದು ಅರ್ಥ. ಹಿಂದಿನ ರಾಜಕೀಯ ವ್ಯವಸ್ಥೆಯ ಚಿತ್ರಣವನ್ನು ಈ ರೀತಿಯಲ್ಲಿ ಕೊಡಬಹುದು. ರಾಜ, ಮಂತ್ರಿ, ಸೇನಾಧಿಪತಿ

ಮತ್ತು ಪುರೋಹಿತ. ಈ ನಾಲ್ಕು ಮಂದಿಗಳ ಜವಾಬ್ದಾರಿಗಳು ಬೇರೆ ಬೇರೆ. ರಾಜನದು ರಾಜ್ಯಭಾರ ಮಾಡುವ ಕೆಲಸ. ಮಂತ್ರಿಯು ಅವನಿಗೆ ಸಲಹೆಯನ್ನು ನೀಡುತ್ತಾನೆ. ಸೇನಾಧಿಪತಿಯು ಸೇನೆಯ ಜವಾಬ್ದಾರಿ ಹೊರುತ್ತಾನೆ. ಪೌರೋಹಿತ್ಯದ ಕೆಲಸ ಪುರೋಹಿತನಿಗೆ, ಪುರದ ಹಿತವನ್ನು ಯಾರು ನೋಡಿಕೊಳ್ಳುತ್ತಾರೋ ಅವರು ಪುರೋಹಿತರು.

ಅಮಾತ್ಯರನ್ನು ಅರ್ಥೋಪಾದಿ, ಧರ್ಮೋಪಾಧಿ, ಕಾಮೋಪಾಧಿ, ಭಯೋಪಾಧಿಗಳಿಂದ ಪರೀಕ್ಷಿಸಿ ಅವರನ್ನು ನೇಮಕ ಮಾಡಿಕೊಳ್ಳಬೇಕೆಂದು ಕೌಟಲೀಯ ಅರ್ಥಶಾಸ್ತ್ರದಲ್ಲಿ ಬರುತ್ತದೆ. ಅಂತಹ ಆಪ್ತಮಂತ್ರಿಗಳೊಡನೆ ವಿಚಾರ ಮಾಡುವಂತಹ ಎಲ್ಲ ವಿಷಯಗಳನ್ನು ವಿಮರ್ಶಿಸಬೇಕು. ಸಾಮಾನ್ಯವಾಗಿ ಸಂಧಿ, ಯುದ್ಧ, ರಾಷ್ಟ್ರಸ್ಥಿತಿ ಕಾರಣ ಉತ್ಪತ್ತಿಮೂಲಗಳಾದ ಖನಿ, ತನ್ನ ಮತ್ತು ರಾಜ್ಯದ ರಕ್ಷಣೆ, ಸತ್ಪಾತ್ರ ವಿನಿಯೋಗ ಮುಂತಾದ ವಿಷಯಗಳು ಚರ್ಚಿಸಲ್ಪಡತಕ್ಕವುಗಳು.

ಆ ಮಂತ್ರಿಗಳನ್ನು ಬೇರೆ – ಬೇರೆಯಾಗಿಯೂ ಒಟ್ಟಿಗೂ ಕರೆದು ಸಮಾಲೋಚನೆ ನಡೆಸಬೇಕು. ಪ್ರತ್ಯೇಕ ವಿಚಾರದಲ್ಲಿ ಅಭಿಪ್ರಾಯವೂ, ಅವರೆಲ್ಲರ ಸಮ್ಮೇಳನದಲ್ಲಿ ವಿಮರ್ಶೆ ಸಾರಾಸಾರ ಗೌರವಲಾಘವಗಳೂ ತಿಳಿದು ಬರುವುವು. ಈ ರೀತಿ ತನ್ನ ಮತ್ತು ರಾಷ್ಟ್ರದ ಹಿತವನ್ನು ದೂರವಾಗಿ ಆಲೋಚಿಸಬೇಕು ಎಂದು ಮನು ಹೇಳುತ್ತಾನೆ.

ರಾಷ್ಟ್ರ ಸಂವಿಧಾನದಲ್ಲಿ ಸಚಿವರು ಬಹಳ ಮುಖ್ಯವಾದ ಹಾಗೂ ಅನಿವಾರ್ಯವಾದ ಅಂಗ. ದೊರೆಯು ತನ್ನ ಎಲ್ಲ ಕರ್ತವ್ಯಗಳನ್ನೂ ನೋಡಿಕೊಳ್ಳಲು ಅಸಾಧ್ಯವಾದುದರಿಂದ ಅವನು ತನ್ನ ಕರ್ತವ್ಯಗಳನ್ನು ತನ್ನ ಮಂತ್ರಿಗಳ ಮೇಲೆ ಹೊರಿಸಬೇಕು ಎಂಬುದಾಗಿ ಮಹಾಭಾರತದಲ್ಲಿ ಹೇಳಿದೆ. 'ಸಹಕಾರದಿಂದಲೇ ಪ್ರಭುತ್ವ ಸಾಧ್ಯ. ಒಂದೇ ಚಕ್ರ ಎಂದೂ ಉರುಳಲಾರದು. ಆದ್ದರಿಂದ ದೊರೆಯು ಮಂತ್ರಿಗಳನ್ನು ನೇಮಿಸಿಕೊಂಡು ಅವರ ಅಭಿಪ್ರಾಯವನ್ನು ಕೇಳಬೇಕು' ಎಂಬುದಾಗಿ ಕೌಟಿಲ್ಯ ಹೇಳಿದ್ದಾನೆ. ಕೌಟಿಲ್ಯನು ಅಮಾತ್ಯರಿಗೂ ಮಂತ್ರಿಗಳಿಗೂ ವ್ಯತ್ಯಾಸವಿದೆಯೆಂದು ಹೇಳುತ್ತಾನೆ. ಶಾಸ್ತ್ರಜ್ಞರೂ, ಅಸ್ತ್ರವಿದ್ಯಾಪ್ರವೀಣರೂ, ಸದ್ವಂಶೀಯರೂ, ಚೆನ್ನಾಗಿ ಪರೀಕ್ಷಿಸಲ್ಪಟ್ಟವರೂ ಆದ ಏಳೆಂಟು ಮಂತ್ರಿಗಳನ್ನು ದೊರೆಯು ನೇಮಿಸಬಹುದೆಂದು ಮನುವು ಹೇಳಿದ್ದಾನೆ. ಮಂತಣಂ ಎಂದರೆ ಏಕಾಂತಂ ಮಂತು – ಮಂಥಾನಂ ಎಂದರೆ ಮಂತ್ರ.

ಪರರ ಮನಸನ್ನು, ಧೀಮಂತರು, ಗೂಢವೇಷವನ್ನು ಮಾಡಬಲ್ಲವರು, ರಹಸ್ಯವನ್ನು ಕಾಪಾಡಬಲ್ಲವರು, ಆಪ್ತರು ಆಗಿರುವಂಥ ಮಂತ್ರಿಗಳನ್ನು ನೇಮಕ ಮಾಡಬೇಕು. (ಮಾನಸೋಲ್ಲಾಸ_2–59)

ವಿವರಗಳಿಗೆ ನೋಡಿ: ಯುಗಯಾತ್ರೀ ಭಾರತೀಯ ಸಂಸ್ಕೃತಿ ೧೯೭೧ ಪುಟ. ೩೭೮

ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು ೨೦೧೦
ಕೌಟಲೀಯ ಅರ್ಥಶಾಸ್ತ್ರ ಪುಟ. ೪೭
ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೭-೫೬, ೫೭

ಮಂದಗಾಮಿಗಳು

ಸ್ವಾತಂತ್ರ್ಯ ಹೋರಾಟದಲ್ಲಿ ಎರಡು ಮಾರ್ಗಗಳಿದ್ದವು. ಸೌಮ್ಯ ಮಾರ್ಗದ ಮಂದಗಾಮಿಗಳು, ಇವರು ಸ್ವಾತಂತ್ರ್ಯ ಹೋರಾಟವನ್ನು ಸೌಮ್ಯ ದಾರಿಯ ಮೂಲಕ ನಡೆಸಬೇಕೆಂದು ವಾದಿಸುತ್ತಿದ್ದರು. ಸ್ವಾತಂತ್ರ್ಯ ಹೋರಾಟವು ಸೌಮ್ಯ ದಾರಿಯಿಂದ ಸಫಲವಾಗುವುದಿಲ್ಲ ಎಂದು ವಾದಿಸಿದ ತಿಲಕರು, – ಬ್ರಿಟಿಷ್ ಸರಕಾರವನ್ನು ಎದುರಿಸಲು ಶಸ್ತ್ರಾಸ್ತ್ರಗಳು ಬೇಕೆಂದು ವಾದಿಸುತ್ತಿದ್ದರು.

ವಿವರಗಳಿಗೆ ನೋಡಿ: ಕನ್ನಡಿಗರಿಬ್ಬರು ೨೦೦೧ ಸತ್ಯಶೋಧನೆ

ಮಟ್ಟು

ಮಂತ್ರ, ಪ್ರಯೋಗಕ್ರಮ ಎಂಬುದನ್ನು ಮಟ್ಟು ಎಂದು ಕರೆಯುತ್ತಾನೆ. ಮಟ್ಟು ಎಂದರೆ ಪದ್ಧತಿಯೆಂಬ ಅರ್ಥವೂ ಇದೆ. ಯಕ್ಷಗಾನದಲ್ಲಿ ಇದರ ಬಳಕೆಯಿದೆ. ಯಕ್ಷಗಾನದಲ್ಲಿ ಮಟ್ಟು ಎಂದರೆ ಶೈಲಿಯೆಂಬರ್ಥದಲ್ಲಿ ಪ್ರಯೋಗವಾಗುತ್ತದೆ.

ಮಡಂಬ

ಗ್ರಾಮ, ನಗರ, ಖೇಡ, ಖರ್ವಡ; ಪತ್ತನ; ಮಡಂಬವೆಂಬ ವರ್ಗೀಕರಣವನ್ನು ಮಾಡುತ್ತಾರೆ.ಇದರಲ್ಲಿ 'ಮಡಂಬ'ವೆಂದರೆ ಐದುನೂರು ಗ್ರಾಮವುಳ್ಳದ್ದು ಎಂದರ್ಥ.

ಮತಾಂತರ

'ಜಾತಿ'ಯ ಬಗ್ಗೆ ಓರಿಯಂಟಲಿಸ್ಟರು ಒಂದು ದೃಷ್ಟಿಕೋನ ಹೊಂದಿದ್ದರೆ ಮಿಶನರಿಗಳ ದೃಷ್ಟಿಕೋನ. ಮತ್ತೊಂದು ಬ್ರಿಟೀಷ್ ಅಧಿಕಾರಿಗಳ ಚಿಂತನೆ ಬೇರೆ ಬೇರೆ ರೀತಿಯುವು: ಹಿಂದೂಗಳು ಒಂದು ನಿರ್ದಿಷ್ಟ ನಿಯುಮಾವಳಿ ಹೊಂದಿದೆಯೆನ್ನುತ್ತಾರೆ. ಸಮಾಜದ ಚರ್ಚೆಯಲ್ಲಿ 'ಧರ್ಮ'ವೇ ಮುಖ್ಯ ಪರಂಪರೆಯಂದು ಅವರಿಗೆ ಅನಿಸಿದೆ. ಮಿಶನರಿಗಳ ಪ್ರಕಾರ – ಬ್ರಾಹ್ಮಣರು ಸಮಾಜವನ್ನು ಹಿಡಿತದಲ್ಲಿ ಇರಿಸಿಕೊಳ್ಳುತ್ತಾರೆ.

ಭಾರತೀಯ ಸಮಾಜದಲ್ಲಿ ಧಾರ್ಮಿಕತೆಯು ಮುಖ್ಯ. ಹಿಂದೂ ಧರ್ಮಕ್ಕೆ ಜಾತಿಯೇ ತಳಹದಿ. ಅದನ್ನು ನಾಶಪಡಿಸಿದರೆ ಸರಿಯಾಗುತ್ತದೆ. ಹೀಗಾಗಿ ಮತಾಂತರ ಮುಖ್ಯವೆಂದು ಅನಿಸಿತು. ಬೈಬಲ್ ಅನುವಾದವೂ ಮುಖ್ಯವಾಯಿತು. ಬ್ರಿಟಿಷ್ ಅಧಿಕಾರಿಗಳು – ಜಾತಿಯನ್ನು ಒಂದು ಅಧ್ಯಯನ ವಸ್ತುವೆಂಬಂತೆ ನೋಡಿದರು.

ಮತಾಂತರದ ಮೂಲಕವೇ ಭಾರತೀಯರ ಜಾತಿ ಪದ್ಧತಿಯನ್ನು ನಾಶಪಡಿಸಿ ಏಕಧರ್ಮವನ್ನು ಸ್ಥಾಪಿಸಬಹುದು. ಹಾಗೂ ಮತಾಂತರದಿಂದ ಭಾರತೀಯರಿಗೆ

ಸಾಮಾಜಿಕ – ಆರ್ಥಿಕ ಜವಾಬ್ದಾರಿ ಬರಬಹುದೆಂದು ಆಗಿನ ಮಿಶನರಿಗಳು ನಂಬಿದ್ದವು

ವಿವರಗಳಿಗೆ ನೋಡಿ: Sudipta Kaviraj (Ed:) 1997 Politics in India

Partho chattarjee 1997 The Nation and its fragments

Charis Smaje 2000 National Hierachies P. 143–152

ಮತ್ತರ್

ಮತ್ತರು ಎಂದರೆ ಭೂಮಿಯ ಒಂದು ಅಳತೆ. ಆ ಕಾಲದ ಮುಖ್ಯ ಅಳತೆ ಕ್ರಿ.ಶ 1058ರ ನಾಗಾಯಿ ಶಾಸನದಲ್ಲಿ ಈ ಭಾಗದ ಪಾಠ ಈ ರೀತಿ ಇದೆ. "ಶಾಲೆಯುಲೋದುವ ವೇದಾಧ್ಯಾಯಿಗಳಿನ್ನೂರ್ವರ್ಗ್ಗಂ, ಶಾಸ್ತ್ರಾಧ್ಯಾಯಿಗಳಯ್ವದಿಂಬರ್ಗ್ಗಂ, ತದುಪಾಧ್ಯಾಯಿಗಳು3 ಭಟ್ಟದರ್ಶನ ನ್ಯಾಸ ಪ್ರಭಾಕರ ವ್ಯಾಖ್ಯಾತೃಗಳ್ಮೂವರ್ಗ್ಗಂ, ವೇದವನೋದಿಸುವು ಪಾಧ್ಯಾಯಮ್ಮೂರ್ವರ್ಗ್ಗಂ ಶಾಲೆಯ ಸರಸ್ವತಿ ಭಂಡಾರಿಗರಾರ್ವ್ವರ್ಗ್ಗಮನ್ನು257 ಮಾನಸರ ಅಶನಾಚ್ಛಾದನಕ್ಕಂ, ಜೀರ್ಣ್ಣೋದ್ಧಾರ, ಖಂಡ ಸ್ಫುಟಿತ ನವಸುಧಾಕರ್ಮಕ್ಕಂ, ಗನ್ಧಾಕ್ಷತ, ಪುಷ್ಪ, ಧೂಪ, ದೀಪ, ನಿವೇದ್ಯಕ್ಕಂ, ತ್ರ್ಯಪುರುಷ ದೇವರ ಶಾಲೆಯ ಪರಿಷ ಮಾನೀಯರ್ಗ್ಗೇ ಸರ್ವ್ವನಮಸ್ಯಮಾಗಿ ಕೊಟ್ಟಕೆಯ್ ಮಾಣಿಕೇಶ್ವರದ ಗಱಂ ಬಡಗ **ಮತ್ತರು** 1000 ಆ ಹೊಲಂ ನಾಗವಾವಿಯ ದಿಗ್ಗವಿಗೆಯ ಅರಲೂರು ಎಡೆವಾ ಅನದಕೆಳಗೆ ಪ್ರಭಾಕರ ವ್ಯಾಕ್ಯತೃಗೆ **ಮತ್ತರು** 45, ಸರಸ್ವತೀ ಭಂಡಾರಿಗೆ **ಮತ್ತರು** 30, ಘಟಿಕಾ ಪ್ರಹಾರಿಗೆ **ಮತ್ತರ್** 30, ಪಂಚಕೇಶ್ವರಕ್ಕೆ **ಮತ್ತರು** 45 ಚಣ್ಡೇಶ್ವರ ರೆಬ್ಬಂಗೆ **ಮತ್ತರು** 20, ರಾಮೇಶ್ವರ ಸಿಡಿಲ ಹರಿಕಲ್ಲುಗುತ್ತಿಪಳ್ಳಂ ಮಿರಿಕಿರಿಗೆ, ಮಾಲೆಯ ಕಾಂತಯ್ಯನ ಮಾನ್ಯಮನೆ ರೆಬ್ಬಭೂವ ಮಾನ್ಯಂಮನೆ 2, ಎಂದಾಗಿ ವಿವರಗಳು ಬರುತ್ತದೆ.

ನಾಗಾಯಿ ವಿದ್ಯಾಕೇಂದ್ರದಲ್ಲಿದ್ದ ವೇದಾಧ್ಯಾಯಿಗಳ ಸಂಖ್ಯೆ 200 ಶಾಸ್ತ್ರಾಧ್ಯಾಯಿಗಳ ಸಂಖ್ಯೆ 50. ಭಟ್ಟದರ್ಶನ, ನ್ಯಾಸ, ಪ್ರಭಾಕರಗಳನ್ನು ಕಲಿಸುವ ಅಧ್ಯಾಪಕರು 33 ಜನ ವೇದವನ್ನು ಕಲಿಸುವ ಉಪಾಧ್ಯಾಯರು 3ಜನ ಸರಸ್ವತಿ ಭಂಡಾರಿ (ಗ್ರಂಥಪಾಲಕ) 1 ಆ ವಿದ್ಯಾಕೇಂದ್ರದಲ್ಲಿದ್ದ ಒಟ್ಟು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಸಂಖ್ಯೆ 257 ಈ ಇನ್ನೂರ ಐವತ್ತೇಳು ಮಂದಿಗೆ ತಗಲುವ ಊಟ ವಸತಿಗಳ ಖರ್ಚು, ಶಾಲೆಯ ಜೀರ್ಣೋದ್ಧಾರ, ಸುಣ್ಣ ಬಣ್ಣ ಬಳೆಯುವುದಕ್ಕೆ, ಧೂಪ, ದೀಪ, ನೈವೇದ್ಯಗಳಿಗೆ ತಗಲುವ ವೆಚ್ಚಗಳನ್ನು ಭರಿಸುವುದಕ್ಕೆ ನೀಡಿದ ದತ್ತಿ ಮತ್ತು ಅಧ್ಯಾಪಕ ವರ್ಗದವರಿಗೆ ನೀಡಿದ ವೈಯಕ್ತಿಕ ದತ್ತಿಯ ವಿವರಗಳು ಈ ರೀತಿ ಇವೆ.

ಭಟ್ಟದರ್ಶನ ವ್ಯಾಖ್ಯಾತೃಗೆ	35 ಮತ್ತರು	
ನ್ಯಾಸ ವ್ಯಾಖ್ಯಾತೃಗೆ	30 ಮತ್ತರು	
ಪ್ರಭಾಕರ ವ್ಯಾಖ್ಯಾತೃಗೆ	45 ಮತ್ತರು	
ಸರಸ್ವತೀ ಭಂಡಾರಿಗೆ	30 ಮತ್ತರು	
ಘಟಿಕಾ ಪ್ರಹಾರಿಗೆ	30 ಮತ್ತರು	
ಪಂಚಿಕೇಶ್ವರ ದೇವಾಲಯಕ್ಕೆ	45 ಮತ್ತರು	
ಚಣ್ಡೇಶ್ವರ ದೇವಾಲಯಕ್ಕೆ	20 ಮತ್ತರು	235 ಮತ್ತರು ಜಮೀನು.

ಇನ್ನು ಉಳಿದ 765 ಮತ್ತರು ಜಮೀನಿಂದ ಬರುವ ಆದಾಯವನ್ನು ಮೇಲೆ ತಿಳಿಸಿದ ಸಾರ್ವಜನಿಕ ಕಾರ್ಯಗಳಿಗಾಗಿ ಉಪಯೋಗಿಸತಕ್ಕದ್ದು, ಜಮೀನು ಅಲ್ಲದೆ ಅಲ್ಲಿ ಕೆಲಸ ಮಾಡುವವರಿಗೆ ಎರಡು ಮನೆಗಳನ್ನು ಮಾನ್ಯವಾಗಿ ನೀಡಿರುವ ವಿಷಯವನ್ನು ಶಾಸನ ತಿಳಿಸುತ್ತದೆ.

ಸೊರಬ ತಾಲೂಕಿನ ಒಂದು ಶಾಸನ (E.C VIII Sb 135) ಕೊಟ್ಟಿರುವ ಅಳತೆಗಳು ಹೀಗಿವೆ. 1 ಮತ್ತರು=4 ಹಾದ; 1 ಹಾದ=25 ಕಂಬ; 1 ಮತ್ತರು=100 ಕಂಬ (ಚಿದಾನಂದ ಮೂರ್ತಿ) ಮತ್ತರ್ ಎಂದರೆ "ನೆಲದ ಪವ ಎಂದರ್ಥ. ಮತ್ತರೆನೆಲ್ ನೆಲದ ಪವಣ್ ಎಂದು ಚತುರಾಸ್ಯ ನಿಘಂಟಿನಲ್ಲಿ ಬರುತ್ತದೆ. (ಚ.ನಿ.೧೦೩) *ವಿವರಗಳಿಗೆ ನೋಡಿ: ಎಂ.ಚಿದಾನಂದಮೂರ್ತಿ 2008 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ. 437*

ಮತ್ಸ್ಯನ್ಯಾಯ

"ಮತ್ಸ್ಯನ್ಯಾಯವೆಂದರೆ ದೊಡ್ಡಮೀನು ಸಣ್ಣಮೀನನ್ನು ಮನುಷ್ಯ ಹಿಡಿದು ನುಂಗುವುದು; ಹಾಗೆಯೇ ಈ ನ್ಯಾಯವನ್ನು ಮನುಷ್ಯ ವ್ಯವಹಾರ ಜಗತ್ತಿನಲ್ಲಿಯೂ ಬಳಸುತ್ತಾರೆ. 'ದುರ್ಬಲಸ್ಯ ಬಲೋರಾಜ' ಎಂಬಂತೆ ಬಲಿಷ್ಠನಾದವನು ದುರ್ಬಲನಾದವನನ್ನು ಹಿಡಿದು ಪೀಡಿಸುವ ಸಂದರ್ಭದಲ್ಲಿ ಬಳಸಬಹುದು. "ದೇಶದಲ್ಲಿ ಮತ್ಸ್ಯನ್ಯಾಯವು ತಾಂಡವವಾಡುವಾಗ ಅದರ ಉಪಟಳಗಳಿಂದ ತಪ್ಪಿಸಿಕೊಳ್ಳಲು ಜನರು ಇಚ್ಛಿಸಿದುದರ ಫಲವಾಗಿ ರಾಜಪದವಿಯ ಉದಯವಾಯಿತು ಎಂದು ಕೌಟಿಲ್ಯನು ಹೇಳುತ್ತಾನೆ. ಜಾತಕಗಳೂ ಹಾಗೆಯೇ ನಿರೂಪಿಸುತ್ತವೆ" "ದಂಡಹೀನೇ ಗತೇ ರಾಷ್ಟ್ರೇ ಮಾತ್ಸ್ಯೋನ್ಯಾಯ ಪ್ರವರ್ತತೇ" ಎಂದು ಅಭಿಲಷಿತಾರ್ಥ ಚಿಂತಾಮಣಿ ಗ್ರಂಥವು ಹೇಳುತ್ತದೆ. ಇದರರ್ಥ; ರಾಷ್ಟ್ರವು ದಂಡಹೀನವಾದಾಗ ಮಾತ್ಸ್ಯನ್ಯಾಯವು ಪ್ರವರ್ತಿಸುವುದು ಎಂದು. (ಅಭಿಲಷಿತಾರ್ಥ ಚಿಂತಾಮಣಿ, ಮೈಸೂರು ಪು.178) ಇಲ್ಲಿ ದಂಡಹೀನವಾಗುವುದು ಎಂದರೆ ರಾಷ್ಟ್ರವು ಅರಾಜಕತೆ(Anarchy)ಯಿಂದ

ಕೂಡಿರುವುದು ಎಂದರ್ಥ. ಆದ್ದರಿಂದ Anarchyಗೆ ಸಂವಾದಿಯಾಗಿ ಬಳಸುವ ಪದವೇ ಮಾತ್ಸ್ಯನ್ಯಾಯ. ಶಾಲ, ಶಲಕ, ಕುಲಿಶ, ರಾಜೀವ, ಲೋಹಿತ, ಪಲ್ಲವಕ ಎಂಬ ಆರು ರೀತಿಯ ಮತ್ಸ್ಯಭೇದಗಳಿವೆ."

ವಿವರಗಳಿಗೆ ನೋಡಿ: ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ 1999 ಶ್ರೀವತ್ಸ ನಿಘಂಟು
ಪುಟ. 276

ಮದಗಳು

ಕುಲಮದ, ಜಾತಿಮದ, ವಯೋಮದ, ಬಾಹುಮದ, ರಾಜ್ಯಮದ ಮುಂತಾದವು ಮದೋದ್ಧತರುಗಳಿಗಿರುತ್ತವೆ. ಇವುಗಳಿಂದಲೇ ಅವರು ಭೂತಲಪತಿಯನ್ನು ಪೀಡಿಸುತ್ತಾರೆ ಎಂಬುದು ಅವನ ವಾದ. ಮದವೆನ್ನುವುದು ಅಹಂಕಾರದಿಂದ ಜನ್ಯವಾಗುವಂಥದು. ಕುಲ, ಜಾತಿ, ವಯಸ್ಸು, ಬಾಹು, ರಾಜ್ಯಮದಗಳು ಅಹಂಕಾರದಿಂದ ಹುಟ್ಟುತ್ತವೆ.

ವಿವರಗಳಿಗೆ ನೋಡಿ: ಟಿ.ವಿ. ವೆಂಕಟಾಚಲಶಾಸ್ತ್ರಿ 1999 ಶ್ರೀವತ್ಸ ನಿಘಂಟು
ಪುಟ. 276.

ಮಧುದೇವತಾರಾಧನೆ

ಹಿಂದೆ ವಿಭಾಗಿಸಿ ನಿರೂಪಿಸಿದ 'ಕಳ್ವೊಳಮಮರ್ದಿನೊಳಂ ಪುಟ್ಟಿದ ಪೆಂಡಿರಂತೆ ಸೊಗಯಿಸುವ ಪಲರುವಮೊಳ್ವೆಂಡಿರೊಂದೆಡೆಯೊಳಿರ್ದು' ಮಧುದೇವತಾರ್ಚನೆಗೈವ ಬೀದಿಯಲ್ಲಿ ಅರಿಕೇಸರಿ ಹೋಗುತ್ತಾನೆ. ಆ ಮಧುದೇವತಾರಾಧನೆಯ ಆಚಾರಕ್ರಮವನ್ನವಧಾನಿಸಿರಿ.

ಮೂನೂಱಱು ಮತ್ತು ಜಾತಿಯ ಕಳ್ಗಳಂ ಮುಂದಿಟ್ಟು ಮಧುಮಂತ್ರದಿಂ ಮಧುದೇವತೆಗಳನರ್ಚಿಸಿ ಪೊನ್ನ ಬೆಳ್ಳಿಯ ಪದ್ಮರಾಗದ ಪಚ್ಚೆಯ (ಹೊನ್ನು ಬೆಳ್ಳಿ ಮಾಣಿಕ ಪಚ್ಚೆಗಳಿಂದೆಸಗಿದ) ಗಿಳಿಯ ಕೋಗಿಲೆಯ ಕೊಂಚೆಯ ಕುಂತಳಿಕೆಯ ಮಾಯ ಸಿಪುಗಳೊಳ್ ತೀವಿ ಮಧುಮಂತ್ರಂಗಳಿಂ ಮಂತ್ರಿಸಿ ನೆಲದೊಳೆಱೆದು ತಲೆಯೊಳ್ ತಳಿದು ಕಳ್ಳೊಳ್ ಬೊಟ್ಟ ನಿಟ್ಟುಕೊಂಡು ಕೆಲದರ್ಗೆಲ್ಲಂ ಬೊಟ್ಟಿಟ್ಟು ಕಿಱಿಯರ್ಪಿರಿಯರಱೆದು ಕುಡಿಬಿದರ ಕುಡಿಯ ಮಾವಿನ ಮಿಡಿಯ ಮಾರುದಿನ ಮೆಣಸುಗಡಲೆಯ ಪುಡಿಯೊಳ ಡಸಿದಲ್ಲ ವಲ್ಲಣಿಗೆಯ ಚಿಕ್ಕಣಂಗಳಂ ಸವಿಸವಿದು (ವಿ.ವಿಜಯ).

ಈ ವಚನದಿಂದ, ಆ ಹೆಂಗುಸರೆಲ್ಲರೂ ನಿಯಮಿತವಾದ ಆ ರಾತ್ರಿಯಲ್ಲಿ ನಿಶ್ಚಿತವಾದೊಂದೆಡೆಯಲ್ಲಿ ಕೂಡಿ ಮಧುದೇವತಾರ್ಚನೆಗೈದು ತೀರ್ಥಪ್ರಸಾದಗಳನ್ನು ಕೈಕೊಂಡು ಕೃತಾರ್ಥನೆವಡೆಯುತ್ತಿದ್ದರೆಂಬುದು ವ್ಯಕ್ತವಾಗುತ್ತಿದೆ. ಇದನ್ನೋದುವಲ್ಲಿ, ನಮ್ಮ ಕನ್ನಡ ನಾಡಿನೊಳಗೆ ನಾಮಾವಶೇಷವಾಗುತ್ತ ಬಂದರೂ, ಇನ್ನೂ

ಅವಶಿಷ್ಟವಾಗಿರುವ 'ಮೂನೂಜಜುವತ್ತುಜಾತಿಯ ಕಳ್ಗಳ್', 'ಮಧುದೇವತೆಗಳ್' ಎಂಬ ಬಹುತ್ವನ್ನೆಣಿಸಿದರೆ, ಆ ಕಳ್ಳುಗಳ ಜಾತಿಸಂಖ್ಯೆಯಷ್ಟೇ ದೇವತೆಗಳೂ ಅರ್ಚಿಸುವ ಮಂತ್ರಗಳೂ ಇದ್ದಿರಬೇಕೆಂಬುದು ಸಿದ್ಧವಾಗುತ್ತಿದೆ. ಮಾತ್ರವಲ್ಲ. ಆಕಳ್ಳುಗಳ ಸಂಖ್ಯೆಯನ್ನೆಣಿಸಿದರೆ, ವರ್ಷದೊಳಗಿನ ದಿನಸಂಖ್ಯಾನುಸಾರವಾದ ತೀರ್ಥಸೇವನೆಗೂ ತಕ್ಕಂತೆ ಭಿನ್ನ ಭಿನ್ನ ಜಾತಿಯ ಕಳ್ಳುಗಳನ್ನೆಲ್ಲ ಶೇಖರಿಸಿ ಪೂಜಿಸುವ ವಾರ್ಷಿಕ ದೇವಕಾರ್ಯವದು, ಎಂದು ಭಾವಿಸಬೇಕು. ಭೂಮಾತೆಯ ತೃಪ್ತ್ಯರ್ಥವಾಗಿ, ಪೂಜಾರ್ತಿ ಹೆಂಗುಸು ಆ ತೀರ್ಥವನ್ನು 'ನೆಲದೊಳೆಜಿ'ವ ಹಾಗೆ ಶುದ್ಧಿವಡೆದ ಸ್ಥಳದಲ್ಲಿ ತೀರ್ಥದಾನಕ್ಕಾಗಿ ಕುಳಿತು ಆತ್ಮಶುದ್ಧಿಗಾಗಿ 'ತಲೆಯೊಳ್ ತಳಿ'ವ ಮಂತ್ರಪೂತ ತೀರ್ಥವಾದ ಕಳ್ಳಿನಂದ ಕ್ರಮವಾಗಿ 'ಬೊಟ್ಟನಿಟ್ಟುಕೊಂಡು ಕೆಲದರ್ಗೆಲಂ ಬೊಟ್ಟ'ನ್ನಿಡುವ, ಕಿಜಿಯರ್ಪಿರಯರಜೆದು' ಹರಸುವ, ಪೊಡವಡುವ ಅದೊಂದು ಮಾರ್ಗದಲ್ಲಡಿಯಿಟ್ಟು ತೋರುವ ವಾಮಾಚಾರದ ದೇಸಿಯಾದ ಹಜ್ಜೆಗಳು ಈ ವರ್ಣನೆಯಲ್ಲಿ ಹೊಳೆದು ತೋರುತ್ತಿವೆ (ಮುಳಿಯ ತಿಮ್ಮಪ್ಪಯ್ಯ ೨೦೦೬ ಪು. ೨೪೩–೨೪೪).

ಮಧುಪರ್ಕ

ಅತಿಥಿಗಳಿಗೆ ಕೊಡಬೇಕಾದ ಜೇನು ಮೊದಲಾದ ಪದಾರ್ಥಗಳ ಮಿಶ್ರಣವನ್ನು ಮಧುಪರ್ಕವೆಂದು ಕರೆಯುತ್ತಾರೆ.

ಇದು ಅತಿಥಿಗಳನ್ನು ಸತ್ಕರಿಸುವ ಕ್ರಮವೂ ಹೌದು.

ಮಧುರ ಗುಣ

ಮಾತು ರಸವತ್ತಾಗಿರಬೇಕು. ಸಿಹಿಯಾದ ರಸವು ನಾಲಗೆಗೆ ಹೇಗೋ ಹಾಗೆ ಕಿವಿಗೆ ಇಂಪಾಗಿರುವ ಮಾತುಗಳ ಜೋಡಣೆಯು ಮಧುರಗುಣ. ವಿಶೇಷ ಲಕ್ಷಣದಿಂದಾಗುವ ಮಾತಿನ ರೀತಿಯು ಮಧುರವಾಗಿರುತ್ತದೆಯೆಂದು ಕವಿರಾಜಮಾರ್ಗಕಾರನ ನಿಲುವು. ಈ ಮಾತನ್ನು ಕಾವ್ಯ ತತ್ವದ ಪರಿಭಾಷೆಯೆಂದು ಕರೆಯಬಹುದು.

ವಿವರಗಳಿಗೆ ನೋಡಿ: ದಂಡಿಯ ಕಾವ್ಯಾದರ್ಶ 1–51

ಮನುಷ್ಯ

ಒಬ್ಬ ಮನುಷ್ಯ ಎನ್ನುವ ಕಲ್ಪನೆಯು ಸಮಾಜದ ಕಲ್ಪನೆಗಿಂತ ಬೇರೆಯಾದುದು. ಒಬ್ಬ ಮನುಷ್ಯನ ಅನನ್ಯತೆಯು ಅವನ ಅಸ್ತಿತ್ವ ಸಾಮಾಜಿಕತೆಗಿಂತ ಅವನ ಭಿನ್ನತೆ, ತಾತ್ವಿಕ ಕಾರಣಗಳಿಗಾಗಿ ಅವನು ಹೊಂದುವ ವಿಶಿಷ್ಟತೆ ಇವುಗಳನ್ನು ಸೂಚಿಸುತ್ತದೆ. ಒಂದು ಸಂದರ್ಭದಲ್ಲಿ ಎರಿಕ್ ಫ್ರಾಮ್ ಹೇಳಿದಂತೆ ಆಧುನಿಕ ಬಂಡವಾಳಶಾಹಿ ಜಗತ್ತಿನಲ್ಲಿ ಮನುಷ್ಯನನ್ನು ಗುರುತಿಸುವುದು. ಅವನ ಉದ್ಯೋಗ, ಅವನ ಕಸುಬು

ಇತ್ಯಾದಿಗಳ ಮೇಲೆ. ಇದರಲ್ಲಿ ವ್ಯಕ್ತಿಯನ್ನು ಸಾಮೂಹಿಕ ಬದುಕಿನ ಹಿನ್ನೆಲೆಯಿಂದ ಗುರುತಿಸುವುದು ಸಾಧ್ಯವಾಗುವುದಿಲ್ಲ. ಮತ್ತು ಸಂವಹನದ ವಿಶಿಷ್ಟ ಅರ್ಥವಂತಿಕೆಯೂ ಅವನಿಗಿರುವುದಿಲ್ಲ. ವ್ಯಕ್ತಿಯು ತನಗೆ ತಾನೆ ವಿಶಿಷ್ಟ ಎಂದು ಭಾವಿಸಿಕೊಂಡಾಗ ಅವನ ಅನನ್ಯತೆಯು ವಿಶ್ವಾತ್ಮಕತೆಯಿಂದ ಬೇರೆಯಾಗುತ್ತದೆ. ನೈತಿಕ ಮತ್ತು ಸಾಮಾಜಿಕ ಅಂಶಗಳಿಂದ ಅವನು ಭಿನ್ನನಾಗುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಯೂರೋಪಿನಲ್ಲಿ ಪುನರ್‌ಜೀವನದ ಕಾಲಘಟ್ಟದ ನಂತರ ವ್ಯಕ್ತಿ ವಿಶಿಷ್ಟತೆಗೆ ಬಂದಿರುವ ವಿಶಿಷ್ಟ ಚಹರೆಗಳು ಮತ್ತು ವ್ಯಾಖ್ಯೆಗಳು. ಉದಾಹರಣೆಗೆ ಪುನರುಜ್ಜೀವನದ ನಂತರದ ಕಾಲಘಟ್ಟದಲ್ಲಿ ಮನುಷ್ಯ ತನ್ನನ್ನು ತಾನೇ ರೂಪಿಸಿಕೊಳ್ಳಬಲ್ಲ ಎಂಬ ಹೇಳಿಕೆಯು ಸುಪ್ರಸಿದ್ಧವಾಯಿತು. ಹಾಗೆಯೇ ಇಡಿಯ ಸಮಾಜದ ಅನೇಕ ಚರ್ಚೆಗಳು ವ್ಯಕ್ತಿ ಕೇಂದ್ರಿತಗೊಂಡವು. ಇದರ ಪರಿಣಾಮವಾಗಿ ವ್ಯಕ್ತಿಯು ಏಕಾಂತವಾದಿಯಾದ.

ವಿವರಗಳಿಗೆ ನೋಡಿ: Raymond Williams 1983 keywords P.No. 188 to 189

ಮನೆಗಳ ವಿನ್ಯಾಸ

ಕರುಮಾಡ, ನೆಲೆ ಮನೆಯೆಂದು ಉಪ್ಪರಿಗೆ. ದಡ್ಡಿಯೆಂದು ಮಾಳಿಗೆ. ಚೌರಿಗೆಯೆಂದು ಮನೆ. ನಟ್ಟಮನೆಯೆಂದು ನಡುಮನೆ. ಓವರಿಯೆಂದು, ಗಳಂತಿಗೆಯೆಂದು ಕೋಣೆ. ಕೇರೆಂದು ಗೋಡೆ, ಮದಿಲೆಂದು ಮಗಿಲ್, ಪುದಿಯೆಂದು ದ್ವಾರಪಾರ್ಶ್ವಂ, ಪೊಸತಿಗೆಯೆಂದು ದೇಹಳಿ, ತಾಳೆಂದು ಅಗುಳಿ, ಪಡಿಯೆಂದು ಕವಾಟಂ, ಕಕ್ಕುದರಿಯೆಂದು ಕಕ್ಕುದರಿ, ಭಂಡಾರವೆಂದು ಕೋಶ ಗೃಹಂ, ಸೆಜ್ಜೆವನೆಯೆಂದು, ಪಳ್ಳವನೆಯೆಂದು ಎರಡು ರೀತಿಯ ಶಯ್ಯಾಗೃಹ. ಪಳ್ಳೆಯೆಂದು ಶಯನಂ, ಎಂದು ಕರ್ನಾಟಕ ಶಬ್ದಸಾರಂನಲ್ಲಿ ಬಂದಿದೆ.

ಮನೆ ಪೆರ್ಗಡೆ

ಪಿರಿಯ ಹೆಗಡೆಯೇ ಪೆರ್ಗಡೆಯಂದಾಗಿದೆ. ಮನೆ ಪೆರ್ಗಡೆಯೆಂದರೆ ಮನೆಗೆ ಹಿರಿಯ ಹೆಗ್ಗಡೆ. ಇದು ಮುಖ್ಯ ಅಧಿಕಾರ ಸೂಚಕ ಪದವೂ ಹೌದು. ಮನೆ ಪೆರ್ಗಡೆಯು ಮುದ್ರೆ ಒತ್ತಿರುವುದು ವಿಶೇಷವಾಗಿದೆ.

ಮನೆವಾಟ್ತೆ

ಮನೆವಾರ್ತೆಯೆಂದರೆ ಮನೆಯ ಸುದ್ದಿ. ಎರಡನೆಯದು ಮನೆ ವಾಟ್ತೆಯೆಂದರೆ ಮನೆಕೆಲಸ ಎಂದೂ ಆಗುತ್ತದೆ. ಮನೆವಾರ್ತೆಯನ್ನು ಹೊರಗೆಡಹಬಾರದು. ಅದರಿಂದ ಕುಟುಂಬವು ಹಾಳಾಗುತ್ತದೆಯೆಂದು ನಂಬಿಕೆಯಿದೆ. ಕೈಮೀರಿ ಹೋದ ಕೌಟುಂಬಿಕ ಸಂಗತಿಗಳು ಜರುಗಿದ ಮೇಲೆ ಬುದ್ಧಿ ಹೇಳಲು ಅವಕಾಶವಿಲ್ಲ.

ಮನೋಮಯ ಸನಾತನ

'ಮನೋಮಯ' ಎಂಬ ಶಬ್ದಕ್ಕೆ 'ಮನಸ್ಸಿನಂತಹ ರೂಪವನ್ನು ಹೊಂದಿರುವವನು ಎಂದಲ್ಲ ಅರ್ಥ. ಇದು ಪಾಶ್ಚಾತ್ಯರ 'ಆತ್ಮನಿಷ್ಠವಾದ ಆದರ್ಶವಾದ' (Subjective–Idealism) ಮಾತ್ರ ಎಂದರೆ, ಆತ್ಮನಿಷ್ಠವಾದ ಪ್ರತೀತಿಯೇ ಪರಮಾರ್ಥ ಎಂಬ ವಾದ. ಹಾಗೆ ಪರಿಗಣಿಸಿದರೆ ಬ್ರಹ್ಮವು ಮನಸ್ಸಿನಂತೆ ಜಡವೂ ಪರಿಚ್ಛಿನ್ನವೂ ಆಗಿದೆಯೆಂದು ಅರ್ಥವಾಗುತ್ತದೆ. ಕೇವಲವಾದ (Absolute Ideaslism) ಆದಾಗ, ಶಂಕರರು ವ್ಯಾಖ್ಯಾನಿಸಿರುವಂತೆ, 'ಮನಸ್ಸಿನಿಂದ ಅಥವಾ ಮನಸ್ಸಿನ ಮೂಲಕ ವ್ಯವಹರಿಸುವ' ಎಂಬ ಅರ್ಥವನ್ನು ತೆಗೆದುಕೊಳ್ಳಬೇಕು. ಎಂದರೆ ಚೈತನ್ಯವು ಮನಸ್ಸಲ್ಲ. ಆಕಾಶದಂತೆ ಸರ್ವಗತತ್ವ, ಸೂಕ್ಷ್ಮತ್ವ, ರೂಪಹೀನತ್ವ ಇರುವ ಶಕ್ತಿಯೇ 'ಆಕಾಶಾತ್ಮ' ಎಂದು ಶಂಕರಭಾಷ್ಯ ಹೇಳುತ್ತದೆ.

ವಿವರಗಳಿಗೆ ನೋಡಿ: ಸುಕುಮಾರ್ ಅಟಿಕ್ಕೋಡ್ ೨೦೦೫ ತತ್ವಮಸಿ
ಪುಟ ೧೬೦

ಮರುವಾಳು

ಕ್ರಿ.ಶ.916ರ ಪರ್ಷಿಯಾ ದೇಶದ ಸುಲೇಮಾನ್ ಎಂಬ ಪ್ರವಾಸಿಗ ಹೀಗೆ ಹೇಳುತ್ತಾನೆ. 'ವ್ಯಭಿಚಾರ ಮಾಡಿದವರನ್ನು ಮರಣದಂಡನೆಗೆ ಗುರಿ ಮಾಡುತ್ತಾರೆ. ಈ ಶಿಕ್ಷೆ ಇಂಡಿಯಾ ದೇಶದಲ್ಲೆಲ್ಲಾ ಇದೆ. ಆದರೆ ಗಂಡಸು ಹೆಂಗಸಿನ ಮೇಲೆ ಬಲಾತ್ಕಾರ ಮಾಡಿದರೆ ಗಂಡಸಿಗೆ ಮಾತ್ರ ಮರಣದಂಡನೆ ಹೆಂಗಸಿನ ಒಪ್ಪಿಗೆಯಿಂದ ವ್ಯಭಿಚಾರ ಮಾಡಿದರೆ ಆಕೆಗೂ ಆಕೆಯ ಮಿಂಡನಿಗೂ ಮರಣದಂಡನೆ ವಿಧಿಸುತ್ತಾರೆ.

ವಿವರಗಳಿಗೆ ನೋಡಿ: ನಾಗೇಗೌಡ ಎಚ್. ಎಲ್ (ಸಂ) 1964 ಪ್ರವಾಸಿ ಕಂಡ
ಇಂಡಿಯಾ ಪುಟ. 307

ಮಲ್ಲ ಯುದ್ಧದ ರೀತಿಗಳು

ಮಲ್ಲಯುದ್ಧದಲ್ಲಿ ನಿಂತು ಕೊಳ್ಳುವ ಕ್ರಮವು ಭರತ ನಾಟ್ಯದ ಶೈಲಿಯನ್ನು ಹೋಲುತ್ತದೆ. ಆಲೀಢ, ಪ್ರತ್ಯಾಲೀಢ, ಸಮಪಾದ, ವೈಷ್ಣವ, ಮಂಡಲಾಗ್ರ, ಈ ಐದು ಮಲ್ಲ ಯುದ್ಧದಲ್ಲಿ ನಿಲ್ಲುವ ರೀತಿ. ವಾಮ(ಎಡ,) ದಕ್ಷಿಣ(ಬಲ) ಬಾಹ್ಯ(ದೇಹದ ಹಿಂಭಾಗ) ಅಭ್ಯಂತರ(ದೇಹದ ಒಳಮೈ)

ಮಲ್ಲಯುದ್ಧದಲ್ಲಿ ಹೊಡೆತದ ಪ್ರಕಾರಗಳು

ತಟ್ಟುವುಕೆ, ವಿಳಂಬಿತ, ಅಕುಂಚಿತ, ಆಸ್ಫೋಡಿತ, ಆಕ್ಷಿಪ್ತಂ, ಉದ್ಭ್ರಾಮಿತಂ, ದಿಗ್ರಾಮಿತಂ, ಉಚಿತವಿರುದ್ಧಂ, ಅಚಿಂತ್ಯಂ– ಈ ಎಂಟು ರೀತಿಯಲ್ಲಿ ಹೊಡೆತ ವಿಧಾನಗಳಿವೆ. ಇದರ ನಿಯಮವನ್ನು ತಪ್ಪಿಸಿ ಮಲ್ಲ ಯುದ್ಧವನ್ನು ಮಾಡುವಂತಿಲ್ಲ.

ಮಹಾಜನಪದಗಳು

ಬುದ್ಧನ ಕಾಲದಲ್ಲಿ ಮಹಾಜನಪದಗಳು ಎಮದು ಕರೆಯುಲಾಗುತ್ತಿದ್ದ ವಿಶಾಲ ರಾಜ್ಯಗಳನ್ನು ನಾವು ಕಾಣುತ್ತೇವೆ. ಅವು ವಿಂಧ್ಯದಿಂದ ಉತ್ತರದಲ್ಲಿ ವಾಯವ್ಯದ ಗಡಿಯಿಂದ ಬಿಹಾರದವರೆಗೆ ಹರಡಿದ್ದುವು. ಅವುಗಳಲ್ಲಿ ಮಗಧ, ಕೋಸಲ, ವತ್ಸ ಮತ್ತು ಅವಂತಿ ಈ ನಾಲ್ಕು ಸಾಕಷ್ಟು ಬಲಿಷ್ಠವಾಗಿದ್ದುವು. ಈಗಿನ ಮಾಂಘಿರ್ ಹಾಗೂ ಭಾಗಲಪುರ ಜಿಲ್ಲೆಗಳಲ್ಲಿ ವ್ಯಾಪಿಸಿದ್ದ ಅಂಗ ರಾಜ್ಯಕ್ಕೆ ಚಂಜಪ ರಾಜಧಾನಿಯಾಗಿತ್ತು. ಅಲ್ಲಿ ಕಿ. ಪೂ. ಆರನೆಯ ಶತಮಾನದಿಂದ ಜನ ನೆಲೆಗೊಂಡಿದ್ದ ಸೂಚನೆಗಳಿವೆ. ಕೊನೆಗೆ ನೆರೆಯ ಬಲಿಷ್ಠವಾದ ಮಗಧವು ಅಂಗ ರಾಜ್ಯವನ್ನು ನುಂಗಿತು.

ವಿವರಗಳಿಗೆ : ಆರ್.ಎಸ್.ಶರ್ಮ.೧೯೯೭. ಪು.೧೦೫

ಮಹಾದೇವಿ

ಗುಪ್ತರ ಕಾಲದಲ್ಲಿ 'ಅಗ್ರಮಹಿಷಿ'ಯನ್ನು 'ಮಹಾದೇವಿ' ಎಂದು ಕರೆಯುವ ಕ್ರಮ ಬಂತು. ಈ ಕಾಲದಲ್ಲಿ 'ಆಗ್ರಮಹಿಷಿ'ಯು ಅಂತಃಪುರದ ಅತ್ಯುಚ್ಚ ಅಧಿಕಾರಿಯಾಗಿದ್ದಳು.

ವಿವರಗಳಿಗೆ ನೋಡಿ: ರಾಣಿಯರು

Dilip Kumar Ganguly 1979 Aspects of Ancient of Ancient Indian, Administration P. 64

ಮಹಾಪಾತಕ

"ಇಂತಹ ರಾಜಪುತ್ರರಿಗೆ ಕೌಟಿಲ್ಯದಿಂದ ರಚಿಸಲ್ಪಟ್ಟಿರುವ ಪರಹಿಂಸೆಯನ್ನೇ ಬೋಧಿಸುವ ಅರ್ಥಶಾಸ್ತ್ರದ ಪ್ರಮಾಣದಿಂದ ನಿಗೂಢ ಕೊಲೆಯನ್ನು ಉಪದೇಶಿಸುವ ನಿಪುಣನೇ ಉದ್ದಾಮ ಪಂಡಿತನೆನಿಸಿಕೊಳ್ಳುತ್ತಾನೆ. ಮಾಟ ಕೂಟಗಳನ್ನು ಮೂಡಿಸುವ ಸ್ವಭಾವತಃ ನಿರ್ದಯನಾದ ಪುರೋಹಿತನೇ ಗುರುವೆನಿಸಿಕೊಳ್ಳುತ್ತಾನೆ. ಹಾದರವನ್ನು ಬೋಧಿಸುವ ದುಷ್ಟನೇ ನೆಚ್ಚಿನ ಗೆಳೆಯನೆನಿಸಿಕೊಳ್ಳುತ್ತಾನೆ. ಸಹೋದರ ಸ್ನೇಹದಿಂದ ಮೃದುವಾದ ಹಾಗೂ ಕಲ್ಮಷವಿಲ್ಲದ ಮನಸ್ಸುಳ್ಳ ಅಣ್ಣತಮ್ಮಂದಿರನ್ನು ಅವರ ನಿಮಗೆ ಶತ್ರುಗಳೆಂದು ಹೇಳಿಕೊಟ್ಟು ತೊಂದರೆಗೀಡುಮಾಡಿಸಿ ಸ್ಥಾನ ಭ್ರಷ್ಟರನ್ನಾಗಿ ಮಾಡಿಸುವ ಮಹಾಪಾಪಿಷ್ಟನೇ ಶ್ರೇಷ್ಠ ಮಂತ್ರಿ ಎನಿಸುತ್ತಾನೆ. ಆದುದರಿಂದ ಈ ಪರಿಯಾದ ಸಾವಿರಾರು ದುರ್ವ್ಯವಹಾರಗಳಿಂದ ಭಯಂಕರವಾದ ರಾಜಕೀಯದಲ್ಲಿ ಎಂತಹವನಾದರೂ ಭ್ರಾಂತನಾಗದಿರುವುದಿಲ್ಲ."

ಬ್ರಹ್ಮ ಹತ್ಯೆ, ಸುರಾಪಾನ, ಸ್ತೇಯ ಮತ್ತು ಗುರುತಲ್ಪ ಗಮನವನ್ನು

ಮಹಾಪಾತಕವೆಂದು ಗೌತಮದಿಂದ ಹಿಡಿದು ಮನು, ಯಾಜ್ಞವಲ್ಕ್ಯರು ಹೇಳಿದ್ದಾರೆ. ಪಾಪಿಗಳೊಡನೆ ಸೇರುವುದೂ ಮಹಾಪಾತಕವಾಗಿದೆ.

ವಿವರಗಳಿಗೆ ನೋಡಿ: ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು ೨೦೧೦ ಕೌಟಿಲೀಯ ಅರ್ಥಶಾಸ್ತ್ರ ಪುಟ. ೫೫೮-೫೭೫
ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.೨ ೧೯೭೧ ಪುಟ. ೨೮೫

ಮಹಾಮಂಡಳಿಕ

ಚಕ್ರವರ್ತಿಯ ಅನಂತರ ಬರುವವನು ಮಹಾಮಂಡಳಿಕ. ಅವನ ಅಧಿಕಾರವು ಚಕ್ರವರ್ತಿಗಿಂತ ಕಡಿಮೆ. ಮಹಾಮಂಡಳಿಕನು ಚಕ್ರವರ್ತಿಯ ಕೈ ಕೆಳಗಿನವನೂ ಹೌದು.

ಮಹಾಮಹ

ಮಹಾಮಹವೆನ್ನುವುದು ವ್ರತ. ಮಹಾರಾಜನು ಚತುರ್ಮುಖ ಮಂಟಪದಲ್ಲಿ ಮಾಡುವ ಜಿನಪೂಜೆ. (ನೋಡಿ: ಹ.ಪ.ಸಂ.)

ಮಹಾರಥಿ

ಭೀಮ, ದೃಷ್ಟದ್ಯುಮ್ನ, ಧರ್ಮರಾಜ, ಸಾತ್ಯಕಿ, ಮತ್ಸ್ಯರಾಜನ ಮಗ ಶಿಖಂಡಿ– ಈ ಆರು ಜನ ವ್ಯಾಸರ ಮೇರೆಗೆ ಮಹಾರಥರು. ಹತ್ತುಸಾವಿರ ಬಿಲ್ಲಾಳುಗಳೊಂದಿಗೆ ಏಕಕಾಲಕ್ಕೆ ಯುದ್ಧಮಾಡುವವನು ಮಹಾರಥಿ ಎನಿಸಿಕೊಳ್ಳುತ್ತಾನೆ. 'ರಥಿಕ' ಎಂದರೆ ಬಂಟ, ಯೋಧ. ಇದು ವೃತ್ತಿವಾಚಕ ಪದ, ಜನವಾಚಕವಲ್ಲ ಎಂದು ಶಂಬಾ ಹೇಳುತ್ತಾರೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ ೧೯೯೯ ಹಾಲುಮತ ದರ್ಶನ ಸಂಪುಟ. ೩ ಪುಟ. ೮೧

1. ಅರ್ಧರಥಿ 2. ಸಮರಥಿ.

ಮಹಾವ್ರತ

ಕಾಳಾಮುಖರಿಗಾಗಿ ಲಾಕುಲ, ನಾಕುಲ ಮತ್ತು ಲಾಗುಡ; ಕಾಪಾಲಿಕರಿಗಾಗಿ ಸೋಮ ಮತ್ತು ಸೌಮ್ಯ ಹಾಗೂ ಕಾಪಾಲ, ಕಾಳಾಮುಖರಿಬ್ಬರಿಗಾಗಿ ಒಟ್ಟಾಗಿ ಮಹಾವ್ರತಧರ ಎನ್ನುವುವು.

ವಿವರಗಳಿಗೆ : ಡೇವಿಡ್. ಎನ್. ಲಾರೆಂಜೆನ್. ೨೦೦೫. ಪು. ೧೩

ಮಹಾಸತಿ

ಮಹಾಸತಿಯೇ ಮಾಸ್ತಿಯಾಗಿದ್ದಾಳೆ. ಮಾಸ್ತಿಕಲ್ಲು ಸತಿಯಾಚರಣೆಯನ್ನು

ಸಂಕೇತಿಸುತ್ತದೆ. ಮಡಿದ ಗಂಡನೊಂದಿಗೆ, ಚಿತೆಯನ್ನು ಪ್ರವೇಶ ಮಾಡುವುದರ ಮೂಲಕ ಸಾಯುವ ವಿಧಿಯನ್ನು ಸಹಗಮನ ಎಂಬುದಾಗಿ ಕರೆಯುತ್ತಾರೆ. 'ಸತಿ' ಹೋಗುವುದು ಎಂಬುದಾಗಿಯೂ ಕೆಲವೊಮ್ಮೆ ಕರೆಯುತ್ತಾರೆ. ಈ ರೀತಿ ಅಗ್ನಿ ಪ್ರವೇಶವನ್ನು ಮಾಡಿ ಮಡಿದ ಮಹಿಳೆಯರ ಸ್ಮಾರಕಗಳೇ ಮಹಾಸತಿಗಲ್ಲುಗಳು. ಇವುಗಳನ್ನು 'ಮಾಸ್ತಿಗಲ್ಲು', 'ಮಾಸ್ತ್ಯಮ್ಮ', 'ವ್ಯಾಸನತೋಳು' ಎಂಬುದಾಗಿ ಜನ ಹಲವಾರು ಕಡೆ ಇಂದಿಗೂ ಕರೆಯುತ್ತಾರೆ. ಕೆಲವು ಕಡೆಗಳಲ್ಲಿ ಇಂದಿಗೂ ಆರಾಧಿಸುತ್ತಾರೆ. (ಶೇಷಶಾಸ್ತ್ರಿ)

ಸಹಗಮನ ಮಾಡುವ ಪದ್ಧತಿ ಭಾರತದಾದ್ಯಂತ ಪ್ರಚಲಿತವಿದ್ದ ಒಂದು ಸಂಪ್ರದಾಯ. ಈ ಸಂಪ್ರದಾಯವು ಈ ಶತಮಾನದ ಆದಿಭಾಗದವರೆಗೂ ಇತ್ತು. ಸಹಗಮನ ಮಾಡುವುದು ಹೆಂಗಸು ತನ್ನ ಪಾತಿವ್ರತ್ಯದ ತುತ್ತತುದಿ ಏರಿದಾಗ ಅದು ಎಲ್ಲರಿಂದಲೂ ಸಾಧ್ಯವಿಲ್ಲ ಎಂಬುದನ್ನು ಅರಿತಿದ್ದ ನಮ್ಮ ಜನ ಸತಿಯಾದವಳ ಬಗ್ಗೆ ಗೌರವ ಅಷ್ಟೇ ಅಲ್ಲ ಪೂಜ್ಯಭಾವನೆಯನ್ನು ಹೊಂದಿದ್ದರು. ಈಗಲೂ ಹೊಂದಿದ್ದಾರೆ ಕೂಡ. ಈ ಪದ್ಧತಿ ಹತ್ತನೆಯ ಶತಮಾನದ ನಂತರ ವ್ಯಾಪಕವಾಗಿ ಹರಡಿತು. ಈ ಸಂಪ್ರದಾಯದಲ್ಲಿ ಮಹಿಳೆಯು ಎರಡು ರೀತಿಗಳಲ್ಲಿ ಸತಿಹೋಗುತ್ತಿದ್ದುದ್ದಾಗಿ ತಿಳಿಯುತ್ತದೆ. ಮೊದಲನೆಯದು ಸಹಗಮನ. ಅಂದರೆ, ಗಂಡನ ಹೆಣದೊಂದಿಗೆ ತಾನೂ ಸುಟ್ಟು ಹೋಗುವುದು ಅಥವಾ ಸಮಾಧಿಯಾಗುವುದು. ಎರಡನೆಯದು ಅನುಗಮನ. ಅಂದರೆ, ಗಂಡನು ದೂರದಲ್ಲಿ ಎಲ್ಲಿಯೋ ಸತ್ತಿದ್ದು. ಅಥವಾ ಅವನ ಶವವೇ ದೊರೆಯದಿದ್ದು, ಆಗ ಹೆಂಡತಿ ತನ್ನ ಗಂಡನನ್ನು ಸೇರಲು ಪ್ರತ್ಯೇಕ ಅಗ್ನಿ ಕುಂಡವನ್ನು ನಿರ್ಮಿಸಿಕೊಂಡು ಸಾಯುತ್ತಿದ್ದ ವಿಧಾನ. ಸತಿಯಾಗ ಬೇಕಾಗಿದ್ದವಳು ಚಿತೆಯಲ್ಲಿ ಬಿದ್ದೇ ಪ್ರಾಣ ತ್ಯಾಗಮಾಡಬೇಕು ಎಂಬ ನಿಯಮವನ್ನೇನು ನಮ್ಮವರು ಪಾಲಿಸಿಕೊಂಡು ಬಂದಿಲ್ಲ. ಗಂಡನಾದವನ ಶವದೊಂದಿಗೆ ಇವಳು ಆ ಸಮಾಧಿಯಲ್ಲಿ ಹುಗಿಸಿಕೊಳ್ಳುತ್ತಿದ್ದಳು. ಸೊರಬದ ಒಂದು ಮಾಸ್ತಿಕಲ್ಲು ಹರವೂರಿನ ಚಾವುಂಡ ಗೌಡ ಎಂಬುವನ ಮಗ ಬೊಮ್ಮಗೌಡ ಎಂಬುವನು ಸತ್ತಾಗ ಅವನ ಹೆಂಡತಿಯಾದ ಬೊಮ್ಮಗವುಡಿ ಎಂಬುವಳು ಅವನನ್ನು ಹುಗಿದ ಸಮಾಧಿಯಲ್ಲಿ ಕೂತು ಸಮಾಧಿಸ್ಥಳಾದ ವಿಷಯವನ್ನು ತಿಳಿಸುತ್ತದೆ. ಜೈನರು ಕೆಲವೊಮ್ಮೆ ಸಹಗಮನವನ್ನು ತಮ್ಮ ಧರ್ಮದ ವಿಧಿಗಳಲ್ಲೊಂದಾದ ಸಲ್ಲೇಖನ ವ್ರತವನ್ನು ಆಚರಿಸುವುದರ ಮೂಲಕ ಮಾಡಿದಂತೆ ತೋರುತ್ತದೆ. ಕ್ರಿ.ಶ. 1150ರ ಒಂದು ಶಾಸನದಿಂದ ಸತ್ಯವೆಗ್ಗಡೆ ಎಂಬುವನು ಮಡಿದಾಗ ಅವನ ಹೆಂಡತಿಯು ಸನ್ಯಸನ ವಿಧಿಯಿಂದ ಮಡಿದ ವಿವರಗಳು ದೊರೆಯುತ್ತವೆ.

ಮಹಾಸತಿಯ ಬಗೆಗಿನ ಆಚರಣೆ, ಹಬ್ಬ, ಐತಿಹ್ಯ ಮುಂತಾದ ವಿವರಗಳನ್ನು ಗುರುತಿಸುವ ಸಂದರ್ಭದಲ್ಲಿ ಅವು ಮುಖ್ಯವಾಗಿ ನಾಯಕ, ಗೊಲ್ಲ, ಗೌಡ ಹಾಗೂ ಕೆಲವು ಬಾರಿ ಅಸ್ಪೃಶ್ಯರೆಂದು ಕರೆಯಿಸಿಕೊಂಡ ಜನರಲ್ಲಿಯೇ ಉಳಿದು ಬಂದಿರುವುದನ್ನು

ಕಾಣಬಹುದಾಗಿದೆ. ಮಾಸ್ತಿಗೀತೆಗಳನ್ನು ಹಾಡುವವರೂ ಈ ವರ್ಗಕ್ಕೆ ಸೇರಿದವರೇ ಆಗಿದ್ದಾರೆ. ಮಾಸ್ತಿ ಜನಪದ ಗೀತೆಗಳಲ್ಲಿ ಮಹಾಸತಿ ಮದುವೆಯ ಸಿದ್ಧತೆಯಿಂದ ಹಿಡಿದುಮ ಮದುವೆಯ ವಿವರ, ಗಂಡನಾದವನು ಹೋರಾಟಕ್ಕೆ ಹೋಗುವುದು, ಅವನ ಸಾವು, ಮಾಸ್ತಿಯ ಕೊಂಡದ ಸಿದ್ಧತೆಗಳು, ಬಂಧು – ಬಳಗ ನೆರೆದು ಶೋಕಿಸುವುದು, ಮಾಸ್ತಿ ಕೊಂಡಕ್ಕೆ ಬೀಳುವುದು ಮುಂತಾದ ವಿವರಗಳಿರುತ್ತವೆ. ಈ ವಿವರಗಳು ಮೇಲ್ನೋಟಕ್ಕೆ ಘಟನೆಯ ಬೆಳವಣಿಗೆಯ ಸ್ವರೂಪವನ್ನು ಪರಿಚಯಿಸುವಂತೆ ಕಂಡುಬಂದರೂ, ಹೆಣ್ಣಿನ ದಹನಕ್ಕೆ ಕಾರಣವಾದ ಪ್ರಭುತ್ವ ಸಂಸ್ಕೃತಿಯ ನಡವಳಿಕೆಗಳು ಹಾಗೂ ನಂಬಿಕೆಗಳ ವಿರುದ್ಧ ಸ್ಪಷ್ಟವಾದ ಭಾವವೊಂದು ಪ್ರಕಟಗೊಂಡಿರುವುದು ಕಂಡುಬರುತ್ತದೆ. ಮಾಸ್ತಿ ಜನಪದ ಗೀತೆಗಳು ನೇರವಾಗಿ ಸತಿಪದ್ಧತಿಯನ್ನು ವಿರೋಧಿಸುವಂತೆ ಕಂಡುಬರುವುದಿಲ್ಲ. ಆದರೆ ಬಂಧುಗಳು ಸಹಗಮನ ಮಾಡಬೇಡವೆಂದು ಸತಿಯನ್ನು ಕೇಳಿಕೊಳ್ಳುವುದು, ಸಂಕಟಪಡುವುದು, ಅಸಹಾಯಕತೆಯ ವೇದನೆ ಮುಂತಾದವು ಸ್ವಲ್ಪ ಮಟ್ಟಿಗೆ ಈ ರೀತಿಯಾಗಿ ಆಲೋಚನೆ ಮಾಡುವಂತೆ ಮಾಡುತ್ತವೆ ಎಂದು ಮೋಹನ ಕೃಷ್ಣ ರೈಯವರು ಹೇಳುತ್ತಾರೆ.

ವಿವರಗಳಿಗೆ ನೋಡಿ: ಆರ್.ಶೇಷಶಾಸ್ತ್ರಿ ೨೦೦೫ ಶಾಸನ ಪರಿಚಯ ಪುಟ. ೨೯–೩೦
ಮೋಹನ ಕೃಷ್ಣರೈ ಕೆ. ೨೦೦೯ ಚರಿತ್ರೆ ಕಥನ. ಪುಟ. ೯೦–೯೧

ಮಾಂಡಲಿಕ

ಊರನ್ನು (ಗ್ರಾಮವನ್ನು) ಆಳುವವನು ಗಾವುಂಡ. ಮಂಡಲವನ್ನು ಆಳುವವನು ಮಂಡಲಿಕ. ರಾಜನ ಅನಂತರದ ಮಹಾಮಂಡಲೇಶ್ವರನದು. ಅದರ ಅನಂತರ ಮಂಡಲೇಶ್ವರ. ಇದು ರಾಜಸತ್ತೆಯ ಅಧಿಕಾರದ ವಿಭಾಗ ಕ್ರಮಗಳನ್ನು ಸೂಚಿಸುತ್ತವೆ. ಯಾರು ಮಂಡಲವನ್ನು ಆಳುತ್ತಾರೋ ಅವರು ಮಂಡಲಿಕರು. ಚಕ್ರವರ್ತಿಯ ಅನಂತರ ಬರುವವನು ಮಹಾಮಂಡಳಿಕ. ಅವನ ಅಧಿಕಾರವು ಚಕ್ರವರ್ತಿಗಿಂತ ಕಡಿಮೆ. ಮಹಾಮಂಡಳಿಕನು ಚಕ್ರವರ್ತಿಯ ಕೈ ಕೆಳಗಿನವನೂ ಹೌದು. ಅವರವರ ಆಳಿಕೆಯ ಪ್ರದೇಶದಲ್ಲಿ ಅಧಿರಾಜರಿಗಿದ್ದ ಸ್ಥಾನಮಾನಗಳೇ, ಗೌರವಗಳೇ ಸಾಮಂತರಿಗೂ ಇದ್ದವು. ಅಧಿರಾಜರಂತೆಯೇ ಇವರು ಮಂತ್ರಿಗಳನ್ನೂ, ಸೇನೆಯನ್ನೂ ಇತರ ಅಧಿಕಾರಿವರ್ಗವನ್ನೂ ಪಡೆದಿದ್ದರು. ಸಾಮಂತರಂತೆಯೇ ಮಂಡಲೇಶ್ವರರು ಅಧಿರಾಜನ ಅಧೀನರು, ತಮ್ಮ ಆಳಿಕೆಯ ಪ್ರದೇಶದಲ್ಲಿ ಸರ್ವಾಧಿಕಾರಿಗಳು, ಆದರೂ ಇಬ್ಬರಿಗೆ ಒಂದು ಸಣ್ಣ ವ್ಯತ್ಯಾಸವಿರುವಂತೆ ಕಾಣಿಸುತ್ತದೆ. ಸಾಮಂತರು ಯಾವುದೇ ಪ್ರಾಂತವನ್ನು ಮೊದಲಿನಿಂದಲೂ ಆಳುತ್ತಾ ಬಂದಿರತಕ್ಕವರು, ಅಧಿರಾಜನು ತಮ್ಮನ್ನು ಗೆದ್ದಿರುವುದರಿಂದ ಅವನ ಅಧೀನರು ಮತ್ತು ಸಮಯ ಸಿಕ್ಕಿದಾಗ ಸ್ವತಂತ್ರರಾಗಲು

ಹವಣಿಸುವವರು. ಮಹಾಮಂಡಲೇಶ್ವರರನ್ನು ರಾಜ್ಯದ ಬೇರೆ ಬೇರೆ 'ಮಂಡಲ' ಅಥವಾ ಭಾಗಗಳಿಗೆ ಅಧಿರಾಜನು ನೇಮಿಸುತ್ತಿದ್ದಂತೆ ಕಾಣುತ್ತದೆ. ಇದಕ್ಕೆ ಸ್ಪಷ್ಟ ನಿದರ್ಶನವು ಹೆಗ್ಗಡದೇವನಕೋಟೆ ತಾಲ್ಲೂಕಿನ ಶಾಸನದಲ್ಲಿದೆ. ಕುಡಿಯರ ಒಡೆಯನೂ, ನುಗುನಾಡ ಅಧಿಪತಿಯೂ ಆದ ರವಿಗನಿಗೆ ಚೋಳಚಕ್ರವರ್ತಿಯು ಸತ್ತಿಗೆ, ಶಂಖ, ಝಲ್ಲಳಿ ಮುಂತಾದುವನ್ನು ಕೊಟ್ಟು 'ಮಂಡಳೀಕ ಪದವಿ'ಯನ್ನು ದಯಪಾಲಿಸಿದಂತೆ ಆ ಶಾಸನವು ಹೇಳುತ್ತದೆ.

ಮಂಡಲೇಶ್ವರ ಮತ್ತು ಸಾಮಂತರಿಗೂ ರಾಜರಂತೆಯೇ ಪ್ರತ್ಯೇಕ ಧ್ವಜ, ಲಾಂಛನಗಳಿದ್ದುವು. ಅವರೂ ರಾಜರಂತೆ ತಮ್ಮ ತಮ್ಮ ಆಳಿಕೆಯ ಭಾಗಗಳಲ್ಲಿ ದೇಶಸಂಚಾರವನ್ನು ಕೈಗೊಂಡು ಜನರ ಕಷ್ಟಸುಖಗಳನ್ನು ವಿಚಾರಿಸುತ್ತಿದ್ದ ಪ್ರಸ್ತಾಪ ಅಲ್ಲಲ್ಲಿ ಬಂದಿದೆ. ಯುದ್ಧದ ಸಮಯದಲ್ಲಿ ಇವರು ತಮ್ಮ ಅಧಿರಾಜನ ಸಹಾಯಕ್ಕೆ ಹೋಗಿ ಅನೇಕ ದೇಶಗಳನ್ನು ಗೆದ್ದು ಕೊಟ್ಟದ್ದು ಉಂಟು. ಆದ್ದರಿಂದಲೇ ಹಲವು ಸಾಮಂತರನ್ನು ಚಕ್ರವರ್ತಿಯು ಕಟ್ಟಿಕೊಂಡ ನಚ್ಚಿನ ಅಲಗುಗಳೆಂದು ವರ್ಣಿಸಿರುವುದು. ಮಹಾಮಂಡಲೇಶ್ವರ ಎನ್ನುವುದು ಮಂಡಳೇಶ್ವರ ಎನ್ನುವ ಪದವಿಗಿಂತ ದೊಡ್ಡದು ಎಂಬುದು ಸ್ಪಷ್ಟವಾಗಿದೆ. ಒಬ್ಬ ಮಹಾಮಂಡಳೇಶ್ವರನ ಅಧೀನದಲ್ಲಿ ಹಲವು ಮಂಡಳೇಶ್ವರರಿರುತ್ತಿದ್ದರೆಂದು ಕಾಣುತ್ತದೆ. ಶ್ರೀಮನ್ಮಹಾಮಂಡಳೇಶ್ವರ ಜಗದೇಕಮಲ್ಲ ಮಲ್ಲದೇವನು ನಲವತ್ತು ನಾಲ್ವರು ಮಂಡಳಿಕರ ತಲೆಗಳನ್ನು ತೆಗೆದುಕೊಂಡ ಶೂರನಾಗಿದ್ದನೆಂದು ಶಾಸನವೊಂದು ಹೇಳುತ್ತದೆ. "(ನಲವತ್ತು ನಾಲ್ವರ್ ಮಂಡಳಿಕರ ತಲೆಗೊಂಡ ಗಂಡ)" ಮಂಡಲೇಶ್ವರರು ಮಹಾಮಂಡಲೇಶ್ವರನಿಗೆ ಕಪ್ಪವನ್ನು ಕೊಡುತ್ತಿದ್ದಂತೆ ಶಾಸನವೊಂದರಿಂದ ತಿಳಿದುಬರುತ್ತದೆ. ಮಹಾಮಂಡಲೇಶ್ವರರು ತಮ್ಮ ಆಳಿಕೆಯ ಪ್ರದೇಶದ ಆದಾಯದ ಒಂದು ಭಾಗವನ್ನು ಚಕ್ರವರ್ತಿಗೆ ಸಲ್ಲಿಸುತ್ತಿದ್ದರು.

ವಿವರಗಳಿಗೆ ನೋಡಿ: ಡಾ. ಎಂ. ಚಿದಾನಂದಮೂರ್ತಿ ೨೦೦೮ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ. ೩೭೭-೩೭೮-೩೭೯.

ಮಾತೃದೇವತೆ

ನಾಗರಿಕರು ಅರ್ಚಿಸುವ ಈ ದೇವತೆಯರ ಪರಿಕಲ್ಪನೆಯಲ್ಲಿ ನಾಗರಿಕ ಆಚರಣೆಯ ವಿಧಗಳಿರುತ್ತವೆ. ಈ ದೇವತೆಯರ ಅರ್ಚನೆಯ ಕ್ರಮವು ವಿಧಿವತ್ತಾಗಿದ್ದು, ನಾಗರಿಕ ಜಗತ್ತಿನೊಳಗೇ ಈ ದೇವತೆಯರ ಅರ್ಚನೆಯ ಕ್ರಿಯೆಯು ನಡೆಯುತ್ತಿರುತ್ತದೆ. ಸ್ತ್ರೀ ದೇವತೆಯರ ಆಚರಣೆಯಲ್ಲಿ ತಾಯಿಯನ್ನು ಕಾಣುವ ದೃಷ್ಟಿಯಿದೆ. ಅಂತಹ ಪರಿಕಲ್ಪನೆಯಲ್ಲಿ ಮಾತೃ ಪ್ರಧಾನ ಸಮಾಜದ ಪ್ರಭಾವವಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಕನ್ನಡ ಕಾವ್ಯಗಳಲ್ಲಿಯೂ ಸ್ತ್ರೀ ದೇವತೆಯರನ್ನು 'ತಾಯಿ' ಎಂದು ಸಂಬೋಧಿಸುವುದನ್ನು ಗಮನಿಸಿದರೆ, ಸ್ತ್ರೀ ದೇವತಾರ್ಚನೆಯಲ್ಲಿ ತಾಯಿ-

ಮಗುವಿನ ಸಂಬಂಧದ ರೂಪವನ್ನು ಕಾಣಬಹುದು. ನಾಗರಿಕ ದೇವತೆಗಳಲ್ಲಿ ಶಿಷ್ಟತೆಯು ಸ್ವಚ್ಛವಾಗಿ ರೂಪಿತವಾಗಿದ್ದು, ಅದರಲ್ಲಿ ಸಾತ್ವಿಕ ಅಂಶಗಳನ್ನು ಆರೋಪಿಸಲಾಗಿದೆ. ಇದರೊಂದಿಗೆ ಮತ ಪ್ರಭೇದಕ್ಕೆ ಅನುಗುಣವಾಗಿ ದೇವತೆಯರ ಪರಿಕಲ್ಪನೆಯೂ ವ್ಯತ್ಯಾಸಗೊಂಡಿದೆ. ಉದಾಹರಣೆಗೆ, ಜೈನರ ಪದ್ಮಾವತೀ ದೇವಿ, ಶೈವರ ಮಹಾದೇವಿ ಪರಿಕಲ್ಪನೆಯನ್ನು ಕಾಣಬಹುದು. ಕೆಲವು ಕಾವ್ಯಗಳಲ್ಲಿ ಪುರುಷ ದೇವತೆಯರ ಪತ್ನಿಯರನ್ನಾಗಿಯೂ ಈ ದೇವತೆಯರನ್ನು ಕಾಣಲಾಗಿದೆ.

ರಾಷ್ಟ್ರಕೂಟರಿಂದ ಹೊಯ್ಸಳರ ಅವನತಿಯವರೆಗಿನ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ಗ್ರಾಮದೇವತೆಗಳ ಅಧ್ಯಯನ ನಡೆಸುವಾಗ ಹೆಚ್ಚಿನ ದೇವತೆಗಳು ಸ್ತ್ರೀ ದೇವತೆಗಳಾಗಿರುವುದು ಕಂಡುಬರುತ್ತದೆ. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀದೇವತೆಗಳು ಹೇಗೆ ಪ್ರಾಮುಖ್ಯತೆಯನ್ನು ಪಡೆದುಕೊಂಡವು ಎನ್ನುವ ಪ್ರಶ್ನೆ ಈ ಸಂದರ್ಭದಲ್ಲಿ ಹುಟ್ಟಿಕೊಳ್ಳುತ್ತದೆ. ಈ ಪ್ರಶ್ನೆಗೆ ಉತ್ತರಿಸಬೇಕಾದರೆ ಗ್ರಾಮದೇವತೆಗಳ ಉಗಮದ ಚರಿತ್ರೆಯನ್ನು ಅಧ್ಯಯನ ನಡೆಸಬೇಕಾಗುತ್ತದೆ. ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಪರಿಣಾಮಗಳನ್ನು ಪರಿಶೀಲಿಸುವುದು ಇಲ್ಲಿ ಅನಿವಾರ್ಯವೆನಿಸುತ್ತದೆ. ದೇವಿಪ್ರಸಾದ್ ಚಟ್ಟೋಪಾಧ್ಯಾಯರ ಪ್ರಕಾರ ಮಾತೃಪ್ರಧಾನ ಪಂಥದ ಜನಪದ ರೂಪಗಳೇ ಗ್ರಾಮದೇವತೆಗಳು. ಕೃಷಿ ಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಫಲವಂತಿಕೆಯ ಅಥವಾ ಫಲೋತ್ಪತ್ತಿಯ ಸಂಕೇತವಾಗಿ ಪರಿಗಣಿಸಿರುವುದೇ ಈ ವ್ಯವಸ್ಥೆಯ ಹುಟ್ಟಿಗೆ ಕಾರಣ. ಎಲ್ಲಮ್ಮನ ಕುರಿತ ಪುರಾಣ ಮೂಲದ ಕಥೆಯು ಎಲ್ಲಮ್ಮನನ್ನು ರೇಣುಕೆಯೆಂದು ಕರೆಯುತ್ತದೆ. ರೇಣುಕರಾಜನ ಮಗಳಾಗಿ, ಪರಶುರಾಮನ ತಾಯಿಯಾಗಿ, ಜಮದಗ್ನಿಯ ಮಡದಿಯಾಗಿ ಆಕೆಯ ಕತೆ ಹೆಣೆದುಕೊಂಡಿರುವುದು ತಿಳಿದುಬರುತ್ತದೆ. ಜನಪದ ಮೂಲದ ಕತೆಗಳು ಈ ದೇವತೆಯನ್ನು ಎಲ್ಲಮ್ಮನೆಂದೇ ಕರೆಯುತ್ತವೆ. ಮೂಲತಃ ಎಲ್ಲಮ್ಮ ಎಲ್ಲೆಯ ಅಥವಾ ಸೀಮೆಯ ದೇವತೆ ಎನ್ನುವ ವಾದ ಹೆಚ್ಚು ಪ್ರಚಾರಗೊಂಡಿರುವಂತೆ ಕಂಡುಬರುತ್ತದೆ. ಈ ವಾದದ ಪ್ರಕಾರ, ಗ್ರಾಮಗಳ ಸೀಮೆಗಳನ್ನು ಗುರುತಿಸಲು ಎಲ್ಲೆಯ ಕಲ್ಲುಗಳನ್ನು ಹಾಕಲಾಗುತ್ತಿತ್ತು, ಆ ಕಲ್ಲುಗಳು ಕ್ರಮೇಣ ಪೂಜೆ, ಆರಾಧನೆಗಳನ್ನು ಕಂಡು ವಿಶೇಷತೆಯನ್ನು ಪಡೆದುಕೊಂಡವು. ಎಲ್ಲಮ್ಮ ಪ್ರಭಾವಶಾಲಿಯಾಗಿ ಬೆಳೆಯುತ್ತಲೇ ಸಮಾಜದ ನಾನಾ ವರ್ಗಗಳಿಂದ ಆಕರ್ಷಿತಳಾದಳು. ಬ್ರಾಹ್ಮಣರಿಗೆ ರೇಣುಕೆಯಾಗಿ, ವೀರಶೈವರಿಗೆ ಸತ್ಯಕ್ಕಳಾಗಿ, ಜೈನರಿಗೆ ಪದ್ಮಾವತಿಯಾಗಿ, ಕೆಳವರ್ಗದವರಿಗೆ ಹುಲಿಗೆಮ್ಮ, ಸವಾರೆಮ್ಮ, ಮಾಪುರತಾಯಿಯಾಗಿ ಪರಿವರ್ತನೆಗೊಂಡಳು ಎಂದು ಮೋಹನಕೃಷ್ಣ ರೈ ಹೇಳುತ್ತಾರೆ.

"ಸಿಂಧೂ ವ್ಯವಹಾರನೀತಿಯ ಇನ್ನೊಂದು ಮುಖ್ಯಾಂಶವು 'ಮಾತೃದೇವತಾ' ಪೂಜೆಯಾಗಿತ್ತು. ಈ ಪ್ರದೇಶಗಳಲ್ಲಿ ದೇವಿಯ ಹಲವಾರು ರೂಪಗಳು ದೊರಕಿವೆ: ಹಾಗೂ ಈ ರೂಪಗಳನ್ನು ಗುರುತು ಹಿಡಿಯುವುದರಲ್ಲಿ ಸಂಶಯವೇನೂ ಇಲ್ಲ.

ಹೀಗೆ ಈ ವ್ಯವಹಾರ ನೀತಿಯಲ್ಲಿರುವ ದಿವ್ಯದ ಸ್ತ್ರೀಭಾವ ಪ್ರಚುರತೆಯು ಅರ್ವಾಚೀನ ಭಾರತೀಯ ಸಂಸ್ಕೃತಿಯ ಮೇಲೆ ಬೀರಿದ ಮತ್ತೊಂದು ಅವೈದಿಕಾಂಶ. ದೇವಾಲಯಗಳಲ್ಲಿನ ದೇವಪೂಜಾ ಸಂವಿಧಾನವೂ ಈ ವ್ಯವಹಾರನೀತಿಯಲ್ಲಿ ಪ್ರಮುಖವಾಗಿತ್ತು. ಇವೆರಡು ಅಂಶಗಳೂ ಆಗಲೇ ಮೇಲೆ ವಿವರಿಸಲ್ಪಟ್ಟ ದ್ರಾವಿಡ ವ್ಯವಹಾರನೀತಿಗೆ ಸಮನಾಗಿವೆ. ಆದರೆ ಈ ವ್ಯವಹಾರ ನೀತಿಯು ವಸ್ತುತಃ ನಗರಗಳ ವ್ಯವಹಾರ ನೀತಿಯಾಗಿತ್ತು ಮತ್ತು ಅವಶೇಷಗಳು ನಗರ ನೆಲೆಗಳಲ್ಲಿ ಮಾತ್ರ ದೊರೆತಿರುವುದರಿಂದ ಅದು ಬೇರೆಯಾಗುವುದಕ್ಕೆ ಸಾಧ್ಯವಿಲ್ಲ. ಪಶು – ಪಕ್ಷಿಗಳು ಕಾಣಿಸಿಕೊಂಡಿರುವುದು ಈ ವ್ಯವಹಾರನೀತಿಯ ಮತ್ತೊಂದು ವೈಶಿಷ್ಟ್ಯವಾಗಿದೆ ಮತ್ತು ದ್ರಾವಿಡ ವ್ಯವಹಾರ ನೀತಿಗೂ ಇದು ಸಮಾನವಾಗಿದೆ. ಅನೇಕ ವಿಧಾವಾದ ಆಕೃತಿಗಳು ಸಿಕ್ಕಿವೆ: ಆದರೆ ಅವು ಅಲಂಕಾರ ವಸ್ತುಗಳೇ ಅಥವಾ ಪೂಜಾರ್ಹ ವಸ್ತುಗಳೇ ಎಂಬುದು ಅನಿಶ್ಚಿತವಾಗಿದೆ. ಅವುಗಳು ಚಿತ್ರ – ಲೇಖನ ಮಾರ್ಗದ ಬರವಣಿಗೆಯ ವರ್ಣಮಾಲೆಯಾಗಿದ್ದರೂ ಇರಬಹುದು. ಅನಿಶ್ಚಿತ ವಿಷಯಗಳು ತುಂಬಾ ಇವೆ: ಆದರೆ ಪಶುಗಳ ಪ್ರಚುರತೆಯು ನಮ್ಮ ಗಮನವನ್ನು ಸೆಳೆಯುವ ಒಂದು ವೈಶಿಷ್ಟ್ಯ.

ಋಗ್ವೇದದಲ್ಲಿಯೂ ಮಾತೃದೇವತೆಯಾದ ಉಷೆ(ಉಷಸ್) ಯ ಚಿತ್ರಣವು ಬರುತ್ತದೆ. ಮಾತೃದೇವತೆಯಾದ

ಉಷ್ ಮತ್ತು ಇಂದ್ರರ ನಡುವೆ ಯುದ್ಧವು ನಡೆಯುತ್ತದೆ. ಮಾತೃದೇವತೆಯರು ಕೂಡುದಾರಿಯಲ್ಲಿ ಪುರುಷರನ್ನು ಬಲಿಕೊಡುವ ಚಿತ್ರಣವೂ ಸಿಗುತ್ತದೆ. ಇದು ಮಾತೃದೇವತೆಯರ ಪ್ರಾಬಲ್ಯವನ್ನು ಚಿತ್ರಿಸುತ್ತದೆ. ಗೌರಿಯೂ ಒಂದರ್ಥದಲ್ಲಿ ಮಾತೃದೇವತೆಯೇ ಆಗಿದ್ದಳು. ಮಾತೃದೇವತೆಯ ಆರಾಧನೆಯು ಈಗಲೂ ನಡೆಯುತ್ತದೆ."

"ಮಹಾಮಾತಾ ಸಂಪ್ರದಾಯವು ಪುರಾತನ ಜನಾಂಗದ ಮೂಲ ದೈವತ. ಭಾರತದ ಹೊರಗೂ ಆದಿ ಜನನಿಯ (Mother Goddess) ಆರಾಧನೆ ಇದ್ದಿತು. ಇದು ಮಾನವ–ಸಮಾಜವು ಮಾತೃ–ಪ್ರಧಾನ ಕುಟುಂಬ ಸಂಸ್ಥೆಯ ಹಂತದಲ್ಲಿ ಇದ್ದಾಗಿನ ದೇವತಾ ಪ್ರತಿಮೆ. ಇತಿಹಾಸ ತಜ್ಞರ ಅಭಿಪ್ರಾಯವನ್ನು ಸಂಗ್ರಹಿಸಿ ಹೇಳಬಹುದು: ಮೌರ್ಯರ ಕಾಲದಲ್ಲಿ ಯಕ್ಷಿಣಿಯರ ಆರಾಧನೆಯು ಪ್ರಚಲಿತವಾಯಿತು. ಈ ಸಂದರ್ಭ ದಕ್ಷಿಣ ಭಾರತದಲ್ಲಿ ಹೆಣ್ಣಿನ ಫಲವತ್ತತೆಯನ್ನು ಕುರಿತ ಯಕ್ಷಿಣಿಯರ ಆರಾಧನೆಯು ಹೆಚ್ಚಿತು. ಸುಮಾರು ಇದೇ ಕಾಲಕ್ಕೆ ಲಕ್ಷ್ಮೀ ಪೂಜೆ, ಶಕ್ತಿ ಪೂಜೆಯು ಬಳಕೆಯಲ್ಲಿ ಬಂದಿತು. ಸುಂಗ ಕುಶಾನರ ಕಾಲದಲ್ಲಿ ಗಜಲಕ್ಷ್ಮಿಯ ಆರಾಧನೆಯು ರೂಪುಗೊಂಡಿತು. ಇವರ ಕಾಲದಲ್ಲಿ ಉಮೆ, ಶ್ರೀಲಕ್ಷ್ಮಿ ಸರಸ್ವತಿಯರು ಮುಖ್ಯ ದೇವತೆಯರಾಗಿದ್ದರು.

ಗುಪ್ತರ ಕಾಲದಲ್ಲಿ ಮಾತೃದೇವತೆಯರ ಪೂಜೆಯೂ ಹೆಚ್ಚಿದ್ದು ಸಪ್ತಮಾತೃಕೆಯರ ಆರಾಧನೆಯು ಹೆಚ್ಚಿತು. 'ಶಕ್ತಿ'ಯ ಕುರಿತು ನಂಬಿಕೆಯು ಈ ಕಾಲದಲ್ಲಿ ಹೆಚ್ಚಾಗ ತೊಡಗಿದ್ದು ಹರ – ಗೌರಿಯರ ಕಲ್ಪನೆಯು ಬಂದಿತು. ಗುಪ್ತರ ಕಾಲಕ್ಕೆ (ಕ್ರಿ.ಶ. ನಾಲ್ಕನೆಯ ಶತಮಾನ) ದುರ್ಗೆಯ ಪೂಜೆಯು ಬಳಕೆಯಲ್ಲಿ ಬಂದಿತು. ಕ್ರಿಶ ಐದನೆಯ ಶತಮಾನದ ತರುವಾಯ ಶಕ್ತಿ – ದೇವಿ ಪೂಜೆಯೂ ಭಾರತೀಯ ಪರಂಪರೆಯಲ್ಲಿ ಸ್ಪಷ್ಟವಾಗಿ ಒಡಮೂಡಿರುವುದನ್ನು ಕಾಣಬಹುದಾಗಿದೆ. ಮಾತೃ ದೇವತೆಯ ಪೂಜೆಯು ಆ ವೇಳೆಯ ತಾಂತ್ರಿಕರಲ್ಲಿ ವಿಶಿಷ್ಟವಾದ ರೂಪವನ್ನು ತಳೆಯಿತು. ಕಾಳಿ, ಕಾಮಾಕ್ಷಿ, ಮಹಾದುರ್ಗೆ, ಮತಂಗಿ, ಭುವನೇಶ್ವರಿ, ಭೈರವಿ, ಧೂಮಾವತಿ, ಎಕಜಾತ, ತಾರಾ, ಭಗವತಿ ಮುಂತಾದ ಸ್ತ್ರೀ ದೇವತೆಗಳ ಹೆಸರನ್ನು ಕ್ರಿಶ ಆರನೆಯ ಶತಮಾನದ ಹೊತ್ತಿಗೆ ತಾಂತ್ರಿಕರು ತಂದರು. ಋಗ್ವೇದದಲ್ಲಿ ವಾಕ್‌ದೇವತೆ (10–125)ಯನ್ನು ಸ್ತುತಿಸುವ ಸೂಕ್ತವಿದೆ. ನೀರಿನಲ್ಲಿ ಸಮುದ್ರದಲ್ಲಿ, ಆಕೆಯ ಸ್ಥಾನ ಐತರೇಯ ಬ್ರಾಹ್ಮಣದಲ್ಲಿ ವಾಕ್ಕನ್ನು ಸ್ತ್ರೀಯಾಗಿ ಪರಿವರ್ತಿಸಿ ಸೋಮರಸಕ್ಕೆ ಬೆಲೆಯಾಗಿ ಕೊಟ್ಟರಂತೆ. (ಐ.ಬಕ್ರ 1–27) ಅಷ್ಟೇ ಅಲ್ಲದೆ, ಸರಸ್ವತಿ ದೇವಿಯನ್ನು ಶುದ್ಧಗೊಳಿಸುವವಳು, ಅನ್ನಾದಿಗಳನ್ನು ಕೊಡುವವಳು ಐಶ್ವರ್ಯ ಕೊಡುವವಳು ಎಂದು ಭಾವಿಸಲಾಗಿದೆ. ಸರಸ್ವತಿಯನ್ನು ನದಿಯಾಗಿ, ದೇವತೆಯಾಗಿ, ಆಕಾಶಾಭಿಮಾನಿ ದೇವತೆಯಾಗಿ ವಾಗ್ದೇವಿಯಾಗಿ ಋಗ್ವೇದವು ಕಂಡಿದೆ." (ಕೊಸಾಂಬಿ)

ಹೆಣ್ಣಿನ ತಾಯ್ತನದ ಬಗೆಗೆ 'ಮಹಾಭಾರತ'ದಲ್ಲಿ ಬರುವ ವ್ಯಾಖ್ಯಾನವೊಂದು ಹೀಗಿದೆ: ಮಗುವನ್ನು ಹೊಟ್ಟೆಯಲ್ಲಿ ಧಾರಣೆ ಮಾಡುವುದರಿಂದ ಈ ರೀತಿಯ ಸನ್ನಿವೇಶದಲ್ಲಿ ತಾಯ್ತನವು ಭಾವನಾತ್ಮಕ ವಿಷಯಗಳಿಂದ ಪ್ರೇರಿತವಾಗುವುದು ಅನಿವಾರ್ಯವಾಗುತ್ತದೆ. ಹೀಗಾಗಿ ತಾಯಿ – ಮಗುವಿನ ಸಂಬಂಧವೂ ನಿರ್ದಿಷ್ಟ ಗುರಿಯುಳ್ಳದ್ದಾಗಿರುತ್ತದೆ.

ಮನುವಿನ ಪ್ರಕಾರ   ತಂದೆಗಿಂತ ತಾಯಿಗೆ ಸಾವಿರ ಪಾಲು ಹೆಚ್ಚು ಗೌರವ ತೋರಬೇಕು.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 2–145

ಶಂಬಾ ಜೋಶಿ 1999 ಸಂಪುಟ. 1 ಪುಟ. 13, 190, ಸಂಪುಟ. 3 ಹಾಲುಮತ ದರ್ಶನ ಪು. 117, 193

ವೆಂಕಟರಾವ್. ಹೆಚ್.ಪಿ (ಅನು) 1949 ಋಗ್ವೇದ ಪುಟ. 64, 68

ಡಿ. ಡಿ. ಕೊಸಾಂಬಿ 2003 ಪುರಾಣ ಮತ್ತು ವಾಸ್ತವ ಪುಟ. 124–126, 118–157

ಮೋಹನಕೃಷ್ಣ ರೈ 2004 ಪ್ರಭುತ್ವ ಮತ್ತು ಜನತೆ ಪು. 141

Deviprasad Chattopadhyaya 1981 Lokayata P. 232-269
ಡಾ. ಸರ್ವಪಲ್ಲಿ ರಾಧಾಕೃಷ್ಣನ್ 1970 ತತ್ವಶಾಸ್ತ್ರ: ಪ್ರಾಚ್ಯ ಮತ್ತು ಪಾಶ್ಚಾತ್ಯ
ನಾಗರಾಜಯ್ಯ ಹಂ.ಪ. 1972 ಪ್ರಸ್ತಾವನೆ ಪುಟ. 112

ಮಾದೆಗಿ

ಮಾದಿಗನೆಂದರೆ ಹೊಲೆಯ ಎಂದರ್ಥ. ಹೊಲೆಯ; ಹೊಲತಿ; ಮಾದಿಗ; ಇವರನ್ನು ಅಸ್ಪೃಶ್ಯರೆಂದು ಕರೆಯುತ್ತಾರೆ. ಕಿಟ್ಟೆಲ್ ನಿಘಂಟುವಿನಲ್ಲಿ ಹೀಗೆ ಬರುತ್ತದೆ. ಎನಿತುಂ ಕಾಯ್ದು ಬೆನ್ನೀರ್ ಮನೆ ಸುಡದೆ ಮ್ಯನ್ತೆ ನಿನಗವರ್ ನಿಲೆಕಾಯ್ದುಂ ಮನದೊಳ್ ಪೊಲ್ಲದನೆನ್ನುಂ ನೆನೆಯರ್; ಪೊಲ್ ಎಂದರೆ ಹೊಲ್ ಎಂದರ್ಥ. ಅರ್ಥಹೀನ; ಕೊಳಕು; ಅಶುದ್ಧ; ಹೀನ; ಎಂಬ ಅರ್ಥಗಳಿವೆ. ಪೊಲತಿಯೆಂದರೆ ಹೀನಕುಲದಲ್ಲಿ ಜನಿಸಿದವಳು ಎಂದು ಅರ್ಥ. ಇವರನ್ನು ಅಸ್ಪೃಶ್ಯರು ಎಂದು ಕರೆಯುತ್ತಾರೆ.ಸ್ಪೃಶ್ಯವರ್ಜಿತರು ಎಂದು ಅರ್ಥ. ಮಾದಿಗ ಎಂದರೆ ಶ್ವಪಚ: ಮಾತಂಗ.

ಮಾರಿ

ಮಾರಿಯನ್ನು ಕ್ಷುದ್ರದೇವತೆಯೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಮಾರಿ ಹಬ್ಬಕ್ಕೆ ಮಂಗಳವಾರ ಶ್ರೇಷ್ಠ. ಮಾರಿಯನ್ನು ಎಲ್ಲಾ ಗ್ರಾಮಗಳಲ್ಲಿ ಪೂಜಿಸುವುದರಿಂದ ಮಾರಿಯನ್ನು ಗ್ರಾಮದೇವತೆಯೆಂದೂ ಕರೆಯುತ್ತಾರೆ. ಮಾರಿದೇವತೆಯ ಸಿಟ್ಟಿನಿಂದ ದಡಾರ; ಸಿಡುಬು ಮುಂತಾದ ಕಾಯಿಲೆಗಳು ಬರುತ್ತವೆಯೆಂದು ಜನ ನಂಬುತ್ತಾರೆ. ಸಾಂಕ್ರಾಮಿಕ ಕಾಯಿಲೆಯನ್ನು ಮಾರಿಯು ಉಂಟು ಮಾಡುವುದರಿಂದ ಮತ್ತು ಅದರಿಂದ ಅನೇಕ ಸಾವುಗಳು ಸಂಭವಿಸುವುದರಿಂದ ಮಾರಿಯನ್ನು ಮೃತ್ಯುವಿಗೆ ಹೋಲಿಸುತ್ತಾರೆ. ಮಾರಿಯಮ್ಮನ ಹಬ್ಬಕ್ಕೆ ಬಲಿ ನೀಡುವುದು(ಕುರಿ, ಕೋಳಿ, ಕೋಣ, ಆಡು ಇತ್ಯಾದಿ) ಪದ್ಧತಿ. ಪುರಾಣಗಳಲ್ಲಿ ಯಮನ ಕಿಂಕರ ವರ್ಗದಲ್ಲಿ ಮೃತ್ಯುದೇವತೆಯೂ ಒಬ್ಬಳು. ಅವಳದು ಭಯಾನಕ ಸ್ವರೂಪ. ಹೊಗೆಯ ಬಣ್ಣ ಅವಳದು. ಬಣ್ಣಗಳಲ್ಲಿ ಹೊಗೆಯ ಬಣ್ಣ ಭಯಾನಕ ಮತ್ತು ಭೀಭತ್ಸ್ಯಕ್ಕೆ ಸಂಕೇತವಾಗಿರುವುದು ಇಲ್ಲಿ ಗಮನಾರ್ಹ.

ಮೃತ್ಯುವನ್ನು ಇಲ್ಲಿ ಮಾರಿ ಎಂದು ಕರೆಯಲಾಗಿದೆ. 'ಗೆಲುವನ್ನು ಬಯಸಿ ಬಂದವರಿಗೆ ಮಾರಿಯು ಎದುರಾದಂತೆ' 'ದಾರೀಲಿ ಹೋಗುವ ಮಾರಿನ್ನ ಮನೆಗೆ ಕರೆದಂಗಾಯ್ತು' – ಗಾದೆಯ ಮಾತುಗಳು. ಒಂದು ಕಡೆಯಲ್ಲಿ ದುರ್ಗಮ್ಮ, ಮಾರಿಯಮ್ಮ ಮೊದಲಾದ ದೇವತೆಗಳು. ಇನ್ನೊಂದು ಕಡೆಯಲ್ಲಿ ಅನೇಕ ರೋಗಗಳಿಗೆ ಕಾರಣವೆಂದು ನಂಬಿದ್ದ ಕ್ಷುದ್ರ ದೇವತೆಗಳು. ಇವುಗಳ ಉಪಾಸನೆಯು ಜನಸಾಮಾನ್ಯರಲ್ಲಿ ಬಹುಮಟ್ಟಿಗೆ ಪ್ರಚಲಿತವಿತ್ತು. ಹಳ್ಳಿಗಳ ಸುತ್ತಲೂ ದುಷ್ಟಶಕ್ತಿಗಳು ಹೊಂಚು ಹಾಕಿಕೊಂಡು ಕಾಯಿಲೆಗಳನ್ನೂ, ಕಷ್ಟಗಳನ್ನೂ ಜನರಿಗೆ ಉಂಟು ಮಾಡಲು ಕಾಯುತ್ತಿದ್ದವೆಂದೂ,

ಆ ಶಕ್ತಿಗಳನ್ನು ಹೋಗಲಾಡಿಸಲು ದುರ್ಗಿ, ಮಾರಿ, ಚೌಡಿ ಇತ್ಯಾದಿಗಳನ್ನು ಒಲಿಸಿಕೊಳ್ಳಬೇಕೆಂದು ಜನರು ನಂಬಿದ್ದರು. ಕೂಗುಮಾರಿ: ಗಡಿಮಾರಿ: ಇತ್ಯಾದಿಗಳು ಪ್ರಚಲಿತವಿದೆ. ಗಡಿಮಾರಿಯ ಕೆಲಸ – ಗಡಿ ಕಾಯುವುದು. ಮಾರಿಯನ್ನು ಪೂಜಿಸುವವರು ಶಿಷ್ಟರಲ್ಲ. ಮಾರಿಯನ್ನು ಅಳ್ಳುವ ಮಾರಿಯೆಂದು ಕರೆಯಲಾಗಿದೆ.

ವಿವರಗಳಿಗೆ ನೋಡಿ: ಡಾ॥ ಎಚ್.ತಿಪ್ಪೇರುದ್ರಸ್ವಾಮಿ 2007 ಕರ್ಣಾಟಕ ಸಂಸ್ಕೃತಿ ಸಮೀಕ್ಷೆ ಪುಟ. 194

ಮಾರ್ಗ ಪರಂಪರೆ ಮತ್ತು ಸಂಗೀತ

ಈಗ ಮಾರ್ಗೀ ಸಂಪ್ರದಾಯದ ಹಾಡು ಇಲ್ಲವೆಂದು ಬಿ.ಡಿ.ಪಾಠಕ ಅವರು ಅಭಿಪ್ರಾಯ ಪಡುತ್ತಾರೆ. ಮಾರ್ಗ ಮತ್ತು ದೇಸಿರಾಗಗಳ ಕುರಿತು ಮುಳಿಯ ತಿಮ್ಮಪ್ಪಯ್ಯನವರು ಹೇಗೆ ಹೇಳಿದ್ದಾರೆ: ನಮ್ಮ ನಾಟದೇಶದ ಇತಿಹಾಸವು ಸಂಗೀತಶಾಸ್ತ್ರದಿಂದಲೂ ಸ್ವಲ್ಪ ಮಟ್ಟಿಗೆ ತಿಳಿದು ಬರುವಂತಿದೆ. ಸಂಗೀತವು "ಮಾರ್ಗ, ದೇಶಿ" ಎಂದೆರಡು ವಿಧವಾಗಿದೆ. ಆ ಎರಡು ಸಂಗೀತವನ್ನು ಸಂಗೀತ ಶಾಸ್ತ್ರದಲ್ಲಿ ಹೀಗೆ ವಿಂಗಡಿಸಿದೆ:

[ಮಾರ್ಗ ಸಂಗೀತವು ಸ್ವರ್ಗದಲ್ಲಿ ಪ್ರಸಿದ್ಧವಾಗಿದೆ. ದೇಶೀ ಸಂಗೀತವು ಭೂತಲರಂಜಕವು. ಆಯಾ ದೇಶೀಯರೀತ್ಯನುಸಾರವಾಗಿ ಗಾನಮಾಡಲ್ಪಡು ವುದರಿಂದ "ದೇಶಿ" ಎಂಬ ಹೆಸರಾಯಿತು.]

ಅಷ್ಟೇ ಅಲ್ಲ; ಗೀತ–ವಾದ್ಯ–ನೃತ್ಯಗಳೆಂಬ ಅಂಗತ್ರಯುಗೂಡಿ ಸಂಗೀತವೆನಿಸುವುದು. ಅದರಿಂದ ಗೀತ–ವಾದ್ಯ–ನೃತ್ಯಗಳೆಂಬ ಮೂರರಲ್ಲಿಯೂ ಮಾರ್ಗ–ದೇಶಿಗಳೆಂಬ ಎರಡು ಭೇದಗಳಿವೆಯೆಂಬುದು ಸಿದ್ಧಾಂತವಾಗುತ್ತದೆ. ಸಂಗೀತಾಂತರ್ಗವಾದ ಗೀತವು ರಾಗಾಶ್ರಯವಾಗಿ ಮೂಡುವುದು. ಅಂತಹ ರಾಗಗಳೊಳಗೆ "ಭೈರವ, ಭೂಪಾಲ, ಶ್ರೀರಾಗ, ಫಲಮಂಜರಿ, ವಸಂತ, ಮಾಳವ, ಬಂಗಾಳ, ನಾಟಿ" ಎಂಬ ಪ್ರಸಿದ್ಧಗಳಾದ ಪುರುಷರಾಗಗಳೆಂಟು. ಮೊದಲಿನ ಐದು ರಾಗಗಳು ದೇಶೀಯುಗಳೊ ಅಥವಾ ಸ್ವರ್ಗೀಯುಗಳೊ ಎಂಬುದನ್ನು ವಿಚಾರಪೂರ್ವಕವಾಗಿ ನಿರ್ಣಯಿಸುವುದು ಪ್ರಕೃತಕ್ಕೆ ಸುಲಭಸಾಧ್ಯವಲ್ಲವಾದರೂ, ಮತ್ತಿನಮಾಳವ, ಬಂಗಾಳ, ನಾಟಿಗಳೆಂಬ ರಾಗಗಳು ದೇಶೀಯಗಳೆಂದು ಅವುಗಳ ಹೆಸರುಗಳಿಂದಲೆ ವ್ಯಕ್ತವಾಗುತ್ತದೆ. ಈ ಪ್ರತಿಯೊಂದು ರಾಗವನ್ನೂ ಆಶ್ರಯಿಸಿದ ಸ್ತ್ರೀರಾಗಗಳೂ, ಪುತ್ರೀಪುತ್ರ ರಾಗಗಳೂ, ದಾಸೀ ದಾಸರಾಗಗಳೂ, ಮಿಶ್ರರಾಗಗಳೂ ಬಹಳವಾಗಿರುತ್ತವೆ. ಇದರಿಂದ ನಮ್ಮ ನಾಟದೇಶದಲ್ಲುದಿಸಿದ ಗೀತ – ವಾದ್ಯ ನೃತ್ಯಗಳಿಂದೊಡಗೂಡಿದ ವಿಶಿಷ್ಟವಾದ ಸಂಗೀತವೊಂದು ಅತಿಪೂರ್ವ ಕಾಲದಲ್ಲೇ ನೆಲಸಿದ್ದುದೆಂದು ಗೊತ್ತಾಗುತ್ತದೆ. ಆ ಮೇಲೆ ನಾಟ ದೇಶವು ಕರ್ಣಾಟಕ (ನಾಟ)

ಸಂಗೀತವನ್ನೇ ಆಶ್ರಯಿಸುತ್ತಿದ್ದಾರೆ. ವಿಶಿಷ್ಟವಾದ ಸಂಗೀತವು ಆಯಾ ದೇಶಗಳ ವಿಶಿಷ್ಟವಾದ ಸಂಸ್ಕೃತಿ (Culture) ಯನ್ನು ಪಸರಿಸಲಿಕ್ಕೆ ಪ್ರಬಲವಾಗಿರುವುದೆಂಬುದು ಸಹೃದಯರಾದವರಿಗೆ ಹೊಸತಲ್ಲ.

ವಿವರಗಳಿಗೆ ನೋಡಿ: ಮುಳಿಯ ತಿಮ್ಮಪ್ಪಯ್ಯ ೧೯೮೮ ಶ್ರದ್ಧಾಂಜಲಿ ಸಂಪುಟ. ೨ ಪುಟ. ೫೦೭-೫೦೮
ಪಾಠಕ ಬಿ.ಡಿ. ೧೯೭೫ ಭಾರತೀಯ ಸಂಗೀತ ಚರಿತ್ರೆ ಪುಟ. ೮

ಮಾಲೆಗಾರರು

ಯಾವ ಹೆಂಗಸರು ಮಾಲೆಯನ್ನು ಕಟ್ಟಿ ಮಾರುತ್ತಾರೋ ಅವರನ್ನು ಮಾಲೆಗಾರ್ತಿಯರು ಎಂದು ಕರೆಯುತ್ತಾರೆ. ಇದು ಒಂದು ಉದ್ಯೋಗವೆಂಬುದು ಗಮನಾರ್ಹ.

ಇಂದಿನ ಹಾಗೆ ಅಂದು ಪಟ್ಟಣಗಳಲ್ಲಿ ಇಂಥ ಮಾಲೆಗಾರರ ಸಾಲುಗಳೇ ಇರುತ್ತಿದ್ದವು, ಮುಳಗುಂದದಲ್ಲಿ ಅಯ್ವತ್ತೆಂಟು ಮಾಲೆಗಾರರಿದ್ದುದನ್ನು ಅಲ್ಲಿಯ ಒಂದು ಶಾಸನ ತಿಳಿಸುತ್ತದೆ. ಆದ್ದರಿಂದ ಆ ಕಾಲಕ್ಕೆ ಮಾಲೆಯನ್ನು ಕಟ್ಟುವವರ ಜನಾಂಗ ಇತ್ತೆಂದು ಅವರು ಮಾಲೆಗಳನ್ನು ಕಟ್ಟಿ, ಅವುಗಳನ್ನು ಮಾರಿ ಉಪಜೀವನ ನಡೆಸುತ್ತಿದ್ದರೆಂದೂ ತಿಳಿದು ಬರುತ್ತದೆ.

ವಿವರಗಳಿಗೆ ನೋಡಿ: ಡಾ. ವಿ.ಎಲ್. ಪಾಟೀಲ್ ೨೦೦೯ ವಡ್ಡಾರಾಧನೆ ಜಾನಪದೀಯ ಅಧ್ಯಯನ ಪುಟ. ೧೭೭

ಮಾಸಕ

ಜಾತಕಗಳಲ್ಲಿ ಕೂಲಿಗಾರನು ತನ್ನ ಕೂಲಿಯಿಂದ ಜೀವಿಸಲು ಕಷ್ಟಪಡುತ್ತಿದ್ದ ಅನೇಕ ಸಂದರ್ಭಗಳನ್ನು ಕಾಣಬಹುದು. ತಾಮ್ರದ ಬಿಡಿಗಾಸಿಗೆ ಆಗ 'ಮಾಸಕ' ಎಂದು ಕರೆಯುತ್ತಿದ್ದು ಬೋಧಿಸತ್ವ, ಕೂಲಿಗಾರನಾಗಿ "ತನಗೆ ಸಿಕ್ಕುವ ಅರ್ಧ ಅಥವಾ ಒಂದು ಬಿಡಿಗಾಸಿನಿಂದ ತನ್ನ ತಾಯಿಯನ್ನು ಸಾಕಲಾರೆ" ಎನ್ನುತ್ತಾನೆ (ಜಾತಕ III. 326). ಹುಲ್ಲು ಕೊಯ್ಯುವವನಿಗೆ ದಿನವೆಲ್ಲ ಕೊಯ್ದ ಹುಲ್ಲಿಗೆ ಮಾರುಕಟ್ಟೆಯಲ್ಲಿ ಎರಡು ಬಿಡಿಗಾಸು ಸಿಗುತ್ತಿತ್ತು. (ಜಾತಕ III. 130).

ವಿವರಗಳಿಗೆ ನೋಡಿ: ಆರ್.ಎಸ್. ಶರ್ಮ ೨೦೦೪ ಪ್ರಾಚೀನ ಭಾರತದಲ್ಲಿ ಶೂದ್ರರು

ಮಿತ್ರಗುಣ

ವಾಸ್ತವದಲ್ಲಿ ಮಿತ್ರನಾದವನು ಧರ್ಮೋಪದೇಶದಿಂದ ಪಾಪಕಾರ್ಯಗಳನ್ನು ಮಾಡದಂತೆ ತಡೆಯುತ್ತಾನೆ. ಯಾವಾಗಲೂ ಸತ್ಕಾರ್ಯವನ್ನೇ ಮಾಡಲು ಪ್ರೇರೇಪಿಸುತ್ತಾನೆ. ಪ್ರಕಟ ಮಾಡಬಾರದ ವಿಷಯವನ್ನು ಗೋಪ್ಯವಾಗಿಯೇ ಇಟ್ಟಿರುತ್ತಾನೆ. ಇತರರ ಸೌಶೀಲ್ಯಾದಿ ಗುಣಗಳನ್ನು ಪ್ರಕಾಶಪಡಿಸುತ್ತಾನೆ, ತನ್ನವರು ಆಪತ್ತನ್ನು

ಹೊಂದಿದ್ದರೆ ಬಿಟ್ಟು ಹೋಗದೆ ಸಹಕರಿಸುತ್ತಾನೆ. ದು:ಖ ಸಮಯದಲ್ಲಿ ಬೇಕಾದುದನ್ನು ಕೊಡುತ್ತಾನೆ. ಇಂತಹ ಸ್ವಭಾವವಿರುವವನನ್ನೇ ಸನ್ಮಿತ್ರನೆಂದು ಸತ್ಪುರುಷರು ಹೇಳುತ್ತಾರೆ ಎಂದೂ ಅವರ ಸ್ನೇಹವು ಕೃತ್ರಿಮವಾಗಿರುವುದಿಲ್ಲ

ವಿವರಗಳಿಗೆ ನೋಡಿ: ಭರ್ತೃಹರಿಯ ನೀತಿಶತಕ ೧೯೭೪ –ಶ್ಲೋಕ–೬೬

ಮಿತ್ರಸಂಹಿತ

ಭಾರತೀಯ ಕಾವ್ಯಮೀಮಾಂಸೆಯಲ್ಲಿ ಮೂರು ಪ್ರಮುಖ ನಿಲುವುಗಳು ಸಂಹಿತೆಗಳ ಬಗೆಗಿವೆ.

ಪ್ರಭುಸಂಹಿತೆ: ಪ್ರಭುವಿನ ರೀತಿಯಲ್ಲಿ ಆಜ್ಞಾರೂಪವಾದುದು. "ಹೀಗೆ ಮಾಡತಕ್ಕದ್ದು" ಎನ್ನುವುದು ಇದರ ಶೈಲಿ. ಬಹುತೇಕ ಶಾಸ್ತ್ರಗಳು ಈ ಬಗೆಯವು.

ಮಿತ್ರಸಂಹಿತೆ: ಮಿತ್ರನು ತನ್ನ ಮಿತ್ರನಿಗೆ ಹಿತೋಪದೇಶವನ್ನು ಮಾಡುವ ರೀತಿಯದು ಮಿತ್ರಸಂಹಿತೆ. ಪುರಾಣಗಳು ಇದಕ್ಕೆ ಉದಾಹರಣೆಗಳಾಗಿವೆ.

ಕಾಂತಾ ಸಂಹಿತೆ: ಕಾಂತೆಯು ತನ್ನ ಕಾಂತನಿಗೆ ಹೇಳುವ ಧಾಟಿಯು ಕಾಂತಾಸಂಹಿತೆ. ಬಹುತೇಕ ಸಾಹಿತ್ಯ ಮಾರ್ಗಗಳು ಇದಕ್ಕೆ ಸೇರಿವೆ. ರಾಮಾಯಣ ಮಹಾಭಾರತಗಳು ಮಿತ್ರಸಂಹಿತೆಗಳು ನೀಡಿರುವುದು ಗಮನಾರ್ಹವಾಗಿದೆ.

ಮಿಥ್ಯಾಕರ್ಮಗಳು

ರಾಜನಿಂದ ನಿರ್ದಿಷ್ಟನಾಗದಿದ್ದರೂ ಅವನು ಸಮಂಜಸವಾದ ಸತ್ಯವನ್ನು ನುಡಿಯಬೇಕು. ತಿಳಿದೂ ತಿಳಿದೂ ಸತ್ಯವನ್ನು ಹೇಳದಿದ್ದರೆ ಅವನು ಪಾಪಭಾಜನನಾಗುತ್ತಾನೆ. ಅವನು ಮಿಥ್ಯಾವಾದಿಯಾಗುತ್ತಾನೆ. (ಮಾನಸೋಲ್ಲಾಸ–2–1251)

ಮಿಸಿಸು

ಸ್ನಾನಮಾಡಿಸು ಎನ್ನುವುದಕ್ಕೆ ಮಿಸಿಸು ಎಂದು ಬಂದಿದೆ. ಮೀಯಿಸು – ಮಿಸಿಸು ಎಂದಾಗಿದೆ. ಮೀಯಿಸು ಎನ್ನುವ ಪದವು ಈಗಲೂ ಚಾಲ್ತಿಯಲ್ಲಿದೆ.

ಮೀಂಗುಲಿಗ

ಮೀನನ್ನು ಕೊಲ್ಲುವಂಥವನು; ಬೆಸ್ತ ಎಂಬುದನ್ನು ಮಿಂಗುಲಿಗನೆಂದು ಕರೆಯಲಾಗಿದೆ. ಮೀನು ಎಂಬುದು ಮೀಂ ಎಂದಾಗಿದೆ. ಕೊಲೆ ಮಾಡುವವನು ಗುಲಿಗ ಎಂದಾಗಿದೆ.

ಮುಂಜಿ

ಅಥರ್ವವೇದದಲ್ಲಿ ಉಪನಯನವೆಂಬುದನ್ನು ವಿದ್ಯಾರ್ಥಿಯಾಗಿ ಸ್ವೀಕರಿಸುವುದು ಎಂಬ ಅರ್ಥದಲ್ಲಿ ಬಳಸಲಾಗಿದೆ. ಉಪನಯನವೆಂದರೆ ಜ್ಞಾನ

ದೀಕ್ಷೆ, ಬ್ರಾಹ್ಮಣನಿಗೆ ಎಂಟನೆಯ ವರ್ಷದಲ್ಲಿ ಕ್ಷತ್ರಿಯನಿಗೆ ಹನ್ನೊಂದು ಹಾಗೂ ವೈಶ್ಯನಿಗೆ ಹನ್ನೆರಡು ಕೊನೆಯ ವಯಸ್ಸು ಬ್ರಾಹ್ಮಣನಿಗೆ ಹದಿನಾರು, ಕ್ಷತ್ರಿಯನಿಗೆ ಇಪ್ಪತ್ತೆರಡು ಮತ್ತು ವೈಶ್ಯನಿಗೆ ಇಪ್ಪತ್ತನಾಲ್ಕು. ಈ ವಯಸ್ಸನ್ನು ದಾಟಿಯೂ ಉಪನಯನವಾಗದಿದ್ದರೆ ಪವಿತ್ರವಾದ ಸಾವಿತ್ರಿಯಿಂದ ಜಾರಿ ಅನಾರ್ಯನೆನಿಸುತ್ತಾರೆ. (ಮನುಸ್ಮೃತಿ 2 – 39)

ಬ್ರಾಹ್ಮಣನಿಗೆ ವಸಂತ ಋತುವಿನಲ್ಲಿ, ಕ್ಷತ್ರಿಯನಿಗೆ ಗ್ರೀಷ್ಮಋತುವಿನಲ್ಲಿಯೂ, ವೈಶ್ಯನಿಗೆ ಶರದೃತುವಿನಲ್ಲಿಯೂ, ರಥಕಾರನಿಗೆ ವರ್ಷ ಋತುವಿನಲ್ಲಿಯೂ ಉಪನಯನವನ್ನು ಮಾಡಬೇಕು. (ಬೌಧಾಯನ ಗೃಹ್ಯಸೂತ್ರ 2 – 5,6)

ಹತ್ತಿ, ಸೆಣಬು, (ಗೋಣಿ) ಕುರಿರೋಮಗಳಿಂದ ಮಾಡಿದ ನೂಲಿನ ಮೂರೆಳೆಯ ಉಪವೀತವನ್ನು ಅನುಕ್ರಮವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಧರಿಸಬೇಕು. (ಮನುಸ್ಮೃತಿ 2–44)

ಸ್ತ್ರೀಯರಿಗೆ ವಿವಾಹವು ಮಂತ್ರಸಹಿತವು. ಅದು ವೈದಿಕ ಸಂಸ್ಕಾರವು. ಪುರುಷನಿಗೆ ಉಪನಯನದ ಬಳಿಕ ಗುರುಕುಲವಾಸದಂತೆ ಸ್ತ್ರೀಗೆ ಪತಿಕುಲವಾಸವು. ಗೃಹಕೃತ್ಯವೇ ಅಗ್ನಿಕಾರ್ಯವು. ಬೇರೆಯಿಲ್ಲ. (ಮನುಸ್ಮೃತಿ 2–67)

ವೈಶ್ವದೇವ ಹೋಮ–ಬಲಿಕರ್ಮ–ನಿತ್ಯಶ್ರಾದ್ಧ–ಅತಿಥಿ ಭೋಜನರೂಪವಾದ ನಾಲ್ಕು ಪಾಕಯಜ್ಞಗಳು, ದಶಪೂರ್ಣ ಮಾಸಾದಿಗಳು ಇವೆಲ್ಲ ಜಪಯಜ್ಞವಾದ ಬ್ರಹ್ಮಯಜ್ಞದ ಹದಿನಾರನೆ ಒಂದು ಭಾಗದ ಮೂಲ್ಯ ಉಳ್ಳವುಗಳೂ ಅಲ್ಲ. ವೇದಶಾಸ್ತ್ರಾಧ್ಯಯನ ತದರ್ಥ ವಿಚಾರಗಳು ಬಹು ಫಲಗಳು. (ಮನುಸ್ಮೃತಿ 2–86)

"ಮುಂಜಿಯೆಂದರೆ ಉಪನಯನ: ನೊದೆ ಹುಲ್ಲಿನ ಉಡಿದಾರವೆಂಬರ್ಥವಿದೆ. ಉಪನಯನದ ನಿಷೇಧಕ್ಕೆ ಗುರಿಯಾದ ಶೂದ್ರನಿಗೆ ವಿದ್ಯಾಭ್ಯಾಸ ದೊರಕದಿದ್ದರೂ ಅದರಿಂದ ಮಹತ್ತರ ನಷ್ಟವೇನೂ ಆಗಿರಲಾರದು. ಏಕೆಂದರೆ, ಉತ್ತರ ವೈದಿಕ ಕಾಲದ ವಿದ್ಯಾಭ್ಯಾಸ ಕ್ರಮವೇನಿತ್ತೋ ತಿಳಿಯದು. ಶಾಂಖಾಯನ ಗೃಹ್ಯಸೂತ್ರದಂತೆ (II.7.21–25). ಉಪಚಾರರಕ್ಕಷ್ಟೇ ಕ್ಷತ್ರಿಯ, ವೈಶ್ಯರು ವೇದಾಧ್ಯಯನ ಮಾಡುತ್ತಿದ್ದರು. ಬ್ರಾಹ್ಮಣರು ಮಾತ್ರವೇ ವೇದಾಧ್ಯಯನಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದು. ಆದ್ದರಿಂದ ಆ ಕಾಲಕ್ಕೆ ಉಪನಯನವು ವಿದ್ಯೆ, ಅಧ್ಯಯನದ ಅವಕಾಶವೆನ್ನುವುದಕ್ಕಿಂತ ಸಾಮಾಜಿಕ ಮೇಲ್ಮೆ–ಪ್ರತಿಷ್ಠೆಗಳ ಸಂಕೇತವೆನ್ನಬೇಕು. ಆಗ ಎಲ್ಲರೂ ತಮ್ಮ ವೃತ್ತಿಯನ್ನೇನೋ ಕಲಿಯುತ್ತಿದ್ದರು ಮತ್ತು ಕಲಿಕೆ ಸರಳವಾಗಿತ್ತು; ಆಗಿನ್ನೂ ಬರವಣಿಗೆ ಇದ್ದುದ್ದಕ್ಕೂ ಸ್ಪಷ್ಟಪುರಾವೆ ಇಲ್ಲ.

ಶೂದ್ರರು ಇನ್ನೆರಡು ಚಿಕ್ಕಪುಟ್ಟ ವಿಧಿಗಳಲ್ಲಿ ಭಾಗವಹಿಸಬಹುದಿತ್ತು; ಒಂದು ಓದನಾಸವ, ಇನ್ನೊಂದು ಮಹಾವ್ರತ. ಬೇರೆ ವರ್ಣದವರಂತೆ ಅವನೂ ಬೇಯಿಸಿದ ಅನ್ನವನ್ನು ಅರ್ಪಿಸಬಹುದಿತ್ತು; ಆದರೆ ಒಂದೊಂದು ವರ್ಣದವರಿಗೆ ಒಂದೊಂದು

ಅನ್ನವೆಂದು ವಿಂಗಡಣೆ ಮಾಡಲಾಗಿದೆ. (ಸತ್ಯಾಷಾಢ ಶ್ರೌತಸೂತ್ರ XXIII. 4–17). (ಯುಗಯಾತ್ರಿ ಭಾರತೀಯ ಸಂಸ್ಕೃತಿ)

ಮುಂಬಯಲಲ್ಲಿ ಜನಿವಾರವನ್ನು ಹಾಕಲಾಗುತ್ತದೆ. ಜನಿವಾರವು ಜನ್ನ (ಯಜ್ಞ)ದಿಂದ ಉತ್ಪನ್ನಗೊಂಡಿದೆ. ಪ್ರಾಕೃತದ 'ಬಣ್ಣೋವಿಅ' ಸಂಸ್ಕೃತದ ಯಜ್ಞೋಪವೀತವಾಗಿದೆ. ಕನ್ನಡದಲ್ಲಿ ಇದರ ಪ್ರಾಚೀನರೂಪ 'ಜನ್ನವಿರ' (ಮೊದಲನೆಯ ಗುಣವರ್ಮನ ಶೂದ್ರಕ (ಕ್ರಿ. ಶ. 900) ಜನ್ನವಿರ, ಪಂಪಭಾರತ, ಚಾವುಂಡರಾಯ ಪುರಾಣಗಳಲ್ಲಿ ಜನ್ನಿವರವೆಂದು ಬಂದಿದೆ. (ಪಂಪಭಾರತ 2–93. 6–8) ಚಾವುಂಡರಾಯಪುರಾಣ 35, 15) ಉಪನಯನವೆನ್ನುವುದು ಒಂದು ಸಂಸ್ಕಾರವಿಧಿ, ಎಂಟು ವರ್ಷದೊಳಗೆ ಗಂಡುಮಗುವಿಗೆ ಯಜ್ಞೋಪವೀತ ತೊಡಿಸಬೇಕೆಂದು ಹೇಳುತ್ತಾರೆ. ಅನಂತರ ಅವನು ಸಂಧ್ಯಾವಂದನೆ ಮಾಡಲು ಅರ್ಹನಾಗುತ್ತಾನೆ.

ಮನುವು ಈ ರೀತಿ ಹೇಳುತ್ತಾನೆ: ಅಥರ್ವವೇದದಲ್ಲಿ ಉಪನಯನವೆಂಬುದನ್ನು ವಿದ್ಯಾರ್ಥಿಯಾಗಿ ಸ್ವೀಕರಿಸುವುದು ಎಂಬ ಅರ್ಥದಲ್ಲಿ ಬಳಸಲಾಗಿದೆ. ಉಪನಯನವೆಂದರೆ ಜ್ಞಾನ ದೀಕ್ಷೆ, ಬ್ರಾಹ್ಮಣನಿಗೆ ಎಂಟನೆಯ ವರ್ಷದಲ್ಲಿ, ಕ್ಷತ್ರಿಯನಿಗೆ ಹನ್ನೊಂದು ಹಾಗೂ ವೈಶ್ಯನಿಗೆ ಹನ್ನೆರಡು ಕೊನೆಯ ವಯಸ್ಸು ಬ್ರಾಹ್ಮಣನಿಗೆ ಹದಿನಾರು, ಕ್ಷತ್ರಿಯನಿಗೆ ಇಪ್ಪತ್ತೆರಡು ಮತ್ತು ವೈಶ್ಯನಿಗೆ ಇಪ್ಪತ್ತನಾಲ್ಕು. ಈ ವಯಸ್ಸನ್ನು ದಾಟಿಯೂ ಉಪನಯನವಾಗದಿದ್ದರೆ ಪವಿತ್ರವಾದ ಸಾವಿತ್ರಿಯಿಂದ ಜಾರಿ ಅನಾರ್ಯನೆನಿಸುತ್ತಾರೆ. ಬಾಧಾಯನ ಗೃಹ್ಯಸೂತ್ರದಲ್ಲಿ ಈ ರೀತಿ ಬಂದಿದೆ:

ಬ್ರಾಹ್ಮಣನಿಗೆ ವಸಂತ ಋತುವಿನಲ್ಲಿ, ಕ್ಷತ್ರಿಯನಿಗೆ ಗ್ರೀಷ್ಮಋತುವಿನಲ್ಲಿಯೂ, ವೈಶ್ಯನಿಗೆ ಶರದೃತುವಿನಲ್ಲಿಯೂ, ರಥಕಾರನಿಗೆ ವರ್ಷ ಋತುವಿನಲ್ಲಿಯೂ ಉಪನಯನವನ್ನು ಮಾಡಬೇಕು. (ಬೌಧಾಯನ ಗೃಹ್ಯಸೂತ್ರ 2 – 5,6)

ಉಡಿದಾರ ಅಥವಾ ಮೇಖಲಾವನ್ನು ಈ ಮಂತ್ರದೊಂದಿಗೆ ಕಟ್ಟುತ್ತಾರೆ. ಶ್ರದ್ಧೆಯ ಕುಮಾರಿ, ಋಷಿಗಳ ಸೋದರಿ, ಸಂಯಮದ ಆಗರ, ಭೂತ ದಯಾಪರ, ನೀತಿಯ ರಕ್ಷಕ, ತಪೋನಿರತ, ಪಾಪನಾಶಕ ಎಂದು ಹೇಳುತ್ತಾರೆ.

'ಕ್ರಮವಾಗಿ ಮುಂಜಿ–ಮರ್ವಾ–ಶಣ ತೃಣಗಳ ಎಳೆಯಿಂದ ಮಾಡಿದ ಬಳ್ಳಿಯಿಂದ ಮೇಖಲೆಯನ್ನು ತಯಾರಿಸಬೇಕು. ಅದು ಮೂರು ಎಳೆಯಿಂದ ನೆಯ್ದಿರಬೇಕು' ಎಂದು ಮನುವಿನ ಅಭಿಪ್ರಾಯ.

'ಹತ್ತಿ, ಸೆಣಬು, (ಗೋಣಿ) ಕುರಿರೋಮಗಳಿಂದ ಮಾಡಿದ ನೂಲಿನ ಮೂರೆಳೆಯ ಉಪವೀತವನ್ನು ಅನುಕ್ರಮವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಧರಿಸಬೇಕು' ಎಂದು ಮನು ಹೇಳುತ್ತಾನೆ.

ವಿವರಗಳಿಗೆ ನೋಡಿ: ಉಪನಯನ

ಡಾ. ಎಂ. ಚಿದಾನಂದಮೂರ್ತಿ 1998 ಹೊಸತು–ಹೊಸತು ಪುಟ. 387–395

ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 2–27, 2 – 39, 2–42, 2–44

ಯುಗಾಯಾತ್ರಿ ಭಾರತೀಯ ಸಂಸ್ಕೃತಿ 1971 ಸಂಪುಟ. 2 ಪುಟ. 298, 299

ಶಂಬಾ ಜೋಶಿ 1999 ಸಂಪುಟ. 4 ಪುಟ. 141

ಮುಂಡಕೇವಲಿ

ಮುಂಡನವೆಂದರೆ ಪಶಪಡಿಸುವುದು. ಇದು ಹತ್ತು ವಿಧ. ಐದು ವಿಧದ– ಸ್ಪರ್ಶನಮುಂಡ; ವಚನಮುಂಡ; (ಮಾತಾಡದಿರುವುದು) ಹಸ್ತಮುಂಡ (ಕುಚೇಷ್ಟೆಯಿಂದ ಕೈಯಾಡಿಸದಿರುವುದು) ಪಾದಮುಂಡ (ಆಸನದಲ್ಲಿ ಸೇರಿಸದಿರುವುದು) ಮನೋಮುಂಡ (ಕಟ್ಟುದನ್ನು ಯೋಚಿಸದಿರುವುದು ಶರೀರಮುಂಡ (ದೇಹವನ್ನು ಹತೋಟಿಯಲ್ಲಿಡುವುದು) – ಈ ಹತ್ತು ಮುಂಡಗಳನ್ನು ಆಚರಿಸಿದ ಜಿನಮುನಿ.

ಮುಟ್ಟುಗೋಲು

ಗಂಡು ಸಂತಾನವಿಲ್ಲದ ಕುಟುಂಬದ ಆಸ್ತಿಯನ್ನು ಅರಸರು ಮುಟ್ಟುಗೋಲು ಹಾಕುತ್ತಾರೆ. ದಿಕ್ಕಿಲ್ಲದ ಹೆಂಗಸರು ಕೂಲಿ ಮಾಡಿ ಬದುಕುತ್ತಾರೆ. ಕೆಳವರ್ಗದಲ್ಲಿ ಹುಟ್ಟಿದ ಮಗುವು ದುರ್ನಾತ ಕೂಡಿದ್ದರೆ ರಾಜಭಟರು ಓಡಿಸುತ್ತಾರೆ. ಎಂಜಲನ್ನು ತಿಂದು ಬದುಕುವ ವರ್ಗವೂ ಇತ್ತು. ತೀರಾ ಕೆಳವರ್ಗದಲ್ಲಿ ತಂದೆ–ತಾಯಿಯಿಲ್ಲದ ಮಗುವನ್ನು ನಿರ್ನಾಮಿಕೆಯೆಂದಯ ಕರೆಯುತ್ತಿದ್ದರು.

ಮುಡಿ

ಸ್ತ್ರೀಯರ ಮುಡಿಯನ್ನು ಬೇರೆಯವರು ಮುಟ್ಟುವುದು ಅಮಂಗಲಕರವೆಂದು ಭಾವಿಸುತ್ತಾರೆ. ಈ ರೀತಿಯ ನಂಬಿಕೆಗಳೂ ಸಾಮಾಜಿಕ ಧೋರಣೆಯ ಪ್ರತಿಫಲವಾಗಿದೆ. ಮುಡಿಯನ್ನು ಮುಟ್ಟುವುದು ಅಪರಾಧ

ಕೇಶಬಂಧನವನ್ನು ಮುಡಿಯೆಂದು ಕರೆಯುತ್ತಾರೆ. ಗರತಿಯರು ಮುಡಿಯನ್ನು ಕಟ್ಟಿಕೊಳ್ಳಬೇಕೆಂಬ ನಂಬಿಕೆಯಿತ್ತು. ಮದುವೆಗಿಂತ ಮೊದಲು ತಲೆಗೂದಲನ್ನು ಜಡೆಯಾಗಿ ಬಿಡುವುದು ರೂಢಿ.

ವಿವರಗಳಿಗೆ ನೋಡಿ: ಶಿವರುದ್ರಪ್ಪ ಜಿ.ಎಸ್. (ಸಂ) ೧೯೮೨ ವಿಮರ್ಶೆಯ ದಾರಿ ಪುಟ. ೧೩೨

ಡಾ. ಕೆ.ಸಿ. ಶಿವಾರೆಡ್ಡಿ ೨೦೦೩ ಕುವೆಂಪು ಸಮಗ್ರ ಗದ್ಯ ಸಂಪುಟ. ೧

ಮುದ್ರಿತ

ಗುರುತುಮಾಡಲ್ಪಟ್ಟ, ಎಲ್ಲೆಯಾದ ಎನ್ನುವುದಕ್ಕೆ ಮುದ್ರಿತವೆಂದು ಕರೆದಿದ್ದಾನೆ. ಮುದ್ರೆಯುಂಗುರದ ಪರಿಕಲ್ಪನೆಯನ್ನು ನಾವು ಇಲ್ಲಿ ನೆನಪಿಸಿಕೊಳ್ಳಬಹುದು.

• ಮುನಿ

'ಮುನಿ' 'ಸನ್ಯಾಸಿ' 'ಯತಿ' 'ತಪಸ್ವಿ' ಮುಂತಾದ ಪದಗಳನ್ನು ಒಂದೇ ಅರ್ಥದಲ್ಲಿ ಬಳಸುತ್ತೇವೆಯಾದರೂ ಇವುಗಳ ಅರ್ಥ ಬೇರೆಯಾಗುತ್ತವೆ. "ಸಂಸ್ಕೃತ(ಆಯ್) ಭಾಷಾವರ್ಗದ ಭೂಮಿಕೆಯಿಂದ ಈ ವರೆಗೆ 'ಮುನಿ' ಶಬ್ದದ ನೆಲೆ ಗೊತ್ತಾಗದಿರುವುದರ ಕಾರಣವೇನು ಮತ್ತೆ? ಯಾವ ನಡೆವಳಿ – ನುಡಿವಳಿಯು ಋಗ್ವೇದದ ಮೂಲ, ವೈಚಾರಿಕ ಚೌಕಟ್ಟಿನ ಹೊರಗಿನದ್ದೊ, ಆ ದೃಷ್ಟಿಕೋನಕ್ಕೆ ಅರಿಯದ್ದೊ, ಅಂತಹ ಭಾಷೆಯಲ್ಲಿ, ಆ ಕೃತಿಯನ್ನು ಅರ್ಥೈಸುವ ಸಂಜ್ಞೆ–ಸಂಕೇತಗಳು ಅಂದಿನ ಸಂಸ್ಕೃತದಲ್ಲಿ ಇಲ್ಲದಿರುವುದು ವಾಸ್ತವವೇ ಆಗಿದೆ. 'ಮನನಾತ್ ಮುನಿಃ' ಎಂದು 'ಮುನಿ' ಶಬ್ದದ ನಿರ್ವಚನವನ್ನು ಹೇಳಲಾಗುತ್ತದೆ.! 'ಮನನ'ದ ಹಂತದ ಮುನಿ, ಉಪನಿಷತ್ತುಗಳ ಸುಮಾರಿಗೆ ಕಾಣುತ್ತಾನೆ.

ಆದಕಾರಣ, 'ಮುನಿ' ಶಬ್ದವು ಸಂಸ್ಕೃತ ಭಾಷೆಗೆ ಹೊರಗಿನದಾಗಿರಲಿಕ್ಕೇಬೇಕು. ಋಗ್ವೇದಕಾಲೀನ ವೈಚಾರಿಕ ಆ ಕೃತಿಗೆ ಹೊರಗಿನದೆಂದು ಕಂಡುಬರುತ್ತಿರುವ ಹಾಗೂ ಸಂಸ್ಕೃತ ಭಾಷೆಯಿಂದ ಶಬ್ದನಿಷ್ಪತ್ತಿಯನ್ನು ಹೇಳಲು ಅವಶ್ಯವಾಗಿರುವ ಈ 'ಮುನಿ' ಸಂಕೇತವು, ಋಗ್ವೇದ ಕಾಲದಲ್ಲಿ ಅ ಭಾಗದಲ್ಲಿ ಪ್ರಚಲಿತವಿದ್ದಿತೆಂದು ಅರಿಕೆಗೆ ಬರುತ್ತಿರುವ ಕಂದಮಿಳ ಅಥವಾ ಕೋಲುಮುಂಡಾ ಭಾಷೆಗೆ ಸಂಬಂಧಪಟ್ಟಿರಲಿಕ್ಕೇಬೇಕಾಯಿತು. ಜೀನ್ ಪ್ರಿಲಸ್ಕಿ, ಸಿಲ್ವಾನ್ ಲೆವಿ, ಪ್ರಭೃತಿಗಳಲ್ಲಿ, ಕೋಲಮುಂಡಾ ಭಾಷೆಯ ಅಭ್ಯಾಸಿಗಳಲ್ಲಿ ಯಾರು ಒಬ್ಬರೂ 'ಮುನಿ' ಸಂಕೇತವು, ಆ ಭಾಷೆಯದೆಂದು ಅಭಿಪ್ರಾಯಪಟ್ಟುದು ಕಾಣಿಸುವುದಿಲ್ಲ. ಆದಕಾರಣ 'ಮುನಿ' ಎಂಬ ಈ ಪುರಾತನ ಸಂಪ್ರದಾಯವು ಮೂಲತಃ ಕಂದಮಿಳ ಸಂಸ್ಕೃತಿಯ ಆರಂಭಗಾರರಾದ 'ಕಣಿ' ಯರದೇ ಆಗಿರಬೇಕೆಂದು ಅನುಮಾನ ಹೊರಡುತ್ತದೆ. ಮುನಿಯು ವಿರಕ್ತನು; ಸಂಸಾರವನ್ನು ತ್ಯಾಜ್ಯವೆಂದು ಬಗೆದವನು. ಒಂದು ಬಗೆಯಲ್ಲಿ ಸಂಸಾರದ ಮೇಲೆ ಮುನಿದುಕೊಂಡವನು. ವಿರಕ್ತಭಾವವು – ವೈರಾಗ್ಯವು ಸಹಜವಾದುದಲ್ಲ. 'ಸಂಸಾರ ಹೇಯಸ್ಥಲ'ವು, ವೈರಾಗ್ಯಕ್ಕೆ ಪೂರ್ವಭಾವಿಯಾಗಿ ಆವಶ್ಯಕವಾದ – ಅನಿವಾರ್ಯವಾದ ಹಂತವಾಗಿದೆ. 'ಅಭಾವ' ವೈರಾಗ್ಯ, 'ಪ್ರಸೂತಿ' – ವೈರಾಗ್ಯ, 'ಸ್ಮಶಾನ'–ವೈರಾಗ್ಯ ಎಂಬೀ ಮಾತುಗಳು ವೈರಾಗ್ಯದ ಉಗಮಕಾಲದ ಮನೋಭಾವವನ್ನು ನಿದರ್ಶನಕ್ಕೆ ತಂದುಕೊಡುತ್ತವೆ. ಸಂಸಾರವನ್ನು ತೊರೆಯುವ ತೀವ್ರ ಮನೋವೇದನೆಗೆ ನಿರ್ವೇದಕ್ಕೆ ಕಾರಣವಗುವ ಸಂಗತಿಗಳು ಎರಡು ಬಗೆಯವು.

ಮುನಿ ಸಂಪ್ರದಾಯದ ಬಗೆಗಿನ ಈ ವರೆಗಿನ ವಿವರಣೆಯಿಂದ ಸ್ಪಷ್ಟವಾಗುವ ಸಂಗತಿಗಳು :

1. ಇದು ಯಾಜಕ ಸಂಪ್ರದಾಯದ ಭೂಮಿಕೆಯಲ್ಲಿ ಬೆಳೆದ ವಿಚಾರವೃಕ್ಷವಲ್ಲ.
2. ಸೈಂಧವ ಸಂಸ್ಕೃತಿಯಲ್ಲಿ ಇದರ ಕುರುಹುಗಳು ದೊರೆತಿವೆ.
3. ಇದು ಅಖಿಲಭಾರತೀಯ ಸ್ವರೂಪದ ಸಂಪ್ರದಾಯವಿದೆ.
4. 'ಮುನಿಯ ಸ್ವಭಾವ ವೈಲಕ್ಷಣಗಳು: ಬಾಳಿನ ಬಗೆಗೆ ತಿರಸ್ಕಾರ, ಹೇಸಿಕೆ; ಈ ಮನೋವೃತ್ತಿಯನ್ನು ಬಿಂಬಿಸಿಕೊಳ್ಳುವ ಸಾಧನೆಗೆ ಅನುಕೂಲವಾಗಿ ಅವರಲ್ಲಿ ತಲೆದೋರಿದ ತಿರಸಟ್ಟಿತನ; ನಿಸ್ಪೃಹವರತ್ತಿ. 'ತಿರಸಟ್ಟಿ' ಪುರಾತನರ ಈ ಸಂಪ್ರದಾಯವು ಸಂಸಾರದ ಮೇಲಿನ ಸಿಡುಕಿನ ವಿರಕ್ತರದು;
5. ಕಂದಮಿಳ ಭಾಷೆಯ ಮೂಲಕ ಅರಿಕೆಗೆ ಬರುವ 'ಮುನಿ'ಯ ಮೂಲ (ಸ್ವಭಾವ) ಅರ್ಥ್ವ, ಈ ಸಂಪ್ರದಾಯದ ಉಗಮದ ಮೇಲೆಯೂ ಬೆಳಕನ್ನು ಬೀರುತ್ತದೆ.
6. ಇಲ್ಲಿಯ ಪ್ರಭೃತಿ ಸಂಶೋಧಕರ ಅಭಿಪ್ರಾಯದಂತೆ ಯೋಗ – ಸಿದ್ಧರ ವಿರಕ್ತ ಮಾರ್ಗವು ಮೂಲತಃ ಕಂದಮಿಳ ಭಾಷಿಕ ಸಂಪ್ರದಾಯವಾಗಿದೆ.
7. ಆದರೆ, ಸಂಸ್ಕೃತ ಭಾಷಿಕ ಋಷಿಸಂಪ್ರದಾಯದ ಸಂತತಿಯೂ ಯೋಗಮಾರ್ಗದ ಸಿದ್ಧಪರಂಪರೆಯತ್ತ ಆಕರ್ಷಿಸಲ್ಪಟ್ಟುದನ್ನು ಮರೆಯಲಿಕ್ಕಾಗದು.
8. ಆದಕಾರಣ, ಸಂಸ್ಕೃತ ಭಾಷಿಕರ ಪ್ರಭಾವಕ್ಕೆ ಒಳಗಾಗದ ಮೂಲ ಕಂದಮಿಳ ಭಾಷಿಕರ ಸಂಸ್ಕೃತಿಯ ಭಾಗವು ಯಾವುದು, ಎಷ್ಟು ಎಂಬುದನ್ನು ಊಹಿಸಿಕೊಳ್ಳುವಾಗ ಎಚ್ಚರಪಟ್ಟುಕೊಂಡಷ್ಟು ಲೇಸು" ಎಂದು ಶಂಬಾ ಹೇಳುತ್ತಾರೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ ೧೯೯೯ ಸಂಪುಟ. ೩ ಪುಟ. ೨೩೩, ೨೩೪, ೨೩೭, ೨೩೮

ಮೂಗುವಟ್ಟು

ಮೂಗುವಟ್ಟು ಎಂದರೆ ಮೂಗಿಗೆ ಹಾಕುವ ಆಭರಣ. ಮೂಗುತಿಯೆಂದರ್ಥ. ಮೂಗುತಿ –ಸ್ತ್ರೀಯರು ಹಾಕುವ ಆಭರಣಗಳಲ್ಲಿ ಒಂದಾದರೂ ಅದನ್ನು ಗರತಿಯರ

ಲಕ್ಷಣಗಳಲ್ಲಿ ಒಂದು ಎಂದು ಸೇರಿಸಿದ್ದು ಇದೆ. ಕಾಲುಂಗುರ; ತಾಳಿ; ಮೂಗುತಿ; ಕಿವಿಯ ಓಲೆ, ಕೈಬಳೆಗಳನ್ನು ಮುತ್ತು ಪಂಚಕಗಳೆಂದೂ ಕರೆಯುತ್ತಾರೆ. ಅಂದರೆ ಗಂಡನ ಮರಣದ ಅನಂತರ ಸ್ತ್ರೀಯರು ಓಲೆ; ಮೂಗುತಿ; ಕಾಲುಂಗುರ; ತಾಳಿಯನ್ನು ಕಳಚುತ್ತಾರೆ. ಕೈಬಳೆಯನ್ನು ತೊಡುವುದಿಲ್ಲ. ಆದುದರಿಂದ ಇವುಗಳಿಗೆ ಮುತ್ತು ಪಂಚಕರ್ಗಳೆಂದು ಕರೆದಿದ್ದಾರೆ.

ಹೆಂಗಸರ ಮೂಗುತಿ (ನಥ್) ಮತ್ತು ಕಿವಿಯ ಮೇಲಿನ ಚಿಕ್ಕೋಲೆಯು ಮುಸ್ಲಿಮರಿಂದ ಬಂತು. ಮೂಗುತಿಗೆ ಅರಬ್ಬಿಯಲ್ಲಿ 'ನಾಕಿಲ' ಎನ್ನುತ್ತಾರೆ. ಉರ್ದುಭಾಷೆಯಲ್ಲಿ 'ನಕೇಲ' ಎಮದರೆ ಮೂಗುದಾರ ಎಂದರ್ಥ. ಮನುಷ್ಯ ತನ್ನ ಸಾಕು ಪ್ರಾಣಿಗಳ ಮೂಗಿಗೆ ಬಿಗಿದು ಎಳೆದೊಯ್ಯುತ್ತಿದ್ದ ಮೂಗುದಾರವನ್ನು 'ನಕೇಲ' ಶಬ್ದವು ಸೂಚಿಸುತ್ತದೆ. ಒಡೆತನದ ಸಾಕ್ಷಿಗೆ ಪುರುಷನೂ ನಾರಿಗೆ ಮೂಗುತಿ ತೊಡಿಸಲಾಯಿತು. (ಭಗವತ್ ಶರಣ ಉಪಾಧ್ಯಾಯ. ೨೦೦೪. ಪು.೪೫)

ಮೂಗುವಡು

ಮೂಗುವಡು=ಮೌನಿಯಾಗಿರು. ಈಗಲೂ ಬಾಯಿ ಬಾರದವರಿಗೆ ಮೂಗರು ಎಂದು ಕರೆಯುವ ಕ್ರಮವಿದೆ.

ಮೂರ್ಧಾಭಿಷೇಕ

ಮೂರ್ಧಾ ಎಂದರೆ ತಲೆ. ಮೂರ್ಧಾಭಿಷೇಕವೆಂದರೆ ತಲೆಯ ಮೇಲೆ ಅಭಿಷೇಕ ಮಾಡುವುದು ಎಂದರೆ ಅಭಿಷೇಕಗೊಂಡವನು. ತಲೆಯ ಮೇಲೆ ಅಭಿಷೇಕ ಮಾಡುವುದನ್ನು ಮೂರ್ಧಾಭಿಷೇಕವೆಂದು ಕರೆಯುತ್ತಾರೆ.

ಬೆಳ್ಗೊಡೆಯೆಂದರೆ ಬಿಳಿಯ ಕೊಡೆ ಅದು ಚಕ್ರವರ್ತಿಗಳಿಗೆ, ರಾಜರಿಗೆ ಇರುವ ಬಿಳಿಯ ಛತ್ರಿ, ಅದನ್ನು ಶ್ವೇತ ಛತ್ರವೆಂದು ಕರೆಯುತ್ತಾರೆ.

ಮೂರ್ಧಾಭಿಷೇಕವನ್ನು ವಿಶೇಷ ಸಂದರ್ಭದಲ್ಲಿ ಮಾಡುತ್ತಾರೆ ಎಂಬುದು ಗಮನಾರ್ಹ. ಪಟ್ಟಕಟ್ಟುವಾಗ ಮೂರ್ಧಾಭಿಷೇಚನ ಮಾಡುತ್ತಾರೆ. ಮೂರ್ಧಾಭಿಷಿಕ್ತರು ಎಂದರೆ ರಾಜರು, ಪಟ್ಟಾಭಿಷಿಕ್ತರು, ಮಕುಟವರ್ಧನರು ಕಿರೀಟಧಾರಿಗಳು. ಆಳುಗಳಿಗೆ ಕಿರೀಟವಿಲ್ಲ. ಕಿರೀಟವಿರುವುದು ರಾಜರಿಗೆ, ಆದುದರಿಂದ ರಾಜರಿಗೆ ಮೂರ್ಧಾಭಿಷಿಕ್ತರು, ಕಿರೀಟ ಧಾರಿಗಳು ಎಂದೂ ಕರೆಯುತ್ತಾರೆ. 'ಕಿರೀಟ ಹೊತ್ತವನಿಗೆ ಕಿರುಕುಳ ತಪ್ಪಿದ್ದಲ್ಲ'ವೆಂಬುದೊಂದು ಗಾದೆ.

ತಲೆಯ ಮೇಲೆ ಅಭಿಷೇಕ ಮಾಡುವುದನ್ನು ಮೂರ್ಧಾಭಿಷೇಕವೆಂದು ಕರೆಯುತ್ತಾರೆ. ಮೂರ್ಧಾಭಿಷೇಕವನ್ನು ವಿಶೇಷ ಸಂದರ್ಭಗಳಲ್ಲಿ ಮಾಡುತ್ತಾರೆ ಎಂಬುದು ಗಮನಾರ್ಹ. ಗ್ರಾಮೀಣ ಪ್ರದೇಶದಲ್ಲಿ 'ಸ್ನಾನಮಾಡಿಸು', 'ನೀರೆರೆಯುವುದು', 'ಮೈಕೊಳ್ಳುವುದು ಎಂಬ ಪ್ರಯೋಗಗಳೂ ಇವೆ.

ಅಭಿಷೇಕದ ಸಂದರ್ಭದಲ್ಲಿ ಪ್ರಜೆಗಳ ಹಿತವನ್ನು ಕಾಯುವ ಅವರಿಗೆ ರಕ್ಷಣೆಯೊದಗಿಸುವ ಬಗ್ಗೆ ರಾಜನು ಪ್ರತಿಜ್ಞೆ ಕೈಗೊಳ್ಳುತ್ತಿದ್ದ. ಈ ಪ್ರತಿಜ್ಞೆಯನ್ನು ಅವನು ಈಡೇರಿಸದಿದ್ದರೆ ಅವನನ್ನು ಗದ್ದುಗೆಯಿಂದ ಇಳಿಸಬಹುದಾಗಿತ್ತು. ಇದನ್ನು ಪ್ರತಿಜ್ಞಾದುರ್ಬಲನೆಂದು ಕರೆಯಲಾಗುತ್ತಿತ್ತು. (ಭಗವತ್ ಶರಣ ಉಪಾಧ್ಯಾಯ. ೨೦೦೪. ಪು. ೧೫೪)

ಮೂಲಗುಣ

ಆತ್ಮನನ್ನು ಬಂಧಿಸುವ ಎಂಟು ಅಂಶಗಳು; ಜ್ಞಾನಾವರಣೀಯ, ದರ್ಶನಾವರಣೀಯ; ಅಂತರಾಯ, ಮೋಹನೀಯ ಎಂಬ ನಾಲ್ಕು ಘಾತಿಕರ್ಮಗಳು ಮತ್ತು ಆಯುಃ ಕರ್ಮ, ವೇದನೀಯ ಕರ್ಮ ಎಂಬ ನಾಲ್ಕು ಅಘಾತಿಕರ್ಮಗಳು.

ಮೂಲಾನಕ್ಷತ್ರ

ಜ್ಯೋತಿಷ್ಯದ ಪ್ರಕಾರ ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಹೆಣ್ಣನ್ನು ಮದುವೆಯಾದರೆ ಗಂಡಿನ ಅಣ್ಣನಿಗೋ, ಗಂಡಿನ ತಾಯಿಗೋ ಅಪಾಯವಿದೆ. ಅಂತಹವರಿಗೆ ಮದುವೆಯು ವಿಳಂಬವಾಗುತ್ತದೆಯೆಂಬ ನಂಬಿಕೆಯಿದೆ. ಮೂಲ ಎಂದರೆ ಹಿರಿಯರು. ಮೂಲಕ್ಕೆ ಏಟು ಎನ್ನುವುದು ಇಲ್ಲಿಯ ಭಾವನೆ. ಇಲ್ಲಿ ಅಮವಾಸ್ಯೆ ಭರಣಿ ನಕ್ಷತ್ರ: ಅಮವಾಸ್ಯೆ: ಮೂಲಾ ನಕ್ಷತ್ರದ ಕೊನೆಯ ಚರಣವು ಒಳ್ಳೆಯ ಗಳಿಗೆಯಲ್ಲವೆಂದು ಜ್ಯೋತಿಷ್ಯ ಪ್ರತಿಪಾದಿಸುತ್ತದೆ.

ಮೂವಿಟ್ಟಿ

ದಾರಿಯುದ್ದಕ್ಕೂ ರಾಜನು ಧರ್ಮಕಾರ್ಯಗಳ್ನು ಮಾಡುತ್ತಿದ್ದನು. ಸೈನ್ಯದ ಚಲನೆಯು ಸುಗಮವಾಗಿರುವುದಕ್ಕಾಗಿ ದಾರಿಯನ್ನು ಸಿದ್ಧಪಡಿಸಲು ಸೈನ್ಯಕ್ಕಿಂತ ಮುಂಚೆಯೇ ಪಥ ತಂತ್ರಜ್ಞರು ತಮ್ಮ ಸಿಬ್ಬಂದಿಯೊಡನೆ ಹೋಗಿ ಆಯಾ ಗ್ರಾಮದ ಜನಗಳಿಂದ 'ಬಿಟ್ಟಿ' (ಸಂ>ವಿಷ್ಟಿ) ಕೆಲಸವನ್ನು ಮಾಡಿಸುತ್ತಿದ್ದರು. ಬಿಟ್ಟಿಯು ಮೂರು ತೆರನಾದುದು (ಇದೇ ಶಾಸನಗಳಲ್ಲಿ ಬರುವ ಮೂವಿಟ್ಟಿ'). 1) ಶೋಧನ ಕರ್ಮ – ಮಾರ್ಗಮಧ್ಯದ ರಸ್ತೆಯನ್ನು ಸರಿಪಡಿಸುವುದು; ಸೇತುವೆ, ನದಿ, ಬಾವಿ ಇತ್ಯಾದಿಗಳನ್ನು ಪರೀಕ್ಷಿಸುವುದು. 2) ವಹನ ಕರ್ಮ – ಆಯುಧ, ಕವಚ, ಧಾನ್ಯ ಮುಂತಾದುವನ್ನು ಹೊರುವುದು. 3)ಅಪನಯನ ಕರ್ಮ – ಪೆಟ್ಟುತಿಂದು ಕೆಳಕ್ಕೆ ಬಿದ್ದ ಸೈನಿಕರನ್ನು ಅವರ ಆಯುಧಗಳ ಸಮೇತ ಹೊರುವುದು.

ಇವುಗಳಲ್ಲಿ ಮೊದಲನೆಯ ಕರ್ಮವು ಸೇನೆ ಬರುವುದಕ್ಕಿಂತ ಮೊದಲೂ, ಎರಡನೆಯ ಕರ್ಮವು ಸೇನೆಯ ಜೊತೆಯಲ್ಲೂ, ಮೂರನೆಯ ಕರ್ಮವು ಯುದ್ಧರಂಗದಲ್ಲೂ ನಡೆಯಬೇಕಾದುವು. ಸೋತುಹೋದ ರಾಜ್ಯನ ಪ್ರಜೆಗಳಿಂದಲೂ ಬಲವಂತವಾಗಿ ಈ ಕೆಲಸಗಳನ್ನು ಮಾಡಿಸುತ್ತಿದ್ದರು.

ಜನರು ಈ ಕೆಲಸಗಳನ್ನು ಪ್ರತಿಫಲವಿಲ್ಲದೆ ಮಾಡಬೇಕಿದ್ದಿತು. ಬಿಟ್ಟಿಯು ಒಂದು ರೀತಿಯಲ್ಲಿ ಹಂಗಿನ ಕೆಲಸವೂ ಹೌದು. ಅನೇಕ ಅಗ್ರಹಾರಗಳಿಗೆ ಅನೇಕ ತೆರಿಗೆಗಳ ಜೊತೆಯಲ್ಲಿ "ವಿಷ್ಟಿ" ಯನ್ನೂ ತೆಗೆದು ಹಾಕಿರುವುದನ್ನು ನೋಡಿದರೆ. ಬಿಟ್ಟಿ ಎಂದರೆ ಜನರು ಬಹು ಭಯಪಡುತ್ತಿದ್ದರೆಂದು ಕಾಣುತ್ತದೆ. ತಾವು ಮಾಡುವ ಬಿಟ್ಟಿ ಕೆಲಸವು ರಾಜನಿಗೆ ತಿಳಿಯಬೇಕು, ಅವನಿಂದ ಮಾನ್ಯತೆ ಪಡೆಯಬೇಕೆಂಬ ಭಾವನೆ ಹಲವರಿಗೆ ಬಂದಿರಲೂ ಸಾಧ್ಯ. ಈಗಲೂ ಬಿಟ್ಟಿ ಕೆಲಸವೆಂಬ ಮಾತು ಚಾಲ್ತಿಯಲ್ಲಿರುವುದು ಗಮನಾರ್ಹ. ಕೆಲಸಕ್ಕೆ ಯಾವುದೇ ಪ್ರತಿಫಲ ಇಲ್ಲದಿರುವುದಕ್ಕೆ ಬಿಟ್ಟಿ ಕೆಲಸವೆಂದು ಕರೆಯುತ್ತಾರೆ.

ಮೃತ್ಯು

ಮೃತ್ಯುವನ್ನು ಇಲ್ಲಿ ಮಾರಿ ಎಂದು ಕರೆಯುತ್ತಾರೆ. ಗೆಲುವನ್ನು ಬಯಸಿ ಬಂದವರಿಗೆ ಮಾರಿಯು ಎದುರಾದಂತೆ ಎನ್ನುವುದು ಗಾದೆಯ ಮಾತು. ಜೈನ ಕಾವ್ಯಗಳಲ್ಲಿ ಮಾರಿಯನ್ನು ಕ್ರೂರದೇವತೆಯೆಂದು ಕರೆದಿರುವುದು ಗಮನಾರ್ಹ. ಚಂಡಮಾರಿ ದೇವತೆಯೆಂದರೆ ಜೈನಧರ್ಮ ದೇವತೆಯಲ್ಲ. ಆದರೆ, ಮಾರಿಯನ್ನು ಸಾವಿನ ಸಂಕೇತವಾಗಿ ನೋಡಲಾಗಿದೆ.

ಮೌನ

ಮೌನ ಸರ್ವಾರ್ಥ ಸಾಧನವಾಗಿದೆ. ಯಾರು ಮೌನವಾಗಿರುತ್ತಾರೋ ಅವರನ್ನು ಮುನಿಗಳೆಂದು ಕರೆಯುತ್ತಾರೆ. ಜೈನ ಧರ್ಮದಲ್ಲಿ ಮೌನವು ಒಂದು ವ್ರತವಾಗಿದೆಯೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಮೌನವ್ರತವು ಸಾಮಾಜಿಕ ಪ್ರತಿಭಟನೆಯ ಸಂಕೇತವಾಗಿದೆ.

ಮೋಕ್ಷ ಸಾಧನೆಗಾಗಿ ವೇದಗಳು ವಿಧಿಸಿರುವ ಯಜ್ಞಯಾಗಾದಿಗಳ ಆಚರಣೆಯು ಅಗತ್ಯ ಎಂದು ಮೀಮಾಂಸಕರು ಪ್ರತಿಪಾದಿಸಿದರು. ಇದಕ್ಕೆ ಪುರೋಹಿತರು ಅಗತ್ಯವಿದ್ದರು. ಇದು ವರ್ಣಗಳ ನಡುವಣ ಸಾಮಾಜಿಕ ಅಂತರವನ್ನು ಸ್ಥಿರಗೊಳಿಸಿತು, ಅದಕ್ಕೆ ಮಾನ್ಯತೆ ನೀಡಿತು. ಮೀಮಾಂಸವನ್ನು ಪ್ರಚಾರ ಮಾಡುವ ಮೂಲಕ ಬ್ರಾಹ್ಮಣರು ತಮ್ಮ ಸಾಂಸ್ಕಾರಿಕ ಅಧಿಕಾರವನ್ನು ಬಲಪಡಿಸಿಕೊಂಡು ಬ್ರಾಹ್ಮಣೀಯ ಸಿದ್ಧಾಂತಗಳ ಮೇಲೆ ನಿಂತಿದ್ದ ಸಾಮಾಜಿಕ ಅಂತಸ್ತುಗಳ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರಲು ಪ್ರಯತ್ನಿಸಿದರು. (ಆರ್. ಎಸ್. ಶರ್ಮ ೧೯೯೭ ಪು. ೨೪೯)

ಯಂತ್ರದ ಕಲ್ಲುಗಳು

ಮೇಲು ನೋಟಕ್ಕೆ ಈ ಪದವು ಆಧುನಿಕ ಪರಿಭಾಷೆಯಂತೆ ಕಾಣುತ್ತದೆ ಆದರೆ ಇದು ನಮ್ಮ ಸಂಸ್ಕೃತಿಯಲ್ಲಿ ಬೇರ ಪರಿಕಲ್ಪನೆಯನ್ನು ಮಂಡಿಸುತ್ತದೆ. ಇದು ನಂಬಿಕೆಗೆ ಸಂಬಂಧ ಪಟ್ಟಿರುವುದು.

"ಸಾಮಾನ್ಯವಾಗಿ ಹಳ್ಳಿಗಳ ಮುಂದೆ ಈ ಬಗೆಯ ಶಾಸನಗಳನ್ನು ಗಮನಿಸಬಹುದು. ಪೀಡಾ ಪರಿಹಾರಕ್ಕಾಗಿ ಯಂತ್ರವನ್ನು ಬರೆದು ನಿಲ್ಲಿಸಿರುತ್ತಾರೆ. ಇವುಗಳನ್ನು ಹಳ್ಳಿಯ ಜನ ಇಂದಿಗೂ ಪೂಜಿಸುವುದನ್ನು ಗಮನಿಸಬಹುದಾಗಿದೆ. ಈ ರೀತಿ ಪೂಜಿಸುವುದರಿಂದ ತಮ್ಮ ದನಕರುಗಳಿಗೆ ಅಥವಾ ತಮಗೆ ಒದಗಿರುವ ಪೀಡೆಯು ಪರಿಹಾರವಾಗುತ್ತದೆಂದು ಅವರ ನಂಬಿಕೆ ಈ ಬಗೆಯ ಆರಾಧನೆಗೆ ಒಳಗೊಂಡವುವೆಲ್ಲಾ ಯಂತ್ರಗಳೆಂದು ಹೇಳಬರುವುದಿಲ್ಲ. ಕೆಲವೊಮ್ಮೆ ವಿಗ್ರಹಗಳೂ, ಇತರೆ ಶಾಸನಗಳೂ ಆರಾಧನೆಗೆ ಪಾತ್ರವಾಗಿರಬಹುದು. ಇವು ಕಾಲಕ್ರಮೇಣ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡು ಜನರ ದೃಷ್ಟಿಯಲ್ಲಿ ಮತ್ತೊಂದು ರೀತಿಯಿಂದ ಪರಿಗಣಿಸಲ್ಪಡುತ್ತವೆ. 'ಗುಲ್ಬರ್ಗ ಜಿಲ್ಲೆಯ ಬಂಕೂರಿನ ವರ್ಧಮಾನ ತೀರ್ಥಂಕರನ ವಿಗ್ರಹವು ಈಗ ಬತ್ತಲೆ ಗೌರಮ್ಮ ಆಗಿದೆ. ಮಕ್ಕಳಾಗದ ಹೆಂಗಸರು ಅದನ್ನು ಪೂಜಿಸುತ್ತಾರೆ. ಹಿಂದೆ ಮಹಾವೀರ ತೀರ್ಥಂಕರನ ಪೀಠ ಹೊತ್ತಿದ್ದ ಸಿಂಹಗಳ ಶಿಲ್ಪವಿರುವ ಪೀಠವು ಈಗ ಅಣಕಿಸುವ ಕಲ್ಲು ಆಗಿದೆ. ಬಾಯಿಹುಣ್ಣಾಗಿರುವ ಹುಡುಗರು ಹೋಗಿ ಅದರ ಮುಂದೆ ನಿಂತು ಅಣಕಿಸಿದರೆ ಹುಣ್ಣು ವಾಸಿಯಾಗುತ್ತದೆ. ಮತ್ತೊಂದು ಜೈನ ವಿಗ್ರಹಗಳಿರುವ ಕಲ್ಲಿದೆ. ನರ ಉಳುಕಿದರೆ ಹೋಗಿ ಅದಕ್ಕೆ ತಿಕ್ಕಿದರೆ ಸಾಕು ಉಳುಕು ವಾಸಿಯಾಗುತ್ತದೆ ಇತ್ಯಾದಿ". ಎಂಬುದಾಗಿ ಡಾ॥ ಚಿದಾನಂದಮೂರ್ತಿಯವರು ತಿಳಿಸುತ್ತಾರೆ. ಯಂತ್ರದ ಕಲ್ಲುಗಳು ಮೇಲೆ ಉಲ್ಲೇಖಿಸಿರುವಂತೆ ತಂತ್ರದ, ಪೂಜೆಯ, ಅಂಶಗಳನ್ನು ಸೂಚಿಸುತ್ತವೆಯೆಂದು ಅವರು ಹೇಳುತ್ತಾರೆ. ಕಲ್ಲಿಗಳ ಕುರಿತಂತೆ ಇರುವ ಈ ರೀತಿಯ ನಂಬಿಕೆಗಳು ಸಂಸ್ಕೃತಿಯ ಅಧ್ಯಾಯನದ ದೃಷ್ಟಿಯಿಂದ ಮುಖ್ಯವಾಗಿದೆ.

ವಿವರಗಳಿಗೆ ನೋಡಿ: ಆರ್. ಶೇಷಶಾಸ್ತ್ರಿ 2005 ಶಾಸನ ಪರಿಚಯ ಪುಟ. 43

ಯಕ್ಷಿ

'ಯಕ್ಷಿ' ಎನ್ನುವುದಕ್ಕೆ ತೀರ್ಥಂಕರರ ತಪೋ ರಕ್ಷಣೆ ಮಾಡುತ್ತ ಸೇವೆ ಸಲ್ಲಿಸುವ ಭಕ್ತೆ ಶಾಸನ ದೇವತೆ. ಈಕೆಯ ಪತಿ 'ಯಕ್ಷ' ಎಂದು ಜೈನ ಪರಿಭಾಷಾ ರತ್ನಕೋಶದಲ್ಲಿ ಅರ್ಥಕೊಟ್ಟಿದ್ದಾರೆ. (ತ.ಸು.ಶಾಮರಾಯ ಮತ್ತು ಹಂ.ಪ.ನಾ. 1981 ಪುಟ.212) ಇಪ್ಪತ್ತನಾಲ್ಕು ಜನ ತೀರ್ಥಂಕರರಿಗೆ ಇಪ್ಪತ್ತನಾಲ್ಕು ಯಕ್ಷರಿರುತ್ತಾರೆ. ಈ ಇಪ್ಪತ್ತನಾಲ್ಕು ಯಕ್ಷರಿಗೆ ಇಪ್ಪತ್ತನಾಲ್ಕು ಯಕ್ಷಿಣಿಯರಿರುತ್ತಾರೆ. ಇವರಿಗೆ ಬೇರೆ ಬೇರೆ ಲಾಂಛನವಿರುತ್ತದೆ. (ಪುಟ್ಟಸ್ವಾಮಿ ಡಿ. 1965 ಪುಟ.53) ಮ.ಪ್ರ.ಪೂಜಾರ 1976 ಪುಟ.135) ಯಕ್ಷರು ದೇವಲೋಕದಲ್ಲಿ ಇರುತ್ತಾರೆ ಎಂಬ ನಂಬಿಕೆಯಿದೆ.

ಯಕ್ಷಿಣಿಯರ ಆರಾಧನೆ

ಮೌರ್ಯರ ಕಾಲದಲ್ಲಿ ಯಕ್ಷಿಣಿಯರ ಆರಾಧನೆಯು ಪ್ರಚಲಿತವಾಯಿತು. ಈ ಸಂದರ್ಭ ದಕ್ಷಿಣ ಭಾರತದಲ್ಲಿ ಹಣ್ಣಿನ ಫಲವತ್ತತೆಯನ್ನು ಕುರಿತ ಯಕ್ಷಿಣಿಯರ

ಆರಾಧನೆಯು ಹೆಚ್ಚಿತು. ಸುಮಾರು ಇದೇ ಕಾಲಕ್ಕೆ ಲಕ್ಷ್ಮೀ ಪೂಜೆ, ಶಕ್ತಿಪೂಜೆಯು ಬಳಕೆಯಲ್ಲಿ ಬಂದಿತು. ಸುಂಗ ಕುಶಾಣರ ಕಾಲದಲ್ಲಿ ಗಜಲಕ್ಷ್ಮಿಯ ಆರಾಧನೆಯು ರೂಪುಗೊಂಡಿತು. ಇವರ ಕಾಲದಲ್ಲಿ ಉಮೆ ಶ್ರೀ ಲಕ್ಷ್ಮಿ, ಸರಸ್ವತಿಯರು ಮುಖ್ಯ ದೇವತೆಯರಾಗಿದ್ದರು. ಗುಪ್ತರ ಕಾಲದಲ್ಲಿ ಮಾತೃ ದೇವತೆಯರ ಪೂಜೆಯೂ ಹೆಚ್ಚಿದ್ದು ಸಪ್ತ ಮಾತೃಕೆಯರ ಆರಾಧನೆಯು ಹೆಚ್ಚಿತು. ಶಕ್ತಿಯ ಕುರಿತ ನಂಬಿಕೆಯು ಈ ಕಾಲದಲ್ಲಿ ಹೆಚ್ಚಾಗತೊಡಗಿದ್ದು ಹರ-ಗೌರಿಯರ ಕಲ್ಪನೆಯು ಬಂದಿತು. ಗುಪ್ತರ ಕಾಲಕ್ಕೆ (ಕ್ರಿ.ಶ. 4 ನೆಯ ಶತಮಾನ) ದುರ್ಗೆಯ ಪೂಜೆಯು ಭಾರತೀಯ ಪರಂಪರೆಯಲ್ಲಿ ಸ್ಪಷ್ಟವಾಗಿ ಒಡಮೂಡಿರುವುದನ್ನು ಕಾಣಬಹುದಾಗಿದೆ. ಮಾತೃ ದೇವತೆಯ ಪೂಜೆಯು ಈ ವೇಳೆಯ ತಾಂತ್ರಿಕರಲ್ಲಿ ವಿಶಿಷ್ಟವಾದ ರೂಪವನ್ನು ತಳೆಯಿತು. ಕಾಳಿ, ಕಾಮಾಕ್ಷಿ, ಮಹಾದುರ್ಗೆ, ಮತಂಗಿ, ಭುವನೇಶ್ವರಿ, ಭೈರವಿ, ಧೂಮಾವತಿ, ಏಕಜಾತ, ತಾರಾ ಭಗವತಿ ಮುಂತಾದ ಹೆಸರುಗಳನ್ನು ತಾಂತ್ರಿಕರು ತಂದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಧಮಾವತಿ; ಕಲ್ಲುರ್ಟಿ; ಮುಂತಾದ ಭೂತಗಳು ಸ್ತ್ರೀ ಸಂಬಂಧಿತವಾದವು. ಇವರನ್ನು 'ತಾಯಿ' (ಅಪ್ಪೆ) ಎಂದೇ ಗುರುತಿಸುತ್ತಾರೆ.

ವಿವರಗಳಿಗೆ ನೋಡಿ: O.P.Mishra 1985 P.23-27

ಯಜಮಾನ

ಯಾರು ಯಜ್ಞಮಾಡುತ್ತಾರೋ ಅವರನ್ನು ಯಜಮಾನನೆಂದು ಕರೆಯುತ್ತಾರೆ. ಮಂತ್ರೋಚ್ಚಾರಕ್ಕೆ ಬಹಳ ಮಹತ್ವ ದೊರೆತಿತ್ತು. ಯಜಮಾನನ ಯಶಸ್ಸು ಯಜ್ಞಕಾಲದಲ್ಲಿ ಕರಾರುವಾಕ್ಕಾದ ಮಂತ್ರೋಚ್ಚಾರದ ಮಾಯಾ ಬಲವನ್ನೇ ಆಧಾರಗೊಂಡಿದೆಯೆಂದು ನಂಬಲಾಗಿತ್ತು. ವೈದಿಕ ಆರ್ಯರ ಕೆಲವು ಸಂಸ್ಕಾರ ಕ್ರಿಯೆಗಳು ಇಂಡೋ - ಯೂರೋಪಿಯನ್ ಜನರಿಗೆಲ್ಲ ಸಮಾನವಾದುದಾದರೂ ಕೆಲವು ಭಾರತದಲ್ಲೇ ರೂಪು ತಳೆದಂತಹವು. ಅದು 'ಯಜಮಾನ' ಮತ್ತು ಅವನ ಆಳುವ ವರ್ಗಗಳ ನಡುವಣ ಸಂಬಂಧ. ಇದು ಕೇವಲ ಸಂಘರ್ಷವಾಗಿರಬೇಕೆಂದೇನೂ ಇಲ್ಲ. ಅವುಗಳ ನಡುವೆ ಬೇರೆ ಬೇರೆ ರೀತಿಯ ಸಂವಾದಗಳಿರುತ್ತವೆ. ಪ್ರಭುತ್ವ ಮತ್ತು ಅದು ಆಳುವ ಸಾಮಾನ್ಯ ವರ್ಗಗಳ ನಡುವೆ ಇರುವ ಸಂವಾದಗಳು ಹೀಗಿರುತ್ತವೆ. ಪ್ರಭುತ್ವವನ್ನು ಅನುಕರಿಸುವ ವರ್ಗ, ಇದನ್ನು ವಿಶಾಲವಾದ ಅರ್ಥದಲ್ಲಿ ಎಂ.ಎನ್.ಶ್ರೀನಿವಾಸರು 'ಸಂಸ್ಕೃತೀಕರಣ' ಮತ್ತು 'ಪಾಶ್ಚಾತ್ಯೀಕರಣ' ಎಂದು ಗುರುತಿಸಿದರು. ಆಳುವ ವರ್ಗವನ್ನು (ಪ್ರಭುತ್ವವನ್ನು) ಅನುಕರಿಸುವ ವರ್ಗ, ಇದನ್ನು ಹೋ.ಮಿ.ಕೆ. ಬಾಬಾ ಅವರು ಅನುಕರಣಾತ್ಮಕ ನೆಲೆ ಎಂದು ಕರೆಯುತ್ತಾರೆ.

ಪ್ರತಿರೋಧಾತ್ಮಕ: ಇದು ಪ್ರಭುತ್ವವನ್ನು ಪ್ರತಿರೋಧಿಸುವ ಮೂಲಕ ತನ್ನ ಅನನ್ಯತೆಯನ್ನು ಉಳಿಸಿಕೊಳ್ಳುತ್ತದೆ ಅಥವಾ ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತವೆ.

ಒಂದು ರೀತಿಯಲ್ಲಿ ಇಲ್ಲಿ ನಡೆಯುವ ಪ್ರತಿರೋಧವು ಸಶಸ್ತ್ರ ಅಥವಾ ನಿಶಸ್ತ್ರದ ಮೂಲಕವೇ ತನ್ನ ಸಾಂಸ್ಕೃತಿಕ, ರಾಜಕೀಯ ಪ್ರತಿರೋಧವನ್ನು ಒಡ್ಡುತ್ತವೆ. ಇಡಿಯ ಪ್ರಭುತ್ವವನ್ನು ನಿರಾಕರಿಸುವುದರ ಮೂಲಕ ಯಜಮಾನಿಕೆಗೆ ಒಂದು ನಿರ್ಲಕ್ಷ್ಯ ತೋರಿಸುವುದು ಮತ್ತೊಂದು ಪ್ರಕ್ರಿಯೆ. ಈ ಸಂದರ್ಭದಲ್ಲಿ ಪ್ರಭುತ್ವದ ಯಾವುದೇ ನಡೆ–ನುಡಿಯನ್ನು ಪ್ರತಿಯಾಗಿ ಕಟ್ಟಿಕೊಂಡು ಆಳಿಸಿಕೊಳ್ಳುವ ವರ್ಗ ಇರುತ್ತದೆ ಎಂದು ಹೇಳಲಾಗುವುದಿಲ್ಲ. ಪರ್ಯಾಯ ಮಾರ್ಗೋಪಾಯವನ್ನು ರೈಲ್ವೇ ಹಳಿಯ ರೀತಿಯಲ್ಲಿ ಕಟ್ಟುವುದಿಲ್ಲ ಎಂಬುದನ್ನು ಅರಿಯಬೇಕು. ಆಳ್ವಿಕೆಯಿಲ್ಲದಿದ್ದರೆ ಆಳಿಸುವ ವರ್ಗ ಹೊಸ ಪರಿಭಾಷೆಯನ್ನು ಕಟ್ಟಿಕೊಳ್ಳುವುದಿಲ್ಲ

ಪ್ರಭುತ್ವವು ಮತ್ತೊಂದು ಕೆಲಸವನ್ನು ಮಾಡುತ್ತದೆ. ಆಳಿಸಿಕೊಳ್ಳುವ ವರ್ಗವನ್ನು ತನಗೆ ಬೇಕಾದ ರೀತಿಯಲ್ಲಿ ನಿರ್ವಚಿಸುವುದು ಮತ್ತು ಆಳಿಸಿಕೊಳ್ಳುವ ವರ್ಗದ ಮನಸ್ಸು ಮತ್ತು ದೇಹ ತನ್ನ ವ್ಯಾಖ್ಯಾನಕ್ಕೆ ಅನುಸಾರವಾಗಿ ನಿರೂಪಿಸುವುದು. ಒಬ್ಬ ವ್ಯಕ್ತಿ ಹೆಚ್ಚು ಹೆಚ್ಚು ಯಜಮಾನಿಕೆಯನ್ನು ತೋರಿಸಿಕೊಂಡಂತೆ, ಆಳಿಸಿಕೊಳ್ಳುವ ವರ್ಗದ ಬುದ್ಧಿಶಕ್ತಿಯು ಬೇರೆ ಬೇರೆ ರೂಪಾಂತರವನ್ನು ಕಂಡುಕೊಳ್ಳಬಹುದು. ಪ್ರಭುತ್ವವು ಈ ಕಾರಣಕ್ಕಾಗಿ ಒಂದು ಹೊಸ ಚರಿತ್ರೆಯನ್ನು ಕಟ್ಟಬಹುದು. ಮತ್ತು ವ್ಯಕ್ತಿಗೆ 'ಪ್ರಜ್ಞೆ'ಯ ಮೇಲೆ ಕಟುವಾದ ನಿಯಂತ್ರಣ ಹೇರಬಹುದು. ಈ ಕೆಲಸವು ಪ್ರಜ್ಞೆಯ ಮೇತೆ ತರುವ ಒತ್ತಡವೂ ಆಗಿರುತ್ತದೆ. ಪ್ರಭುತ್ವ ಪ್ರಜ್ಞೆಯ ಮೇಲೆ ಹಿಡಿತ ಸಾಧಿಸಿಕೊಂಡರೆ ಮತ್ತೆ ಆ ಪ್ರಜ್ಞೆಯಿಂದ ಹೊರಗಡೆ ಬರುವಂತಿಲ್ಲ. ಮಾನಸಿಕವಾಗಿ ಪ್ರಜ್ಞೆಯ ನಿಯಂತ್ರಣ ಮಾಡಿದಾಗ ವ್ಯಕ್ತಿ – ಸಮಾಜ ಒಂದು ಸಮತಲದ ರಚನಾ ಕ್ರಮದಲ್ಲಿ ರೂಪುಗೊಳ್ಳುತ್ತದೆ. ಹೀಗೆ 'ಅಧಿಕಾರದ ವ್ಯಾಪ್ತಿ'ಯು ಬೇರೆ ಬೇರೆ ಮಾದರಿಗಳಲ್ಲಿ ಇರುತ್ತವೆ. ಆದರೆ ನಾವೀಗ 'ಅಧಿಕಾರ' ಎನ್ನುವುದನ್ನು 'ನೇಶನ್' ಎಂಬ ಅರ್ಥದಲ್ಲಿ ಬಳಸುತ್ತಿದ್ದೇವೆ. ಅಧಿಕಾರ ಸಾಮಾಜಿಕ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಒಂದು ಸಂಸ್ಥೆಯಿದ್ದರೆ ಅದು ಆಳುತ್ತದೆ ಮತ್ತು ಗುಂಪಿನ ಪರವಾಗಿ ಅಧಿಕೃತ ವಕ್ತಾರರಂತೆ ವಹಿಸುತ್ತದೆ. ಯಜಮಾನ್ಯವೆನ್ನುವುದು ಸಾಮಾಜಿಕ ವ್ಯವಸ್ಥೆಯಲ್ಲಿ ಮುಖ್ಯ ಪಾತ್ರ ವಹಿಸುವಂತೆಯೇ ಅದರ ಜೊತೆಯಲ್ಲಿ ಅದು ತನ್ನದೇ ನಿಯಮ ಹೊಂದಿರುತ್ತದೆ. ಅಧಿಕಾರವನ್ನು ಯಾರು ಹಿಡಿಯುತ್ತಾರೋ ಅವರ ಚಟುವಟಿಕೆಯು ಒಂದು ವ್ಯವಸ್ಥೆಯನ್ನು ಸಿದ್ಧಪಡಿಸಿಕೊಳ್ಳಲು ಉಳಿದವರನ್ನು "ಅಧೀನ" ಎಂಬಂತೆ ನೋಡಿಕೊಳ್ಳುತ್ತಾರೆ. ಅಧಿಕಾರ ಹೊಂದಿದವರಿಗೆ ಕೆಲವು ವಿಶಿಷ್ಟ ಅಂಶಗಳ ಹಕ್ಕುಗಳು ಕೂಡಾ ಇರುತ್ತವೆ. ಅದಕ್ಕೆ ಸಂಬಂಧಿಸಿದಂತೆ ನಿಯಮಗಳು ರೂಪಿಸಲ್ಪಡುತ್ತವೆ. ಆಳುವ ವರ್ಗದ ಲಕ್ಷಣಗಳು ಆಯಾ ಸಮಾಜ ಮತ್ತು ಸಂಸ್ಕೃತಿಗೆ ಅನುಸಾರವಾಗಿ ಬೇರೆಯಾಗಬಹುದು. ಎಷ್ಟೋ ಸಂದರ್ಭಗಳಲ್ಲಿ 'ಅಧಿಕಾರ' ಪಡೆದುಕೊಳ್ಳುವ ರೀತಿ ರಿವಾಜುಗಳು ಬೇರೆಯಾಗುತ್ತವೆ. ಅದೇ ರೀತಿಯಲ್ಲಿ ಜನಾಂಗದಿಂದ ಜನಾಂಗಕ್ಕೆ

ಬೇರೆಯಾಗುತ್ತವೆ. ಆಳುವ ವರ್ಗ ಆಯಾ ಸಂದರ್ಭ ಮತ್ತು ಪ್ರದೇಶಗಳಲ್ಲಿ ತಮಗೆ ಬೇಕಾದ ರೀತಿಯಲ್ಲಿ ನಿಯಮ ರೂಪಿಸುತ್ತಾರೆ ಮತ್ತು ಅದಕ್ಕೆ ಬೇಕಾದ ಸ್ಥಾನ ನಿರ್ಣಯಗಳಾಗುತ್ತವೆ. ಉದಾ: ಬೇರೆ ಬೇರೆ ಜಾತಿಯಲ್ಲಿರುವ ಗುರಿಕಾರರು, ಪುರೋಹಿತರು ಇತ್ಯಾದಿ.

ವಿವರಗಳಿಗೆ ನೋಡಿ: ಆರ್. ಎಸ್. ಶರ್ಮ ೨೦೦೭ ಪ್ರಾಚೀನ ಭಾರತ ಪುಟ. ೮೭

Ranajit guha Dominance without Hegemony

Sudipta Kaviraj 1997 (Ed) Politics in India

ಯಜ್ಞ

ಗೃಹಸ್ಥನು ಮಾಡಬೇಕಾದ ಪಂಚಯಜ್ಞಗಳು ಈ ಕೆಳಗಿನಂತಿವೆ. ಋಷಿಯಜ್ಞ, ದೇವಯಜ್ಞ, ಭೂತಯಜ್ಞ, ನೃಯಜ್ಞ ಹಾಗು ಪಿತೃಯಜ್ಞ. (ವೇದವ್ರತ ವೈಶಂಪಾಯನ. ೧೯೮೪. ಯಜುರ್ವೇದ ಪು. ೬೧)

ದೇವ ಯಜ್ಞವೆಂದರೆ ದೇವತೆಗಳಿಗೆ ಅಗ್ನಿಯ ಮೂಲಕ ಆಹುತಿಯನ್ನು ಅರ್ಪಿಸುವುದು. ಪಶು–ಪಕ್ಷಿ–ಮಾನವರಿಗೆ ಆಹಾರ ನೀಡುವುದು ಭೂತಯಜ್ಞ, ಅತಿಥಿಗಳನ್ನು ಬರಮಾಡಿಕೊಂಡು ಸತ್ಕರಿಸುವುದು ನೃಯಜ್ಞ,

(ಮನುಸ್ಮೃತಿ 3: 6–8–81: 3: 122 – 285)

ಶಂಬಾ ಅವರು ಹೇಳುವಂತೆ ಕ್ರತುವೆಂದರೆ ಅದು ಧೀ ಶಕ್ತಿ. ಅದಕ್ಕೆ ಸಂಕಲ್ಪ ಶಕ್ತಿಯು ಬೇಕು. ಬೇಳುವೆಯೆಂದರೆ ಕ್ರತು. (ಪುಟ.230)

ಯಜ್ಞೋಪವೀತ

ದ್ವಿಜನಾದವನ ಜೀವನ ಸದಾಕಾಲವೂ ಸಾಮಾಜಿಕ ಮತ್ತು ಧಾರ್ಮಿಕ ಹೊಣೆಗಾರಿಕೆಯನ್ನು ನಿರ್ವಹಿಸಲು ಮುಡಿಪಿಟ್ಟದೆಂದು ಅವನು ಧರಿಸುವ ಯಜ್ಞೋಪವೀತವು ಸೂಚಿಸುತ್ತದೆ. ಅವನಿಗೆ ನಿಯಮ ಬದ್ಧ ಜೀವನ ನಡೆಸಲು ಅನುವಾಗುವಂತೆ ಜಿಂಕೆಯ ಚರ್ಮ (ಅಜನ/ಮತ್ತು ಯೋಗ ದಂಡವನ್ನು ಕೊಡಲಾಗುತ್ತದೆ.)

(ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.2 1971 ಪುಟ. 299) ವಿವರಗಳಿಗೆ ನೋಡಿ : ಮುಂಜಿ ಉಪನಯನ

ಯತಿ

ಯತಿಗಳೆಂದರೆ ಒಂದೆಡೆ ನಿಲ್ಲುವವರಲ್ಲ. ಸಂಚರಿಸುವ ಋಷಿಗಳು. ಯತಿಗಳು ಪರಿಕರಗಳು – ಬ್ರಹ್ಮಸೂತ್ರ, ತ್ರಿದಂಡ, ಚರ್ಮವಸ್ತು, ಶಿಕ್ಯ, ಬ್ರುಸಿ, ಕೌಪೀನ,

ಕಟಿವೇಷ್ಟನ. ಯತಿಗಳು ಸಂಚರಿಸುವಾಗ ಎಲ್ಲಿ 'ನೇಸರ್ಪಟ್ಟಿತ್ತಲ್ಲಿಯೆ' ನಿಲ್ಲುತ್ತಿದ್ದರು ಮತ್ತು ಮಳೆಗಾಲದ ನಾಲ್ಕು ತಿಂಗಳು ಸಂಚಾರ ಮಾಡದೇ ಇರುತ್ತಿದ್ದರು. ಇದನ್ನು ಚಾತುರ್ಮಾಸವೆಂದು ಕರೆಯುತ್ತಾರೆ. "ಅವರ ಉಗ್ರತಪಸ್ಸಿನ ಫಲವಾಗಿ ಅಮೋಷಧಿ. ಖೇಳೋಷಧಿ, ಜವೋಷಧಿ, ವಿಪ್ರೋಷಧಿ, ಸವೋಷಧಿ ಮುಂತಾದ ಸಾಮರ್ಥ್ಯಗಳು ಅವರಿಗೆ ಉಂಟಾಗುತ್ತಿದ್ದರೂ ಅವುಗಳನ್ನು ತಮ್ಮ ಮೇಲೆ ಪ್ರಯೋಗಿಸಿಕೊಳ್ಳದೇ ವ್ಯಾಧಿಗಳನ್ನು ಪರಿಹರಿಸಿಕೊಳ್ಳದೆ ಘೋರವೀರ ತಪಶ್ಚರ್ಯವನ್ನು ಆಚರಿಸುತ್ತಿದ್ದರು. ಈ ತಪಸ್ಸನ್ನು ಬಸದಿ ಗುಹೆ, ಬಹಿರುದ್ಯಾನವನ, ಬೆಟ್ಟದ ಒಂದು ಬಂಡೆ, ತೊರೆಯ ತಡೆ, ಪೊಲ. ಇತ್ಯಾದಿ ಸ್ಥಳಗಳಲ್ಲಿ ರಾತ್ರಿ ಪ್ರತಿಮೆ, ಸೂರ್ಯ ಪ್ರತಿಮೆ, ಕಾಯೋತ್ಸರ್ಗ ಭಂಗಿಯಲ್ಲಿ ನಿಂತು, ತಪವೆಸಗಿ ಸಾಧನೆ ಮಾಡುತ್ತಿದ್ದರು.

"ಶಮವೆನ್ನುವುದು ಯತಿಗಳ ಧರ್ಮ. ಅದು ರಾಜಧರ್ಮವಲ್ಲ. ದ್ರೌಪದಿಯ ಅಭಿಪ್ರಾಯದಲ್ಲಿ ಶಾಂತಿಯೆನ್ನುವುದು ಸನ್ಯಾಸಿಗಳಿಗೆ. ರಾಜನಾದವನ ಕೆಲಸವು ಬೇರೆ. ಕ್ಷತ್ರಿಯನದು ರಜೋಗುಣ. ಯುದ್ಧ ಕ್ಷಾತ್ರಧರ್ಮವೆಂದು ಅವಳ ಅಭಿಪ್ರಾಯ. ಅವಳ ಮಾತಿಗೆ ಭೀಮನ ಪ್ರತಿಕ್ರಿಯೆಯು ಗಮನಾರ್ಹ. ಯತಿಗಳು ಧಾರಣಮಾಡುವ 'ದಂಡ'ಕ್ಕೆ ಅವರವರ ಪಂಥಕ್ಕನುಸರಿಸಿ ಇಂತಿಷ್ಟ ಕಣ್ಣು (>ಗಣ್ಣು) ಇರಬೇಕೆಂಬ ಬೇರೆ ಬೇರೆ ರೂಢಿಗಳಿವೆ. ಸುಭದ್ರಾಹರಣಕ್ಕಾಗಿ ಬಂದ ನರನು ತ್ರಿದಂಡೀ ಅವರ ಪ್ರಕಾರ ಸಂನ್ಯಾಸಿಯಾಗಿದ್ದನಂತೆ ಎಂದು ಶಂಬಾ ಹೇಳುತ್ತಾರೆ. ಅವರ ಪ್ರಕಾರ ಯತಿಗಳೂ ಚಮತ್ಕಾರ ಸಿದ್ಧಿಗಳುಳ್ಳವರೆಂದು ಧ್ವನಿತಪಡಿಸುವ ಉಲ್ಲೇಖ ದೊರೆಯುತ್ತಿವೆ. ಮೌನವು ಮುನಿಯ ವೈಶಿಷ್ಟ್ಯವಾಗಿದ್ದರೆ, ಯಮ – ನಿಯಾಮಾದಿ ಸಾಧನವು ಯತಿಯ ವೈಶಿಷ್ಟ್ಯವಿರಬೇಕೆಂದು, 'ಯತಿ' (ಯಮ್–ಯತ್) ಎಂಬ ಈ ವರ್ಗದ ನಾಮಸಂಕೇತಗಳು ವೇದಕಾಲೀನ ವಿವಿಧ ವಿರಕ್ತಮರ್ಗೀ ಸಾಧಕವರ್ಗದ ಅಸ್ತಿತ್ವವನ್ನು ಬೆಳಕಿಗೆ ತರುತ್ತಿವೆ. ಅಗಸ್ತ್ಯ, ಕಶ್ಯಪಾದಿಗಳು ಋಷಿ ಹಾಗೂ ಮುನಿ ಇವೆರಡೂ ಪಂಥಗಳನ್ನು ಜೋಡಿಸುವ ಮಧ್ಯಸ್ಥರು. ಯತಿಗಳನ್ನು ಇಂದ್ರನು ಸಂಹರಿಸಿದ ಕಥೆ ಬ್ರಾಹ್ಮಣ ಗ್ರಂಥಗಳಲ್ಲಿ ಬರುತ್ತದೆ. ಆದರ್ರ್ಯ, ಇವರಲ್ಲಿ ಒಪ್ಪಂದವಾಗಿ 'ಯತಿ' ಸಂಪ್ರದಾಯದ ಕೆಲವೊಂದು ಜನ ಉಳಿದುದಾಗಿ 'ಯತಿ' ಸಂಪ್ರದಾಯದ ಕೆಲವೊಂದು ಜನ ಉಳಿದುದಾಗಿ ಸಾಂಪ್ರದಾಯಿಕ ಕಥೆಯಿದೆ. ಹಿಂದಿನ ಕಾಲದಲ್ಲಿ ಯಾಜಕ ಸಂಪ್ರದಾಯ ಮತ್ತು ಯತಿಸಂಪ್ರದಾಯಗಳಲ್ಲಿ ಆದ ಸಂಘರ್ಷ ತಪ್ಪಿಸುವ ಒಂದು ಪ್ರಯತ್ನವು. ಈ ಕಥೆಯ ಮೂಲಕ ಅರಿಕೆಗೆ ಬರುತ್ತದೆ. ಮುನಿಯು ಇಂದ್ರನ ಸಖನಾಗಿದ್ದ ಉಲ್ಲೇಖವು ಋಗ್ವೇದದಲ್ಲಿ ಬರುವುದು. ಆದರೆ, ಇಂದ್ರನು ಮುನಿಜನದ ತಪೋಭಂಗ ಮಾಡುವನೆಂಬ ಪುರಾಣಕಥೆ, ಇವುಗಳಿಂದ ಋಷಿ ಹಾಗೂ ಮುನಿ – ಯತಿ ಈ ಉಭಯ ಪಂಥಗಳಲ್ಲಿ ಇದ್ದ ಸ್ಪರ್ಧೆಯು ಬಯಲಿಗೆ ಬರುತ್ತಿದೆ: ಇಂದ್ರ–ವರುಣಾದಿ ಯಾಜಕ ಸಂಪ್ರದಾಯದ ದೈವತಗಳು ಹಿಂದೆ ಬೀಳುತ್ತವೆ. ಆ ಸ್ಥಳದಲ್ಲಿ ರುದ್ರ–ಶಿವ,

ವಿಷ್ಣು–ನಾರಾಯಣ, ದೇವಿ : ಶಕ್ತಿ ಮೊದಲಾದ ದೈವತಗಳು ಪ್ರಮುಖವಾಗುತ್ತವೆ. ಇವುಗಳಿಗೆ ವೇದದಲ್ಲಿ ಗೌಣ ಸ್ಥಾನವಿತ್ತು. ನಾರಾಯಣ ಹಾಗೂ ಶಕ್ತಿದೇವಿಯ ಸ್ಪಷ್ಟ ಉಲ್ಲೇಖಗಳು ಸಹ ಇಲ್ಲ. ರುದ್ರನಿಗೆ 'ಶಿವ'ನೆಂದು ಕರೆವ ವಾಡಿಕೆ ಲುಪ್ತವಿತ್ತು. ಈ ಘಟನೆಗಳಿಂದ ಮೇಲೆ ಸೂಚಿಸಿದಂತೆ, ಈ ದೈವತಗಳಲ್ಲಿ ಎರಡು ವಿಭಾಗಗಳು ಇದ್ದುದಾಗಿ ಮೇಲೆಯೆ ಕಾಣುವಂತಿದೆ. ಇಂದ್ರ ವರುಣಾದಿಗಳ ಗುಂಪು ಒಂದು; ಇವು ದ್ಯು (ಸೌರ) ಲೋಕದ ದೈವತಗಳು; ತೇಜೋರೂಪಿ. ರುದ್ರ ವಿಷ್ಣು–ಶಕ್ತಿ ಇವುಗಳ ಪಂಗಡ ಒಂದು. ಇವು ಅಪ: ರಸತತ್ತ್ವಾಧಿಷ್ಠಿತ ಪ್ರತಿಮೆಗಳು. ಎಂಬುದನ್ನು ಸಾಧಾರವಾಗಿ ಈ ಮೊದಲೆ ವಿವರಿಸಿದ್ದಾಗಿದೆ. ಈ ಸಂಶೋಧನೆಯನ್ನು ಮುಂದುವರಿಸಿದಾಗ ಋಗ್ವೇದದ ಅದಿತಿ–ಅಂಭೃಣೀ–ಸರಸ್ವತೀ ದೇವಿಯರ ಮೂಲವಾಗಿ, ಅಪ : ರಸ ತತ್ತ್ವಾಧಿಷ್ಠಿತ ಇಡೀ ದೇವತಾ ಮಂಡಲವೆ ಒಂದರೊಡನೊಂದು ಹೊಂದಿಕೊಂಡುದು ಹೊರಬರುತ್ತದೆ! ಭಾವನೆಗಳನ್ನು ನಿಯಂತ್ರಿಸಿ: ನಿರ್ಲಿಪ್ತ ಮನೋಧರ್ಮವನ್ನು ಕೈಗೊಳ್ಳುವುದು 'ದಮ' ವೃತ್ತಿಯೆಂದು ಕರೆಯುತ್ತಾರೆ."

ವಿವರಗಳಿಗೆ ನೋಡಿ: ಶಂಬಾ ಜೋಶಿ ೧೯೯೯ ಸಂಪುಟ. ೪ ಪುಟ. ೩೫೪,
ಸಂಪುಟ. ೩ ಪುಟ. ೩೩೫, ೩೩೬
ಮುಳಿಯ ತಿಮ್ಮಪ್ಪಯ್ಯ ೧೯೮೮ ಶ್ರದ್ಧಾಂಜಲಿ ಪುಟ. ೯೯

ಯವನಿಕಾ

ರಂಗಭೂಮಿಯ ಮುಂಭಾಗದಲ್ಲಿ ಇಳಿಬಿಡುವ ಪರದೆಯನ್ನು ಸೂಚಿಸುವುದಕ್ಕೆ ಸಂಸ್ಕೃತದಲ್ಲಿ ಯಾವುದೇ ಮೌಲಿಕ ಶಬ್ದವಿಲ್ಲ. ಅದಕ್ಕೆ 'ಯವನಿಕಾ' ಶಬ್ದವನ್ನು ಬಳಸುತ್ತಾರೆ. ಇದನ್ನು ಗ್ರೀಕ್ ರಂಗಭೂಮಿಯಿಂದ ಎತ್ತಿಕೊಳ್ಳಲಾಗಿದೆ. (ಭಗವತ್ ಶರಣ ಉಪಾಧ್ಯಾಯ. ೨೦೦೪. ಪು. ೮೧)

ಯಶೋವಧ

ವಿದ್ಯೆಯನ್ನು ಕಲಿಸಿದ ಗುರುವನ್ನು, ಬ್ರಾಹ್ಮಣನನ್ನು, ಪುತ್ರಶೋಕದಿಂದ ಕೂಡಿದವನನ್ನು, ನಿರಾಯುಧನನ್ನು ಕೊಂದರೆ ಅದು ಪಾಪ. ಈ ಮೂರು ರೀತಿಯ ಕೊಲೆಯನ್ನು ತ್ರಿವಿಧ ಪಾಪವೆಂದು ಹೇಳುತ್ತಾರೆ. ಇನ್ನೊಬ್ಬರ ಯಶಸ್ಸನ್ನು ಹಾನಿ ಮಾಡುವುದು ಯಶೋವಧೆಯಾಗಿರುತ್ತದೆ.

ಯುದ್ಧ ಪರಿಕರಗಳು

ಯುದ್ಧಕ್ಕಾಗಿ ನಡೆಯುತ್ತಿದ್ದ ಸೇನೆಯು ತನ್ನೊಡನೆ ಕೊಂಡೊಯ್ಯುತ್ತಿದ್ದ ಪರಕರಗಳ ಒಂದು ಚಿತ್ರವು ಸೂಕ್ತಿಸುಧಾರ್ಣವದಲ್ಲಿ ದೊರೆಯುತ್ತದೆ. ಗುಡಿ (=ಧ್ವಜ), ಹಗ್ಗ, ಕಾಂಡಪಟ (=ತೆರೆ), ಮೊರ, ಗಳಗೆ (=ಧಾನ್ಯದ ಕಣಜ), ತೊತ್ತು, ಎತ್ತು,

ಬಂಡಿ, ಸಂಗುಡಿ (=?), ಕಂಟಣೆ (=ಪ್ರಾಣಿಗಳ ಮೇಲೆ ಹೇರುವ ಇಬ್ಭಾಗದ ಚೀಲ), ದಂಡಿಗೆ (=ಪಲ್ಲಕ್ಕಿ), ಸವಂಗ (=ಕವಚ), ಮೊಚ್ಚೆ (=ಪಾದರಕ್ಕೆ), ಹಲ್ಲಣ (=ಜೀನು), ಕುಡುಗೋಲು, ಕತ್ತಿ, ದಬ್ಬಳ, ಕೊಡಲಿ, ಗೂಟ, ಹಾರೆ, ಹಾರಂಗಿ, ತಾಮ್ರದ ಪಾತ್ರೆಗಳು – ಇವಿಷ್ಟೂ "ದಂಡಿಂಗೆ ಸಾಮಾಗ್ರಿಗಳ್" ಈ ಸಾಮಾನುಗಳ ಜೊತೆಯಲ್ಲಿ ಬಿಲ್ಲು, ಸರಳು, ಈಟಿ, ತೋಮರ, ಖಡ್ಗ – ಮುಂತಾದ ಆಯುಧಗಳನ್ನು ಹೇರಿಕೊಂಡು ಬಂಡಿಗಳು ಬರುತ್ತಿದ್ದವು. ಅರಮನೆಯ ಖಜಾನೆಯೂ ('ಕೊಟ್ಟಿಗೆ' <ಕೋಷ್ಠಾಗಾರ) ರಾಜನ ಜೊತೆಯಲ್ಲಿ ಬರುತ್ತಿತ್ತು. ಆಯುಧಗಳಿಗೆ ಸಾಣೆ ಹಿಡಿದು ಹರಿತ ಮಾಡುವವರು ಬರುತ್ತಿದ್ದರು. ರಾಣಿವಾಸದ ಕೆಲವರು ಸ್ತ್ರೀಯರೂ, ಹಿರಿಯ ಅಧಿಕಾರಿಗಳ ಸ್ತ್ರೀಯರೂ, ಸೇನೆಯ ಜೊತೆಗೆಬರುತ್ತಿದ್ದರೆಂಬುದಕ್ಕೆ ಶಾಸನಾಧಾರಗಳಿವೆ. (ಡಾ.ಎಂ ಚಿದಾನಂದಮೂರ್ತಿ, 2008.ಪು.284–285)

ಯುದ್ಧಕ್ಕಾಗಿ ವ್ಯೂಹ ರಚನೆ

ಯುದ್ಧದಲ್ಲಿ ಮೊದಲು ಕಾಲಾಳು ಪಡೆ. ಅದರ ಹಿಂದೆ ಗಜ ನಡುವೆ ರಥ. ರಾಜನ ಎರಡೂ ಭಾಗಗಳಲ್ಲಿ ಶ್ರೇಷ್ಠವಾದ ಕುದುರೆಗಳು ಇರುತ್ತವೆ.

ಒಟ್ಟು ಎಂಟು ರೀತಿಯ ಯುದ್ಧಗಳಿವೆ. ಹೆಣ್ಣಿಗಾಗಿ ನಡೆಯುವ ಯುದ್ಧವನ್ನು ಕಾಮಜವೆಂದು ಕರೆಯುತ್ತಾರೆ. ಹೊನ್ನಿಗಾಗಿ ನಡೆಯುವ ಯುದ್ಧವನ್ನು ಲೋಭಜವೆಂದು ಕರೆಯುತ್ತಾರೆ. ಮಣ್ಣಿಗಾಗಿ ನಡೆಯುವ ಯುದ್ಧವನ್ನು ಭೂಭವವೆಂದು ಕರೆಯುತ್ತಾರೆ. ಬಿರುದಿಗಾಗಿ ನಡೆಯುವ ಯುದ್ಧವನ್ನು ಮಾನ ಸಂಭವವೆಂದು ಕರೆಯುತ್ತಾರೆ. ಶರಣಾಗತರ ರಕ್ಷಣೆಗಾಗಿ ನಡೆಯುವ ಯುದ್ಧವನ್ನು ಅಭಯ ಯುದ್ಧವೆಂದು ಕರೆಯುತ್ತಾರೆ. ಇಷ್ಟ ಬಂಧುಗಳಿಗಾಗಿ ನಡೆಯುವ ಯುದ್ಧವನ್ನು ಇಷ್ಟಜವೆಂದು ಕರೆಯುತ್ತಾರೆ. ಮದಿರೆಯ ಮದ, ವಿದ್ಯಾ ಮದದಿಂದ, ಧನಮದದಿಂದ, ಯೌವನದ ಮದದಿಂದ ನಡೆಯುವ ಯುದ್ಧಗಳನ್ನು ಮದೋತ್ಥಿತವೆಂದು ಕರೆಯುತ್ತಾರೆ. ಕೇವಲ ಸಂಪತ್ತಿಗಾಗಿ ನಡೆಯುವ ಯುದ್ಧವನ್ನು ದ್ರವ್ಯಾಭಿಲಾಷುಕವೆಂದು ಕರೆಯುತ್ತಾರೆ. (ಮಾನಸೋಲ್ಲಾಸ–2– 734–742) ಯುದ್ಧದ ಸಂದರ್ಭದಲ್ಲಿ ಕವಚ, ಬಾಹುರ, ಸೀಸಕವನ್ನು ಧರಿಸುತ್ತಿದ್ದರು.

ಯುದ್ಧ ಧರ್ಮ

ಯುದ್ಧದ ಭೀತಿಯಿಂದ ಅಪರಾಧಿತನದಿಂದ. ಸಮುದ್ರವನ್ನು ಹೊಕ್ಕವವನ್ನು ಕೊಲ್ಲುವುದು ಉಚಿತವಲ್ಲ ದೇವರನ್ನು (ಶಿವಲಿಂಗ) ಅಪ್ಪಿಕೊಂಡವನನ್ನು. ನೀರಲ್ಲಿ ಹೊಕ್ಕವನನ್ನು ; ಹೆಣ್ಣಿನ ಸೀರೆಯ ಸೆರಗಿನಲ್ಲಿ ಮುಖವನ್ನು ಒಡ್ಡಿ ನಿಂತವನನ್ನು : ಹುತ್ತವನ್ನು ಹತ್ತಿ ಏರಿನಿಂತವವನನ್ನು.; ಕೊಲ್ಲುವುದು ಕ್ಷತ್ರಿಯ ಅಥವಾ ಯುದ್ಧಧರ್ಮವೆಲ್ಲವೆಂದು ಸೂಚಿತವಾಗಿದೆ.

ಸ್ಮೃತಿಗಳಲ್ಲಿ 'ವರ್ಣಧರ್ಮ' 'ಆಶ್ರಮಧರ್ಮ' 'ವರ್ಣಾಶ್ರಮ ಧರ್ಮ' 'ಗುಣಧರ್ಮ' 'ನಿಮಿತ್ತಧರ್ಮ' ಮತ್ತು ಸಾಧಾರಣ ಧರ್ಮವೆಂದು ಆರು ಬಗೆಯಿದೆ. ಉಪನಯನ ಮದ್ಯಪಾನ ವರ್ಜನ ಮೊದಲಾದವುಗಳು ವರ್ಣಧರ್ಮ, ಭಿಕ್ಷಾ ದಂಡಧಾರಣ ಮೊದಲಾದವು ಆಶ್ರಮಧರ್ಮ. ಮೇಖಲಾ(ಮಂಜಿ ಹುಲ್ಲಿನಿಂದ ಮಾಡಿದ ನಡುಧಾರ) ಪಲಾಶದಂಡ ಧಾರಣಾದಿಗಳು ವರ್ಣಾಶ್ರಮ ಧರ್ಮದಲ್ಲಿಯೂ ಪಟ್ಟಾಭಿಷಿಕ್ತನಾದ ರಾಜಧರ್ಮಗಳು ಗುಣಧರ್ಮದಲ್ಲಿಯೂ, ಪ್ರಾಯಶ್ಚಿತ್ತಾದಿಗಳು ನೈಮಿತ್ತಿಕ ಧರ್ಮದಲ್ಲಿಯೂ ಸೇರುತ್ತವೆ. ಮಿತಾಕ್ಷರದಲ್ಲಿಯೂ ಆರು ಧರ್ಮಗಳನ್ನು ಹೇಳಲಾಗಿದೆ.

ಯುದ್ಧ ಭಂಗಿಗಳು

ವಿಲಂಬಿಕ, ಆಕುಂಚಿತ, ಆಸ್ಫೋಟಿತ, ಆಕ್ಷಿಪ್ತ, ಉದ್ಭ್ರಾಮಿತ, ದಿಗ್ಭ್ರಾಮಿತ, ಉಚಿತವಿರುದ್ಧ, ಅಚಿಂತ್ಯ ಎಂಬ ಎಂಟು ಬಗೆಯ ಪ್ರಹಾರಗಳು. ಯುದ್ಧದಲ್ಲಿಯೂ ನಿಂತುಕೊಳ್ಳುವ ಐದು ಬಗೆಯ ರೀತಿಗಳಿವೆ. ಇವುಗಳಲ್ಲಿ 'ಆಲೀಢ'ವೆಂದರೆ ಬಲಗಾಲನ್ನು ಮುಂದೆ ಚಾಚಿ, ಎಡಗಾಲನ್ನು ಹಿಂದೆ ಮಣಿಸಿ ನಿಲ್ಲುವುದು. 'ಪ್ರತ್ಯಾಲೀಢ'ವೆಂದರೆ ಎಡಗಾಲನ್ನು ಮುಂದಕ್ಕೆ ಚಾಚಿ, ಬಲಗಾಲನ್ನು ಹಿಂದೆ ಮಣಿಸಿ ನಿಲ್ಲುವುದು. 'ಸಮಪಾದ'ವೆಂದರೆ ಎರಡೂ ಪಾದಗಳನ್ನು ಸಮವಾಗಿಟ್ಟು ಸಹಜವಾಗಿ ನಿಲ್ಲುವುದು. 'ವೈಷ್ಣವ'ವೆಂದರೆ ಒಂದು ಕಾಲನ್ನು ಸಮವಾಗಿರಿಸಿ ಅದರಿಂದ ಎರಡೂವರೆ ಗೇಣು ಅಂತರದಲ್ಲಿ ಇನ್ನೊಂದು ಕಾಲಿನ ಬೆರಳುಗಳನ್ನು ಪಾರ್ಶ್ವಕ್ಕೆ ಮಾಡಿ ನಿಲ್ಲುವುದು. 'ಮಂಡಲಾಗ್ರ'ವೆಂದರೆ ಕಾಲುಗಳನ್ನು ಒಂದು ಗೇಣಂತರವಿರುವಂತೆ ತ್ರಿಭಂಗಿಯಲ್ಲಿಟ್ಟು ಮೊಣಕಾಲನ್ನು ಎರಡೂವರೆ ಗೇಣು ಮೇಲಕ್ಕೆತ್ತಿ ಸೊಂಟಕ್ಕೆ ಸಮಮಾಡಿ ನಿಲ್ಲುವುದು. ವೈಶಾಖಸ್ಥಾನ: ಎರಡೂ ಪಾದಗಳ ನಡುವೆ ಒಂದು ಗೇಣಂತರವಿರುವಂತೆ ನಿಂತುಕೊಳ್ಳುವುದು.

ಯೂಪ

ಯೂಪವೆಂದರೆ ಯಜ್ಞಪಶುವನ್ನು ಕಟ್ಟುವ ಕಂಬ. ಯಜ್ಞಗಳಿಗೆ ಪಶು ಬಲಿ ಆಗಿನ ಆಚರಣೆಗಳಲ್ಲಿ ಒಂದು ಎಂಬುದು ಗಮನಾರ್ಹ. ಯಜ್ಞದಲ್ಲಿ ಪಶುಗಳು ಆಹುತಿಯಾಗುತ್ತಿದ್ದವು. ಯಜ್ಞದ ಆಹುತಿಗೆ ಬಲಿಯಾಗುತ್ತಿದ್ದ ಪ್ರಾಣಿಗಳೆಂದರೆ ಆಡು, ಕುರಿ, ಆಕಳು, ಎತ್ತು, ಎಮ್ಮೆ, ಕೋಣ, ಜಿಂಕೆ, ಕುದುರೆಗಳು. ಅಶ್ವಮೇಧದಲ್ಲಿ 609 ಪ್ರಾಣಿಗಳನ್ನು ಬಲಿಗಾಗಿ ಬಳಸಿಕೊಳ್ಳುತ್ತಿದ್ದರಂತೆ. ಕೃಷ್ಣ ಯಜುರ್ವೇದ ತೈತಿರಿಯಾ ಬ್ರಾಹ್ಮಣವು ಯಾವ ಯಾವ ದೇವತೆಗೆ ಯಾವ ಯಾವ ಬಲಿ ನೀಡಬೇಕೆಂದು ಹೇಳುತ್ತದೆ. ಇಂದ್ರನಿಗೆ ದಪ್ಪ ಕಾಲುಗಳುಳ್ಳ ಆಕಳು, ವಿಷ್ಣು – ವರುಣರಿಗೆ ಬಂಜೆ ಆಕಳು, ಪೂಷನ್ ದೇವತೆಗೆ ಕೃಷ್ಣವರ್ಣದ ಹಸು, ರುದ್ರನಿಗೆ ಕೆಂಪುವರ್ಣದ ಆಕಳು, ಶ್ವೇತ ವರ್ಣದ ಬಂಜೆ ಆಕಳು ಸೂರ್ಯನಿಗೆ, ಬಣ್ಣದ ಮಿಶ್ರ ಆಕಳು ಮಿತ್ರಾವರುಣರಿಗೆ

ಇತ್ಯಾದಿ. ಆಹುತ ಪ್ರಾಣಿಯನ್ನು ಯಜ್ಞಭಾಗಿಗಳಿಗೆ ಹಂಚುತ್ತಿದ್ದರು; ಪ್ರಸ್ತೋತನಿಗೆ ಆಹುತ ಪ್ರಾಣಿಯ ನಾಲಿಗೆಯನ್ನೊಳಗೊಂಡು ಎರಡು ದವಡೆಗಳು ಸಿಕ್ಕಿದವು. ಪ್ರತಿಹರ್ತನಿಗೆ ಕುತ್ತಿಗೆ ಮತ್ತು ಡುಬ್ಬ, ಉದ್ಗಾರ್ತನಿಗೆ ಹದ್ದಿನಂತಹ ನೆಣ, ನೇಷ್ಟನಿಗೆ ಬಲದೋಳು. ಸದಸ್ಯನಿಗೆ ಎಡದೋಳು, ಯಜ್ಞವನ್ನು ಜರುಗಿಸಿದ ಗೃಹಪತಿಗೆ, ಯಜಮಾನನಿಗೆ ಎರಡು ಬಲ ಪಾದಗಳು, ಅವನ ಪತ್ನಿಗೆ ಎರಡು ಎಡಪಾದಗಳು ಇತ್ಯಾದಿ. ನರಬಲಿಯೂ ನಡೆಯುತ್ತಿತ್ತು.

ವಿವರಗಳಿಗೆ ನೋಡಿ: ವೇದವ್ರತ ವೈಶಂಪಾಯನ 1984 ಋಗ್ವೇದ
ಪುಟ. 107–141

ರಂಗಭೂಮಿ

ಸಾಮಾನ್ಯರ ಕ್ರಿಯೆ ಮತ್ತು ವೇದಿಕೆಯ ನಡುವಣ ಕ್ರಿಯೆಯನ್ನು ವ್ಯತ್ಯಾಸಗೊಳಿಸಲು ರಂಗವೇದಿಕೆಯು ಅವಕಾಶ ಕಲ್ಪಿಸುತ್ತದೆ.

ವಿವರಗಳಿಗೆ ನೋಡಿ: ಆಮೂರ ಜಿ. ಎಸ್. 2006 ಶ್ರೀರಂಗ ಸಾರಸ್ವತ
(ಸಂಪುಟ. 8) ಪುಟ. 644.

ರಂಗವಲಿ

ರಂಗವಲಿಯೆಂದರೆ ರಂಗೋಲಿಯೆಂದರ್ಥ. ಮುಂಜಾವದಲ್ಲಿ ಮನೆಯೆದುರು ಗೃಹಿಣಿಯರು ರಂಗೋಲಿಯೆಳೆದು ಸೂರ್ಯೋದಯವನ್ನು ಬರಮಾಡಿಕೊಂಡರೆ ಶುಭವೆಂಬ ನಂಬಿಕೆಯಿದೆ.

'ರಂಗೋಲಿ' ಸ್ತ್ರೀಯರದ್ದೇ ವಿಶೇಷವಾದ ಕೌಶಲವೆಂದು ಪರಿಗಣಿಸಬಹುದು. ಈಗಲೂ 'ರಂಗೋಲಿ ಸ್ಪರ್ಧೆ'ಯು ಸ್ತ್ರೀಯರಿಗಾಗಿ 'ಏರ್ಪಡಿಸುವ ಸ್ಪರ್ಧೆಗಳಲ್ಲಿ ಒಂದಾಗಿದೆ. ವಾತ್ಸಾಯನನು ತನ್ನ 'ಕಾಮಸೂತ್ರ' ಕೃತಿಯಲ್ಲಿ ಸ್ತ್ರೀಯರ ಕ್ರೀಡೆಗಳ ಕುರಿತಂತೆ ಹೇಳುವಾಗ 'ತಂಡುಲ ಕುಸುಮ ಬಲಿವಿಕಾರ' ಎಂದು ಹೇಳುತ್ತಾನೆ. ಇದು ಬಣ್ಣದ ಅಕ್ಕಿಯಿಂದ ರಂಗೋಲಿ ಬರೆಯುವುದನ್ನು ಸೂಚಿಸುತ್ತದೆ. (ವೆಂಕಟಭಸ್ಮೆ ಜಿ.(ಅನು) 1983. ಪುಟ. 10) ಭಾರತದಲ್ಲಿ ರಂಗವಲ್ಲಿಯು ಪುರಾತನ ಕಾಲದಿಂದಲೂ ಬಂದ ಗೃಹಾಲಂಕಾರದ ಒಂದು ಕಲೆಯಾಗಿದೆ. ಪುರಾಣ, ಕಾವ್ಯ, ಇತಿಹಾಸ ಮೊದಲಾದ ಸಾಹಿತ್ಯಗಳಲ್ಲೂ ರಂಗವಲ್ಲಿಯ ಉಲ್ಲೇಖಗಳಿವೆ. (ಹೂಗಾರ: ಎಸ್.ಕೆ. 1977 ಪುಟ. 34–35)

ಕ್ರೀಡೆಯನ್ನು ಮನೋಲ್ಲಾಸ ಕೊಡುವ ಪ್ರಕಾರಗಳಲ್ಲೆ ಒಂದು ಎಂದು ತಿಳಿದುಕೊಂಡರೆ, ವಾತ್ಸಾಯನನ ವಾದವನ್ನು ಒಪ್ಪಿಕೊಳ್ಳಬಹುದು. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಉಕ್ತವಾದಂತೆ, ಸ್ತ್ರೀಯರು ರಂಗೋಲಿಯನ್ನು ಬರೆಯುವುದರಲ್ಲಿ ಮನೋಲ್ಲಾಸ ಪಡೆಯುತ್ತಿದ್ದರು.

ರಜಸ್ವಲೆ

ರಜಸ್ವಲೆಯಾದ ಸ್ತ್ರೀಯನ್ನು ಮುಟ್ಟಬಾರದು ಎನ್ನುವ ನಂಬಿಕೆಯು ಪಂಪಭಾರತದಲ್ಲಿ ಬಂದಿದೆ. ರಜೋದರ್ಶನದ ಅನಂತರ ಗಂಡನನ್ನು ಸೇರುವುದರಿಂದ ಪುತ್ರಲಾಭವೆನ್ನುವುದು. ಇಲ್ಲಿಯ ಗಮನಾರ್ಹ ಅಂಶವಾಗಿದೆ. ರಜೋದರ್ಶನವು ನಿಷ್ಫಲವಾಗಬಾರದು. ಈ ಕುರಿತು ಮನುವು ಈ ರೀತಿಯಾಗಿ ವಿವರಿಸುತ್ತಾನೆ.

ರಜೋದರ್ಶನದಿಂದ ಆರಂಭಿಸಿ ಹದಿನಾರು ದಿನ ಪರ್ಯಂತ ಋತು ಕಾಲವು. ಆದರೆ ಋತುವು (ರಜಸ್ಸು ಅತ್ಯಲ್ಪವಾಗಿ) ಪ್ರತ್ಯಕ್ಷವಾಗದೆ ಗರ್ಭಧಾರಣೆ ಆದುದು ತುಂಬ ಇದೆ. ಇದು ಪ್ರಥಮ ದ್ವಿತೀಯಾದಿ ಗರ್ಭಗಳಲ್ಲಿ ಸಾಮಾನ್ಯ. (ಮನುಸ್ಮೃತಿ)

ರಜೋದರ್ಶನ ಕಾಲದಿಂದ ಮೊದಲಿನ ನಾಲ್ಕು, ಹನ್ನೊಂದು, ಹದಿಮೂರು ಎಂದು ಆರು ರಾತ್ರಿಗಳು ಪ್ರಶಸ್ತವಲ್ಲ. ರಜಸ್ಸಿನ ಆರಂಭವು ರಾತ್ರಿಯಾದಾಗ ದಿನಕಾಲವು ಅಸ್ತವ್ಯಸ್ತವಾಗುವುದು. ದೈಹಿಕವಾಗಿ ವ್ಯತ್ಯಾಸವು ಇರುವುದರಿಂದ ಇದು ಸಾಮಾನ್ಯ ವಿಷಯವು. ರಜೋದರ್ಶನದ ಅನಂತರ ಗಂಡು ಹೆಣ್ಣು ಸೇರಿದಾಗ ಉಂಟಾಗುವ ಸಂತತಿಯ ಕುರಿತು ಮನುವು ಹೇಳುತ್ತಾನೆ–

6–8–10–12–14–16ನೆಯ ರಾತ್ರಿಗಳಲ್ಲಿ ಜನಿಸಿದ ಗರ್ಭವು ಗಂಡು, 5–7–9–15ನೆಯ ರಾತ್ರಿಗಳಲ್ಲಿ ಸ್ತ್ರೀಪ್ರಜೆಯು ಎಂದು ಸಿದ್ಧಾಂತವು. (ಮನುಸ್ಮೃತಿ 3–46;48)

ತನ್ನ ಸ್ತ್ರೀಯು ರಜಸ್ವಲೆಯಾದಾಗ ಅವಳ ಎಲ್ಲ ತರದ ಸಂಬಂಧವನ್ನು ಬಿಡಬೇಕು. ರಜಸ್ವಲಾಸಂಗವನ್ನು ಬಿಟ್ಟರೆ ಬುದ್ಧಿ, ವರ್ಚಸ್ಸು, ಬಲನೇತ್ರಶಕ್ತಿ, ಆಯುಸ್ಸು ಕ್ಷೀಣವಾಗದೆ ವೃದ್ಧಿಯಾಗುವುದು. (ಮನುಸ್ಮೃತಿ 4–40;41)

ರಜಸ್ವಲಾ ಸ್ತ್ರೀಯೊಡನೆ ಮಾತಾಡಬಾರದು. (ಆಮಂತ್ರಣ) ವರಣ ಮಾಡದೆ ಯಜ್ಞಕ್ಕೆ ಹೋಗಬಾರದು.

(ಮನುಸ್ಮೃತಿ 4–57)

ಆದರೆ ಹುಡುಗಿಯು ಋತುಮತಿಯಾಗಿ ಮೂರು ವರ್ಷ ಕಾದಿದ್ದ ಮೇಲೆ ತನಗೆ ಅನುರೂಪ ಪತಿಯನ್ನು ತಾನು ವರಿಸಬಹುದು. ಆಮೇಲೆ ಹಿರಿಯರನ್ನು ನಿರೀಕ್ಷಿಸುವುದು ಬೇಡ. (ಮನುಸ್ಮೃತಿ 9–90)

ರಜೋದರ್ಶನದ ಕುರಿತು ಮನುವಿನ ಅಭಿಪ್ರಾಯವು ಮೇಲಿನಂತಿದೆ.

ವಿವರಗಳಿಗೆ ನೋಡಿ: ಮುಟ್ಟು ಪವಿತ್ರ–ಅಪವಿತ್ರ

ರಜೋಗುಣ

"ಸಾತ್ವಿಕ; ರಜಸ್ಸು; ತಮಸ್ಸು ಎಂಬುದು ಮೂರು ಗುಣಗಳು. ಈ ಮೂರು ಗುಣಗಳಿಗೆ ಮೂವರು ಅಧಿದೇವತೆಯರು. ಸತ್ವಕ್ಕೆ ವಿಷ್ಣು, ರಜಸ್ಸಿಗೆ ಬ್ರಹ್ಮ ಮತ್ತು ತಮಸ್ಸಿಗೆ ಶಿವ. ಹಾಗೆಯೇ ಈ ಮೂವರು ಅಧಿದೇವತೆಯರು ಸೃಷ್ಟಿ, ಸ್ಥಿತಿ ಮತ್ತು ಲಯವನ್ನು ಸೂಚಿಸುತ್ತಾರೆ. ರಜೋಗುಣವೆಂದರೆ ರಾಜತ್ವಕ್ಕೆ ಸಂಬಂಧಿಸಿದ್ದು. ಸಾತ್ವಿಕ ಗುಣಕ್ಕಿಂತ ಭಿನ್ನವಾದುದು. ಸಾತ್ವಿಕರು ದೇವತೆಗಳನ್ನು ಪೂಜಿಸುತ್ತಾರೆ. ರಾಜಸರು ಯಕ್ಷ ರಾಕ್ಷಸರನ್ನು ಪೂಜಿಸುತ್ತಾರೆ. ತಾಮಸರು ಪ್ರೇತ ಭೂತಗಳನ್ನು ಪೂಜಿಸುತ್ತಾರೆ. (ಗೀತೆ 17–4)

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 12–38

ಡಿ.ವಿ.ಜಿ 1996 ಭಗವದ್ಗೀತೆ–14–436: 38; 444–48

ರಟ್ಟ ಪದದ ನಿಷ್ಪತ್ತಿ

ರಾಷ್ಟ್ರಕೂಟರ ಮೂಲ ನಾಮಧೇಯ ರಟ್ಟ. ಅದರ ದೇಶೀಯ ಹಿನ್ನಲೆಯು ಕುತೂಹಲಕಾರಿಯಾಗಿದೆ. ರಟ್ಟ ಎನ್ನುವುದು ಶುದ್ಧ ಕನ್ನಡ ಪದವಾಗಿದೆ. 'ರಟ್ಟ' ಎನ್ನುವ ಪದ ನಿಷ್ಪತ್ತಿಯ ಕುರಿತು ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ನಿಲುವು ತಳೆದಿದ್ದಾರೆ. ಈ ಕುರಿತಂತೆ ಮುಳಿಯ ತಿಮ್ಮಪ್ಪಯ್ಯನವರು ಈ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

"ರಟ್ಟ ಪದವು ಭಿನ್ನ ಭಿನ್ನ ಸಂಶೋಧಕ ಯಂತ್ರಗಳನ್ನೊಂದಿ ಬೇರೆ ಬೇರೆ ಅರ್ಥ ಸಾರಗಳನ್ನು ಹೀರಿ ಕಾಣೀಸಬಹುದು. ಆದರೆ ರಹಟ (ನೀರನ್ನೆತ್ತುವ ಘಟೀಯಂತ್ರ) ಎಂಬುದೇ ನಾಡನುಡಿಯಲ್ಲಿ ರಟ್ಟ ಎಂದಾಗಿರಬೇಕಲ್ಲದೆ, 'ರಾಷ್ಟ್ರ'ದ ತದ್ಭವರೂಪವೇ ಅದಾಗಿರಲಾರದು. ಗೊಲ್ಲರು ಅಥವಾ ಅಭೀರರು ಈ 'ರಹಟ' ಕರ್ಮದಿಂದಲೇ ವಿಶೇಷವಾಗಿ ಜೀವಿಸುವವರಾದುದರಿಂದ ಅವರಿಗೆ ಸಾಮೂಹಿಕವಾಗಿ ರಟ್ಟ ಎಂಬ ಹೆಸರೊದಗುವುದು ಸಕಾರಣವಿದೆ. ಮುಂದಿನ ರಾಷ್ಟ್ರಕೂಟರು ಯಾದವ ಕುಲೋತ್ಪನ್ನರೆಂಬುದನ್ನು ಆ ವಂಶೀಯ ರಾಜರ ಶಾಸನಗಳೆಲ್ಲವೂ ಏಕಕಂಠವಾಗಿ ಸಾರುತ್ತಿವೆಯಷ್ಟೆ ಶ್ರೀಕೃಷ್ಣ ಸಂಬಂಧದಿಂದಾಗಿ ಅಭೀರವಂಶಕ್ಕೂ ಆ ಯಾದವಕುಲದ ಕೂಟವಿದೆ ಎಂಬುದನ್ನಾದರೂ ಮರೆಯಬಾರದು. ಹಾಗೆ ಆಭೀರರೇ ರಟ್ಟ–ರಾಷ್ಟ್ರಕೂಟರಾಗಿ ಪರಿಣಮಿಸಿದರು ಎಂಬುದಕ್ಕೆ ಇನ್ನೂ ಒಂದು ಆಧಾರವನ್ನೀಯಬಹುದು. ಗೊಲ್ಲಕುಲದ ಅಥವಾ ಆಭೀರಕುಲದ ಸ್ತ್ರೀಪುರುಷರಿಗೆ ಕ್ರಮವಾಗಿ ವಲ್ಲವೀ ವಲ್ಲವ ಎಂಬ ಹೆಸರಿದೆ. ಗಾಥಾಸಪ್ತಶತಿಯ ಪ್ರಥಮ ಶತಕದ ೮೯ನೆಯ ಗಾಥೆಯೇ ಮೊದಲಾದವುಗಳಲ್ಲಿ ಇದಕ್ಕೆ ದೃಷ್ಟಾಂತವನ್ನು ಕಾಣಬಹುದು. "ಏತಾಣ" ವಲ್ಲ ವೀಣಂ" (ಏತಾಸಾಂ ವಲ್ಲವೀನಾಂ=ಈ ಆಭೀರ ಸ್ತ್ರೀಯರ)

ಎಂದು ಮೊದಲಾದವುಗಳೇ ಆ ದೃಷ್ಟಾಂತಗಳು. ಇದರೊಡನೆ ನೃಪತುಂಗನ ಕಾಲದ 'ರೋಣ' ಎಂಬಲ್ಲಿಯ ಕನ್ನಡ ಶಾಸನದ ವಾಕ್ಯಾಂಶವನ್ನಿರಿಸಿ ಪರಿಶೀಲಿಸಿರಿ. "ಜಯಮೆಂಬ ವರ್ಷದ ಶ್ರಾವಣ ಮಾಸದ ಸೂರ್ಯಗ್ರಹಣದೊಳ್ ವಲ್ಲವರಸರ್ ರೋಣದ ಮಹಾಜನಕೆ.....ನ ಪೂಜ್ಯಮಂ ಕೊಟ್ಟು . . . . . (೧೯೮೮. ಸಂ:೨ ಪು.೩೪೯.) ಇಲ್ಲಿ ತೋರುವ 'ವಲ್ಲವ ಅರಸರ್' ಎಂಬುದು ಆಗ ರಾಜ್ಯಾಧೀಶನಾಗಿದ್ದ ರಟ್ಟ ಕುಲತಿಲಕ ನೃಪತುಂಗನನ್ನೇ ಸೂಚಿಸುವ ಪದವು. ಇದು 'ವಲ್ಲಭ' ಎಂಬ ಸಂಸ್ಕೃತ ಪದದ ತದ್ಭವರೂಪವೆಂದು ಯಾರೂ ಭ್ರಮಿಸಬಾರದು. ಆ ತದ್ಭವ ರೂಪವು, ಪ್ರಾಕೃತಭಾಷೆಯ ಗಾಥಾಸಪ್ತಶತಿಯ ಹಲವಡೆಗಳಲ್ಲೂ ಕನ್ನಡ ಶಾಸನ ಕಾವ್ಯ ಪ್ರಬಂಧಗಳಲ್ಲೂ 'ಬಲ್ಲಹ' ಎಮದು ಏಕರೂಪವಾಗಿಯೇ ಇದೆಯಲ್ಲದೆ "ವಲ್ಲವ–ವಲ್ಲವಿ" ಎಂದಲ್ಲ. ವಲ್ಲವ ಎಂಬುದು, ಸಂಸ್ಕೃತದಿಂದ ರೂಪಾಂತರಗೊಳ್ಳದೆ ಪ್ರಾಕೃತ ದೇಶಭಾಷೆಗಳಲ್ಲಿ ತತ್ಸಮ (ಸಂಸ್ಕೃತದೊಡನೆ ಸಮಾನರೂಪ)ವಾಗಿ ಉಪಯುಕ್ತವಾಗುವ ಪದಜಾತಿಯದಲ್ಲದೆ, ಭಿನ್ನರೂಪದ ತದ್ಭವವಲ್ಲ. ನೃಪತುಂಗ ಸಂಬದ್ಧವಾದ ಈ 'ವಲ್ಲವರಸರ್' ಎಂಬ ವಿಶೇಷಣದಿಂದ ಆ ರಾಷ್ಟ್ರಕೂಟವಂಶವು. ಸ್ವಾಭಿನ್ನವಾದ ಹಿಂದಿನ 'ವಲ್ಲಭ' (ಆಭೀರ) ವಂಶವೇ ನಾಮಾಂತರ ಪಡೆದುದೆಂದು ಸೂಚಿತವಾಗುವುದು. ಈ ಕಾರಣದಿಂದ ರಟ್ಟ ವಲ್ಲವ ಆಭೀರಗಳು ಪರ್ಯಾಯ ಪದಗಳೇ ಎಂದು ತೋರುತ್ತಿದೆ. ರಟ್ಟವು ಲಟ್ಟ ಎಂದು ಪ್ರಯುಕ್ತವಾದುದೂ ಇದೆ. ಜಗತ್ತುಂಗ ಗೋವಿಂದನ ಕಾಲದಲ್ಲಿ ಅವನ ತಮ್ಮ ಇಂದ್ರರಾಜನು ಗುಜರಾತ ಪ್ರಾಂತದ ಉಪರಾಜಧಾನಿಯಲ್ಲಿ ರಾಷ್ಟ್ರಕೂಟ ಪ್ರತಿನಿಧಿಯಾಗಿ ನೆಲಸಿದನು. ಬಹುಶಃ ಆ ಪ್ರಾಂತಕ್ಕೆ ಲಾಟದೇಶವೆಂಬ ಹೆಸರೊದಗಿದುದು ಆ ಮೇಲೆ ಎಂದೇ ತೋರುತ್ತಿದೆ.

(ಮುಳಿಯ ತಿಮ್ಮಪ್ಪಯ್ಯ ೧೯೮೮. ಸಂ:೨. ಪು.೩೮೭–೮೮)

ರಟ್ಟ ಮತವೆಂಬ ಕೃತಿಯೂ ಪ್ರಕಟವಾಗಿದೆ. ಅದು ಶಾಸ್ತ್ರಕ್ಕೆ ಸಂಬಂಧಿಸಿದ್ದು 'ರಟ್ಟಮತ' ಕೃತಿಯಲ್ಲಿ ಮಳೆ–ಬೆಳೆ ರಾಶಿ–ಶಕುನ; ಮುಂತಾದ ವಿವರಗಳಿವೆ.

ರತ್ನ ಪರೀಕ್ಷಕ

ರತ್ನ ಪರೀಕ್ಷೆ ಮಾಡುವವನಿಗೆ ಮಾಣಿಕ ಚಟ್ಟಂ ಎಂದು ಕರೆಯುತ್ತಿದ್ದರು (ಕರ್ನಾಟಕ ಶಬ್ದಸಾರಂ ಪುಟ ೬೦)(ಹೊ)

ರಸಪಂಚಕ

ಕೆಂಪು ಬೂರುಗ, ಕಾಡ ಉದ್ದು, ಕಾಡಹೆಸರು, ಬಜೆ, ಬೆಳ್ಳುಳ್ಳಿ ಇವೆಲ್ಲಾ ಸೇರಿ ರಸಪಂಚಕಗಳಾಗುತ್ತವೆ.

(ಮಾನಸೋಲ್ಲಾಸ–653)

ರಸವಿದ್ಯೆ

ತಾಂತ್ರಿಕ ಕೈ ಬರಹಗಳಂತೆಯೇ ಧಾತುವಿದ್ಯೆ ಹಾಗೂ ದೀರ್ಘಾಯುಷ್ಯವನ್ನು ಒದಗಿಸುವ (ರಸಾಯನ) ಪಾದರಸದ ಮದ್ದುಗಳನ್ನು ಕುರಿತಾದ ಎಲ್ಲಕ್ಕೂ ಹಳೆಗಾಲದ ಸಂದರ್ಭಗಳನ್ನು ನಮಗೆ ಒದಗಿಸುತ್ತದೆ. 'ಮಂತ್ರ ಸಾಧನ' ಎನ್ನುವುದು (ಮಂತ್ರಗಳ ಸಾಧನೆಯನ್ನು ಕೈಕೊಳ್ಳುವುದು) ಒಂದು ವಿಶಿಷ್ಟವಾದ ತಾಂತ್ರಿಕ ಪದವಾಗಿದೆ. ಬಾಣನ ಕಾಲದವರೆಗೆ ತಾಂತ್ರಿಕ ಪೂಜಾ ಪದ್ಧತಿಯು ಪೂರ್ತಿ ಬೆಳೆದಿತ್ತಲ್ಲದೆ ಅದು ದಕ್ಷಿಣ ಭಾರತದಲ್ಲಿ ಎದ್ದು ಕಾಣುವ ಹಾಗೆ ಕೇಂದ್ರಿತಕೃತಗೊಂಡಿತ್ತೆಂಬುದು ಈ ನಿಜ ಸಂಗತಿಗಳಿಂದ ಕಂಡು ಬರುತ್ತದೆ.

ವಿವರಗಳಿಗೆ ನೋಡಿ: ಡೇವಿಡ್. ಎನ್. ಲಾರೆಂಜೆನ್ 2005 ಕಾಪಾಲಿಕರು ಮತ್ತು
ಕಾಳಾಮುಖರು ಪುಟ. 25
ರಸವಿದ್ಯೆಯು ತಾಂತ್ರಿಕರ ವಿದ್ಯೆಗಳಲ್ಲಿ ಒಂದು
ಕಡವ ಶಂಭು ಶರ್ಮ 1955 ಗೋರಕ್ಷ ಸಿದ್ಧಾಂತ ಸಂಗ್ರಹ

ರಸಸಿದ್ಧಿ

'ಜ್ಯೋತಿ (ಅಗ್ನಿ – ಸೂರ್ಯ) ಸಂಕೇತದಿಂದ ಸೂಚಿತವಾದ ಸಂಪ್ರದಾಯವು ಅಂದಿನ ಯಾಜಕ ಋಷಿವರ್ಗದ್ದು: ಆಪ: ರಸ ಸಂಕೇತದಿಂದ ಸೂಚಿತವಾದ ಸಂಪ್ರದಾಯವು ಯತಿ – ಮುನಿ – ಯೋಗಿಗಳದು. ಈ 'ರಸ'ದ ಅನುಸಂಧಾನವು ಜೀವನದ ವಿವಿಧ ಕ್ಷೇತ್ರಗಳಿಗೆ ನೀಡಿರುವ ಕಾಣಿಕೆ ಉಲ್ಲೇಖನೀಯವಾಗಿದೆ. ಸಿದ್ಧರಲ್ಲಿ, ರಸೌಷಧಿಗಳಲ್ಲಿ ಪ್ರಗತಿಯನ್ನು ಹೊಂದಿದ 'ರಸಸಿದ್ಧ'ರ ಪರಂಪರೆ ಒಂದು ಇತ್ತು. ಸಂಗೀತ – ನರತ್ಯ, ತಾಳ – ಲಯದಲ್ಲಿ ಲೀನರಾಗಿ ಇದರಲ್ಲಿ ಪಡೆದ ಸಿದ್ಧಿಯ ಫಲವಾಗಿ 'ರಾಗ' – ರಸದ ಕಾಣಿಕೆ ದೊರೆಯಲು ಕಾರಣರಾದವರು, ಈ 'ರಸಾನಂದಿ'ಗಳ ಬಳಗದವರೆ. 'ರಾಗ ರಸ, ಪದ ಕಸ' ಎಂಬ ಒಂದು ಗಾದೆಯಂತೆ, ಪದ್ಯ ರಚನೆಯಲ್ಲಿ, ಕವಿತ್ವದಲ್ಲಿ ಕಥಾರಚನೆಯಲ್ಲಿ, ನಾಟಕ ರಚನೆಯಲ್ಲಿ, ರಸಾಸ್ವಾದನ –ಸಮುದ್ಭೂತ ಆನಂದವನ್ನು ಲೋಕಕ್ಕೆ ನೀಡಿದ ಮೊದಲಿಗರ ಪೀಳಿಗೆಯು ಈ ಸಿದ್ಧಯೋಗಿಗಳಿಂದಲೆ ಪ್ರಾರಂಭವಾಗಿದೆ. 'ರಸೋ ವೈಸಃ' ಎಂಬ ಆನಂದರೂಪ ಬ್ರಹ್ಮಸಿದ್ಧಿಯ ಯೋಗ, ಕುಂಡಲಿನೀ ಯೋಗದ ಪರಮಸಿದ್ಧಿ ಇಂತಿವೆಲ್ಲವೂ, ಆಪ: ರಸ ಸಂಪ್ರದಾಯದ ಶಾಖೋಪಶಾಖೆಗಳ ನಾನಾವಿಧದ ಸಿದ್ಧಿಗಳಗಿವೆ. ಮಹಾಯೋಗಿ ರುದ್ರ – ಶಿವನಿಂದ ಅನೇಕ ಜ್ಞಾನಶಾಖೆಗಳು ಪ್ರಾರಂಭವಾದ ಪವಾಡಕಥೆಗಳು ಇದಕ್ಕೆ ನಿದರ್ಶನ. ಕಮಲಾಸನಸ್ಥ ಸರಸ್ವತಿಯು ನಾನಾ ಕಲಾ – ಸಾಹಿತ್ಯದ ಅಧಿದೇವಿ, ಎಂದರೂ 'ರಸ'ವೆ ಈ ಎಲ್ಲ ವಿದ್ಯೆಗಳ ಉಗಮಸ್ಥಾನವೆಂದು, ಆ ದೇವಿಯು ಪ್ರಾತಿನಿಧಿಕ ಸಂಕೇತಗಳಿಂದಲೂ ಸಿದ್ಧವಾಗುತ್ತದೆ. ಋಗ್ವೇದದೊಳಗಿನ ಸರಸ್ವತಿಯ ವರ್ಣನೆಗಳಲ್ಲಿ

ಈ ದೇವಿಯು ಆಪ: ರಸದ ಪ್ರತೀಕವೆಂಬ ಮಾತು ನಿಃಸಂದಿಗ್ಧವಾಗಿದೆ. ಅಲ್ಲದೆ, ಪುರಾಣಕಾಲದಿಂದ ಪ್ರಚಲಿತವಿರುವ ಪ್ರತಿಮಾಶಾಸ್ತ್ರದಂತೆ ಸರಸ್ವತಿಯು ಶುಭ್ರ - ಪದ್ಮಾಸನಸ್ಥಳೆಂಬ ಸಂಕೇತದಿಂದ ಈ ದೇವಿಯು ಆಪ: ರಸ ಸ್ವರೂಪಿಯಾಗಿರುವುದನ್ನೆ ಸೂಚಿಸಿದಂತಿದೆ. 'ಆಪವೇ ಪುಷ್ಕರ (ಕಮಲ)' ಎಂದು ಶತಪಥ ಬ್ರಾಹ್ಮಣದಲ್ಲಿ ಹೇಳಿದೆ. ಎಂದರೆ ಪುಷ್ಕರ (ಕಮಲ) ಆಸನವೆಂಬ ಸಂಕೇತದಲ್ಲಿ ಈ ದೇವಿಯ ಮೂಲ ಸ್ವರೂಪದ ಸೂಚನೆಯೆ ಇದೆ ಎಂದು ಶಂಬಾ ಜೋಶಿ ಹೇಳುತ್ತಾರೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 3 ಪುಟ. 235

ರಾಕ್ಷಸ

ಪುರಾಣಗಳಲ್ಲಿ ಕಂಡು ಬರುವ ಅಸುರರಲ್ಲ ಶಂಕರರ ಅಸುರರು. ಆತ್ಮಜ್ಞಾನ ಪಡೆಯದ ದೇವತೆಗಳೂ ಕೂಡ ಅಸುರರೇ ಎಂದು ಶಂಕರರು ಭಾಷ್ಯವನ್ನು ಬರೆದಿದ್ದಾರೆ: "ಪರಮಾರ್ಥಭಾವಂ ಅದ್ವಯಂ ಉಪೇಕ್ಷ್ಯ ದೇವಾದಯೋ ಪಿ ಅಸುರಾಃ" ಆಗ ವಿರುದ್ಧವಾದರೂ ಸರಿಯೆಂದು ಹೇಳಬೇಕಾಗುತ್ತದೆ. ಆತ್ಮಜ್ಞಾನ ಪಡೆದ ಅಸುರರೂ ಆಗಬಹುದು.

(ಸುಕುಮಾರ್ ಅಟಿಕ್ಕೋಡ್ ೨೦೦೫ ತತ್ವಮಸಿ ಪುಟ ೧೮೨)

ರಾಜ

ಅರ್ಥವೇದವು ರಾಜನನ್ನು ಪ್ರಪಂಚದ ಅಧಿಪತಿಯಾದ ಭಗವಂತನ ಪ್ರತಿನಿಧಿಯೆಂದು ತಿಳಿಯುತ್ತದೆ. (೭-೮-೩)

(ಶೇಷ ನವರತ್ನ. ೧೯೮೯. ಪು. ೨೪)

ಧರ್ಮ ಪರಿಪಾಲನೆ ಮಾಡುವವನನ್ನು 'ರಾಜನ್' ಎಂದೂ ಅಧರ್ಮ ಪ್ರವರ್ತಕನಾದ ಪ್ರಭುವನ್ನು ವಿಶೃಲನೆಂದೂ ಕರೆಯುತ್ತಾರೆ.

ಧರ್ಮ ಪರಿಪಾಲನೆ ಮಾಡುವವನನ್ನು 'ರಾಜನ್' ಎಂದೂ ಅಧರ್ಮ ಪ್ರವರ್ತಕನಾದ ಪ್ರಭುವನು ವಿಶೃಲನೆಂದೂ ಕರೆಯುತ್ತಾರೆ.

ರಾಜನಿಗೆ ಮೂರು ಗಂಟೆ ಕಾಲ ಮಾತ್ರ ವಿಶ್ರಾಂತಿ. (ಕೌಟಿಲ್ಯನ ಅರ್ಥಶಾಸ್ತ್ರ. ೨೦೧೦. ಪು. ೧೩) ಧರ್ಮ ಸೂತ್ರಗಳಿಗನುಸಾರವಾಗಿ ಕ್ರೋಧ, ಲೋಭಗಳಿಂದ ದೂರನಾಗಿ ಮುಖ್ಯ ನ್ಯಾಯಧೀಶರು ಮತ್ತು ನ್ಯಾಯದಶಿ ಮಂಡಳಿಯ ಸದಸ್ಯರಿಂದ ಕೂಡಿದವನೂ, ಕಾರ್ಯಕಲಾಪದರ್ಶಿ ಯೋಗ್ಯ ಬ್ರಾಹ್ಮಣ ಗಣ ಸಹಿತನೂ, ಶಾಂತ ಚಿತ್ತನೂ ಕಾರ್ಯ ಸರಣಿ ಮತ್ತು ಕಾರ್ಯವಿಧಾನ ಪರಿಶೀಲಿಸುವವನೂ, ನಿಷ್ಪಕ್ಷಪಾತಿಯೂ, ಕುತೂಹಲಕಾರಿಯೂ ಆದ ಶೋತೃವಿನಂತೆ ಇದ್ದುಕೊಂಡು ರಾಜನು ವಿವಾದಗಳನ್ನು ಪರಿಶೀಲಿಸಬೇಕೇ ಹೊರತು ಸಭೆಯಲ್ಲಿ ತಾನೇ ಏನನ್ನೂ ನಿಶ್ಚಯಿಸಬಾರದು.

(ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.2 1971 ಪುಟ. 326) ಇದು ಹಿಂದಿನ ರಾಜಕೀಯ ವ್ಯವಸ್ಥೆಯನ್ನು ಸೂಚಿಸುತ್ತದೆ.

ರಾಜಚಿಹ್ನೆ

ಬಿಳಿಯಕೊಡೆ, ಚಾಮರ, ಸಿಂಹಾಸನ, ಕುಲಧನ, ಮುಕುಟ, ರಾಜದಂಡಗಳೆಂಬ ರಾಜಚಿಹ್ನೆಗಳನ್ನು ಕೊಡಲಾಯಿತು. ಪೂರ್ಣಕುಂಭಗಳು ಎನ್ನುವುದು ಮಂಗಲ ಜಲದಿಂದ ತುಂಬಿದ ಕಲಶಗಳು. ವೇಶ್ಯಾಸ್ತ್ರೀಯರಿಗೆ ಮತ್ತು ಸಾಮಂತ ರಾಜರಿಗೆ ಉಡುಗೊರೆ ನೀಡುವುದು ಮತ್ತು ಸಾಮಂತರಾಜ ಸ್ತ್ರೀಯರು ನೃತ್ಯ ಮಾಡುವುದು ಗಮನಾರ್ಹ. ಚಕ್ರವರ್ತಿಗಳು ಸಾಮಂತ ರಾಜರನ್ನು ಹೇಗೆ ನೋಡುತ್ತಿದ್ದರು ಎಂಬುದಕ್ಕೆ ಇದು ಉದಾಹರಣೆಯಾಗಿದೆ.

ರಾಜಧರ್ಮ

ರಾಜನಲ್ಲಿ ಅಷ್ಟದಿಕ್ಪಾಲರ ಎಲ್ಲ ಗುಣಧರ್ಮಗಳು ಸಮಾವಿಷ್ಟವಾಗಿರುವುದರಿಂದ ಅವನು ಅವರಿಗೆ ಸಮನು ಎನ್ನವುದು ಮನುವಿನ ಅಭಿಪ್ರಾಯ. ಅವನ ಪ್ರಕಾರ ಪ್ರತಿದಿನ ಲಕ್ಷ ಗೋದಾನವುಳ್ಳ ಯಜ್ಞವನ್ನು ಮಾಡಿದ ಫಲವು ರಾಜನಿಗೆ ಧರ್ಮಬದ್ಧವಾದ ಪ್ರಜಾಪಾಲನೆಯಿಂದ ಲಭಿಸುವುದು ಎಂದು ಮನುವು ಹೇಳುತ್ತಾನೆ.

(ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 7–7, 8–307)

ಮೌರ್ಯರ ಕಾಲದಲ್ಲಿ ಪ್ರಭುತ್ವದ ಹತೋಟಿ ರಾಜನು ಧರ್ಮಶಾಸ್ತ್ರಗಳು ವಿಧಿಸಿರುವ ಕಟ್ಟುಕಟ್ಟಳೆಗಳು ಹಾಗೂ ದೇಶದಲ್ಲಿ ಪ್ರಚಲಿತವಿರುವ ರೂಢಿಗಳಿಂದ ಮಾರ್ಗದರ್ಶನ ಪಡೆಯಬೇಕು ಎಂಬುದನ್ನು ಬ್ರಾಹ್ಮಣೀಯ ನ್ಯಾಯಶಾಸ್ತ್ರಗ್ರಂಥಗಳು ಒತ್ತಿ ಒತ್ತಿ ಹೇಳಿವೆ. ವರ್ಣ, ಆಶ್ರಮಗಳ ಆಧಾರದ ಮೇಲಿನ ಸಮಾಜ ವ್ಯವಸ್ಥೆಯು ಅವನತಿಯಾದಾಗ ರಾಜನು ಧರ್ಮವನ್ನು ಮರಳಿ ಸ್ಥಾಪಿಸಬೇಕೆಂದು ಕೌಟಿಲ್ಯ ಹೇಳಿದ್ದಾನೆ. ರಾಜನು ಧರ್ಮಪ್ರವರ್ತಕ ಅಂದರೆ ಸಮಾಜ ವ್ಯವಸ್ಥೆಯನ್ನು ಎತ್ತಿಹಿಡಿಯುವವನು. ಇತರ ಎಲ್ಲ ಕಟ್ಟುಕಟ್ಟಳೆಗಳೆಗಳಿಗಿಂತಲೂ ರಾಜಾಜ್ಞೆಯೇ ಬಲವತ್ತರವಾದುದು ಎಂಬುದನ್ನು ಅಶೋಕನು ತನ್ನ ಶಾಸನಗಳಲ್ಲಿ ಮೇಲಿಂದ ಮೇಲೆ ಒತ್ತಿ ಹೇಳಿದ್ದಾನೆ. ಅಶೋಕನು ಧರ್ಮವನ್ನು ಘೋಷಿಸಿ ಅದರ ಮುಖ್ಯ ತತ್ವಗಳನ್ನು ಜನರಲ್ಲಿ ಪ್ರಸಾರ ಮಾಡಿ, ಅನುಷ್ಠಾನಕ್ಕೆ ತರುವಂತೆ ಮಾಡಲು ದೇಶದಲ್ಲೆಲ್ಲಾ ಅಧಿಕಾರಿಗಳನ್ನು ನಿಯಮಿಸಿದನು. (ಆರ್. ಎಸ್. ಶರ್ಮ ೧೯೯೭. ಪು. ೧೩೯)

'ಧರ್ಮಶೀಲತೆ ಅತಿಕ್ರಾಂತವಾದರೆ ನಾಶ ಮಾಡುತ್ತದೆ. ಧರ್ಮಶೀಲತೆ ಕಾರ್ಯತಃ ಪಾಲಿತವಾದರೆ ರಕ್ಷಿಸುತ್ತದೆ. ಮನುವು ರಾಜಧರ್ಮದ ಕುರಿತು ಹೀಗೆ ಹೇಳಿದ್ದಾನೆ. ಅತಿಕ್ರಾಂತವಾದ ಧರ್ಮಶೀಲತೆ ನಮ್ಮನ್ನು ಆಗಲು ಧರ್ಮಶೀಲತೆಯನ್ನು ಅತಿಕ್ರಮಿಸಬಾರದು. (ಯುಗಯಾತ್ರೀ ಭಾರತೀಯ ಸಂಸ್ಕೃತಿ ಸಂ.2 1971 ಪುಟ. 245)

ರಾಜ ಧೈರ್ಯ

ದೊರೆಗೆ ದಢೂತಿ ದೇಹವಿದ್ದರೆ ಸಾಲದು, ಧೈರ್ಯವೂ ಬೇಕು, ವಿಜಗೀಷುತ್ವ ಇರಬೇಕು, ಪೂರ್ವಾಪರ ಫಲಗಳನ್ನು ಹಣವರಿತು ಹದವರಿತು ಅರಿಯಬಲ್ಲ ವಿವೇಕವೂ ಬೇಕು;

ತನಗೆ ಬರಬೇಕಾದ ಗೆಲುವು ಸ್ವಲ್ಪ ಹೆಚ್ಚು ಕಡಮೆಯಾದಾಗ ಹೆದರಿ ಹಿಂದೆಗೆಯುವ ದೊರೆ ದೊರೆಯಲ್ಲ, ಆತ ಅಯೋಗ್ಯನೇ ಸರಿ. ಬೇರೆಯ ಉಪಾಯಗಳು ಇರುವಾಗ ನೇರವಾಗಿ ಹಗೆಯ ಮೇಲೆ ದಂಡೋಪಾಯವನ್ನು ಕೈಕೊಂಡರೆ ಅದು ಮರವನ್ನು ಕಡಿದು ಮೈಮೇಲೆ ಹಾಕಿಕೊಂಡಂತೆ, ಹಗೆಯ ಒಡ್ಡನ್ನು ಬಡಿದು ಚೂರುಮಾಡಬಲ್ಲ ಕಸುವು ಇರುವ ರಾಜನೇ ಗಟ್ಟಿಗ, ಗೆಲುವಿಗೆ ಈಡು; ತನ್ನ ಮೇಲೆ ಏರಿಬಂದ ಹಗೆಯನ್ನು ತಿರುಗಿ ಏಳದಂತೆ ಮೆಟ್ಟಿಗೆದ್ದ ಎಣೆಯಿಲ್ಲದ ಮಲ್ಲನೂ, ಕಾಳಗದಲ್ಲಿ ಆತನು ಬಳಸಿದ ಬಿಲ್ಲೂ ಸುಭದ್ರವಾಗಿರುವ ಸ್ಥಿತಿಯನ್ನು ನೋಡಿದರೇನೇ ಅವನೆಂತಹ ಅಜೇಯ ವೀರನೆಂಬುದು ತಾನೇ ಸ್ಪಷ್ಟವಾಗುತ್ತದೆ. ಪ್ರಭುಶಕ್ತಿಯೂ ಜತೆಗೆ ಮಂತ್ರಶಕ್ತಿಯೂ ರಾಜನಿಗಿರಬೇಕು; ಹೊರಗಣ ಹಗೆಗಳನ್ನು ಅಡಗಿಸುವುದು ಸುಲಭವಾದರೂ ಒಳಗಿರುವ ಅರಿಷಡ್ ವರ್ಗವನ್ನು ಹತೋಟಿಯಲ್ಲಿಡುವುದು ಕಡುಕಷ್ಟವೆಂಬುದು ಮನನೀಯವಾದ ಮಾತು(ಭಾಸನ ಪ್ರತಿಮಾ ನಾಟಕದಲ್ಲೂ ಅನ್ಯತ್ರವೂ ಇದಕ್ಕೆ ಸಂವಾದಿಯಾದ ಹೇಳಿಕೆಗಳಿವೆ). ಒಮ್ಮೊಮ್ಮೆ ಬಂಧುಗಳ ಮಾತು ಕೇಳುವುದೊ, ಸಚಿವರ ಸಲಹೆ ಸ್ವೀಕರಿಸುವುದೊ ಎಂಬುದು ತಿಳಿಯದೆ ಒಡೆಯನಿಗೇ ಪೇಚಿಗೆ ಸಿಕ್ಕಿದಂತಾಗಿ ಒಳತೋಟಿ ಬರುತ್ತದೆ.

ರಾಜನ ಕರ್ತವ್ಯ

ರಾಜ್ಯಾರ್ಜನೆ, ರಾಜ್ಯರಕ್ಷಣೆ, ರಾಜ್ಯವಿಸ್ತರಣೆ ಮತ್ತು ಇದರ ಅನುಭವ ರಾಜನ ಕರ್ತವ್ಯಗಳು. ವಿದ್ವಾಂಸರಲ್ಲಿ ವಿದ್ಯೆ ಎಂಬ ಒಂದು ಗುಪ್ತಧನವಿರುತ್ತದೆ–ಅದು ಲೋಕದ ಹಣಕ್ಕಿಂತ ಉತ್ಕರ್ಷ ಹೊಂದಿರುತ್ತದೆ. ಯಾರಿಗೂ ಅದು ತೋರದಿರುವುದರಿಂದ ಕಳ್ಳ ಕಾಕರಿಂದ ಅಪಹರಿಸಲು ಶಕ್ಯವಿಲ್ಲ. ಕಾಲತ್ರಯದಲ್ಲಿಯೂ ಅದು ಮಂಗಲಕರವಾಗಿ ಸುಖವನ್ನುಂಟು ಮಾಡುತ್ತದೆ. ವಿದ್ಯಾರ್ಥಿಗಳಿಗೆ ಎಷ್ಟು ದಾನ ಮಾಡಿದರೂ ಇತರ ಧನದಂತೆ ಅದು ಖರ್ಚಾಗುವುದಿಲ್ಲ, ಮತ್ತೂ ವೃದ್ಧಿಯಾಗುತ್ತದೆ. ಪ್ರಲಯ ಕಾಲದಲ್ಲಿಯೂ ಇದಕ್ಕೆ ನಾಶವಿಲ್ಲ. ಇಂಥಹ ಅಮೂಲ್ಯ ಧನ ಸಂಪತ್ತಿಯನ್ನು ಹೊಂದಿದ್ದಾರೆಂದು, ರಾಜರೇ ನೀವು ವಿದ್ವಾಂಸರನ್ನು ಗರ್ವದಿಂದ ಕಡೆಗಣಿಸಬೇಡಿ, ಅವರನ್ನು ಗೌರವಿಸಿ ನೀವು ಪ್ರಶಂಸಾಪಾತ್ರರಾಗಿರಿ. ವಿದ್ವಾಂಸರೊಡನೆ ಸ್ಪರ್ದಿಸಲು ಯಾರು ಸಮರ್ಥರಾಗಿರುವುದಿಲ್ಲ. ಆದುದರಿಂದ ಯಾವಾಗಲೂ ಅವರನ್ನು ಪೂಜಿಸಿರಿ(ಭರ್ತೃಹರಿಯ ನೀತಿಶತಕ,1974–ಶ್ಲೋಕ–1). (ಮಾನಸೋಲ್ಲಾಸ–ಪುಟ. 102)

ರಾಜನು ಶಿಕ್ಷಕನಾಗಿರುವುದರಿಂದ ಅವನಿಗೆ ರಾಜನೀತಿ ಕರ್ಮಗಳಲ್ಲಿ ಅಶೌಚ ದೋಷವಿಲ್ಲ. ಅದರಂತೆ ಚಾಂದ್ರಾಯಣಾದಿ ವ್ರತಗಳಲ್ಲಿ ನಿರತರಾದ ವ್ರತಿಗಳಿಗೂ ಹಾಗೂ ಯಾಗಗಳಲ್ಲಿ ಪ್ರವೃತ್ತರಾದ ಸತ್ರಿ(ದೀಕ್ಷಿತ)ಗಳಿಗೂ ಅಶೌಚದೋಷವಿಲ್ಲ. ಏಕೆಂದರೆ ಈ ಎಲ್ಲರೂ ಲೋಕಕಲ್ಯಾಣಕಾರಿಯಾದ ವಿಶೇಷ ಕರ್ಮಗಳಲ್ಲಿ ನಿರತರಾಗಿರುವರು. (ಮನುಸ್ಮೃತಿ 5–93)

ವೇದಸಂಸ್ಕಾರವಾದ ಉಪನಯನ ಸಂಸ್ಕಾರವನ್ನು ಹೊಂದಿದವನು ರಾಜನಾಗಿ ಪ್ರಜಾರಕ್ಷಣ ಕಾರ್ಯವನ್ನು ನ್ಯಾಯವಾಗಿ ಮಾಡಬೇಕು. (ಮನುಸ್ಮೃತಿ) ಊರಿನಲ್ಲಿ ರಾಜನಿಲ್ಲದಿದ್ದರೆ ಎಲ್ಲರಿಗೂ ಪರಸ್ಪರ ಭಯವು. ಇಂತಹ ಆಪತ್ತಿನ ರಕ್ಷಣೆಗೆ ರಾಜನು ಬೇಕಾಗುವನು. (ಮನುಸ್ಮೃತಿ)

ಆತ್ಮಾಯುತ್ತನಾದ ರಾಜನಿಗೆ ಶ್ರೇಷ್ಠನಾಗಿರುತ್ತಾನೆ. ಉಭಯುತ್ತನಾದ ರಾಜನಿಗೆ ಮಧ್ಯಮನೆಂದು ಕರೆಯುತ್ತಾರೆ. ಅಂದರೆ ಅವನು ಮಂತ್ರಿಗಳನ್ನು ಅವಲಂಬಿಸುತ್ತಾನೆ. ಕೇವಲ ಮಂತ್ರಿಗಳನ್ನು ಮಾತ್ರ ಅವಲಂಬಿಸುವ ರಾಜನನ್ನು ಕನಿಷ್ಠನೆಂದು ಕರೆಯುತ್ತಾರೆ. (ಮಾನಸೋಲ್ಲಾಸ–2–687)

ಸಾಮ, ದಾನ, ಭೇದ, ದಂಡ ರಾಜನಿಗೆ ಬೇಕಾಗಿರುವುದು. ರಾಜನಿಗೆ ಇರಬೇಕಾದ ಆರು ಗುಣಗಳು ಹೀಗಿವೆ: ಸಂಧಿ, ವಿಗ್ರಹ, ಯಾನ, ಆಸನ, ಸಂಶಯ ಮತ್ತು ದ್ವೈಧೀಭಾವ. ಇವುಗಳನ್ನು ರಾಜನ ಷಡ್ಗುಣಗಳೆಂದು ಕರೆಯುತ್ತಾರೆ. ರಾಜನೀತಿ, ಸಕಲ ಶಾಸ್ತ್ರದ ಪ್ರಾವಿಣ್ಯತೆ, ಬ್ರಾಹ್ಮಣ ಜನ್ಮ, ನಿಶಿತಮತಿ, ಉದಾರತೆ, ಧೀರತೆ, ಪ್ರಭುಶಕ್ತಿ, ಮಂತ್ರಶಕ್ತಿಯು ರಾಜನಿಗಿರಬೇಕು. ಸಂಧಿ, ವಿಗ್ರಹ, ಯಾನ, ಆಸನ, ದ್ವೈಧ, ಸಂಶ್ರಯಗಳೆಂಬ ಆರು ಗುಣಗಳನ್ನು ರಾಜನು ಹೊಂದಿರಬೇಕು. ಧರ್ಮ, ಅರ್ಥ, ಕಾಮವೆಂಬ ತ್ರಿವರ್ಗಗಳಲ್ಲಿ ಶುದ್ಧಿಯನ್ನು ಕಾಪಾಡಬೇಕು. ರಾಜನು ಶಿಕ್ಷಕನಾಗಿರುವುದರಿಂದ ಅವನಿಗೆ ರಾಜನೀತಿ ಕರ್ಮಗಳಲ್ಲಿ ಅಶೌಚ ದೋಷವಿಲ್ಲ. ಅದರಂತೆ ಚಾಂದ್ರಾಯಣಾದಿ ವ್ರತಗಳಲ್ಲಿ ನಿರತರಾದ ವ್ರತಿಗಳಿಗೂ ಹಾಗೂ ಯಾಗಗಳಲ್ಲಿ ಪ್ರವೃತ್ತರಾದ ಸತ್ರಿ(ದೀಕ್ಷಿತ)ಗಳಿಗೂ ಅಶೌಚದೋಷವಿಲ್ಲ. ಏಕೆಂದರೆ ಈ ಎಲ್ಲರೂ ಲೋಕಕಲ್ಯಾಣಕಾರಿಯಾದ ವಿಶೇಷ ಕರ್ಮಗಳಲ್ಲಿ ನಿರತರಾಗಿರುವರು. ವೇದಸಂಸ್ಕಾರವಾದ ಉಪನಯನ ಸಂಸ್ಕಾರವನ್ನು ಹೊಂದಿದವನು ರಾಜನಾಗಿ ಪ್ರಜಾರಕ್ಷಣ ಕಾರ್ಯವನ್ನು ನ್ಯಾಯವಾಗಿ ಮಾಡಬೇಕು. ಊರಿನಲ್ಲಿ ರಾಜನಿಲ್ಲದಿದ್ದರೆ ಎಲ್ಲರಿಗೂ ಪರಸ್ಪರ ಭಯವು. ಇಂತಹ ಆಪತ್ತಿನ ರಕ್ಷಣೆಗೆ ರಾಜನು ಬೇಕಾಗುವನು. ರಾಜ್ಯಾರ್ಜನೆ. ರಾಜ್ಯರಕ್ಷಣೆ, ರಾಜ್ಯವಿಸ್ತರಣೆ, ಮತ್ತು ಇದರ ಅನುಭವ ರಾಜನ ಕರ್ತವ್ಯಗಳು ಎಂದು ಕೌಟಿಲ್ಯನ ಅಭಿಪ್ರಾಯ. ಮೌರ್ಯರ ಕಾಲದಲ್ಲಿ ಪ್ರಭುತ್ವದ ಹತೋಟಿ ರಾಜನು ಧರ್ಮಶಾಸ್ತ್ರಗಳು ವಿಧಿಸಿರುವ ಕಟ್ಟುಕಟ್ಟಳೆಗಳು ಹಾಗೂ ದೇಶದಲ್ಲಿ ಪ್ರಚಲಿತವಿರುವ ರೂಢಿಗಳಿಂದ ಮಾರ್ಗದರ್ಶನ ಪಡೆಯಬೇಕು ಎಂಬುದನ್ನು

ಬ್ರಾಹ್ಮಣೀಯ ನ್ಯಾಯಶಾಸ್ತ್ರ ಗ್ರಂಥಗಳು ಒತ್ತಿ ಒತ್ತಿ ಹೇಳಿವೆ. ವರ್ಣ, ಆಶ್ರಮಗಳ ಆಧಾರದ ಮೇಲಿನ ಸಮಾಜ ವ್ಯವಸ್ಥೆಯು ಅವನತಿಯಾದಾಗ ರಾಜನು ಧರ್ಮವನ್ನು ಮರಳಿ ಸ್ಥಾಪಿಸಬೇಕೆಂದು ಕೌಟಿಲ್ಯ ಹೇಳಿದ್ದಾನೆ. ರಾಜನು ಧರ್ಮಪ್ರವರ್ತಕ ಅಂದರೆ ಸಮಾಜ ವ್ಯವಸ್ಥೆಯನ್ನು ಎತ್ತಿಹಿಡಿಯುವವನು. ಇತರ ಎಲ್ಲ ಕಟ್ಟುಕಟ್ಟಳೆಗಳಿಗಿಂತಲೂ ರಾಜಾಜ್ಞೆಯೇ ಬಲವತ್ತರವಾದುದು ಎಂಬುದನ್ನು ಅಶೋಕನು ತನ್ನ ಶಾಸನಗಳಲ್ಲಿ ಮೇಲಿಂದ ಮೇಲೆ ಒತ್ತಿ ಹೇಳಿದ್ದಾನೆ. ಅಶೋಕನು ಧರ್ಮವನ್ನು ಘೋಷಿಸಿ ಅದರ ಮುಖ್ಯ ತತ್ವಗಳನ್ನು ಜನರಲ್ಲಿ ಪ್ರಸಾರ ಮಾಡಿ, ಅನುಷ್ಠಾನಕ್ಕೆ ತರುವಂತೆ ಮಾಡಲು ದೇಶದಲ್ಲೆಲ್ಲಾ ಅಧಿಕಾರಿಗಳನ್ನು ನಿಯಮಿಸಿದನು.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 5–93
ಎಂ. ವಿ. ಕೃಷ್ಣರಾವ್ 1953 ಕೌಟಿಲ್ಯ ಪುಟ. 16
ಆರ್. ಎಸ್. ಶರ್ಮ 2007 ಪ್ರಾಚೀನ ಭಾರತ ಪುಟ. 139

ರಾಜಪ್ರಶಂಸೆ

ಬೇಡಿದವರಿಗೆ ದಾನ ಕೊಡುವುದು; ಭಯದಿಂದ ಶರಣಾದವರನ್ನು ಕಾಪಾಡುವುದು ಶ್ರೇಷ್ಠ ಕ್ಷತ್ರಿಯರ ಧರ್ಮವಾಗಿದೆ. ಕೊಡುವುದು ಮತ್ತು ಕಾಪಾಡುವುದು ರಾಜನಾದವನ ಗುಣ. ಅವನಲ್ಲಿ ಕೊಂಕಾಗಲಿ ಮಾತಿನಲ್ಲಿ ಹುಸಿಯಾಗಲಿ ಇಲ್ಲವೆಂದು ರನ್ನ ಹೇಳುತ್ತಾನೆ. ಮೇಲಿನ ಮಾತುಗಳಲ್ಲಿ ರಾಜನ ಲಕ್ಷಣಗಳನ್ನು ಹೇಳಲಾಗಿದೆ. ರಾಜನ ಪ್ರಮುಖ ಕರ್ತವ್ಯವೆಂದರೆ ಆರ್ತರನ್ನು ರಕ್ಷಿಸುವುದು ದುಷ್ಟರನ್ನು ನಿಗ್ರಹಿಸುವುದು. ಆದುದರಿಂದ ರಾಜನಿಗೆ 'ಪ್ರಜಾಪತಿ' ಎಂಬ ಹೆಸರು ಇದೆ. ಈ ರೀತಿಯ ರಾಜದಂಡದ ಪರಿಕಲ್ಪನೆಯು ಶಿಕ್ಷೆಯ ಮೂಲಕ ಎಲ್ಲವನ್ನು ಹತ್ತಿಕ್ಕಿತ್ತು. ರಾಜನ ರಾಜಕೀಯ ವ್ಯವಸ್ಥೆಯಲ್ಲಿ ಈ ರಾಜದಂಡವು ಪ್ರಧಾನವಾದ ಪಾತ್ರವನ್ನು ವಹಿಸುತ್ತಿತ್ತು. ಈ ರಾಜದಂಡದ ಪರಿಭಾಷೆಯು ಮತ್ತು ಅದರ ಬಳಕೆಯು ಒಬ್ಬ ವ್ಯಕ್ತಿಗೆ ಮೀಸಲಾದ ಪ್ರಶ್ನೆಯಾದರೂ ಭಾರತೀಯ ಪಾರಂಪರಿಕ ಸಮಾಜದಲ್ಲಿ ಅದು ಅನಧಿಕೃತವಾಗಿತ್ತು. ಈ ರಾಜದಂಡದ ಎದುರಿಗೆ ಪುರುಷನಾಗಲಿ, ವರ್ಗವಾಗಲೀ, ಜಾತಿಯಾಗಲೀ, ಮುಖ್ಯವಲ್ಲ. ರಾಜದಂಡವು ಎಲ್ಲರನ್ನೂ ಹಿಡಿತದಲ್ಲಿಟ್ಟುಕೊಳ್ಳುವ ಒಂದು ಸಾಧನ ಮಾತ್ರ. ವಸಾಹತುಶಾಹಿ ಅನುಭವದಲ್ಲಿ ಈ ಪರಿಭಾಷೆಗಳು ಬದಲಾದವು.

ರಥ, ಧ್ವಜ, ಮಹಾರಣವಾದ್ಯ (ಯುದ್ಧದ ಸಂದರ್ಭದಲ್ಲಿ ಮೊಳಗುವ ವಾದ್ಯ,) ಚಕ್ರಾಯುಧ, ದೈವಜ್ಞಾನ, ಶ್ವೇತಛತ್ರ ಮೊದಲಾದವುಗಳು ರಾಜಚಿಹ್ನೆಗಳು. ಕುಲಧನ ಮತ್ತು ರಾಜಚಿಹ್ನೆಗಳನ್ನು ರಾಜನು ಕೊನೆಯವರೆಗೂ ಕಾಪಾಡಿಕೊಂಡು ಬರಬೇಕೆಂಬುದು ಇಲ್ಲಿಯ ವಾದವಾಗಿದೆ.

ವಿವರಗಳಿಗೆ ನೋಡಿ: Ranajith Guha 1998 Dominance without hegemony

ರಾಜಭೋಗ

ರಾಜಭೋಗಗಳನ್ನು ಈ ರೀತಿಯಾಗಿ ಗುರುತಿಸುತ್ತಾರೆ. ತಾಂಬೂಲ, ವಿಲೇಪ, ವಸ್ತ್ರ, ಮಾಲೆಗಳ ಭೋಗ, ಭೂಷಣ, ಆಸನಗಳ ಭೋಗ, ಚಾಮರ–ಆಸ್ಥಾನಗಳ ಭೋಗ, ಪುತ್ರರ ಉಪಭೋಗ, ಭೋಜನ–ಜಲಪಾನ ಭೋಗ, ಪಾದದ ಅಭ್ಯಂಗ ಭೋಗ, ಯಾನ–ಛತ್ರ ಹಾಗೂ ಶಯನ ಭೋಗ ಮುಂತಾದ ಇಪ್ಪತ್ತು ಭೋಗಗಳಿವೆ. (ಮಾನಸೋಲ್ಲಾಸ–1–23,24, 25)

ರಾಜರ ಗುಣಸ್ವಭಾವ

'ರಾಷ್ಟ್ರಿಕ', ಅಧಿಕಾರ' ಎಂಬರ್ಥದ ಪದ. 'ರಾಜ್'; ರಾಜನೆಂದರೆ ಆಳುವವನು, ಹೊಳೆಯುವವನು, 'ರಾಜ್'ದಿಂದ ಸಾಧಿಸಿದ 'ರಾಷ್ಟ್ರಿಕ' ಇದು ಆಳುವ–ಅಧಿಕಾರಿ ಎಂಬರ್ಥವುಳ್ಳುದಾಗಿದೆ ಎಂದು ಶಂಬಾ ಹೇಳುತ್ತಾರೆ. ಐತರೇಯ ಬ್ರಾಹ್ಮಣದಲ್ಲಿ 'ರಾಜ' ಎಂಬರ್ಥಲ್ಲಿ 'ಭೋಜ' ಬಂದಿದೆ; 'ಭೌಜ್ಯ' ರಾಜಪದವಿ. ಅಧಿಕಾರಿ' ಎಂಬರ್ಥದಲ್ಲಿ 'ರಾಷ್ಟ್ರೀಕ'ಕ್ಕಿಂತ; 'ಭೋಜ' ಇದುವೆ ಪ್ರಾಚೀನ. ರಾಷ್ಟ್ರಿಕ (ರಿಸ್ಟಿಕ) – ಭೋಜಕ ಎಂದರೆ ಅಧಿಕಾರಿಗಳು ಎಂದು ಅರ್ಥವಾಯಿತು. 'ರಾಷ್ಟ್ರಿಕ' ಅಥವಾ 'ಭೋಜಕ' ಇವೆರಡರಲ್ಲೂ ನಿಜವಾಗಿ ಜನ – ಪಂಗಡ ಎಂಬ ಭಾವವು ಇಲ್ಲ. ಆದರೂ ಇವು ಸಮೂಹ, ಪಂಗಡ, ಜನವಾಚಕ ಲಕ್ಷಣಾರ್ಥ ಪಡೆದಿವೆ! 'ಭೋಜಕ' ಪಾಣಿನಿಯಲ್ಲಿದೆ. ಭೋಜನಕ್ಕೆ ಸಂಬಂಧಿಸಿದ ಅರ್ಥಗಳು ಭೋಜ ಮತ್ತು ಭೋಜಕದಲ್ಲಿವೆ. ಭೋಗಿ, ಭೋಗಿಸುವವನು – ಆಳುವವನು ಎಂಬ ಭಾವಾರ್ಥಗಳು ಇಲ್ಲಿ ಗಮನಕ್ಕೆ ಬರುತ್ತವೆ. ಇದಕ್ಕೆ ಪ್ರತಿಯಾಗಿ, ದೈನ್ಯದಿಂದ ಕೈಯೊಡ್ಡಿ ನಿಂತವನು, ಆಜ್ಞೆಗಾಗಿ ಕಾಯುತ್ತಿರುವವನು ಎಂಬರ್ಥವೂ ಇಲ್ಲಿ ಇಲ್ಲದಿಲ್ಲ; 4 – 5ನೆಯ ಶತಮಾನದ ಸುಮಾರಿನ ಪ್ರಯೋಗ ದೊರೆಯುತ್ತದೆ. 'ಜೀ' ಎನೆ ಧರಿತ್ರಿಯಂ ಬೇಡಿಕೊಳ್ಳದೆ' ಎಂಬ ಪ್ರಯೋಗ ಪಂಪನಲ್ಲಿದೆ. ಭೋ – ಪರಾಕು; ಜೀ – ಸ್ವಾಮೀ. ಬೋ – ಜೀ ಎಂದು ಬಾಳುವ ಜನ: ಭೋಜಿಗಳು – ಭೋಜರು, ಎಂಬ ಅರ್ಥದ ಒಂದು ಶಕ್ಯತೆ ಹೀಗಿದೆ. ಭೋಜಿಗಳೂ 'ಮಹಾರಾಷ್ಟ್ರಿಕ'ರಂತೆ ಈ ನಾಡವರೆ (Native) ಆಗಿರಬೇಕು.

ವಿವರಗಳಿಗೆ ನೋಡಿ: ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು ೨೦೧೦ ಕೌಟಲೀಯ ಅರ್ಥಶಾಸ್ತ್ರ ಪುಟ. ೧೩
ಶೇಷ ನವರತ್ನ ೧೯೮೯ ನಾಲ್ಕು ವೇದಗಳು ಪುಟ. ೨೪
ಶಂಬಾ ಜೋಶಿ ೧೯೯೯ ಸಂಪುಟ. ೩ ಹಾಲುಮತ ದರ್ಶನ ಪು. ೮೧, ೮೨

ರಾಜರ ವಿನೋದಗಳು

ಶಸ್ತ್ರವಿನೋದ, ಶಾಸ್ತ್ರ ವಿನೋದ, ಗಜವಿನೋದ, ಅಶ್ವವಿನೋದ,ಅಂಕ ವಿನೋದ, ಮಲ್ಲ ವಿನೋದ, ಹುಂಜ ವಿನೋದ, ಲಾವಕ್ಕಿ ವಿನೋದ, ತಿತ್ತಿರವಿನೋದ, ಕೋಣಗಳ

ಕಾಳಗ, ಪಾರಿವಾಳಗಳ ವಿನೋದ, ಶ್ವಾಣ ವಿನೋದ, ಗಿಡುಗ ಮೀನು ಜಿಂಕೆಗಳ ಕ್ರೀಡಾ ವಿನೋದ, ಗೀತಾ ವಿನೋದ, ವಾದ್ಯ ವಿನೋದ, ನೃತ್ಯವಿನೋದ, ಕಥಾ ವಿನೋದ, ಚಮತ್ಕಾರ ವಿನೋದ ಹೀಗೆ ಇಪ್ಪತ್ತು ಬಗೆಯ ವಿನೋದಗಳಿವೆ. (ಮಾನಸೋಲ್ಲಾಸ_1-26,27,28)

ರಾಜವಿದ್ಯೆ

ಗೀತೆ ತನ್ನ ಜ್ಞಾನ ಅಥವಾ ಉಪನಿಷತ್ ತತ್ವವನ್ನು ಕ್ಷತ್ರಿಯ ರಹಸ್ಯವೆಂದು, 'ರಾಜವಿದ್ಯೆ'ಯೆಂದು ಘೋಷಿಸಿದೆ. ಇದು ಕ್ಷತ್ರಿಯ ವಂಶಗಳಲ್ಲಿಯೇ ರೂಪವಾಗಿದೆಯೆಂದು ರಾಜ ಗುಹ್ಯವಾದುದೆಂದು ಹೇಳಲಾಗಿದೆ.

(ಭಗವತ್ ಶರಣ ಉಪಾಧ್ಯಾಯ. ೨೦೦೪. ಪು. ೧೭)

ರಾಜ್ಯ

ಋಗ್ವೇದದಲ್ಲಿ ಸಾಮ್ರಾಜ್ಯ, ಭೌಜ್ಯ, ಸ್ವಾರಾಜ್ಯ, ವೈರಾಜ್ಯ, ಪಾರಮೇಷ್ಠ್ಯರಾಜ್ಯ, ಅಧಿಪತ್ಯಮಯ ಸಮಂತಪರ್ಯಾಯೀ ಎಂದು ಎಂಟು ಪ್ರಕಾರದ ರಾಜ್ಯಗಳನ್ನು ಕುರಿತು ಉಲ್ಲೇಖವಿದೆ.

೧. ಸಾಮ್ರಾಜ್ಯ – ಆಚಾರ್ಯಋಷಿಗಳ ಅನುಸಾರ ವಿಸ್ತಾರವಾದ ಭೂಪ್ರದೇಶವನ್ನು ವಶಮಾಡಿಕೊಂಡು ರಾಜನಾದವನು ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಬೇಕಾಗುತ್ತಿತ್ತು. ಅಧಿಕ ಭೂಭಾಗವನ್ನು ತನ್ನ ಆಡಳಿತದ ಪ್ರಭಾವವಲಯದಲ್ಲಿ ಸಮೀಕರಿಸುವ ಸಾಹಸ ಮಾಡಿ, ಅನ್ಯ ರಾಜರನ್ನೆಲ್ಲ ಪರಾಸ್ತಗೊಳಿಸಿ ಅವರನ್ನು ಮಾಂಡಲೀಕರನ್ನಾಗಿ ಮಾಡಿಕೊಳ್ಳುವುದಾಗಿತ್ತು. 'ಕೃಣ್ವಂತೋ ವಿಶ್ವಮ್ ಆರ್ಯಮ್' ಎಂಬ ಋಗ್ವೇದದ ಮಾತನ್ನಿಲ್ಲಿ ಅರ್ಥೈಸಬಹುದು.

೨. ಭೌಜ್ಯ – ಎಂದರೆ, ವಿಶಿಷ್ಟ ಸೀಮಾರೇಖೆಗಳಿಂದ ಮರ್ಯಾದಿತವಾದ ಭೂಭಾಗವೆಂದೂ, ಪ್ರಜೆಗಳ ಸಮೃದ್ಧಿಯನ್ನು, ಸಂರಕ್ಷಣೆಯನ್ನು ಸಮರ್ಥವಾಗಿ ಮಾಡಬಲ್ಲ ಪ್ರಜಾಹಿತದ ರಾಜ್ಯವೆಂದೂ ಅರ್ಥಯಿಸಬೇಕು.

೩. ಸ್ವರಾಜ್ಯ – ಇಲ್ಲಿ 'ಸ್ವರಾಜ್ಯ'ದ, ಕಲ್ಪನೆ ಇದೆ. ಆಡಳಿತವು ವಿದೇಶೀ ಹಸ್ತಕ್ಷೇಪದಿಂದ ಮುಕ್ತವಾಗಿರಬೇಕು ಎಂಬ ಅಭಿಪ್ರಾಯ ಅಂತರ್ನಿತವಾದಂತಿದೆ.

೪. ವೈರಾಜ್ಯ – ವಿಗತರಾಜಕಂ ವೈರಾಜ್ಯಂ ಎಂದರೆ ಇಲ್ಲಿ ಶಾಸಕನಾದ ಒಬ್ಬನೇ ಸರ್ವಾಧಿಕಾರಿಯಾದ ಪ್ರಭುವಿಗೆ ಅಸ್ಪದವಿಲ್ಲ. ಎಲ್ಲ ಶಾಸನವೂ ಜನತೆಯ ಅಭೀಷ್ಟದಂತೆ ನಡೆಯಬೇಕು.

೫. ಪಾರಮೇಷ್ಠರಾಜ್ಯ – ಪರಮೇಷ್ಠಿ ಎಂದರೆ ಪ್ರಜಾಪತಿ ಅಥವಾ ಪರಮಾತ್ಮ. ಎಲ್ಲವೂ ಅವನ ರಾಜ್ಯವೇ ಆಗಿರುವಾಗ ವ್ಯಕ್ತಿಯ ಅಹಂಕಾರದ ಆಡಳಿತ ಸಲ್ಲದು.

೬. ಮಹಾರಾಜ್ಯ – ಅಂದರೆ ಅನೇಕ ಸಣ್ಣ ಸಣ್ಣ ಘಟಕಗಳು ಕೂಡಿ ಒಂದು ವಿಶಾಲವಾದ ಗಣತಂತ್ರ ಪ್ರಜಾರಾಜ್ಯವಾಗುವುದು ಎಂದರ್ಥ. ಅನೇಕ ರಾಜ್ಯಗಳು ಕೂಡಿ ಒಂದು ಮಹಾರಾಜ್ಯವಾಗುತ್ತದೆ.

೭. ಆಧಿಪತ್ಯಮಯ – ಅಂದರೆ ರಾಷ್ಟ್ರದ ಸುಭದ್ರತೆಗೆ ಅವಶ್ಯವಾದ ಆಧಿಪತ್ಯವನ್ನು ಕೆಲವು ಸಮರ್ಥರು ನಡೆಸಬೇಕೆಂಬುದನ್ನು ಇದು ಹೇಳುತ್ತದೆ.

೮. ಸಮಂತಪರ್ಯಾಯೀ – ಮಹಾರಾಜ್ಯದಲ್ಲಿ ಅಂತರ್ಗತವಾಗಿರುವ ವಿವಿಧ ಘಟಕಗಳ ಆಡಳಿತವು ಸಾಮಂತ ಅಧಿಕಾರಿಗಳ ಕಡೆಗೆ ಇರಬೇಕು. (ಶೇಷನವರತ್ನ)

ಇದಲ್ಲದೆ ಜನರಾಜ್ಯ, ಗಣರಾಜ್ಯ ಮುಂತಾದುವುಗಳ ಉಲ್ಲೇಖವಿದೆ. ಋಗ್ವೈದಿಕ ರಾಜನೀತಿಯು ಗಣರಾಜ್ಯವಾದಿಯೂ, ಪ್ರಜಾಪ್ರಭುತ್ವವಾದಿಯೂ ಆಗಿದ್ದು ಜನತೆಯ ಅಪೇಕ್ಷೆಯಂತೆ ಶಾಸನದ ಸೂತ್ರಗಳು ಸಾಗಬೇಕೆಂಬುದನ್ನು ಹೇಳಲಾಗಿದೆ ಎಂದು ನಿರ್ಣಯಿಸಬಹುದು. ಧರ್ಮ ಸೂತ್ರಗಳಿಗನುಸಾರವಾಗಿ ಕ್ರೋಧ, ಲೋಭಗಳಿಂದ ದೂರನಾಗಿ ಮುಖ್ಯ ನ್ಯಾಯಧೀಶರು ಮತ್ತು ನ್ಯಾಯದರ್ಶಿ ಮಂಡಳಿಯ ಸದಸ್ಯರಿಂದ ಕೂಡಿದವನೂ, ಕಾರ್ಯಕಲಾಪದರ್ಶಿ ಯೋಗ್ಯ ಬ್ರಾಹ್ಮಣ ಗಣ ಸಹಿತನೂ, ಶಾಂತಚಿತ್ತನೂ ಕಾರ್ಯ ಸರಣಿ ಮತ್ತು ಕಾರ್ಯವಿಧಾನ ಪರಿಶೀಲಿಸುವವನೂ, ನಿಷ್ಪಕ್ಷಪಾತಿಯೂ, ಕುತೂಹಲಕಾರಿಯೂ ಆದ ಶೋತೃವಿನಂತೆ ಇದ್ದುಕೊಂಡು ರಾಜನು ವಿವಾದಗಳನ್ನು ಪರಿಶೀಲಿಸಬೇಕೇ ಹೊರತು ಸಭೆಯಲ್ಲಿ ತಾನೇ ಏನನ್ನೂ ನಿಶ್ಚಯಿಸಬಾರದು.

ಭೂಮಿಯನ್ನು ರತ್ನಗರ್ಭಾ ಎಂದು ಕರೆಯುತ್ತಾರೆ. ರಾಜನು ಧನಧಾನ್ಯ ರತ್ನಾದಿಗಳನ್ನು ಅದರಿಂದ ಪಡೆಯಬೇಕಾದರೆ ಮೊದಲು ತನ್ನ ಪ್ರಜೆಗಳನ್ನು ಚೆನ್ನಾಗಿ ರಕ್ಷಿಸಬೇಕು. ಹಸುವನ್ನು ಕರೆಯಬೇಕಾದರೆ ಅದರ ಮುಂದೆ ಕರುವಿರಬೇಕು. ಚೆನ್ನಾಗಿ ಹಾಲು ಕರೆಯಬೇಕೆಂದು ಗೋಪನು ಕರುವಿನ ರಕ್ಷಣೆಯನ್ನು ಮಾಡುತ್ತಾನೆ. ಭೂಮಿಯೆಂಬ ಧೇನುವಿಗೆ ಪ್ರಜೆಗಳೇ ಕರುಗಳು. ಪ್ರಜೆಗಳು ಸುಖವಾಗಿದ್ದರೆ ಭೂಮಿಯಲ್ಲಿ ಸಸ್ಯಾದಿ ಸಮೃದ್ಧಿಯುಂಟಾಗುತ್ತದೆ. ಹೀಗೆ ಚೆನ್ನಾಗಿ ಲೋಕ ಪರಿಪಾಲನೆ ಮಾಡುತ್ತಾ ಭೂಮಿಯಿಂದ ರತ್ನಾದಿಗಳನ್ನು ಅಪೇಕ್ಷಿಸಿದರೆ ಕಲ್ಪವೃಕ್ಷದಂತೆ ಅದು ನಾನಾರೂಪ ಫಲವನ್ನು ಕೊಡುತ್ತದೆ.

ಧರ್ಮ ಪರಿಪಾಲನೆ ಮಾಡುವವನನ್ನು 'ರಾಜನ್' ಎಂದೂ ಅಧರ್ಮ ಪ್ರವರ್ತಕನಾದ ಪ್ರಭುವನ್ನು ವಿಠ್ಠಲನೆಂದೂ ಕರೆಯುತ್ತಾರೆ.

ವಿವರಗಳಿಗೆ ನೋಡಿ: ಡಾ.ಎಂ ಚಿದಾನಂದಮೂರ್ತಿ ೨೦೦೮ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ. ೫೧೮

ಡಾ. ವಿ.ಎಲ್.ಪಾಟೀಲ್ ೨೦೦೯ ವಡ್ಡಾರಾಧನೆ ಜಾನಪದೀಯ ಅಧ್ಯಯನ ಪುಟ. ೧೯೨-೧೯೩

ಶೇಷನವರತ್ನ ೨೦೦೮ ಯಜುರ್ವೇದ ಪುಟ. ೪೦-೪೨.

ಡಾ. ಟಿ.ವಿ.ವೆಂಕಟಾಚಲಶಾಸ್ತ್ರೀ ೧೯೯೯ ಶ್ರೀ ವತ್ಸ ನಿಘಂಟು ಪುಟ. ೩೨೫

ಯುಗಯಾತ್ರೀ ಭಾರತೀಯ ಸಂಸ್ಕೃತಿ ೧೯೭೧ ಸಂಪುಟ. ೨ ಪುಟ. ೩೨೬

ಭರ್ತೃಹರಿಯ ನೀತಿಶತಕ ೧೯೭೪- ಶ್ಲೋಕ ೩೮

ಎಂ. ವಿ. ಕೃಷ್ಣರಾವ್ ೧೯೫೩ ಕೌಟಿಲ್ಯ ಪುಟ. ೧೦

ರಾಜ್ಯದ ಸ್ಥಿರೀಕರಣ

ರಾಜ್ಯದ ಸ್ಥಿರೀಕರಣದ ಕುರಿತು ಮಾನಸೋಲ್ಲಾಸದಲ್ಲಿ ಹೀಗೆ ಬರುತ್ತದೆ- ಸಪ್ತ ಅಂಗಗಳು, ಮೂರು ಶಕ್ತಿಗಳು, ಆರು ಗುಣಗಳು ಮತ್ತು ನಾಲ್ಕು ಉಪಾಯಗಳು ರಾಜ್ಯದ ಸ್ಥಿರೀಕರಣಗಳಿಗೆ ಕಾರಣವಾಗಿರುತ್ತದೆ. ಅಮಾತ್ಯ, ಕೋಶ, ರಾಷ್ಟ್ರ, ದುರ್ಗ ಮತ್ತು ಬಲ ಇವು ರಾಜ್ಯಾಂಗಗಳಾಗಿರುತ್ತವೆ. ಪ್ರಜೆಗಳು ಹಾಗೂ ಪೌರರ ಶ್ರೇಣಿಗಳು ಕೂಡಾ ರಾಜ್ಯಾಂಗಗಳಾಗಿರುತ್ತವೆ. ಯುದ್ಧ (ಇದನ್ನು ವಿಗ್ರಹವೆಂದು ಕರೆಯುತ್ತಾರೆ) ಯಾನ, ಸಧ್ಯದ ಸ್ಥಿತಿ, ದ್ವೈಧ(ದ್ವಂದ್ವ ನೀತಿ) ಹಾಗೂ ಆಶ್ರಯ ಇವು ಷಡ್ಗುಣಗಳು, ಪ್ರಭು, ಉತ್ಸಾಹ, ಮಂತ್ರ ಇವು ಶಕ್ತಿಗಳು, ಸಾಮ, ಭೇದ, ದಂಡ, ದಾನ ಚತುರೋಪಾಯಗಳು. ಇವಿಷ್ಟು ರಾಜ್ಯ ಸ್ಥಿರೀಕರಣಕ್ಕೆ ಕಾರಣಗಳಾಗುತ್ತವೆ.(1-20,21) ಇದು ಪ್ರಾಚೀನ ಕಾಲದ ರಾಜಕೀಯ ವ್ಯವಸ್ಥೆಯನ್ನು ಸೂಚಿಸುತ್ತದೆ. ಇದರೆ ಪರಿಭಾಷೆಗಳು ಸಂಸ್ಕೃತದಲ್ಲಿವೆಯೆಂಬುದು ಗಮನಾರ್ಹ. ಹಾಗೂ ಮುಸ್ಲಿಂ ಅರಸರು ಇದನ್ನು ಬೇರೆ ರೀತಿಯಲ್ಲಿಯೂ ಹೇಳುತ್ತಿದ್ದರು ಎಂದು ಊಹಿಸಬಹುದು.

ರಾಜ್ಯಾಂಗ

ಯರ್ಜುವೇ೯ದದಲ್ಲಿ ಈ ರೀತಿಯಲ್ಲಿ ಬರುತ್ತದೆ ಗ್ರಾಮದ ಮುಖಂಡನನ್ನು ಗಣಕನನ್ನು ರಾಜನು ವಿಯಮಿಸಬೇಕು. (ಯಜುರ್ವೇದ ೩೦-೨೦) ವನದ ರಕ್ಷಣೆಗೆ ವನರಕ್ಷಣಾಧಿಕಾರಿ (ಯಜುರ್ವೇದ. ೩೦-೧೯) ಬೆಂಕಿ ಮುಂತಾದುವುಗಳಿಂದ ಅರಣ್ಯವನ್ನು ರಕ್ಷಿಸಲು ಅಧಿಕಾರಿ (ಯಜು. ೩೦-೧೧) ಪ್ರಜೆಗಳ ಭದ್ರತೆಗೆ ಅಧಿಕಾರಿ 'ಹಸ್ತಿಪವತ್') (ಯಜು - ೩೦-೧೧) ಆನೆ ಮುಮತಾದ ಪ್ರಾಣಿಗಳ ರಕ್ಷಣೆಗಾಗಿ ಅಧಿಕಾರಿ (ಯಜ ೩೦-೧೧)ಅಶ್ವಗೋವು, ಅಜ, ಅವಿ, ಮುಂತಾದ ಪ್ರಾಣಿಗಳ ರಕ್ಷಣೆಗಾಗಿ ಅಧಿಕಾರಿ (ಯಜು ೩೦-೧೧) ಅನ್ನೋತ್ಪತ್ತಿಗಾಗಿ ಅಧಿಕಾರಿ (ಅದೇ.) ನಿಯಮಿಸಬೇಕು.

(ವೇದವ್ರತ ವೈಶಂಪಾಯನ. ೧೯೮೮೪. ಯಜುರ್ವೇದ ಪು.೨೦೨)

ರಾಣಿಯರು

ಋಗ್ವೇದದ ಪ್ರಕಾರ ರಾಜನಿಗೆ ನಾಲ್ವರು ರಾಣಿಯರು ಮುಖ್ಯವಾಗಿ,

1. ಮಹಿಷಿ–ಈಕೆ ಬ್ರಾಹ್ಮಣ ಕನ್ಯೆ. ರಾಜನು ಮೊದಲು ಮದುವೆಯಾದ ಹೆಣ್ಣು.
2. ವಾವಾಕ್– ಮಧ್ಯಮ ಜಾತ್ಯ. ಮೊದಲನೆಯವಳು ಬಂಜೆಯಾದುದಕ್ಕೆ ಮದುವೆಯಾದವಳು.
3. ಪರಿವೃತ್ತಿ–ಅರಸನಿಗೆ ಪ್ರಿಯಳಾದವಳು.
4. ಪಾಲಾಗಲೀ–ಅರಸನ ಆಸ್ಥಾನದ ನ್ಯಾಯಾಧಿಕಾರಿಯ ಮಗಳು. (Ganguly D.K. 1979 P.50;78)

ಗುಪ್ತರ ಕಾಲದಲ್ಲಿ ರಾಣಿಯರನ್ನು 'ದೇವಿ' ಎಂದು ಕರೆಯುವ ಕ್ರಮವು ಬಂದಿತು. ಈ ಕಾಲದಲ್ಲಿ 'ಅಗ್ರಮಹಿಷಿ'ಯನ್ನು 'ಮಹಾದೇವಿ' ಕರೆಯುವ ಪರಿಪಾಠವು ಬೆಳೆಯಿತು. ರಾಜರ ಕಾಲದ ದೊರೆಗಳು ರಾಣಿಯರನ್ನು 'ರಾಜ್ಞಿ' ಮತ್ತು 'ಮಹಿಷಿ' ಎಂದು ಕರೆದು ಮುಖ್ಯರಾಣಿಯರನ್ನು 'ಅಗ್ರಮಹಿಷಿ' 'ಪಟ್ಟಮಹಿಷಿ' 'ಪಟ್ಟಮಹಾದೇವಿ' ಮಹಾರಾಜ್ಞಿ' ಎಂದೂ ಕರೆದಿದ್ದಾರೆ. (ಅಗ್ರಮಹಿಷಿಯು ಅಂತಃಪುರದ ಅತ್ಯುಚ್ಚ ಅಧಿಕಾರಿಯಾಗಿದ್ದಳು)

ವಿವರಗಳಿಗೆ ನೋಡಿ: Dilip Kumar Ganguly 1979 Aspects of Ancient Indian Administration P. 50; 78

ರುದ್ರ

ರುದ್ರ ಶಬ್ದವು 'ರುದ್' ಎಂಬ ಧಾತುವಿನಿಂದ ನಿಷ್ಪನ್ನವಾಗಿದ್ದು ರುದ್ ಎಂದರೆ ಚೀರು, ಕೂಗು, ಅಳು ಎಂಬ ಅರ್ಥಗಳು ಹೊಮ್ಮುತ್ತವೆ. ಈ ಅರ್ಥದ ಜಾಡು ಹಿಡಿದು ಹೊರಟ ಯಾಸ್ಕ, ಸಾಯಣ ಹಾಗು ಕೆಲವು ಪಾಶ್ಚಾತ್ಯ ಭಾಷ್ಯಕಾರರು ರುದ್ರನನ್ನು ಬಿರುಗಾಳಿಯ ದೇವತೆ, ಅಥವಾ ಥಳಥಳಿಸುವ ಅಗ್ನಿ ಮುಂತಾಗಿ ಅರ್ಥೈಸಿದ್ದಾರೆ.

(ಶೇಷನವರತ್ನ. ೨೦೦೮. ಪು. ೧೮೨)

ಎಣ್ಮಯ್ಯಂ (ಎಂಟು ಮೈಯುಳ್ಳವನು ಶಿವ–ಅಮ್ಮನವರು, ಗಂಗೆ, ನಂದಿ, ಸರ್ಪ, ಸೂರ್ಯ, ಚಂದ್ರ, ಅಗ್ನಿ, ಮುಂತಾದ ಎಂಟು ಮೈಯುಳ್ಳವನು–ಶಿವ), ಗೊಂವಳಯಿಗಂ, ಎಳದೇರಂ (ನೆಲದೇರಂ) ಪಿರಿತಿಯಾಣ್ಮಂ (ಪಿಸಿತಪಿಚ್ಚು ಮಾಂಸವನ್ನು ತಿನ್ನುವ ಪಿಶಾಚಿಗಳಿಗೆ ಒಡೆಯನೆಂದು ಅರ್ಥ) ಸೊಡಬಲಿಯೊಡೆಯನೆಯಂ (ಸುಡುಗಾಡಿನಲ್ಲಿ ಮನೆಯುಳ್ಳವನು)

ಎಲರುಣಿವೆದೆಯಂ, (ಗಾಳಿ ಗ... ವೆದೆಯನ್ನು ಅರ್ಥ) ಅರುಮೊಗದಯ್ಯಂ (ಆರು ಮುಖದವನ ತಂದೆ) ಪೊಂಬೆಟ್ಟಪಿಲ್ಲಂ (ಹೊನ್ನ ಬೆಟ್ಟದಲ್ಲಿ ಮನೆಮಾಡಿರುವಾತ) ಇಂಗಳಗಣ್ಣಂ (ಕೆಂಡಗಣ್ಣನೆಂದು), ಈಸರಂ, ಪಂದಲೆವಚ್ಚಂ (ಪಸಿದಾದ ತಲೆಯುಳ್ಳವನು ಎಂದು ಅರ್ಥ, ಹಾವನ್ನು ಕೊರಳಿನಲ್ಲಿ ಧರಿಸಿದವನು), ಬಾಬೊಚ್ಚದಲೆಯಂ, ಸಬ್ಬಂ (ಶರ್ವನೆಂದು ಸರ್ವರಲ್ಲಿ ವ್ಯಾಪಿಸಿಕೊಂಡವನು), ಬಗ್ಗದೊವಲುಡೆಯಂ (ಬಗ್ಗನೆಂದರೆ ಹುಲಿ, ದೊವಲನೆಂದರೆ ತೊಗಲನ್ನು ಉಟ್ಟವನು) ಬಾನ್ನವಿರಂ, ದಪ್ಪಕವಗೆಯಂ, ಅಮರ್ದುವೆಣ್ಣೋಪಂ. (ಮುಕ್ತಿಸ್ತ್ರೀಗೆ ಗಂಡನಾಗಿರುವವನು), ಕಂದುಗೊರಲಂ (ಕಪ್ಪು ಕೊರಳಿನವನು), ಮಾದೇವಂ, ಬಾಂಬೊಳರಿಕಂ (ಆಕಾಶ ಗಂಗಾಧರ, ದೇಸಿಗಂ, ಗಂದರಗಿವಿಯಂ (ಗಾನ ಕಿವಿಯಲ್ಲಿಯುಳ್ಳವನು), ಬೆಳ್ಪಡಿ, ಮಿಗಗಯ್ಯಂ (ಚಿಗರೆ ಕೈಯಲ್ಲಿ ಉಳ್ಳವನೆಂದು), ಕಣ್ಣಡಿಗಂ, ತಿಸುಳಿ, ಪೆಣ್ಬೊದೆಯಂ (ಪೆಣ್ಣನ್ನು ತೊಡೆಯಲ್ಲಿ ಕುಳ್ಳಿರಿಸಿಕೊಂಡವನು), ಈಸಂ, ಗೊರವಂ (ಗುರುತ್ವಭಾವವುಳ್ಳವನು), ಚಳಿವೆಟ್ಟಳಿಯಂ (ಕುಳಿರುಬೆಟ್ಟದ ಅಳಿಯ), ಸಸಿದಲೆಯಂ, ಗನಹಂ (ದೊಡ್ಡಾತನು) ಅಯ್ಯೊಗಂ, ಈ ೩೩ ಈಶ್ವರಂಗೆ ಪೆಸರ್. (ಕರ್ನಾಟಕ ಶಬ್ದಸಾರಂ–ಪುಟ೪೭)

ರುದ್ರ–ಶಿವ–ಅಭವ

"ವೇದಕಾಲದಿಂದ ವರ್ಣಿತವಾಗುತ್ತ ಬಂದ 'ಶಿವರುದ್ರ'ದಲ್ಲಿಯ ಮೂಲ ಕೆಂಪು ಅರ್ಥದ ಪೂರ್ಣ ಸಾಕ್ಷಾತ್ಕಾರವಿದೆ. "ಅಸೌಯಃ ತಾಮ್ರ ಅರುಣ ಉತ ಬಭ್ರುಃ" ಎಂದು ಹೇಳಿ ಮುಂದೆ ಉಪುಯುಕ್ತವಾಗುವ ಮಂಗಲ ಶಬ್ದ 'ಶಿವ' ಶಬ್ದದ ಅರ್ಥವನ್ನು ವಿವರಿಸುವ ಭಾಷ್ಯವಾಗುತ್ತದೆ. ಶಿವ ಅಂದರೆ ಕೆಂಪು ಆಕಸ್ಮಿಕವಾಗಿ ಕಂಡರೆ ಶುಭಸೂಚಕ, ಮಂಗಲದಾಯಕವೆಂಬ ನಂಬಿಕೆಯಿದೆ. ಚಂದ್ರನಂತೆ 'ಶಿವ' ಶಬ್ದ 'ಶಿನ್', ಚೆನ್' ವರ್ಗದ ಶಬ್ದವಾಗಿದ್ದರೆ ಶಿವ ಪತ್ತಿಜನರ ಮೂಲದೇವತೆ ಎಂಬ ಮಾತು ಸಿದ್ಧವಾಗುತ್ತದೆ.

ಪತ್ತಿಜನರ ಆತ್ಮೀಯ ದೇವತೆ ಶಿವನಾಗಿದ್ದನೆಂದು ವೈದಿಕೃತಿಗಳು 'ಪತ್ತೀನಾಂ ಪತಿ' ಎಂದು ಹಾಡಿದರೆಂಬುದರಲ್ಲಿ ಸಂಶಯವಿಲ್ಲ. ಪತ್ತಿಜನರನ್ನು ಮುಂದೆ 'ಹಟ್ಟಿ' ಇಲ್ಲವೆ ಹಟ್ಟಿಗಾರರೆಂದು ಗುರುತಿಸಲಾಗುತ್ತಿತ್ತು. ಇದರಿಂದ ದೇವತೆಯ ನಾಮಾಂತರವೂ ಆಗಿದ್ದರೆ ಆಶ್ಚರ್ಯವಿಲ್ಲ" ಎಂದು ಶಂಬಾ ಅಭಿಪ್ರಾಯ.

ವಿವರಗಳಿಗೆ ನೋಡಿ: ರಸವಿದ್ಯೆ, ಶಂಬಾ ಜೋಶಿ 1999 ಸಂಪುಟ. 1 ಪುಟ. 179

ರೇಚಕ

ನಾಟ್ಯದಲ್ಲಿ ನಾಲ್ಕು ಭಂಗಿಗಳಿವೆ. 1. ಸಮಭಂಗ – ದೇಹದಲ್ಲಿ ಯಾವ ಬಾಗುವಿಕೆಯೂ ಇಲ್ಲ. 2. ಅಭಂಗ – ಸ್ವಲ್ಪ ಬಾಗುವಿಕೆ. ಒಂದು ಕಾಲಲ್ಲಿ ಹಾಕಿ

ನಿಲ್ಲುವುದು. 3. ಅತಿಭಂಗ – ತೀರ ಬಾಗುವಿಕೆ. ತಾಂಡವದ ಲಕ್ಷಣ – ಬಾಣ ಬಿಡುವಾಗ 4. ತ್ರಿಭಂಗ – ಮೂರು ಕಡೆ ಬಾಗುವಿಕೆ, ರುಂಡ, ಮುಂಡ, ಕೈ ಕಾಲುಗಳ ಬಾಗುವಿಕೆ, ಲಾಸ್ಯದ ಲಕ್ಷಣ.

ರೇಚಕವು ಇನ್ನೊಂದು ರೀತಿಯ ಚಲನೆ. ಒಂದು ಅಂಗದ ವರ್ತುಲಾಕಾರದ ಚಲನೆಗೆ ರೇಚಕವೆಂದು ಕರೆಯುತ್ತಾರೆ. ಇದರಲ್ಲಿ ನಾಲ್ಕು ವಿಧ: ಪಾದರೇಚಕ, ಕಟಿರೇಚಕ, ಹಸ್ತರೇಚಕ, ಗ್ರೀವಾರೇಚಕ ಅಂದರೆ ರೇಚಕವು ಚಲನೆಯನ್ನು ಸೂಚಿಸುತ್ತದೆ. ಉಸಿರು ಬಿಡುವುದು; ನಿಶ್ವಾಸವನ್ನು ರೇಚಕವೆಂದು ಕರೆಯುತ್ತಾರೆ.

ವಿವರಗಳಿಗೆ ನೋಡಿ: ವೈಶಾಖಸ್ಥಾನ, ಅಘುವಿಘಾತ; ಕರಣ

ಆದ್ಯರಂಗಾಚಾರ್ಯ 1983 ಶ್ರೀ ರಂಗ ನಾಟ್ಯಶಾಸ್ತ್ರ ಸಂಗ್ರಹ

ರೈಲ್ವೇ ಸ್ಟೇಶನ್

ವಸಾಹತುಶಾಹಿ ಸಂಸ್ಕೃತಿಯ ಜೊತೆಗೆ ಬಂದಿರುವ ರಸ್ತೆ ಸಾರಿಗೆ, ಕೈಗಾರಿಕೆಗಳು, ಸಂಬಳ ಕುರಿತಂತೆ ಬಂದಿರುವ ಸಂಗತಿಗಳು ಭಾರತೀಯ ಸಮಾಜದ ಬದಲಾವಣೆಗೆ ಕಾರಣವಾದವು. ಈ ಪಲ್ಲಟದ ಬಗೆಗೆ ಕನ್ನಡ ನವೋದಯ ಸಾಹಿತಿಗಳು ವಿವಿಧ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಆ ಹೊತ್ತಿಗೆ ಕೈಗಾರಿಕೆಗಳ ಕ್ಷೇತ್ರದಲ್ಲಿ ಬೌದ್ಧಿಕ ಕೆಲಸಕ್ಕೆ ಇಲ್ಲಿಯ ಕಲಿತ ಮಧ್ಯಮ ವರ್ಗದವರು ಸೇರಿಕೊಂಡರೆ ಭೌತಿಕ ಕೆಲಸಗಳಿಗೆ ಕೆಳವರ್ಗದವರು (ರೈತರು ಅಸ್ಪೃಶ್ಯರು, ಆದಿವಾಸಿಗಳು) ಸೇರಿಕೊಂಡರು. ಈ ಅಂಶವನ್ನು ಈಗಾಗಲೇ ಅನೇಕ ಇತಿಹಾಸಕಾರರು ಚರ್ಚಿಸಿದ್ದಾರೆ. ಈ ಆಧುನೀಕರಣ ಪ್ರಕ್ರಿಯೆಯ ಕುರಿತು ಕುವೆಂಪು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಪ್ರತಿಕ್ರಿಯಿಸಿರುವ ರೀತಿಯು ಗಮನಾರ್ಹವಾದುದು. ಊರೊಳಗೆ ಬರುವ ಬೈಸಿಕಲ್ಲಿನ ಕುರಿತು ತುಂಬಾ ಸವಿವರವಾಗಿ ಚಿತ್ರಸುವುದರ ಮೂಲಕ ಆಧುನಿಕತೆಗೆ ಪ್ರತಿಕ್ರಿಯಿಸಿದ್ದಾರೆ. ಹಾಗೆಯೇ ವಿಲಾಯಿತಿಯ ವಸ್ತುಗಳಾದ ಲಾಟೀನು, ಬೈಸಿಕಲ್ಲು, ತೋಟಾಕೋವಿ, ಸೀಮೆಬಿಸ್ಕತ್ತು, ಕ್ರಾಪು, ಹ್ಯಾಟು, ಬೂಟು ಇತ್ಯಾದಿಗಳ ಬಗೆಗೆ ಕುವೆಂಪು ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. (ಮಲೆಗಳಲ್ಲಿ ಮದುಮಗಳು ೧೯೮೫, ಪುಟ.೪೬೭) ಗಾಂಧಿಯವರು ಈ ಆಧುನೀಕರಣದ ಪ್ರತಿಕ್ರಿಯೆಯನ್ನು ಅನುಮಾನದಿಂದ ನೋಡಿದರು ಎನ್ನುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕೈಗಾರೀಕರಣದ ಉತ್ಪನ್ನಗಳು ಅಸಮತೆಗೆ ಕಾರಣವಾಗುತ್ತದೆಂದು ಗಾಂಧಿ ನಂಬಿದ್ದರು. ದೇಶೀಯ ಉತ್ಪಾದನಾ ಕ್ರಮದ ಮೇಲೆ ಇದೊಂದು ದೊಡ್ಡ ಹೊಡೆತವಾಗುತ್ತದೆಂದೂ ಭಾವಿಸಿದ್ದರು. ಆಧುನಿಕತೆಯಂತೂ ಭಾರತಕ್ಕೆ ಪ್ರವೇಶಿಸಿತು. ಪಾಶ್ಚಾತ್ಯೀಕರಣ ಮತ್ತು ಆಧುನೀಕರಣ ಒಂದಲ್ಲವಾದರೂ ಒಂದು ರೀತಿಯಲ್ಲಿ ಪಶ್ಚಿಮದ ಹಾದಿಯ ಮೂಲಕ ಆಧುನಿಕತೆಯು ಪ್ರವೇಶಿಸಿತು. ಹಾಗೆಂದು ಆಧುನಿಕತೆಯ ವಿರೋಧವು ಅನೇಕ ಕಾರಣಗಳಿಂದ ಚರ್ಚಾರ್ಹವಾದುದು ಕೂಡಾ ಆಗಿದೆ.

ವಿವರಗಳಿಗೆ ನೋಡಿ: ಮೋಹನ್ ದಾಸ್ ಕರಮಚಂದ್ ಗಾಂಧಿ ೨೦೦೮ ಹಿಂದ್ ಸ್ವರಾಜ್

Partho chattarjee 1986 Nationalist thought and the colonial world

The movement of manocur Gandhi and Critique of civil society (Article)

ಲಕ್ಷ್ಯಸಿದ್ಧಿ

ಇಲ್ಲಿ ಲಕ್ಷ್ಯ ಎಂದರೆ ಗುರಿಯೆಂದರ್ಥ. ಸಿದ್ಧಿ ಎಂದರೆ ಗುರಿಯೆಡೆಗೆ ಸಾಧನೆ ಎಂದರ್ಥ. ಹಠಯೋಗದ ಪ್ರಕಾರ ಮನಸ್ಸನ್ನು ಕೇಂದ್ರೀಕರಿಸಿ ಧ್ಯಾನಸ್ಥ ಸ್ಥಿತಿಗೆ ಹೋಗುವುದು. ಬಿಲ್ಲು ವಿದ್ಯೆಯಲ್ಲಿ ಗುರಿಯನ್ನು ಸಾಧಿಸುವುದಕ್ಕೆ ಲಕ್ಷ್ಯಸಿದ್ಧಿಯೆಂದು ಕರೆಯುತ್ತಾರೆ. ಯುದ್ಧ ತಂತ್ರಗಳಲ್ಲಿ ಗುರಿಸಾಧನೆಯು ಮುಖ್ಯ.

ಲಗ್ನ

ಕೂಡಿದ; ಸಂಬಂಧ ಹೊಂದುವುದು ಎನ್ನುವುದಕ್ಕೆ ಲಗ್ನವೆಂದು ಕರೆಯಲಾಗಿದೆ. ಲಗ್ನವನ್ನು ಮದುವೆ ಎನ್ನುವ ಅರ್ಥದಲ್ಲಿಯೂ ಬಳಸುತ್ತಾರೆ.

ಲಾವಣಿಗೆ

ಲಾವಣಿಯೆಂದರೆ ಉಪ್ಪಿನಕಾಯಿ ಎಂದು ಅರ್ಥ. ಉಪ್ಪಿನ ನೀರಿನಲ್ಲಿ ಹಾಕಿದ ಕಾಯಿಯೇ ಉಪ್ಪಿನಕಾಯಿ. ಊಟಕ್ಕೆ ಉಪ್ಪಿನಕಾಯಿ ಇದ್ದಹಾಗೆ ಎಂಬ ಮಾತು ಚಾಲ್ತಿಯಲ್ಲಿದೆ. ಉಪ್ಪಿನಕಾಯಿಯು ಉಪ್ಪುಕಾರ; ಮತ್ತು ಕಾಯಿಯ ಮಿಶ್ರಣ. ಇದು ಊಟದ ತಟ್ಟೆಯಲ್ಲಿ ಅನ್ನದಂತೆ ಪ್ರಧಾನವಲ್ಲ. ನೆಂಚಿಕೊಳ್ಳಲು ಇರುವ ಪದಾರ್ಥ. ಕಾಯಿಯನ್ನು ಉಪ್ಪಿನಲ್ಲಿ ಹಾಕಿಡುವುದರಿಂದ ಇದಕ್ಕೆ ಉಪ್ಪಿನಕಾಯಿ ಎಂದು ಕರೆಯಲಾಗಿದೆ.

ಲೆಂಕರು

ಅರಸನು ಸತ್ತಾಗ ಅವನೊಂದಿಗೆ ಕೆಲವರು ಸಾಯಲು ಹೋಗುತ್ತಾರೆ. ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇಂಥವರನ್ನು 'ಲೆಂಕರು' 'ವೇಳೆವಾಳಿಗಳು' 'ಕೀಳ್ಗುಂಟೆ' ಎಂದು ಕರೆಯುತ್ತಾರೆ.

"ಅರಸನು ಸತ್ತಾಗ ಅವನೊಂದಿಗೆ ಅವನ ಆಪ್ತರಾದ ಕೆಲವರು ಆತ್ಮ ಹತ್ಯೆಯನ್ನು ಮಾಡಿಕೊಳ್ಳುವುದರ ಮೂಲಕ ತಮ್ಮ ಒಡೆಯನನ್ನು ಅನುಸರಿಸುವ ಒಂದು ಸಂಪ್ರದಾಯ ಪ್ರಾಚೀನ ಕರ್ನಾಟಕದಲ್ಲಿತ್ತು. ಇದು ಸೇವಕನೆನ್ನಿಸಿಕೊಂಡವನು ತನ್ನ ಒಡೆಯನಾದವನಿಗೆ ತೋರುವ ನಿಷ್ಠೆಯ ಪರಾಕಾಷ್ಠೆ ಈ ರೀತಿ ತಮ್ಮ ಒಡೆಯನನ್ನು

ಅನುಸರಿಸುವುದು ಒಂದು ಬಲವಂತವಾದ ಹತ್ಯೆಯಾಗಿರದೆ, ಒಂದು ಸ್ವಪ್ರೇರಿತ ಅಂಶವಾಗಿತ್ತೆಂದೇ ತಿಳಿಯುತ್ತದೆ. ಅರಸನು ಬದುಕಿರುವಾಗಲೇ ಯಾರು ಮೊದಲೇ ಪ್ರತಿಜ್ಞೆ ಮಾಡಿರುತ್ತಾರೆಯೋ ಅಂಥ 'ಲೆಂಕರು', 'ವೇಳೆವಾಳಿ'ಗಳು 'ಕೀಲ್ಗುಂಟೆ' ಮತ್ತು 'ಗರುಡ' ಎಂಬುದಾಗಿ ಕರೆದಿದೆ. ಕ್ರಿ.ಶ 865ರ ಮೇವುಂಡಿಯ ಶಾಸನವೊಂದು ರೆಟ್ಟಿಯಣ್ಣ ಎಂಬುವನು, ತನ್ನ ಒಡೆಯನು ರೋಗದಿಂದ ನರಳುತ್ತಿರುವುದನ್ನು ಕಂಡು ಸಹಿಸಲಾರದೆ, ತನ್ನ ಒಡೆಯನಂತೆ ತಾನೂ ಯಾತನೆಯನ್ನು ಅನುಭವಿಸಬೇಕೆಂದು, ಊಟವನ್ನು ಬಿಟ್ಟು ಮೂವತ್ತು ಗಾವುದ ನಡೆದು ಹಿಂತಿರುಗಿ ಬರುವ ವೇಳೆಗೆ, ತನ್ನ ಅರಸನು ಸತ್ತು ಹೋಗಿದ್ದು, ಅವನನ್ನು ಸುಡುತ್ತಿರುವ ದೃಶ್ಯವನ್ನು ಕಾಣುತ್ತಾನೆ. ಆಗ ತಕ್ಷಣ ಅವನು ತನ್ನ ಒರೆಯಿಂದ ಕತ್ತಿಯನ್ನು ತೆಗೆದು ಇರಿದುಕೊಂಡನೆಂದು ತಿಳಿಸುತ್ತದೆ.

ಸುಮಾರು ಹತ್ತನೆಯ ಶತಮಾನಕ್ಕೆ ಸೇರಿದ ಶಾಸನವೊಂದರಲ್ಲಿ "ಲೆಂಕರ ಕೊಂದವರಿಲ್ಲ, ನಾಯ ತಿಂದವರಿಲ್ಲ" ಎಂದಷ್ಟೆ ಬರೆಯಲಾಗಿದೆ. ಅಂದರೆ ನಾಯಿಯ ಮಾಂಸವನ್ನು ತಿನ್ನುವವರು ಎಷ್ಟು ಅಪರೂಪವೋ ಅಷ್ಟೇ ಅಪರೂಪ ಲೆಂಕರನು ಕೊಲ್ಲುವುದು ಎಂಬುದು ಇದರ ಅಂತರಾರ್ಥ. ಲೆಂಕರು ತಮ್ಮ ಜೀವನ ಇರುವವರೆಗೆ ತಮ್ಮ ಅರಸನಿಗಾಗಿ ಹೋರಾಡಿ ಅವನನ್ನು ರಕ್ಷಿಸುತ್ತಿದ್ದರು. ಅವನನ್ನು ರಕ್ಷಿಸುವುದು ಅಸಾಧ್ಯದ ಪ್ರಶ್ನೆಯಾದಾಗ ಅವನನ್ನು ಸಾವಿನಲ್ಲಿಯೂ ಹಿಂಬಾಲಿಸುತ್ತಿದ್ದರು. ಇಂಥ ಲೆಂಕರೊಡನೆ ಅವರ ಪತ್ನಿಯರೂ ಕೆಲವೊಮ್ಮೆ ಸಹಗಮನ ಮಾಡುತ್ತಿದ್ದರು.

ಲೆಂಕ ಎಂದರೆ ಆಪ್ತ ಸೇವಕವೆಂದೂ ಅರ್ಥವಿದೆ. ಹಾಗೆಯೇ ಭಕ್ತ ಎಂದು ಕೂಡಾ. ವೇಳೆವಾಳಿಯೆಂದರೆ ಒಡೆಯನು ಸತ್ತರೆ ತಾನೂ ಸಾಯುವೆನೆಂದು ಪ್ರತಿಜ್ಞೆ ಮಾಡುವ ವ್ಯಕ್ತಿ. ತನ್ನ ಬಾಳನ್ನು ಅರಸನಿಗಾಗಿ ಮುಡಿಪಾಗಿಟ್ಟ ಸ್ವಾಮಿಭಕ್ತನನ್ನು ಗರುಡನೆಂದು ಕರೆಯುತ್ತಾರೆ.

ವಿವರಗಳಿಗೆ ನೋಡಿ: ಆರ್. ಶೇಷಶಾಸ್ತ್ರಿ 2005 ಶಾಸನ ಪರಿಚಯ ಪುಟ. 35

ಲೋಗಾಣಿ

ಲೋಗಾಣಿ ಎಂಬುದು ಕರಣ ಗ್ರಂಥವೆಂದು ಜೈನ ಧರ್ಮವು ಹೇಳುತ್ತದೆ. ಲೋಕಕ್ಕೆ ಅನುಕೂಲವಾದುದು ಎಂದು ಧ್ವನಿಸುತ್ತದೆ. ಸಪ್ತ ಪದಾರ್ಥಗಳನ್ನು ತಿಳಿಸುವ ಗ್ರಂಥಗಳಿಗೆ ಸಂಗಾಣಿಯೆಂದು ಕರೆಯುತ್ತಾರೆ.

ಲೌಕಿಕ ಸುಖ

ಲೋಕ ಸುಖಕ್ಕೆ ಸಂಬಂಧಿಸಿದಂತೆ ಸಾಂಸ್ಕೃತಿಕವಾಗಿ ಮಹತ್ವದ ಚರ್ಚೆಗಳಾಗಿವೆ. ಸತ್ತ ಮೇಲೆ ನಾವು ಏನು ಆಗುತ್ತೇವೆ ಎನ್ನುವುದು ನಮ್ಮ ಮುಂದಿರುವ ಮಹತ್ವದ ಪ್ರಶ್ನೆಯಾಗಿದೆ.ಆಗಮಿಕವಾದಿಗಳು ಸತ್ತ ಮೇಲೆ ಸ್ವರ್ಗ ಮತ್ತು ನರಕವಿದೆ ಆದುದರಿಂದ

ನಾವು ಇಹ ಲೋಕದಲ್ಲಿ ನೈತಿಕವಾಗಿ ಸರಿಯಾಗಿ ಇರಬೇಕು ಎಂದು ಪ್ರತಿಪಾದಿಸುತ್ತಾರೆ.ಭೌತಿಕವಾದಿಗಳ ನಿಲುವು ಬೇರೆ. ಗರ್ಭದಿಂದ ಪ್ರಾರಂಭಿಸಿ ಮರಣ ಪರ್ಯಂತ ಚೈತನ್ಯ ಇರುವುದು. ಆದುದರಿಂದ ಪರಲೋಕವಿಲ್ಲ. ಪರಲೋಕವಿಲ್ಲದಿರುವುದರಿಂದ ಅದರ ಸುಖಕ್ಕಾಗಿ ಲೌಕಿಕ ಸುಖಾನುಭವದಿಂದ ವಿಮುಖರಾಗುವುದು ಸರಿಯಲ್ಲ. ಐಹಿಕಸುಖವನ್ನು ತೊರೆಯುವುದು ಅರ್ಥಹೀನ. ಎಂದು ಬೃಹಸ್ಪತಿ ಮತಾನುಸಾರಿ(ಲೋಕಾಯಿತ ಧರ್ಮಕ್ಕೆ ಸೇರಿದವರು) ಹೇಳುತ್ತಾರೆ. ಇಲ್ಲಿ ಜೈನ ಮತದ ನಂಬಿಕೆ ಮತ್ತು ಚಾರ್ವಾಕ ಮತದ ನಂಬಿಕೆಯ ನಡುವೆ ಉಂಟಾಗುವ ವೈಚಾರಿಕ ಸಂಘರ್ಷವೇ ಮುಖ್ಯ.

ವಂದ್ಯರು

ಹಸಿದವನಿಗೆ ಅನ್ನನೀಡುವವನು; ಯುದ್ಧರಂಗದಲ್ಲಿ ಕುಸಿಯದವನು; ಸುಲಿಗೆ ಮಾಡದವನು; ಯುದ್ಧ ಧರ್ಮ ಮೀರದವನು; ಅಂಥವರು ಮಹಾತ್ಮ ಎಂದೆನ್ನಿಸಿಕೊಳ್ಳುವರು. ಲೋಕದಲ್ಲಿ ನಾಲ್ಕು ಮಂದಿಯು ಪೂಜಾರ್ಹರಾಗಿರುತ್ತಾರೆ. ತಾನು ಹಸಿದಿರುವಾಗ, ಹಸಿದು ಬಳಲಿ ಬಂದವನಿಗೆ ಉಣಲಿಕ್ಕುವಾತನು, ರಣರಂಗದಲ್ಲಿ ಹಿಂಜರಿಯದವನು, ಪರರ ಸೊತ್ತನ್ನು ಸುಲಿಗೆ ಮಾಡದಾತನು, ಯುದ್ಧದಲ್ಲಿ ಧರ್ಮವನ್ನು ಅಂಗೀಕರಿಸುವಾತನು. ಈ ನಾಲ್ವರ ಗುಣವೆಲ್ಲವೂ ಮಡಿದ ಅಭಿಮನ್ಯು ಕುಮಾರನಲ್ಲಿದೆ. ಇದು ಮಹಾತ್ಮನಾದ ಅಭಿಮನ್ಯುಗೆ ಸುಯೋಧನನ ಶ್ರದ್ಧಾಂಜಲಿ; ಶೋಕಗೀತೆ.

ವಂಧ್ಯಾಲಯ

ವಂಧ್ಯಾಲಯವೆಂದರೆ ಬಂಜೆಯ ಮನೆ; ಮಕ್ಕಳಿಲ್ಲದ ಮನೆ ಎಂದರ್ಥ. ವಂಧ್ಯಾ ಎಂದರೆ ಬಂಜೆಯೆಂದರ್ಥ. ಪ್ರಾಣಿಗಳಲ್ಲಾದರೆ ಗೊಡ್ಡು ಎಂಬ ಪದ ಬಳಸುತ್ತೇವೆ. ಉದಾ: ಗೊಡ್ಡು ಆಕಳು, ಗೊಡ್ಡು ಎಮ್ಮೆ ಇತ್ಯಾದಿ.

ಬಂಜೆಯ ಬಗ್ಗೆ ಸಾಮಾಜಿಕ ಧೋರಣೆಗಳು ವಿಭಿನ್ನವಾಗಿದೆ. ಬಂಜೆಯನ್ನು ಕೀಳಾಗಿ ನೋಡುವ ರೂಢಿಯು ಈಗಲೂ ಇದೆ. ಮಕ್ಕಳಿಲ್ಲದ ಹೆಣ್ಣನ್ನು ಬಂಜೆ ಎಂದು ಕರೆಯುವುದು ಮಾತ್ರವಲ್ಲ, ಅವಳ ಜೀವನವು ಕೂಡ ವ್ಯರ್ಥವೆಂದು ಟೀಕಿಸಲಾಗುತ್ತದೆ.

ವಕ್ಖಾಣಿಸು

ವಕ್ಖಾಣಿಸು ಎಂದರೆ ವ್ಯಾಖ್ಯಾನಿಸು ಎಂದು ಅರ್ಥ. ಉದ್ಧೃತ ಭಾಗದಲ್ಲಿರುವಂತೆ ಕ್ರಿಯಾಕಾರಕ ಸಂಬಂಧವನ್ನು ವ್ಯಾಖ್ಯಾನಿಸುವುದು. ವಾಸ್ತವವಾಗಿ ವ್ಯಾಖ್ಯಾನಕಾರರು ಪಠ್ಯ ಮತ್ತು ಶ್ರೋತೃಗಳ ನಡುವೆ ಸಂಬಂಧವನ್ನು ಬೆಸೆಯುತ್ತಾರೆ. ವ್ಯಾಖ್ಯಾನದ ಕೆಲಸವೆಂದರೆ ಪಠ್ಯದ ಶಬ್ದಾರ್ಥಗಳನ್ನು ವಿವರಿಸುವುದು. ವಾಕ್ಯದ ವಿಶಿಷ್ಟತೆ ಅದರ ಕ್ರಿಯಾಕಾರಕ ಸಂಬಂಧಗಳನ್ನು ವಿಶದಪಡಿಸುವುದು ವ್ಯಾಖ್ಯಾನಕಾರರ ಪ್ರಮುಖ

ಕೆಲಸವಾಗಿದೆ. ಈ ದೃಷ್ಟಿಯಿಂದ ವಡ್ಡಾರಾಧನೆಯಲ್ಲಿ ಬರುವ ಈ ವಿಷಯವು ಸಾಂಸ್ಕೃತಿಕವಾಗಿ ಮಹತ್ವವಾದದ್ದು. ಟೀಕೆ, ಟಿಪ್ಪಣಿ, ವ್ಯಾಖ್ಯಾನ ಇವುಗಳೆಲ್ಲಾ ಸಮಾನ ಅರ್ಥದ ಧ್ವನಿ ಎಂದು ಸೂಚಿಸುತ್ತದೆ.

ವನರುಹ ವಿಷ್ಟರ

ವನರುಹ ವಿಷ್ಟರಂ ಎಂದರೆ ಪದ್ಮಾಸನ ಹಾಕಿಕೊಂಡು ಎಂದು ಅರ್ಥ. ಇದು ಯೋಗಾಸನದ ಒಂದು ಭಂಗಿಯಾಗಿದೆ.

ವನಸ್ಪತಿ

ಫಲಗಳನ್ನು ಮಾತ್ರ ಹೊಂದಿದ್ದು ಹೂವುಗಳು ಇಲ್ಲದಿರುವ ಗಿಡಗಳಿಗೆ ವನಸ್ಪತಿಗಳು ಎಂದು ಹೆಸರು.

ವರ್ಣಧರ್ಮಗಳು

ಅಧ್ಯಯನ, ಅಧ್ಯಾಪನ, ಯಜನ, ಯಾಜನ, ಪ್ರತಿಗ್ರಹ ಎಂಬ ಪಟ್ಕರ್ಮಗಳು ಬ್ರಾಹ್ಮಣ ಧರ್ಮಗಳಾಗಿವೆ, ಅಧ್ಯಯನ, ಯಜನ, ದಾನ, ಶಸ್ತ್ರಗಳಿಂದ ಜೀವಿಸುವುದು ಪ್ರಾಣಿಗಳನ್ನು ಕಾಪಾಡುವುದು–ಇವು ಕ್ಷತ್ರಿಯರ ಧರ್ಮಗಳು ಅಧ್ಯಯನ, ಉಜನ, ದಾನ, ಭೂವ್ಯವಸಾಯ ಪಶುಪಾಲನೆ ವ್ಯಾಪಾರ ಇವು ವೈಶ್ಯರ ಧರ್ಮಗಳು.

(ಕೌಟಿಲ್ಯನ ಅರ್ಥಶಾಸ್ತ್ರ. ೨೦೧೦. ಪು. ೩೪)

ಸಂಸಾರ ಜೀವನದ ಅನಂತರ ವಾನಪ್ರಸ್ಥ. ವಾನಪ್ರಸ್ಥವು ಮೂರನೆಯ ಹಂತ. ಹೆಸರೇ ಸೂಚಿಸುವಂತೆ ವಾನಪ್ರಸ್ಥವೆಂದರೆ– ಕಾಡಿಗೆ ತೆರಳುವುದು. ಅನಂತರ ಸನ್ಯಾಸ. ಅಂದರೆ –ಎಲ್ಲವನ್ನು ತ್ಯಾಗ ಮಾಡಿ;(ನ್ಯಾಸ) ಇಂದ್ರಿಯಗಳನ್ನು ಹತೋಟಿಗೆ ತಪವಾಚರಿಸುವುದು. ಇದನ್ನು ಜೈನಕಾವ್ಯಗಳೂ ಪ್ರತಿಪಾದಿಸುತ್ತವೆ.

ವಿವರಗಳಿಗೆ ನೋಡಿ: ಜಾತಿ

ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು ೨೦೧೦ ಕೌಟಲೀಯ ಅರ್ಥಶಾಸ್ತ್ರ ಪುಟ. ೩೪

ಗುರುಲಿಂಗಕಾಪಸೆ (ಸಂ ೧) ೨೦೦೬ ಮಧುರಚೆನ್ನರ ಲೇಖನಗಳು ಪುಟ. ೬

ಆರ್. ಎಸ್. ಶರ್ಮ ೨೦೦೪ ಪ್ರಾಚೀನ ಭಾರತದಲ್ಲಿ ಶೂದ್ರರು ಪುಟ. ೧೫

ಡಾ. ಸರ್ವಪಲ್ಲಿ ರಾಧಾಕೃಷ್ಣನ್ ೧೯೭೦ ತತ್ವಶಾಸ್ತ್ರ: ಪ್ರಾಚ್ಯ ಮತ್ತು ಪಾಶ್ಚಾತ್ಯ ಪುಟ. ೧೦೯

ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ

ವರ್ತಕರು (ಪರದರು)

ವರ್ತಕರು ಹಿಂದಿನ ಕರ್ನಾಟಕದಲ್ಲಿ ಸಮಾಜದ ಅತ್ಯಂತ ಪ್ರಮುಖ ಭಾಗವಾಗಿದ್ದರು. ಈಗಲೂ ಕುಂಬಾರರೂ ಗಾಣಿಕರೂ ಇವರೇ ಮೊದಲಾದವರು ತಮ್ಮನ್ನು ತಾವು "ಶೆಟ್ಟಿಗಳು" ಎಂದು ಕರೆದುಕೊಳ್ಳುವುದರ ಮೂಲಕ (ಕುಂಬಾರ ಶೆಟ್ಟರು, ಗಾಣಿಗ ಶೆಟ್ಟರು) ತಾವೂ ವರ್ತಕರೆಂದು ಭಾವಿಸುವುದರಿಂದ, (ವಾಸ್ತವವಾಗಿ ಅವರು ಮಡಕೆ, ಎಣ್ಣೆ ಮಾರುವ ವರ್ತಕರೆ ತಾನೆ!), ಶಾಸನ ಪಾಠದ ಆರಂಭದ 'ಸ್ವಯಂಭು ಸೆಟ್ಟಿ', 'ಪಸುಂಬೆ ಸೆಟ್ಟಿ' ಮಾತುಗಳು ಕುಂಬಾರರು ತಮ್ಮ ಕುಲದ (ಕುಂಬಾರ ಜಾತಿಯ) ನಾಯಕರನ್ನೇ ಉದ್ದೇಶಿಸಿ ಹೇಳಿರುವಂತಿದೆ ಎಂಬ ಊಹೆಗೂ ಅವಕಾಶವಿದೆ. ಉಳಿದ ವರ್ತಕ ಸಮೂಹವೇ ವಿಷಯದಲ್ಲಿ ಬಳಸುವ ಮಾತುಗಳನ್ನೇ ತಮ್ಮ ಕುಲದ ಮುಖ್ಯರಿಗೂ, ಬಳಸಿರಬಹುದೆಂದೂ ಹೇಳಬಹುದು. ಆದರೆ "ಐಸಾವಂತರ ಪ್ರಶಸ್ತಿಯೆಂತೆಂದಡೆ . . . ಉತ್ತಮ ಸಮಯಕ್ಕೆ ನಮಸ್ಕಾರವಂ ಮಾಡಿದೆವು. ಅವಧಾರಿಸಿ ಸ್ವಾಮಿಗಳಿರಾ" ಎಂಬ ಮಾತಿನ ಹಿನ್ನೆಲೆಯಲ್ಲಿ ಮತ್ತ "ಪಸುಂಬೆ"ಯು ಅಕ್ಕಿ ಬೇಳೆ ಬೆಲ್ಲದಂತಹ ಮಾರಾಟದ ವಸ್ತುಗಳನ್ನು ಕೊಂಡೊಯ್ಯುವ ಹಸುಬೆ ಚೀಲವನ್ನು ಸೂಚಿಸುವುದರ ಹಿನ್ನೆಲೆಯಲ್ಲಿ (ಹಸುಬೆ ಚೀಲದಲ್ಲಿ ಮಡಕೆಗಳನ್ನು ಕೊಂಡೊಯ್ಯಲು ಸಾಧ್ಯವಿಲ್ಲ ತಾನೆ!), "ಪಟ್ಟಣಾಧೀಶ್ವರ" (ಪಟ್ಟಣಸ್ವಾಮಿ, ಪಟ್ಟಣಶೆಟ್ಟಿ)ಒಂದು ನಗರದ ವರ್ತಕ ಸಮೂಹದ ಮುಖ್ಯಸ್ಥನನ್ನು ಸೂಚಿಸುವ ಪಾರಿಭಾಷಿಕ ಪದವಾಗಿರುವುದರಿಂದ, "ನಮ್ಮ ಎಂಬ ಪಾಠವೇ ಸ್ವೀಕಾರಾರ್ಹ. ಒಂದು ರೀತಿಯ ಮಾರಾಟಗಾರರೂ ಆಗಿರುವ ಅಯಾವಂತ ಅಥವಾ ಕುಂಬಾರರು ತಮ್ಮಗಿಂತ ಮೇಲೆ ಜಾತಿಗೆ ಸೇರಿದ ಬಣಜಿಗ ವರ್ತಕರ (ಚಿನ್ನ, ಬೆಳ್ಳಿ, ಧಾನ್ಯ, ಬಟ್ಟೆ ವ್ಯಾಪಾರಿಗಳ) ಮುಖ್ಯರಿಗೆ ಗೌರವವನ್ನು ತೋರಿ ("ಉತ್ತಮ ಸಮಯಕ್ಕೆ ನಮಸ್ಕಾರವಂ ಮಾಡಿದೆವು") ತಮ್ಮ ಕುಲೋತ್ಪತ್ತಿಯ ಕತೆಯನ್ನು ಅವರಿಗೆ ನಿವೇದಿಸಿಕೊಂಡ ಧಾಟಿಯಲ್ಲಿ ಶಾಸನವು ರಚಿತವಾಗಿದೆ. ಡಾ. ಎಂ. ಚಿದಾನಂದಮೂರ್ತಿ. ವಿವಾಹ ಪುರಾಣ ಲೇಖನ)

ವ್ಯಾಪಾರವನ್ನು ವೃತ್ತಿಯಾಗಿಸಿಕೊಂಡವರನ್ನು ವರ್ತಕರು ಎಂಬ ಹೆಸರಿನಿಂದ ಕರೆಯಲಾಗಿದೆ. ವರ್ತಕರಲ್ಲಿ ಎರಡು ರೀತಿಯ ಪ್ರಕಾರಗಳೂ ಕಂಡುಬರುತ್ತವೆ. ಅವರುಗಳೆಂದರೆ, ವಿನಿಮಯ ವರ್ತಕರು ಮತ್ತು ಉತ್ಪಾದಕ ವಿನಿಮಯ ವರ್ತಕರು. ಸೆಟ್ಟಿ–ಬಣಂಜಿಗ, ಸೆಟ್ಟಿಗುತ್ತ, ನಕರ, ಮುಂಮುರಿದಂಡ, ವಡ್ಡ ವ್ಯವಹಾರಿ, ಗಾತ್ರಿಗ, ಸೆಟ್ಟಿಕಾರ, ಹಲರು, ಎಳಮೆ, ಸಾಲಿಕೆ ಬಲ್ಲಾಳುಗಳು, ನಾನಾದೇಶಿ, ಉಭಯನಾನಾದೇಶಿಗಳು ಮುಂತಾದವರು ವ್ಯಾಪಾರವನ್ನೇ ವೃತ್ತಿಯನ್ನಾಗಿಸಿಕೊಂಡ ವಿನಿಮಯ ವರ್ತಕರು, ಅಕ್ಕಸಾಲಿ, ಮಾದಿಗ, ಸಮಗಾರ ಮೇದ ಮೊದಲಾದವರು ಉತ್ಪಾದಕ–ವಿನಿಮಯ ವರ್ತಕರು. ಇವರೆಲ್ಲರೂ ಮಧ್ಯಕಾಲೀನ ಕರ್ನಾಟಕದಲ್ಲಿ

ನಗರ ವ್ಯವಸ್ಥೆಯೊಂದು ಕಾಣಿಸಿಕೊಳ್ಳುವುದಕ್ಕೆ ಕಾರಣರಾದರು. ವ್ಯಾಪಾರಸ್ಥರು ಆಂತರಿಕ ವ್ಯಾಪಾರ ಮಾತ್ರವಲ್ಲದೆ ವಿದೇಶಿ ವ್ಯಾಪಾರವನ್ನೂ ನಡೆಸುತ್ತಿದ್ದರು. ಕ್ರಿ. ಶ. ೧೦೫೪ರ ಶಾಸನವೊಂದು ವ್ಯಾಪಾರಸ್ಥರು ಭೂ ಮತ್ತು ಜಲಮಾರ್ಗದ ಮೂಲಕ ಹೊರರಾಜ್ಯಗಳೊಡನೆ ವ್ಯಾಪಾರ ನಡೆಸುತ್ತಿದ್ದ ಮಾಹಿತಿ ನೀಡುತ್ತದೆ. ಸಮುದ್ರ ವ್ಯಾಪಾರವು ಮುಖ್ಯವಾಗಿ ಹೊನ್ನಾವರ, ಭಟ್ಕಳ, ಮಂಗಳೂರು ಮುಂತಾದ ಬಂದರುಗಳ ಮೂಲಕ ನಡೆಯುತ್ತಿತ್ತು ಎನ್ನುವ ವಿಚಾರ ಅರಬ್ ಪ್ರವಾಸಿಗರ ಬರಹಗಳಿಂದ ತಿಳಿದಿಬರುತ್ತದೆ. ದೋರಸಮುದ್ರ, ಬೇಲೂರು, ವಿಷ್ಣು ಸಮುದ್ರ, ಶ್ರವಣಬೆಳಗೊಳದ ವ್ಯಾಪಾರಸ್ಥರು ಸಮುದ್ರ ವ್ಯಾಪಾರದಲ್ಲಿ ಹೆಚ್ಚು ಭಾಗವಹಿಸುತ್ತಿದ್ದರು ಎನ್ನುವುದು ಶಾಸನಗಳಿಂದ ತಿಳಿದುಬರುತ್ತದೆ. ಚೀಣಾ, ಮಲಯಾ, ಜಾವ, ಸಿಲೋನ್, ಮಲಾಕ್ಕ, ಫಾರ್ಮೋಸಾ, ಮುಂತಾದ ದೇಶಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಇಟ್ಟುಕೊಳ್ಳಲಾಗಿತ್ತು. ಕರ್ನಾಟಕದ ಕರಾವಳಿ ಪ್ರದೇಶಗಳನ್ನು ವಿದೇಶಿ ವ್ಯಾಪಾರಕ್ಕಾಗಿ ಬಳಸಿಕೊಳ್ಳಲಾಯಿತು. ವಿದೇಶಿ ವ್ಯಾಪಾರಿ ಹಡಗುಗಳು ಹೊನ್ನಾವರ, ಭಟ್ಕಳ, ಮಂಗಳೂರು ಮುಂತಾದ ಬಂದರುಗಳಿಗೆ ಬರುತ್ತಿದ್ದವು. (ಮೋಹನಕೃಷ್ಣ ರೈ, ೨೦೦೪. ಪು. ೯೦-೯೧) ಶ್ರೇಷ್ಠಿಯೆಂದರೆ ವರ್ತಕರು ಎಂಬುದು ಇಲ್ಲಿ ಗಮನಾರ್ಹವಾಗಿದೆ.

ವಶೀಕರಣ

ಯಕ್ಷರು, ಕಿನ್ನರರು ಮೊದಲಾದ ಅರ್ಧದೇವತೆಗಳ ಸಂಖ್ಯೆ ಹೆಚ್ಚಿದಂತೆ ಅಸಂಖ್ಯಾತ ಪ್ರಮಾಣದಲ್ಲಿ ಧಾರ್ಮಿಕ ವಿಧಿಕ್ರಿಯೆಗಳೂ ಹುಟ್ಟಿಕೊಂಡುವು. ಈ ಗೋಜಲು ಗೋಜಲಾದ ಕ್ರಿಯೆಗಳೊಂದಿಗೆ, ಅವುಗಳನ್ನು ಮನೋಯೋಗದೊಂದಿಗೆ ಬಳಸಬಲ್ಲಂಥ ರಹಸ್ಯಮಯ ಮಂತ್ರಯಾನಿಗಳೂ ಹುಟ್ಟಿಕೊಂಡರು. ಐತಿಹಾಸಿಕ ವ್ಯಕ್ತಿಯಾಗಿದ್ದ ಬುದ್ಧ ಸರ್ವಶಕ್ತನಾದ ದೇವತೆಯಾಗಿ ಪರಿಣಮಿಸಿದ. ಬೌದ್ಧಧರ್ಮ ಒಂದು ವಿಚಿತ್ರವಾದ ಹಾಗೂ ಅಲೌಕಿಕವಾದ ಮಜಲನ್ನು ಪ್ರವೇಶಿಸಿತು. ರಹಸ್ಯಪೂರ್ಣ ವ್ಯಕ್ತಿತ್ವವನ್ನು ಹೊಂದಿದ್ದಂಥ ಮಂತ್ರವಾದಿಗಳು ಇದಕ್ಕೆ ಸೂತ್ರಧಾರರಾಗಿ ಪರಿಣಮಿಸಿದರು. ದೀರ್ಘವಾಗಿದ್ದ ಸೂತ್ರಗಳನ್ನು ಅವರು ಕಿರಿದಾಗಿಸಿದರು; ಮತ್ತೆ ಅವುಗಳನ್ನು ಇನ್ನಷ್ಟು ಕಿರಿದಾಗಿಸಿ ಮಂತ್ರಗಳನ್ನಾಗಿಸಿದರು. ಸುಮಾರು ಈ ಕಾಲದ ಹೊತ್ತಿಗೆ ಸ್ಥೂಲವಾದ, ಹೆಚ್ಚು ಹೆಚ್ಚು ಲಾಭಕರವಾದ ದೈಹಿಕ ಪ್ರಕ್ರಿಯೆಗಳು ಎಂಬ ಅರ್ಥದಲ್ಲಿ 'ಯೋಗ' ಶಬ್ದವನ್ನು ಬಳಸತೊಡಗಿದರು. ಹಠಯೋಗ ತನ್ನ ಭಯಂಕರ ಯಾತನಾಪೂರ್ಣ ಪ್ರಕ್ರಿಯೆಗಳೊಂದಿಗೆ ಪ್ರೇಕ್ಷಕರಲ್ಲಿ ಭಯವನ್ನು ಮೂಡಿಸತೊಡಗಿತು. ಮಂತ್ರಯಾನದ ಸಿದ್ಧರು ಹಾಗೂ ಜಟಿಲ ಪ್ರಕ್ರಿಯೆಗಳಲ್ಲಿ ತೊಡಗುತ್ತಿದ್ದ ರಹಸ್ಯಪೂರ್ಣ ವ್ಯಕ್ತಿತ್ವದ ಸಾಧಕರು ವಿಹಾರಗಳಲ್ಲಿ ಕುಳಿತು ಹಠಯೋಗದ ಪ್ರಕ್ರಿಯೆಗಳ ಮೂಲಕ ಅಲೌಕಿಕ ಶಕ್ತಿಗಳನ್ನು ಸಂಚಯಿಸಿಕೊಳ್ಳತೊಡಗಿದರು. ಅವರಿಗೆ ಸಮ್ಮೋಹನಗೊಳಿಸುವ ಹಾಗೂ

ಉಚ್ಚಾಟನೆಗೊಳಿಸುವ ಶಕ್ತಿಗಳು ಕೈವಶವಾಗತೊಡಗಿದುವು. ಈ ಪ್ರಕ್ರಿಯೆಗಳಿಂದ ಲಭಿಸುವ ಶಕ್ತಿ ಇಂದು ನಮ್ಮಲ್ಲಿ ವಶೀಕರಣ (Mesmerism) ಮತ್ತು ಸಮ್ಮೋಹನ (Hypnotism) ವಿದ್ಯೆಗಳನು ಅಭ್ಯಾಸ ಮಾಡಿರುವ ವ್ಯಕ್ತಿಗಳಲ್ಲಿ ಕಾಣಸಿಗುವಂಥ ಶಕ್ತಿಯೇ ಆಗಿತ್ತು. ಹಠಯೋಗ ಜನರ ಮೇಲೆ ಮಂತ್ರ ಸದೃಶ ಪ್ರಭಾವವನ್ನು ಬೀರಿತು. ಮಠ ಮತ್ತು ವಿಹಾರಗಳ ಅಂಗಗಳೆಲ್ಲ ಈ ಸಿದ್ಧರ ಪ್ರಯೋಗಗಳಿಂದ ಚಕಿತರಾದ ಹಾಗೂ ಭಯಭೀತರಾದ ನರ-ನಾರುಯರಿಂದ ತುಂಬಿ ಹೋಗಿದ್ದುವು. ಅಕ್ರಿಯ ಉಪಾಸಕರು ಸಮ್ಮೋಹನದ ಪ್ರಭಾವಕ್ಕೆ ಒಳಗಾಗಿ ನೇರವಾಗಿ ಈ ಸಿದ್ಧರ ಗುಲಾಮರಾಗಿಬಿಟ್ಟರು. ವಿಹಾರಗಳಲ್ಲಿ ಹಣದ ಸುರಿಮಳೆಯೇ ಆಗತೊಡಗಿತು. ಮಠಗಳ ನೆಲ-ಅಂತಸ್ತಿನ ಗುಹೆಗಳಂತಿದ್ದ ಕೋಣೆಗಳಿಗೆ ಸುಂದರ ಸ್ತ್ರೀಯರು, ಸಂಕೇತ ಮಾತ್ರದಿಂದಲೇ ಕರೆದೊಯ್ಯಲಾಗುವ ಅಂಧರಂತೆ, ಸದ್ದಿಲ್ಲದೆ ಸಾಗತೊಡಗಿದರು. ಆ ಅಂಧಕಾರಮಯ ಕೋಣೆಗಳಲ್ಲಿ ಪಾಪಭಕ್ತಿಯ ವೇಷವನ್ನು ಧರಿಸಿಕೊಂಡು ಕೂತಿರುತ್ತಿತ್ತು. ಈ ಶ್ರದ್ಧಾವಂತರು ಅಲ್ಲಿಗೆ ಬಂದು ಸೇರಿದ ಕೂಡಲೇ ಅದು ಅವರನ್ನು ನುಂಗಿ ನೀರು ಕುಡಿಯುತ್ತಿತ್ತು. ಹಠಯೋಗ, ಮಂತ್ರ ಮತ್ತು ಮೈಥುನ-ಇವೇ ಮಂತ್ರಯಾನದ ಮೂರು ಹೆಜ್ಜೆಗಳಾಗಿಬಿಟ್ಟುವು.

ವಿವರಗಳಿಗೆ ನೋಡಿ: ಭಗವತ್ ಶರಣ ಉಪಾಧ್ಯಾಯ ೨೦೦೪ ಪು. ೨೦೮

ವಷಟ್ಕಾರ

ವಷಟ್ ಎಂಬ ಶಬ್ದೋಚ್ಚಾರಣೆ, ಇದನ್ನು ಯಾಗದ ಸಂದರ್ಭದಲ್ಲಿ ಬಳಸುತ್ತಾರೆ. ಹವಿಸ್ಸಿನ ಅರ್ಪಣೆಯಲ್ಲಿ ಹೇಳುವ ಮಂತ್ರವಿದು.

ವಾಗ್ದೇವಿ

ವಾಗ್ದೇವಿಗೆ ಸರಸತಿ, ಸಾರದೆ, ನುಡಿವೆಣ್ ಎಂದೂ ಕರೆಯಲಾಗಿದೆ. ಸಾರದೆ ಎಂದು ತುಳುವಿನಲ್ಲಿಯೂ ಚಾಲ್ತಿಯಲ್ಲಿದೆ. *ವಿವರಗಳಿಗೆ ನೋಡಿ:* ಕ.ನಿ.ಪುಟ ೭೭

ವಾನಪ್ರಸ್ಥ

ಬ್ರಹ್ಮಚರ್ಯ, ಭೂಮಿಯಲ್ಲಿ ಮಲಗುವುದು, ಜಟೆ ಮತ್ತು ಕೃಷ್ಣಾಜಿನಗಳನ್ನು ಧರಿಸುವುದು, ಅಗ್ನಿಹೋತ್ರ, ಮೂರು ಹೊತ್ತುಸ್ನಾನ, ದೇವತಾಪಿತೃ ಅತಿಥಿಗಳನ್ನು ಪೂಜಿಸುವುದು, ಗೆಡ್ಡೆ ಗೆಣಸುಗಳನ್ನು ಸೇವಿಸುವುದು, ವನದಲ್ಲಿ ವಾಸಿಸುವುದು ವಾನಪ್ರಸ್ಥನ ಲಕ್ಷಣಗಳಾಗಿವೆ. ಇವು ವಾನಪ್ರಸ್ಥನ ಧರ್ಮಗಳು. ಪಾಂಡು ವಾನಪ್ರಸ್ಥಕ್ಕೆ ಹೋಗಿರುವುದನ್ನು ನೆನಪಿಸಿಕೊಳ್ಳಬಹುದು.

ವಿವರಗಳಿಗೆ ನೋಡಿ: ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು 2010 ಕೌಟಲೀಯ ಅರ್ಥಶಾಸ್ತ್ರ ಪುಟ. 35

ವಾಯುಗಳು

ಐದು ವಾಯುಗಳ ಕುರಿತು ವೇದಾಂತವು ಹೀಗೆ ಹೇಳುತ್ತದೆ: ಕೆಲವರಾದರೋ ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ ಎಂಬ ಹೆಸರಿನ ಬೇರೆ ಐದು ವಾಯುಗಳು ಇವೆಯೆಂದು ಹೇಳುತ್ತಾರೆ. (ವೇದಾಂತಸಾರ 1973 ಪುಟ.50)

ಕೆಲವು ಉಪನಿಷತ್ತುಗಳಲ್ಲಿ ಇವನ್ನು ಹೇಳಿದೆ. ಮೇಲೆ ಹೇಳಿದ ಐದು ಪ್ರಾಣಗಳಿಗಿಂತ ಇವು ಬೇರೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಅವುಗಳಲ್ಲಿ ತೇಗನ್ನು ಉಂಟುಮಾಡುವುದು ನಾಗ; (ಕಣ್ಣಿನ ರೆಪ್ಪೆಯನ್ನು) ತೆರೆಯುವುದು ಕೂರ್ಮ; ಹಸಿವನ್ನುಂಟುಮಾಡುವುದು ಕೃಕಲ; ಆಕಳಿಕೆಯನ್ನುಂಟುಮಾಡುವುದು ದೇವದತ್ತ; (ದೇಹವನ್ನು) ಬೆಳೆಸುವುದು ಧನಂಜಯ. (ವೇದಾಂತಸಾರ 1973 ಪುಟ.50)

ಕಣ್ಣಿನ ರೆಪ್ಪೆಗಳು ಹೊಡೆದುಕೊಳ್ಳುವಂತೆ ಮಾಡುವುದು ಕೂರ್ಮ ಎಂಬುದು ಗಮನಾರ್ಹ. ಕರ್ಮೇಂದ್ರಿಯಗಳಿಂದ ಕೂಡಿದ ಈ ಪ್ರಾಣಾದಿಪಂಚಕ ಪ್ರಾಣಮಯಕೋಶ ಆಗುತ್ತದೆ. ಇದು ಕ್ರಿಯಾಸ್ವರೂಪವಾದುದರಿಂದ ರಜೋಗುಣದ ಕಾರ್ಯ. (ವೇದಾಂತಸಾರ 1973 ಪುಟ.51)

ಪ್ರಾಣಾದಿಗಳು ಸದಾ ಯಾವುದಾದರೂ ಒಂದು ದಿಕ್ಕಿನಲ್ಲಿ ಚಲಿಸುತ್ತಿರುವುದರಿಂದ ಅವುಗಳ ಸ್ವರೂಪ ಗಮನಕ್ರಿಯಾ ಸ್ವರೂಪ ಎಂದು ವೇದಾಂತವು ಹೇಳುತ್ತದೆ. (ನೋಡಿ: ಇಂದ್ರಿಯ)

ವಾರವನಿತೆ

ವಾರಾಂಗನೆ; ವಾರಸ್ತ್ರೀ; ಎಂದರೆ ಸೂಳೆಯೆಂದರ್ಥ. ಲೌಕಿಕದಲ್ಲಿ ಸಮ್ಯಕ್ತ್ವವಿಲ್ಲದುದರಿಂದ; ರಸಿಕತೆಯ ಕಾರಣದಿಂದ ಮರುಜನ್ಮದಲ್ಲಿ ಅವಳು ಸೂಳೆಯಾಗುತ್ತಾಳೆ. ವಾರವಧು, ವಾರವಾಣೀ(ಬಹುಜನರ ಆದರಕ್ಕೆ ಪಾತ್ರಳಾದ ವೇಶ್ಯೆ). ವಾರಸುಂದರೀ(ವೇಶ್ಯೆ, ಸೂಳೆ) ವಾರಸ್ತ್ರೀ (ವೇಶ್ಯೆ) ಎಂಬ ಪದಗಳು 'ವಾರವನಿತೆ'ಗೆ ಪರ್ಯಾಯ ಪದಗಳಾಗಿವೆ.

ವಿವರಗಳಿಗೆ ನೋಡಿ: ಡಿ. ಡಿ. ಕೊಸಾಂಬಿ 2003 ಪುರಾಣ ಮತ್ತು ವಾಸ್ತವ
ಪುಟ. 94–96.

ವಿಕ್ರಿಯಾ ಶುದ್ಧಿ

ವಿಕ್ರಿಯಾಶುದ್ಧಿಯ ವಿಷಯ ಬರುತ್ತದೆ. ಋದ್ಧಿಗಳಲ್ಲೊಂದು. ಅಣಿಮಾದಿ ಶಕ್ತಿಗಳನ್ನು ಬಳಸಿಕೊಂಡು, ಅವಕ್ಕೆ ತಕ್ಕ ರೂಪವನ್ನು ಧರಿಸಿಕೊಳ್ಳುವ ಶಕ್ತಿ.

ವಿಜಾತಿ

ವಿಜಾತಿ ಎಂದರೆ ಜಾತಿಹೀನ ಕುಲವಿಲ್ಲದವನು ಎಂಬ ಅರ್ಥವನ್ನು ಸೂಚಿಸುತ್ತದೆ. ಜಾತಿ ಶ್ರೇಣಿಕರಣದಲ್ಲಿ ಜನ್ಮಕ್ಕೆ ಮತ್ತು ಜಾತಿಗೆ ಸಂಬಂಧವಿದೆ.

ಮನುಷ್ಯ ಯಾವ ಜಾತಿಯಲ್ಲಿ ಹುಟ್ಟುತ್ತಾನೋ ಆ ಜಾತಿಯ ಮೂಲಕ ಅವನನ್ನು ಗುರುತಿಸಲಾಗುತ್ತದೆ. ಈ ದೃಷ್ಟಿಯಿಂದ ಜಾತಿ ಎನ್ನುವುದು ನಮ್ಮ ಸಮಾಜದಲ್ಲಿ ಸ್ಥಾನಮಾನದ ಪ್ರಶ್ನೆಯಾಗಿದೆ. ಯಾರು ಜಾತಿಯ ಚೌಕಟ್ಟಿನ ಒಳಗಡೆ ಇರುವುದಿಲ್ಲವೋ ಅವರನ್ನು ವಿಜಾತಿ ಎಂದು ಕರೆಯಲಾಗುತ್ತದೆ. ಜಾತಿ ಮಾನದಂಡದ ದೃಷ್ಟಿಯಿಂದ ವಿಜಾತಿಯರು ಯಾವುದೇ ಸ್ಥಾನಮಾನವನ್ನು ಪಡೆದುಕೊಳ್ಳುವುದಿಲ್ಲ. ಜಾತಿ ಚೌಕಟ್ಟಿನಿಂದ ಹೊರಗಡೆ ಇರುವುದರಿಂದ ಅವರಿಗೆ ಸಾಮಾಜಿಕ ಸೌಲಭ್ಯವು ಇಲ್ಲ. ವ್ಯಭಿಚಾರದಿಂದ ಹುಟ್ಟಿದ ಮಕ್ಕಳನ್ನು ವಿಜಾತಿಯರೆಂದು ಗುರುತಿಸಲಾಗುತ್ತದೆ.

ವಿದ್ಯಾಧರಕರಣ

ಆಕಾಶಗಾಮಿನಿ ವಿದ್ಯೆಗೆ ಮತ್ತೊಂದು ಹೆಸರು. ಆಯುಧಗಳನ್ನು ಬಿಡುವಾಗ ಆರು ರೀತಿಯ ಸ್ಥಾನಕಗಳು ಇವೆ. 1.ವೈಷ್ಣವ 2.ಸಮಪಾದ 3.ವೈಶಾಖ 4.ಮಂಡಲ 5.ಪತ್ಯಾಲೀಢ 6.ಆಲೀಢ. ಇದಕ್ಕೆ ಸಂಬಂಧಿಸಿದಂತೆ ನಾಲ್ಕು ನ್ಯಾಯಗಳಿವೆ: 1) ಭರತನು ಬಿಡುವ ಆಯುಧವು ಸೊಂಟಕ್ಕೆ ತಗಲಬೇಕು, ಕಟಿಚ್ಛೇದ 2) ಸತ್ವತ್ತನು ಪಾದಚ್ಛೇದವನ್ನು 3) ವಾರ್ಷಗಂಗನು ವಕ್ಷಚ್ಛೇದವನ್ನೂ 4) ಕೈಶಿಕನು ಶಿರಚ್ಛೇದವನ್ನು ಮಾಡಬೇಕೆಂಬುದು ಯುದ್ಧ ನ್ಯಾಯ. ನಾಟ್ಯದಲ್ಲಿಯೂ ಹದಿನಾರು ಭೌಮಾಚಾರಿಗಳು 16 ಆಕಾಶಚಾರಿಗಳೂ ಇವೆ. ಯುದ್ಧ ಕ್ರಮದಲ್ಲಿಯೂ ನೆಲದ ಮೇಲೆ ನಿಂತು; ರಥದ ಮೇಲೆ ನಿಂತು; ಕುದುರೆಯ ಮೇಲೆ ಕುಳಿತು, ಆನೆಯ ಮೇಲೆ ಕುಳಿತು ಯುದ್ಧ ಮಾಡುವ ಕ್ರಮವಿದೆ.

ವಿವರಗಳಿಗೆ ನೋಡಿ: ಯು.ಎಸ್. ಕೃಷ್ಣರಾವ್ 1971 ಆಧುನಿಕ ಭಾರತದಲ್ಲಿ ನೃತ್ಯಕಲೆ ಪುಟ. 59

ವಿದ್ಯಾಭ್ಯಾಸ

ಮತ್ತು ಕಲೆಯು ಒಂದು ರೀತಿಯ ವಿದ್ಯೆಯೇ. ಶ್ರೀವತ್ಸ ನಿಘಂಟು ಇದರ ಕುರಿತು ಹೀಗೆ ವಿವರಣೆ ನೀಡಿದೆ. ನಾವೀಗ ಬಳಸುತ್ತಿರುವ ಪರೀಕ್ಷೆ ಎನ್ನುತ್ತಿರುವುದಕ್ಕೂ ಬೇರೆ ಬೇರೆ ರೀತಿಯ ಅರ್ಥಗಳಿವೆ : ಚರಕ ಸಂಹಿತೆಯ ಪ್ರಕಾರ ವ್ರಣ ಚಿಕಿತ್ಸೆಯ ದರ್ಶನ ; ಸ್ಪರ್ಶ, ಸಂಸ್ಪರ್ಶ. ನಿಘಂಟು ರತ್ನಾಕರದಲ್ಲಿ ಪರೀಕ್ಷಾ ಎಂದರೆ ಎಂಟು ವಿಧ : ನಾಡಿ, ಮೂತ್ರ, ಮಲ, ಜಿಹ್ವೆ, ಶಬ್ದ, ಸ್ಪರ್ಶ, ನೇತ್ರ, ರೂಪ. ಇದು ದೇಹವನ್ನು ಪರೀಕ್ಷಿಸುವುದಕ್ಕಾಗಿ ಬಳಸಿಕೊಳ್ಳುವ ವಿಧಾನ. ಮತ್ತೊಂದು ಪರೀಕ್ಷಾ ಇದೆ. ಅದು ಹತ್ತು ವಿಧ, ಕಾರಣ, ಕರಣ, ಕಾರ್ಯಯೋನಿ, ಕ್ರಾರ್ಯ, ಕಾರ್ಯಫಲ, ಅನುಬಂಧ, ದೇಶ, ಕಾಲ, ಪ್ರವೃತ್ತಿ, ಉಪಾಯ (ಚರಕ–260). ಕಲಾ–64 : (ಅ) ವಾತ್ಸಾಯನ ಕಾಮಸೂತ್ರದಲ್ಲಿ 64 ವಿದ್ಯೆ ಹೇಳಲಾಗಿದೆ. ಇಂಗ್ಲಿಷಿನಲ್ಲಿ ಎಜುಕೇಶನ್ ಎನ್ನುವ ಪದ ಬಂದಿರುವುದು ಲ್ಯಾಟಿನ್ ಮೂಲದಿಂದ.

1.Edu Care ಅಂದರೆ to lead forth   2.Edu Care ಅಂದರೆ to bring out

ಇಂಗ್ಲೀಷಿನಲ್ಲಿ Literate ಮತ್ತು Illiterate ಎಂಬ ಪದವನ್ನು ಬಳಸುತ್ತಾರೆ. Literate ಎಂದರೆ ಅಕ್ಷರಸ್ಥರು ಎಂದೂ Illiterate ಎಂದರೆ ಅನಕ್ಷರಸ್ಥರು ಎಂದು ಅರ್ಥ. ಈ ಪದಗಳ ಹಿಂದಿರುವ ಇತಿಹಾಸವು ಗಮನಾರ್ಹ. ವಿದ್ಯೆಯೆಂದರೆ – ತಿಳಿಯು, being found : pursuit of learning ಎಂದು ಕಿಟ್ಟೆಲ್ ಹೇಳುತ್ತಾರೆ (ಕಿಟ್ಟೆಲ್ ಕೋಶ, ಸಂ. IV, 1482) ಶಿಕ್ಷಣ ಅಂದರೆ ಕಲಿಕೆ. ಪಾಠಶಾಲೆ = ಓದುವ ಮನೆ (ಕಿಟ್ಟೆಲ್, ಅದೇ, 1530), ರೋಮನ್‌ನಲ್ಲಿ Littera, ಲ್ಯಾಟಿನ್‌ನಲ್ಲಿ Letter (ಅಕ್ಷರಮಾಲೆ) ಎಂಬುದನ್ನು ಸೂಚಿಸುತ್ತದೆ. ಕ್ರಿ.ಶ. 15ನೇ ಶತಮಾನದಲ್ಲಿ Literate ಎನ್ನುವುದಕ್ಕೆ ವಿಶೇಷ ಅರ್ಥ ಬಂತು. ಅದಕ್ಕೆ ಸಾಹಿತ್ಯಕ ಅರ್ಥವಂತಿಕೆಯೂ ದೊರೆಯಿತು. Illiterate ಅಂದರೆ ಸರಿಯಾಗಿ ಓದುಲು, ಬರೆಯಲು ಬಾರದ ಎಂಬ ಅರ್ಥ ದೊರೆಯುತ್ತದೆ. ಹಾಗೆಯೇ ಮುಗ್ಧ ಎಂಬ ಅರ್ಥ ಕೂಡಾ. Literati ಅಂದರೆ ತುಂಬಾ ಓದಿದವನು ಎಂಬ ಅರ್ಥವಿದೆ. ಸಾಹಿತ್ಯ ಮತ್ತು ಅಕ್ಷರ ಚಳುವಳಿಯು 18ನೇ ಶತಮಾನದ ಪೂರ್ವದಲ್ಲಿ ಯುರೋಪಿನಲ್ಲಿ ವ್ಯಾಪಕವಾಯಿತು. ಅದರೊಂದಿಗೆ ಬರವಣಿಗೆ ಮತ್ತು ಸಂವಹನವು ವಿಶೇಷ ಮಾಧ್ಯಮವಾಯಿತು. ಚಿತ್ರಕಲೆ, ಸಂಗೀತ, ದಂತ ಬರವಣಿಗೆಯು ಕೂಡಾ ಒಂದು ರೀತಿಯ ಅಭಿವ್ಯಕ್ತಿ ಮಾಧ್ಯಮ. ಹದಿನೆಂಟನೆಯ ಶತಮಾನದಲ್ಲಿ ಅಕ್ಷರ ಮಾಧ್ಯಮವೆನ್ನುವುದು ಮುದ್ರಣ ಮಾಧ್ಯಮವಾಗಿ ಪರಿವರ್ತಿತವಾಯಿತು. ಇದರಿಂದ ಹೊಸ ಸಾಧ್ಯತೆಗಳು ರೂಪುಗೊಂಡವು. 19ನೆಯ ಶತಮಾನದ ಪೂರ್ವದಲ್ಲಿ ಅನಕ್ಷರತೆ ಮತ್ತು ಸಾಕ್ಷರತೆ ಎನ್ನುವುದು ಯುರೋಪಿನ ಸಮಾಜದಲ್ಲಿ ಪ್ರಮುಖ ಸಾಮಾಜಿಕ ಪರಿಕಲ್ಪನೆಗಳಾದವು. ಸಾಮಾಜಿಕ ಅಭಿವೃದ್ಧಿಯ ಪ್ರಮಾಣವನ್ನು ಅಳೆಯಲು ಇದು ಕೂಡ ಒಂದು ಸಾಧನವಾಯಿತು. ವಿದ್ ಎಂದರೆ ತಿಳಿ ಎಂದು ಅರ್ಥವಿದೆ. *(ಟಿ.ವಿ. ವೆಂಕಟಾಚಲಶಾಸ್ತ್ರೀ 1999 ಶ್ರೀವತ್ಸ ನಿಘಂಟು)*

ವಿದ್ಯೆಯ ಕೇಂದ್ರ

ಪೇಟೆ–ಪಟ್ಟಣಗಳಲ್ಲಿರುವ ಶಿಕ್ಷಣಕೇಂದ್ರಗಳನ್ನು ಬ್ರಹ್ಮಪುರಿಗಳೆಂದು ಹೆಸರಿಸಲಾಗಿದೆ. ಬ್ರಾಹ್ಮಣರು ಇವುಗಳಲ್ಲಿ ವಾಸವಾಗಿರುತ್ತಿದ್ದರು. ಪೇಟೆ–ಪಟ್ಟಣಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಿಲ್ಲವಾದ್ದರಿಂದಾಗಿ ಅಗ್ರಹಾರಗಳ ಸಂಖ್ಯೆಯೇ ಹೆಚ್ಚು ಇತ್ತು. ಕೆಲವು ಶಾಸನಗಳಲ್ಲಿ ಅಗ್ರಹಾರಗಳನ್ನು ಬ್ರಹ್ಮಪುರಿಗಳೆಂದೇ ಹೆಸರಿಸಲಾಗಿದೆ. ಕ್ರಿ.ಶ.೧೧೨೮ರ ಮುಳುಗುಂದ ಶಾಸನವು ಮುಳಗುಂದವನ್ನು ಬ್ರಹ್ಮಪುರಿ ಎಂಬುವುದಾಗಿ ಹೆಸರಿಸಿದೆ. ನಾಗಸ್ವಾಮಿ ಎನ್ನುವವನು ಈ ಬ್ರಹ್ಮಪುರಿಯ ಮುಖ್ಯಸ್ತನಾಗಿದ್ದು ಭೂಮಿ ಹಾಗೂ ಇತರ ವಸ್ತುಗಳನ್ನು ದಾನ ನೀಡಿದ ವಿವರ ಶಾಸನದಲ್ಲಿದೆ. ಆದರೆ ಮುಳುಗುಂದವು ಅಗ್ರಹಾರವಾಗಿತ್ತು ಎಂಬುದಾಗಿ ತಿಳಿದು ಬರುತ್ತದೆ. ಕೇಶಿರಾಜ ದಂಡಾಧಿಪ ಎನ್ನುವವನು ಕೇಶವ ದೇವಸ್ಥಾನವನ್ನು ನಿರ್ಮಿಸಿ ಅದರ ಎದುರುಗಡೆ ವೀರಕೇಶವಪುರ ಎಮಬ ಪಟ್ಟಣವನ್ನು ನಿರ್ಮಿಸಿದ. ಆ ಪಟ್ಟಣವನ್ನು ಶಾಸನದಲ್ಲಿ

ಬ್ರಹ್ಮಪುರಿ ಎಮಧು ಕರೆಯಲಾಗಿದೆ. ಕ್ರಿ.ಶ.೧೧೬೫ರ ಸೊರಬ ಶಾಸನವು ಮೂರು ಬ್ರಹ್ಮಪುರಿಗಳನ್ನು ಉಲ್ಲೇಖಿಸಿದರೆ, ಕ್ರಿ.ಶ.೧೧೯೨ರ ಕಡ್ಲೆವೇಡು ಶಾಸನವು ಎಂಟು ಬ್ರಹ್ಮಪುರಿಗಳ ಕುರಿತು ಮಾಹಿತಿ ನೀಡುತ್ತದೆ. ಬ್ರಹ್ಮಪುರಿಗಳ ಅಧ್ಯಯನ ನಡೆಸುವಾಗ ಅವು ಅಗ್ರಹಾರಗಳಿಂದ ಭಿನ್ನವಾಗಿ ಗೋಚರಿಸುವುದಿಲ್ಲ. ಅವುಗಳ ಕೆಲಸಕಾರ್ಯಗಳಲ್ಲೂ ಭಿನ್ನತೆಗಳು ಕಂಡುಬರುವುದಿಲ್ಲ. ಇರುವ ಒಂದು ಭಿನ್ನತೆಯೆಂದರೆ ಅಗ್ರಹಾರಗಳು ಹಳ್ಳಿಗಳಲ್ಲಿದ್ದು, ಬ್ರಹ್ಮಪುರಿಗಳು ಪೇಟೆ–ಪಟ್ಟಣಗಳಲ್ಲಿ ಇರುವುದು. ಎರಡೂ ಕೇಂದ್ರಗಳು ಅರಸ ಮತ್ತು ಖಾಸಗಿ ವ್ಯಕ್ತಿಗಳಿಂದ ದಾನದತ್ತಿಗಳನ್ನು ಪಡೆಯುತ್ತಿದ್ದವು. ಕಲಿಸುವ ವಿಷಯಗಳು ಒಂದೇ ರೀತಿ ಇರುತ್ತಿದ್ದವು.

ವಿಧವೆ

ವಿಧವೆಗೆ 'ಮುಂಡೆ' ಎಂಬ ಪದ ಪ್ರಯೋಗವಾಗಿರುವುದನ್ನು ಕಾಣಬಹುದು 'ಮುಂಡೆ' ಎನ್ನುವ ಪದಕ್ಕೆ ಈ ಅರ್ಥಗಳು ಬರುತ್ತವೆ. 1) A close – shaved woman; a window. 2) A female mendicant. 3) an unchaster woman. A harlot (kittal. F.1894 p.126) ವಿಧವೆಯ ತಲೆಯನ್ನು ಬೋಳಿಸುವ ಪದ್ಧತಿಯು ಪ್ರಾಚೀನ ಕಾಲದಲ್ಲಿ ಇರಲಿಲ್ಲ. 'ಪಾತಿವ್ರತ್ಯ ವೈಭವೀ' ಕರಿಸಿದ್ದರ ಫಲವಾಗಿ ವಿಧವೆಗೆ ಮರು ಮದುವೆಯ ಅವಕಾಶ ತಪ್ಪಿತು. ವಿಧವೆಗೆ ಕಠಿಣ ಜೀವನವನ್ನೂ ವಿಧಿಸಿದ್ದರಿಂದ ಸೌಭಾಗ್ಯಕ್ಕೆ ಎಲ್ಲಿಲ್ಲದ ಪ್ರಾಮುಖ್ಯ ಬಂತು. ಹತ್ತನೇ ಶತಮಾನದ ತರುವಾಯ ಉಲ್ಬಣಗೊಂಡ 'ಸತಿಪದ್ಧತಿ'ಯು ದಕ್ಷಿಣ ಭಾರತದಲ್ಲೆಲ್ಲಾ ಪ್ರಚುರಗೊಂಡಿತು. ಪಲ್ಲವ, ಚೋಳ, ಮೊದಲಾದ ಮನೆತನದ ಶಾಸನಗಳ ಮೂಲಕ ಇವನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಈ ಕಾರಣಗಳಿಂದ ಹತ್ತನೆಯ ಶತಮಾನದ ತರುವಾಯ ವಿಧವೆಯರು ಮಂಡೆ ಬೋಳಿಸಿಕೊಳ್ಳುವ ಪದ್ಧತಿಯೂ ಬಂದಿರಬೇಕು.

ಮನುಸ್ಮೃತಿಯು ವಿಧವೆಯರ ಪುನರ್ ವಿವಾಹವನ್ನು ಒಪ್ಪಿಕೊಳ್ಳುವುದಿಲ್ಲ. ಪರಾಶರ ಮತ್ತು ನಾರದರು ವಿಧವಾ ವಿವಾಹವನ್ನು ಒಪ್ಪುತ್ತಾರೆ. ನಾರದ ಐದು ಪರಿಸ್ಥಿತಿಗಳಲ್ಲಿ ಒಬ್ಬಳು ಹೆಂಗಸು ಇನ್ನೊಬ್ಬನನ್ನು ಮದುವೆಯಾಗಬಹುದು ಎಂದು ಹೇಳುತ್ತಾನೆ. ಮೊದಲನೆಯ ಗಂಡಸು ನಶಿಸಿದರೆ ಅಥವಾ ಮೃತಪಟ್ಟರೆ ವಿದೇಶವಾಸ ಮಾಡಿದರೆ ನಪುಂಸಕನಾಗಿದ್ದರೆ ಜಾತಿಭ್ರಷ್ಟನಾದರೆ ವಿಧವೆಯು ಪುನರ್ವಿವಾಹ ಮಾಡಿಕೊಳ್ಳಬಹುದು. 1856ರಲ್ಲಿ ವಿಧವೆಯರ ಪುನರ್ ವಿವಾಹ ಅಧಿನಿಯಮ ಬಂತು. ಒಬ್ಬ ವಿಧವೆಯು ತನ್ನ ಗೋತ್ರಜನನ್ನು ಮದುವೆಯಾಗಬಹುದು. ಅವಳ ಮೊದಲ ವಿವಾಹದಲ್ಲಿ ತನ್ನ ತಂದೆಯ ಗೋತ್ರವನ್ನು ಕಳೆದುಕೊಳ್ಳುತ್ತಾಳೆ. ಎರಡನೆಯದಾಗಿ ಅವಳು ಪುನರ್ ವಿವಾಹವಾದರೆ ತನ್ನ ಮೊದಲನೆಯ ಗಂಡನ ಸ್ವತ್ತಿನ ಅಧಿಕಾರ ಹೊಂದಿರುವುದಿಲ್ಲ. 1857ರಲ್ಲಿ ವಿಧವೆಯರ ವಿವಾಹವನ್ನು ಕಾನೂನು

ಬದ್ಧಗೊಳಿಸಲಾಯಿತು. ವಿಧವಾ – ವಿವಾಹದ ಬಗೆಗೆ ಋಗ್ವೇದವು ಪ್ರಜ್ಞಾವಂತರಲ್ಲಿ ಹೆಚ್ಚು ವಾಸ್ತವವಾದ, ಸಹಾನುಭೂತಿಪರವಾದ ಸೌಮ್ಯ ಸಮ್ಮತಿ ಕಂಡುಬರುತ್ತದೆ. 'ಕೋವಾಂಶಯುತ್ತಾ ವಿಧವೇವ ದೇವರಂಮರ್ಯಂನಯೋಷಾ ಕೃಣುತೇ ಸಧಸ್ಥ ಆ' (10–40–2). ಪತಿಯ ಮೃತ್ಯುವಿನ ನಂತರ ವಿಧವೆಯು ತನ್ನ ಮೈದುನನನ್ನು, ಕನ್ಯೆಯು ವಿವಾಹಕ್ಕಾಗಿ ಪುರುಷನನ್ನು ಆಕರ್ಷಿಸುವಂತೆ ಆಕರ್ಷಿಸಿದಳು. ಮನುವು ವಿಧವಾ ವಿವಾಹವನ್ನು ನಿಷೇಧಿಸಿದ್ದಾನೆ. ನಾರದ ಸ್ಮೃತಿಯಲ್ಲಿ, ಸ್ತ್ರೀಯರ ಪುನರ್ ವಿವಾಹ; ನಿಯಮಾನುಸಾರವಾಗಿ ದ್ಯೂತಕ್ಕೆ ಅವಕಾಶ ಕಲ್ಪಿಸಲಾಗಿದೆ. ಮನು ಮತ್ತು ಬೃಹಸ್ಪತಿ ಇಬ್ಬರೂ ನಿಯೋಗವನ್ನು ವಿರೋಧಿಸಿದ್ದಾರೆ. ಭೌದಾಯನ ಮತ್ತು ಗೌತಮರು ನಿಯೋಗವನ್ನು ಒಪ್ಪಿದ್ದಾರೆ. ನಿಯೋಗಕ್ಕೆ ಬಾಲವಿಧವಾ ವಿವಾಹಕ್ಕೆ ವಸಿಷ್ಠನ ಸಮ್ಮತಿಯಿದೆ. ಅವನು ಬ್ರಾಹ್ಮ, ದೈವ, ಆರ್ಷ, ಗಾಂಧರ್ವ, ಕ್ಷಾತ್ರ, ಮಾನುಷವೆಂದು ಆರು ಬಗೆಯ ವಿವಾಹವನ್ನು ಹೇಳಿದ್ದಾನೆ. ನಿಯೋಗದ ವಿಷಯ ಪಂಪ ಭಾರತದಲ್ಲಿ ಉಕ್ತವಾಗಿದೆ. ಪತಿಯ ಮೃತ್ಯುವಿನ ಅನಂತರ ವಿಧವೆಯು ತನ್ನ ಮೈದುನನ್ನು ಕನ್ಯೆಯು ವಿವಾಹಕ್ಕಾಗಿ ಪುರುಷನನ್ನು ಅಕರ್ಷಿಸುವಂತೆ ಆಕರ್ಷಿಸಿದಳು. (ಋಗ್ವೇದ ೧೦–೪೦–೨)

ಗಂಡನು ಸತ್ತರೆ ಸ್ತ್ರೀ ತನ್ನ ದೇಹವನ್ನು ಪರಿಪುಷ್ಟ ಆಹಾರದಿಂದ ಉತ್ತೇಜಿಸಬಾರದು. ಪರಪುರುಷರನ್ನು ಸ್ಮರಿಸಬಾರದು ಎಂದು ಮನು ಹೇಳುತ್ತಾನೆ. 'ವಿಧವಾ ವಿವಾಹ'ವೆನ್ನುವುದು ವಾಸ್ತವಿಕವಾಗಿ ವೈದಿಕ ಧರ್ಮದ ಪ್ರಶ್ನೆ. ರಾಷ್ಟ್ರೀಯ ಆಂದೋಲನ ಸಂದರ್ಭದಲ್ಲಿ ಆಧುನಿಕತಾವಾದಿಗಳು

(ಉದಾ : ರಾಜಾರಾಂ ಮೋಹನರಾಯ್) ಈ ಕುರಿತು ದೊಡ್ಡ ಚರ್ಚೆಯನ್ನು ಎತ್ತಿಕೊಂಡರು. ವಿಧವೆಯರ ಮಂಡೆಬೋಳಿಸುವುದು (ಆದ್ದರಿಂದ ಮುಂಡೆ) ಅವರು ಶೃಂಗರಿಸಿಕೊಳ್ಳದಿರುವುದು ಪುರುಷಕೇಂದ್ರಿತ ಚಿಂತನೆಯ ಒತ್ತಾಸೆಯೆಂದು ಕರೆಯಲಾಗಿದೆ.

ವಿವರಗಳಿಗೆ ನೋಡಿ: Partha chatarjee 1986 Nationalist thought and the colonial world

ಅಣ್ಣಿಗೇರಿ, ಎಂ.ಎಂ. ಮತ್ತು ಶೇಷಶಾಸ್ತ್ರಿ ಆರ್ (ಸಂ) 1982 ಶಾಸನ ಸಂಗ್ರಹ ಪುಟ. 9–25

ಸಿ.ಪಿ. ಕೃಷ್ಣಕುಮಾರ್ 1976 ಕರ್ನಾಟಕ ಕಾದಂಬರಿ ಪುಟ. 100

ಚಿದಾನಂದ ಮೂರ್ತಿ. ಎಂ 1977 ಗ್ರಾಮೀಣ ಪುಟ. 153

ಕೆ.ಎಚ್.ಪ್ರಭು ? ಹಿಂದೂ ಕಾನೂನು ಪುಟ. 78

ಶೇಷ ನವರತ್ನ 2008 ಋಗ್ವೇದ ಪುಟ. 34

ಶೇಷ ನವರತ್ನ 1989 ನಾಲ್ಕು ವೇದಗಳು ಪುಟ. 46
ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 5-161
ಯುಗಯಾತ್ರೀ ಭಾರತೀಯ ಸಂಸ್ಕೃತಿ 1971 ಸಂಪುಟ. 2 ಪುಟ. 222, 225, 226.

ವಿಧಾತ್ರ

ವಿಧಿಯೆಂದರೆ ಹಣೆಯ ಬರಹ. ವಿಧಿಯು ಹಣೆಯ ಮೇಲೆ ಬರೆಯುತ್ತಾನೆ ಎನ್ನುವುದು ನಂಬಿಕೆ. ಪ್ರಜಾಪತಿ ಒಂದು ಕಾಲದಲ್ಲಿ ದೇವತೆಗಳಲ್ಲಿ ಒಬ್ಬನಾಗಿದ್ದು ಸವಿತೃವಿನ ಒಂದು ರೂಪವಾದದ್ದು. ಪರಮದೇವತೆ ಅನಂತರ ಬ್ರಹ್ಮನಾಗುತ್ತಾನೆ. ವೇದಗಳಲ್ಲಿ ವಿಧಿಯೆಂದರೆ ಅನುಷ್ಠಾನಕ್ಕೆ ಅರ್ಹವಾದ ಮಂತ್ರಗಳು. ವಿಧಿಯು ಹೀಗೆ ಮಾಡಬೇಕೆಂದು ನಿರ್ದೇಶಿಸುತ್ತದೆ. 'ಯಜ್ಞದ ಹೆಸರುಗಳಿಗೆ 'ಅನಾಮಧೇಯ' ಎಂದು ಕರೆದಿದ್ದಾರೆ. ಇಂಥ ಕಾರ್ಯವನ್ನು ಮಾಡಬಾರದು ಎಂಬುದು ನಿಷೇಧ. ಎರಡನೆಯದಾಗಿ ವಿಧಿವಾದದಲ್ಲಿ ಎಲ್ಲವನ್ನೂ ವಿಧಿಗೆ ಅರ್ಪಿಸುತ್ತೇವೆ. ಅಂದರೆ ಸ್ವಯಂ ಸಾಧನೆಯ ಪ್ರಶ್ನೆಯು ಇದರಲ್ಲಿ ಬರುವುದಿಲ್ಲ. ಬ್ರಹ್ಮನೆಂದರೆ ಶುದ್ಧ ಚೈತನ್ಯವೆಂದು ಅದ್ವೈತವು ಹೇಳುತ್ತದೆ. (ಅಹಂ ಬ್ರಹ್ಮಾಸ್ಮಿ) ಶಂಕರರ ಸೂತ್ರವನ್ನು ಶುದ್ಧ ಬ್ರಹ್ಮಾದ್ವೈತವೆಂದು ಕರೆಯುತ್ತಾರೆ. ಬ್ರಹ್ಮನಿಗೆ ಮೂರ್ತರೂಪವಿಲ್ಲ. ಮತ್ತು ಬ್ರಹ್ಮನಿಗೆ ಅರ್ಚನಾದಿ ವಿಧಿಗಳೂ ಇಲ್ಲ. ಬ್ರಹ್ಮವೊಂದೇ ಪರಮಾರ್ಥ ಪದಾರ್ಥ. ಇದನ್ನು ಮುರಾರಿ ಮಿಶ್ರನು ಹೇಳುತ್ತಾನೆ. ಧರ್ಮಿ, ಧರ್ಮ, ಆಧಾರ ಪ್ರದೇಶ ವಿಶೇಷಗಳು. ಹಾಗೆಯೇ ವೇದಾಂತಕ್ಕೂ ಬ್ರಹ್ಮಮೀಮಾಂಸೆಯೆಂದು ಕರೆಯುತ್ತಾರೆ. ಉಪನಿಷತ್ತುಗಳಲ್ಲಿ ದರ್ಶನ ಚಿಂತನೆಗಳಿವೆ. ಆದರೆ ಬ್ರಹ್ಮತತ್ವವೆನ್ನುವುದು ವೈದಿಕರಲ್ಲಿ ಹೆಚ್ಚು ಮುಂಚೂಣಿಗೆ ಬಂತು. ಆದರೆ ಬ್ರಹ್ಮನೆಂಬ ದೇವರಲ್ಲ.

ವಿವರಗಳಿಗೆ ನೋಡಿ: ಡಾ.ಎಂ. ಪ್ರಭಾಕರ ಜೋಶಿ ೨೦೦೮ ಭಾರತೀಯ ತತ್ವಶಾಸ್ತ್ರ ಪ್ರವೇಶ

ವಿಭೂತಿ

ವಿಶೇಷ ಹಂತವನ್ನು; ವಿಶೇಷ ಅನುಭವವನ್ನು ಪಡೆದಾಗ ಭೂಮಾನುಭೂತಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಅದು ವಿಭೂತಿಯಿಂದ ಸಾಧ್ಯ. ಅದು ಅಂತರ್ಮುಖ ಮತ್ತು ಬಹಿರ್ಮುಖ ಸಾಧನೆಯಿಂದ ಹುಟ್ಟುತ್ತದೆ.

ವಿವರಗಳಿಗೆ ನೋಡಿ: ಅನುಭೂತಿ; ಭೂಮ
ಡಿ.ವಿ.ಜಿ. ೧೯೬೬ ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ
ಸ್ವಾಮಿ ಆದಿದೇವಾನಂದ ೧೯೭೦ ಪಾತಂಜಲಿ-ಯೋಗ ದರ್ಶನ

ಹರಿದಾಸ ಭಟ್ಟಾಚಾರ್ಯ ೧೯೭೫ ಯುಗಯಾತ್ರಿ ಭಾರತೀಯ ಸಂಸ್ಕೃತಿ(ಸಂ.೩)

ವಿವಾಹ ನಿಷೇಧಗಳು

1976ರಲ್ಲಿ ಹಿಂದೂ ವಿವಾಹ ಕಾಯಿದೆ ತಿದ್ದುಪಡಿ ಮಾಡಲಾಯಿತು. ಇದರಲ್ಲಿ ನಿಷೇಧಿತ ಸಂಬಂಧಗಳ ಕುರಿತು ಹೇಳಲಾಗಿದೆ: 1. ಒಂದೊಮ್ಮೆ ಒಂದು ಇನ್ನೊಂದು ಪಕ್ಷದ ಪಿತೃವಂಶೀಯ ಪೂರ್ವಜರಾಗಿದ್ದಾರೆ. 2. ಒಂದೊಮ್ಮೆ ಒಂದು ಪಕ್ಷ ಇನ್ನೊಂದು ಪಕ್ಷದ ಪಿತೃವಂಶೀಯ ಪೂರ್ವಜನ ಅಥವಾ ಪಿತೃವಂಶಜನ ಪತ್ನಿ ಅಥವಾ ಪತಿಯಾಗಿದ್ದರೆ ಒಂದೊಮ್ಮೆ ಒಂದು ಪಕ್ಷವು ಇನ್ನೊಂದು ಪಕ್ಷದ ಸಹೋದರ ಅಥವ ತಂದೆಯ ಅಥವಾ ತಾಯಿಯ ಸಹೋದರನ ಅಥವಾ ತಂದೆಯ ಅಥವಾ ತಾಯಿಯ ಸೋದರನ ಅಥವಾ ಅಜ್ಜನ ಅಥವಾ ಅಜ್ಜನ ಸಹೋದರನ ಪತ್ನಿಯಾಗಿದ್ದರೆ 4. ಒಂದೊಮ್ಮೆ ಉಭಯತರು ಸೋದರನ ಮತ್ತು ಸೋದರಿಯಾಗಿದ್ದರೆ ಸೋದರಮಾವ ಅಥವಾ ಸೋದರಸೊಸೆಯಾಗಿದ್ದರೆ ಸೋದರ ಅತ್ತೆ ಅಥವಾ ಸೋದರಳಿಯನಾಗಿದ್ದರೆ ಅಥವಾ ಸಹೋದರನ ಅಥವಾ ಸಹೋದರಿಯ ಮಕ್ಕಳಾಗಿದ್ದರೆ ಅಥವಾ ಇಬ್ಬರು ಸಹೋದರರ ಅಥವಾ ಸಹೋದರಿಯ ಮಕ್ಕಳಾಗಿದ್ದರೆ ಹಾಗೂ 1. ಪೂರ್ಣರಕ್ತದಂತೆ ಅರ್ಧರಕ್ತ ಮತ್ತು ಏಕೋದರ ರಕ್ತ 2. ಅನೌರಸ ರಕ್ತಸಂಬಂಧ 3. ದತ್ತಕದಿಂದ ಹಾಗೂ ರಕ್ತದಿಂದ ಸಂಬಂಧ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಲ್ಲಿ ಕ್ರಮಶಃ ಮೊದಲನೆಯವರಿಗೆ ಅನಂತರ ಜಾತಿಯ ಎಲ್ಲ ಸ್ತ್ರೀಯರು ವಿವಾಹಯೋಗ್ಯರು. ಪ್ರಥಮ ವಿವಾಹದಲ್ಲಿ ಶೂದ್ರ ಸ್ತ್ರೀಯನ್ನು ಬಿಡಬೇಕು. ಸವರ್ಣ ಸ್ತ್ರೀಯು ಸರ್ವಥಾ ಸಿಗದಿದ್ದರೂ ಈವರೆಗೆ ಅನ್ಯವರ್ಣದ ಸ್ತ್ರೀಯನ್ನು ಮದುವೆಯಾದ ಉದಾಹರಣೆ ಇಲ್ಲ ಎಂದು ಮನು ಹೇಳುತ್ತಾನೆ.

ವಿವರಗಳಿಗೆ ನೋಡಿ: ಕಪಾಡಿಯಾ .ಕೆ.ಎಂ (ಮೂಲ) ಮಹೇಶ್ವರಪ್ಪ (ಅನು) ೧೯೭೮ ಭಾರತದಲ್ಲಿ ವಿವಾಹ ಮತ್ತು ಕುಟುಂಬ ಪುಟ. ೭೧

ರಾಮೇಶ್ವರಾವಧಾನಿ (ಸಂ) ೧೯೭೨-೭೬ ಮಹಾಭಾರತ (ಸಂಪುಟ-೧-೧೧) ಪುಟ. ೧೦೨೨

ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೩-೧೩;೧೪.

ವಿವಾಹ ವಿಚ್ಛೇದನ

ವಿವಾಹ ವಿಚ್ಛೇದನಕ್ಕೆ ಕೆಲವು ಕಾರಣಗಳಿವೆ-

೧. ವ್ಯಭಿಚಾರ ೨. ಪರಿತ್ಯಜನೆ. ೩. ಮತಾಂತರ. ೪. ಬುದ್ಧಿಭ್ರಮಣೆ. ೫. ಕಾರ್ಯ ಮಾನಸಿಕ ಗೊಂದಲದಲ್ಲಿ ಮನಸ್ಸಿನ ಸ್ಥಿಮಿಸದ ಅಭಾವ ಮುಖ್ಯಕಾರಣ.

೬. ಕುಷ್ಠರೋಗ. ೭. ಲೈಂಗಿಕರೋಗ. ೮. ಸಂಸಾರತ್ಯಾಗ ೯. ಮರಣದ ಪೂರ್ವಭಾವನೆ.

ಹೆಂಡತಿಗೆ ಇದಕ್ಕಿಂತ ಹೆಚ್ಚಿನ ಕಾರಣಗಳು ಇವೆ.

೧. ದ್ವಿಪತ್ನಿತ್ವ ೨. ಹಟ ಸಂಭೋಗ.

೧೯೭೬ ವಿವಾಹ ಕಾನೂನುಗಳ ತಿದ್ದುಪಡಿಯಲ್ಲಿ ಹುಡುಗಿಯು ಹದಿನೈದು ವರ್ಷವಾಗುವುದಕ್ಕಿಂತ ಪೂರ್ವದ ವಿವಾಹವಾದರೆ ವಿಚ್ಛೇದನಕ್ಕೆ ಅವಕಾಶವಿದೆ.

ವಿವೇಕ ಬೃಹಸ್ಪತಿ

ವ್ಯಾಕರಣ, ಕಾವ್ಯ, ನಾಟಕ; ಅಲಂಕೃತಿಗಳಲ್ಲಿ ಪ್ರವೀಣನಾದ ವಿವೇಕಬೃಹಸ್ಪತಿ(ನೃಪತುಂಗ)ನ ನಗರಕ್ಕೆ ರಾಜಾಶ್ರಯ ಬಯಸಿ ಕವಿಗಳು ಮಾನ್ಯಖೇಡಕ್ಕೆ ಹೋಗುತ್ತಿದ್ದರು. (ಕವಿರಾಜಮಾರ್ಗ 5–6)

ವಿಶೇಷ

'ಸಾಮಾನ್ಯ'ಕ್ಕೆ ಅತ್ಯಂತ ವಿರುದ್ಧವಾದ 'ಪದಾರ್ಥ'ವೇ 'ವಿಶೇಷ', 'ವೈಶೇಷಿಕ'ವೆಂದು ದರ್ಶನಕ್ಕೆ ಹೆಸರು ಬಂದಿರುವುದೇ ಈ 'ವಿಶೇಷ'ದಿಂದ ನಿರವಯವ ಮತ್ತು ನಿತ್ಯಗಳಾದ ದ್ರವ್ಯಗಳಲ್ಲಿರುವ ಅಂತಿಮ ಭೇದ ಅಥವಾ ವೈಶಿಷ್ಟ್ಯಗಳೇ 'ವಿಶೇಷ'ವೆನ್ನಬಹುದು. ಸಾವಯವ ವಸ್ತುಗಳ ಭೇದವನ್ನೆಲ್ಲ ಅವುಗಳ ಅವಯವಗಳ ಭೇದಗಳನ್ನು ದ್ವಾರಾ ವಿವರಿಸುವುದು ಶಕ್ಯ. ಆದರೆ ನಿರವಯವ, ನಿತ್ಯ ದ್ರವ್ಯಗಳಾದ ಆಕಾಶ, ಕಾಲ, ದಿಕ್ಕು, ಆತ್ಮ, ಮನಸ್ಸು ಮುಂತಾದುವುಗಳ ಮತ್ತು ಸಜಾತೀಯ ಪರಮಾಣುಗಳ ಭೇದಗಳನ್ನು ವಿವರಿಸಬೇಕಾದರೆ, ಅವುಗಳಲ್ಲಿ ಸಹಜ ಅಥವಾ ಸ್ವತಃಸಿದ್ಧವಾದ 'ವಿಶೇಷ'ಗಳುಂಟೆಂದೊಪ್ಪದೆ ಗತ್ಯಂತರವಿಲ್ಲ. 'ವಿಶೇಷ'ಗಳಿರಬಹುದಾದ ವ್ಯಕ್ತಿಗಳು ಅನಂತವಾದ್ದರಿಂದ 'ವಿಶೇಷ'ಗಳ ಸಂಖ್ಯೆಯೂ ಅನಂತವೇ, ಪರಮಾಣುಗಳಂತೆ ಇವೂ ಕೂಡ ಪ್ರತ್ಯಕ್ಷಕ್ಕೆ ಅಗೋಚರ. ನ್ಯಾಯ–ವೈಶೇಷಿಕ ಸಿದ್ಧಾಂತದಲ್ಲಿ ಈ ರೀತಿಯ ಪ್ರತಿಪಾದನೆಯಿದೆ.

ವಿವರಗಳಿಗೆ ನೋಡಿ: ರಾಧಾಕೃಷ್ಣನ್ 1970 ಪುಟ.237

ವಿಶ್ವಧರ್ಮ

ವಿಶ್ವಧರ್ಮವೆಂದರೆ ಇಡಿಯ ಜಗತ್ತನ್ನು ಆಧರಿಸಿಕೊಂಡಿರುವ ಧರ್ಮ ಎಂದರ್ಥ. ಭಗವದ್ಗೀತೆಯಲ್ಲಿ ಬರುವ ಒಂದಂಶವನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

೧. ಸ್ವಧರ್ಮ – ತನ್ನ ಧರ್ಮ (ಸ್ವಧರ್ಮೇನಿಧನಂ ಶ್ರೇಯಃ)

೨. ಪರಧರ್ಮ – ಅನ್ಯಧರ್ಮ(ಬೇರೆಯವರ ಧರ್ಮ) ಧರ್ಮದ ಸಂಕುಚಿತತೆಯನ್ನು ಮೀರುವುದು. ಅದನ್ನು ವಿಶ್ವಮತವೆಂದೂ ಕರೆದಿದ್ದಾರೆ. ವಿಶ್ವಧರ್ಮವನ್ನು ಒಪ್ಪಿಕೊಂಡವನು 'ಮತಾತೀತ'ನಾಗುತ್ತಾನೆ.

ವಿವರಗಳಿಗೆ ನೋಡಿ: ಡಾ.ಎಂ.ಪ್ರಭಾಕರ ಜೋಶಿ ೨೦೦೮ ಭಾರತೀಯ ತತ್ತ್ವಶಾಸ್ತ್ರ ಪ್ರವೇಶ

ಮಹಾತ್ಮಾಗಾಂಧಿ ೧೯೫೮ ಧರ್ಮ ಮತ್ತು ನೀತಿ ಗಾಂಧೀ ಸ್ಮಾರಕ ನಿಧಿ.

ವಿಶ್ವಲೋಚನ

ಇಲ್ಲಿ ಜಿನನನ್ನು ವಿಶ್ವಲೋಚನವೆಂದೂ ಕರೆಯಲಾಗಿದೆ. ವಿಶ್ವಲೋಚನನೆಂದರೆ ಜಿನನಿಗೆ ಇಡೀ ಜಗತ್ತಿನ ಅರಿವು ಇರುತ್ತದೆ ಎಂದರ್ಥ. ಇನ್ನೊಂದು ರೀತಿಯಲ್ಲಿ ಅರ್ಥವಿಸಿಕೊಳ್ಳುವುದಿದ್ದರೆ ಇಡಿಯ ವಿಶ್ವವೇ ಅವನಿಗೆ ಕಣ್ಣು ಅಂತಲೂ ಆಗಬಹುದು. ಕೃಷ್ಣನನ್ನು ನಾವು ವಿಶ್ವರೂಪನೆಂದು ಹೇಳುತ್ತೇವೆ. ಅದೇ ರೀತಿಯಲ್ಲಿ ವಿಶ್ವಲೋಚನನೆಂಬ ಪದವು ಬಳಕೆಯಾಗಿದೆ.

ವಿಷಯ

ವಿಷಯಾಕಾಂಕ್ಷೆಯೆಂದರೆ ಪಂಚೇಂದ್ರಿಯಗಳಿಗೆ ಇಷ್ಟವಾದ ಎಂದರ್ಥ. ವಿಷಯವೆಂಬುದಕ್ಕೆ ಶಬ್ದಾದಿವಿಷಯಗಳು ಎಂಬರ್ಥವಿದೆ. ಹಾಗೆಯೇ ವಿಶಯವೆಂಬುದಕ್ಕೆ ದೇಶವೆಂಬ ಅರ್ಥವೂ ಇದೆ. ವಿಶದಪಡಿಸು ಎಂದರೆ ಸ್ಪಷ್ಟಪಡಿಸು. "ವಿಶದ ವಿಷಯ ವಿಶೇಷಂ" ಎಂದು ಕವಿರಾಜ ಮಾರ್ಗಕಾರನು ಹೇಳಿರುವುದು ಉಲ್ಲೇಖನೀಯ.

ವಿಷಯವಿರಕ್ತ

ವಿಷಯ ವಿರಕ್ತನೆಂದರೆ ವಿಷಯಾದಿ ಸುಖದಿಂದ ವೈರಾಗ್ಯ ಹೊಂದುವುದು ಎಂದರ್ಥ. ವಿಷಯ ಸುಖದ ತುತ್ತತುದಿಯೇರಿದ ಮೇಲೆ ದೊರೆಯುವುದು ವೈರಾಗ್ಯವೆಂಬುದು ಆದಿಪುರಾಣದಲ್ಲಿಯೂ ಬರುತ್ತದೆ.

ಉದಾ: ಭರತೇಶ ವೈಭವದ ಭರತ ಚಕ್ರವರ್ತಿ, ವಿರಾಗವೆಂದರೆ ಯಾವುದೇ ರೀತಿಯ ವಿಷಯಸುಖಗಳೊಂದಿಗೆ ಸಂಬಂಧ ಇರಿಸಿಕೊಳ್ಳದಿರುವುದು.

ವಿವರಗಳಿಗೆ ನೋಡಿ: ಸನ್ಯಾಸನ; ವೈರಾಗ್ಯ;

John Grimes 1996, A concise Dict. of Indian Philosophy

Kala Acharya 2004 Indian Philosophical terms

ವಿಷಯಾರ್ಥಿ

ವಿಷಯವೆಂದರೆ ಇಂದ್ರಿಯ ಸುಖ; ಯಾರು ವಿಷಯ ಸುಖದ ಮೇಲೆ ಆಸಕ್ತರಾಗಿದ್ದಾರೋ ಅವರನ್ನು ವಿಷಯಾರ್ಥಿಗಳೆಂದು ಕರೆಯುತ್ತಾರೆ.

ವಿಷ್ಣು

ವೇದಗಳಲ್ಲಿನ ವಿಷ್ಣುವಿಗೂ, ಈಚಿನ ಹಿಂದೂಮತದಲ್ಲಿನ ವಿಷ್ಣುವಿಗೂ ನಾಮ ಮಾತ್ರ ಇರುವ ಸಾದೃಶ್ಯದ ಜತೆಗೆ 'ತ್ರಿವಿಕ್ರಮ'ನೆಂಬ ಮತ್ತೊಂದು ವಿಶ್ಲೇಷಣೆ. 'ಶಿವ' ಎಂಬ ಪದವೂ 'ರುದ್ರ' ಎಂಬ ಪದವೂ ಸಮಾನಾರ್ಥಕವಾಗಿರುವುದೊಂದನ್ನು ಉಳಿದು, ವೇದದ 'ರುದ್ರ'ನಿಗೂ ಅರ್ವಾಚೀನ ಹಿಂದೂಮತದ 'ಶಿವ'ನಿಗೂ ಹೋಲಿಕೆಗಳು ತೀರ ಅತ್ಯಲ್ಪ. ಹೊಸಧರ್ಮವು ವೇದಗಳಿಗೆ ತನ್ನ ನಿಷ್ಠೆಯನ್ನು ತೋರ್ಪಡಿಸಿದರೂ, ಗ್ರಾಮಗಳ ಅಸಂಖ್ಯಾತ ದೇವ –ದೇವಿಯರು ಅನೇಕ ವಿಧವಾದ ತಮ್ಮ ಕರ್ತವ್ಯಗಳು, ಕಥೆಗಳು ಮತ್ತು ವಿಶ್ಲೇಷಣೆಗಳೊಂದಿಗೆ ವೈದಿಕಧರ್ಮದಲ್ಲೆಲ್ಲಾ ಕ್ರಾಂತಿಯನ್ನು ಎಬ್ಬಿಸಿದರು. ವಿಷ್ಣುವಿನ ಆರಾಧನೆಯು ರುದ್ರ; ಗಣಪತಿ; ಗೌರಿಯರ ಆರಾಧನೆಯ ಅನಂತರ ರೂಪುಗೊಂಡಿರುವುದು ಸ್ಪಷ್ಟ.

ವಿವರಗಳಿಗೆ ನೋಡಿ: Devi Prasad Chattopadyaya - Lokayata
235, 328, 357, 149, 168–169; 170)ನೋಡಿ: ನಾರಾಯಣ

ವೀರ

ಮೂಲತಃ ಸಂಸ್ಕೃತ ಭಾಷೆಯ ಪದವಾದ ಈ 'ವೀರ' ಎಂಬುದು ಅನೇಕ ಇಂಡೋ–ಆರ್ಯನ್ ಭಾಷೆಗಳಲ್ಲಿ ಬಳಕೆಯಲ್ಲಿರುವುದಾಗಿ ತಿಳಿದುಬರುತ್ತದೆ. ಈ ಪದವು ವ್ಯಕ್ತಿಯ ಪರಾಕ್ರಮ. ಶಕ್ತಿ ಮುಂತಾದ ಅವನ ದೈಹಿಕ ಗುಣಗಳನ್ನು ಸೂಚಿಸುವ ಗುಣವಾಚಕವಾಗಿ ಬಳಕೆಯಲ್ಲಿದೆ. ಎಲ್ಲೋ ಕೆಲವು ಭಾಷೆಗಳಲ್ಲಿ ಮಾತ್ರ ಆಡು, ಟಗರು, ಗಂಡು ಒಂಟೆ, ಸೋದರ ಮುಂತಾದ ಅರ್ಥಗಳಲ್ಲಿ ಬಳಕೆಯಾಗಿದೆ. ಇದೇ ಪದ ಸಂಸ್ಕೃತದಿಂದ ನೇರವಾಗಿ ದ್ರಾವಿಡ ಭಾಷೆಗಳಿಗೆ ತನ್ನ ಮೂಲಾರ್ಥವನ್ನು ಉಳಿಸಿಕೊಂಡು ಬಂದಿದೆ. ಕೆಲವು ಕಡೆ ಇದೇ ಪದ 'ಬೀರ' ಎಂಬುದಾಗಿ ತದ್ಭವ ರೂಪವನ್ನು ಪಡೆದು ಬಳಕೆಯಲ್ಲಿರುವುದೂ ಉಂಟು. ಆದರೆ ದ್ರಾವಿಡ ಭಾಷೆಗಳಲ್ಲಿ ಈ ಪದ ಸೇರಿ ಹೋಗಿದ್ದರೂ ಅದು ತನ್ನ ಮೂಲಾರ್ಥವನ್ನು ಕಳೆದುಕೊಂಡಿಲ್ಲ ಎಂಬುದು ಮುಖ್ಯ.

(ಡಾ. ಆರ್. ಶೇಷಶಾಸ್ತ್ರಿ. ೨೦೦೪. ಪು. ೨೫)

ವೀರಗಲ್ಲು

ಮಧ್ಯಕಾಲೀನ ಗ್ರಾಮಗಳಲ್ಲಿ ಅಸಂಖ್ಯಾತ ವೀರಗಲ್ಲುಗಳನ್ನು ಕಾಣಬಹುದಿತ್ತು. ಇವೆಲ್ಲಾ ಸಾಮಾನ್ಯವಾಗಿ ಕದನಗಳಲ್ಲಿ ಮರಣ ಹೊಂದಿದ ವೀರರ ಸ್ಮಾರಕಗಳಾಗಿದ್ದವು. ಸಾಮಾನ್ಯವಾಗಿ ಈ ಕದನಗಳಲ್ಲಿ ಸ್ಥಳೀಯವಾಗಿ ದನಗಳಿಗೋಸ್ಕರ ನಡೆದಂತಹ ಕದನಗಳಾಗಿದ್ದವು, ಈ ಯೋಧರ ಸ್ಥಾನ–ಮಾನ, ಸಾಧಾರಣ ಹಳ್ಳಿಗನಿಗಿಂತ ಮೇಲ್ಮಟ್ಟದ್ದಾಗಿತ್ತು. ಹಿಂದಿನ ಕಾಲದಲ್ಲಿ ಪ್ರಾದೇಶಿಕ ರಕ್ಷಣೆಗೆಂದೇ ನೇಮಿಸಿದ್ದ ಗುಲ್ಮಗಳು

ರಕ್ಷಿತವಾದ ಹಳ್ಳಿಗಳ ರಕ್ಷಣೆಯನ್ನು ಮಾಡುತ್ತಿದ್ದವು. ವಿವಿಧ ಹಳ್ಳಿಗಳಲ್ಲಿ ಚದುರಿಕೊಂಡಿದ್ದ ಒಂದು ನಿರ್ದಿಷ್ಟ ಗುಂಪಿನ ಜನರಿಗೆ ಶಸ್ತ್ರ ಧರಿಸುವ ಅಧಿಕಾರವನ್ನು ವಹಿಸಿಕೊಡಲಾಯ್ತು. ಕರೆ ಬಂದ ತಕ್ಷಣ ರಕ್ಷಣೆಗೆ ಧಾವಿಸುವುದು ಅವರ ಕರ್ತವ್ಯವಾಗಿತ್ತು. ತಮ್ಮ ದೊರೆಯ ಶ್ರೇಯಸ್ಸಿಗಾಗಿ, ದೇವರ ವಿಗ್ರಹವೊಂದರ ಮುಂದೆ ತಮ್ಮ ತಲೆಯನ್ನು ಕತ್ತರಿಸಿಕೊಂಡ ಗಂಗ ಸಾಮಂತರ ಪ್ರಶಂಸೆಯನ್ನು ಹಲವಾರು ಶಾಸನಗಳಲ್ಲಿ ಕಾಣಬಹುದು. ದೊರೆಯ ಪಾರ್ಥಿವ ಶರೀರದೊಡನೆ ಭಸ್ಮವಾಗಬೇಕೆಂದು ೧೩ನೇ ಶತಮಾನದ ಪಾಂಡ್ಯ ಸಾಮಂತರು ದೊರೆಯ ಚಿತೆಗೇ ಹಾರುತ್ತಿದ್ದರು ಎಮದು ಮಾರ್ಕೋಪೋಲೋ ವರದಿ ಮಾಡಿದ್ದಾನೆ. ಇದು ಭಕ್ತಿಯ ಮನಃಸ್ಥಿತಿಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಅಮಾನುಷ ಎನಿಸಬಹುದಾದ ಇಂತಹ ಸ್ವಾಮಿನಿಷ್ಠೆಯನ್ನು ಕಿರಾತ ಬುಡಕಟ್ಟಿನ ಮುಖಂಡನು, ತನ್ನ ಹಿಂಬಾಲಕರಿಂದ ತೀರಾ ಅಸಾಧಾರಣವಾದ ಕೆಲವು ಸಂದರ್ಭಗಳನ್ನು ಬಿಟ್ಟರೆ ಉಳಿದಂತೆ ನಿರೀಕ್ಷಿಸಲು ಸಾಧ್ಯವಿರಲಿಲ್ಲ. (ಡಿ. ಡಿ. ಕೊಸಾಂಬಿ ೨೦೦೩ ಪು. ೪೬)

ವೀರಗಲ್ಲುಗಳು ಸಾಮಾನ್ಯ ರೀತಿಯಾದವಲ್ಲ. ಯುದ್ಧದಲ್ಲಿ ಮಡಿದ ವೀರನ ನೆನಪಿಗಾಗಿ ವೀರಗಲ್ಲುಗಳನ್ನು ನೆಡುತ್ತಾರೆ. ಹೋರಾಟದಲ್ಲಿ ಮಡಿದ ವೀರನ ಸ್ಮಾರಕವಾಗಿ ನೆಟ್ಟಕಲ್ಲುಗಳನ್ನು ವೀರಗಲ್ಲುಗಳು ಎಂಬುದಾಗಿ ಕರೆಯುತ್ತಾರೆ. ಈ ವೀರಗಲ್ಲುಗಳು ಬರಹವನ್ನು ಮಾತ್ರವಲ್ಲದೆ ಶಿಲ್ಪದ ವಿವರಗಳನ್ನೂ ಹೊಂದಿರುತ್ತವೆ. ಅಂದರೆ, ಶಾಸನ ಮತ್ತು ಶಿಲ್ಪ, ಆ ವೀರಗಲ್ಲು ಯಾವ ವೀರನ ಸ್ಮಾರಕವಾಗಿದೆಯೋ ಆ ವೀರನ ಪರಾಕ್ರಮವನ್ನು ಸಾರುವಂತಹವೇ ಆಗಿರುತ್ತವೆ. ವೀರಗಲ್ಲುಗಳ ರಚನಾಕ್ರಮವು ಬಹುಮಟ್ಟಿಗೆ ದಾನಶಾಸನಗಳ ರಚನಾಕ್ರಮವನ್ನೇ ಅನುಸರಿಸುತ್ತವೆ. ವೀರತ್ವದ ಪ್ರತಿಪಾದನೆ ಮುಖ್ಯ. ವೀರಗಲ್ಲುಗಳ ಪಾಠದ ಮುಖ್ಯ ಲಕ್ಷಣವೆಂದರೆ ಅದು ತನ್ನ ಗಮನವನ್ನು ಮುಖ್ಯವಾಗಿ ವೀರನ ಬಗ್ಗೆ ಮತ್ತು ವೀರತನದ ಬಗ್ಗೆ ಒಲವನ್ನು ಹೊಂದಿರುವುದೇ ಆಗಿದೆ. ವೀರಗಲ್ಲುಗಳಲ್ಲಿ ಪ್ರಾರ್ಥನಾ ಶ್ಲೋಕಗಳ ಜೊತೆಗೇ ಅಥವಾ ಶಾಸನದ ಆರಂಭದಲ್ಲಿಯೇ ವೀರತನವನ್ನು ಸಾರುವ ಈ ಶ್ಲೋಕಗಳು ಉದ್ಧೃತವಾಗಿರುವುದುಂಟು.

ದ್ವಾವಿಮೌ ಪುರುಷೌಲೋಕೇ ಸೂರ್ಯಮಂಡಲ ಭೇದಿನೌ
ಪರಿವ್ರಾಡ್ಯೋಗ ಯುಕ್ತಾಶ್ವ ರಣೇಚ ಅಭಿಮುಖೇಹತಃ

ಅಂದರೆ, ಈ ಲೋಕದಲ್ಲಿ ಇಬ್ಬರು ಮಾತ್ರ ಸೂರ್ಯ ಮಂಡಲವನ್ನು ಬೇಧಿಸಿಕೊಂಡು ಹೋಗುವ ಶಕ್ತಿಯುಳ್ಳವರಾಗಿದ್ದಾರಂತೆ. ಅವರು ಯಾರೆಂದರೆ ಸಾಧನೆಯನ್ನು ಮಾಡಿ ಸಿದ್ಧಿ ಪಡೆದವನು ಒಬ್ಬನಾದರೆ, ಯುದ್ಧರಂಗದಲ್ಲಿ ಅಸಾಧಾರಣ ಪರಾಕ್ರಮವನ್ನು ಮೆರೆದು ಮಡಿದವನು ಮತ್ತೊಬ್ಬನಂತೆ. ವೀರ ಮೌಲ್ಯವನ್ನು ಇದು ಸೂಚಿಸುತ್ತದೆ. ವೀರಗಲ್ಲುಗಳಲ್ಲಿ ಹೋರಾಡಿದ ವೀರನ ಸ್ತುತಿಯಿರುತ್ತದೆ. ಅವನು

ಎಷ್ಟು ಶೌರ್ಯವಂತನಾಗಿದ್ದ ಎಂಬುದನ್ನು ವೀರಗಲ್ಲುಗಳು ತಿಳಿಯಪಡಿಸುತ್ತವೆ. ವೀರಗಲ್ಲುಗಳಲ್ಲಿ ಶೌರ್ಯ, ವೀರರ ಪರಾಕ್ರಮಗಳನ್ನು ಬೇರೆ ಬೇರೆ ರೀತಿಯಲ್ಲಿ ವರ್ಣಿಸುವುದನ್ನು ನಾವು ಕಾಣಬಹುದು. ವೀರಗಲ್ಲುಗಳನ್ನು ಹೋರಾಟದ ದೃಷ್ಟಿಯಿಂದ ಈ ಕೆಳಕಂಡಂತೆ ವಿಂಗಡಿಸುವುದು ಸೂಕ್ತವೆಂದು ತೋರುತ್ತದೆ. ಯುದ್ಧದಲ್ಲಿ ಮಡಿದ ವೀರರ ವೀರಗಲ್ಲುಗಳು. ತುರುಗಾಳಗ ಅಂದರೆ, ಗೋಗ್ರಹಣದಲ್ಲಿ ಮಡಿದ ವೀರರ ವೀರಗಲ್ಲುಗಳು. ಬೇಟೆಯಲ್ಲಿ ಮಡಿದ ವೀರರ ವೀರಗಲ್ಲುಗಳು. ಹೆಂಗಸರ ಮಾನಭಂಗ ಪ್ರಸಂಗಗಳಲ್ಲಿ, ಹೋರಾಡಿ ಮಡಿದ ವೀರರ ವೀರಗಲ್ಲುಗಳು. ಊರಳಿವಿನಲ್ಲಿ ಮಡಿದ ವೀರರ ವೀರಗಲ್ಲುಗಳು. ಕಳ್ಳರು ಮತ್ತು ದಾರಿಗಳ್ಳರೊಡನೆ ಹೋರಾಡಿ ಮಡಿದ ವೀರರ ವೀರಗಲ್ಲುಗಳು. ಸೀಮಾಸಂಬಂಧದಲ್ಲಿ ಮಡಿದ ವೀರರ ವೀರಗಲ್ಲುಗಳು. ಎಂಬುದಾಗಿ ಏಳು ಗುಂಪುಗಳಾಗಿ ವಿಂಗಡಿಸುವುದು ಸೂಕ್ತ. ರಾಜ್ಯ ವಿಸ್ತರಣೆಗಾಗಿಯೋ, ವ್ಯಕ್ತಿ ಮಾತ್ಸರ್ಯದಿಂದಲೋ ಅರಸರಲ್ಲಿ ಯುದ್ಧಗಳು ನಡೆಯುತ್ತಿದ್ದುವು. ಇಂಥ ಹೋರಾಟಗಳಲ್ಲಿ ಸೈನಿಕರದೇ ಮಹತ್ವದ ಪಾತ್ರವಾಗಿತ್ತು. ಒಂದು ರೀತಿಯಲ್ಲಿ ಹೇಳುವುದಾದರೆ ಎರಡು ಕಡೆಯ ಸೈನಿಕರ ಸೋಲು ಗೆಲುವುಗಳೇ ಅರಸರ ಸೋಲು ಗೆಲುವುಗಳಾಗಿದ್ದವು. ತಮ್ಮ ಪರವಾಗಿ ಹೋರಾಡಿ ಮಡಿದ ವೀರನ ಸೇವೆಯನ್ನು ಮೆಚ್ಚಿ, ಅವನ ವೀರತನವನ್ನು ಹೊಗಳುವ ಸ್ಮಾರಕಶಿಲೆಗಳನ್ನು ಅರಸರೋ ಅಥವಾ ಅವನ ಕೈಕೆಳಗಿನ ಅಧಿಕಾರಗಳೋ ಹಾಕಿಸುತ್ತಿದ್ದರು. ಇದೇ ಸ್ಮಾರಕಗಳಲ್ಲಿ ವೀರನ ಮನೆಯವರಿಗೆ ದತ್ತಿ ಬಿಟ್ಟ ವಿಷಯವನ್ನು ಬರೆಯಿಸುತ್ತಿದ್ದರು. ಆದ್ದರಿಂದ ವೀರಗಲ್ಲುಗಳು ಒಂದು ರೀತಿ ದಾನಶಾಸನಗಳೂ ಆಗುತ್ತವೆ, ಸ್ಮಾರಕ ಶಿಲೆಗಳೂ ಆಗುತ್ತವೆ. ಇದು ಸ್ಮಾರಕವೆಂಬುದನ್ನು ಮರೆಯಬಾರದು. ವೀರಗಲ್ಲುಗಳು ಮೇಲೆ ಹೇಳಲಾಗಿರುವಂತೆ ಬೇರೆ ಬೇರೆ ವಿಧದಲ್ಲಿರುತ್ತದೆ.

ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯಲ್ಲಿ ವೀರಗಲ್ಲುಗಳ ಪಾತ್ರವು ಮಹತ್ವದ್ದು. ವೀರಗಲ್ಲುಗಳ; ನಿಶಿಧಿ ಕಲ್ಲುಗಳ ದೃಷ್ಟಿಕೋನಗಳು ಬೇರೆ ಬೇರೆಯಾಗಿರುತ್ತವೆ.

ವಿವರಗಳಿಗೆ ನೋಡಿ: ಆರ್. ಶೇಷಶಾಸ್ತ್ರಿ 2005 ಶಾಸನ ಪರಿಚಯ
ಪುಟ. 56–57

ವೀರಜನನಿ

"ಹತ್ತನೆಯ ಶತಮಾನದ ವೀರಯುಗದ ಸಂದರ್ಭದಲ್ಲಿ ಶೂರನಾದವನಿಗೆ ಸಮಾಜದಲ್ಲಿ ಅಪಾರ ಗೌರವವಿದ್ದಿತ್ತು. "ಆಯುಧಯುಕ್ತನಂ ಮೆಚ್ಚದರಾರ್" ಎಂದಿದೆ ಕವಿರಾಜಮಾರ್ಗ. ವೀರನನ್ನು ಪೋಷಿಸಿಕೊಂಡು ಬರುವುದು ತಮ್ಮ ಕರ್ತವ್ಯವೆಂದು ಜನರು ಭಾವಿಸಿದ್ದರು. ಅತ್ತಿಮಬ್ಬೆಯಂತಹ ಸ್ತ್ರೀಯರು ಯುದ್ಧ ವೀರರನ್ನು ಸಾಕುತ್ತಿದ್ದರು. ಕೀರ್ತಿಸುತ್ತಿದ್ದರೆಂದು ತಿಳಿಯುತ್ತದೆ. ವೀರತ್ವವು ದೈವತ್ವದ ಮಟ್ಟಕ್ಕೇರಿತು. ಸ್ತ್ರೀಯರೂ

ವೀರಜನನಿ ವೀರಮಡದಿ ಎಂದು ಕರೆಯಿಸಿಕೊಳ್ಳಲು ಇಷ್ಟಪಡುತ್ತಿದ್ದ ಕಾಲವದು. ವೀರ ಮಕ್ಕಳಿಗಾಗಿ ಹಂಬಲಿಸುತ್ತಿದ್ದ ಮಾತೆಯರಿದ್ದಿದ್ದರು.

"ನಿನ್ನಂ ಪೆತ್ತಳ್ ಮೊಲೆವೆತ್ತಳೆ. ವೀರಜನನಿವೆಸರಂ ಪೆತ್ತಳ್" ಎಂದು ಜನರಿಂದ ಹೊಗಳಿಸಿಕೊಳ್ಳುವ ಇಚ್ಛೆ ಆ ಕಾಲದ ಸ್ತ್ರೀಯರಲ್ಲಿ ಪ್ರಬಲವಾಗಿತ್ತು. ತಾಯ್ತನವು ಸಾರ್ಥಕವಾಗುವುದು ವೀರಪುತ್ರರನ್ನು ಪಡೆಯುವಲ್ಲಿ ಎನ್ನುವುದು ಇದೇ ಕೃತಿಯಲ್ಲಿ ಪ್ರತಿಪಾದಿತವಾಗಿದೆ. ವಿಕ್ರಮಾರ್ಜುನ ವಿಜಯ (1-117) ಇದು ವೀರಯುಗವನ್ನು ಸಂಕೇತಿಸುತ್ತದೆ. ಮಾತೃತ್ವದ ತೀವ್ರ ಹಂಬಲದ ಕುರಿತಂತೆ ಪಂಪನು 'ಕಾಂತೆ ಸುತ ಭ್ರಾಂತೆ' (1-123) ಎನ್ನುವ ಪದವನ್ನು ಬಳಸಿದ್ದು, ಇದು ಆ ಕಾಲದ ಒಟ್ಟು ಹಿನ್ನೆಲೆಯನ್ನು ಸೂಚಿಸುತ್ತದೆ. ಹಾಗೆಯೇ ಕುಂತಿಯು, 'ಕುಡುರಿಪು ತಂತ್ರ ಕ್ಷಯಕರನ ನೆನಗೆ ಹಿತನಂ ಸುತನಂ' (1-124) ಎಂದು ಹೇಳುವಲ್ಲಿ ಆ ಕಾಲದ ಸಾಮಾಜಿಕ ಚಿತ್ರವನ್ನು ಸೂಚಿಸುತ್ತದೆ. ಹತ್ತನೆಯ ಶತಮಾನದಲ್ಲಿನ ರಾಜಕೀಯ ವ್ಯವಸ್ಥೆಯಲ್ಲಿ ವೀರತ್ವ ಪ್ರಧಾನ ಮೌಲ್ಯವಾಗಿತ್ತು. ಜೊತೆಗೆ ಇದು ಆಸ್ತಿ, ಕುಟುಂಬ, ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನೂ ಹೊಂದಿದೆ. ಹಿರಿಯ ಗಂಡು ಮಕ್ಕಳಿಗೆ ಪಟ್ಟ ಎನ್ನುವುದು ಈ ರೀತಿಯ ವ್ಯವಸ್ಥೆಯ ಮುಖ್ಯ ಅಂಶ. ಆದ್ದರಿಂದಲೇ ಇಂತಹ ಸಾಮಾಜಿಕ ವ್ಯವಸ್ಥೆಯು ಹೆಣ್ಣಿನ ತಾಯ್ತನಕ್ಕೆ ಒತ್ತು ಕೊಡುತ್ತದೆ.

ವಿವರಗಳಿಗೆ ನೋಡಿ: ಡಾ. ಆರ್. ಶೇಷಶಾಸ್ತ್ರಿ 2004 ಕರ್ನಾಟಕದ ವೀರಗಲ್ಲುಗಳು ಪುಟ. 43.

ವೀರಮರಣ

ಯುದ್ಧದಲ್ಲಿ ಹೋರಾಡಿ ಮಡಿಯುವುದನ್ನು ವೀರಮರಣ ಎನ್ನುವ ಹೆಸರಿನಿಂದ ಕರೆಯಲಾಯಿತು. ಈ ಹಿನ್ನೆಲೆಯಿಂದಲೇ ವೀರ, ವೀರಮರಣ, ವೀರಸ್ವರ್ಗ ಮುಂತಾದ ಕಲ್ಪನೆಗಳು ಹುಟ್ಟಿಕೊಂಡವು. ಇವುಗಳಲ್ಲಿ ರಾಜಪ್ರಭುತ್ವದ ಮಹತ್ವಾಕಾಂಕ್ಷೆಯ ಧೋರಣೆಗಳು ಹಾಗೂ ವೈದಿಕ ಹಿನ್ನಲೆಯ ಮೋಕ್ಷಸಾಧನೆಯ ಆಮಿಷಗಳು ಜಂಟಿಯಾಗಿ ಕೆಲಸ ಮಾಡಿರುವುದನ್ನು ಕಾಣಬಹುದಾಗಿದೆ. ಇದು ಬ್ರಾಹ್ಮಣ ಮತ್ತು ಕ್ಷತ್ರಿಯರ ನಡುವಿನ ವರ್ಗ ಹೊಂದಾಣಿಕೆಯ ಪರಿಣಾಮವಾಗಿಯೂ ಕಂಡುಬರುತ್ತದೆ. ಈ ಹೊಂದಾಣಿಕೆಯು ಗಟ್ಟಿಯಾಗುತ್ತಾ ಹೋದಂತೆ ವೀರಮರಣಗಳ ಸಂಖ್ಯೆಯೂ ಹೆಚ್ಚುತ್ತಾ ಹೋಯಿತು. ವೀರಮರಣಕ್ಕೆ ಧಾರ್ಮಿಕ ಚೌಕಟ್ಟನ್ನು ನಿರ್ಮಿಸಿದ್ದರಿಂದಾಗಿ ಅದರ ಹಿಂದಿದ್ದ ಹಿತಾಸಕ್ತಿಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತಾಯಿತು. ಧಾರ್ಮಿಕ ಚೌಕಟ್ಟನ್ನು ಬಲಪಡಿಸುವ ಕೆಲಸವನ್ನು ವೀರಕಾವ್ಯಗಳು, ವೀರಶಾಸನಗಳು ಮಾಡಿದವು. ಅವು ಯಶಸ್ವಿಯಾದವು ಎನ್ನುವುದಕ್ಕೆ ಇಂದು ನಾವು ನಾಡಿನುದ್ದಕ್ಕೂ ಕಾಣುತ್ತಿರುವ ವೀರಗಲ್ಲುಗಳೇ ಸಾಕ್ಷಿಗಳಾಗಿವೆ. ಒಂದು ಕುಟುಂಬದಲ್ಲಿ ಒಬ್ಬನಾದರೂ

ವೀರಮರಣ ಹೊಂದಿದರೆ ಆ ಕುಟುಂಬಕ್ಕೆ ಗೌರವ ಪ್ರಾಪ್ತಿಯಾಗುತ್ತಿತ್ತು. ಸತ್ತ ವ್ಯಕ್ತಿಯ ಸಂಬಂಧಿಕರು ವೀರ ಎನ್ನುವ ಪದವನ್ನು ತಮ್ಮ ಹೆಸರುಗಳ ಮುಂದೆ ಹೆಮ್ಮೆಯಿಂದ ಹಾಕುತ್ತಿದ್ದರು. ಇದು ವೀರಮರಣಕ್ಕೆ ಪ್ರೋತ್ಸಾಹವನ್ನು ನೀಡಿದಂತೆ ಆಗುತ್ತಿತ್ತು. ಪಂಪಭಾರತ, ಕವಿರಾಜಮಾರ್ಗ, ಸಮಯಪರೀಕ್ಷೆ ಮುಂತಾದ ಕಾವ್ಯಗಳಲ್ಲಿ ಈ ಕುರಿತ ಅನೇಕ ಉಲ್ಲೇಖಗಳು ಸಿಗುತ್ತವೆ. ಇಲ್ಲಿ ನಾವು ಗಮನಿಸಬೇಕಾಗಿರುವ ಅಂಶವೆಂದರೆ ವೀರಮರಣವನ್ನು ಅಂದಿನ ಸಮಾಜ ಯಾಕಾಗಿ ಒಪ್ಪಿಕೊಂಡಿತು ಎನ್ನುವುದು ಮತ್ತು ವೀರಮರಣ ಒಂದು ಸಿದ್ಧಾಂತವಾಗಿ ರೂಪುಗೊಂಡಿದ್ದರ ಹಿನ್ನೆಲೆ. ಇದು ಅಂದಿನ ಸಾಮಾಜಿಕ ರಚನೆಯನ್ನು ಅರ್ಥೈಸಿಕೊಳ್ಳುವುದಕ್ಕೂ ಸಹಕಾರಿಯಾಗುತ್ತದೆ. (ಮೋಹನಕೃಷ್ಣ ರೈ, ೨೦೦೪. ಪು. ೯೦-೧೧೮-೧೧೯) ಸಾವಿನ ಬಗಗೆ ಇರುವ ಭಯವನ್ನು ಹೋಗಲಾಡಿಸಲು ಕೆಲವು ಮೌಲ್ಯಗಳನ್ನು ಹೇಳಲಾಯಿತು.

ವೀರಸಿದ್ಧಾಂತ

"ರಾಜಪ್ರಭುತ್ವದ ಸಂದರ್ಭದಲ್ಲಿ ಪ್ರಜಾವರ್ಗ ಸ್ವಯಂ ವೀರರಾಗಬೇಕಾದ ಅನಿವಾರ್ಯತೆಯೂ ಇರುತ್ತಿತ್ತು. ವೀರರನ್ನು ಸೃಷ್ಟಿಸುವ ಅಥವಾ ಅವರ ಪಡೆಯೊಂದನ್ನು ನಿರ್ಮಿಸುವ ಉದ್ದೇಶವೇ ವೀರಸಿದ್ಧಾಂತದ ಹುಟ್ಟಿಗೆ ಮೂಲಕಾರಣವಾಗಿರಬೇಕು. ಗ್ರಾಮ ಮಟ್ಟದಲ್ಲಿ ಕಾಯ್ದಿಟ್ಟ ಪಡೆಯೊಂದು ಇರುತ್ತಿತ್ತು. ಹೆಸರು ಹೇಳುವಂತೆ ವೀರಸಿದ್ಧಾಂತವು ನಿರ್ದಿಷ್ಟ ತಾತ್ವಿಕ ತಳಹದಿಯ ಮೇಲೆ ರೂಪುಗೊಂಡಿದೆ. "ಯುದ್ಧದಲ್ಲಿ ವೀರಸ್ವರ್ಗ ಮತ್ತು ಅಮರಾಂಗನೆಯರ ಸಖ್ಯ" ಯುದ್ಧದಲ್ಲಿ ಸಾಯುವುದು ವೀರರ ಲಕ್ಷಣ ಸತ್ತರೆ ಅವರಿಗೆ ದೊರೆಯುವುದು ಸ್ವರ್ಗ ಮರಳಿ ಹುಟ್ಟಿಲ್ಲ ಅದರಿಂದ ಅವರಿಗೆ ಲಾಭ ಇದನ್ನು ಹೇರಿದ್ದು ಆಗಿನ ಯಜಮಾನಿಕೆಯನ್ನು ವಹಿಸಿಕೊಂಡ ಪ್ರಭುತ್ವ ಪ್ರಭುತ್ವಕ್ಕೆ ಹೋರಾಟವು ಅನಿವಾರ್ಯವಾಗಿತ್ತು ಆದುದರಿಂದ ಹೋರಾಟಕ್ಕೆ ಬೇಕಾದ ಮೌಲ್ಯಗಳನ್ನು ಜನತೆಯ ಮೇಲೆ ಅದು ಹೇರಿತು. ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಈ ರೀತಿಯಾಗಿ ಬರುತ್ತದೆ. ಸೈನಿಕನೊಬ್ಬ ತನ್ನ ಹೆಂಡತಿಗೆ ಹೀಗೆ ಹೇಳುತ್ತಾನೆ. "ಈ ಪೊಟ್ಟ್ ಪೊಜಿಸ್ತ್. ನಾಳೆ ದೇವಲೋಕದ ಕನ್ಯಕೆಯರ ಓಲಗದೊಳಿರ್ಪೆ" ಇದು ವೀರ ಸಿದ್ಧಾಂತದ ಪ್ರಾತಿನಿಧಿಕ ರೂಪ. "

ವೃತ್ತಿ ಸೂಚಕ ಪದಗಳು

ಸೂಳಾಯ್ತರು, ಪರಿಚಾರಕರು ಎಂದರೆ ಸೇವಕರು. ಪಡೆವಳನೆಂದರೆಸೇನಾನಿ, ಪ್ರತಿಹಾರಿ ದ್ವಾರಪಾಲಕ, ಗೋಳಯ್ಲನೆಂದರೆ ರಾಹುತ. ಘೋಟಕರೋಹಿ. ಪೆರ್ಗಡೆಯೆಂದರೆ ಹಿತಾಚರಣೆಯವನು ಎಂದು ಭಾವಿಸಿಕೊಳ್ಳಬಹುದು. (ಕ ಶ.ಟೀ.೪೬)

ವೇದ

ಪಳವಾತು ಎಂದು ಹೆಸರು. ವಾಸ್ತವವಾಗಿ ಇದು ಅಧ್ಯಯನದ ಕ್ರಮ. ಓದು, ಪಳವಾತು, ಬೇದಂ, ಸುತಿ ಈ ಳ

ವೇದಂ (ಕರ್ನಾಟಕ ಶಬ್ದಸಾರಂ ಪುಟ ೫೬) 'ವೇದ' ಎಂಬ ಶಬ್ದವು ವಿದ್ ಎಂಬ ಧಾತುವಿನಿಂದ ಉತ್ಪತ್ತಿಯಾದುದು. ವಿದ್ ಎಂದರೆ ತಿಳಿಯುವುದು. ಎಂದರ್ಥ; ಆದ್ದರಿಂದ 'ವೇದ' ಎಂದರೆ 'ಜ್ಞಾನ' ಎಂದರ್ಥ. ಮನುಷ್ಯನಲ್ಲಡಗಿರುವ ಆತ್ಮನ 'ಜ್ಞಾನವನ್ನು' ಮತ್ತು ಅದಕ್ಕೆ ಬೇಕಾದ ಸಾಧನ ಮಾರ್ಗಗಳ್ನನು ತಿಳಿಸುವುದೇ ವೇದಗಳ ಮುಖ್ಯ ವಿಷಯ. ಇದು ಸನಾತನವಾದುದು. (ಶ್ರೀಮದ್ ಭಗವದೀತೆ – ಪು. ಸಂ. 128)

ವೇಶ್ಯೆಯರು

ಮಹಾನಿರ್ವಾಣ ತಂತ್ರದಲ್ಲಿ ರಾಜವೇಶ್ಯಾ (ಆಸ್ಥಾನದ ಸೂಳೆ) ನಾಗರಿ (ಪ್ರಜೆಗಳೊಂದಿಗಿರುವ ಸೂಳೆ). ಗುಪ್ತ ವೇಶ್ಯಾ(ಗುಪ್ತಾಚಾರಿಕೆ ನಡೆಸುವವಳು) ಬ್ರಹ್ಮವೇಶ್ಯಾ(ಪವಿತ್ರಕ್ಷೇತ್ರದಲ್ಲಿರುವ ವೇಶ್ಯೆ) ದೇವವೇಶ್ಯಾ(ದೇವಸ್ಥಾನದ ನರ್ತಕಿ) ಎನ್ನುವ ವಿಭಾಗಗಳಿವೆ. (Chandra Moti 1973 P.13)

ಕೌಟಿಲ್ಯನ 'ಅರ್ಥಶಾಸ್ತ್ರ'ದ ಮೂಲಕ ಡಿ.ಡಿ.ಕೊಸಾಂಬಿಯವರು 'ರಾಜಕೀಯಕ್ಕೂ ಸೂಳೆಗಾರಿಕೆಗೂ ಸಂಬಂಧವಿದೆ ಎನ್ನುತ್ತಾರೆ. ಸೂಳೆಗಾರಿಕೆಯ ಮೂಲಕ ಬಂದ ಹಣದಲ್ಲಿ ರಾಜಕೀಯ ರಾಜ ಬೊಕ್ಕಸಕ್ಕೆ ಸ್ವಲ್ಪಾಂಶ ನೀಡಬೇಕೆಂದು ಕೌಟಿಲ್ಯನ ಅರ್ಥಶಾಸ್ತ್ರವು ಹೇಳುತ್ತದೆ. ಹೀಗಾಗಿ ರಾಜಕೀಯ ಅರ್ಥಶಾಸ್ತ್ರದಲ್ಲಿ ಗಣಿಕೆಯರಿಗೂ ಮಹತ್ವದ ಸ್ಥಾನವು ಕಲ್ಪಿತವಾಯಿತು. (ಡಿ.ಡಿ.ಕೊಸಾಂಬಿ 1977 ಪುಟ.156)

ದೇವಾಲಯಗಳಲ್ಲಿ ವಿವಿಧ ಸೇವೆಗಳಿಗೆ ನಿಯೋಜಿತರಾಗಿದ್ದ ಈ ಮಹಿಳೆಯರು ತಮ್ಮ ಸೇವೆಯನ್ನು ನೆರವೇರಿಸದಿದ್ದರೆ ಅವರ ಮೇಲೆ ಶುಲ್ಕ ವಿಧಿಸಲಾಗುತ್ತಿತ್ತು. ವೈದಿಕ ಮೂಲದ ಕೆಲವು ಪುರಾಣಗಳು ದೇವಾಲಯಗಳಲ್ಲಿ ಕೆಲಸ ಮಾಡುವ ಮಹಿಳೆಯರನ್ನು ವೇಶ್ಯೆಯರು ಎಂದು ಕರೆದುದು ಮಾತ್ರವಲ್ಲದೆ, ಅವರನ್ನು ದೇವಾಲಯಗಳು ಕೊಂಡುಕೊಳ್ಳಬೇಕು ಎಂಬುದಾಗಿಯೂ ಸೂಚಿಸುತ್ತವೆ. ಪುರಾಣಗಳ ಈ ಆಶಯಗಳು ಮಹಿಳೆಯರು ದೇವರ ಹೆಸರಿನಲ್ಲಿ ಶೋಷಣೆಗೊಳಗಾಗುತ್ತಿದ್ದುದನ್ನು ಹೇಳುತ್ತವೆ. ದೇವಾಲಯಗಳಲ್ಲಿ ನಡೆಯುತ್ತಿದ್ದ ಸಂಗೀತ, ನೃತ್ಯಗಳು ದೇವರನ್ನು ಓಲೈಸುವುದಕ್ಕಾಗಿ ಅಥವಾ ದೇವರ ಪ್ರೀತ್ಯರ್ಥವಾಗಿ ಎಂಬ ವಿವರಣೆಯನ್ನು ಪಡೆದುಕೊಂಡಿತ್ತು. ಆದರೆ ನಿಜಾರ್ಥದಲ್ಲಿ ಸಂಗೀತ ಮತ್ತು ನೃತ್ಯ ದೇವಾಲಯಗಳಲ್ಲಿ ಮಹಿಳೆಯರ ಶೋಷಣೆಗೆ ಸಾಧನಗಳಾಗಿದ್ದವು. ಈ ಕಾರಣಕ್ಕಾಗಿಯೇ ಸಂಗೀತ ಮತ್ತು ನೃತ್ಯ ಅಂದಿನ ಸಮಾಜದಲ್ಲಿ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿರಬೇಕು.

ದೇವಾಲಯಗಳಲ್ಲಿ ಸಮಗೀತ ಮತ್ತು ನೃತ್ಯ ಸೇವೆ ಸಲ್ಲಿಸುತ್ತಿದ್ದವರಿಗೆ ದಾನದತ್ತಿಗಳನ್ನು ನೀಡಲಾಗುತ್ತಿತ್ತು. ಇದು ಈ ವ್ಯವಸ್ಥೆಯನ್ನು ಇನ್ನಷ್ಟು ಜನಪ್ರಿಯಗೊಳಿಸುವ ಹಾಗೂ ಮುಂದುವರಿಸಿಕೊಂಡು ಹೋಗುವ ಉದ್ದೇಶವನ್ನು ಹೊಂದಿತ್ತು. ಅದೇ ರೀತಿ ದೇವಾಲಯಗಳಲ್ಲಿ ಮಹಿಳೆಯರು ಸೇವೆ ಸಲ್ಲಿಸುವ ಪದ್ಧತಿಯನ್ನು ಶಾಶ್ವತವನ್ನಾಗಿಸುವ ಹಾಗೂ ಆ ಮೂಲಕ ಧರ್ಮ, ದೇವರುಗಳ ಹೆಸರಿನಲ್ಲಿ ಶೋಷಣೆ ನಡೆಸುವ ಉದ್ದೇಶಗಳು ದಾನ ನೀಡುವುದರಲ್ಲಿ ಅಡಕವಾಗಿರುತ್ತಿದ್ದವು. (ಮೋಹನಕೃಷ್ಣ ರೈ, ೨೦೦೪. ಪು. ೧೩೬–೧೩೭) ಹಿಂದಿನ ರಾಜಕೀಯ ವ್ಯವಸ್ಥೆಯಲ್ಲಿ ವೇಶ್ಯೆಯರು ಪ್ರಧಾನವಾದ ಪಾತ್ರವಹಿಸಿದ್ದರು.

ವೇಷಭೂಷಣ

ವೇಷ ಭೂಷಣಗಳ ಕುರಿತ ಕೆಲವು ತಾಂತ್ರಿಕ ಪದಗಳು ಹೀಗಿವೆ:

ಚೀನಾಂಬರ – ಪಚ್ಚೆವಸ್ತ್ರ; ರೇಷ್ಮೆವಸ್ತ್ರ. ಮೇಲುದ
ಹೆಗಲಿನಿಂದ ಇಳಿಬಿಡುವ ವಸ್ತ್ರ (?) ಉತ್ತರೀಯ

ಸವಂಗ ಅಂಗಿ ಕುಪ್ಪುಸ ರವಿಕೆ ಶಿರಷೇಷ : ಕಿರೀಟದ ತುದಿಯ ಗುಚ್ಛ ಚೂಡಾರತ್ನ: ಚೂಡಾಮಣಿ

ಚುಲಕ	–	ಸೀರೆ
ಚೂಳೆಯ	–	ತಿಲಕ
ಚೋಲಿ	–	ರವಿಕೆ
ದುಕೂಲ	–	ರೇಷ್ಮೆವಸ್ತ್ರ
ಉಡೆ	–	ಉಡುವ ಬಟ್ಟೆ
ಉರಚಲಿ	–	ಮೊಲೆಕಟ್ಟು
ನೂಲಿನ ವಸ್ತ್ರ	–	ಕಪ್ಪವಸ್ತ್ರ ಇತ್ಯಾದಿ....

ವೇಷ ಭೂಷಣಗಳ ಕುರಿತು ಕರ್ನಾಟಕ ಶಬ್ದಸಾರದಲ್ಲಿ ಹೀಗೆ ಬರುತ್ತದೆ. "ಹುಟ್ಟಿಗೆ, ದುಗುಲ, ಪಟ್ಟಣಿಗೆ, ಉಳ್ಳುಡುಗೆ, ಈ ನಾಲ್ಕು ವಸನಕ್ಕೆ ಹೆಸರು.

ಅಂಚೆ, ಕಪ್ಪಡವೆಂದರೆ ವಸ್ತ್ರ ಪಸುರವೆಂದರೆ ಸಣ್ಣ ಸಾಳಿಗೆಯೆಂದರೆ ಉಡುಗೆ ತೆರೆಮೊಡೆ, ಸೋಗಿಲೆ, ಮಡಿಲ್ ಎಂದರೆ ವಸನ ಸೆರಗೆಂದು ಚೇಲಾಚೇಲ ಝುಳಂಬವೆಂದರೆ ಮೇಲ್ಮುಸುಕು" (ಕರ್ನಾಟಕ ಶಬ್ದಸಾರ ಪುಟ ೬೩)

ವೇಳೆವಾಳಿ

ಅರಸನಿಗೋಸ್ಕರ ಸೇವಕರು ಪ್ರಾಣತ್ಯಾಗ ಮಾಡುವುದನ್ನು ಕರ್ತವ್ಯ ಎನ್ನುವ ರೀತಿಯಲ್ಲಿ ಭಾವಿಸಲಾಗಿತ್ತು. ವೇಳೆವಾಳಿ ಎಂದರೆ ರಾಜನ ಸಾವಿನ ಸಮಯದಲ್ಲಿ

ತನ್ನ ಕರ್ತವ್ಯವನ್ನು ನಡೆಸುವವನು ಎಂದರ್ಥ. ಈ ರೀತಿಯಾಗಿ ಮರಣ ಹೊಂದಿದವರ ಅನೇಕ ಉಲ್ಲೇಖಗಳು ಶಾಸನಗಳಲ್ಲಿ ಸಿಗುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಲಾಗಿದೆ. ರೆಟ್ಟಿಂಯುಣ್ಣನೆಂಬ ಬೆಳಾವಡಿಚ ಮಡಿದ ಒಡೆಯನ ಅಗ್ನಿಸಂಸ್ಕಾರದೆದುತು ಆತ್ಮಹತ್ಯೆ ಮಾಡಿಕೊಂಡು ಕೀಳ್ಗುಂಟೆಯಾದ, ಚಾಲುಕ್ಯ ರಾಜನಿಗಾಗಿ ವೇಳವಡಿಚ ಶಂಭು ಅಗ್ನಿಪ್ರವೇಶ ಮಾಡಿದ, ಒಡೆಯನಿಗಾಗಿ ತುಳುವ ಚಂಡಿಗ ಭೇರುಂಡೇಶ್ವರ ಕಂಬವನ್ನೇರಿ ಕೆಳಗೆ ನಿಲ್ಲಿಸಿದ ಬಾಣಗಳ ಮೇಲೆ ಬಿದ್ದು ಸತ್ತ, ರಾಣಿ ಪದ್ಮಲದೇವಿ ಸತ್ತಾಗ ಉತ್ತಮ ಚೋಳಸೆಟ್ಟಿ ಎನ್ನುವವನು ತನ್ನ ಹೆಂಡತಿಯ ತಲೆ ಕಡಿದು ತಾನೂ ತಲೆ ಕಡಿದು ತಾನೂ ಸತ್ತ, ಹೊಯ್ಸಳ ಉದಯಾದಿತ್ಯನ ಮಗಳು ಏಚಲದೇವಿ ಮಡಿದಾಗ ಮಾದೆಯನು ವೇಳೆಯಾಳಿಯಾದ, ಚಾಲುಕ್ಯ ತೈಲಪನು ಮಡಿದಾಗ ಬೊಪ್ಪನು ವೇಳೆವಾಳಿಯಾದ ಮುಂತಾದ ಅನೇಕ ಉಲ್ಲೇಖಗಳು ಸಿಗುತ್ತವೆ. ಇವುಗಳಿಂದ ವೇಳೆವಾಳಿಗಳು ಅಥವಾ ಕೀಳ್ಗುಂಟೆಗಳು ಅಗ್ನಿಪ್ರವೇಶ ಮಾಡಿಕೊಂಡು ಕತ್ತಿಯಿಂದ ಇರಿದುಕೊಂಡು ಇಲ್ಲವೆ ನಿಲ್ಲಿಸಿದ ಬಾಣಗಳ ಮೇಲೆ ಬಿದ್ದು ಸಾವನ್ನಪ್ಪುತ್ತಿದ್ದರು ಎನ್ನುವುದು ತಿಳಿಯುತ್ತದೆ. ಅರಸ ಇಲ್ಲವೇ ಅರಸು ಮನೆತನಕ್ಕೆ ಸಂಬಂಧಿಸಿದವರು ಮರಣ ಹೊಂದಿದಾಗ ಮಾತ್ರವಲ್ಲದೆ. ಅವರಿಗೆ ಶುಭಕೋರಿಯೂ ಪ್ರಾಣತ್ಯಾಗ ಮಾಡುವ ಸೇವಕರಿರುತ್ತಿದ್ದರು. ಇಂತ ಎರಡು ಉಲ್ಲೇಖಗಳನ್ನು ಇಲ್ಲಿ ನೀಡಲಾಗಿದೆ. ಅರಸನಿಗೆ ಗಂಡು ಮಗುವಾಗಲಿ ಎಂಬ ಹರಕೆ ಹೊತ್ತು ಆಕಟೆ ಎಂಬವನು ಶಿರವನ್ನು ಕತ್ತರಿಸಿಕೊಂಡ, ಮಹಾಸಾಮಂತ ಬೊಪ್ಪರಸನ ರಾಣಿ ಮಾಯಾದೇವಿ ಗಂಡು ಹಡೆಯಬೇಕೆಂದು ಕೊಂಡಸಬಾವಿಯ ಬ್ರಹ್ಮ ದೇವರಿಗೆ ಹರಕೆ ಹೊತ್ತ ದೇಕೆಯನಾಯಕ ರುಂಡ ಹಾರಿಸಿಕೊಂಡು ಮರಣಹೊಂದಿದ. ಈ ರೀತಿಯ ಉಲ್ಲೇಖಗಳು ಶಾಸನಗಳಲ್ಲಿ ಮಾತ್ರವಲ್ಲದೆ ವಡ್ಡಾರಾಧನೆ, ಪಂಪಭಾರತ, ಕಾವ್ಯಾವಲೋಕನ, ಜೀವಸಂಬೋಧನೆ ಮುಂತಾದ ಕೃತಿಗಳಲ್ಲಿ ಹಾಗೂ ವಚನ ಮತ್ತು ರಗಳೆ ಸಾಹಿತ್ಯದಲ್ಲೂ ಕಂಡುಬರುತ್ತವೆ. (ಮೋಹನಕೃಷ್ಣ ರೈ, ೨೦೦೪. ಪು. ೯೦-೧೧೭) ವಾಳಿ ಎನ್ನುವುದು ಆಳು ಎಂಬ ಅರ್ಥದಲ್ಲಿಯೇ ಬಳಕೆಯಾಗಿದೆ.

ವೈಕ್ರಿಯಕ

ತಪಶ್ಚರ್ಯೆಯ ಪ್ರಭಾವದಿಂದ ಯೋಗಿಗಳಿಗೆ ಅಣಿಮಾ, ಲಘಿಮಾ, ಗರಿಮಾ, ಮಹಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವ, ಅಪ್ರತಿಘಾತ, ಅಂತರ್ಧಾನ, ಕಾಮರೂಪ ಈ ಕೆಲವು ಶಕ್ತಿಗಳು ಪ್ರಾಪ್ತವಾಗುತ್ತವೆ. ಅವಕ್ಕೆ ತಕ್ಕ ರೂಪವನ್ನು ಧರಿಸಿಕೊಳ್ಳುವುದು. ಇದು ಜೈನಧರ್ಮದ ವಿಶಿಷ್ಟ ಪರಿಭಾಷೆಯಾಗಿದೆ.

ವೈದ್ಯರು

ಅಷ್ಟಾಂಗಚಿಕಿತ್ಸೆ ತಿಳಿದಿರಬೇಕು. ಶಸ್ತ್ರ ಚಿಕಿತ್ಸೆಯಲ್ಲಿ ಅವರು ಪಾರಂಗತರಾಗಿರಬೇಕು. (ಕಾಯ ಚಿಕಿತ್ಸೆ, ಶಾಲಾಕ್ಯ ಚಿಕಿತ್ಸೆ, ಬಾಲ ಚಿಕಿತ್ಸೆ, ಗ್ರಹ ಚಿಕಿತ್ಸೆ, ವಾಜೀಕರಣ ಚಿಕಿತ್ಸೆ, ರಸಾಯನ ಚಿಕಿತ್ಸೆ, ವಿಷಚಿಕಿತ್ಸೆ, ಶಲ್ಯ ಚಿಕಿತ್ಸೆಗಳು ಅಷ್ಟಾಂಗ ಚಿಕಿತ್ಸೆಗಳು) ರೋಗ ಕಾರಣ ಮತ್ತು ಅದರ ಪರಿಹಾರ ಗೊತ್ತಿರಬೇಕು. ಔಷಧದ ಹೆಸರು ಅವನಿಗೆ ತಿಳಿದಿರಬೇಕು. ವೈದ್ಯನಿಗೆ ಪಂಚ ಕರ್ಮಗಳು ತಿಳಿದಿರಬೇಕು. ವಮನ ಕರ್ಮ, ವಿರೇಚನ ಕರ್ಮ, ನಸ್ಯ ಕರ್ಮ, ಬಸ್ತಿಕರ್ಮ ಮತ್ತು ಶಸ್ತ್ರ ತಿಳಿದಿರಬೇಕು. ರೋಗಿಯ ವಯಸ್ಸು, ಅವನ ದೇಹ ಸ್ಥಿತಿ, ಅವನಿಗೆ ಯಾವುದು ಹಿತ, ಯಾವುದು ಅಹಿತವೆನ್ನುವುದರ ಅರಿವು ಅವನಿಗಿರಬೇಕು. ಎಂದು ಮಾನಸೋಲ್ಲಾಸದಲ್ಲಿ ಬರುತ್ತದೆ.

(ಮಾನಸೋಲ್ಲಾಸ–2–141–145)

ವೈಶಾಖಸ್ಥಾನ

ಅಭಿನಯದ ಮಾದರಿಯಿದು. ಲೋಕಾಕಾರ ಅಭಿನಯ ಅಂದರೆ ಲೋಕವೃತ್ತಿಯ ಅನುಕರಣೆ. ಎರಡನೆಯದಾಗಿ ವೈಶಾಖಸ್ಥಾನ ಅಂದರೆ ಎರಡೂ ಪಾದಗಳನ್ನು ಅಡ್ಡಲಾಗಿ ಅಗಲಿಸಿ ಕಿಸು ಗಾಲಿನಲ್ಲಿ ನಿಲ್ಲುವುದು. ಸೊಂಟದ ಮೇಲೆ ಎರಡು ಕೈಗಳಿರುತ್ತವೆ.

"ಚಾರೀ ಎಂದರೆ 'ಏಕ ಪಾದ ಪ್ರಚಾರ', ಒಂದು ಪಾದದ ಮುಂದ್ಹೆಜ್ಜೆ." ಎರಡು ಹೆಜ್ಜೆ ಸರಿಸಿದರೆ ಅದು 'ಕರಣ' ಮತ್ತು ಕರಣಗಳ ಸಮಾಯೋಗ (ಒಂದಕ್ಕಿಂತ ಹೆಚ್ಚು ಕೂಡಿ ಬರಬಹುದು) 'ಖಂಡ', ಮೂರು ಇಲ್ಲವೆ ನಾಲ್ಕು ಖಂಡಗಳ ಸಮಾಯೋಗ 'ಮಂಡಲ' ಎನ್ನಿಸುವುದು, ಶಸ್ತ್ರಮೋಕ್ಷ, ಆಕಾಶಯಾನ ಮುಂತಾದುವುಗಳು ಚಾರೀಗಳಿಂದಲೆ ಅಭಿನಯಿಸುವುದು ಶಕ್ಯ ನೃತ್ಯ ಮತ್ತು ಯುದ್ಧಗಳಲ್ಲಿ ಬಳಸಬೇಕಾದ ಚಾರೀಗಳು ಹದಿನಾರು:–ಸಮಪಾದ, ವಾರ್ತಾ, ಶಕಟಾಸ್ಯಾ, ಅಧ್ಯರ್ಧಿಕಾ, ಚಾಷಗತಿ, ವೀಚವಾಕ್, ಏಡಕಾಕ್ರೀಡಿತಾ, ಬದ್ಧಾ, ಊರೂದ್ ವೃತ್ತಾ, ಉಡ್ಡಿತಾ, ಉತ್‌ಸ್ಯಂದಿತಾ, ಜನಿತಾ, ಸ್ಯಂದಿತಾ, ಅಪಸ್ಯಂದಿತಾ, ಸಮೋತ್ಸಾರಿತಮತಲ್ಲೀ, ಮತ್ತು ಮತಲ್ಲೀ. ಮೇಲಿನ ಹದಿನಾರು ಭೂಮಿಯ ಮೇಲೆ ಹೆಜ್ಜೆಗಳನ್ನಿಡಬೇಕಾದಾಗ ಅಭಿನಯಿಸುವ ಚಾರೀಗಳು. ಇನ್ನು ಆಕಾಶದಲ್ಲಿ ಹೆಜ್ಜೆಗಳನ್ನಿಡುವ ಅಭಿನಯಕ್ಕಾಗಿ ಬೇರೆ ಹದಿನಾರು ಇವೆ. ಅವೆಂದರೆ, ಅತಿಕ್ರಾಂತಾ, ರಸಕ್ರಾಂತಾ, ಪಾರ್ಶ್ವಕ್ರಾಂತಾ, ಊರ್ಧ್ವಜಾನು, ಸೂಚೀ, ನೂಪುರ ಪಾದಿಕಾ, ದೋಲಾಪಾದಾ, ಆಕ್ಷಿಪ್ತಾ, ವ್ಯಾವಿದ್ಧಾ, ಉದ್‌ವೃತ್ತಾ, ವಿದ್ಯುದ್‌ಭ್ರಾಂತಾ, ಅಲಾತಾ, ಭುಜಂಗನಾಸಿತಾ, ಮೃಗಪ್ಲುತಾ, ದಂಡಾಪಾದಾ ಮತ್ತು ಭ್ರಮರೀ.

ಕಾಲು, ಕೈ, ಸೊಂಟ, ಎದೆ, ತಲೆ- ಇವೆಲ್ಲವೂ ಒಂದೇ ರೇಖೆಯಲ್ಲಿರಬೇಕು. ಶಸ್ತ್ರಮೋಕ್ಷ ಮೊದಲಾದವುಗಳ ಅಭಿನಯಕ್ಕಾಗಿ ನಿಂತುಕೊಳ್ಳುವ ಭಂಗಿ ಆರು

ವಿಧದ್ದಿದೆ; ವೈಷ್ಣವ, ಸಮಪಾದ, ವೈಶಾಖ, ಮಂಡಲ, ಪ್ರತ್ಯಾಲೀಢ ಮತ್ತು ಅಲೀಢ. ಉದಾ: ಎರಡೂ ಪಾದಗಳ ನಡುವೆ ಎರಡೂವರೆ ಹೆಜ್ಜೆ ಅಂತರವನ್ನಿಟ್ಟು, ಹಿಂದಿನ ಕಾಲನ್ನು ಸ್ಥಿರವಾಗಿ ನೇಟಾಗಿ ಇಟ್ಟು, ಮುಂದಿನ ಕಾಲನ್ನು ಕೆಳದೊಡೆಯನ್ನು ತುಸು ಬಗ್ಗಿಸಿಟ್ಟು ನಿಲ್ಲುವುದು ವೈಷ್ಣವಸ್ಥಾನ; ಈ ಸ್ಥಾನ(ಭಂಗಿ)ದಲ್ಲಿ ನಿಂತು ರಾಜರು, ಉತ್ತಮ ಪಾತ್ರಗಳು ಸಂಲಾಪವನ್ನು ನಡೆಸಬೇಕು. ಕೆಲವರ ಅಭಿಪ್ರಾಯದಲ್ಲಿ ಈ ಭಂಗಿಯನ್ನು ಧನುರ್ಧಾರಣಕ್ಕಾಗಿಯೂ ಬಳಸಬಹುದೆಂದಿದೆ. ಇದೇ ರೀತಿಯಲ್ಲಿ ಮಿಕ್ಕ ಅಯ್ದೂ ಸ್ಥಾನಗಳಲ್ಲಿ ಪಾದಗಳು, ಮೇಲೆ ಕಾಣಿಸಿದ ಮಿಕ್ಕ ನಾಲ್ಕು ಅವಯವಗಳನ್ನು ಹೇಗೆ ಇಡಬೇಕೆಂಬುದನ್ನು ವಿವರಿಸಲಾಗಿದೆ. ಇನ್ನೊಂದು ಉದಾ: ಬಲಗಾಲನ್ನು ಮಡಚಿ, ಎಡಗಾಲನ್ನು ಹಿಂದೆ ದೂರ ಚಾಚಿ ಶಸ್ತ್ರವನ್ನು ಹಿಡಿಯುವುದು ಆಲೀಢ ಸ್ಥಾನ. ಈ ಬೇರೆ ಬೇರೆ ಸ್ಥಾನ(ಭಂಗಿ)ಗಳಿಂದ ನಿಂತಾಗ ಸೊಂಟ, ಪಾದ, ಎದೆ, ತಲೆ ಇವುಗಳನ್ನು ಭಾರತೀ, ಸಾತ್ವತೀ, ಕೈಶಿಕೀ ವೃತ್ತಿಗಳ ನಾಟ್ಯದಲ್ಲಿ ಬೇರೆ ಬೇರೆಯಾಗಿ ಇಡಬೇಕು ಎಂದೂ ಹೇಳಲಾಗಿದೆ."

ವಿವರಗಳಿಗೆ ನೋಡಿ: ಶ್ರೀ ರಂಗ; ನಾಟ್ಯಶಾಸ್ತ್ರದ ಸಂಗ್ರಹ ಸಂ; 8 ಪುಟ.607

ವೈಶ್ಯ

ವೈಶ್ಯರಿಗೆ ಕೋಮಟಿಗರು, ಪಸುಬೆವಳನೆಂದು ಕರೆಯುತ್ತಾರೆ ಸೀರೆ ಮಾರುವವನಿಗೆ ಸೀರೆವರದನು ಎನ್ನುತ್ತಾರೆ. "ಯಜುರ್ವೇದ ಸಾಹಿತ್ಯದಲ್ಲಿ ಮಾತ್ರ ಯಾವುದೇ ಸಂದೇಹಗಳಿಗೆ ಎಡೆಕೊಡದಷ್ಟು ಸ್ಪಷ್ಟವಾಗಿ ವರ್ಣವ್ಯವಸ್ಥೆಯ ನಿರ್ಮಾಣ, ಅದರ ಉದ್ದೇಶಗಳೆರಡನ್ನೂ ವಿವರಿಸಲಾಗಿದೆ. ಋಗ್ವೇದದಲ್ಲಿ ಸಮುದಾಯದ ಸಾಮಾನ್ಯ ಜನತೆಯನ್ನು 'ವಿಶ್' ಪ್ರಜೆಗಳು ಎನ್ನಲಾಗಿದೆ. ಈಗ ಇದನ್ನು ಕೃಷಿಕರು ಎಂಬ ಅರ್ಥದಲ್ಲಿ ಪ್ರಯೋಗಿಸಲು ಆರಂಭವಾಯಿತು. ಈ ಮೂಲದಿಂದಲೇ 'ವೈಶ್ಯ' ಎಂಬ ವರ್ಣದ ಹೆಸರು ಬಂತು. ಈ 'ವಿಶ್' ಜನಗಳಿಗೆ ಸಂಬಂಧಿಸಿದ ದೇವರುಗಳು ಮರುತ್ತರು. ಇಂದ್ರನಿಗೂ ಮರುತ್ತರಿಗೂ ಋಗ್ವೇದದಲ್ಲೇ ಶತ್ರುತ್ವವಿದೆ. ರಾಜನು 'ವಿಶ್' ಜನರನ್ನು ಭುಂಜಿಸಿದಂತೆ, ಇಂದ್ರನು ಮರುತ್ತರನ್ನು ಭುಂಜಿಸುತ್ತಾನೆ ಎಂದು ಋಗ್ವೇದದಲ್ಲಿ ಹೇಳಿದ್ದಾರೆ. ಋಗ್ವೇದ ಕಾಲದಲ್ಲೇ ಸಾಮಾನ್ಯ ಸಮುದಾಯ ಸಭ್ಯರನ್ನು ಸಮುದಾಯ ಮುಖ್ಯರು ಪೀಡಿಸುತ್ತಿದ್ದಿರಬೇಕು. ಕೃಷಿ ಸಮಾಜ ಬರುವ ಹೊತ್ತಿಗೆ ಈ ಪೀಡನೆ ಹೆಚ್ಚುತ್ತಾ ಹೋಗಿರಬೇಕು. ಶತಪಥ ಬ್ರಾಹ್ಮಣಗಳಲ್ಲಿ ಮರುತ್ತರನ್ನು ಸಾಮಾನ್ಯ ಕೃಷಿಕರು ಎನ್ನಲಾಗಿದೆ. ಐತ್ತರೇಯ ಬ್ರಾಹ್ಮಣದಲ್ಲಿ ವೈಶ್ಯನು ಇತರರಿಗೆ ಅಧೀನನಾಗಿರುತ್ತಾನೆಂದೂ, ಇತರರಿಂದ ಭುಂಜಿಸಲ್ಪಡುತ್ತಾನೆಂದೂ, ಮನಬಂದಂತೆ ಪೀಡನೆಗೆ ಒಳಗಾಗುತ್ತಾನೆಂದೂ ಹೇಳಲಾಗಿದೆ. ಶೂದ್ರರು ಸೇವಕರೆಂದೂ, ಇಷ್ಟಾನುಸಾರವಾಗಿ ಇವರನ್ನು ಹೊಡದಟ್ಟಲಾಗುತ್ತದೆಂದೂ, ಮನಬಂದಂತೆ ಇವರನ್ನು

ಸಾಯಿಸಲಾಗುತ್ತದೆಂದೂ ಹೇಳಿದ್ದಾರೆ. ಯಜ್ಞದ ಆಚರಣೆಯ ಉದ್ದೇಶವೂ ಈ ಕಾಲಕ್ಕೆ ಸಾಕಷ್ಟು ಬದಲಾಯಿತು. ಶತಪಥ ಬ್ರಾಹ್ಮಣದಲ್ಲಿ ವೈಶ್ಯ ಶೂದ್ರ ಜನರನ್ನೂ ಪುರೋಹಿತರ ನೆರವಿನಿಂದ ಅಧೀನಪಡಿಸಿಕೊಳ್ಳುವುದಕ್ಕೆ ರಾಜರುಗಳು ಯಜ್ಞಗಳನ್ನು ಮಾಡಿದರೆಂಬುದಕ್ಕೆ ಪುರಾವೆಗಳಿವೆ ಎಂದು ಕೊಸಾಂಬಿಯವರು ಹೇಳುತ್ತಾರೆ. ಯಜ್ಞದ ಅಂಗವಾಗಿ ಪ್ರದಕ್ಷಿಣೆ ಮಾಡುವಾಗ ಪುರೋಹಿತರು ಒಂದು ಬದಿಗೆ, ರಾಜರುಗಳು ಒಂದು ಬದಿಗೆ ನಿಂತು, ಶೂದ್ರ ವೈಶ್ಯ ಜನರನ್ನು ಮಧ್ಯಕ್ಕೆ ಬರುವಂತೆ ಆವರಿಸಿ ಅಧೀನಗೊಳಿಸಿಕೊಳ್ಳಬೇಕೆಂದು ಆ ಬ್ರಾಹ್ಮಣಗಳಲ್ಲಿ ಹೇಳಲಾಗಿದೆ. (ಡಿ. ಡಿ. ಕೊಸಾಂಬಿ ೧೯೬೮ ಪು.೯೭)

ವೈಷ್ಣವ

"ವೈಷ್ಣವ=ವಿಷ್ಣುವಿನ ಆರಾಧಕ, ಭಕ್ತ ಎಂಬ ಅರ್ಥದಲ್ಲಿಯೂ ಬಳಕೆಯಲ್ಲಿದೆ. (ವೈಷ್ಣವರು) ವೈಷ್ಣವ=ವಿಷ್ಣು ಸಂಬಂಧಿಯಾದ. ಹಾಗೆಯೇ ವೈಷ್ಣವಾಸ್ತ್ರವು ಭಗದತ್ತನಿಂದ ಅರ್ಜುನನ ಮೇಲೆ ಪ್ರಯೋಗಿಸಲ್ಪಟ್ಟಿತು. ಇದು ವರಹಾವತಾರದ ಕಾಲದಲ್ಲಿ ಭೂದೇವಿಗೆ ವರಾಹನ ದಾಡೆ ಕೊಡಲ್ಪಟ್ಟಿತು. ಆಕೆಯಿಂದ ಈ ಅಸ್ತ್ರವು ತನ್ನ ಮಗನಾದ ನರಕಾಸುರನಿಗೆ; ಅನಂತರ ಅವನ ಮಗ ಭಗದತ್ತನಿಗೆ ಕೊಡಲ್ಪಟ್ಟಿತು. ಅವನಿಂದ ಶ್ರೀ ಕೃಷ್ಣನ ಕೈ ಸೇರಿತು. ವೈಷ್ಣಾಗಮಗಳಿಗೆ ವಿಷ್ಣುವೇ ಪರಬ್ರಹ್ಮ. ವೈಷ್ಣವ ಪಂಥದಲ್ಲಿ ವಿಷ್ಣುವೇ ವೇದಪುರುಷ. ಅವನಿಗೆ(ಯಜ್ಞಕ್ಕೆ ಸಂಬಂಧಿಸಿದಂತೆ) ಯಜ್ಞನಾರಾಯಣ ಎಂದು ಕರೆಯುತ್ತಾರೆ. ನಾರಾಯಣ, ವಾಸುದೇವ, ವಿಷ್ಣುಕಲ್ಪನೆಗಳು ಇದರಲ್ಲಿ ಬರುತ್ತವೆ. ಶತಪಥ ಬ್ರಾಹ್ಮಣ, ಮಹಾಭಾರತ, ಭಗವದ್ಗೀತೆ, ಭಾಗವತ ಪುರಾಣಗಳು ವಿಷ್ಣು ಕೇಂದ್ರಿತ. ವೈಷ್ಣವರಲ್ಲಿ ನಾಲ್ಕು ಪಂಥಗಳು: ಶ್ರೀ ಸಂಪ್ರದಾಯ(ವಿಶಿಷ್ಟಾದ್ವೈತ) ಬ್ರಹ್ಮ ಸಂಪ್ರದಾಯ–ತತ್ವವಾದ(ದ್ವೈತ) ರುದ್ರ ಸಂಪ್ರದಾಯ (ಶುದ್ಧಾದ್ವೈತ) ಸನಕ ಸಂಪ್ರದಾಯ(ದ್ವೈತಾ ದ್ವೈತ) ಎಂದು ಭಾರತೀಯ ತತ್ವಶಾಸ್ತ್ರ ಪ್ರವೇಶದಲ್ಲಿ ಬರುತ್ತದೆ.

ಜಲಶಾಯಿ: ನಾಗಸ್ವರೂಪೀ 'ವಿಷ್ಣು'ವು ಚಂದ್ರರೂಪವೇ ಹೊರತು ಸೂರ್ಯನಾಗಲು ಶಕ್ಯವಿಲ್ಲ. 'ಸೂರ್ಯ –ನಾರಾಯಣ' ಎಂಬ ರೂಢಿಯ ಮಾತಿನಲ್ಲಿ 'ನಾರಾಯಣ' ಎಂಬುದು ಸೂರ್ಯನ ಪರ್ಯಾಯನಾಮ, ಎಂಬ ಹಾಗಿನ ಸಂಭ್ರಮಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ." ಇದು ಶಂಬಾ ಅವರ ಅಭಿಪ್ರಾಯ.

ಶ್ರೀಮದ್ ಭಗವದ್ಗೀತೆಯ ತಳಹದಿಯಲ್ಲಿ ನಾಗ : ಸರ್ ಪ ತತ್ತ್ವಜ್ಞಾನವೇ ಇರಲಿಕ್ಕೆ ಬೇಕೆಂಬುದನ್ನು ಅಲ್ಲಗಳೆಯಲಿಕ್ಕೆ ಆಗುವುದಿಲ್ಲ 'ಕಾಲೋಸ್ಮಿ' ಎಂದು ತಾನೇ ಸಾರಿ–ಸಾರಿ ಹೇಳುತ್ತಿರುವ ವಿಷ್ಣು: (ಕೃಷ್ಣ), ಕಾಲ: ಸರ್‌ಪ ಎಂಬುದನ್ನು ಸಿದ್ಧಪಡಿಸುವ ಆವಶ್ಯಕತೆಯುಂಟೆ? ಇಷ್ಟರಿಂದಲೇ ಸಮಾಧಾನವಾಗದವರು ವಿಷ್ಣುವಿನ ಪರ್ಯಾಯ ನಾಮಾವಳಿಯನ್ನು ನೋಡಬಹುದು; 'ಅನಂತ': ಹಾವಿನ ರೂಪ; ಹಾವಿನ ಮೇಲೆ ಒದಗಿರುವ ವಿಷ್ಣುವನ್ನು ನಾನಾ ಚಿತ್ರ, ಮೂರ್ತಿ ರೂಪದಲ್ಲಿ ನೋಡಲು ದೊರೆಯುತ್ತದೆ.

ನಾಗಭೂಷಣ: ರುದ್ರ; ಅನಂತ : ನಾರಾಯಣನು ವಿಷ್ಣು, ದುರ್ಗೆ, ಕಾಲಿ: (ಸರ್ಪಿಣಿ) ದೇವಿ ಈ ಪರ್ಯಾಯನಾಮಗಲು ನಮ್ಮ ದೈವತ ಪ್ರತಿಮೆಗಳ ಮೂಲ ಆಕೃತಿಯನ್ನು ಬೆಳಕಿನಲ್ಲಿ ತರುತ್ತಿವೆ ಎಂಬುದು, ಸಂಶೋಧನ ಪದ್ಧತಿಯ ಒಂದು ಆಧುನಿಕ ಸೂತ್ರ: ತಂತ್ರದಿಂದಲೂ ಹೀಗೆ ನಿರ್ಧರಿಸಲ್ಪಡುತ್ತಿದೆ ಎಂದು ಶಂಬಾ ಹೇಳುತ್ತಾರೆ.

ವಿವರಗಳಿಗೆ ನೋಡಿ: ಪ್ರಭಾಕರ ಜೋಶಿ .ಎಂ 2008 ಭಾರತೀಯ ತತ್ವಶಾಸ್ತ್ರ ಪ್ರವೇಶ
ಶಂಬಾ ಜೋಶಿ 1999 ಸಂಪುಟ. 4 ಪುಟ. 156, 173, 174.

ವೈಷ್ಣವಾಸ್ತ್ರ

"ಅಂದು ಬಾಳನೊಳಗಿನ ಜೀವನ–ಮೂಲ್ಯಗಳಾಗಿ 'ಅಹಿ' ಸ್ವರೂಪೀ ಶತ್ರುವನ್ನು ಎದುರಿಸುವವನೆಂಬ ದೈವತ ಪ್ರತಿಮೆಯನ್ನು ಎಂದರೆ ಇಂದ್ರನನ್ನು, ಭ್ರಷ್ಟಗೊಳಿಸಿದ ಈ ನಾರಾಯಣೀಯ ಅಸ್ತ್ರ: ವಿಷ್ಣುಮಾಯೆ ಅಮೋಘವಲ್ಲವೆ? ಎಂದು ಶಂಬಾ ಅಭಿಪ್ರಾಯ. ಅಸ್ತ್ರಗಳಲ್ಲಿ ಬೇರೆ ಬೇರೆ ಮಾದರಿಗಳಿರುವುದು ಗಮನಾರ್ಹ: ಇಂದ್ರಾಸ್ತ್ರ ಆಗ್ನೇಯಾಸ್ತ್ರ; ವರುಣಾಸ್ತ್ರ ಇತ್ಯಾದಿ. ಅಸ್ತ್ರಗಳು ಆಯಾಗುಣ ಧರ್ಮಗಳನ್ನು ಸೂಚಿಸುತ್ತವೆ. ವರುಣಾಸ್ತ್ರ–ಮಳೆ; ಆಗ್ನೇಯಸ್ತ್ರ–ಬೆಂಕಿ; ಸರ್ಪಾಸ್ತ್ರ–ಸರ್ಪಬಾಣ; ಇತ್ಯಾದಿ."

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 4 ಪುಟ. 427

ವ್ಯಂತರ

ಕ್ಷುದ್ರದೇವತೆ. ವ್ಯಂತರರ್ಕಳಂ ಎಂದರೆ ಕ್ಷುದ್ರದೇವತೆ. ಜಡಮತಿಗಳು ಜಡ ಸ್ವಭಾವ ಎಂದರ್ಥ. ಬೆಂತರವೆನ್ನುವುದಕ್ಕೆ ವ್ಯಂತರವನ್ನುವ ಪ್ರಯೋಗವಿದೆ.

ವ್ಯಕ್ತಿತ್ವ ವಿಕಾಸ

ವಸಾಹತುಶಾಹಿ ಸಂಸ್ಕೃತಿ ಮತ್ತು ದೇಶೀಯ ಸಂಸ್ಕೃತಿಗಳ ಅನುಸಂಧಾನದಲ್ಲಿ ನಡುವೆ ಉದಾರವಾದಿ, ಮಾನವತಾವಾದವೂ ಸಹ ರೂಪ ತಳೆಯಿತು. ವಿಶ್ವಮಾನವ : ವಿಶ್ವ ಭ್ರಾತೃತ್ವ, ವಿಶ್ವ ಕಲ್ಪನೆ ಮೊದಲಾದ ಪರಿಭಾಷೆಗಳು ಕನ್ನಡದಲ್ಲಿ ಚಲಾವಣೆಗೆ ಬಂದಿರುವುದಕ್ಕೆ ಇದು ಕಾರಣವಾಗಿದೆ. ಈ ರೀತಿಯ ಮಾನವತಾವಾದದ ಕಲ್ಪನೆಯು ಸ್ಥಳೀಯ ಸಂಸ್ಕೃತಿಯಿಂದ ವಿಶ್ವಸ್ಥ ಸಂಸ್ಕೃತಿಗಳೆಡೆಗೆ ಪ್ರವೇಶಿಸುವಂತೆ ಮಾಡುತ್ತದೆ. ಈ ರೀತಿಯ ಮಾನವತಾವಾದದ ಮತ್ತೊಂದು ಸಂಗತಿಯೆಂದರೆ ಎಲ್ಲಾ ಸಿದ್ಧಾಂತಗಳನ್ನು ಒಪ್ಪಿಕೊಳ್ಳುವ ಪ್ರಕ್ರಿಯೆ ರೂಪುಗೊಳ್ಳುವುದು. ಅಲ್ತೂಸರ್ ಹೇಳುವಂತೆ 'ಬೂರ್ಜ್ವಾ ಮಾನವತಾವಾದ ಎಲ್ಲಾ ಥಿಯರಿಗಳನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ (Altuser 1990 P.237). ನವ್ಯೋದಯ ವಿಮರ್ಶೆಯ ಪರಿಕಲ್ಪನೆಯಲ್ಲಿ

ಈ ಅಂಶಗಳಿವೆ. ಐ.ಎ. ರಿಚರ್ಡ್ಸ್‌ನನ್ನು ಉದ್ಧರಿಸಿಕೊಂಡು ತಮ್ಮ ಸಾಹಿತ್ಯ ವಿಮರ್ಶೆಯನ್ನು ಮಂಡಿಸುವ ಕ್ರಮದಲ್ಲೇ ಈ ಕ್ರಮವನ್ನು ಕಾಣಬಹುದು.

ಆಲ್ಥೂ ಸರ್ 'ವ್ಯಕ್ತಿತ್ವದ ವಿಕಾಸ' ಅನ್ನುವುದು ಸಮಾಜವಾದಿ ಪರಿಭಾಷೆಯಲ್ಲ ಎಂದು ಒತ್ತಿ ಹೇಳುತ್ತಾನೆ. ಅವನೇ ಮುಂದುವರಿಸುತ್ತಾ ಮತ್ತೊಂದೆಡೆ ೧೮ನೇ ಶತಮಾನದ ಆಡಳಿತಾತ್ಮಕ ತಾತ್ವಿಕತೆಯಲ್ಲಿ ಮಾನವತಾವಾದವು ರೂಪು ತಳೆಯಿತು. ಇದು 'ಸ್ವಾತಂತ್ರ್ಯ' 'ಸಮಾನತೆ' ಮೊದಲಾದ ಪರಿಭಾಷೆಗಳನ್ನು ಚಲಾವಣೆಗೆ ತಂದಿತು. ಈ ಸಂದರ್ಭದ ಮಾನವತಾವಾದವು ವಿಶ್ವಾತ್ಮಕವಾದ ಮೌಲ್ಯಗಳನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಿತು ಎಂದು ಹೇಳುತ್ತಾನೆ. ಆತ್ಮೋನ್ನತಿಯೇ ಪ್ರಧಾನ ಆದಾಗ ಉಳಿದುದು ಗೈರುಹಾಜರಾಗುವುದು ಸರಿಯಷ್ಟೆ. ಕನ್ನಡ ನವೋದಯದ ಸಂದರ್ಭದಲ್ಲಿ ಬಂದ ಭಾವನಾತ್ಮಕ ಪ್ರತಿಕ್ರಿಯೆಯೇ ಈ ಕಾರಣದಿಂದ ಹೆಚ್ಚು ವಿಸ್ತೃತವಾದ ಚರ್ಚೆಯನ್ನು ಬಯಸುತ್ತದೆ.

ವಿವರಗಳಿಗೆ ನೋಡಿ: Luis Althuser 1990 ? P.237
ಡಿ.ವಿ.ಜಿ. ೧೯೬೬ ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ
ಜಿ.ಸಿ.ಹಿಪ್ಪರಗಿ ೧೯೮೨ ವಿಚಾರಮಯೂರ
ಸುನಿಲ್ ಸಹಸ್ರಬುಧೆ, ಕೆ.ಪುಟ್ಟಸ್ವಾಮಿ(ಅನು) ೨೦೦೩ ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು

ವ್ಯೂಹ

ವೈರಿ ವ್ಯೂಹವನ್ನು ಭೇದಿಸಲು ಅನುಕೂಲವಾಗುವಂತೆ ರಾಜನು ವ್ಯೂಹ ರಚನೆಯನ್ನು ಮಾಡಬೇಕು. ಅದು ಏಕ ಮುಖ, ದ್ವಿಮುಖ, ಹಾಗೂ ತ್ರಿಮುಖವಾಗಿರಬೇಕೆಂದು ಮಾನಸೋಲ್ಲಾಸದಲ್ಲಿ ಬರುತ್ತದೆ. ಉರ ಸ್ಥಾನದಲ್ಲಿ ಶ್ರೈಣ, ಆಟವಿಕ, ಅಮಿತ್ರ ಮತ್ತು ಭೃತ್ಯ ಬಲವನ್ನು ನಿಯಮಿಸಬೇಕು. ಪೌರಸ್ತ್ಯದಲ್ಲಿ ಯುದ್ಧ ಭಂಡಾರ ಮತ್ತು ಶಸ್ತ್ರಗಳನ್ನು ಇಡಬೇಕು. ಪ್ರತಿಗ್ರಹದಲ್ಲಿ ರಾಜನೇ ಇರಬೇಕು. ಕಕ್ಷ ಭಾಗದಲ್ಲಿ ಹತ್ತು ಸಾವಿರ ಅಥವಾ ಪ್ರಕಕ್ಷದಲ್ಲಿ ಶ್ರೇಷ್ಠವಾದ ಸುಭಟರು ಇರಬೇಕು. ರಣಾಂಗಣದ ಹಿಂಭಾಗದಲ್ಲಿ ಅಂತಃಪುರದ ಸ್ತ್ರೀಯರು ಇರಬೇಕು. (ಮಾನಸೋಲ್ಲಾಸ-2-1191-1205)

"ಯುದ್ಧದಲ್ಲಿ ಮೊದಲು ಕಾಲಾಳು ಪಡೆ. ಅದರ ಹಿಂದೆ ಗಜ ನಡುವೆ ರಥ. ರಾಜನ ಎರಡೂ ಭಾಗಗಳಲ್ಲಿ ಶ್ರೇಷ್ಠವಾದ ಕುದುರೆಗಳು ಇರುತ್ತವೆ. ಸೂಚ್ಯಗ್ರದಂತೆ ಮುಂಭಾಗದಲ್ಲಿ ನಿಯಮಿತವಾದ ಕೆಲವೇ ಸೈನಿಕರನ್ನಿಟ್ಟು ಸೇನಾಪತಿಗಳ ಸಂಕೇತಗಳಿಗೆ ಅನುಸಾರವಾಗಿ ಕೆಲವುಸೈನಿಕರು ಧನುಷ್ಯಗಳನ್ನು ಧರಿಸಿ ಮುಂದೆ ಸಾಗಬೇಕು" ಎಂದು ಅಥರ್ವವೇದದಲ್ಲಿ ಬರುತ್ತದೆ.(1-27-2)

ಯರ್ಜುವೇದದಲ್ಲಿ ಹೀಗೆ ಬರುತ್ತದೆ: ಸೇನಾನಾಯಕನಾಗಿ ಇಂದ್ರನ ಜೊತೆಗೆ ಅವನ ಮಂತ್ರಿಯಾದ ಬೃಹಸ್ಪತಿಯಿರಲಿ. ಯಜ್ಞಪುರುಷನು ದಕ್ಷಿಣಭಾಗದಲ್ಲಿ, ಸೋಮನು ಮುಂಭಾಗದಲ್ಲಿ ಅಥವಾ ಯಜ್ಞ ಸೋಮರು ಸೇನೆಯ ಬಲಭಾಗದಲ್ಲಿ ಮುನ್ನಡೆಯುತ್ತಿರಲಿ.

"ಬೇರೆ ಬೇರೆ ರೀತಿಯ ವ್ಯೂಹಗಳಿವೆ – ಗರುಡ, ಮಕರ, ಶ್ಯೇನ, ಅರ್ಧಚಂದ್ರ, ವಜ್ರ, ಮೆಂಡ, ಸರ್ವತೋಭದ್ರ, ಚಕ್ರ, ಸೂಚೀ, ಪದ್ಮ ಇತ್ಯಾದಿ. ಯುದ್ಧದ ಸಂದರ್ಭದಲ್ಲಿ; ವ್ಯೂಹ ರಚನೆಯ ಸಂದರ್ಭದಲ್ಲಿಯೂ ಇದು ಪ್ರಧಾನ ಪಾತ್ರ ವಹಿಸುತ್ತದೆಯೆಂಬುದು ಗಮನಾರ್ಹ. ದಂಡ, ಶಕಟ, ವರಾಹ, ಮಕರ, ಸೂಚಿ, ಗರುಡ ಎಂಬ ಆಕೃತಿಯಲ್ಲಿ ಸೇನಾರಚನೆಯನ್ನು ಮಾಡಬಹುದು. ಎದುರು ಸೇನಾಧ್ಯಕ್ಷನು, ಮಧ್ಯದಲ್ಲಿ ರಾಜನು, ಹಿಂದೆ ಸೇನಾಪತಿ, ಪಕ್ಕಗಳಲ್ಲಿ ಆನೆ, ಕುದುರೆಗಳು, ಕಾಲಾಳುಗಳು –ಹೀಗೆ ದೋಣ್ಣೆಯಂತೆ ನಿಲ್ಲಿಸಿ ಮಾಡುವ ವ್ಯೂಹವು ದಂಡವ್ಯೂಹ. ಶತ್ರು ಭಯವು ಸುತ್ತಲಿನಿಂದ ಇದ್ದರೂ ಅದರ ರಕ್ಷಣೆಗೆ ಈ ವ್ಯೂಹವು ಉಪಯೋಗಿಯು. ಸೂಚೀ ವ್ಯೂಹವು ಹಿಂದೆ ದೊಡ್ಡದಾದರೆ ಅದು ಶಕಟವ್ಯೂಹ. ಅದು ಹಿಂದಿನಿಂದ ಭಯವಿದ್ದರೆ, ಎರಡು ತುದಿ ಕೃಶವಾಗಿ ನಡು ಅಗಲವಾದರೆ ವರಾಹ ವ್ಯೂಹ. ನಡು ಇನ್ನೂ ದೊಡ್ಡದಾದರೆ ಗರುಡ ವ್ಯೂಹ. ಪಾರ್ಶ್ವಭಯ ನಿವಾರಕವು. ನಡು ಸಣ್ಣದು ತುದಿ ದೊಡ್ಡದು ಇದ್ದರೆ ಮಕರವ್ಯೂಹ. ಇದು ಹಿಂದೆ–ಮುಂದೆ ಭಯವಿದ್ದರೆ ಇರುವೆ ಸಾಲಿನಂತೆ ಪಿಪೀಲಿಕಾ ವ್ಯೂಹ. ಇದು ಎದುರಿನ ಭಯ ಶತ್ರು ಸೇನಾಭೇದಗಳಿಗೆ ನಿವಾರಕವು" ಎಂದು ಮನು ಹೇಳುತ್ತಾನೆ.

ಸೂಚ್ಯಗ್ರಹದಂತೆ ಮುಂಭಾಗದಲ್ಲಿ ನಿಯಮಿತವಾದ ಕೆಲವೇ ಸೈನಿಕರನ್ನು ಇಟ್ಟುಕೊಂಡು ಸೇನಾಪತಿಗಳ ಸಂಕೇತಕ್ಕೆ ಅನುಸಾರವಾಗಿ ಕೆಲವು ಸೈನಿಕರು ಧನುಸ್ಸನ್ನು ಧರಿಸಿ ಮುಂದೆ ಎಂದು ಅರ್ಥವೇದದಲ್ಲಿ ಬರುತ್ತದೆ. (೧–೨೩–೨)

ವಿವರಗಳಿಗೆ ನೋಡಿ: ವೇದವ್ರತ ವೈಶಂಪಾಯನ 1984 ಋಗ್ವೇದ ಪುಟ. 197
ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 7–187

ವ್ರತ

ವ್ರತವನ್ನು ಬ್ರತ; ನೋಂಪಿಯೆಂದೂ ಕರೆಯುತ್ತಾರೆ. ವ್ರತವೆಂದರೆ ಆಚಾರ–ವಿಚಾರಗಳಲ್ಲಿ ಶುದ್ಧಿಯನ್ನು ಕಾಪಾಡಿಕೊಳ್ಳುವುದು. ಋತ ಎನ್ನುವುದಕ್ಕೂ ವ್ರತವೆಂಬ ಅರ್ಥವಿದೆ. ವ್ರತವೆನ್ನುವುದು ಎರಡು ಅರ್ಥಗಳಲ್ಲಿ ಬಳಕೆಯಾಗುತ್ತವೆ; ಒಂದು–ಏಕಾಗ್ರ ನಿಷ್ಠೆಯಿಂದ ಮಾಡುವ ತಪಸ್ಸು. ಎರಡನೆಯದು ನಿಷ್ಠೆ. ಉದಾ: ಪತಿವ್ರತೆ–ಪತಿಯನ್ನೇ ಅವಲಂಬಿಸಿಕೊಂಡು ಅವನಿಂದ ಹೊರತುಪಡಿಸಿ ಬೇರೆ ಯಾರನ್ನೂ ಚಿಂತಿಸದಿರುವವಳು. ವ್ರತವು ಅಂತರಂಗ ಮತ್ತು ಬಹಿರಂಗ ಶುದ್ಧಿಯನ್ನು ಬಯಸುತ್ತದೆ.

ಹಿಂಸಾಃ ಹಿಸ್ಮೃತಸ್ತೇಯಾ ಬ್ರಹ್ಮಪರಿಗ್ರಹೇಭ್ಯೋವಿರತಿರ್ವ್ರತಂ । ಹಿಂಸೆ, ಕಳವು, ಅಸತ್ಯ, ಅಬ್ರಹ್ಮ ಮತ್ತು ಪರಿಗ್ರಹದಿಂದ ವಿರಕ್ತವಾಗುವುದೇ ವ್ರತವೆನಿಸುತ್ತದೆ. (ತ.ಸೂ 7–1)

ವ್ರತವೆಂದರೆ ನಿಯಮ. ವ್ರತವು ಅನುಕರಿಸುವುದರಿಂದ ಹುಟ್ಟಿಕೊಳ್ಳುವುದಲ್ಲ. ಅದರಿಂದ ಪ್ರಯೋಜನವೂ ಇಲ್ಲವೆಂದು ಹೇಳುತ್ತಾರೆ. ಯಾವುದೇ ವ್ರತವು ಕಾಟಾಚಾರಕ್ಕೆ ಮಾಡಿದರೆ ಉಪಯೋಗವಿಲ್ಲವೆಂಬುದು ಅವರ ಅಭಿಪ್ರಾಯವಾಗಿದೆ. ಯಾವುದನ್ನು ಆತ್ಮಶ್ರೇಯಸ್ಸಿಗಾಗಿ ಬಳಸುತ್ತೇವೆಯೋ ಅದು ಜಯಶೀಲವಾಗುತ್ತದೆ.

ವಿವರಗಳಿಗೆ ನೋಡಿ: ಸುನಿಲ್ ಸಹಸ್ರಬುಧೆ, ಕೆ.ಪುಟ್ಟಸ್ವಾಮಿ(ಅನು) ೨೦೦೩ ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು

ಶಕುನ

ಶಕುನಶಾಸ್ತ್ರದ ಲಕ್ಷಣ ಅಂಗ, ಸ್ವರ, ವ್ಯಂಜನ, ಭೌಮ, ಅಂತರಿಕ್ಷ, ಸ್ವಪ್ನಚಿಹ್ನ. ಶಕುನಗಳು ಎರಡು ಬಗೆ–ಒಂದು ಶುಭಶಕುನ ಮತ್ತೊಂದು ಅಪಶಕುನ. ಶುಭಶಕುನದಿಂದ ಶುಭ ದೊರೆಯುತ್ತದೆ. ಅಪಶಕುನದಿಂದ ಕೆಟ್ಟದಾಗುತ್ತದೆಯೆಂಬ ನಂಬಿಕೆಯಿದೆ. ಶಕುನದ ಬಗೆಗಿನ ನಂಬಿಕೆಗಳು ಎಲ್ಲಾ ಜನಾಂಗ ಮತ್ತು ದೇಶಗಳಲ್ಲಿ ಇರುತ್ತದೆ. ಬೆಕ್ಕು ಅಡ್ಡ ಹೋದರೆ; ಸೌದೆ ಹೊರುವವನು ದಾರಿಯಲ್ಲಿ ಸಿಕ್ಕಿದರೆ; ಹಲ್ಲಿಯು ಮೈ ಮೇಲೆ ಬಿದ್ದರೆ; ಕಾಗೆಯು ನೀರು ಕುಡಿಯುವುದನ್ನು ನೋಡಿದರೆ; ಎಡಮಗ್ಗುಲಲ್ಲಿ ಎದ್ದರೆ; ಹೊರಡುವಾಗ ಯಾರಾದರೂ ಎಲ್ಲಿಗೆ ಎಂದು ಕೇಳಿದರೆ ಅದಕ್ಕೆ ಅಪಶಕುನವೆಂದು ಕರೆಯುತ್ತಾರೆ. ನರಿಯ ಮುಖ ನೋಡಿದರೆ; ಬಲಗಣ್ಣು ಅದುರಿದರೆ; ದಾರಿಯಲ್ಲಿ ಕಬ್ಬಿಣ ಸಿಕ್ಕಿದರೆ ಅವುಗಳನ್ನು ಶುಭ ಶಕುನಗಳೆಂದು ಕರೆಯುತ್ತೇವೆ. ಇವು ನಂಬಿಕೆಗಳು ಮಾತ್ರ.

ಕೆಲವು ಕಡೆಗೆ ಅಭಿಚಾರಕ ಸೂಕ್ತಗಳಲ್ಲಿ (ಹತ್ತನೆಯ ಮಂಡಲ) ವಾಮಾಚಾರದ ಮಾರ್ಗವನ್ನು ಅನುಸರಿಸಿದಂತೆ ಕಂಡುಬರುತ್ತದೆ. ಪರಿಸರದಲ್ಲಿಯ ಅಶುಭ ಘಟನೆಗಳ ಪೂರ್ವಸೂಚಿತ ಶಕುನವನ್ನು ಕೆಲವು ಹಕ್ಕಿಗಳು ನುಡಿಯುತ್ತವೆ. ಇಂಥ ಹಕ್ಕಿಗಳ ಶಕುನವನ್ನಾಲಿಸಿದಾಗ ರಕ್ಷಣಾರ್ಥವಾಗಿ ಕೆಲವು ವಿಶಿಷ್ಟ ಸೂಕ್ತಗಳನ್ನು ಜಪಿಸಬೇಕೆಂದು ವಿಧಿಸಲಾಗಿದೆ. ಮರಣ ಶಯ್ಯೆಯಿಂದ ಮನುಷ್ಯನನ್ನು ಬದುಕಿಸುವ ಸಲುವಾಗಿ ಹೇಳಬೇಕಾದ ಮಂತ್ರಗಳು ಹತ್ತನೆಯ ಮಂಡಲದ ೫೮ ಮತ್ತು ೬೦ ನೆಯ ಸೂಕ್ತದಲ್ಲಿವೆ. ರೋಗೋಚ್ಚಾಟನೆಗಾಗಿಯೂ ದೇವತೆಗಳನ್ನು ಪ್ರಾರ್ಥಿಸಿದ್ದಾರೆ.

ವಿವರಗಳಿಗೆ ನೋಡಿ: ಶೇಷನವರತ್ನ 2008 ಯಜುರ್ವೇದ ಪುಟ. 96.

ಶಕ್ತಿಗ್ರಹಣೆಗೆ ಸಾಧನಗಳು

'ಶಕ್ತಿ'ಗ್ರಹಣೆಗೆ ಸಾಧನಗಳು ಎಂಟು: ವ್ಯಾಕರಣ, ಉಪಮಾನ, ಕೋಶ, ಆಪ್ತವಾಕ್ಯ, ವ್ಯವಹಾರ, ವಾಕ್ಯಶೇಷ (ಸಂದರ್ಭ), ವಿವರಣೆ ಸಾನ್ನಿಧ್ಯ.

ಆರಂಭದಶೆಯಲ್ಲಿ ಈ ಗ್ರಹಣೆ ವೃದ್ಧಾದಿಗಳ ವ್ಯವಹಾರದಿಂದ ಮಾತ್ರ ಉಂಟಾಗುತ್ತದೆ: ಉಳಿದ ಸಾಧನಗಳು ಗೌಣ.ನವೀನ ನ್ಯಾಯ–ವೈಶೇಷಿಕ ಪಂಥವು ಮೇಲಿನಂತೆ ಪ್ರತಿಪಾದಿಸಿದೆ.

ವಿವರಗಳಿಗೆ ನೋಡಿ: ರಾಧಾಕೃಷ್ಣನ್ 1970 ಪುಟ.249

ಶತಕ

ಶತಕವೆಂದರೆ ನೂರರ ಮೊತ್ತ, ನೂರು, ನೂರು ವರ್ಷಗಳ ಕಾಲಮಾನ, ನೂರು ವರ್ಷ ಶತಮಾನ, ಸಾಮಾನ್ಯವಾಗಿ ನೂರು ಪದ್ಯಗಳುಳ್ಳ ಒಂದು ಕೃತಿ ಎಂದು ಕನ್ನಡ ನಿಘಂಟಿನಲ್ಲಿ ವಿವರಿಸಲಾಗಿದೆ. ಆದರೆ ಶತಕವು ಕನ್ನಡದ ವಿಶಿಷ್ಟ ಕಾವ್ಯಪದ್ಧತಿಯಾಗಿದೆ.ಸ್ತೋತ್ರದಲ್ಲಿ ಶತನಾಮಾರ್ಚನೆ,ದಶನಮಾರ್ಚನೆ, ಕೋಟಿ ನಾಮಾರ್ಚನೆ ಮೊದಲಾದವುಗಳು ಚಾಲ್ತಿಯಲ್ಲಿವೆ.

ಶರಣಾಗತರು

ಹುಲಿ, ಸಿಂಹ, ಗಜ, ಚೋರರು ಹಾಗೂ ಶತ್ರುಗಳಿಂದ ಪೀಡಿತರಾಗಿ ಹೆದರಿ ನೆಲೆಯನ್ನು ಬೇಡುವವರು ಶರಣಾಗತರಾಗಿರುತ್ತಾರೆ. (ಮಾನಸಲ್ಲೋಸ_ 1–305)ಶರಣಾಗತರನ್ನು ರಕ್ಷಿಸಬೇಕೆಂದು ಹೇಳುತ್ತಾರೆ

ಶರೀರ

ಈ ಶರೀರದಲ್ಲಿರುವ ಜೀವಾತ್ಮನು ಬಾಲ್ಯ, ಯೌವನ, ಮುಪ್ಪಿಗೆ ಸಾಗಿ ಮತ್ತೊಂದು ದೇಹಕ್ಕೆ ಹೋಗುತ್ತಾನೆ. (ಭಗವದ್ಗೀತೆ 2–13) ಶರೀರದಲ್ಲಿ ಐದು ಸೂಕ್ಷ್ಮಭೂತಗಳು, ಅಹಂಕಾರವು ಮಹತ್ತತ್ತ್ವವು ಅವ್ಯಕ್ತವು. ಹತ್ತು ಇಂದ್ರಿಯಗಳು ಹನ್ನೊಂದನೆಯದಾದ ಮನಸ್ಸು ಐದು ಇಂದ್ರಿಯಗಳಿಗೆ ಗೋಚರವಾಗುವ ವಿಷಯಗಳು ಸೇರಿಕೊಂಡಿರುತ್ತವೆ. (ಭಗವದ್ಗೀತೆ – 13–6,7) ಪ್ರಕೃತಿಯಿಂದ ಬಂದಿರುವ ಸತ್ವ, ರಜಸ್ಸು, ತಮಸ್ಸುಗಳೆಂಬ ಗುಣಗಳು ಶರೀರವನ್ನು ಕಟ್ಟಿಹಾಕುತ್ತವೆ. (ಭಗವದ್ಗೀತೆ – 14–5) ಶರೀರಗಳು ಬೇರೆ ಬೇರೆಯಾಗಿ ಕಂಡು ಬಂದರೂ ಅವೆಲ್ಲವುಗಳನ್ನ ಒಬ್ಬನೇ ಆತ್ಮನು ವ್ಯಾಪಿಸಿರುತ್ತಾನೆ. (ಭಗವದ್ಗೀತೆ 18–20) ಶರೀರವು ಧರ್ಮಸಾಧನವೂ ಹೌದು. ಆದರೆ ಜೈನಧರ್ಮದ ಪ್ರಕಾರ ಶರೀರ ದಂಡನೆಯೂ ಮೋಕ್ಷದ ಹಾದಿಯಾಗಿದೆ.

ವಿವರಗಳಿಗೆ ನೋಡಿ: ಡಿ.ವಿ.ಜಿ. 1996 ಭಗವದ್ಗೀತೆ 18–20.

ಶವ ಸಂಸ್ಕಾರ

ಇವುಗಳಲ್ಲಿ ಎರಡು ವಿಷಯಗಳು ಮುಖ್ಯವಾಗಿವೆ. ಒಂದನೆಯದಾಗಿ ಅಗ್ನಿಸಂಸ್ಕಾರದ ವಿಷಯದ ವಿಷಯ. ಭಾಗತದಲ್ಲಿ ಶವ ಸಂಸ್ಕಾರಗಳು ಎರಡು ರೀತಿಯಲ್ಲಿ ನಡೆಯುತ್ತವೆ: ಒಂದು ಅಗ್ನಿ ಸಂಸ್ಕಾರ. ಹೆಣವನ್ನು ಸುಡುವ ಪದ್ಧತಿ.

ಇನ್ನೊಂದು ಹೆಣವನ್ನು ಹೂಳುವ ಪದ್ಧತಿ. ಆದರೆ ಈ ಎರಡೂ ಸಂಸ್ಕಾರಗಳಿದ್ದರೂ ಸತ್ತ ನಂತರ ಮರುಹುಟ್ಟು ಇದೆಯೆಂದು ಕೆಲವು ಮತಗಳು ವಾದಿಸುತ್ತವೆ. ಮತ್ತೆ ಕೆಲವರ ಪ್ರಕಾರ ಯಾರು ಲೌಕಿಕದಲ್ಲಿ ಪುಣ್ಯಮಾಡಿರುತ್ತಾರೋ ಅವರು ಸ್ವರ್ಗ ಸೇರುತ್ತಾರೆ. ಆದರೆ ಜೈನಧರ್ಮದ ಪ್ರಕಾರ ಮರುಜನ್ಮವಿದೆ.

ವಿವರಗಳಿಗೆ ನೋಡಿ: ದಾಹೋತ್ತರ, ಅಗ್ನಿಸಂಸ್ಕಾರ

ಶಾಕಟಿಕ

ಶಾಕಟಿಕ ಎಂದರೆ ಸರಕುಳ್ಳ ಬಂಡಿಯನ್ನು ನಡೆಸುವವನು. ಇದು ಉದ್ಯೋಗ ಸಂಬಂಧಿಯೂ ಹೌದು. ಹುಟ್ಟು ಹಾಕುವವನು ಅಂಬಿಗ ಸಾರಥ್ಯ ನಡೆಸುವವನು ಸಾರಥಿ ರಥ ನಡೆಯಿಸುವವನು ರಥಿಕನೆನ್ನುವಂತೆ.

ವಿವರಗಳಿಗೆ ನೋಡಿ : ಮೃಚ್ಛಕಟಿಕ

ಶಾಸನಗಳ ಪ್ರಾರ್ಥನಾ ಶ್ಲೋಕಗಳು

"ಸಾಮಾನ್ಯವಾಗಿ ಕಾವ್ಯಗಳು ಪೀಠಿಕೆಯಿಂದ ಪ್ರಾರಂಭವಾಗುತ್ತವೆ. ಪೀಠಿಕಾಸಂಧಿಯು ದೇವರ ಸ್ಮರಣೆಯೊಂದಿಗೆ ಪ್ರಾರಂಭವಾಗುತ್ತದೆ. ಅಂತೆಯೇ ಆಯಾ ಮತಧರ್ಮಕ್ಕೆ ಅನುಸಾರ ಪೀಠಿಕಾಪದ್ಯಗಳು ಬೇರೆಯಾಗಿರುತ್ತವೆ. ಅಂತೆಯೇ ಶಾಸನಗಳಲ್ಲಿಯೂ ಕೂಡಾ ಆರಂಭದ ಶಾಸನಗಳಲ್ಲಿ ಮತ್ತು ಕೆಲವು ಚಿಕ್ಕ ಚಿಕ್ಕ ಶಾಸನಗಳಲ್ಲಿ ಬರಹದ ಆರಂಭದಲ್ಲಿಯೇ ಓಂ, ಸಿದ್ಧಂ, ಶ್ರೀ, ಸ್ವಸ್ತಿ, ಶ್ರೀ ಎಂಬ ಅಕ್ಷರಗಳನ್ನು ಗಮನಿಸಬಹುದಾಗಿದೆ. ಅನಂತರದ ಶಾಸನಗಳಲ್ಲಿ ಈ ಅಂಶಗಳ ಜೊತೆಗೆ, ಶಾಸನವನ್ನು ಯಾವ ವ್ಯಕ್ತಿ ಹಾಕಿಸಿರುತ್ತಾನೆಯೋ ಅಥವಾ ಯಾವ ದೇವಾಲಯಕ್ಕೆ ದತ್ತಿ ಬಿಡುತ್ತಾನೆಯೋ ಅಥವಾ ಯಾವ ಸಂಸ್ಥೆಗೆ ದತ್ತಿಬಿಡುತ್ತಾನೆಯೋ, ಆ ವ್ಯಕ್ತಿಯ, ದೇವಾಲಯದ, ಸಂಸ್ಥೆಯ ಪ್ರಕಾರ ಯಾವ ದೇವರು ಶ್ರೇಷ್ಠವೆಂದು ಭಾವಿಸಲಾಗಿರುತ್ತದೆಯೋ ಆ ದೇವರನ್ನು ಕುರಿತು ಶೋಕವಿರುತ್ತದೆ.

ಶಿವೋಪಾಸಕರ ಶಾಸನಗಳಲ್ಲಿ ಸಾಮಾನ್ಯವಾಗಿ,

ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ

ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ॥ ಎಂಬ ಶಿವನನ್ನು ಸುತ್ತಿಸುವ ಶ್ಲೋಕವು ಬರುತ್ತದೆ.

ಜಯತ್ಯಾವಿಷ್ಕೃತಂ ವಿಷ್ಣೋರ್ವಾರಾಹಂ ಕ್ಷೋಭಿತಾರ್ಣವಂ

ದಕ್ಷಿಣೋನ್ನತದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪುಃ॥ ಎಂಬ ವಿಷ್ಣು ಸ್ತುತಿಯನ್ನು ಗಮನಿಸಬಹುದುದಾಗಿದೆ.

ಜೈನಧರ್ಮದ ಅನುಯಾಯಿಗಳ ಪರವಾದ ಶಾಸನಗಳಲ್ಲಿ

ಶ್ರೀಮತ್ಪರಮಗಂಭೀರ ಸ್ಯಾದ್ವಾದಾ ಮೋಘ ಲಾಂಛನಂ

ಜೀಯಾತ್ ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ॥ ಎಂಬ ಶ್ಲೋಕವನ್ನು ಗಮನಿಸಬಹುದಾಗಿದೆ.

ಕೆಲವು ಕನ್ನಡ ಶಾಸನಗಳಲ್ಲಿ ಈ ಸಂಸ್ಕೃತ ಶ್ಲೋಕಗಳಲ್ಲದೆ, ಕನ್ನಡ ಭಾಷೆಯಲ್ಲಿಯೂ ಪದ್ಯ ರೂಪದಲ್ಲಿ ಆಯಾ ಧರ್ಮದ ದೇವರನ್ನು ಸ್ತುತಿಸಿರುವ ನಿದರ್ಶನಗಳನ್ನು ಗಮನಿಸಬಹುದಾಗಿದೆ. ಕ್ರಿ.ಶ. 1232ರ ಒಂದು ಶಾಸನದಲ್ಲಿ ಶಿವನನ್ನು ಪ್ರಾರ್ಥಿಸುವ ಕಂದ ಪದ್ಯವೊಂದು ಈ ರೀತಿ ಇದೆ.

ಪತ್ತಿರೆ ಗಂಗೆಯ ಪನಿಗಳು
ಮುತ್ತಿನ ಬಾಸಿಗವಿದೆನಿಸಿ ವಾಸುಗಿ ಸುಖದಿಂ।
ಸುತ್ತಿರ್ದ ಜೂಟದ ದೇ
ವೋತ್ತಮನೆಮಗೊಸೆದು ಕೊಡುಗೆ ಸುಖ ಸಂಪದಮಂ॥

ತಲೆಯ ಮೇಲಿನ ಗಂಗೆಯ ಹನಿಗಳು ಶಿವನ ಹಣೆಯ ಮೇಲೆ ಬಿದ್ದು ಮುತ್ತಿನ ಬಾಸಿಂಗದಂತೆ ಶೋಭಿಸುತ್ತಿದೆಯಂತೆ, ವಾಸುಕಿ ಶಿವನ್ನನು ಆಪ್ಯಾಯಮಾನವಾಗಿ ಬಳಸಿಕೊಂಡಿದ್ದು ಶೋಭಿಸುತ್ತಿದೆಯಂತೆ, ಈ ರೀತಿಯಿರುವ ದೇವೋತ್ತಮನಾದ ಶಿವನು ನಮಗೆ ಸುಖ ಸಂಪದಗಳನ್ನಿತ್ತು ಹಾರೈಸಲಿ ಎಂದು ಶಾಸನ ಕವಿ ಬೇಡುತ್ತಾನೆಕಾವ್ಯಗಳ ಪ್ರಾರಂಭದಂತೆ ಶಾಸನಗಳ ಪ್ರಾರಂಭವೂ ವಿಶಿಷ್ಟವಾಗಿರುತ್ತದೆ. ಮತ್ತು ನಿರ್ದಿಷ್ಟ ಸಂಕೇತಗಳಿರುತ್ತವೆ ಎನ್ನುವುದು ಶೇಷಶಾಸ್ತ್ರಿಯವರ ನಿಲುವು."

ವಿವರಗಳಿಗೆ ನೋಡಿ: ಆರ್. ಶೇಷಶಾಸ್ತ್ರಿ 2005 ಶಾಸನ ಪರಿಚಯ ಪುಟ. 89

ಶಾಸನಗಳಲ್ಲಿ ಕೆರೆಯ ಉಲ್ಲೇಖಗಳು

ಕೆರೆ ಮತ್ತು ಊರಿನ ಅಭಿವೃದ್ಧಿಗೂ ಒಂದು ರೀತಿಯ ಸಂಬಂಧವಿದೆ.ಹಾಗೆ ಕೃಷಿಗೂ ಕೂಡಾ. ನದಿಗಳು ಹರಿಯದೆ ಇರುವ ಪ್ರದೇಶಗಳಲ್ಲಿನ ಕೃಷಿಕರು ಕೆರೆ ಮತ್ತು ಬಾವಿಗಳನ್ನು ನೀರಾವರಿಗಾಗಿ ಅವಲಂಬಿಸಬೇಕಾಗಿತ್ತು. ಕೆರೆಗಳಲ್ಲಿ ಮಳೆಯ ನೀರನ್ನು ಸಂಗ್ರಹಿಸಲಾಗುತ್ತಿತ್ತು. ಕೆರೆಗಳನ್ನು ಅರಸರು ಹಾಗೂ ಇತರ ಖಾಸಗಿ ವ್ಯಕ್ತಿಗಳು ಕಟ್ಟಿಸುತ್ತಿದ್ದರು. ಪ್ರತಿಯೊಂದು ಹಳ್ಳಿಯಲ್ಲಿಯೂ ಅಲ್ಲಿನ ಬೇಸಾಯದ ಭೂಮಿಯ ವಿಸ್ತಾರ ಹಾಗೂ ಬೆಳೆಯುವ ಬೆಳೆ ಇವುಗಳನ್ನು ಅವಲಂಬಿಸಿಕೊಂಡು ಕೆರೆಗಳಿರುತ್ತಿದ್ದವು. ಪ್ರತಿಯೊಂದು ಕೆರೆಗೂ ಹೆಸರುಗಳಿರುತ್ತಿದ್ದವು. ಕೆರೆಗಳನ್ನು ಕಟ್ಟಿಸಿದವರ ಹೆಸರು ಅಥವಾ ಯಾರ ಗೌರವಾರ್ಥವಾಗಿ ಕಟ್ಟಿಸಲಾಗಿದೆಯೋ ಅವರ ಹೆಸರನ್ನು ಆಯಾ ಕೆರೆಗಳಿಗೆ ಇಡುವುದು ರೂಢಿಯಲ್ಲಿತ್ತು. ಇದಕ್ಕೆ ಉತ್ತಮ ಉದಾಹರಣೆಯೆಂದರೆ, ಪ್ರಧಾನ ವೀರದಂಡನಾಯಕನು ಕಟ್ಟಿಸಿದ ನಾಲ್ಕು ಕೆರೆಗಳು. ವೀರದಂಡನಾಯಕನು ತನ್ನ ತಂದೆ, ತಾಯಿ, ಸಹೋದರ ಹಾಗೂ ತನ್ನದೇ ಹೆಸರಿನಲ್ಲಿ ರುದ್ರ ಸಮುದ್ರ, ಗಂಗ ಸಮುದ್ರ, ಅಚ್ಯುತ ಸಮುದ್ರ ಹಾಗೂ ವೀರ ಸಮುದ್ರ ಎನ್ನುವ ಕೆರೆಗಳನ್ನು ನಿರ್ಮಿಸಿದನು.

(ಎ.ಕ. 5. 165. 1186.) ಮಾಚಗಾವುಂಡ ಎನ್ನುವವನು ರಾಮಪುರದಲ್ಲಿ ಒಂದು ಕೆರೆ ಮತ್ತು ತೂಬು ನಿರ್ಮಿಸಿದ ಉಲ್ಲೇಖ ಶಾಸನದಲ್ಲಿದೆ. ಒಡೆದುಹೋದ ಇಲ್ಲವೇ ಬಿರುಕುಬಿಟ್ಟ ಕೆರೆಗಳನ್ನು, ತೂಬುಗಳನ್ನು ಸರಿಪಡಿಸುತ್ತಿದ್ದರ ಉಲ್ಲೇಖಗಳು ಶಾಸನಗಳಲ್ಲಿ ಸಿಗುತ್ತವೆ. ಇದಕ್ಕೆ ಒಂದು ಉದಾಹರಣೆಯೆಂದರೆ, ಅರಸೀಕೆರೆ ಕೆರೆಯ ತೂಬನ್ನು ಹೊಯ್ಸಳರ ಎರಡನೆಯ ವೀರನರಸಿಂಹನ ಅನುಮತಿಯಂತೆ ಮಹಾಪ್ರಧಾನ ದಂಡನಾಯಕನು ದುರಸ್ತಿ ಮಾಡಿದುದು. ಕೆರೆಗಳಲ್ಲಿ ಕೆಸರು ತುಂಬಿಕೊಂಡು ನೀರು ನಿಲ್ಲುವ ಪ್ರಮಾಣ ಕಡಿಮೆಯಾದಾಗ ಕೆಸರನ್ನು ಕೆರೆಗಳಿಂದ ಹೊರತೆಗೆಯುವ ಕಾರ್ಯವೂ ನಡೆಯುತ್ತಿತ್ತು. ಕೆರೆಯಿಂದ ಹೂಳನ್ನು ತೆಗೆಯುವ ಕೆಲಸಕ್ಕಾಗಿ ಬಂಡಿಯನ್ನು ದಾನ ನೀಡಿರುವ, ಬಂಡಿಗಳ ಚಾಲಕರ ನಿರ್ವಹಣೆಗಾಗಿ ಭೂಮಿಯನ್ನು ದಾನ ನೀಡಿರುವ ಉಲ್ಲೇಖಗಳು ಶಾಸನಗಳಲ್ಲಿ ಸಿಗುತ್ತವೆ. ಮಾಚಗೌಂಡನ ಶಾಸನದ ಕಾಲ ಕ್ರಿ. ಶ. 1008. (ಎಂ. ಎ. ಆರ್. 198) ಮಹಾದಂಡನಾಯಕನ ಶಾಸನದ ಕಾಲ ಕೆರೆಯಿಂದ ಹೂಳು ತೆಗೆಯುವ ಕೆಲಸಕ್ಕಾಗಿ ಬಂಡಿಯನ್ನು ನಿರ್ವಹಿಸುವವ ಭೂದಾನ ನೀಡಿದ ವಿವರಗಳು ಅರಸೀಕೆರೆ 116. ಕ್ರಿ. ಶ. 1234; ನಾಗಮಂಗಲ ಕ್ರಿ. ಶ. 1237.) ಈ ಶಾಸನಗಳ ವಿವರಗಳಲ್ಲಿ ನೀರಾವರಿಯ ಬಗ್ಗೆ ಹಿಂದೆ ಕೊಟ್ಟಿರುವ ಆದ್ಯತೆಗಳು ಏನು ಎಂಬುದು ತಿಳಿಯುತ್ತವೆ ಎಂಬುದು ಮೋಹನಕೃಷ್ಣ ರೈಯವರ ಅಭಿಪ್ರಾಯ. ಕೆರೆ ನೀರು ಮುಖ್ಯವಾಗಿ ಎರಡು ಆದ್ಯತೆಯ ಕ್ಷೇತ್ರವನ್ನಾಗಿರಿಸಿಕೊಂಡಿತ್ತು: ಕೃಷಿ +ಮತ್ತು ಮನುಷ್ಯನ ದೈನಂದಿನ ಉಪಯೋಗ.

ವಿವರಗಳಿಗೆ ನೋಡಿ: ಮೋಹನಕೃಷ್ಣ ರೈ 2004 ಪ್ರಭುತ್ವ ಮತ್ತು ಜನತೆ ಪುಟ. 22.)

ಶಾಸನಗಳು ಮತ್ತು ಸ್ತ್ರೀಯರು

"ಕರ್ನಾಟಕದ ಅನೇಕ ಶಾಸನಗಳಲ್ಲಿ ಸ್ತ್ರೀಯರ ಧಾರ್ಮಿಕ ಸಹಭಾಗಿತ್ವದ ಬಗೆಗಿನ ಉಲ್ಲೇಖಗಳಿವೆ: ಶ್ರವಣ ಬೆಳಗೊಳದ ಶಾಸನವೊಂದು ಶಾಂತಲೆಯ ತಾಯಿ ಮಾಜಿಕಬ್ಬೆಯು ವ್ರತ ಹಿಡಿದು ಮರಣವನ್ನಪ್ಪಿದ ವಿಷಯವನ್ನು ತಿಳಿಸುತ್ತದೆ. ಇದರ ಕಾಲ ಕ್ರಿ.ಶ. 1131. ಮತ್ತೊಂದು ಶಾಸನವು ಅಹಲ್ಯೆಯ ನಿರ್ವಾಣವನ್ನು ಸೂಚಿಸುತ್ತದೆ. ಶ್ರವಣಬೆಳಗೊಳದ ನೂರೆಂಟು ನಿಶಿಧಿ ಶಾಸನಗಳಲ್ಲಿ ಇಪ್ಪತ್ತೆರಡು ಶಾಸನಗಳು ಸ್ತ್ರೀಯರಿಗೆ ಸಂಬಂಧಿಸಿರುವವುಗಳು. ಅದರಲ್ಲಿ 13 ಶಾಸನಗಳು ಕಂತಿ ಅವ್ವೆಯವರ ಮರಣವನ್ನು ಸೂಚಿಸುತ್ತದೆ. ನಾಲ್ಕು ಶಾಸನಗಳು ರಾಜಪರಿವಾರದ ಸ್ತ್ರೀಯರ ಕುರಿತಂತೆ ಹೇಳುತ್ತವೆ. ಐದು ಶಾಸನಗಳು ಸಾಮಾನ್ಯ ಸ್ತ್ರೀಯರ ಮರಣವನ್ನು ಸೂಚಿಸುತ್ತವೆ.(ಅದೇ ಪುಟ.11) ಕೊಂಗಾಳ್ವನಬ್ಬೆ ಪೋಚಬ್ಬರಸಿಯ ಧಾರ್ಮಿಕ ಸೇವೆಯನ್ನು ಶಾಸನವೊಂದು (ಕಾಲ: 11ನೇ ಶತಮಾನ) (ಎ.ಕ..ಸಂ:1 1972 ಪುಟ.45) ವರ್ಣಿಸುತ್ತದೆ. ಶ್ರವಣಬೆಳಗೊಳದ ಶಾಸನವೊಂದು ವೈಜಬ್ಬೆಯು ನೋಂತ ಸನ್ಯಾಸನವನ್ನು ತಿಳಿಸುತ್ತದೆ. (ಎ.ಕ.ಸಂ:2 1973 ಪುಟ.55) ಗುಣಮತಿ ಅಬ್ಬೆಯ ನಿಶಿಧಿಗೆ ಸಂಬಂಧಿಸಿದಂತೆ

ಮತ್ತೊಂದು ಶಾಸನವು ತಿಳಿಸುತ್ತದೆ. (ಅದೇ ಪುಟ.77) ಶ್ರವಣಬೆಳಗೊಳದ ಮತ್ತೊಂದು ಶಾಸನದಲ್ಲಿ ಲಕ್ಷ್ಮೀಮತಿಯು ಸನ್ಯಸನದ ಮೂಲಕ ದೇವಲೋಕಕ್ಕೆ ಸಂದ ವಿಚಾರವಿದೆ. (ಇದರ ಕಾಲ. ಕ್ರಿ.ಶ. 1044) (ಅದೇ ಪುಟ.99) ಹತ್ತನೇ ಶತಮಾನದ ನಂಜನಗೂಡಿನ ಶಾಸನವೊಂದು ಅತ್ತೆಯ್ಯನ ಅಬ್ಬೆಯು ಸನ್ಯಸನಂಗೆಯ್ದು ಮುಡುಪಿದ ವಿಚಾರವನ್ನು ಪ್ರಸ್ತಾವಿಸುತ್ತದೆ. (ಅದೇ ಸಂ: 3 ಪುಟ.300) ಧಾರ್ಮಿಕ ವಿಚಾರಗಳಲ್ಲಿ ಸಕ್ರಿಯವಾಗಿ ಅನೇಕ ಸ್ತ್ರೀಯರು ಭಾಗವಹಿಸಿದ ವಿಚಾರವನ್ನು ಇನ್ನೂ ಕೆಲವು ಶಾಸನಗಳು ಹೇಳುತ್ತವೆ. ಶಾಸನಗಳಲ್ಲಿ ಬಂದಿರುವ ವಿಷಯಗಳನ್ನು ಸ್ಥೂಲವಾಗಿ ಪರಿಶೀಲಿಸಲಾಗಿದೆ. ಈ ಆಧಾರಗಳ ಹಿನ್ನೆಲೆಯಲ್ಲಿ ಧಾರ್ಮಿಕ ರಂಗದಲ್ಲಿ ಸ್ತ್ರೀಯರು ಭಾಗವಹಿಸಿರುವ ವಿಚಾರಗಳನ್ನು ಎರಡು ನೆಲೆಗಳಲ್ಲಿ ಗಮನಿಸಬಹುದು:

1. ಸಾಮಾಜಿಕ ಸ್ಥಾನಮಾನಕ್ಕಾಗಿ ಧಾರ್ಮಿಕ ಸೇವೆಯನ್ನು ಕೈಗೊಂಡಿರುವ ಸಂಗತಿಗಳು. ಉದಾ: ಜೈನ ಬಸದಿಗೆ ಸೇವೆ.

   ಇವು ಶ್ರೀಮಂತ ವರ್ಗದ ಸ್ತ್ರೀಯರು ಕೈಗೊಂಡಿರುವ ಸೇವೆಗಳಾಗಿರುತ್ತವೆ.

2. ಸನ್ಯಸನವನ್ನು ಸ್ವೀಕರಿಸಿ ಅದರ ಮೂಲಕ ಪ್ರಾಣಹರಣವನ್ನು ಮಾಡಿಕೊಳ್ಳುವುದು ಇದು ಆತ್ಮಾಹುತಿಯ

ಪ್ರಕಾರಗಳಲ್ಲಿ ಒಂದಾಗಿ ಸಂಸ್ಕೃತಿಯಲ್ಲಿ ಮೂಡಿ ಬಂದಿದೆ. ಇಲ್ಲಿಯೂ ಧಾರ್ಮಿಕ ಶ್ರದ್ಧೆಯೇ ಪ್ರಧಾನವಾದ ಅಂಶವಾಗಿದೆ.

ರಾಣಿಯಾದ ಶಾಂತಲೆಯು ಜೈನೆಯಾಗಿದ್ದರೂ ವೈಷ್ಣವ ದೇವಾಲಯವನ್ನು ಸ್ಥಾಪಿಸಿದ ವಿಚಾರವು ಈಗಾಗಲೇ ಸಾಕಷ್ಟು ಪ್ರಚಲಿತವಾದ ವಿಚಾರವಾಗಿದೆ. ಈಕೆಯ ಕಾಲ ಕ್ರಿ.ಶ. 1131. ಈಕೆಯು ಸನ್ಯಸನ ವಿಧಿಯ ಮೂಲಕವೇ ತನ್ನನ್ನು ಮುಡುಪಿಕೊಂಡಳು. ಖಾಸಗಿಯಾಗಿ ಒಂದು ಧರ್ಮಕ್ಕೆ ಸೇರಿದ್ದು, ಮತ್ತೊಂದು ಧರ್ಮದ ಕೆಲಸವನ್ನು ಮಾಡುವ ಕ್ರಮವೂ ಇತ್ತು ಎನ್ನುವುದಕ್ಕೆ ಮೇಲಿನ ಮಾತು ಸಾಕ್ಷ್ಯವನ್ನು ಒದಗಿಸುತ್ತದೆ.

ವಿವರಗಳಿಗೆ ನೋಡಿ: ಕಲಬುರ್ಗಿ ಎಂ.ಎಂ. 1980 ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು ಪುಟ. 6

Gururaj achar .S 1974 Some aspect of economic & Social Life in Karnataka P. 245

ಶಾಸನವೆಂದರೇನು?

ಶಾಸನವೆಂದರೆ ಅಪ್ಪಣೆ. (ಮೂಲಾರ್ಥ) ರಾಜಾಜ್ಞೆ ಎಂದು. ಕ್ರಮೇಣ–ಕಲ್ಲಿನಲ್ಲಿ ಶಾಶ್ವತವಾಗಿಇರಬೇಕೆಂಬ ದೃಷ್ಟಿಯಲ್ಲಿ ಕೊರೆದು ಬರೆದ ಬರೆಹ(Inscription)ಎಂಬರ್ಥದಲ್ಲಿ ಬಳಕೆಯಾಯಿತು. ಉದಾಹರಣೆಗೆ 'ಕಲ್ಲೊಳಿಟ್ಟ ಅಕ್ಕರಂ' ಎಂಬ ಮಾತನ್ನು ನೆನೆಯಬಹುದು. ಇಲ್ಲಿಯೂ ಶಾಸನವೆಂದರೆ (Inscription)ಎಂಬ ಅರ್ಥದಲ್ಲಿಯೇ ಬಳಕೆಯಾಗಿದೆ.

ಶಾಸನವೆಂದರೆ ಪ್ರಭುತ್ವ, ಅಪ್ಪಣೆ, ಕಾನೂನು, ಕರಾರು, ತಾಮ್ರ ಅಥವಾ ಕಲ್ಲಿನ ಮೇಲೆ ಕೊರೆದಿಟ್ಟ ಬರಹವೆಂದು ಅರ್ಥವಿದೆ. ಶಾಸಿಸು ಎಂದರೆ ನಿಯಂತ್ರಿಸು ಶಾಸನದ ಕುರಿತು ಆರ್.ಶೇಷಶಾಸ್ತ್ರಿಯವರು ಹೀಗೆ ಹೇಳಿದ್ದಾರೆ. 'ಶಾಸನ' ಎಂಬ ಪದವನ್ನು ವಿದ್ವಾಂಸರು ಆಂಗ್ಲ ಪದವಾದ 'Inscription' ಎಂಬ ಪದಕ್ಕೆ ಸಮಾನಾರ್ಥಕ ಪದವಾಗಿ ಬಳಸುತ್ತಾರೆ. ಇನ್‌ಸ್ಕ್ರಿಪ್‌ಷನ್ ಎಂದರೆ ಬಹುಕಾಲ ಉಳಿಯಬಲ್ಲ ಶಾಶ್ವತವಾದ ವಸ್ತುವಿನ ಮೇಲೆ ಕೊರೆಯಲ್ಪಟ್ಟ ಬರಹ ಎಂದು ಅರ್ಥ. ಇದೇ ಅರ್ಥದಲ್ಲಿ 'ಶಾಸನ' ಎಂಬ ಪದವನ್ನು ಇಂದು ನಾವು ಬಳಸುವುದು. 'ಕೊರೆಯುವ ಕ್ರಿಯೆ' ಮತ್ತು ಬಹುಕಾಲ ಉಳಿಯುವ ಲೇಖನ ಶಾಮಗ್ರಿ – ಈ ಎರಡೂ ಅಂಶಗಳು ಯಾವ ರೀತಿಯ ಬರಹ 'ಶಾಸನ' ಅಥವಾ 'ಶಾಸನ'ವಲ್ಲ ಎಂಬುದನ್ನು ನಿರ್ಧರಿಸುವಂತಹವುಗಳಾಗಿವೆ. ಶಾಸನವೆಂದರೆ ಪ್ರಾಚೀನ ಬರಹಗಳೇ ಆಗಿರಬೇಕೆಂಬ ನಿಯಮವೇನೂ ಇಲ್ಲ. ಇಂದು ಕಲ್ಲು, ತಾಮ್ರ, ಬೆಳ್ಳಿ ಮುಂತಾದ ಲೋಹಗಳ ಮೇಲೆ ಕೊರೆಯಲ್ಪಟ್ಟ ಬರಹಗಳೂ ಸಹ ಶಾಸನಗಳೇ.

"ಭೂರ್ಜಪತ್ರ, ತಾಳೇಗರಿ ಮುಂತಾದ ಲೇಖನ ಸಾಮಗ್ರಿಗಳ ಮೇಲೆ ಕಂಠದಿಂದ ಕೊರೆದು ಬರೆದಿರುವ ಬರಹಗಳು ಭಾರತದಲ್ಲಿ ನಮಗೆ ವಿಫುಲವಾಗಿ ದೊರೆಯುತ್ತವೆ. ಇವುಗಳು ಬಹುಕಾಲ ಉಳಿಯುವ ಲೇಖನ ಸಾಮಗ್ರಿಗಳಾಗದೆ ಇರುವುದರಿಂದ ಇಂಥ ಬರಹಗಳನ್ನು ಶಾಸನಗಳೆಂದು ಪರಿಗಣಿಸಲಾಗುವುದಿಲ್ಲ. ಹಾಗೆಯೇ ಬಹುಕಾಲ ಉಳಿಯಬಹುದಾದ ಸಾಮಾಗ್ರಿಗಳ ಮೇಲೆ ಮಸಿಯಿಂದಲೋ, ಬಣ್ಣದಿಂದಲೋ ಬರೆದಿರುವ ಬರಹಗಳು ನಮಗೆ ದೊರೆಯುತ್ತವೆ. ಇವುಗಳನ್ನು ಶಾಸನಗಳೆಂದು ಪರಿಗಣಿಸಲಾಗದು. ಆದ್ದರಿಂದ 'ಇನ್‌ಸ್ಕ್ರಿಪ್‌ಷನ್' ಎಂಬ ಆಂಗ್ಲ ಪದಕ್ಕೆ ಪರ್ಯಾಯವಾಗಿ ಬಳಸುವ 'ಶಾಸನ' ಎಂಬ ಪದವು ಬರಹದ ಮೇಲ್ಮೈ ಲಕ್ಷಣವನ್ನು ಕುರಿತದ್ದೇ ವಿನಾ ಅದರ ಆಂತರಿಕ ವಿಷಯವನ್ನಲ್ಲ ಎಂಬುದನ್ನು ಮರೆಯಬಾರದು. ಎಂಬ ಅರ್ಥದಲ್ಲಿಯೇ ಪ್ರಯೋಗವಾಗಿದೆ. 'ಶಾಸನ' ಎಂಬ ಪದದ ಧಾತುವಾದ 'ಶಾಸ್' ಎಂಬುದಕ್ಕೆ ಆಜ್ಞೆಮಾಡು, ಶಿಕ್ಷಿಸು, ನಿಯಂತ್ರಿಸು, ಮೊದಲಾದ ಅರ್ಥಗಳಿವೆ. ಪ್ರಾಚೀನ ಭಾರತದ ಆಡಳಿತ ಪದ್ಧತಿಯ ಬಗ್ಗೆ ತಿಳಿಸುವ ಗ್ರಂಥಗಳಾದ ಶುಕ್ರನೀತಿಸಾರ, ಕೌಟಿಲ್ಯನ ಅರ್ಥಶಾಸ್ತ್ರ ಮುಂತಾದ ಗ್ರಂಥಗಳು 'ಶಾಸನ' ಎಂಬ ಪದವನ್ನು ರಾಜಾಜ್ಞೆ ಎಂಬ ಅರ್ಥದಲ್ಲಿ ಪ್ರಯೋಗಮಾಡಿದೆ. ಶಾಸನವೆಂದರೆ ಲಿಖಿತ ಮಾಧ್ಯಮವೂ ಹೌದು. ಶಾಸನವನ್ನು ಅಳಿಸಲಾಗುವುದಿಲ್ಲ. ಹತ್ತನೆಯ ಶತಮಾನದ ಶಾಸನಗಳು ಚಾರಿತ್ರಿಕವಾಗಿಯೂ ಮಹತ್ವದವು. ಎರಡನೆಯದಾಗಿ ಶಾಸನಗಳು ಚಿರಸ್ಥಾಯಿಯೆಂಬ ಪರಿಕಲ್ಪನೆಯೂ ಕೂಡಾ ಶಾಸನ ಲಿಖಿತಕ್ಕೆ ಕಾರಣವಾಗಿರಬೇಕು."

ವಿವರಗಳಿಗೆ ನೋಡಿ: ಆರ್. ಶೇಷಶಾಸ್ತ್ರಿ 2005 ಶಾಸನ ಪರಿಚಯ ಪುಟ. 2.

ಶಿಕ್ಷಾವ್ರತಗಳು

ನಾಲ್ಕು ರೀತಿಯ ಶಿಕ್ಷಾವ್ರತಗಳನ್ನು ಜೈನ ಧರ್ಮವು ಹೇಳುತ್ತದೆ. ತೀವ್ರವಾದ ಉಪವಾಸ; ಸಮತೆ; ದಾನವ್ರತ; ಸನ್ಯಾಸವ್ರತವೆಂಬುದು ನಾಲ್ಕು ಶಿಕ್ಷಾವ್ರತಗಳು.

ಶಿಕ್ಷೆ

ಪೌರ ಹಾಗೂ ಅಪರಾಧ ಕಾಯಿದೆಗಳನ್ನು ರಾಜನ ನಿಯೋಗಿಗಳು ಜಾರಿ ಮಾಡುತ್ತಿದ್ದರು. ಅವರು ವಿಧಿಸುತ್ತಿದ್ದ ಶಿಕ್ಷೆಗಳು ಚಾವಟಿಯೇಟು, ಶಿರಚ್ಛೇದನ, ನಾಲಗೆ ಹಿರಿಯುವುದು ಮುಂತಾದ ಒರಟು ಹಾಗೂ ಕ್ರೂರವಾದಂತಹವು. ಹಲವು ಸಂದರ್ಭಗಳಲ್ಲಿ ಪಾತಕ ಕೃತ್ಯಗಳಿಗೆ ನೀಡುತ್ತಿದ್ದ ಶಿಕ್ಷೆ ಸೇಡಿನ ಮನೋಭಾವದ್ದಾಗಿತ್ತು. (ಆರ್.ಎಸ್.ಶರ್ಮ೧೯೯೭ಪು.೧೨೭)

ಶಿಲಾಸ್ತಂಭ

ಶಿಲಾಸ್ತಂಭವೆಂದರೆ ಶಿಲಾಶಾಸನ. ಚರಿತ್ರೆಯನ್ನು ಗಮನಿಸಿದರೆ ಶಾಸನವು ಬಹು ಮುಖ್ಯ ದಾಖಲೆಯಾಗಿದೆ. ಅದು ಶಾಶ್ವತವಾದುದು. ಶಾಸನವು ಅಳಿಸಲಾಗದ ಬರಹದ ರೂಪ.

ಶೂದ್ರ

ಶೂದ್ರಾತಿಶೂದ್ರ ಮತ್ತು ಶೂದ್ರವೆಂಬ ಪರಿಕಲ್ಪನೆಯು ಭಾರತೀಯ ಸಾಮಾಜಿಕ ಸ್ವರೂಪವನ್ನು ವಿವರಿಸುತ್ತದೆ ಮತ್ತು ಬ್ರಾಹ್ಮಣರನ್ನು ಕೇಂದ್ರವಾಗಿರಿಸಿಕೊಂಡಿದೆ. ಬ್ರಾಹ್ಮಣರು ಶೂದ್ರರೆಂದು ಕರೆದು, ಬ್ರಾಹ್ಮಣರು ತಮ್ಮನ್ನು ಪ್ರತ್ಯೇಕ ವರ್ಗವಾಗಿರಿಸಿಕೊಂಡರು. ಇದು ಬ್ರಾಹ್ಮಣರನ್ನು 'ಕುಲದ ಅಗ್ಗಳಿಕೆಗೂ' ಶೂದ್ರರನ್ನು 'ಕೀಳರಿಮೆ'ಗೂ ತಳ್ಳಿತು. ಈ ಅಭಿಪ್ರಾಯ ಜ್ಯೋತಿಭಾಫುಲೆಯವರಿಗೂ ಇತ್ತು.

ಅಂತೆಯೇ ಭಾರತದ ವಾಯವ್ಯದಲ್ಲಿದ್ದ ಎಲ್ಲ ಬುಡಕಟ್ಟುಗಳವರನ್ನೂ ನಿಕೃಷ್ಟರನ್ನಾಗಿಯೇ ಕಾಣಲಾಗುತ್ತಿತ್ತು. "ಶೂದ್ರ ಹೆಂಗಸು" ಎಂದಾಗ ಅದು ಒಂದು ಬುಡಕಟ್ಟಿನ ಸೂಚನೆಯಾಗಿ ಕಾಣುತ್ತದೆ. ಅದೇ ಅಥರ್ವ ವೇದ ಮಂತ್ರವು ಪೈಪ್ಪಲಾದ ಸಂಹಿತೆಯಲ್ಲಿಯೂ ಬರುತ್ತದೆ (13. 1.9); ಆದರೆ ಅಲ್ಲಿ 'ಶೂದ್ರ' ಎಂಬ ಪದದ ಬದಲು 'ದಾಸೀ' ಎಂಬ ಪದವನ್ನು ಬಳಸಲಾಗಿದೆ. ಆ ಮಂತ್ರದ ಕರ್ತೃವಿನ ದೃಷ್ಟಿಯಲ್ಲಿ 'ಶೂದ್ರ' ಮತ್ತು 'ದಾಸೀ' ಪದಗಳ ನಡುವೆ ವ್ಯತ್ಯಾಸವಿರಲಿಲ್ಲ. ಇದೆಲ್ಲದರಿಂದ ತೀರ್ಮಾನಿಸಬಹುದಾದ ಅಂಶ ಇದು : ಅರ್ಥರ್ವವೇದದ ಅತಿ ಪ್ರಾಚೀನ ಘಟ್ಟದಲ್ಲಿ 'ಶೂದ್ರ' ಪದವು ಒಂದು ಬುಡಕಟ್ಟು ಸೂಚಕವೇ ಹೊರತು ಒಂದು ವರ್ಣದ ಹೆಸರಾಗಿ ಬರುವುದಿಲ್ಲ. ವೈದಿಕ ಕಾಲದ ಕಡೆಯ ವೇಳೆಗೆ, ಕೆಲವು ಆಚರಣೆಗಳ ಸಂದರ್ಭದಲ್ಲಿ ಶೂದ್ರನನ್ನು ಮುಟ್ಟುವುದು ಮತ್ತು ನೋಡುವುದು ಕೂಡದೆಂಬ ನಿಯಮ ಅಸ್ತಿತ್ವಕ್ಕೆ ಬಂದಿತು. ಅವನೊಡನೆ ಮಾತನಾಡಕೂಡದು ಕೂಡ (ಶ.ಬ್ರಾ. III.1.1.10). ಸೋಮಯಾಗದ ಪೂರ್ವಭಾಗವಾದ ಪ್ರವರ್ಗ್ಯವೆಂಬ ಆಚರಣೆಯ

ಸಮಯದಲ್ಲಿ ಯಾಗ ಮಾಡುವವನು ಶೂದ್ರ ಮತ್ತು ಸ್ತ್ರೀ ಇಬ್ಬರನ್ನೂ ದೂರವಿಡಬೇಕು; ಏಕೆಂದರೆ ಅವರು ಅಸತ್ಯ ಎನ್ನುತ್ತದೆ ಶತಪಥ ಬ್ರಾಹ್ಮಣ (XIV.1.1.31). ಕಾಠಕ ಸಂಹಿತೆಯಲ್ಲಿ ಬರುವ ಇಂತಹ ಮಾತನ್ನು ಬಿಟ್ಟರೆ ಶೂದ್ರ ಮತ್ತು ಸ್ತ್ರೀಯರನ್ನು ಹೀಗೆ ಒಟ್ಟಾಗಿಸಿರುವ ಭಾಗಗಳಲ್ಲಿ ಇದೇ ಅತ್ಯಂತ ಪ್ರಾಚೀನವಾದ ಆಕರ. ಒಬ್ಬ ಬಡಗಿಯೇನಾದರೂ ಯಜ್ಞ ಪಾತ್ರೆಗಳನ್ನು ಮುಟ್ಟಿಬಿಟ್ಟರೆ ಆಚರಣೆಯೆಲ್ಲಾ ಅಶುದ್ಧವಾಗುತ್ತದೆಂಬ ಮಾತೂ ಇದೆ. (ಹಾಲುಮತ ದರ್ಶನ)

ಚಾತುರ್ವರ್ಣ್ಯದ ಹೊರಗಿನ ಪಂಚಮರೂ ಅದಿತಿಯೇ ಅಹುದು, ಎಂದಂತಾಯಿತು. ಉಚ್ಚವರ್ಣದವರೆಂದು ಬಗೆಯಲಾದ ತ್ರೈವರ್ಣಿಕರಲ್ಲದೆ 'ಶೂದ್ರ' ಎಂಬ ಇನ್ನೂ ಒಂದು ವರ್ಣವೂ (ಅಂದಿನ ಸಮಾಜ ರೂಪೀ) ವಿರಾಟ್ ಪುರುಷನ ಅಂಗವಾಗಿದ್ದುದರ ಪ್ರತಿಮಾ ಉಲ್ಲೇಖವು ಋಗ್ವೇದದ 'ಸಹಸ್ರಶೀರ್ಷ': ಪುರುಷನ ವರ್ಣನೆಯಲ್ಲಿ ಬರುತ್ತದೆ. ಚಾತುರ್ವರ್ಣ್ಯದ ಹೊರಗೆ ಇರುವ ಐದನೆಯ ಗುಂಪೂ ಒಂದು, ಆಗ ಇರಬೇಕೆಂದು, ಅದಿತಿಯ ಭಕ್ತಕೋಟಿಯ ಯಾದಿಯಿಂದ ತಿಳಿಯುತ್ತದೆ. ಮೊದಲಿನ ನಾಲ್ಕೂ ವರ್ಣದ ಜನ, ಪಂಚಮರನ್ನು ತಮ್ಮಿಂದ ಬೇರೆ ಎಂದು ಬಗೆಯುತ್ತಿರಬೇಕು. ಅವರನ್ನು ತಮ್ಮ ಸಮಾಜದಿಂದ ದೂರವಿರಿಸುತ್ತಿರಬೇಕು. ಪುಳಿಂದ ಮೊದಲಾದವರ ಉಲ್ಲೇಖಗಳು ಮುಂದಿನ ಕಾಲದಲ್ಲಿ ಬರುತ್ತವೆ. ಋಗ್ವೇದದ ಅದಿತಿದೇವಿಯ ವಿರಾಟ್ ರೂಪದಲ್ಲಿ ಪಂಚಮರೂ ಅದಿತಿಯೇ ಆಗಿದ್ದಾಳೆ ಎಂಬ ಈ ಮಾತು ಅಪೂರ್ವವಾಗಿದೆ. ಅಥರ್ವಣದಲ್ಲಿ ಬರುವ 'ವ್ರಾತ್ಯಸ್ತೋಮ'ವನ್ನು ಇಲ್ಲಿ ನೆನೆದುಕೊಳ್ಳಬೇಕು. ಆ ಕಾಲದ ವ್ರಾತ್ಯ (ಜನ) ರನ್ನು ಸಂಸ್ಕಾರಪೂರ್ವಕ ತಮ್ಮಲ್ಲಿ ಪತಿತ–ಪರಾವರ್ತನದ ಇತಿಹಾಸ ದೃಷ್ಟಿಯಿಂದ ಸ್ವೀಕರಿಸುತಿದ್ದುದಾಗಿ ಈ ಹೋಮದ ಉದ್ದೇಶವಿರುವುದಾಗಿ ಬಲ್ಲಿದರ ಅಭಿಪ್ರಾಯ ಎಂದು ಶಂಬಾ ಹೇಳುತ್ತಾರೆ. ವಜ್ರ ಸೂಚಿಯಲ್ಲಿ ಈ ಕೆಳಗಿನಂತೆ ಬರುತ್ತದೆ: ಶೂದ್ರನೂ ಬ್ರಾಹ್ಮಣನಾಗಬಲ್ಲ. ಹೇಗೆಂಬುದನ್ನು ಮಾನವ ಧರ್ಮದಲ್ಲಿ ಹೇಳಲಾಗಿದೆ – "ಮಹಾಮುನಿ ಕಠನು ಅರಣಿಯ ಗರ್ಭದಿಂದ ಜನಿಸಿದನು–ತಪಸ್ಸಿನಿಂದ ಅವನು ಬ್ರಾಹ್ಮಣನಾದ. ಆದ್ದರಿಂದ ಜಾತಿಯು ಬ್ರಾಹ್ಮಣತ್ವಕ್ಕೆ ಕಾರಣವಾಗುವುದಿಲ್ಲ" (22) "ಮಹರ್ಷಿ ವ್ಯಾಸನು ಒಬ್ಬ ಬೆಸ್ತರವಳ ಗರ್ಭದಿಂದ ಜನಿಸಿದ. ಅವನೂ ತಪಸ್ಸಿನ ಸಾಮರ್ಥ್ಯದಿಂದ ಬ್ರಾಹ್ಮಣನಾದ. ಆದ್ದರಿಂದ ಬ್ರಾಹ್ಮಣನಾಗಲು ಹುಟ್ಟೇ ಆಧಾರವಾಗಬೇಕಾಗಿಲ್ಲ" (23) "ಮಹಾಮುನಿ ವಸಿಷ್ಠನು ಊರ್ವಶಿಯ ಗರ್ಭದಿಂದ ಜನಿಸಿದವನು. ತಪೋ ಬಲದಿಂದ ಅವನು ಮುಂದೆ ಬ್ರಾಹ್ಮಣನಾದ". ಆದ್ದರಿಂದ ಜನ್ಮದಿಂದ ಬ್ರಾಹ್ಮಣನಾಗುತ್ತಾನೆ ಎಂಬುದರಲ್ಲಿ ಹುರುಳಿಲ್ಲ.(24) "ಪ್ರಖ್ಯಾತ ಮಹಾಮುನಿ ಋಷ್ಯಶೃಂಗ ಒಂದು ಜಿಂಕೆಯಿಂದ ಉಗಮಿಸಿದ ಮತ್ತು ತನ್ನ ಉತ್ಕೃಷ್ಟ ತಪಸ್ಸಿನಿಂದ ಅವನೂ ಬ್ರಾಹ್ಮಣನಾದ, ಬ್ರಾಹ್ಮಣತ್ವ ಪ್ರಾಪ್ತವಾಗಲು ಕಾರಣ ಜಾತಿ ಅಲ್ಲ." (25) "ಮಹಾಸಂತ ವಿಶ್ವಾಮಿತ್ರ ಒಬ್ಬ ಚಾಂಡಾಲಿನಿಯ ಗರ್ಭದಿಂದ ಜನಿಸಿದ, ಉಗ್ರ ತಪಸ್ಸಿನಿಂದ ಬ್ರಾಹ್ಮಣನಾದ.

ಬ್ರಾಹ್ಮಣನಾಗಲು ಕಾರಣ ಜಾತಿ ಅಲ್ಲ" (26) "ಮಹರ್ಷಿನಾರದ ತಂಡೂಲಿ (ಮನೆ ಕೆಲಸದವಳು)ಯ ಗರ್ಭದಲ್ಲಿ ಜನಿಸಿದನು. ತಪೋಬಲದಿಂದ ಅವನು ಬ್ರಾಹ್ಮಣನಾದ. ಜಾತಿಯು ಬ್ರಾಹ್ಮಣತ್ವಕ್ಕೆ ಕಾರಣವಲ್ಲ." (27) ಆತ್ಮ ಸಂಯಮಿಯಾದ ವ್ಯಕ್ತಿಯನ್ನು ಜಿತೇಂದ್ರಿಯ 'ಯತಿ' ಅಥವಾ 'ಸಂತ' ಎಂದೂ ಕರೆಯುತ್ತಾರೆ. ತಪಸ್ಸಿನಿಂದ ವ್ಯಕ್ತಿ ತಪಸ್ವಿಯಾಗುತ್ತಾನೆ. ಹಾಗೆಯೇ ಬ್ರಹ್ಮಚರ್ಯೆ ಪಾಲನೆ ಅಂದರೆ ಇಂದ್ರಿಯ ಸುಖ ವಿರಕ್ತಿಯ ಮೂಲಕ ಅವನು ಬ್ರಾಹ್ಮಣ ಎಂದು ಕರೆಯಲ್ಪಡುತ್ತಾನೆ. (28) ಸಮಾಜದಲ್ಲಿ ಬ್ರಾಹ್ಮಣರೆಂದು ಗುರುತಿಸಲ್ಪಡುವ ಬ್ರಾಹ್ಮಣಸ್ತ್ರೀಯ ಪುತ್ರರು ಬ್ರಾಹ್ಮಣರಲ್ಲ. ಶೀಲ ಸಚ್ಚಾರಿತ್ರ್ಯಗಳಿಂದ ಕೂಡಿದವರು ಬ್ರಾಹ್ಮಣರು. ಆದ್ದರಿಂದ ಕುಟುಂಬವು ಬ್ರಾಹ್ಮಣತ್ವಕ್ಕೆ ಕಾರಣವಾಗುವುದಿಲ್ಲ. (29) "ಒಬ್ಬ ವ್ಯಕ್ತಿ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ್ದರೂ ಅವನಿಗೆ ಸಚ್ಚಾರಿತ್ರ್ಯವಿಲ್ಲವಾದರೆ ಏನು ಪ್ರಯೋಜನ. ಕೆಳಸ್ತರದ ಕುಟುಂಬಗಳಲ್ಲಿ ಜನಿಸಿದವರಾದರೂ ಅನೇಕ ಸದ್ಗುಣ ಸಂಪನ್ನರಾದ ಧೀರರು ಅವರ ನಡತೆಯಿಂದ ಸ್ವರ್ಗವನ್ನು ತಲುಪಿದ್ದಾರೆ." (30) ಪಾಣಿನಿ ಮತ್ತು ಮನುಗಳು ಶಕ; ಹೂಣರನ್ನು ಶೂದ್ರರೆಂದು ಕರೆಯುತ್ತಾರೆ. ಬೌದ್ಧಮತದ ಬಹುತೇಕ ಕೃತಿಗಳು ಕ್ಷತ್ರಿಯರಿಗೆ ಬ್ರಾಹ್ಮಣರಿಗಿಂತ ಹೆಚ್ಚಿನ ಮಹತ್ತ್ವವನ್ನು ಕೊಟ್ಟಿವೆ. ಬುಡಕಟ್ಟು ಜನರ ಗುರಿಕಾರ ಮತ್ತು ಜಮೀನುದಾರನಿಗಿಂತಲೂ ಕ್ಷತ್ರಿಯನಿಗೆ ಹೆಚ್ಚಿನ ಪ್ರಾಶಸ್ತ್ಯವಿತ್ತು. (ವಜ್ರಸೂಚಿ)

ಶೂದ್ರಾತಿಶೂದ್ರ ಮತ್ತು ಶೂದ್ರವೆಂಬ ಪರಿಕಲ್ಪನೆಯು ಭಾರತೀಯ ಸಾಮಾಜಿಕ ಸ್ವರೂಪವನ್ನು ವಿವರಿಸುತ್ತದೆ ಮತ್ತು ಬ್ರಾಹ್ಮಣರನ್ನು ಕೇಂದ್ರವಾಗಿರಿಸಿಕೊಂಡಿದೆ. ಬ್ರಾಹ್ಮಣರು ಶೂದ್ರರೆಂದು ಕರೆದು, ಬ್ರಾಹ್ಮಣರು ತಮ್ಮನ್ನು ಪ್ರತ್ಯೇಕ ವರ್ಗವಾಗಿರಿಸಿಕೊಂಡರು. ಇದು ಬ್ರಾಹ್ಮಣರನ್ನು 'ಕುಲದ ಅಗ್ಗಳಿಕೆಗೂ' ಶೂದ್ರರನ್ನು 'ಕೀಳರಿಮೆ'ಗೂ ತಳ್ಳಿತು. ಈ ಅಭಿಪ್ರಾಯ ಜ್ಯೋತಿಭಾಪುಲೆಯವರಿಗಿತ್ತು. (Romita Thapar 1975 P.15-16) (The Past and Prejudice)

ವಿವರಗಳಿಗೆ ನೋಡಿ: ಬಿ. ವಿ. ವೀರಭದ್ರಪ್ಪ 2007 ಅಶ್ವಘೋಷನ ವಜ್ರಸೂಚಿ ಪುಟ. 18–19

ಶಂಬಾ ಜೋಶಿ 1999 ಸಂಪುಟ. 3 ಹಾಲುಮತ ದರ್ಶನ ಪುಟ. 144, I. 1.3.12

Romila Thapar 1975 The Past and Prejudice P.15-16, 34

ಶೂದ್ರರ ಮದುವೆ ಆಚರಣೆಗಳು ಮತ್ತು ಮಿಶ್ರ ಜಾತಿಗಳ ರಚನೆ

"ಅರ್ಥಶಾಸ್ತ್ರವು ಮುಖ್ಯವಾಗಿ ಆರ್ಥಿಕ ಹಾಗೂ ರಾಜಕೀಯ ನೀತಿಗಳಿಗೆ ಸಂಬಂಧಿಸಿದ ಕೃತಿಯಾದ್ದರಿಂದ ಶೂದ್ರರ ಸಾಮಾಜಿಕ ಪರಿಸ್ಥಿತಿಯನ್ನು ಕುರಿತು

ಧರ್ಮಸೂತ್ರಗಳು ಕೊಡುವಷ್ಟು ಮಾಹಿತಿಯನ್ನು ಅದು ಕೊಡುವುದಿಲ್ಲ. ಆದಾಗ್ಯೂ ಅದು ಶೂದ್ರರ ಮದುವೆ ನಡಾವಳಿ ಹಾಗೂ ಶೂದ್ರ ಹೆಂಗಸರ ಸ್ಥಾನಮಾನದ ಬಗ್ಗೆ ಬೆಳಕನ್ನು ಚೆಲ್ಲುತ್ತದೆ. ಮೂರು ಉಚ್ಚ ವರ್ಣಗಳ ಮದುವೆ ಪದ್ಧತಿ ಪ್ರಕಾರ, ಪಾಣಿಗ್ರಹಣಕ್ಕೆ ಮುಂಚೆಯೇ ಮದುಮಗಳನ್ನು ತಿರಸ್ಕರಿಸಿದ್ದಾದರೆ ಅದು ಊರ್ಜಿತ; ಆದರೆ ಶೂದ್ರರಲ್ಲಿ ಲೂಡಿಕೆಗೆ ಮುಂಚೆ ಹೆಣ್ಣನ್ನು ತಿರಸ್ಕರಿಸಬಹುದು ಎಂದು ಅರ್ಥಶಾಸ್ತ್ರ (III.೧೫) ತಿಳಿಸುತ್ತದೆ. ಸಮ್ಮತಿಸಲ್ಪಟ್ಟ ವಿವಾಹ ಪದ್ಧತಿಗಳ ಪೈಕಿ ಮೊದಲ ನಾಲ್ಕು ಬಗೆಯ ವಿವಾಹಗಳಲ್ಲಿ ವಿಚ್ಛೇದನಕ್ಕೆ ಅನುಮತಿಯಿಲ್ಲ ಎಂದು ಅದು ಹೇಳುತ್ತದೆ (III.೩); ಅಂದರೆ ಗಾಂಧರ್ವ, ಅಸುರ, ರಾಕ್ಷಸ ಮತ್ತು ಪೈಶಾಚ ರೀತಿಯ ವಿವಾಹಗಳಲ್ಲಿ ವಿಚ್ಛೇದನಕ್ಕೆ ಅಡ್ಡಿಯಿಲ್ಲ ಎಂದಾಗುತ್ತದೆ. ಸಮ್ಮತವಾದ ವಿವಾಹ ಪದ್ಧತಿಗಳಲ್ಲಿ ತಂದೆಯ ಒಪ್ಪಿಗೆ ಪಡೆಯತಕ್ಕದ್ದೆಂದು ಮತ್ತು ಮಾನ್ಯವಿರದ ಪದ್ಧತಿಗಳಲ್ಲಿ ತಾಯಿಯ ಒಪ್ಪಿಗೆ ಸಹ ಅಗತ್ಯವೆಂದು ಕೌಟಿಲ್ಯ ಹೇಳುತ್ತಾನೆ (III. ೨). ಮಾತೃ ಆಳ್ವಿಕೆ ಸಮಾಜದ ಮೂಲ ಲಕ್ಷಣಗಳು ಕೆಳ ದರ್ಜೆ ಜನರಲ್ಲಿ ಇನ್ನೂ ಪ್ರಚಲಿತವಿದ್ದದ್ದರಿಂದ ಅವು ಆದರ್ಜೆಯ ಹಂಗಸರಿಗೆ ಸ್ವಲ್ಪಮಟ್ಟಿನ ಪ್ರಾಮುಖ್ಯತೆ ತಂದುಕೊಟ್ಟಿದ್ದವು ಎಂಬುದನ್ನು ಇದು ಪರೋಕ್ಷವಾಗಿ ತೋರಿಸುತ್ತದೆ. ಕೌಟಿಲ್ಯನ ಇತರ ಕಟ್ಟಳೆಗಳನ್ನು ವಿಶ್ಲೇಷಿಸಿದಾಗ ಶೂದ್ರರಲ್ಲಿ ಮದುವೆಯ ಬಂಧ ಉಚ್ಚ ವರ್ಣಗಳಲ್ಲಿದ್ದಷ್ಟು ಬಲವಾಗಿರಲಿಲ್ಲವೆಂದೂ, ಉಚ್ಚ ವರ್ಣಗಳ ಹೆಂಗಸರು ತಮ್ಮ ಗಂಡಂದಿರನ್ನು ಹೆಚ್ಚಾಗಿ ಅವಲಂಬಿಸಿದ್ದರೆಂದೂ ತಿಳಿದುಬರುತ್ತದೆ.

ನಟರು, ಆಟಗಾರರು (ಹಾವಾಡಿಗರು ಇತ್ಯಾದಿ?). ಹಾಡುಗಾರರು, ಮೀನುಗಾರರು, ಬೇಟೆಗಾರರು, ಮಂದೆ ಕಾಯುವವರು, ಮದ್ಯದ ಭಟ್ಟಿ ಇಳಿಸುವವರು, ಮಾರಾಟಗಾರರು ಮತ್ತು ಇಂಥ ಇತರ ಕಸುಬುಗಾರರು (ತಮ್ಮ ತಮ್ಮ ಉದ್ಯೋಗಗಳನ್ನು ಅನುಸರಿಸುತ್ತ) ಮಾಡುವ ಪ್ರವಾಸದಲ್ಲಿ ಅವರ ಹೆಂಗಸರೂ ಅವರೊಡನಿರುತ್ತಾರೆ ಎಂದು ಕೌಟಿಲ್ಯ ತಿಳಿಸುತ್ತಾನೆ (III. ೩).

ಪಾಣಿನಿಯು ಚಂಡಾಲರನ್ನು ಶೂದ್ರ ವರ್ಣದಲ್ಲಿ ಸೇರಿಸಿದಂತಿದೆ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಆದರೆ ಕೌಟಿಲ್ಯ ಅವರನ್ನು ಶೂದ್ರರೆಂದು ಪರಿಗಣಿಸುವುದಿಲ್ಲ. ಚಾತುರ್ವರ್ಣ್ಯ ಸಂಘಟನೆಯೊಳಗೆ ಶೂದ್ರರಿಗೆ ಸ್ಥಾನವಿರಲಿಲ್ಲ ಎಂಬ ವಿಷಯ ಕೌಟಿಲ್ಯನು ದಂಡ ವಿಧಿಸುವಾಗ ತೋರುವ ತಾರತಮ್ಯದ ನೀತಿಯಿಂದ ಗೊತ್ತಾಗುತ್ತದೆ. ಚಂಡಾಲರ ಪ್ರಾಣಿ ಪಕ್ಷಿಗಳಿಗೆ ಘಾಸಿಯುಂಟುಮಾಡುವವರಿಗೆ ವಿಧಿಸುವ ದಂಡ, ಅಂಥದೇ ಅಪರಾಧಕ್ಕೆ ಚಾತುರ್ವರ್ಣ್ಯ ಸದಸ್ಯರಿಗೆ ವಿಧಿಸುವ ದಂಡದಲ್ಲಿ ಅರ್ಧದಷ್ಟು ಇರಬೇಕೆಂದು ಅವನು ಹೇಳುತ್ತಾನೆ (IV.೧೦). ಚಂಡಾಲನು ಆರ್ಯ ಮಹಿಳೆಯನ್ನು ಮುಟ್ಟಿದ್ದಾದರೆ ಅವನಿಗೆ ಒಂದು ನೂರು ಪಣಗಳ ದಂಡ ಹಾಕಬೇಕೆಂದು ಹೇಳಲಾಗಿದೆ; ಆದರೆ ಅವನು ಶೂದ್ರ ಸ್ತ್ರೀಯನ್ನು ಮುಟ್ಟಿದ್ದಾದರೆ ಅಂಥ ದಂಡ ವಿಧಿಸಬೇಕೆಂದು

ಹೇಳಿಲ್ಲ. ಹಾಗೆಯೇ ಚಂಡಾಲನು ಉಪಯೋಗಿಸುವ ಕೆರೆಯ ನೀರನ್ನು ಇತರರು ಯಾರೂ ಉಪಯೋಗಿಸುವ ಹಾಗಿರಲಿಲ್ಲ (ಅ.ಶಾ. I.೧೪). ಆದ್ದರಿಂದ ಚಂಡಾಲರನ್ನು ಅಸ್ಪೃಶ್ಯರೆಂದು ಪರಿಗಣಿಸಲಾಗಿತ್ತೆಂಬುದು ನಿಸ್ಸಂಶಯವಾಗಿದೆ. ಆದರೆ ನಿಷಾದ, ಪಾರಶವ ಮುಂತಾದ ಮಿಶ್ರ ಜಾತಿಗಳ ಬಗ್ಗೆ ಕೌಟಿಲ್ಯ ಇಂಥ ನಿಲುವನ್ನು ತಾಳುವುದಿಲ್ಲ. ವ್ಯಭಿಚಾರಕ್ಕೆ ಸಂಬಂಧಿಸಿದ ಕಾನೂನಿನ ಪ್ರಕಾರ ಒಬ್ಬ ಬ್ರಾಹ್ಮಣನು, ರಕ್ಷಣೆಯೊಲ್ಲದ ಮೂರು ಕೆಳ ವರ್ಣಗಳ ಸ್ತ್ರೀಯರನ್ನು ಸಮೀಪಿಸಿದ್ದಾದರೆ ಅವನಿಗೆ ೫೦೦ ಪಣಗಳ ದಂಡ ಹಾಕಬೇಕು; ಒಬ್ಬ ಅಂತ್ಯಜಳ ಮೇಲೆ ಇಂತಹುದೆ ಅಪರಾಧವೆಸಗಿದರೆ ದಂಡವನ್ನು ೧೦೦೦ ಪಣಗಳಿಗೆ ಏರಿಸಬೇಕು (VIII. ೩೮೫). ರಕ್ಷಣೆ ಹೊಂದಿರುವ ಶೂದ್ರ ಹೆಂಗಸಿನೊಡನೆ ಸಂಭೋಗ ನಡೆಸುವ ಒಬ್ಬ ಕ್ಷತ್ರಿಯ ಅಥವಾ ವೈಶ್ಯನಿಗೆ ಒಂದೇ ಸಮನಾದ ದಂಡ ವಿಧಿಸತಕ್ಕದ್ದು (VIII. ೩೮೩). ಬ್ರಾಹ್ಮಣನೊಬ್ಬನು ಒಬ್ಬ ವೃಷಲೀಯೊಡನೆ ಚಕ್ಕಂದವಾಡುತ್ತ ಒಂದು ರಾತ್ರಿ ಕಳೆದರೆ ಅವನು ಮೂರು ವರ್ಷಗಳ ಕಾಲ ಭಿಕ್ಷಾಟನೆ ಮತ್ತು ನಿತ್ಯ ಮಂತ್ರಪಠಣ ಮಾಡುತ್ತ ಜೀವಿಸಿದ್ದಾದರೆ ಆ ಪಾಪವನ್ನು ಕಳೆದುಕೊಳ್ಳುವನು (XI. ೧೭೯). ಬಾಹ್ಮಣನು ಅಡ್ಡ ದಾರಿ ಹಿಡಿಯದೆ ತನ್ನ ಸದಾಚಾರವನ್ನು ಕಾಯ್ದುಕೊಂಡಿರಲಿ ಎಂಬುದೇ ಈ ಬಹುತೇಕಕಾಯ್ದೆಗಳ ಉದ್ದೇಶವಾಗಿದೆ. ಅದೇ ಸಮಯಕ್ಕೆ ಶೂದ್ರ ಹೆಂಗಸಿನ ಸಚ್ಚಾರಿತ್ರ್ಯವನ್ನು ಸಹ ಮನು ರಕ್ಷಿಸುತ್ತಾನೆ ಎಂಬುದನ್ನು ಈ ಕಾಯ್ದೆಗಳು ಸ್ಪಷ್ಟಪಡಿಸುತ್ತವೆ. ನಾಲ್ಕೂ ವರ್ಣಗಳಿಗೆ ಸೇರಿದ ಸ್ತ್ರೀಯರು ಸುರಕ್ಷಿತಾಗಿರಬೇಕು ಎಂಬ ಮನು ತತ್ವಕ್ಕೆ ಇವು ಅನುಗುಣವಾಗಿವೆ (VIII. ೩೫೯). ಬೇರೆಯವರ ಪತ್ನಿಯರೊಂದಿಗೆಯಾಗಲೀ ಅಥವಾ ಒಬ್ಬ ಯಜಮಾನ ಅಡಿಯಲ್ಲಿ ಕೆಲಸ ಮಾಡುವ ಹೆಣ್ಣು ಗುಲಾಮರೊಂದಿಗೆಯಾಗಲೀ ಜನರು ಸಂಭಾಷಣೆ ನಡೆಸಿದ್ದಾದರೆ ಅಂತಹವರು ಒಂದು ಸಣ್ಣ ಮೊತ್ತದೆ ದಂಡ ಕೊಡಬೇಕೆಂದು ಮನು ನಿಯಮಿಸುತ್ತಾನೆ (VIII.೩೬೩). ಬೌದ್ಧ ಹಾಗೂ ಜೈನ ಸಂನ್ಯಾಸಿಯರೊಡನೆ ಮಾತನಾಡಿದಾಗಲೂ ಇದೇ ದಂಡ ಅನ್ವಯಿಸುತ್ತದೆ (ಮನು, ಅದೇ). ಶೂದ್ರ ವ್ಯಭಿಚಾರಿಗೆ ಮನು ಅತಿ ಕಠಿಣ ಶಿಕ್ಷೆಯನ್ನು ವಿಧಿಸುತ್ತಾನೆ. ಶೂದ್ರನು ಒಬ್ಬ ರಕ್ಷಣೆಯಿಲ್ಲದ ದ್ವಿಜಾತಿ (ಬ್ರಾಹ್ಮಣ) ಸ್ತ್ರೀಯೊಡನೆ ಸಂಭೋಗ ನಡೆಸಿದರೆ ಅಂತಹವನು ತನ್ನ ಶಿಶ್ನವನ್ನೂ ಎಲ್ಲ ಆಸ್ತಿಯನ್ನೂ ಕಳೆದುಕೊಳ್ಳುವನು; ರಕ್ಷಣೆಗೆ ಒಳಪಟ್ಟಸ್ತ್ರೀಯ ಮೇಲೆ ಈ ಅಪರಾಧವೆಸಗಿದರೆ ಅವನು ಎಲ್ಲವನ್ನೂ –ತನ್ನ ಜೀವ ಸಹಿತ – ಕಳೆದುಕೊಳ್ಳುವನು ಎನ್ನುತ್ತಾನೆ ಮನು (VIII. ೩೭೪). ಕ್ಷತ್ರಿಯರು ಮತ್ತು ವೈಶ್ಯರು ಒಬ್ಬ ಶ್ರೇಷ್ಠ ಬ್ರಾಹ್ಮಣರ ಪತ್ನಿಯ ಮೇಲೆ ಅಪರಾಧ ಮಾಡಿದರೆ ಶೂದ್ರನಿಗೆ ಕೊಡುವ ಶಿಕ್ಷೆಯೇ ಅಂಥವರಿಗೆ ಸಲ್ಲುತ್ತದೆ ಅಥವಾ ಒಣ ಹುಲ್ಲಿನ ಬೆಂಕಿಯಲ್ಲಿ ಅವರನ್ನು ಸುಡಬೇಕು (VIII. ೩೭೭). ಕ್ಷತ್ರಿಯ ಹಾಗೂ ವೈಶ್ಯ ಅಪರಾಧಿಗಳ ವಿಷಯದಲ್ಲಿ ಹೇಳಲ್ಪಟ್ಟಿರುವ ಜೀವಸಹಿತ ಸುಡುವ ಮರಣ ದಂಡನೆ ವಸಿಷ್ಠನಲ್ಲಿಯೂ ಕಂಡುಬರುತ್ತದೆ

(ವಸಿಷ್ಠ ಧರ್ಮಸೂತ್ರ XXI. ೨-೩); ಆದರೆ ಕೌಟಿಲ್ಯ ಈ ಉಗ್ರ ಶಿಕ್ಷೆಯನ್ನು ಶೂದ್ರನಿಗೆ ಸೀಮಿತಗೊಳಿಸುತ್ತಾನೆ (ಅ.ಶಾ. IV.೧೩). ಶೂದ್ರ ವ್ಯಭಿಚಾರಿಗೆ ವಿಧಿಸಿರುವ ದಂಡನೆಯನ್ನು ಇತರ ಮೂಲಗಳೂ ಸಮರ್ಥಿಸುತ್ತವೆಯಾದ್ದರಿಂದ ಮನುವಿನ ಈ ಶಿಕ್ಷೆ ಪರಿಣಾಮರಹಿರವಾಗಿತ್ತೆಂದು ಹೇಳಲಿಕ್ಕಾಗುವುದಿಲ್ಲ.

ವಿಧವೆಯ ಪುನರ್ವಿವಾಹ ಹಾಗೂ ನಿಯೋಗ ಪದ್ಧತಿಗಳು ಪಶುಧರ್ಮವೆಂದು ಶಾಸ್ತ್ರಗಳನ್ನು ಬಲ್ಲ ದ್ವಿಜರು ಪರಿಗಣಿಸುತ್ತಾರೆ (X. ೬೬). ಶೂದ್ರ ಮೂಲಪುರುಷ ವಸಿಷ್ಠ ಎಂದೂ (III.೧೯೬-೯೮), ನಾಮಧೇಯ (ನಾಮಕರಣ) ಪದ್ಧತಿಯನ್ನು ಅವರು ಆಚರಿಸಬಹುದೆಮದೂ (II. ೩೦-೩೧) ಹೇಳಲಾಗಿದೆ. ಶೈವ ಹಾಗೂ ಬೌದ್ಧ ಸಂಪ್ರದಾಯದವರಾಗಿದ್ದ ಕುಷಾಣ ರಾಜರು ಕೆಳವರ್ಗದ ಜನರ ಬಗ್ಗೆ ಉದಾರ ಧಾರ್ಮಿಕ ಮನೋಧರ್ಮವನ್ನು ತಾಳಿದ್ದರಿಂದಲೂ ಶೂದ್ರರ ಸ್ಥಿತಿ ಉತ್ತಮಗೊಂಡಿತೆಂದು ಹೇಳಬಹುದು. ಕ್ರಿಸ್ತಶಕದ ಮೊದಲ ಹಾಗೂ ಎರಡನೆಯ ಶತಮಾನಗಳಲ್ಲಿ ಬೌದ್ಧಮತದ ಪ್ರಭಾವಿದ್ದ ಸಾತಾವಾಹನರ ರಾಜ್ಯಗಳೂ ಇದೇ ರೀತಿಯ ಬದಲಾವಣೆಗಳನ್ನು ಕಂಡಿರುವ ಶಕ್ಯತೆಯಿದೆ. ಆದಾಗ್ಯೂ, ಸ್ತ್ರೀ ಗುಲಾಮರು ಹಾಗೂ ಹೆಣ್ಣಾಳುಗಳು ಶ್ರೀಮಂತರ ಮನೆಗಳಲ್ಲಿ ಕೆಲಸ ಮಾಡಿಕೊಂಡಿದ್ದರೆನ್ನುವುದಕ್ಕೆ ಸಾಕಷ್ಟು ಸಾಕ್ಷ್ಯಾಧಾರವಿದೆ. ಉದಾಹರಣೆಗೆ, ದಾಸೀಸಂಬಂಧ ಬಹು ಸಂಖ್ಯೆಯ ಸ್ತ್ರೀ ಗುಲಾಮರು ಹಾಗೂ ಮನೆಗೆಲಸದವರನ್ನು ಬುಡಕಟ್ಟು ಜನರಿಂದ ಹಿಡಿದು ತರಲಾಯಿತೆಂದು ಈ ಕಾಲದ ಜೈನ ಕೃತಿಗಳು ತಿಳಿಸುತ್ತವೆ. (ಬೃಹತ್‌ಕಲ್ಪ ಭಾಷ್ಯಗಾಥಾ ಎಂಬ ಕೃತಿಯಲ್ಲಿ ನಾಪಿತ-ದಾಸಿಯರ ಪ್ರಸ್ತಾಪವಿದೆ).

ರೈತರನ್ನು ವೈಶ್ಯರೆಂದು ಕರೆಯುವ ಸಾಂಪ್ರದಾಯಿಕ ನಿಲುವು ಈ ಕಾಲದ ಸಾಹಿತ್ಯದಲ್ಲಿ ಪುನರುಕ್ತವಾಗಿದೆ. ಜಮೀನುಗಳನ್ನು ಬ್ರಾಹ್ಮಣರಿಗೆ ದತ್ತಿಯಾಗಿ ಕೊಟ್ಟಾಗ ಅಥವಾ ಇತರರಿಗೆ ವರ್ಗಾಯಿಸಿದಾಗ ಸಹ ಕೃಷಿಕರು ಆಯಾ ಜಮೀನುಗಳ ಫಸಲು-ಪಾಲುದಾರರಾಗಿ ಮುಂದುವರಿದರೆಂದು ಪಲ್ಲವರ (ಕ್ರಿ.ಶ. ೨೫೦-೩೫೦) ಎರಡು ಭೂ ದತ್ತಿ ಶಾಸನಗಳು ತಿಳಿಸುತ್ತವೆ.

ಶೃಂಗಾರ

ಭೋಜ-ಭವಭೂತಿಯಂಥವರು ಶೃಂಗಾರ-ಕರುಣಗಳಲ್ಲಿ ಉಳಿದ ರಸಗಳನ್ನು ಐಕ್ಯಗೊಳಿಸಿದ ಸಂದರ್ಭಗಳನ್ನು ವಿವೇಚಿಸಿದಾಗಲೂ ರಸದ ಕುರಿತಾದ ಭಾರತೀಯ ದೃಷ್ಟಿಕೋನ ಹೆಚ್ಚು ವಿಶದವಾಗುವ ಸಂದರ್ಭ ಇದೆ. ಭೋಜನ ಶೃಂಗಾರವೆಂಬುದು ಸರ್ವರಸಗಳ ಮೂಲ ; ಇದಕ್ಕೆ ಅಭಿಮಾನವೇ ಸ್ಥಾಯಿ, ಇಲ್ಲಿಯ ಪ್ರತಿಪಾದನೆಯ ಪ್ರಕಾರ ಶೋಕವನ್ನೂ ಅನುಭವಿಸುವುದೆಂದರೆ ಶೋಕದಲ್ಲಿ (ಅಭಿಮಾನ) ತನ್ನ ತನವನ್ನು ಕಾಣುವುದು ; ಕೋಪಗೊಳ್ಳುವುದೆಂದರೆ ಕೋಪದಲ್ಲಿ ತನ್ನ ತನವನ್ನು

ಕಾಣುವುದು. ಹೀಗೆ ಸಂಖ್ಯೆಗೆ ಒಳಪಡಿಸಲಾದ ಯಾವುದೇ ರಸವಿದ್ದರೂ ಅದರಲ್ಲಿ ತನ್ನತನವನ್ನು ಕಾಣುವುದೇ ರಸಾನುಭವದ ಮೂಲ ಪ್ರಕ್ರಿಯೆಯಾದುದರಿಂದ ಎಲ್ಲಕ್ಕೂ ಅಭಿಮಾನವೇ ಸ್ಥಾಯಿ ; ಎಲ್ಲವೂ ಶೃಂಗಾರದಲ್ಲಿಯೇ ಅಂತರ್ಗತ.

ಪ್ರಾತಿನಿಧಿಕ ಲಕ್ಷ್ಯಕಾರರು ಶೃಂಗಾರದ ಮೇಲೆ ಒತ್ತುಕೊಟ್ಟುದರ ರಹಸ್ಯವೂ ಇದೇ. ಪಾರಮಾರ್ಥಿಕತೆಯೇ ಪ್ರಧಾನವಾಗಿದ್ದ ಶ್ರುತಿ–ಸ್ಮೃತಿ–ಇತಿಹಾಸ–ಪುರಾಣಗಳಿಗೆ ಪೂರಕವಾಗುವ ಕೃತಿ ಲೌಕಿಕತೆಯನ್ನೇ ಪ್ರಧಾನವಾಗಿ ಹೊಂದಿರದಿದ್ದಲ್ಲಿ ಚಿತ್ರಿತ ಚಿತ್ರಣವೇ ಆಗಬಹುದೆಂಬ ಎಚ್ಚರಿಕೆಯಿಂದ ಇವರು ಶೃಂಗಾರದ ಮೇಲೆ ಒತ್ತುಕೊಟ್ಟರು. ಇವರ ಶೃಂಗಾರವು ಅಷ್ಟೊಂದು ವಿಶಾಲಾರ್ಥದ ಶೃಂಗಾರವಾಗಿತ್ತು. ಭರತನಂತಹ ಲಕ್ಷಣಕಾರರು, ಶೃಂಗಾರಕ್ಕೇ ಗ್ರಂಥದ ಹೆಚ್ಚು ಭಾಗಗಳನ್ನು ಮೀಸಲಿಟ್ಟುದು ಈ ಎಚ್ಚರಿಕೆಯಿಂದಲೇ. ಅನಂತರದವರು ಇದನ್ನೆಲ್ಲಾ ತಪ್ಪು ತಿಳಿದುಕೊಂಡು ಶೃಂಗಾರವನ್ನು ಪ್ರಣಯ ಸನ್ನಿವೇಶಗಳಿಗಷ್ಟೇ ಸೀಮಿತಗೊಳಿಸಿ ಕಾವ್ಯರಚನೆ ಮಾಡುತ್ತಾ ಹೋದರು. ಕರುಣ ಶಕ್ತಿಯಲ್ಲಿ ಕಂಡಂತಿದೆ.

ವಿವರಗಳಿಗೆ ನೋಡಿ: ಪಾದೇಕಲ್ಲು ನರಸಿಂಹಭಟ 1998 ಅಭಿನವಗುಪ್ತ ಪುಟ. 85

ಶೇಷಾಕ್ಷತ

ಆಶೀರ್ವಾದ ಮಾಡಿದ ಮಂತ್ರಾಕ್ಷತೆಯನ್ನು ಶೇಷಾಕ್ಷತವೆಂದು ಕರೆಯುತ್ತಾರೆ. ಕ್ಷತ=ತುಂಡಾದ, ಖಂಡವಾದ ಅ–ಕ್ಷತ=ತುಂಡಾಗದ, ಇಡಿಯಾದ ಅಖಂಡವಾದ ಎಂಬರ್ಥವಿದೆ. ಅಕ್ಷತೆ ಎಂಬುದಕ್ಕೆ ಅರ್ಥವಾಗಿ ಕುಂಕುಮ ಬೆರೆಸಿದ ಅಕ್ಕಿಕಾಳು ಎಂಬುದೇ ಹೆಚ್ಚು ಬಳಕೆಯಲ್ಲಿದೆ. ಆದ್ದರಿಂದಲೇ ಅಕ್ಷತೆಗೆ ಇಡಿಯಕ್ಕಿಯನ್ನೇ ಬಳಸುತ್ತಾರೆ. ಶೇಷೆ ಎಂದರೂ ಮಂತ್ರಾಕ್ಷತೆ ಎಂದೇ ಅರ್ಥ. ಸೇಸೆ ಎಂಬ ಪ್ರಯೋಗವೂ ಇದೆ.

ಶ್ರದ್ಧಾ

ಸಂಸ್ಕೃತದ 'ಶ್ರದ್ಧಾ' ಎಂಬ ಅರ್ಥಗರ್ಭಿತ ಶಬ್ದಕ್ಕೆ ಸಾಟಿಯಾದ ಶಬ್ದ ಇಂಗ್ಲೀಷಿನಲ್ಲಿ ಇಲ್ಲ. ಶ್ರದ್ಧಾ ಎಂಬ ಶಬ್ದಕ್ಕೆ ಪೂರ್ಣ ಅರ್ಥವನ್ನು ಶಂಕರರ ವಿವರಣೆಯಲ್ಲಿ ಕಾಣಬಹುದು. ವೇದಾಂತದಲ್ಲಿ 'ಶ್ರದ್ಧೆ' ಎಂಬ ಶಬ್ದಕ್ಕೆ ಅರ್ಥ ಹೀಗಿದೆ. ಋಷಿಗಳ ಉಪದೇಶದ ಸಾರವನ್ನು ಮತ್ತು ಧರ್ಮಗ್ರಂಥಗಳ ಘೋಷಣೆಗಳನ್ನು ಸಂಪೂರ್ಣವಾಗಿ ಗ್ರಹಿಸುವ ಶಕ್ತಿ ಎಂದರ್ಥ. ವಾಸ್ತವವಾಗಿ 'ಶ್ರದ್ಧೆ'ಯಿಲ್ಲದೆ ಏನೂ ಚಟುವಟಿಕೆ ಸಾಧ್ಯವಿಲ್ಲ; ಎಲ್ಲಿ ಬೌದ್ಧಿಕ ಪ್ರಾಮಾಣಿಕತೆ ಸಂಪೂರ್ಣವಾಗಿ ವ್ಯಕ್ತವಾಗುವುದಿಲ್ಲವೋ ಅಂತಹ ಕಡೆ 'ಶ್ರದ್ಧೆ' ಬೆಳೆಯಲಾರದು. (ಶ್ರೀಮದ್ ಭಗವದ್ಗೀತೆ – ಪು. ಸಂ. 115)

ವಿವರಗಳಿಗೆ ನೋಡಿ: ಶ್ರೀಮದ್ ಭಗವದ್ಗೀತೆ – ಪು. ಸಂ. 115 – 116

ಶ್ರಾದ್ಧ

ಅನ್ನ, ಎಳ್ಳು, ಭತ್ತ, ಯವ, ನೀರುಗಳಿಂದ ಪಿತೃ ಪ್ರೀತಿಗಾಗಿ ಪ್ರತಿ ದಿನ ಶ್ರಾದ್ಧ ಮಾಡಬೇಕು.

(ಮನುಸ್ಮೃತಿ 3–82) ಶ್ರದ್ಧೆಯಿಂದ ಪಿತೃಗಳಿಗೆ ನೀಡುವ ಎಳ್ಳು ನೀರನ್ನು ಶ್ರಾದ್ಧವೆಂದು ಕರೆಯುತ್ತಾರೆ.

ಷಡ್ಬಲಗಳು

ಮೌಲ್ಯ, ಭೃತ್ಯ, ಶ್ರೈಣ, ಆಟವಿಕ, ಮೈತ್ರ, ಅಮಿತ್ರವೆಂಬ ಆರು ರೀತಿಯ ಬಲಗಳಿರುತ್ತವೆ.

ಮೌಲ್ಯ– ವಂಶಾನುಕ್ರಮಾವಾಗಿ ಬಂದಿರುವುದು

ಭೃತ್ಯ_ ಸಂಬಳದವನು

ಮಿತ್ರ ಬಲ_ಸ್ನೇಹದಿಂದ

ಶ್ರೈಣ ಬಲ_ಜನ್ಮ ಕರ್ಮಗಳನ್ನು ಗಮನಿಸಿಕೊಂಡು ನೇಮಕವಾಗಿರುವವರು.

ಆಟವಿಕ ಬಲ_ಬೆಟ್ಟಗಳಡಿಯಲ್ಲಿ ವಾಸಿಸುವ ಕಿರಾತ,ಮ್ಲೇಚ್ಛರಿಂದ ಕೂಡಿಕೊಂಡ ಬಲ.

ಅಮಿತ್ರ ಬಲ_ ಯುದ್ಧದಲ್ಲಿ ಸೋತು ಸೆರೆಯಾಳಾಗಿ ದಾಸಭಾವವನ್ನು ಹೊಂದಿರುವವರನ್ನು ಅಮಿತ್ರ ಬಲವೆಂದು ಕರೆಯುತ್ತಾರೆ. (ಮಾನಸೋಲ್ಲಾಸ_2–556, 557, 558)

ಷೋಡಶ ಸಂಸ್ಕಾರ

"ಸಂಸ್ಕಾರ ಎಂಬ ಸಂಸ್ಕೃತ ಪದವು 'ಕೃ' ಎಂಬ ಮೂಲ ಧಾತುವಿನಿಂದ ಜನಿಸಿ 'ಸಂ' ಎಂಬ ಉಪಸರ್ಗ ಮತ್ತು 'ಘನ್' ಎಂಬ ಅಂತ್ಯ ಪ್ರತ್ಯಯದಿಂದೊಡಗೂಡಿ ಅನೇಕ ಅರ್ಥಗಳಲ್ಲಿ ಬಳಕೆಯಾಗಿದೆ. ವಿವಿಧ ದರ್ಶನಗಳು ಈ ಪದವನ್ನು ವಿವಿಧ ಅರ್ಥಗಳಲ್ಲಿ ಬಳಸಿವೆ. ಮೀಮಾಂಸಕರು 'ಯಜ್ಞಾಹುತಿಯ ಪ್ರೋಕ್ಷಣೆ ಮುಂತಾದ ಕರ್ಮದಿಂದುದಿಸುವ ಗುಣಧರ್ಮ' ಎಂಬುದಾಗಿಯೂ, ಅದ್ವೈತಿಗಳು 'ಶರೀರ ಪ್ರವೃತಿಯಿಂದುದಿಸಿದ ಆತ್ಮದ ಒಂದು ಕೃತಕ ಗುಣಧರ್ಮ'ವೆಂದೂ, ನೈಯಾಯಿಕರು 'ಅನುಭವಗಳಾಗಿರುವ ಸ್ವಯಂ ಪುನರುತ್ಪತ್ತಿ ಶಕ್ತಿ ಅಥವಾ ಸಾಮರ್ಥ್ಯ'ವೆಂದೂ ಇದನ್ನೂ ಅರ್ಥ ಮಾಡಿಕೊಂಡಿದ್ದಾರೆ. ಪ್ರಮಾಣಭೂತವಾದ ಸಂಸ್ಕೃತ ಸಾಹಿತ್ಯ, ಸಂಸ್ಕಾರವೆಂದರೆ ಶಿಕ್ಷಣ, ತರಬೇತಿ, ಅಭಿವೃದ್ಧಿ, ಶಿಷ್ಟಾಚಾರ, ನೈಪುಣ್ಯ, ವ್ಯಾಕರಣ ಸ್ವಚ್ಛತೆ, ಗುಣವರ್ಧನ, ಒಪ್ಪು ಹಾಕುವುದು, ಅಲಂಕಾರ ಮತ್ತು ಆಭರಣ, ಆಕಾರ, ಮುದ್ರೆ, ಹಸ್ತಕ್ರಿಯೆ, ಪ್ರಭಾವ; ಜ್ಞಾನ ಸಂಚಯಕ್ಕೆ ಕಾರಣವಾದ ಕ್ರಿಯಾಪ್ರವೃತ್ತಿ, ಪ್ರಾಯಶ್ಚಿತ್ತವಿಧಿ, ಪವಿತ್ರಮಯ ಅನುಷ್ಠಾನ ಮತ್ತು ಆಚಾರ, ದೀಕ್ಷೆ, ಪಾವಿತ್ರ್ಯಗೊಳಿಸುವಿಕೆ ಮತ್ತು ಪ್ರೋಕ್ಷಣೆ, ನಡೆದುಹೋದ ಕಾರ್ಯದ ಫಲ, ಕಾರ್ಯದಿಂದಾದ ಪುಣ್ಯ, ಮುಂತಾದ ಅರ್ಥಗಳಲ್ಲಿ ಬಳಸಿ, ಹಿಂದೂ ಸಂಸ್ಕಾರಗಳು ಕೇವಲ ಸಾಂಪ್ರದಾಯಿಕವಾದ

ಶಾರೀರಿಕ ಶುದ್ಧತೆಯೊಂದನ್ನೇ ಗುರಿಯಾಗಿಟ್ಟುಕೊಳ್ಳದೆ, ಪರಿಗ್ರಾಹಕನಲ್ಲಿ ಒಂದು ವಿಶಿಷ್ಟವಾದ ಅರ್ಹತೆಯನ್ನುಂಟುಮಾಡಿ ಅವನ ಪೂರ್ಣ ವ್ಯಕ್ತಿತ್ವವನ್ನು ಪವಿತ್ರಗೊಳಿಸಿ ನೈಪುಣ್ಯ, ಶಿಷ್ಟಾಚಾರವನ್ನೊದಗಿಸುತ್ತವೆಂಬುದನ್ನು ಸೂಚಿಸುತ್ತದೆ. ವೈದಿಕ ಧರ್ಮದ ಷೋಡಶ ಸಂಸ್ಕಾರಗಳು ಈ ರೀತಿಯಿವೆ: 1. ಗರ್ಭಧಾರಣ 2. ಪುಂಸವನ 3. ಸೀಮಂತೋನ್ನಯನ 4. ಜಾತಕರ್ಮ 5. ನಾಮಕರಣ 6. ನಿಷ್ಕ್ರಮಣ 7. ಅನ್ನಪ್ರಾಶನ 8. ಚೂಡಾಕರಣ 9. ಕರ್ಣವೇಧ 10. ವಿದ್ಯಾರಂಭ ಅಥವಾ ಅಕ್ಷರಾರಂಭ 11. ಉಪನಯನ 12. ವೇದಾರಂಭ 13. ಶೇಶಾಂತ 14. ಸಮಾವರ್ತನ 15. ವಿವಾಹ 16. ಅಂತೇಷ್ಟಿ ಇವು ಹತ್ತು ಹನ್ನೆರಡು ಮತ್ತು ಹದಿಮೂರು ಆಮೇಲೆ ಆರಂಭವಾದವು."

ವಿವರಗಳಿಗೆ ನೋಡಿ: ಯುಗಾಯಾತ್ರೀ ಭಾರತೀಯ ಸಂಸ್ಕೃತಿ 1971 ಪುಟ. 291.

ಸಂಕಲ್ಪ

ಕಾಮದಿಂದ ಸಂಕಲ್ಪವು, ಸಂಕಲ್ಪದಿಂದ ಯಜ್ಞವು. ವ್ರತವು ಯಮ ನಿಯಮ ಧರ್ಮವು. ಆತ್ಮಕಾಮನೆಗೆ ವಿರೋಧವಿಲ್ಲದಂತೆ. ಸಕಲ ಕಾಮನೆಗಳೂ ನಿಂದ್ಯವಲ್ಲ. (ಮನುಸ್ಮೃತಿ 2–3)

ಸಂಚಿತ

ಸಂಚಿತವೆಂದರೆ ಆರ್ಜಿತ, ಕೂಡಿಟ್ಟ ಎಂಬ ಅರ್ಥವಿದೆ. ಸಂಚಿತವೆನ್ನುವುದು ಆಧ್ಯಾತ್ಮಿಕ ಪರಿಭಾಷೆಯಲ್ಲಿ ಸಂಚಿತಕರ್ಮವೆಂಬ ಅರ್ಥದಲ್ಲಿಯೂ ಬಳಕೆಯಾಗಿರುವುದು ಗಮನಾರ್ಹ. ನಾವು ಯಾವುದನ್ನು ಆರ್ಜಿಸಿರುತ್ತೇವೆಯೋ ಅದರ ಪ್ರತಿಫಲವು ನಮಗೆ ದಕ್ಕುತ್ತದೆ.

ಸಂಧಿ

ಸಂಧಿಯು ನಾಲ್ಕು ವಿಧವೆಂದು ಮಾನಸೋಲ್ಲಾಸದಲ್ಲಿ ಬರುತ್ತದೆ. ಮೈತ್ರ, ಸಂಬಂಧಜ, ಪರಸ್ಪರೋಪರೋಪಕಾರ, ಉಪಹಾರಗಳೆಂದು ನಾಲ್ಕು ವಿಧವೆಂದು ಮಾನಸೋಲ್ಲಾಸವು ಹೇಳುತ್ತದೆ. ಸಜ್ಜನನು ಎಂದು ತಿಳಿದುಕೊಂಡು ಸಂಧಿಯನ್ನು ಮಾಡುವುದು ಮೈತ್ರವೆಂದು ಕರೆಸಲ್ಪಟ್ಟಿದೆ. ಕನ್ಯಾದಾನ ಮಾಡುವುದರ ಮೂಲಕ ಮಾಡಿಕೊಳ್ಳುವ ಸಂಧಿಗೆ ಸಂಬಂಧವೆಂದು ಕರೆಯುತ್ತಾರೆ. ಪರಸ್ಪರ ಉಪಕಾರಕ್ಕೆ ಮಾಡಿಕೊಳ್ಳುವ ಸಂಧಿಗೆ ಪರಸ್ಪರೋಪಕಾರ ಸಂಧಿಯೆಂದು ಕರೆಯುತ್ತಾರೆ. ಆನೆ, ಕುದುರೆ, ರತ್ನ, ಬಂಗಾರ ಹಾಗೂ ಭೂಮಿಯನ್ನು ಕಾಣಿಕೆಯಾಗಿ ನೀಡಿ ಮಾಡಿಕೊಳ್ಳುವ ಸಂಧಿಗೆ ಉಪಹಾರ ಸಂಧಿಯೆಂದು ಕರೆಯುತ್ತಾರೆ. (ಮಾನಸೋಲ್ಲಾಸ–2–728–732)

ಸಂಧಿ ವಿಗ್ರಹಿ

ಸಂಧಿವಿಗ್ರಹಿಯು ವಾಸ್ತವವಾಗಿ ರಾಜಕಾರಣದಲ್ಲಿ ಮಹತ್ವದ ಸ್ಥಾನವನ್ನು ಹೊಂದಿರುವುದಕ್ಕೆ ಪ್ರಾಚೀನ ಕನ್ನಡ ಕಾವ್ಯದಲ್ಲಿ ಸಾಕಷ್ಟು ಪುರಾವೆಗಳಿವೆ. ಕೃಷ್ಣ

ಸಂಧಾನವು ಇದರಲ್ಲಿ ಒಂದು. ಸಂಧಿ ವಿಗ್ರಹಿಯು ರಹಸ್ಯವನ್ನು ಕಾಪಾಡಿಕೊಳ್ಳವನಾಗಿರಬೇಕು. ಅವನು ನಿಷ್ಠಾವಂತನಾಗಿರಬೇಕು. ಅವನಿಗೆ ಸಾಕಷ್ಟು ವಿವೇಕವಿರಬೇಕು. ಕಾರ್ಯದ ಕುಶಲತೆಯು ಇರಬೇಕು. (ಮಾನಸಲ್ಲೋಸ-2-130)

ರಾಜರು ಯುದ್ಧಕ್ಕಿಂತ ಮೊದಲು ಸಂಧಿಯೋ ಸಮರವೋ ಎಂದು ನಿರ್ಣಯಿಸಲು ಯಾರಾದರೂ ಒಬ್ಬರನ್ನು ಕಳಿಸುತ್ತಿದ್ದರು. ಇದಕ್ಕೆ ಪೂರಕವಾಗಿ ಕೃಷ್ಣಸಂಧಾನವನ್ನು ನೆನಪಿಸಿಕೊಳ್ಳಬಹುದು. ಮಂತ್ರಿಗಳನ್ನು ಸಂಧಿ-ವಿಗ್ರಹಿಗಳೆಂದು ಕರೆದಿರುವುದೂ ಇದೆ.

ಕೌಟಿಲ್ಯನು ಆತ್ಮಾಮಿಷ, ಆತ್ಮರಕ್ಷಣ, ಅದೃಷ್ಟಪುರುಷ ಸಂಧಿ ದಂಡೋಪನತಸಂಧಿ, ಪರಿಕ್ರಯಸಂಧಿ, ಉಪಗ್ರಹಸಂಧಿ, ಸುವರ್ಣಸಂಧಿ, ಕಪಾಲಸಂಧಿ, ಆದಿಷ್ಟಸಂಧಿ, ಉಚ್ಛಿನ್ನಸಂಧಿ, ಅವಶ್ರಯಸಂಧಿಗಳ ಕುರಿತು ಅರ್ಥಶಾಸ್ತ್ರದಲ್ಲಿ ಹೇಳಿದ್ದಾನೆ.

ವಿವರಗಳಿಗೆ ನೋಡಿ: ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು 2010 ಕೌಟಲೀಯ ಅರ್ಥಶಾಸ್ತ್ರ ಪುಟ. 376-384.

ಸಂಧ್ಯಾ ನಿಯಮ

ಸಂಧ್ಯಾನಿಯಮವೆಂದರೆ ಸಂಧ್ಯಕಾಲದ ತಪಸ್ಸು ಎಂಬ ಅರ್ಥವಿದೆ. ಅದು ಕ್ರಿಯಾಯೋಗಕ್ಕೆ(ಆಚರಣೆಗೆ) ಸಂಬಂಧಿಸಿದ್ದು.

ಸಂನ್ಯಸನ

ಇದರ ಕುರಿತು ಆರ್ ಶೇಷಶಾಸ್ತ್ರಿಯವರು ಹೀಗೆ ಹೇಳುತ್ತಾರೆ: "ಮುನಿಗಳ ಜೀವನ ದರ್ಶನವನ್ನು ನಾಲ್ಕು ಸಾಲುಗಳಲ್ಲಿ ಒಂದು ಶಾಸನ ಈ ರೀತಿ ಮಾಡಿಕೊಡುತ್ತದೆ. ಅಂದರೆ, ಈ ಪ್ರಂಪಚದ ಎಲ್ಲಾ ವೈಭೋಗಗಳೂ ಕಾಮನವಿಲ್ಲಿನಂತೆ, ಮಿಂಚಿನ ಬೆಳಕಿನಂತೆ, (ಸುರಚಾಪ) ಮಂಜಿನಂತೆ (ಮಂಜು) ಕ್ಷಣ ಮಾತ್ರ ನಮ್ಮನ್ನು ಆಕರ್ಷಿಸಿ ಬೇಗ ಮಾಯವಾಗುವಂಥವು. ಇವು ಯಾರಿಗೂ ಬಹುಕಾಲ ಉಳಿಯುವಂಥದ್ದಲ್ಲ. ಮುಂದಿನ ಸುಕೃತಕ್ಕಾಗಿ ಆಶಿಸಿ ನಂದಿಸೇನ ಮುನಿವರರು ಈ ಭೂಲೋಕದ ಆಸೆ ಆಮಿಷಗಳನ್ನು ತೊರೆದು ಸನ್ಯಸನವಿಧಿಯಿಂದ ದೇಹತ್ಯಾಗ ಮಾಡಿ ದೇವಲೋಕಕ್ಕೆ ಸೇರಿಹೋದರೆಂತೆ, ಜೀವನದ ನಶ್ವರತೆ, ಸಾವನ್ನು ಎದುರಿಸಿದ ನಂದಿಸೇನ ಮುನಿಗಳ ಮನಸ್ಸಿನ ದೃಢತೆಯನ್ನು ಶಾಸನಕಾರ ಮನೋಜ್ಞವಾಗಿ ಸೆರೆ ಹಿಡಿದಿದ್ದಾನೆ.

ಶ್ರವಣಬೆಳಗೊಳದ 1131ರ ಮತ್ತೊಂದು ಶಾಸನವು ವಿಷ್ಣುವರ್ಧನನ ಹೆಂಡತಿ ಶಾಂತಲೆಯ ತಾಯಿಯಾದ ಮಾಚಿಕಬ್ಬೆಯ ಸನ್ನಸನ ಮರಣವನ್ನು ಮನಮಿಡಿಯುವಂತೆ ಚಿತ್ರಿಸುತ್ತದೆ. ಉಪದೇಶ ಮಾಡುತ್ತ. ಸೋತ್ರಗಳನ್ನು ಹೇಳುತ್ತ ಗುರುಗಳ ಎದುರು, ತದೇಕ ಚಿತ್ತದಿಂದ ಕುಳಿತು ಆಲಿಸುತ್ತಿದ್ದ ಮಾಚಿಕಬ್ಬೆಯ ಶ್ರದ್ಧಾಸಕ್ತಿಗಳನ್ನು, ಅವಳು ಅನುಸರಿಸುತ್ತಿದ್ದ ಕಠೋರ ವಿಧಿಗಳನ್ನು ಚಿತ್ರಿಸುವ ಸಂದರ್ಭದಲ್ಲಿಯೇ, ಅವಳ ಈ

ಘೋರ ವ್ರತಾಚರಣೆಯನ್ನು ಲೌಕಿಕ ದೃಷ್ಟಿಯಿಂದ ಪರಿಗಣಿಸಿ, ತೀವ್ರವಾದ ಚಿತ್ರಣವನ್ನು ಶಾಸನಕಾರ ನೀಡುತ್ತಾನೆ. ತನ್ನ ಬಂಧುಗಳನ್ನು ಸಮಾಧಾನ ಪಡಿಸಿ, ಅವರ ದುಃಖದಿಂದ ತಾನು ವಿಚಲಿತಳಾಗದೆ ಒಂದು ತಿಂಗಳಕಾಲ ಉಪವಾಸ ಮಾಡಿ ದೇಹತ್ಯಾಗ ಮಾಡುತ್ತಾಳೆ. ಅವರ ಧಾರ್ಮಿಕ ನಿಷ್ಠೆಯನ್ನು ಶಾಸನ ಮುಕ್ತ ಕಂಠದಿಂದ ಹೊಗಳಿದೆ. (*ಶ್ರೀ ಶೇಷಶಾಸ್ತ್ರಿ 2005 ಶಾಸನ ಪರಿಚಯ*) ಸಂನ್ಯಾಸವೆಂದರೆ ತ್ಯಾಗ, ಸ್ವಾರ್ಥವನ್ನು ತ್ಯಾಗ ಮಾಡಬೇಕು ಎಂದು ಅರ್ಥ. ಹೇಳಿದ್ದಾರೆ. ನ್ಯಾಸವೆಂದರೆ ತೆಗೆದಿರಿಸಿದ್ದು ಎಂಬ ಅರ್ಥವೂ ಇದೆಯೆಂಬುದು ಇಲ್ಲಿ ಗಮನಾರ್ಹ. ರಾಗ ದ್ವೇಷಾದಿಗಳನ್ನು ನ್ಯಾಸಗೈದು ಸರ್ವಸಂಗ ಪರಿತ್ಯಾಗಿಯಾದವನು ಸನ್ಯಾಸಿ ಎನಿಸಿಕೊಳ್ಳುವನು.

ವಿವರಗಳಿಗೆ ನೋಡಿ: ಸುಕುಮಾರ್ ಅಟಿಕ್ಕೋಡ್ ವಿ.ಗೋಪಾಲಕೃಷ್ಣ (ಅನು) ೨೦೦೫ ತತ್ವಮಸಿ

ಡಾ.ಎಂ.ಪ್ರಭಾಕರ ಜೋಶಿ ೨೦೦೮ ಭಾರತೀಯ ತತ್ತ್ವಶಾಸ್ತ್ರ ಪ್ರವೇಶ

ಸಂಬಳ

ಸೇವಕರಿಗೆ ಕಾಲ ಕಾಲಕ್ಕೆ, ತಿಂಗಳಿಗೊಮ್ಮೆ, ಪ್ರತೀ ದಿನ, ಮೂರು, ಅಥವಾ ನಾಲ್ಕು ತಿಂಗಳಿಗೊಮ್ಮೆ ಕೊಡಬೇಕೆಂದು ಮಾನಸೋಲ್ಲಾಸದಲ್ಲಿ ಬರುತ್ತದೆ. (ಮಾನಸೋಲ್ಲಾಸ–2–568)

ಸಂಬಳಿಕೋಲು

ಕೈಯಲ್ಲಿ ಹಿಡಿದುಕೊಳ್ಳುವ ಬಿದಿರ ಕೋಲನ್ನು ಸಂಬಳಿ ಕೋಲು ಎಂದು ಕರೆಯುತ್ತಾರೆ. ಅಸ್ಪೃಶ್ಯರು ಹಾದಿಯಲ್ಲಿ ಬರುವಾಗ ಮೇಲು ಜಾತಿಯವರು ಬಂದರೆ ತಾವು ಬರುತ್ತಿದ್ದೇವೆ ಎಂದು ಸೂಚಿಸಲು ಬಿದಿರ ಕೋಲನ್ನು ನೆಲಕ್ಕೆ ಕುಟ್ಟಿ, 'ಸಂಭೋಳಿ' ಎಂದು ಹೇಳುತ್ತಾರೆ. ಆದುದರಿಂದ ಅವರ ಕೈಯಲ್ಲಿರುವ ಬಿದಿರ ದೊಣ್ಣೆಗೆ ಸಂಬಳಿಕೋಲು ಎಂದು ಬಂದಿರಬೇಕು. 'ಸಂಬಳಿಗೋಲು' ಎಂಬುದು ತುದಿ ಜಜ್ಜಿ ಸೀಳುಬಿಟ್ಟ ಬಿದಿರು ಗೋಲಾಗಿರುವುದು ಸಂಭವ ಎಂದಾಯಿತು. ಅದನ್ನು ಹೊಲೆಯರು ತಮ್ಮ ಗುರುತಾಗಿ ಉಪಯೋಗಿಸುತ್ತಿದ್ದರು ಎಂದೂ ಇಟ್ಟುಕೊಳ್ಳಬಹುದು. ಈ ಕೋಲನ್ನು ಕುಟ್ಟಿ ಸದ್ದುಮಾಡಿ ಜನರಿಗೆ 'ಎಚ್ಚರಿಕೆ' ಕೊಡುತ್ತಿದ್ದರು ಎಂಬುದನ್ನು 'ಸಂಬಳಿ' ಶಬ್ದದ ಪರಿಶೀಲನದಿಂದ ತಿಳಿಯಬಹುದು. (ಣೇ)–ಕ್ರಿಯಾಪದ, ರಕ್ಷಣಾಕರಣೇ, ಪಾಳಣೇ, ಕಾಳಜೀಘೇಣೇ to protect, to take care, to rear.

(ಸಂಸ್ಕೃತ–ಸಂಭಾರಯತಿ, ಸಂಭಾರಃ (ಯೋಗಕ್ಷೇಮ), ಬಂಗಾಳಿ–ಸಾಮಾಲಾ. ಪಳಿ–ಸಂಭಾರೋ (ಏಕೀಕರಣ, ಪುಂಜ) . . . .ಸಂಪಾಲಯತಿ

ಎಂಬುದರಿಂದ ಸಂಭಾಳಣೇ ಎಂಬುದರ ವ್ಯುತ್ಪತ್ತಿ ಹೆಚ್ಚು ಗ್ರಾಹ್ಯವಾಗಿದೆ). 1. ಯ. ರಾ. ದಾತೆಯವರ 'ಮಹಾರಾಷ್ಟ್ರ ಶಬ್ದಕೋಶ'ದಲ್ಲಿ (1938: ಸಂಪುಟ 7,ಪುಟ. 3024) ಹೀಗೆ ಹೇಳಿದೆ: ಸಂಭಾಳ– . . . . ಅಕರ್ಮಕ ಕ್ರಿಯಾಪದ, ಜಪಣೇ, ಕಾಳಜೀಯೇಣೇ, ಸಾವಧರಾಹಣೇ. 'ಸಂಭಾಳ, ಅಪಥ್ಯ ಕೇರ್ಲೇಸತರ ಕುಖಣೇ ವಾಢೇಲ.' ಇವುಗಳಿಂದ 'ಸಂಭಾಳ' ಶಬ್ದಕ್ಕೆ ಸಂರಕ್ಷಿಸು, ಪಾಲಿಸು, ಯೋಗಕ್ಷೇಮ ನೋಡಿಕೊ, ಒಟ್ಟುಗೂಡಿಸು ಎಂಬ 'ನಿನ್ನನ್ನು ರಕ್ಷಿಕೋ' ಎಂಬುದನ್ನೇ ಹುಷಾರ್! ಜೋಕೆ! ಎಚ್ಚರಿಕೆ!' ಎಂದು ಒಂದು ಮಾತಿನಲ್ಲಿ ಹೇಳುತ್ತೇವೆ. ಈ ಅರ್ಥದಲ್ಲಿ ಮಹಾರಾಷ್ಟ್ರ ಶಬ್ದಕೋಶವು ಒಂದು ಪ್ರಯೋಗವನ್ನು ಮೇಲೆ ಕೊಟ್ಟಿದೆ. ಆ ವಾಕ್ಯಕ್ಕೆ 'ಅಪಥ್ಯ ಮಾಡಿದರೆ ರೋಗ ಹೆಚ್ಚಾದೀತು!' ಎಂದು ಅರ್ಥ> ಈ ಮಾತು ಈ ಅರ್ಥದಲ್ಲಿ ಇಂದಿಗೂ ಮರಾಠಿಗರ ಬಾಯಲ್ಲಿ ಕೇಳ ಬರುತ್ತದೆ. ಇದಕ್ಕೆ ಪೂರಕವಾಗಿ ಒಂದು ವಿಷಯವನ್ನು ಗಮನಿಸಬೇಕು. ಅಸ್ಪೃಶ್ಯರು ಮೇಲು ಜಾತಿಯವರು ಬರುವಾಗ ದಾರಿಯನ್ನು ಬಿಟ್ಟಿರಬೇಕಾಗಿತ್ತು. ಅಸ್ಪೃಶ್ಯವೆಂದರೆ ಸ್ಪರ್ಶಿಸಲಾರದವರು ಎಂಬ ಅರ್ಥ.

ವಿವರಗಳಿಗೆ ನೋಡಿ: ಎ. ಆರ್. ಕೃಷ್ಣಶಾಸ್ತ್ರಿ – ಸಂಬಳಿಗೋಲು (ಲೇಖನ)

ಸಂಶೋಧನೆ

ಸಮ್ಯಕ್ ಶೋಧನೆಯೇ ಸಂಶೋಧನೆ. ಇಂಗ್ಲಿಷಿನಲ್ಲಿ ಇದನ್ನು 'Research' ಎಂದು ಕರೆಯುತ್ತಾರೆ. ಬಹುತೇಕ ವಿದ್ವಾಂಸರು ವಸಾಹತೋತ್ತರ ಸಂದರ್ಭದಲ್ಲಿ ಅಕ್ಷರದ ಅಭ್ಯಾಸ ಪಡೆದಿರುವುದು ಬಹು ದೊಡ್ಡ ಜಾಗೃತಿಯೆಂದು, ಅದು ಬಹುದೊಡ್ಡ ಕ್ರಾಂತಿಯೆಂದು ವಾದಿಸುತ್ತಿದ್ದಾರೆ. ಬ್ರಿಟಿಷರು ಬಂದ ಮೇಲೆ ಅಕ್ಷರ ಜ್ಞಾನ, ಪಡೆದು ಹೊಸ ಅವಕಾಶ ದೊರೆಯಿತು ಎಂತಲೂ ವಾದಿಸುತ್ತಾರೆ. ಬರವಣಿಗೆಯ ಜ್ಞಾನ ಮುಂಚೂಣಿಗೆ ಬಂದುದರ ಪರಿಣಾಮವಿದು. ಬೇರೆ ಬೇರೆ ರೀತಿಯ ಜ್ಞಾನ ಜಗತ್ತು; ಅದರ ಸಾಧ್ಯತೆ ವಸಾಹತುಶಾಹಿ ಜಗತ್ತಿನಲ್ಲಿ ಏಕೀಕೃತಗೊಂಡ 'ಒಂದು ಜ್ಞಾನ'ವೆಂದೂ, 'ಜ್ಞಾನವೆಂದರೆ ಅಧಿಕಾರ' ಎಂದೂ ನಿರ್ವಚನಗೊಂಡುದರ ಪರಿಣಾಮವಿದು. ಶೈಕ್ಷಣಿಕ ವಲಯದ ಸಮವಸ್ತ್ರ ಚಿಂತನೆಯು ಒಂದು ಜ್ಞಾನವನ್ನು ಅಧಿಕೃತವೆಂದು ಕರೆಯಿತು. ಬೇರೆ ಅಂದರೆ ಅಧಿಕಾರಶಾಹಿಗೆ ಉಪಯೋಗಕ್ಕೆ ಬಾರದಿರುವ ಜ್ಞಾನಶಿಸ್ತುಗಳನ್ನು ಅನಧಿಕೃತ ಮತ್ತು ಉಪಯೋಗಕ್ಕೆ ಬಾರದಿರುವ/ಅನಾಗರಿಕ (Uncivilized); ವಿನಿಮಯ ಮೌಲ್ಯವಿಲ್ಲದಿರುವ; ಅವು ಜ್ಞಾನವೇ ಅಲ್ಲವೆಂದು ಕರೆಯಲಾಯಿತು (ಇದನ್ನು ಮುಂದೆ ವಿವರಿಸಲಾಗಿದೆ). ಇದರ ಪರಿಣಾಮವೆಂದರೆ – ಇವುಗಳ ನಡುವೆ ಉಂಟಾದ ಒಂದು ದೊಡ್ಡ ಕಂದಕ. ಈ ಕಂದರದ ದೆಸೆಯಿಂದ ಇನ್ನೊಂದು ಅಧ್ಯಯನವೂ ಸಾಧ್ಯವಾಯಿತು ಎಂದು ಕಾಣುತ್ತದೆ. ಅದು ಅಧಿಕೃತ ಜ್ಞಾನ ಪರಂಪರೆಯಿಂದ ಹೊರಡುವ ಅಧ್ಯಯನ ಪರಿಕರದಿಂದ ಅನಧಿಕೃತ ಜ್ಞಾನ

ಪರಂಪರೆಯನ್ನು ಹುಡುಕುವ ಕ್ರಮ. ಇದು ಮಾನವ ಶಾಸ್ತ್ರ ; ಜಾನಪದ; ಜನಾಂಗಿಕ ಅಧ್ಯಯನಗಳಲ್ಲಿ ಹೆಚ್ಚು ಕಂಡುಬರುತ್ತದೆ. ಇದರಲ್ಲಿ ವಸಾಹತು ಅನುಭವದ ತಿಳುವಳಿಕೆಯ ಭಾಗವಿದೆಯೆಂದು ಅನಿಸುತ್ತದೆ. ಅಂದರೆ : ನಮಗೊಂದು ಸಿದ್ಧ ವೈಚಾರಿಕ ಆಕೃತಿಯಿದ್ದು ; ಆ ಕುತೂಹಲದ ಮೂಲಕ ನಾವು ಬೇರೆ ಬೇರೆ ಸಂಗ್ರಹ ಕಾರ್ಯಗಳಿಗೆ – ನಮ್ಮ ನಮ್ಮ ತಾತ್ವಿಕ ಪ್ರಮೇಯಗಳಿಗೆ ಅನುಸಾರವಾಗಿ ಹೊರಡುತ್ತೇವೆ. ಅಂದರೆ ನಮ್ಮ ಕುತೂಹಲವು ಪೂರ್ವ ಪ್ರಮೇಯಗಳನ್ನು ಆಧರಿಸಿಕೊಂಡು ರಚಿತವಾಗಿರುತ್ತದೆ. ವಸಾಹತು ಪೂರ್ವದ ಜ್ಞಾನ ಪರಂಪರೆ ಅದಕ್ಕೆ ಬೇಕಾದ ಅಧ್ಯಯನ ಕ್ರಮಗಳನ್ನು ರೂಪಿಸಿಕೊಂಡಿದೆ.

ವಿವರಗಳಿಗೆ ನೋಡಿ: ಕನ್ನಡ ಅಧ್ಯಯನ (ಪತ್ರಿಕೆ) ಪುಟ.೪೪, ೪೫

Aijaz Ahmad 1999 In theory

Raymond Williams 1977 Marxism and literature

ಸಂಸ್ಕಾರ

ಸಂಸ್ಕಾರ ಎಂಬ ಸಂಸ್ಕೃತ ಪದವು 'ಕೃ' ಎಂಬ ಮೂಲ ಧಾತುವಿನಿಂದ ಜನಿಸಿ 'ಸಂ' ಎಂಬ ಉಪಸರ್ಗ ಮತ್ತು 'ಘನ್' ಎಂಬ ಅಂತ್ಯ ಪ್ರತ್ಯಯದಿಂದೊಡಗೂಡಿ ಅನೇಕ ಅರ್ಥಗಳಲ್ಲಿ ಬಳಕೆಯಾಗಿದೆ. ವಿವಿಧ ದರ್ಶನಗಳು ಈ ಪದವನ್ನು ವಿವಿಧ ಅರ್ಥಗಳಲ್ಲಿ ಬಳಸಿವೆ. ಮೀಮಾಂಸಕರು 'ಉಜ್ಞಾಹುತಿಯ ಪ್ರೋಕ್ಷಣೆ ಮುಂತಾದ ಕರ್ಮದಿಂದುದಿಸುವ ಗುಣಧರ್ಮ' ಎಂಬುದಾಗಿಯೂ, ಅದ್ವೈತಿಗಳು 'ಶರೀರ ಪ್ರವೃತಿಯಿಂದುದಿಸಿದ ಆತ್ಮದ ಒಂದು ಕೃತಕ ಗುಣಧರ್ಮ'ವೆಂಧೂ, ನೈಯಾಯಿಕರು 'ಅನುಭವಗಳಾಗಿರುವ ಸ್ವಯಂ ಪುನರುತ್ಪತ್ತಿ ಶಕ್ತಿ ಅಥವಾ ಸಾಮರ್ಥ್ಯ'ವೆಂದೂ ಇದನ್ನೂ ಅರ್ಥ ಮಾಡಿಕೊಂಡಿದ್ದಾರೆ. ಪ್ರಮಾಣಭೂತವಾದ ಸಂಸ್ಕೃತ ಸಾಹಿತ್ಯ, ಸಂಸ್ಕಾರವೆಂದರೆ ಶಿಕ್ಷಣ, ತರಬೇತಿ, ಅಭಿವೃದ್ಧಿ, ಶಿಷ್ಟಾಚಾರ, ನೈಪುಣ್ಯ, ವ್ಯಾಕರಣ ಸ್ವಚ್ಛತೆ, ಗುಣವರ್ಧನ, ಒಪ್ಪು ಹಾಕುವುದು, ಅಲಂಕಾರ ಮತ್ತು ಆಭರಣ, ಆಕಾರ, ಮುದ್ರೆ, ಹಸ್ತಕ್ರಿಯೆ, ಪ್ರಭಾವ್; ಜ್ಞಾನ ಸಂಚಯಕ್ಕೆ ಕಾರಣವಾದ ಕ್ರಿಯಾಪ್ರವೃತ್ತಿ, ಪ್ರಾಯಶ್ಚಿತ್ತವಿಧಿ, ಪವಿತ್ರಮಯ ಅನುಷ್ಠಾನ ಮತ್ತು ಆಚಾರ, ದೀಕ್ಷೆ, ಪಾವಿತ್ರ್ಯಗೊಳಿಸುವಿಕೆ ಮತ್ತು ಪ್ರೋಕ್ಷಣೆ, ನಡೆದುಹೋದ ಕಾರ್ಯದ ಫಲ, ಕಾರ್ಯದಿಂದಾದ ಪುಣ್ಯ, ಮುಂತಾದ ಅರ್ಥಗಳಲ್ಲಿ ಬಳಸಿ, ಹಿಂದೂ ಸಂಸ್ಕಾರಗಳು ಕೇವಲ ಸಾಂಪ್ರದಾಯಿಕವಾದ ಶಾರೀರಿಕ ಶುದ್ಧತೆಯೊಂದನ್ನೇ ಗುರಿಯಾಗಿಟ್ಟುಕೊಳ್ಳದೆ, ಪರಿಗ್ರಾಹಕನಲ್ಲಿ ಒಂದು ವಿಶಿಷ್ಟವಾದ ಅರ್ಹತೆಯನ್ನುಂಟುಮಾಡಿ ಅವನ ಪೂರ್ಣ ವ್ಯಕ್ತಿತ್ವವನ್ನು ಪವಿತ್ರಗೊಳಿಸಿ ನೈಪುಣ್ಯ, ಶಿಷ್ಟಾಚಾರವನ್ನೊದಗಿಸುತ್ತವೆಂಬುದನ್ನು ಸೂಚಿಸುತ್ತದೆ. (ಯುಗಯಾತ್ರಿ ಭಾರತೀಯ ಸಂಸ್ಕೃತಿ. ೧೯೭೧. ಪು. ೨೯೧)

ಸಂಸ್ಕಾರ

ಸಂಸ್ಕಾರ ಎನ್ನುವುದಕ್ಕೆ ಈ ಕೆಳಗಿನ ಅರ್ಥಗಳಿವೆ:

೧. (ನಾ) ಲೋಪದೋಷಗಳಿಲ್ಲದಂತೆ ಮಾಡುವಿಕೆ, ತಿದ್ದುಪಾಟು; ಪರಿಷ್ಕರಣ

೨. ಆಲೋಚನೆ, ಭಾವನೆ, ಕಲ್ಪನೆ

೩. ಹಿಂದಿನವನ್ನು ಜ್ಞಾಪಿಸಿಕೊಳ್ಳುವ ಸ್ಮರಣಶಕ್ತಿ, ಸ್ಮರಣೆಗೆ ಕಾರಣವಾದ ಮಾನಸಿಕ ವ್ಯಾಪಾರ, ವಾಸನೆ

೪. ಒಂದು ದೇಶದ ಅಥವಾ ಒಬ್ಬ ವ್ಯಕ್ತಿಯ ಮಾನಸಿಕ ಸಾಧನೆ, ನಾಗರಿಕತೆ

೫. ಸ್ವಭಾವಸಿದ್ಧವಾದ ಗುಣ, ಸಹಜಪ್ರವೃತ್ತಿ

೬ ಪರಂಪರಾನುಗತವಾಗಿ ಬರುವ ವ್ಯಕ್ತಿತ್ವ-ಗುಣ

೭ ಶುದ್ಧಗೊಳಿಸುವುದು ಪವಿತ್ರಗೊಳಿಸುವುದು

೮. ಪವಿತ್ರಗೊಳಿಸುವ ಕಾರ್ಯ (ಜಪ, ಧ್ಯಾನ, ಉಪಾಸನೆ ಮುಂತಾದ)

೯. ಸಿದ್ಧತೆ, ಅಣಿ, ಸಜ್ಜು

೧೦. ನುಣುಪುಗೊಳಿಸುವುದು (ಮೆರಗು ಕೊಡುವುದಕ್ಕಾಗಿ) ಉಜ್ಜುವುದು

೧೧. ಅಲಂಕರಣ; ಪ್ರಸಾಧನ, ಅಲಂಕಾರ

೧೨. ಆಹಾರವನ್ನು ಬೇಯಿಸುವುದು, ಅಡುವುದು

೧೩. ಮುಗಿಸುವಿಕೆ, ಪೂರೈಸುವಿಕೆ

೧೪. ನಾಮಕರಣ, ಮುಂಜಿ ಮುಂತಾದ ಧಾರ್ಮಿಕವಿಧಿ

೧೫. ಸತ್ತವರಿಗೆ ಮಾಡುವ ಅಪರಕರ್ಮ, ಉತ್ತರಕ್ರಿಯೆ

೧೬. ಆತ್ಮನ ನವಗುಣಗಳಲ್ಲಿ ಒಂದು

೧೭. (ದ್ವೈತ) ನಲವತ್ತು ಬಗೆಯ ಗುಣಗಳಲ್ಲಿ ಒಂದು

೧೮. (ಬೌದ್ಧ) ರೂಪ, ವೇದನೆ, ಸಂಜ್ಞೆ, ಸಂಸ್ಕಾರ ಮತ್ತು ವಿಜ್ಞಾನ ಎಂಬ ಐದು ಬಗೆಯ ಸ್ಕಂಧಗಳಲ್ಲಿ ಒಂದು.

ವಿವರಗಳಿಗೆ ನೋಡಿ: ಸುನಿಲ್ ಸಹಸ್ರಬುಧೆ, ಕೆ.ಪುಟ್ಟಸ್ವಾಮಿ(ಅನು) ೨೦೦೩ ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು

ಮಹಾತ್ಮಾಗಾಂಧಿ ೧೯೫೮ ಧರ್ಮ ಮತ್ತು ನೀತಿ ಗಾಂಧೀ ಸ್ಮಾರಕ ನಿಧಿ.

John Gremes 1996 A Concise Dictionary of Indian Philosophy P.176

ಸಿ.ಎನ್. ರಾಮಚಂದ್ರನ್ ೨೦೦೨ ವಸಾಹತೋತ್ತರ ಚಿಂತನೆ

ಸಕಲ ಪಂಡಿತ

ವೇದ, ಸಕಲ ಕಲೆ; ಬಹುಶ್ರುತ ಎಂದರೆ ಎಲ್ಲವನ್ನು ತಿಳಿದವನು(ಬಹುಶ್ರುತನೆಂದರೆ ಸಕಲ ಕಲೆಗಳ ಪಾಂಡಿತ್ಯ; ಸ್ಮೃತಿ, ಆಗಮ, ಶಾಸ್ತ್ರಾದಿಗಳನ್ನು ತಿಳಿದು ಹೇಳುವವನು). ಆಶೀರ್ವಚನ ಅಧಿಕಾರವನ್ನು ಹೊಂದಿದವನು ಅಧಿಕಾರದ ವ್ಯಾಪ್ತಿಯನ್ನು ಅರ್ಥವಿಸಿಕೊಂಡವನು ಸಕಲ ಕಲೆಗಳ ಪಾಂಡಿತ್ಯವನ್ನು ಹೊಂದಿದವನು ಎಂದರ್ಥ. ಸಕಲ ಕಲಾ ವಲ್ಲಭನೆಂದರೆ ಸಕಲ ಕಲೆಗಳಿಗೆ ಗಂಡನ ರೀತಿಯಲ್ಲಿರುವವನು.

ಸಕಳದತ್ತಿ

ಸಕಳದತ್ತಿಯೆಂಬುದು ತನ್ನ ಸಂತತಿಗೆ ಸಂಬಂಧಿಸಿದ ಮಗನಿಗೆ ಗೋತ್ರಜನಿಗೆ ಧರ್ಮ ಮತ್ತು ಧನವನ್ನು ಕೊಡುವುದು ಜೈನ ಪುರಾಣಗಳಲ್ಲಿ ಬರುತ್ತದೆ.

ಸಗೋತ್ರ ಮತ್ತು ಕನ್ಯಾದಾನ

ಬ್ರಾಹ್ಮಣರಲ್ಲಿ 'ಸಗೋತ್ರ' ವಿವಾಹಪದ್ಧತಿಯಿಲ್ಲ. ಗೋತ್ರಗಳನ್ನು 'ಋಷಿ ಪರಂಪರೆಗೆ' ಅನುಸಾರವಾಗಿ ಗುರುತಿಸಲಾಗುತ್ತದೆ. ಉದಾ : ವಸಿಷ್ಠಗೋತ್ರ; ವಿಶ್ವಾಮಿತ್ರ; ಗೌತಮ; ಇತ್ಯಾದಿ. ಮದುವೆಯ ಸಂದರ್ಭದಲ್ಲಿ ಅಳಿಯನ ಪಾದಪೂಜೆಯನ್ನು ಮಾವ (ಹೆಣ್ಣಿನ ತಂದೆ) ಮಾಡುತ್ತಾನೆ. ಮದುವೆಯನ್ನು 'ಕನ್ಯಾದಾನ' ವೆಂದು ಕರೆಯಲಾಗುತ್ತದೆ. ಆದರೆ ಈ 'ಕನ್ಯಾದಾನ' ಎಂಬುದು ಶಾಸ್ತ್ರಕ್ಕೆ ಸಂಬಂಧಿಸಿದ ಹಾಗೆಯೇ (Hypergamy) ಸಂಬಂಧಿಸಿದ್ದು ಎಂದು ಟ್ರಾಟ್‌ಮನ್ ಹೇಳುತ್ತಾರೆ. (ಪ್ರಾಚೀನ ಕನ್ನಡ ಕಾವ್ಯಗಳಲ್ಲಿಯೂ ಈ ರೀತಿಯ ಚಿತ್ರಣಗಳಿವೆ.

ವಿವರಗಳಿಗೆ ನೋಡಿ : Patricia ubroi (ED) 1993. P. 888

Family, kinship and marriage in india

ಸತಿಧರ್ಮ

ಸತಿಧರ್ಮವೆಂದರೆ ಅವಳು ಆಚರಿಸಬೇಕಾದ ರೀತಿ ನೀತಿ.ಪತಿ ಧರ್ಮ, ಸಂಸಾರಧರ್ಮ, ಪುತ್ರಧರ್ಮವೆಂಬ ಪರಿಕಲ್ಪನೆಗಳು ಚಾಲ್ತಿಯಲ್ಲಿದೆ.ಗಂಡನನ್ನೂ ಹಿಂಬಾಲಿಸುವುದು ಸತಿಧರ್ಮ, ತಂದೆ ತಾಯಿಯರನ್ನು ಅವರ ವೃದ್ಧಾಪ್ಯದಲ್ಲಿ ನೋಡಿಕೊಳ್ಳುವುದು ಪುತ್ರಧರ್ಮವೆಂದು ಹೇಳುತ್ತಾರೆ.ಇದರಲ್ಲಿ ಧಾರ್ಮಿಕ ವ್ಯಾಖ್ಯೆಗಳು ಬೇರೆ ಬೇರೆ ಆಗಿರುವುದು ಮುಖ್ಯ ಧರ್ಮವೆಂಬುದು ಸಾಂದರ್ಭಿಕವಾಗಿ ಭಿನ್ನ ಭಿನ್ನವಾಗಿರುವುದನ್ನು ಕಾಣಬಹುದು.

ಸತ್ಕರ್ಮ

ಚಟುವಟಿಕೆಯು ಮನುಷ್ಯನನ್ನು ಸೃಜನಾತ್ಮಕನನ್ನಾಗಿ ಮಾಡುತ್ತದೆ. ಆವಾಗ ನಾವು ಯಾವ ರೀತಿಯ ಚಟುವಟಿಕೆಯಲ್ಲಿ ನಿರತರಾಗಿರುತ್ತೇವೆ ಎಂಬುದು ಬಹಳ ಮುಖ್ಯ. ಚಟುವಟಿಕೆಯು ರಚನಾತ್ಮಕವಾಗಿರಬಹುದು ಇಲ್ಲವೇ ವಿನಾಶಕಾರಿಯಾಗಿರಬಹುದು. ವ್ಯಕ್ತಿಯ ವಿಕಾಸಕ್ಕೆ ಪೋಷಕವಾದ ರಚನಾತ್ಮಕ ಚಟುವಟಿಕೆಗಳನ್ನು ಇಲ್ಲಿ ಕರ್ಮ ಎನ್ನುವುದು. ವಿನಾಶಕಾರಿ ಚಟುವಟಿಕೆಗಳನ್ನು ಶಾಸ್ತ್ರವು ಸಂಪೂರ್ಣವಾಗಿ ಖಂಡಿಸುತ್ತದೆ ಏಕೆಂದರೆ ಅವುಗಳು ವ್ಯಕ್ತಿಯನ್ನು ಕರ್ತವ್ಯ ವಿಮುಖನನ್ನಾಗಿ ಮಾಡುತ್ತವೆ; ಧರ್ಮ ಗ್ರಂಥಗಳಲ್ಲಿ ಅವುಗಳನ್ನು ವಿಕರ್ಮ ಎನ್ನುತ್ತಾರೆ. ರಚನಾತ್ಮಕ ಕ್ರಿಯೆಗಳು (ಕರ್ಮಗಳು) ಮೂರು ಬಗೆ; 'ನಿತ್ಯ' – ನಿರಂತರ ಮಾಡುವ ಕರ್ತವ್ಯಗಳು. 'ಕಾಮ್ಯ' – ಪ್ರತಿಫಲಾಪೇಕ್ಷೆಯಿಂದದೆಸಗುವ ಕೆಲಸಗಳು ಎಂದು ಭಗವದ್ಗೀತೆಯಲ್ಲಿಯೂ ಬರುತ್ತದೆ.

ವಿವರಗಳಿಗೆ ನೋಡಿ: ಶ್ರೀಮದ್ ಭಗವದ್ಗೀತೆ – ಪು. ಸಂ. 141

ಸತ್ಕಾರ

ಅತಿಥಿ ಸತ್ಕಾರ್ಯಕ್ಕೆ ವಿಶೇಷ ಮಹತ್ವವಿದೆ. ಯಾರಾದರೂ ಮನೆಗೆ ಬಂದರೆ ಅವರನ್ನು ಅತಿಥಿಗಳು ಎಂದು ಕರೆಯುತ್ತೇವೆ. ಅತಿಥಿಗಳನ್ನು ಅಭ್ಯಾಗತರು ಎಂದೂ ಕರೆಯುತ್ತಾರೆ. ರೂಢಿಯಲ್ಲಿ ಮನೆಗೆ ಅತಿಥಿಗಳಿಗೆ ಕಾಲು ತೊಳೆಯಲು ನೀರನ್ನು ಕೊಟ್ಟು, ಅನಂತರ ಅವರನ್ನು ಮನೆಯೊಳಗೆ ಕರೆತರುತ್ತೇವೆ. ಹಾಗೆಯೇ ಅವರಿಗೆ ದಾಹ ಇಂಗಿಸಲು ನೀರನ್ನು ಕೊಟ್ಟು ಅನಂತರ ಕುಶಲೋಪರಿ ನಡೆಸುತ್ತೇವೆ. ಅವರ ಸುಖದುಃಖ ವಿಚಾರಿಸಿ. ಅನಂತರ ಅವರನ್ನು ಸತ್ಕರಿಸುತ್ತೇವೆ. ಹಿಂದಿನ ಕಾಲದಲ್ಲಿ ಅವರಿಗೆ ಮಧು ಪರ್ಕಾದಿಗಳನ್ನು ಕೊಟ್ಟು ಸತ್ಕರಿಸುತ್ತಿದ್ದರು. ಅತಿಥಿಗಳನ್ನು ದೇವರ ಸಮಾನ ಎಂದೂ ಕರೆಯುತ್ತಿದ್ದರು. ಅತಿಥಿ ದೇವೋಭವ. ಅಂದರೆ ಅತಿಥಿಗಳು ದೇವರಿಗೆ ಸಮಾನ. ಅವರನ್ನು ಮನೆಯಿಂದ ಹೊರಡುವಾಗಲು ಅವರನ್ನು ಸತ್ಕರಿಸಿ ಬೀಳ್ಕೊಡುವುದು ಕ್ರಮ.

. ಮನೆಗೆ ಬಂದ ಅತಿಥಿಯು ಪಾಪಿಷ್ಠನಾದರೆ ತನ್ನ ಪಾಪವನ್ನು ಮನೆಯವನಿಗೆ ಕೊಟ್ಟು, ಮನೆಯವನ ಪುಣ್ಯವನ್ನು ಅವನು ಕೊಂಡೊಯ್ಯುತ್ತಾನೆ. ಮನೆಗೆ ಬರುವ ಅತಿಥಿಯು ಸದ್ಗುಣವನ್ನು ಹೊಂದಿರಬೇಕು. ಅವನು ಸದ್ಗುಣವಂತನಲ್ಲವಾದರೆ ಗೃಹಸ್ಥನಿಗೆ ತೊಂದರೆ, ಅವನು ತನ್ನ ಪಾಪದ ಬೀಜವನ್ನು ಗೃಹಸ್ಥನ ಮನೆಯಲ್ಲಿ ಬಿತ್ತಿ ಹೋಗುತ್ತಾನೆ. ಅತಿಥಿಯೆಂದರೆ ಅವನು ಗೃಹಸ್ಥನ ಮನೆಯಲ್ಲಿ ಹೇಗೆ ವ್ಯವಹರಿಸಬೇಕೆಂಬುದನ್ನು ತಿಳಿದಿರಬೇಕು.ಇದು ನಮ್ಮಲ್ಲಿ ಚಾಲ್ತಿಯಲ್ಲಿರುವ ನಂಬಿಕೆಯಾಗಿದೆ.

ಸತ್–ಚಿತ್ ವಿಶ್ವ

ಈ ಸತ್, ಚಿತ್ತೂ ಹೌದು. ಪರಸತ್ಯವು ಸತ್ ಮತ್ತು ಚಿತ್. ವಿಶ್ವವನ್ನು ಬೆಳಗುವ ಚಿತ್‌ಜ್ಯೋತಿಯೇ ಬ್ರಹ್ಮ. "ಅದು ಶುದ್ಧ ಚಿತ್, ಸ್ವಾಧೀನ ಸತ್ತಾಕ, ಅತ್ಯಂತ ಸ್ವತಂತ್ರ ಮತ್ತು ನಾಶರಹಿತ. ಆತ್ಮದ ಚಿತ್ ಸ್ವರೂಪದ ವಿಷಯದಲ್ಲಿ ಮಾತ್ರ ಅಸಂದಿಗ್ಧ ನಿಶ್ಚಯವಿದೆ. ಉಳಿದ ಯಾವ ವಸ್ತುವನ್ನಾದರೂ ನಾವು ಸಂದೇಹಿಸಬಹುದು ಅಥವಾ ಇಲ್ಲಗಳೆಯಬಹುದು. ವೇದಾಂತದಲ್ಲಿ ಈ ವಿಷಯಗಳು ಪ್ರಸ್ತಾವಿತವಾಗಿವೆ.

ವಿವರಗಳಿಗೆ ನೋಡಿ: ರಾಧಾಕೃಷ್ಣನ್ 1970 ಪುಟ.292

ಸತ್ಪಥ

ಚಾರಣ ಮುನೀಂದ್ರ: ಸಂಚಾರಿಯಾದ ಮುನಿ. ಸತ್ಪಥ: ಒಳ್ಳೆಯ ದಾರಿ. ಇಲ್ಲಿ ಸನ್ಮಾರ್ಗ ಎಂಬರ್ಥ. ನನ್ನಿ ಮಾಡುವಂತೆ: ಸತ್ಯಮಾಡುವಂತೆ. ಸತ್ಪಥಾತಿಥಿ: ಸನ್ನಡತೆಯ ಅತಿಥಿಗಳು. ಜೈನಧರ್ಮದಲ್ಲಿ ಮಾತ್ರ ಚಾರಣ ಮುನೀಂದ್ರರ ಪರಿಕಲ್ಪನೆಯಿದೆ. ಸಂಚಾರಿಯಾಗಿರುವ ಮುನಿಗಳು ಜನರನ್ನು ಸತ್ಪಥಕ್ಕೆ ಕರೆದೊಯ್ಯುತ್ತಿದ್ದರು. ಇಲ್ಲಿ ಮುನಿಗಳ ಸಂಚಾರವೆನ್ನುವುದು ಮುಖ್ಯ. ವೈದಿಕ ಧರ್ಮದ ಋಷಿಗಳು; ಮುನಿಗಳು; ಸನ್ಯಾಸಿಗಳು ತಮ್ಮ ಆಶ್ರಮದಲ್ಲಿ ವಾಸವಾಗಿರುವ ಕಲ್ಪನೆಗಳಿವೆ. ಆಯಾ ವಂಶಗಳಿಗೆ ಬೇರೆ ಬೇರೆ ರಾಜಗುರುಗಳಿದ್ದು ಅವರು ರಾಜರಿಗೆ ಮಾರ್ಗದರ್ಶನ ಮಾಡುವುದು ಕೂಡಾ ಇದೆ. ಉದಾ: ವಸಿಷ್ಠ ಋಷಿಯಾದರೂ ಸೂರ್ಯವಂಶದ ಕುಲಗುರು.

ಸತ್ಯಾಗ್ರಹ

ಸತ್ಯಾಗ್ರಹ ಅಂದರೆ ಸತ್ಯಕ್ಕಾಗಿ ಆಗ್ರಹ. ವಿಕೇಂದ್ರಿಕರಣವೆಂದರೆ ಅಧಿಕಾರ: ಆರ್ಥಿಕತೆಯನ್ನು ಕೇಂದ್ರೀಕರಿಸುವುದಲ್ಲ–ವಿಕೇಂದ್ರಿಕರಿಸುವುದು. ಗೃಹಕೈಗಾರಿಕೆಯೆಂದರೆ –ದೊಡ್ಡ ದೊಡ್ಡ ಕೈಗಾರಿಕೆಗಳ ವಿರೋಧ ಮತ್ತು ಸ್ವಾವಲಂಬನೆಯ ದಾರಿ. ನಿಶಸ್ತ್ರೀಕರಣವೆಂದರೆ ಶಸ್ತ್ರವನ್ನು ತ್ಯಜಿಸುವುದು. ವರ್ಧಾ ಶಿಕ್ಷಣ ಯೋಜನೆಯೆಂದರೆ ತಿಳುವಳಿಕೆಯ ಶಿಕ್ಷಣ ಪದ್ಧತಿ. ಗ್ರಾಮ ಸ್ವರಾಜ್ಯವೆಂದರೆ–ಗ್ರಾಮಗಳಿಗೆ ಸ್ವಾಯತ್ತತೆ. ಗಾಂಧಿಯವರ ಈ ವಿಚಾರಗಳು ಗಮನಾರ್ಹವಾಗಿವೆ. ಈ ವಿಚಾರಧಾರೆಯು ವಸಾಹತು ಸಂದರ್ಭದಲ್ಲಿ ಎಷ್ಟು ಮುಖ್ಯವಾಗುತ್ತೋ ಜಾಗತೀಕರಣದ ಸಂದರ್ಭದಲ್ಲಿಯೂ ಅಷ್ಟೇ ಮುಖ್ಯವಾಗಿದೆ. ಮಗನ್ ಲಾಲ್ ಗಾಂಧಿ ಮೊದಲು ಸತ್ + ಆಗ್ರಹ ಎಂಬ ಪದವನ್ನು ಬಳಸಿದ್ದರು ಅನಂತರ ಇದಕ್ಕೆ ಸತ್ಯಾಗ್ರಹ ಎಂದು ಚಾಲ್ತಿಗೆ ತರಲಾಯಿತು.

ವಿವರಗಳಿಗೆ ನೋಡಿ: ಸುನಿಲ್ ಸಹಸ್ರಬುಧೆ, ಕೆ.ಪುಟ್ಟಸ್ವಾಮಿ(ಅನು) ೨೦೦೩ ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು
ಮೋ.ಕ.ಗಾಂಧಿ ೧೯೬೭ ಜೀವನ ಶಿಕ್ಷಣ, ಗಾಂಧೀ ಸ್ಮಾರಕ ನಿಧಿ,

ಕೆ.ವಿ.ಸುಬ್ಬಣ್ಣ(ಅನು) ಗಾಂಧಿ ಬರಹಗಳ ಸಂಕಲನ ೧೯೯೮
ಸ್ವರಾಜ್ಯದ ಹಾದಿ ಹೆಜ್ಜೆಗಳು
ಗ.ಪ್ರ.ಪ್ರಧಾನ ೧೯೯೪, ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ
ಶ್ರೀಮನ್ ನಾರಾಯಣ ೨೦೦೧ ಮಹಾತ್ಮಗಾಂಧಿಯವರ ಆಯ್ದ ಕೃತಿಗಳು(೩)
ಕನ್ನಡಿಗರಿಬ್ಬರು ೨೦೦೧ ಸತ್ಯಶೋಧನೆ
ರಂ.ರಾ.ದಿವಾಕರ ೧೯೮೫ ಸತ್ಯಾಗ್ರಹ

ಸನ್ಮತಿ

ಸನ್ಮತಿಯೆಂದರೆ ಒಳ್ಳೆಯ ಮನಸ್ಸು, ಯಾವುದೇ ಮನೋ ವಿಕಾರವಿಲ್ಲದಿರುವ ಮನೋಸ್ಥಿತಿಯನ್ನು ಸನ್ಮತಿಯೆಂದು ಕರೆಯುತ್ತಾರೆ. ವ್ಯಾವಹಾರಿಕ ಮಾತಿನಲ್ಲಿಯೂ ಮೈ ಮನಸ್ಸು ಶುದ್ಧವಾಗಿರಬೇಕು ಎಂಬ ಪರಿಕಲ್ಪನೆಯಿದೆ. ಶುದ್ಧ ಮನೋಸ್ಥಿತಿಯೆಂದರೆ ಮಲಿನವಾಗದ ಮನೋಸ್ಥಿತಿ. ಇದರಲ್ಲಿ ವಂಚನೆಯು ಇರುವುದಿಲ್ಲ. ಮತಿಯು ಶುದ್ಧವಾಗಿದ್ದು ಸಾಧನೆಗೆ ತೊಡಗಿದರೆ ಸಾಧನಾ ಫಲ ದೊರೆಯುತ್ತದೆಯೆಂಬ ನಂಬಿಕೆಯಿದೆ.ಗಾಂಧಿಯವರು ಮತ್ತೆ ಮತ್ತೆ ಬಳಸುತ್ತಿದ್ದ "ಸಬ್ ಕೋ ಸನ್ಮತಿ ತೇ ಭಗವಾನ್ "ಎನ್ನುವ ಮಾತುಗಳು ಇಲ್ಲಿ ಗಮನಾರ್ಹ.

ಸಪ್ತಗುಣ

ಸಪ್ತವೆಂದರೆ ಏಳು. ಜೈನಧರ್ಮ ಮನುಷ್ಯರಲ್ಲಿ ಇರಬೇಕಾದ ಸಪ್ತಗುಣವನ್ನು ಹೀಗೆಯೇ ವಿವರಿಸುತ್ತದೆ: ಶ್ರದ್ಧಾ, ಶಕ್ತಿ, ಭಕ್ತಿ, ವಿಜ್ಞಾನ, ಅಲುಬ್ಧತೆ, ಕ್ಷಮಾ, ತ್ಯಾಗ–ಈ ಏಳು ದಾನಮಾಡುವವನ ಗುಣಗಳು.

ಸಮ್ಯಗ್ದರ್ಶನದಿಂದ ಶುದ್ಧವಾಗಿರುವವನು. ಉತ್ತಮವಾದ ಕರ್ಮವುಳ್ಳವನು, ಒಳ್ಳೆಯ ಶೀಲಕ್ಕೂ ಗುಣಕ್ಕೂ ಮನೆಯಾಗಿರುವವನು, ಪ್ರಯತ್ನದಲ್ಲಿ ಆಸಕ್ತಿಯುಳ್ಳವನು ಗುರುಭಕ್ತನು, ಪ್ರವಚನದಲ್ಲಿ ಕುಶಲವಾಗಿರುವವನು ಪಾಂಡಿತ್ಯವುಳ್ಳವನನ್ನು ಸಪ್ತ ಗುಣವುಳ್ಳವನೆಂದು ಕರೆಯುತ್ತಾರೆ. ಈ ಸಪ್ತ ಗುಣಗಳ ನಂಬಿಕೆಯು ಜೈನ ಧರ್ಮದಲ್ಲಿ ವಿಶೇಷವಾಗಿದೆಯೆನ್ನುವುದು ಇಲ್ಲಿ ಗಮನಾರ್ಹವಾಗಿದೆ.

ಸಪ್ತಾಂಗ

ಸ್ವಾಮಿ, ಅಮಾತ್ಯ, ಸುಹೃತ, ಕೋಶ, ರಾಷ್ಟ್ರ, ದುರ್ಗ, ಬಲ ಎಂಬ ರಾಜ್ಯದ ಈ ಏಳು ಅಂಗಗಳು. ಮಂತ್ರಿ ಪರಿಷತ್ತಿನಲ್ಲಿ ಹನ್ನೆರಡು ಜನರು ಇರಬೇಕೆಂದು ಮನುಶಿಷ್ಯರ ಮತ. ಹದಿನಾರು ಎಂದು ಬೃಹಸ್ಪತಿ ಶಿಷ್ಯರು ಹೇಳುತ್ತಾರೆ. ಇಪ್ಪತ್ತು ಜನರಿರಬೇಕೆಂದು ಶುಕ್ರಶಿಷ್ಯರು. ಕೌಟಿಲ್ಯ ಮಾತ್ರ ಮಂತ್ರಿ ಸಂಖ್ಯೆಯ ನಿಗದಿಯು ಮಂತ್ರಾಲೋಚನೆಯಲ್ಲಿ ತೊಡಗುವ ಜನರ ಸಾಮರ್ಥ್ಯ ಅವಲಂಬಿಸಿದೆ ಎಂದೆನ್ನುವನು.

ಅಜ್ಜ–ಮುತ್ತಜ್ಜರಾದಿಯಾಗಿ ಹಿತಚಿಂತಕರಾದವರು, ಶಾಸ್ತ್ರಜ್ಞರು, ಶೂರರು, ಶಸ್ತ್ರಾಸ್ತ್ರ ನಿಪುಣರು, ಸತ್ಕುಲ ಪ್ರಸೂತರು ಆದವರನ್ನು ಯೋಗ್ಯರೆಂದು ಕಂಡುಕೊಂಡು ಏಳುಮಂದಿ ಮಂತ್ರಿಗಳನ್ನು ನಿಯಮಿಸಬೇಕು ಮನು ಹೇಳುತ್ತಾನೆ. ಕೌಟಿಲ್ಯನ ಪ್ರಕಾರ ಸಪ್ತಾಂಗಗಳಲ್ಲಿ ಮಂತ್ರಿಯೇ ಮುಖ್ಯ. ವೇದಗಳ ಕಾಲದಲ್ಲಿ ಪುರೋಹಿತನಿಗೆ ರಾಜಕೀಯದಲ್ಲಿ ಮುಖ್ಯ ಪಾತ್ರವಿತ್ತು. ಕೌಟಿಲ್ಯನ ಅರ್ಥಶಾಸ್ತ್ರದ ಸಪ್ತಾಂಗಗಳಲ್ಲಿ ಅವನನ್ನು ಸೇರಿಸಿಲ್ಲ. ಮಂತ್ರಿ ಮಂಡಲಕ್ಕೆ ಅರ್ಥಶಾಸ್ತ್ರದಲ್ಲಿ ಪರಿಷತ್ತು ಎಂದು ನಮೂದಿಸಿದೆ. ಪ್ರಧಾನಮಂತ್ರಿ, ಪುರೋಹಿತ, ಸೇನಾಪತಿ, ಯುವರಾಜ ಇವರುಗಳಿಂದ ಕೂಡಿದ ಒಳಮಂಡಲ ದೌವಾರಿಕ, ಅಂತರ್ವಂಶಿಕ, ಪ್ರಾಶಾಸ್ತ್ರ, ಸಮೂಹರ್ತಾ, ಸನ್ನಿಧಾತಾ, ಪ್ರದೇಷ್ಟಾ ಮತ್ತು ಇತರ ಅಮೂತ್ಯರಿಂದ ಕೂಡಿದ ಹೊರಮಂಡಲ.

ವಿವರಗಳಿಗೆ ನೋಡಿ: R. P. Kangle 1965 The kautiliya Artha sastra (part-3) P. 194-215

ಎಂ. ವಿ. ಕೃಷ್ಣರಾವ್ 1953 ಕೌಟಿಲ್ಯ ಪುಟ. 20

ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 7–54

ಸಬಳ

ಇದು ಈಟಿಯಂತಹುದೇ ಆಯುಧ. (ಆದರೆ ಈಟಿಯ ಮೊನೆಯಭಾಗದಲ್ಲಿ ಅಡ್ಡಲಾಗಿ ಇನ್ನೊಂದು ಮೊನೆಯಾದ ಭಾಗವನ್ನು ಸಿಕ್ಕಿಸುತ್ತಿದ್ದರು) ಇದು ವಿಶೇಷವಾಗಿ ಕೋಟೆಕಾಳಗದಲ್ಲಿ ಉಪಯೋಗವಾಗುತ್ತಿದ್ದಂತೆ ಕಾಣುತ್ತದೆ. ವಿಶೇಷವಾಗಿ ಕೋಟೆಕಾಳಗದ ಶಿಲ್ಪವಿರುವ ಲಕ್ಷ್ಮೇಶ್ವರ, ಎಲೇಬೇತೂರು, ಹಾನುಗಲ್ಲುಗಳಲ್ಲಿನ ವೀರಗಲ್ಲುಗಳಲ್ಲಿ ಇದರ ಚಿತ್ರವನ್ನು ಗಮನಿಸಬಹುದಾಗಿದೆ. ಇದು ಮನುಷ್ಯನ ಸಾಮಾನ್ಯ ಎತ್ತರಕ್ಕಿಂತ ಉದ್ದವಿದ್ದು ಕೋಟೆಯ ಮೇಲಿನ ವ್ಯಕ್ತಿಗಳನ್ನು ತಿವಿಯಲು ಅನುಕೂಲವಾಗಿತ್ತು ಎಂದು ತೋರುತ್ತದೆ.

ಸಮತ್ವ

ಒಂದು ಸಮಾಜದ ಪ್ರತಿಯೊಬ್ಬ ಮನುಷ್ಯನು ಮುಕ್ತವಾಗಿ ಅಭಿವೃದ್ಧಿ ಹಾಗೂ ತನ್ನ ಹಿತಾಸಕ್ತಿಯನ್ನು ಸಾಧಿಸಿಕೊಳ್ಳಬೇಕಾದರೆ ಅಲ್ಲಿ ಸಮತಾಭಾವ ಬೇಕು. ಸಮಾಜದಲ್ಲಿ ಪ್ರತಿಯೊಬ್ಬ ಪ್ರಜೆಯೂ ಸಮಾನ ಅವಕಾಶವನ್ನು ಪಡೆಯಬೇಕು. ಈ ಸ್ಥಿತಿಯು ಎಲ್ಲಾ ರೀತಿಯ ಚಾರಿತ್ರಿಕ ಸನ್ನಿವೇಶಗಳಲ್ಲಿ ಜನರಿಗೆ ದೊರೆಯುವುದಿಲ್ಲ. ಜಮೀನುದಾರಿ ಪದ್ಧತಿಯಲ್ಲಿ ಸಮತಾಭಾವ ಇರುವುದಿಲ್ಲ. ಜಮೀನುದಾರ ಮತ್ತು ಆಳಿನ ನಡುವೆ ಆರ್ಥಿಕ ಸಂಬಂಧಗಳು ಬೇರೆಯಾಗಿರುತ್ತವೆ. ಜಮೀನುದಾರ ಶ್ರೀಮಂತನಾಗಿದ್ದರೆ ಆಳು ಬಡವನಾಗಿರುತ್ತಾನೆ. ಬಂಡವಾಳವಾದದಲ್ಲಿಯೂ ಆರ್ಥಿಕ ಅಸಮಾನತೆಯಿರುವ ಕಾರಣದಿಂದ ಸಮತಾಭಾವ ಇರಲು ಸಾಧ್ಯವಿಲ್ಲ. ಬಂಡವಾಳವಾದವು

ಅಭಿವೃದ್ಧಿಯೆಂದರೆ ಆರ್ಥಿಕ ಮುನ್ನಡೆಯೆಂದು ಕರೆಯುತ್ತದೆಯೇ ಹೊರತು ಮನುಷ್ಯರ ನಡುವೆ ಸರಿಸಮಾನ ಹಂಚುವಿಕೆಯನ್ನು ಅದು ಗಮನಕ್ಕೆ ತಂದುಕೊಳ್ಳುವುದಿಲ್ಲ. ಅದಕ್ಕೆ ವ್ಯಕ್ತಿಯೊಬ್ಬನ ಆದಾಯ ಮಾತ್ರ ಮುಖ್ಯ. ಇದನ್ನು ತಲಾ ಆದಾಯ ಎಂದು ಕರೆಯುತ್ತಾರೆ. (Per Capita Income) ಬೂರ್ಜ್ವಾ ಪ್ರಜಾಪ್ರಭುತ್ವವು ಕೂಡಾ ಸಮಾನ ಆರ್ಥಿಕ ಹಂಚುವಿಕೆಯನ್ನು ಆಧರಿಸಿಕೊಂಡಿಲ್ಲ. ಪ್ರಜಾಪ್ರಭುತ್ವ ಆಸ್ತಿ ಹಂಚಿಕೆಯ ವಿಧಾನವು ಸರಿಯಾಗಿ ಇಲ್ಲದ ಕಾರಣ ಅಲ್ಲಿ ರೈತರ ಮತ್ತು ಭೂಮಾಲೀಕರ ನಡುವೆ ಅಗಾಧ ಅಂತರವಿರುತ್ತದೆಯೆಂದು ಲೆನಿನ್ ಹೇಳುತ್ತಾರೆ.

ಸಮತಾಭಾವ ಬಾರದಿರುವುದಕ್ಕೆ ಮತ್ತೊಂದು ಕಾರಣವಿದೆ– ಲಿಂಗ ತಾರತಮ್ಯ; ಜನಾಂಗ ನೀತಿ; ಜಾತಿ ವೈಷಮ್ಯ; ಮತ್ತು ವರ್ಗ ವ್ಯತ್ಯಾಸಗಳು. ಸಮತಾಭಾವ ಬರಬೇಕಾದರೆ ಇವುಗಳನ್ನು ತೊಡೆದು ಹಾಕಬೇಕು. ಮತ್ತೊಂದು ಪ್ರಮುಖ ಕಾರಣವೆಂದರೆ ಖಾಸಗಿ ಒಡೆತನ, ಖಾಸಗಿ ಒಡೆತನವು ಶೋಷಣೆಗೆ ಕಾರಣವಾಗುತ್ತದೆ. ಈ ಎಲ್ಲಾ ಅಂಶಗಳ ನಿರ್ಮೂಲನೆಯಿಂದ ಮಾತ್ರ ಸಮತಾಭಾವವು ಸಾಧ್ಯ.

ವಿವರಗಳಿಗೆ:

Progress Publishes 1980 A Dictionary Scientific Communism P.85-89. 234, 235

Raymond Williams 1983 keywords P.119

Andrew Edgar 1998 key concepts in cultural theory P.364-365

ವಿ.ಐ.ಲೆನಿನ್ ೧೯೮೮, ೧೯೮೯ ಲೆನಿನ್ ಆಯ್ದ ಕೃತಿಗಳು ಸಂಪುಟ.೩, ಸಂಪುಟ 2 ಪುಟ.145

ಸಮದತ್ತಿ

ತನ್ನಲ್ಲಿ ಸಮದತ್ತಿಯೆಂದರೆ ಸರಿಸಮಾನನಾದವನು. ತನ್ನೊಳ್ ಸಮಕ್ರಿಯಾ ಮಂತ್ರನೆಂದರೆ ತನಗೆ ಸರಿಸಾಟಿಯಾದವನು. ವಿಸ್ತಾರಕೋತ್ತಮಂಗೆ ಎಂದರೆ – ತನ್ನ ಶ್ರೇಯಸ್ಸನ್ನು ಚಿಂತಿಸುವವನು. ಅಂಥವನಿಗೆ ಕನ್ಯೆ, ಭೂಮಿ, ಸುವರ್ಣ, ಆನೆ; ಕುದುರೆ; ರಥರತ್ನಗಳನ್ನು ಕೊಡುವುದು.

ಸಮದೃಷ್ಟಿ

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನ: ॥29॥

'ಜ್ಞಾನಿಯಾದ ಈತನು ಎಲ್ಲೆಲ್ಲಿಯೂ ಆತ್ಮನನ್ನೇ ಕಾಣುತ್ತಾನೆ. ಮತ್ತು ಆತ್ಮನಲ್ಲೇ ಎಲ್ಲವನ್ನೂ ಕಾಣುತ್ತಾನೆ; ಅವನು ಸಮದೃಷ್ಟಿಯನ್ನು ಪಡೆದವನು'. (ಶ್ರೀಮದ್ ಭಗವದ್ಗೀತೆ – ಪು. ಸಂ. 217)ಸಮದೃಷ್ಟಿಯು ಒಬ್ಬ ವೇದಾಂತಿಗೆ ಸಾಧ್ಯ.

ಸಮರಥಿ

ಕೌರವ, ಶಲ್ಯರಾಜ, ಸೋಮದತ್ತ, ಕೃಪ, ಕೃತವರ್ಮ ಮತ್ತು ಶಕುನಿ – ಈ ಆರು ಜನರನ್ನು ಸಮರಥರು ಎಂದು ಕರೆಯುತ್ತಾರೆ. ತನಗೆ ಸಮಾನರಾದವರೊಂದಿಗೆ ಕಾದಾಡುವವರನ್ನು (ಅದು ರಥದಲ್ಲಿ ನಿಂತು ಕೊಂಡು) ಸಮರಥರು ಎಂದು ಕರೆಯುತ್ತಾರೆ. ಸಮರಥರು ಅರ್ಧರಥರಿಗಿಂತ ಕೆಳದರ್ಜೆಯವನಾಗಿರುತ್ತಾನೆ. ಒಮ್ಮೆಗೆ ಒಬ್ಬನನ್ನಷ್ಟೇ ಎದುರಿಸಿ ಕಾದಾಡಬಲ್ಲಾತನು ಸಮರಥಿಯಾಗಿರುತ್ತಾನೆ.

ವಿವರಗಳಿಗೆ ನೋಡಿ : ಅತಿರಥ, ಅರ್ಧರಥ, ಮಹಾರಥ

ಸಮಷ್ಟಿಪ್ರಜ್ಞೆ

ಸಮಷ್ಟಿ ಪ್ರಜ್ಞೆಯೆಂದರೆ ಮನುಷ್ಯ ಕೇಂದ್ರಿತ ಸಂಸ್ಕೃತಿಯ ಸಮಗ್ರೀಕರಣ, ಇದರಲ್ಲಿ ವ್ಯಕ್ತಿಯ ಪ್ರಜ್ಞೆಯು ಮುಖ್ಯವಲ್ಲ. ಡರ್ಕೆಮ್, 'ಸಮಷ್ಟಿ ಪ್ರಜ್ಞೆಯೆಂದರೆ ನಿರ್ದಿಷ್ಟ ಪ್ರಜ್ಞೆ, ಆದರೆ ಅದು ಜಾಗತಿಕ ವಿದ್ಯಮಾನದ ಪರಿವರ್ತನೆಗಳಿಂದ ಆಧಾರಿತವಾದುದು' ಎಂದು ಹೇಳುತ್ತಾನೆ. ಇದು ಸಮಾಜ ಕೇಂದ್ರಿತವಾದುದು, ವ್ಯಕ್ತಿಕೇಂದ್ರಿತವಾದುದಲ್ಲ. ಒಬ್ಬ ವ್ಯಕ್ತಿಯ ಅಭಿವೃದ್ಧಿಯೆನ್ನುವುದು ಇವರಲ್ಲಿ ಮುಖ್ಯವಲ್ಲ. ಇಡಿಯ ಸಾಮಾಜಿಕ ಅಥವಾ ಸಮಷ್ಟಿಯ ಪ್ರಜ್ಞೆಯೇ ವ್ಯಕ್ತಿಯನ್ನು ನಿರ್ದೇಶಿಸಬಲ್ಲುದೇ ಹೊರತು ವ್ಯಕ್ತಿಯ ಪ್ರಜ್ಞೆಯು ಸಮಾಜವನ್ನು ನಿರ್ದೇಶಿಸಲಾರದು. ಧಾರ್ಮಿಕತೆಯ ಆಚಾರ– ವಿಧಿವಿಧಾನಗಳು, ಧರ್ಮದ ಬಗೆಗಿನ ನಂಬಿಕೆಗಳು ವಿಶ್ವಾತ್ಮಕವಾದುದು. ಸಮಷ್ಟಿ ಪ್ರಜ್ಞೆಯೆನ್ನುವುದು ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಮೀರಿದ್ದು, ಸಮಷ್ಟಿ ಪ್ರಜ್ಞೆಯೇ ಉನ್ನತಿಗೆ ಏರಬೇಕು ಎಂದು ವಿಶ್ವಾತ್ಮಕತೆಯ ರೂಪಕವಾಯಿತು.

ಸಮಷ್ಟಿಯೆಂದರೆ ವ್ಯಷ್ಟಿಯಿಂದ ಭಿನ್ನವಾದುದು. ವ್ಯಷ್ಟಿಯೆಂದರೆ ಏಕಾಂತದ ಭಾವನೆ. ಅದು ಸಮೂಹ ನಿಷ್ಠವಾದುದಲ್ಲ. ಸಮಷ್ಟಿಯು ಸಕಲಕ್ಕೆ ಸಂಬಂಧಿಸಿದ್ದು. ವ್ಯಷ್ಟಿಯು ಸಮಷ್ಟಿಯ ಸಾಧನೆಗಾಗಿ ಬೇಕಾದುದು ಎಂದು ತಿಳಿದವರು ವಿವೇಕಾನಂದರು. ಇಂಗ್ಲಿಷಿನಲ್ಲಿ ಸಮೂಹವೆಂದರೆ Collective ಎಂದು ಕರೆಯುತ್ತಾರೆ. Collect ಎಂದರೆ ಸಂಗ್ರಹಿಸು ಎಂದರ್ಥ. ಫ್ರೆಂಚ್ ಭಾಷೆಯಲ್ಲಿ ಕಲೆಕ್ಟರ್ ಅಂದರೆ ತೆರಿಗೆಯನ್ನು ಸಂಗ್ರಹಿಸುವವನು ಎಂಬ ಅರ್ಥವಿದೆ. ಇದರ ಮೂಲವ್ಯುತ್ಪತ್ತಿ "ಕಲೆಕ್ಟಸ್" ಎಂದರೆ ಒಟ್ಟು ಸೇರು.

ವಿವರಗಳಿಗೆ ನೋಡಿ: Raymond Williams 1983 keywords P.69

ಸುಕುಮಾರ್ ಅಟಿಕ್ಕೋಡ್ ವಿ.ಗೋಪಾಲಕೃಷ್ಣ (ಅನು) ೨೦೦೫ ತತ್ವಮಸಿ

ಸಮಾಜ ಗೌರವ

ಸಮಾಜಗೌರವವೆಂದರೆ ಒಂದು ಸಮಾಜವು ನೀಡುವ ಸ್ಥಾನಮಾವಗಳಿಗೆ ಸಂಬಂಧಿಸಿದೆ. ಸಾರ್ವಜನಿಕವಾಗಿ ಒಬ್ಬ ವ್ಯಕ್ತಿಯನ್ನು ಒಂದು ಸಮಾಜವು ಮೇಲು–

ಕೀಳು ಎಂಬ ಪ್ರಭೇದಗಳ ಮೂಲಕ ಗುರುತಿಸುತ್ತದೆ. ವರ್ಗ ಕೇಂದ್ರಿತ ಸಮಾಜದಲ್ಲಿ ಮೇಲುವರ್ಗದ ವ್ಯಕ್ತಿಯು ಪಡೆಯುವ ಗೌರವ ಸಾಮಾಜಿಕ ಗೌರವವೆಂದು ಪರಿಗಣಿತವಾಗಿದೆ. ಧರ್ಮಕೇಂದ್ರಿತ ಸಮಾಜದಲ್ಲಿ ದೇವಸ್ಥಾನದ ಪೂಜಾರಿಗಳು ಸಾಮಾಜಿಕ ಗೌರವ ಪಡೆಯುತ್ತಾರೆ. ಜಾತಿ ಕೇಂದ್ರಿತ ಸಮಾಜದಲ್ಲಿ ಮೇಲುಜಾತಿಯವರಿಗೆ ಈ ಸ್ಥಾನಮಾನವು ದೊರೆಯುತ್ತದೆ. ರಾಜಕಾರಣದಲ್ಲಿ ಯಾರು ಅಧಿಕಾರ ಸೂತ್ರ ಹಿಡಿದಿರುತ್ತಾರೋ ಅವರಿಗೆ ಈ ಸ್ಥಾನಮಾನವು ದೊರೆಯುತ್ತದೆ. ಹಾಗೆಯೇ ಸಾಮಾಜಿಕ ಗೌರವಕ್ಕೂ, ಜೀವನ ಕ್ರಮಕ್ಕೂ ಸಂಬಂಧವಿರುತ್ತದೆ. ಸಾಮಾಜಿಕ ಗೌರವಕ್ಕೆ ಗುಣ ನಡತೆ ಮುಂತಾದವು ಪ್ರಧಾನಪಾತ್ರ ವಹಿಸುತ್ತದೆ.

ಸಮಾಜ ದೃಷ್ಟಿ

ಸಮಾಜಪರವಾದ ದೃಷ್ಟಿಯನ್ನು ಬೆಳೆಸಲು ಸಮಾಜಪರವಾದ ಜ್ಞಾನವೂ ಬೇಕು. ಇದು ಒಂದು ದೃಷ್ಟಿಕೋನದಿಂದ ಹುಟ್ಟಿಕೊಳ್ಳುವುದಿಲ್ಲ. ಸಾಮಾಜಿಕ ದೃಷ್ಟಿಯೂ ಸಮಗ್ರತೆಯ ಪರಿಶೀಲನೆಯಿಂದ ಮಾತ್ರ ಸಂಜನಿಸಲು ಸಾಧ್ಯ. ಒಂದು ಸಮಾಜವು ತಕ್ಷಣ ಮಾತ್ರ ಹುಟ್ಟಿಕೊಂಡಿರುವುದಿಲ್ಲ. ಅದಕ್ಕೆ ಬಹುದೊಡ್ಡ ಚರಿತ್ರೆಯಿರುತ್ತದೆ. ಅದು ವಿಕಾಸಗೊಳ್ಳಲು ಬಾಹ್ಯ ಹಾಗೂ ಆಂತರಿಕ ಒತ್ತಡಗಳು ಕಾರಣವಾಗಿರುತ್ತದೆ. ಸಾಮಾಜಿಕ ಜ್ಞಾನವೆಂಬುದು ಈ ದೃಷ್ಟಿಯಿಂದ ವ್ಯಾಪಕವಾದ ಅರ್ಥವನ್ನು ಪಡೆದುಕೊಂಡಿದೆ. ಎರಡನೆಯದಾಗಿ ಸಾಮಾಜಿಕ ದೃಷ್ಟಿಯೆಂದರೆ, ನಿರ್ದಿಷ್ಟ ಗುಂಪಿನ ಬಗೆಗೆ ನಾವು ತಳೆಯುವ ನಿಲುವು, ದೃಷ್ಟಿಯಲ್ಲಿ ಮಾನವೀಯತೆಯ ಅಂಶವಿದ್ದರೆ ಆಗ ಸಾಮಾಜಿಕ ದೃಷ್ಟಿಯು ಬರುತ್ತದೆ. ವೈಯಕ್ತಿಕ ದೃಷ್ಟಿಕೋನ ಬೇರೆ, ಸಾಮಾಜಿಕ ದೃಷ್ಟಿಕೋನ.

ಹಾಗೆಯೇ ಪ್ರತಿಯೊಂದು ಸಮಾಜವನ್ನು ನಾವು ಒಂದು ನಿಯಮಬದ್ಧತೆಯಿಂದ ಕೂಡಿದೆಯೆಂಬುದನ್ನು ಒಪ್ಪಿಕೊಳ್ಳಬೇಕು. ಮತ್ತು ಸಮಾಜಕ್ಕೆ ಅದರದೇ ಆದ ಜೀವನದ ಜಗತ್ತು ಎಂಬುದು ಇದೆ. ಅದಕ್ಕೆ ಬೇಕಾದಂತೆ ಅದು ತನ್ನ ಮೌಲ್ಯರೂಪಿಸಿಕೊಳ್ಳುತ್ತದೆ ಅಷ್ಟೆ. ಸಾಮಾಜಿಕ ನಡೆ–ನುಡಿಯು ತನಗೆ ಬೇಕಾದಂತೆ ವರ್ತಿಸುತ್ತದೆ. ಇದರಿಂದಾಗಿ ಸಾಮಾಜಿಕ ಮೌಲ್ಯವೂ ರೂಪುಗೊಳ್ಳುತ್ತದೆ.

ಸಮಾಜದಲ್ಲಿ ಬೇರೆ ಬೇರೆ ದೃಷ್ಟಿಕೋನವಿರುತ್ತದೆ.

1. ವೈಯಕ್ತಿಕ ದೃಷ್ಟಿ
2. ಸಾಮಾಜಿಕ ದೃಷ್ಟಿ
3. ಧರ್ಮ ದೃಷ್ಟಿ
4. ಆರ್ಥಿಕ ದೃಷ್ಟಿ

ಧರ್ಮದೃಷ್ಟಿಯು ಹೆಸರು ಸೂಚಿಸುತ್ತಿರುವಂತೆ ಸಾಂಪ್ರದಾಯಿಕ ರೂಪದಲ್ಲಿರುತ್ತದೆ. ಅದಕ್ಕೆ ನಿರ್ದಿಷ್ಟ ಧಾರ್ಮಿಕ ನಂಬಿಕೆಗಳಿರುತ್ತವೆ. ಸಾಮಾಜಿಕ ಜೀವನವು ಇದಕ್ಕೆ ಅನುಸಾರವಾಗಿ ನಿರ್ದೇಶಿಸಲ್ಪಟ್ಟಿರುತ್ತದೆ.

ಸಮಾಜ ಸುಧಾರಣೆ

ಸಾಮಾಜಿಕ ಪುನರ್ ರಚನೆಯ ಪರಿಕಲ್ಪನೆಯು ಈಗಾಗಲೇ ಇರುವ ಸಾಮಾಜಿಕ ಅಸ್ತಿತ್ವವನ್ನು ಬೇರೆ ರೀತಿಯಲ್ಲಿ ನಿರ್ವಚಿಸಲು ಯತ್ನಿಸುತ್ತದೆ. ಒಂದು ಸಮಾಜಕ್ಕಿರುವ ಆತಂಕ ಆಲೋಚನೆ ಅದರ ಅನನ್ಯತೆ, ಅದರ ಅಸ್ತಿತ್ವ ಇದನ್ನು ಪುನರ್ ರಚಿಸಿ ಸಾಂಸ್ಕೃತಿಕ ಮತ್ತು ವ್ಯಕ್ತಿಗತ ಅನನ್ಯತೆಯನ್ನು ಪುನರ್ ರೂಪಿಸುವುದು ಇದರ ಗುರಿಯಾಗಿದೆ. ಇಂಗ್ಲಿಷ್‌ನಲ್ಲಿ ಸುಧಾರಣೆಯೆನ್ನುವುದಕ್ಕೆ Reform ಎಂದು ಕರೆಯುತ್ತಾರೆ ಇದು ಫ್ರೆಂಚ್ ಪದದಿಂದ ಬಂದಿದೆ. ಫ್ರೆಂಚ್‌ನಲ್ಲಿ Reform ಲ್ಯಾಟಿನ್‌ನಲ್ಲಿ Reform ಎಂಬ ಪದಗಳಿವೆ. ಇವುಗಳ "ಅರ್ಥ"–ಮತ್ತೊಮ್ಮೆ ರೂಪಿಸಿ ಇವುಗಳನ್ನು ಗಮನಿಸಿದರೆ ಎರಡು ಅರ್ಥಗಳಿವೆಯೆಂದು ಸೂಚಿಸುತ್ತದೆ.

೧. ಮೊದಲು ಇದ್ದುದನ್ನು ಮತ್ತೊಮ್ಮೆ ರೂಪಿಸುವುದು,

೨. ಈಗಾಗಲೇ ಇದ್ದುದನ್ನು ಹೊಸರೂಪಕ್ಕೆ ತರುವುದು.

ಇವುಗಳ ಪ್ರಕಾರ ಈಗಾಗಲೇ ಇದ್ದುದನ್ನು ಹೊಸ ಚಾರಿತ್ರಿಕ ಸನ್ನಿವೇಶಕ್ಕೆ ಅನುಸಾರವಾಗಿ ಪುನರ್ ವ್ಯಾಖ್ಯಾನಿಸುವುದು ಅಂದರೆ ಒಂದು ವಿಷಯ ವಸ್ತು ವಿಚಾರ ಅಥವಾ ಸಂಗತಿ ಚಾರಿತ್ರಿಕ ಅಗತ್ಯಕ್ಕೆ ತಕ್ಕಂತೆ ಹಳೆಯದೆನಿಸಬಹುದು. ಆಗ ಅದನ್ನು ಹೊಸದಾಗಿ ಪುನರ್ ವ್ಯಾಖ್ಯಾನಿಸಬೇಕಾಗಿ ಬರುತ್ತದೆ. 'ಪುನರ್–ರೂಪೀಕರಣ' ಅಥವಾ 'ಪುನರುಜ್ಜೀವನ' 'ಸುಧಾರಣೆ' ಮುಂತಾದ ಪದಗಳು ಬರುವುದು ಇಂಥ ಸನ್ನಿವೇಶದಲ್ಲಿ. ಸಮಾಜ ಸುಧಾರಣೆಯೆಂದರೆ ಹಿಂದೆ ಇದ್ದ ಸಮಾಜವನ್ನು ಹೊಸ ಅಗತ್ಯಕ್ಕೆ ತಕ್ಕಂತೆ ಮರುವ್ಯಾಖ್ಯಾನಿಸುವುದು.

ಬ್ರಿಟೀಷರು ಭಾರತಕ್ಕೆ ಬಂದಾಗ ಭಾರತದಲ್ಲಿ ನಡೆದ ಸುಧಾರಣವಾದಿ ಚಳುವಳಿಯು ಈ ಬಗೆಯದು 'ವಿಧವಾ ವಿವಾಹ' 'ಸತಿನಿಷೇಧ' 'ಅಸ್ಪೃಶತಾ ನಿವಾರಣೆ' ಇವೆಲ್ಲವೂ ಭಾರತೀಯ ಸಾಮಾಜಿಕ ವ್ಯವಸ್ಥೆಯ ಸಂಪೂರ್ಣ ಬದಲಾವಣೆಯನ್ನು ಹೇಳಲಿಲ್ಲ. ಅದರ ಬದಲು ಇರುವ ವ್ಯವಸ್ಥೆಯಲ್ಲಿ ರಾಚನಿಕವಾದ ಬದಲಾವಣೆಯನ್ನು ಮಾತ್ರ ಸೂಚಿಸಿತು.

ಸಮಾಜವೆನ್ನುವುದಕ್ಕೆ ಬೇರೆ ಬೇರೆ ರೀತಿಯ ವ್ಯಾಖ್ಯೆಗಳಿವೆ. ಸಮಾಜವು ಒಂದು ರೀತಿಯ ಸಂಸ್ಥೆ; ಹಾಗೂ ಅದು ಅನೇಕ ಜನರ ಗುಂಪು. ಅದರಲ್ಲಿ ಬೇರೆ ಬೇರೆ ರೀತಿಯ ಸಂಬಂಧಗಳಿರುತ್ತವೆ. ಈ ಸಾಮಾಜಿಕ ಸಂಬಂಧಗಳು ಕೆಲವು ಸಂದರ್ಭದಲ್ಲಿ ಎದ್ದು ಕಾಣಿಸುತ್ತವೆ. ಕೆಲವು ಸಂದರ್ಭದಲ್ಲಿ ಅದು ಅಮೂರ್ತ

ಆದರೂ ಸಮಾಜವೆಂದರೆ ಸಂಸ್ಥೆ ಮತ್ತು ಸಂಬಂಧಗಳು. ಇಂಗ್ಲಿಷಿನಲ್ಲಿ ಇದನ್ನು 'ಸೊಸೈಟಿ' ಎಂದು ಕರೆಯುತ್ತಾರೆ. 'Socius'ಸೋಷಿಯಸ್ ಅಂದರೆ ಸಂಗಾತಿಗಳು ಜೊತೆಗಾರರು ಎಂದರ್ಥ. ಯಾವುದನ್ನು ಸಮಾಜವೆಂದು ಕರೆಯುತ್ತೇವೆಯೋ ಅದಕ್ಕೆ ಕೆಲವು ನಿಯಮಾವಳಿಗಳಿರುತ್ತವೆ. ಆದರೂ ಸಮಾಜವೆನ್ನುವುದಕ್ಕೆ ಅತ್ಯಂತ ಸರಳ ವ್ಯಾಖ್ಯೆಯನ್ನು ನಾವು ನೀಡುವಂತಿಲ್ಲ. ಅನೇಕ ವ್ಯಕ್ತಿಗಳ ಗುಂಪು ಸಮಾಜವೆಂದು ನಾವು ಗುರುತಿಸಿದರೆ ಅದಕ್ಕೆ ಅದರದೇ ಆದ ಅನನ್ಯತೆ ಇರುತ್ತದೆ. ಮಾರ್ಕ್ಸ್‌ವಾದಿಗಳ ಪ್ರಕಾರ ಸಮಾಜವು ಆಯಾ ಚರಿತ್ರೆ; ಉತ್ಪಾದನೆಯ ವಿವಿಧ ವಿಧಾನ; ವರ್ಗಹಿತಾಸಕ್ತಿಗಳಿಗೆ ಅನುಸಾರವಾಗಿ ಬೇರೆ ಬೇರೆಯಾಗುತ್ತದೆ. ಅನೇಕ ಸಂದರ್ಭದಲ್ಲಿ ಸಮಾಜ ಮತ್ತು ಸಂಸ್ಕೃತಿಯನ್ನು ಒಂದೇ ಅರ್ಥದಲ್ಲಿ ಬಳಸಿರುವುದು ಇದೆ.

ವಿವರಗಳಿಗೆ ನೋಡಿ: Andrew Edgar 1998 key concepts in cultural theory P.367-68

ಕೆ.ವಿ.ಸುಬ್ಬಣ್ಣ(ಅನು) ಗಾಂಧಿ ಬರಹಗಳ ಸಂಕಲನ ೧೯೯೮ ಸ್ವರಾಜ್ಯದ ಹಾದಿ ಹೆಜ್ಜೆಗಳು

Raymond Williams 1983 keywords P.13,14

ಸಮಾನಶೀಲ ವ್ಯಸನ

ಸಮಾನಶೀಲರಿಗೆ ಮತ್ತು ಸಮಾನ ಮನಸ್ಕರಿಗೆ ಸಮಾನವಾದ ಆಲೋಚನೆಯ ಕ್ರಮವಿರುತ್ತದೆ. ಸಮಾನಶೀಲವೆಂದರೆ ಸಮಾನ ಗುಣ ಮತ್ತು ಸಮಾನ ಮನೋಸ್ಥಿತಿಯು ಗೆಳೆತನಕ್ಕೆ ಕಾರಣವಾಗುತ್ತದೆ. 'ಸಮಾನ ಶೀಲ ವ್ಯಸನೇಷು ಸಖ್ಯಂ' – ಎಂಬ ಸಂಸ್ಕೃತೋಕ್ತಿಯೂ ಇದೆ.

ಸಮಾಹಿತ ಗುಣ

ಒಂದು ವಸ್ತುವಿನ(ಪದಾರ್ಥದ) ಮಾತುಗಳನ್ನು ಪೆರತೊಂದರಲ್ಲಿ ಆರೋಪಿಸಿ ಹೇಳುವುದು ಸಮಾಹಿತ ಗುಣ.

(ಕವಿರಾಜ ಮಾರ್ಗ 73–77)

ಸರಸ್ವತಿ

ವಾಣಿಯ ಪರಿಕಲ್ಪನೆಯು ಸಾಹಿತ್ಯದ ಜೊತೆಗೆ ಸಂಬಂಧವನ್ನು ಇರಿಸಿಕೊಂಡಿದ್ದು. ಒಂದು ಸಂಪ್ರದಾಯ ರೂಪವಾಗಿ ಬಂದಿದ್ದು. ವೈದಿಕ ಕವಿಗಳು ಬ್ರಹ್ಮನ ಹೆಂಡತಿ ವಾಣಿ ಎಂತಲೂ ಕರೆಯುತ್ತಾರೆ. ಪುಸ್ತಕವನ್ನು ಮತ್ತು ಅಕ್ಷರವನ್ನು ಸರಸ್ವತಿ ರೂಪವಾಗಿ ಕಾಣುತ್ತಾರೆ. ಮೊದಲ ಅಕ್ಷರಭ್ಯಾಸ ಸಂದರ್ಭದಲ್ಲಿ ಗಣಪತಿಯನ್ನು ಮತ್ತು ಸರಸ್ವತಿಯನ್ನು ಪೂಜಿಸುವ ಕ್ರಮವಿದೆ. ಆದ್ದರಿಂದಲೇ ವಾಣಿಯು ವಾಗ್ದೇವಿಯಾಗಿದ್ದಾಳೆ.

ವಾಗ್ದೇವಿ ಎಂದರೆ ವಾಕ್+ದೇವತೆ. ವಾಕ್ ಅಂದರೆ ಮಾತು. ವಾಗ್ದೇವತೆಯ ಪರಿಕಲ್ಪನೆಯು ಮೂಲತಃ ಸಂಸ್ಕೃತದ್ದು ಮತ್ತು ವೈದಿಕ ಮೂಲವಾದುದು.

ಸರ್ಪಮೇಧ

"ಪುರುಷಮೇಧ, ಸರ್ಪಮೇಧ ಮತ್ತು ಅಶ್ವಮೇಧ ಇವುಗಳಲ್ಲಿರುವ ಪುರುಷ: ಸರ್ಪ : ಅಶ್ವ ಈ ಸಾಂಕೇತಿಕ ಪ್ರತಿಮೆ ಸಮಾನವಿರುವುದರಿಂದ ಇವು ಅಪ : ರಸ ಪಂಥೀಯ 'ಗೌತಮಾಗ್ನೀ' ಕುಂಡದಲ್ಲಿ ='ಆಪ'ದಲ್ಲಿ ನಡೆವ ಹೋಮದ ಪ್ರಕಾರಗಳೇ ಎಂದಲ್ಲಿ ತಪ್ಪಾಗಲಾರದಷ್ಟೇ. ಮೊದಲನೆಯದು ವಿರಾಟ್-ಸಿದ್ಧಿಗಾಗಿ ಪರಿವ್ರಾಜಕ : ಜಂಗಮ ದೀಕ್ಷೆ ಪಡೆವಾಗಿನ 'ಸತ್ರ'; ಶತಪಥದ 'ಪುರುಷ ಮೇಧೀ' ನಾರಾಯಣನೇ ಸಾಕ್ಷಿ. ಇದಕ್ಕೆ ಎರಡನೆಯದು ಸರ್ಪ-ಸತ್ರ; ಇದು ಕೇವಲ ಕಾಲ್ಪನಿಕ. ಇಂದ್ರನು ಅಹಿ ತಕ್ಷಕನೂ ಉಳಿಯಲೇ ಬೇಕು, ಎಂಬ ನೀತಿಬೋಧಕ ಕಟ್ಟುಕತೆ () ಇನ್ನು ಅಶ್ವಮೇಧ ವಿಚಾರ : ಸಂನ್ಯಾಸ ಪಂಥೀಯ ಭೂಮಿಕೆಯಿಂದ ಮಾಡಲಾಗಿರುವ ವಿಜಗೀಷು ವೃತ್ತಿಯ ವಿಡಂಬನ: ಈ ಅಶ್ವಮೇಧ ಆಚಾರವಿಧಿ. ಕ್ಷತ್ರಿಯ ವೃತ್ತಿಯ ಮೂಲ ಪ್ರೇರಣೆಯಾದ ಪೌರುಷವನ್ನೇ ತುಂಡರಿಸಿ ಬಿಡುವ ಅಶ್ವಮೇಧದ ಈ ಕೃತಿಯು, ಆ ಯಜಮಾನನಿಗೆ ಸಾಮ್ರಾಟ್ ಪದವಿಯ ಅರ್ಹತೆಯನ್ನು ತರಲು ಶಕ್ಯವಿಲ್ಲ. ಆದುದರಿಂದ, ಈ ಅಶ್ವಮೇಧವು ಸಹ, ಇಂದ್ರ-ತ್ರಿತ ಸಂಪ್ರದಾಯದ ಆ ಮೂಲ ಸಮಯದ ವಿಕೃತಿಯೆ ಇರಲಿಕ್ಕೆ ಬೇಕೆಂದು ಊಹಿಸಬೇಕಾಗುತ್ತದೆ" ಎಂದು ಶಂಬಾ ಅಭಿಪ್ರಾಯ. ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 4 ಪುಟ. 463.

ಖಾಂಡವವನದಹನ

ಸರ್ವರಿಗೆ ಸಮಪಾಲು

ಸರ್ವೋದಯ ತತ್ವ ವಿನೋಬಾ ಅವರದು. ಸರ್ವರಿಗೆ ಸಮಪಾಲು-ಸಮಬಾಳು ರೂಪುಗೊಳ್ಳುವುದು ಆರ್ಥಿಕ ಸಮತೆಯಲ್ಲಿ ಎನ್ನುವುದು ಗಮನಾರ್ಹ. ಬ್ರಿಟಿಷ್ ರಾಜಸತ್ತೆಯ ನಿಯಮದ ಪರಿಭಾಷೆಯನ್ನು ರಾಜಕೀಯ ಪರಿಭಾಷೆಯಾಗಿ ಬಳಸಿಕೊಂಡಿದ್ದ ಹಾಗೆಯೇ ಭಾರತೀಯ ಸಾಮಾಜಿಕ ಅಭಿವೃದ್ಧಿ ಪರಿಭಾಷೆಯನ್ನು ಅದು ಬಳಸಿಕೊಂಡಿತು. ಈ ಅಭಿವೃದ್ಧಿ ಅನ್ನುವುದು ಒಂದು ರೀತಿಯಿಂದ ಭಾರತೀಯ ಸಾಮಾಜಿಕ ಧೋರಣೆಯನ್ನು ಬದಲಾಯಿಸುವ ಅಂಶಗಳನ್ನು ಒಳಗೊಂಡಿರಲಿಲ್ಲ. ಬ್ರಿಟಿಷ್ ರಾಜಸತ್ತೆಗೆ ಪೂರಕವಾಗಿ ಬಂದ ಈ ಪರಿಭಾಷೆಯು ಭಾರತೀಯ ಪರಿಸರದಲ್ಲಿ ಕೆಲವು ಬದಲಾವಣೆಗಳನ್ನು ತಂದಿತು. ಅಭಿವೃದ್ಧಿಯು ಆಳುವ ವರ್ಗಕ್ಕೆ ಹಿತಕಾರಿಯಾದ ನಿಲುವಾಗಿದ್ದರೂ ಆಳಿಸಿಕೊಂಡ ಜನವರ್ಗ ಈ ಅಭಿವೃದ್ಧಿಯಿಂದ ಕೆಲವು ಅನುಕೂಲಗಳನ್ನು ಪಡೆದುಕೊಂಡಿತು. ಆದರೂ ಇದಕ್ಕೆ ಭಿನ್ನ ಭಿನ್ನ ಪ್ರತಿಕ್ರಿಯೆಗಳು ಕೂಡಾ ಬಂದವು. ಅಭಿವೃದ್ಧಿ ಎನ್ನುವುದು ಒಂದು ತಾಂತ್ರಿಕ ಪರಿಭಾಷೆಯಾದಾಗ ಅಲ್ಲಿ ಯಂತ್ರದ ಮಾದರಿಗಳು ಮುಖ್ಯವಾಗುತ್ತವೆ.

ಕನ್ನಡದ ನವೋದಯ ಸಾಹಿತ್ಯಕ್ಕೆ ಜಾತ್ಯಾತೀತ ಮೌಲ್ಯ ಬಹಳ ಪ್ರಧಾನವಾಗಿ ಬೇರುಬಿಟ್ಟಿದೆ. ಆ ಕಾಲದಲ್ಲಿ ಬಂದಿರುವ ಮುಖ್ಯ ಮೌಲ್ಯಾತ್ಮಕ ಸ್ವರೂಪವಿದು. ಸಾಹಿತ್ಯದಲ್ಲಂತೂ ಇದು ಪ್ರಧಾನ ಪರಿಭಾಷೆಯಾಗಿದ್ದು, ಇದನ್ನು ಅಂತಿಮ ಸತ್ಯವೆಂದು ಪರಿಗಣಿಸಲಾಗಿದೆ. ಈ ಪರಿಕಲ್ಪನೆಯ ಹಿಂದೆ ಕ್ರಿಶ್ಚಿಯನ್ ಧರ್ಮದ ಪ್ರಭಾವವೂ ಇದೆ. ಕ್ರಿಶ್ಚಿಯನ್ ಧರ್ಮವು ಈ ರೀತಿಯ ಮೌಲ್ಯಗಳನ್ನು ನಂಬುತ್ತದೆ. ಜಾತ್ಯತೀತವಾದ ಮನೋಭಾವನೆಯು ಆಧುನಿಕ ಚರಿತ್ರೆಯ ಕಾಲದಲ್ಲಿ ಹುಟ್ಟಿರುವ ಮುಖ್ಯ ಪರಿಭಾಷೆಯಲ್ಲೊಂದು.

ವಿವರಗಳಿಗೆ ನೋಡಿ: ಜಿ.ಸಿ.ಹಿಪ್ಪರಗಿ ೧೯೮೨ ವಿಚಾರಮಯೂರ

ಸರ್ವಾರ್ಥ ಸಿದ್ಧಿ

ಸರ್ವಾರ್ಥ ಸಿದ್ಧಿಯೆಂದರೆ– ಎಲ್ಲಾ ವಿಷಯದಲ್ಲಿಯೂ ಸಾಧನೆಯನ್ನು ಮಾಡಿ ಸಿದ್ಧಿ ಪಡೆದವನು ಎಂದರ್ಥ. ಸಿದ್ಧಿಯಾಗಬೇಕಾದರೆ ಗುರಿಯು ಬೇಕು. ಅದಕ್ಕೆ ಸಾಧನೆ ಬೇಕು. ಒಮ್ಮೆ ಸಿದ್ಧಿಯಾದರೆ ಮತ್ತೆ ಆ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾಗಿಲ್ಲ. ಜೈನಧರ್ಮದ 'ಭವ' 'ಭವಾಂತರ'ಗಳಿಂದ ಕ್ರಮ ಕ್ರಮವಾಗಿ ಧರ್ಮ ಸಾಧನಗಳಿಂದ – ಕೊನೆಗೆ ಸರ್ವಾರ್ಥ ಸಿದ್ಧಿಯಾಗುತ್ತದೆ. ಭವವೆಂದರೆ ಹುಟ್ಟು, ಜೈನಧರ್ಮವು 'ಮರುಹುಟ್ಟು' ಕಲ್ಪನೆಯನ್ನು ಇಟ್ಟುಕೊಂಡಿದೆ. ಎಲ್ಲವೂ ಸಿದ್ಧಿಯಾದಾಗ ಇಂದ್ರ ಪದವಿ ದೊರೆಯುತ್ತದೆ. ಅದರ ಅನಂತರ ಘಟ್ಟವೆ 'ಅರ್ಹತ್' ಪದವಿ. ಅರ್ಹತ್ ಪಟ್ಟಕ್ಕೆ ಅರ್ಹವಾಗುವ ಆತ್ಮವು ನರನಾಗಿ ಹುಟ್ಟುವುದು; ಸಾಧನೆಗೈಯುವುದು ಮುಖ್ಯ.

ವಿವರಗಳಿಗೆ ನೋಡಿ: ಸುಕುಮಾರ್ ಅಟಿಕ್ಕೋಡ್ ವಿ.ಗೋಪಾಲಕೃಷ್ಣ (ಅನು) ೨೦೦೫

- ತತ್ವಮಸಿ

ಸವಣ

ಯಾರು ಸುಖದುಃಖವನ್ನು ಸಮಭಾವದಿಂದ ನೋಡುವರೋ ಅವರೇ ಸವಣರು ಅವರೇ ಪರಿವ್ರಾಜಕರು. ಜೈನಯತಿಗಳು. ಯಾರು ಸರ್ವಸಂಗ ಪರಿತ್ಯಾಗ ಮಾಡಿರುವರೋ ಅವರು ಪರಿವ್ರಾಜಕರು. ಸನ್ಯಾಸಿ ಅಥವಾ ಭಿಕ್ಷು ಎಂದರ್ಥ.

ಸವಾರ್ಥ ಸಿದ್ಧಿಃ

ಪರ್ಬ – ಹಬ್ಬದದಿನ ವಿಶೇಷದಿನಗಳು ಪರ್ವಕ್ಕೆ ಹಬ್ಬ ಎಂದು ಬಂದಿದೆ. ಪರ್ಬ ಹಬ್ಬವೆಂದಾಗುವುದು ಮಾಮೂಲಿ. ತುಳುವಿನಲ್ಲಿ ಪರ್ಬವೆಂದೇ ಬಳಕೆಯಿದೆ. ಹಬ್ಬ ಯಾವಾಗಳೂ ವಿಶೇಷ ದಿನಗಳು ಎಂದು ಪರಿಗಣಿತವಾಗಿದೆ.

(ವಡ್ಡಾರಾಧನೆ ಪೀಠಿಕೆ. ಅನು: ಟಿ. ಕೇಶವಭಟ್ಟ)

ಕಲಾನಂತರದಲ್ಲಿ ಹೂಣರು ಗುಪ್ತರು ವಿಶಾಲ ಸಾಮ್ರಾಜ್ಯದ ಮೇಲೆ ಎರಗಿ ಅದನ್ನು ಚಲ್ಲಾಪಿಲ್ಲಿಯಾಗಿಸಿಬಿಟ್ಟರು. ಅವರ ಜೊತೆಯಲ್ಲಿ ಗುರ್ಜರರೇ ಮೊದಲಾದ ಅನೇಕ ವಿದೇಶೀಯ ಸಮುದಾಯಗಳು ಭಾರತವನ್ನು ಪ್ರವೇಶಿಸಿದುವು ಹಾಗೂ ತಮ್ಮ ತಮ್ಮ ಸಾಮ್ರಾಜ್ಯಗಳನ್ನು ಸ್ಥಾಪಿಸಿದವು. ಅವುಗಳಿಂದ ಭಾರತದಲ್ಲಿ ರಾಜಪೂತರ ಅನೇಕ ಸಮುದಾಯಗಳು ಜಾಟರು, ಗುರ್ಜರರು ಮೊದಲಾದ ಸಮುದಾಯಗಳು – ಹುಟ್ಟಿಕೊಂಡುವು. ಸಮಾಜದ ಪವಿತ್ರತೆಯ ಬಗೆಗಿನ ಕಲ್ಪನೆ ದಿನೇ ದಿನೇ ಹದಗೆಡಲಾರಂಭಿಸಿತು. ಇವುಗಳಲ್ಲಿ ಅನೇಕ ಸಮುದಾಯಗಳು ತಮ್ಮ ತಾಯ್ನಾಡುಗಳಲ್ಲಿ ತಮ್ಮ ಹೆಣ್ಣುಮಕ್ಕಳನ್ನು ಕೊಂದುಹಾಕುವ ಪದ್ಧತಿಯನ್ನಿರಿಸಿಕೊಂಡಿದ್ದಂಥವು. ಅವರು ಭಾರತಕ್ಕೆ ಬಂದ ಮೇಲೂ ಅನೇಕ ಅಂಶಗಳಲ್ಲಿ ತಮ್ಮ ಹಿಂದಿನ ಪದ್ಧತಿಗಳನ್ನು ಮುಂದುವರಿಸಿಕೊಂಡು ಬಂದರು. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸಹಗಮನ ಪದ್ಧತಿ ಒಂದಲ್ಲ ಒಂದು ರೂಪದಲ್ಲಿ ಎಂದಿನಿಂದಲೂ ನಡೆದುಕೊಂಡು ಬಂದಿತ್ತು ಎಂಬುದು ನಿಜ. ಆದರೆ, ಅದೀಗ ತುಂಬ ಪ್ರಬಲವಾಗಿ ಪರಿಣಮಿಸಿತು; ಅಗ್ನಿ ಪ್ರವೇಶದ ರೂಪವನ್ನೇ ಪಡೆದುಕೊಮಡುಬಿಟ್ಟಿತು. ವಿದೇಶೀಯ ಆಡಳಿತಗಾರರು ಮತ್ತು ಆಕ್ರಮಣಕಾರರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಅನಿಸರಿಸಿಕೊಂಡು ಬಂದ ಈ ದಾರುಣ ಪದ್ಧತಿಯೂ ಭಾರತೀಯ ನಾರಿಯ ತ್ಯಾಗ, ಸಾಹಸ ಮತ್ತು ಧೈರ್ಯ–ಸ್ಥೈರ್ಯಗಳ ಎದುರಿನಲ್ಲಿ ತುಚ್ಛವೇ ಆಗಿ ಪರಿಣಮಿಸಿತು. ಅಗ್ನಿ ಪ್ರವೇಶವನ್ನು ಬಾರತೀಯ ನಾರಿ ಅಂಗೀಕರಿಸಿದ್ದು ಮಾತ್ರವಲ್ಲ, ಅದಕ್ಕೆ ಒಂದು ಮಹೋತ್ಸವದ ರೂಪವನ್ನೇ ಕೊಟ್ಟು, ತನ್ನ ರಕ್ತದಾನದ ಮೂಲಕ ಹಾಗೂ ಅದರೊಂದಿಗೆ ಹುಟ್ಟಿಬರುವ ಉಪಾಸನೆ ಇನ್ನೂ ಏನೇನನ್ನೋ ಸೃಷ್ಟಿಸುತ್ತದೆ–ಗೌರಾಂಗರಾದ ಕಿಂಕರ ದೇವತೆಗಳ ಹಾಗೂ ಅಸ್ಪಷ್ಟ ಧಾರ್ಮಿಕ ರೂಪರೇಷೆಗಳನ್ನು ಹೊಂದಿರುವ ಒಂದು ಪರಿವಾರ ಹಾಗೂ ಅದಕ್ಕಿಂತಲೂ ಹೆಚ್ಚು ಮಹತ್ವಪೂರ್ಣವಾದ ವಿಧಿ ಕ್ರಿಯೆಗಳ ಒಂಥು ಅನಂತ ಶೃಂಖಲೆ.

(ಭಗವತಿ ಶರಣ ಉಪಾಧ್ಯಾಯ ೨೦೦೪. ಪು. ೨೦೧–೨೦೨) ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಈ ಕಾರಣದಿಂದಲೇ ಮಹಾಭಾರತದಲ್ಲಿ ಸಹಗಮನವು ಕೆಲವೆಡೆಯಲ್ಲಿ ಮಾತ್ರವೇ ಉಕ್ತವಾಗಿದೆ. 'ಮಾರ್ಕಂಡೇಯ ಪುರಾಣ: ವಿಷ್ಣು ಪುರಾಣ, ಮುಂತಾದವುಗಳು ಬ್ರಾಹ್ಮಣ ಸಂಸ್ಕೃತಿಯ ಅತ್ಯುಚ್ಛವಾದ ಕಾಲದಲ್ಲಿ ರೂಪುಗೊಂಡವು. ಈ ಕಾಲದಲ್ಲಿ ವಿಧವೆಯರು 'ಸಹಗಮನ'ದ ಮೂಲಕ ಗಂಡನನ್ನು ಅನುಸರಿಸಬೇಕಾಗಿ ಬಂತು. ಈ ಸಂಸ್ಕೃತಿಯ ಸಂಕೀರ್ಣವಾದ ಸ್ಥಿತಿಯನ್ನು ಆ ಕಾಲದ ಕಾವ್ಯಗಳು ಪ್ರತಿಪಾದಿಸುತ್ತವೆ'. "ಅಲ್ಲದೆ ಬೃಹದ್ಧರ್ಮ ಪುರಾಣ"ದಲ್ಲಿ ಪತಿಯೊಡನೆ ಚಿತೆಯನ್ನೇರುವ ಅವನ ವಿಧವೆ ಪತ್ನಿ ಎಂತಹ ಪಾಪ ಮಾಡಿದ್ದರೂ ಅವನ ಅತ್ಮಕ್ಕೆ

ಶ್ರೇಯಸ್ಸು ಕೋರುತ್ತಾಳೆ ಎಂದಿದೆ. ಆದರೆ ಶಾಸ್ತ್ರಜ್ಞರು ತಾರುಣ್ಯಾವಸ್ಥೆಯನ್ನು ಪಡೆಯನ್ನು ಪಡೆಯದ ಪತ್ನಿಯನ್ನು, ಗರ್ಭಿಣಿಯನ್ನು ಮತ್ತು ಚಿಕ್ಕ ಮಕ್ಕಳಿರುವ ತಾಯಿಯನ್ನು ಸತಿಯಾಗದಂತೆ ನಿಷೇಧಿಸುತ್ತಾರೆ. ಅಂತೆಯೇ 'ಅಲ್‌ಬೆರೂನಿ' 'ವಯಸ್ಕ ಮಹಿಳೆಯರು ಮಕ್ಕಳಿರುವವರು ಸಹಗಮನ ಮಾಡುತ್ತಿರಲಿಲ್ಲ. ಎಂದಿದ್ದಾನೆ. ಆತನೇ ಮುಂದುವರಿದು, 'ವಿಧವೆಯು ನೆಂಟರಿಷ್ಟರ ಹೀನಾಯದಲ್ಲಿ ಬಾಳ್ವೆ ಮಾಡುವುದಕ್ಕಿಂತಲೂ ಜೀವಂತವಾಗಿ ಸುಟ್ಟು ಹೋಗುವುದು ಉತ್ತಮವೆಂದು ಭಾವಿಸಿದ್ದಳು' ಎನ್ನುತ್ತಾನೆ. ಆದರೆ ಈ ಕಾಲದಲ್ಲಿ (ಕ್ರಿ.ಶ.500ರ ಬಳಿಕ) ವಿಧವೆಯರು ಸಹಗಮನ ಮಾಡಲೇಬೇಕೆಂಬ ನಿಯಮವಿರಲಿಲ್ಲ. 'ಪತಿಯಾಗುವ ಅಥವಾ ಬಿಡುವ ನಿರ್ಧಾರ ಸಹಗಮನ ಮಾಡಲಿದ್ದ ಮಹಿಳೆಯನ್ನು ಸಂಪೂರ್ಣವಾಗಿ ಅಥವಾ ಬಿಡುವ ನಿರ್ಧಾರ ಸಹಗಮನ ಮಾಡಲಿದ್ದ ಮಹಿಳೆಯನ್ನು ಸಂಪೂರ್ಣವಾಗಿ ಅವಲಂಬಿಸಿತ್ತು' ಎಂದು ವ್ಯಾಪಾರಿ ಸುಲೇಮಾನ್ (ಒಂಬತ್ತನೆಯ ಶತಮಾನ) ಹೇಳುತ್ತಾನೆ. ಹೀಗೆ ಬ್ರಾಹ್ಮಣ ಧರ್ಮವು ಅತ್ಯಂತ ಸಂಕೀರ್ಣವಾದ ಸ್ಥಿತಿಯನ್ನು ತಲುಪಿದ್ದರಿಂದ. ಅದಕ್ಕೆ ವಿರೋಧವಾಗಿ ಹುಟ್ಟಿದ ಜೈನ ಧರ್ಮವು ಪರ್ಯಾಯ ಸಂಸ್ಕೃತಿಯ ಭಾವುಕತೆಯಲ್ಲಿ ವಿರಮಿಸಿತು. ಇದರ ಪರಿಣಾಮವೆಂದರೆ ಕೆಳವರ್ಗದ ಜನಜೀವನದ ಆಶಯಗಳನ್ನು ಇದು ಹೊಂದಿದ್ದರೂ ನಿರ್ದಿಷ್ಟವಾಗಿ ಪರ್ಯಾಯ ಸಂಸ್ಕೃತಿಯನ್ನೇ ಹುಟ್ಟು ಹಾಕುವ ಮುಖ್ಯ ಪ್ರಯತ್ನದಲ್ಲಿ ಇದು ತೊಡಗಿತು. "ಜೈನಧರ್ಮ ಸ್ತ್ರೀಯರಿಗೆ ಮೋಕ್ಷವಿಲ್ಲೆಂದು ಹೇಳಿದ್ದರೂ. ಅವರು ವ್ರತಗಳನ್ನು ಮಾಡಿ ಪುರುಷ ಜನ್ಮ ಪಡೆದು ಮೋಕ್ಷ ಪಡೆಯಬಹುದೆಂದು ಹೇಳಿತ್ತು. ಆದ್ದರಿಂದ ಸನ್ಯಾಸಿನಿಯರು, ಕಂತಿಯರು ಅಜ್ಜಿಯರು ಈ ಧರ್ಮದಲ್ಲಿ ಸ್ಥಾನ ಪಡೆದಿದ್ದರು.

ಕ್ರಿ.ಶ. ಆರನೆಯ ಶತಮಾನದ ವೇಳೆಗೆ ರಾಜನನ್ನು 'ಪ್ರತ್ಯಕ್ಷ ದೈವ'ವೆಂದು ನಂಬುವ ಪರಿಕಲ್ಪನೆಯು ಬೆಳೆದು ಬಂತು. ಈ ಹೊತ್ತಿನಲ್ಲಿ ರಾಜನ ಬಿರುದುಗಳು ಸಾಮಾನ್ಯವಾಗಿ 'ರಾಜಾಧಿರಾಜ' 'ರಾಜಾ ಪ್ರತ್ಯಕ್ಷದೇವತಾ' ಮುಂತಾವುಗಳಿಂದ ಕೂಡಿದ್ದವು. ಇದೇ ಕಾರಣಕ್ಕೆ ರೂಪುಗೊಂಡ 'ಸತಿ' ಪದ್ಧತಿಯು ಹೊಸ ರಾಜಕೀಯ ವ್ಯವಸ್ಥೆಯ ಪರಿಣಾಮವೇ ಆಗಿತ್ತು. ರಾಜಕೀಯ ವ್ಯವಸ್ಥೆಯು ನಂಬಿದ ಹೊಸ ನೈತಿಕ ಮೌಲ್ಯಗಳ ಪರಿಣಾಮವೆಂದರೆ – ಸತಿಪದ್ಧತಿ, 'ಮೇಲು ವರ್ಗವು ನಂಬಿದ ಮೌಲ್ಯಗಳ ಆದರ್ಶೀಕರಣ'ವನ್ನು ಆ ಕಾಲದ ಜನಜೀವನದ ಕ್ರಮವನ್ನು ವಿಸ್ತರಿಸುವ ಯತ್ನವನ್ನು ರಾಜಕೀಯ ವ್ಯವಸ್ಥೆಯು ಮಾಡಿದುದನ್ನು ಕಾಣಬಹುದು. ಪದ್ಧತಿಗೂ ನೈತಿಕ ಮೌಲ್ಯದ ವಿಸ್ತೃತತೆಗೂ ಸಂಬಂಧವಿದೆ. ಕಾರಣಗಳು ಹೀಗಿವೆ. ಸತಿ ಪದ್ಧತಿಯ ಮೂಲಕವೇ ಮೋಕ್ಷವು ಸಿಗುವುದೆಂಬ ನಂಬಿಕೆ ಅಂದರೆ ಇದು ಗಂಡನೇ ಪರದೈವೆಂಬ ನಂಬಿಕೆಯ ಬೆಳವಣಿಗೆಯಾಗಿದೆ. ಸತಿ ಪದ್ಧತಿಯೆಂದರೆ ಅತ್ಯಂತ ಪವಿತ್ರವಾದ ಕೆಲಸವೆನ್ನುವ ಪರಿಕಲ್ಪನೆಯನ್ನು ಈ ಕಾಲದ ಸಾಹಿತ್ಯವು ಪ್ರತಿಪಾದಿಸುತ್ತವೆ. ಇದರೊಂದಿಗೆ

ಊಹಿಸಬಹುದಾದ ಮತ್ತೊಂದು ಕಾರಣವೆಂದರೆ – ರಾಜಕೀಯ ಯುದ್ಧಗಳು ಮತ್ತು ಹೆಣ್ಣಿನ ಅಪಹರಣದ ಸಾಧ್ಯತೆ.

1. 'ಏಕಪತಿತ್ವ ಮತ್ತು ಹೆಣ್ಣಿನ ಪಾತಿವ್ರತ್ಯದ ಮೇಲೆ ನಂಬಿಕೆಯು ಹೆಚ್ಚಾಗಿರುವುದು.
2. ಜಾತಿಯ ನಂಬಿಕೆಗಳು ಹೆಚ್ಚಾಗಿರುವುದು.
3. ಆಸ್ತಿಯ ಮೇಲೆ ಏಕ ಪ್ರಭುತ್ವ ರೂಪಿತವಾದುದು.

ಬಹುಶಃ ಈ ಮೇಲಿನ ಕಾರಣಗಳಿಂದ 'ಸತಿಪದ್ಧತಿ'ಯ ಆಚರಣೆಯನ್ನು ಸ್ತ್ರೀಯರು ಆಚರಿಸುವ ಸ್ಥಿತಿಯು ಬಂತು. ಒಂದು ವೇಳೆ 'ಸತಿ'ಯಾಚರಣೆ ಮಾಡದಿದ್ದ ಸ್ತ್ರೀಯು (ವಿಧವೆ) ಸರಳವಾದ ಜೀವನವನ್ನು ನಡೆಸಬೇಕೆಂಬ ನಿಯಮವು ಬಂದಿರಬೇಕು. ವಿಧವೆಯರ ಸಹಗಮನವು ಮಹಾಕಾವ್ಯದ ಕಾಲಕ್ಕೆ ಅಷ್ಟೊಂದು ಪ್ರಚಲಿತವಾಗಿರಲಿಲ್ಲ. ಕ್ರಿ.ಶ. 5ನೆಯ ಶತಮಾನದ ಅನಂತರ ಸತಿಪದ್ಧತಿಯು ಜಾರಿಗೆ ಬಂತು. ಈ ಕಾಲದಲ್ಲಿ ವಿಧವೆಯು ಬ್ರಹ್ಮಚರ್ಯವ್ರತವನ್ನು ಪಾಲಿಸಬೇಕು ಅಥವಾ ಸತಿಯಾಚರಣೆ ಮಾಡಬೇಕು ಎನ್ನುವ ಪದ್ಧತಿಯು ಜಾರಿಗೆ ಬಂತು ಎಂದು ರೊಮಿಲಾ ಥಾಪರ್ ಹೇಳುತ್ತಾರೆ. (1982 ಪು.152) ಈ ಕಾರಣದಿಂದ ಮಹಾಭಾರತದಲ್ಲಿ ಕೆಲವೆಡೆ ಮಾತ್ರ ಸತಿಯಾಚರಣೆಯ ವಿವರ ಬರುತ್ತದೆ. ಹತ್ತನೆಯ ಶತಮಾನದ ತರುವಾಯ ಉಲ್ಬಣಗೊಂಡ 'ಸತಿಪದ್ಧತಿ'ಯು ದಕ್ಷಿಣ ಭಾರತದಲ್ಲೆಲ್ಲಾ ಪ್ರಚುರಗೊಂಡಿತು.

ಸಹಗಮನ ಪದ್ಧತಿಯು ಪ್ರಾಚೀನ ಕರ್ನಾಟಕದಲ್ಲಿ ಪ್ರಚಲಿತದಲ್ಲಿದ್ದರೂ, ಕೆಲವಾರು ವೀರಗಲ್ಲುಗಳನ್ನು ಸತ್ತವೀರನ ಹೆಂಡತಿಯೇ ಹಾಕಿಸಿರುವ ನಿದರ್ಶನಗಳು ದೊರೆಯುತ್ತವೆ. ಇದರಿಂದ ಸಹಗಮನ ಪದ್ಧತಿಯು ಕಡ್ಡಾಯವಾದ ಸಂಪ್ರದಾಯವಾಗಿರಲಿಲ್ಲವೆಂದು ತೋರುತ್ತದೆ.

ವಿವರಗಳಿಗೆ ನೋಡಿ: ಮಹಾಸತಿ

ಡಾ. ಆರ್. ಶೇಷಶಾಸ್ತ್ರಿ 2004 ಕರ್ನಾಟಕದ ವೀರಗಲ್ಲುಗಳು ಪುಟ. 106

ಭಗವತ್ ಶರಣ್ ಉಪಾಧ್ಯಾಯ 2004 ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ ಪುಟ. ೨೦೧–೨೦೨

ಎಸ್.ಕೆ.ಡೇ.(ಸಂ) 1971 ಯುಗಯಾತ್ರೀ ಭಾರತೀಯ ಸಂಸ್ಕೃತಿ (ಮೊದಲ ಸಂಪುಟ) ಪುಟ. 454–455

Althsar .A.S. 1962 The Position of Women in Hindu Civilisation P. 128

ಎಂ. ಎಂ. ಕಲಬುರ್ಗಿ 1988 ಮಾರ್ಗ–ಸಂಪುಟ. 1

Barth .A. 1963 The Religion of India P. 96
ವೀರಣ್ಣ ಸಿ. 1986 ಪ್ರಾಚೀನ ಸಾಹಿತ್ಯ ರಾಜಸತ್ತೆಯ ವೈಭವದ ಕಾಲ ಪುಟ. 67–68

ಸಹಧರ್ಮಿಣಿ

ಸಹಧರ್ಮಿಣಿ ಅಂದರೆ ಗಂಡನ ಧರ್ಮಕ್ಕೆ ಪೂರಕವಾಗಿರುವವಳು. ಗೃಹಧರ್ಮ–ಹೆಣ್ಣಿಗೆ ಗೃಹಧರ್ಮ ಮುಖ್ಯ. ಸಾಮಾಜಿಕ ಧರ್ಮ ಬೇರೆ. ಅದರ ಮುಖವೇ ಸಮಾಜಕ್ಕೆ ಸಂಬಂಧಿಸಿದ್ದು. ಆದರೆ ಗೃಹಧರ್ಮವೆಂದರೆ ಮನೆಗೆ ಸಂಬಂಧಿಸಿದ ಕರ್ತವ್ಯ ಮತ್ತು ಹೊಣೆಗಾರಿಕೆ. ಲೌಕಿಕದ ಕರ್ತವ್ಯದ ಜೊತೆಗೆ ಗೃಹದ ಕರ್ತವ್ಯವನ್ನು ಹೆಣ್ಣು ಪೂರೈಸಬೇಕೆಂಬುದು ಈ ಪರಿಕಲ್ಪನೆಯ ಹಿಂದಿರುವ ಪರಿಕಲ್ಪನೆಯಾಗಿದೆ.

ಸಾಭಿಜ್ಞಾನ

ಸಾಭಿಜ್ಞಾನವೆಂದರೆ ನೆನಪಿಗಾಗಿ ಕೊಡುವ ವಸ್ತು.ಅಭಿಜ್ಞಾನ ಶಾಕುಂತಲವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ವಿವರಗಳಿಗೆ ನೋಡಿ: ಕೀರ್ತಿನಾಥ ಕುರ್ತಕೋಟಿ 2010 ಪ್ರತ್ಯಭಿಜ್ಞಾನ

ಸಾಮಂತ

ಸಾಮಂತರೆಂದರೆ ಹತ್ತಿರದವರು ಮತ್ತು ಪರ್ಯಾಯ ಆಡಳಿತಗಾರರು. ಆಡಳಿತದ ವಿಕೇಂದ್ರಿಕರಣದ ಸೂಚನೆಗಳಿವು.

ಅಗ್ರಹಾರದ ಅರ್ಥ ಹುಡುಕಬೇಕು. ಸಾಮಂತ ಚೂಡಾಮಣಿಯೆಂದರೆ ಸಾಮಂತರ ಸಾಲಿನಲ್ಲಿ ಚೂಡಾಮಣಿಯಾಗಿದ್ದವನು. ಅಂದರೆ ಸಾಮಂತ ಶ್ರೇಷ್ಠವೆಂದರ್ಥ. ಚೂಡಾಮಣಿಯೆಂದರೆ ತಲೆಯ ಆಭರಣ. ಚೂಡಾರತ್ನವೆಂದೂ ಕರೆಯುತ್ತಾರೆ.

ವಿವರಗಳಿಗೆ ನೋಡಿ: Romila Thapar 1975 The Past and Prejudice P. 56
ಡಾ. ವಿ. ಚಿದಾನಂದ ಮೂರ್ತಿ 2008 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.

ಸಾಮಂತರಾಜರು

ಅವರವರ ಆಳಿಕೆಯ ಪ್ರದೇಶದಲ್ಲಿ ಅಧಿರಾಜರಿಗಿದ್ದ ಸ್ಥಾನಮಾನಗಳೇ, ಗೌರವಗಳೇ ಸಾಮಂತರಿಗೂ ಇದ್ದವು. ಅಧಿರಾಜರಂತೆಯೇ ಇವರು ಮಂತ್ರಿಗಳನ್ನೂ ಸೇನೆಯನ್ನೂ ಇತರ ಅಧಿಕಾರಿವರ್ಗವನ್ನೂ ಪಡೆದಿದ್ದರು. ಸಾಮಂತರಂತೆಯೇ ಮಂಡಲೇಶವರರು ಅಧಿರಾಜನ ಅಧೀನರು, ತಮ್ಮ ಆಳಿಕೆಯ ಪ್ರದೇಶದಲ್ಲಿ ಸರ್ವಾಧಿಕಾರಿಗಳು, ಆದರೂ ಇಬ್ಬರಿಗೆ ಒಂದು ಸಣ್ಣ ವ್ಯತ್ಯಾಸವಿರುವಂತೆ ಕಾಣಿಸುತ್ತದೆ.

ಸಾಮಂತರು ಯಾವುದೇ ಪ್ರಾಂತವನ್ನು ಮೊದಲಿನಿಂದಲೂ ಆಳುತ್ತಾ ಬಂದಿರತಕ್ಕವರು. ಅಧಿರಾಜನು ತಮ್ಮನ್ನು ಗೆದ್ದಿರುವುದರಿಂದ ಅವನ ಅಧೀನರು ಮತ್ತು ಸಮಯ ಸಿಕ್ಕಿದಾಗ ಸ್ವತಂತ್ರರಾಗಲು ಹವಣಿಸುವವರು. ಮಹಾಮಂಡಲೇಶ್ವರರನ್ನು ರಾಜ್ಯದ ಬೇರೆ ಬೇರೆ 'ಮಂಡಲ' ಅಥವಾ ಭಾಗಗಳಿಗೆ ಅಧಿರಾಜನು ನೇಮಿಸುತ್ತಿದ್ದಂತೆ ಕಾಣುತ್ತದೆ. ಇದಕ್ಕೆ ಸ್ಪಷ್ಟ ನಿದರ್ಶನವು ಹೆಗ್ಗಡದೇವನಕೋಟೆ ತಾಲ್ಲೂಕಿನ ಶಾಸನದಲ್ಲಿದೆ. ಕುಡಿಯರ ಒಡೆಯನೂ, ನುಗುನಾಡ ಅಧಿಪತಿಯೂ ಆದ ರವಿಗನಿಗೆ ಚೋಳಚಕ್ರವರ್ತಿಯು ಸತ್ತಿಗೆ, ಶಂಖ, ಝಲ್ಲಳಿ ಮುಂತಾದುವನ್ನು ಕೊಟ್ಟು 'ಮಂಡಳೀಕ ಪದವಿ'ಯನ್ನು ದಯಪಾಲಿಸಿದಂತೆ ಆ ಶಾಸನವು ಹೇಳುತ್ತದೆ.

ಮಂಡಲೇಶ್ವರ ಮತ್ತು ಸಾಮಂತರಿಗೂ ರಾಜರಂತೆಯೇ ಪ್ರತ್ಯೇಕ ಧ್ವಜ, ಲಾಂಛನಗಳಿದ್ದುವು. ಅವರೂ ರಾಜರಂತೆ ತಮ್ಮ ತಮ್ಮ ಆಳಿಕೆಯ ಭಾಗಗಳಲ್ಲಿ ದೇಶಸಂಚಾರವನ್ನು ಕೈಗೊಂಡು ಜನರ ಕಷ್ಟಸುಖಗಳನ್ನು ವಿಚಾರಿಸುತ್ತಿದ್ದ ಪ್ರಸ್ತಾಪ ಅಲ್ಲಲ್ಲಿ ಬಂದಿದೆ. ಯುದ್ಧದ ಸಮಯದಲ್ಲಿ ಇವರು ತಮ್ಮ ಅಧಿರಾಜನ ಸಹಾಯಕ್ಕೆ ಹೋಗಿ ಅನೇಕ ದೇಶಗಳನ್ನು ಗೆದ್ದು ಕೊಟ್ಟದ್ದು ಉಂಟು. ಆದ್ದರಿಂದಲೇ ಹಲವು ಸಾಮಮತರನ್ನು ಚಕ್ರವರ್ತಿಯು ಕಟ್ಟಿಕೊಂಡ ನಚ್ಚಿನ ಅಲಗುಗಳೆಂದು ವರ್ಣಿಸಿರುವುದು. ಮಹಾಮಂಡಲೇಶ್ವರ ಎನ್ನುವುದು ಮಂಡಳೇಶ್ವರ ಎನ್ನುವ ಪದವಿಗಿಂತ ದೊಡ್ಡದು ಎಂಬುದು ಸ್ಪಷ್ಟವಾಗಿದೆ. ಒಬ್ಬ ಮಹಾಮಂಡಳೇಶ್ವರನ ಅಧೀನದಲ್ಲಿ ಹಲವು ಮಂಡಳೇಶ್ವರರಿತುತ್ತಿದ್ದರೆಂದು ಕಾಣುತ್ತದೆ. ಶ್ರೀಮನ್ಮಹಾಮಂಡಳೇಶ್ವರ ಜಗದೇಕಮಲ್ಲ ಮಲ್ಲದೇವನು ನಲವತ್ತು ನಾಲ್ವರು ಮಡಳಿಕರ ತಲೆಗಳನ್ನು ತೆಗೆದುಕೊಂಡ ಶೂರನಾಗಿದ್ದನೆಂದು ಶಾಸನವೊಂದು ಹೇಳುತ್ತದೆ. "(ನಲವತ್ತುನಾಲ್ವರ್ ಮಂಡಳಿಕರ ತಲೆಗೊಂಡ ಗಂಡ)" ಮಂಡಲೇಶ್ವರರು ಮಹಾಮಂಡಲೇಶ್ವರನಿಗೆ ಕಪ್ಪವನ್ನು ಕೊಡುತ್ತಿದ್ದಂತೆ ಶಾಸನವೊಂದರಿಂದ ತಿಳಿದು ಬರುತ್ತದೆ. ಮಹಾಮಂಡಲೇಶ್ವರರು ತಮ್ಮ ಆಳಿಕೆಯ ಪ್ರದೇಶದ ಆದಾಯದ ಒಂದು ಭಾಗವ್ನ್ನು ಚಕ್ರವರ್ತಿಗೆ ಸಲ್ಲಿಸುತ್ತಿದ್ದರು.

ವಿವರಗಳಿಗೆ ನೋಡಿ: ಡಾ.ಎಂ ಚಿದಾನಂದಮೂರ್ತಿ 2008.ಪು.377-378-379

ಸಾಮಾಜಿಕ ಮತ್ತು ಆರ್ಥಿಕ ವ್ಯಾಪಾರ

ಮೊದಲನೆಯದಾಗಿ ಸಾಮಾಜಿಕ, ಧಾರ್ಮಿಕ ಸಂಗತಿಗಳು ಸ್ವತಂತ್ರವಲ್ಲ. ಅವು ಸ್ವಾಯತ್ತವೂ ಅಲ್ಲ. ರಾಜಕೀಯ ಮತ್ತು ಧಾರ್ಮಿಕ ಆಂದೋಲನಗಳು ಸಾಮಾಜಿಕ ನಿಯಂತ್ರಣ ಮತ್ತು ಸಾಮಾಜಿಕ ಪ್ರಸ್ತುತತೆಗೆ ಅಗತ್ಯಕ್ಕೆ ಅನುಸಾರವಾಗಿ ರೂಪುಗೊಂಡಿರುತ್ತವೆ. ಈ ದೃಷ್ಟಿಯಿಂದ ಗಾಂಧಿಯವರ ಚಿಂತನೆಗಳು ಹೆಚ್ಚು ಪ್ರಚಲಿತಗೊಂಡಿರುವುದು ಸಾಮಾಜಿಕ ಚಾರಿತ್ರಿಕ ಅಗತ್ಯಕ್ಕೆ ಅನುಸಾರವಾಗಿ. ಎರಡನೆಯದು ಗಾಂಧಿಯವರ ಚಿಂತನೆಗಳು ತೀರಾ ಸಾಮಾನ್ಯವೆಂಬ ಕಾರಣಕ್ಕಾಗಿ ಹುಟ್ಟಿಕೊಂಡಿಲ್ಲ. ಅದರ ಹಿನ್ನೆಲೆಯಲ್ಲಿ ಮಹತ್ವದ ಉದ್ದೇಶವಿತ್ತು. ಗಾಂಧೀಜಿಯವರ

ಚಳುವಳಿಯಲ್ಲಿ ಎರಡು ಪ್ರಮುಖ ನೆಲೆಗಳಿವೆ: ಒಂದು ಸಂಸ್ಕೃತಿಗೆ ಸಂಬಂಧಿಸಿರುವುದು. ಮತ್ತೊಂದು ರಾಜಕೀಯಕ್ಕೆ ಸಂಬಂಧಿಸಿದ್ದು. ಹೀಗಾಗಿ ಅವರ ಚಿಂತನೆಯ ಕ್ರಮವು "ಅವಿಮರ್ಶಾತ್ಮಕ" ನೆಲೆಯಿಂದ ಹುಟ್ಟಿರುವಂಥದ್ದಲ್ಲ ಎಂಬುದನ್ನು ಗಮನಿಸಬೇಕು. ಅದು ಖಾಸಗಿ ಚಿಂತನೆಯೂ ಅಲ್ಲ. ಅವರ ಸಾಂಸ್ಕೃತಿಕ ಚಿಂತನೆಗಳು ಹೇಗೆ ಸಾಂಸ್ಕೃತಿಕ ಅಗತ್ಯವಾಗಿತ್ತೋ ಅದೇ ರೀತಿಯಲ್ಲಿ ಅವು ಪ್ರಭುತ್ವವನ್ನು(ಬ್ರಿಟಿಷ್) ವಿರೋಧಿಸಲು ಕೈಗೊಂಡ ಪರಿಕರವೂ ಆಗಿತ್ತು ಎಂಬುದು ಗಮನಾರ್ಹ.

ವಿವರಗಳಿಗೆ ನೋಡಿ: Andrew Milner 2003 Contemparary cultural theory

ಕೆ.ವಿ.ಸುಬ್ಬಣ್ಣ ೨೦೦೪ ಅರೆ ಶತಮಾನದ ಅಲೆ ಬರಹಗಳು (ಸಂ: ಟಿ.ಪಿ.ಅಶೋಕ)

ಸಾರಥಿ

ಸಾರಥಿಯಾದವನು ಹೇಗಿರಬೇಕೆಂದು ಮಾನಸಲ್ಲೋಸದಲ್ಲಿ ಹೀಗೆ ವಿವರಿಸಿದ್ದಾರೆ. ಅವನಿಗೆ ಅಶ್ವದ ಹೃದಯವು ತಿಳಿದಿರಬೇಕು. ಶಕುನಗಳು ತಿಳಿದಿರಬೇಕು. ಕುದುರೆಗಳಿಗೆ ತರಬೇತಿ ನೀಡಲು ತಿಳಿದಿರಬೇಕು. ಭೂಮಿಯ ಭಾಗವು ತಿಳಿದಿರಬೇಕು. ರಥಗಳ ಬಲಾಬಲವನ್ನು ತಿಳೀದಿರಕೊಂಡಿರಬೇಕು. ಅನುಭವ ಶೂರನಾಗಿರಬೇಕು. ಸ್ಫುರದ್ರೂಪಿಯಾಗಿರಬೇಕು. (ಮಾನಸಲ್ಲೋಸ–3 133)

ಸಾರ್ಥಾಧಿಪತಿ

ಬೆಲೆಬಾಳುವ ಸರಕಿನ ಬಂಡಿಗಳ ಶ್ರೇಣಿಗೆ ಒಡೆಯ. (ವ್ಯಾಪಾರಿಗಳ ತಂಡದ ಮುಖ್ಯಸ್ಥ, ವರ್ತಕರ ಮುಖಂಡ ಎಂಬ ಅರ್ಥಗಳಿವೆ.) ಸರಕು ಸಾಗಾಣಿಕೆ ಎನ್ನುವುದು ವ್ಯವಹಾರ ಉದ್ದಿಮೆಯಲ್ಲಿ ಪ್ರಮುಖ ಪಾತ್ರವಹಿಸಿದಾಗ ಈ ರೀತಿಯ ಪರಿಭಾಷೆಗಳು ಹುಟ್ಟಿಕೊಳ್ಳುತ್ತದೆ. ವರ್ತಕರಲ್ಲಿ ಬೇರೆ ಬೇರೆ ವರ್ಗೀಕರಣ ಇರುವುದನ್ನು ಇದು ಸೂಚಿಸುತ್ತದೆ. ವರ್ತಕರಲ್ಲಿ ಮೇಲುಜಾತಿಯ ವರ್ತಕರನ್ನು ಸಾರ್ಥಾಧಿಪತಿ ಎಂದು ಕರೆಯಲಾಗಿದೆ. ಮತ್ತು ವರ್ತಕರು ಬೇರೆ ಬೇರೆ ಸ್ಥಳಗಳಿಂದ ಸರಕುಗಳನ್ನು ತಂದು ಮಾರಾಟ ಮಾಡುವ ಸಂಗತಿಯೂ ಇದರಲ್ಲಿ ವ್ಯಕ್ತವಾಗುತ್ತದೆ.

ಸಾಲಿಗರ ಬಿರ್ದ್ದಿ

ಸಾಲಿಗರೆಂದರೆ ನೇಕಾರರು ಎಂದರ್ಥ. ವಿರ್ದಿನ ಎಂದರೆ ಅತಿಥಿ, ಬಿರ್ದ್ದಿ ಎಂಬುದು (ವೃದ್ಧಾ) ಮುದುಕಿ ಹೆಂಗುಸು ಎಂಬ ಅರ್ಥವನ್ನು ಕೊಡುತ್ತದೆ. ಆದ್ದರಿಂದ ನೇಕಾರರ ವೃದ್ಧಸ್ತ್ರೀ ಎಂಬ ಅರ್ಥವೇ ಇಲ್ಲಿ ಬಂದಿದೆ. ವಾಸ್ತವವಾಗಿ ಬೀದಿಗಳಿಗೂ ಜಾತಿಗಳಿಗೂ ಇರುವ ನಂಟು ಬಹಳ ಮುಖ್ಯವಾದುದು. ಉದಾ: ಬ್ರಾಹ್ಮಣ ಬೀದಿ; ನೇಕಾರ ಬೀದಿ; ಇತ್ಯಾದಿ.

ಸಾವು ಮತ್ತು ಶವಸಂಸ್ಕಾರ

ಸಾವು ಎಂಬುದು ಸೂತಕವೂ ಹೌದು. ಉತ್ತರಕ್ರಿಯೆಗಳು ಮುಗಿದವು. ಇದು ಸಹಜ ಆಚರಣೆ ಸತ್ತ ವ್ಯಕ್ತಿಯನ್ನು ಸುಡುವುದು; ಏಳುದಿನದ ಸೂತಕ; ಅನಂತರ ಉತ್ತರ ಕ್ರಿಯೆ ಹಾಗೂ ಗುರಿಕಾರ ಸತ್ತವರ ಜೀವನವನ್ನು ಹಿರಿಯರು ಸೇರಿಸಿಕೊಳ್ಳುವಂತೆ ಪ್ರಾರ್ಥಿಸುವುದು ಗಮನಾರ್ಹ ಅಂಶವಾಗಿದೆ. ಆದರೆ 'ಇವರಲ್ಲಿ ಸತ್ತರೆ ಹೂಳುವೆಯೂ ಸುಡುವ ಎರಡೂ ಕ್ರಮಗಳಿವೆ. ಸತ್ತ ಏಳನೇ ದಿನ ಹೂಳಿಟ್ಟ ಸ್ಥಳದಲ್ಲಿ ಸಣ್ಣ ಚಪ್ಪರ ಕಟ್ಟಿ ಅದರ ಮೇಲೆ ಮಡಿವಸ್ತ್ರವನ್ನು ಅಗಸನಿಂದ ಹಾಕಿಸುವರು ಮತ್ತು ತೆಂಗಿನ ಕಾಯಿ ಒಡೆದು ಒಂದು ಗಡಿಗೆಯಲ್ಲಿ ಎಣ್ಣೆ ಹೊಯ್ದು ಚಪ್ಪರದ ಮೂಲೆಯಲ್ಲಿ ದೀಪ ಇಡುವುದು. ಅನಂತರ ಅಕ್ಕಿಕಾಳನ್ನು ಚಪ್ಪರಕ್ಕೆ ಬಿಸಾಡುವರು' ಸತ್ತವರು ಲೋಕವನ್ನು ಸೇರುತ್ತಾರೆಂಬ ತಿಳುವಳಿಕೆಯು ಇರುವುದು ಗಮನಾರ್ಹ.

ಸಾಷ್ಟಾಂಗ ಪ್ರಣತ

ಸಾಷ್ಟಾಂಗ ಪ್ರಣತನೆಂದರೆ ಸಾಷ್ಟಾಂಗ ನಮಸ್ಕಾರವೆಂದು ಅರ್ಥ. ಆದುದರಿಂದ ಇಲ್ಲಿ ಬರುವ ಸಾಷ್ಟಾಂಗ ನಮಸ್ಕಾರವೆನ್ನುವುದಕ್ಕೆ ವಿಶೇಷ ಅರ್ಥವಿದೆ. ಸ+ಅಷ್ಟಾಂಗ ಪ್ರಣಾಮಗಳು ಎಂಬುದು ಇದರ ಭಾವಾರ್ಥ. ಅಷ್ಟಾಂಗವೆಂದರೆ ದೇಹದ ಎಂಟು ಅಂಗಗಳು. ಹಣೆ; ಎದೆ; ಎರಡುಕಾಲು; ಮೂಗು; ಎರಡೂ ಮಂಡಿ; ಎರಡು ಪಾದಗಳು; ಭೂಮಿಗೆ ಸ್ಪರ್ಶಿಸುವಂತೆ ನಮಸ್ಕರಿಸುವ ವಿಧಿಯೇ ಸಾಷ್ಟಾಂಗ ನಮಸ್ಕಾರ. ಯೋಗಶಾಸ್ತ್ರ ಅಷ್ಟಾಂಗ ಯೋಗದ ವಿಚಾರ ಬರುತ್ತದೆ.

ಇನ್ನೊಂದು ರೀತಿಯಲ್ಲಿ – ಉರ(ಎದೆ), ಶಿರ, ಮನ, ಮಾತು, ಹಸ್ತ, ಪಾದ, ದೃಷ್ಟಿ. ಮೂಗು– ಈ ಅಷ್ಟಾಂಗಗಳ ಸಮೇತ ನಮಸ್ಕರಿಸುವುದು.

ವಿವರಗಳಿಗೆ ನೋಡಿ: ಎನ್. ಅನಂತರಂಗಾಚಾರ್ 2010 ಪಂಪ ಭಾರತಂ

ಸಾಷ್ಟಾಂಗ ಪ್ರಣಾಮ

ಇದಕ್ಕೆ ಹಳೆಗನ್ನಡದಲ್ಲಿ ವಿವಿಧ ಹೆಸರುಗಳಿವೆ–ಮೊಳ್ಗು, ತುಳಿಲ್, ಕುಂಬು, ಎರಗು, ಬಾಗು, ಪಡೆಮಡು, ಕಾಲ್ವಿಡಿಮಣಿ, ಮೆಯ್ಯಕ್ಕಿ ಈ ಒಂಬತ್ತು ನಮಸ್ಕಾರಗಳು.

ಸಿದ್ಧ

ಸಿದ್ಧ ಶಬ್ದವು 'ಷಿದು' ಎಂಬ ಧಾತುವಿನಿಂದ ಹುಟ್ಟಿದೆ. ಸಿದ್ಧವಾದುದು ಯಾವುದೋ ಅದನ್ನು ಸಿದ್ಧವೆಂದು ಕರೆಯುತ್ತಾರೆ. ಮತ್ತೊಂದು ಅರ್ಥವಿದೆ. ಸಿದ್ಧವಾದುದು ಎಂದರೆ ತಯಾರಾಗಿರುವುದು. ಸಂಸ್ಕೃತದಲ್ಲಿ ಆಶೀರ್ವದಿಸುವಾಗ ಹೇಳುವ ಮಾತೊಂದಿದೆ: 'ಇಷ್ಟಾರ್ಥ ಸಿದ್ಧಿರಸ್ತು' ಅಂದರೆ ನೀನು ಇಷ್ಟ ಪಟ್ಟು ಲಭಿಸಲಿ ಎಂದರ್ಥ. ಸಿದ್ಧಾಂತವೆಂದರೆ ಈಗಾಗಲೇ ತಯಾರಾಗಿರುವುದು ಮತ್ತು

ಪ್ರಶ್ನಾತೀತವಾದುದು ಎಂಬ ಭಾವನೆಯು ಬರುತ್ತದೆ. ಯಾರ ಸಾಧನೆಯ ಮೂಲಕ ಸಿದ್ಧಿಯನ್ನು ಪಡೆಯುತ್ತಾನೋ ಅವನೇ ಸಿದ್ಧ. ಅನಂತರದಲ್ಲಿ ಸಿದ್ಧವೆನ್ನುವುದು ಒಂದು ಪಂಥವಾಯಿತು. ಸಿದ್ಧಿಗಳಲ್ಲಿ ಅನೇಕ ಬಗೆಗಳಿವೆ: ವಾಕ್‌ಸಿದ್ಧಿ ಅಂದರೆ – ಮಾತಿನಸಿದ್ಧಿ, ಮಂತ್ರಸಿದ್ಧಿ ಅಂದರೆ ಮಂತ್ರವನ್ನು ವಶೀಕರಿಸಿಕೊಂಡವನು, ಅಣಿಮಾ, ಲಘಿಮಾ, ಗರಿಮಾ, ಈಶಿತ್ವ, ವಶಿತ್ವ, ಪಂಚಭೂತಸಿದ್ಧಿ, ಆಧ್ಯಾತ್ಮಿಕ ಸಿದ್ಧಿ, ದಶಸಿದ್ಧಿ (ಬೌದ್ಧಧರ್ಮ.) ಯಾರು ರೀತಿಯ ಸಿದ್ಧಿಯನ್ನು ಸಾಧಿಸುತ್ತಾರೋ ಅವರನ್ನು ಸಿದ್ಧರೆಂದು ಕರೆಯುತ್ತಾರೆ. ಭಾರತದಲ್ಲಿ ಬೌದ್ಧಸಿದ್ಧರು; ನಾಥಸಿದ್ಧರು; ರಸಸಿದ್ಧರು; ಜ್ಞಾನಸಿದ್ಧರು, ಮಾಹೇಶ್ವರ ಸಿದ್ಧರು ಮೊದಲಾದ ಪಂಥಗಳಿವೆ. ಪಾದರಸ (ಶಿವ) ಅಭ್ರಕ (ಶಕ್ತಿ) ಇವುಗಳನ್ನು ಸೇವಿಸಿದರೆ ಮೃತ್ಯುಭಯವಿಲ್ಲ. ದಾರಿದ್ರ್ಯನಾಶವಾಗುತ್ತದೆ. ಜೀವನ್ಮುಕ್ತಿ ಹಾಗೂ ಅಜರಾಮತ್ವದ ಸಾಧಕರೆಂದು ತಿಳಿಯಪಡಿಸುತ್ತದೆ. ಇದು ನಂಬಿಕೆ ಮಾತ್ರ.

ವಿವರಗಳಿಗೆ ನೋಡಿ: ಮ.ಸು.ಕೃಷ್ಣಮೂರ್ತಿ ೧೯೮೨. ಸಿದ್ಧಸಾಹಿತ್ಯ ಪು.೧–೬

ಸಿನಿಮಾ ಮತ್ತು ಜೀವನ

೧೮೯೫ ರಲ್ಲಿ ಪ್ಯಾರಿಸ್‌ನಲ್ಲಿ ಚಲನಚಿತ್ರ ಮಾಧ್ಯಮ ಉಗಮವಾಯಿತು. ೧೯೦೩ ರಲ್ಲಿ ಭಾರತದಲ್ಲಿ ಚಲನಚಿತ್ರ ಪ್ರಾರಂಭವಾದರೂ ಕರ್ನಾಟಕದಲ್ಲಿ ೧೯೧೨ ರಲ್ಲಿ ಮೂಕಿ ಚಲನಚಿತ್ರ ಶುರುವಾಯಿತು; ೧೯೨೯ ರಲ್ಲಿ ಬೆಂಗಳೂರಿನಲ್ಲಿ "ವಸಂತ ಸೇನ"(ಮೂಕಿ ಚಿತ್ರ) ತೆರೆಗೆ ಬಂತು ಎಂದು ಕೆಲವರ ವಾದವಿದೆ. ಕನ್ನಡದ ಪ್ರಥಮ ವಾಕ್ಚಿತ್ರ "ಸುಲೋಚನ". ಇದು ೩–೩–೧೯೩೪ರಲ್ಲಿ ತೆರೆಕಂಡಿತು. ಅಭಿರುಚಿಯ ದೃಷ್ಟಿಯಿಂದ ಮೊದಮೊದಲಿನ ವಾಕ್ಚಿತ್ರಗಳು ನೈತಿಕ ಮೌಲ್ಯಗಳನ್ನು ಎತ್ತಿಹಿಡಿದಿದ್ದವು. ಪುರಾಣ ಇತಿಹಾಸದ ವಸ್ತುಗಳನ್ನು ಆಯ್ದುಕೊಂಡಿದ್ದವು. ಇವುಗಳಲ್ಲಿಯೂ ರಾಷ್ಟ್ರೀಯತೆ; ಪ್ರಾದೇಶಿಕತೆ; ಸಾಂಸ್ಕೃತಿಕ ಮೌಲ್ಯಗಳ ಪ್ರಸರಣಗಳೇ ಮುಖ್ಯವಾಗಿದ್ದವು.

ವಿವರಗಳಿಗೆ ನೋಡಿ: ಬರಗೂರು ರಾಮಚಂದ್ರಪ್ಪ ಕರ್ನಾಟಕ ಸಂಗಾತಿ
ಕನ್ನಡ ಸಿನಿಮಾ: ಒಂದು ನೋಟ –ಶ್ರೀ ಗಂಗಾಧರ ಮೊದಲಿಯಾರ್
ಕೆ.ವಿ.ಸುಬ್ಬಣ್ಣ ೨೦೦೪ ಅರೆ ಶತಮಾನದ ಅಲೆ ಬರಹಗಳು (ಸಂ: ಟಿ.ಪಿ.ಅಶೋಕ)

ಸಿಬಿಗೆ

ಪಲ್ಲಕ್ಕಿ, ದಂಡಿಗೆ ಎಂದು ಅರ್ಥ. ಹೆಣವನ್ನು ಹೊರುವ ಸಾಧನ; ಶವವನ್ನು ಸ್ಮಶಾನಕ್ಕೂ, ಸಮಾಧಿಗೂ ಕೊಂಡೊಯ್ಯಲು ಚಟ್ಟವನ್ನು ನಿರ್ಮಿಸುತ್ತಾರೆ. ಚಟ್ಟವು ಸಾಮಾನ್ಯವಾಗಿ ಬಿದಿರಿನಿಂದ ರಚಿಸಲಾಗುತ್ತದೆ. ಚಟ್ಟವನ್ನು ಹೊರಲು ನಾಲ್ಕು ಜನರು ಇರುತ್ತಾರೆ.

ಸೀಮಾ ಸಂಬಂಧ

ಅನ್ನೆಗಂ, ಅನ್ನೆವರಂ, ಅನ್ನೆವರೆಗಂ, ಇನ್ನೆಗಂ, ಇನ್ನೆವರಂ, ಇನ್ನೆವರೆಗಂ,

ಉನ್ನೆಗಂ, ಉನ್ನೆವರಂ, ಉನ್ನೆವರೆಗಂ–ಇವು ಸೀಮಾ ಸಂಬಂಧ ಪ್ರಮಾಣಗಳು ಎಂದು ಕರ್ನಾಟಕ ಶಬ್ದಸಾರಂನಲ್ಲಿ ಬರುತ್ತದೆ.(ಪುಟ ೭೮)

ಸೀಮಾ ಸಂಬಂಧದ ಕಲಹ

ಸೀಮೆಯೆಂದರೆ ಎಲ್ಲೆ, ಗಡಿ, ಮೇರೆ ಎಂದರ್ಥ. ಇದು ಎಲ್ಲೆಯ ಗುರುತು ಕೂಡಾ ಹೌದು. ಊರಿನ ಮೇರೆಯನ್ನು ಸೀಮಾರೇಖೆಯು ಗುರುತಿಸುತ್ತದೆ. ಸೀಮಾರೇಖೆಯನ್ನು ದಾಟಿದಾಗ ಎರಡು ಸೀಮೆಯವರಿಗೆ ಜಗಳವಾಗುವುದು ಸಹಜ.

ನಾವು ಗಡಿಕಲ್ಲುಗಳು ಎಂಬ ಶಾಸನ ಪ್ರಭೇದ ಒಂದರ ಶೀರ್ಷಿಕೆಯಡಿಯಲ್ಲಿ ನೋಡುವಂತೆ, ಒಂದು ಗ್ರಾಮಕ್ಕೂ ಮತ್ತೊಂದು ಗ್ರಾಮಕ್ಕೂ ಗ್ರಾಮಗಳ ಎಲ್ಲೆಗಳ ಬಗ್ಗೆ ಆಗಾಗ ಜಗಳಗಳು ಆಗುತ್ತಿದ್ದವು. ಇವು ಕೆಲವೊಮ್ಮೆ ಪ್ರಾಣ ಹಾನಿಯಾಗದೆ ತೀರ್ಮಾನವಾಗುತ್ತಿದ್ದುದು ಉಂಟು. ಕೆಲವೊಮ್ಮೆ ಉದ್ವೇಗದಿಂದ ಕೈ ಕೈ ಮಿಲಾಯಿಸಿ ಪ್ರಾಣ ಹತ್ಯೆಗೆ ಆಸ್ಪದ ನೀಡಿದ ನಿದರ್ಶನಗಳೂ ಉಂಟು. ಇಂಥ ಹೋರಾಟದಲ್ಲಿ ಮಡಿದವರಿಗೆ ಸ್ಮಾರಕಗಳನ್ನು ಆಯಾ ಗ್ರಾಮದವರು ಹಾಕಿಸುತ್ತಿದ್ದರು. ಈ ದೃಷ್ಟಿಯಿಂದ ಚಿಕ್ಕಮಗಳೂರು ತಾಲ್ಲೂಕಿನ ಒಂದು ಶಾಸನ ಗಮನಾರ್ಹವಾಗಿದೆ. 'ಉಪ್ಪಾರವಳ್ಳಿ' ಎಂಬ ಗ್ರಾಮದವರಿಗೂ ಮತ್ತು ಆ ಗ್ರಾಮದ ಪಕ್ಕದ ಗ್ರಾಮದವರಿಗೂ ಸೀಮಾ ಸಂಬಂಧದಲ್ಲಿ ವ್ಯಾಜ್ಯ ನಡೆಯುತ್ತದೆ. ನಡೆದ ಈ ಜಗಳದಲ್ಲಿ ಎರಡೂ ಕಡೆಯವರಲ್ಲಿ ಕೆಲವರು ಸಾಯುತ್ತಾರೆ. ನಡೆಯುತ್ತಿರುವ ಈ ಅನ್ಯಾಯವನ್ನು ಕಂಡು ಬೇರೆಯ ಊರಿನ ಹಿರಿಯರು ನಡುವೆ ಪ್ರವೇಶ ಮಾಡಿ ವೃಥಾ ಸಾವುನೋವು ಸಲ್ಲದು ಎಂದು ಇಬ್ಬರಿಗೂ ಬುದ್ಧಿವಾದ ಹೇಳಿ ಹಿಂದಿನ ದಾಖಲೆಗಳನ್ನು ಪರಿಶೀಲಿಸಿ ಮೇರೆಗಳನ್ನು ನಿಗದಿ ಮಾಡಿ ಜಗಳದಲ್ಲಿ ವ್ಯಕ್ತಿಗಳ ಮನೆಯವರಿಗೆ ಪರಿಹಾರ ದೊರಕಿಸಿ ಕೊಡುತ್ತಾರೆ.

ಕ್ರಿ.ಶ 1402ರ ಒಂದು ವೀರಗಲ್ಲು ಎರಡು ಊರುಗಳವರಿಗೆ ನಡೆದ ಜಗಳವನ್ನು ತಿಳಿಸುತ್ತದೆ. ಮಲ್ಲಿಸೆಟ್ಟಿ ಎಂಬುವನನ್ನು ಲಾಯದಕೇರಿ ಎಂಬ ಗ್ರಾಮದ ಮಲ್ಲಿಶೆಟ್ಟಿ ಎಂಬುವವನು ಕೊಲ್ಲುತ್ತಾನೆ. ತನ್ನ ಅಣ್ಣನನ್ನು ಕೊಂದ ಲಾಯದಕೇರಿಯ ಮಲ್ಲಿಸೆಟ್ಟಿಯನ್ನು ಕೊಂದು ಮುಯ್ಯಿ ತೀರಿಸಿಕೊಳ್ಳಲು ಮಲ್ಲಿಸೆಟ್ಟಿಯ ತಮ್ಮ ಬೋವನು ತನ್ನೂರಿನವರನ್ನು ಜೊತೆ ಮಾಡಿಕೊಂಡು ಲಾಯದಕೇರಿಗೆ ಹೋಗಿ ಜಗಳ ಮಾಡುತ್ತಾನೆ. ಬೋವನು ತನಗೆ ಎದುರಾದ ಲಾಯದ ಕೇರಿಯ ಮಲ್ಲಿಸೆಟ್ಟಿಯ ಮಗ ಸಾವಂಣ ಎಂಬುವವನ್ನು ಕೊಂದು ಹೋರಾಟದಲ್ಲಿ ತಾನೂ ಸಾಯುತ್ತಾನೆ.

ಮೇಲೆ ಗಮನಿಸಿದ ಎಲ್ಲಾ ವಿಧವಾದ ವೀರಸ್ಮಾರಕಗಳಲ್ಲಿಯೂ ಅಂದರೆ, ವೀರನೊಡನೆ ಅವನ ಹೆಂಡತಿ ಸಹಗಮನ ಮಾಡಿದ್ದರೆ ಅವರ, ಅವಳ ಪ್ರಸ್ತಾಪ ಬರುತ್ತದೆಯಾದರೂ ಇಲ್ಲಿ ಮುಖ್ಯವಾಗಿ ವೀರನಿಗೆ ಪ್ರಾಶಸ್ತ್ಯ ದೊರೆತಿರುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. (ಆರ್. ಶೇಷಶಾಸ್ತ್ರಿ)

ಗಡಿಗಾಗಿ ವ್ಯಾಜ್ಯದಲ್ಲಿ ಮರಣ ಹೊಂದಿದವರು ಕೂಡಾ ವೀರರೆಂದೇ ಪರಿಗಣಿಸಲ್ಪಟ್ಟಿದ್ದರು. ಮುಯ್ಯಿ ಮುಯ್ಯಿ ಎನ್ನುವ ತತ್ವ ಊರಿನ ಬಗೆಗಿನ ಅಭಿಮಾನವು ಇದರಲ್ಲಿ ವ್ಯಕ್ತವಾಗುತ್ತದೆ. ಇಲ್ಲಿ ಸೀಮಾ ರೇಖೆಯೆನ್ನುವುದು ಮುಖ್ಯ. ಒಂದು ಊರಿಗೂ ಮತ್ತೊಂದು ಊರಿಗೂ ಕಲ್ಪಿತ ರೇಖೆಗಳಿರುತ್ತವೆ. ಹಿಡುವಳಿ ಜಮೀನಿಗೂ ಕೂಡಾ ಬಾಂದಿನ ಕಲ್ಲು ಮುಖ್ಯವಾಗಿದೆ. ದೇಶಾಭಿಮಾನ; ನಾಡಿನ ಅಭಿಮಾನ; ಊರಿನ ಅಭಿಮಾನ, ಕುಟುಂಬದ ಅಭಿಮಾನವೆಂದು ಬೇರೆ ಬೇರೆ ರೀತಿಯ ಅಭಿಮಾನಗಳಿರುತ್ತವೆ.

ವಿವರಗಳಿಗೆ ನೋಡಿ: ಆರ್. ಶೇಷಶಾಸ್ತ್ರೀ 2005 ಶಾಸನ ಪರಿಚಯ
ಪುಟ. 28–29.

ಸುರಖವಿದ್ಯೆ/ಕರಪಟವಿದ್ಯೆ

ಕಳ್ಳರನ್ನು ಹಿಡಿಯುವ ವಿದ್ಯೆಗೆ 'ಸುರಖವಿದ್ಯೆ'ಯೆಂದು ಕರೆಯುತ್ತಾರೆ. ಕರಪಟ ಶಾಸ್ತ್ರವಿದ್ಯೆಯು ಕಳವು ಮಾಡುವ ಉಪಾಯ ಹೇಳಿಕೊಡುತ್ತದೆ.

ಸುರಿಗೆ

ಇದನ್ನು ಯುದ್ಧದಲ್ಲಿ ಮತ್ತು ಬೇಟೆಯಲ್ಲಿ ಉಪಯೋಗಿಸುತ್ತಿದ್ದರು. ಇದು ಕಬ್ಬಿಣದ ಸಲಾಕೆಯ ಹಾಗೆ ಉದ್ಧವಾಗಿದ್ದು ತಳಭಾಗದಲ್ಲಿ ಹಿಡಿಯುತ್ತದೆ. ಇದರ ಮೊನಚಾದ ಭಾಗಕ್ಕೆ ವಿಷಯವನ್ನು ಸವರಿರುತ್ತಾರೆಂಬ ನಂಬಿಕೆ ಇದೆ. ಈ ಆಯುಧ ಚಿತ್ರದುರ್ಗದ ವಸ್ತು ಸಂಗ್ರಹಾಲಯದಲ್ಲಿದೆ.

ಶತ್ರುಗಳ ಅಸ್ತ್ರಗಳಿಂದ ಆಗುವ ಪೆಟ್ಟನ್ನು ತಪ್ಪಿಸಿಕೊಳ್ಳುವ ಸಲುವಾಗಿ ಉಪಯೋಗಿಸುತ್ತಿದ್ದ ರಕ್ಷಣಾಯುಧವೇ 'ಗುರಾಣಿ'. "ಕನ್ನಡದಲ್ಲಿ ಗುರಾಣಿಯನ್ನು ಪಲಗೆ ಎಂದು ಕರೆಯುತ್ತಾರೆ" ಇದನ್ನು ವೀರಗಲ್ಲುಗಳಲ್ಲಿ 'ಹರಿಗೆ'. 'ಅಡ್ಡಣ್ಣ ಎಂಬುದಾಗಿ 'ಅಡಣ' ಎಂಬುದಾಗಿ ಹೆಸರಿಸಲಾಗಿದೆ. (ಡಾ. ಆರ್. ಶೇಷಶಾಸ್ತ್ರಿ. ೨೦೦೪. ಪು. ೨೨೧–೨೨೪)

ಸುರೆ

ಋಗ್ವೇದೀಯ ಕಾಲದಲ್ಲಿ ಅನ್ನ ಹಾಗು ಹಾಲು ಪ್ರಮುಖ ಭೋಜನ ಸಾಮಗ್ರಿಗಳಾಗಿದ್ದವು. ಘೃತವು (ತುಪ್ಪ) ವಿಶೇಷವಾದ ಹಾಗು ಮಹತ್ವದ ಸ್ಥಾನವನ್ನು ಹೊಂದಿದೆ. ಮಾಂಸಹಾರವೂ ಪ್ರಚಲಿತವಾಗಿತ್ತೆಂದು ತಿಳಿದಿಬರುತ್ತದೆ. ಸೋಮರಸ ಹಾಗು ಸುರೆ ಪ್ರಧಾನ ಪೇಯಗಳಾಗಿದ್ದವು. ಸುರರ ಪಾನ ಸುರಾಪಾನವಾಗಿದ್ದಿರಬಹುದು. ಆದರೆ ಸುರಾಪಾನ ಮತ್ತು ಸೋಮಪಾನವು ಅಸಹಜವಾಗಿರಲಿಲ್ಲ. 'ಸೋಮರಸ'ವು ಆನಂದದ, ಉತ್ಸಾಹದ, ಬಲದ ಕಾರಣವಾಗಿದ್ದರೆ; 'ಸುರೆ'ಯು ಪ್ರಮಾದದ, ಕ್ರೋಧದ, ಉದ್ವೇಗದ ಕಾರಣವಾಗಿದೆ. 'ನವಮ' ಮಂಡಲದಲ್ಲಿ ಬರುವ ಸೋಮದೇವತಾಕವಾದ

ಸ್ತುತಿಗಳನ್ನವಲೋಕಿಸಿದರೆ 'ಸೋಮ'ವು ಪಡೆದ ಪ್ರಾಧಾನ್ಯವನ್ನು ಪರಿಗಣಿಸಬಹುದಾಗಿದೆ.

ಸುಪುಷ್ಪ ಪಟ್ಟ

ಪುಷ್ಪಪಟ್ಟವೆಂಬುದು ಶಿಲ್ಪಶಾಸ್ತ್ರಕ್ಕೆ ಸಂಬಂಧಿಸಿದ್ದು. ರಾಜರೂ ದೇವತೆಗಳು ಧರಿಸುವ ಶಿರೋಭರಣದಲ್ಲಿ 'ಜಟಾ' ಚೂಡ, ಮಕುಟ, ಪಟ್ಟವೆಂಬ ಹನ್ನೆರಡು ವಿಧಾನಗಳಿವೆ. ಇವುಗಳಲ್ಲಿ ಪಟ್ಟವೆಂಬುದು ಪತ್ರಪಟ್ಟ, ರತ್ನಪಟ್ಟ, ಪುಷ್ಪವೃಷ್ಟಿ ಎಂದು ಮೂರು ವಿಧ. ಇಲ್ಲಿಯ ಪುಷ್ಪವೃಷ್ಟಿಯೆಂಬ ಪಾಠವನ್ನು ಪುಷ್ಪಪಟ್ಟ ಎಂದು ತಿಳಿದುಕೊಳ್ಳಬೇಕು.

ಸುಪುಷ್ಪವೃಷ್ಟಿ ಇಲ್ಲಿಯ 'ಸುಪುಷ್ಪ ವೃಷ್ಟಿ' (ಸುಪುಷ್ಪಗಳಮಳೆ) ಎಂಬುದಕ್ಕೆ 'ಸುಪುಷ್ಪದೃಷ್ಟಿ' (ಚೆನ್ನಾಗಿ ಬಲಿತ ಕಣ್ಣು) ಎಂಬ ಭಿನ್ನಪಾಠವಿದೆ. ಆದರೆ. ನಾರಾಯಣ ಮತ್ತು ಅರಿಕೇಸರಿ ಇಬ್ಬರಿಗೂ ಸುಪುಷ್ಪವೃಷ್ಟಿಯಾಯಿತೆಂದಾಗಲೀ, ಸುಪುಷ್ಪ ದೃಷ್ಟಿಗಳಿವೆ ಎಂದಾಗಲೀ ಹೇಳಿದರೆ ನಾರಾಯಣನಿಗಿಂತ ಅರಿಕೇಸರಿ 'ಉದಾತ್ತ'ನೆಂದು ಹೇಳಿದ ಹಾಗಾಗುವುದಿಲ್ಲ. ಈ ಎರಡೂ ಪಾಠಗಳು ಅಪ್ರಯೋಜಕವೆಂದು ಹೇಳುತ್ತ ಡಾ. ಡಿ. ಎಲ್. ನರಸಿಂಹಾಚಾರ್ ಅವರು ಇನ್ನೆರಡು ಪಾಠಗಳನ್ನು ಊಹಿಸುತ್ತಾರೆ. ಅವು ಸುಪುಷ್ಪ ಪಟ್ಟ ಮತ್ತು ಸುಪುಷ್ಪದೃಷ್ಟಿ ಇವುಗಳಲ್ಲಿ ಮೊದಲನೆಯದರ ವಿವರಣೆ ಹೀಗಿದೆ. " ರಾಜರೂ ದೇವತೆಗಳೂ ಧರಿಸಬಹುದಾದ ಶಿರೋ ವೇಷ್ಟನಗಳಲ್ಲಿ ಜಟಾ, ಮೌಳಿ, ಕಿರೀಟ, ಕರಂಡ ಶಿರಸ್ತ್ರಕ, ಕುಂಡಲ (ಕುಂತಲ?) ಕೇಶಬಂಧ, ಧಮ್ಮಿಲ್ಲ, ಅಲಕ, ಚೂಡ, ಮಕುಟ ಮತ್ತು ಪಟ್ಟ–ಎಂಬ 12 ವಿಧಾನಗಳಿವೆ. ಕೊನೆಯದಾದ 'ಪಟ್ಟ' ಎಂಬುದರಲ್ಲಿ ಪತ್ರಪಟ್ಟ, ರತ್ನಪಟ್ಟ ಪುಷ್ಪಪಟ್ಟ ಎಂಬ 3 ಬಗೆಗಳಿವೆ. ಇಲ್ಲಿ ಬರುವ ಪುಷ್ಪಪಟ್ಟ ಎಂಬುದು ತಲೆಗೆ ಹಾಕಿಕೊಳ್ಳುವ ಒಂದು ತೆರನಾದ ಕಿರೀಟವೆಂದು ಹೇಳಬಹುದು.'

ವಿವರಗಳಿಗೆ ನೋಡಿ: ಪಂಪ ಭಾರತ ಗದ್ಯಾನುವಾದ
ಡಾ. ಎಂ. ಎಂ. ಕಲಬುರ್ಗಿ ೧೯೮೮ ಮಾರ್ಗ ೧
ಮತ್ತು ಮಾರ್ಗ ೨, ಪುಟ. ೭೧–೭೨.
ಮುಳಿಯ ತಿಮ್ಮಪ್ಪಯ್ಯ – ನಾಡೋಜ ಪಂಪ.

ಸೂಚೀ ನಾಟ್ಯ

ಸೂಚೀನಾಟ್ಯದ ವಿವರ ಹೀಗಿದೆ: ಮಿಂಚಿನಂತೆ ಪ್ರಕಾಶಮಾನವಾದ ಹಾರಾಟ. 64 ಬಗೆಯ ಕರ್ಮ ಅಥವಾ ನೃತ್ಯದ ಕೆಲಸಗಳಿಗೆ ಆಶ್ಚರ್ಯವಾದ ಹಸ್ತದ ಪ್ರದರ್ಶನಗಳು. ಭಾವರಸ ಕೃಷಿಗಳಾದ ದೃಷ್ಟಿಗಳು ಸರಸ್ವತಿಯ ಕಾರ್ಯವೆನಿಸಿದ ಕರಣಗಳು ನರ್ತನಕ್ಕೆ ಚಾರುತ್ವ ಅಥವಾ ಸೌಂದರ್ಯವನ್ನು ವರ್ಧಿಸುವ ಚಾರಿಗಳು. ನೃತ್ಯ ವಿದ್ಯಾಧಿದೇವತೆಗೆ ಮಂಡನ ಅಥವಾ ಅಲಂಕಾರ ಪ್ರಾಯವಾದ ಮಂಡಳಿಗಳು, ಸುಲೇಖೆಗೆ ನೆಲೆಯಾದ

ನಿಲುವುಗಳು ಹೊಸಹೊಸದಾದ ರೀತಿಯಲ್ಲಿ ಎಡಬಲ ವಿನ್ಯಾಸದಲ್ಲಿ ಶೋಭಿಸಿ, ತಾಳಕ್ಕೆ ಉಚಿತವಾಗಿ ತೂಗುತ್ತಾ, ಮಧ್ಯದಲ್ಲಿ ನಿಖರವಾಗಿ ಅಳೆದಂತಿದ್ದು, ನೃತ್ಯಶಾಸ್ತ್ರವನ್ನೇ ಕಣ್ಣಮುಂದೆ ತಂದಿಟ್ಟಂತಹ, ಕನಕಸೂಚಿ ಸಂಚಯ ಸ್ಥಾಪನೆ ಕೌತುಕ ಕ್ರಿಯಾ ಕೌಶಲ್ಯದಿಂದ ಕೂಡಿದ ಈ ನೃತ್ಯ (ಸುಧಾ ವಾರಪತ್ರಿಕೆ – ಯುಗಾದಿ ವಿಶೇಷಾಂಕ (1983)ರ ಮಗಧಸುಂದರಿಯರ ಸೂಚಿನೃತ್ಯ – ಬಿ.ವಿ.ಕೆ.ಶಾಸ್ತ್ರಿಯವರ ಲೇಖನದ ಆಧಾರದಿಂದ ಪು.7)

ವಿವರಗಳಿಗೆ ನೋಡಿ: ಮಹದೇವ ಪ್ರಭಾಕರ ಪೂಜಾರ ೧೯೭೬ ಜೈನಧರ್ಮದ ಪರಿಭಾಷೆ ಪುಟ. ೫೮

ಸೂದಕರ್ಮಿ

ಸೂದಕರ್ಮಿಯ ಲಕ್ಷಣಗಳನ್ನು ಮಾನಸೋಲ್ಲಾಸದಲ್ಲಿ ಹೀಗೆ ವಿವರಿಸಿದ್ದಾರೆ "ಪಾನೀಯ ಮತ್ತು ವ್ಯಂಜಕದ ಗುಣ ಅವನಿಗೆ ತಿಳಿದಿರಬೇಕು.ಉಪಹಾರ ಮಾಡುವುದರಲ್ಲಿ ಅವನು ಸಿದ್ಧಹಸ್ತನಾಗಿರಬೇಕು.ಅವನು ಹಾಲಿನ ಗುಣಗಳನ್ನು ತಿಳಿದಿರಬೇಕು.(2–137)

ಅಡುಗೆಯ ಭಟ್ಟಯನಾಗುವುದು ಹೇಯಕರವೆಂಬ ಭಾವನೆಯು ಇಲ್ಲಿ ವ್ಯಕ್ತವಾಗಿದೆ. ನೀತಿಶಾಸ್ತ್ರದ ಪ್ರಕಾರ ಬ್ರಾಹ್ಮಣನು ದರ್ಭೆಯನ್ನು ಹಿಡಿಯಬೇಕು. ಹೊರತು ಅಡುಗೆಯ ಸೌಟನ್ನು ಅಲ್ಲ. ಬ್ರಾಹ್ಮಣನು ಅನ್ನವಿಕ್ರಯಿಸಿ ಬಾಳಬಾರದು. ಅದು ಪಾಪವೆಂಬ ಭಾವನೆಯು ಇಲ್ಲಿದೆ. (ದರ್ಬಾಧಿಕಾರ)

ಸೂರ್ಯೋಪಾಸನೆ

ಸೂರ್ಯನ ಉಪಾಸನೆಯನ್ನು ಕಲಿಸಿದವರು ಆರ್ಯರು ಅದನ್ನು ವಿಗ್ರಹರೂಪಕ್ಕೆ ತಂದು ಉಪಾಸನೆ ಆರಂಭಿಸಿದವರು ಶಕರು ಮತ್ತು ಕುಷಾಣರು. (ನೋಡಿ: ಭಗವತ್ ಶರಣ ಉಪಾಧ್ಯಾಯ. ೨೦೦೪.)

ಸೃಷ್ಟಿಯ ಮೂರು ವಿಧ

ನಾವು ಆಗಲೇ ತಿಳಿಸಿದಂತೆ ಯಾವ ಸೃಷ್ಟಿಯಲ್ಲಿಯೇ ಆಗಲಿ ಮೂರು ವಿಧವಾದ ಕಾರಣಗಳು ಅವಶ್ಯಕ–1. ಉಪಾದಾನ ಕಾರಣ ಅಥವಾ ಕಚ್ಚಾ ಪದಾರ್ಥ, 2. ಸಹಕಾರಿ ಕಾರಣ ಅಥವಾ ವಸ್ತುವನ್ನು ಸೃಷ್ಟಿಸಲು ಬೇಕಾಗುವ ಉಪಕರಣಗಳು ಮತ್ತು 3. ನಿಮಿತ್ತ ಕಾರಣ ಅಥವಾ ಉಪಾದಾನ, ಉಪಕರಣಗಳಿಂದ ಕೆಲಸ ಮಾಡಲು ಸಾಮರ್ಥ್ಯವುಳ್ಳ ಬುದ್ಧಿ ಶಕ್ತಿ. (ಸ್ವಾಮಿ ಚಿನ್ಮಯಾನಂದ 1988 I – 2)

ಸೆಟ್ಟಿ

ವೈಶ್ಯ ಜಾತಿ ಅನ್ನುವುದು ಭಾರತದಲ್ಲಿ ಒಮದು ಅಸ್ಪಷ್ಟ ಜಾತಿಯಾಗಿದೆ. ಬ್ರಾಹ್ಮಣ ನೀತಿ ಸಂಹಿತೆಗಳ ಪ್ರಕಾರ ವೈಶ್ಯ ಜಾತಿಯೆನ್ನುವುದು ಮೂರನೆಯ ವರ್ಣಕ್ಕೆ

ಸೇರುತ್ತದೆ. ಆದರೆ ಬೌದ್ಧ ಪಂಥದ ಪ್ರಕಾರ ಸೆಟ್ಟಿ–ಗ್ರಹಪತಿಗಳು ವರ್ತಕರು. ಮತ್ತು ವೈಶ್ಯವರ್ಣಕ್ಕೆ ಹತ್ತಿರವಾದವರು ಮಾತ್ರ. ಬೌದ್ಧ ಮತವು ಹೆಚ್ಚು ಪ್ರಭಾವಶಾಲಿಯಾದಾಗ ಅದು ಪಟ್ಟಣಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿತು. ಮತ್ತು ವರ್ತಕರು ಸಮಾಜದಲ್ಲಿ ಪ್ರಧಾನ ಪಾತ್ರವಹಿಸಿದರು.(Romila Thapar 1975 P.36)

ಹಳೆಗನ್ನಡದಲ್ಲಿ ಬರುವ ಪರದರು. ಸೆಟ್ಟಿಗಳು ವೈಶ್ಯಪದಕ್ಕೆ ಪರ್ಯಾಯಗಳಾಗಿವೆ. (ಸೆಟ್ಟಿ; ವರ್ತಕ; ಪರದರು)

ವರ್ತಕರು ಮತ್ತು ವ್ಯಾಪಾರದ ಸಾಂಸ್ಕೃತಿಕ ಬೆಳವಣಿಗೆಯು ಕುತೂಹಲದಾಯಕ. ವ್ಯಾಪಾರವನ್ನು ವೃತ್ತಿಯಾಗಿಸಿಕೊಂಡವರನ್ನು ವರ್ತಕರು ಎಂಬ ಹೆಸರಿನಿಂದ ಕರೆಯಲಾಗಿದೆ. ವರ್ತಕರಲ್ಲಿ ಎರಡು ರೀತಿಯ ಪ್ರಕಾರಗಳೂ ಕಂಡುಬರುತ್ತವೆ. ಅವರುಗಳೆಂದರೆ, ವಿನಿಮಯ ವರ್ತಕರು ಮತ್ತು ಉತ್ಪಾದಕ ವಿನಿಮಯ ವರ್ತಕರು. ಸೆಟ್ಟಿ–ಬಣಂಜಿಗ, ಸೆಟ್ಟಿಗುತ್ತ, ನಕರ, ಮುಂಮುರಿದಂಡ, ವಡ್ಡ ವ್ಯವಹಾರಿ, ಗಾತ್ರಿಗ, ಸೆಟ್ಟಿಕಾರ, ಹಲರು, ಎಳಮೆ, ಸಾಲಿಕೆ ಬಲ್ಲಾಳುಗಳು, ನಾನಾದೇಶಿ, ಉಭಯನಾನಾದೇಶಿಗಳು ಮುಂತಾದವರು ವ್ಯಾಪಾರವನ್ನೇ ವೃತ್ತಿಯನ್ನಾಗಿಸಿಕೊಂಡ ವಿನಿಮಯ ವರ್ತಕರು, ಅಕ್ಕಸಾಲಿ, ಮಾದಿಗ, ಸಮಗಾರ ಮೇದ ಮೊದಲಾದವರು ಉತ್ಪಾದಕ–ವಿನಿಮಯ ವರ್ತಕರು. ಇವರೆಲ್ಲರೂ ಮಧ್ಯಕಾಲೀನ ಕರ್ನಾಟಕದಲ್ಲಿ ನಗರ ವ್ಯವಸ್ಥೆಯೊಂದು ಕಾಣಿಸಿಕೊಳ್ಳುವುದಕ್ಕೆ ಕಾರಣರಾದರು. ವ್ಯಾಪಾರಸ್ಥರು ಆಂತರಿಕ ವ್ಯಾಪಾರ ಮಾತ್ರವಲ್ಲದೆ ವಿದೇಶಿ ವ್ಯಾಪಾರವನ್ನೂ ನಡೆಸುತ್ತಿದ್ದರು. ಕ್ರಿ. ಶ. 1054ರ ಶಾಸನವೊಂದು ವ್ಯಾಪಾರಸ್ಥರು ಭೂ ಮತ್ತು ಜಲಮಾರ್ಗದ ಮೂಲಕ ಹೊರರಾಜ್ಯಗಳೊಡನೆ ವ್ಯಾಪಾರ ನಡೆಸುತ್ತಿದ್ದ ಮಾಹಿತಿ ನೀಡುತ್ತದೆ. ಸಮುದ್ರ ವ್ಯಾಪಾರವು ಮುಖ್ಯವಾಗಿ ಹೊನನಾವರ, ಭಟ್ಕಳ, ಮಂಗಳೂರು ಮುಂತಾದ ಬಂದರುಗಳ ಮೂಲಕ ನಡೆಯುತ್ತಿತ್ತು ಎನ್ನುವ ವಿಚಾರ ಅರಬ್ ಪ್ರವಾಸಿಗರ ಬರಹಗಳಿಂದ ತಿಳಿದಿಬರುತ್ತದೆ. ದೋರಸಮುದ್ರ, ಬೇಲೂರು, ವಿಷ್ಣು ಸಮುದ್ರ, ಶ್ರವಣಬೆಳಗೊಳದ ವ್ಯಾಪಾರಸ್ಥರು ಸಮುದ್ರ ವ್ಯಾಪಾರದಲ್ಲಿ ಹೆಚ್ಚು ಭಾಗವಹಿಸುತ್ತಿದ್ದರು ಎನ್ನುವುದು ಶಾಸನಗಳಿಂದ ತಿಳಿದುಬರುತ್ತದೆ. ಚೀಣಾ, ಮಲಯಾ, ಜಾವ, ಸಿಲೋನ್, ಮಲಾಕ್ಕ, ಫಾರ್ಮೋಸಾ, ಮುಂತಾದ ದೇಶಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಇಟ್ಟುಕೊಳ್ಳಲಾಗಿತ್ತು. ಕರ್ನಾಟಕದ ಕರಾವಳಿ ಪ್ರದೇಶಗಳನ್ನು ವಿದೇಶಿ ವ್ಯಾಪಾರಕ್ಕಾಗಿ ಬಳಸಿಕೊಳ್ಳಲಾಯಿತು. ವಿದೇಶಿ ವ್ಯಾಪಾರಿ ಹಡಗುಗಳು ಹೊನ್ನಾವರ, ಭಟ್ಕಳ, ಮಂಗಳೂರು ಮುಂತಾದ ಬಂದರುಗಳಿಗೆ ಬರುತ್ತಿದ್ದವು.

ವೈಶ್ಯ ಜಾತಿ ಅನ್ನುವುದು ಭಾರತದಲ್ಲಿ ಒಂದು ಅಸ್ಪಷ್ಟ ಜಾತಿಯಾಗಿದೆ. ಬ್ರಾಹ್ಮಣ ನೀತಿ ಸಂಹಿತೆಗಳ ಪ್ರಕಾರ ವೈಶ್ಯ ಜಾತಿಯೆನ್ನುವುದು ಮೂರನೆಯ ವರ್ಣಕ್ಕೆ ಸೇರುತ್ತದೆ. ಆದರೆ ಬೌದ್ಧ ಪಂಥದ ಪ್ರಕಾರ ಸೆಟ್ಟಿ–ಗ್ರಹಪತಿಗಳು ವರ್ತಕರು. ಮತ್ತು

ವೈಶ್ಯವರ್ಣಕ್ಕೆ ಪತ್ರಿರವಾದವರು ಮಾತ್ರ. ಬೌದ್ಧ ಮತವು ಹೆಚ್ಚು ಪ್ರಭಾವಶಾಲಿಯಾದಾಗ ಅದು ಪಟ್ಟಣಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿತು. ಮತ್ತು ವರ್ತಕರು ಸಮಾಜದಲ್ಲಿ ಪ್ರಧಾನ ಪಾತ್ರವಹಿಸಿದರು.

ವರ್ತಕರು ಹಿಂದಿನ ಕರ್ನಾಟಕದಲ್ಲಿ ಸಮಾಜದ ಅತ್ಯಂತ ಪ್ರಮುಖ ಭಾಗವಾಗಿದ್ದರು. ಈಗಲೂ ಕುಂಬಾರರೂ ಗಾಣಿಕರೂ ಇವರೇ ಮೊದಲಾದವರು ತಮ್ಮನ್ನು ತಾವು "ಶೆಟ್ಟಿಗಳು" ಎಂದು ಕರೆದುಕೊಳ್ಳುವುದರ ಮೂಲಕ (ಕುಂಬಾರ ಶೆಟ್ಟರು, ಗಾಣಿಗ ಶೆಟ್ಟರು) ತಾವೂ ವರ್ತಕರೆಂದು ಭಾವಿಸುವುದರಿಂದ, (ವಾಸ್ತವವಾಗಿ ಅವರು ಮಡಕೆ, ಎಣ್ಣೆ ಮಾರುವ ವರ್ತಕರೆ ತಾನೆ!), ಶಾಸನ ಪಾಠದ ಆರಂಭದ 'ಸ್ವಯಂಭು ಸೆಟ್ಟಿ', 'ಪಸುಂಬೆ ಸೆಟ್ಟಿ' ಮಾತುಗಳು ಕುಂಬಾರರು ತಮ್ಮ ಕುಲದ (ಕುಂಬಾರ ಜಾತಿಯ) ನಾಯಕರನ್ನೇ ಉದ್ದೇಶಿಸಿ ಹೇಳಿರುವಂತಿದೆ ಎಂಬ ಊಹೆಗೂ ಅವಕಾಶವಿದೆ. ಉಳಿದ ವರ್ತಕ ಸಮೂಹವೇ ವಿಷಯದಲ್ಲಿ ಬಳಸುವ ಮಾತುಗಳನ್ನೇ ತಮ್ಮ ಕುಲದ ಮುಖ್ಯರಿಗೂ, ಬಳಸಿರಬಹುದೆಂದೂ ಹೇಳಬಹುದು. ಆದರೆ "ಐಸಾವಂತರ ಪ್ರಶಸ್ತಿಯೆಂತೆಂದಡೆ . . . ಉತ್ತಮ ಸಮಯಕ್ಕೆ ನಮಸ್ಕಾರವಂ ಮಾಡಿದೆವು. ಅವಧಾರಿಸಿ ಸ್ವಾಮಿಗಳಿರಾ" ಎಂಬ ಮಾತಿನ ಹಿನ್ನೆಲೆಯಲ್ಲಿ ಮತ್ತ "ಪಸುಂಬೆ"ಯು ಅಕ್ಕಿ ಬೇಳೆ ಬೆಲ್ಲದಂತಹ ಮಾರಾಟದ ವಸ್ತುಗಳನ್ನು ಕೊಂಡೊಯ್ಯುವ ಹಸುಬೆ ಚೀಲವನ್ನು ಸೂಚಿಸುವುದರ ಹಿನ್ನೆಲೆಯಲ್ಲಿ (ಹಸುಬೆ ಚೀಲದಲ್ಲಿ ಮಡಕೆಗಳನ್ನು ಕೊಂಡೊಯ್ಯಲು ಸಾಧ್ಯವಿಲ್ಲ ತಾನೆ!), "ಪಟ್ಟಣಾಧೀಶ್ವರ" (ಪಟ್ಟಣಸ್ವಾಮಿ, ಪಟ್ಟಣಶೆಟ್ಟಿ)ಒಂದು ನಗರದ ವರ್ತಕ ಸಮೂಹದ ಮುಖ್ಯಸ್ಥನನ್ನು ಸೂಚಿಸುವ ಪಾರಿಭಾಷಿಕ ಪದವಾಗಿರುವುದರಿಂದ, "ನಮ್ಮ ಎಂಬ ಪಾಠವೇ ಸ್ವೀಕಾರಾರ್ಹ. ಒಂದು ರೀತಿಯ ಮಾರಾಟಗಾರರೂ ಆಗಿರುವ ಅಯಾವಂತ ಅಥವಾ ಕುಂಬಾರರು ತಮ್ಮಗಿಂತ ಮೇಲೆ ಜಾತಿಗೆ ಸೇರಿದ ಬಣಜಿಗ ವರ್ತಕರ (ಚಿನ್ನ, ಬೆಳ್ಳಿ, ಧಾನ್ಯ, ಬಟ್ಟೆ ವ್ಯಾಪಾರಿಗಳ) ಮುಖ್ಯರಿಗೆ ಗೌರವವನ್ನು ತೋರಿ ("ಉತ್ತಮ ಸಮಯಕ್ಕೆ ನಮಸ್ಕಾರವಂ ಮಾಡಿದೆವು") ತಮ್ಮ ಕುಲೋತ್ಪತ್ತಿಯ ಕತೆಯನ್ನು ಅವರಿಗೆ ನಿವೇದಿಸಿಕೊಂಡ ಧಾಟಿಯಲ್ಲಿ ಶಾಸನವು ರಚಿತವಾಗಿದೆ. ಬಣ ಎಂಬುದಕ್ಕೆ ವಿಸ್ ಎಂಬ ಇನ್ನೊಂದು ಪರ್ಯಾಯ ಶಬ್ದವನ್ನು ಸಹ ಋಗ್ವೇದದಲ್ಲಿ ಕಾಣಬಹುದು. ಅದು 170 ಬಾರಿ ಬರುತ್ತದೆ. ಬಹುಶಃ ಈ ವಿಸ್ ಕಾದಾಡುವ ಸಣ್ಣ ಘಟಕಗಳಾದ ಗ್ರಾಮಗಳಾಗಿ ವಿಂಗಡಗೊಂಡಿರುತ್ತಿತ್ತು. ಗ್ರಾಮಗಳು ಒಂದನ್ನೊಂದು ಎದುರಿಸಿ ನಿಂತು ಹೋರಾಡುವುದು ಸಂಗ್ರಾಮ ಅಥವಾ ಯುದ್ಧ. ವಿಪುಲ ಜನಸಂಖ್ಯೆಯಿಂದ ಕೂಡಿದ ವೈಶ್ಯರ್ಣವು ಈ ವಿಸ್ಸಿಂದಾಗಿಯೇ (ಪ್ರಜೆಗಳಿಂದ) ಉದ್ಭವಿಸಿತು.

ಯಜುರ್ವೇದ ಸಾಹಿತ್ಯದಲ್ಲಿ ಮಾತ್ರ ಯಾವುದೇ ಸಂದೇಹಗಳಿಗೆ ಎಡೆಕೊಡದಷ್ಟು ಸ್ಪಷ್ಟವಾಗಿ ವರ್ಣವ್ಯವಸ್ಥೆಯ ನಿರ್ಮಾಣ, ಅದರ ಉದ್ದೇಶಗಳೆರಡನ್ನೂ

ವಿವರಿಸಲಾಗಿದೆ. ಋಗ್ವೇದದಲ್ಲಿ ಸಮುದಾಯದ ಸಾಮಾನ್ಯ ಜನತೆಯನ್ನು 'ವಿಶ್' ಪ್ರಜೆಗಳು ಎನ್ನಲಾಗಿದೆ. ಈಗ ಇದನ್ನು ಕೃಷಿಕರು ಎಂಬ ಅರ್ಥದಲ್ಲಿ ಪ್ರಯೋಗಿಸಲು ಆರಂಭವಾಯಿತು. ಈ ಮೂಲದಿಂದಲೇ 'ವೈಶ್ಯ' ಎಂಬ ವರ್ಣದ ಹೆಸರು ಬಂತು. ಈ 'ವಿಶ್' ಜನಗಳಿಗೆ ಸಂಬಂಧಿಸಿದ ದೇವರುಗಳು ಮರುತ್ತರು. ಇಂದ್ರನಿಗೂ ಮರುತ್ತರಿಗೂ ಋಗ್ವೇದದಲ್ಲೇ ಶತ್ರುತ್ವವಿದೆ. ರಾಜನು 'ವಿಶ್' ಜನರನ್ನು ಭುಂಜಿಸಿದಂತೆ, ಇಂದ್ರನು ಮರುತ್ತರನ್ನು ಭುಂಜಿಸುತ್ತಾನೆ ಎಂದು ಋಗ್ವೇದದಲ್ಲಿ ಹೇಳಿದ್ದಾರೆ. ಋಗ್ವೇದ ಕಾಲದಲ್ಲೇ ಸಾಮಾನ್ಯ ಸಮುದಾಯ ಸಭ್ಯರನ್ನು ಸಮುದಾಯ ಮುಖ್ಯರು ಪೀಡಿಸುತ್ತಿದ್ದಿರಬೇಕು. ಕೃಷಿ ಸಮಾಜ ಬರುವ ಹೊತ್ತಿಗೆ ಈ ಪೀಡನೆ ಹೆಚ್ಚುತ್ತಾ ಹೋಗಿರಬೇಕು. ಶತಪಥ ಬ್ರಾಹ್ಮಣಗಳಲ್ಲಿ ಮರುತ್ತರನ್ನು ಸಾಮಾನ್ಯ ಕೃಷಿಕರು ಎನ್ನಲಾಗಿದೆ. ಐತ್ತರೇಯ ಬ್ರಾಹ್ಮಣದಲ್ಲಿ ವೈಶ್ಯನು ಇತರರಿಗೆ ಅಧೀನನಾಗಿರುತ್ತಾನೆಂದೂ, ಇತರರಿಂದ ಭುಂಜಿಸಲ್ಪಡುತ್ತಾನೆಂದೂ, ಮನಬಂದಂತೆ ಪೀಡನೆಗೆ ಒಳಗಾಗುತ್ತಾನೆಂದೂ ಹೇಳಲಾಗಿದೆ. ಶೂದ್ರರು ಸೇವಕರೆಂದೂ, ಇಷ್ಟಾನುಸಾರವಾಗಿ ಇವರನ್ನು ಹೊಡದಟ್ಟಲಾಗುತ್ತದೆಂದೂ, ಮನಬಂದಂತೆ ಇವರನ್ನು ಸಾಯಿಸಲಾಗುತ್ತದೆಂದೂ ಹೇಳಿದ್ದಾರೆ. ಯಜ್ಞದ ಆಚರಣೆಯ ಉದ್ದೇಶವೂ ಈ ಕಾಲಕ್ಕೆ ಸಾಕಷ್ಟು ಬದಲಾಯಿತು. ಶತಪಥ ಬ್ರಾಹ್ಮಣದಲ್ಲಿ ವೈಶ್ಯ ಶೂದ್ರ ಜನರನ್ನೂ ಪುರೋಹಿತರ ನೆರವಿನಿಂದ ಅಧೀನಪಡಿಸಿಕೊಳ್ಳುವುದಕ್ಕೆ ರಾಜರುಗಳು ಯಜ್ಞಗಳನ್ನು ಮಾಡಿದರೆಂಬುದಕ್ಕೆ ಪುರಾವೆಗಳಿವೆ ಎಂದು ಕೊಸಾಂಬಿಯವರು ಹೇಳುತ್ತಾರೆ. ಯಜ್ಞದ ಅಂಗವಾಗಿ ಪ್ರದಕ್ಷಿಣೆ ಮಾಡುವಾಗ ಪುರೋಹಿತರು ಒಂದು ಬದಿಗೆ, ರಾಜರುಗಳು ಒಂದು ಬದಿಗೆ ನಿಂತು, ಶೂದ್ರ ವೈಶ್ಯ ಜನರನ್ನು ಮಧ್ಯಕ್ಕೆ ಬರುವಂತೆ ಆವರಿಸಿ ಅಧೀನಗೊಳಿಸಿಕೊಳ್ಳಬೇಕೆಂದು ಆ ಬ್ರಾಹ್ಮಣಗಳಲ್ಲಿ ಹೇಳಲಾಗಿದೆ.

ವಿವರಗಳಿಗೆ ನೋಡಿ: ಡಿ. ಡಿ. ಕೊಸಾಂಬಿ 1998 ಪ್ರಾಚೀನ ಭಾರತದ ಚರಿತ್ರೆ ಪುಟ. 97

ಮೋಹನಕೃಷ್ಣ ರೈ 2004 ಪ್ರಭುತ್ವ ಮತ್ತು ಜನತೆ ಪುಟ. 90–91

Romila Thapar 1975 The Past and Prejudice P. 36

ಡಾ. ಎಂ. ಚಿದಾನಂದಮೂರ್ತಿ ವಿವಾಹ ಪುರಾಣ ಲೇಖನ

ಆರ್. ಎಸ್. ಶರ್ಮ 2007 ಪ್ರಾಚೀನ ಭಾರತ ಪುಟ. 75.

ಸೇನಾಧಿಪತಿಯ ಲಕ್ಷಣ

ಸೇನಾಪತಿಯು ದಾನಿಯಾಗಿರಬೇಕು. ಪ್ರಿಯಭಾಷಿಯಾಗಿರಬೇಕು. ಮನೋದಾರ್ಢತೆ ಹೊಂದಿದವನಾಗಿರಬೇಕು. ಬುದ್ಧಿವಂತನಾಗಿರಬೇಕು. ಶೂರನಾಗಿರಬೇಕು. ಸೇವಕರ ಗುಣ ನಡತೆಗಳನ್ನು ತಿಳಿದವನಾಗಿರಬೇಕು. (ಮಾನಸೋಲ್ಲಾಸ_2–92) ಇದು ಹಿಂದಿನ ರಾಜಕೀಯ ವ್ಯವಸ್ಥೆಯನ್ನು ಸೂಚಿಸುತ್ತದೆ.

ಸೇನಾನಾಯಕ

ಆನೆ, ಕುದುರೆ, ರಥ, ಪದಾತಿಗಳ ಪತಿಯು ಪತ್ತಿಕನು. ಹತ್ತು ಪತ್ತಿಕರಿಗೆ ಪತಿ ಸೇನಾಪತಿ, ಹತ್ತು ಸೇನಾಪತಿಗಳಿಗೆ ಒಬ್ಬ ಸೇನಾನಾಯಕ. ಅವನೇ ಬಲಾಧ್ಯಕ್ಷ. ಭಯವಿರುವಲ್ಲಿಗೆ ಸೇನಾಪತಿ ಸೇನಾನಾಯಕರನ್ನು ನಿಲ್ಲಿಸಬೇಕು.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ 1967 ಮನುಸ್ಮೃತಿ 7–189.

ಸೇನೆ: (ವ್ಯೂಹ)

ಸೂಚ್ಯಗ್ರಹದಂತೆ ಮುಂಭಾಗದಲ್ಲಿ ನಿಯಮಿತವಾದ ಕೆಲವೇ ಸೈನಿಕರನ್ನು ಇಟ್ಟುಕೊಂಡು ಸೇನಾಪತಿಗಳ ಸಂಕೇತಕ್ಕೆ ಅನುಸಾರವಾಗಿ ಕೆಲವು ಸೈನಿಕರು ಧನುಸ್ಸನ್ನು ಧರಿಸಿ ಮುಂದೆ ಎಂದು ಅರ್ಥವೇದದಲ್ಲಿ ಬರುತ್ತದೆ. (೧–೨೩–೨)

ಸೇವಕರು

ವೇತನ ಪಡೆಯುವವರು, ಕಿಂಕರರು, ದಾಸಿಯರು, ದಾಸರು, ಕೆಲಸದವರು, ಬುದ್ಧಿ ಕಾರ್ಯದಲ್ಲಿ ತೊಡಗಿರುವವರನ್ನು ಶಸ್ತ್ರಕಾರ್ಯದಲ್ಲಿ ತೊಡಗಿರುವವರನ್ನು ನಾವು ಭೃತ್ಯರರು ಎಂದು ಕರೆಯುತ್ತೇವೆ. (ಮಾನಸಲ್ಲೋಸ_1–303)

ಸೌರಮತ

"ಐದಂ ತಿಥಿಭಿ: ತದ್ವತ್ ಸಂಕ್ರಾಂತ್ಯ ಸೌರ ಉಚ್ಯತೆ. ಮೇಷ, ವೃಷಭ, ಕರ್ಕಾಟಕ ಇತ್ಯಾದಿ ಹನ್ನೆರಡು ತಿಂಗಳುಗಳ ಲೆಕ್ಕವನ್ನು ಸೌರಮಾನವೆಂದು ಕರೆಯುತ್ತಾರೆ. ಚಾಂದ್ರ ಮಾತೃಪ್ರಧಾನ ಕುಟುಂಬ ಪದ್ಧತಿಯು ಅಮಾನ್ಯವಾಗಿ ಸೌರ ಪಿತೃಪ್ರಧಾನ ಕುಟುಂಬ ಪದ್ಧತಿ ರೂಢಿಗೆ ಬಂದುದು ನಿಜವಿದ್ದರೂ ಪ್ರಪಂಚದಲ್ಲಿ ಏಕಂ : ಸತ್ ಭೂಮಿಕೆಯ ಚಾಂದ್ರ ಸಂಪ್ರದಾಯದ ದೈವತಗಳು ಹಾಗೂ ಸಮಯಾಚಾರಗಳೇ ಒಟ್ಟಿನಲ್ಲಿ ಉಳಿದಿವೆಯೆ ಹೊರತು; ಋತ: ಸತ್ಯದ ಭೂಮಿಕೆಯ ಸೌರ ದೈವತಗಳಾಗಲಿ ಸಮಯಾಚಾರಗಳಾಗಲಿ ಎಲ್ಲಿಯೂ ಜೀವಂತ ಕಾಣುವುದಿಲ್ಲ.

ಸೌರ=ಪ್ರಕಾಶ ತತ್ತ್ವದ ದೈವತ ಪೂಜೆಯ ಹಂತಕ್ಕೆ ಬಂದಿದ್ದ ಮಾನವ ಸಮಸ್ಕೃತಿಯು ಮರಳಿ ಚಾಂದ್ರ : ನೀರ–ಅಂಜನ ಪ್ರಕಾಶದ ರಾತ್ರೀ 'ಸಮೆ' (:ಸಮಯ)=ನಾಗಹೆಡೆವಣಿಯ ಬೆಳಕಿನಲ್ಲಿ ಬಾಳಬಟ್ಟೆಯಲ್ಲಿ ಸಾಗಿದ್ದು ಕಾಣಿತ್ತಿದೆ. ಆದರೆ ಒಮ್ಮೆ ಕೆಲಕಾಲವಾದರೂ ರೂಢಿಯಲ್ಲಿ ಇದ್ದಿತೆಂಬ ಸೌರ : ಪ್ರಕಾಶ ಪೂಜಾ ಸಮಯಾಚಾರದ ಏನೂ ಅವಶೇಷಗಳೇ ಉಳಿಯದೆ ಅದು ನಾಮಶೇಷವಾಗ ಲಾರದು" ಎಂದು ಶಂಬಾ ಅಭಿಪ್ರಾಯ.

ಅವರ ಪ್ರಕಾರ ಆಪ: ರಸ ಪಂಥೀಯ ನಾಗಾರಾಧನೆಯು, ಭಾರತೀಯ ಮೂಲದ್ದು–ಭೂಮಧ್ಯ ಸಮುದ್ರ, ಇರಾಕದವರೆಗಿನ ಕ್ರಿ.ಪೂ.4000 ವರುಷಗಳ

ಸುಮಾರಿನ ಸಂಸ್ಕೃತಿಗೆ ಸಂಬಂಧಪಟ್ಟುದು ಅಥವಾ ಸುಮಾರಾಗಿ ಆ ಸಮಾನ ಆಕೃತಿಯದು ಆಗಿದೆಯೆಂದು ಗ್ರಹಿಸಬೇಕಾಗುತ್ತದೆ. ಸೌರ ಪ್ರತಿಮಾ ಪೂಜಕರ ಅಗ್ನ್ಯಾರಾಧನೆಯು ಇರಾಣ ದತ್ತಣಿಂದ ಭಾರತಕ್ಕೆ ಪಂಚನದ ದೇಶಕ್ಕೆ ಬಂದಿತೆಂದು ಋಗ್ವೇದದ ಹಲವು ಋಚೆಗಳ ಮೂಲಕ ಊಹಿಸಲು ಅವಕಾಶವಿದೆ.

'ರಸೋಹಂ ಅಪ್ಸು' ಎಂಬ ಗೀತೆಯ ಭಗವಂತನಿಗೆ, 'ಸೋಮ'ಪಾಯಿಗಳ ಯಜ್ಞವು, ಎಂದರೆ ನೆಲದ ಮೇಲೆ ರಚಿಸಿದ ಅಗ್ನಿಕುಂಡದಲ್ಲಿ ಆಹುತಿ ಹಾಕಿ ಮಾಡುತ್ತಿದ್ದ ಸೌರ ಪರಂಪರೆಯ ಯಜ್ಞವು ಅಮಾನ್ಯವಿತ್ತು. 14 ಆಪ: ರಸ ಪಂಥೀಯ ಈ 'ಪ್ರಾಜಾಪತ್ಯ ಯಜ್ಞ'ವು ಲೋಕಪ್ರಿಯವಾಗಿ, ಸೌರಪಂಥೀಯ ಯಜ್ಞ ವಿಧಾನವು ತಿರಸ್ಕೃತವಾಗುತ್ತದೆ. 'ಪ್ರಾಜಾಪತ್ಯ ಅಗ್ನಿ'15 'ಪ್ರಾಜಾಪತ್ಯ ಸೂರ್ಯ', ಎಂಬ ನೂತನ ಅಗ್ನಿ, ನೂತನ ಸೂರ್ಯರ ಪ್ರತಿಮಾ: ಸಂಕೇತಗಳು ತಲೆಯೆತ್ತುತ್ತವೆ.

ಸೌರ ಪಂಥೀಯರ ಅಕೃತ್ಯಗಳಿಂದ 'ಸವಿತೃ'ಪ್ರತಿಮೆಗೆ ಕುಂದುಬಂದಂತೆ ಆಪ : ರಸ ಪಂಥೀಯರು ಈ ದಿವ್ಯ ತೇಜೋಮಯ ಸವಿತೃವನ್ನು 'ಅಪಾಂ ನಪಾತ್' : (ನೀರೊಳಗಿನ ಅಗ್ನಿ : ಸರ್ಪ) ಈ ದೈವತದ ಸಾಲಿನಲ್ಲಿ ತಂದು ನಿಲ್ಲಿಸುವಲ್ಲಿ, ಆಗಿರುವ ಅರ್ಥ : ಮೂಲ್ಯ : ಸೌಂದರ್ಯದ ಅಪಾರ ಹಾನಿ ಎಂದೂ ತುಂಬಿ ಬರಲಾರದು. ಇದು ಅಖಿಲ ಭಾರತೀಯ ಶ್ರದ್ಧಾಸ್ಥಾನ. ಕರ್ಣಾಟ-ಮರ್ಹಾಟಗಳಲ್ಲಿ ಹಿಂದಿನ ಕಾಲದ ಸೂರ್ಯದೇವಾಲಯಗಳಿವೆ. ರವಿ, ಆದಿತ್ಯ, ಭಾನು-ಭಾಸ್ಕರಾದಿ ಹೆಸರಿನಲ್ಲಿ ಪೂಜೆ ಸಲ್ಲುತ್ತಿತ್ತು. ಈ ದೇವನಾಮದ ಸ್ಥಲನಾಮಗಳೂ ಉಂಟು.

ಸೂರ್ಯಾರಾಧನೆ 'ಮಾರ್ತಂಡ' ರೂಪದಲ್ಲಿ ಮುಖ್ಯವಾಗಿ ಮೈಲಾರ ಸಂಪ್ರದಾಯದಲ್ಲಿ ಈಗಲೂ ಉಳಿದಿದೆ.

ವಿವರಗಳಿಗೆ ನೋಡಿ: ಶಂಬಾ ಜೋಶಿ ೧೯೯೯ ಸಂಪುಟ. ೩, ೪ ಹಾಲುಮತ ದರ್ಶನ ಪುಟ. ೩೩, ೯೮, ೧೭೮, ೧೮೧.

ಸ್ತ್ರೀದೇವತೆ

ರಾಷ್ಟ್ರಕೂಟರಿಂದ ಹೊಯ್ಸಳರ ಅವನತಿಯವರೆಗಿನ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ಗ್ರಾಮದೇವತೆಗಳ ಅಧ್ಯಯನ ನಡೆಸುವಾಗ ಹೆಚ್ಚಿನ ದೇವತೆಗಳು ಸ್ತ್ರೀ ದೇವತೆಗಳಾಗಿರುವುದು ಕಂಡುಬರುತ್ತದೆ. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀದೇವತೆಗಳು ಹೇಗೆ ಪ್ರಾಮುಖ್ಯತೆಯನ್ನು ಪಡೆದುಕೊಂಡವು ಎನ್ನುವ ಪ್ರಶ್ನೆ ಈ ಸಂದರ್ಭದಲ್ಲಿ ಹುಟ್ಟಿಕೊಳ್ಳುತ್ತದೆ. ಈ ಪ್ರಶ್ನೆಗೆ ಉತ್ತರಿಸಬೇಕಾದರೆ ಗ್ರಾಮದೇವತೆಗಳ ಉಗಮದ ಚರಿತ್ರೆಯನ್ನು ಅಧ್ಯಯನ ನಡೆಸಬೇಕಾಗುತ್ತದೆ. ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಪರಿಣಾಮಗಳನ್ನು ಪರಿಶೀಲಿಸುವುದು ಇಲ್ಲಿ ಅನಿವಾರ್ಯವೆನಿಸುತ್ತದೆ. ದೇವಿಪ್ರಸಾದ್ ಚಟ್ಟೋಪಾಧ್ಯಾಯರ ಪ್ರಕಾರ ಮಾತೃಪ್ರಧಾನ ಪಂಥದ ಜನಪದ ರೂಪಗಳೇ

ಗ್ರಾಮದೇವತೆಗಳು. ಕೃಷಿ ಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಫಲವಂತಿಕೆಯ ಅಥವಾ ಫಲೋತ್ಪತ್ತಿಯ ಸಂಕೇತವಾಗಿ ಪರಿಗಣಿಸಿರುವುದೇ ಈ ವ್ಯವಸ್ಥೆಯ ಹುಟ್ಟಿಗೆ ಕಾರಣ.

ಎಲ್ಲಮ್ಮನ ಕುರಿತ ಪುರಾಣ ಮೂಲದ ಕಥೆಯು ಎಲ್ಲಮ್ಮನನ್ನು ರೇಣುಕೆಯೆಂದು ಕರೆಯುತ್ತದೆ. ರೇಣುಕರಾಜನ ಮಗಳಾಗಿ, ಪರಶುರಾಮನ ತಾಯಿಯಾಗಿ, ಜಮದಗ್ನಿಯ ಮಡದಿಯಾಗಿ ಆಕೆಯ ಕತೆ ಹೆಣೆದುಕೊಂಡಿರುವುದು ತಿಳಿದುಬರುತ್ತದೆ. ಜನಪದ ಮೂಲದ ಕತೆಗಳು ಈ ದೇವತೆಯನ್ನು ಎಲ್ಲಮ್ಮನೆಂದೇ ಕರೆಯುತ್ತವೆ. ಮೂಲತಃ ಎಲ್ಲಮ್ಮ ಎಲ್ಲೆಯ ಅಥವಾ ಸೀಮೆಯ ದೇವತೆ ಎನ್ನುವ ವಾದ ಹೆಚ್ಚು ಪ್ರಚಾರಗೊಂಡಿರುವಂತೆ ಕಂಡುಬರುತ್ತದೆ. ಈ ವಾದದ ಪ್ರಕಾರ, ಗ್ರಾಮಗಳ ಸೀಮೆಗಳನ್ನು ಗುರುತಿಸಲು ಎಲ್ಲೆಯ ಕಲ್ಲುಗಳನ್ನು ಹಾಕಲಾಗುತ್ತಿತ್ತು, ಆ ಕಲ್ಲುಗಳು ಕ್ರಮೇಣ ಪೂಜೆ, ಆರಾಧನೆಗಳನ್ನು ಕಂಡು ವಿಶೇಷತೆಯನ್ನು ಪಡೆದುಕೊಂಡವು. ಎಲ್ಲಮ್ಮ ಪ್ರಭಾವಶಾಲಿಯಾಗಿ ಬೆಳೆಯುತ್ತಲೇ ಸಮಾಜದ ನಾನಾ ವರ್ಗಗಳಿಂದ ಆಕರ್ಷಿತಳಾದಳು. ಬ್ರಾಹ್ಮಣರಿಗೆ ರೇಣುಕೆಯಾಗಿ, ವೀರಶೈವರಿಗೆ ಸತ್ಯಕ್ಕಳಾಗಿ, ಜೈನರಿಗೆ ಪದ್ಮಾವತಿಯಾಗಿ, ಕೆಳವರ್ಗದವರಿಗೆ ಹುಲಿಗೆವ್ವ, ಸವಾರೆವ್ವ, ಮಾಪುರತಾಯಿಯಾಗಿ ಪರಿವರ್ತನೆಗೊಂಡಳು. (ಮೋಹನಕೃಷ್ಣ ರೈ, ೨೦೦೪. ಪು. ೧೪೧)

ಸ್ತ್ರೀಧನ

ಕಾತ್ಯಾಯನನು ಸ್ತ್ರೀಧನದ ಕುರಿತು ವಿವರವಾದ ಚರ್ಚೆಯನ್ನು ಮಾಡುತ್ತಾನೆ. ಇದು 'ಪಿತೃದತ್ತ' ಆಸ್ತಿಯ ವರ್ಗಕ್ಕೆ ಸೇರುವಂಥ ಆಸ್ತಿಯಾಗಿದೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಆಸ್ತಿಯು ಸಂಪತ್ತಿನ ಸೂಚಕವಾಗಿ ಬರುತ್ತದೆ. ಭಾರತೀಯ ಪರಂಪರೆಯಲ್ಲಿ ಚಾರಿತ್ರಿಕವಾಗಿ ಗಮನಿಸಿದಾಗ, ಆಸ್ತಿಯನ್ನು ನೇರವಾಗಿ ಹೆಣ್ಣಿಗೆ ಕೊಡುವ ವಿಚಾರವು ಅಷ್ಟಾಗಿ ಉಕ್ತಗೊಂಡಿಲ್ಲ. ಬಹುತೇಕ ಸಂದರ್ಭಗಳಲ್ಲಿ ಸ್ತ್ರೀ ಧನದ ಕುರಿತಂತೆ ಉಲ್ಲೇಖಗಳು ದೊರೆಯುತ್ತವೆ. ಇದಕ್ಕೆ ದಾಯಾಭಾಗ ಎಂದೂ ಕರೆಯಲಾಗಿದೆ. ಸ್ತ್ರೀಗೆ ನೇರವಾಗಿ ಆಸ್ತಿಯ ಹಕ್ಕು ಇಲ್ಲವಾದರೂ, ಅವಳ ಜೊತೆ ಬಂದ ಬಳುವಳಿಯನ್ನು ಅವಳ ಸಂಪತ್ತೆಂದು ಪರಿಗಣಿಸಿದ್ದು ಕಂಡು ಬರುತ್ತದೆ.

ಇದನ್ನು ಧಾಯಾಭಾಗದ ಕಾನೂನಿನ ದೃಷ್ಟಿಯಿಂದ 'ಯೌತಕ' ಎಂದು ಕರೆಯಬಹುದು. ೧೯೫೬ರ ಹಿಂದೂ ಕಾನೂನಿನ ಅಧಿನಿಯಮದ ಪ್ರಕಾರ– ಪತ್ನಿ, ವಿಧವೆಸೊಸೆ, ಮಕ್ಕಳು ಮತ್ತು ವಯಸ್ಸಾದ ತಂದೆ ತಾಯಿಗಳು ಮಗಳಂದಿರು, ಅಧರ್ಮಜ ಮಗಂದಿರು, ವಯಸ್ಸಾದ ತಂದೆ ತಾಯಿಗಳು, ಮೃತನ ಅಥವಾ ಮೃತಳ ತಂದೆ, ಅವನ ತಂದೆ ತಾಯಿ, ಅವನ ವಿಧವೆ, ಅವನ ಮಗ, ಅವನ ಅವಿವಾಹಿತ ಮಗಳಂದಿರು ವಿಧವೆಯಾದ ಮಗಳು, ಅವಳ ಮಗನ ವಿಧವೆ ಅವನ ಅಪ್ರಾಯಸ್ಥ ಅಧರ್ಮಜ ಮಗ, ಅವನು ಅಧರ್ಮಜ ಅವಿವಾಹಿತ ಮಗಳು – ಇಷ್ಟು ಜನರು

ಧನಕ್ಕೆ ಪಾಲುದಾರರಾಗಿರುತ್ತಾರೆ. ಹಳೆಯ ಹಿಂದೂ ಕಾನೂನಿನ ಪ್ರಕಾರ ಒಬ್ಬ ತಂದೆಯು ತನ್ನ ಅವಿವಾಹಿತೆಯರಾದ ಮಗಳಂದಿರನ್ನು ಪೋಷಿಸಲು ಬಾಧ್ಯ, ತಂದಯ ಮರಣದ ಬಳಿಕ ತನ್ನ ಅವಿವಾಹಿತೆಯರಾದ ಮಗಳಂದಿರನ್ನು ತಂದೆಯ ಆಸ್ತಿಯ ಹಕ್ಕಿಗೆ ಪಾಲುದಾರರಾಗಿದ್ದರು. ಮಿತಾಕ್ಷರದ ಪ್ರಕಾರ ಒಬ್ಬ ದಾಯಾದಿಯು ಸ್ತ್ರೀ ಉತ್ತರಾಧಿಕಾರಿಯನ್ನು ಬಿಡದೆ ಅಥವಾ ಸ್ತ್ರೀವಾರಸುದಾರರೂ ಸ್ವತ್ತಿನಲ್ಲಿ ಪಾಲು ಪಡೆಯಲು ಹಕ್ಕುದಾರರಾಗುವರು. ಉತ್ತರಾಧಿಕರತ್ವವು ಪ್ರೀತಿ ಮತ್ತು ಮಮಕಾರದ ಮೇಲೆ ಆಧಾರಿತವಾಗಿದೆ. ಪಿಂಡ ಪ್ರಧಾನ ಮಾಡುವ ಹಕ್ಕಿನ ಮೇಲೆ ಆದ್ಯತರಯ ಹಕ್ಕು ನೀಡಲಾಗಿದೆ. ಗೋತ್ರಜ ಅಥವಾ ಬಂಧುವಿಗೆ ವಾರಸುದಾರರಾಗುವ ಹಕ್ಕು ಕೊಡಲಾಗಿದೆ. ಒಬ್ಬ ಅವಿವಾಹಿತ ಹೆಂಗಸಿಗೆ, ಒಬ್ಬ ವಿಧವೆಗೆ ಅಥವಾ ತನ್ನ ಗಂಡನಿಂದ ಅಭಿತ್ಯಜಿಸಲ್ಪಟ್ಟ ಒಬ್ಬ ಹೆಂಗಸಿಗೆ ತನ್ನ ತಂದೆಯ ಮನೆಯಲ್ಲಿ ನಿವಾಸ ಮಾಡುವ ಹಕ್ಕು ಇದೆ. ಒಬ್ಬ ವಿಧವೆಯು ಉತ್ತರಾಧಿಕಾರ ಪಡೆಯುವೆಂದು – ಆಕೆಯು ಪುನರ್ವಿವಾಹಿತೆಯಾಗಿದ್ದರೆ ಆಕೆಯು ವಾರಸಿನ ಹಕ್ಕು ಪಡೆಯಲಾರಳು, ಮಗಳು, ವಿಧವೆ, ತಾಯಿ, ಪೂರ್ವ ಮೃತನ ಮಗನ ಮಗಳು, ಪೂರ್ವಮೃತ ಮಗನ ಪೂರ್ವ ಮೃತನ ಮಗನ ವಿಧವೆ, ಪೂರ್ವಮೃತ ಮಗಳ ಮಗಳು ಹಕ್ಕುದಾರರಾಗಿರುತ್ತಾರೆ.

ಸ್ತ್ರೀಯ ಸೊತ್ತನ್ನು ಸ್ತ್ರೀಧನವೆಂದು ಕರೆಯುತ್ತಾರೆ. ಗೌತಮ ಧರ್ಮ ಸೂತ್ರದಲ್ಲಿ ಇದರ ಉಲ್ಲೇಖವಿದೆ. "ಅಧ್ಯಗ್ನಿಗಿಂತ ಮೊದಲು ಏನು ಕೊಡಲಾಗಿದೆಯೋ, ಪ್ರೀತಿಯ ಸಂಕೇತವಾಗಿ ಏನು ನೀಡಲಾಗಿದೆಯೋ ಮತ್ತು ಸೋದರನಿಂದ ಪಡೆಯಲಾಗಿದೆಯೋ, ಒಬ್ಬ ತಾಯಿಯಿಂದ ತಂದೆಯಿಂದ ಪಡೆಯುಲಾಗಿದೆಯೋ ಇವು ಸ್ತ್ರೀಧನಗಳಾಗುತ್ತವೆಯೆಂದು ಮನುವು ಹೇಳುತ್ತಾನೆ. ನಾರದನು ಇದರ ಜೊತೆಗೆ ಗಂಡನಿಂದ ಪಡೆಯಲಾಗಿರುವುದು ಕೂಡಾ ಸ್ತ್ರೀಧನವಾಗುತ್ತದೆಯೆಂದು ಹೇಳುತ್ತಾನೆ.

ಹೆಣ್ಣಿಗೆ ತಂದೆಯಿಂದ, ತಾಯಿಯಿಂದ, ಗಂಡನಿಂದ, ಸಹೋದರನಿಂದ ಕೊಡಲ್ಪಟ್ಟದ್ದು ಅಥವಾ ಅಧ್ಯಗ್ನಿಯ ಕಾಲದಲ್ಲಿ ಅವಳಿಂದ ಪಡೆಯಲ್ಪಡ್ಡುದು ಅಥವಾ ಅತ್ಯಧಿವೇಶನದಲ್ಲಿ ಕೊಡಲ್ಪಟ್ಟುದು ಸ್ತ್ರೀಯ ಸೊತ್ತಾಗುತ್ತದೆಯೆಂದು ಯಾಜ್ಞವಲ್ಕ್ಯ ಹೇಳುತ್ತಾನೆ. ಕಾತ್ಯಾಯನನು ಕರಕುಶಲತೆಯಿಂದ ಮಾಡಿದ ಸಂಪಾದನೆ ಮತ್ತು ಯೌವನಾವಸ್ಥೆ ಅಥವಾ ದಿಬ್ಬಣ ಅಥವಾ ವೈಧವ್ಯದಲ್ಲಿ ಆದರೆ ದಾಂಪತ್ಯದಲ್ಲಲ್ಲದ ಅಪರಿಚಿತರಿಂದ ನೀಡಲ್ಪಟ್ಟ ಕೊಡುಗೆ.

ಮಿತಾಕ್ಷರದಲ್ಲಿ ತಂದೆಯಿಂದ, ತಾಯಿಯಿಂದ, ಗಂಡನಿಂದ, ಸೋದರನಿಂದ, ಸೋದರಮಾವನಿಂದ, ಅಧ್ಯಗ್ನಿಗಿಂತ ಮೊದಲು ಕೊಡಲ್ಪಟ್ಟುದು, ಎರಡನೆಯ ವಿವಾಹದಲ್ಲಿ ಮಾಡಲಾದ ಕೊಡುಗೆ, ಅತ್ಯಧಿವೇಶನದಲ್ಲಿ ಕೊಡಲಾದ ಕೊಡುಗೆ,

ವಾರಸಿನಿಂದ ಖರೀದಿಯಿಂದ ವಿಭಜನೆಯಿಂದ ಪ್ರತಿಕೂಲ ಕಬ್ಬೆಯಿಂದ ತೀರ್ಪಿನಿಂದ ಪಡೆಯಲಾದ ಸ್ವತ್ತು ಸ್ತ್ರೀಧನಗಳೆಂದು ಹೇಳಲಾಗಿದೆ.

ಹೆಚ್ಚುವರಿ ಉತ್ಪಾದನಾ ಅಥವಾ ಮಿಗುವ ಮೌಲ್ಯದಲ್ಲಿ ಹೆಣ್ಣು ಗಂಡು ಸಮಾನ ಹಕ್ಕುದಾರರು.

ವಿವರಗಳಿಗೆ ನೋಡಿ: ಪಿ.ವಿ ಕಾಣೆ. 1980 ಧರ್ಮಶಾಸ್ತ್ರದ ಇತಿಹಾಸ ಪುಟ. 275, 276

D.D. Kosambi; 1983 Myth & Reality P. 170

Jack Goody(Ed) 1973 The Character of Kinship P. 89

Romila Thapar 1975 The Past and Prejudice P. 55

ಸ್ತ್ರೀ ಮತ್ತು ರಾಜಕಾರಣ

ಗುಪ್ತ ಅರಸರ ಕಾಲದಲ್ಲಿ (ಕ್ರಿ.ಪೂ. ನಾಲ್ಕರಿಂದ ಕ್ರಿ.ಶ. ನಾಲ್ಕನೇ ಶತಮಾನದವರೆಗೆ) ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಹೆಣ್ಣಿನ ಸ್ಥಾನ-ಮಾನದ ಬಗ್ಗೆ ಆ ಕಾಲದ ಮಹತ್ತ್ವದ ದಾಖಲೆಯಾಗಿರುವ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವಿವರಗಳು ದೊರೆಯುತ್ತವೆ.

ಶಾತವಾಹನರ ಕಾಲದಲ್ಲಿ ಸ್ತ್ರೀಗೆ ಕೆಲವು ವಿಧದ ಸ್ವಾತಂತ್ರ್ಯವಿತ್ತೆಂದು ತೋರುತ್ತದೆ. ಅಂದಿನ ಹಲವರು ಸ್ತ್ರೀಯರು ಬೌದ್ಧ ದೇವಾಲಯಗಳಿಗೆ ವಿಪುಲವಾದ ದಾನವನ್ನು ನೀಡಿದ್ದರು. ದೇವಿ (ರಾಣಿ)ಯನ್ನು ತನ್ನಲ್ಲಿಗೇ ಕರೆಸಿಕೊಳ್ಳಬೇಕು. ಅವಳದ್ದಲ್ಲಿಗೇ ರಾಜನು ಹೋಗುವುದರಿಂದ ಅಪಾಯ ಸಂಭವಿಸಬಹುದು.

ವಿವರಗಳಿಗೆ ನೋಡಿ: ಶ್ರೀ ಸಚ್ಚಿದಾನಂದ ಶಂಕರಭಾರತೀ ಸ್ವಾಮಿಗಳು ೨೦೧೦ ಕೌಟಲೀಯ ಅರ್ಥಶಾಸ್ತ್ರ ಪುಟ. ೭೯

ಎಂ.ವಿ. ಕೃಷ್ಣರಾವ್ ಮತ್ತು ಕೇಶವ ಭಟ್ಟ ಎಂ. ೧೯೭೦ ಕರ್ನಾಟಕ ಇತಿಹಾಸ ದರ್ಶನ

ಕೃಷ್ಣ ಭಟ್ಟ .ಕೆ. ೧೯೭೨ ಕೌಟಿಲ್ಯನ ಅರ್ಥಶಾಸ್ತ್ರ

ಸ್ತ್ರೀಯರು

ವಿಶಾಲವಾದ ಹೃದಯದ ಜ್ಞಾನಿ ಪುರುಷನು ನಾರಿಶರೀರದಿಂದ ಮೋಹವಶನಾಗುವುದಿಲ್ಲ. ಸ್ತ್ರೀಯರಲ್ಲಿ ರಮಣಿಯತೆಯನ್ನು ಕಾಣುವುದು ಮೋಹದಿಂದ ಮನದಲ್ಲಿ ವಿಕಾರಗಳನ್ನು ಉತ್ಪನ್ನ ಮಾಡುವ ಮದಿರೆಯಲ್ಲಿಯೂ ಯುವ ಸ್ತ್ರೀಯಲ್ಲಿಯೂ ಯಾವ ಅಂತರವೂ ಇರುವುದಿಲ್ಲ. ಯುವತಿಯು ಕಾಮ ಭಾವವನ್ನು ಜಾಗೃತಗೊಳಿಸುತ್ತಾಳೆ.

ಸ್ತ್ರೀಯರಿಗೆ ಪುರುಷದೋಹಕತ್ವವು ಜನ್ಮಸಿದ್ಧವು. ಆದುದರಿಂದ ಬುದ್ಧಿವಂತರು ಸ್ತ್ರೀಯರ ವಿಷಯದಲ್ಲಿ ಅಜಾಗರೂಕತೆ ವಹಿಸಬಾರದು.

ಹೆಣ್ಣು, ರತ್ನ, ವಿದ್ಯೆ, ಧರ್ಮ, ಶೌಚ, ಸೂಕ್ತಿ, ಶಿಲ್ಪಗಳನ್ನು ಎಲ್ಲಿದ್ದರೂ ಸ್ವೀಕರಿಸಬಹುದು ಎಂದು ಮನು ಹೇಳುತ್ತಾನೆ. ಬ್ರಹ್ಮನು ತನ್ನ ದೇಹವನ್ನು ವಿಂಗಡಿಸಿ ಸ್ತ್ರೀ ಮತ್ತು ಪುರುಷರಿಗೆ ಜನ್ಮ ನೀಡಿದನು. (ಮನುಸ್ಮೃತಿ. ೧–೩೨)

ಸ್ತ್ರೀ ಎಂಬ ರತ್ನವನ್ನು ಯಾವ ಕುಲದಿಂದ ಬೇಕಾದರೂ ಆರಿಸಿಕೊಳ್ಳಬಹುದು. (ಮನುಸ್ಮೃತಿ. ೧–೧೩೮)

ಸ್ತ್ರೀಯರಿಗೆ ಮೊದಲು ದಾರಿ ಬಿಡಬೇಕು. (ಮನುಸ್ಮೃತಿ. ೧–೧೩೮)

ಸ್ತ್ರೀಯರು ಬಾಲ್ಯದಲ್ಲಿ ತಂದೆಯ ವಶದಲ್ಲಿಯೂ ಯೌವನದಲ್ಲಿ ಗಂಡನ ವಶದಲ್ಲಿಯೂ ಗಂಡ ಸತ್ತ ಮೇಲೆ ಮಗನ ಆಶ್ರಮದಲ್ಲಿಯೂ ಇರಬೇಕು. ಈ ದೃಷ್ಟಿಯಿಂದ ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ. (ಮನುಸ್ಮೃತಿ. ೫–೧೪೮)

ಸರಿಯಾದ ವಯಸ್ಸಿಗೆ ಮದುವೆ ಮಾಡದ ತಂದೆಯೂ, ಪ್ರೀತಿಸದ ಗಂಡನೂ, ಗಂಡ ತೀರಿದಾಗ ರಕ್ಷಿಸದ ಮಕ್ಕಳೂ ನಿಂದಾರ್ಹರು. (ಮನುಸ್ಮೃತಿ. ೯–೪)

ಅನ್ಯ ಪೂರ್ವ ಸ್ತ್ರೀಯರು ಎರಡು ಪ್ರಕಾರದವರಿದ್ದಾರೆ. ಒಬ್ಬಳು ಪುನರ್ಭೂ ಎರಡನೆಯವಳು ಸ್ವೈರಿಣಿ ಪುನರ್ಭೂಗಳಾದರೂ ಎರಡು ಪ್ರಕಾರದವರಿರುವರು. ಒಬ್ಬಳು ಕ್ಷತಾ, ಎರಡನೆಯವಳು ಅಕ್ಷತಾ. ಸಂಸ್ಕಾರಕ್ಕೆ ಮುಂಚಿತವಾಗಿ ಪುರುಷ ಸಂಬಂಧದಿಂದ ದೂರವಾದವಳು ಕ್ಷತಾ.

"ಪ್ರಾಚೀನ ಸಂಕೇತಗಳಂತೆ ಸ್ತ್ರೀ–ಮತ್ತು ನೀರು ಇವುಗಳಲ್ಲಿ ನಿಕಟ ಸಂಬಂಧವಿರಬೇಕೆಂದು ಕಂಡು ಬರುತ್ತದೆ. ನೀರಿನ ಸ್ತ್ರೀ–ಪ್ರತಿಮೆಗಳ ತಾರತಮ್ಯದಲ್ಲಿ ಅದ್ಭುತ ಪ್ರತಿಭೆಯು ವ್ಯಕ್ತವಾಗುತ್ತಿದೆ. ಇಡಾ, ಇರಾ, ಸರಸ್ವತಿ, ಮಹಿ (ರಸಾ–ಭೂಮಾತೆ), ಅದಿತಿ ಹಾಗೂ ಶ್ರೀದೇವಿ ಇವರ ವಿಚಾರವು ಆಗಿದೆ. ಈ ಆಪೋ ದೇವಿಯರು ಮಾನವ ಕುಲದ ಉದ್ಧಾರಕ ಶಕ್ತಿಗಳು. ಇವರಿಗೆ ನಾರೀಮಣಿಗಳು ಎನ್ನಬಹುದು.

ಈ ಸಂಕೇತದಲ್ಲಿ ಎರಡು ಅಂಶಗಳು ಅಡಕವಾಗಿರುವಂತಿದೆ. (1) 'ನಾರ'(ಣ) ಸಂಪ್ರದಾಯವು ಇಂದ್ರನನ್ನು ಹೆದರಿಸುವಷ್ಟು ಪ್ರಬಲವಾಗಿತ್ತು.(2) ಅಪ್ ಸರೆ ಇವಳು 'ನಾರ'ದಿಂದಾದ ನಾರಿ. ಅರ್ಥಾತ್ ನೀರೆ. ದೇಶೀಯ ನಾರಿ ಸಂಸ್ಕೃತದಲ್ಲಿ ಪ್ರೌಢ ಗೃಹಿಣಿಯಾಗುತ್ತಾಳೆ. 'ಗೃಹಂತು ಗೃಹಿಣೀ ಹೀನಂ ಕಾಂತಾರಾತ್ ಅತಿರಿಚ್ಯತೇ' ಎನ್ನುವಷ್ಟು ಗೃಹಸ್ಥನ ಮನೆಯ ಆಕರ್ಷಕ ವಿಷಯಳಾಗುತ್ತಾಳೆ" ಎಂದು ಶಂಬಾ ಅಭಿಪ್ರಾಯ.

ಬ್ರಹ್ಮನು ತನ್ನ ದೇಹವನ್ನು ವಿಂಗಡಿಸಿ ಸ್ತ್ರೀ ಮತ್ತು ಪುರುಷರಿಗೆ ಜನ್ಮ ನೀಡಿದನು. (ಮನುಸ್ಮೃತಿ. ೧-೩೨)

ಸ್ತ್ರೀಯರಿಗೆ ಮೊದಲು ದಾರಿ ಬಿಡಬೇಕು. (ಮನುಸ್ಮೃತಿ. ೧-೧೩೮) ಸ್ತ್ರೀಯರು ಬಾಲ್ಯದಲ್ಲಿ ತಂದೆಯ ವಶದಲ್ಲಿಯೂ ಯೌವನದಲ್ಲಿ ಗಂಡನ ವಶದಲ್ಲಿಯೂ ಗಂಡ ಸತ್ತ ಮೇಲೆ ಮಗನ ಆಶ್ರಮದಲ್ಲಿಯೂ ಇರಬೇಕು. ಈ ದೃಷ್ಟಿಯಿಂದ ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ. (ಮನುಸ್ಮೃತಿ. ೫-೧೪೮)

ಸರಿಯಾದ ವಯಸ್ಸಿಗೆ ಮದುವೆ ಮಾಡದ ತಂದೆಯೂ, ಪ್ರೀತಿಸದ ಗಂಡನೂ, ಗಂಡ ತೀರಿದಾಗ ರಕ್ಷಿಸದ ಮಕ್ಕಳೂ ನಿಂದಾರ್ಹರು. (ಮನುಸ್ಮೃತಿ. ೯-೪)

ಅನ್ಯ ಪೂರ್ವ ಸ್ತ್ರೀಯರು ಎರಡು ಪ್ರಕಾರದವರಿದ್ದಾರೆ. ಒಬ್ಬಳು ಪುನರ್ಭೂ ಎರಡನೆಯವಳು ಸ್ವೈರಿಣಿ ಪುನರ್ಭೂಗಳಾದರೂ ಎರಡು ಪ್ರಕಾರದವರಿರುವರು. ಒಬ್ಬಳು ಕ್ಷತಾ, ಎರಡನೆಯವಳು ಅಕ್ಷತಾ. ಸಂಸ್ಕಾರಕ್ಕೆ ಮುಂಚಿತವಾಗಿ ಪುರುಷ ಸಂಬಂಧದಿಂದ ದೂಷಿತವಾದವಳು ಕ್ಷತಾ.

ವಿವರಗಳಿಗೆ ನೋಡಿ: ಶಂಬಾ ಜೋಶಿ ೧೯೯೯ ಹಾಲುಮತ ದರ್ಶನ ಸಂಪುಟ. ೩ ಪುಟ. ೧೫೬ ಕೊನೆಗೆ
ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೨-೨೪೦

ಸ್ತ್ರೀಯರು ಮತ್ತು ಧರ್ಮ

ಕರ್ನಾಟಕ ಅನೇಕ ಶಾಸನಗಳಲ್ಲಿ ಸ್ತ್ರೀಯರ ಧಾರ್ಮಿಕ ಸಹಭಾಗಿತ್ವದ ಬಗೆಗಿನ ಉಲ್ಲೇಖಗಳಿವೆ: ಶ್ರವಣ ಬೆಳಗೊಳದ ಶಾಸನವೊಂದು ಶಾಂತಲೆಯ ತಾಯಿ ಮಾಚಿಕಬ್ಬೆಯು ವ್ರತ ಹಿಡಿದು ಮರಣವನ್ನಪಿದ ವಿಷಯವನ್ನು ತಿಳಿಸುತ್ತದೆ. ಇದರ ಕಾಲ ಕ್ರಿ.ಶ. 1131. ಮತ್ತೊಂದು ಶಾಸನವು ಅಹಲ್ಯೆಯ ನಿರ್ವಾಣವನ್ನು ಸೂಚಿಸುತ್ತದೆ (ಕಲಬುರ್ಗಿ; ಎಂ.ಎಂ. 1980. ಪು. 6). ಶ್ರವಣ ಬೆಳಗೊಳದ ನೂರೆಂಟು ನಿಶಿಧಿ ಶಾಸನಗಳಲ್ಲಿ ಇಪ್ಪತ್ತೆರಡು ಶಾಸನಗಳು ಸ್ತ್ರೀಯರಿಗೆ ಸಂಬಂಧಿಸಿರುವವುಗಳು. ಅದರಲ್ಲಿ 13 ಶಾಸನಗಳು ಕಂತಿ ಅವ್ವೆಯವರ ಮರಣವನ್ನು ಸೂಚಿಸುತ್ತದೆ. ನಾಲ್ಕು ಶಾಸನಗಳು ರಾಜಪರಿವಾರದ ಸ್ತ್ರೀಯರ ಕುರಿತಂತೆ ಹೇಳುತ್ತವೆ. ಐದು ಶಾಸನಗಳು ಸಾಮಾನ್ಯ ಸ್ತ್ರೀಯರ ಮರಣವನ್ನು ಸೂಚಿಸುತ್ತವೆ (ಅದೇ. ಪು. 11). ಕೊಂಗಾಳ್ವನಬ್ಬೆ ಪೋಚಬ್ಬರಸಿಯ ಧಾರ್ಮಿಕ ಸೇವೆಯನ್ನು ಶಾಸನವೊಂದು (ಕಾಲ: 11ನೇ ಶತಮಾನ) (ಎ.ಕ. ಸಂ: 1. 1972. ಪು. 45). ಶ್ರವಣಬೆಳಗೋಳದ ಶಾಸನವೊಂದು ವೈಜಬ್ಬೆಯು ನೋಂತು ಸನ್ಯಾಸನವನ್ನು ಸ್ವೀಕರಿಸಿದ ವಿಷಯವನ್ನು ತಿಳಿಸುತ್ತದೆ (ಎ.ಕ. ಸಂ: 2, 1973. ಪು 55). ಗುಣಮತಿ ಅಬ್ಬೆಯ ನಿಶಿಧಿಗೆ ಸಂಬಂಧಿಸಿದಂತೆ ಮತ್ತೊಂದು ಶಾಸನವು ತಿಳಿಸುತ್ತದೆ (ಅದೇ. ಪು. 77).

ಶ್ರವಣಬೆಳಗೊಳದ ಮತ್ತೊಂದು ಶಾಸನದಲ್ಲಿ ಲಕ್ಷ್ಮೀಮತಿಯು ಸನ್ಯಸನ ಮೂಲಕ ದೇವಲೋಕಕ್ಕೆ ಸಂದ ವಿಚಾರವಿದೆ (ಇದರ ಕಾಲ. ಕ್ರಿ.ಶ. 1044) (ಅದೇ. ಪು. 99). ಹತ್ತನೇ ಶತಮಾನದ ನಂಜನಗೂಡಿನ ಶಾಸನವೊಂದು ಅತ್ತಯ್ಯನ ಅಬ್ಬೆಯು ಸನ್ಯಸನಂತೆಯ್ದು ಮುಡುಪಿದ ವಿಚಾರವನ್ನು ಪ್ರಸ್ತಾವಿಸುತ್ತದೆ (ಅದೇ. ಸಂ: 3. ಪು. 300). ಧಾರ್ಮಿಕ ವಿಚಾರಗಳಲ್ಲಿ ಸಕ್ರಿಯವಾಗಿ ಅನೇಕ ಸ್ತ್ರೀಯರು ಭಾಗವಹಿಸಿದ ವಿಚಾರವನ್ನು ಇನ್ನೂ ಕೆಲವು ಶಾಸನಗಳು ಹೇಳುತ್ತವೆ. ಶಾಸನಗಳಲ್ಲಿ ಬಂದಿರುವ ವಿಷಯಗಳನ್ನು ಸ್ಥೂಲವಾಗಿ ಪರಿಶೀಲಿಸಲಾಗಿದೆ. ಈ ಆಧಾರಗಳ ಹಿನ್ನೆಲೆಯಲ್ಲಿ ಧಾರ್ಮಿಕ ರಂಗದಲ್ಲಿ ಸ್ತ್ರೀಯರು ಭಾಗವಹಿಸಿರುವ ವಿಚಾರಗಳನ್ನು ಎರಡು ನೆಲೆಗಳಲ್ಲಿ ಗಮನಿಸಬಹುದು:

ಸಾಮಾಜಿಕ ಸ್ಥಾನಮಾನಕ್ಕಾಗಿ ಧಾರ್ಮಿಕ ಸೇವೆಯನ್ನು ಕೈಗೊಂಡಿರುವ ಸಂಗತಿಗಳು. ಉದಾ: ಜೈನ ಬಸದಿಗೆ ಸೇವೆ. ಇವು ಶ್ರೀಮಂತ ವರ್ಗದ ಸ್ತ್ರೀಯರು ಕೈಗೊಂಡಿರುವ ಸೇವೆಗಳಾಗಿರುತ್ತವೆ. ಸನ್ಯಸನವನ್ನು ಸ್ವೀಕರಿಸಿ ಅದರ ಮೂಲಕ ಪ್ರಾಣಹರಣವನ್ನು ಮಾಡಿಕೊಳ್ಳುವುದು ಇದು ಆತ್ಮಾಹುತಿಯ ಪ್ರಕಾರಗಳಲ್ಲಿ ಒಂದಾಗಿ ಸಂಸ್ಕೃತಿಯಲ್ಲಿ ಮೂಡಿ ಬಂದಿದೆ. ಇಲ್ಲಿಯೂ ಧಾರ್ಮಿಕ ಶ್ರದ್ಧೆಯೇ ಪ್ರಧಾನವಾದ ಅಂಶವಾಗಿದೆ. ರಾಣಿಯಾದ ಶಾಂತಲೆಯು ಜೈನೆಯಾಗಿದ್ದರೂ ವೈಷ್ಣವ ದೇವಾಲಯವನ್ನು ಸ್ಥಾಪಿಸಿದ ವಿಚಾರವು ಈಗಾಗಲೇ ಸಾಕಷ್ಟು ಪ್ರಚಲಿತವಾದ ವಿಚಾರವಾಗಿದೆ. ಈಕೆಯ ಕಾಲ. ಕ್ರಿ.ಶ. 1131. ಈಕೆಯು ಸನ್ಯಾಸನ ವಿಧಿಯ ಮೂಲಕವೇ ತನ್ನನ್ನು ಮುಡುಪಿಕೊಂಡಳು. ಖಾಸಗಿಯಾಗಿ ಒಂದು ಧರ್ಮಕ್ಕೆ ಸೇರಿದ್ದು, ಮತ್ತೊಂದು ಧರ್ಮದ ಕೆಲಸವನ್ನು ಮಾಡುವ ಕ್ರಮವೂ ಇತ್ತು ಎನ್ನುವುದಕ್ಕೆ ಮೇಲಿನ ಮಾತು ಸಾಕ್ಷ್ಯವನ್ನು ಒದಗಿಸುತ್ತದೆ.

ದಕ್ಷಿಣದ ಚೋಳ ಅರಸರ ಕಾಲದಲ್ಲಿ ಯೋಗಿಣಿ ಮತ್ತು ಯೋಗೀಶ್ವರ ದೇವತೆಗಳ ಅರ್ಚನೆ ಮತ್ತು ಅವರ ನೈವೇದ್ಯಕ್ಕಾಗಿ ಮಧ್ಯದ ವ್ಯವಸ್ಥೆಯೂ ಇತ್ತೆಂದು ಇತಿಹಾಸಕಾರರು ಊಹಿಸುತ್ತಾರೆ (ಕೃಷ್ಣರಾವ್. ಕಪಟರಾಳ 1970.ಪು. 28).

ಈ ಮೇಲಿನ ಆಧಾರಗಳಿಂದ ದೇವಾಲಯದ ನೃತ್ಯ ಪದ್ಧತಿಯ ಬಗೆಗೆ ಕೆಲವು ಅಂಶಗಳನ್ನು ಗಮನಿಸಬಹುದಾಗಿದೆ.

ದೇವಾಲಯದ ನೃತ್ಯ ಪದ್ಧತಿಯು ಆಚರಣೆ ಬದ್ಧ ಸ್ವರೂಪವನ್ನು ಇಟ್ಟುಕೊಂಡ ವೇಶ್ಯಾ ಪದ್ಧತಿಯಾಗಿದೆ. 'ದಾಸಿ' ಪದವು ವರ್ಗೀಕೃತ ಸಮಾಜದ ಕೆಳಗಿನ ದರ್ಜೆಯ ಗುಲಾಮತನದ ಸೂಚಕ ಪದವಾಗಿದೆ. ದೇವರ ಗುಲಾಮ ಹೆಣ್ಣುಗಳ ಸಂಸ್ಕೃತಿಯನ್ನು ದೇವದಾಸಿ ಪದ್ಧತಿಯು ಸೂಚಿಸುವುದಾದರೂ, ಇದಕ್ಕೂ ರಾಜಕೀಯ ಸಂಸ್ಕೃತಿಗೂ ಸ್ಪಷ್ಟವಾದ ಸಂಬಂಧವಿರುವುದನ್ನು ಶಾಸನಗಳು ಪ್ರತಿಪಾದಿಸುತ್ತವೆ. ಆದುದರಿಂದ

ರಾಜ್ಯಶಾಹಿ ವ್ಯಕ್ತಿತ್ವವು ಕೆಳವರ್ಗದ ಸ್ತ್ರೀಯರನ್ನು 'ದೇವದಾಸಿ'ಯನ್ನಾಗಿ ಮಾಡಿರುವುದನ್ನು ಗಮನಿಸಬಹುದಾಗಿದೆ. ಈ ದೃಷ್ಟಿಯಿಂದ ದೇವದಾಸಿ ಪದ್ಧತಿಯ ಮೇಲೆ ಇಬ್ಬಗೆಯ ಪ್ರಭಾವವು ಉಂಟಾಗಿರುವುದನ್ನು ಕಾಣಬಹುದು.(ಅ)ರಾಜ್ಯಶಾಹಿ ಪ್ರಭಾವ (ಆ)ಮತ್ತು ಧಾರ್ಮಿಕ ಗುಲಾಮಿತನ.

ಕನ್ನಡ ಕವಿಗಳು ದೇವಸ್ಥಾನದಲ್ಲಿ ನೃತ್ಯಮಾಡುವ ಪದ್ಧತಿಯ ಕುರಿತ ಚಿತ್ರಣವನ್ನು ಕೊಡುತ್ತಾರೆ. ನೇರವಾಗಿ ದೇವದಾಸಿ ಪದ್ಧತಿಯ ಕುರಿತ ಚಿತ್ರಣವನ್ನು ಕೊಡುವುದಿಲ್ಲ. ದೇಗುಲ ಸಂಸ್ಕೃತಿಯಲ್ಲಿ ದೇವಾಲಯಕ್ಕೂ ನೃತ್ಯಕ್ಕೂ ಕವಿಗಳು ಸಂಬಂಧವನ್ನು ಕಲ್ಪಿಸಿದ್ದಾರೆ. ಕನ್ನಡ ಕಾವ್ಯಗಳಲ್ಲಿ ಗುರುತಿಸಲಾಗಿರುವ ನರ್ತಕಿಯರು ರಂಗಭೋಗದ ಅನಿವಾರ್ಯ ಅಂಗಗಳಾಗಿ ಚಿತ್ರಿತರಾಗಿದ್ದಾರೆ.

ವಿವರಗಳಿಗೆ ನೋಡಿ: ಎಂ. ಎಂ. ಕಲಬುರ್ಗಿ 1980 ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು ಪುಟ. 6

Gururajachar .S 1974 Some aspect of economic & Social Life in Karnataka P. 249

Basham; A.L. (Ed) 1975 Basham A.L. (Ed) A Cultural History of India P. 58-59

Stein; Burton. (Ed) 1976 Stein, Burton (Ed) Essays on South India P. 48

ಶಿವಾನಂದ ವಿರಕ್ತಮಠ 1978 ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪುಟ. 61

ಶ್ರೀಕಂಠಯ್ಯ ಕೆ. 1983 ಭಾರತೀಯ ಸಂಸ್ಕೃತಿ ಪುಟ. 205, 261, 249

ಸ್ನಾತಕರು

ವಿವಾಹಾರ್ಥಿ, ಯಾಗಾರ್ಥಿ, ಪಾಂಥ, ವಿಶ್ವಜದ್ಯಾಜಿ, ಗುರುದಕ್ಷಿಣಾ ಕಾಂಕ್ಷಿ, ಮಾತಾ ಪಿತೃ ಜೀವನಾರ್ಥಿ, ವೇದಾರ್ಥಿ, ರೋಗಿ ಈ ಒಂಬತ್ತು ಮಂದಿ ಸ್ನಾತಕರು. ಇವರ ವಿದ್ಯಾಯೋಗ್ಯತಾನುಸಾರವಾಗಿ ದಾನಮಾಡಬೇಕು. (ಮನುಸ್ಮೃತಿ 11–1) ಈ ಬ್ರಾಹ್ಮಣರಿಗೆ ದಕ್ಷಿಣಾಸಹಿತ ಅನ್ನವನ್ನು ಅಂತರ್ವೇದಿಯಾಗಿ ಕೊಡಬೇಕು. ಇತರರಿಗೆ ಬಹಿರ್ವೇದಿದಾನ. (ಅದೇ)

ಸ್ವದೇಶಿ ಚಳುವಳಿ

ಇದನ್ನು ಈಗ ಬಹಳಷ್ಟು ಮಂದಿ ರಾಜ್ಯಶಾಸ್ತ್ರಜ್ಞರು; ಇತಿಹಾಸಕಾರರು ಬೇರೆ ಬೇರೆ ರೀತಿಯಲ್ಲಿ ವಿವರಿಸುತ್ತಿದ್ದಾರೆ. 'ಸ್ವದೇಶಿ' ಎನ್ನುವ ಕಲ್ಪನೆಯು ಹುಟ್ಟಿಕೊಂಡಿರುವುದು

ರಾಷ್ಟ್ರೀಯ ಆಂದೋಲನದ ಉಪಉತ್ಪನ್ನವಾಗಿ. ನಾವು ಅಂದರೆ ಭಾರತೀಯರು ಸ್ವದೇಶಿಯರು. ಅವರು ಅಂದರೆ ಪರದೇಶಿಯರು. ಪರದೇಶಿಯರು ಎಂದರೆ ಬ್ರಿಟಿಷರು. ಆದರೆ ಭಾರತದಲ್ಲಿ ಸ್ವದೇಶಿ ಚಳುವಳಿಯು ಬ್ರಿಟಿಷರ ವಿರುದ್ಧದ ಹೋರಾಟದ ಮಾದರಿ. ಸ್ವದೇಶಿ ಚಳುವಳಿಯೂ ಹುಟ್ಟಲು ಕಾರಣ-ಬ್ರಿಟಿಷರು. ಭಾರತಕ್ಕೆ ಸಾಹಿತ್ಯರಚನೆಯ ಹೊಸದೃಷ್ಟಿಯನ್ನು ಕಲಿಯಲು ಕಾರಣವಾದುದು ಕೂಡಾ ಇಂಗ್ಲಿಷ್ ಸಾಹಿತ್ಯ ಕಲಿಕೆ. ನೆಹರೂರವರ ಒಂದು ಮಾತು ಗಮನಾರ್ಹ: ನಮಗೆ ಎರಡೂ ರೀತಿಯ ಇಂಗ್ಲೆಂಡಿನ ಪರಿಚಯವಿದೆ. ಒಂದು ಬ್ರೂಟಲ್ ಗುಣ ಹೊಂದಿರುವ; ಕೇಡಿನ ಆಡಳಿತ ಮಾದರಿಯನ್ನು ಒಳಗೊಂಡಿರುವ ಇಂಗ್ಲೆಂಡ್. ಮತ್ತೊಂದು ಷೇಕ್ಸ್ ಪಿಯರನಂಥವರನ್ನು ಹುಟ್ಟುಹಾಕಿದ ಸಾಂಸ್ಕೃತಿಕ ಇಂಗ್ಲೆಂಡ್. ನೆಹರೂ ಎರಡನೆಯದನ್ನು ಒಪ್ಪಿಕೊಂಡಿದ್ದಾರೆ.

ವಿವರಗಳಿಗೆ ನೋಡಿ: ಮೋ.ಕ.ಗಾಂಧಿ ೧೯೬೬ ಜೀವನ ಶಿಕ್ಷಣ
ಕೆ.ವಿ.ಸುಬ್ಬಣ್ಣ(ಅನು) ಗಾಂಧಿ ಬರಹಗಳ ಸಂಕಲನ ೧೯೯೮ ಸ್ವರಾಜ್ಯದ ಹಾದಿ ಹೆಜ್ಜೆಗಳು
ಮೋಹನ್ ದಾಸ್ ಕರಮಚಂದ್ ಗಾಂಧಿ ೨೦೦೮ ಹಿಂದ್ ಸ್ವರಾಜ್
ಮಹಾತ್ಮಾಗಾಂಧಿ ೧೯೫೮ ಧರ್ಮ ಮತ್ತು ನೀತಿ
ಗ.ಪ್ರ.ಪ್ರಧಾನ ೧೯೯೪, ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ

ಸ್ವಪ್ನ

ವಾತ, ಪಿತ್ತ, ಶ್ಲೇಷ್ಮ ರಹಿತ ಮಪ್ಪ; ಪಶ್ಚಿಮ; ರಾತ್ರಿ ಭಾಗದಲ್ಲಿ ಚಂದ್ರ, ಸೂರ್ಯ ಧರೆ, ಸಮುದ್ರ, ಮಹೀಮಂಡಲ, ಘೃತ(ತುಪ್ಪ) ತೈಲ, ಸೂಕರ; ಕರಭಾ ರೂಢ ಪ್ರಾದಿನ ಮುಂತಾದ ಶುಭ ಸ್ವಪ್ನಗಳು ಎಂದು ಕೆಲವು ಜೈನ ಕಾವ್ಯಗಳಲ್ಲಿ ಬರುತ್ತದೆ.

ಸ್ವಯಂವರ

ಸ್ವಯಂವರ ಮಂಟಪದಲ್ಲಿ ಉಳಿದ ರಾಜರನ್ನು ಪರಾಜಿತಗೊಳಿಸಿ ಪಡೆಯುವ ಭಾರ್ಯೆಯು ಅತಿಪ್ರಿಯಳಾಗುತ್ತಾಳೆಂದು ವ್ಯಾಸಭಾರತದಲ್ಲಿ ಬರುತ್ತದೆ.

ಎಂಟು ರೀತಿಯ ಮದುವೆಗಳಲ್ಲಿ ವರನನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ಹೆಣ್ಣಿನದೇ ಹೆಣ್ಣು ಋತುಮತಿಯಾಗಿ ಮೂರು ವರ್ಷಗಳ ಒಳಗೆ ತಂದೆ ಮದುವೆ ಮಾಡಲು ಅಶಕ್ತನಾದರೆ ಕನ್ಯೆಯೇ ಅವನ ಸಮ್ಮತಿ ಪಡೆದು ವರನನ್ನು ಹುಡುಕಿಕೊಳ್ಳಬಹುದು ಎಂದು ಮನುವು ಹೇಳುತ್ತಾನೆ. ಅರ್ಥವೇದದ ಎರಡನೆಯ ಕಾಂಡ ಮೂವತ್ತನೆಯ ಪ್ರೇಮ ಪೂರ್ವಕ ಸ್ವಯಂವರ ವಿಧಾನದ ವರ್ಣನೆಯಿದೆ. ಹೆಣ್ಣಿಗೆ ತನಗೆ ಒಪ್ಪಿಗೆಯಾದಂಥ ಪುರುಷನ ಆಯ್ಕೆ ಮಾಡಲು ಸ್ವಾತಂತ್ರ್ಯ ನೀಡಲಾಗಿದೆ.

ಸ್ವಯಂವರ ಮಂಟಪದಲ್ಲಿ ಉಳಿದ ರಾಜರನ್ನು ಪರಾಜಿತಗೊಳಿಸಿ ಪಡೆಯುವ ಭಾರ್ಯೆಯು ಅತಿಪ್ರಿಯಳಾಗುತ್ತಾಳೆಂದು ವ್ಯಾಸಭಾರತದಲ್ಲಿ ಬರುತ್ತದೆ. (ರಾಮೇಶ್ವರಾವಧಾನಿ (ಸಂ) 1973 ಪುಟ.698)

ವಿವರಗಳಿಗೆ ನೋಡಿ: ಶೇಷ ನವರತ್ನ ೧೯೮೯ ನಾಲ್ಕು ವೇದಗಳು ಪುಟ. ೪೦
ರಾಮೇಶ್ವರಾವಧಾನಿ (ಸಂ) ೧೯೭೨-೭೬ ಮಹಾಭಾರತ (ಸಂಪುಟ-೧-೧೧) ಪುಟ. ೬೯೮
ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೯-೯೦

ಸ್ವರನಿಯಮ ಕಲ್ಪನೆ

ಸ್ವರನಿಯಮ ಕಲ್ಪನೆಯು ಪ್ರಾಸದ ವಿನ್ಯಾಸಗಳಿಗೆ ಸಂಬಂಧಿಸಿದೆ. ಪ್ರಾಸವು ಆದಿಪ್ರಾಸ, ಅಂತ್ಯಪ್ರಾಸ, ಅನುಪ್ರಾಸವೆಂದು ಮೂರು ಬಗೆ. ಪದ್ಯದ ಪ್ರಾರಂಭದಲ್ಲಿ ಮೊದಲನೆಯ ಎರಡು ಸ್ವರಗಳ ನಡುವೆ ಬರುವ ಒಂದೇ ಬಗೆಯ ವ್ಯಂಜನ ಉಳಿದೆಲ್ಲ ಪದ್ಯಪಾದಗಳಲ್ಲಿ ಕ್ರಮವಾಗಿ ಬಂದರೆ ಅದಕ್ಕೆ ಆದಿಪ್ರಾಸವೆಂದೂ, ಹಾಗೆಯೇ ಪದ್ಯದ ಪ್ರತಿಪಾದಗಳ ಕೊನೆಯಲ್ಲಿ ಬರುವ ಅಕ್ಷರವು ಒಂದೇ ಆಗಿದ್ದರೆ ಅದಕ್ಕೆ ಅಂತ್ಯಪ್ರಾಸವೆಂದೂ, ಪ್ರತಿಪದ್ಯಪಾದದಲ್ಲಿ ಅಕ್ಷರ ಸರಣಿಗೊಂಡಂತೆ ಪದೇ ಪದೇ ಬಂದರೆ ಅದನ್ನು ಅನುಪ್ರಾಸವೆಂದು ಕರೆಯಲಾಗಿದೆ.

ವಿವರಗಳಿಗೆ ನೋಡಿ: ಪ್ರಾ. ಗೋ. ಕುಲಕರ್ಣಿ ಕನ್ನಡ ಛಂದಸ್ಸು
ಡಾ. ಟಿ.ವಿ.ವೆಂಕಟಾಚಲಶಾಸ್ತ್ರೀ ಕನ್ನಡ ಛಂದಃಸ್ವರೂಪ

ಸ್ವ ಸಂಸ್ಕೃತಿ

ಸ್ವ ಸಂಸ್ಕೃತಿಯೆನ್ನುವುದು ಬ್ರಿಟೀಶ್ ಆಳ್ವಿಕೆಯ ಸಂದರ್ಭದಲ್ಲಿ ವಿಶೇಷವಾದ ಪದವಾಯಿತು. ಇದು ಬ್ರಿಟೀಷ್ ಆಳ್ವಿಕೆಯ ಮತ್ತು ಹೇರಿದ ಸಂಸ್ಕೃತಿಯ ವಿರುದ್ಧವಾಗಿ ಬಳಸಿಕೊಂಡ ಪದವಾಗಿದೆ. ನಿರ್ವಸಹಾತೀಕರಣವಾಗಬೇಕಾದರೆ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು ಎಂಬುದು ಇದರ ಹಿಂದಿರುವ ತಾತ್ವಿಕತೆಯಾಗಿದೆ. ಇದರ ಪರಿಣಾಮವೆಂದರೆ ರಾಷ್ಟ್ರೀಯ ಸಂಸ್ಕೃತಿ, ದೇಶೀ ಸಂಸ್ಕೃತಿ ಮುಂದಾದವು ಹುಟ್ಟಿಕೊಂಡವು.

ಸ್ವಾತಂತ್ರ್ಯ

'ಸ್ವಾತಂತ್ರ್ಯವೆನ್ನುವುದು ವಸಾಹತು ದೇಶಗಳಲ್ಲಿ ವಿಭಿನ್ನವಾಗಿ ರೂಪುಗೊಂಡಿದೆ. ಸಾಂಸ್ಕೃತಿಕ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ನಮ್ಮ ಮುಂದಿಡುತ್ತದೆ. ಎಲ್ಲಾ ವಸಾಹತು ದೇಶಗಳಲ್ಲೂ ಇವು ನಡೆದಿವೆ. ಎರಡನೆಯದು ರಾಜಕೀಯ ಸ್ವಾತಂತ್ರ್ಯದ ಪರಿಕಲ್ಪನೆ. ಇದನ್ನು ಇಂಗ್ಲಿಷ್‌ನಲ್ಲಿ Freedom, Liberation ಎಂದು ಕರೆಯುತ್ತಾರೆ. ಅಂದರೆ ರಾಜಕೀಯವಾಗಿ ಪಡೆಯುವ ಸ್ವಾತಂತ್ರ್ಯದ ಪರಿಕಲ್ಪನೆಯಿದು. ಇದರಲ್ಲಿ ಹಕ್ಕು

ಪ್ರತಿಪಾದನೆಯ ಮುಖ್ಯ ಅಂಶಗಳು ಇರುತ್ತವೆ. ಒಂದು ರಾಜಕೀಯ ಆಡಳಿತದಿಂದ ಬಿಡುಗಡೆ ಹೊಂದುವುದನ್ನಿದು ಸೂಚಿಸುತ್ತದೆ.

ವಿವರಗಳಿಗೆ ನೋಡಿ: Raymond Williams 1983 keywords P.No. 181 to 183
ಆಶೀಶ್ ನಂದಿಯವರ ಆಯ್ದ ಬರಹಗಳು ೨೦೦೯
ಕೆ.ವಿ.ಸುಬ್ಬಣ್ಣ(ಅನು) ಗಾಂಧಿ ಬರಹಗಳ ಸಂಕಲನ ೧೯೯೮ ಸ್ವರಾಜ್ಯದ ಹಾದಿ ಹೆಜ್ಜೆಗಳು
ಮುಳಿಯ ೧೯೯೭ ಮಹಾಬಲಭಟ್(ಸಂ) ಮುಳಿಯ ತಿಮ್ಮಪ್ಪಯ್ಯ ಸಮಗ್ರ ಸಾಹಿತ್ಯ(ಸಂ ೨)
ಶ್ರೀಮನ್ ನಾರಾಯಣ ೨೦೦೧ ಮಹಾತ್ಮಗಾಂಧಿಯವರ ಆಯ್ದ ಕೃತಿಗಳು(೩)
ರಂ.ರಾ.ದಿವಾಕರ ೧೯೮೫ ಸತ್ಯಾಗ್ರಹ

ಸ್ವಾತಂತ್ರ್ಯಸಂಗ್ರಾಮ

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಎರಡು ಮುಖಗಳಿವೆ.ಒಂದು ಸ್ವಾತಂತ್ರ್ಯ ಸಂಗ್ರಾಮಕ್ಕೆ ಇದ್ದ ರಾಜಕೀಯ ಉದ್ದೇಶ ಇದನ್ನು ರಾಜಕೀಯ ಎಚ್ಚರವೆಂದು ಕರೆಯಬಹುದು. ವಿದೇಶಿಯರನ್ನು ಹೊರಕ್ಕೆ ಅಟ್ಟಿ ನಮ್ಮದೇ ಸರಕಾರವನ್ನು ಕಟ್ಟಿಕೊಳ್ಳಬೇಕೆನ್ನುವುದು ರಾಜಕೀಯ ಎಚ್ಚರ ಪ್ರತೀಕ. ಎರಡನೆಯದು ಪರಮತದ ವಿರುದ್ಧ ಸ್ವಧರ್ಮವನ್ನು ಕಟ್ಟುವ ಪ್ರಯತ್ನ. ಇದನ್ನು 'ಸಾಂಸ್ಕೃತಿಕ ಪ್ರತಿರೋಧ'ವೆಂದು ಕರೆಯಬಹುದು. ಭಾರತಿಯ ಸ್ವಾತಂತ್ರ್ಯ ಸಂಗ್ರಾಮದ ಎರಡು ಮುಖಗಳು ಇವು:

ಅ) ರಾಜಕೀಯ ಪ್ರತಿರೋಧ: ಇದಕ್ಕಾಗಿ ಇದು ರಾಜಕೀಯ ಪರಿಭಾಷೆಗಳನ್ನೇ ಬಳಸಿತು. ಉದಾ:ಕರನಿರಾಕರಣೆ;ಸ್ವದೇಶಿ ವಸ್ತ್ರ;ಇತ್ಯಾದಿ.

ಆ)ಸಾಂಸ್ಕೃತಿಕ ಪ್ರತಿರೋಧ: ಇಲ್ಲಿ ಹೋರಾಟವನ್ನು ಮಾಡುವಾಗ ಧಾರ್ಮಿಕ ಪರಿಭಾಷೆಗಳನ್ನು ಕೂಡಾ ಬಳಸಿಕೊಳ್ಳಲಾಯಿತು.

ವಿವರಗಳಿಗೆ ನೋಡಿ: ಸುನಿಲ್ ಸಹಸ್ರಬುಧೆ, ಕೆ.ಪುಟ್ಟಸ್ವಾಮಿ(ಅನು) ೨೦೦೩ ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು
ಆಶೀಶ್ ನಂದಿಯವರ ಆಯ್ದ ಬರಹಗಳು ೨೦೦೯
ಕೆ.ವಿ.ಸುಬ್ಬಣ್ಣ(ಅನು) ೧೯೯೮ ಸ್ವರಾಜ್ಯದ ಹಾದಿ ಹೆಜ್ಜೆಗಳು
ಬಿಪಿನ್ ಚಂದ್ರ ೨೦೦೧,
ಆರ್.ಎಲ್.ಅನಂತರಾಮಯ್ಯ(ಅನು) ಸ್ವಾತಂತ್ರ್ಯದ ಹೋರಾಟ
ಗ.ಪ್ರ.ಪ್ರಧಾನ ೧೯೯೪, ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ

ಹರಕೆ

ಹರಕೆ=ಹಾರೈಕೆ ಎಂದು ಬರುತ್ತದೆ. ಹಿರಿಯರ ಕಾಲಿಗೆ ಎರಗುವುದು ಮತ್ತು ಅವರ ಆಶೀರ್ವಾದ ಪಡೆಯುವುದು ಸಂಸ್ಕಾರಗಳಿಗೆ ಸಂಬಂಧಿಸಿದವುಗಳಾಗಿವೆ. ಹಾಗೆಯೇ ದೇವರಿಗೆ ಹರಕೆಯೊಪ್ಪಿಸುವುದು ಎನ್ನುವ ಪರಿಕಲ್ಪನೆಯೂ ಇದೆ.

ಹಲ್ಮಿಡಿ ಶಾಸನ

ಇದುವರೆಗೆ ದೊರೆತಿರುವ ಕನ್ನಡಲಿಪಿ ಮತ್ತು ಕನ್ನಡ ಭಾಷೆಯ ಅತ್ಯಂತ ಪ್ರಾಚೀನ ಶಾಸನವೆಂದರೆ ಹಲ್ಮಿಡಿಯ ಶಾಸನ. ಇದರ ಕಾಲವನ್ನು ಸುಮಾರು ಕ್ರಿಶ 450 ಎಂಬುದಾಗಿ ವಿದ್ವಾಂಸರು ತಿಳಿಸುತ್ತಾರೆ. ಇದಕ್ಕಿಂತ ಹಿಂದಿನ ಶಾಸನಗಳಲ್ಲಿ ಲಿಪಿಯು ಮೂಲ ಲಿಪಿಯಾದ ಬ್ರಾಹ್ಮಿಯಿಂದ ಕ್ರಮೇಣ ಬದಲಾವಣೆ ಹೊಂದುತ್ತಾ ಬಂದಿರುವುದನ್ನು ಗಮನಿಸಬಹುದು. ಹಲ್ಮಿಡಿ ಶಾಸನದ ಕಾಲದ ವೇಳೆಗೆ ಕನ್ನಡ ನಾಡಿನ ಶಾಸನಗಳ ಲಿಪಿಯು ತಮ್ಮದೇ ಆದ ರೂಪವನ್ನು ಹೊಂದಿರುವುದು ಕಂಡುಬರುತ್ತದೆ. ಈ ಲಿಪಿಯು ಮುಂದೆ ಗಂಗ, ಚಾಲುಕ್ಯ ರಾಷ್ಟ್ರಕೂಟ, ಕಾಲದಲ್ಲಿ ಸ್ವಲ್ಪ ಸ್ವಲ್ಪ ಬದಲಾವಣೆಗಳನ್ನು ಹೊಂದಿ ಹೊಯ್ಸಳರ ಕಾಲಕ್ಕೆ ಸುಂದರವಾದ ರೂಪವನ್ನು ಹೊಂದಿದುವು. ಆದರೆ ವಿಜಯನಗರದ ಕಾಲದಲ್ಲಿನ ಶಾಸನಗಳ ಲಿಪಿಗಳು ತಮ್ಮ ಹಿಂದಿನ ಅಂದವನ್ನು ಕೆಡಿಸಿಕೊಂಡು ಮುಂದುವರಿದುವು. ಈಗ ನಾವು ಬಳಸುವ ಲಿಪಿಗಳು ಆ ವೇಳೆಗಾಗಲೇ ಬಹುಪಾಲು ಈಗಿನ ರೂಪವನ್ನು ಪಡೆದಿದ್ದವು. ಎಂದು ಶೇಷಶಾಸ್ತ್ರಿಯವರು ಹೇಳುತ್ತಾರೆ.

ವಿವರಗಳಿಗೆ ನೋಡಿ: ೧) ಆರ್. ಶೇಷಶಾಸ್ತ್ರಿ ೨೦೦೫ ಶಾಸನ ಪರಿಚಯ
೨) ಎಸ್. ಶೆಟ್ಟರ್ – ಶಂಗಂ ತಮಿಳಗಂ

ಹಳ್ಳಿಗರು

ಕನ್ನಡ ನವೋದಯ ಸಾಹಿತ್ಯದ ಸಂದರ್ಭದಲ್ಲಿ ಬಂದ ಪ್ರಮುಖ ಸಾಂಸ್ಕೃತಿಕ ಪರಿಭಾಷೆಗಳನ್ನು ಗಮನಿಸಬಹುದು. ರಾಷ್ಟ್ರೀಯ ಸಂಸ್ಕೃತಿ ; ಭಾರತೀಯ ಸಂಸ್ಕೃತಿ ; ಕನ್ನಡ ಸಂಸ್ಕೃತಿ ; ಜಾನಪದ ಸಂಸ್ಕೃತಿ ಮೊದಲಾದ ಸಾಂಸ್ಕೃತಿಕ ಪರಿಕಲ್ಪನೆಯ ಪರಿಭಾಷೆಗಳು ನಿರ್ದಿಷ್ಟ ಮೌಲ್ಯದ ಅಂಶಗಳನ್ನು ಒಳಗೊಂಡಿದೆ. ಈ ಪರಿಭಾಷೆಗಳು ಮುಖ್ಯವಾಗಿ ರೂಪುತಳೆದಿರುವುದು ವಸಾಹತುಶಾಹಿ ಅನುಭವದ ದ್ರವ್ಯದಲ್ಲಿ. ಈ ಎಲ್ಲಾ ಪರಿಭಾಷೆಗಳು ಮುನ್ನಡೆಯ ಅರ್ಥವನ್ನು ಸೂಚಿಸುತ್ತವೆ. ಈ ಸಂದರ್ಭದಲ್ಲಿ ಬಂದ ದೇಸಿಯ ಪರಿಕಲ್ಪನೆಗಳು ಹೀಗಿವೆ. ಅದು ನಾಡಾಡಿಯ ಸಂಸ್ಕೃತಿ, ಆಧುನಿಕವಾದುದಲ್ಲ. ಆದರೆ ಅದರಲ್ಲಿಯೂ ಅಪಾರವಾದ ಜೀವನ ಮೌಲ್ಯವಿದೆ. ಉತ್ಪಾದನಾ ಸಂಬಂಧಗಳಿಗೆ ಸಂಬಂಧಿಸಿದಂತೆ ಈ ಪರಿಭಾಷೆಯು ದೊಡ್ಡ ಕೈಗಾರಿಕೆಗಳ ಬದಲಾಗಿ ಗ್ರಾಮ ಜೀವನದ ದೇಸಿಯ ಉತ್ಪಾದನಾ ಶಕ್ತಿಗಳಾಗಿವೆ. ಇಲ್ಲಿ ಭೌತಿಕ

ಪರಿಕಲ್ಪನೆಗಳು ಪ್ರಧಾನವಾಗಿವೆ. ದೇಸಿಯು ಸಂಪ್ರದಾಯದ ದೊಡ್ಡ ಶಕ್ತಿಯಾದರೆ ವಸಾಹತುಶಾಹಿ ಸಂಸ್ಕೃತಿಯು ಆಧುನಿಕ ವೈಚಾರಿಕ ಕೇಂದ್ರವಾಗಿದೆ. ದೇಸಿಯ ಮತ್ತೊಂದು ನೆಲೆಯಿರುವುದು ದೇಸೀ ಅಸ್ತಿತ್ವದಲ್ಲಿ. ನವೋದಯ ಸಂದರ್ಭದಲ್ಲಿ ದೇಸಿಯನ್ನು ಒಂದು ಸಮೂಹವೆಂದು ಪರಿಭಾವಿಸಲಾಗಿದೆ. ಮುಳಿಯ ತಿಮ್ಮಪ್ಪಯ್ಯನವರು ದೇಸಿಯನ್ನು ಈ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಈ ವ್ಯಾಖ್ಯಾನವನ್ನು ನಾವು ಪ್ರಧಾನವೆಂದು ಅಂಗೀಕರಿಸಿದರೆ ದೇಸಿಯು ತನ್ನ ಅಭಿವ್ಯಕ್ತಿಯನ್ನು ಪರಂಪರೆಯಲ್ಲಿ ಕಾಪಾಡಿಕೊಂಡು ಬಂದಿದೆ.

ವಿವರಗಳಿಗೆ ನೋಡಿ: ಮುಳಿಯ ತಿಮ್ಮಪ್ಪಯ್ಯನವರ ೧೯೫೪ ಕನ್ನಡ ನಾಡೂ ದೇಸೀ ಸಾಹಿತ್ಯವೂ

ಹಳ್ಳಿಯ ಹಾಡು

ಹಳ್ಳಿಯ ಜನರು ಹಾಡುವುದನ್ನು ಹಳ್ಳಿಯ ಹಾಡು ಎಂದು ಕರೆಯುತ್ತಾರೆ. ಇದನ್ನು 'ದೇಸಿ' ಎಂದು ಕರೆಯುವ ಪದ್ಧತಿಯು ನವೋದಯ ಕಾಲದಲ್ಲಿ ಪ್ರಾರಂಭವಾಯಿತು. ಅರ್ಚಕ ರಂಗಸ್ವಾಮಿಯವರ' ಹುಟ್ಟಿದಹಳ್ಳಿ' ಮುಳಿಯರ 'ಕನ್ನಡನಾಡೂ ದೇಸೀ ಸಾಹಿತ್ಯವೂ" ಮೊದಲಾದವರ ಕೃತಿಗಳಲ್ಲಿ ಹಳ್ಳಿಯವರ ಹಾಡು ಎಂಬ ಪರಿಕಲ್ಪನೆಗಳಿವೆ.

ವಸಾಹತುಶಾಹಿ ಸಂದರ್ಭದಲ್ಲಿ ನಡೆದ ಬಹುಮುಖಿ ಸಂವಾದವು ಸ್ಥಿತ್ಯಂತರದ ರೂಪದಲ್ಲಿ ಸಂಬಂಧ ಪಡೆದಿದೆ. ಆಕ್ರಮಣದ ವಿರುದ್ಧ ತೆರೆದುಕೊಂಡ ಅನೇಕ ಸೂಕ್ಷ್ಮ ಕೊಂಡಿಗಳಲ್ಲಿ ಮೊದಲನೆಯದು ಸಂಸ್ಕೃತಿಯ ಬಗೆಗಿನ ವ್ಯಾಖ್ಯಾನಗಳು. ಅನೇಕ ಕನ್ನಡದ ನವೋದಯ ಸಾಹಿತ್ಯದಲ್ಲಿ ಸಂಸ್ಕೃತಿಯ ಬಗೆಗಿನ ಕೆಲವು ಮುಖ್ಯ ಚರ್ಚೆಗಳು ಬಂದಿವೆ. ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಹೀಗೆ ಹೇಳುತ್ತಾರೆ. ನಾಡಿನ ಸಾರ್ವಜನಿಕವಾದ ಸಂಸ್ಕೃತಿಯ ಸಾರವೆಂದರೆ ದೇಸಿ. ಅದನ್ನು ಯಾವ ಬಗೆಯಲ್ಲೂ ವಿಕೃತಗೊಳಿಸಬಾರದು. ಮಾರ್ಗ ಸಾಹಿತ್ಯವಾಗಲಿ, ಲಕ್ಷಣವಾಗಲಿ ತಮ್ಮ ಹೊಣೆಯನ್ನು ಅದರ ಮೇಲೆ ಬಾಗಿಸಿದಲ್ಲಿ, ಹೊರಿಸಿದಲ್ಲಿ ಅದರ ತನ್ನತನ ಮಾಯವಾಗುವುದು. ಈಗಿನ ನಾಗರಿಕತೆ ಎದುರಿನಲ್ಲಿ ಹೇಗೆ ಹಳ್ಳಿಗರು ಅಂಜಿ, ನಾಚಿ, ಮುಗ್ಗರಿಸಿದ ಮನಸ್ಸಿನಿಂದ ವರ್ತಿಸುತ್ತಾರೋ ಹಾಗೆ ಮಾರ್ಗಸಾಹಿತ್ಯದ ಎದುರಿನಲ್ಲಿ ದೇಸಿ ತಳಮಳಿಸುತ್ತದೆ. (ಮುಳಿಯ ತಿಮ್ಮಪ್ಪಯ್ಯ ೧೯೫೪ ಕನ್ನಡ ನಾಡೂ ದೇಸೀ ಸಾಹಿತ್ಯವೂ ಪು.೩೩) ತಿಮ್ಮಪ್ಪಯ್ಯನವರು ಎರಡು ಅಂಶಗಳನ್ನು ಪ್ರಧಾನವಾಗಿ ಗಣನೆಗೆ ತಂದುಕೊಂಡಿದ್ದಾರೆ: ಮೊದಲನೆಯದು, ದೇಸಿ ಸಮೂಹ ಸಂಸ್ಕೃತಿಯ ಫಲ. ಮತ್ತೊಂದು ನಾಗರಿಕರು ಮತ್ತು ಹಳ್ಳಿಗರು ಎನ್ನುವ ವಿಭಾಗೀಕರಣದ ಮುಖಾಂತರ 'ಹೇರು'ವುದರ ವಿರುದ್ಧದ ಪರಿಕಲ್ಪನೆ. ಆದರೆ, ದೇಸೀ ಪರಮ ಪವಿತ್ರವಾದುದು ಎನ್ನುವುದರಲ್ಲಿ ಅವರಿಗೆ ಆಸಕ್ತಿಯಿಲ್ಲ. ಅವರೇ ಮತ್ತೊಂದೆಡೆ

"ಜೋಗುಳ ಹಾಡು", ಒನಕೆವಾಡು, ಎಕ್ಕವಾಡು' ಮುಂತಾದ ನಾನಾ ಬಗೆಯ ದೇಸಿ ಹಾಡುಗಳು ನಾಡಿನೊಳಗೆ ಈಗಲೂ ಹಾಸುಹೊಕ್ಕಾಗಿವೆ. ಆದರೆ ಅವುಗಳೊಂದಿಗೆ ಹಲವೆಲ್ಲವೂ ಹುರುಳಿಲ್ಲದ ಮರಳೇ ಸರಿ" ಎಂದಿದ್ದಾರೆ. (ಅದೇ ಪುಟ.೪೧) ಅಧೀನ ಸಂಸ್ಕೃತಿಯು ಒಂದು ರೀತಿಯಿಂದ ಪ್ರಧಾನ ಸಂಸ್ಕೃತಿಯ ಚೌಕಟ್ಟಿನೊಳಗೆ ಬರದೆ ಬೇರೆ ರೀತಿಯ ಅಭಿವ್ಯಕ್ತಿಯ ಕ್ರಮವನ್ನು ಒಳಗೊಂಡಿರುತ್ತದೆಯೆಂಬ ಮುಳಿಯರ ವಾದ ಗಮನಾರ್ಹ.

ಕನ್ನಡದ ಮೊತ್ತಮೊದಲ ಶಾಸನವಾದ ಹಲ್ಮಿಡಿ ಶಾಸನವು ಗದ್ಯದ ಧಾಟಿಲ್ಲಿದ್ದರೂ ಅಲ್ಲಿ ಅಂಶಗಣದ ಸುಳುಹನ್ನು ಹೊಂದಿರುವ ರಗಳೆಯಂತೆ ಹರಿಯುತ್ತದೆ. ದೇಸೀ ಛಂದಸ್ಸು ತನ್ನ ಸುಕುಮಾರ ಶೈಲಿಯನ್ನು ಹೊಂದಿರುವುದರಿಂದ ಕನ್ನಡದ ಜಾಯಮಾನಕ್ಕೆ ಅದು ಹೊಂದಿಕೊಂಡಿದೆ. ಅದರಲ್ಲಿ ತ್ರಿಪದಿ, ಅಕ್ಕರ, ಚೌಪದಿ, ಗೀತಿಕೆ, ಬೆದೆಂಡೆ, ಚಿತ್ತಾಣ, ಓವನಿಗೆ, ಒನಕೆವಾಡು, ವಚನಗಳು, ಸಾಂಗತ್ಯ, ಸರಳ ರಗಳೆಗಳು, ದೇಸಿ ಛಂದಸ್ಸುಗಳಾಗಿ ಕಾವ್ಯ ಪ್ರಯೋಗಗಳಲ್ಲಿ ಪ್ರಯೋಗಿಸಲ್ಪಟ್ಟಿವೆ.

ಹಾರೀತ

"ಹಾರೀತ ಧರ್ಮ ಸೂತ್ರದಲ್ಲಿ ಮೂವತ್ತು ಅಧ್ಯಾಯಗಳಿವೆ. ಅವನು ಯಜುರ್ವೇದಕ್ಕೆ ಸಂಬಂಧಿಸಿದವನು ಎಂಬ ಪ್ರತೀತಿಯೂ ಇದೆ. ಎಲ್ಲ ವೇದಗಳು ವೇದಾಂಗಗಳು ಧರ್ಮಶಾಸ್ತ್ರ, ತತ್ವಶಾಸ್ತ್ರ, ಶ್ರುತಗಳಾಗಿ ಆಚಾರ ವಿಚಾರಗಳು (ಸ್ಥಿತಿ) ಇವನ್ನು ಅವನು ಉಲ್ಲೇಖಿಸಿದ್ದಾನೆ. ಎಂಟು ಬಗೆಯ ವಿವಾಹಗಳು ಅವನಿಂದ ನಿರೂಪಿತವಾಗಿವೆ. ಅವುಗಳಲ್ಲಿ ಆರ್ಷ, ಪ್ರಾಜಪತ್ಯಗಳಿಗೆ ಬದಲಾಗಿ ಬಂದಿವೆ. ಬ್ರಹ್ಮವಾದಿನೀ (ತಪೋನಿಷ್ಠೆ) ಸದ್ಯೋವಧೂ(ಹೊಸದಾಗಿ ವಿವಾಹಿತಳು) ಎಂದು ಎರಡು ಬಗೆಯ ಸ್ತ್ರೀಯರ ವಿಚಾರವನ್ನು ಹಾರೀತನು ಹೇಳಿದ್ದಾನೆ. ಅವರಲ್ಲಿ ಮೊದಲನೆಯ ಬಗೆಗೆ ಉಪನಯನ, ಅಗ್ನಿಕಾರ್ಯ, ವೇದಾಧ್ಯಯನ, ಸ್ವಗೃಹದಲ್ಲಿ ಭಿಕ್ಷೆ ಇವುಗಳ ಅಧಿಕಾರವುಂಟು. ಅವನು ನಟವೃತ್ತಿಯನ್ನು ಲಘುವಾಗಿ ಕಾಣುವುದಲ್ಲದೆ ಬ್ರಾಹ್ಮಣ ನಟನಿಗೆ ಶ್ರಾದ್ಧ ನಿಮಂತ್ರಣ ಕೊಡುವುದನ್ನೂ ನಿಷೇಧಿಸಿದ್ದಾನೆ. ಕಾಲ. ಸು. ಕ್ರಿ.ಪೂ. 600 ರಿಂದ ಕ್ರಿ.ಪೂ. 300"

ವಿವರಗಳಿಗೆ ನೋಡಿ: ಯುಗಯಾತ್ರೀ ಭಾರತೀಯ ಸಂಸ್ಕೃತಿ ೧೯೭೧ ಸಂಪುಟ. ೨ ಪುಟ. ೨೨೩.

ಹಿಂಸೆ

ಹಿಂಸೆಯೆನ್ನುವುದನ್ನು ವಿವರಿಸುವುದು ಕಷ್ಟ, ಹಿಂಸೆಗೆ ವಿವಿಧ ರೂಪಗಳಿವೆ. ವಿವಿಧ ರೀತಿಯ ಸಂದರ್ಭಗಳಿವೆ. ಹಿಂಸೆಯೆಂದರೆ ನಾವೆಲ್ಲಾ ಭಾವಿಸುವ ಹಾಗೆ ಕೇವಲ ದೈಹಿಕ ಹಿಂಸೆಗಳಲ್ಲ, ಮಾನಸಿಕ ಹಿಂಸೆಯಿಂದ ಪ್ರಾರಂಭಿಸಿ ಎಲ್ಲಾ ರೀತಿಯ

ಹಿಂಸೆಗಳು ಯಾವುದೇ ರೀತಿಯ ನಿರ್ದಿಷ್ಟ ವ್ಯಾಖ್ಯೆಗಳನ್ನು ಹೊಂದಿರುವುದಿಲ್ಲ. ಹಿಂಸೆಯನ್ನು ಒಂದೇ ಪ್ರಕಾರವೆಂದು ಪರಿಗಣಿಸುವಂತಿಲ್ಲ. ಅಣುಬಾಂಬುವಿನಿಂದ ಉಂಟಾಗುವ ಹಿಂಸೆಗೂ, ದೈಹಿಕ ಹೊಡೆತದಿಂದ ಆಗುವ ಹಿಂಸೆ ಕಣ್ಣಿಗೆ ಕಾಣಿಸುತ್ತದೆ. ಮತ್ತು ಅದು ವಾಸಿಯಾಗುತ್ತದೆ. ದೈಹಿಕ ಹಿಂಸೆಗಳಿಗೆ ವಿವಿಧ ರೀತಿಯ ಅಸ್ತ್ರಗಳನ್ನು ಬಳಸಲಾಗುತ್ತದೆ. ಈ ರೀತಿಯ ವಿಧಾನಗಳಲ್ಲಿ 'ದಂಡ ಸಂಹಿತೆ'ಯು ಮುಖ್ಯ.

ಹಿಂಸೆ ಎನ್ನುವುದು ಮನುಷ್ಯನ ನಡವಳಿಕೆಯ ಒಳಗಿನ ಭಾಗವೂ ಹೌದು, ಹಿಂಸೆ ಮನುಷ್ಯನ ಪ್ರವೃತ್ತಿಗಳಲ್ಲಿ ಒಂದು ಎಂದು ಪರಿಭಾವಿಸಲಾಗಿದೆ. ಹಿಂಸೆಯೂ ಯಾವ ರೀತಿಯಲ್ಲಿ ಇರುತ್ತದೆ ಎನ್ನುವುದು ಆಯಾ ಸನ್ನಿವೇಶಕ್ಕೆ ಆಧರಿಸಿ ಬೇರೆಯಾಗುತ್ತಾ ಹೋಗುತ್ತದೆ. ಮಿಲಿಟರಿ ಅಧಿಕಾರ, ಪೋಲಿಸ್ ಅಧಿಕಾರ ದಂಡ ಸಂಹಿತೆಯನ್ನು ಬಳಸುವುದು ಪ್ರಭುತ್ವದ ಹಿತಾಸಕ್ತಿ ಕಾರಣಕ್ಕಾಗಿ, ಸೇನೆ, ಪೋಲಿಸರು, ಕಾನೂನು, ನ್ಯಾಯಾಲಯ ಇವು ಮುಂತಾದವು ನಾಗರೀಕ ಸಮಾಜಕ್ಕೆ ಅಗತ್ಯವೆಂದು ಪರಿಭಾವಿಸಲಾಯಿತು. ಆದರೆ ಮಾನಸಿಕ ಹಿಂಸೆಯಲ್ಲಿ ಈ ತರಹದ ಯಾವ ದೃಷ್ಟಿ ಕೋನವೂ ಇರುವುದಿಲ್ಲ. ಮನಸ್ಸಿನ ಮೇಲೆ ಹಲ್ಲೆ ನಡೆಸುವುದು ಮಾತ್ರ ಇದರ ಉದ್ದೇಶವಾಗಿದೆ.

ಗಾಂಧೀಜಿಯವರು ಅಹಿಂಸೆಯನ್ನು ಪ್ರತಿಪಾದಿಸುವಾಗ ಅದರ ಹಿನ್ನೆಲೆಯಲ್ಲಿ ಜೈನ ಧರ್ಮದ ಪ್ರಭಾವವು ಇತ್ತು ಎಂಬುದು ಗಮನಾರ್ಹವಾಗಿದೆ.

ಹಿಂಸೆಯ ಬದಲಿಗೆ ಬರುವ ಶಾಂತಿಯನ್ನು ಜೈನ ಕವಿಗಳು ಎತ್ತಿ ಹಿಡಿಯುತ್ತಾರೆ. ಯೋಗದ ಎದುರು ಹಾದು ಹೋಗುವ ಭೋಗದ ಬಗೆಗೆ ಜೈನ ಕವಿಗಳು ಹೇಳುವ ಅಭಿಪ್ರಾಯಗಳು ಸಮಚಿತ್ತದ ಒಲವನ್ನು ತೋರಿವೆ. ಬಹುತೇಕ ಜೈನ ಕಾವ್ಯಗಳು ಆ ರೀತಿಯಲ್ಲಿ ವ್ಯಕ್ತಪಡಿಸುವ ಅಭಿಪ್ರಾಯಗಳು ಜೈನ ಕವಿಗಳ ತಾತ್ವಿಕ ಒಲವನ್ನು ಎತ್ತಿಹಿಡಿದಿವೆ. ಆ ಒಲವು ಹುಟ್ಟಿರುವುದು ಆಧುನಿಕ ಬಂಡವಾಳಶಾಹಿ ಯುಗದಲ್ಲಿಯೂ ಅಲ್ಲ. ಹಾಗೆಯೇ ಕೈಗಾರಿಕಾ ನಗರದಲ್ಲಿನ ಹೊಗೆಯ ವಿರುದ್ಧವೂ ಅಲ್ಲವೆಂಬುದು ಗಮನಾರ್ಹ. ಈ ಮಾತನ್ನು ಏಕೆ ಉಲ್ಲೇಖಿಸಲಾಗಿದೆಯೆಂದರೆ ಈಗಲೂ ನಾವೆಲ್ಲಾ ಶಾಂತಿಯ ಬಗ್ಗೆಯೇ ಹೇಳುತ್ತಿದ್ದೇವೆ. ಈ ಶಾಂತಿಯ ಪರಿಕಲ್ಪನೆಯು ಹುಟ್ಟಿಕೊಂಡಿರುವುದು ನಮ್ಮ ಪ್ರಜಾಪ್ರಭುತ್ವವಾದಿ ನೆಲೆಗಳಿಂದ. ಜೈನ ಕವಿಗಳು ಕಾವ್ಯ ಬರೆಯುತ್ತಿದ್ದ ಕಾಲದಲ್ಲಿ ಪ್ರಜಾಪ್ರಭುತ್ವವೆಂಬ ಪರಿಕಲ್ಪನೆ ಇರಲಿಲ್ಲವಷ್ಟೆ? ರಾಜಪ್ರಭುತ್ವದ ನಿರಂಕುಶ ಆಡಳಿತದೆದುರು ಅವರು ಶಾಂತಿ, ಅಹಿಂಸೆಯನ್ನು ಕುರಿತು ಮಾತನಾಡಿದರು. ಇದನ್ನೇ ಬಿಡಿಸಿ ಹೇಳಬಹುದಾದರೆ. ರಾಜಪ್ರಭುತ್ವದ ವಿರುದ್ಧ; ಪ್ರಾದೇಶಿಕ ವಂಶಾನುಕ್ರಮದ ಆಡಳಿತದ ವಿರುದ್ಧ ಜೈನಕವಿಗಳು ಶಾಂತಿ ಅಹಿಂಸೆಯ ಕುರಿತು ಮಾತನಾಡಿದ್ದರಿಂದ ಅದಕ್ಕೆ ಪ್ರತಿಕ್ರಿಯಾತ್ಮಕ ಅರ್ಥವಿದೆ.

ವಿವರಗಳಿಗೆ ನೋಡಿ: ಚಕ್ರಕೋಡಿ ಈಶ್ವರಶಾಸ್ತ್ರಿ ೧೯೬೭ ಮನುಸ್ಮೃತಿ ೩-೬೮, ೫-೪೧

ಡಾ. ಆರ್. ಶೇಷಶಾಸ್ತ್ರಿ ೨೦೦೪ ಕರ್ನಾಟಕದ ವೀರಗಲ್ಲುಗಳು ಪುಟ. ೩೭

ಹುಂಡಾವಸರ್ಪಿಣಿ

ಹುಂಡಾವಸರ್ಪಿಣಿಯು ದುಷ್ಷಮದ ಸಮೀಪವಿರುತ್ತದೆ. ಹುಂಡಾವಸರ್ಪಿಣಿಯೆಂದರೆ ಅನೇಕ ಅವಸರ್ಪಿಣಿಗಳ ಅನಂತರ ಬರುವ ಕಾಲಾವಧಿಯೆಂದು ಅರ್ಥವಿದೆ.

ಹೆಂಡತಿ

ಎಲ್ಲ ಸಮಯದಲ್ಲೂ ಸ್ತ್ರೀಗೆ ರಕ್ಷಣೆ ನೀಡಬೇಕು. ರಕ್ಷಣೆ ನೀಡದಿದ್ದರೆ ಎರಡೂ ಕುಟುಂಬಗಳಿಗೆ ದುಃಖ ತಪ್ಪಿದ್ದಲ್ಲ. (ಮನುಸ್ಮೃತಿ. ೯-೫)

ರೋಗ, ಹೆಂಡ, ಜೂಜಿಗೆ ಬಲಿಯಾದ ಗಂಡನ ಸೇವೆ ಮಾಡದ ಹೆಂಡತಿಯನ್ನು ಅಲಂಕಾರ ಹಾಗೂ ಹಾಸಿಗೆ ನೀಡದೆ ಮೂರು ತಿಂಗಳವರೆಗೆ ನರಳಿಸಬೇಕು. (ಮನುಸ್ಮೃತಿ. ೯-೭೮)

ಹೆಣ್ಣಿನ ವೇಷ-ಭೂಷಣ

ಹೆಂಗಸರ ವೇಷ-ಭೂಷಣಗಳ ಕುರಿತು ವೆಯಿಟ್ಜ್ [Waitz] ಈ ರೀತಿ ಹೇಳುತ್ತಾರೆ: ಪುರುಷನ ಅಸೂಯೆಯೇ ಹೆಣ್ಣಿನ ವೇಷ ಭೂಷಣದ ತೊಡುವಿಕೆ ಮತ್ತು ನೂತನತೆಗೆ ಕಾರಣವಾಗಿದೆ. ಡಿಡೆರೊಲ್ ಇದನ್ನೇ ಒತ್ತಿ ಹೇಳುತ್ತಾರೆ. 'ಆದಿವಾಸಿಗಳ ಕೆಲವು ಜನಾಂಗಗಳಲ್ಲಿ ಸ್ತ್ರೀಯರು ಮದುವೆಯಾದ ಮೇಲೆ ವೇಷ ಭೂಷಣಗಳನ್ನು ತೊಟ್ಟುಕೊಳ್ಳುವಾಗ ಮುಖ್ಯವಾಗಿ ಲೈಂಗಿಕ ಆಕರ್ಷಣೆಗೆ ಒಳಗಾಗುವ ಅಂಗಗಳಿಗೆ ಮಾತ್ರ ಒಡವೆಗಳನ್ನು ತೊಟ್ಟಿರುತ್ತಾರೆ. ಈ ವಾದವು ಮಾನಸಿಕ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಇದರ ಪ್ರಕಾರ, ಅಲಂಕಾರವು ಕೇವಲ ಮಾನ ಮುಚ್ಚುವುದಕ್ಕೆ ಇರುವಂಥದಲ್ಲ, ಅದರಲ್ಲಿ ಲೈಂಗಿಕ ಆಕರ್ಷಣೆಯೇ ಪ್ರಧಾನವಾಗಿರುತ್ತದೆ. ಅಲಂಕಾರದ ಮೇಲೆ ಪ್ರಾದೇಶಿಕತೆಯ ಪ್ರಭಾವವೂ ಇರುತ್ತದೆ.

ಭಾರತೀಯ ಪರಂಪರೆಯಲ್ಲಿ ಉಡುಗೆ ತೊಡುಗೆಗೆ ಕ್ರಮಬದ್ಧವಾದ ಬೆಳವಣಿಗೆಯಿದ್ದು, ಅದನ್ನು ಕುರಿತ ಸ್ಪಷ್ಟ ಕಲ್ಪನೆಯು 'ಅಮರ ಕೋಶ'ದಲ್ಲಿ ಹೀಗೆ ಬರುತ್ತದೆ (ರಂಗನಾಥ ಶರ್ಮ; ಎನ್. ಪು. 140-147).

1. ವಾಲಪಾಶ್ಯಾ, ಪಾರಿತಥ್ಯಾ (ಕೇಶದಲ್ಲಿ ಧರಿಸುವ ಜಡಬಿಲ್ಲೆ.)

   ಪತ್ರಪಾಶ್ಯಾ, ಲಲಾಟಿಕಾ – ಹಣೆಯ ಮೇಲ್ಗಡೆ ತೂಗುವ ಆಭರಣ.

2. ಕರ್ಣತಾ, ತಾಲಪತ್ರ – ಸ್ತ್ರೀಯರು ಧರಿಸುವ ಓಲೆ.
3. ಕರ್ಣವೇಷ್ಟನ – ಕಿವಿಯುಂಗುರ.
4. ಗ್ರೈವೇಯಕ, ಕಂಠಭೂಷಣ– ಅಡ್ಡಿಕೆ, ತಾಳಿ ಮೊದಲಾದ ಕಂಠಾಭರಣ.
5. ಪ್ರಾಲಂಬಿಕಾ– ಚಿನ್ನದ ಸರ.
6. ಉರಸ್ಸೂತ್ರಿಕಾ, ಹಾರ, ಮುಕ್ತಾವಲೀ– ಮುತ್ತಿನ ಸರ.
7. ದೇವಚ್ಛಂದ – ನೂರು ಎಳೆಗಳಿರುವ ಮುತ್ತಿನ ಸರ.

ಮುಂದಿನವುಗಳು ಸಂಖ್ಯಾಭೇದದಿಂದ ಆಗುವ ವಿವಿಧ ಮುತ್ತಿನ ಸರಗಳು:–

8. 32 ಎಳೆ – ಗುತ್ಸಾ.
9. 24 ಎಳೆ – ಗುತ್ಸಾರ್ಧ.
10. 34 ಎಳೆ – ಗೋಸ್ತನ.
11. 20 ಎಳೆ – ಅರ್ಧಹಾರ, ಮಾಣವಕ.
12. 1 ಎಳೆ – ಏಕಾವಲಿ
13. 27 ಮುತ್ತುಗಳುಳ್ಳ ಒಂದೆಳೆಯ ಸರ – ನಕ್ಷತ್ರಮಾಲಾ.
14. ಅವಾಪಕ, ಪಾರಿಹಾಯಣ, ಕಟಕ, ವಲಯ – ಕೈ ಬಳೆ.
15. ಕೇಯೂರ, ಅಂಗದ – ತೋಳಿನ ಒಡವೆ.
16. ಅಂಗುಲೀಯಕ, ಜಾರ್ಮಿಕಾ – ಉಂಗುರ.
17. ಕಂಕಣ – ಮಣಿಬಂಧದಲ್ಲಿ ಧರಿಸುವ ಹಸ್ತಾಭರಣ.
18. ಮೇಖಲಾ, ಕಾಂಚೀ, ಸಪ್ತಕೀ, ರಶನಾ, ಸಾರಸನ – ಹೆಂಗಸರ ಸೊಂಟದ ಆಭರಣ.
19. ಮಂಜೀರ, ನೂಪುರ, ಹಂಸಕ, ಪಾದಕಟಕ – ಕಾಲಂದಿಗೆ.
20. ಕ್ಷುದ್ರ ಘಂಟಿಕಾ – ಗೆಜ್ಜೆ, ಕಿರುಗಂಟೆ.
21. ಕಾರ್ಪಾಸ, ಬಾದರ – ಹತ್ತಿಯ ಬಟ್ಟೆ.
22. ಪತ್ರೋರ್ಣ – ಒಗೆದ ರೇಶ್ಮೆಯ ಬಟ್ಟೆ.
23. ದುಕೂಲ – ಪಡೆವಸ್ತ್ರ.
24. ಪಟ್ಟಚ್ಚರ – ಹರಕು ಬಟ್ಟೆ.
25. ಅಂತರೀಯ, ಉಪಸಂಧ್ಯಾನ, ಪರಿಧಾನ, ಅಧೋಂಶುಕ– ಕೆಳವಸ್ತ್ರ.
26. ಜೋಲ, ಕೂರ್ಪಾಸಕ – ಹೆಂಗಸರ ಕುಪ್ಪಸ.

27. ಅರ್ದೋರುಕ, ಚಂಡಾತಕ – ಹೆಂಗಸರ ಲಂಗ.

28. ಆಪ್ರಪದೀನ – ತುದಿಕಾಲಿನವರೆಗೆ ಇರುವ ಬಟ್ಟೆ.

29. ಪತ್ರಲೇಖಾ, ವತ್ರಾಂಗುಲಿ – ಹೆಂಗಸರ ಕೆನ್ನೆ, ಕೈ ಮುಂತಾದ ಸ್ಥಳಗಳಲ್ಲಿ ಅಲಂಕಾರಕ್ಕಾಗಿ ಬರೆವ ಚಿತ್ರಲೇಖಿ.

30. ತಮಾಲಪತ್ರ, ತಿಲಕ, ಚಿತ್ರಕ, ವಿಶೇಷಕ – ಹಣೆಯ ಮೇಲೆ ಇಟ್ಟುಕೊಳ್ಳುವ ಬಟ್ಟು.

31. ರಚನಾ, ಪರಿಸ್ಪಂದ – ವಸ್ತ್ರಾದಲಂಕಾರಗಳಲ್ಲಿ ಕೌಶಲ್ಯ ಪ್ರದರ್ಶನ.

ಸ್ತ್ರೀಯರ ಹದಿನಾರು ಅಲಂಕಾರಗಳನ್ನು ಹೀಗೆ ಗುರುತಿಸುತ್ತಾರೆ: 'ಸ್ನಾನ, ವಿಲೇಪನ, ವಸ್ತ್ರ, ಶಿರೋಭೂಷಣ, ಒಡ್ಯಾಣ, ನೂಪುರ, ಆಲಕ್ತಲೇಪನ' ಇವು ಮುಖ್ಯವಾಗಿ ಸ್ತ್ರೀಯರ ಅಲಂಕಾರವನ್ನು ಸೂಚಿಸುತ್ತವೆ. ಎಂದಿದ್ದಾರೆ.

ವಿವರಗಳಿಗೆ ನೋಡಿ: James Hastings: (Ed): 1967 Encyclopedia Religion & Ethics (Vol-5)–(Vol-10) P. 42.

ಹೈಹಯರು

ತ್ರಿಪುರಿಯ ಚೇದಿವಂಶದ ರಾಜರು ಹೈಹಯರೆಂದು ವಾಡಿಕೆಯಿದೆ. ಬಾದಾಮಿಯ ಮಂಗಳೀಶನು ಹೈಹಯ ವಂಶದ ಬುದ್ಧರಾಜನನ್ನು ಗೆದ್ದು ತಂದ ಸಂಪತ್ತಿನಿಂದ ಮಹಾಕೂಟದ ಹತ್ತಿರ ವಿಜಯಸ್ತಂಭವನ್ನು ನಿಲ್ಲಿಸಿದನು (ಕ್ರಿ. ಶ. 597). ಚೇದಿಯರ ಮನೆತನದ ಕನ್ನೆಯರನ್ನು ಮಳಖೇಡಿನ ರಾಷ್ಟ್ರಕೂಟರು ಮದುವೆಯಾಗುತ್ತಿದ್ದರು. ಕಂನಾಡಿನಲ್ಲಿ ಹೈಹಯರು ಬಂದು ಕಂನಾಡವರೇ ಆಗಿಬಿಟ್ಟುದೂ ಉಂಟು. ಇಲ್ಲಿ ಆಳಿದ ಬಿಜ್ಜಳಾದಿ ಕಲಚೂರಿಗಳು ಹೈಹಯರು ಬಂದು ಕಂನಾಡವರೇ ಆಗಿಬಿಟ್ಟುದೂ ಉಂಟು. ಇಲ್ಲಿ ಆಳಿದ ಬಿಜ್ಜಳಾದಿ ಕಲಚೂರಿಗಳು ಹೈಹಯರು. ಕಾರ್ತವೀರ್ಯಾರ್ಜುನನ ವಂಶದವರೆಂದುಕೊಳ್ಳುವ ಕೆಲವು ಕ್ಷತ್ರಿಯರು ಈಗ ಈ ನಾಡಿನಲ್ಲಿದ್ದಾರೆ. ಇದು ಶಂಬಾರವರ ಅಭಿಪ್ರಾಯ.

ವಿವರಗಳಿಗೆ ನೋಡಿ: ಶಂಬಾ ಜೋಶಿ 1999 ಸಂಪುಟ. 2 ಪುಟ. 180.

ಹೋತೃ

ಋತ್ವಿಕ್ಕು, ಹೋಮ ಮಂತ್ರವನ್ನು ಹೇಳುವವನು ಹೋತೃವೆಂದು ಕರೆಯುತ್ತಾರೆ. ಋಗ್ವೇದದಿಂದ ಹೋತಾ, ಸಾಮವೇದದಿಂದ ಉದ್ಗಾತಾ, ಯಜುರ್ವೇದದಿಂದ ಅಧ್ವರ್ಯು ಈ ಮೂವರು ಯಜ್ಞಕಾರ್ಯವನ್ನು ನೆರವೇರಿಸುತ್ತಾರೆ. (ವೇದವ್ರತ ವೈಶಂಪಾಯನ. ೧೯೮೪. ಯಜುರ್ವೇದ ಪು. ೬೮)

ಗ್ರಂಥ ಋಣ

ಅಕ್ಷರ ಕೆ.ವಿ. : **ರಂಗಪ್ರಪಂಚ** ಅಕ್ಷರ ಪ್ರಕಾಶನ, ಸಾಗರ, ೧೯೯೪.

ಅಗ್ರಹಾರ ಕೃಷ್ಣಮೂರ್ತಿ(ಸಂ): **ಸಂಸ್ಕೃತಿ ಕಥನ** ಕ.ಸ.ಇಲಾಖೆ ಬೆಂಗಳೂರು, ೨೦೦೬.

ಅಶೋಕ ಟಿ.ಪಿ. : **ವಾಸ್ತವತಾವಾದ** ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸಬೆಂಗಳೂರು-೨, ೧೯೯.

ಆದ್ಯರಂಗಾಚಾರ್ಯ(ಸಂ) : **ಕನ್ನಡದಲ್ಲಿ ಅರವಿಂದ ದರ್ಶನ** ರಾಜ್ಯ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೭೩.

ಆಮೂರ ಜಿ.ಎಸ್. : **ಕಥನಶಾಸ್ತ್ರ** ಕರ್ನಾಟಕ ಸಾಹಿತ್ಯ ಅಕಾಡೆಮಿ ಜೆ.ಸಿ.ರಸ್ತೆ ಬೆಂಗಳೂರು, ೨೦೦೧.

ಆಶೀಶ್‌ನಂದಿಯವರ: **ಆಯ್ದ ಬರಹಗಳು** ಅಕ್ಷರ ಪ್ರಕಾಶನ ಹೆಗ್ಗೋಡು, ೨೦೦೯.

ಡಾ. ಸುಂಕಾಪುರ ಎಂ.ಎಸ್. (ಪ್ರಸಂ) : **ಶಿಕ್ಷಣವನ್ನು ಕುರಿತು ಶ್ರೀ ಅರವಿಂದರ ಮತ್ತು ತಾಯಿಯವರ ವಿಚಾರಗಳು**ಅನು:ಶ್ರೀಎಲ್.ಜಿ.ಮೊಕ್ತಾಲಿ ಕನ್ನಡ ಅಧ್ಯಯನ ಪೀಠ, ಮೈಸೂರು, ೧೯೭೫.

ಕನ್ನಡಿಗರಿಬ್ಬರು : **ಸತ್ಯಶೋಧನೆ** ಲೋಕ ಶಿಕ್ಷಣ ಟ್ರಸ್ಟ್, ೨೦೦೧.

ಕಾರ್ಲೋಸ್ ಎಸ್. : **ರಾಚನಿಕವಾದ ಮತ್ತು ನಿರಚನವಾದ** ೨೦೦೦.

ಕಾರ್ಲ್‌ಮಾರ್ಕ್ಸ್ : **ಆಯ್ದ ಕೃತಿಗಳು** ಸಂಪುಟ ೧ ನವಕರ್ನಾಟಕ, ೧೯೯೦.

ಡಾ.ಕಾಶೀನಾಥ ಅಂಬಲಗೆ (ಅನು) : **ಸೌಂದರ್ಯಶಾಸ್ತ್ರ (ಕಲಾತ್ಮಕ ವಿವೇಚನೆ) (ಕಲೆಯ ಸ್ನಾತಕ, ಸ್ನಾತಕೋತ್ತರ ಹಾಗೂ ಡಿಪ್ಲೊಮಾ ಪಠ್ಯಕ್ರಮಗಳ ಪ್ರಕಾರ)** ಮೂಲ ಹಿಂದಿ: ಡಾ.ಮಮತಾ ಚತುರ್ವೇದಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

ಕೆ.ಕೃಷ್ಣಮೂರ್ತಿ : **ಕನ್ನಡ ಧ್ವನ್ಯಾಲೋಕ ಮತ್ತು ಲೋಚನಸಾರ**
ಕ.ಸ.ನಿರ್ದೇಶನಾಲಯ ಬೆಂಗಳೂರು, ೧೯೯೦.

ಎಂ.ಎ.ಕೃಷ್ಣಸ್ವಾಮಿ : **ಋಗ್ವೇದ** ಮೈಸೂರು ವಿಶ್ವವಿದ್ಯಾನಿಲಯ ಪ್ರಚಾರ
ಪುಸ್ತಕ ಮಾಲೆ – ೩೪, ೧೯೫೫.

ಕೇಶವಶರ್ಮ .ಕೆ. : **ಶಬ್ದರೇಖೆ** ಅಭಿನವ ಬೆಂಗಳೂರು, ೧೯೯೮.

ಬಿ.ಡಿ.ಗಣಪತಿ : **ಸತ್ಯಶೋಧನೆ** ಜ್ಯೋತಿ ಪ್ರಕಾಶನ ಮಡಿಕೇರಿ, ೧೯೭೪.

ಗ.ಪ್ರ.ಪ್ರಧಾನ : **ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ**
ಸರಸ್ವತೀ ರಿಸಬೂಡ(ಅನು) ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೧೯೯೪.

ಗಾಂಧಿ : **ಹಿಂದ್ ಸ್ವರಾಜ್ಯ** ಗಾಂಧಿ ಸ್ಮಾರಕ ನಿಧಿ ಗಾಂಧಿ ಭವನ,
ಕುಮಾರ ಪಾರ್ಕ್‌ಪೂರ್ವ, ಬೆಂಗಳೂರು–೧, ೨೦೦೮.

ಗಿರಡ್ಡಿ ಗೋವಿಂದರಾಜ : **ಸಾತತ್ಯ** ಸ್ನೇಹ ಪ್ರಕಾಶನ ವಿಜಯನಗರ
೨ನೆಯ ಹಂತ ಬೆಂಗಳೂರು, ೧೯೯೨.

ಗಿರಡ್ಡಿ ಗೋವಿಂದರಾಜ : **ಸಾಹಿತ್ಯ ಮತ್ತು ಪರಂಪರೆ** ಅಭಿಜಾತ ಗ್ರಂಥಮಾಲೆ
ಬೆಂಗಳೂರು, ೧೯೮೧.

ಡಾ.ಗಿರಡ್ಡಿ ಗೋವಿಂದರಾಜ : **ಪ್ರಮಾಣ** ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ,
೨೦೦೭.

ಗೊರೂರು ರಾಮಸ್ವಾಮಿ ಅಯ್ಯಂಗಾರ್ : ನನ್ನ **ಸತ್ಯಾನ್ವೇಷಣೆ** ನವಜೀವನ
ಪ್ರಕಾಶನ ಮಂದಿರ, ಅಹಮದಾಬಾದ್, ೧೯೯೯.

ವಿ.ಕೃ.ಗೋಕಾಕ್ : **ನವ್ಯತೆ** ಸುರುಚಿ ಪ್ರಕಾಶನ ಮೈಸೂರು, ೧೯೭೫.

ಜಿ.ಎಸ್.ಚಕ್ರವರ್ತಿ: **ಇತಿಹಾಸ ಪ್ರದೀಪ** ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩.

ಜಾ.ಗೋ. : **ಕಾವ್ಯಮಂಥನ** ಪ್ರಾಯೋಗಿಕ ವಿಮರ್ಶೆ, ಸಮಾಜ
ಪುಸ್ತಕಾಲಯ, ಧಾರವಾಡ, ೧೯೮೦.

ಡಿ.ವಿ.ಜಿ. : **ವೃತ್ತಪತ್ರಿಕೆ** ಕಾವ್ಯಾಲಯ, ಮೈಸೂರು, ೧೯೬೮.

ಡಿ.ವಿ.ಜಿ.: **ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ**
ಕಾವ್ಯಾಲಯ, ಮೈಸೂರು–೧೪, ೧೯೯೬.

ಎಚ್.ತಿಪ್ಪೇರುದ್ರಸ್ವಾಮಿ: **ಕನ್ನಡ ವಿಮರ್ಶೆ ಕವಲುದಾರಿಯಲ್ಲಿ** ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾನಿಲಯ, ೧೯೭೮.

ಡಾ.ಎಚ್. ತಿಪ್ಪೇರುದ್ರಸ್ವಾಮಿ (ಸಂ): **ಮಹಾತ್ಮ** ಅನು: ಕೆ.ಎಸ್.ನಾರಾಯಣಸ್ವಾಮಿ ಗಾಂಧೀಭವನ ಬಿ.ಆರ್.ಪ್ರಾಣೇಶರಾವ್ ಮಾನಸಗಂಗೋತ್ರಿ ಶಶಿಕಲಾಚಂದ್ರಶೇಖರ್ ಮೈಸೂರು, ೧೯೭೫.

ತೀ.ನಂ.ಶ್ರೀಕಂಠಯ್ಯ: **ಭಾರತೀಯ ಕಾವ್ಯ ಮೀಮಾಂಸೆ** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

ಎಚ್.ದಂಡಪ್ಪ, ಬಿ.ಎನ್.ಸುಮಿತ್ರಬಾಯಿ : **ಸುವರ್ಣ ಸಾಹಿತ್ಯ ವಿಮರ್ಶೆ** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

ದ.ರಾ.ಬೇಂದ್ರೆ: **ಮಾತೆಲ್ಲ ಜ್ಯೋತಿ** ಅಕಾಡೆಮಿ ಆಫ್ ಜನರಲ್ ಎಜುಕೇಶನ್, ಮಣಿಪಾಲ, ೧೯೭೨.

ದೇ.ಜವರೇಗೌಡ : **ರಾಷ್ಟ್ರಕವಿ ಕುವೆಂಪು** ಕ.ಸ.ನಿರ್ದೇಶನಾಲಯ, ೧೯೮೫.

ಜಿ.ಟಿ.ದೇಶಪಾಂಡೆ(ಮೂ) : **ಅಭಿನವಗುಪ್ತ** ಎನ್.ಬಾಲಸುಬ್ರಹ್ಮಣ್ಯ(ಅನು) ಸಾಹಿತ್ಯ ಅಕಾಡೆಮಿ, ೨೦೦೦.

ಡಾ.ಧನ್ಯಕುಮಾರ್ ಇಜಾರಿ: **ಆಯುರ್ವೇದ ವಿಜ್ಞಾನ** ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿ.ವಿ, ಧಾರವಾಡ, ೧೯೭೦.

ಇ.ಎಂ.ಎಸ್.ನಂಬೂದಿರಿಪಾಡ್: **ಮಾರ್ಕ್ಸ್‌ವಾದ ಮತ್ತು ಸೌಂದರ್ಯಶಾಸ್ತ್ರ** ಭಾಸ್ಕರಮಯ್ಯ(ಅನು) ಜನವಾದಿ ಪ್ರಕಾಶನ, ಗುಂಡ್ಮಿ, ೨೦೦೦.

ಎಸ್.ನಟರಾಜ್. ಬೂದಾಳ್ : **ನಾಗಾರ್ಜುನನ ಮೂಲ ಮಾಧ್ಯಮಕ** ಅಭಿನವ, ಬೆಂಗಳೂರು, ೨೦೦೬.

ಎಂ.ಎಸ್.ನರಸಿಂಹಮೂರ್ತಿ: **ಭಾರತೀಯ ನಾಟಕ ಪರಂಪರೆ** ಬೆಂಗಳೂರು ವಿಶ್ವವಿದ್ಯಾನಿಲಯ ಬೆಂಗಳೂರು, ೧೯೮೫.

ನರಹಳ್ಳಿ ಬಾಲಸುಬ್ರಹ್ಮಣ್ಯ : **ನವ್ಯತೆ** ಕರ್ನಾಟಕ ಸಾಹಿತ್ಯ ಅಕಾಡೆಮಿ ಕನ್ನಡ ಭವನ ಜೆ.ಸಿ.ರಸ್ತೆ, ಬೆಂಗಳೂರು, ೧೯೯೯.

ಡಿ.ಎಸ್.ನಾಗಭೂಷಣ: **ಕುವೆಂಪು ಸಾಹಿತ್ಯ ದರ್ಶನ** ಪ್ರಗತಿ ಗ್ರಾಫಿಕ್ಸ್ ೧೧೯, ೩ನೆಯ ತಿರುವು, ೮ ನೆಯ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು, ೨೦೦೭.

ಹಾ.ಮಾ.ನಾಗಾರ್ಜುನ: **ಛಂದೋ ಅಧ್ಯಯನ** ರಾಸಿ ಪುಸ್ತಕ ಪ್ರಕಾಶನ ೮೩/೧ಎ, ಕೆ.ಎಸ್.ಆರ್.ಟಿ.ಸಿ ಬಡಾವಣೆ, ಬನ್ನಿಮಂಟಪ, ಮೈಸೂರು, ೨೦೦೮.

ನಾಡೋಡಿ : **ವಿನೋಬಾ ಅಣಿಮುತ್ತುಗಳು** ಮತ್ತೂರು ಕೃಷ್ಣಮೂರ್ತಿ ವಾಹಿನಿ ಪ್ರಕಾಶನ, ಮದರಾಸು, ೧೯೫೭.

ನಾಯಕ ಜಿ.ಎಚ್. : **ಕೃತಿಸಾಕ್ಷಿ** ಕ.ಸ.ಇಲಾಖೆ ಬೆಂಗಳೂರು. ೨೦೦೬.

ನಾರಾಯಣ ಕೆ.ವಿ.: **ತೊಂಡುಮೇವು(೯ ಕಂತೆ)**ಬರಹ ಪಬ್ಲಿಷಿಂಗ್ ಹೌಸ್, ೨೦೧೦.

ಪಂಡಿತ ಮುಳಿಯ ತಿಮ್ಮಪ್ಪಯ್ಯ : **ಕನ್ನಡ ನಾಡು ದೇಸಿ ಸಾಹಿತ್ಯವೂ** ಕೀ.ಶೇ: ಪಂಡಿತ ಮುಳಿಯತಿಮ್ಮಪ್ಪಯ್ಯನವರು, ಕನ್ನಡ ಸಂಶೋಧನ ಸಂಸ್ಥೆ ಧಾರವಾಡ, ೧೯೫೪.

ಡಾ. ಪಾಂಡುರಂಗ ವಾಮನ ಕಾಣೆ : **ಧರ್ಮಶಾಸ್ತ್ರದ ಇತಿಹಾಸ** (ಸಂಪುಟ೧:ಭಾಗ೨) ಅನು:ಪ್ರೊ.ಎಸ್.ಕೆ.ರಾಮಚಂದ್ರರಾವ್, ಎನ್.ಎಸ್.ಶಾರದಾ ಪ್ರಸಾದ್ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು.

ಪಾದೇಕಲ್ಲು ನರಸಿಂಹಭಟ್: **ಅಭಿನವಗುಪ್ತ** ಅಕ್ಷರ ಚಿಂತನ, ೧೯೯೮.

ಡಾ. ಪ್ರಭಾಕರ ಜೋಶಿ ಎಂ.: **ಭಾರತೀಯ ತತ್ತ್ವಶಾಸ್ತ್ರ ಪ್ರವೇಶ** ಎಂ.ಎ.ಹೆಗಡೆ ಸಿದ್ದಾಪುರ ಅಕ್ಷರ ಪ್ರಕಾಶನ, ಸಾಗರ, ೨೦೦೮.

ಪ್ರಸನ್ನ : **ನಟನೆಯ ಪಾಠಗಳು** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೭.

ಬರಗೂರು ರಾಮಚಂದ್ರಪ್ಪ: **ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು-೨, ೧೯೯೩.

ಬರಗೂರು ರಾಮಚಂದ್ರಪ್ಪ : **ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ** ಕ.ಸಾ. ಅಕಾಡೆಮಿ, ಬೆಂಗಳೂರು-೨, ೧೯೯೩.

ಬಸವರಾಜ ಕಲ್ಗುಡಿ: **ಸುವರ್ಣವಿಚಾರ ಸಾಹಿತ್ಯ** ಕ.ಸ. ಇಲಾಖೆ, ಬೆಂಗಳೂರು, ೨೦೦೬.

ಬಸವರಾಜ ನಾಯ್ಕರ: **ಅಸಂಗತ** ಕ.ಸಾ.ಅಕಾಡೆಮಿ, ಬೆಂಗಳೂರು, ೨೦೦೨.

ಬಾಲಗಂಗಾಧರ ಎಸ್.ಎನ್. (ಮೂಲ) : **ಸ್ಮೃತಿ-ವಿಸ್ಮೃತಿ:ಭಾರತೀಯ ಸಂಸ್ಕೃತಿ** ರಾಜಾರಾಮ ಹೆಗಡೆ (ಅನು) ಅಕ್ಷರ ಪ್ರಕಾಶನ, ಸಾಗರ, ೨೦೧೦.

ಬಾಲಸುಬ್ರಹ್ಮಣ್ಯ ಎನ್.: **ಅರಿಸ್ಟಾಟಲನ ಕಾವ್ಯಮೀಮಾಂಸೆ** ಕಾವ್ಯಾಲಯ ಪ್ರಕಾಶಕರು ಮೈಸೂರು, ೧೯೭೨.

ಬಾಲಸುಬ್ರಹ್ಮಣ್ಯ ಎನ್.: **ವೇದಾಂತಸಾರ** ಕಾವ್ಯಾಲಯ, ಮೈಸೂರು, ೧೯೭೩.

ಬಿಪಿನ್ ಚಂದ್ರ : **ಸ್ವಾತಂತ್ರ್ಯದ ಹೋರಾಟ** ಆರ್.ಎಲ್.ಅನಂತರಾಮಯ್ಯ(ಅನು) ನ್ಯಾಶನಲ್ ಬುಕ್ ಟ್ರಸ್ಟ್, ೨೦೦೧.

ಬಿಮಲ್‌ಕೃಷ್ಣಮತಿಲಾಲ್: **ಶಬ್ದ ಮತ್ತು ಜಗತ್ತು** ಅಕ್ಷರ ಪ್ರಕಾಶನ ಸಾಗರ, ೨೦೧೦.

ಮಮತಾ ಬ್ಯಾನರ್ಜಿ: **ಸೌಂದರ್ಯಶಾಸ್ತ್ರ** ಕರ್ನಾಟಕ ಲಲಿತಕಲಾ ಅಕಾಡೆಮಿ.

ಮಲ್ಲೇಪುರಂ.ಜಿ.ವೆಂಕಟೇಶ್: **ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೦.

ಡಾ.ಮಹದೇವ ನಾರಾಯಣರಾವ್ ಜೋಶಿ : **ಋಗ್ವೇದ ಸೂತ್ರ ಮಂಜರಿ** ರೂಪ ಪ್ರಕಾಶನ ಧಾರವಾಡ, ೨೦೦೭.

ಮಹಾತ್ಮಾಗಾಂಧಿ **ಧರ್ಮ ಮತ್ತು ನೀತಿ** ಗಾಂಧೀ ಸ್ಮಾರಕ ನಿಧಿ ೧೯೫೮.

ಎನ್.ಜಿ. ಮಹಾದೇವಪ್ಪ : **ತರ್ಕಶಾಸ್ತ್ರ–೧** ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ, ೧೯೭೧.

ಡಾ.ಮಹೇಶ ಅಡಕೋಳಿ (ಸಂ): ವಿದ್ವಾನ್‌ಶಂಕರಭಟ್ಟ **ಅನ್ನಂಭಟ್ಟ ವಿರಚಿತ ತರ್ಕ ಸಂಗ್ರಹ** (ಅನುವಾದ ಟಿಪ್ಪಣಿ ಸಹಿತ) ಆನಂದ ಪ್ರಕಾಶನ ಮೂರೂರು, ೧೯೯೨.

ಮುಳಿಯ ತಿಮ್ಮಪ್ಪಯ್ಯ: **ಸಮಗ್ರ ಸಾಹಿತ್ಯ(ಸಂ ೨)**ಮುಳಿಯ ಮಹಾಬಲಭಟ್(ಸಂ) ಮುಳಿಯ ತಿಮ್ಮಪ್ಪಯ್ಯ ಶತಮಾನೋತ್ಸವ ಸಮಿತಿ ಮಂಗಳೂರು, ೧೯೯೭.

ಮುಳಿಯ ತಿಮ್ಮಪ್ಪಯ್ಯ: **ನಾಡೋಜ ಪಂಪ** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕನ್ನಡ ಭವನ, ಬೆಂಗಳೂರು, ೨೦೦೬.

ಮೋಹನ್‌ದಾಸ್ ಕರಮಚಂದ್ ಗಾಂಧಿ : **ಜೀವನ ಶಿಕ್ಷಣ** ಗಾಂಧೀ ಸ್ಮಾರಕ ನಿಧಿ ಕರ್ನಾಟಕ ಶಾಖೆ, ೧೯೬೬.

ಮೋಹನ್‌ದಾಸ್ ಕರಮಚಂದ್ ಗಾಂಧಿ : **ಹಿಂದ್ ಸ್ವರಾಜ್ಯ** ಇಳಾ ಮುದ್ರಣ, ನಂ: ೩೬ ೪೦ ಅಡಿರಸ್ತೆ, ರಾಘವನಗರ, ಬೆಂಗಳೂರು–೨೬, ೨೦೦೮.

ಯೆರವಿನ ತೆಲಿಮಠ ಸಿ.ಆರ್.: **ಸಾಹಿತ್ಯ ವಿಮರ್ಶೆಯ ಮಾದರಿಗಳು** ಕನ್ನಡ ವಿಶ್ವವಿದ್ಯಾನಿಲಯ, ೨೦೦೮

ರಂಗನಾಥ ಎನ್.: **ಭರ್ತೃಹರಿಯ ವಾಕ್ಯಪದೀಯ** ಶರ್ಮ(ಅನು) ಅಕ್ಷರ ಪ್ರಕಾಶನ, ಹೆಗ್ಗೋಡು ಡಿ.ಆರ್.ನಾಗಾರಾಜ್(ಸಂ)ಸಾಗರ, ೧೯೯೩.

ರಂಗೋ ಕುಲಕರ್ಣಿ : **ಯೋಗವಾಸಿಷ್ಠ** ಸಂ.ದಿ.ನಾಗೇಶ ಪ್ರಕಾಶಕರು ಪ್ರತಿಭಾ ಗ್ರಂಥಮಾಲೆ ಶಿವಾಜಿ ಬೀದಿ, ಧಾರವಾಡ.

ದಿವಾಕರ ರಂ.ರಾ.: **ಸತ್ಯಾಗ್ರಹ** ಕ.ಸ.ನಿರ್ದೇಶನಾಲಯ ನೃಪತುಂಗ ರಸ್ತೆ, ಬೆಂಗಳೂರು, ೧೯೮೫.

ರಹಮತ್ ತರೀಕೆರೆ: **ಕನ್ನಡ ಸಾಹಿತ್ಯ ಮೀಮಾಂಸೆ**(ಸಂ.೧) ಪ್ರಸಾರಾಂಗ, ಹಂಪಿ, ೨೦೦೧.

ರಾಘವಾಚಾರ್ ಕ.ವೆಂ.: **ನಂದಾನೆನಪು** ಉಷಾ ಸಾಹಿತ್ಯ ಮಾಲೆ ಮೈಸೂರು–೧, ೧೯೭೩.

ರಾಘವಾಚಾರ ಕ.ವೆಂ.: **ಸೋಫೋಕ್ಲಿಸ್ ಮಹಾಕವಿಯ ಎಲೆಕ್ಟ್** ಫಿಲೆಕ್ಟೆತೇಸ್ ಉಷಾ ಸಾಹಿತ್ಯ ಮಾಲೆ ಮೈಸೂರು–೧, ೧೯೭೪.

ರಾಚಪ್ಪ ಟಿ.ವಿ. : **ಕರ್ಮ ನಿಯಮ**
(Translation of 'karma' and 'A study in karma' by Anniebesant and a few extracts from C.W. Lead Beaters works)

ಅನು: ಟಿ.ವಿ.ರಾಚಪ್ಪ ಕರ್ನಾಟಕ ಥಿಯಾಸಫಿಕರ್ ಫೆಡರೇಷನ್ ರಿಟೈರ್ಡ್ ಹೈಸ್ಕೂಲು ಹೆಡ್ಮಾಸ್ಟರ್ ಬೆಂಗಳೂರು–೫೬೦೦೦೪.

ರಾಜೇಂದ್ರ ಚೆನ್ನಿ: **ಅಮೂರ್ತತೆ ಮತ್ತು ಪರಿಸರ** ಅಭಿನವ ಪ್ರಕಾಶನ, ೫೮, ಮಹಡಿ, ೫ನೆಯ ಎ ಅಡ್ಡರಸ್ತೆ, ಸುಬ್ಬಣ್ಣಗಾರ್ಡನ್, ಬೆಂಗಳೂರು, ೨೦೦೩.

ರಾಜೇಂದ್ರ ಚೆನ್ನಿ: **ದೇಶೀವಾದ** ಕ.ಸಾ.ಅಕಾಡೆಮಿ ಬೆಂಗಳೂರು, ೧೯೯೯.

ರಾಜೇಂದ್ರ ಚೆನ್ನಿ: **ನಡುಹಗಲಿನಲ್ಲಿ ಕಂದೀಲುಗಳು** ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೪.

ರಾನಡೆ ರಾ.ದ. ಮೂಲ:: **ಬ್ರಹ್ಮಸೂತ್ರಗಳು** ಅ.ರಾ.ಸೇ. ಶ್ರೀ ಶಂಕರಲಿಂಗ ಪ್ರಕಾಶನ ಭರಮಸಾಗರ–೫೭೭೫೧೯, ೧೯೮೮.

ರಾಮಚಂದ್ರನ್ ಸಿ.ಎನ್.: **ಸಾಹಿತ್ಯ ವಿಮರ್ಶೆ** ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು–೨, ೨೦೦೨.

ರಾಮಚಂದ್ರನ್ ಸಿ.ಎನ್.: **ವಸಾಹತೋತ್ತರ ಚಿಂತನೆ** ಕ.ಸಾ.ಅಕಾಡೆಮಿ, ಬೆಂಗಳೂರು, ೨೦೦೨.

ಡಿ.ಲಿಂಗಯ್ಯ : **ಶಿವಪುರದ ಧ್ವಜ ಸತ್ಯಾಗ್ರಹ** ಶಿವಪುರ ಧ್ವಜ ಸತ್ಯಾಗ್ರಹ ಟ್ರಸ್ಟ್, ೧೯೭೬.

ಲೂಯಿ ರೈಸ (ಸಂ) : **ಅಮರಕೋಶ (ಅಮರಸಿಂಹನ)**

ಪ್ರೊ.ಎನ್.ಬಾಲಸುಬ್ರಹ್ಮಣ್ಯ, ಪರಿಷ್ಕೃತ ಸಂಸ್ಕರಣ, ಪ್ರಸಾರಾಂಗ, ಮೈಸೂರು, ೨೦೦೬.

ಲೆನಿನ್ ವಿ.ಐ.: **ಲೆನಿನ್ ಆಯ್ದ ಕೃತಿಗಳು** ಸಂಪುಟ.೩, ಸಂಪುಟ ೨ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೮೮, ೧೯೮೯.

ಪ್ರೊ. ವೆಂಕಟಸುಬ್ಬಯ್ಯ ಜಿ.: ಎರವಲು ಪದಕೋಶ ನವಕರ್ನಾಟಕ ಪಬ್ಲಿಕೇಶನ್, ೧೯೯೮.

ಪ್ರೊ. ವೆಂಕಟಸುಬ್ಬಯ್ಯ ಜಿ.: **ಇಗೋ ಕನ್ನಡ** ನವಕರ್ನಾಟಕ ಪ್ರಕಾಶನ, ೧೯೯೭.

ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ : **ಮಹಾಕಾವ್ಯ** ಡಿ.ವಿ.ಕೆ.ಮೂರ್ತಿ ಮೈಸೂರು-೪, ೨೦೦೧.

ಡಿ.ಎನ್.ಶಂಕರಭಟ್ : **ಇಂಗ್ಲಿಷ್ ಪದಗಳಿಗೆ ಕನ್ನಡದ್ದೇ ಪದಗಳು** ಬಾಶಾ ಪ್ರಕಾಶನ ಹೆಗ್ಗೋಡು, ಸಾಗರ, ೨೦೦೮.

ಡಾ.ಜಿ.ಎಸ್.ಶಿವರುದ್ರಪ್ಪ : **ಕಾವ್ಯಾರ್ಥ ಚಿಂತನ** ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೮೩.

ಜಿ.ಎಸ್.ಶಿವರುದ್ರಪ್ಪ : **ಕಾವ್ಯಾರ್ಥ ಪದಕೋಶ** ಕೆ.ವಿ.ನಾರಾಯಣ ಕಾಮಧೇನು ಪ್ರಕಾಶನ, ಬೆಂಗಳೂರು, ೧೯೯೯.

ಜಿ.ಎಸ್.ಶಿವರುದ್ರಪ್ಪ : **ಕನ್ನಡ ಸಾಹಿತ್ಯ ಸಮೀಕ್ಷೆ** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೧೯೯೯.

ಜಿ.ಎಸ್.ಶಿವರುದ್ರಪ್ಪ : **ಟಿ.ಎಸ್.ಎಲಿಯಟ್ ಮತ್ತು ಕನ್ನಡ ನವ್ಯ ಕಾವ್ಯಸಂದರ್ಭ** ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೮೯.

ಶಿವಾರೆಡ್ಡಿ .ಕೆ.ಸಿ.: **ಕುವೆಂಪು ಸಮಗ್ರ ಗದ್ಯ ೧** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೩.

ಶಿವಾರೆಡ್ಡಿ .ಕೆ.ಸಿ. : **ಕುವೆಂಪು ಸಮಗ್ರ ಗದ್ಯ ೨** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೪.

ಎಲ್.ಎಸ್.ಶೇಷಗಿರಿರಾವ್: **ಪಾಶ್ಚಾತ್ಯ ಮತ್ತು ಭಾರತೀಯ ಮಹಾಕಾವ್ಯ ಪರಂಪರೆಗಳ ಮನೋಧರ್ಮ** ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು-೫೬.

ಡಾ.ಶ್ರೀಧರಹೆಗಡೆ ಭದ್ರನ್ : ಆಧುನಿಕ ಕನ್ನಡ ಮಹಾಕಾವ್ಯ ಅಭಿನವ ೧೭/೧೮-೨ ಮೊದಲನೆ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು-೪೦.

ಶ್ರೀಮನ್ ನಾರಾಯಣ : **ಮಹಾತ್ಮಗಾಂಧಿಯವರ ಆಯ್ದ ಕೃತಿಗಳು(೩)**ನವಜೀವನ ಪ್ರಕಾಶನ ಮಂದಿರ, ಅಹಮದಾಬಾದ್, ೨೦೦೧.

ಶ್ರೀರಂಗ : **ನಾಟ್ಯಶಾಸ್ತ್ರದ ಅಧ್ಯಾಯ ಸಂಗ್ರಹ** ಅಕ್ಷರ ಪ್ರಕಾಶನ, ಸಾಗರ, ೧೯೮೩.

ಶ್ರೀರಂಗ ಮಹಾಗುರು: **ಅಮರವಾಣೀ** **ಅಷ್ಟಾಂಗ ಯೋಗಮಂದಿರ** ೯೫೭, ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು, ೧೯೯೭.

ಸಂಪದ್ಗಿರಿರಾವ್ (ಅಧ್ಯಕ್ಷರು) : **ಕರ್ನಾಟಕದ ಪರಂಪರೆ(ಸಂ.೨)** ಮೈಸೂರು ರಾಜ್ಯ ಸರ್ಕಾರ, ೧೯೭೦.

ರಾಮಚಂದ್ರರಾವ್ ಸಾ.ಕೃ.: **ಆಯುರ್ವೇದದಲ್ಲಿ ನಾಡೀ ವಿಜ್ಞಾನ** ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ೧೯೮೪.

ಸುಂಕಾಪುರ ಎಂ.ಎಸ್. : **ಅರವಿಂದರ ಶಿಕ್ಷಣ ವಿಚಾರ** ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ೧೯೭೫.

ಸುಕುಮಾರ್ ಅಮ್ಮಿಕೋಡ್: **ತತ್ವಮಸಿ** ವಿ.ಗೋಪಾಲಕೃಷ್ಣ(ಅನು) ಸಾಹಿತ್ಯ ಅಕಾಡೆಮಿ, ೨೦೦೫.

ಸುನಿಲ್ ಸಹಸ್ರಬುಧೆ : **ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು** ಕೆ.ಪುಟ್ಟಸ್ವಾಮಿ (ಅನು) ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು-೧೮, ೨೦೦೩.

ಸುಬ್ಬಣ್ಣ ಕೆ.ವಿ.: **ಅರೆ ಶತಮಾನದ ಅಲೆ ಬರಹಗಳು** (ಸಂ: ಟಿ.ಪಿ.ಅಶೋಕ) ಅಕ್ಷರ ಪ್ರಕಾಶನ, ಸಾಗರ, ೨೦೦೪.

ಸುಬ್ಬಣ್ಣ ಕೆ.ವಿ. : **ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೦.

ಸುಬ್ಬಣ್ಣ ಕೆ.ವಿ. (ಅನು): **ಸ್ವರಾಜ್ಯದ ಹಾದಿ ಹೆಜ್ಜೆಗಳು** ಕರ್ನಾಟಕ ಸಂಘ, ಪುತ್ತೂರು, ೧೯೯೮.

ಸುಮಿತ್ರ.ಎಲ್.ಸಿ. : **ಕಾಡು-ಕಡಲು** ಶಿವರಾಮ ಕಾರಂತ ಅಧ್ಯಯನ ಕೇಂದ್ರವಿವೇಕಾನಂದ ಕಾಲೇಜು,ಪುತ್ತೂರು-೫೭೪೨೦೩, ೨೦೦೨.

ಸುರೇಂದ್ರನಾಥ್ ಮಿಣಜಗಿ: **ಸೃಜನ ಕ್ರಿಯೆ ಮತ್ತು ಸಂವೇದನೆ** ಅಂಕಿತ ಪುಸ್ತಕ ಬೆಂಗಳೂರು, ೨೦೦೦.

ಸೋಮನಾಥಾನಂದ : **ಉಪನಿಷತ್ ಭಾವಧಾರೆ** ಶ್ರೀ ರಾಮಕೃಷ್ಣಾಶ್ರಮ ಮೈಸೂರು-೫೭೦೦೨೦, ೧೯೭೦.

ಸ್ವಾಮಿ ಆದಿದೇವಾನಂದ: **ಪಾತಂಜಲಿಯೋಗ ದರ್ಶನ** ಶ್ರೀ ರಾಮಕೃಷ್ಣಾಶ್ರಮ ಮೈಸೂರು-೨, ೧೯೮೧.

ಹರಿದಾಸ ಭಟ್ಟಚಾರ್ಯ : **ಯುಗಯಾತ್ರಿ ಭಾರತೀಯ ಸಂಸ್ಕೃತಿ**(ಸಂ.೩) ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ೧೯೭೫.

ಡಾ.ಹಾ.ಮಾ.ನಾಯಕ (ಸಂ) : **ಭಾರತೀಯ ತತ್ತ್ವಶಾಸ್ತ್ರದ ಮೂಲಾಂಶಗಳು** ಕ.ಅ.ಸಂಸ್ಥೆ ಮೈಸೂರು, ೧೯೭೧.

ಡಾ.ಹಾ.ಮಾ.ನಾಯಕ (ಸಂ): **ಭಾರತೀಯ ತತ್ತ್ವಶಾಸ್ತ್ರದ ರೂಪುರೇಷೆಗಳು**

ಮೂಲ: ಎಂ.ಹಿರಿಯಣ್ಣ ಕನ್ನಡ ಅಧ್ಯಯನ ಸಂಸ್ಥೆ ಅನು: ಡಾ.ಪ್ರಭುಶಂಕರ, ಮೈಸೂರು, ೧೯೭೩.

ಹಿಪ್ಪರಗಿ ಜಿ.ಸಿ. : **ವಿಚಾರಮಯೂರ ಪಂಪಾ** ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೧೯೮೨.

ಹೆಗಡೆ ಎಂ.ಎ.: **ಅಲಂಕಾರತತ್ತ್ವ** ಸಮಾಜ ಪುಸ್ತಕಾಲಯ, ಧಾರವಾಡ, ೨೦೦೧.

■■

REFERENCE

Abrahams M.H. : **A Glossary of Literary terms** Harcourt College Publishers, 1985.

Andrew Edgar : **Key concepts in Cultural theory** Routledge Newyork, 1999.

Anand Prakash: **Marxist Literary theory** A View. Worldview Publications, 2002.

Antony Easthope: **Poetry as discourse** methurn London, 1983.

Alan Swingwood: **Sociological Poetics and Aesthetic theory** Macmillan Press London, 1986.

Acharya Vipin : **Kamasutra** Chandra Bandhu universal Publications, Delhi-6, 1973.

Altekar A. S. : **State and Governmentin Ancient India** Motilal Banarasidas, Varanasi, 1972.

Altekar A.S. : **The Position of Women in Hindu Civilisation** Motilal Banarasidas Delhi patna, Varnasi, 1962.

Apte V.M.S. :**The Practical Sanskrit – English Dictionary** Motilal Banarasidas, New Delhi, 1965.

Apte V.M. : **Social & Religious Life in the Grihya Sutras** Popular Book Depot, Bombay, 1954.

Arora Rajkumar : **Historical & Cultural Data From Bhavisya Purana** Sterling Publishers Private Limited New Delhi, 1972.

Bill Asheroft : **Key concepts in post colonial studies** Routledge, 2004.

Bijay Kumar das : **Twentieth Century Literary Criticism** Atlantic, 2005.

Bhaktin M.M. : **The dialogic Imagination** University of Texas Press, Austin, 1981.

Basham A.L.: **The Wonder that was India** Sidgwick and Jackson, London, 1967.

Basham A.L. (Ed) : **A Cultural History of India** Clarendon Press, Oxford, 1975.

Bronislaw Malinowski : **Sex & Repression in Savage** Society Kegan Paul, London, 1927.

Bhattacharya Narendranath : **Ancient Indian Ritual and their Social Content** Manohar Book Service Panna Bhawan Delhi, 1975.

Candra Cakravati : **Sex Life in Ancient India** Firms Mukhyopadyaya K.L. Calcutta, 1963.

Coomara Swamy, Anand : **Dance of Shiva** Asia Publishing House, Bombay, 1968.

David Punter : **Post colonial imaginings** Atlantic London, 2000.

Devi G.N. : **Indian Literary Criticism** Orient Hongman, 2007.

Diana Collinson : **Fifty Eastern Thinkers** Routledge key gudes, 1999.

Debi Prasad Chattopadyaya : **Lokayata Peiples** Publishing House, New Delhi, 1981.

Dilip Kumar Ganguly: **Aspects of Ancient Indian Administration** AbhinavPublications New Delhi, 1979.

Durkhein .E. : **Suicide** Routledge and Kegan Paul London, 1970.

Dikshit G. S.: **Local Self Government in Medival Karnataka** Karnataka University Dharwad, 1974.

Elizabeth Freud : **The return of Reader: Reader** Reshonseenherm – Methurn, 1987.

Fredrich Nietzsche : **The Use and Abuse of history** Twhiberal Arts Press, 1957.

Frantz Fanon : **Wretehed of Earth,** 1990.

Fredric Jameson : **Marxism and form** Princeton New Jersy,1974.

Freud Sigmund : **The interpretation of Dreams Science** Edition, INC, New York, 1961.

Geddes & Grosset: **Dictionary of Art** Geddes & Grosset, 1999.

Ganapathi S.V: **Samaveda 143** kalakhetra colony Madras-90, 1982.

Gururajachar S. : **Some aspect of economic & Social Life in Karnataka** Prasaranga University of Mysore Mysore, 1974.

Hawkes Terence : **Structuralism & Semoitics** TheChaucer Press Limited, Great Britain, 1985.

Homi.K.Bhabha : **The Location of Culture** Routledge London and New York, 1994.

Homi.K.Bhabha : **Nation and Narration** Routledge London and New York, 1990.

Jeremy Hawthorn : **A Glossary of contemporary literary theory** Arnold – London, 2000.

Julian wolfreys : **Key concepts in literary theory** Atlantic Publishers Edinburg, 2002.

Jascue .V. Harari (Ed): **Textual Strategies** Methurn, 1979.

John Greimes : **A concise Dict of Indian Philosophy** Stats University of New York press, 1996.

James Strachey Sigmund Freud : **The interpretation of Madras** Science Editions INC Newyork, 1961.

Jack Goody (Ed) : **The Character of Kinship** Cambridge University Press, Cambridge, 1973.

Jack Goody and Tambiah S.J. : **Bride wealth & Dowry** Cambridge University Press, Cambridge, 1973.

James Hastings: (Ed): **Encyclopedia Religion & Ethics (Vol-5)–(Vol-10)** TanirChark38 Georgestar, 1967.

Jack Goody : **Production and Reproduction** Cambridge University Press Cambridge, 1976.

Kala Acharya : **Indian Philosophical terms** Somaiya Publications New Delhi, 2004.

Kumkum Roy(Ed:) : **Woman in Easy Indian Societies** Manohar, 2001.

Kangle R.P. : **The Kautilya Arthashastra (Part 1 & 2)** Motilal Banaras das Banglow Road, Delhi-7, 1988.

Kittel Rey. F. A : **Kannada – English dictionary** Basel Mission Books, Tract Company, Mangalore, 1894.

Kosambi D.D. : **The Culture & Civilization of Ancient India in Historical Outline** Vikas Publishing House Private Limited, Delhi, 1981.

Kosambi D.D.: **Myth & Reality** Popular Prakashan, Bombay, 1983.

Kane P.V.: **History of dhasmashastra** Bhandarkar Research Institute poona, 1941.

Krishna Murthy .K. : **Nagarjunakanda – A cultural study Concept** Publishing Company Delhi,1977.

Khare .R. S. : **Normative Culture & Kinship** Vikas Publishing House Private Limited New Delhi, 1983.

Kala Acharya Dr.: **Indian Philosophical Terms:** Glossary and Sources Somaiya Publications Pvt. Ltd. Mumbai, New Delhi, 2004.

Lucien Goldman: **Towards a Sociology of the novel** Tavistock Publications, 1975.

Lokayata : Peoples publishing House Pvt. Ltd. New Delhi, 1959.

Martin Gray: **A Dictionary of literary terms** Longman Newyork Press, 1984.

Michel Dillon : **Introduction to sociological theory** Willey Blackwell, 2010.

Michel Foucault : **The Order of things** Tavistock, 1970.

Michel Foucault : **The Archelogy of Knowlede** Tavistock Publication, 1972.

Mariappa Bhat : **Kittles Kannada – English Diet,** University of Madras, 1973.

Misra O.P.: **Mother Goddess in Central India** Agan Kala Prakashan, Delhi, 1985.

Motichandra : **The world of Courtesans** Vikas Publishing House Private Limited, Delhi,1973.

Motichandra : **The world of Courtesans** Vikas Publishing House Private Limited Delhi, 1973.

Nilakanta Sastri (Ed): **Foreign Notices of South-India (From Megasthnes to Mahuan)** University of Madras, Madras, 1972.

Nicholas Abercrombie : **The dominant Ideology & Thesis** George Allen & univin (Publishers) Limited, London, 1984.

Oliverheamen : **Key Concepts in Eastern Philosophy** Routlge, 1999.

Progress Publishers : **A dictionary of Mascow Scientific Communism,** 1984.

Paul De man : **Blindness and insight Essays in the Rhetorie of Contemporary criticism** Minnesote Press Minnereapolies, 1983.

Ranjith Guha (Ed): **Subaltern Studies** O.U.P Delhi, 1989.

Raymond Williams : **The long revolution** Chatto & windus London, 1961.

Raymond Williams: **Marxism and Literature** Oxford University Press, 1977.

Ronald Inden : **Imagining India** Basil Blackwell, 1990.

Ranajith Guha: **Dominance without Hegemony** O.U.P, 1998.

Ramakrishna Rao K.B.Dr : **The ism of pre Classical** Sankya prasaranga University of Mysore Mysore-6, 1996.

Raymond Williams: **Keywords** Fontana Press, 1983.

Romila Thapar : **The Past and Prejudice** Nation and trust New Delhi, 1975.

Radhakrishna Mukerji: **Ancient Indian Education** Motilal Banarasidas, Delhi, 1974.

Ronald inden: **Imagining India** Basil Blackwel USA, 1990.

Sri Swami Sivananda: **All About Hinduism** A divine Life Society Publication, 1999.

S.Shettar : **Somanath alura Ruvari** abhinava Bangalore- 40, 2008.

Swami Gambhiranda: **Eight Upanisads (Vol–I) Advaita Ashrama** Calcutta –14, 1972.

Shantilal Somaiya : **Indian Philosophical terms** Somaiya Publications Pvt Ltd, Mumbai.

Schwarz Bill (Ed) : **On Ideology** Hutchison & Company, London, 1978.

Stein, Burton (Ed) : **Essays on South India** Vikas Publishing House Private Limited, New Delhi, 1976.

Stein M.A. : **Kalhana's Rajatarangini A Chronicle of Kings of Koshmir Vol-II** Motilal Banarasidas, Delhi, 1961.

Sudipta Kaviraj (Ed) : **Politics in India** Oxford University Press, 1997.

Sudipta Kaviraj and Sunil Khilnani : **Civil Society (History and Possibilities)**Cambridge University, 2001.

Terry Eagleton : **Literary theory: An Introduction** Basil Blackwell, 1989.

Vetuk Sylia(Ed) : **American Studies in the Anthropology** Manohar Publication, New Delhi, 1978.

Walter Benjamin : **Illuminations** Fontana, 1982.

Yogendra Bahadur Singh : **Social Life Ancient India** Light & Life Publishers New Delhi, 1981.

Zimmer Heinrich : **Myths & Symbols in Indian Art & Civilisation** New York : 1946



ಲೇಖಕರ ಇತರ ಕೃತಿಗಳು

ಮಾರ್ಕ್ಸ್‌ವಾದಿ ಪರಿಕಲ್ಪನೆಗಳು
ಸ್ತ್ರೀವಾದಿ ಪರಿಕಲ್ಪನೆಗಳು
ವಿಮರ್ಶೆಯ ಪರಿಕಲ್ಪನೆಗಳು
ತತ್ತ್ವಜ್ಞಾನದ ಪರಿಕಲ್ಪನೆಗಳು
ವಸಾಹತುಶಾಯಿ ಪರಿಕಲ್ಪನೆಗಳು
ಸ್ತ್ರೀವಾದಿ ಚಿಂತನೆಗಳು
ಬಹುಮುಖಿ
(ಕಾರಂತರ ಕಾದಂಬರಿಗಳ
ಸಮಾಜಶಾಸ್ತ್ರದ ಕುರಿತಾಗಿ)
ರಚನೆ - ನಿರಚನೆ
(ರಚನಾವಾದ ಮತ್ತು ನಿರಚನದ
ಕುರಿತಾಗಿ ರಚನೆ)
ಪಡು - ಮೂಡು
(ವಸಾಹತುಶಾಹಿ ಅನುಭವದ ಕುರಿತಾಗಿ)
ಪಶ್ಚಿಮ ಮತ್ತು ಗಾಂಧಿ
(ಗಾಂಧಿಯ ಕುರಿತಾಗಿ)
ನೀಲನಕ್ಷೆ
ಕ್ರಿಯೆ - ಪ್ರತಿಕ್ರಿಯೆ
ಶಬ್ದರೇಖೆ
ನಿಶಿತನ ಕೆಂಪು ಡೈರಿ ಕಾದಂಬರಿ
(ಚಿನ್ನನೊಬ್ಬನ ದಿನಚರಿ)
ಚಾರು ಚರಿತ
(ಕಾದಂಬರಿ)

ಪರಿಕಲ್ಪನೆ

ಕಲ್ಪಿಸು; ಸೃಜನಶೀಲತೆ;
ಕಲ್ಪನೆಯನ್ನು ನಿರ್ದಿಷ್ಟ ರೀತಿಯಲ್ಲಿ ಕಟ್ಟು.

ಪುಸ್ತಕ

ಸಮಾಜಪರವಾದ ದೃಷ್ಟಿಯನ್ನು ಬೆಳೆಸಲು ಸಮಾಜಪರವಾದ ಜ್ಞಾನವೂ ಬೇಕು. ಇದು ಒಂದು ದೃಷ್ಟಿಕೋನದಿಂದ ಹುಟ್ಟಿಕೊಳ್ಳುವುದಿಲ್ಲ. ಸಾಮಾಜಿಕ ದೃಷ್ಟಿಯೂ ಸಮಗ್ರತೆಯ ಪರಿಶೀಲನೆಯಿಂದ ಮಾತ್ರ ಸಂಜನಿಸಲು ಸಾಧ್ಯ. ಒಂದು ಸಮಾಜವು ತಕ್ಷಣ ಮಾತ್ರ ಹುಟ್ಟಿಕೊಂಡಿರುವುದಿಲ್ಲ. ಅದಕ್ಕೆ ಬಹುದೊಡ್ಡ ಚರಿತ್ರೆಯಿರುತ್ತದೆ. ಅದು ವಿಕಾಸಗೊಳ್ಳಲು ಬಾಹ್ಯ ಹಾಗೂ ಆಂತರಿಕ ಒತ್ತಡಗಳು ಕಾರಣವಾಗಿರುತ್ತದೆ. ಸಾಮಾಜಿಕ ಜ್ಞಾನವೆಂಬುದು ಈ ದೃಷ್ಟಿಯಿಂದ ವ್ಯಾಪಕವಾದ ಅರ್ಥವನ್ನು ಪಡೆದುಕೊಂಡಿದೆ. ಎರಡನೆಯದಾಗಿ ಸಾಮಾಜಿಕ ದೃಷ್ಟಿಯೆಂದರೆ, ನಿರ್ದಿಷ್ಟ ಗುಂಪಿನ ಬಗೆಗೆ ನಾವು ತಳೆಯುವ ನಿಲುವು, ದೃಷ್ಟಿಯಲ್ಲಿ ಮಾನವೀಯತೆಯ ಅಂಶವಿದ್ದರೆ ಆಗ ಸಾಮಾಜಿಕ ದೃಷ್ಟಿಯು ಬರುತ್ತದೆ. ವೈಯಕ್ತಿಕ ದೃಷ್ಟಿಕೋನ ಬೇರೆ, ಸಾಮಾಜಿಕ ದೃಷ್ಟಿಕೋನ. ಹಾಗೆಯೇ ಪ್ರತಿಯೊಂದು ಸಮಾಜವನ್ನು ನಾವು ಒಂದು ನಿಯಮಬದ್ಧತೆಯಿಂದ ಕೂಡಿದೆಯೆಂಬುದನ್ನು ಒಪ್ಪಿಕೊಳ್ಳಬೇಕು. ಮತ್ತು ಸಮಾಜಕ್ಕೆ ಅದರದೇ ಆದ ಜೀವನದ ಜಗತ್ತು ಎಂಬುದು ಇದೆ. ಅದಕ್ಕೆ ಬೇಕಾದಂತೆ ಅದು ತನ್ನ ಮೌಲ್ಯರೂಪಿಸಿಕೊಳ್ಳುತ್ತದೆ ಅಷ್ಟೆ. ಸಾಮಾಜಿಕ ನಡೆ-ನುಡಿಯು ತನಗೆ ಬೇಕಾದಂತೆ ವರ್ತಿಸುತ್ತದೆ. ಇದರಿಂದಾಗಿ ಸಾಮಾಜಿಕ ಮೌಲ್ಯವೂ ರೂಪುಗೊಳ್ಳುತ್ತದೆ.

₹ 400/-

ISBN 938157730-7
9 789381 577301 01